ಗಾಳಿ ತಡೆಗಳು ಕೀಟ ತಿನ್ನುವ ಹಕ್ಕಿಗಳಿಗೆ ವಾಸಸ್ಥಳ ಒದಗಿಸುತ್ತವೆ ಮತ್ತು ಬೇಟೆಯ ಹಕ್ಕಿಗಳಿಗೆ ಹಾಗೂ ಇತರ ವನ್ಯ ಜೀವಿಗಳಿಗೆ ಆಹಾರ ಹಾಗೂ ಆಶ್ರಯವನ್ನು ಒದಗಿಸುತ್ತವೆ. ಗಾಳಿ ತಡೆಗಳು ಧೂಳು ತುಂಬಿದ ಗಾಳಿಯಿಂದ ಆರೋಗ್ಯಕ್ಕೊದಗುವ ಅಪಾಯಗಳನ್ನು ಕಡಿಮೆ ಮಾಡುತ್ತವೆ ಮತ್ತು ಹಿದ್ದಾರಿಗಳಿಂದ ಹಾಗೂ ಇತರೆಡೆಗಳಿಂದ ಬರುವ ವಿಗದ್ದಲಗಳನ್ನು ಕಡಿಮೆ ಮಾಡಲು ನೆರವಾಗುತ್ತವೆ.

ಮನೆ-ಮದ್ದು
ಗೃಹವೈದ್ಯ — ರೂ.2 - 00
ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಕೈಗನ್ನಡಿ
ಗೀತೆಯ ಸಮೂಲ ಭಾಷಾಂತರ
ರೂ. 1 - 50
ತಮ್ಮವ್ಯಕ್ತಿಗೆ ತಾವೇ ಇಂಗ್ಲಿಷ್ ಕಲಿಯಲು ಅನುಕೂಲವಾದ
ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ ರೂ.2-00
ಸುಲಭದಲ್ಲಿ ಪತ್ರಲೇಖನ
Letter Writing Made Easy
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಪಡೆಸಲು ಸಹಕಾರಿಯಾದ ದಿನವಹಿ ಪತ್ರ ಸಂಗಲನ— ಬೆಲೆ ರೂ. 1-50
ಟಪ್ಪಾಲು ಖರ್ಚು ಪ್ರತ್ಯೇಕ
ರಿಯಾಂ ಪ್ರತಿಗಳಿಗೆ ರಿಯಾಯಿತಿ ಇದೆ.
ನವಭಾರತ ಪುಸ್ತಕ ಭಂಡಾರ
ಉಡುಪಿ, ದ. ಕ.

ಸಿನಿಮಾ ಮಂದಿರ ಬಂದಾದರೆ ?

ಎಣ್ಣೆ ಬೇಳೆಗಳ ಮೇಲೆ ಎಳೆನಮ್ಮ ಕರವೇರಿಸಿದರೆ, ಉಂಡೇಳುತ್ತದೆ ಜನ. ವಿರೋಧಿಯ ವಿರುದ್ಧ ಪ್ರದರ್ಶನ, ಸರಕಾರದ ಖಂಡನ, ಉಗ್ರ ಪತಿಭಟನೆ. ಆದರೆ, ಸಿನೆಮಾ ಟಕೇಟುಗಳ ಮೇಲೆ ಹೇರಿದ ಮನರಂಜನಾ ತೆರಿಗೆ ಹೆಚ್ಚಿಸಿದರೆ ಹೇಗೆ? ಈ ದೇರ ಮುತ್ಸದ್ದಿಗಳು 'ಜಿಪೇರ', ಕ್ಲಬ್ಬುಗಳ ಖಿ ಇರುಳು ಕಳೆಯಲು ಬಹುದು; ರೇಸ್ ಕೋರ್ಸ್, ಸೈಟ್‌ಕ್ಲಬ್‌ಗಳೆಲ್ಲಿ ಅವರ ಜಾಯಮಾನಕ್ಕೆ ಅಂಟಿಕೊಳ್ಳಬಹುದು. ಶ್ರೀ ಸಾಮಾನ್ಯನಿಗೆ ಅಗ್ಗದ ಮನರಂಜನೆ, ಮಾನಸಿಕ ಶಾಂತಿ ನೀಡುವುದು ಸಿನೆಮಾ ಮಂದಿರಗಳೇ. ಟಕೇಟಿಗೆ ತೆರುವ ಹಣದ ಸಿಂಹಪಾಲು ಸರಕಾರಕ್ಕೆ ಕರದರೂಪದಲ್ಲಿ ಸಲ್ಲುವುದಂತೂ ಗೊತ್ತಿದ್ದ ವಿಚಾರ. ಇದರ ವಿರುದ್ಧ ಸೊಲ್ಲೆತ್ತುವುದಿಲ್ಲ.

ಸಿನೆಮಾದ ಜನಪ್ರಿಯತೆಗೆ ಒಳ್ಳೆಯ ನಿದರ್ಶನವೆಂದರೆ, 'ಹೌಸ್‌ಫುಲ್' ಆಗುವುದಲ್ಲ; ಟಕೆಟ್ಟಿಗಾಗಿ ಫಲಿತಂಗುದ್ದಕ್ಕೆ ಕಿಟ್ಟುವ ಕ್ಯೂವೂ ಅಲ್ಲ. ದೊಡ್ಡ ದೊಡ್ಡ ಅಣ್ಣಾ ಅಣ್ಣಾದ ಭಿತ್ತಿ ಪತ್ರಗಳನ್ನು ನೇರೀರಿಗಣ್ಣಾಗಳಿಂದ ನೋಡಿ ಸುಂದರ ಸ್ವಪ್ನಕಾಣ ವರ ಬ್ರಹ್ಮನ್ಮಯೆಯೂ ಅಲ್ಲ. ದಾರಿಯಲ್ಲಿ ನಡೆಯುವಾಗ, ವಾನೆಸುಲ್ಲಿ ಕೆಲಸ ಮಾಡುವಾಗ, ಓದುವಾಗ, ಬರೆಯುವಾಗ ಎಲ್ಲೆಂದರಲ್ಲಿ. ಯೂವಾಗೆಂದರಾಗ ತುಟಿಗಳು ಗುಣಗುತ್ತಿರುವ ಸಿನೆಮಾ ರಾಗಾವಳಿಯು ಅರಿಲಹಾಗಳೂ ಅಲ್ಲ. ವೇಷ ಭೂಷಣಗಳಂತೂ ಅಲ್ಲವೇ ಅಲ್ಲ. ಮತ್ತೆನ್ನೇನು?

ಕೆಲವು ಸಮಯಕ್ಕೆ ಮೊದಲು ರಂಷ್ಟ್ರೀಯ ಮುಖಂಡ ರುಷರೊಬ್ಬರು ಅಕಾಲ ನಿಧನರಾದರು. (ಅಕಾಲ ಶಬ್ದವೇಕೆ ತನ್ನ ಅರ್ಥವನ್ನ ಕಳೆದುಕೊಂಡಿದೆಯೆ ಎಂಬುದು ಅವಶ್ಯ ತಿಳಿಯಬೇಕು.) ಊಟಕ್ಕೆ ಲಂಗಡಿ ಹೋಟೆಲ್ಲುಗಳನ್ನೆಲ್ಲಾ ಒಲ ತಿಕ್ಕಾದಿಂದಲೇ ವಜ್ರಿಸಿದ ಕಾರಣಗಳ....ರು ರಿಜೆ ಭರ್ಜರಿಯಾಗಿ ಭೂಷಣವಾಡಿ ಸತ್ಕಾರಗಳಾಗಿನ ವಂಡಿದರು. ಅಂತಿಮ್ಮ ಹಲವು ವರ್ಷಂತಗಳ ಕಾಲ ಜಿದ ಕಾರ್ಯಕ್ರಮಗಳು ಎಂದು ವಿಧಿಯನ್ನ ನಂದಿಸಿದರು. ಸಂಕಾಪಸೂಚಕ ಗೊತ್ತವಳಿಯು ಪಠಣ—ಶ್ರವಣ—ಸ್ವೀಕೃತಿಸೂಚಕ ಗಳು...ರು ಏನೇ ಮನಸ್ಸಿಗೆ ಭಾರೀ ದೇಸರ. ಸೆಕೆಂಡ್ ಶೋ ಸಿನೆಮಾಕ್ಕೆ ಹೋಗೋಣವೆಂದು ಥಿಯೇಟರ ಬಳಿಗೆ ತೆರಳಿ ಬೇಕೆ?

ಗಿ....ರ ಬಾಯಿಕೆ ಈಡೇರಿಕೆ ಎಂಬ ಕತೆ ಜೀರೆ ತೆಲೆಕತಸ್ಸು ಮಹಾಜನತೆ ತಮ್ಮ ಸಂತಾಪದುರಿಯ ಕಿಡಿಗಳನ್ನು ಕಲ್ಲುಗಳ ರೂಪದಲ್ಲಿ ಥಿಯೇಟರ ಮೇಲೆ ಎಸೆದಾರೆಂಬ ಭಯದಿಂದ ಮಾಲಿಕರು 'ಈ ದಿವ ಪ್ರದರ್ಶನ ಖಂದ ಮೂಡಿಯದ' ಬೋರ್ಡನ್ನು ತೂಗಾಡಾಕಿ, ಹೊರಗಡೆಯ ದೀಪವಾರಿಸಿ ಒಳಗೆ ಪ್ರದರ್ಶನ ತೋರಿಸುತಿದ್ದರ!

ಸಿನೆಮಾ ಟಕೆಟ್ಟಿಗಾಗಿ ಕ್ಯೂನಿಂತು ಮೂರ್ಛೆ ಹೋದವರೆಷ್ಟು? ನುಗ್ಗಿ ಕೈಕಾಲು ಮುರಿದು ಕೊಂಡವರೆಷ್ಟು? ಜೀವವನ್ನೇ ತ್ಯಾಗ ಮಾಡಿದವರೆಷ್ಟು? ಹಿಂದಿನ ಬಾಗಿಲಿನಿಂದ, ಮುಂದಿನ ಬಾಗಿಲಿನಿಂದ, ಮೇಲಿನ ಬಾಗಿಲಿನಿಂದಲೂ ಟಕೆಟ್ಟು ಗಳಿಸಲಾರದೆ ದುಃಖ ತಪ್ತರಾದವರೆಷ್ಟು ಜನ? ನೈತ್ಯ ಸೆಕೆಂಡ್ ಶೋ ಸಿನೆಮಾಪ್ರಿಯ ಜಟ್ಕಾ ಸಾಬಿಗೂ ಟ್ಯಾಕ್ಸಿಡ್ರೈವರಿಗೂ ರಿಕ್ಷಾವಾಲಾನಿಗೂ ಒಂಥತ್ತು ತಾಸಿಗೆ ಬಂದ ಬಾಡಿಗೆದಾರರ ವೇಲೆ ಏಳುನಮ್ಮ ಕೋಪ ಶೂರ್ವಾಸನಿಗೆ ಶಂಕರ ಲೆಯುವ ಶಪಿಸುವಾಗಲೂ ಬಂದಿರಲಾರದು.

ಒಂದು ಸಿನಿಮಾಕ್ಕಾಗಿ ಜನ ಭೀಷ್ಮ ನಾಗುತ್ತಾರೆ, ಭಗೀರಥನಾಗುತ್ತಾರೆ, ದುರ್ಯೋಧನನೂ ಶಕುನಿ ಯೂ ಆಗುತ್ತಾರೆ ದೂವಾರ್ ಪರಶುರಾಮನೂ ಆಗುತ್ತಾರೆ ಬ್ಯಾಚ್ಯಲರ್‌ಗಳು ಗರ್ಲ್ ಫ್ರೆಂಡ್; ಟೂಟ್ಟಿಗೆ ಕುಳಿತು ಬಾಳ್ಕಿಪಾಸಿಸುವನ್ನು ನೀಗಿಸುವ ಸದವಕಾಶನಿರುವುದು ಸಿನೆಮಾ ಮಂದಿರದಲ್ಲಿ; ಕತ್ತಲೆಯೇ ಈ ಮಂದಿರದಲ್ಲಿ ರಜತಪರದೆಯು ವೇಲೆ ಅವರಿಗೆ ಈ ಕಲಿ ಪ್ರಾತ್ಯಕ್ಷಿಕವಾಗಿಯೇ ದೊರೆಯುತ್ತದೆ. ಬಚ್ಚಲು ಮನೆಯಿಂದ ಹಿಡಿದ ರಾಜ್ಯಾಗ್ರಹದ ವರೆಗಿನ ಎಲ್ಲ ಸಿನೆರಿಗಳನ್ನೂ ನೈಜತೆಯ ಅಭಿವ್ಯಕ್ತನೆಂದ ಬೆಳ್ಳಿಪರದೆಯು ಮೇಲೆ ತೋರಿಸುವ ಚಿತ್ರಗಳು ಪ್ರಬಲ್ಯತವಾಗುವುದು ನಿಂತಂ? ಹಿಂದೀ ವಿರೋಧಿ ಚಳುವಳಿಯ ಕಾಲದಲ್ಲೂ ಹಿಂದೀ ಸಿನೆಮಾ ಮಂದಿರಗಳು ತಂಬಿ ತುಳುಕಾಡಿದ್ದವು— ಆರಂಭದಲ್ಲಿ ಜನಗಳಿಂದ, ಆ ಮೇಲೆ ಕಲ್ಲುಗಳಿಂದ!

ಸಿನೆಮಾ ಪ್ರಾಜೆಕ್ಟರಿಗೆ ಬೇಕಾಗುವ ಕಾರ್ಬನ್‌ಗಳ ಕೊರತೆ ದೇಶದಲ್ಲಿ ಕಾಣಿಸಿಕೊಂಡಿದೆಯೆಂದರೆ ದೇಶದ ಹಲವಾರು ಕೊತೆಗಳಲ್ಲಿ ಇದೂ ಒಂದು ಎಂದು ತಿಳಿಯುವವರೇ ಕಡಿಮೆ. ಈ ಕಾರ್ಬನ್ನುಗಳಿಲ್ಲದೆ ಸಿನೆಮಾ ಪ್ರದರ್ಶನ ನಡೆಯಲಾರದ; ಅದರ ದೆ ಸಿನೆಮಾ ಖಂದ ಆಗುವುದಂ. ಹಲ್ಲರ ಕಲ್ಲು ಓದಾ , ಆಂಧ್ರ ಹೊಂತದ ಎಳ ಬಾಳೆಗಳಂತೆ ವಿರಿವಿಲಿ ಒದ್ದಾಡಿದವರು ಒದ್ದಾಡಿಯೇ ತೀರಿದರು. ಇಂ ಸಾಮ್ಯನಿಷ್ಠ ಎಂದ ಭಜಿಸುತ್ತಿದವರ ತಟ್ಟಿದಂ. ಕಾರ್ಮಿಕ್ ತಯೂರಿಯ ಸಂಸ್ಥೆಗಳು ಸಂಪು-ಬಂಧ ಮುಷ್ಕರ-ಅಭಿವ ಮತ್ತಿಕರ ಕಾರಣಗಳಿಂದ ದೇಶಕ್ಕೆ ಬೇಕಾದುವಷ್ಟು ಕಾರ್ಬನ್ ಪೂರಯಿಸುವಲ್ಲಿ ಅವ ಥಗಾದುವು ಎಂದು, ಓಖಿದಾಗ, ಸ್ಥಂಭ ಬಂದು ಮುರ್ದಾಬಾದು, ಸಿನೆಮಾ ಮಂದಿರ ಜಿಂದಾಬಾದು, ಎಂದು ಅಭಿಪ್ರಟಿಸಿದವರೂ ಇದ್ದಾರು.

ಸ್ವದೇಶೀ ಕಾರ್ಬನ್ನುಗಳನ್ನು ಫಂಬಿ ವಿದೇಶೀ ಕಾರ್ಬನ್ನು ಆಯಾತವನ್ನು ಸರಕಾರ ನಿಲ್ಲಿಸಿತ್ತು. ಸಿನೆಮಾ ಪ್ರದರ್ಶನ ನಡೆಯದಿದ್ದರೆ ಎಲ್ಲರಿಗೂ ಫಜೀತಿ! ಸರಕಾರಕ್ಕೆ ಕರಾದಾಯ ಬೇಕಿತ್ತು, ಜನ ಜೀವನ ಹಿಡಿದಿರುವುದೇ ಕಷ್ಟ. ಆದ್ದರಿಂದ ನಿರ್ಮಾತೃ ನಿಯಮಗಳನ್ನು ಸಡಿಲಿಸಿ ಕಾರ್ಬನ್ನನ್ನು ತರಿಸಲೇಬೇಕು ಎಂದು ಮೇರವಣಿಗೆ ಹೊರಡಿಸುವ ಭೂಖಿದ್ದತೆಯೂ ಮುಂತಾನಗರದಲ್ಲಿ ನಡೆದಿರಬಹುದು. ಆದರೆ, ಜನರ ಮನೋವೇಯ ಸೂರ್ತಿಯನ್ನೇ ತಕ್ಷ ಧ್ಯೇಯವಾಗಿಟ್ಟುಕೊಂಡ ಶ್ರೀ ಸಾಮಾನ್ಯ ಸರಕಾರವು ಅಧಾವದ ಸುದ್ದಿ ತಿಳಿದೊಡನೆ ಎಲ್ಲಿಂದಲಾದರೂ ಕಾರ್ಬನ್ನುಗಳನ್ನು ತರಿಸಿಕೊಡುವ ಭರವಸೆ ನೀಡಿ ಜನರ ಮನಸ್ಸಿಗೆ ಸಮಾಧಾನ ತಂದಿತ್ತು.

ಸಿನೆಮಾ ಮಂದಿರಗಳು ಮುಚ್ಚಿದರೆ ಜನ ಸಾಮಾನ್ಯರಿಗೆ ಯಾವ ಕಷ್ಟವೂ ಇಲ್ಲ. ಅವರು ಸಿನೆಮಾ ಮಂದಿರಗಳಿಗೆ ಹೋಗುವುದೇ ಅಪರೂಪ. ಆದರೆ, ಸಿನೆಮಾ ಮಂದಿರಗಳ ಮಾಲಿಕರು, ಅವರ ಕುಟುಂಬದವರು, ಅವರ ಆಶ್ರಿತರು, ಅವರ ಸಂಬಂಧಿಕರು ಮತ್ತು ಅವರ ಸಹಾಯಕರು ಇವರೆಲ್ಲರ ಗತಿ ಏನು? ಸಿನೆಮಾ ಮಂದಿರಗಳು ಮುಚ್ಚಿದರೆ ಇವರೆಲ್ಲರ ಗತಿ ಏನು? ಇವರೆಲ್ಲರ ಜೀವನಾಧಾರವೇ ಸಿನೆಮಾ ಮಂದಿರಗಳು. ಸಿನೆಮಾ ಮಂದಿರಗಳು ಮುಚ್ಚಿದರೆ ಇವರೆಲ್ಲರ ಜೀವನಾಧಾರವೇ ಮುಚ್ಚಿದಂತೆ. ಇವರೆಲ್ಲರ ಜೀವನಾಧಾರವನ್ನು ಮುಚ್ಚಿದರೆ ಇವರೆಲ್ಲರ ಗತಿ ಏನು?

ಸಿನೆಮಾ ಮಂದಿರಗಳು ಮುಚ್ಚಿದರೆ ಸಿನೆಮಾ ಪ್ರದರ್ಶನ ನಿಲ್ಲುವುದಿಲ್ಲ. ಸಿನೆಮಾ ಪ್ರದರ್ಶನ ನಿಲ್ಲುವುದಿಲ್ಲವಾದರೆ ಸಿನೆಮಾ ಮಂದಿರಗಳು ಮುಚ್ಚಿದರೆ ಸಿನೆಮಾ ಪ್ರದರ್ಶನ ಎಲ್ಲಿ ನಡೆಯುತ್ತದೆ? ಸಿನೆಮಾ ಮಂದಿರಗಳಲ್ಲಿ ಮಾತ್ರ ಸಿನೆಮಾ ಪ್ರದರ್ಶನ ನಡೆಯುತ್ತದೆ. ಸಿನೆಮಾ ಮಂದಿರಗಳು ಮುಚ್ಚಿದರೆ ಸಿನೆಮಾ ಪ್ರದರ್ಶನ ನಡೆಯುವುದಾದರೂ ಎಲ್ಲಿ? ಸಿನೆಮಾ ಪ್ರದರ್ಶನ ನಡೆಯುವುದಾದರೂ ಎಲ್ಲಿ ಎಂಬುದು ಸಿನೆಮಾ ಮಂದಿರಗಳ ಮಾಲಿಕರಿಗೆ ಮಾತ್ರ ತಿಳಿದಿರುವ ವಿಷಯ. ಸಿನೆಮಾ ಮಂದಿರಗಳ ಮಾಲಿಕರಿಗೆ ಮಾತ್ರ ತಿಳಿದಿರುವ ವಿಷಯವನ್ನು ಸಾರ್ವಜನಿಕರಿಗೆ ತಿಳಿಸಿ ಹೇಳಬೇಕಾದ ಅವಶ್ಯಕತೆ ಇಲ್ಲ.

ಸಿನೆಮಾ ಮಂದಿರಗಳು ಮುಚ್ಚಿದರೆ

NAVAYUGA 4—6—1970
Registered with the Registrar of News Papers for India under No. R. N. 3546/'67

REGD: No. B. G/ 176
LICENCE No. 33;
Licensed to Post without Prepayment

ಪುರಾಣಗಳಲ್ಲಿ ಉದಾರ ದೃಷ್ಟಿಕೋಣ

ಪುರಾಣಗಳಲ್ಲಿ ಉಲ್ಲೇಖಿತವಾದ ಕೆಲವೊಂದು ಸಂಗತಿಗಳನ್ನು ಇಂದಿನ ವಿದ್ವಾಂಸರು ಒಂದು ರೀತಿಯಲ್ಲಿ ತಿರಸ್ಕೃತಿಸಿದರೆ, ಹಿಂದಿನವರು ಬೇರೆಯೇ ಬಗೆಯಲ್ಲಿ ತಿರಸ್ಕೃತಿಸಿದ್ದುದೂ ಕಂಡು ಬರುತ್ತದೆ. ಇಂದಿನ ಭೌಗೋಲಿಕರು ಭೂಮಿಯ ವ್ಯಾಸ ಎಂಟುಸಾವಿರ ಮೈಲೆಂದು ಹೇಳುತ್ತಾರೆ. ಪುರಾಣಗಳಲ್ಲಿ ಭೂಮಿಯು ಏಳತ್ತು ಕೋಟಿ ಯೋಜನ ಪರಿಮಾಣವುಳ್ಳದ್ದೆಂದು ವರ್ಣಿಸಲಾಗಿದೆ. (ಪಂಚಾಶತ್ ಕೋಟಿ ವಿಸ್ತಾರಾ ಸೇಯಮುರ್ವೀ ದ್ವಿಜೋತ್ತಮಾಃ—ಬ್ರಹ್ಮ ಪುರಾಣ—೨೦-೬೮). ಈ ಎರಡೂ ನಂಬಿಕೆಗಳು ಒಂದಕ್ಕೊಂದು ಸಮೀಪವಿರುವುದರಿಂದ ಸತ್ಯವೇ. ಆದರೆ ಎದ್ದು ಕಾಣುವ ವೈತ್ಯಾಸವೆಂದರೆ, ಆಳತೆಯ ಮಾನದ್ದು. ಅಧುನಿಕರು ಭೂಮಿಯ ಮಧ್ಯ ರೇಖೆ ಅಥವಾ ವ್ಯಾಸವನ್ನು ಮೈಲುಗಳಿಂದ ಅಳೆದರೆ, ಪೌರಾಣಿಕರು ಫಲನಫಲವನ್ನು ಯೋಜನಗಳಲ್ಲಿ ಹೇಳಿದ್ದಾರೆ.

ಗೋಲ ಪದಾರ್ಥದ ಫಲನಫಲವನ್ನು ಅಳೆಯಲು ಶಾಸ್ತ್ರೀಕೃತಿಕ ಸೂತ್ರವಿದೆ. ಅದರ ವ್ಯಾಸದ ಫಲನವನ್ನು ಎರಡರಿಂದ ಭಾಗಿಸಬೇಕು. ಭೂಮಿಯು ಗೋಲಾಕಾರವಾಗಿದೆ ಎಂದು ಪುರಾಣಕಾರರಿಗೂ ಗೊತ್ತಿತ್ತು ಎರಡು ಮೈಲುಗಳಿಗೆ ಒಂದು ಕ್ರೋಶ, ನಾಲ್ಕು ಕ್ರೋಶಗಳಿಗೆ ಒಂದು ಯೋಜನ. ಇದರಂತೆ ಭೂಮಿಯ ವ್ಯಾಸ ಯೋಜನಗಳಲ್ಲಿ ಒಂದು ಸಾವಿರ ಯೋಜನವಾಯ್ತು. ಆಗ, ಭೂಗೋಲದ ಪರಿಮಾಣ ಏಳತ್ತು ಕೋಟಿ ಯೋಜನಗಳೆಂದಾಯ್ತು. ಪುರಾಣಗಳಲ್ಲಿ ಹೇಳಿದ ಪರಿಮಾಣ ತಪ್ಪಾಗಲಿಲ್ಲ; ಆದರೆ ನಾವು ತಿಳಿಯದೆ ಜೋಡುದೇ ಸ್ವಯಾದ ವಾಯ್ತು.

ಅಡಿಪಾಯದಿಂದ ಪುರಾಣಗಳ ಪ್ರಕ್ರಿಯೆಗ ರೇನೆಂಬುದನ್ನರಿತು ಅವನ್ನು ಓದಿದರೆ ಪೂತ್ಯ ಪ್ರಯೋಜನ, ಲಾಭ. ಪುರಾಣಗಳನ್ನು ಓದುತ್ತಿರುವಾಗಹತ್ತಾರು ಜಟಿಲ ಸಮಸ್ಯೆಗಳು ಎದುರಾಗ ತ್ತವೆ ಅವನ್ನು ನಿವಾರಿಸಿ ಕೊಳ್ಳುವುದು ಅಸಂಭವವಲ್ಲ; ಕಠಿನವಾಧ್ಯ. ಇದು ಇಂದು ನಿನ್ನೆಯ ಸಮಸ್ಯೆಯೂ ಅಲ್ಲ. ಭಾಗವತದ೧-೧-೬ರಲ್ಲಿ ಶಾನಕ ಮುನಿಯ ಉಲ್ಲೇಖವಿದೆ. ಇವನೊಬ್ಬ ಕುಲಪತಿ. ಆತನು ಸಾವಿರಾರು ವಿದ್ಯಾರ್ಥಿಗಳಿಗೆ ವೇದ—ವೇದಾಂಗ ಮತ್ತು ದರ್ಶನ ಶಾಸ್ತ್ರವನ್ನು ಕಲಿಸುತಿದ್ದ ಮಹಾಗುರು. ಆದರೆ, ಈತನೂ ಪರಂಪರಾ ಪದ್ಧತಿಯಲ್ಲಿ ಪುರಾಣ ವಿದ್ಯೆಯನ್ನು ಅಧ್ಯಯನ ಮಾಡಿದ ಪುರಾಣಪಂಡಿತರಿಂದ ಪುರಾಣಗಳ ಪೂರ್ಣಾಶಯವೇನೆಂಬುದನ್ನು ಕಲಿತುಕೊಳ್ಳುತ್ತಿದ್ದ. ತನಗೆ ತಿಳಿದಂತೆ ಪುರಾಣಾರ್ಥವನ್ನು ಕಲ್ಪಿಸಿಕೊಂಡು ಶಿಷ್ಯರ ಮುಂದೆ ಬಡಾಯಿ ಕೊಚ್ಚಿಕೊಳ್ಳುತಿದ್ದಿಲ್ಲ.

ಪುರಾಣ ತತ್ವಜಿಜ್ಞಾಸೆಯಿಂದ ಹಲವೆಡೆ ನಡೆದ ಧರ್ಮಸಮ್ಮೇಳನಗಳ ಉಲ್ಲೇಖಗಳುಂಟು. ವಾಯುಪುರಾಣವು ಇಂತಹ ಸಮ್ಮೇಳನವೊಂದು ಕುರುಕ್ಷೇತ್ರದಲ್ಲಿ ನಡೆಯಿತೆಂದು ಹೇಳುತ್ತದೆ. (೧-೧-೧೪) ಪದ್ಮಪುರಾಣದ ೧-೧-೧೩ರಲ್ಲಿ ಪ್ರಯಾಗ ಧರ್ಮ ಸಮ್ಮೇಳನದ ಉಲ್ಲೇಖವಿದೆ. ಸ್ಕಂದ, ಮತ್ಸ್ಯ, ಲಿಂಗ, ಬ್ರಹ್ಮವೈವರ್ತ, ಅಗ್ನಿ, ಕೂರ್ಮ ಮತ್ತು ಬ್ರಹ್ಮಪುರಾಣಗಳಲ್ಲಿ ನೈಮಿಷಾರಣ್ಯದ ಸಮ್ಮೇಳನದ ಹೆಸರು ಬಂದಿದೆ. ಇವುಗಳಲ್ಲಿ ಸಾವಿರಾರು ಮಹಾ ಮಹಾ ವಿದ್ವಾಂಸರಾದ ಋಷಿಗಳು ಒಂದುಗೂಡುತ್ತಿದ್ದರು. ಮೂತ್ರವಲ್ಲದೆ ಇತರ ಸಾಮಾನ್ಯರೂ ಇವುಗಳಲ್ಲಿ ಆಸಕ್ತಿವಹಿಸುತಿದ್ದರು. ಈ ಸಮ್ಮೇಳನಗಳು ಬಹಳ ಉಪಯುಕ್ತವಾದ ಜಾತ್ರೆಯಂತಿರುತಿದ್ದವು. ಹಲವಾರು ದಿನಗಳ ತನಕ ನಡೆಯುತ್ತಿದ್ದುವು.

ಧಾರ್ಮಿಕ ವಿಚಾರಗಳಲ್ಲಿ ಪುರಾಣಗಳು ಅತ್ಯಂತ ಉದಾರ ದೃಷ್ಟಿಕೋಣವನ್ನು ತಳೆದಿವೆ. ಅನೇಕಾನೇಕ ದೇಶಗಳಲ್ಲಿ ಸಂಪ್ರದಾಯಾಂಧತೆಯ ಕಾರಣದಿಂದ ಮತದ ಮೇಲೆ, ಮತಾವಲಂಬಿಗಳ ಮೇಲೆ, ಅಥವಾ ರಾಜ-ಮಹಾರಾಜರ ಮೇಲೆ ಹಲ್ಲೆ ಕಡೆದಿದೆ; ಸಂಪ್ರದಾಯವೆಂಬುದು ಕಲಹಕ್ಕೆ ಪರ್ಯಾಯವಾಚಿಯಾದ, ಧರ್ಮವೆಂಬುದು ಭಯಾನಕತೆಯನ್ನಿಸಿದ ಘೋರರು ಉದಾಹರಣೆಗಳನ್ನು ಇತಿಹಾಸವೇ ಕೊಡುತ್ತದೆ. ಅದುದರಿಂದಲೇ ಸಂಪ್ರದಾಯ ಮತ್ತು ಧರ್ಮಗಳು ಅನೇಕ ಬುದ್ಧಿಜೀವಿಗಳ ಅವಜ್ಞೆಗೆ ಗುರಿಯಾಗಿವೆ. ಪುರಾಣಗಳು ಪ್ರತಿಗಾಮಿತನವನ್ನು ವಿರೋಧಿಸುತ್ತವೆ. ಮಾತ್ರವಲ್ಲ, ಅವು ಪ್ರಗತಿಗಾಮಿ ತನವನ್ನೇ ಎತ್ತಿಹಿಡಿಯುತ್ತವೆಯೆಂದು ಕೇಳಿದರೆ, ಯಾರಿಗಾದರೂ ಆಶ್ಚರ್ಯವಾದೀತು. ಸಂಪ್ರದಾಯ ಬಂಧನವನ್ನೂ ಕಲಹಾದಿಗಳನ್ನೂ ಪುರಾಣಗಳು ಖಂಡಿಸುತ್ತವೆ. ಯಾವನೊಬ್ಬನ ಸಂಪ್ರದಾಯ ಅಥವಾ ಇಷ್ಟದೇವೋಪಾಸನಾ ಪದ್ಧತಿಯನ್ನು ಅಲ್ಲಗಳೆಯಬಾರದೆಂದು ಅವು ಸಾರುತ್ತವೆ (ವಾಯುಪುರಾಣ ೬೬(೧೧೪). ಪ್ರತಿಯೊಬ್ಬನೂ ತನ್ನ ತನ್ನ ಇಷ್ಟಾನುಸಾರ ಸ್ವತಂತ್ರನಾಗಿ ಉಪಾಸನೆ ನಡೆಸಲೆಂದು ಹೇಳುತ್ತವೆ. (ಕೂರ್ಮಪುರಾಣ ೨೨-೩೯)

ಹಿಂದೂಧರ್ಮದಲ್ಲಿ ಮೂರು ಮುಖ್ಯ ಮತಗಳು. ವೈಷ್ಣವ, ಶೈವ ಮತ್ತು ಶಾಕ್ತ. ಈ ತ್ರಿಮತಸ್ಥರಿಗೂ ವಿಷ್ಣು ಶಿವ ಮತ್ತು ಶಕ್ತಿಯರು ಏಕರೂಪರೆಂದು ವಾಯುಪುರಾಣ ಹೇಳಿದೆ (೬೬-೧೧೭). ಒಬ್ಬನನ್ನು ಮಾತ್ರ ಸೇವಿಸಿ ಉಳಿದಿಬ್ಬರನ್ನು ದ್ವೇಷಿಸುವವನು ಘೋರ ನರಕ ವಾಸವನ್ನನುಭವಿಸಬೇಕಾಗುತ್ತದೆಂದೂ ಹೇಳವಾದವನ್ನು ವರಾಹಪುರಾಣ (೭೦-೨೮, ೪೧) ಸಾರಿ ಹೇಳಿದೆ. "ನಮ್ಮ ಮತವೇ ಶಕ್ತವಾದದ್ದು. ಇದನ್ನು ಎಲ್ಲರೂ ಒಪ್ಪಬೇಕು. ತಪ್ಪಿದರೆ, ನಾಯಿ ಬೇಕು" ಎಂಬ ಕುಶಿಕ್ಷಣ ಈವುದೇ ಪುರಾಣ ನೀಡುವುದಿಲ್ಲ. (ಅದ್ಭುತ ರಾಮಾಯಣ ೯-೨೪).

ಪುರಾಣಗಳು ವಿಚಾರ ಸ್ವಾತಂತ್ರ್ಯವನ್ನು ಸದೈವ ಎತ್ತಿಹಿಡಿಯುತ್ತವೆ. ವೇದ ಮತ್ತು ದೇವರನ್ನು ನಂಬುವ ಆಸ್ತಿಕ ಸಂಪ್ರದಾಯದ ಪುರಾಣದಲಿವಾದರೂ ನಾಸ್ತಿಕವಾದ ಪ್ರವರ್ತಕರಾದ ಬೌದ್ಧಧರ್ಮಪ್ರತಿಷ್ಠಾಪನಾಚಾರ್ಯ ಬುದ್ಧನನ್ನು ತಮ್ಮ ದೇವರ ಹತ್ತು ಅವತಾರಗಳಲ್ಲಿ ಒಂದೆಂದು ಅಗ್ನಿ, ಪದ್ಮ, ವಾಯ್ಯ ಪುರಾಣಗಳೂ ಭಾಗವತವೂ ಒಪ್ಪಿಕೊಂಡಿವೆ. ಜೈನರ ತೀರ್ಥಂಕರ ಋಷಭದೇವನು ಆತನ ೨೪ ಅವತಾರದಲ್ಲಿ ಒಂದೆಂದು ಭಾಗವತ ಹೇಳುತ್ತದೆ. ಇದು ಕ್ರಿಸ್ತಪೂರ್ವದ ಕಥೆಯಾದರೆ, ಕ್ರಿಸ್ತಶಕದಲ್ಲಿ ಇಂತಹ ವಿಚಾರಸ್ವಾತಂತ್ರ್ಯಕ್ಕೆ, ಮತಸ್ವಾತಂತ್ರ್ಯಕ್ಕೆ ಹಿಂದೂಮತವೆಂದೂ ಅಡ್ಡಿ ತಂದಿಲ್ಲ.

ಭವಿಷ್ಯ ಪುರಾಣದಲ್ಲಿ ಕೃಷ್ಣನೇ ಮಾತನಾಡುತ್ತ ಬಂದಿರುವ ಆಚಾರ್ಯರು ಸಂಪ್ರದಾಯ ಪ್ರಿಯರೇ ಆಗಿ ಉಳಿದಿಲ್ಲ. ಜಠರಶುದ್ಧಿ (ಜಠರಶುದ್ಧಿ ಇತಿಪ್ರಾಜ್ಞತೋ ಭವಿಷ್ಯತಿ) ಯೇಷಕ್ರಿಸ್ತ (ಈಶಪುತ್ರಂ ಚ ವಿದ್ಧಿಕಂ) ಮಹಮ್ಮದ ಪೈಗಂಬರ, ಗುರುನಾನಕ್ (ನಾನಕೋ ನಾಮ ವಿಶ್ರುತಃ) ಕಬೀರ (ಕಬೀರ ಇತಿ ಖ್ಯಾತಃ) ರವಿದಾಸ (ರೈದಾಸ ಇತಿ ವಿಶ್ರುತಃ) ನೊದಲಾದ ಸಂಪ್ರದಾಯ ಪ್ರವರ್ತಕರಿಗೂ ವಹಾಪುರುಷರೆಂದೂ ದೇವಾಂಶ ಸಂಭೂತರೆಂದೂ ಗೌರವಿಸುತ್ತಲೇ ಬಂದಿದ್ದಾರೆ. ಪಾಶ್ಚಾತ್ಯ ವಿದ್ವಾಂಸರು ಆದಿ ಧರ್ಮಾಯರೆಂದು ಕರೆಯುವ ಭೀಲರೂ ನಿಷಾದರೂ ಹಿಂದೂ ಧರ್ಮದ ಮೇಲೆ ಅಗಾಧ ಶ್ರದ್ಧಾಭಕ್ತಿಯನ್ನಿಟ್ಟಿದ್ದರೆಂಬುದು ಪುರಾಣಗಳಲ್ಲಿನ ಹಲವಾರು ಉಕ್ತಿಗಳಿಂದ ವೇದ್ಯವಾಗುತ್ತದೆ.

ಸ್ಮೃತಿಗ್ರಂಥಗಳು ಬಾಹ್ಮರನ್ನು, ಅಂತ್ಯಜರು, ಅಂತ್ಯವಸಾಯಿಗಳೆಂದು ಕರೆಯುವ, ಅಗಮ ಶಾಸ್ತ್ರಗಳನ್ನೆಯ ದೇವಾಲಯ ಪ್ರವೇಶ, ದೇವದರ್ಶನ ಮೊದಲಾದುವುಗಳಿಂದ ಸಂಪೂರ್ಣ ವಂಚಿತರಾಗಿರುವ ಹರಿಜನರನ್ನು ಪುರಾಣಗಳು ಭಕ್ತಿ ಶಾಸ್ತ್ರದಲ್ಲಿ ಸಮನ್ವಯಗೊಳಿಸಿ ದೇವದರ್ಶನ, ದೇವಾಲಯ ಪ್ರವೇಶ, ತೀರ್ಥಯಾತ್ರೆ, ಪುಣ್ಯಾಚರಣೆ ಮೊದಲಾದುವುಗಳಲ್ಲಿ ಅವರಿಗೆ ಬ್ರಾಹ್ಮಣಾದಿಗೆ ಸಮಾನವಾದ ಅಧಿಕಾರವನ್ನೆ ಕೊಡಮಾಡಿವೆ.

ಇಷ್ಟು ಉದಾರ ಮತ್ತು ಪುರೋಗಾಮಿ ನೆಲವನೆ ತಳೆದ ಪುರಾಣಗಳನ್ನು ಸಂಪ್ರದಾಯ ಪ್ರತಿಷ್ಠಾಪಕವೆಂದು ಕರೆಯುವುದೆಂದರೆ, ಅಧ್ಯಯನ ಹೀನತೆಯು ಪ್ರಭಾವವೇ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸರಳ ವಿಧದ ತಿಂಡಿತಿನಿಸು
ಪಾಶ್ಚಾತ್ಯದಲ್ಲಿ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಸಂತೋಷವೇ ಪರಮ ಧನ

(ಒಂದನೇ ಪುಟದಿಂದ)

ಘೋಷವಾಗಿ ಹೇಳಿದೆ. ಒಬ್ಬ ಸನ್ಯಾಸಿಯ ಹತ್ತಿರ ಧಳವೆಲ್ಲಿದೆ? ಪ್ರಿಯಾ ಪತ್ನಿ ಎಲ್ಲಿದ್ದಾಳೆ? ಸಂತಾನವೆಲ್ಲಿದೆ? ಇದರಂತೆ ಅಹಂಕಾರವನ್ನಿಸಿದ ಯಾವ ಪದಾರ್ಥಗಳೂ ಅವನ ಸಮೀಪದಲ್ಲಿರುವುದಿಲ್ಲ. ಆದರೆ ಅವನ ಹತ್ತಿರ ಇರುವಷ್ಟೊಂದೇ ಒಂದು ಸಂತೋಷ ಅದರಿಂದಲೇ ಅವನು ಸುಖಿಯಾಗಿರುವನು ಅವನ ಪಾದ ಪದ್ಮಗಳಲ್ಲಿ ಸಾವ್ಯರು ಕೂಡ ಬಂದು ನಮಸ್ಕರಿಸುವುದೇಕಕ್ಕೆ? ಯಾವ ಅನ್ಯ ಕೂಲದಲ್ಲಿ ದವನೂ ಸುಖಿಯಾಗುವಷ್ಟು ಎಷ್ಟು ಅನುಕೂಲತೆಗಳಿದ್ದರೂ ದುಃಖಿಯಾಗುವನು ಎಂಬುದನ್ನು ಚೆನ್ನಾಗಿ ಪರಿತೀಲಿಸಿ ನೋಡಿದರೆ ಸಂತೋಷವೊಂದೇ ಮನುಷ್ಯನನ್ನು ಸುಖಿಯಾಗಿ ಮಾಡಬಲ್ಲದೆಂದೇ ತಿಳಿದುಬರುವುದು. ಅದೇ ಪರಮಧನ. ಅದು ಏನೇ ಇರಲಿ ಒಂದರಿಂದಲೇ ಸಾಧ್ಯವಾಗಬಲ್ಲದು. ಅವಿವೇಕಿಯು ಸಾಮ್ರಾಟನಾದರೂ ದುಃಖಿಯಾಗಿರುವನು. ವಿವೇಕಿಯು ಯಾವ ಸಾಧನೆಗಳಿಲ್ಲದೆ ಕೇವಲ ಗುಡಿಸಿಲಿನಲ್ಲಿದ್ದರೂ ಸುಖಿಯಾಗಿರುವನು.

Edited, Printed & Published by K. H. Shetty at the Navayuga Press, Udipi, S. India.

ನವೆಂಬರ್ ಗಳು

ಔದ್ಯಮಿಕ ವಾಣಿಜ್ಯ ಪುರವಣಿ ೧೯೭೦

೫೦ ಪೈಸೆ

With Best compliments from

THE MYSORE IRON AND STEEL LIMITED,

BHADRAVATI (Mysore State)

(A Government of Mysore Undertaking)

Manufacturers of :

Special and Alloy Steels (Carbon Special Steels, Chromium Alloyed Steels, Manganese Alloyed Steels, Chromium Molybdnum Steels, Chromium Vanidum Steels, Chromium Nickel Steels, Silico Manganese Steels, Rimming Steels, Free Cutting Steels), Ferro-Silicon, Steel Castings, Grey Iron Castings, Refractory Bricks, Charcoal Pig Iron, Cement etc.

ನವಯುಗ

ಔದ್ಯಮಿಕ, ವಾಣಿಜ್ಯ ಪುರವಣಿ

೧೧—೬—೧೯೬೦

ಸಂಸ್ಥಾಪಕರು:
ದಿ| ಎ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟ

ಸಂಪುಟ ೪೯ Vol. 49
ಸಂಚಿಕೆ ೪೦ No. 40

ನಿರೀಕ್ಷೆಗೊಂದು ಪರೀಕ್ಷೆ

ಒಂದು ವರ್ಷದ ಹಿಂದೆ 'ನವಯುಗ'ವು ಔದ್ಯಮಿಕ, ವಾಣಿಜ್ಯ ಪುರವಣಿಯನ್ನು ಮೊತ್ತಮೊದಲ ಬಾರಿಗೆ ಪ್ರಕಟಿಸಿತು. ಕನ್ನಡಿಗರಿಗೆ ಉದ್ಯಮ ಮತ್ತು ವಾಣಿಜ್ಯಗಳ ಬಗೆಗೆ ಬಿಂದು ಪರಿಚಯವನ್ನಾದರೂ ಮಾಡಿಕೊಡುವ ಪ್ರಯತ್ನ ನಡೆಸಿತು. ಒಂದು ರೀತಿಯಲ್ಲಿ ಕನ್ನಡ ಪತ್ರಿಕಾರಂಗಕ್ಕೇ ಹೊಸತಾದ ಆ ಕ್ರಮಕ್ಕೆ ಕನ್ನಡಿಗರು ಸ್ವಾಗತಿಸಿದರು; ನಮ್ಮ ಶ್ರಮ ವ್ಯರ್ಥವಾಗಿಲ್ಲವೆಂಬ ತೃಪ್ತಿ ನಮಗೆ ಲಭಿಸಿತು. ಈ ತೃಪ್ತಿಯ ಬಲದಿಂದಲೇ ಈ ವರ್ಷವೂ ಇನ್ನೊಂದು ಪುರವಣಿಯನ್ನು ಪ್ರಕಟಪಡಿಸಿ ಕನ್ನಡಿಗರ ಔದ್ಯೋಗಿಕ ಮತ್ತು ವಾಣಿಜ್ಯ ಪ್ರಜ್ಞೆಗಳಿಗೊಂದು ಪೌಷ್ಟಿಕಾಹಾರ ನೀಡಬೇಕೆಂದು ನಿರ್ಧರಿಸಿದೆವು. ಈ ಪುರವಣಿಯು ಹಿಂದಿನ ವರ್ಷಕ್ಕಿಂತಲೂ ಉನ್ನತ ಗುಣಮಟ್ಟದಲ್ಲಿರಬೇಕೆಂದು ಸಹಜವಾಗಿಯೇ ಬಯಸಿದೆವು ಆದರೆ ನಮ್ಮ ಪ್ರಯತ್ನಕ್ಕೆ ತಕ್ಕ ಫಲ ದೊರೆಯಲಿಲ್ಲವೆಂದು ಮಾತ್ರ ವಿಷಾದದಿಂದಲೇ ಬರೆಯುತಿದ್ದೇವೆ.

ಈ ಪುರವಣಿಯಲ್ಲಿ ಪ್ರಕಟಣೆಗೆಂದು ಔದ್ಯಮಿಕ ಮತ್ತು ವಾಣಿಜ್ಯ ರಂಗಗಳ ಹಲವಾರು ಪ್ರಮುಖರ ಲೇಖನ ಬಯಸಿದರೆ, ಸಹಕರಿಸಿದವರು ಕೆಲವರು ಮಾತ್ರ. ತಾಸುಗಟ್ಟಲೆ ಮಾತನಾಡುವುದೇ 'ಮಂತ್ರಿತನ'ವೆನಿಸಿರುವ ಇಂದಿನ ಪರಿಸ್ಥಿತಿ ಬದಲಾಗದೆ ಹೋದರೆ, ಕನ್ನಡಿಗರೂ ಕನ್ನಡ ಸಾಹಿತ್ಯವೂ ನಿಜಕ್ಕೂ ಬೆಳೆಯಲಾರದು. ವೈಜ್ಞಾನಿಕ ಶಾಲೆಗಳಿಂದ ಹೊರಬರುವ ಮೆಟ್ರಿಕ್ಯುಲೇಟ್‌ಗಳು ನಾಲ್ಕು ಸುಂದರವಾಕ್ಯಗಳನ್ನು ಕನ್ನಡದಲ್ಲಿ ಬರೆಯಲಾರರೆಂಬ ತಹ ಪರಿಸ್ಥಿತಿಯೇ ಬೆಳೆದುಬರುತ್ತಿರುವುದಕ್ಕೆ, ಸರಕಾರವೂ ಅಧಿಕಾರಿಗಳೂ ಹಿರಿಯರೂ ಕನ್ನಡದಲ್ಲಿ ತೋರುತ್ತಿರುವ ಅನಾದರಕ್ಕೆ ಏನೆನ್ನಬೇಕು? ನಿರ್ಗಳವಾಗಿ ಮಾತನಾಡುವವರು ತಮ್ಮ ಮಾತಿಗೆ ಮೂರ್ತಸ್ವರೂಪವನ್ನು ಕೊಡುವ ಪ್ರಯತ್ನವನ್ನು ಮಾಡಬಾರದೇಕೆ? ಮೂವರಲ್ಲಿ ಇಬ್ಬರು ಇನ್ನೂ ಅನಕ್ಷರಸ್ಥರಾಗಿರುವ ನಮ್ಮ ದೇಶದಲ್ಲಿ "ಅನುಭವ"ವನ್ನು ಕೆಲವೇ ವ್ಯಕ್ತಿಗಳ ಬಂಡವಳವನ್ನಾಗಿ ಉಳಿಸಿಕೊಳ್ಳುವ, ದೇಶವಾಸಿಗಳಿಗೆ ನವನವೀನ ಪ್ರಗತಿಯ ಪರಿಚಯವನ್ನು ಮಾಡಿಕೊಡದೆ ಅನಭಿಜ್ಞರಾಗಿಯೇ ಮುಂದುವರಿಯುವಂತೆ ಮಾಡುವ ದುಷ್ಟ ಪ್ರವೃತ್ತಿ ನಿಲ್ಲಬೇಕು. ಖಾಸಗಿ ಮತ್ತು ಸಾರ್ವಜನಿಕ ಔದ್ಯಮಿಕ ಮತ್ತು ವಾಣಿಜ್ಯಪತಿಗಳು ಈ ಬಗೆಗೂ ಗಮನಹರಿಸ ಬೇಕು.

ಹೆಚ್ಚು ಹುಟಗಳ ಪುರವಣಿಯನ್ನು ಓದುಗರಿಗೆ ನೀಡುವಲ್ಲಿ ಜಾಹಿರಾತುದಾರರ ಬೆಂಬಲವು ಮಹತ್ವದ ಪಾತ್ರ ವಹಿಸುತ್ತದೆ. ಔದ್ಯಮಿಕ ಮತ್ತು ವಾಣಿಜ್ಯಗಳ ಪುರವಣಿಯಲ್ಲಿ ರಾಜ್ಯದ ಉದ್ಯಮಿಗಳೂ ವಣಿಜರೂ ತಂತಮ್ಮ ಜಾಹಿರಾತುಗಳನ್ನು ನೀಡಿ ಪ್ರಚಾರದೊಡನೆ ಸೇವೆಯನ್ನೂ ಮಾಡಿಕೊಳ್ಳ ಬಹುದು. ಆದರೆ, ನಮ್ಮ 'ಜಾಹೀರಾತು ನೀತಿ'ಯೇ ಇಂದು ತೀರ ವಿಚಿತ್ರ. ರಾಜ್ಯಕೀಯ ದುರುದ್ದೇಶ ಪ್ರೇರಿತವಾಗಿಯೇ ಹೆಚ್ಚಿನ ಸರಕಾರಿ ಜಾಹಿರಾತುಗಳು ಹೊರಬೀಳುತ್ತಿರುವುದೆಂದು ಶಾಸಕರೇ ದೂರುತ್ತಿರುವಾಗ ಖಾಸಗಿ ಜಾಹಿರಾತುಗಳ ಗತಿಯೇನು? ಮಂತ್ರಿಮಾಗಧರ ಸ್ವಾಗತ-ಸನ್ಮಾನಗಳಿಗೆ ಸಾವಿರಾರು ರೂಪಾಯಿ ನೀರಿನಂತೆ ವ್ಯಯಿಸುವ ಕೆಲವರು ಕನ್ನಡಪತ್ರಿಕೆಗಳಿಗೆ ಚಂದಾದಾರರಾಗಲೂ ನಿರಾಕರಿಸಿದ ಉದಾಹರಣೆಗಳುಂಟು. ಜೀವವಿಮಾ ಕಾರ್ಪರೇಶನ್‌ನಂತಹ ಸರಕಾರಿ ನಿಯಂತ್ರಣಕ್ಕೊಳಪಟ್ಟ ಸಂಸ್ಥೆಗಳೇ ಇಂಗ್ಲಿಷ್ ದೈನಿಕಗಳಲ್ಲಿ ಜಾಹಿರಾತುಗಳನ್ನು ನೀಡುತ್ತವೆ. ಕನ್ನಡ ಪತ್ರಿಕೆಗಳ ಪ್ರಸಾರಕಡಿಮೆಯೆಂಬ ಕಾರಣದಿಂದ ಆದರ ಜಾಹಿರಾತು ಅವಕ್ಕೆ ದುರ್ಲಭ. ಇಂಗ್ಲಿಷ್ ಬಲ್ಲವರು ಮಾತ್ರ ಜೀವವಿಮೆಯ ಬಗೆ ಪ್ರಜ್ಞೆ ಹೊಂದಿರಬೇಕು ಎಂಬುದು ವಿಮಾ ಕ್ಷೇತ್ರದ ಪ್ರಗತಿಗೆ ತಾರಕವಲ್ಲ. ಭಾರತ ದಂತಹ ವಿಶಾಲ ದೇಶದಲ್ಲಿ ವಿಮೆಯ ಸಂದೇಶವೇ ಹರಡದ, ಬ್ಯಾಂಕುಗಳ ಹೆಸರೇ ಕೇಳದ ಹತ್ತಾರು ಔದ್ಯಮಿಕ- ವಾಣಿಜ್ಯಗಳ ಪರಿಚಯವೇ ಸುಳಿಯದ ಹಳ್ಳಿಗಳು ಇವೆ. ದಿನ ಪತ್ರಿಕೆಗಳು ಸಿಗದ ಮೂಲೆಗಳಿವೆ. ಮಾತೃಭಾಷೆಯನ್ನೂ ಓದಲಾಗದ ನಾಗರಿಕರಿದ್ದಾರೆ. ಇಂತಹರಿಗೂ ದೇಶದ ಬದಲಾಗುತ್ತಿರುವ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡುವಲ್ಲಿ ಉದ್ಯಮಿಗಳು ಸಕ್ರಿಯವಾಗಿ ನೆರವಾಗುವುದು ಅಗತ್ಯ. ಜಾಹಿರಾತುಗಳಿಗೆಂದು ನಿಗದಿಗೊಳಿಸಿದ ಮೊತ್ತದಲ್ಲಿ ಅಳಿಲ ಪಾಲನ್ನಾದರೂ ದೇಶೀಯ ಭಾಷಾ ಪತ್ರಿಕೆಗಳಿಗೆ ನೀಡುವುದು ಅಪೇಕ್ಷಣೀಯ.

'ನವಯುಗ'ದ ಔದ್ಯಮಿಕ ಮತ್ತು ವಾಣಿಜ್ಯ ಪುರವಣಿ ನಮ್ಮ ನಿರೀಕ್ಷೆಯನ್ನು ಮುಟ್ಟಲಿಲ್ಲ. ಕೆಲವೊಂದು ಉತ್ತಮ ಲೇಖನಗಳು ಬಂದಿದ್ದು ಅವುಗಳಿಂದಲೇ ನಾವು ತೃಪ್ತಿಪಡುವುದು ಅಗತ್ಯವಾಯ್ತು. ಕೆಲವೇ ಜಾಹಿರಾತುದಾರರ ಉದಾರತೆಯಿಂದಲೇ ನಾವು ಸಂತೋಷ ಪಡಬೇಕಾಯಿತು. ಎರಡು ಬಾಯಿಗಳನ್ನು ಒಂದುಗೂಡಿಸಿಕೊಳ್ಳುವುದರಲ್ಲೇ ತಾಪತ್ರಯ ಅನುಭವಿಸಬೇಕಾಯಿತು. ಹಿಡಿದ ಕಾರ್ಯವನ್ನು ಪೂರ್ಣ ಪ್ರಮಾಣದಲ್ಲಾದರೂ ಕೊನೆಗೊಳಿಸುವಂತೆ ನೆರವಾದ ಲೇಖಕರನ್ನೂ ಜಾಹಿರಾತುದಾರರನ್ನೂ ನಾವು ಅಭಿಮಾನದಿಂದಲೇ ನೆನೆಯುತ್ತೇವೆ. ಆನೆಯಿಂದಲೂ ಸಾಧ್ಯವಾಗದ ಕೆಲಸವನ್ನು ಇರುವೆ ಮಾಡಬಲ್ಲುದು. ಹಲವಾರು ಜನರಿಂದ ಅಸಾಧ್ಯವಾದುದನ್ನು ಕೆಲವರೇ ಸಾಧಿಸುವಲ್ಲಿ ಸಮರ್ಥರಾದಾರು. ಈ 'ಕೆಲವರ' ಸಹಾಯ ಸಹಕಾರಗಳಿಂದಲೇ ಪ್ರಕೃತದ ಪುರವಣಿ ನಿರ್ಮಾಣಗೊಂಡಿದೆ. ಶ್ರೀ ಸಾಮಾನ್ಯನ ಮೆದುಳಿಗೆ ಲಘು ಆಹಾರವನ್ನಾದರೂ ಅದು ನೀಡಿದೆ.

ಮುಂದಿನ ದಿನಗಳಲ್ಲಾದರೂ ವಾತಾವರಣ ತಿಳಿಯಾಗಿ ಇಂತಹ ಪ್ರಯತ್ನಗಳಿಗೆ ನಾಲ್ಕು ನಿಟ್ಟಿನಿಂದ ಮುಕ್ತಹಸ್ತದ ನೆರವು ದೊರೆಯುವುದೆಂದು ಆಶಿಸುತ್ತೇವೆ. ಈ ಸಂಚಿಕೆಯ ನಿರ್ಮಾಣದಲ್ಲಿ ನೆರವಾದವರೆಲ್ಲರಿಗೂ ಸಂದೇಶಕಳಿಸಿಕೊಟ್ಟ ಮಹನೀಯರಿಗೂ ಆದರ ಪೂರ್ವಕ ಅಭಿನಂದನೆಗಳನ್ನು ಸಮರ್ಪಿಸುತ್ತೇವೆ.

"GET ON HIRE"

For marriages, festivals and all other occasions
Attractive and charming Tents, Sofa sets,
Furniture, Crockery, Cutlery and other
Decorative Articles etc.

FINEST QUALITY !
PROMPT SERVICE
AND
MODERATE CHARGES

The attractive New Tents and Shamianas are prepared on orders.

YOUSUF & CO.

Nizamshahi Road,
Near Mozamjahi Market
HYDERABAD-1 (A.P.)

Phone No. 41346

With best compliments of:-

K.V. VEERAPPA & BROTHERS

CALTEX DEALERS

MANDYA

Telephone No. 71

MESSAGES

ಸಂದೇಶಗಳ

ಎಕೆಡೆಮಿ ಆಫ್ ಜನರಲ್ ಎಜ್ಯುಕೇಷನ್ ಅಧ್ಯಕ್ಷ ಮತ್ತು ರಿಜಿಸ್ಟ್ರಾರ್ ಡಾ। ಟಿ. ಎಂ. ಎ. ಪೈಗಳ ಸಂದೇಶ

Dear Shri Shetty,

I am glad to know that you are bringing out a supplement on industry and trade to give a wide coverage to the problems and prospects of industries and commerce in the State of Mysore.

The richness of life is largely due to the industrial life of the country and a well planned distribution of the industrial products enriches the daily life of the people.

Any supplement which will highlight this will be a great service. May I hasten to congratulate you for the new programme you intend to push through soon.

Manipal,
27—5—1970

Dr. T. M. A. PAI.

● ● ●

ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷ ಶ್ರೀ ಎಂ. ಮುಧ್ವರಾಜರ ಸಂದೇಶ

I am happy to learn that 'Navayuga' is planning to bring out a Supplement on Industry and Trade with particular reference and relevance to our State.

This patriotic periodical had been in the forefront of the country's independence struggle. Later, when the country attained freedom, it devoted its columns and influence to highlight the aspirations of the developing Nation.

A Nation cannot survive without industrialisation and planned development. Almost half a century back, the doyen among our planners, Sir M. Vishweshvaraiah, warned the country: "Industrialise or perish." He had shown the way how to industrialise by his great creative genius.

We have come a long way from the days of that builder of Mysore. Now, the State has the resources and a resourceful and dynamic Chief Minister at the helm of its affairs to plan and flourish.

"Navayuga" founded by an illustrious Kannadiga, the late Mr. A. B. Shetty, and nurtured by the foremost freedom fighter Mr. K. K. Shetty, has rendered yeoman service to the cause of State in every way.

It has established healthy traditions in Kannada Journali and its popularity has increased through the years.

This number of the periodical, I am sure will reflect concern, commitments and achievements of our planners a industrialists.

"Swagatham",
Malpe, South Kanara,
May 29, 1970.

M. Madhva R

● ● ●

ಕೈಗಾರಿಕಾ ಉಪಮಂತ್ರಿ ಶ್ರೀ ಎ. ಪಿ. ಅಪ್ಪಣ್ಣ ಅವರ ಸಂದೇಶ.

Dear Shri Shetty,

I thank you for your letter of the 25th May, 1970.

I am very happy that NAVAYUGA is bringing out supplement on INDUSTRY AND TRADE to highlight the p blems of and prospects for Industrial and Commercial developm of Mysore State.

I send my best wishes to the success of your spe supplement.

Vidhana Soudha,
Bangalore,
28th May, 1970.

A. P. APPANN

● ● ●

ವಿಜಯಾ ಬ್ಯಾಂಕಿನ ಅಧ್ಯಕ್ಷ ಶ್ರೀ ಎಂ ಸುಂದರರಾಮು ಶೆಟ್ಟರ ಸಂದೆ

ನಮ್ಮ ರಾಜ್ಯದಲ್ಲಿ ಉದ್ಯಮ ಮ ವಾಣಿಜ್ಯ ಕ್ಷೇತ್ರದಲ್ಲಿ ನಾವು ಎದು ತ್ತಿರುವ ವಿವಿಧ ಸಮಸ್ಯೆಗಳ ಮೇಲೆ ಳಕು ಬೀರುವ ಮತ್ತು ಆ ಕ್ಷೇತ್ರ ಳವಣಿಗೆಗೆ ನಮ್ಮಲ್ಲಿ ಇರುವ ಅವ ಗಳ ಬಗ್ಗೆ ಸಾಕಷ್ಟು ತಿಳುವಳಿಕೆ ನೀ ವ ಉದ್ದೇಶದಿಂದ 'ನವಯುಗ' ಒ ವಿಶೇಷಾಂಕವನ್ನು ಹೊರಡಿಸುವ ಯ ತಿಳಿದು ತುಂಬಾ ಸಂತೋಷ ಯಿತು. ನಮ್ಮ ರಾಜ್ಯದಲ್ಲಿ ಸಾಕ ನೈಸರ್ಗಿಕ ಸಂಪನ್ಮೂಲಗಳಿವೆ. ಅ ಳನ್ನು ಉಪಯೋಗಿಸಿಕೊಳ್ಳಲು ಅ ಕೂಲವಾಗುವುದಕ್ಕೆ ಅವಶ್ಯವಿರುವ ರ್ವ ಸಿದ್ಧತೆಗಳೂ ತುಂಬಾ ನಡೆದಿ ಇನ್ನೂ ನಡೆಯುತ್ತಿವೆ. ನಮ್ಮ ಕಾರ ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಸರ್ವತೋಮುಖವಾದ ಪ್ರಗತಿ ನ್ನು ಸಾಧಿಸುವ ಗುರಿಯನ್ನು ಇಟ್ಟುಕೊಂಡಿದೆ. ಆದಕ್ಕಾಗಿ ಈ ಕ್ಷೇತ್ರದಲ್ಲಿ ದ ಯುವವರಿಗೆ ಅನೇಕ ಸೌಲಭ್ಯಗಳನ್ನು ಒದಗಿಸುತ್ತಿದೆ. ಅಂದರೆ ಈ ಕ್ಷೇತ್ರದಲ್ಲಿ ನ ಎದುರಿಸಬೇಕಾದ ಸಮಸ್ಯೆಗಳು ಇಲ್ಲವೆಂದಲ್ಲ; ಬೇಕಾದಷ್ಟಿವೆ. ಅವುಗಳ ಬಗ್ಗೆ ಚ ನಡೆಸಿ ಅವುಗಳನ್ನು ಸರಕಾರದ ಮತ್ತು ಸಂಬಂಧಪಟ್ಟ ಸಂಘ ಸಂಸ್ಥೆಗಳ ಮು ಡುವುದು ನಮ್ಮ ಕರ್ತವ್ಯವಾಗಿದೆ. ನಮ್ಮ ರಾಜ್ಯದಲ್ಲಿ ಅನೇಕ ಹೊಸ ಉದ್ಯಮ ಳನ್ನು ಸ್ಥಾಪಿಸಿ ಬೆಳೆಸಲು ಸಾಕಷ್ಟು ಅವಕಾಶಗಳಿವೆ. ಇವುಗಳ ಬಗ್ಗೆ ನಮ್ಮ ಜನ ತಿಳುವಳಿಕೆ ನೀಡಬೇಕಾಗಿದೆ. ನಮ್ಮ ಜನರಲ್ಲಿ ಉತ್ಸಾಹವಿದೆ; ರಚನಾಶಕ್ತಿ ಇ ಅವಕಾಶ ದೊರಕಿದಾಗ ಅದನ್ನು ಉಪಯೋಗಿಸಿಕೊಳ್ಳುವ ಪ್ರಯತ್ನಕ್ಕೆ ಇಳಿಯ ಧೈರ್ಯವೂ ಇದೆ. 'ನವಯುಗ'ದ ಈ ವಿಶೇಷ ಸಂಚಿಕೆ ಅವರ ಪ್ರಯತ್ನಕ್ಕೆ ಕಾದ ಪ್ರೇರಣೆ ಮತ್ತು ಮಾರ್ಗದರ್ಶನ ನೀಡುವುದೆಂದು ಅಭಿಸುತ್ತೇನೆ.

ಎಂ. ಸುಂದರರಾಮು ಶೆ
ಚೇಯರ್‌ಮೇನ್

● ● ●

ಆಹಾರ ಸಚಿವ ಶ್ರೀ ಬಿ. ವಿಠಲದಾಸ ಶೆಟ್ಟರ ಸಂದೇಶ

ನವಯುಗ ಕನ್ನಡ ವಾರಪತ್ರಿಕೆ ಉದ್ದಿಮೆ' ಮತ್ತು 'ವಾಣಿಜ್ಯ'ಕ್ಕೆ ಸಂಬಂಧಿಸಿ ವಿಶೇಷಾಂಕವನ್ನು ಪ್ರಕಟಿಸು ಹು ಸ್ತುತ್ಯ ಮತ್ತು ಸ್ವಾಗತಾರ್ಹ ಾಗಿದೆ

ಇಂಥ ಹೊತ್ತಿಗೆಯಿಂದ ನಮ್ಮ ರಾ ದ ವಿವಿಧ ಉದ್ದಿಮೆ ಮತ್ತು ವಾಣಿ ಸಂಸ್ಥೆಗಳ ಮೇಲೆ ಬೆಳಕು ಹಾಯಿ ದಂತಾಗುತ್ತದೆ ಮಾತ್ರವಲ್ಲದೆ, ಈ ತ್ನವು ತಕ್ಕಷ್ಟು ಬೋದಸ್ಪದವೂ ಗಿದೆ

ಇಂಥ ಉಪಯೋಗೀ ಕಾರ್ಯಕ್ರಮದ ಗ್ಗೆ ನವಯುಗದ ಸಂಪಾದಕ, ಸಂಚಾ ಕರನ್ನು ಮನಃಪೂರ್ವಕ ಅಭಿನಂದಿಸುತ್ತೇನೆ

-6-1970

ಬಿ. ವಿಠಲದಾಸ ಶೆಟ್ಟಿ

● ● ●

ಕೆನರಾ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ. ಪಿ. ಜೆ. ಪ್ರಭುಗಳ ಸಂದೇಶ.

ಯ ಶೆಟ್ಟರೇ,

'ನವಯುಗ'ವೆಂದೊಡನೆ ಈ ನಾಲ್ಕು ದಶಕಗಳಲ್ಲಿ ಈ ಭವ್ಯ ವಾರ ತ್ರಿಕೆಯು ಜನಜಾಗೃತಿ ಮತ್ತು ಸದ್ಭಾವನೆಯ ಪ್ರಸಾರದ ಬಗ್ಗೆ ದಕ್ಷಿಣ ಕನ್ನಡದ ದ್ದಗಲಕ್ಕೂ ನಡೆಸಿದ ವಿವಿಧ ಕಾರ್ಯ ಪರಂಪರೆಯ ನೆನಪಾಗುತ್ತದ ದಿವಂಗತ ಬಿ ಶೆಟ್ಟರವರು ಬೆಳಗಿಸಿದ ಸೊಡರು ಇನ್ನೂ ಲಂದಕಾರವನ್ನು ತೊಲಗಿಸುತ್ತಿದೆ, ತ್ತು ಉಜ್ವಲವಾಗಿದೆ ಎಂಬುದು ಅತ್ಯಂತ ಅಭಿನಂದನೀಯ ಪ್ರಸ್ತುತ ಈ ಪತ್ರಿ ಯು ಉದ್ದಿಮೆ ಮತ್ತು ವಾಣಿಜ್ಯ ಸಂಬಂಧವಾದ ವಿಶೇಷಾಂಕವನ್ನು ಪ್ರಕಟಿಸಿ ನಮ್ಮ ತಿಗತಿ ಮತ್ತು ಸಮಸ್ಯೆಗಳನ್ನು ಪ್ರತಿಬಿಂಬಿಸಲಿದೆ ತನ್ಮೂಲಕ ಜಿಲ್ಲೆಯ ಮತ್ತು ರಾ ಗತ್ರ ಸಾರ್ವತ್ರಿಕ ಗಮನವನ್ನು ಹರಿಸಲಿದೆ ಇಂಥ ಸ್ತುತ್ಯ ಕಾರ್ಯದ ಬಗ್ಗೆ ನವಯುಗಕ್ಕೆ ಅಭಿನಂದನೆಗಳು

ಗ 29, 1970

ತಮ್ಮ ವಿಶ್ವಾಸನೀಯ,
ಕೆ. ಪಿ. ಜೆ. ಪ್ರಭು,
ಕಸ್ಟೋಡಿಯನ್, ಕೆನರಾ ಬ್ಯಾಂಕ್

● ● ●

ಪಾಂಡಿಚೆರಿಯ ರಾಜ್ಯಪಾಲ ಶ್ರೀ ಬಿ. ಡಿ. ಜತ್ತಿಯವರ ಸಂದೇಶ.



ಜೆ-ಜ್ಞಾನ 1970ರಲ್ಲಿ ನವಯುಗವು ಉದ್ದಿ ಮೆ ಮತ್ತು ವಾಣಿಜ್ಯ ಸಂಬಂಧವಾದ ವಿಶೇಷಾಂ ಕವನ್ನು ಪ್ರಕಟಿಸುವುದು ಸಂತಸದ ವಿಚಾರ

ನಮ್ಮ ಆರ್ಥಿಕ ಜೀವನದ ಗೌಣ ವರ್ತುಲಗಳೂ ನಮ್ಮ ಸಂಪನ್ಮೂಲಗಳ ಅಭಿವೃದ್ಧಿಗೆ ಕಾರಣವಾಗು ತ್ತಲಿವೆ ಆದುದರಿಂದ ಕಾಲ ಕಾಲಕ್ಕೆ ನಮ್ಮ ಆ ರ್ಥಿಕ ಪ್ರಗತಿ ಹಾಗೂ ಉದ್ದಿಮೆಗಳ ಸಾಪನೆ ಅಲ್ಲ ದೆ ವಾಣಿಜ್ಯದ ಸುಧಾರಣೆಗಳ ಬಗ್ಗೆ ತಕ್ಕ ಬೆಳಕ ನ್ನು ಚೆಲ್ಲುತ್ತ ಜನರ ತಿಳುವಳಿಕೆಯನ್ನೂ ಹೆಚ್ಚಿಸು ವುದು ಪತ್ರಿಕೆಗಳ ಕರ್ತವ್ಯವೆನಿಸಿದೆ ಇಂಥ ಕರ್ತವ್ಯ ನಿರ್ವಹಣೆಯಲ್ಲಿ ನವಯುಗದ ವಿಶೇಷಾಂಕವು ಯಶಸ್ವೀ ಹಾಗೂ ಆವಶ್ಯ ಹೆಜ್ಜೆಯನ್ನಿಟ್ಟಿರುತ್ತದೆ ಈ ಯತ್ನವು ಯಶಸ್ವಿಯಾಗಲಿ

10- ಏಪ್ರಿಲ್, 1970

ಬಿ ಡಿ. ಜತ್ತಿ
ಲೆಪ್ಟಿನೆಂಟ್ ಗವರ್ನರ್

● ● ●

ವಿಳಂಬವಾಗಿ ಕೈಸೇರಿದ ಕೆಲವು ಸಂದೇಶ, ಲೇಖನ, ಜಾಹೀರಾತು ಗಳನ್ನೂ ಸ್ಥಳಾಭಾವದಿಂದ ಕೆಲವು ಸಂಸ್ಥೆಗಳ ಪರಿಚಯವನ್ನೂ ಪ್ರಕ ಟಿಸಲಾಗದುದಕ್ಕೆ ವಿಷಾದಿಸುತ್ತೇನೆ

ಸಂ. ನ.

ಲಾಟರಿ ಟಿಕೆಟ್ಟುಗಳನ್ನು ಬಹಳಷ್ಟು ಜನರು ಮಾರಾಟ ಮಾಡುತ್ತಾರೆ. ಆದರೆ ಬಹುಮಾನಹೊಂದುವ ಟಿಕೆಟ್ಟುಗಳು

ಮನೋರಂಜನ್

ಮೂಲಕವೇ ಮಾರಲ್ಪಡುತ್ತವೆ.

ನಮ್ಮಲ್ಲಿ ಬೇರೆ ಬೇರೆ ರಾಜ್ಯಗಳ ಲಾಟರಿ ಟಿಕಟ್ಟುಗಳು ಈ ಕೆಳಗಿನ ದರಗಳಲ್ಲಿ ಮಾರಾಟಕ್ಕಿವೆ ಲಾಟರಿ ಟಿಕೆಟ್ಟುಗಳನ್ನು ನಗದಾಗಿ ಪಡೆದಿರುವುದರಿಂದ ಅವನ್ನು ವಿ ಪಿ ಪಿ ಯಾಗಿ ಕಳುಹಿಸುವುದಿಲ್ಲ ಟಿಕೇಟುಗಳ ಬೆಲೆಯನ್ನು ನಮಗೆ ಮನಿಯಾರ್ಡರ್, ಪೋಸ್ಟಲ್ ಆರ್ಡರ್ ಅಥವಾ ಬ್ಯಾಂಕ್ ಡ್ರಾಫ್ಟ್ ಮೂಲಕ ನಿಮಗೆ ಅನುಕೂಲವಾದ ರೀತಿಯಲ್ಲಿ ಟಪ್ಪಾಲು ಖರ್ಚು ಸಹಿತ ಕಳುಹಿಸಬೇಕು ರಿಜಿಸ್ಟರ್ ಅಂಚೆ ಮೂಲಕ ಕಳಿಸಬೇಕಾದಲ್ಲಿ ರಿಜಿಸ್ಟ್ರೇಶನ್ ಖರ್ಚು ಸಮೇತ ಕಳುಹಿಸಬೇಕು

ಈಗ ಮಾರಾಟಕ್ಕಿವೆ. (ಪ್ರತಿ ಟಿಕೆಟ್ಟು ಬೆಲೆ ರೂ. ೧-೦೦)

1	ಮಹಾರಾಷ್ಟ್ರ ರಾಜ್ಯದ ಲಾಟ್ರಿ	100 ಟಿಕಟ್ಟುಗಳಿಗೆ ರೂ 88-00
2	ದೆಹಲಿ ರಾಜ್ಯದ ಲಾಟ್ರಿ	100 ಟಿಕೆಟ್ಟುಗಳಿಗೆ ರೂ 75-00
3	ಅಸ್ಸಾಂ ರಾಜ್ಯದ ಲಾಟ್ರಿ	100 ಟಿಕೆಟ್ಟುಗಳಿಗೆ ರೂ 76-00
4	ಪಂಜಾಬ್ ರಾಜ್ಯದ ಲಾಟ್ರಿ	100 ಟಿಕಟ್ಟುಗಳಿಗೆ ರೂ 90-00
5	ಎ ಪಿ ವೆಲ್‌ಫೇರ್ ಸಂಡ್ ಲಾಟ್ರಿ	100 ಟಿಕೆಟ್ಟುಗಳಿಗೆ ರೂ 78-00
6	ಮೈಸೂರು ರಾಜ್ಯದ ಲಾಟ್ರಿ	100 ಟಿಕೆಟ್ಟುಗಳಿಗೆ ರೂ 80-00

ಮನೋರಂಜನ್ ಎಂಟರ್-ಪ್ರೈಸಸ್

(ಪ್ರೊ: ವಿ. ಶಿವರಾಮು ಹೊಳ್ಳ)
ನಂ. ೩೦, ೫ನೇ ಮೈಯಿನ್; ಗಾಂಧಿನಗರ,
ಬೆಂಗಳೂರು-೯. (ಫೋನ್ ೭೪೫೫೪)

ಒಂದು ಉತ್ತಮ ಬ್ಯಾಂಕಿನಿಂದ ನೀವೇನು ಬಯಸುವಿರಿ ?

ಭದ್ರತೆ
ಆಕರ್ಷಕ ಬಡ್ಡಿ
ಆರ್ಥಿಕ ಸೌಲಭ್ಯ
ಉನ್ನತ ಮಟ್ಟದ ಸೇವೆ

ಇವೆಲ್ಲವನ್ನೂ ನೀವು ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ನಿನಲ್ಲಿ ಪಡೆಯಬಲ್ಲಿರಿ. ಖಾಯಂ ಠೇವಣಿಗಳ ಮೇಲೆ ಸೇಕಡಾ 7½ರ ವರೆಗೂ ಬಡ್ಡಿ ದೊರೆಯುವುದು. ಧಾರ್ಮಿಕ ಹಾಗೂ ಲೋಕೋಪಯೋಗಿ ಸಂಸ್ಥೆಗಳ ಠೇವಣಿಗಳ ಮೇಲೆ ಸೇಕಡಾ ½ ಬಡ್ಡಿ ಜಾಸ್ತಿ ದೊರೆಯುವುದು.

ಸುವ್ಯವಸ್ಥಿತ ಬ್ಯಾಂಕಿಂಗ್ ಸೇವೆ ಮತ್ತು ಸವಲತ್ತುಗಳು ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿಯೂ ದೊರೆಯುತ್ತವೆ.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

64 ವರ್ಷಗಳ ಪರಿಪೂರ್ಣ ಸೇವೆ

ರಿಜಿಸ್ಟರ್ಡ್ ಆಫೀಸು : ಉಡುಪಿ
ಆಡಳಿತ ಆಫೀಸು : ಮಂಗಳೂರು

ಮಹಾಮಹೋಪಾಧ್ಯಾಯ

ಲೇಖಕರು : ಶ್ರೀ ಕು. ಶಿ.ಹರಿದಾಸ ಭಟ್ಟ.

ಅಧ್ಯಾಪನವನ್ನು ಮನಸ್ಸಿದ್ದೋ ಇಲ್ಲದೆಯೋ ಕೈಗೊಳ್ಳುವ ಎಲ್ಲರಿಗೂ ಉಪಾಧ್ಯಾಯನೆಂಬ ಬಿರುದು ಸಿಕ್ಕೇ ಸಿಗುತ್ತದೆ. ಆದರೆ ಆ ಹೈಕಿ ಮಹೋಪಾಧ್ಯಾಯರಾಗುವನರು, ಆಗಬಲ್ಲ ಪ್ರಚ್ಛನ್ನರಕ್ತಿಯುಳ್ಳವರು ಕೇವಲ ಕೆಲವು ಮಂದಿ. ಅವರಿಗೂ ದೊಡ್ಡದಾಗಿ ಬೆಳೆದು ಅಖಿಲ ಶಿಕ್ಷಕ ಸಮುದಾಯಕ್ಕೇನೆ ಗುರುಸ್ಥಾನದಲ್ಲಿ ನಿಲ್ಲುವವರು, ಆದರ್ಶದ ಸಂಕೇತವೆನಿಸಬಲ್ಲವರು ಇಂದಿಗೆ ಕರ್ನಾಟಕದಲ್ಲಿ ಒಬ್ಬರೇ ಒಬ್ಬರು. 'ನಿನ್ಹಾಂಗ ಆಡಾಕ ನಿನ್ಹಾಂಗ ಹಾಡಾಕ ಪಡೆದು ಬಂದವ ಬೇಕೋ ಗುರುದೇವಾ' ಎಂದು ಬೇಂದ್ರೆಯವರು ಗುರುದೇವ ಟಾಗೋರರ ಕುರಿತು ಬರೆದಂತೆ ಕಾರಂತರೂ 'ಪಡೆದು ಬಂದ' ಆಂತಸ್ಸತ್ತ್ವವನ್ನೇ ಬೆಳೆಸಿ ಲೋಕಗುರುವಾದರು.

ಶಿಕ್ಷಣವೇ ಜೀವನ

ಈಚೆಗೆ ಉಡುಪಿಯಲ್ಲಿ ನಡೆದ ಕಾರಂತ ಅಭಿನಂದನೆ ಉತ್ಸವದ ವೇಳೆ ಕಾರಂತರ 'ಲವಕುಶ'ವನ್ನು ಚಿಕ್ಕ ಬಾಲಕರು ಆಡಿ ತೋರಿಸಿದಾಗ ಅಧ್ಯಕ್ಷ ಸುನೀತಿಕುಮಾರ್ ಚಟರ್ಜಿಯವರು ಟಾಗೋರರು ಶಾಂತಿನಿಕೇತನದಲ್ಲಿ ಇದೇ ರೀತಿ ಮಕ್ಕಳ ನಾಟಕ ಆಡಿಸುತ್ತಿದ್ದರು ಎಂದು ಉದ್ಗರಿಸಿ ತಮ್ಮ ಪ್ರಶಂಸೆಯನ್ನು ವ್ಯಕ್ತಪಡಿಸಿದರು. ಕಾರಂತರು ಕಾದಂಬರಿ ಕ್ಷೇತ್ರಕ್ಕೆ ಪ್ರವೇಶಿಸುವ ಮೊದಲು ಕನ್ನಡ ನಾಡಿನ ಜೀವನದಲ್ಲಿ ಶಿಕ್ಷಣರಂಗದ ಮುಖಾಂತರವಾಗಿ ಪದಾರ್ಪಣ ಮಾಡಿದರೆಂಬುದನ್ನು ನಾವು ಮರೆಯಬಾರದು. ಕೆಲಕಾಲ ಅರಳಿ, ಸೌರಭ ಬೀರಿ, ಕಳಚಿ ಬೀಳುವ ವನಕುಸುಮದಂತೆ ಕಾರಂತರ 'ಬಾಲವನ'ವೂ ಇದ್ದಷ್ಟು ಕಾಲ ಪ್ರಸಂಚದ ಅತ್ಯಂತ ಆಧುನಿಕ ಶಿಕ್ಷಣ ಕೇಂದ್ರಗಳಲ್ಲಿ ಒಂದಾಗಿ, ಅನನುಕರಣೀಯವಾದ ಒಂದು ಆದರ್ಶವಾಗಿ, ಕಂಡವರ ಎದೆಯಲ್ಲಿ ಅಚ್ಚಳಿಯದ ಬಿಂಬವಾಗಿ; ಮಿಂಚಿ ಮಾಯವಾಯಿತು. ಯಾವುದನ್ನೂ ಮೊದಲಾಗಿ ಮಾಡಿ ತೋರಿಸದೆ ಆಡಲಾರದ ಕಾರಂತರು ಮಕ್ಕಳ ಶಿಕ್ಷಣಕ್ಕೆ ಹೊಸ ಹಾದಿಯನ್ನು ತೋರಿಸಿಕೊಟ್ಟರು. ಜಡಭರತ ಶಿಕ್ಷಣ ಇಲಾಖೆಯು ಪ್ರೋತ್ಸಾಹಿಸುವುದರ ಬದಲು ಕಾಟಕೊಡಲು ತೊಡಗಿದ ತಕ್ಷಣ ಮುಚ್ಚಿಬಿಟ್ಟು ಇನ್ನೊಂದು ಪಾಠಿ ಹಿಡಿದರು.

ಸಾಮಾಜಿಕ ಶಿಕ್ಷಣದ ಆದ್ಯ ಪ್ರವರ್ತಕ

ಬಾಲವನದ ಪ್ರಯೋಗವನ್ನು ಒಂದು ದೃಷ್ಟಿಯಿಂದ ಅಸಫಲ ಪ್ರಯೋಗವೆಂದು ನಾವು ತೀರ್ಮಾನಿಸಿದರೂ, ಕಾರಂತರಿಗೆ ಮಕ್ಕಳ ಮನೋರಂಗದ ಪೂರ್ತಿ ಪರಿಚಯ ಇದರಿಂದಲೇ ತೊಡಗಿ ಮಕ್ಕಳ ಶಿಕ್ಷಣದ ಬಗ್ಗೆ ಅವರಿಗೆ ಖಚಿತ ಅಭಿಪ್ರಾಯ ಉಂಟಾಗಲು ಇದೇ ಮೂಲಸ್ಫೂರ್ತಿಯಾಯಿತು. 'ನಮ್ಮ ಶಾಲೆಗಳಲ್ಲಿ ವಿಜ್ಞಾನದ ವಿಷಯಗಳನ್ನು ಉಪಾಧ್ಯಾಯರು ಹೇಳಿಕೊಡುತ್ತಿದ್ದ ರೀತಿಯನ್ನು ನೋಡಿದಾಗ ಕಂಡಿತು, ಅವರ ಹತ್ತಿರ ಹೇಳಿಕೊಡುವುದಕ್ಕೆ ವಿಷಯವೇ ಇಲ್ಲವೆಂದು. ಹಾಗೆಂದು ಬಾಲಪ್ರಪಂಚವನ್ನು ಬರೆಯಬೇಕಾಯಿತು' ಎಂದು ಕಾರಂತರು ಒಂದು ಸಂದರ್ಶನದಲ್ಲಿ ನುಡಿದಿದ್ದಾರೆ. ಇಂಗ್ಲಿಷಿನ ಅನೇಕ ಜ್ಞಾನಕೋಶಗಳಿಂದ ಪ್ರಭಾವಿತವಾದದ್ದಾದರೂ "ಬಾಲಪ್ರಪಂಚ"ದ ಸೊಗಸನ್ನು ಇಂದಿಗೂ ಅಲ್ಲಗಳೆಯುವಂತಿಲ್ಲ. ಈಗ ನಲ್ವತ್ತು ವರ್ಷಗಳ ತರುವಾಯವೂ ಅದರ ಪುಟಗಳನ್ನು ತೆರೆದು ನೋಡಿದರೆ, ಬರವಣಿಗೆಯ ಸ್ಪಷ್ಟತೆ ಮತ್ತು ವಾಹಕತೆ (communication) ಯ ನೆಲೆಯಲ್ಲಿ ಅದಕ್ಕೆ ಸದೃಶವಾದ ಗ್ರಂಥಗಳೇ ವಿರಳ. ವಿಷಯವನ್ನು ಯಾರಿಗಾಗಿ ಮಂಡಿಸುತ್ತಿದ್ದೇವೆ, ಅವರ ಶಬ್ದಕೋಶದ ಅಳತೆ ಯಾವುದು? ಎಂಬುದನ್ನು ನದರಿನಲ್ಲಿಟ್ಟುಕೊಳ್ಳದೆ ಬರೆಯಲಾದ ಶೈಕ್ಷಣಿಕ ಇಲಾಖೆಯ ಸಂಶೋಧಕರನ್ನು ಮಕ್ಕಳ ಕೊಲೆಪಾತಕಿಗಳಿಗೆ ಸಮನೆಂದು ಕಾರಂತರು ಪರಿಗಣಿಸುತ್ತಾರೆ. ಹಾಗೆವಿಜ್ಞಾನದ ಬರವಣಿಗೆಗಳಲ್ಲಿ ತಮ್ಮ ಪಾಂಡಿತ್ಯ ಪ್ರದರ್ಶನಕ್ಕೆಳಸುವ ಡಾಂಭಿಕ ಪಂಡಿತರನ್ನು ಅವರು ಮಾತಿನ ಕಟಕಿಯಿಂದ ಚುಚ್ಚುತ್ತಾರೆ. ಅಲ್ಲಿ 'ಸಾಹಿತ್ಯ'ದ ವೈಯಾರವನ್ನು ಮೂಡಿಸುವ ಕಲಾ ವಿಲಾಸಿಗಳಿಗೂ ಅವರ ವಾಗ್ಬಾಣಗಳು ತಪ್ಪಿದ್ದಲ್ಲ. ಬಾಲಪ್ರಪಂಚದ ತರುವಾಯ ಮೂರು ದಶಕಗಳು ಸಂದ ಮೇಲೆ ಕಾರಂತರೇ ಹೈಸ್ಕೂಲು ಓದಿಕೊಂಡವರ ಸಲುವಾಗಿ ವಿಜ್ಞಾನ ಪ್ರಪಂಚದ ನಾಲ್ಕು ಸಂಪುಟಗಳನ್ನು ಬರೆದು ಮುಗಿಸಿದರು. ಈತನ್ಮಧ್ಯೆ ಸಿರಿಗನ್ನಡ ಪಾಠಮಾಲೆ ಎಂಬ ಕನ್ನಡ ಪಾಠಮಾಲಿಕೆಯನ್ನು ಪ್ರಕಟಿಸಿದರು. ಸಿರಿಗನ್ನಡ ಕೋಶವನ್ನು ರಚಿಸಿದರು. ಮತ್ತೆ ಈಚೆಗೆ ಅಕಾರಾದಿಯಿಂದವೈಜ್ಞಾನಿಕಕೋಶವೊಂದರ ಅರ್ಧ ಕೆಲಸ ಮುಗಿಸಿ ಕೂತಿದ್ದಾರೆ. ಕೂತಲ್ಲೇ ವಿಶ್ವಪರ್ಯಟನ ಮಾಡಬಲ್ಲ ಋಷಿದೃಷ್ಟಿಯನ್ನು ಪಡೆದ ಕಾರಂತರು ಸಂಸ್ಥೆಗಳು ಯೋಚಿಸುವ ಮುನ್ನ, ಯೋಜಿಸುವ ಮುನ್ನ ಮೌನವಾಗಿ, ನಿರಂತರವಾಗಿ ದುಡಿದು ಕೆಲಸ ಮುಗಿಸುವ ಸಂಪ್ರದಾಯ ಅದ್ಭುತವಾದ್ದು. ಶಿಕ್ಷಣದ ಬಗ್ಗೆ–ಕೇವಲ ವಿದ್ಯಾರ್ಥಿಗಳ ಶಿಕ್ಷಣ ಮಾತ್ರವಲ್ಲ, ಕಲಿತವರಿಗೂ ಬೇಕಾದ ಶಿಕ್ಷಣದ ಕುರಿತು–ಕಾರಂತರು ಅವರ ಜೀವಮಾನದುದ್ದಕ್ಕೆ ತೋರಿಸಿದ ಕಾಳಜಿ(concern) ಭಾರತದ ಎಷ್ಟು ಮಂದಿ ಉಪಕುಲಪತಿಗಳು ತೋರಿದ್ದಾರೆ? ಆವರವರ ಸೀಮಿತ ಕಾರ್ಯಕ್ಷೇತ್ರದ ಫೋಟೋಪಕ್ಕೂ, ಪನ್ನತಿಕೆಗೂ ತಾವೇ ಮೊದಲ ಬಲಿಯಾಗಿ, ಸ್ವಕರ್ತವ್ಯ ಪರಾಙ್ಮುಖರಾಗಿ, ಆಂಗ್ಲ ಭಾಷಾವ್ಯಾಮೋಹದಿಂದ ಕಣ್ಮುಕ್ಕುರುಡರಾಗಿ,

(ಇಪ್ಪತ್ತಮೂರನೇ ಪುಟ ನೋಡಿರಿ)

ಸ್ವಂತ ಉದ್ಯೋಗದಲ್ಲಿ
ತೊಡಗಿರುವವರಿಗಾಗಿ
ಆಕರ್ಷಕ ಸಾಲ ಯೋಜನೆಗಳು

ಡಾಕ್ಟರರು, ಇಂಜಿನಿಯರು, ಕೃಷಿಕರೇ
ಮೊದಲಾದ ಸ್ವಂತ ಉದ್ಯೋಗಿಗಳಿಗೆ
ಕೆನರಾ ಬ್ಯಾಂಕಿನಲ್ಲಿ
ವಿವಿಧ ಆಕರ್ಷಕ ಸಾಲ ಯೋಜನೆಗಳಿವೆ.

ನಿಮಗೆ ಸ್ವಂತ ಉದ್ಯೋಗಿಗಳಾಗುವ ಯಾವದೇ ಯೋಚನೆ ಇದ್ದರೆ ಬ್ಯಾಂಕಿನ ಯಾವದೇ ಶಾಖಾ ಮೆನೇಜರರ ಸಂಪರ್ಕ ಬೆಳೆಸಿರಿ.

—ನಿಮಗೆ ಸಹಾಯ ಮಾಡುವ ಸದವಕಾಶ—

ಕೆನರಾ ಬ್ಯಾಂಕ್

ಪ್ರಧಾನ ಕಚೇರಿ : ಬೆಂಗಳೂರು

ಶುಭಾಶಯಗಳು—

ಹೊಲಿಡೇ ಇನ್

ಗಾಂಧಿನಗರ — ಬೆಂಗಳೂರು-9

ನಗರದ ಕೇಂದ್ರ ಸ್ಥಾನದಲ್ಲಿ ಈಗತಾನೇ ಪ್ರಾರಂಭಿಸಲ್ಪಟ್ಟ ಅತ್ಯಾಧುನಿಕ ಮಾದರಿಯ (ಹೊಟೇಲ್) ಊಟ ಮತ್ತು ಉಪಾಹಾರ ಮಂದಿರ.

ಚೈನೀಸ್, ಐರೋಪ್ಯ ಮತ್ತು ಉತ್ತರ ಭಾರತದ ವೈವಿಧ್ಯಪೂರ್ಣ ಭೋಜನ ಸೌಕರ್ಯ.

ದ. ಕನ್ನಡದ ವಿಖ್ಯಾತ ಕೋಳಿರೊಟ್ಟಿ ನಮ್ಮ ವೈಶಿಷ್ಟ್ಯ.

Visit

HOLIDAY INN

20-21 SHESHADRI ROAD
GANDHI NAGAR
BANGALORE-9

ಸಹಕಾರಿ ಕ್ಷೇತ್ರದ ಸಕ್ಕರೆ ಕಾರ್ಖಾನೆಗಳ ಮುನ್ನಡೆ

ದೇಶದ ಒಟ್ಟು ಸಕ್ಕರೆ ಉತ್ಪಾದನೆಯ ಮೂರನೆಯ ಒಂದು ಭಾಗದಷ್ಟನ್ನು ಇಂದು ಸಹಕಾರಿ ಕ್ಷೇತ್ರದಲ್ಲಿ ಉತ್ಪಾದಿಸಲಾಗುತ್ತಿದೆ.

ಸದ್ಯದಲ್ಲಿ ಸಹಕಾರಿ ಕ್ಷೇತ್ರದಲ್ಲಿರುವ ಸಕ್ಕರೆ ಕಾರ್ಖಾನೆಗಳ ಒಟ್ಟು ಸಂಖ್ಯೆ ೧೧೦. ಇವುಗಳಲ್ಲಿ ಅಧಿಕ ಸಂಖ್ಯೆಯ ಕಾರ್ಖಾನೆಗಳು ಮಹಾರಾಷ್ಟ್ರದಲ್ಲಿವೆ. ಮಹಾರಾಷ್ಟ್ರದಲ್ಲಿ ೪೭ ಸಕ್ಕರೆ ಕಾರ್ಖಾನೆಗಳಿಗೆ ಪರವಾನೆ ದೊರೆತಿದ್ದು, ಅವುಗಳಲ್ಲಿ ೨೬ ಉತ್ಪಾದನೆಯನ್ನು ಆರಂಭಿಸಿವೆ. ಮೈಸೂರು ರಾಜ್ಯದಲ್ಲಿಯೂ ಸಹಕಾರಿ ಕ್ಷೇತ್ರದಲ್ಲಿ ೧೧ ಕಾರ್ಖಾನೆಗಳಿಗೆ ಅನುಮತಿ ದೊರೆತಿದೆ. ೫ ಕಾರ್ಖಾನೆಗಳು ಈಗಾಗಲೇ ಉತ್ಪಾದನೆ ಸ್ಥಾಪಿಸಿವೆ. ಗುಜರಾತ್ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಕ್ರಮವಾಗಿ ೧೧ ಮತ್ತು ೧೦ ಕಾರ್ಖಾನೆಗಳಿಗೆ ಪರವಾನೆ ದೊರೆತಿದ್ದು ಗುಜರಾತಿನಲ್ಲಿ ೫ ಮತ್ತು ಆಂಧ್ರಪ್ರದೇಶದಲ್ಲಿ ೮ ಕಾರ್ಖಾನೆಗಳು ಉತ್ಪಾದನೆಯಲ್ಲಿ ತೊಡಗಿವೆ.

ಖಾಸಗಿ ಕ್ಷೇತ್ರದಲ್ಲಿರುವ ಸಕ್ಕರೆ ಕಾರ್ಖಾನೆಗಳು ಎದುರಿಸುತ್ತಿರುವ ಸಮಸ್ಯೆಗಳ ನಿವಾರಣೆಗೆ ಸಹಕಾರಿ ಕ್ಷೇತ್ರ ಕಾರ್ಖಾನೆಗಳ ಸ್ಥಾಪನೆಯೇ ಸೂಕ್ತವೆಂದು ಕಂಡು ಬರುತ್ತದೆ. ಉತ್ತರಪ್ರದೇಶದ ಸಕ್ಕರೆ ಕಾರ್ಖಾನೆಗಳು ಒಮ್ಮೆ ತೀವ್ರ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂತು. ಆ ಸಂದರ್ಭದಲ್ಲಿ ಎಲ್ಲ ಸಕ್ಕರೆ ಕಾರ್ಖಾನೆಗಳ ರಾಷ್ಟ್ರೀಕರಣ ಮಾಡುವ ಬಗ್ಗೆ ಬೇಡಿಕೆಯೂ ಹೆಚ್ಚಿತು. ಈ ಬೇಡಿಕೆಯ ಹಿನ್ನೆಲೆಯಲ್ಲಿ ಸಮಸ್ಯೆಗಳ ನಿವಾರಣೆಗಳಿಗೆ ಸೂಕ್ತ ಸಲಹೆಗಳನ್ನು ಮಾಡುವ ಸಲುವಾಗಿ ಉತ್ತರ ಪ್ರದೇಶದ ರಾಜ್ಯ ಸರಕಾರದವರು ಸಕ್ಕರೆ ಸಮಿತಿಯನ್ನು ರಚಿಸಿದರು. ಕಡಿಮೆ ಪ್ರಮಾಣದ ಕಬ್ಬು ಉತ್ಪಾದನೆ ಮತ್ತು ಕಾರ್ಖಾನೆಗಳ ಅಸಮರ್ಥ ಆಡಳಿತದ ಬಗ್ಗೆಯೂ ಸಲಹೆ ಮಾಡಲು ಈ ಸಮಿತಿಗೆ ವಹಿಸಲಾಯಿತು. ಕೇಂದ್ರ ಸರಕಾರದವರೂ ಸಕ್ಕರೆ ಕಾರ್ಖಾನೆಗಳ ರಾಷ್ಟ್ರೀಕರಣದ ಸಲಹೆಯೊಂದಿಗೆ ಕಾರ್ಖಾನೆಗಳ ಕಾರ್ಯಾಚರಣೆಯ ಬಗ್ಗೆ ಅಧ್ಯಯನ ನಡೆಸಲು ನಿರ್ಧರಿಸಿದ್ದಾರೆ.

ಉತ್ತರಪ್ರದೇಶದಲ್ಲಿ ಕಳೆದ ವರ್ಷ ೭೧ ಕಾರ್ಖಾನೆಗಳು ಉತ್ಪಾದನಾ ವಿಭಾಗಗಳಿದ್ದುವು. ಇವುಗಳಲ್ಲಿ ೬೭ ಖಾಸಗಿ ಕಾರ್ಖಾನೆಗಳಾಗಿದ್ದು, ದೇಶದ ಒಟ್ಟು ಸಕ್ಕರೆ ಉತ್ಪಾದನೆಯಲ್ಲಿ ಸುಮಾರು ೩೩ ಭಾಗ ಉತ್ತರಪ್ರದೇಶದಲ್ಲಿಯೇ ಉತ್ಪಾದಿಸಲಾಗುತ್ತಿದೆ. ಸುಮಾರು ೨೦ ಲಕ್ಷ ಮಂದಿ ಕಬ್ಬು ಉತ್ಪಾದಕರು ಈ ಸಕ್ಕರೆ ಕಾರ್ಖಾನೆಯನ್ನು ಅವಲಂಬಿಸಿದ್ದಾರೆ. ರಾಜ್ಯಸರ್ಕಾರಕ್ಕೂ ಈ ಕಾರ್ಖಾನೆಗಳಿಂದಾಗಿ ಹೆಚ್ಚಿನ ಆದಾಯ ಬರುತ್ತಿದೆ.

ಸಕ್ಕರೆ ಕಾರ್ಖಾನೆಗಳ ರಾಷ್ಟ್ರೀಕರಣದ ಬಗ್ಗೆ ಮುಂದಿಟ್ಟಿರುವ ಬೇಡಿಕೆಯನ್ನು ತೀವ್ರವಾಗಿ ಪರಿಶೀಲಿಸುವ ಅಗತ್ಯವಿದೆ. ಈ ದಿಸೆಯಲ್ಲಿ ಮಹಾರಾಷ್ಟ್ರ ರಾಜ್ಯಬಹುವಾಗಿಮುನ್ನಡೆದಿದೆ. ಇದರಿಂದಾಗಿ ಈ ಸಮಸ್ಯೆಯ ನಿವಾರಣೆಗೆ ಸೂಕ್ತ ಮಾರ್ಗದರ್ಶನ ನೀಡಬಹುದು. ಕಬ್ಬು ಉತ್ಪಾದನೆಗಾಗಿ ಮಹಾರಾಷ್ಟ್ರದಲ್ಲಿ ಬಳಸಲಾಗುವ ಜಮೀನಿನ ಕ್ಷೇತ್ರ ಉತ್ತರಪ್ರದೇಶದ ಜಮೀನಿನ ೧/೮ ಭಾಗದಷ್ಟಿದೆ. ಆದರೆ ಉತ್ಪಾದನಾ ಪ್ರಮಾಣ ಶೇಕಡ ೬೦ ಭಾಗದಷ್ಟಿದೆ. ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಗಳ ಹತ್ತಿರ ವಿರುವ ಪ್ರತಿ ಎಕರೆ ಜಮೀನಿನಲ್ಲಿ ೪೦ ಟನ್‌ಗಳಷ್ಟು ಕಬ್ಬು ಬೆಳೆಯಲಾಗುತ್ತಿದೆ. ಪ್ರತಿ ಎಕರೆಗೆ ಮಹಾರಾಷ್ಟ್ರದಲ್ಲಿ ೪೬ ಕ್ವಿಂಟಾಲ್‌ಗಳಷ್ಟು ಸಕ್ಕರೆಯನ್ನು ಉತ್ಪಾದಿಸಲಾಗುತ್ತಿದೆಯಾದರೂ, ಈ ಪ್ರಮಾಣ ಉತ್ತರಪ್ರದೇಶದಲ್ಲಿ ಕೇವಲ ೧೫ ಕ್ವಿಂಟಾಲ್‌ಗಳಷ್ಟಿದೆ.

ಮಹಾರಾಷ್ಟ್ರದ ಒಟ್ಟು ಸಕ್ಕರೆ ಉತ್ಪಾದನೆಯಲ್ಲಿ ಶೇಕಡ ೭೦ರಷ್ಟನ್ನು ಸಹಕಾರಿ ಕ್ಷೇತ್ರದಲ್ಲಿಯೇ ಉತ್ಪಾದಿಸಲಾಗುತ್ತಿದೆ. ಇದು ದೇಶದ ಒಟ್ಟು ಉತ್ಪಾದನೆಯಲ್ಲಿ ಶೇಕಡ ೨೦ರಷ್ಟಾಗುವುದು.

ಸಹಕಾರಿ ಕಾರ್ಖಾನೆಗಳ ಸ್ಥಾಪನೆಯಿಂದಾಗಿ ಕೆಲವು ಹೆಚ್ಚಿನ ಪ್ರಯೋಜನಗಳು ದೊರೆಯುವುವು. ಖಾಸಗಿ ಕಾರ್ಖಾನೆಗಳಲ್ಲಿ ಸಕ್ಕರೆ ಉತ್ಪಾದನೆಯಲ್ಲಿ ಬರುವ ಲಾಭವನ್ನು ಆ ಉದ್ಯಮದಲ್ಲಿ ತೊಡಗಿದ ಎಲ್ಲರಿಗೂ ಸಮವಾಗಿ ಹಂಚಲಾಗುವುದು. ಇದರಿಂದಾಗಿ ಲಾಭದ ನೊತ್ತ ಬೇ ಸಾಯಗಾರರಿಗೆ ಕಡಿಮೆಯಾಗುವುದು. ಇದರಿಂದಾಗಿ ಆತನ ಕಬ್ಬು ಉತ್ಪಾದನೆ ಬಗ್ಗೆ ಆಸಕ್ತಿಯೂ ಕಡಿಮೆಯಾಗುವುದು. ಸಹಕಾರಿ ಕಾರ್ಖಾನೆಗಳಲ್ಲಿ ಕಬ್ಬು ಉತ್ಪಾದನಾಗಾರನೇ ಕಾರ್ಖಾನೆಯ ಪ್ರಧಾನ. ಆ ಪ್ಟೇ ಅಲ್ಲದೆ ಎಕರೆ ಜಮೀನಿನ ಉತ್ಪಾದನಾ ಪ್ರಮಾಣ ಏರಿಸುವುದು ಮತ್ತು ಉತ್ಪಾದನಾಕಾರರಿಗೆ ಉತ್ತೇಜನ ನೀಡುವುದು ಸಹಕಾರಿ ಕ್ಷೇತ್ರದ ಉದ್ದೇಶಗಳು.

ಸಹಕಾರಿ ಕಾರ್ಖಾನೆಗಳ ಉತ್ಪಾದನಾಕಾರರಿಗೆ ಅಧಿಕ ಲಾಭ ಬರುವುದು. ಇದು ಉತ್ಪಾದನೆ ಬಗ್ಗೆ ಅವರಿಗೆ ಪರೋಕ್ಷವಾಗಿ ಉತ್ತೇಜನವನ್ನು ನೀಡುವುದು. ಸಹಕಾರಿ ಕಾರ್ಖಾನೆಗಳ ಸ್ಥಾಪನೆಯಾದರೆ ದೊಡ್ಡ ಪ್ರಮಾಣದಲ್ಲಿ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ನೆರವಾಗುವುದು. ಸಮಾಜ ಸುಧಾರಣೆಗೂ ಇವು ಕಾರಣವಾಗಬಲ್ಲವು. ಕೆಲವು ಸಹಕಾರಿ ಸಕ್ಕರೆ ಕಾರ್ಖಾನೆಗಳು ಕಾಲೇಜುಗಳನ್ನು ನಡೆಸುತ್ತಿವೆ. ಮಹಾರಾಷ್ಟ್ರದ ಸಹಕಾರಿ ಕ್ಷೇತ್ರದ ಕೈಗಾರಿಕೆ ೧೯೬೬–೬೮ರಲ್ಲಿ ೪೨.೫೫ ಲಕ್ಷ ರೂ. ಗಳನ್ನು ಕೋಯ್ನಾ ಪರಿಹಾರ ನಿಧಿಗೆ ಸಮರ್ಪಿಸಿದೆ.

ಮೈಸೂರು ಉಪಕರಣಗಳ ಕಾರ್ಖಾನೆ
ಹಾಸನ
(ಮೈಸೂರು ಸರಕಾರದ ಉದ್ದಿಮೆ)

ಚೆನ್ನಾಗಿ ಕಾವು ಕೊಟ್ಟು ಟೆಂಪರುಗೊಳಿಸಿದ
ಶ್ರೇಷ್ಠ ಕಾರ್ಬನ್ ಉಕ್ಕಿನಿಂದ ತಯಾರಿಸಿದ
ಶ್ರೇಷ್ಠ ದರ್ಜೆಯ ಉಪಕರಣಗಳು.

ಸಾಮಾನುಗಳನ್ನು ತೆಗೆದುಕೊಳ್ಳುವ ಮೊದಲೇ ಒರೆಗೆ ಹಚ್ಚಬಹುದು.
ಈ ಉಪಕರಣಗಳು ಅತ್ಯಂತ ಗಟ್ಟಿಯಾಗಿವೆ.
ದೀರ್ಘಕಾಲ ಬಾಳಿಕೆ ಬರುತ್ತವೆ.
ಒಂದು ಸುದ್ದಿವ

ಕಾರಖಾನೆ ಅಥವಾ ಜೋನಲ್ ಏಜೆಂಟರೊಡನೆ
ಪತ್ರ ವ್ಯವಹಾರ ನಾಡಬಹುದು.

ಅರ್ಥ ವ್ಯವಸ್ಥೆಯಲ್ಲಿ ಬೀಡಿ ಉದ್ಯಮ

ಬೀಡಿ ಉದ್ಯಮವು ದೇಶದ ಬೃಹತ್ ಉದ್ಯಮಗಳಲ್ಲಿ ಒಂದು. ಕೃಷಿಯೊಂದನ್ನುಳಿದರೆ, ಈ ಉದ್ಯಮದಲ್ಲೇ ಹೆಚ್ಚಿನ ಜನರು ಉದ್ಯೋಗ ಮಾಡಿಕೊಂಡಿದ್ದಾರೆ. ಇಡಿಯ ಭಾರತದಲ್ಲಿ ಪ್ರತಿ ದಿನವೂ ೧೩೦ ಕೋಟಿ ಬೀಡಿಗಳನ್ನು ಕಟ್ಟಲಾಗುತ್ತದೆ. ಒಂದು ಕೋಟಿ ರೂಪಾಯಿಗಳ ವ್ಯವಹಾರ ನಡೆಯುತ್ತದೆ. ಸುಮಾರು ಹದಿನೈದು ಲಕ್ಷಕ್ಕೂ ಹೆಚ್ಚು ಮಂದಿ ಬೀಡಿ ಉದ್ಯಮದಲ್ಲಿ ಉದ್ಯೋಗ ಪಡೆದಿದ್ದಾರೆ.

ಬೀಡಿ ಉದ್ಯಮವು ಎಳೆಯರಿಂದ ಹಿಡಿದು ಹಿರಿಯರ ವರೆಗೆ ಲಿಂಗ, ವಯಸ್ಸು, ಶಿಕ್ಷಣಗಳ ಪರಿಛೇದವಿಲ್ಲದೆ ಸರ್ವರಿಗೂ ಸಮನಾಗಿ ಉದ್ಯೋಗ ನೀಡಿದೆ. ಈ ಉದ್ದಿಮೆಯಲ್ಲಿ ಪೂರ್ಣಾವಧಿಯ, ಅಲ್ಪಾವಧಿಯ ಕೆಲಸಗಾರರು ಉದ್ಯೋಗಪಡೆದಿದ್ದು ದೇಶವ್ಯಾಪಿಯಾಗಿ ಹರಡಿಕೊಂಡಿದ್ದಾರೆ. ಹಾಗಿದ್ದರೂ ಮಧ್ಯಪ್ರದೇಶ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಈ ಉದ್ದಿಮೆಯು ವ್ಯಾಪಕವಾಗಿ ಹಬ್ಬಿಕೊಂಡಿದೆ.

ಬೀಡಿಯೊಂದು ಸರಳ ಉದ್ಯಮ. ಇದಕ್ಕೆ ಕಾರ್ಖಾನೆಗಳ ನಿರ್ಮಾಣ ಜನಗತ್ಯ. ಮನೆಮನೆಗಳಲ್ಲಿ, ಅಂಗಳದಲ್ಲಿ, ಮರದ ನೆರಳಿನಲ್ಲಿ, ಎಲ್ಲೆಂದರಲ್ಲಿ ಈ ಉದ್ಯಮ ನಡೆಯಬಲ್ಲುದು. ನಗರಗಳಲ್ಲಿಯಂತೆಯೇ ಗ್ರಾಮೀಣ ಪ್ರದೇಶಗಳಲ್ಲಿಯೂ ಬೀಡಿ ಉದ್ಯಮವು ನಿರಾತಂಕವಾಗಿ ಸಾಗಬಲ್ಲುದು. ಹಳ್ಳಿಗಳ ಆರ್ಥಿಕ ಪುನಾರಚನೆಯಲ್ಲಿ ಈ ಉದ್ಯಮವೂ ಮಹತ್ವದ ಪಾತ್ರವಹಿಸುತ್ತದೆಯೆಂದರೆ, ಅತಿಶಯೋಕ್ತಿಯಲ್ಲ. ಬೀಡಿ ಕೈಗಾರಿಕೆಯಲ್ಲಿ ತೊಡಗಿದವರಿಗೆ ಏಕವಿಧವಾದ ವೇತನವಿಲ್ಲ. ದೇಶ - ಕಾಲ - ಪರಿಸ್ಥಿತಿಗಳಿಗನುಸಾರವಾಗಿ ವೇತನಗಳಲ್ಲಿ ಏರುಪೇರುಗಳಿರುವುದು ಸ್ವಾಭಾವಿಕ.

ಸರಕಾರಕ್ಕೂ ಕೋಟ್ಯಂತರ ರೂಪಾಯಿ ಮೊತ್ತದ ಕರಸಂಗ್ರಹಕ್ಕೆ ಕಾರಣೀಭೂತವಾದ ಬೀಡಿ ಉದ್ಯಮಕ್ಕೆ ಹೊಗೆಸೊಪ್ಪು ಮತ್ತು ಅದನ್ನು ಸುತ್ತುವ ತೆಂಡು ಎಲೆಗಳಷ್ಟೇ ಅವಶ್ಯವಾದ ಕಚ್ಚಾ ವಸ್ತುಗಳು. ಪೋರ್ಚುಗೀಸರು ಭಾರತಕ್ಕೆ ವ್ಯಾಪಾರಿಗಳಾಗಿ ಬಂದಾಗ, ತಮ್ಮ ಪ್ರಿಯ ವಸ್ತು ಹೊಗೆಸೊಪ್ಪನ್ನೂ ತಂದರು. ಅದರ ಸೇವನೆಯಿಂದ ಆಕರ್ಷಿತರಾದವರು ಇಲ್ಲಿಯೂ ಅದನ್ನು ಬೆಳೆಯಲು ಆರಂಭಿಸಿದರು.

ಹೊಗೆಸೊಪ್ಪು ಭಾರಿ ವ್ಯಾಪಾರಿ ಬೆಳೆ. ೧೯೬೬-೬೭ರಲ್ಲಿ ನಮ್ಮ ದೇಶದ ಸುಮಾರು ಏಳೂಕಾಲು ಲಕ್ಷ ಹೆಕ್ಟೇರುಗಳಲ್ಲಿ ಈ ಬೆಳೆಯನ್ನು ಬೆಳೆಸಲಾಯಿತು. ಇದರಿಂದ ಸುಮಾರು ೬೩ ಕೋಟಿ ಕಿಲೋಗ್ರಾಂ ಗಳಷ್ಟು ಹೊಗೆಸೊಪ್ಪು ಉತ್ಪನ್ನ ವಾಯ್ತು. ಅಮೆರಿಕ ಮತ್ತು ಚೀನ ಗಳನ್ನು ಬಿಟ್ಟರೆ, ನಾನೇ ಇದರಲ್ಲಿ ಮೊದಲಿಗರು. ನಿಕೊಟಿನಾ ಟೊಬೇಕಂ ಎಂಬ ಜಾತಿಯ ಹೊಗೆಸೊಪ್ಪು ಸಿಗರೇಟು, ಬೀಡಿ ಉದ್ಯಮಕ್ಕೆ ಬಳಕೆಯಾಗುತ್ತದೆ. ನಿಕೊಟಿನಾ ರಸ್ಟಿಕಾ ಎಂಬುದು ಹುಕ್ಕಾದಲ್ಲಿ ಉಪಯೋಗಕ್ಕೆ ಬರುತ್ತದೆ.

ಹೊಗೆಸೊಪ್ಪನ್ನು ಬಿಸಿಲಲ್ಲಿ ಒಣಗಿಸಿ ಎಲೆಯನ್ನು ದಂಟಿನಿಂದ ಪ್ರತ್ಯೇಕಿಸುತ್ತಾರೆ. ಎಲೆಯ ಬಣ್ಣ, ದಪ್ಪ ಮೊದಲಾದುವುಗಳಿಂದ ಅದರ ಗುಣಮಟ್ಟವನ್ನು ಪರೀಕ್ಷಿಸುತ್ತಾರೆ. ಗುಜರಾತಿ, ನಿಪ್ಪಾಣಿ, ಮೈಸೂರು ಮತ್ತು ಅಲಂಪುರ ಜಾತಿಯ ಹೊಗೆಸೊಪ್ಪಿನ ಚೂರುಗಳನ್ನು ಮಿಶ್ರ ಮಾಡಿ ಬೀಡಿಯ ಹೊಗೆಸೊಪ್ಪಿನ ಚೂರುಗಳನ್ನು ಸಿದ್ಧಗೊಳಿಸುತ್ತಾರೆ. ವೇರೆವೇರೆ ಜಾತಿಯ ತಂಬಾಕಿನ ಮಿಶ್ರಣದ ಪ್ರಮಾಣವೇ ಈ ಉದ್ದಿಮೆಯ ಗುಟ್ಟು. ಒಂದೊಂದು ಕಂಪೆನಿಯವರು ಒಂದೊಂದು ದಾಮಾಶಯವನ್ನು ಇಲ್ಲಿ ಬಳಸುತ್ತಾರೆ. ಇದರಿಂದ ಬೀಡಿಯ ಗುಣಮಟ್ಟದಲ್ಲಿ ಬದಲಾವಣೆಯಿರುತ್ತದೆ. ಬೀಡಿಸೇದುವವರಿಗೆ ತಂಬಾಕ್ಕಿದೇ ಬ್ರಾಂಡಿನ ಮೇಲೆ ಅಭಿರುಚಿಯಿರುತ್ತದೆ.

ಬೀಡಿ ಉದ್ಯಮಕ್ಕೆ ಅನಿವಾರ್ಯವಾದ ಇನ್ನೊಂದು ವಸ್ತುವೆಂದರೆ ತೆಂಡು ಎಲೆ. ಇದು ಮಹಾರಾಷ್ಟ್ರ, ಮಧ್ಯಪ್ರದೇಶ ಒಡಿಸ್ಸ, ಬಿಹಾರ ಮತ್ತು ಆಂಧ್ರಪ್ರದೇಶಗಳ ಒಂದೊಂದು ಭಾಗದಲ್ಲಲ್ಲಿ ಬೆಳೆದಿರುವ ಕಾಡುಗಳಲ್ಲಿ ಸಿಗುತ್ತದೆ. ಮೆತ್ತಗಾಗಿ, ನುಣುಪಾಗಿ ಮತ್ತು ನಾರು ಗಟ್ಟಿಯಾಗಿ ಇರುವ ಎಲೆಗಳು ಉತ್ತಮ ಜಾತಿಯವು. ಈ ತೆಂಡು ಎಲೆಗಳ ಸ್ವಾಮ್ಯ ಆಯಾ ರಾಜ್ಯದ ನಸ್ಯ ಇಲಾಖೆಗೆ ಸೇರಿದ್ದು. ಎಪ್ರಿಲ್ ತಿಂಗಳಿಂದ ಮಳೆ ಆರಂಭವಾಗುವ ವರೆಗೆ ಈ ಎಲೆ ಕೊಯ್ಯುವ ಅಧಿಕಾರವನ್ನು ಗುತ್ತಿಗೆದಾರರು ಪಡೆದುಕೊಳ್ಳುತ್ತಾರೆ. ಮಳೆ ಬೇಗನೇ ಆರಂಭವಾದರೆ, ಗುತ್ತಿಗೆದಾರರು ಭಾರೀ ನಷ್ಟಕ್ಕೆ ಗುರಿಯಾಗುವುದೂ ಇದೆ. ಕೊಯ್ಯುವ ಕಾರ್ಮಿಕರ ಕೀಟಲೆಯೂ ಇವರಿಗೆ ಅಪರಿಚಿತವಲ್ಲ.

ಬೀಡಿ ಉದ್ಯಮದಲ್ಲಿ ಸಾಮಾನ್ಯವಾಗಿ ಹೆಲವು ಹಂತಗಳಿವೆ. ತೆಂಡು ಎಲೆಗಳನ್ನು ಒದ್ದೆಮಾಡಿ ಅವನ್ನು ಬೇಕಾದ ಗಾತ್ರಕ್ಕೆ ಕತ್ತರಿಸುವುದು; ಈ ತುಂಡುಗಳನ್ನು ಹೊಗೆಸೊಪ್ಪು ತುಂಬಿ ಉರುಟಾಗಿ, ಎರಡು

(ಇಪ್ಪತ್ತಮೂರನೇ ಪುಟ ನೋಡಿರಿ)

ನಿಮ್ಮ ಠೇವಣಾತಿ ಭದ್ರತೆಗೆ

ಕೆನರಾ ಫೈನಾನ್ಸ್ ಕೊರ್ಪರೇಶನ್ (ಪ್ರೈ)

ರುಕ್ಮಿಣಿ ಬಿಲ್ಡಿಂಗ್, ಚಿಕ್ಕಪೇಟೆ,

ಬೆಂಗಳೂರು-2A.

ಆಕರ್ಷಕ ಬಡ್ಡಿ ದರಗಳು—ನಿರಖು ಠೇವಣಾತಿ, ಸೇವಿಂಗ್ಸ್, ಕಲ್ಪತರು ಮತ್ತು ಮಿನಿ ಡಿಪೊಜಿಟ್ ಖಾತೆಗಳು — ಪ್ರತಿ ತಿಂಗಳೂ ನಡೆಸಲ್ಪಡುವ ಚಿಟ್ ಫಂಡ್ಸ್ (ರೂಪ್ಯಾ ಒಂದು ಸಾವಿರದಿಂದ 20 ಸಾವಿರದ ವರೆಗೆ)

ವಿವರವಾದ ಪ್ರಾಸ್ಪೆಕ್ಟಸ್‌ಗೆ ದಯವಿಟ್ಟು ಬರೆಯಿರಿ.

ಎಂ. ಎಸ್. ರಾಮನ್ ಜ್ಯೊಂಟ್ ಮೆ| ಪಾರ್ಟ್ನರ್.

ಎಂ. ಪಿ. ಪ್ರಭು ಮೆನೇಜಿಂಗ್ ಪಾರ್ಟ್ನರ್.

ಶುಭಾಶಯಗಳು—

ಶಕ್ತಿ ರೆಸ್ಟೋರೆಂಟ್

ಕೇವಲ್‌ರಿ ರೋಡು,

ಬೆಂಗಳೂರು-1

ನಗರದ ಜನಪ್ರಿಯ ಉಪಾಹಾರ ಮಂದಿರ

ಚಿತ್ತರಂಜನದಾಸ್ ಶೆಟ್ಟಿ, ಪ್ರೊಪ್ರೈಟರ್.

With Best Compliments from:-

SRI SHARADA BHAVANA

(High Class Vegetarian Restaurant)

RASTRAPATHI ROAD,

SECUNDERABAD (A. P.)

Prop: P. N. Murthy

ಪ್ರಾಚೀನ ಕೆನರಾ ಜಿಲ್ಲೆಗಳಲ್ಲಿ ಗುಡಿ ಕೈಗಾರಿಕೆ

— ಶ್ರೀ ಕೆ. ಜಿ. ವಸಂತ ಮಾಧವ, ಎಂ. ಎ.

ೀಠಿಕೆ:—

ಉತ್ತರದ ಕಾಳಿ ನದಿಯಿಂದ ದಕ್ಷಿಣದ ಕಂದ್ರಗಿರಿ ನದಿ ವರೆಗೂ, ಪೂರ್ವದಲ್ಲಿ ಪ ಮ ಘಟ್ಟ, ಪಶ್ಚಿಮದಲ್ಲಿ ಅರಬಿ ಸಮು ದ ವರೆಗೆ ಹಬ್ಬಿದ ಕೆನರಾವು ಬ್ರಿಟಿಷರ ಗನುಸದ ಪೂರ್ವದಲ್ಲಿ ಧಾನ್ಯದ ಕಣಜ ಾಗಿಯೂ, ವ್ಯಾಪಾರ ಕೇಂದ್ರವಾಗಿ ಯೂ, ಹಲವು ಕುಶಲ ಕೈಗಾರಿಕೆಗಳ ತ ರು ಮನೆಯೂ ಆಗಿತ್ತು. ಇಲ್ಲಿನ ಕುಶ ಲ ಕೈಗಾರಿಕೆಗಳ ಕುರಿತಾಗಿ ಪಾಡ್ದನಗಳು, ವಿಗಳ ಬರಹಗಳು ಮತ್ತು ವಿದೇಶಿ ಪ್ರ ವಾಸಿ ಬರಹಗಳು ತಿಳಿಸುತ್ತವೆ. ಇಲ್ಲಿನ ೈಗಾರಿಕೆಯು ಸಣ್ಣ ಪ್ರಮಾಣದ್ದಾಗಿದ್ದ ರೂ ಇದು ಇಲ್ಲಿನ ಗ್ರಾಮಗಳನ್ನು ಆರ್ಥಿ ಕ ಸ್ವಾವಲಂಬಿಯಾಗಿ ಮಾಡಿತು. ಇಲ್ಲಿನ ಕುಶಲ ಕೈಗಾರಿಕೆಯನ್ನು ನೋಡಿ ಬೆರ ಗಾದ ವಿದೇಶೀಯರು ಇವುಗಳನ್ನು ತಮ್ಮ ದೇಶಕ್ಕೆ ತರಿಸಿಕೊಳ್ಳುತಿದ್ದರು.

ಪಾಡ್ದನಗಳಲ್ಲಿ:—

ಇಲ್ಲಿನ ಕೈಗಾರಿಕೆಗಳ ವಿಷಯ ತಿಳಿಸು ವ ಮೊದಲ ಆಧಾರವೇ ಇಲ್ಲಿನ ಜನರಲ್ಲಿ ಚಾಲ್ತಿಯಲ್ಲಿದ್ದ ಪಾಡ್ದನಗಳು. ಈ ಪಾಡ್ದ ನಗಳು ಇಲ್ಲಿನ ಹಲವಾರು ಕೈಗಾರಿಕೆಗಳ ವಿಷಯ ತಿಳಿಸುತ್ತದೆ. ಕಲ್ಲುಬಟ್ಟಿ ಪಾಡ್ದನ ದಲ್ಲಿ ಶಂಭು ಕಲ್ಲುಕಟಿಕನು ಬಡಗಿಯಾಗಿ ತನ್ನ ಕೆಲಸದಲ್ಲಿ ನಿಪುಣನಾಗಿದ್ದನೆಂದೂ, ಬರಡನೇಯವನು ಕಮ್ಮಾರನಾಗಿಯೂ ಮೂರನೇಯವನು ಚಿನ್ನದ ಕೆಲಸಗಾರ ನಾಗಿಯೂ ನಾಲ್ಕನೇಯವನು ತಾನ್ರ ಕೆ ಲಸಗಾರನಾಗಿಯೂ ಮತ್ತು ಐದನೇಯ ವನು ಕಲ್ಲುಕಟ್ಟುವ ಕೆಲಸಗಾರ(ಮೇಸ್ತ್ರಿ) ನಾಗಿಯೂ ಇದ್ದನೆಂದು ತಿಳಿಸಿದೆ. ಇದ ರಿಂದ ಕೆನರಾ ಜಿಲ್ಲೆಗಳ ಗ್ರಾಮಗಳಲ್ಲಿ ಬ ಡಗಿ, ಕಮ್ಮಾರ, ಅಕ್ಕಾಲಿ, ತಾನ್ರ ಕೆಲಸ ಗಾರ ಮತ್ತು ಮೇಸ್ತ್ರಿಗಳದ್ದು ತಮ್ಮ ಕೈ ಗಾರಿಕೆಗಳನ್ನು ಉತ್ತಮ ರೀತಿಯಲ್ಲಿ ನಡೆ ಸಿಕೊಂಡು ಜೀವಿಸಿದ್ದರೆಂದು ತಿಳಿಯಬಹು ದು. ಕೆಲವು ಗ್ರಾಮಗಳಲ್ಲಿ ಕಂಚುಗಾರ ಕೇರಿಗಳಿದ್ದವು. ಈಗಿನ ಬಸ್ರೂರಲ್ಲಿ ಗುಡಿ ಗಾರ ಕಂಚುಗಾರ ಪಟಿಗಾರ ನೇಕಾರರ ಕೇರಿಗಳಿವೆ. ಹಿಂದೆ ಈ ಕೇರಿಗಳಲ್ಲಿ ವಿವಿಧ ವೃತ್ತಿಯವರು ನೆಲಸಿ ಈ ಕೈಗಾರಿಕೆಗಳ ನ್ನು ಪ್ರೋತ್ಸಾಹಿಸಿದ್ದರು. ಮುತ್ತುಗಳ ಕೆ ತ್ತನೆ, ವಜ್ರ ಕೆತ್ತನೆ, ಚಿನ್ನದಿಂದ ತರತರ ಗಳ ಆಭರಣ ರಚನೆ ಇತ್ಯಾದಿ ಕುಶಲ ಕೈಗಾರಿಕೆಗಳು ಈ ಪ್ರದೇಶದಲ್ಲಿ ಬಳಕೆ ಇ ದ್ದಿತ್ತೆಂದು ಬೊಬ್ಬರಿಯ ಪಾಡ್ದನವು ತಿಳಿ ಸಿದೆ. ಹುರಿಹಗ್ಗ ತಯಾರಿಸುವ ಕೈಗಾರಿಕೆ ಯಲ್ಲಿ ಮಾಪಿಳ್ಳೆ ಮತ್ತು ಜೆಟ್ಟರು ನಿರತ ರಾಗಿದ್ದರೆಂದು ಕೆಲವು ಪಾಡ್ದನಗಳು ತಿಳಿ ಸಿವೆ. ಬಟ್ಟೆ ನೇಯುವುದು ಇಲ್ಲಿನ ಅತ್ಯಂ ತ ಮುಖ್ಯ ಗುಡಿ ಕೈಗಾರಿಕೆ.

ಕಾಪೂರು, ಬೊಳೂರು ಮತ್ತು ಐರ್ವ ದೂರು ಬಟ್ಟೆ ತಯಾರಿಸುವ ಕೇಂದ್ರವಾಗಿ ದೆ. ಕಪ್ಪು ರೇಶ್ಮೆ ಬಟ್ಟೆ ಕಾಪೂರಿನಲ್ಲಿ. ಬಿ ಳಿ ರೇಶ್ಮೆ ಬಟ್ಟೆ ಬೊಳೂರಿನಲ್ಲಿ ಮತ್ತು ಸೊಪ್ಪು ಕಂಬಳಿ ಸಿಲ್ಕ್ ಬಟ್ಟೆ ಐರ್ವದೂರಿ ನಲ್ಲಿ ತಯಾರಾಗುತ್ತಿತ್ತೆಂದು ಬೊಬ್ಬರಿ ಯ ಪಾಡ್ದನವು ತಿಳಿಸುತ್ತದೆ.

ಇಲ್ಲಿನ ಕೆಲವು ಜನರು ನಾವಿಕರಾಗಿದ್ದ ರೆಂತಲೂ, ಅವರು ಮಜಲುಗಳನ್ನು ರಚಿ ಸಿ ಪರದೇಶಗಳಲ್ಲಿ ವ್ಯಾಪಾರ ಮಾಡುತಿದ್ದ ರೆಂದು ಬೊಬ್ಬರಿಯ ಪಾಡ್ದನ ತಿಳಿಸಿದೆ. ಇದೇ ಪಾಡ್ದನದಲ್ಲಿ ಯಾವ ರೀತಿ ಮಜು ವೆ ತಯಾರಿಸುತಿದ್ದರೆಂದು ತಿಳಿಸಿದೆ. ಇದ ರಿಂದ ಇಲ್ಲಿಯ ಜನರು ಮಜುವೆ ತಯಾ ರಿಸುವ ಕೈಗಾರಿಕೆಯಲ್ಲಿ ನಿಪುಣರಾಗಿದ್ದರೆಂ ದು ತಿಳಿಯ ಬಹುದು. ತಾಳೆಮರವು ಹೆ ಲವಾರು ಗುಡಿಕೈಗಾರಿಕೆಗೆ ಸಹಾಯಕವಾ ಗುತ್ತಿತ್ತು, ಕರಂಬುಸ ಪಾಡ್ದನವು ತಾಳೆ ಓಲೆಯಿಂದ ಕೊಡೆ ಚಾಪೆಗಳನ್ನು ತಯಾ ರಿಸುವ ಪ್ರಕ್ರಿಯೆಯಲ್ಲಿ ಜನರು ನಿರತರಾಗಿದ್ದ ರೆಂದು ತಿಳಿಸಿದೆ ತಾಳೆಮರದಿಂದ ಬೆಲ್ಲ ಮತ್ತು ಕಳ್ಳು ತಯಾರಿಸುವ ಕೈಗಾರಿಕೆ ಯನ್ನು ಕೋಟಿ ಚೆನ್ನಯ ಮತ್ತು ಕಲ್ಕುಟಿಕ ಪಾಡ್ದನ ತಿಳಿಸಿನೆ ಅಡಿಕೆ ಓಲೆಯಿಂ ದ ಮುಟ್ಟಾಳೆ ರಚಿಸುವ ಕೈಗಾರಿಕೆ ಇಲ್ಲಿ ಪ್ರಸಿದ್ಧವಾಗಿತ್ತೆಂದು ಹಲವಾರು ಪಾಡ್ದನ ಗಳಿಂದ ತಿಳಿಯ ಬಹುದು.

ಮೇಸ್ತ್ರಿಗಳು ಕಲ್ಲುಕಟ್ಟುವ ಕೆಲಸದಲ್ಲಿ ನಿಪುಣರಾಗಿದ್ದರು. ಇದಕ್ಕೆ ನಿದರ್ಶನವಾ ಗಿ ಕಾರ್ಕಳ ವೇಣೂರಿನ ಗೋಮಟ ಮೂಡುಬಿದ್ರೆ ಹಾಡುವಳ್ಳಿ ಭಟ್ಟಳ ಬಸದಿ ಗಳು ಮತ್ತು ಕೊಲ್ಲೂರು ಮತ್ತು ಇನ್ನಿತ ರ ದೇವಸ್ಥಾನ ರಚನೆಗಳಾಗಿವೆ. ಇದೇ ರೀ ತಿಯಲ್ಲಿ ಮರದ ಕೆತ್ತನೆಯು ಇಲ್ಲಿನ ಜನ ರ ಗುಡಿ ಕೈಗಾರಿಕೆಯಾಗಿದೆ. ಕೆಳದಿ ರಾಜ ರ ಕರ್ಣಿಕರ ಬಸ್ರೂರು ಮನೆಯಲ್ಲಿರುವ ಮರದ ಕೆತ್ತನೆಯೇ ಇದಕ್ಕೆ ಸಾಕ್ಷಿಯಾ ಗಿದೆ.

ಕವಿಗಳ ಬರಹದಲ್ಲಿ:—

ಕೆನರಾ ಜಿಲ್ಲೆಗಳ ಕವಿಗಳ ಬರಹಗಳೂ ಇಲ್ಲಿಯ ಕೈಗಾರಿಕೆಗಳ ವಿಷಯ ಉಲ್ಲೇ ಖಿಸುತ್ತವೆ. 'ಗೋಮಟೇಶ್ವರ ಚರಿತ್ರೆ' ಬ ರೆದ ಚಂದ್ರಮ ಕವಿ ತನ್ನ ಕಾವ್ಯದಲ್ಲಿ ಕಾ ರ್ಕಳದಲ್ಲಿ ಮಣಿಗಾರ ಕೇರಿಗಳಿದ್ದಿದೆಯೆಂ ದೂ ಹಲವಾರು ಮಣಿಗಳಿಂದ ತಯಾರಾ ದ ಆಭರಣಗಳು ಮಾರಾಟಕ್ಕಿಟ್ಟಿದ್ದರೆಂದೂ ಮತ್ತು ಇನ್ನಿತರ ಮುತ್ತು ರತ್ನಗಳ ಕೆತ್ತ ನೆಯು ಸಮುದ್ರ ತಟದಲ್ಲಿರುವ ಮುತ್ತು ರತ್ನಗಳ ರಾಶಿಯಂತೆ ಶೋಭಿಸುವುದೆಂದೂ ತಿಳಿಸಿದ್ದಾನೆ. ಈ ಕವಿಯು ಮುಂದುವರಿ ಯುತ್ತಾ ಕಾರ್ಕಳದ ಇನ್ನೊಂದು ಬೀದಿ ಯಲ್ಲಿ ಕಂಚಿನ ತರ ತರ ಪಾತ್ರೆಗಳಿಂದ ಶೋಭಿಸುತ್ತಿದೆಯೆಂದು ತಿಳಿಸಿದ್ದಾನೆ ಈ ಕವಿ ಬರಹ ಪ್ರಕಾರ ಇಲ್ಲಿ ಹಲವಾರು ಅ ಕ್ಕಾಲಿಗರು ಚಿನ್ನಕೆಲಸದಲ್ಲಿ ನಿಪುಣತೆಯ ನ್ನು ಪಡೆದಿದ್ದರು. ಅವರು ಚಿನ್ನವನ್ನು ನೋಡಿ ಅದರ ಮೌಲ್ಯ ಮತ್ತು ಅದರ ಪರಿಶುದ್ಧತೆ ತಿಳಿಸುತ್ತಿದ್ದರು. ಬಿದನೂರು ವಾರಭದ್ರ ನಾಯ್ಕನು ತನ್ನ ಆರಮ ನೆ ಯ ನ್ನು ಕಟ್ಟಲು ಘಟ್ಟದ ಕೆಳಗಿನಿಂದ ಗುಡಿಗಾರ, ಕಲ್ಲುಕುಟಿಗಾರ, ಚಿತ್ರಗಾರರನ್ನು ನೇಮಿಸಿದ್ದನೆಂದು 'ಕೆಳ ದಿ ನೃಪ ವಿಜಯ' ಕಾವ್ಯ ಬರೆದ ಲಿಂಗಣ್ಣ

(ಇನ್ನಷ್ಟನ್ನು ಮುಂದೆ ನೋಡಿರಿ)

ಹೆಗ್ಡೆ ಮತ್ತು ಗೋಲ್ಡೆ ಪ್ರೈವೇಟ್ ಲಿಮಿಟೆಡ್

"ಶ್ರೀಶೈಲಾ"
ಕನಕಾಪುರ ರಸ್ತೆ
ಬೆಂಗಳೂರು-11

ಇವರ ಶುಭಾಶಯಗಳು.

ನಮ್ಮ ತಯಾರಿಕೆಗಳಲ್ಲಿ ಮುಖ್ಯವಾದುವು:

- 'ನೊಡ್ಯುಲರ್ ಟೈಮ್ ಡಿಸ್ಟ್ರಿಬ್ಯೂಶನ್' ವ್ಯವಸ್ಥೆಗಳು
- 'ಡೆಕ್' ಸಮಯ ಮಾಪಕಗಳು
- ನೌಕಾ ಸಮಯ ಮಾಪಕಗಳು
- ಡಿಜಿಟಲ್ ಇಂಡಿಕೇಟರ್ ಸನಯ ಮಾಪಕಗಳು
- ಸ್ಪಂದನೋತ್ಪಾದಕಗಳು
- ರೇಡಿಯೊ (ಬಾನುಲಿ) ನಿರ್ದೇಶಕಗಳು
- ರೂಢ ಕೈಗಡಿಯಾರಗಳು
- ನಿಸ್ಪಂದಕಾರಕಗಳು
- ಲಾಜಿಕ್ ಪರಿಪಥಗಳು
- ಭಾಷಿತ ಪರಿಪಥಗಳು

ಬ್ಯಾಂಕಿಂಗ್ ವ್ಯವಸ್ಥೆಗೆ ಪುನಶ್ಚೇತನ

ಶ್ರೀ ಕೆ. ಕೆ. ಹೈ
ಕಸ್ಟೋಡಿಯನ್
ಸಿಂಡಿಕೇಟ್ ಬ್ಯಾಂಕ್

ಒಂದು ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಆಲ್ಲಿನ ಬ್ಯಾಂಕುಗಳು ವಹಿಸುತ್ತಿರುವ ಪಾತ್ರದ ಮಹತ್ವ ಬಹಳವಾದುದು. ಭಾರತದಂತಹ ಭೌಗೋಲಿಕವಾಗಿ ವಿಸ್ತಾರವಾಗಿದ್ದು ಪ್ರಗತಿಯ ದಾರಿಯಲ್ಲಿರುವ ರಾಷ್ಟ್ರಕ್ಕೆ ಬ್ಯಾಂಕಿಂಗ್ ರಂಗದಿಂದ ಸಲ್ಲಿಸಲ್ಪಡುತ್ತಿರುವ ಸೇವೆ ಅಸಾಮಾನ್ಯವಾಗಿದೆ. ನಮ್ಮ ದೇಶದ ವಾಣಿಜ್ಯ ಬ್ಯಾಂಕುಗಳಿಂದು ಪುರೋಗಾಮಿ ಧೋರಣೆಯನ್ನು ಸ್ವೀಕರಿಸಿ ಜನತೆ ಹಾಗೂ ಸಾಮಾನ್ಯ ಮನುಷ್ಯನ ಕಲ್ಯಾಣಕ್ಕಾಗಿ ಅನೇಕ ಹೊಸ ಯೋಜನೆಗಳನ್ನು ತಯಾರಿಸಿ ಕಾರ್ಯ ಸಫಲವಾಗಿವೆ.

ಕಳೆದ ವರ್ಷದ ಜುಲೈ ತಿಂಗಳ 19ನೇ ತಾರೀಕಿನಂದು ನಮ್ಮ ಸರಕಾರವು ದೇಶದ ಮುಖ್ಯ ಹದಿನಾಲ್ಕು ಬ್ಯಾಂಕುಗಳನ್ನು ರಾಷ್ಟ್ರೀಕರಿಸಿತು. ನಮ್ಮದೆ ಆದ ಸಿಂಡಿಕೇಟ್ ಬ್ಯಾಂಕು ಸಹ ಸರಕಾರದ ಆಧೀನಕ್ಕೆ ಒಳಗಾಯಿತು. ರಾಷ್ಟ್ರೀಕರಣದ ಉದ್ದೇಶವು, ಈ ಹದಿನಾಲ್ಕು ಬ್ಯಾಂಕುಗಳ ವ್ಯವಹಾರವನ್ನು ದೇಶದ ಆರ್ಥಿಕ ಉನ್ನತಿಗಾಗಿ ಹೊಸರೀತಿಯಲ್ಲಿ ರೂಪಿಸಿ ಸರ್ವವಿಧದ ಜನರ ಅಭ್ಯುದಯಕ್ಕೆ ಪ್ರಯತ್ನಿಸುವುದಾಗಿತ್ತು. ಸರಕಾರದ ಈ ನಿರ್ಧಾರದಿಂದಾಗಿ ಭಾರತದ ಬ್ಯಾಂಕಿಂಗ್ ಉದ್ವಿಮೆಯ ಹತ್ತರಲ್ಲಿನ ಒಂಭತ್ತು ಸಾಲಷ್ಟು ವ್ಯವಹಾರ ಸರಕಾರ ನಿಯಂತ್ರಣಕ್ಕೆ ಒಳಗಾಯಿತು. ಐವತ್ತು ಕೋಟಿಗೆ ಮಿಕ್ಕಿದ ರೇವಣಿಗಳುಳ್ಳ ಎಲ್ಲಾ ಭಾರತೀಯ ಬ್ಯಾಂಕುಗಳು ರಾಷ್ಟ್ರೀಕರಣವಾದುವು. ಆದರೆ, ಪರದೇಶದ ಬ್ಯಾಂಕುಗಳು ಮಾತ್ರ ಹಿಂದಿನಂತೆಯೇ ಉಳಿದವು.

ರಾಷ್ಟ್ರೀಕರಣ ಇಂದು ನಮ್ಮ ಬ್ಯಾಂಕುಗಳಿಗೆ ಗುರುತರವಾದ ಪಂಥಾಹ್ವಾನವನ್ನು ನೀಡಿದೆ. ಈ ಆಹ್ವಾನವನ್ನು ನಮ್ಮ ಬ್ಯಾಂಕುಗಳು ಎದೆಗಾರಿಕೆಯಿಂದ ಸ್ವೀಕರಿಸಿರುತ್ತವೆ. ಖಾಸಗಿ ಒಡೆತನದಲ್ಲಿದ್ದ ನಮ್ಮ ಬ್ಯಾಂಕುಗಳಿಂದ ಸಾಮಾನ್ಯ ವರ್ಗದವರಿಗೆ ಮತ್ತು ಹಳ್ಳಿಗಳಲ್ಲಿ ಶ್ರಮಜೀವನ ನಡೆಸುತ್ತಿರುವ ರೈತ ಜನಾಂಗಕ್ಕೆ ಹೆಚ್ಚಿನ ಪ್ರಯೋಜನವಾಗಿಲ್ಲ ಎಂಬ ಮಾತನ್ನು ಇಂದು ರಾಷ್ಟ್ರೀಕೃತ ಬ್ಯಾಂಕುಗಳು ಅಲ್ಲಗಳೆಯ ಹೊರಟಿವೆ.

ಇಂದು ಬ್ಯಾಂಕುಗಳ ಒಡೆತನ ಯಾರದೆಂಬ ವಿಷಯ ಪ್ರಾಮುಖ್ಯವಾದುದಲ್ಲ. ಬದಲಾಗಿ ಈ ಬ್ಯಾಂಕುಗಳಿಂದ ದೇಶದ ಅಭಿವೃದ್ಧಿ ಕಾರ್ಯಗಳಿಗೆ ಎಷ್ಟು ಸಹಾಯವಾಗ ಬಲ್ಲುದು ಎಂಬುದು ಮುಖ್ಯ. ರಾಷ್ಟ್ರೀಕೃತ ಬ್ಯಾಂಕುಗಳ ಹಾಗೂ ಸ್ಟೇಟ್ ಬ್ಯಾಂಕು ಆಫ್ ಇಂಡಿಯಾ ಇವುಗಳ ಕೈಯಲ್ಲಿರುವ ಒಟ್ಟು ಅಮೂಲ್ಯವಾದ 4700 ಕೋಟಿಗೆ ಮಿಕ್ಕಿದ ರೇವಣಾತಿಗಳು ಇಂದು ಭವ್ಯ ಭಾರತದ ನಿರ್ಮಾಣಕ್ಕೆ ಸಚನಾತ್ಮಕವಾಗಿ ವಿನಿಯೋಗವಾಗಬೇಕು ಹಳ್ಳಿಯ ಲ್ಲಿರುವ ರೈತನಿಗೆ ಆತನ ಹೊಲಗದ್ದೆಗಳ ಸುಧಾರಣೆಗಾಗಿ, ಕಾಲೇಜಿನ ಹೊಸ್ತಿಲಲ್ಲಿರುವ ತರುಣರಿಗೆ ಅವರ ಉಚ್ಚ ಶಿಕ್ಷಣಕ್ಕಾಗಿ, ಪದವೀಧರ ಇಂಜನಿಯರ್ ಹಾಗೂ ವಿಜ್ಞಾನಿಗಳಿಗೆ ಸ್ವತಃ ತಮ್ಮದೇ ಎಂಬ ಉದ್ದಿಮೆಗಳನ್ನು ಸ್ಥಾಪಿಸಲಿಕ್ಕಾಗಿ, ಜನ ಸಾಮಾನ್ಯರಿಗೆ ತಮ್ಮ ದೈನಂದಿನ ಜೀವನ ನಿರ್ವಹಣೆಗೆ ಅವಶ್ಯವಿರುವ ಧನಾರ್ಜನೆಗಾಗಿ ಮತ್ತು ಅನೇಕ ಉತ್ತಮ ಉದ್ದೇಶಗಳಿಗಾಗಿ ನಮ್ಮ ಬ್ಯಾಂಕುಗಳ ಸಹಾಯ ಹಸ್ತ ಮುಂದೆ ಬರುವಂತಾಗ ಬೇಕು.

ಇಂದು ರಾಷ್ಟ್ರೀಕೃತ ಬ್ಯಾಂಕುಗಳ ಮುಂದಿರುವ ಮೊದಲ ಗುರಿಯೆಂದರೆ ವಿಸ್ತರಣೆ ಹಾಗೂ ದೇಶದಾದ್ಯಂತ ಜನತೆಯಲ್ಲಿ ಬ್ಯಾಂಕಿಂಗ್ ಮನೋಭಾವನೆಯನ್ನು ಊರ್ಜಿತಕ್ಕೆ ತರುವುದು. ನಮ್ಮ ದೇಶದಲ್ಲಿಂದು ಬ್ಯಾಂಕಿಂಗ್ ಬೆಳವಣಿಗೆ ಎಲ್ಲಾ ರಾಜ್ಯಗಳಲ್ಲಿ ಒಂದೇ ಸಮಾನವಾಗಿ ಬಂದಿಲ್ಲ. ಕೇವಲ ಶೇಕಡಾ ಎರಡರಷ್ಟು ಜನತೆ ಮಾತ್ರ ಬ್ಯಾಂಕು ಖಾತೆ ಹೊಂದಿದವರಾಗಿದ್ದಾರೆ. ನಮ್ಮ ಮೈಸೂರು ರಾಜ್ಯ, ಆದರಲ್ಲೂ ದಕ್ಷಿಣಕನ್ನಡ ಜಿಲ್ಲೆ ಏನೋ ಬ್ಯಾಂಕಿಂಗ್‌ನ ತವರೂರು ಆಗಿರಬಹುದು. ನಮ್ಮ ಜಿಲ್ಲೆಯ ಒಟ್ಟು ರೇವಣಿಗಳಷ್ಟು ರೇವಣಿ ಆ ಸ್ವಾಮಿ ಇಡೀ ರಾಜ್ಯದಲ್ಲಿ ಇಲ್ಲ. ಇದನ್ನು ಆವಲೋಕಿಸಿದಲ್ಲಿ ನಮ್ಮ ದೇಶದ ಕೆಲವು ರಾಜ್ಯಗಳಲ್ಲಿ ಬ್ಯಾಂಕಿಂಗ್‌ನ ಬೆಳವಣಿಗೆ ತೀವ್ರವಾಗಿ ಆಗ ಬೇಕೆಂಬುದು ನಿರ್ವಿವಾದ. ಆದುದರಿಂದಲೇ ರಾಷ್ಟ್ರೀಕೃತ ಬ್ಯಾಂಕುಗಳಿಂದು ಭೌಗೋಲಿಕವಾಗಿ ವಿಸ್ತರಿಸುವ ಪ್ರಮೇಯ ಒದಗಿ ಬಂದಿದೆ. 1970ರ ಜೂನ್ ತಿಂಗಳೊಳಗೆ ರಾಷ್ಟ್ರೀಕೃತ ಬ್ಯಾಂಕುಗಳು 600 ರಷ್ಟು ಹೊಸ ಶಾಖೆಗಳನ್ನು ತೆರೆಯುವುದರಲ್ಲಿವೆ. ಇದಕ್ಕಾಗಿ 'ಮಾರ್ಗದರ್ಶಿ ಬ್ಯಾಂಕ್' ಎಂಬ ಹೊಸ ಯೋಜನೆಯನ್ನು ಸರಕಾರ ರೂಪಿಸಿ ಜಿಲ್ಲೆಯೊಂದಕ್ಕೆ ಒಂದೊಂದು ರಾಷ್ಟ್ರೀಕೃತ ಬ್ಯಾಂಕನ್ನು ವಿಸ್ತರಣೆಯ ಬಗ್ಗೆ ಮಾರ್ಗದರ್ಶನ ನೀಡಲು ನಿಯೋಜಿಸಿದೆ ನಮ್ಮದೇ ಆದ ದಕ್ಷಿಣಕನ್ನಡ ಜಿಲ್ಲೆಗೆ ಸಿಂಡಿಕೇಟ್ ಬ್ಯಾಂಕು 'ಮಾರ್ಗದರ್ಶಿ ಬ್ಯಾಂಕ್' ಆಗಿ ನೇಮಕ ಹೊಂದಿದೆ.

ಇಷ್ಟರವರೆಗೆ ರಾಷ್ಟ್ರೀಕರಣದ ಮೊದಲು ಭಾರತೀಯ ಬ್ಯಾಂಕುಗಳ ದೃಷ್ಟಿ ನಮ್ಮ ಹಳ್ಳಿಗಳ ಕಡೆಗೆ ಬಿದ್ದಿಲ್ಲವೆಂದು ಹಲವರ ಆಪಾದನೆಯಿದೆ. ಈ ವಿಷಯದಲ್ಲಿ ಹೇಳುವುದಾದರೆ ನಮ್ಮ ಬ್ಯಾಂಕುಗಳ ರೇವಣಿಗಳಲ್ಲಿ ಹೆಚ್ಚಿನಂಶ ಕೇವಲ ದೊಡ್ಡ ಪಟ್ಟಣಗಳಲ್ಲಿಯೇ ಸಂಗ್ರಹಿತವಾದುದು. ನಮ್ಮ ಹಳ್ಳಿಗಳಲ್ಲಿ ಇಂದೂ ರೈತಾಪಿ ಜನರು ಬ್ಯಾಂಕುಗಳ ಗಂಧಗಾಳಿಯಿಲ್ಲದೆ ಖಾಸಗಿ ಸಾಹುಕಾರ ಬ್ಯಾಂಕರುಗಳನ್ನೇ ನಂಬಿ ಕೊಂಡಿದ್ದಾರೆ. 10,000ಕ್ಕಿಂತ ಕಡಿಮೆ ಜನಸಂಖ್ಯೆಯಿರುವ ನಮ್ಮ ಹಳ್ಳಿಗಳಿಂದ ಸಂಗ್ರಹಿತವಾದ ರೇವಣಿಯು ನಮ್ಮ ದೇಶದ ಬ್ಯಾಂಕುಗಳ ಒಟ್ಟು ರೇವಣಿಯ ಕೇವಲ ಶೇಕಡಾ ನಾಲ್ಕು ಇದೆ. ಆದರೆ ಸುದೈವ ವಶಾತ್ ರಾಷ್ಟ್ರೀಕರಣಕ್ಕೆ ಮೊದಲೇ ಸಾಮಾಜಿಕ ನಿಯಂತ್ರಣವಾದಾಗಿನಿಂದಲೇ ನಮ್ಮ ಬ್ಯಾಂಕುಗಳು ಹಳ್ಳಿಗಳ ಸೇವೆಗಾಗಿ ಮುನ್ನುಗ್ಗಿವೆ.

ಕೃಷಿಯೆನ್ನೋ ಭಾರತದ ಜನಜೀವನದ ಜೀವಾಳ. ಕೃಷಿಯಿಂದ ನಮ್ಮ ರಾಷ್ಟ್ರೀಯ ಆದಾಯಕ್ಕೆ ಅರ್ಧಖಾಲಷ್ಟು ಹಣ ಬರುತ್ತದೆ ನಮ್ಮ ದೇಶದ ಶೇಕಡಾ 70ರಷ್ಟು ಜನರಿಗೆ ಕೃಷಿಯಿಂದ ಜೀವನ ಸಾಗುತ್ತಿದೆ. ಆದರೆ ಕೃಷಿಗೆ ನಮ್ಮ ಬ್ಯಾಂಕುಗಳು ಇತ್ತೀಚೆಗಿನವರೆಗೆನೀಡಿರುವ ಧನಸಹಾಯಬಹಳ ಕ್ಷೀಣವಾದದು. 1967ರ ಕೊನೆಗೆ ರಾಷ್ಟ್ರದ ಎಲ್ಲಾ ಬ್ಯಾಂಕುಗಳು ಕೃಷಿಗೆ ಸಲ್ಲಿಸಿದ ಧನಸಹಾಯ ಸಾಧಾರಣ 56ಕೋಟಿ ರೂಪಾಯಿ. ಇದು ಈ ಬ್ಯಾಂಕುಗಳ ಒಟ್ಟು ಮುಂಗಡಗಳೊಡನೆ ಹೋಲಿಸಿದಾಗ ಕೇವಲ ಶೇಕಡಾ ಎರಡು: ಆದರೆ ಕಾಲ ಬದಲಾಯಿಸುತ್ತ ಇರುತ್ತದೆ ಈಗ ರಾಷ್ಟ್ರೀಕೃತ ಬ್ಯಾಂಕುಗಳು ಕೃಷಿಗೆ ಮುಂಗಡವನ್ನು ಶೇಕಡಾ ೩೧ರಷ್ಟು ಹೆಚ್ಚಿಸಲು ಹೊರಟಿವೆ. ಹಳ್ಳಿಹಳ್ಳಿಗಳಲ್ಲಿ ನಮ್ಮ ದೇಶದ ಹಸಿರು ಕ್ರಾಂತಿ ಜಯಪ್ರದವಾಗುತ್ತಲಿದೆ. ನಮ್ಮ ಬ್ಯಾಂಕುಗಳು ನೀರಾವರಿ ಪಂಪುಸೆಟ್, ಗೊಬ್ಬರ, ಕ್ರಿಮಿನಾಶಕಗಳು, ಕೃಷಿ ಜಮೀನು ಸುಧಾರಣೆ, ಕೋಳಿಸಾಕಣೆ, ಪಶು ಸಂಗೋಪನೆ, ಹಾಗೂ ಇತರ ಕೃಷಿ ಯಂತ್ರಗಳ ಖರೀದಿಗೆ ಒಂದೇ ಸವನೆ ಸಹಾಯ ಮಾಡುತ್ತಲಿವೆ. ನಮ್ಮ ರೈತ ನೀಗ ಸುಖಿಯಾಗಿ ಬಾಳುತ್ತಿದ್ದಾನೆ. ಮತ್ತು ಹಳ್ಳಿಯ ಸಾಹುಕಾರ ಬ್ಯಾಂಕರುಗಳ ವಜ್ರ ಮುಷ್ಟಿಯಿಂದ ಪಾರಾಗಿಕೊಳ್ಳುತ್ತಿದ್ದಾನೆ.

ನಮ್ಮ ಹಳ್ಳಿಗಳಲ್ಲಿ ನಿಜವಾದ ಸುಧಾರಣೆಯಾದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳ ಉದ್ದೇಶ ಸಫಲವೆಂದು ಹೇಳಬಹುದು. ಈ ಬ್ಯಾಂಕುಗಳಿಗೆ ಹಳ್ಳಿಗಳಲ್ಲಿ ತನ್ನ ವ್ಯವಹಾರ ಊರ್ಜಿತಗೊಳಿಸಲು ಉತ್ತಮ ಅವಕಾಶವಿದೆ. ಒಂದುಕಡೆಯಿಂದ ರೈತರಿಗೆ ಕೃಷಿ ಸುಧಾರಣೆಗಾಗಿ ಸಹಾಯ ಮಾಡುವುದು ಮತ್ತು ಬೆಳೆ ಬಂದಾಗ ಅವರ ಕೈಗೆ

(ಪತ್ರಿಂಧತ್ತನೇ ಪುಟ ನೋಡಿರಿ)

ಲೇಖಕರು

‡‡

ಕಾರವಾರದ
ನಿಸರ್ಗ ಸೌಂದರ್ಯ ಸವಿಯಲಾಗಮಿಸುವ
ಪ್ರವಾಸಿ ಅತಿಥಿಗಳ ಹಾರ್ದಿಕ ಸತ್ಕಾರಕ್ಕೆ ನಾವು ಮಿಸಲು
ಉಡುಪಿ ಶ್ರೀಕೃಷ್ಣ ವಿಲಾಸ
['ಐಸ್‌ಕ್ರೀಮ್' ಮುಂತಾದ ತಂಪು ಪಾನೀಯಗಳು ನಮ್ಮ ವೈಶಿಷ್ಟ್ಯ]
ಮೈನ್ ರೋಡ್, ಕಾರವಾರ
ಮ್ಯಾಲಳ: ಕೆ. ಸಂಜೀವ ರಾವ್

ಮಂಗಳೂರು ಬಂದರು ಯೋಜನೆ



ಲೇಖಕರು:
ಶ್ರೀ ಪಂಡಿತಾರಾಧ್ಯ
ಮಂಗಳೂರು ಬಂದರು ಯೋಜನಾ ಮುಖ್ಯ ಇಂಜಿನಿಯರರು ಮತ್ತು ಆಡಳಿತಗಾರರು

ಮಂಗಳೂರಿನ ಪ್ರಾಮುಖ್ಯ ಸರ್ವ ಋತು ಬಂದರು ಯೋಜನೆಯ ಸ್ಥಾನವು, ಭಾರತ ಮತ್ತು ಪಾಶ್ಚಾತ್ಯ ದೇಶಗಳ ನಡುವಿನ ಚಾರಿತ್ರಿಕ ಬಾಂಧವ್ಯವನ್ನು ಸೂಚಿಸುವ ಹಳೆಯ ಸಮುದ್ರ ಮಾರ್ಗಗಳಿಗೆ ಚೇತನ ಕೊಡುತ್ತದೆ ಮಂಗಳೂರಿನಲ್ಲಿ ಈಗಿರುವ ಚಿಕ್ಕ ಬಂದರವು, ತುಂಬಾ ಖ್ಯಾತಿಗೊಂಡಿದ್ದ ವಿಜಯನಗರ ಸಾಮ್ರಾಜ್ಯಕ್ಕೆ ಒಂದು ಮುಖ್ಯ ಹೆಬ್ಬಾಗಿಲಾಗಿತ್ತು. ಪರ್ಶಿಯಾದ ರಾಯಭಾರಿಯಾಗಿದ್ದ ಅಬ್ದುಲ್ ರಜಾಕನು, ಹದಿನೈದನೆಯ ಶತಮಾನದಲ್ಲಿ ವಿಜಯನಗರಕ್ಕೆ ಕಾಲಿಟ್ಟದ್ದು ಆ ಬಂದರದ ಮೂಲಕವೇ ಹಡಗು ನಿಲ್ಲಲು, ಮಂಗಳೂರು, ಒಂದು ಮಹತ್ವದ ಸ್ಥಳವೆಂದು ಕಂಡುಕೊಂಡ ಆತನ ಮೈಸೂರಿನ ರಾಜನಾಗಿದ್ದ ಹೈದರಾಲಿಯು ಇಲ್ಲೊಂದು ಹಡಗಿನ ನಿರ್ಮಾಣ ಮತ್ತು ಆಯುಧಶಾಲೆಯನ್ನು ನಿರ್ಮಿಸಿದನು ಗುರುಪುರ ನದಿಯ ಮಾರ್ಗವಾಗಿ ದಂಡೆತ್ತಿ ಬರುವ ಯುದ್ಧದ ಹಡಗುಗಳನ್ನು ತಡೆಗಟ್ಟಲೆಂದು, ಹೈದರನ ಮಗನಾದ ಟಿಪ್ಪು ಸುಲ್ತಾನನು, ಸುಲ್ತಾನ ಬತ್ತೇರಿಯನ್ನು ನಿರ್ಮಿಸಿದನು

ಮಂಗಳೂರು ಬಂದರದ ಬೆಳವಣಿಗೆಗಾಗಿ ಮೊದಲ ಸಲಹೆಯನ್ನು ೧೮೩೭ರಲ್ಲಿ ಕ್ಯಾಪ್ಟನ್ ಲಾವ್‌ರು ಮಾಡಿದ್ದರು. ಆ ನಂತರ, ಅನುಕ್ರಮವಾಗಿ ಆಡಳಿತಕ್ಕೆ ಬಂದ ಸರಕಾರಗಳೆಲ್ಲಾ ಈ ಉದ್ದೇಶದ ಸಫಲತೆಗಾಗಿ ಶ್ರಮಿಸಿದುವು ಪಶ್ಚಿಮ ತೀರಾವಳಿಯಲ್ಲಿ ಮರ್ಮಗೋವಾ ಮತ್ತು ಕೊಚ್ಚಿ ಬಂದರುಗಳ ನಡುವಿನ ಒಂದು ಸರ್ವಋತು ಬಂದರದ ಅಭಿವೃದ್ಧಿಯು, ಜನರ ಬಹುದಿನದ ಆಕಾಂಕ್ಷೆಯಾಗಿತ್ತು. ಈ ವಿಚಾರವು, ತುಂಬಾ ವರ್ಷಗಳಿಂದ ಭಾರತ ಸರಕಾರದ ಆಲೋಚನೆಗಳನ್ನೆಲ್ಲಾ ತನ್ನ ಬಳಿ ಸೆಳೆದುಕೊಳ್ಳುವ ಶಕ್ತಿಯನ್ನು ಪಡೆದುಕೊಂಡಿತ್ತು. ಸರಕಾರವು, ಈ ಕೊಂಕಣ ತೀರಾವಳಿಯಲ್ಲಿ, ಒಂದು ಬಂದರಿನ ಅಭಿವೃದ್ಧಿಯ ಸಾಧ್ಯತೆಯನ್ನು ಪರಿಶೀಲನೆ ಮಾಡಲು, ಆಗಿಂದಾಗ್ಗೆ ತುಂಬಾ ತಾಂತ್ರಿಕ ಮಂಡಳಿಗಳನ್ನು ನೇಮಿಸಿತು ಇವುಗಳಲ್ಲಿ ಮುಖ್ಯವಾದವುಗಳು (೧) ಬಂದರದ ತಾಂತ್ರಿಕ ಸಮಿತಿ (Ports Technical Committee) ೧೯೫೬, (೨) ಪಶ್ಚಿಮ ತೀರಾವಳಿಯ ಮುಖ್ಯ ಬಂದರುಗಳ ಅಭಿವೃದ್ಧಿ ಸಮಿತಿ (West Coast Major Ports Development Committee) ೧೯೫೮ (೩) ಮಧ್ಯಮ ತರಗತಿಯ ಬಂದರುಗಳ ಅಭಿವೃದ್ಧಿ ಸಮಿತಿ Intermediate Ports Development Committee ೧೯೫೮ ಮಧ್ಯಮ ತರಗತಿಯ ಬಂದರುಗಳ ಅಭಿವೃದ್ಧಿ ಸಮಿತಿಯು, ಮೊದಲಿನ ಸಮಿತಿಗಳು ಸೂಚಿಸಿದ್ದ ಹಲವಾರು ನಿವೇಶನಗಳನ್ನು ಸಂಪೂರ್ಣ ಅವಲೋಕಿಸಿ, ಆರ್ಥಿಕ, ಟೆಕ್ನೋಲಾಗಿಕ, ನೌಕೋದ್ಯಮ, ವಾಣಿಜ್ಯ ಮತ್ತು ಇತರ ಮುಖ್ಯ ಕಾರಣಗಳನ್ನೆಲ್ಲಾ ಪರಿಶೀಲಿಸಿ, ಆಳ ಸಮುದ್ರದ ಸರ್ವಋತು ಬಂದರ್ಕಾಗಿ, ಮಂಗಳೂರೇ ಯೋಗ್ಯ ಸ್ಥಳವೆಂದು ನಿರ್ಧರಿಸಿತು ಅನಂತರ, ಮಂಗಳೂರು ಬಂದರು ಯೋಜನೆಯ ಅಧಿಕಾರಿಗಳು ನಡೆಸಿದ ಮಹತ್ವದ ಅಳತೆ (Survey) ಮತ್ತು ಶೋಧನೆ (Investigations)ಗಳನ್ನು ಹೊಂದಿಕೊಂಡು ಮತ್ತು ಭಾರತ ಸರಕಾರದ ಜಲ ಮತ್ತು ಶಕ್ತಿ ಸಂಶೋಧನಾ ಕೇಂದ್ರದವರು (Central Water and Power Research Station) ಪೂನಾದಲ್ಲಿ ನಡೆಸಿದ ಮಾದರಿ ಅಧ್ಯಯನದ ನಿರ್ಣಯವನ್ನು ಅನುಸರಿಸಿ, ಈಗಿನ ನಿವೇಶನವನ್ನು ನಿರ್ಣಯಿಸಲಾಯಿತು ಮುಖ್ಯ ಬಂದರದ ಈ ಸ್ಥಳವು, ಈಗಿರುವ ಚಿಕ್ಕ ಬಂದರಿನ ಸ್ಥಳದಿಂದ ಉತ್ತರದಲ್ಲಿ ೯ ಕಿ ಮೀ ದೂರದಲ್ಲಿ ಹಬ್ಬಿಕೊಂಡಿದೆ ಈ ಮುಖ್ಯ ಬಂದರದ ಕಾರ್ಯವು ಈಗಾಗಲೇ ವೇಗದ ಪಥದಲ್ಲಿ ಮುನ್ನಡೆಯುತ್ತಿದೆ

ಈಗ ವಿನ್ಯಾಸಗೊಂಡಂತೆ ಈ ಬಂದರವು ಮೊದಲ ಹಂತದಲ್ಲಿ (೧) ಸಾಮಾನ್ಯ ಸರಕುಗಳಿಗಾಗಿ ಒಂದು, ಕಬ್ಬಿಣ ಮತ್ತು ಮೇಂಗನೀಸ್ ಅದುರಿಗಾಗಿ ಒಂದು, ಮತ್ತು ಗೊಬ್ಬರದ ಕಾರ್ಖಾನೆಯ ಕಚ್ಚಾ ಸಾಮಾಲುಗಳಿಗಾಗಿ ಒಂದು ಎಂದು ಒಟ್ಟು ಮೂರು ಹೊಂದಿಕೊಂಡ ಧಕ್ಕೆಗಳು (Alongside berths). (೨) ಗೊಬ್ಬರದ ರಫ್ತಿಗಾಗಿ ಒಂದು ಸಾಮಾನ್ಯ ಆಳದ ಧಕ್ಕೆ (Shallow water berths)· (೩) ಸಾಮಾನ್ಯ ಸರಕಿಗಾಗಿ ಒಂದು ಮತ್ತು ನಾಪ್ತಾ ಮತ್ತು ಪೆಟ್ರೋಲಿಯಂ ಗಳ ಉತ್ಪನ್ನಕ್ಕಾಗಿ ಒಂದು ಎಂದು ಒಟ್ಟು ಎರಡು ಲಂಗರಿನ ಧಕ್ಕೆಗಾಗಿ ಯೋಜಿಸಲಾಗಿದೆ ಈ ಎಲ್ಲಾ ಸೌಲಭ್ಯಗಳಿಂದಾಗಿ, ಮೊದಲಿನ ಘಟ್ಟವು ಪೂರ್ಣಗೊಂಡಾಗಬಂದರವು ೩೦ ಅಡಿ (೯೫೫ ಮೀ) ಡ್ರಾಫ್ಟ್ ಇರುವ ಹೇರಿಕೊಂಡ ಹಡಗನ್ನು ಮತ್ತು ಸಮುದ್ರದ ಭರತದ ಸಮಯದಲ್ಲಿ ೩೬ ಅಡಿ (೧೦೧೦ ಮೀ) ಡ್ರಾಫ್ಟ್ ಇರುವ ಹಡಗುಗಳನ್ನು ಆವಂತ್ರಿಸಲು ತಯಾರಾಗಿ ನಿಲ್ಲುತ್ತದೆ ಮಂಜೂರು ಮಾಡಿದಂತೆ ಇದರ ಒಂದಾಜು ಖರ್ಚು ೨೯೫೦ ಲಕ್ಷ ರೂಪಾಯಿ ೧೯೭೧ ಒಳಗಲ್ಲಿ ಈ ಮೊದಲಿನ ಹಂತದ ಕಾರ್ಯವು ಮುಗಿಯುವ ನಿರೀಕ್ಷೆಯಿದೆ ಈ ಬಂದರವು ಆರಂಭದಲ್ಲಿ ವರ್ಷವೊಂದರ ಸಾಧಾರಣ ೩೭ ಲಕ್ಷ ಟನ್‌ಗಳಷ್ಟು ವ್ಯಾಪಾರಕ್ಕೆ ಹೊಂದಿಕೊಳ್ಳಬಹುದೆಂದು ಅಂದಾಜು ಮಾಡಲಾಗಿದೆ ೧೯೭೫ ಒಳಗಲ್ಲಿ ಈ ವ್ಯಾಪಾರವು ವರ್ಷವೊಂದರ ೩೮ ಲಕ್ಷ ಟನ್‌ಗಳಷ್ಟು ಜಾಸ್ತಿಯಾಗುವ ನಿರೀಕ್ಷೆಯಿದೆ ಈ ವರ್ಧಿಸಿದ ವಾಣಿಜ್ಯಕ್ಕೆ ಹೊಂದಿಕೊಳ್ಳುವಂತೆ, ಸಾಧಾರಣ ೨೬೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಇನ್ನೊಂದು ಕೂಡಿಕೊಂಡ ಧಕ್ಕೆಯನ್ನು (along-side berth) ತಕ್ಕ ಸಮಯದಲ್ಲಿ ಆಳವಡಿಸಿಕೊಳ್ಳಲಾಗುತ್ತದೆ

ಈ ಸರ್ವಋತು ಬಂದರವು ಮುಖ್ಯವಾಗಿ ಕಬ್ಬಿಣದ ಅದುರಿನ ರಫ್ತಿಗಾಗಿ ಮತ್ತು ಮುಂದೆ ಜನಿಸಲಿರುವ ಗೊಬ್ಬರದ ಕಾರ್ಖಾನೆ ಮತ್ತು ಮಂಗಳೂರಿನಲ್ಲಿ ಎದ್ದು ನಿಲ್ಲಲಿರುವ ಮತ್ತಿತರ ಕೈಗಾರಿಕೆಯ ಆವಶ್ಯಕತೆಗಳಿಗೆ ಒದಗಲೆಂದು ನಿರ್ಮಿಸಲಾಗಿದೆ.

ಮುಂದೆ ಅಧಿಕವಾಗಲಿರುವ ಕಬ್ಬಿಣದ ಅದುರಿನ ರಫ್ತಿನೆಂದು, ಬಂದರದ ಎರಡನೆಯ ಹಂತದಲ್ಲಿ, ೪೦ ಅಡಿ ಡ್ರಾಫ್ಟ್ ಉಳ್ಳ ೬೦೦೦ ಟನ್ ಭಾರದ ಹಡಗುಗಳ ವಾಸಕ್ಕೆ ಬಂದರನ್ನು ವಿಕಾಸಗೊಳಿಸಬಹುದು ಆ ಸಮಯದಲ್ಲಿ ಸಾಧಾರಣ ಗಂಟೆಗೆ ೪೦೦೦ ಟನ್‌ಗಳ ಅದುರನ್ನು ಯಾಂತ್ರಿಕವಾಗಿ ಹಡಗುಗಳಿಗೆ ತುಂಬುವ ಸೌಕರ್ಯವನ್ನು ಹೊಂದಿಕೊಂಡಿರುವ ಬೇರೆಯೇ ಒಂದು ಕಬ್ಬಿಣದ ಅದುರಿನ ಧಕ್ಕೆಯನ್ನು ನಿರ್ಮಿಸಲು ಸಾಧ್ಯವಿದೆ. ಬಂದರಿನ ಬೃಹತ್ ಯೋಜನಾ ನಕ್ಷೆಯಲ್ಲಿ, ಸಾಮಾನ್ಯ ಸರಕು, ವಿಶೇಷ ಸರಕು, ಪೆಟ್ರೋಲಿಯಂ ಉತ್ಪನ್ನಗಳು, ಮೂಟೆ ಕಟ್ಟಿದ ಸರಕು (containerised cargo) ಮತ್ತು ವಿನ್ಯಾಸಾತ್ಮಕೆಯ ಧಕ್ಕೆಗಳನ್ನೆಲ್ಲಾ ಹೊಂದಿಕೊಳ್ಳಲು ಸಾಧ್ಯವಾಗುವಂತೆ, ತಕ್ಕ ವ್ಯವಸ್ಥೆ ಕೈಗೊಳ್ಳಲಾಗಿದೆ ಇವುಗಳಲ್ಲದೆ, ಮುಂದೆ ಒಂದು ಲಕ್ಷ ಟನ್ ಭಾರವಿರುವ ಹಡಗುಗಳ

(ಪದಿನಂಟನೇ ಪುಟ ನೋಡಿರಿ)

Gram. VISHWA Tel. 29111
When at Bangalore
Stay at
HOTEL NATARAJA
Restaurant Boarding & Lodging,
107 Police Road, City Market,
BANGALORE-2
Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಜಾತಿಯೆಂಬ ಯಕ್ಷಪ್ರಶ್ನೆ

ಲೇಖಕರು
ಶ್ರೀ ಗೌರೀಶ ಕಾಯ್ಕಿಣಿ

ಪರಮಹಂಸಸ್ವಾವು ನಿರ್ಲಿಪ್ತ ನಿರಂಜನ ವೃತ್ತಿ. ಪರಿವ್ರಾಜಕತ್ವವು ಸದಾಸಂಚಾರಿಯಾಗಿದ್ದು ಲೋಕಕಲ್ಯಾಣಕ್ಕಾಗಿ ಧರ್ಮ ಜಾಗೃತಿಯನ್ನು ಮಾಡುತ್ತಾ ಸಾಗುವ ತಪಶ್ಚರ್ಯೆ. ಆಚಾರ್ಯತ್ವವಂತೂ ಆ ಚಾರವನ್ನು ಬೋಧಿಸಿ ಜನರನ್ನು ಸತ್ವ ವೃತ್ತರನ್ನಾಗಿ ಮಾಡುವ ಗುರುತ್ವ. ಇವೆಲ್ಲವುಗಳ ತ್ರಿವೇಣಿ ಸಂಗಮವೇ ತೀರ್ಥ. ಪರಮ ಪೂಜ್ಯ ವಿಶ್ವೇಶತೀರ್ಥರು ತಮ್ಮ ಈ ಉಪಾಧಿಯನ್ನು ಸಾರ್ಥಕಗೊಳಿಸುತ್ತಿದ್ದಾರೆ. ದೀನದಲಿತರ ಕೇರಿಗಳಲ್ಲಿ ಕಾಲಿಟ್ಟು ತೀರ್ಥಪ್ರಸಾದವನ್ನು ಕೊಟ್ಟು ತಾಯಿಪಕ್ಕಿ ಮರಿಗಳಿಗೆ ಗರಿಗೆದರಿ ಹಾರಲು ಕಲಿಸುವಂತೆ ಅವರವರ ಅಧಿಕಾರಕ್ಕೆ ತಕ್ಕಂತೆ ಧರ್ಮೋಪದೇಶವನ್ನು ಮಾಡುತ್ತ ಒಂದು ಮಠಾಧಿಪತಿತ್ವದ ಕರ್ತವ್ಯಕ್ಕೆ ಹೊಸದೊಂದು ಪರಿಮಾಣವನ್ನೇ ಸಾಕಿ ಕೊಡುತ್ತಿದ್ದಾರೆ.

ಗುರುನಃ ಬಹವಃ ಸಂತಿಶಿಷ್ಯವಿತ್ತಾಪಹಾರಕಾಃ ದುರ್ಲಭಾಃ ಗುರವಃ ಲೋಕೇ ಶಿಷ್ಯ ಚಿತ್ತಾಪಹಾರಕಾಃ - ಎಂದಿವೆ ಒಂದು ಸುಭಾಷಿತ. ಆದರೆ ಇಂದು ಉಡುಪಿಯ ಪೇಜಾವರ ಮಠದ ಶ್ರೀಪಾದಂಗಳವರು ಇನ್ನೂ ಮುಂದೆ ಹೋಗಿ "ಶಿಷ್ಯ ಹೃತ್ತಾಪಹಾರಕಃ" ಆಗಿಬಿಟ್ಟಿದ್ದಾರೆ. ಹಿಂದೆ ವ್ಯಾಸರಾಯ ಸ್ವಾಮಿಗಳು ಕುರುಬ ಕನಕನಿಗೆ ವೈಷ್ಣವ ದೀಕ್ಷೆಯಿತ್ತು ದಾಸ ಶ್ರೇಷ್ಠನನ್ನಾಗಿ ಮಾಡಿ ಹಾಕಿಕೊಟ್ಟ ಗೆರೆಯನ್ನೇ ಇಂದು ಶ್ರೀ ಪೇಜಾವರ ಸ್ವಾಮಿಗಳು ಗೀರುತ್ತಿದ್ದಾರೆ. ಅವರ ಹೆಜ್ಜೆಯಲ್ಲಿಯೇ ಹೆಜ್ಜೆಯಿಟ್ಟು ಮುಂದುವರಿದಿದ್ದಾರೆ. ಶ್ರೀಮಾನ್ ಮಧ್ವಾಚಾರ್ಯರು ಮುಸ್ಲಿಮ ಮಹೊಲ್ಲಾಗಳಲ್ಲಿ ಸಂಚರಿಸಿ ಧರ್ಮೋಪದೇಶ ಮಾಡಿದ ಧನ್ಯ ಆದರ್ಶವನ್ನು ಅವರು ಅನುಕರಿಸುತ್ತಿದ್ದಾರೆ.

ಪ್ರಾಚೀನ ಕಾಲದಲ್ಲಿ ಶಿಷ್ಯನೆ ಸಮಿತ್ಪಾಣಿಯಾಗಿ ಶ್ರೋತ್ರಿಯ ಬ್ರಹ್ಮನಿಷ್ಠ ಗುರುವನ್ನು ವಿಜ್ಞಾನಾರ್ಥವಾಗಿ ಅಭಿಗಮಿಸಬೇಕಾಗುತ್ತಿತ್ತು. ಅಂದು ಗುರುವು ಮೌನ ವ್ಯಾಖ್ಯಾನಿಯಾಗಿದ್ದರೂ ಶಿಷ್ಯರು ತಮ್ಮ ಶ್ರದ್ಧಾಬಲದಿಂದಲೇ ಭಿನ್ನ ಸಂಶಯರಾಗುತ್ತಿದ್ದರು. ಆದರೆ ಇಂದು ಹಾಗಿಲ್ಲ. ಗುರುವು ತನ್ನ ಪೀಠದಿಂದ ಇಳಿದು ಬಂದು ಮಠದಿಂದ ಹೊರಗೆ ಬಂದು ಶ್ರೀರಾಮನ ಪಾದದಂತೆ ಶಿಲೆಯಾಗಿ ಬಿದ್ದ ಅಹಲ್ಯೆಯನ್ನು ಹುಡುಕಿಕೊಂಡು ಹೋಗಬೇಕಾಗಿದೆ! ಅಂದರೇನೇ ಹಿಂದುತ್ವದ ಉದ್ಧಾರ, ಧರ್ಮ ಜಾಗೃತಿಗೆ ಆಧಾರ.

"ಪ್ರಶ್ನಂ ಗೌರನ" ಆರ್ತರನ್ನು, ಜಿಜ್ಞಾಸುಗಳನ್ನು, ಆರ್ಥಾರ್ಥಿಗಳನ್ನು ಭೇದ ಭಾವವಿಲ್ಲದೆ ತಾನೆ ಹುಡುಕಿಕೊಂಡು ಹೋಗಿ ತಗ್ಗಿದ್ದೆಡೆಗೆ ನುಗ್ಗುವ ಹಳ್ಳದಂತೆ ತನ್ನ ಕೃಪಾಪ್ರವಾಹವನ್ನು ಹರಿಯಿಸುವದೇ ನಿಜವಾದ ಪರಿವ್ರಾಜಕಾಚಾರ್ಯರ ಲಕ್ಷಣ. ಇಲ್ಲವಾದರೆ ಕೇವಲ ಪಾದಪೂಜೆ, ಗುರುದಕ್ಷಿಣೆಗಳಿಗೆ ಮಂತ್ರಾಕ್ಷತೆ, ಮಂತ್ರೋಪದೇಶಗಳನ್ನು ನೀಡುವ ಗುರುವು ಕಾಲಿದಾಸನ ಮೂಲವಿಕಾಗ್ನಿ ಮಿತ್ರದಲ್ಲಿ ಹೇಳಿದಂತೆ ಒಬ್ಬ ವ್ಯಾಪಾರಿ. "ಯಸ್ಯಾಗಮಃ ಕೇವಲ ಜೀವಿಕಾಯೈ ತುಜ್ಞಾನ ವಣ್ಯಂ ವಣಿಜಂ ವದಂತಿ." ಇಂದು ಗುರುವು ದೀಕ್ಷಾಗುರುವಿದ್ದಂತೆ ಶಿಕ್ಷಾಗುರುವೂ ಆಗಬೇಕು. "ಕುಲಾಗಮ"ವೆಂಬ ಗ್ರಂಥದಲ್ಲಿ ಗುರುವಿನ ಆರು ಪ್ರಕಾರಗಳನ್ನು ಹೇಳಿದ್ದುಂಟು. ಪ್ರೇರಕ, ಸೂಚಕ, ವಾಚಕ, ದರ್ಶಕ, ಬೋಧಕ ಮತ್ತು ಶಿಕ್ಷಕ- ಇವರೆಲ್ಲರಲ್ಲಿ ಬೋಧಕ ಗುರುವು ಶ್ರೇಷ್ಠನೆಂದೂ ಹೇಳಲಾಗಿದೆ.

ಶ್ರೀ ಪೇಜಾವರ ಸ್ವಾಮಿಗಳು ಹೆಜ್ಜೆ ಕಡಿಮೆ ಈ ಆರೂ ಲಕ್ಷಣಗಳನ್ನು ತನ್ನ ವ್ಯಕ್ತಿತ್ವದಲ್ಲಿ ಅಳವಡಿಸಿಕೊಂಡಿದ್ದಾರೆ. ತಪಶ್ಚರ್ಯೆ ಕೃಶವೂ ಆ ಮೂಲಕ ದುರ್ಬಲವೂ ಆದ ಅವರ ಶರೀರದಲ್ಲಿ ಸ್ಫುರಿಸುವ ತೇಜಸ್ಸು ಮಾತ್ರ ಅವರನ್ನು ಪ್ರಚಂಡ ಕಾರ್ಯೋತ್ಸಾಹಕ್ಕೆ ಪ್ರಚೋದಿಸುತ್ತಾ ಇರುತ್ತದೆ. ಇಲ್ಲವಾದರೆ ಇಂದು ಮಠಾಧೀಶರಲ್ಲಿ ಶ್ರೀ ವಿಶ್ವೇಶತೀರ್ಥರಂತೆ ತಾನಾಗಿ ನಡೆದು ದೀನ ದಲಿತ ಅಸ್ಪೃಶ್ಯ ವರ್ಗಗಳಲ್ಲಿ ಕೃಪಾನುಗ್ರಹ ಮಾಡುವ ರಾಜ ಸನ್ಯಾಸಿಗಳು ಅದೆಷ್ಟು ಮಂದಿ ಇದ್ದಾರೆ?

ಆದರೆ ಒಂದು ಮಾತು. ಜ್ವಾಲಾಮುಖಿಯು ಸ್ಫೋಟವಾಗುವ ಹದಗೆಟ್ಟ ಒತ್ತಡಕ್ಕೆ ಬಂದಾಗ ಅದನ್ನು ಬಾಯಿಗೆ ಪೊಲ್ಟೀಸು ಹಚ್ಚಿ ಶಮನಗೊಳಿಸಲು ಬಂದೀತೇ? ಹೋಮಾಗ್ನಿ ಶಿಖೆಯು ಎಷ್ಟೇ ಪ್ರಖರವಾಗಿ ಪವಿತ್ರವಾಗಿ ಉರಿದರೂ ಅದರಿಂದ ಮೊದಲೇ "ಹೊಗೆ ತುಂಬಿ ಕಗ್ಗತ್ತಲೆಯ ಗವಿಯಾದ ಯಜ್ಞಶಾಲೆಯ ಮಬ್ಬು ಅದೆಷ್ಟು ದೂರ, ಅದೆಷ್ಟು ತೀವ್ರ; ಕಳೆದೀತು? ಕರ್ಮಾರ್ಜನ ಸುತ್ತಿಗೆಯ ಒಂದೇ ಪೆಟ್ಟಿನಿಂದ ಆಗಬೇಕಾದ ಕೆಲಸ ಅಕ್ಕ ಸಾಲಿಗನ ಕುಡಿತಿಗೆಯ ನೂರು ಏಟುಗಳಿಂದ ಆದೀತೇ?

ಏಕೆಂದರೆ ಇಂದಿನ ಸಮಸ್ಯೆ ಉಲ್ಬಣಗೊಂಡ ಆವಸ್ಥೆಯಲ್ಲಿ ಜಾತಿಸಂಸ್ಥೆಯನ್ನೇ ಉನ್ಮೂಲನ ಮಾಡಬೇಕಾದ ಆಹ್ವಾನವಿದೆ. ಕೇವಲ ಕೃಪೆ, ಅನುಗ್ರಹ, ಉದಾರಾಶ್ರಯ ಬಾಂಧವ್ಯದ ಕೊಡುಗೈ—ಇವುಗಳಿಂದ ಸವರ್ಣರೂ ಉಚ್ಚ ವರ್ಣೀಯರೂ ಹತ್ತಿರ ಬರಮಾಡಿಕೊಂಡ ಮಾತ್ರಕ್ಕೆ ನಿಮ್ನ ಜಾತಿಗಳು ತೃಪ್ತರಾಗುವ ಕಾಲವಿಂದು ಉಳಿದಿಲ್ಲ. ಆಧುನಿಕ ಶಿಕ್ಷಣ, ರಾಜಕೀಯ ಪ್ರಜ್ಞೆ, ಆರ್ಥಿಕ ಸಂಧಿಸಮಾನತೆ, ವೇದಾಧಿಕಾರಕ್ಕೂ ಪ್ರಬಲವಾದ ಮತಾಧಿಕಾರ—ಇವೆಲ್ಲ ಕಾರಣಗಳಿಂದಾಗಿ ಇಂದು ಹರಿಜನ ಗಿರಿಜನರೇ ಮುಂತಾದ ಪರಿಶಿಷ್ಟ ವರ್ಗಗಳಲ್ಲಿಯೂ ಆಸ್ಮಿತೆಯ ಭಾವತೀವ್ರವಾಗಿ ಜಾಗೃತವಾಗಿದೆ. ಅಂದಾಗ ಇಂದಿನ ಯುಗಧರ್ಮವು ಜಾತಿಭೇದದ ಜನ್ಮಸಿದ್ಧ ಉಚ್ಚ-ನೀಚ ತಾರತಮ್ಯ ವೈಷಮ್ಯಗಳ ಪೂರ್ತಿ ಉಚ್ಚಾಟನೆಯನ್ನು ಬೇಡುತ್ತಿದೆ. ಈ ಬೇಡಿಕೆ ಪೂರೈಸುವಷ್ಟು ಸಾಹಸ ನಮ್ಮ ಮಠಾಧಿಪತಿಗಳಲ್ಲಿ ಇರುವುದೇ?

ಈ ಪ್ರಶ್ನೆ ಎತ್ತಲು ಕಾರಣವೆಂದರೆ, ಮೊನ್ನೆ ತಾನೆ ಪೇಜಾವರ ಮಠದ ಶ್ರೀ ಪಾದಂಗಳವರು ಮಡಿಕೆರಿಯಲ್ಲಿ ಒಂದು ಸ್ವವಚನದಲ್ಲಿ ಅಪ್ಪಣೆ ಕೊಡಿಸಿದ ವರದಿ 'ಡೆಕ್ಕನ್ ಹೆರಾಲ್ಡ್' ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ. ಆದರ ಮುಖ್ಯಾಂಶಗಳು ಇಂತಿವೆ:

1. Distinction of high and low among people should not exist.

(ಜನರಲ್ಲಿ ಉಚ್ಚ-ನೀಚರೆಂಬ ಭೇದ ಭಾವವಿರಕೂಡದು.)

2. His duty was to bring about harmony among members of all castes.

(ಎಲ್ಲ ಜಾತಿಗಳ ಜನರಲ್ಲಿ ಸಾಮ್ಯರಸ್ಯವನ್ನು ಸ್ಥಾಪಿಸುವುದು ತನ್ನ ಕರ್ತವ್ಯವು.)

3. The caste system could not be changed and conversion from one caste to another was not possible.

(ಜಾತಿ ವ್ಯವಸ್ಥೆಯನ್ನು ಬದಲಿಸಲು ಅಶಕ್ಯ. ಮತ್ತು ಒಂದು ಜಾತಿಯಿಂದ ಇನ್ನೊಂದಕ್ಕೆ ಪರಿವರ್ತನೆ ಸಾಧ್ಯವಿಲ್ಲ.)

4. Caste should continue without causing harm to society. (ಸಮಾಜಕ್ಕೆ ಅಪಾಯ ಉಂಟುಮಾಡದಂತೆ ಜಾತಿ ಮುಂದುವರಿಯತಕ್ಕದ್ದು.)

ಈ ಚತುಃಸೂತ್ರದಲ್ಲಿ ಮೊದಲಿನೆರಡರ ಕಾರ್ಯಾಚರಣೆಗೆ ಸ್ವಾಮೀಜಿಯವರು ತನ್ನನ್ನು ನಿವೇದಿಸಿಕೊಂಡಿದ್ದಾಗಿದೆ. ಆದರೆ ಇಲ್ಲಿ ವರ್ತಮಾನ ಸಾಮಾಜಿಕ ಅಥವಾ ಸಾರ್ವಜನಿಕ ಜೀವನದ ಸಂದರ್ಭದಲ್ಲಿ ಸಮಷ್ಟಿಯ ಮನಃಸ್ವಾಸ್ಥ್ಯದ ಸಂಬಂಧವಾಗಿ ಮುಂದಿನ ಎರಡು ಸೂತ್ರಗಳ ತೊಡಕು ಸುಸೂತ್ರವಾಗಬೇಕಾಗಿದೆ. ಇವೆರಡಕ್ಕೂ ಆಗತ್ಯದ ಗಮನ ಕೊಡಬೇಕಾಗಿದೆ. ಏಕೆಂದರೆ ಈ ಸೂತ್ರಗಳಲ್ಲಿ ಶ್ರೀಪಾದಂಗಳವರು ತನ್ನ ಮಠದ ಪೀಠದ ಪರಿಮಿತಿ ಬಾಧ್ಯಸ್ಥಿಕೆಗಳನ್ನು ಹೇಳಿಕೊಂಡಿಲ್ಲ. ತನ್ನ ವಿಚಾರ

(ಹದಿನೇಳನೇ ಪುಟ ನೋಡಿ)

ಹಾರ್ದಿಕ ಶುಭಾಶಯಗಳು
Phone 77
ಹೊಟೇಲ್ ಶಿವಪ್ರಸಾದ
ಕುಂದಾಪುರದ ಪ್ರಮುಖ ಬೋರ್ಡಿಂಗ್-ಲಾಡ್ಜಿಂಗ್
ಊಟದಲ್ಲಿ ನೈಪಿಷ್ಟ್ಯಗಳು !
ಟೂರಿಸ್ಟ್ ಪಾರ್ಟಿಗಳಿಗೆ ವಿಶೇಷ ವ್ಯವಸ್ಥೆ !
ದೊಡ್ಡ ದೊಡ್ಡ ನಗರಗಳಲ್ಲಿಯೂ ಇರದ ವಿಶಾಲವಾದ
ಸಿಂಗಲ್ ಮತ್ತು ಡಬ್ಬಲ್ ರೂಮುಗಳು !
ಅನೇಕ ಹೊಸ ಸುವ್ಯವಸ್ಥೆಗಳು !
ಕಾರ್ ಪಾರ್ಕಿಂಗ್ ಸೌಕರ್ಯ !
With best compliments from:
HOTEL SHIVAPRASAD
High Class Boarding, Lodging
& Restaurant
COONDAPUR, S. K.

ಬ್ಯಾಂಕುಗಳಿಗೆ ಪಂಥಾಹ್ವಾನ

ಶ್ರೀ ಪಿ. ಜಯರಾಮ ಶೆಟ್ಟಿ, ಎಂ. ಎ., ಬಿ. ಎಲ್., ಸಿ. ಎ. ಐ. ಐ. ಬಿ.,
ಕಾರ್ಯದರ್ಶಿ,
ವಿಜಯಾ ಬ್ಯಾಂಕ್ ಲಿಮಿಟೆಡ್.

ಸ್ವೀಡನಿನ ಬ್ಯಾಂಕರ್‌ಗಳ ಸಂಘದ ಅಧ್ಯಕ್ಷ ಎಲ್. ಇ. ತುನ್ಹೋಮ್ "ರಷ್ಯಾದಲ್ಲೂ ಬ್ಯಾಂಕರರು ಬ್ಯಾಂಕರರ ರೀತಿಯಲ್ಲಿ ಕಾರ್ಯನಿರ್ವಹಿಸಿಯೇ ಮಾತಾಡುತ್ತಾರೆ" ಎಂದು ಉದ್ಗರಿಸಿದ್ದಾರೆ. ಕಮ್ಯುನಿಸ್ಟ್ ರಷ್ಯಾದಲ್ಲಿ ಬ್ಯಾಂಕರರನ್ನಾದರೆ ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಸ್ವೀಡನಿನಲ್ಲಿ ಬ್ಯಾಂಕರರನ್ನಾದರೆ ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದು ಇದರಿಂದ ಸ್ಪಷ್ಟವಾಗುತ್ತದ

ಮತ್ಸ್ಯೋದ್ಯಮದ ಮಹತ್ವದ ಹೆಜ್ಜೆ

★

'ಕೊರೊನೆಟ್'

ಸಾಮೂಹಿಕ ಉದ್ಯಮ ಸಂಸ್ಥೆಗಳ
ಒಂದು ಕೋಟಿ ರೂಪಾಯಿ ಮೌಲ್ಯದ
ಮೀನು ರಫ್ತಿನ ಯಶಸ್ವೀ ಯೋಜನೆ

★

ಲೇಖಕರು :
ಶ್ರೀ ಮಲ್ಪೆ ಮಧ್ವರಾಜ್

ಈ ಶತಮಾನದ ಈ ನೇ ದಶಕವು ರಾಜ್ಯದ ಮತ್ಸ್ಯೋದ್ಯಮದಲ್ಲಿ ವಿಶೇಷ ಪ್ರಾಮುಖ್ಯತೆಯನ್ನೂ ಮೂಡಿಸಿ ಎಂಬ ಅಭಿಪ್ರಾಯವನ್ನೂ ಸ್ಥಾಪಿಸಿದೆ.

ಈ ದಶಕದಲ್ಲಿಯೇ, ಮೈಸೂರು ರಾಜ್ಯ ರಫ್ತು ನಿರ್ಯಾತ ಅಭಿವೃದ್ಧಿ ಸಲಹಾ ಮಂಡಲಿಯು ಮತ್ಸ್ಯೋದ್ಯಮದ ರಫ್ತಿಗಾಗಿ ವಿಶೇಷವಾಗಿಟ್ಟ ಹೆಸರಿನ ಹಾಗೂ ವ್ಯಕ್ತಿಸ್ವರೂಪವು ಅತ್ಯಾಕರ್ಷಕವಾದ ರಾಜ್ಯ ಕೊಡುಗೆಯಾದ 'ಶ್ರೇಷ್ಠ ನಿರ್ಯಾತ ಪಲಕ" ಬಹುಮಾನವನ್ನು ಕೊಟ್ಟು ಈ ದಶಕವನ್ನು ಈ ಉದ್ಯಮದಲ್ಲಿ ಸ್ಮರಣೀಯವಾಗಿರುವಂತೆ ಮಾಡಿದೆ.

ಇಂದು ಮತ್ಸ್ಯೋದ್ಯಮವು ಸರ್ವಾಂಗೀಣ ಅಭಿವೃದ್ಧಿಯ ನೆಲೆಯನ್ನು ಇಷ್ಟರಲ್ಲೇ ನಿರ್ಧರಿಸುವುದು ಸುಲಭ ಸಾಧ್ಯವೆಲ್ಲ. ಕಾರಣ ರಾಜ್ಯದ ಕರಾವಳಿಯ ಉದ್ದಕ್ಕೂ ಮತ್ಸ್ಯ ವ್ಯವಸಾಯದಲ್ಲಿ ಸ್ರಚಂಡ ಕಾರ್ಯಕ್ರಮಗಳನ್ನು ಸರಕಾರವು ಪ್ರಾರಂಭಿಸಿ ಸರ್ಕಾರೀ ಕೈಗೊಂಡಿದ್ದು ಉದ್ದಿಮೆಯ ಭವಿಷ್ಯವು ಉಜ್ವಲವೂ ಆಪಾದಾಯಕವೂ ಆಗಿರುವಂತೆಯೇ ಹೆಮ್ಮೆ ಪಡುವಂತಹದೂ ಆಗಿದೆ. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ಈ ಉದ್ಯಮ ತತ್ವರಕೆಯಲ್ಲಿ ಇತರರಿಗೆ ನೇತೃತ್ವವನ್ನು ಹಾಕಿಕೊಟ್ಟು ಮತ್ಸ್ಯ ವ್ಯವಸಾಯದ ಉತ್ಕರ್ಷಯ ಉನ್ನತ ಶಿಖರವನ್ನು ಏರುತ್ತಿದೆ ಜಿಲ್ಲೆಯ ಮತ್ಸ್ಯ ವ್ಯವಸಾಯದ ಅಭಿವೃದ್ಧಿ ಹಾಗೂ ರಚನಾತ್ಮಕ ಚಟುವಟಿಕೆಗಳು ಇನ್ನೆಮ್ಮೆ ದಶಕಗಳ ಪರೆಗೆ ಮುಂದುವರಿಯುತ್ತಿದ್ದು ಮತ್ಸ್ಯೋದ್ಯಮದ ಸುವರ್ಣ ಯುಗಕ್ಕೆ ನಾಂದಿಯಾಗುವುದರಲ್ಲಿ ಸಂದೇಹವಿಲ್ಲ.

೧೯೬೨-೬೩ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರುವತ್ತು ಲಕ್ಷ ರೂಪಾಯಿ ಮೌಲ್ಯದ ೨೨,೪೦೦ ಟನ್ನುಗಳಷ್ಟು ಮೀನು ಹಿಡಿಯಲ್ಪಟ್ಟಿದ್ದರೆ, ೧೯೬೮-೬೯ರಲ್ಲಿ ಎರಡು ಕೋಟಿ ನಾಲ್ಕು ಲಕ್ಷ ರೂಪಾಯಿ ಮೌಲ್ಯದ ೪೫,೦೦೦ ಟನ್ನುಗಳಷ್ಟು ಮೀನು ಹಿಡಿಯಲ್ಪಟ್ಟಿದ್ದು, ಈ ಅಂಕೆಸಂಖ್ಯೆಗಳು, ಏಳೆಂಟು ವರ್ಷಗಳಲ್ಲಿ ಈ ಉದ್ಯಮದಲ್ಲಿ ಉಂಟಾದ ಅತೀ ದೊಡ್ಡ ಪ್ರಮಾಣದ ಅಭಿವೃದ್ಧಿಯನ್ನು ಸೂಚಿಸುತ್ತಿವೆ

ಇದೇ ಪ್ರಮಾಣದಲ್ಲಿ ಮತ್ಸ್ಯ ವ್ಯವಸಾಯದಲ್ಲಿ ಶೀಘ್ರ ಪರಿಣಾಮಕಾರಿ ಅಭಿವೃದ್ಧಿ ಪರಂಪರೆಗಳು ನಿರ್ಮಿಸಲ್ಪಟ್ಟರೆ ಮೀನು ವ್ಯವಸಾಯವು ರಾಜ್ಯದ ಹಾಗೂ ದೇಶದ ಇತರ ವ್ಯಾಮುಖ್ಯ ಹಾಗೂ ಪ್ರಯೋಜನಕಾರಿ ಪ್ರಬಲ ವ್ಯವಸಾಯಗಳ ಸಾಲಿನಲ್ಲಿ ಸಮಾನತ್ವವನ್ನು ಸ್ಥಾಪಿಸುವುದರಲ್ಲಿ ಸಂದೇಹವಿಲ್ಲ

ಈ ಜಿಲ್ಲೆಯ ಮತ್ಸ್ಯ ವ್ಯವಸಾಯದ ಅಭಿವೃದ್ಧಿಯ ಮೈಲಿಕಲ್ಲುಗಳನ್ನು ವೀಕ್ಷಿಸಿದರೆ, ೧೯೫೫ರಲ್ಲಿ ಮಂಗಳೂರಿನ ಮಂಜುಗಡ್ಡೆ ಮತ್ತು ಶೀತಲೀಕರಣ ಸ್ಥಾವರಗಳಿಂದ ಮೊದಲ್ಗೊಂಡು ಜಿಲ್ಲೆಯ ಉದ್ದಗಲಕ್ಕೂ ಹರಡಿಕೊಂಡಿರುವ ಇತರ ಸ್ಥಾವರ ಪರಂಪರೆಗಳಿಂದ ಹಿಡಿದು, ೧೯೬೮ರಲ್ಲಿ ಮಂಗಳೂರಿನಲ್ಲಿ ಫಿಶರೀಸ್ ಸಾಯನ್ಸ್ ಕಾರ್ಯಾಲಯ ಸ್ಥಾಪನೆಯಾಗಿರುವುದು ಮತ್ಸ್ಯೋದ್ಯಮದಲ್ಲಿ ಆದ ಮನನೀಯ ಹಾಗೂ ಗಣನೀಯ ಪ್ರಗತಿಯ ಹೆಗ್ಗುರುತುಗಳಾಗಿವೆ

ದಕ್ಷಿಣ ಕನ್ನಡ ಜಿಲ್ಲೆಯು ದೇಶದಲ್ಲೇ ಪ್ರಗತಿಪರ ಜಿಲ್ಲೆಯಾಗಿದ್ದು ಬ್ಯಾಂಕುಗಳು ಯಾಂತ್ರಿಕ ದೋಣಿಗಳಿಗೆ ಅರ್ಥಿಕ ನೆರವು ನೀಡುತ್ತಿದ್ದು ರಾಜ್ಯದ ಕರಾವಳಿ ಪ್ರದೇಶದಲ್ಲಿ ೯೦೦ಕ್ಕೂ ಮಿಕ್ಕ ಯಾಂತ್ರಿಕ ದೋಣಿಗಳು ಮೀನುಗಾರರಿಗೆ ಲಭ್ಯವಾಗಿದ್ದು ಮೀನುಗಾರಿಕೆಯ ಉನ್ನತಿಗೆ ಇನ್ನಷ್ಟು ಕಾರಣವಾಗಿವೆ

ಮೀನುಗಾರರ ಕರ್ತವ್ಯ ಪರಾಯಣತೆ ಉದ್ಯೋಗ ಶೀಲತೆ ಹಾಗೂ ಸರಕಾರ ಮತ್ತು ಬ್ಯಾಂಕುಗಳಿಂದ ಲಭ್ಯವಾಗುತ್ತಿರುವ ಆರ್ಥಿಕ ಸಹಕಾರಗಳು ಮತ್ಸ್ಯೋದ್ಯಮವು ಸಾಯವನ್ನು ಊರ್ಜಿತಗೊಳಿಸಿ ಮುಂದಿನ ದಶಕಗಳಲ್ಲಿ ಸಾಕಾಗುವಷ್ಟು ಬೇಕಾಗುವಷ್ಟು ವಿದೇಶ ವಿನಿಮಯವನ್ನು ಗಳಿಸಲು ಶಕ್ತವಾಗಿ ದೇಶದ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆಯಾಗಲು ಸಹಕಾರಿಯಾಗುವು ಪೆಂಬುದರಲ್ಲಿ ಸಂದೇಹವಿಲ್ಲ

ಇಂದು ರಾಜ್ಯದ ಕರಾವಳಿಯ ಉದ್ದಕ್ಕೂ ಮೀನುಗಾರಿಕೆಯಲ್ಲಿ ಕ್ರಾಂತಿಕಾರಿ ಕಾರ್ಯ ತತ್ಪರತೆಯು ಉಂಟಾಗಿ ಇದನ್ನು "ನೀಲಕ್ರಾಂತಿ" ಎಂದು ಕರೆದರೆ ಅನುಚಿತವಾಗದು. ಆದರೆ ಈ ಉದ್ಯಮದಲ್ಲಿ ಇಷ್ಟರ ತನಕ ಸಾಧಿಸಿದುದಕ್ಕಿಂತಲೂ ಹೆಚ್ಚು ಪಾಲು ಸಾಧಿಸಲು ಸಾಧ್ಯವಿದೆ. ಇದಕ್ಕೆ ಸರಕಾರದ ಆರ್ಥಿಕ ನೆರವೂ ಧನಾಢ್ಯ ಉದ್ದಿಮೆಗಾರರ ಆಸಕ್ತಿಯೂ ಅತ್ಯಗತ್ಯ. ರಾಷ್ಟ್ರೀಕರಣವಾದ ಬ್ಯಾಂಕುಗಳು ಈ ವಿಶೇಷದಲ್ಲಿ ಇನ್ನಷ್ಟು ಸೌಲಭ್ಯ ಸಲಕರಣೆಗಳನ್ನು ಒದಗಿಸಿದರೆ ಮೀನು ವ್ಯವಸಾಯವು ದೇಶದ ಆರ್ಥಿಕ ಉತ್ಪತ್ತಿಯನ್ನು ಹೆಚ್ಚಿಸುವುದಲ್ಲದೇ ದೇಶದ ಆಹಾರ ಸಮಸ್ಯೆಯನ್ನು ನೀಗಿಸುವುದರಲ್ಲಿ ಬಹುಮಟ್ಟಿಗೆ ಸಹಕಾರಿಯಾಗಬಲ್ಲುದು.

ಆದುದರಿಂದಲೇ ಸರಕಾರ, ಖಾಸಗಿ ಸಂಸ್ಥೆಗಳು, ಮತ್ತು ಸಹಕಾರಿ ಸಂಸ್ಥೆಗಳು ರಾಷ್ಟ್ರೀಕೃತ ಬ್ಯಾಂಕುಗಳ ನೆರವನ್ನು ಉಪಯೋಗಿಸಿ ಮತ್ಸ್ಯೋದ್ಯಮವು ದೇಶದ ಶ್ರೇಷ್ಠ ಉದ್ಯಮಗಳಲ್ಲಿ ಒಂದಾಗುವಂತೆ ಪ್ರಯತ್ನಿಸಬೇಕು.

೧೯೭೦ರಲ್ಲಿ ನಾಲ್ಕು ಕೋಟಿ ರೂಪಾಯಿ ಮೌಲ್ಯದ ಮೀನನ್ನು ಪರದೇಶಗಳಿಗೆ ರಫ್ತು ಮಾಡಿದ್ದರೆ ಈ ದಶಕದ ಅಂತ್ಯವಲ್ಲಿ ರಫ್ತಿನ ಮೌಲ್ಯವು ೩೫ ಕೋಟಿ ರೂಪಾಯಿಗಳ ಸ್ಥಾಪಿಗುರುವುದು ಒಂದೇ ಒಂದು ದಶಕದಲ್ಲಿ ರಫ್ತಿನ ಮೌಲ್ಯವು ಹತ್ತು ಪಾಲಷ್ಟು ಹೆಚ್ಚಿದ್ದು ಈ ಪ್ರಮಾಣದ ಹೆಚ್ಚಳವು ದೇಶದ ಇನ್ನಾವ ಉದ್ಯಮದಲ್ಲಿಯೂ ಉಂಟಾದುದು ಕಂಡುಬರುವುದಿಲ್ಲ ಮತ್ಸ್ಯೋದ್ಯಮಿಗಾರರಿಗೆ ಇದು ನಿಜವಾಗಿಯೂ ಹೆಮ್ಮೆಯ ವಿಷಯ

ನನ್ನ ಮಾಲಕತ್ವದಲ್ಲಿರುವ ಕೊರೆನೆಟ್ ಸಂಸ್ಥೆಗಳಿಗೆ ೧೯೬೮-೬೯ರ ಅತ್ಯಧಿಕ ರಫ್ತಿಗಾಗಿ ರಾಜ್ಯದ ಫಲಕವು ಕೊಡಮಟ್ಟಿದ್ದು ೧೯೭೦-೭೧ರಲ್ಲಿ ಮೀನು ಮತ್ತ ಮೀನು ಉತ್ಪಾದನೆಯ ನಿರ್ಯಾತ ಮೌಲ್ಯವನ್ನು ಒಂದು ಕೋಟಿ ರೂಪಾಯಿಗೂ ಮಿಕ್ಕುವಂತೆ ಮಾಡಬೇಕೆಂಬ ನನ್ನ ಆಶಯವಿದೆ ಈ ದಿತೆಯಲ್ಲಿ ನ ಎಲ್ಲಾ ಸಂಸ್ಥೆಗಳು ಒಟ್ಟಾಗಿ ಇಷ್ಟರಯೇ ಈ ಗುರಿಯನ್ನು ಮುಟ್ಟಲು ಸಾನಾನಿರತವಾಗಿವೆ

ದೇಶದ ಆರ್ಥಿಕ ಉನ್ನತಿಗೆ, ರಾಜ್ಯ ಸಿರಿವಂತಿಕೆಗೆ, ಇದು ನನ್ನ ವೈಯಕ್ತಿ ಪರಿಶ್ರಮ ಸಮರ್ಪಣೆ.

ರಾಜಯೋಗ

ದೇಶ ಭಕ್ತನ ವೇಷಧಾರಿ "ಆಸಾಮಿ"
ಬುಧ ದಸೆಯು ಬರಲು ಆದನು ಮಂ
ಸ್ವಾವಿ
ಕ್ರಮದಂತೆ ತಿರುಗಿತು ಕಾಲನ ಚರಕ
ಶನಿದಸೆಯು ಬಂದು ತಾನಾದ ಪು
ತಿರು

—"ದೇವತಿನಂದ" ಮಿಜಾ

ಅಮೃತಾಂಜನ
● ತಲೆ ಸಿಡಿತ ● ಮೈ ನೋ
● ಉಳುಕು ● ಕಮ್ಮು ಮತ್ತು ನೆಗ
ಅಮೃತಾಂಜನ ನಿವಾರಕ
ತಯಾರಿಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-೬

ದೇಶ ಸೇವೆಯಲ್ಲಿ - ಎಸ್. ಟಿ. ಸಿ.

ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ ಸರಕಾರಿ ಕ್ಷೇತ್ರದ ಕಾರ್ಪೊರೇಷನ್‌ಗಳಲ್ಲೆಲ್ಲ ಅತ್ಯಂತ ವೈಶಿಷ್ಟ್ಯಪೂರ್ಣವಾಗಿದೆ. ಸರಕಾರಿ ಕ್ಷೇತ್ರದ ಕಾರ್ಪೊರೇಷನ್‌ಗಳಲ್ಲಿ ಬಹುತೇಕ ಉತ್ಪಾದನಾ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿವೆ. ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಎಸ್. ಟಿ. ಸಿ. ವಿಶಿಷ್ಟವಾದ ಪಾತ್ರವನ್ನು ನಿರ್ವಹಿಸುತ್ತಿದೆ. ಈ ಒಂದು ಕ್ಷೇತ್ರದಲ್ಲಿ ರಾಷ್ಟ್ರದ ವಾಣಿಜ್ಯ ನೀತಿಗೆ, ಎಸ್. ಟಿ. ಸಿ.ಯ ನಿಕಟ ಸಂಪರ್ಕ ಬರುತ್ತದೆ. ಅಲ್ಲದೇ ಎಸ್. ಟಿ. ಸಿ. ಆರ್ಥಿಕ ಜೀವನದಲ್ಲಿ ಕ್ರಿಯಾಶೀಲವಾದ ಪಾತ್ರವನ್ನು ನಿರ್ವಹಿಸುತ್ತದೆ.

ಕೈಗಾರಿಕೆಗಳಿಗೂ ಎಸ್. ಟಿ. ಸಿ. ಅತ್ಯಂತ ಸಹಕಾರಿ. ಎಸ್. ಟಿ. ಸಿ. ಆಡಳಿತ ವರ್ಗದವರು ಇತ್ತೀಚಿನ ದಿನಗಳಲ್ಲಿ ಆಗಾಗ್ಗೆ ನಾನಾ ಕ್ಷೇತ್ರದ ಕೈಗಾರಿಕಾ ಪ್ರತಿನಿಧಿಗಳೊಂದಿಗೆ ಚರ್ಚೆಯನ್ನು ನಡೆಸುತ್ತಿದ್ದಾರೆ. ಈ ಮಾತುಕತೆಗಳ ಕಾಲಕ್ಕೆ ಎಸ್. ಟಿ. ಸಿ ನಿರ್ವಹಿಸಬೇಕಾದ ಪಾತ್ರದ ವಿಷಯವೂ ಚರ್ಚೆಗೆ ಬಂದಿತು.

ವಾಣಿಜ್ಯ ಸಂಸ್ಥೆಗಳು ಮತ್ತು ಕೈಗಾರಿಕೆಗಳು ಕಚ್ಚಾವಸ್ತುಗಳನ್ನು ಆಮದುಮಾಡಿಕೊಂಡಾಗ, ಪ್ರತಿಯೊಂದು ಯುನಿಟ್ ಅಥವಾ ತಂಡವು, ತನ್ನ ಆವಶ್ಯಕತೆಗಳನ್ನು ಹಾಗೂ ಹಣಕಾಸಿನ ಸ್ಥಿತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಈ ಕಚ್ಚಾ ವಸ್ತುಗಳ ಖರೀದಿ ಮಾಡುತ್ತದೆ. ಕೆಲವೊಂದು ಕ್ಷೇತ್ರಗಳಲ್ಲಿ ಎಸ್. ಟಿ. ಸಿ. ಮುಖಾಂತರ ವಸ್ತುಗಳು ಆಮದು ಆಗುತ್ತಿರುವುದರಿಂದ ಎಸ್. ಟಿ. ಸಿ. ಯ ಹೊಣೆಗಾರಿಕೆಯೂ ಹೆಚ್ಚಿದೆ.

ಗ್ರಾಹಕರಿಗೆ ಯೋಗ್ಯ ಬೆಲೆಯಲ್ಲಿ ಉತ್ತಮ ಗುಣಾಂಶದ ವಸ್ತುಗಳು ಸಕಾಲದಲ್ಲಿ ದೊರೆಯುವಂತೆ ನೋಡಿಕೊಳ್ಳುವುದೇ ಎಸ್. ಟಿ ಸಿ.ಯ ವಿಶೇಷ ಜವಾಬ್ದಾರಿಯಾಗಿದೆ. ಎಸ್. ಟಿ. ಸಿ. ತನ್ನ ಪ್ರತಿ ಡಿವಿಸನ್ನಿನಲ್ಲಿ ನಡೆಯುವ ಪ್ರಧಾನ ವಸ್ತುಗಳ ಆಮದು ವ್ಯವಹಾರವನ್ನು ಕೂಲಂಕಷವಾಗಿ ಪರಿಶೀಲಿಸುತ್ತದೆ.

ಅಂತಾರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿರುವ ಎಸ್. ಟಿ. ಸಿ. ಕೈಗಾರಿಕೆಗೆ ಅತ್ಯಂತ ಪರಿಣಾಮಕಾರಿಯಾದ ರೀತಿಯಲ್ಲಿ ಸೇವೆ ಸಲ್ಲಿಸ ಬೇಕೆಂಬುದೇ ಅದರ ಆಡಳಿತ ವರ್ಗದ ಆಪೇಕ್ಷೆಯಾಗಿದೆ. ವಾಲುದಾರರು ಈ ಸಂಸ್ಥೆಯನ್ನು ವಿಶ್ವಾಸಾರ್ಹವಾದ ರಾಷ್ಟ್ರೀಯ ಸಂಸ್ಥೆಯೆಂದು ಪರಿಗಣಿಸಿದ್ದಾರೆ.

ಕೇಂದ್ರ ಸರ್ಕಾರದವರು ಯಾವ ವಸ್ತುಗಳ ವಿದೇಶಿ ವ್ಯಾಪಾರ ವ್ಯವಹಾರಗಳನ್ನು ಎಸ್. ಟಿ. ಸಿ.ಗೆ ಒಪ್ಪಿಸ ಬೇಕು ಎಂಬ ಬಗ್ಗೆ ಹಾಗೂ ಈ ವಸ್ತುಗಳ ವಿಶಿಷ್ಟ ಸಮಸ್ಯೆಗಳ ಬಗ್ಗೆ ವಿವರವಾದ ಅಧ್ಯಯನ ನಡೆಸುತ್ತಿದ್ದಾರೆ. ಇಂತಹ ಒಂದು ವ್ಯವಸ್ಥೆಯಿಂದ ಕೈಗಾರಿಕೆಗಳಿಗೆ ಪ್ರಯೋಜನವಾಗುತ್ತದೆ.

ಎಸ್. ಟಿ. ಸಿ ದೇಶದ ಪ್ರಧಾನ ಅಂತಾರಾಷ್ಟ್ರೀಯ ವಾಣಿಜ್ಯ ಸಂಸ್ಥೆ. ಅದು ದೇಶದ ರಫ್ತು ವ್ಯಾಪಾರದ ಪ್ರಧಾನ ಕೇಂದ್ರ. ಇಂದು ವಿಶ್ವದಾದ್ಯಂತ ಎಸ್. ಟಿ. ಸಿ. ಯ ಶಾಖೆಗಳಿವೆ.

ಡ್ರಿಲ್ಲಿಂಗ್ ಮೆಷಿನ್‌ಗಳು, ಲೇತಗಳು, ಸ್ಕ್ಯಾಪಿಂಗ್ ಮತ್ತು ಪ್ಲ್ಯಾನಿಂಗ್ ಮೆಷಿನ್‌ಗಳು ಇತ್ಯಾದಿ ಯಂತ್ರಗಳ ಮಾದರಿಗಳ ಕಾರ್ಯವಿಧಾನದ ಪ್ರತ್ಯಕ್ಷಿಕೆಯನ್ನು ಏರ್ಪಡಿಸುವ ಮೂಲಕ ಉಪಯುಕ್ತ ಸೇವೆಯನ್ನು ಸಲ್ಲಿಸುವುದು ಎಸ್. ಟಿ. ಸಿ. ಯ ಇನ್ನೊಂದು ಉದ್ದೇಶ. ಗ್ರಾಹಕರೆಲ್ಲ ಕಾರ್ಪೊರೇಷನ್ನಿನ ವಿಚಾರದಲ್ಲಿ ವಿಶ್ವಾಸವನ್ನು ಮೂಡಿಸುವುದು, ಯಾವುದೇ ಸಂದೇಹ ಭಾವನೆಗಳನ್ನು ನಿವಾರಿಸುವುದು ಕಾರ್ಪೊರೇಷನ್ನಿನ ಇನ್ನೊಂದು ಮಹತ್ವದ ಕರ್ತವ್ಯವಾಗಿದೆ. ದೇಶದ ರಫ್ತುವ್ಯಾಪಾರದ ಹಿತದೃಷ್ಟಿಯಿಂದ ಎಸ್. ಟಿ. ಸಿ. ತನ್ನ ಎಲ್ಲಾ ತಜ್ಞರ ಸಹಾಯ ಹಾಗೂ ಸೇವಾ ಸೌಕರ್ಯಗಳು, ದೇಶದ ಕೈಗಾರಿಕಾ ಉತ್ಪಾದಕರಿಗೆ ಹಾಗೂ ಕೈಗಾರಿಕಾ ವಸ್ತುಗಳನ್ನು ಪೂರೈಸುವವರಿಗೆ ದೊರೆಯುವಂತೆ ನೋಡಿಕೊಳ್ಳುತ್ತದೆ.

ದೇಶದ ರಫ್ತು ವ್ಯಾಪಾರದಲ್ಲಿ ಎಸ್. ಟಿ. ಸಿ. ವಿಶಿಷ್ಟ ಪಾತ್ರವನ್ನು ನಿರ್ವಹಿಸುತ್ತಿದೆ. 1968-69ರಲ್ಲಿ ಎಸ್. ಟಿ. ಸಿ. ನೇರವಾಗಿ 480 ದಶಲಕ್ಷ ರೂ.ಗಳಷ್ಟು ರಫ್ತು ವ್ಯಾಪಾರವನ್ನು ನಿರ್ವಹಿಸಿದೆ. 1968-69ರಲ್ಲಿ ಈ ಸಂಸ್ಥೆ ರಫ್ತು ಮಾಡಿದ ವಸ್ತುಗಳ ಹಾಗೂ ಅವುಗಳ ವಾಣಿಜ್ಯ ಸಂಬಂಧವಾದ ವಿವರಣೆಗಳನ್ನು ಈ ಕೆಳಗೆ ಕೊಡಲಾಗಿದೆ.

ರಫ್ತಾದ ವಸ್ತುಗಳು	ಕೋಟಿ ರೂ.ಗಳಲ್ಲಿ
ರೈಲ್ವೆವ್ಯಾಗನ್‌ಗಳು ಮತ್ತು ಇತರ ಉಪಕರಣಗಳು	9. 4
ಕೊದಲು ಮತ್ತಿತರ ವಸ್ತುಗಳು	7. 34
ಕೃತಕರೇಶ್ಮೆ ಬಟ್ಟೆಗಳು ಮತ್ತಿತರ ಹತ್ತಿಜವಳಿ	5. 2
ಸೆಣಬಿನ ವಸ್ತುಗಳು	4. 6
ಅಕ್ಕಿ ಮತ್ತು ದ್ವಿದಳ ಧಾನ್ಯಗಳು	3. 8
ಪಾದರಕ್ಷೆಗಳು	3. 6
ಸಿಮೆಂಟ್	2. 85
ಕಡಲೆಕಾಯಿ ಉತ್ಪನ್ನಗಳು	1. 6
ಉಪ್ಪು	1. 6
ಒಣಗಿದ ಮೀನುಗಳು	1. 5
ಹೊಗೆಸೊಪ್ಪು ಮತ್ತಿತರ ವಸ್ತುಗಳು	1. 6
ಒಟ್ಟುರಫ್ತಾದ ವಸ್ತುಗಳ ಮೌಲ್ಯ	48. 0

ಕೊಡುವವನಿಗೆ ಹರುಷ
ಪಡೆವವನಿಗೆ ಹರುಷ
ಜನಪ್ರಿಯ "ಪ್ರಕಾಶ".

ಮೂವತ್ತು ವರ್ಷಗಳಿಗೂ ಮಿಕ್ಕಿ
ದೇಶದ ವಿವಿಧ ರಾಜ್ಯಗಳಲ್ಲಿ
—ತಾರತಮ್ಯ ತಿಳಿವ ಜನರಿಂದ
ಆದರಿಸಲ್ಪಟ್ಟಿವೆ—

ಪ್ರಕಾಶ ಬೀಡಿಗಳು

PRAKASH BEEDIES

ಎಲ್ಲ ಕಾಲಗಳಲ್ಲಿ ಎಲ್ಲ ಜನರಿಗೆ ಸೇವನೆಯ ಆನಂದವೀಯುತ್ತಿವೆ!

ಹಾರ್ದಿಕ ಶುಭಾಶಯಗಳನ್ನು ಕೋರುವ—

ಕೆ. ಎಂ. ಆನಂದ ಪ್ರಭು ಎಂಡ್ ಸನ್ಸ್

ಬಂದರ, ಮಂಗಳೂರು-1
ಫೋನ್ : 3718

ಫೆಕ್ಟರೀ: ಕೊಡಿಯಾಲ್‌ಬೈಲ್ ಮಂಗಳೂರು-3
ಫೋನ್ : 3552

||: ಬೇಸಾಯ ಕ್ಷೇತ್ರದಲ್ಲಿ ಸರಕಾರಿ ಸಂಸ್ಥೆಗಳು :||

ಲೇಖಕರು : ಅಣ್ಣಾ ಸಾಹೇಬ್, ಪಿ. ಸಿಂಧೆ,
ಕೇಂದ್ರ ಸರ್ಕಾರದ ಬೇಸಾಯ ಸಮುದಾಯ ಅಭಿವೃದ್ಧಿ ಮತ್ತು
ಸಹಕಾರ ಶಾಖೆ ಮಂತ್ರಿಗಳು.

ದೇಶದಲ್ಲಿನ ಬೇಸಾಯ ಉತ್ಪಾದನಾ ಪ್ರಮಾಣವನ್ನು ಹೆಚ್ಚಿಸುವುದು, ಹಾಗೂ ದೇಶದಲ್ಲಿನ ಬೇಸಾಯಗಾರರಿಗೆ ಮತ್ತು ಬಳಕೆದಾರರಿಗೆ ಇಬ್ಬರಿಗೂ ಸರಿಹೊಂದುವ ನೀತಿಯನ್ನು ರೂಪಿಸುವುದುನಮ್ಮ ಕೇಂದ್ರ ಸರಕಾರದ ಆಹಾರ ಬೇಸಾಯ, ಮತ್ತು ಸಹಕಾರ ಶಾಖೆಗೆ ನೇರವಾಗಿ ಸಂಬಂಧಿಸಿರುವ ಹಾಗೂ ಸ್ವತಂತ್ರ ಕಾರ್ಪೊರೇಶನ್ ಗಳಅಭಿವೃದ್ಧಿ-ಉದ್ದೇಶ.ಕೇಂದ್ರ ಬೇಸಾಯ ಮಂತ್ರಿ ಶಾಖೆಗೆ ನೇರವಾಗಿಸಂಬಂಧಿಸಿದಂತೆ ಏಳು ಬೃಹತ್ ಸಂಸ್ಥೆಗಳು ಇವೆ.1)ಸ್ಟೇಟ್ ಫಾರಂ ಕಾರ್ಪೊರೇಷನ್ 2) ರಾಷ್ಟ್ರೀಯ ಬೀಜಗಳ ಕಾರ್ಪೊರೇಷನ್ 3) ರಾಷ್ಟ್ರೀಯ ಬೇಸಾಯ ಸಹಕಾರ ಮಾರುಕಟ್ಟೆ ಫೆಡರೇಷನ್ 4) ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಕಾರ್ಪೊರೇಷನ್ 5) ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ 6) ಮಾರ್ಕೆಂಟೈಲ್ ಬೇಕರೀಸ್ 7) ಇಂಡಿಯನ್ ಡೈರಿ ಕಾರ್ಪೊರೇಷನ್ ಇವೇ ಈ ಏಳು ಸರ್ಕಾರಿ ಸಂಸ್ಥೆಗಳು.

ಸ್ಟೇಟ್ ಫಾರಂ ಕಾರ್ಪೊರೇಷನ್: ಸ್ಟೇಟ್ ಫಾರಂ ಕಾರ್ಪೊರೇಷನ್ ಈ ಏಳು ಸಂಸ್ಥೆಗಳಲ್ಲಿ ಅತ್ಯಂತ ಹಳೆಯದು. ಇದನ್ನು 1969ರ ಜುಲೈನಲ್ಲಿ ಔಪಚಾರಿಕವಾಗಿ ಪ್ರಾರಂಭಿಸಲಾಯಿತು. ಈ ಕಾರ್ಪೊರೇಷನ್ ಆಗ ಇದ್ದ ಕೇಂದ್ರ ಫಾರಂಗಳನ್ನು ವಹಿಸಿಕೊಂಡಿತು. ಭಾರತ ಸರ್ಕಾರದವರು ಅಪೇಕ್ಷಿಸುವ ಫಾರಂಗಳನ್ನು ಸ್ಥಾಪಿಸುವುದು, ಈ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಒಂದು. ಸದ್ಯದಲ್ಲಿ ಈ ಕಾರ್ಪೊರೇಷನ್ ಅಧಿಕಾರದಲ್ಲಿ ಆರು ಕೇಂದ್ರ ಫಾರಂಗಳಿವೆ. ಇವುಗಳಲ್ಲಿ ರಾಜಸ್ಥಾನ ಸುರತಘರ್ ಫಾರಂ ಅತ್ಯಂತ ಹಳೆಯದು ಹಾಗೂ ಇದು 30,000 ಎಕರೆಗಳಷ್ಟು ವಿಶಾಲವಾಗಿದೆ. 1956ರಲ್ಲಿ ಆರಂಭವಾದ ಈ ಫಾರಂ ರಷ್ಯಾದಿಂದ ಬೇಸಾಯ ಅಭಿವೃದ್ಧಿಗೆ ಅಗತ್ಯವಾದ ಯಂತ್ರಗಳ ನೆರವು ಪಡೆದಿದೆ.

ಬೇಸಾಯ ಅಭಿವೃದ್ಧಿ ದೃಷ್ಟಿಯಿಂದ ಉತ್ತಮ ಬೀಜಗಳನ್ನು ಈ ಫಾರಂನಲ್ಲಿ ಉತ್ಪಾದಿಸುವುದು ಮತ್ತು ವಾಣಿಜ್ಯ ಬೆಳೆಯನ್ನು ತೆಗೆಯುವುದು ಈ ಫಾರಂ ಸಾಧನೆಯ ಮುಖ್ಯ ಗುರಿ. ಎಷ್ಟೇ ಕಠಿಣ ಸಂದರ್ಭಗಳು ತಲೆದೋರಿದಾಗಲೂ ಈ ಫಾರಂ ತನ್ನ ಉದ್ದೇಶವನ್ನು ಸಾಧಿಸಿದೆ. 1966-67ರಲ್ಲಿ ಫಾರಂನಲ್ಲಿ 18.17 ಲಕ್ಷ ರೂಪ್ಯಾಗಳಷ್ಟು ಲಾಭ ಇತ್ತು. 1967-68ರ ವೇಳೆಗೆ 49.52 ಲಕ್ಷಕ್ಕೆ ಏರಿತು. ಜಸ್ಪರ್ (ರಾಜಾಸ್ಥಾನ), ಝೂರ್‌ಸುಗುಡಾ (ಒರಿಸ್ಸಾ), ಜಲಂಧರ್ (ಪಂಜಾಬ್), ಹಿಸ್ಸಾರ್ (ಹರಿಯಾಣ), ಮತ್ತು ರಾಯಚೂರು (ಮೈಸೂರು) ಈ ಸ್ಥಳಗಳಲ್ಲಿರುವ ಫಾರಂಗಳು ಈ ಕಾರ್ಪೊರೇಷನ್‌ನ ಅಧಿಕಾರ ವ್ಯಾಪ್ತಿಗೆ ಒಳಗಾಗಿವೆ.

ಆಹಾರ ಧಾನ್ಯಗಳ ಬಿತ್ತನೆ ಬೀಜಗಳು, ಪಶು ಫ್ಲಾಂಟೇಷನ್ ಬಳ್ಳಿ ಎಣ್ಣೆಬೀಜಗಳು, ಹೆಣ್ಣುಗಳು ಮತ್ತು ತರಕಾರಿ ಇವುಗಳನ್ನು ಉತ್ಪಾದಿಸುವುದು ಈ ಕಾರ್ಪೊರೇಷನ್‌ನ ಮುಖ್ಯ ಕೆಲಸವಾಗಿದೆ.

ರಾಷ್ಟ್ರೀಯ ಬೀಜಗಳ ಕಾರ್ಪೊರೇಷನ್: ದೇಶದ ಹಸಿರು ಕ್ರಾಂತಿ ಪ್ರಯತ್ನದಲ್ಲಿ ಯಶಸ್ಸನ್ನು ಸಾಧಿಸಲು ಅಗತ್ಯವಾಗಿರುವ ಉತ್ತಮ ಬೀಜಗಳ ಉತ್ಪಾದನೆ ಮತ್ತು ವಿತರಣೆ ದೃಷ್ಟಿಯಿಂದ 1967ರಲ್ಲಿ ರಾಷ್ಟ್ರೀಯ ಬೀಜಗಳ ಕಾರ್ಪೊರೇಷನ್ ನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಯ ಪ್ರಾರಂಭದಲ್ಲಿ ಅಧಿಕೃತ ಬಂಡವಾಳ 5 ಕೋಟಿ ರೂಪ್ಯಾಗಳಷ್ಟಿತ್ತು. ಬೇಸಾಯ ಸಂಶೋಧನೆ ಸಮಿತಿಯವರು ವೈದ್ಧಿಪಡಿಸುವ ಬೀಜಗಳಿಂದ ಮೂಲಬೀಜಗಳನ್ನು ಉತ್ಪಾದಿಸುವ ಕಾರ್ಯವನ್ನು ಈ ಸಂಸ್ಥೆಯವರು ಕೈಗೊಳ್ಳುವರು. 1963-64ರಲ್ಲಿ 193 ಎಕರೆಗಳಷ್ಟು ಜಮೀನಿನಲ್ಲಿ ಮೂಲ ಬೀಜಗಳನ್ನು ಉತ್ಪಾದಿಸುತ್ತಿದ್ದು 1969-70ರ ವೇಳೆಗೆ ಈ ಉದ್ದೇಶಕ್ಕಾಗಿ ಬಳಸುವ ಜಮೀನು ಕ್ಷೇತ್ರ 28,000 ಎಕರೆಗಳಿಗೆ ಏರಿತು.ಈ ಸಂಸ್ಥೆಯವರು ಸಿಲೋನ್, ಮಲೇಶಿಯೊ, ಡೆನ್‌ಮಾರ್ಕ್, ಘಾನಾ, ಬರ್ಮಾ, ಮತ್ತು ರಷ್ಯಾ ದೇಶಗಳಿಗೂ ಬೀಜಗಳನ್ನೂ ರಫ್ತುಮಾಡಿದ್ದಾರೆ. ಚತುರ್ಥ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಉತ್ತಮ ಬೀಜಗಳು ಹೆಚ್ಚು ಅಗತ್ಯವಾಗಿವೆ. ಉತ್ತಮ ಬೀಜಗಳ ಕಾರ್ಯಕ್ರಮಗಳಲ್ಲಿ ಸುಮಾರು 180ದಶಲಕ್ಷ ಎಕರೆಗಳನ್ನು ಬಳಸಲು ಉದ್ದೇಶಿಸಲಾಗಿದೆ.

ರಾಷ್ಟ್ರೀಯ ಬೇಸಾಯ ಸಹಕಾರ ಮಾರುಕಟ್ಟೆ ಫೆಡರೇಷನ್:-

ಈ ಸಂಸ್ಥೆ 195೩ರಲ್ಲಿ ಅಸ್ತಿತ್ವಕ್ಕೆ ಬಂತು. ಬೇಸಾಯದ ಉತ್ಪಾದನೆಯನ್ನು ಮಾರುಕಟ್ಟೆ ಮಾಡುವ ಸಂದರ್ಭಗಳಲ್ಲಿ ಜಿಲ್ಲಾ ಮತ್ತು ವ್ಯಾಧಮಿಕ ಸರಕಾರ ಸಂಘಗಳ ಮೂಲಕ ನೆರವು ನೀಡುವುದು ಮತ್ತು ಬೇಸಾಯಗಾರರ ಅಗತ್ಯವನ್ನು ಪೂರೈಸುವುದು ಈ ಫೆಡರೇಷನ್‌ನ ಮುಖ್ಯ ಧ್ಯೇಯಗಳು.

ಹದಿನೇಳು ರಾಜ್ಯಮಟ್ಟದ ಸಹಕಾರ ಮಾರುಕಟ್ಟೆ ಫೆಡರೇಷನ್‌ಗಳು ಮತ್ತು 5 ಕೇಂದ್ರಾಡಳಿತ ಪ್ರದೇಶಗಳ ಮಾರುಕಟ್ಟೆ ಫೆಡರೇಷನ್‌ಗಳು ಇದರ ಸದಸ್ಯ ಕಾರ್ಪೊರೇಷನ್‌ಗಳು. ಸುಗ್ಗಿಕಾಲದಲ್ಲಿ ಉತ್ಪಾದನಾದಾರರಿಗೆ ನೆರವುನೀಡುವುದು, ಬೇಸಾಯ ಅಭಿವೃದ್ಧಿಗೆ ಬೇಕಾದ ರಾಸಾಯನಿಕ ಗೊಬ್ಬರಗಳು, ಕೀಟನಾಶಕ, ಯಂತ್ರೋಪಕರಣಗಳು ಮತ್ತು ಉತ್ತಮ ಬೀಜಗಳು ಇವುಗಳನ್ನು ಈ ಸಂಸ್ಥೆಯವರು ಪೂರೈಸುವರು.

ಸಹಕಾರ ಸಂಘಗಳ ಮೂಲಕ ಆಂತರ್ ರಾಜ್ಯ ವಾಣಿಜ್ಯ 1962-63ರಲ್ಲಿ 102 ಲಕ್ಷ ರೂ.ಗಳಷ್ಟಿತ್ತು. 1968-69ರಲ್ಲಿ ಇದು 5685. 82 ಲಕ್ಷಗಳಿಗೆ ಏರಿತು. ಈ ಸಂಸ್ಥೆಯ ಮೂಲಕ ಬೇಸಾಯ ವಸ್ತುಗಳ ರಫ್ತು ಪ್ರಮಾಣ ಗಣನೀಯವಾಗಿ ಏರಿದೆ.

ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಕಾರ್ಪೊರೇಷನ್:-

ಸಹಕಾರ ಮಾರುಕಟ್ಟೆ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವುದು ಮತ್ತು ರೂಪಿಸುವುದು ಇವುಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಕೈಗೊಳ್ಳುವ ಕಾರ್ಯಕ್ರಮಗಳಿಗೆ ಸಹಕಾರ ನೀಡುವುದು. ವಸ್ತುಗಳ ಸಂಸ್ಕರಣೆ ಧಾನ್ಯಸಂಗ್ರಹಣೆ ಇವೇ ಮೊದಲಾದುವುಗಳಲ್ಲಿ ಈ ಸಂಸ್ಥೆ ನೆರವಾಗುವುದು. 1960-61ರಲ್ಲಿ ಈ ಮಾರುಕಟ್ಟೆಗಳಲ್ಲಿ 171 ಕೋಟಿ ರೂ.ಗಳಷ್ಟು ಬೇಸಾಯ ವಸ್ತುಗಳ ವಹಿವಾಟು ನಡೆಯುತ್ತಿದ್ದು 1967-68ರ ವೇಳೆಗೆ ಇದು 525 ಕೋಟಿ ರೂ.ಗಳಿಗೆ ಏರಿತು. ರಾಸಾಯನಿಕ ವಸ್ತುಗಳು ಕೀಟನಾಶಕ ಬೀಜಗಳು ಮುಂತಾದ ಬೇಸಾಯ ಅಗತ್ಯವಾದ ವಸ್ತುಗಳು ಶೇಕಡಾ 65ರಷ್ಟು ಈ ಮಾರುಕಟ್ಟೆಗಳ ಮೂಲಕವೇ ವಿತರಣೆಯಾಗುತ್ತಿದೆ. ಸಹಕಾರಿ ಮಾರುಕಟ್ಟೆಗಳು 1960-61ರಲ್ಲಿ 8ಲಕ್ಷ ರೂಗಳಷ್ಟು ದಾಸ್ತಾನನ್ನು ಸಂಗ್ರಹಿಸಿತ್ತು. ಈ ದಾಸ್ತಾನು ಸಂಗ್ರಹಣ 1968-69ರ ವೇಳೆಗೆ 26ಲಕ್ಷ ಟನ್‌ಗಳಿಗೆ ಏರಿತು. ಈ ವರೆವಿಗೆ 1600 ಬೇಸಾಯ ಸಂಸ್ಕರಣ ವಿಭಾಗಗಳನ್ನು ಸಹಕಾರಿ ಕ್ಷೇತ್ರದಲ್ಲಿ ಸ್ಥಾಪಿಸಲಾಗಿದೆ.

ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ:-

ದಕ್ಷಿಣ ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಮುಖ್ಯವಾಗಿ ಕೇರಳಾ ರಾಜ್ಯದಲ್ಲಿ ಅಕ್ಕಿಯನ್ನು ವಿತರಣೆ ಮಾಡುವ ಸಲುವಾಗಿ ಈ ಸಂಸ್ಥೆ 1965ರ ಜನವರಿಯಲ್ಲಿ ಮೊತ್ತಮೊದಲಿಗೆ ಆರಂಭವಾಯಿತು. ಆರಂಭದಿಂದ ಕೇವಲ 5ವರ್ಷಗಳಲ್ಲಿಯೇ ಈ ಸಂಸ್ಥೆ ಬೃಹದಾಕಾರವಾಗಿ ಬೆಳೆದು ತನ್ನ ಕಾರ್ಯಕ್ಷೇತ್ರ ವಿಸ್ತರಿಸಿತು. ಸದ್ಯದಲ್ಲಿ ಈ ಸಂಸ್ಥೆ ಮಹಾರಾಷ್ಟ್ರ ಮತ್ತು ಕಾಶ್ಮೀರ ರಾಜ್ಯವನ್ನು ಬಿಟ್ಟು ದೇಶದಲ್ಲಿ ಧಾನ್ಯ ಸಂಪಾದಿಸುವ ಕೆಲಸದಲ್ಲಿತೊಡಗಿದೆ.1965-66ರಲ್ಲಿ ದೇಶದಲ್ಲಿ ಸುಮಾರು ೩ದಶ ಲಕ್ಷ ಟನ್‌ಗಳಷ್ಟು ಧಾನ್ಯವನ್ನು ಕೊಳ್ಳಲಾಯಿತು. ಇದು ಮೂರನೇ ವರ್ಷವೇ 5 ಲಕ್ಷ ಟನ್‌ಗಳಿಗೆ ಏರಿತು.

ಉತ್ಪನ್ನಕಾರರಿಗೆ ಮತ್ತು ಬಳಕೆದಾರರ ನಡುವಣ ಮಧ್ಯವರ್ತಿಗಳನ್ನು ತಡೆ

SADHURAM INDUSTRIES
Manufacturers of MAYA Steel Furniture
Flourescent Fixtures & Fancy Articles
& Distribution Boxes for M. S. E. B.
Factory :
150, JUGANAHALLI, II BLOCK,
RAJAJINAGAR, BANGALORE-10.
Office & Show Room :
18/1, TANK BUND ROAD,
BANGALORE-9.
Telephone { Works : 8102 / Office : 70081
Branch Office : 3, J. N. STREET
PONDICHERRY

॥: ಅದ್ಭುತ ಮೆರವಣಿಗೆಯ ನಡುವೆ ಅಪಸ್ವರ :॥

ಕೆಲ ವರ್ಷಗಳಿಂದ ದೇಶದಲ್ಲಿ ಹೆಸರು ಕ್ರಾಂತಿಯು ಮನೆ ಮಾತಾಗಿತ್ತು. ಆ ಹಾರೋತ್ಪನ್ನಗಳಲ್ಲಿ ಗಣನೀಯ ಇಳುವರಿಯಾಗಿ ಬರ ಬಡೆದದ್ದರಿಂದ ಎಲ್ಲರ ದೃಷ್ಟಿಯೂ ಇತ್ತ ಹರಿದದ್ದು ಸ್ವಾಭಾವಿಕ. "ಹೆಚ್ಚು ಬೆಳೆಯಿರಿ" ಎಂಬ ಇಪ್ಪತ್ತು ವರ್ಷ ಹಳೆಯ ಸೋಗನ್ನಿಗೆ ಮತ್ತೆ ಪ್ರಾಣ ಪ್ರತಿಷ್ಠೆಯಾಯಿತು. ನೀರಾವರಿಗೆ ಉತ್ತೇಜನ ದೊರೆಯಿತು. ಬಾವಿ-ಹಳ್ಳ-ಕೆರೆಗಳಿಗೆ ಪಂಪು ಸೆಟ್ಟುಗಳನ್ನು ಜೋಡಿಸಲು ತಕ್ಕ ಅನುಕೂಲತೆಗಳು ಲಭಿಸಿದುವು. ಹೊಳೆ—ನದಿಗಳ ದಂಡೆಗಳಲ್ಲೆಲ್ಲ ಪಂಪಿನ ಗುಡುಗುಡು ಪ್ರತಿಧ್ವನಿಸಿತು. ಸಣ್ಣ ಸಣ್ಣ ತೋಡುಗಳಿಗೆ ಹಳ್ಳಿಗರು ಹಾಕುತ್ತಿದ್ದ ಮಣ್ಣಿನ ಒಡ್ಡಿನ ಬದಲು ಸರಕಾರಿ ವೆಚ್ಚದಲ್ಲಿ ತೂಬು ಕಟ್ಟಿಗಳ ನಿರ್ಮಾಣವಾಯ್ತು. ಎರಡನೆ ಬೆಳೆಯ ನೀಳೆಯೇ ಪಡಿಲು ಬೀಳುತಿದ್ದ ಹೊಲ ಮೂರನೆಯ ಬೆಳೆಯನ್ನೂ ಹೊತ್ತು ಕುಣಿದಾಡ ಹತ್ತಿತು. ತೋಟಗಳೂ ಹಸುರಾಗಿ ಫಲಭರಿತ ಹೆಂಪಲುಗಳ ಉತ್ಪನ್ನವೂ ಹೆಚ್ಚಿತು. ಹೆಸರು ಕ್ರಾಂತಿ ಅತ್ಯಂತ ಯಶಗಳಿಸಿತು. ಆಹಾರ ಮಂತ್ರಿ ತಲೆಯಲ್ಲಿ ಮಯೂರ ಕಿರೀಟ ವಿರಾಜಮಾನವಾಯ್ತು.

ಭಾರತದ ಆಹಾರಮಂತ್ರಿಗಳು ಒಳ್ಳೆಯ ಹೆಸರು ಕೇಳಿದ್ದು ಅಪರೂಪ. ಕೆಲವು ಆಹಾರ ಮಂತ್ರಿಗಳು ಮಧ್ಯಾವಧಿಯಲ್ಲೇ ತಮ್ಮ ಖಾತೆಯನ್ನು ಬಿಟ್ಟುಕೊಟುಮಂಟು. ಆದರೆ, ಸದ್ಯದ ಶ್ರೀ ಜಗಜ್ಜೀವನ ರಾಮರು ಇದಕ್ಕೆ ಅಪವಾದ. ಅವರು ತಮ್ಮ ಮಂತ್ರಿಪದವನ್ನು ಬಿಟ್ಟು ಕೊಡಬಹುದಾದರೂ ಅವರು ಇಂಡಿಕೇಟಿನ ಅಧ್ಯಕ್ಷರಾದುದೇ ಇದಕ್ಕೆ ಕಾರಣವಲ್ಲದೆ ಆಹಾರ ಖಾಟೆಯಲ್ಲ. ಶ್ರೀ ಜಗಜ್ಜೀವನ ರಾಮರು ಸಫಲ ಆಹಾರ ಮಂತ್ರಿಗಳಾಗುವುದಕ್ಕೆ ಅವರ ಕಾರ್ಯ ಶೀಲತೆಗಿಂತಲೂ ಪ್ರಕೃತಿಯ ಕರುಣೆಯೇ ಮುಖ್ಯಕಾರಣವೆಂಬುದೂ ಸರ್ವವೇದ್ಯ.

ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಈ ವರ್ಷ ಬಿಸಿಲಿನ ಜಳ ಹೆಚ್ಚು. ಮಳೆಯೂ ಅಪರೂಪ. ಕಳೆದ ದೀಪಾವಳಿಗೆ ಮೊದಲೇ ಬಂದು ಹೋದ ಮಳೆ ಈ ವರ್ಷ ಬಂದುದು ಕಡಿಮೆ. ಎಲ್ಲೋ ಒಂದೆರಡು ಮಳೆ ಬಂದಿದ್ದರೆ ಹೆಚ್ಚು. ಮೂಡಲ ಪ್ರಾಂತವಿದಕ್ಕೆ ಅಪವಾದವಾದರೂ ಪಡುವಣ ಪ್ರಾಂತದ ಬವಣೆ ತೀವ್ರ. ಹಾಗಾಗಿ ಹೊಳೆ-ನದಿಗಳ ನೀರು ಆರಿಹೋಗಿ ಅವು ಕೆಸರು ತುಂಬಿದ ಹಳ್ಳಗಳಂತಾಗಿವೆ. ಅಧಿಕ ಸಂಖ್ಯಾತ ಬಾವಿಗಳ ನೀರೂ ಆರಿ ಹೋಗಿದೆ. ಕುಡಿಯುವ ನೀರಿಗಾಗಿ ಹರಿತಾಪ ಪಡುವುದು ಸರ್ವೇಸಾಮಾನ್ಯ. ಗುಡ್ಡ ಸಾಲಿನಲ್ಲಿ ಎರಡು-ಮೂರು ಮೈಲಿ ದೂರದಿಂದ ನೀರು ಹೊತ್ತು ತರುವುದು ನಿತ್ಯ ದೃಶ್ಯ.

ಬಯಲು ಪ್ರದೇಶ, ತೋಡು-ಹೊಳೆಗಳ ಆಸುಪಾಸಿನಲ್ಲಿ ನೀರಿನ ಆಸರೆ ಹೆಚ್ಚು ಎಂಬುದು ನಿರ್ವಿವಾದ. ಆದರೆ, ಈ ವರ್ಷ ಈ ಸರಹದ್ದಿನ ಬಾವಿ-ಕೆರೆಗಳಲ್ಲೇ ನೀರು ಬೇಗ ಆರಿಹೋದುದು ಅನುಭವಕ್ಕೆ ಬಂದಿದೆ. ಒಂದೆರಡು ಮಳೆ ಸುರಿದು ತೋಡುಗಳಲ್ಲಿ ನೀರು ಕರಿದು ಹೋಯಿತೆಂದರೆ, ಈ ಬಾವಿಗಳಲ್ಲಿ ನೀರಿನೊಸರು ಮೂಡುವುದುಂಟು. ಮಳೆ ಮತ್ತೆ ದೂರವಾದರೆ ಒಸರೂ ಬತ್ತುವುದುಂಟು. ಗುಡ್ಡ ಸಾಲಿನ ಬಾವಿಗಳಲ್ಲಿ ವರ್ಷವರ್ಷಕ್ಕೆ ನೀರಿನೊಸರು ಕಡಿಯಾಗುತ್ತ ಬರುತ್ತಿದೆ. ಬಾವಿಯ ಹೂಳು ತೆಗೆದರೂ ನೀರು ಸಿಗದಂತಹ ಪರಿಸ್ಥಿತಿಯೇ ಹೆಚ್ಚು. ಅಂದರೆ, ನೀರಿನೊಸರು ಭೂಮಿಯಲ್ಲಿ ಆಳಕ್ಕೆ ಇಳಿಯುತ್ತಿದೆಯೆಂದು ಅರ್ಥ.

ಈ ರೀತಿ ಜಲಮಟ್ಟ ಅಡಿಗಡಿಗೆ ಹೋಗಲು ಕಾರಣವೇನು? ಹಳ್ಳಿಗರೂ ಶ್ರೀ ಸಾಮಾನ್ಯರೂ ಇದಕ್ಕೆ ಎರಡು ಮುಖ್ಯ ಕಾರಣಗಳನ್ನು ಮುಂದಿಡುತ್ತಾರೆ: ಮೊದಲನೆಯದಾಗಿ, ವರ್ಷವರ್ಷವೂ ಮಳೆ ಕಡಿಮೆಯಾಗಿ ಸೂರ್ಯನ ತಾಪನೇರುವುದರಿಂದ ಭೂಮಿಯ ತೇವ ನಷ್ಟವಾಗುತ್ತ ಬರುವುದು. ಎರಡನೆಯದಾಗಿ ಸಿಕ್ಕಸಿಕ್ಕೆಲ್ಲಿ ಪಂಪುಸೆಟ್ಟುಗಳು ಇರುವುದರಿಂದ ನೀರಿನ ಮಟ್ಟ ಇಳಿದುಹೋಗಿದೆ

ಮೊದಲನೆಯದರಲ್ಲಿ ಸತ್ಯಾಂಶವಿದೆಯೋ ಇಲ್ಲವೋ—ಅದು ಸಾರ್ವತ್ರಿಕ ಕಾರಣವೆನ್ನಲಾಗದು. ಕೆಲವೆಡೆ ಅನಾವೃಷ್ಟಿ ಬೇರೆ ಕೆಲವೆಡೆ ಅಲ್ಪವೃಷ್ಟಿಯಾದಂತೆಯೇ ಅತಿವೃಷ್ಟಿಯಾದುದೂ ಇದೆ. ಒಂದು ವೇಳೆ ಅಲ್ಪವೃಷ್ಟಿ—ಅನಾವೃಷ್ಟಿಗಳೇ ಗೋಚರವಾದರೂ ಇವನ್ನು ನಿವಾರಿಸುವುದು ಶ್ರೀಸಾಮಾನ್ಯನಿಗೆ ಅಸಾಧ್ಯ. ಕೃತಕ ಮೋಡಗಳನ್ನು ನಿರ್ಮಿಸಿ ಅವುಗಳಿಂದ ಮಳೆ ಸುರಿಸುವುದು ವಿಜ್ಞಾನದಿಂದ ಸಾಧ್ಯವೆನಿಸಿದರೂ ಇದು ಸಾರ್ವತ್ರಿಕ ಸಾಧ್ಯವಾಗುವುದಸಾಧ್ಯ.

ಎರಡನೆಯ ಕಾರಣದಲ್ಲಿ ಸತ್ಯಾಂಶವಿದೆಯೇ? ಇದಕ್ಕೆ ನಿಶ್ಚಿತವಾದ ಉತ್ತರವರಸಬೇಕಾದವರು ವಿಜ್ಞಾನಿಗಳು. ಮೂರು ಮೊಟರು ಚಚ್ಚೌಕಾಕಾರದ ಕೆರೆಯಲ್ಲಿ ಮೂರು ಮೊಟರ್ ಎತ್ತರ ನೀರು ಇದೆ. ಅದರಲ್ಲಿ ಇಪ್ಪತ್ತೈಳು ಫೀನ ಮೊಟರ್ ನೀರು ಇದ್ದಂತಾಯಿತು. ಇದೇ ನೀರನ್ನು ಮೊಗೆದು ಮೂವತ್ತು ಮೊಟರ್ ಚಚ್ಚೌಕಾಕಾರದ ಹೊಲದಲ್ಲಿ ಹರಿಯಬಿಟ್ಟರೆ ಅದರಲ್ಲಿ ಮೂರು ಸೆಂಟಿ ಮೊಟರ್ ಎತ್ತರಕ್ಕೆ ನೀರು ನಿಲ್ಲುವುದು. ಕೆರೆಯು ಕಾಲಿಯಾಗುತ್ತ ಬಂದಂತೆ ಭೂಮಿಯಿಂದ ಒಸರುವುದರಿಂದ ನೀರು ಕಡಿಮೆಯಾದರೂ ಕೆರೆ ತುಂಬುತ್ತದೆ.

ಹೇಗೆ ಭೂಮಿಯಡಿಯ ನೀರನ್ನೇ ಮೊಗೆಮೊಗೆದು ನಾವು ಮೇಲೆ ಚೆಲ್ಲದರೆ, ಆಗ, ಅಡಿಯ ನೀರಿನ ಮಟ್ಟವು ಇಳಿಯುತ್ತ ಬರುವುದು ಆಸ್ವಾಭಾವಿಕವಲ್ಲ. ಹೊಳೆ-ತೋಡುಗಳಿಗೆ ನೂರುಗಟ್ಟಲೆಯ ಪಂಪುಗಳನ್ನು ಜೋಡಿಸಿರುವುದರಿಂದಲೇ ಹೊಳೆಯ ನೀರು ಇತ್ತ ಹೋಗಿದೆ; ತತ್ಪರಿಣಾಮದಿಂದ ಬಯಲು ಬದಿಯ ಬಾವಿಕೆರೆಗಳೂ ಆರಿಹೋಗಿವೆ. ಭೂಮಿಯ ಜಲಮಟ್ಟಕ್ಕೂ ಆಳವಿರುವೆಡೆ ಮಾತ್ರ ನೀರು ಸಿಗುವಂತಿದೆ. ಆ ಗುಡ್ಡಸಾಲುಗಳ ಬಾವಿ ಕೆರೆಗಳಿಗೆ ಪಂಪು ಜೋಡಿಸಿರುವುದು ಕಡಿಮೆಯಾದರೂ ಭೂಮಿಯ ಜಲಮಟ್ಟವೇ ಅಡಿಗಡಿಗೆ ಹೋಗಿರುವುದರಿಂದ ಇವುಗಳಲ್ಲೂ ನೀರು ಕಡಿಮೆಯಾಗುವುದು ಸಹಜ. ಗುಡ್ಡದಿಂದ ಬಯಲಿಗೆ ಹರಿಯುವುದು ನೀರಿನ ಸಹಜ ಗುಣ. ಆದುದರಿಂದ. ಗುಡ್ಡ ಮತ್ತು ಬಯಲುಗಳ ನಡುವೆ ಭೂಮಿಯ ಜಲಮಟ್ಟ ಇಳುಕಳಾಗಿರುತ್ತದೆ. ಇದರಿಂದಾಗಿ ಬಾವಿಕೆರೆಗಳಲ್ಲಿ ನೀರಿನ ಅಭಾವ ಸಹಜ.

ಇದೇ ರೀತಿ ಭೂಮಿಯ ಜಲಮಟ್ಟ ಇಳಿಯುತ್ತ ಹೋದರೆ, ಈಗಿರುವ ಎಲ್ಲ ಬಾವಿಗಳೂ ನಿರುಪಯೋಗಿಯಾಗುವುದು ಅಸಂಭವವಲ್ಲ. ನಗರ ಪ್ರದೇಶಗಳಿಗೆ ನೀರಿರುವ ಹೊಳೆ-ನದಿಗಳಿಂದ ನೀರು ಸರಬರಾಜು ಮಾಡಬಹುದಾದರೂ ಗ್ರಾಮೀಣ ಪ್ರದೇಶಗಳಿಗೆ ಸಂಕಟ ತಪ್ಪಿದ್ದಲ್ಲ. ಹೊಳೆಗಳೂ ಹೂಳು ಬಿದ್ದಿರುವುದರಿಂದ, ಅವುಗ

ಯುವುದರ ಬಗ್ಗೆ ಈ ಸಂಸ್ಥೆ ಕ್ರಮಕೈಗೊಳ್ಳುವುದು.

ಮಾಡರನ್ ಬೇಕರೀಸ್:

ಮಾಡರನ್ ಬೇಕರೀಸ್ ಸಂಸ್ಥೆಯ ವಿಭಾಗಗಳನ್ನು ಈಗ ದೇಶದ ಬೇರೆ ಬೇರೆ ಕಡೆಗಳಲ್ಲಿ ಸ್ಥಾಪಿಸಲಾಗಿದೆ. ಸದ್ಯದಲ್ಲಿ ಅಹಮ್ಮದಾಬಾದ್, ಮುಂಬೈ, ದೆಹಲಿ, ಎರ್ನಾಕುಲಂ, ಮದರಾಸು, ಕಾನಪುರ, ಹೈದರಾಬಾದ್, ಕಲ್ಕತ್ತಾ, ಮತ್ತು ಬೆಂಗಳೂರುಗಳಲ್ಲಿ ಈ ವಿಭಾಗಗಳು 'ಬ್ರೆಡ್' ತಯಾರಿಕೆಯಲ್ಲಿ ತೊಡಗಿವೆ.

ಇಂಡಿಯನ್ ಡೈರಿ ಕಾರ್ಪೊರೇಷನ್

ಇದು ಇತ್ತೀಚೆಗೆ ರೂಪಗೊಂಡಿರುವ ಸರ್ಕಾರಿ ಯೋಜನೆ ವಿಶ್ವ ಆಹಾರ ಕಾರ್ಯಯೋಜನೆ ಸಂಸ್ಥೆಯವರು ಭಾರತ ಸರ್ಕಾರಕ್ಕೆ 55. ೯6 ದಶಲಕ್ಷ ಡಾಲರ್ ಗಳಷ್ಟು ಬೆಲೆಯಾಗುವ ಕೆನೆತೆಗೆದ ಹಾಲು ಮತ್ತು ಬೆಣ್ಣೆ ಎಣ್ಣೆಯನ್ನು ಒದಗಿಸುವುದು. ಪ್ರಾರಂಭದಲ್ಲಿ ಮುಂಬೈ, ಕಲ್ಕತ್ತಾ, ದೆಹಲಿ, ಮತ್ತು ಮದರಾಸುಗಳಲ್ಲಿ ಈ ಕಾರ್ಪೊರೇಷನ್ ಸೌಲಭ್ಯಗಳನ್ನು ಒದಗಿಸಿಕೊಡಲಾಯಿತು. ದೇಶದ ಗ್ರಾಮಾಂತರ ಪ್ರದೇಶದ ಜನತೆ, ದುರ್ಬಲ ಜನತೆ ಶಾಲಾ ಮಕ್ಕಳು ಇವರಿಗೂ ಈ ಯೋಜನೆಯ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ.

"ರಾಷ್ಟ್ರದ ಬೆನ್ನುಮೂಳೆಯಂತಿರುವ ರೈತರ ಇತ್ಯೋಪತಿಶಯಾಭಿವೃದ್ಧಿಗೆ, ಆರ್ಥಿಕ ಸಹಾಯವನ್ನು ಒದಗಿಸುವ ಸಹಕಾರಿ ಕ್ಷೇತ್ರದಲ್ಲಿ ಪ್ರಗತಿಪಥದಲ್ಲಿ ಸಾಗುತ್ತಿರುವ ಜಿಲ್ಲಾ ಮಟ್ಟದಲ್ಲಿರುವ ಏಕೈಕ ಸಂಸ್ಥೆ.....ಅದೇ

"ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರೀ ಬ್ಯಾಂಕ್" ಲಿಮಿಟೆಡ್

ಮಂಗಳೂರು - 3.

ಇದರ ಆಡಳಿತದಲ್ಲಿರುವ ಸುಸಜ್ಜಿತ ಸಹಕಾರಿ ವಿಶ್ರಾಂತಿ ಗೃಹದಲ್ಲಿ ಕಡಿಮೆ ದರದಲ್ಲಿ ಬಾಡಿಗೆಗೆ ಕೊಠಡಿಗಳಿವೆ.

ಠೇವಣಾತಿಗಳ ಮೇಲೆ ಹೆಚ್ಚಿನ ಬಡ್ಡಿಯನ್ನು ಕೊಡುವ ಸಂಸ್ಥೆ.

ಬಿ. ನಾರಾಯಣ ನಾಯಕ್, ಅಧ್ಯಕ್ಷ. | ಶ್ರೀ ಪ್ರಭಾಕರ ರಾವ್, ಎಂ. ಎ., ಬಿ. ಎಲ್., ಉಪಾಧ್ಯಕ್ಷ. | ಶ್ರೀ ಎಸ್. ವೆಂಕಪ್ಪ ರೈ, ಹೆಚ್. ಡಿ. ಸಿ, ಕಾರ್ಯದರ್ಶಿ.

ಅಭಿವೃದ್ಧಿಶೀಲ ರಾಷ್ಟ್ರಗಳು ವಿಷಮ ವಾಣಿಜ್ಯ ಸಮತೋಲವನ್ನು ಎದುರಿಸುತ್ತಿರುವ ದುರ್ಭರ ಪ್ರಸಂಗದಲ್ಲಿ ರಫ್ತು ವ್ಯಾಪಾರದ ಮಹತ್ವವನ್ನು ಒತ್ತಿ ಹೇಳಬೇಕಿಲ್ಲ. ದೇಶದ ಅಭಿವೃದ್ಧಿ ಕಾರ್ಯದಲ್ಲಿ ವಿಸ್ತೃತ ವಾಣಿಜ್ಯ ಶಕ್ತಿಯುತ ಅಂಶ. ಒಟ್ಟು ರಾಷ್ಟ್ರೀಯ ಉತ್ಪನ್ನ ಮತ್ತು ರಫ್ತು ವ್ಯಾಪಾರದಲ್ಲಿ ಹೆಚ್ಚಳ—ಈ ಉಭಯ ಸಂಗತಿಗಳೂ ಜತೆಜತೆಯಾಗಿಯೇ ನೆರವೇರಿದ ವಿಷಯವನ್ನು ಅನೇಕ ದೇಶಗಳ ಚರಿತ್ರೆಯಲ್ಲಿ ಸಹಜವಾಗಿ ಗುರುತಿಸಬಹುದಾಗಿದೆ. ನಮ್ಮ ಚತುರ್ಥ ಪಂಚವಾರ್ಷಿಕ ಯೋಜನೆಯಲ್ಲಿ ವರ್ಷಕ್ಕೆ ಶೇಕಡ ಏಳರಷ್ಟು ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತ ಹೋಗಬೇಕೆಂದು ಯೋಜಿಸಲಾಗಿದೆ. ೧೯೭೩-೭೪ ಸಾಲಿಗೆ ನಮ್ಮ ರಫ್ತು ವ್ಯಾಪಾರವು ಸುಮಾರು ೧೯೦೦ ಕೋಟಿ ರೂ.ಗಳಷ್ಟಾಗಬೇಕೆಂದು ನಿರ್ಧರಿಸಲಾಗಿದೆ.

ಉತ್ಪಾದಕ ಘಟಕಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸಿ, ವಿದೇಶಗಳ ಬೇಡಿಕೆಗಳಿಗೆ ಅನುಗುಣವಾಗಿ ಉತ್ಪಾದನಾ ಮಾದರಿಯನ್ನು ಆಳವಡಿಸಿಕೊಂಡು, ತ

ಳ್ಳಲಿ ಸಂಗ್ರಹವಾದ ನೀರಿನ ಪ್ರಮಾಣವೂ ಈಗ ಕಡಿಮೆಯಾಗುತ್ತ ಬಂದಿದೆ.

ಹಸುರುಕ್ರಾಂತಿಯೇನೋ ಸದ್ಯ ಸಫಲವಾಯಿತು. ಆದರೆ, ಅದು ಹೊಸ ಸಮಸ್ಯೆಗಳಿಗೆ ನಾಂದಿಯೂ ಆಯಿತು. ಕೆರೆ, ಹೊಳೆಗಳಲ್ಲಿ ನೀರೇ ದೊರೆಯದೆ ಹೋದರೆ, ಪಂಪುಸೆಟ್ಟುಗಳು ಏನು ಮಾಡಿಯಾವು? ಮುನ್ನಡೆಯುತ್ತಿರುವ ಹಸುರು ಕ್ರಾಂತಿ ಅವಶ್ಯ ಮುಗ್ಗರಿಸಲೇ ಬೇಕು. ಅದಕ್ಕಾಗಿ ಭೂಮಿಯಲ್ಲಿನ ಜಲಮಟ್ಟವನ್ನು ಇಳಿಸುವುದನ್ನು ತಡೆಗಟ್ಟಬೇಕು; ಅದನ್ನು ಏರಿಕೆಯಲ್ಲಿರುವಂತೆ ಮಾಡಬೇಕು. ಹೀಗೆ ಮಾಡದೆ ಹೋದರೆ, ಜನ-ಜನನಗಳು ನೀರಿನ ಅಭಾವವನ್ನೂ, ಬಸಿಲ ತಾಪವನ್ನೂ ಅನುಭವಿಸಬೇಕಾಗುವುದು ಅನಿವಾರ್ಯ. ಈಗಾಗಲೇ ೫೦-೬೦ ಅಡಿ ಆಳದ ಬಾವಿಗಳೂ ಆರಿಹೋಗಿರುವಾಗ, ಇನ್ನೂ ಆಳದ ಬಾವಿಗಳನ್ನು ತೋಡಿಸಬಹುದಾದರೂ ಅವುಗಳಿಂದ ನೀರು ಸೇದುವುದೇ ಒಂದು ಸಾಹಸ.

ಈ ಪ್ರಶ್ನೆಯನ್ನು ವೈಜ್ಞಾನಿಕವಾಗಿ ಪರಿಶೀಲಿಸುವ, ವಾಸ್ತವಾಂಶಗಳಿದ್ದರೆ, ಅವುಗಳನ್ನು ಸರಿಪಡಿಸುವತ್ತ ನಮ್ಮ ತೀವ್ರ ಗಮನ ಹರಿಯಬೇಕು. ಆಹಾರವನ್ನು ಆಮೇರಿಕೆಯಿಂದಾದರೂ ತರಿಸಬಹುದು; ನೀರನ್ನು ಎಲ್ಲಿಂದ ಆಮದು ಮಾಡಬಹುದು? ಸಮುದ್ರದ ನೀರನ್ನು ಬಳಕೆಗೆ ಯೋಗ್ಯವನ್ನಾಗಿ ಮಾಡುವ ಸಾಹಸದಲ್ಲಿ ಸೋವಿಯತ್ತು ಯಶಗಳಿಸಿದೆ. ಆದರೆ, ಅದಕ್ಕೆ ತಗಲಿರುವ ವೆಚ್ಚವನ್ನು ನಾವೆಂದೂ ಬರಿಸಲಾರೆವು. ಒಂದು ವೇಳೆ ಬರಿಸಿದರೂ ಅದರಿಂದ ಇನ್ನೂ ಹೊಸ ಪ್ರಶ್ನೆಗಳೇಳುವುವು. ಸಮುದ್ರದ ಮೇಲೆ ಏಕಸಾಮ್ಯವಿಲ್ಲ.

ಹಸುರು ಕ್ರಾಂತಿಯ ಉದ್ದೂರಿಯ ಮೆರವಣಿಗೆಯ ನಡುವೆಯೆ ಈ ಆಪಸ್ವರ ಅನಪೇಕ್ಷಣೀಯವಾದರೂ ಅನಿವಾರ್ಯ.

—ಗೋರಾ.

ಚತುರ್ಥ ಯೋಜನೆಯಲ್ಲಿ

ರಫ್ತು ವ್ಯಾಪಾರಾಭಿಮುಖ ಕೈಗಾರಿಕೆಗಳಿಗೆ ಹೆಚ್ಚಿನ ಅವಕಾಶ

ಲೇಖಕರು : ಶ್ರೀ ವಿ. ಸಿ. ಬ್ಯಾನರ್ಜಿ.

ಯಾರಾಗುವ ವಸ್ತುಗಳ ಗುಣಮಟ್ಟವನ್ನು ಹೆಚ್ಚಿಸಿ, ಉತ್ಪಾದನಾ ವೆಚ್ಚವನ್ನು ತಗ್ಗಿಸಿ, ಆಂತರಿಕ ಬಳಕೆಯನ್ನು ಕಡಿಮೆ ಮಾಡಿ, ಮಾರುಕಟ್ಟೆಯ ನೆರವನ್ನು ನೀಡಿ, ದೀರ್ಘಾವಧಿಯ ರಫ್ತುಪತ್ತನ್ನು ಒದಗಿಸಿ ದೇಶದ ರಫ್ತು ವ್ಯಾಪಾರ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಬೇಕೆಂದು ವಿವರಿಸಲಾಗಿದೆ.

ದೇಶದ ಕೈಗಾರಿಕಾ ಮತ್ತು ಕೃಷಿ ರಂಗದ ಒಟ್ಟು ಉತ್ಪತ್ತಿಗಳಲ್ಲಿ ರಫ್ತಾಗುವ ವಸ್ತುಗಳು ತೀರ ಅತ್ಯಲ್ಪ. ಹಂಗಾಗಿ ಆರ್ಥಿಕ ವ್ಯವಸ್ಥೆಯ ತೀರ ಚಿಕ್ಕ ಘಟಕಗಳನ್ನೂ ಬಲಪಡಿಸುವದು ಅವಶ್ಯ ಎಂಬುದನ್ನು ಯೋಜಕರೂ ಉದ್ಯಮ ನಾಹಸಿಗಳೂ ಪರಾಂಬರಿಸ ಬೇಕು. ಧ್ಯೇಯ ಸಾಧನೆಗೆ ಬೇಕಾದ ಸಂಪನ್ಮೂಲಗಳು ವಿರಲವಾಗಿರುವುದರಿಂದ ರಫ್ತು ವ್ಯಾಪಾರವ ಯೋಗ್ಯತೆಯುಳ್ಳ ದೇಶದ ಉತ್ಪಾದನಾ ಘಟಕಗಳ ಅಭಿವೃದ್ಧಿಗೆ ಆದ್ಯತೆಯನ್ನಿತ್ತು ನೆರವಾಗಬೇಕು.

ಪೋಷಕ ಅಂಶಗಳು

ರಫ್ತು ವ್ಯಾಪಾರದ ಉತ್ಪನ್ನಗಳಿಗೆ ಸಂಬಂಧಿಸಿದ ಪೋಷಕ ವಸ್ತುಗಳಿಗೆ ಹೆಚ್ಚು ಬಂಡವಾಳ ಬೇಕು ಮತ್ತು ಬಂಡವಾಳದ ಫಲ ದೊರೆಯಲು ಕಾಲ ಹಿಡಿಯುವದು. ಮಾರುಕಟ್ಟೆಯ ಸಂಶೋಧನೆ ಮತ್ತು ಅವುಗಳ ಅಭಿವೃದ್ಧಿ, ಮತ್ತು ವ್ಯಾಪಾರ ವಿಕಾಸದ ಕಾರ್ಯ ಮೊದಲಾದ ಸಂಗತಿಗಳಿಂದ ಯೋಗ್ಯ ವಸ್ತುವೊಂದರ ರಫ್ತು ವ್ಯಾಪಾರವನ್ನು ಕುದುರಿಸಲು ಸಾಧ್ಯ. ರಫ್ತು ವ್ಯಾಪಾರಕ್ಕೆಂದು ಉತ್ತಮ ಗುಣದ ಯೋಗ್ಯ ವಸ್ತುಗಳ ಉತ್ಪಾದನೆಗೆ ಘಟಕಗಳ ಉತ್ಪಾದನಾ ಸಾಮರ್ಥ್ಯ, ಕಚ್ಚಾ ವಸ್ತುಗಳ ನಿರಾತಂಕದ ಸರಬರಾಜು, ಸಂಶೋಧನೆ ಮತ್ತು ಅಭಿವೃದ್ಧಿ, ವೆಚ್ಚ ಕಡಿಮೆ ಮಾಡಬಲ್ಲ ಆಧುನಿಕ ಯಂತ್ರೋಪಕರಣಗಳ ಬಳಕೆ—ಇನ್ನೆಲ್ಲವನ್ನು ಸಾಧಿಸಬೇಕು. ಇದಕ್ಕೆ ಕಾಲಾವಕಾಶವೂ ಬೇಕು. ಕಾರ್ಯಕ್ರಮದ ಮೌಲ್ಯ ನಿರ್ಣಯ ಕೈಗೊಂಡು ಸಂಶೋಧನೆಯ ತಂತ್ರಗಳನ್ನು ಅನುಸರಿಸಿ, ಯೋಗ್ಯ ನೇಮಕಯಲ್ಲಿ ರಫ್ತು ವಸ್ತುವು ಮಾರಾಟಕ್ಕೆ ದೊರೆಯುವಂತೆ ಪ್ರಯತ್ನಿಸಬೇಕು. ಆಮದು ಮಾಡಿಕೊಂಡ ಕಚ್ಚಾ ಮಾಲು ಮತ್ತು ಬಿಡಿ ಭಾಗಗಳಿಗೆ ಸಂಬಂಧಿಸಿದ ಧೋರಣೆ, ದೇಶದಲ್ಲಿಯೆ ದೊರೆವ ಕಚ್ಚಾ ಮಾಲನ್ನು ಆದ್ಯತೆಯಂತೆ ಸರಬರಾಜು ಮಾಡುವದು, ವಿಶೇಷವಾಗಿ ಉಕ್ಕು ಮತ್ತು ಕಬ್ಬಿಣಗಳನ್ನು ಆಂತಾರಾಷ್ಟ್ರೀಯ ಬೆಲೆಮಟ್ಟದಲ್ಲಿ ಪೂರೈಸುವರು. ಕಾರ್ಖಾನೆಗಳ ವಿಸ್ತಾರಕ್ಕೆ ಅವಶ್ಯವಿರುವ ಬಂಡವಾಳ ಸರಕುಗಳಿಗೆ ಬೇಕಾದ ವಿದೇಶಿ ವಿನಿಮಯ, ಕಾರ್ಖಾನೆಗಳ ನವೀಕರಣ, ರಫ್ತು ವ್ಯಾಪಾರದ ಕೆಲವು ಆಯ್ದ ವಸ್ತುಗಳಿಗೆ ಹಣಕಾಸಿನ ನಿಗದಿ ನೆರವು ಮುಂತಾದ ಅಂಶಗಳನ್ನು ರಫ್ತುವ್ಯಾಪಾರ ಧೋರಣೆಯನ್ನು ರೂಪಿಸುವಾಗ ಗಮನದಲ್ಲಿಟ್ಟುಕೊಳ್ಳಬೇಕು. ನಮ್ಮ ವಿದೇಶಿ ವಾಣಿಜ್ಯ ಮಂತ್ರಿಶಾಖೆಯು ಇದರ ಬಗ್ಗೆ ವಿಶೇಷ ಲಕ್ಷ್ಯ ವಹಿಸಿದೆ. ಚತುರ್ಥ ಯೋಜನೆಯಲ್ಲಿ ವಿದೇಶಿ ವಾಣಿಜ್ಯದ ಬಗ್ಗೆ ಅನುಸರಿಸಬೇಕಾದ ಸ್ಥಿರಧೋರಣೆಯನ್ನು ರೂಪಿಸಲು ಶ್ರದ್ಧಾಪೂರ್ವಕ ಪ್ರಯತ್ನಿಸುತ್ತಿದೆ. ರಫ್ತು ವ್ಯಾಪಾರ ಅಭಿವೃದ್ಧಿ ಮಂಡಳಿ, ರಫ್ತು ವ್ಯಾಪಾರ ಭವನಗಳು ಮತ್ತು ಇತರ ಮಾನ್ಯತೆ ಪಡೆದ ರಫ್ತು ವ್ಯಾಪಾರದ ಸಂಘಸಂಸ್ಥೆಗಳ ನೆರವಿನೊಡನೆ, ರಫ್ತು ವ್ಯಾಪಾರ ಸಾಮರ್ಥ್ಯದ ಘಟಕಗಳ ಉತ್ಪಾದನೆಯ ಬಗ್ಗೆ ವಿಶೇಷ ಗಮನ ಕೊಡಲಾಗುತ್ತಿದೆ.

ಧೋರಣೆಯ ಮುಖ್ಯಾಂಶಗಳು

ದೇಶದ ರಫ್ತು ವ್ಯಾಪಾರದ ಉತ್ತೇಜನಕ್ಕೆಂದು ಸರಕಾರ ಇತ್ತೀಚೆಗೆ ಅನೇಕ ಪ್ರೋತ್ಸಾಹದಾಯಕ ಕಾರ್ಯಕ್ರಮಗಳನ್ನು ಘೋಷಿಸಿದೆ. ದೇಶದ ಆಂತರಿಕ ಮಾರುಕಟ್ಟೆಯಲ್ಲಿ ವಿಶೇಷ ಸ್ಥಾನಗಳಿಸಿ, ರಫ್ತು ವ್ಯಾಪಾರದ ಸಾಮರ್ಥ್ಯ ತೋರಿಸಿದ ಉದ್ಯಮಿಗಳಿಗೆ ಸೌಲಭ್ಯಗಳನ್ನು ನೀಡಲಾಗುವದು. ರಫ್ತು ವ್ಯಾಪಾರದಲ್ಲಿ ತೊಡಗಿದವರಿಗೆಂದು ಸೇವಾ ಘಟಕವೊಂದನ್ನು ಸೃಜಿಸಲಾಗಿದೆ. ಈ ಘಟಕವು ರಫ್ತು ವ್ಯಾಪಾರ ಸಾಮರ್ಥ್ಯದ ಕಾರ್ಖಾನೆಗಳನ್ನು ಗೊತ್ತುಪಡಿಸಿ ಅವುಗಳನ್ನು ಬಲಪಡಿಸಲು ಯತ್ನಿಸುವದು. ರಫ್ತು ವ್ಯಾಪಾರಕ್ಕೆ ಬೇಕಾದ ಗುರಿಯನ್ನು ನಿರ್ಧರಿಸಿ, ಅದಕ್ಕೆ ಬೇಕಾದ ತಾಂತ್ರಿಕ ಸಲಹೆಯನ್ನು ಈ ಘಟಕವು ನೀಡುವದು. ಸರಕಾರ ಇಂತಹ ಕಾರ್ಖಾನೆಗಳೊಂದಿಗೆ ಸದಾ ವಿಚಾರ ವಿನಿಮಯ ಮಾಡುವದು.

ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ವಿಸ್ತರಿಸಲು ಸಾಧ್ಯವಾಗದೇ ಬಳಲುತ್ತಿರುವ ಕೈಗಾರಿಕೆಗಳಿಗೆ ಆದ್ಯತೆಯ ವಿಸ್ತೀರ್ಣ ಸೌಕರ್ಯಗಳನ್ನು ನೀಡಿದಾಗ ಅವು ರಫ್ತು ವ್ಯಾಪಾರ ಯೋಗ್ಯ ವಸ್ತುಗಳನ್ನು ಹೆಚ್ಚು ನಿರ್ಮಿಸಿ ವಿದೇಶಗಳಿಗೆ ಕಳುಹಿಸಬಹುದು ಮತ್ತು ಆಂತರಿಕ ಪೇಟೆಯಲ್ಲಿ ಹೆಚ್ಚು ರಭಸದಿಂದ ತಮ್ಮ ವಸ್ತುಗಳನ್ನು ಮುನ್ನುಗ್ಗಿಸ ಬಲ್ಲವು.

ಕೇವಲ ವಿದೇಶಿ ಮಾರುಕಟ್ಟೆಯ ಲಭ್ಯತೆ ಆಥವಾ ಆಕರ್ಷಣೆಯಿಂದಾಗಿ ಉದ್ಯಮ ನಾಹಸಿ ತನ್ನ ಕಾರ್ಯಾರಂಭ ಮಾಡುವಂತಿಲ್ಲ. ಕಾರ್ಖಾನೆಯ ಸ್ಥಾಪನೆಗೆ ಅಥವಾ ಇದ್ದ ಕಾರ್ಖಾನೆಗಳ ವಿಸ್ತರಣೆಗೆ ಎಲ್ಲ ಸಲಕರಣೆಗಳು ಬೇಕು. ಉಕ್ಕು ಮತ್ತು ಕಬ್ಬಿಣದ ಕೊರತೆ ವಿಶೇಷವಾಗಿ ಕೇಳಿಬರುತ್ತಿರುವ ಮಾತು. ಸರಕಾರಕ್ಕೆ ಈ ಕೊರತೆಯ ಅರಿವು ಇದೆ. ರಫ್ತು ವ್ಯಾಪಾರದಲ್ಲಿ ತೊಡಗಿದ ಕಾರ್ಖಾನೆಗಳಿಗಾಗಿ ಕಚ್ಚಾಮಾಲನ್ನು ಒದಗಿಸಲು 'ಕಚ್ಚಾ ಮಾಲು ನಿಧಿ'ಯನ್ನು ಸ್ಥಾಪಿಸುವ ಬಗ್ಗೆ ಯೋಜನೆಯೊಂದನ್ನು ಆಖೈರಾಗಿ ಸಿದ್ಧಪಡಿಸಲಾಗುತ್ತಿದೆ.

ನೈತಿಕ ಕಾರ್ಯಕ್ಕೆ ನೈತಿಕ ಬೆಲೆಯನ್ನೇ ಕಟ್ಟಬೇಕು. ಅರ್ಥಿಕ ಬೆಲೆಯನ್ನು ಕಟ್ಟಲು ಬರಲಾರದು.

With Best Compliments from :

HOTEL-KEERTHI-MAHAL

(High class Veg. Boarding & Restaurant)

B. H. E. L. TOWNSHIP

P. O. RAMACHANDRAPURAM

HYDERABAD - 32

Phone No : 39291

ಸೂರ್ಯದೇವ

ಕತ್ತಲೆಯ ಹರಿದು ಉದಯ ಕಿರಣವ ಬೀರಿ
ಜಗವ ನಿತ್ಯ ಬೆಳಗುವ ಜಗಜ್ಯೋತಿಗೆ ನಮೋ ನಮೋ |
ನೀನು ಬರುವ ಮುನ್ನ ಮೊಗ್ಗೆ ಎಲ್ಲ ಅರಳಿ ನಿಂತು
ಗಾಳಿಯೊಡನೆ ಸರಸವಾಡಿ ಸುವಾಸನೆ ಬೀರುತಿದೆ ನಿನ್ನ ಸ್ವಾಗತಕೆಂದು |

ಕಾಗೆ ಕೋಕಿಲೆ ಎಲ್ಲ ಉದಯರಾಗದಿ ಬಂದು
ಸ್ವಾಗತವ ಹಾಡುವವು ಮರದ ಕೊಂಬೆಗಳಲ್ಲಿ
ನೀ ಕೆಂಪು ಬಣ್ಣದಿ ಬಂದು ಶಾಂತಿ ಪ್ರಭೆಯನು ಬೀರಿ
ಏರುತೇರುತ ಬರುವ ನಿನ್ನ ಅಮರ ಪ್ರಭೆಯನು ಕಂಡು
ಮಾನವರು ನಮಿಸುವರು ಜಗವ ರಕ್ಷಿಸು ಎಂದು |

ಪೂರ್ವದಿಂದಲಿ ಏರಿ ಪಶ್ಚಿಮಕೆ ಇಳಿದಾಗ
ಕತ್ತಲೆಯ ಕಂಡು ಮಂಗಲವ ಹಾಡುತಲಿ
ಮತ್ತೆ ಬಾ ಎಂದು ಹಾರುವವು ಹಕ್ಕಿಗಳ ಹಿಂಡು |

—ಕರಸುಳ್ಳಿ ಪರಮೇಶ್ವರ ಶರ್ಮಾ

ಹೋಳಿ ನೃತ್ಯದ ಬಾಲೆ

ಕಣ್ಗೆ ಹಬ್ಬವ ಮಾಡುತಿಹ ಕನ್ನೆ ಕಮಲಮುಖಿ
ಹೋಳಿ ನೃತ್ಯದಿ ನಿರತಳಾಗಿರುವಳು
ಎಡಗೈಲಿ ನೀರ್ಗೊಳವಿಯನ್ನು ಪಿಡಿದು ನಿಂತಿರಲು
ಸಖಿಯೋಕುಳಿಯನದಕೆ ತುಂಬುತಿಹಳು
॥ ೧ ॥

ಬಲಭಾಗದಲಿ ನಿಂತ ಸಖಿಯೋರ್ವಳೋ ಕುಳಿಯ
ನೀರುತುಂಬಿದ ಪಾತ್ರೆಯನು ಕೊಡುವಳು
ನಡುವೆ ನಿಂತಿಹ ಬಾಲೆ ಬಣ್ಣಬಣ್ಣದ ನೀರ
ನೀರ್ಗೊಳವಿಯನ್ನೊತ್ತುತಲಿ ಬಿಡುವಳು
॥ ೨ ॥

ಹೋಳಿಹಬ್ಬದ ಲೀಲೆಯಲಿ ನಿರತಳಾಗಿರ್ಪ
ಬಾಲೆಯೋಕುಳಿಯಾಟವನು ಕಂಡರೆ
ನೋಳ್ಪ ರಸಿಕರ ಮೇಲಕೋಕುಳಿಯ ನೆರಚುವಳೊ
ಎಂಬಂತೆ ತೋರುವುದು, ಬಳಿ ನಿಂತರೆ
॥ ೩ ॥

ಹಬ್ಬದುತ್ಸಾಹ ಮುಗುದೆಯ ಮೊಗದಿ ಕಾಣುತಿದೆ
ಮನಸೆಳೆಯುತಿರ್ಪುದೋಕುಳಿಯಾಟವು
ರಸಿಕರಿಗೆ ಮೇಣ್ ಕಲಾಭಿಜ್ಞರಿಗೆ ರಸದೂಟ
ವಾಗಿಹುದು ಹೋಳಿನೃತ್ಯದ ನೋಟವು
॥ ೪ ॥

ನಾಲ್ಕು ಪುರುಷಾರ್ಥಗಳು

ನಮ್ಮಲ್ಲಿ ಧರ್ಮ, ಅರ್ಥ, ಕಾಮ ಮತ್ತು ಜ್ಞಾನ ಇವು ನಾಲ್ಕು ಪುರುಷಾರ್ಥಗಳೆಂದು ತಿಳಿಯಲ್ಪಡುತ್ತಿವೆ. ಮೋಕ್ಷವೆನ್ನುವದು ಪುರುಷಾರ್ಥವಲ್ಲ. ಅದು ಜ್ಞಾನದಿಂದ ದೊರೆಯುವ ಪರಿಣಾಮ ಮಾತ್ರ.

ಕಾಮ, ಅರ್ಥ, ಧರ್ಮ ಮತ್ತು ಜ್ಞಾನ ಎನ್ನುವದೇ ಸ್ವಾಭಾವಿಕ ಕ್ರಮ.

ಎಲ್ಲಕ್ಕೂ ಮೊದಲು ಕಾಮ ಅರ್ಥಾರ್ತ ಇಚ್ಛೆ ಆಗುತ್ತದೆ ಉದಾಃ– ಬಾಲಕ ಹುಟ್ಟುತ್ತಲೇ ಹಾಲು ಕುಡಿಯುವ ಇಚ್ಛೆ ಆಗುತ್ತದೆ. ಅದನ್ನು ತೃಪ್ತಪಡಿಸಲಿಕ್ಕೆ ಅರ್ಥ ಆರ್ಥಾರ್ತ ಹಾಲು ಬೇಕು! ತಾಯಿ ಮೊಲೆ ಕುಡಿಸುತ್ತಲೇ ಮಗುವಿನ ಕಾಮನೆ ಪೂರ್ತಿಯಾಗುತ್ತದೆ!

ಕಾಮನೆಯನ್ನು ಪೂರ್ಣಗೊಳಿಸುವದೆಂದರೆಯೇ ಅರ್ಥ! ದುಡ್ಡು ನಿಜವಾದ ಅರ್ಥ ಅಲ್ಲ. ನನಗೆ ನೀರಡಿಕೆಯಾದಾಗ ನೀರುದೊರೆತರೆಯೇ ಅರ್ಥ ಸಿಕ್ಕಂತಾಯಿತು!

ಅರ್ಥದಿಂದ ಕಾಮನೆ ತೃಪ್ತವಾಗುತ್ತಿರದಿದ್ದರೆ ಅದು ಅರ್ಥವೇ ಅಲ್ಲ. ಅನರ್ಥ ಮಾತ್ರ. ಇಂದಾದರೋ ದುಡ್ಡು ಅನರ್ಥವಾಗಿದೆ. ಎಷ್ಟೇ ದುಡ್ಡುಗಳಿಸಿದರೂ ನಮಗೆ ತೃಪ್ತಿಯೇ ಆಗುವದಿಲ್ಲ! ದುಡ್ಡು ಕೂಡಿಸಿದಷ್ಟೂ ಕಾಮನೆಯೂ ಹೆಚ್ಚುತ್ತ ಹೋಗುತ್ತದೆ! ಹೀಗಾಗಿ ದುಡ್ಡು ಗಳಿಸಿ ತೃಪ್ತನಾಗ ಬಯಸುವಾತ ಅನ್ಯರನ್ನು ಸುಲಿದಾನು, ಅಧರ್ಮ ಆಚರಿಸಿಯಾನು. ಮತ್ತು ಅಷ್ಟೆಲ್ಲ ಮಾಡಿಯೂ ಕೊನೆಗೂ ಅತೃಪ್ತನಾಗಿಯೇ ಉಳಿದಾನು.

ಅಗಣಿತ ಪ್ರೇಕ್ಷಕರ ಬಗೆಗೊಳಿಪುದೀ ಹೋಳಿ–
ನೃತ್ಯಮತ್ಯಂತಮಾಮೋದಜನಕಂ
ಮಿಗಿಲಾದ ಸೌಂದರ್ಯಮಧಿಕತರ ಮಾಧುರ್ಯ
ಮಚ್ಚಳಿಯದೆಸೆಯುತಿಹುದಿಂದುತನಕಂ
॥ ೫ ॥

ಕಲ್ಪನಾತೀತಮಾಗಿರ್ಪ ವಿಲ್ಪಾಕೃತಿಯ
ನೋಡುತಲಿ ಕಣ್ಗೆ ಹಬ್ಬವನು ಮಾಡು
ಬೇಲೂರ ಚೆನ್ನಕೇಶವರಾಯನೋಲಗದ
ಹೋಳಿನೃತ್ಯದ ಬಾಲೆ ಇವಳೆ. ನೋಡು!
॥ ೬ ॥

—ಕಾವ್ಯಾರಾಧಕ

ಮಿಶ ಕುಟುಂಬ ಯೋಜನೆಗೆ

ಮಿತ ಸಂತತಿ

ಬೆಲೆ 0–75 ಪೈಸೆ ಮಾತ್ರ.

ನವಭಾರತ ಪುಸ್ತಕ ಭಂಡಾರ.

ಪಾಲುಕೋಟಿ, ಉಡುಪಿ, ದ. ಕ.

With best compliments from:

EROS PHARMA

61, INDUSTRIAL AREA,

RAJAJINAGAR,

BANGALORE-10

Manufacturers of

Ethical Pharmaceuticals

ESTD. 1939

SRI RAMA COFFEE WORKS

BEST IN FLAVOUR & PURE IN QUALITY

SRI RAMA COFFEE WORKS

POOL SALE DEALERS OF COFFEE BOARD

SAMPIGE ROAD,

MALLESWARAM,

BANGALORE-3.

ಶುದ್ಧವಾದ ಮತ್ತು ರುಚಿಕರವಾದ
ಶ್ರೀರಾಮ ಕಾಫೀ ಪುಡಿಯನ್ನು ಉಪಯೋಗಿಸಿ

ಕಾಫೀ ಬೋರ್ಡ್ ಮಾರಾಟಗಾರರು

ಶ್ರೀ ರಾಮ ಕಾಫೀ ವರ್ಕ್ಸ್

ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3.

Phone: 3519

ಮೈಸೂರು ಸ್ಟೇಟ್ ಫೈನಾನಿಯಲ್ ಕಾರ್ಪೊರೇಶನ್

ಶ್ರೀ ಸಿ. ಎಸ್. ಶೇಷಾದ್ರಿ,
ಮ್ಯಾನೇಜಿಂಗ್ ಡೈರೆಕ್ಟರ್.

ಮೈಸೂರು ರಾಜ್ಯದಲ್ಲಿ ಕೈಗಾರಿಕಾಭಿವೃದ್ಧಿಗೆ ಅತ್ಯಗತ್ಯವಾದ ಹಣಕಾಸಿನ ಕೊರತೆಯನ್ನು ನಿವಾರಿಸಲು ರಾಜ್ಯದ ಸರ್ಕಾರದವರು ೧೯೫೮ರಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಿದರು.

ದೇಶದ ವಾಣಿಜ್ಯ ಬ್ಯಾಂಕುಗಳು ಬಹುತೇಕವಾಗಿ ಕಾರ್ಯೋಪಯೋಗಿ ಬಂಡವಾಳಕ್ಕೆ ಮಂತ್ರ (working capital)ಹಣ ದೊರಕಿಸುತ್ತಿದ್ದುದರಿಂದ ಮಧ್ಯಮ ಮತ್ತು ದೀರ್ಘಕಾಲಾವಧಿಯ ಸಾಲ ಮತ್ತು ಇತರ ರೂಪದ ಧನ ಸಹಾಯದ ಅವಶ್ಯಕತೆ ಇದ್ದಿತು. ಅಖಿಲಭಾರತ ಸಂಸ್ಥೆಗಳಾದ "ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೊರೇಷನ್ ಆಫ್ ಇಂಡಿಯ" "ಇಂಡಸ್ಟ್ರಿಯಲ್ ಕ್ರೆಡಿಟ್ ಆಂಡ್ ಇನ್ವೆಸ್ಟ್‌ಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ" ಮುಂತಾದ ಸಂಸ್ಥೆಗಳು ರಾಜ್ಯಗಳಲ್ಲಿ ಬಹು ಸಂಖ್ಯೆಯಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ಧನ ಸಹಾಯ ನೂಡಲು ಸಾಧ್ಯವಿಲ್ಲವಾದ್ದರಿಂದ ರಾಜ್ಯಕ್ಕೇ ಸೀಮಿತವಾದ ಸಂಸ್ಥೆಯ ಆವಶ್ಯಕತೆ ಇತ್ತು. ಈ ಕಾರಣದಿಂದಲೇ ರಾಜ್ಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟಿರುವ ಈ ಸಂಸ್ಥೆಯು ಮುಖ್ಯವಾಗಿ ಸಣ್ಣ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳಿಗೆ ಸಾಲ ಮತ್ತು ಇತರ ರೂಪಗಳಲ್ಲಿ ಸಹಾಯವನ್ನೊದಗಿಸುತ್ತಾ ಬಂದಿದೆ.

ಬೇರೆ ಕೆಲವು ರಾಜ್ಯದಲ್ಲಿನ ಸಂಸ್ಥೆಗಳಿಗಿಂತ ಕಿರಿಯದಾದರೂ ಈ ಸಂಸ್ಥೆಯು ಸಾಕಷ್ಟು ಸಮರ್ಪಕವಾಗಿ ಕಾರ್ಯನಿರ್ವಹಿಸಿ ಐನೂರಕ್ಕೂ ಹೆಚ್ಚು ಸಾಲಗಳನ್ನು ಮತ್ತು ಇತರ ರೂಪದಲ್ಲಿ ಒಂದು ಕೋಟಿಗೂ ಮಿರಿ ಸಹಾಯವನ್ನೊದಗಿಸಿದೆ. ಇವುಗಳಲ್ಲಿ ಶೇಕಡ ಎಂಭತ್ತೈದಕ್ಕೂ ಹೆಚ್ಚು ಸಾಲಗಳು ಸಣ್ಣ ಕೈಗಾರಿಕೆಗಳಿಗೆ ಕೊಡಲ್ಪಟ್ಟಿರುತ್ತದೆ. ಮೊತ್ತದ ಪ್ರಮಾಣಕ್ಕನುಗುಣವಾಗಿ ಮಂಜೂರು ಮಾಡಿರುವ ಸಾಲದ ವಿವರ ಈ ರೀತಿ ಇದೆ—

	ಲಕ್ಷ ರೂ.
10,000 ರೂ. ಗಳಿಂದ 50,000 ರೂ.ಗಳ ವರೆಗೆ — 284 ಸಾಲಗಳು	87·76
50,001 ,, 100,000 ,, — 91 ,,	73·08
1,00,001 ,, 2,00,000 ,, — 44 ,,	73·78
2,00,001 ,, 5,00,000 ,, — 46 ,,	165·20
5,00,001 ,, 10,00,000 ,, — 35 ,,	296·05
10,00,000ಕ್ಕೆ ಮೇಲ್ಪಟ್ಟು — 13 ,,	313·55
518	1009.42

ಧನ ಸಹಾಯವು ಕಾನೂನಿನ ಪ್ರಕಾರ ಸ್ಥಾಪಿತವಾದ ಕಂಪೆನಿಗಳು, ಸಹಕಾರಿ ಸೊಸೈಟಿಗಳು, ಪಾಲುಗಾರಿಕೆ, ಅವಿಭಕ್ತ ಕುಟುಂಬ ಮಂತಾದುವುಗಳಿಂದ ನಡಿಸಲ್ಪಡುವ ಕೈಗಾರಿಕೆಗಳಿಗೂ ದೊರೆಯುತ್ತದೆ. ಇದು ವರವಿಗೆ ಮಂಜೂರಾಗಿರುವ ಸಾಲದ ವಿವರ ಈ ರೀತಿ ಇದೆ—

ಪಬ್ಲಿಕ್ ಲಿಮಿಟೆಡ್ ಕಂಪೆನಿಗಳು	42(ಲಕ್ಷರೂಗಳು)	416.22
ಪ್ರೈವೇಟ್ ಲಿ. ಕಂಪೆನಿಗಳು-	34·	111.95
ಸೊಸೈಟಿಗಳು	7	61.25
ಪಾಲುಗಾರಿಕೆ ಸಂಸ್ಥೆಗಳು	139	249.47
ಇತರ	296	170.53
	518	1009.42

ಈ ಸಂಸ್ಥೆಯಿಂದ ಅನೇಕ ವಿಧದ ಕೈಗಾರಿಕೆಗಳು ನೆರವನ್ನು ಪಡೆದಿವೆ-ಇವುಗಳಲ್ಲಿ ಎಣ್ಣೆಗಿರಣಿ, ಅಕ್ಕಿಗಿರಣಿ, ಮೊದಲಾದ ಸಾಧಾರಣ ಕೈಗಾರಿಕೆಗಳಿಂದ ಹಿಡಿದು ಕೈತಕ ಗೊಬ್ಬರ, ವಿದ್ಯುದ್ದೀಪಗಳು, ಕ್ಯಾಫೀನ್ (caffein) ಎಲೆಕ್ಟ್ರಾನಿಕ್ಸ್, ಇಂಜನಿಯರಿಂಗ್, ಹೊಟೇಲ್, ದೋಣಿ ಕಟ್ಟುವದು, ರಫ್ತಿಗಾಗಿ ಮೀನಿನ ಶೀತಲಕರಣ ಮುಂತಾದ ಉದ್ಯಮಗಳು ಸೇರಿವೆ. ಒಟ್ಟಿನಲ್ಲಿ ಈ ಸಂಸ್ಥೆಯಿಂದ ಎಲ್ಲಾ ತರಹ ಕೈಗಾರಿಕೆಗಳು ನೆರವು ಪಡೆದಿವೆ.

ಈ ಸಂಸ್ಥೆಯು ರಾಜ್ಯ ಸರ್ಕಾರ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯೂ ಸೇರಿದಂತೆ ಕೈಗಾರಿಕಾಭಿವೃದ್ಧಿಗಾಗಿ ಶ್ರಮಿಸುತ್ತಿರುವ ಎಲ್ಲಾ ಇಲಾಖೆಗಳೂ ಮತ್ತು ಸಂಘ ಸಂಸ್ಥೆಗಳೊಡನೆ ಸಹಕರಿಸಿ ಕಾರ್ಯನಿರ್ವಹಿಸುತ್ತದೆ-ರಾಜ್ಯದಲ್ಲಿ ಕೈಗಾರಿಕೆಗಳನ್ನು ಶೀಘ್ರವೇಗದಲ್ಲಿ ಅಭಿವೃದ್ಧಿ ಪಡಿಸಲು ರಾಜ್ಯ ಸರ್ಕಾರದವರು ಅನೇಕ ರಿಯಾಯಿತಿ ಮತ್ತು ಸೌಲಭ್ಯಗಳನ್ನು ಒದಗಿಸಿರುತ್ತಾರೆ. ಇದಲ್ಲದೆ ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವವರಿಗೆ ಹೆಚ್ಚು ರಿಯಾಯಿತಿ ಮತ್ತು ಸೌಲಭ್ಯಗಳನ್ನು ಕೊಡುವ ಯೋಚನೆಯೂ ಕೂಡ ಈ ಸಂಸ್ಥೆಗೆ ಇದೆ. ಕೈಗಾರಿಕೋದ್ಯಮಿಗಳಿಗೆ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವದಕ್ಕಾಗಿ ಕೆಲವೊಂದು ಕಡೆ ಶಾಖೆಗಳನ್ನು ತೆರೆಯುವ ಯೋಚನೆಯ ಮೊದಲ ಹಂತವಾಗಿ ಬೆಳಗಾವಿಯಲ್ಲಿ ಈಗಾಗಲೇ ಒಂದು ಶಾಖೆಯನ್ನು ತೆರೆಯಲಾಗಿದೆ. ಇನ್ನು ಕೆಲವು ತಿಂಗಳಲ್ಲಿ ಮಂಗಳೂರಿನಲ್ಲಿ ಒಂದು ಶಾಖೆಯನ್ನು ತೆರೆಯುವ ಉದ್ದೇಶವಿದೆ.

ಮೈಸೂರು ರಾಜ್ಯವು ಕೈಗಾರಿಕಾ ಕ್ಷೇತ್ರದಲ್ಲಿ ತ್ವರಿತವಾಗಿ ಮುನ್ನಡೆಯುವದರಲ್ಲಿ ಯಾವ ಸಂದೇಹವೂ ಇಲ್ಲ. ಸುಭದ್ರ ಸರ್ಕಾರ, ಕಡಿಮೆ ದರದಲ್ಲಿ ದೊರೆಯುವ ಅಪಾರ ವಿದ್ಯುಚ್ಛಕ್ತಿ, ಸಮರ್ಪಕ ಸಾಗಾಣಿಕೆ ವ್ಯವಸ್ಥೆ, ಮಂಗಳೂರಿನ ಸರ್ವ ಋತು ಬಂದರು, ಪ್ರಕೃತಿ ದತ್ತವಾದ ನೈಸರ್ಗಿಕ ಸಂಪತ್ತು, ರಾಜ್ಯ ಸರ್ಕಾರದವರ ನೆರವು, ಇರುವದರಿಂದ ಈ ಅವಕಾಶವನ್ನು ಕೈಗಾರಿಕೋದ್ಯಮಿಗಳು ಸಂಪೂರ್ಣವಾಗಿ ಉಪಯೋಗಿಸಿ ಕೊಳ್ಳುವರೆಂಬ ಭರವಸೆ ಇದೆ. ಈ ಸಂಸ್ಥೆಯು ರಾಜ್ಯದ ಕೈಗಾರಿಕೆಯ ಮುನ್ನಡೆಯಲ್ಲಿ ತನ್ನ ಪಾತ್ರವನ್ನು ಸಮರ್ಪಕವಾಗಿ ನಿರ್ವಹಿಸಲು ಪಣತೊಟ್ಟಿದೆ.

Phone : c/o 29252

With best compliments from:

HOTEL SAROJA

BOARDING LODGING AND RESTAURANT

65, AVENUE ROAD

BANGALORE-2.

ಹಾರೈಕೆ

ನೂಲುವುದು, ನೇಯುವುದು ಆದಿಯಿಂದಲೂ ನಮ್ಮ ಭಾರತ ವರ್ಷದ ಜೀವನಾಡಿಯಾಗಿದೆ. ನಮ್ಮ ಆರ್ಥಿಕ, ಸಾಮಾಜಿಕ, ಮತ್ತು ಮಾನಸಿಕ ಬೆಳವಣಿಗೆಗೆ ದ್ಯೋತಕವಾಗಿದೆ. ಈ ಮಹಾ ಕೃತುವನ್ನೇ ಆಶ್ರಯಿಸಿ ರಾಷ್ಟ್ರಪಿತ ಗಾಂಧೀಜಿ ಸ್ವರಾಜ್ಯ ಸಾಧಿಸಿದರು. ಜನತೆಗೆ ಇದರ ಜ್ಞಾಪಕವಿರಲೆಂದು ಹಾರೈಕೆ.

ಖಾದೀ ಮಂದಿರ

5, ಅವೆನ್ಯೂ ರೋಡ್

ಬೆಂಗಳೂರು-೨

ಜಾತಿಯೆಂಬ ಯಕ್ಷಪ್ರಶ್ನೆ

(ಎಂಟನೇ ಪುಟದಿಂದ)

ಪೂರ್ಣ ನಿರ್ಣಯವನ್ನೇ ಕೊಟ್ಟಿಂತಿದೆ.

ಜಾತಿ ವ್ಯವಸ್ಥೆಯನ್ನು ಬದಲಿಸಲು ಶಕ್ಯ ವಿಲ್ಲವೆಂದರೆ ಬೇರೆ, ತನ್ನ ಮನೋಗತ ದಂತೆ ಅದು ಇಷ್ಟವಲ್ಲವೆನ್ನುವುದು ಬೇರೆ. ಜಾತಿ ಮುಂದುವರಿಯಬೇಕೆಂಬುದು ಈ ಇಷ್ಟವನ್ನೂ ಮಹಮಾನ್ಯಗಳ ಉದ್ದಿಷ್ಟ ವನ್ನೂ ಸೂಚಿಸುತ್ತದೆ. ಇವೆರಡರಲ್ಲಿ ಶಕ್ಯಾ ಶಕ್ಯತೆಯ ವಿಚಾರವನ್ನೇ ಮೊದಲು ಮಾಡೋಣ.

ಜಾತಿ ವ್ಯವಸ್ಥೆ ಬದಲಿಸಲಿಕ್ಕೆ ಬರುವಂ ತಿಲ್ಲ. ಏಕೆ? ಈ ವರೆಗೆ ಅದನ್ನು ಬದ ಲಿಸಲು ಮಾಡಿದ ಪ್ರಯತ್ನಗಳಿಗೆ ಯೋಗ್ಯ ಯಶಸ್ಸು ಸಿಗಲಿಲ್ಲವೆಂದೇ? ಅಥವಾ ಎಂ ಥ ಪ್ರಯತ್ನಕ್ಕೂ ಬಗ್ಗದಷ್ಟು ಈ ವ್ಯವಸ್ಥೆ ದೃಢಬದ್ಧವಾಗಿದೆ, ಮೂಲ ಭದ್ರವಾಗಿದೆ ಎಂದೇ' ಇಲ್ಲಿ ಒಂದು ವಿಷಯವನ್ನು ನಾ ವು ನಮ್ಮ ಆಲೋಚನೆಗೆ ಅನುಪಾತವನ್ನು ಸರಿಪಡಿಸಿಕೊಳ್ಳಲಿಕ್ಕಾಗಿ ಒಪ್ಪಿಕೊಳ್ಳಲೇ ಬೇಕು.

ಅದೆಂದರೆ ನಮ್ಮ ದೇಶದಲ್ಲಿ ಈ ಜಾತಿ ಸಂಸ್ಥೆ ಸನಾತನವೂ ಶಾಶ್ವತವೂ ಆಗಿದೆ. ಕುಲ ಧರ್ಮಗಳನ್ನೂ ಜಾತಿಧರ್ಮಗಳನ್ನೂ ಭಗವದ್ಗೀತೆಯಲ್ಲಿ ಅರ್ಜುನನು ಸನಾತನ ಶಾಶ್ವತಗಳೆಂದು ಹೇಳುತ್ತಾನೆ. "ತಾನಿ ಧರ್ಮಾಣಿ ಪ್ರಥಮಾನಿ ಆಸನ್" ಎಂದಿದೆ ವೇದವು. ಅದು ಜಾತಿ ಕುಲ ಇತ್ಯಾದಿಗಳ ಧರ್ಮಗಳನ್ನೇ ಬಹುವಚನದಿಂದ ನಿರ್ದೇಶಿಸಿದ್ದು. (ಆದು ಯಜ್ಞೇನಯಜ್ಞಂ ಅಯಜಂತ' ವೆಂದಿರಲಿ 'ಉಕ್ಷ್ಣೇಷಣ ಉಕ್ಷಂ ಅವಜಂತ' ವೆಂದಾಗಿರಲಿ!) ಮನುವು ಕುಲಧರ್ಮ ಜಾತಿಧರ್ಮ ಜನಪದ ಧರ್ಮಗಳನ್ನು ಉಲ್ಲೇಖಿಸುತ್ತಾನೆ. ಅಲ್ಲದೆ ಇಂಥ ಧರ್ಮಗಳಿಗೆ ಶ್ರುತಿಯನ್ನು ಹೇಳುವದಿಲ್ಲ ಎಂದು ವಾಸಿಷ್ಠ ಸಂಹಿತೆಯೂ ಅಂದಿದೆ.

ವರ್ಣಗಳು ವೈದಿಕವಾದರೂ ಋಗ್ವೇದದಲ್ಲಿ ಬರುವ ಬ್ರಾಹ್ಮಣ ರಾಜನ್ಯ ಕ್ಷತ್ರಿಯ ಮತ್ತು ವಿಶ್ ಇವು ವರ್ಣವೆಂಬುದ ಕ್ಕಿಂತ ಸಮಾಜದಲ್ಲಿಯ ಆಯಾ ಕರ್ತವ್ಯ ಕರ್ಮ ವಿಶಿಷ್ಟ ವರ್ಗಗಳಿಗೇ ವಾಚಕವಾಗಿವೆ. ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರ ಸ್ಪಷ್ಟವಾದ ಪ್ರಥಮ ಉಲ್ಲೇಖ ಋಗ್ವೇದದ ೧೦ನೆಯ ಮಂಡಳದ ಪುರುಷ ಸೂಕ್ತದಲ್ಲಿ. ಆದರೆ ಈ ಮಂಡಳವೇ ನಂತರದ್ದೆಂದು ಅನೇಕ ವಿದ್ವಾಂಸರ ಅಭಿಪ್ರಾಯ. ಆದೇನೇ ಇದ್ದರೂ ವರ್ಣಗಳು ಗುಣಕರ್ಮಗಳಿಂದ ನಿರ್ಧರಿಸಲ್ಪಟ್ಟವು ಹೊರತು ಹುಟ್ಟಿನಿಂದ ಅಲ್ಲ. ಮನುವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯರನ್ನು ದ್ವಿಜ ವರ್ಣಗಳೆಂದೂ ಶೂದ್ರರನ್ನು 'ಏಕ ಜಾತಿ'ಯೆಂದೂ ಹೇಳಿ ಐದನೆಯದೇ ಇಲ್ಲ (ನಾಸ್ತಿ ತು ಪಂಚಮಃ) ಎಂದಿದ್ದಾನೆ.

ಮಹಾಭಾರತದ ಶಾಂತಿ ಪರ್ವದ ಮೇರೆಗೆ "ನವಿಶೇಷೋಸ್ತಿ ವರ್ಣಾನಾಂ ಸರ್ವಂ ಬ್ರಾಹ್ಮಮಿದಂ ಜಗತ್ | ಬ್ರಾಹ್ಮಣಾಃ ಪೂರ್ವ ಸೃಷ್ಟಾ ಕರ್ಮಭಿಃ ವರ್ಣತಾಂ ಗತಾಃ || ಎಂದರೆ ಆರಂಭದಲ್ಲಿ ಇಂದೇ ವರ್ಣ ಬ್ರಾಹ್ಮಣ ವರ್ಣವಿತ್ತು. ಜಗತ್ತೇ ಬ್ರಾಹ್ಮಮಯವಾಗಿತ್ತು. ಮುಂದೆ ಕರ್ಮ ಭೇದದಿಂದ ವೃತ್ತಿ ವ್ಯವಸಾಯಗಳ ನಿಮಿತ್ತವಾಗಿ ಬೇರೆ ವರ್ಣಗಳು ಉಂಟಾದವು! ಈ ಬಗೆಯ ಜಾತು ರ್ವರ್ಣ್ಯವು ಇರಾಣ, ಗ್ರೀಸ್, ರೋಮ್ ಎಲ್ಲೆಡೆಯಲ್ಲಿಯೂ ಹೆಚ್ಚುಕಡಿಮೆ ಒಂದು ಕಾಲದಲ್ಲಿ ಪ್ರಚಲಿತವಾಗಿತ್ತು. ಇದು ಸಾಮಾಜಿಕ ಜೀವನಕ್ಕೆ ಅಗತ್ಯವಾದ ಶ್ರಮವಿಭಾಗದಿಂದ ಅದಕ್ಕೆ ಅನುಕೂಲವಾದ ವೈಯಕ್ತಿಕ ಗುಣ ವಿಶೇಷದಿಂದ ಉಂಟಾದದ್ದು ಹೊರತು ಜನ್ಮಜಾತಿ ಸ್ಥಿರಬದ್ಧ ಜಾತಿ ಅಲ್ಲ.

ಜಾತಿ ಹೇಗುಂಟಾಯಿತು? ಮನುವಿನ ಮೇರೆಗೆ ತ್ರೈವರ್ಣಿಕರೂ ಶೂದ್ರರೂ ಅನುಲೋಮ ಪ್ರತಿಲೋಮ ವಿವಾಹಗಳಿಂದ ತಮ್ಮೊಳಗೆ ಅನೇಕ ಜಾತಿಗಳನ್ನು ಉಂಟುಮಾಡಿದರು. ಆದರೆ ಹೀಗೆ ಮಿಶ್ರ ವಿವಾಹ. ವ್ಯಭಿಚಾರ ಇವಿಷ್ಟೇ ಜಾತಿಗೆ ಕಾರಣವಲ್ಲ. ದೇಶದಲ್ಲಿಯ ಆರ್ಯೇತರ ಅನೇಕ ಬಣ್ಣಗಳು, ವಂಶಗಳು ಹಿಂದೂ ಸಮಾಜವು ರೂಪುಗೊಳ್ಳುವಾಗ ಅದರಲ್ಲಿ ಉಚ್ಚ-ನೀಚ ಜಾತಿಗಳಾಗಿ ಸಮಾವೇಶ ಗೊಂಡವು. ಸಾಮಾನ್ಯವಾಗಿ ವರ್ಣಸಂಕರದಿಂದ ೪ ವರ್ಣಗಳು ೧೨ ಜಾತಿಗಳೊಂದಿಗೆ ಕನ್ಯಾ ಸಂಬಂಧ ಮಾಡಿವರೆ ೨ ತಲೆಮಾರುಗಳಲ್ಲಿಯೇ ೩೦೪ ಉಪಜಾತಿಗಳು ಉಂಟಾಗುವುವು. ಸದ್ಯಕ್ಕಂತೂ ನಮ್ಮ ದೇಶದಲ್ಲಿಯೇ ಹಿಂದುಗಳಲ್ಲಿ ೨೦೦೦ಕ್ಕೆ ಮಿಕ್ಕಿ ಇಂಥ ಜಾತಿಗಳು ಪ್ರಚಲಿತವಿರುತ್ತವೆ. ಇವುಗಳಲ್ಲಿ ಒಂದೊಂದು ಜಾತಿಯೂ ಇನ್ನೊಂದರಿಂದ 'ರೋಟೀ ಬಂದ, ಬೇಟೀ ಬಂದ! (ಅನ್ನ ಕನ್ಯಾ ವ್ಯವಹಾರಕ್ಕೆ ಹೊರಗೆ!)ಈ ಜಾತಿಗಳೆಲ್ಲ ತಮ್ಮದೆ ವಿಶಿಷ್ಟ ಕರ್ತವ್ಯ ಕರ್ಮವನ್ನೋ ಸಮಾಜಧರ್ಮವನ್ನೋ ಪಾಲಿಸುವದೂ ಅಲ್ಲ. ಇಂದಿನ ಅಂಥ ಧರ್ಮ ಕರ್ಮಗಳೇ ಬೇರೆ. ಇಂದು ಗುಣಕರ್ಮ ವಿಭಾಗದಂತೆ ಪೋಲೀಸ್, ಡಾಕ್ಟರ್, ಪ್ರೊಫೆಸರ್ ಕಾರಕೂನ, ಆಡಳಿತಗಾರ, ಕೂಲಿಕಾರ ಒಂದೊಂದು ವೃತ್ತಿವರ್ಗವೂ ಇಂಥ ಹಲೆಯ ಅನೇಕ ಜಾತಿಯವರಿಂದ ಕೂಡಿ ಆಗಿದೆ. ಆದರೂ ಈ ಪರಂಪರಾಗತ ಜಾತಿ ಚಿಹ್ನಗಳೂ ಲಾಂಛನಗಳೂ ಅವುಗಳಿಗೆ ಅಂಟಿಕೊಂಡ ಮಡಿವಂತಿಕೆಯೂ ಪ್ರತ್ಯೇಕತೆಯೂ ಅನ್ಯೋನ್ಯ ಬಹಿಷ್ಕಾರ ತಿರಸ್ಕಾರಗಳೂ, ಆತ್ಮ ಸಂಭಾವನೆ ಆತ್ಮಗ್ಲಾನಿಗಳ ಉಚ್ಚ ನೀಚ ಭಾವಗಳೂ ಎಂದಿನಂತೆಯೇ ಆಡಿನ ಮೂಲೆಯ ಮೊಲೆಗಳಂತೆ ಉಳಿದು ಬಂದಿವೆ. (ಆದರೆ ಆಜಾಗಲಸ್ತನಗಳಂತೆ ಇವು ನಿರುಪದ್ರವಿಗಳಲ್ಲ!)

ಈ ಜಾತಿಸಂಸ್ಥೆ ಹೀಗೆಯೇ ಉಳಿಯ ತಕ್ಕದ್ದೋ ಮುಂದುವರಿಯತಕ್ಕದ್ದೋ? ಸಾಂಪ್ರದಾಯಿಕವಾಗಿಯೆ ನೋಡಿದರೂ ಈ ಜಾತಿಗಳ ಬಹುಲೀಕರಣವೇ ಅವುಗಳ ಸ್ವಿತ್ಯಂತರ ಶೀಲತೆಯನ್ನೂ ಸೂಚಿಸುತ್ತದೆ ಹಿಂದೊಮ್ಮೆ ಒಂದು ವರ್ಣದ ವ್ಯಕ್ತಿ ಇನ್ನೊಂದು ವರ್ಣವನ್ನು ತನ್ನ ಗುಣಕರ್ಮ ವಿಶೇಷದಿಂದ ಸೇರುತ್ತಿದ್ದನು. ಆಲ್ಲಿ ಆತ ಸ್ವೀಕೃತನೂ ಆಗುತ್ತಿದ್ದನು. ಇನ್ನೂ ಜಾತಿಗಳ ಕುರಿತು ಉತ್ಕರ್ಷದ ಕ್ರಮವನ್ನು ನಮ್ಮ ಮನ್ವಾದಿ ಸ್ಮೃತಿಕಾರರು ಹಾಕಿಕೊಟ್ಟಿದ್ದಾರೆ. ಈ ಗಣೋತ್ಕರ್ಷದ ನಿಯಮದಂತೆ ಅನುಲೋಮ ವಿವಾಹ ಕ್ರಮದಿಂದ ನಿಮ್ನ ಜಾತಿಯು ೫ನೆಯ ಅಥವಾ ೭ನೆಯ ಪೀಳಿಗೆಗೆ ಉನ್ನತಿಯನ್ನು ಪಡೆಯುತ್ತಿತ್ತು. ಇದಕ್ಕೆ ಅನ್ವಯಿಸುವ ವಚನಗಳು ಇಂತಿವೆ:

ವರ್ಣೋತ್ಕರ್ಷಂ ಆವಾಪ್ನೋತಿನರಃ ಪುಣ್ಯೇನ ಕರ್ಮಣಾ| ಮಲಭಂ ತುಮ ಲಭ್ಯಾಹಿ ಅಹನ್ಯತಾ ಪಾನೇನ.

ಕರ್ಮಣಾ|| (ಶಾಂತಿಪರ್ವ ಮ.ಭಾ.) ತಪೋಬೀಜಪ್ರಭಾವೆಸ್ತೇ ಗಚ್ಛಂತಿ ಯುಗೇ ಯುಗೇ| ಉತ್ಕರ್ಷಂ ಜಾಪಕ ಪರ್ಂಚ ಮನುಷ್ಯೇಷು ಇಹಜನ್ಮನಿ||

ಂಂ ಂಂ ಂಂ

ಆಶ್ರೀಯಾನ್ ಶ್ರೇಯಸೀಂ ಜಾತಿಂ ಗಚ್ಛತ್ಯಾ ಸಪ್ತಮಾದ್ಯುಗಾತ್ (ಮನುಸ್ಮೃತಿ).

ಜಾತ್ಯುತ್ಕರ್ಷೋ ಯುಗೇ ಜ್ಞೇಯಃ ಸಪ್ತಮೇ ಪಂಚಮೇಪಿವಾ|| ವೃತ್ಯ ಯೇ ಕರ್ಮಣಾಂ ಸಾಮ್ಯಂಪೂರ್ವಕಚ್ಛಾ ಧರೋತ್ತರಂ (ಯಾಜ್ಞವಲ್ಕ್ಯಸ್ಮೃತಿ)

ಅಂದರೇನು ಕ್ರಮಶಃ ಈ ಜಾತಿ ವ್ಯವಸ್ಥೆಯಲ್ಲಿಯೂ ಉತ್ಕರ್ಷ vertical mobility ಶಕ್ಯವಿತ್ತು. ಘಟಿಸುತ್ತಲೂ ಇತ್ತು. ಈ ಬಗೆಯ ಶರೀರ ಸಂಬಂಧದಿಂದಲ್ಲದೆ ಇತರ ಪ್ರಯತ್ನ ಪರಾಕಾಷ್ಠೆಯಿಂದ-ಶಿಕ್ಷಣ, ಸಂಪತ್ತಿ, ಅಧಿಕಾರ, ಪ್ರತಿಷ್ಠೆ ರಾಜಮನ್ನಣೆ, ನ್ಯಾಯ, ತೀರ್ಪು ಮುಂತಾದವುಗಳಿಂದ ನಮ್ಮ ದೇಶದ ಅನೇಕ ಪ್ರಾಂತ್ಯಗಳ ಅನೇಕ ಜಾತಿ-ಜಾಮಾತುಗಳು ಸಾಮಾಜಿಕ ಶ್ರೇಷ್ಠತೆಯ ಶ್ರೇಣಿಯಲ್ಲಿ ಕೆಲವೇ ತಲೆಮಾರುಗಳಲ್ಲಿ ಉಚ್ಚತೆಯನ್ನು ದೊಂದಿರುತ್ತವೆ. ಅಕ್ಕಸಾಲಿಗರೇ ಮೊದಲಾದ ಕನಬುಗಾರ ಜಾತಿಗಳು 'ದೈವಜ್ಞ' "ವಿಶ್ವಕರ್ಮ" "ಮುಖಮಾಸಿ" ಮುಂತಾದ ಅಭಿಧಾನಗಳನ್ನು ಧರಿಸಿ ದ್ವಿಜತ್ವಕ್ಕೆ ಅಧಿಕಾರಿಗಳಾಗಿರುತ್ತವೆ.

(ಅದೇಕೆ? ಯಜುರ್ವೇದವೇ ಆರು ಬಗೆಯ ಜಾತಿಗಳಿಗೆ ಅಗ್ನ್ಯಾಧಾನಾಧಿಕಾರವನ್ನು ಹೇಳಿದೆ. ಈ ಆರರಲ್ಲಿ ತ್ರೈವರ್ಣಿಕರ ಹೊರತಾಗಿ ಶೂದ್ರರೂ ಸೂತರೂ, ನಿಷಾದರೂ ಬರುತ್ತಾರೆ. ಅಲ್ಲಿ ನಿಷಾಧರಿಗೆ ಬಿಲ್ಲು ಅಗ್ನಿ ಇಡುವುದಕ್ಕೆ ಮಾತ್ರವಲ್ಲ, ಯಜನಕ್ಕೂ ತನ್ಮೂಲಕ ತತ್ಸಂಬಂಧಿಯಾದ ವೇದಮಂತ್ರಗಳ ಅಧ್ಯಯನಕ್ಕೂ ಅಧಿಕಾರವು ಕ್ರಮಪ್ರಾಪ್ತವಾಗಿದೆ!)

ತ್ರೈವರ್ಣಿಕರಿಗೆ ತನ್ನಿಂದ ಇತರ ವರ್ಣಗಳೊಂದಿಗೆ ಮದುವೆಯಾಗುವ ಸ್ವಾತಂತ್ರ್ಯವೂ, ಎಂಟು ಬಗೆಯ ವಿವಾಹಗಳೂ, ಹನ್ನೆರಡು ಬಗೆಯ ಪುತ್ರರೂ ಸ್ಮೃತಿಗಳಿಗೆ ಸಮ್ಮತವಿರುವಾಗ ಆ ಮೂಲಕ ಅನೇಕ ಜಾತಿಗಳ ಉತ್ಪತ್ತಿಗೆ ದ್ವಾರ ತೆರೆದಂತೆಯೇ. ಅಂಥ ಉತ್ಪತ್ತಿಗೆ ಕಾರಣವಾಗಿ ಅನಿರ್ಬಂಧ ವಿವಾಹ ಸ್ವಾತಂತ್ರ್ಯವನ್ನು ಸ್ಮೃತಿಕಾಲದ ಅಥವಾ ಅದಕ್ಕೂ ಹಿಂದಿನ ಸಮಾಜವು ಒಪ್ಪಿಕೊಂಡಿತ್ತು — ಎಂಬುದೇ ಸಿದ್ಧವಾಗುವುದಿಲ್ಲವೇ?

ಶಾಂತಿ ಪರ್ವ (ಮ.ಭಾ.) ದಂತೆ "ದೃಶ್ಯಂತೇ ಮನುಷೇ ಲೋಕೇ ಸರ್ವವರ್ಣೇ

THE MYSORE STATE CO-OPERATIVE LAND DEVELOPMENT BANK LTD.,

BANGALORE-18.

ESTD: 1929 TELEPHONE: 22510, 22309

TELEGRAMS: 'MYLANDBANK'

PRESIDENT: Shri B. S. Viswanathan.

PAID-UP SHARE CAPITAL	Rs. 2,47,67,900
TOTAL RESERVES	35,72,690
DEBENTURE REDEMPTION FUND	6,37,32,811
WORKING CAPITAL	37,75,77,573
RURAL & ORDINARY DEBENTURES IN CIRCULATION	31,47,28,200
SPECIAL DEBENTURES	2,69,00,000
LOANS DISBURSED DURING 1968—69	6,43,53,103
NET PROFIT FOR 1968—69	16,45,481

The Bank is the Apex Institution in Mysore State for issue of long-term credit for development of Agriculture towards sinking of wells, for reclamation of lands under Major Irrigation Schemes in project areas, for development of Areca Plantations, Coconut Plantations, raising Grape Orchards, Grape Vine-yards, Irrigation Pumpsets and other improvement purposes through its 170 affiliated Taluka Primary Co-operative Land Development Banks. Branch Offices are opened in all the 19 Districts, of the State. The Bank issues ordinary debentures, special development debentures, and rural debentures which are fully and unconditionally guaranteed by the Government of Mysore.

V. K. CHINMULGUND
SECRETARY.

ಮು ದಸ್ಯವಃ" ಆಗಲೆ ಎಲ್ಲ ವರ್ಣಗಳಲ್ಲಿಯೂ ನಿಸ್ಯಗಳು ಕಂಡುಬರುತ್ತಿದ್ದರು. ಮನುವಿನ ಕಾಲದಲ್ಲಿ ಆರ್ಯವರ್ತ ಅಥವಾ ಹಿಂದು-ನಿಂದ್ಯ-ಸಾಗರಸೀಮಿತವಾದ ಮಧ್ಯದೇಶದಲ್ಲಿಯೇ ಬ್ರಾಹ್ಮಣರು ನಾಸಿಸಬೇಕಿತ್ತು. ಶೂದ್ರರು ಮಾತ್ರ ತಮ್ಮ ವೃತ್ತಿಯ ಬೆನ್ನಿಗೆ ಬಿದ್ದು ಎಲ್ಲೂ ನೆಲೆಸಬಹುದಿತ್ತು. "ಏತಾನ್ ದ್ವಿಜಾತಯೋ ದೇಶಾನ್ ಸಂಶ್ರಯೇರನ್ ಪ್ರಯತ್ನತಃ ಶೂದ್ರಸ್ತು ಯಸ್ಮಿನ್ ಕಸ್ಮಿನ್ ವಾ ನಿವಸೇತ್ವೃತ್ತಿ ಕರ್ಶಿತ ||" ಆದರೆ ಇಂದು ಹಾಗಿದೆಯೇ? ಎಲ್ಲ ವರ್ಣಗಳೂ ಜಾತಿಗಳೂ ಎಲ್ಲ ಬಗೆಯ ವೃತ್ತಿ ವ್ಯವಸಾಯಗಳಿಂದ 'ಕರ್ಶಿತ'ರಾಗಿ ಎಲ್ಲೆಡೆಯಲ್ಲಿಯೂ ಊರ್ಜಿತವಾಗಿ ನೆಲೆಯೂರಿದ್ದಾರೆ. ಮನುವು ಬ್ರಾಹ್ಮಣರಿಗೆ ಕೃಷಿಯನ್ನು ನಿಷೇಧಿಸಿದ್ದಾನೆ. 'ಕೃಷಿಯತ್ನೇನ ವರ್ಜಯೇತ್' ಬ್ರಾಹ್ಮಣರು ದೇವಸ್ಥಾನಗಳಿಂದ ಜೀವಿಸಬಾರದೆಂದು ಸ್ಮೃತಿಗಳು ವಿಧಿಸುತ್ತವೆ. 'ದೇವಲಕ' ಬ್ರಾಹ್ಮಣನನ್ನು ಶ್ರಾದ್ಧಕ್ಕೆ ಕರೆಯ ಕೂಡದೆಂದು ಅಂದಿದ್ದಿದೆ. ಇಂಥ ಬ್ರಾಹ್ಮಣಿಕೆಯನ್ನು ಬೃಹಸ್ಪತಿಯು 'ಬುದ್ಧಿ ಪೌರುಷ ಜ್ಞಾನಾನಾಂ ಜೀವಿಕಾ' ಎಂದು ಬರೆದಿದ್ದಾನೆ! ಆದರೆ ಇಂದು ಅದೊಂದೇ ಬ್ರಾಹ್ಮಣಿಕೆ ನಮ್ಮದಾಗಿದೆ. ಅಗ್ನಿಹೋತ್ರ ಕಲಿಕಾಲದಲ್ಲಿಯೇ ವರ್ಜ್ಯವಾಗಿದೆ! 'ಪಶು ಮಾರಣ ಕರ್ಮದಾರುಣ'ರಾದ ಶ್ರೋತ್ರಿಯರು ಇಂದು ಎಲ್ಲಿ ಎಷ್ಟು ಮಂದಿ? ಬೌದ್ಧ ಜೈನ ಮತಗಳ ನೊಡಲು ಮಠ ಸಂಸ್ಥೆ ಭಾರತದಲ್ಲಿ ಇದ್ದಿಲ್ಲ. ಸಂನ್ಯಾಸ ಕೇವಲ ಅಂತ್ಯಾಶ್ರಮವಾಗಿತ್ತು. ಗೃಹಸ್ಥಾಶ್ರಮವೇ ಧನ್ಯವಾಗಿತ್ತು. ಕೆಲವೊಮ್ಮೆ ಅತುರ ಸಂನ್ಯಾಸದ ಅಪವಾದಗಳನ್ನು ಬಿಟ್ಟರೆ ಯದಹರೇವ ವಿರಜೇತ್ ತದಹರೇವ ಪ್ರವ್ರಜೇತ್ ಎಂದು ಉಪನಿಷತ್ತು ನಾನಿದರೂ ಇಂಥ ಪರಿವ್ರಾಜಕರೂ ಮಠಮಾನ್ಯಗಳಲ್ಲಿ ಪೀಠಸ್ಥರಾಗಿ ಜಗದ್ಗುರುಗಳಾಗಿ ಅವಿರ್ಭವಿಸಿದ್ದಿಲ್ಲ. ಆದರೂ ಕಾಲಕ್ರಮದಲ್ಲಿ ಇದೆಲ್ಲ ಮಾರ್ಪಾಟು ಬೇರ್ವಾಟು ಗ್ರಾಹ್ಯವಾಯಿತು. ಪ್ರತಿಷ್ಠಿತವಾಯಿತು.

ತಾತ್ಪರ್ಯವೇನೆಂದರೆ, ದೇಶಕಾಲ ಪರಿಸ್ಥಿತಿಯಂತೆ ಧರ್ಮದ ಸ್ವರೂಪ ಬೇರೆ ಆಗುತ್ತಲೇ ಬಂದಿದೆ. ಜೀರ್ಣಾನಿವಸ್ತ್ರಾಣಿ ಯಥಾ ವಿಹಾಯ ಎಂಬ ಗೀತೆಯಲ್ಲಿ ಬಂದ ಉಪಮೆ ದೇಹಿಯ ದೇಹಕ್ಕೆ ಹೇಗೋ ದೇಶದ 'ಧರ್ಮಕಂಚುಕ'ಕ್ಕು ಹಾಗೆಯೇ ಅನ್ವಯಿಸುತ್ತದೆ. ಕುಲಜಾತಿ, ಜಾತಿ, ಶ್ರೇಣಿ ಜನಪದ ಧರ್ಮಗಳಂತೆ ಆಪದ್ಧರ್ಮ ಮತ್ತು ಅದಕ್ಕೂ ಸಾರ್ವಭೌಮವಾದ ಯುಗಧರ್ಮವೂ ಒಂದಿದೆ. ಆದಕ್ಕೆ ಅನುಕೂಲವಾಗಿ ಅವಿರೋಧವಾಗಿ ನಾವು ಬಾಳಬೇಕಾಗಿದೆ.

ಇದಕ್ಕೂ ಶಾಸ್ತ್ರಾಧಾರ ಸಿಗುತ್ತದೆ. ನಮ್ಮ ಮನ್ವಾದಿ ಸ್ಮೃತಿ ಗ್ರಂಥಗಳಲ್ಲಿ ಎಂಥ ಕ್ರಾಂತಿಕಾರಿಯಾದ ಸುಧಾರಣೆ ಪರಿವರ್ತನೆಗಳಿಗೂ ಸಾಕಷ್ಟು ವಚನ ಪ್ರಾಮಾಣ್ಯ ಸಾಕಷ್ಟು ಹುಡುಕಿದರೆ ಸಿಕ್ಕೇ ಸಿಗುತ್ತದೆ (ಅಲ್ಲದೆ ಸಿಕ್ಕ ವಚನಗಳಿಂದ ಪ್ರಸ್ತುತಕ್ಕೆ ಯೋಗ್ಯವಾದಂತೆ ಇತ್ಯರ್ಥ ಮಾಡಿಕೊಳ್ಳಲೂ ಧಾರಾಳ ಅನುಕೂಲವಿದೆ. ಒಂದೇ 'ಪ್ರಸ್ಥಾನತ್ರಯಿ'ಯಿಂದ ಪರಸ್ಪರ ವಿರುದ್ಧ ಮತ್ತು ಪ್ರತ್ಯೇಕ ಮತ ಸಿದ್ಧಾಂತಗಳನ್ನು ಹೊರಡಿಸಿದಂತೆ!)

ಧರ್ಮವು ಪರಿವರ್ತನ ಶೀಲವೆಂಬುದಕ್ಕೆ ಮನುವಿನ ಈ ಮಾತು ಸಾಕ್ಷಿಯಾಗ ಬಲ್ಲುದು:

ಅನ್ಯೇಕೃತಯುಗೇ ಧರ್ಮಾ ತ್ರೇತಾಯಾಂ ದ್ವಾಪರೇ ಪರೇ| ಅನ್ಯೇ ಕಲಿಯುಗೇ ನೃಣಾಂಯುಗ ಹ್ರಾಸಾನುರೂಪತಃ (ಯುಗ-ಹ್ರಾಸಕ್ಕೆ ಅನುರೂಪವಾಗಿ ಧರ್ಮಗಳು ಬೇರೆ ಆಗುತ್ತ ಬಂದಿವೆ).

ತಪಃ ಪರಂ ಕೃತಯುಗೇ ತ್ರೇತಾಯಾಂ ಜ್ಞಾನಮುಚ್ಯತೇ ದ್ವಾಪರೇ ಯಜ್ಞ ಮೇವಾಹು ದಾನಮೇಕಂ ಕಲೌಯುಗೇ.||

ಇಂದು ನಮಗೆಲ್ಲರಿಗೂ ಅಖಂಡ ಹಿಂದೂ ಸಮಾಜಕ್ಕೆ ಅದು ಒಳಪಟ್ಟ ಭಾರತೀಯ ಹಾಗೂ ಮಾನವ ಪ್ರಪಂಚಕ್ಕೆ ಬೇಕಾದ ಧರ್ಮ ಮನುವೇ ಹೇಳಿದ ಸಮಷ್ಠಿ ಧರ್ಮಃ ಅಹಿಂಸಾ ಶೌಚ ಅಸ್ತೇಯ ಮತ್ತು ಇಂದ್ರಿಯ ನಿಗ್ರಹ. ನಿಜವಾಗಿಯೂ ಶೌಚ ಮನಮತ್ತು ಇಂದ್ರಿಯ ನಿಗ್ರಹಗಳಲ್ಲಿ ಎಲ್ಲವು ಬಂದಿತು.

ಅದೇ ಬಹಿರಂಗ ಶುದ್ಧಿ ಅದೇ ಅಂತರಂಗ ಶುದ್ಧಿ. ಅದೊಂದಿದ್ದರೆ ಕೋ ವಿಧಿಃ ಕೋ ನಿಷೇಧಃ? ಆ ದೃಷ್ಟಿಯಿಂದಲೇ ಆದ್ಯ ಶಂಕರಾಚಾರ್ಯರು ಅಂದಿರಬೇಕು. 'ಚಂಡಾಲೋಸ್ತು ಸತುದ್ವಿಜೋಸ್ತು. ಗುರುರಿತ್ಯೇಕಾಮ ನೀಷಾಮಮ'.

ಮನುವು ಆಸಂದಿಗ್ಧವಾಗಿ ಕೊಟ್ಟ ಧರ್ಮದ ಈ ವ್ಯಾಖ್ಯೆಯೊಂದೇ ನಮಗಿಂದು ತಾರಕ.

ಮಂಗಳೂರು ಬಂದರು ಯೋಜನೆ

(ಏಳನೇ ಪುಟದಿಂದ)

ವ್ಯವಸ್ಥೆಗೂ ಬಂದರಿನಲ್ಲಿ ಅನುಕೂಲವಿದೆ.

ಈಗಿನ ವ್ಯವಸ್ಥೆಯಂತೆ, ಬಂದರಿನ ಮೊದಲಿನ ಹಂತವು ೧೯೭೧-೭೨ರಲ್ಲಿ ಮುಗಿಯುವ ಸಾಧ್ಯತೆಯಿದೆ. ಈಗಾಗಲೇ ಇಲ್ಲಿ ಬಂದರದ ಆಡಳಿತ ಕಛೇರಿ, ಸಿಬ್ಬಂದಿಗಳ ಮನೆಗಳು, ಕಲ್ಲುಗಣಿಗೆ ಮಾರ್ಗಗಳು, ಬಂದರದ ಆಸ್ತಿಯಲ್ಲಿ ಒಳಮಾರ್ಗಗಳು, ಗೋಡೌನುಗಳು, ಮಳಿಗೆಗಳು, ಎಲ್ಲಾ ಎದ್ದು ನಿಂತಿವೆ. ಸಿಬ್ಬಂದಿ ವರ್ಗದವರ ವಸತಿಗೆ ಆಗತ್ಯವಾದ ನೀರು ಮತ್ತು ವಿದ್ಯುತ್ತಿನ ವ್ಯವಸ್ಥೆ ಮುಗಿಸಲಾಗಿದೆ. ಬಂದರದ ಬೃಹತ್ ಕೆಲಸಗಳಾದ ಸಮುದ್ರದೊಳಗಿನ ಅಲೆ ದಂಡೆಯ ಕೆಲಸ (Breakwaters) ಧಕ್ಕೆಯ ದೊಡ್ಡ ಕಾಂಕ್ರೀಟಿನ ಸ್ತಂಭಗಳನ್ನು ಕಟ್ಟುವ ಮತ್ತು ಇಳಿಸುವ ಕೆಲಸ (casting and sinking of monoliths) ಮತ್ತು ಹಡಗಿನ ತಿರುಗುಕೊಳ (Turning basin) ಧಕ್ಕೆಯ ತೋಳು (Dock arm) ಮತ್ತು ಒಳಕಾಲುವೆಯ ಅಗತ್ಯದ ಕೆಲಸ (manual excavation) ಇವುಗಳೆಲ್ಲಾ ಅತೀ ವೇಗವಲ್ಲಿ ಮುನ್ನಡೆಯುತ್ತಿವೆ. ಹೂಳು ತೆಗೆಯುವ ಹಡಗಿನ ಸಹಾಯದಿಂದ (Dredger) ಭಾರೀ ಪ್ರಮಾಣದಲ್ಲಿ ಮಣ್ಣು ತೆಗೆಯುವ ಕೆಲಸ ಈಗಾಗಲೇ ಮೊದಲುಗೊಂಡಿದೆ. ಬಂದರದ ಸ್ವಂತ ಗೊತ್ತಾದ ಚಿಕ್ಕ ಪ್ರಮಾಣದಲ್ಲಿ ಮಣ್ಣು ತೆಗೆಯುವ ಹಡಗೊಂದಲ್ಲದೆ ಗಂಟೆಗೆ ೫೭೦ ಘನ ಮೀಟರ್ ಮಣ್ಣು ಕೀಳುವ ಶಕ್ತಿಯುಳ್ಳ ಬೃಹತ್ ಮಣ್ಣು ತೆಗೆಯುವ ಹಡಗೊಂದು ತನ್ನ ಕೆಲಸ ಆರಂಭಿಸಿದೆ. ಇದರೊಂದಿಗೆ ಬಂದರದ ಕಾರ್ಯಕ್ಕೆ ಬೇಕಾಗುವ ಯಂತ್ರ ಸಾಮಗ್ರಿಗಳನ್ನು ಪ್ರತಿಷ್ಠಾಪಿಸಲು ವ್ಯವಸ್ಥೆ ನಡೆಸಲಾಗುತ್ತಿದೆ. ಈಗಾಗಲೇ ಸುಮಾರು ಎಂಟು ಕೋಟಿ ರೂಪ್ಯಾಗಳ ಖರ್ಚಾಗಿದೆ.

ಕಬ್ಬಿಣದ ಅದುರಿನ ನಿಕ್ಷೇಪವಿರುವ ಕುದುರೆಮುಖಕ್ಕೆ ಬಂದರಿನ ಈಗಿನ ಸ್ಥಳಕ್ಕೆ ಬರೇ ೩೫ ಮೈಲುಗಳ ಹಾದಿ. ಇದರಿಂದಾಗಿ, ಮ್ಯಾಗ್ನೆಟ್ಟೈಟ್ ಅದುರನ್ನು ಅತೀ ಮಿತವ್ಯಯದಲ್ಲಿ ರಫ್ತು ಮಾಡಬಹುದಾಗಿದೆ. ಇದರಿಂದಾಗಿ ಲಾಭಕರವಾಗಿ ತೆಗೆದ ಕಬ್ಬಿಣದ ಅದುರನ್ನು ಮಿತವ್ಯಯದಲ್ಲಿ ಮಾರುಕಟ್ಟೆಗೆ ಸಾಗಿಸಲು ಇದೊಂದೇ ಹಾದಿಯಾಗಿದೆ. ಒಂದು ರೀತಿಯಲ್ಲಿ ಇಷ್ಟು ಸವಿಸ್ತಾರದಲ್ಲಿ ಆ ನಿಕ್ಷೇಪನವನ್ನು ಅಗೆಯುವ ಕೆಲಸದ ಅಭಿವೃದ್ಧಿಯು ಈ ಬಂದರಕ್ಕೆ ಆರ್ಥಿಕ ಭದ್ರತೆಯನ್ನು ಕೊಡುತ್ತದೆ. ಈ ಕಾರಣಗಳಿಂದ ಮಂಗಳೂರು ಬಂದರವು ದೇಶದ ಒಂದು ಅತಿ ಮುಖ್ಯ ಬಂದರವಾಗಿ ಅಭಿವೃದ್ಧಿಗೊಂಡು, ಅದರ ಭವಿಷ್ಯ ವೆಲ್ಲಾ ಪ್ರಾಕಾರಮಯವಾಗುವ ಭರವಸೆಯಿದೆ. ಬಂದರದ ಹಿನ್ನಾಡು ಕೈಗಾರಿಕೆ ಮೊದಲಾದವುಗಳಿಂದ ಅಭಿವೃದ್ಧಿಗೊಳ್ಳಲು ಈ ಬಂದರವು ಒಂದು ಪ್ರಾಮುಖ್ಯ ಹೆಬ್ಬಾಗಿಲಾಗಿದೆ.

ವಿದ್ವದ್ಭಿಃ ಸೇವಿತಃ ಸದ್ಭಿಃ ನಿತ್ಯಂ ಅದ್ವೇಷರಾಗಿಭಿಃ | ಹೃದಯೇನಾಭ್ಯನುಜ್ಞಾತಂ ಯೋ ಧರ್ಮಃ ತತ್ವಬೋಧತ ||

ರಾಗದ್ವೇಷಗಳಿಲ್ಲದ ಸಜ್ಜನರೂ ವಿದ್ವಾಂಸರೂ ಸೇವಿಸುವ ಹಾಗೂ ಹೃದಯದಿಂದಲೂ ಒಪ್ಪಿಕೊಂಡದ್ದೇ ಧರ್ಮ! ಅಂಥ ಧರ್ಮದರ್ಶಿಗಳು ಧರ್ಮಬೋಧಕರು ಶ್ರೀ ವಿಶ್ವೇಶತೀರ್ಥರಂಥ ಲೋಕಾನುಗ್ರಹ ಕ್ಕಾಗಿಯೇ ಜೀವಿಸುವ ಗುರುಗಳು. ಅಂಥ ಧರ್ಮದ ಬೆಳಕಿನಲ್ಲಿ ನೋಡಿದರೆ ಜಾತಿ ಸಂಸ್ಥೆಯ ಉಚ್ಚಾಟನೆ ಇಷ್ಟವಿದೆ, ರಕ್ಯವಿದೆ. ಅಪಹಾರ್ಯವೂ ಆಗಿದೆ.

ಪ್ರಾರ್ಥನೆ

ಒಮ್ಮೆ ಒಬ್ಬ ಭಗಿನಿಯು ಗಾಂಧಿಯವರಿಗೆ ಹೇಳಿದಳು— "ನಾನೀಗ ಪ್ರಾರ್ಥನೆ ಮಾಡುವವನ್ನು ಬಿಟ್ಟು ಬಿಟ್ಟಿದ್ದೇನೆ" ಎಂದು.

ಗಾಂಧಿಯವರು ಕೇಳಿದರು—"ಯಾಕೆ?" ಭಗಿನಿಯು ಉತ್ತರ ಕೊಟ್ಟಳು—ತನ್ಮಯತೆ ಇಲ್ಲದೆ ಪ್ರಾರ್ಥನೆ ಮಾಡುವದೆಂದರೆ ಆತ್ಮವಂಚನೆ ಮಾಡಿಕೊಂಡಂತೇ ನನಗೆ ಅನಿಸುತ್ತಿದೆ"

ಅದಕ್ಕೆ ಗಾಂಧಿಯವರೆಂದರು – 'ನಿನ್ನ ಉತ್ತರಹೇನೂ ಸರಿ. ಆತ್ಮ ವಂಚನೆ ಮಾಡಿಕೊಳ್ಳುವುದು ಬಿಡಬೇಕೆಂಬುದು ನಿಜ. ಆದರೆ ಪ್ರಾರ್ಥನೆಯನ್ನೇ ಬಿಟ್ಟು ಬಿಡಬೇಡ"

ಪ್ರಶಾಂತ ವಾತಾವರಣದಲ್ಲಿ
ಪ್ರವಾಸಿಗರ ಮೆಚ್ಚಿನ ವಸತಿ ಗೃಹ—

ಶ್ರೀ ಕುಮಾರ ಲೋಜ್

81, ಹೊಸ್ಪಿಟಲ್ ರಸ್ತೆ, ಬಳೇಪೇಟೆ,
ಬೆಂಗಳೂರು-2A

ಸೌಕರ್ಯಪೂರ್ಣ ಸಿಂಗಲ್ ಮತ್ತು ಡಬ್ಬಲ್ ರೂಮುಗಳು
ಅದಕ್ಕೆ ಹೊಂದಿಕೊಂಡು ಸ್ನಾನ ಗೃಹ ಸೌಕರ್ಯ!

ನಗರದ ಪ್ರಾಮುಖ್ಯ ಸ್ಥಳಗಳಿಗೆ ಮಧ್ಯವರ್ತಿ ಸ್ಥಳದಲ್ಲಿರುವ
ಆಧುನಿಕ ಮಾದರಿಯ ವಸತಿ ಮಂದಿರ

ಕೆ. ರಾಮಚಂದ್ರ ರಾವ್
ಪ್ರೊಪ್ರೈಟರ್

ಶ್ರೀ ಸುಬ್ರಹ್ಮಣ್ಯ ಲೋಜ್

ಬಳೇಪೇಟೆ
ಬೆಂಗಳೂರು-2A

ರೇಲ್ವೆ ಸ್ಟೇಶನ್, ಬಸ್ ಸ್ಟಾಂಡುಗಳಿಗೆ ಸಮೀಪದಲ್ಲಿರುವ
ಶ್ರೇಷ್ಠ ಶ್ರೇಣಿಯ ಊಟ ಮತ್ತು ಉಪಾಹಾರ ಮಂದಿರ.

ನಗುಮುಖದ ಸೇವೆ! ರುಚಿ-ಶುಚಿಯಾದ ತಯಾರಿಕೆ!!
ಸಂದರ್ಶಿಸಿ ಸಂತೃಪ್ತರಾಗಿರಿ!

ಬ್ಯಾಂಕಿಂಗ್ ವ್ಯವಸ್ಥೆಗೆ ಶುಭಾಪಂಥಾಹ್ವಾನ

(ಆದನೇ ಪುಟದಿಂದ)

ಬರುವ ಮೊತ್ತವನ್ನು ಆಕರ್ಷಕ ಠೇವಣಾತಿಗಳನ್ನಾಗಿ ಸ್ವೀಕರಿಸುವುದು. ಇದರಿಂದಾಗಿ ಹಳ್ಳಿಗರಿಗೂ ಬ್ಯಾಂಕಿಂಗ್ ತಿಳುವಳಿಕೆಯುಂಟಾಗಿ ಅವರ ಜೀವನ ಸುಗಮವಾಗಿ ಸಾಗುವಂತಾಗುವುದು. ಆದರೆ ಹಳ್ಳಿಗಳಲ್ಲಿ ಬ್ಯಾಂಕಿಂಗ್ ವ್ಯವಹಾರ ನಡೆಸಲು ಬೇಕಾಗಿರುವವರು ಆದರ್ಶವಾದಿಗಳಾಗಿರುವ ಬ್ಯಾಂಕ್ ಸಿಬ್ಬಂದಿ ವರ್ಗ. ಇವರು ಹಳ್ಳಿಗರೊಡನೆ ಹಳ್ಳಿಗರಾಗಿ ಬೆರೆತು ಅವರು ನಿಜವಾದ ಮಿತ್ರರಾಗೂ ಮಾರ್ಗದರ್ಶಿಗಳಾಗಿದ್ದ ಹಳ್ಳಿಗಳ ಸುಧಾರಣೆಗೆ ಯತ್ನಿಸುವವರಾಗಿರಬೇಕು.

ರಾಷ್ಟ್ರೀಕೃತ ಬ್ಯಾಂಕುಗಳು ಗಮನ ನೀಡಬೇಕಾದ ಇನ್ನೊಂದು ವಿಷಯವೆಂದರೆ ಹಣದ ಅಡಚಣೆಯಿಂದ ಪೂರ್ಣವಾಗದೆ ಉಳಿದಿರುವ ಯಾವುದೆ ಒಂದು ಪ್ರಯೋಜನಕಾರಿ ಉದ್ದಿಮೆ ಯಾ ಉದ್ದೇಶ. ನಮ್ಮ ದೇಶದಲ್ಲಿಂದು ವಿದ್ಯಾವಂತ ನಿರುದ್ಯೋಗಿಗಳಿಗೆ ಕೊರತೆಯಿಲ್ಲ. ಅಸಂಖ್ಯಾತ ಬುದ್ಧಿವಂತ ತಾಂತ್ರಿಕಜ್ಞರು ಇಂಜಿನೀಯರ್‌ಗಳು ವೈದ್ಯರೆಲ್ಲ. ತಮ್ಮ ಅನುಭವ ಹಾಗೂ ನಿಪುಣತೆಯನ್ನು ಹಣದ ಅಭಾವದಿಂದ ಜನರ ಒಳಿತಿಗಾಗಿ ವಿನಿಯೋಗಿಸಲು ಅಸಮರ್ಥರಾಗಿದ್ದಾರೆ. ಈ ಸಂದರ್ಭ ನಮ್ಮ ಬ್ಯಾಂಕುಗಳು ತಮ್ಮ ಕೈಲಾದಷ್ಟು ಸಹಾಯ ನೀಡಲು ಪ್ರಯತ್ನಿಸುವುದು ಸೂಕ್ತವಾಗಿದೆ. ಸಾಮಾನ್ಯ ಮನುಷ್ಯನ ಏಳಿಗೆಗೆ ಪ್ರಯತ್ನಿಸುವುದೂ ಅತನ ದಿನನಿತ್ಯದ ಬೇಡಿಕೆಗಳಿಗೆ ಕೈಲಾದಷ್ಟು ಪ್ರಯತ್ನಿಸುವುದೂ ನಮ್ಮ ರಾಷ್ಟ್ರೀಕೃತ ಬ್ಯಾಂಕುಗಳ ಪಾಲಿಗೆ ಒಂದು ಆಹ್ವಾನವಾಗಿದೆ.

ಆದರೆ ಎಂದಿನಂತೆಯೇ ಈ ಮೇಲಿನ ಎಲ್ಲಾ ಸಂದರ್ಭಗಳಲ್ಲಿ ಬ್ಯಾಂಕುಗಳು ತಮ್ಮ ವ್ಯವಹಾರದ ಲಾಭ ದೃಷ್ಟಿಯನ್ನು ಮುಂದುವರಿಸಿಕೊಂಡು ಹೋಗುವುದು ಸಮಯೋಚಿತವಾಗಿದೆ. ರಾಷ್ಟ್ರೀಕೃತ ಬ್ಯಾಂಕುಗಳಿಂದ ನಮ್ಮ ಸರಕಾರಕ್ಕೆ ಹೆಚ್ಚಿನ ಲಾಭ ಬರಬೇಕು ಹಾಗೂ ಅವುಗಳಿಂದ ಸಮಾಜದ ಎಲ್ಲಾ ವರ್ಗದವರಿಗೆ ಸರಿಯಾದ ಪ್ರಯೋಜನವಾಗಬೇಕು. ದೇಶದ ಮುಂದಿನ ಬ್ಯಾಂಕಿಂಗ್ ವ್ಯವಸ್ಥೆ ಸಾಮಾಜಿಕ ಒಳಿತಾದ ದೃಷ್ಟಿಕೋನದಲ್ಲಿ ರೂಪಿಸಲ್ಪಡಬೇಕು. ಈ ದಿಸೆಯಲ್ಲಿ ನಮ್ಮ ಬ್ಯಾಂಕುಗಳು ಮೊದಲು ತಮ್ಮ ಕಾರ್ಯಕ್ಷೇತ್ರವನ್ನು ಹಳ್ಳಿಹಳ್ಳಿಗಳಿಗೆ ವಿಸ್ತರಿಸಿ ಜನರಲ್ಲಿ ಬ್ಯಾಂಕಿಂಗ್ ಮನೋಭಾವ ಬೆಳೆಸಿ ಜನತೆಯ ಠೇವಣಿಗಳಿಂದಲೇ ಅವರ ಆರ್ಥಿಕ ಸಹಾಯ ಮಾಡಿ ಸಫಲವಾಗುವಂತೆ ಪ್ರಯತ್ನಿಸಬೇಕು.

ಕೊನೆಯ ಒಂದು ಮಾತು—ಸಿಂಡಿಕೇಟ್ ಬ್ಯಾಂಕ್ ಮತ್ತು ರಾಷ್ಟ್ರೀಕರಣದ ನೆಲೆಯಲ್ಲಿ ಆದರ ಕಾರ್ಯ ವ್ಯಾಪ್ತಿಯ ಬಗ್ಗೆ – ಸಿಂಡಿಕೇಟ್ ಬ್ಯಾಂಕ್ ತನ್ನ ಹುಟ್ಟಿನಿಂದ ಅನೇಕ ಉಪಯೋಗಿ ಯೋಜನೆಗಳನ್ನು ಜಾರಿಗೆ ತಂದು ಜನಸೇವೆ ಗೈಯುತ್ತಲಿದೆ. ಈ ಬ್ಯಾಂಕು ತನ್ನ ಹುಟ್ಟಿನಿಂದ ಹಳ್ಳಿಗಳನ್ನು ತನ್ನ ಕಾರ್ಯ ಕ್ಷೇತ್ರವನ್ನಾಗಿ ಆಯ್ದುಕೊಂಡಿದೆ. 1928ರಲ್ಲಿ ಆರಂಭಿಸಿದ ಪಿಗ್ಮಿ ಯೋಜನೆಯ ಮೂಲಕ ಸಿಂಡಿಕೇಟ್ ಬ್ಯಾಂಕ್ ಜನ ಸಾಮಾನ್ಯರಿಗೂ ಸುಲಭವಾಗಿ ಉಳಿತಾಯ ಮಾಡುವ ಮಾರ್ಗ ತೋರಿಸಿದೆ. ಇಂದು ನಮ್ಮ ಈ ಯೋಜನೆಯಲ್ಲಿ ಎರಡು ಲಕ್ಷಕ್ಕೂ ಮಿಕ್ಕಿದ ಗ್ರಾಹಕರು ಹಣ ಕೂಡಿಸುತ್ತ ಬಂದಿದ್ದಾರೆ. 1968ರ ಕೊನೆಗೆ ಈ ಯೋಜನೆಯಿಂದ ನಾವು 12 ಕೋಟಿಗೂ ಮಿಕ್ಕಿ ಠೇವಣಿ ಸಂಗ್ರಹಿಸಿದ್ದೇವೆ.

ಹಳ್ಳಿಗಳಲ್ಲಿ ನಮ್ಮ ಬ್ಯಾಂಕಿಗಿರುವ ಆಸ್ಥೆಯ ಬಗ್ಗೆ ಹೆಚ್ಚಿಗೆ ಹೇಳುವುದು ಅಗತ್ಯವಿಲ್ಲ 1969ರ ಕೊನೆಗೆ ನಮ್ಮ 555 ಶಾಖೆಗಳಲ್ಲಿ 125 ಶಾಖೆಗಳು ಹಳ್ಳಿಪ್ರದೇಶಗಳಲ್ಲಿ ಇವೆ. 124 ಶಾಖೆಗಳು ಉಪನಗರಗಳೆಂದು ಹೇಳಬಹುದಾದ ಪ್ರದೇಶಗಳಲ್ಲಿವೆ. ಉಳಿದ 106 ಶಾಖೆಗಳು ಆಧುನಿಕ ಪಟ್ಟಣ ಪ್ರದೇಶಗಳಲ್ಲಿ ಇವೆ. 1969ನೇ ಸಂವತ್ಸರದಲ್ಲಿ ನಾವು 101 ಶಾಖೆಗಳನ್ನು ತೆರೆದು ಒಂದು ದಾಖಲೆ ನಿರ್ಮಿಸಿದ್ದೇವೆ.

ಕೃಷಿಯ ಉನ್ನತಿಗಾಗಿ ಸಿಂಡಿಕೇಟ್ ಬ್ಯಾಂಕು 196 ನೇ ಇಸವಿಯಲ್ಲಿ ಅಂದರೆ ಇತರ ಯಾವ ಬ್ಯಾಂಕು ಆ ದಿಸೆಯಲ್ಲಿ ಕಾರ್ಯತತ್ಪರವಾಗಲು ನಿರ್ಧರಿಸುವ ಮೊದಲೇ ಕೃಷಿ ಆರ್ಥಿಕ ವಿಭಾಗವನ್ನು ತೆರೆದು ಕೃಷಿ ಅಭಿವೃದ್ಧಿಗಾಗಿ ಶ್ರಮಿಸಿದೆ. ಕೃಷಿ ಆರ್ಥಿಕತೆಯಲ್ಲಿ ಸಿಂಡಿಕೇಟ್ ಬ್ಯಾಂಕು ಇತರ ಬ್ಯಾಂಕುಗಳಿಗೆ ಆದರ್ಶಪ್ರಾಯವಾಗಿದೆ. ಕಳೆದ ವರ್ಷ ಕೊನೆಗೆ ನಾವು ಕೃಷಿರಂಗಕ್ಕೆ ಒಟ್ಟು 12.55ಕೋಟಿ ಮುಂಗಡ ನೀಡಿರುತ್ತೇವೆ.

ಸಿಂಡಿಕೇಟ್ ಬ್ಯಾಂಕಿನ ಸೊಲ್ಲು "ಪ್ರತಿಯೊಂದು ಬ್ಯಾಂಕಿಂಗ್ ಆವಶ್ಯಕತೆಗಳಿಗೆ ಪ್ರತಿಯೊಬ್ಬರ ಬ್ಯಾಂಕು" ಎಂಬುದಾಗಿ. ಆ ಪ್ರಕಾರ ನಾವು ಎಲ್ಲಾ ವರ್ಗದ ಜನರಿಗೆ ನಮ್ಮ ಸಹಾಯ ಹಸ್ತ ನೀಡುವುದರಲ್ಲಿ ಉದ್ದುಕ್ತರಾಗಿ ಕಾರ್ಯ ಸಫಲವಾಗಿದ್ದೇವೆ. ಸಿಂಡಿಕೇಟ್ ಬ್ಯಾಂಕಿನಿಂದ ವಿದ್ಯಾರ್ಥಿಗಳು ಉಚ್ಚ ಶಿಕ್ಷಣಕ್ಕಾಗಿ ವೈದ್ಯರು ಸ್ವಂತದ ದವಾಖಾನೆಗಳನ್ನು ತೆರೆಯಲಿಕ್ಕಾಗಿ ಸಾಮಾನ್ಯ ವರ್ಗದ ಜನತೆಲಾರಿ, ಟ್ರಕ್ಕು, ರಿಕ್ಷಾಗಳ ಖರೀದಿ ಮಾಡಲಿಕ್ಕಾಗಿ ಎಲ್ಲಾ ಒಂದೇ ರೀತಿಯಲ್ಲಿ ಸ್ಪಯೋಜನ ಹೊಂದಿರುತ್ತಾರೆ ನಮ್ಮ ಮಟ್ಟಿಗೆ ಹೇಳುವುದಾದರೆ ರಾಷ್ಟ್ರೀಕರಣದ ಮೊದಲೇ ನಮ್ಮ ಯೋಜನೆ ಹಾಗೂ ವ್ಯವಹಾರದ ವಿಧಾನ ಸಾರ್ವಜನಿಕ ಒಳಿತಿಗಾಗಿ ಮುಡಿಪಾಗಿ ಇಟ್ಟು ಹೋಗಿದೆ.

ಭಾರತೀಯ ಬ್ಯಾಂಕಿಂಗ್ ವ್ಯವಸ್ಥೆಗಿಂದು ಒದಗಿ ಬಂದಿರುವ ಪಂಥಾಹ್ವಾನ ದೊಡ್ಡದಾದುದು. ಇದರ ಫಲಿತಾಂಶ ಜನತೆಗೆ ಒಳ್ಳೆಯದನ್ನೇ ಮಾಡಲಿ ಎಂದು ಹಾರೈಸೋಣ.

ಹಾರ್ದಿಕ ಶುಭಾಶಯಗಳು:-

ⓜ ಮೈಸೂರು ಸೇಲ್ಸ್ ಇಂಟರ್‌ನ್ಯಾಶನಲ್ ಲಿಮಿಟೆಡ್

"ಹರಿ ನಿವಾಸ"
36, ಕನ್ನಿಂಗ್‌ಹ್ಯಾಮ್ ರಸ್ತೆ
ಬೆಂಗಳೂರು 1-ಬಿ.

ಈ ಕೆಳಗಿನವುಗಳ ಏಕೈಕ ಮಾರಾಟ ಏಜೆಂಟರು:—

ರೇಡಿಯೊ ಎಂಡ್ ಇಲೆಕ್ಟ್ರಿಕ್ ಮೆನ್ಯುಫ್ಯಾಕ್ಚರಿಂಗ್ ಕಂ. ಲಿ.
ಮೈಸೂರು ಇಂಡಸ್ಟ್ರಿಯಲ್ ಮತ್ತು ಟೆಸ್ಟಿಂಗ್ ಲೆಬೊರೆಟರಿ ಲಿ.
ಮೈಸೂರು ಇಂಪ್ಲಿಮೆಂಟ್ಸ್ ಫ್ಯಾಕ್ಟರಿ
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ
ಗವರ್ನಮೆಂಟ್ ಇಲೆಕ್ಟ್ರಿಕ್ ಫ್ಯಾಕ್ಟರಿ
ಗವರ್ನಮೆಂಟ್ ಸೆಂಡಲ್ ಉಡ್ ಓಯಿಲ್ ಫ್ಯಾಕ್ಟರಿಗಳು
ಮತ್ತು
ಮೈಸೂರು ಸ್ಟೇಟ್ ಲಾಟರಿ.

ಪ್ರಾಚೀನ ಕೆನರಾ ಜಿಲ್ಲೆಗಳಲ್ಲಿ ಗುಡಿ ಕೈಗಾರಿಕೆ

(ಐದನೇ ಪುಟದಿಂದ)

ಕವಿಯು ತಿಳಿಸುತ್ತಾನೆ ಗೆರಸೊಪ್ಪ ರಾಜ ಸಾಳ್ವ ಮಲರಾಯನ ಆಸ್ಥಾನದಲ್ಲಿ ದ್ದ ಸಾಳ್ವ ಕವಿಯು ತನ್ನ ಭಾರತದಲ್ಲಿ ಯುದ್ಧ ಸಾಮಗ್ರಿಗಳಾದ ಕತ್ತಿ ಗುರಾಣಿ ಭರ್ಚಿ ಈಟಿಗಳನ್ನು ಉಲ್ಲೇಖಿಸಿ ಇವುಗಳನ್ನು ತಯಾರಿಸುವಲ್ಲಿ ಇಲ್ಲಿನ ಕರ್ಮಾರರು ನಿಪುಣತೆಯನ್ನು ಹೊಂದಿದ್ದರೆಂದು ತಿಳಿಸಿದ್ದಾನೆ.

ವಿದೇಶಿ ಪ್ರವಾಸಿಗರು

ಕೆನರಾ ಜಿಲ್ಲೆಯನ್ನು ಸಂದರ್ಶಿಸಿದ ವಿದೇಶಿ ಪ್ರವಾಸಿಗರ ಬರಹದಿಂದ ಇಲ್ಲಿನ ಗುಡಿ ಕೈಗಾರಿಕೆಗಳ ವಿಷಯ ತಿಳಿದು ಬರುತ್ತದೆ. ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ಕೆನರಾ ಸಂದರ್ಶಿಸಿದ ಬಾರ್ಬೋಸಾನು ಭಟ್ಟಳ ಮತ್ತು ಹೊನ್ನಾವರ ಪ್ರದೇಶಗಳಲ್ಲಿ ಜನರು ಬಟ್ಟೆ ನೇಯುತಿದ್ದರು, ಹುರಿಹಗ್ಗ ತಯಾರಿಸುತಿದ್ದರು ಮತ್ತು ಬೀಳಲಿನ ಬುಟ್ಟಿ ತಯಾರಿಸುತಿದ್ದರೆಂದು ತಿಳಿಸಿದ್ದಾನೆ. ಕೆಳದಿ ಅರಸರ ಕಾಲದಲ್ಲಿ ಕೆನರಾ ಜಿಲ್ಲೆಯನ್ನು ಸಂದರ್ಶಿಸಿದ 'ಡೆಲಾವೆಲ್ಲ' ಎಂಬ ಇಟೇಲಿ ಪ್ರವಾಸಿಯು ಮಂಗಳೂರಿನ ಅಕ್ಕಾಲಿಗರು ತರ ತರದ ಚೂರಿಗಳನ್ನು ಮತ್ತು ಇನ್ನಿತರ ಆಟದ ಸಾಮಾನುಗಳನ್ನು ತಯಾರಿಸುತಿದ್ದರೆಂದೂ ಮತ್ತು ಅವುಗಳ ಕುಶಲತೆಗೆ ಬೆರಗಾಗಿ ಅವುಗಳಲ್ಲಿ ಕೆಲವನ್ನು ಅವನು ತೆಗೆದು ಕೊಂಡನೆಂದೂ ತಿಳಿಸಿದ್ದಾನೆ. ಉಳ್ಳಾಳವನ್ನು ಸಂದರ್ಶಿಸಿದ ಈ ಪ್ರವಾಸಿ ಇಲ್ಲಿ ಒಳ್ಳೆಯ ಲಿನನ್ ಬಟ್ಟೆಗಳನ್ನು ಮಾರುವ ಅಂಗಡಿಗಳಿದ್ದವೆಂದೂ ಇಲ್ಲಿ ಹೆಚ್ಚಿನ ಬಟ್ಟೆಗೆ ವಿಕ್ರಯವಾಗುತ್ತಿತ್ತೆಯೆಂದೂ ಮತ್ತು ಇಲ್ಲಿಂದ ಬಟ್ಟೆಗಳು ಪರದೇಶಕ್ಕೆ ಹೋಗುತಿದ್ದವೆಂದು ತಿಳಿಸುತ್ತಾನೆ. ಪೀಟರ್ ಮಂಡಿ ಎಂಬ ಇನ್ನೊಬ್ಬ ಪ್ರವಾಸಿಯು ಭಟ್ಟಳದಲ್ಲಿ ತರ ತರದ ತಾಮ್ರ ಪಾತ್ರೆಗಳನ್ನು ರಚಿಸುವ ಕುಶಲ ಕೈಗಾರಿಕೆಯು ಜನರಿದ್ದರೆಂದು ತಿಳಿಸಿದ್ದಾನೆ.

ವಿಜಯ ನಗರ ಮತ್ತು ಕೆಳದಿ ಅರಸರ ಆಳ್ವಿಕೆಯ ಕಾಲದಲ್ಲಿ ಕೆನರಾ ಜಿಲ್ಲೆಯಲ್ಲಿ ಹಲವಾರು ಕೈಗಾರಿಕೆಗಳಿದ್ದುವೆಂದು ಅವುಗಳಿಗೆ ಈ ಅರಸರು ಹೆಚ್ಚಿನ ಪ್ರೋತ್ಸಾಹವನ್ನೀಯುತಿದ್ದರು. ಕೆಳದಿ ರಾಜ್ಯದ ಪತನದ ನಂತರ ಕೆನರಾ ಜಿಲ್ಲೆಯು ಹೈದರನ ವಶ ಬಂತು. ಹೈದರನು ಇಲ್ಲಿ ಮದ್ದು ಗುಂಡು ತಯಾರಿಸುವ ಮತ್ತು ನೌಕಾ ನಿರ್ಮಾಣ ಕೈಗಾರಿಕೆಗಳನ್ನು ಸ್ಥಾಪಿಸಲು ನಿಶ್ಚಯಿಸಿದನು. ಆದರೆ ಹೆಚ್ಚಿನ ಸಮಯ ಅವನು ಯುದ್ಧದಲ್ಲಿ ನಿರತನಾದ ಕಾರಣ ಇಲ್ಲಿನ ಕೈಗಾರಿಕೆಗಳ ವಿಷಯ ಹೆಚ್ಚಿನ ಗಮನ ಕೊಡಲು ಅವನಿಗೆ ಆಗಲಿಲ್ಲ. ಕ್ರಿ.ಶ.1799 ರಲ್ಲಿ ಕೆನರಾ ಇಂಗ್ಲೀಷರ ವಶವಾಯಿತು. ಇದೇ ಸಮಯದಲ್ಲಿ ಇಂಗ್ಲಾಂಡಿನಲ್ಲಿ ಔದ್ಯೋಗಿಕ ಕ್ರಾಂತಿ ನಡೆದುದರಿಂದ ಮಿಲ್ಲಿನಲ್ಲಿ ತಯಾರಾದ ವಸ್ತುಗಳು ಇಲ್ಲಿ ಬರಲಾರಂಭಿಸಿದವು. ಇದರಿಂದಾಗಿ ಭಾರತದ ಇತರ ಭಾಗಗಳಲ್ಲಿ ಗುಡಿ ಕೈಗಾರಿಕೆ ನಾಶವಾದಂತೆ ಇಲ್ಲಿನ ಗುಡಿ ಕೈಗಾರಿಕೆ ಅಧೋಗತಿಗಿಳಿಯಿತು.

ಆಧಾರ ಗ್ರಂಥಗಳು

1 Ancient Karnatak vol. I — Dr. B. A. Saletore

2 Tuluva Under Vijayanagar Times, Dr. S. U. Kamath.

3 ಪ್ರವಾಸಿ ಕಂಡ ಇಂಡಿಯಾ ಭಾಗ–೨ — ನಾಗೇಗೌಡ

ಸ್ವರಾಜ್ಯ ಲಹರಿ

ಕವಿ: ಶ್ರೀ ಎಸ್. ತಿರುಮಲೇಶ್ವರ ಭಟ್., ವಿದ್ವಾನ್.

೧

ಹಲವು ದಶಕಗಳ ದಾಸ್ಯ ಬಂಧನದಿ
ಭಾರತಾಂಬೆಯೆಂದು
ನೊಂದು ಬೆಂದಿರಲು, ದಾಸ್ಯಶೃಂಖಲೆಯ
ಕಡಿದು ಬಿಸುಡಲೆಂದು
ಶಾಂತಿಕರವಾಲ ಪಿಡಿದು ಹೋರಾಡಿ
ದಾಸ್ಯಪಾಶ ತರಿದು
ಗಾಂಧಿ ಭಾರತಕೆ ತಂದ ಸ್ವಾತಂತ್ರ್ಯವನ್ನು
ಸ್ವಾರ್ಥ ತೊರೆದು.

೨

ಬಂತು ಸ್ವಾತಂತ್ರ್ಯ ಭಾರತಕ್ಕೆ
ಸೌಭಾಗ್ಯಸುಧೆಯ ಸುರಿಸಿ
ಭಾರತಾಂಬೆ ನಮಗೊಲಿದಳುಭಯ
ಹಸ್ತಗಳನೆತ್ತಿ ಹರಸಿ
ಮೊಗದಿ ಮಿಂಚಿದುದು ಮಂದಹಾಸ
ಶ್ರೀಕಳೆಯು ದಾಸ್ಯತೊಲಗಿ
ಮಾಯವಾದುದಾಂಗ್ಲೇಯರೊಡೆತನದ
ಮಂಜು ಮುಸುಕು ಕರಗಿ

೩

ಹಾರಿತಂತರಿಕ್ಷದಲಿ ರಾಷ್ಟ್ರಕೇತನವು
ಚಕ್ರಧ
ಮೂರು ಬಣ್ಣಗಳ ಧರಿಸಿ ಭಾರತಕೆ
ಬಹ ಸ್ವರಾಜ್ಯಸ
ರಾಷ್ಟ್ರ ಸ್ವಾತಂತ್ರ್ಯ ಪಡೆಯೆ
ರಾಜರಾಳ್ತನವು ಸಲ್ಲದೆಂ
ಧೀರತನದಿ ಸರದಾರನೊಕ್ಕೂಟ
ರಾಷ್ಟ್ರಗೆಯ್ದನಂ

೪

ರಾಜರಾಳ್ತನವುಮುಗಿದು ಮೊದಲಾಯ
ನವ ಪ್ರಜಾಸ್ಪಭು
ಸ್ವಾವಲಂಬನ ಸ್ವಾಭಿಮಾನಗಳಿ
ವರ ಸ್ವರಾಜ್ಯ ತ
ನೆಹರು ತಾನಾದನ್ನೆ ಪ್ರಧಾನಿ ಭಾರತಕ
ಭಾಗ್ಯವ
ಜನತೆ ಹಿರಿಹಿಗ್ಗಿ ಹರುಷದಿಂ ನಲಿದುದಂ
ಮನದಿ ಮುದ

೫

ರಾಷ್ಟ್ರದಾದ್ಯಂತ ಜನತೆಗಾಯ್ತು
ಗಣರಾಜ್ಯವಾಗಿ ತೋ
ಒದಗಿದೀ ಪ್ರಜಾರಾಜ್ಯ ದಿನವು
ಜನಕಹುದು ಬಹು ವಿತ
ನಾಕನೆಲಕೆ ತಾನಿಳಿದು ಬಂದಂತೆ
ಜನರಿಗಾಯ್ತು ಹ
ನಡೆಸಿದಪೆವು ಗಣರಾಜ್ಯದುತ್ಸವವ
ನಾವು ವರ್ಷ ವ

೬

ಸ್ವಾರ್ಥ ಅಧಿಕಾರಕಾಗಿ ಸರಕಾರ
ನಡೆಸುವುದು ನೋಡೆ ಬಹಳ ಹೇ
ಪ್ರಜೆಗಳುನ್ನತಿಯ ಸಾಧಿಸುವುದೆ
ಮಂತ್ರಿಗಳ ಮುಖ್ಯ ಧ್ಯೇ
ಶಾಸನದ ಚಾಂಬು ಸಿಡಿದು ರಾಷ್ಟ್ರವನು
ಮಾಡದಿರಲಿ ನಾ
ಧನ್ಯಭಾರತದಿ ಬೆಳಗುತಿರಲಿ
ಸುಖ ಶಾಂತಿ ಚಿರಪ್ರಕಾ

Telegram: "MYFINCORP" Telephone: 71169

MYSORE STATE FINANCIAL CORPORATION

"Sri Sailam", No. 7, First Main Road,
Gandhinagar, BANGALORE-9.

Do you require financial assistance for the expansion of existing industries or for the starting of new industries in the Mysore State?

WE offer financial assistance for those engaged or to be engaged in.....

THE Manufacture, Preservation or Processing of Goods;

THE Mining Industry, Hotel Industry, Transport Industry;

THE Generation or Distribution of Electricity or any other form of power; and--

THE Development of a contiguous area of land as an Industrial Estate.

AVAIL yourself of this opportunity and help industrialisation of the State.

FOR particulars, please contact the Managing Director at the office of the Corporation.

With best compliments from:

HOTEL PRASHANTH

21, EAST TANK BUND ROAD,

BANGALORE-9

B. M. PRABHU
Proprietor

Grams:
'CORONET' Malpe
'CORONET' Karwar

Phones:
583, 584, 595 Malpe
179 K r

With Best Compliments From

M. MADHVARAJ, B. A.

Coronet Canning Company, Malpe

Coronet Quick Freezing Plant, Malpe

Coronet Fishmeal and Oil Company, Malpe

Coronet Ice & Cold Storage Company, Malpe

Coronet Ice & Cold Storage Company, Karwar

Exporters of Canned & Frozen Seafoods
and
Fishmeal & Fish Oil

Distributors in the State of Mysore
FOR WORLD RENOWNED
"KELVIN"
MARINE DIESEL ENGINES

ನಾವಿಬ್ಬರು
ನಮಗಿಬ್ಬರೇ ಮಕ್ಕಳು
ಚಿಕ್ಕ ಸಂಸಾರ
ಸುಖಕ್ಕೆ ಆಧಾರ.

ಎರಡು ಅಥವಾ ಮೂರು ಮಕ್ಕಳನಂತರ ಮುಂದೆ ಮಕ್ಕಳಾಗದ ಹಾಗೆ ಚಿಕಿತ್ಸೆ ಪಡೆಯುವುದು ಅತ್ಯುತ್ತಮ.

ದು ಸಹ್ಯರಿ ಕಾರ್ಖಾನೆಯು ರೂಪುಗೊಳ್ಳುತ್ತಿದೆ. ಇದರಲ್ಲಿ ಪಾಂಡವಪುರದ ಸಹ್ಯರಿ ಕಾರ್ಖಾನೆಯು ಸಹಕಾರಿ ತತ್ವದ ಮೇಲೆ ತೃಪ್ತಿಕರವಾಗಿ ಕೆಲಸ ಮಾಡುತ್ತಿದೆ. ಬೆಳಗೊಳದ ಗೊಬ್ಬರ ಕಾರ್ಖಾನೆಯು ಭಾರತದಲ್ಲಿಯೇ ಪ್ರಪ್ರಥಮವಾಗಿ ಸ್ಥಾಪಿಸಲ್ಪಟ್ಟ ರಾಸಾಯನಿಕ ಗೊಬ್ಬರದ ಕಾರ್ಖಾನೆಯಾಗಿದೆ. ಭಾರತದಲ್ಲೇ ಪ್ರಪ್ರಥಮವಾಗಿ ಕಬ್ಬಿನ ಸಿಪ್ಪೆಯನ್ನುಪಯೋಗಿಸಿ ಕಾಗದ ತಯಾರಿಸುವ ಕಾರ್ಖಾನೆ ಬೆಂಗಳೂರಲ್ಲಿ ಗಣಿಗಾರಿಕೆ ಸ್ಥಾಪಿಸಲಾಗಿದೆ. ಗಣಿಗಳಲ್ಲಿ ಸ್ಥಾಪಿಸಗೊಂಡ್ಡಿರುವ ಕೆಲಸವನ್ನು ಆರಂಭಿಸುವ ಆಸಿಟೇಟ್ ಕಾರ್ಖಾನೆಯು ಇಲ್ಲಿಗೆ ಎರಡು ಮೈಲಿ ದೂರದಲ್ಲಿದೆ.

ಮಂಡ್ಯ ಜಿಲ್ಲೆಯಲ್ಲಿ ಸಹಕಾರಿ ಆಂದೋಲನ ತುಂಬ ಯಶಸ್ವಿಯಾಗಿ ನಡೆಯುತ್ತಿದೆಯೆಂದು ಸಂತೋಷದಿಂದ ತಿಳಿಯ ಬಯಸುತ್ತೇನೆ. ಮಂಡ್ಯದ ರೈತರ ವ್ಯವಸಾಯೋತ್ಪನ್ನ ಮಾರಾಟ ಸಂಘದ ಕಾರ್ಯ ಚಟುವಟಿಕೆಗಳು ಇಡೀ ದೇಶದಲ್ಲಿಯೇ ಅನುಕರಣೀಯವು ವ್ಯವಸ್ಥೆಯೆಂದು ಖ್ಯಾತಿ ಪಡೆದಿದೆ. ಈ ಸಂಘದ ಆಶ್ರಯದಲ್ಲಿ ಸ್ಥಾಪಿಸಗೊಂಡಿರುವ ಅಧುನಿಕ ಅಕ್ಕಿ ತೆಗೆಯುವ ಗಿರಣಿ, ಬತ್ತ ಶೇಖರಣಾ ಗೋದಾಮುಗಳು, ಜಾನುವಾರು ವೈದ್ಯ ತಯಾರಿಕಾ ಕಾರ್ಖಾನೆ, ಹಿಂಡಿ ಮತ್ತು ತೌಡಿನಿಂದ ಎಣ್ಣೆ ತೆಗೆಯುವ ಕಾರ್ಖಾನೆ ಇವುಗಳ ವಾರ್ಷಿಕ ಪ್ರಗತಿಗಳನ್ನು ಆಕರ್ಷಿಸಿವೆ. ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ಅತ್ಯಂತ ಯಶಸ್ವಿಯಾಗಿ ಕೆಲಸ ಮಾಡುತ್ತಿರುವ ಪ್ರಮುಖ ಬ್ಯಾಂಕ್ ಆಗಿದೆ. ಮಂಡ್ಯದಲ್ಲಿ ಸ್ಥಾಪನೆಗೊಂಡಿರುವ ಜನತಾ ಶಿಕ್ಷಣ ಸಂಸ್ಥೆಯು ಶ್ರಮಿಕರಲ್ಲಿ ಒಂದು ಇಂಜಿನಿಯರಿಂಗ್ ಕಾಲೇಜ್, ಪ್ರಥಮ ದರ್ಜೆ ಕಾಲೇಜ್, ನೇತಾಜಿನ ವಿದ್ಯಾರ್ಥಿಗಳನ್ನು ಕೂಡ ಆಕರ್ಷಿಸಿವೆ. ಇದೇ ಸಂಸ್ಥೆಯ ಆಶ್ರಯದಲ್ಲಿ ನಯಸ್ಕ ಉದ್ಯೋಗಿಗಳಿಗೆ ಅನುಕೂಲವಾಗುವಂತೆ ಈ ಸಭೆ ಕಡೆಯುವ ಈ ಬೃಹತ್ ಕಟ್ಟಡದ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಲಾಗಿದೆ.

ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರು ರಚನಾತ್ಮಕ ಕಾರ್ಯಗಳಲ್ಲಿ ಅತ್ಯಂತ ಸಕ್ರಿಯರಾಗಿ ಕೆಲಸ ಮಾಡಿಕೊಂಡು ಬಂದಿರುತ್ತಾರೆ. ಈ ಜಿಲ್ಲೆಯ ಜನ ನಾಯಕರೂ ಮಾನ್ಯ ವಿದ್ಯಾಸಚಿವರೂ ಆದ ಶ್ರೀ ಕೆ. ವಿ. ಶಂಕರಗೌಡರ ಮಾರ್ಗದರ್ಶಿತ್ವದಲ್ಲಿ ಈ ಕಾರ್ಯಕರ್ತರ ತಂಡವು ಜಿಲ್ಲೆಯ ಎಲ್ಲ ಶೈಕ್ಷಣಿಕ, ಸಾಮಾಜಿಕ ಮತ್ತು ಸೇವಾ ಸಂಸ್ಥೆಗಳಲ್ಲಿ ವ್ಯವಸ್ಥಾಪಕ ಸ್ಥಾನಗಳಲ್ಲಿ ಫಲೋಪೇಕ್ಷರಾಗಿ ಶ್ರದ್ಧೆಯಿಂದ ಸೇವಾತತ್ಪರರಾಗಿ ದುಡಿಯುತ್ತಿರುವುದು ಹಾಗೂ ಪ್ರಗತಿಪಥವನ್ನು ಕಾಣುವುದು ಸಾಧ್ಯವಾಗಿರುವುದು. ಜಿಲ್ಲಾ ಜನತೆಯ ಪೂರ್ಣ ಆಶೀರ್ವಾದದಿಂದ ಮುಂದೆ ಎಂಥದನ್ನು ಸಾಧಿಸುವುದು ಎಂದೆಂದಿಗೂ ಸಾಧ್ಯವಾಗಿರುವಂತಿಲ್ಲ.

ತಮ್ಮನ್ನು ಮತ್ತೊಮ್ಮೆ ಹೃದಯ ತುಂಬಿದ ಪ್ರೇಮದಿಂದ ಇಲ್ಲಿಗೆ ಸ್ವಾಗತಿಸುತ್ತಾ ತಾವು ಇಲ್ಲಿರುವಷ್ಟು ಕಾಲ ಸುಖ ಸಂತೋಷಗಳಿಂದ ತುಂಬಿರಲಿ ಮತ್ತು ತಮ್ಮ

ಪಾತಳಿಯಿಂದ ಎದ್ದುಬರಬೇಕು

ನೈತಿಕ ಅಧಃಪತನಕ್ಕೆ ಮೂರು ಮುಖ್ಯ ಕಾರಣಗಳನ್ನು ಕೊಡಬಹುದು.

೧. ನೈತಿಕ ಮತ್ತು ಧಾರ್ಮಿಕ ಶಿಕ್ಷಣದ ಅಭಾವ. ಸಾವಿರಾರು ವಿದ್ಯಾಲಯುಗಳಲ್ಲಿ ಕೋಟ್ಯನುಕೋಟಿ ಮಕ್ಕಳ ಶಿಕ್ಷಣ ನಡೆಯುತ್ತಿದ್ದಾರೆ. ಅವರಿಗೆ ಹಲವಾರು ಭಾಷೆಗಳು, ಗಣಿತ, ವಿಜ್ಞಾನ, ಸಮಾಜ ಶಾಸ್ತ್ರ ಇತ್ಯಾದಿ ಹಲವಾರು ವಿಷಯಗಳಲ್ಲಿ ಶಿಕ್ಷಣ ನೀಡುತ್ತೇವೆ. ಇವುಗಳು ಸಾಮಾನ್ಯವಾಗಿ ಮಕ್ಕಳು ಬೆಳೆದ ಮೇಲೆ ಅವುಗಳ ಹೆಚ್ಚಿನ ಉಪಯೋಗಕ್ಕೆ ಬೀಳುವುದಿಲ್ಲ. ದೈಹಿಕ ಶಿಕ್ಷಣದಿಂದ ಶರೀರ ನಿರ್ಮಾಣದಲ್ಲಿ ಪ್ರಗತಿ ಕಂಡು ಬರುತ್ತದೆ. ಆದರೆ, ಪುಸ್ತಕಗತ ವಿದ್ಯೆಯು ಪ್ರಯೋಜನ ನೂರರಲ್ಲಿ ಹತ್ತು ಜನರಿಗೂ ಉಪಯುಕ್ತವಾಗುವುದಿಲ್ಲ. ಜೀವನ ನಿರ್ಮಾಣಕ್ಕೆ ಅಗತ್ಯವಾದುದು. ನೈತಿಕ ಮತ್ತು ಧಾರ್ಮಿಕ ಶಿಕ್ಷಣ— ಮಾನಸಿಕ ವಿಕಾಸಕ್ಕೆ ಇದೇ ತಾರಕ. ಆದರೆ ಈ ಬಗ್ಗೆ ಶಾಲೆ-ಕಾಲೇಜುಗಳಲ್ಲಿ ಚಕಾರ ಶಬ್ದವೆನ್ನುವ ಹಾಗಿಲ್ಲ. ಈ ಕಾರಣದಿಂದಲೇ ಮಕ್ಕಳು ಬೆಳೆಯುತ್ತ ಹೋದಂತೆ ಉಚ್ಛೃಂಖಲರಾಗುತ್ತಾರೆ; ದುರ್ವ್ಯಸನಿಯಾಗುತ್ತಾರೆ, ವಿಲಾಸಿ ಮತ್ತು ಅಲಸಿಗಳಾಗುತ್ತಾರೆ. 'ಫೇಶನೇಬಲ್' ಎಂಬ ಮಾರುಕು ಭೂತದ ಕೈವಾರಿಗಳಾಗುತ್ತಾರೆ. ಅವರ ಪೆಚ್ಚು ದುಬಾರಿಯಾಗುತ್ತದೆ. ವಿನಯ ಮತ್ತು ವಿವೇಕಗಳು ಪದದಲಿತವಾಗಿ ಹೋಗುತ್ತವೆ.

೨. ಇಳಿವುಟ್ಟಿದ ಸಿನೆಮಾಗಳು-ನಾಟಕಗಳು ಇಂದು ಸಿನೆಮಾ ನೋಡದವರು ವಿರಳವಿರಳರು. ಸಿನೆಮಾದಲ್ಲಿಂದ ಕ್ಷಣಿಕ ಮನೋರಂಜನೆಯಾಗುತ್ತದೆ. ಆದರೆ, ಇತ್ತೀಚೆಗೆ ಜೀವನದಲ್ಲಿ ಅಳವಡದ ಪರಿಣಾಮಗಳು ಬೀಳುತ್ತವೆಂದು ಹೇಳಲೇ ಬೇಕು. ಸಿನೆಮಾದ ಪ್ರಭಾವ ಬಾಲಕರ, ಯುವಕರ ಮೇಲೆ ಬಿದ್ದೇ ಬೀಳುತ್ತದೆ. ನಟನಟಿಯರ ಶೃಂಗಾರಿಕ ಪ್ರದರ್ಶನ ಹಾಗೂ ಸಿನೆಮಾ ಗೀತೆಗಳು ಯುವ ಜನಾಂಗವನ್ನೂ ಬಾಲ ಜಗತ್ತನ್ನೂ ಸಂಪೂರ್ಣವಾಗಿ ಆವರಿಸಿಕೊಂಡಿವೆಯೆನ್ನುವಷ್ಟರ ಮಟ್ಟಿಗೆ ಇದ್ದಾರೆ. 'ಅಶ್ಲೀಲತೆ'ಯ ಬಗ್ಗೆ ಮತ್ತು ಚುಂಬನ ಬೇಕೇ ಬೇಡವೇ ಎಂಬ ಬಗ್ಗೆ ಬಹಿರಂಗವಾಗಿ ದಿನದಿನವೂ ಹಗರಣ ನಡೆಯುತ್ತಿದೆ. ಇದರಲ್ಲಿ ದೇಶದ ನಾಯಕರಿಣಿಗಳೂ, ವಿಚಾರವೇತ್ತರೂ ಭಾಗವಹಿಸುತ್ತಿದ್ದಾರೆ. ಚಿತ್ರಗಳ ಆಂತರಿಕ ಉದ್ದೇಶ ಉತ್ತಮವಿರಬಹುದು. ಆದರೆ ಇದನ್ನು ಸಾಧಿಸಲು ಅವು ಕಳ್ಳತನದ ದರೋಡೆ, ಸಲಿಗೆ ವತ್ತಿತರ ಅನೇಕ ಪಾಪಾಚಾರಗಳ ಮೂಲವನ್ನು ಅನಾವರಣಗೊಳಿಸುತ್ತವೆ. "ಮೇರೆ ಸಾಮ್ನೆ ವಾಲೀಕಿಡಿಕೇ ವೇ ಇಕ್ ಚಾಂದ್ ಕಾ ಟುಕಡಾ ರಹೆತಾ ಹೈ" ಎಂದು ನೆರೆಮನೆಯುಯುವತಿಯು ಮುಖಂಡ ಹಾಡ ವಸ್ತುವನಕರಿಂದು ಕಡಿನೆ. ಯಿಲ್ಲ 'ಅಕೇ ಲೇ ಚಕೇಲೇ ಕಜಾ-ಜಾ ರಹೇ ಹೋ ಹೆರಿ ಸಾಥ್ ಲೇ ಲೇ ಜಹಾಂಜಾ ರಹೇ ಹೆ ತೀ.... ಎಂದು ಕಾಲೇಜು ಹುಡುಗಿಯರನ್ನೆ ಹಿಂಬಾಲಿಸುವ ರೋಮಿಯೋಗಳಿಗೆ ಆಭಾವವಿಡಿಯೆ ? ನೈಜತೆಯನ್ನು ಪ್ರದರ್ಶಿಸುವ ನೆಪದಿಂದ ತೋರಿಸುವ ಕೆಲವು ದೃಶ್ಯಗಳು ತರಿಸುಭೀಕರವಾದುವು. ಇವುಗಳಲ್ಲಿನ ಶೀಲಕೆಟ್ಟಶ್ಲೀಲತೆಗಳ ಜಗಳವನ್ನು ದೂರವಿಟ್ಟು ರೂಯುವಜನಾಂಗದಲ್ಲೂ ಬಾಲಜಗತ್ತಿನಲ್ಲೂ ಭಯಾನಕ ಪರಿಣಾಮ. ಬೀರುವ ಶಕ್ತಿ ಇದೆಯೆಂಬುದನ್ನು ಯಾವೊಬ್ಬರೂ ಅಲ್ಲಗಳೆಯಲಾರರು.

೩. ಅಶ್ಲೀಲ ಕಥೆ, ಕಾದಂಬರಿ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಇದರ ಪ್ರಚಾರ. ಕಾವೋತ್ತೇಜಕ ಮಾಸಾಲೆಯನ್ನು ಬಿಚ್ಚಿ ತೋರಿಸುವುದು ನೈಜತೆಗೆ ಹತ್ತಿರವಾದರೂ ಇದರ ಪರಿಣಾಮ ಭೀಕರ. ಪತ್ತೇದಾರಿ ಕಾದಂಬರಿಯು ಜಂತಿಮ ಗುರಿ ಕಳ್ಳನಿಗೆ, ಡಕಾಯಿತನಿಗೆ ಶಿಕ್ಷೆ ಯಾದರೂ ಕಳ್ಳತನ, ದರೋಡೆ ಮಾಡುವ ಶಿಕ್ಷಣ ಪಾಠ ಕರನಿಗೆ ಸಿಕ್ಕುತ್ತದೆ. ಸಿಕ್ಕಿಬೀಳಲು ಕಾರಣವೇನೆಂದು ಗುರುತಿಸಿ ತಾವು ಸಿಕ್ಕದಂತೆ ಉಪಾಯವನ್ನು ಪಾಠ ಕರಿಗೂ ಕಡಿಮೆಯಿಲ್ಲ. ಮನೋರಂಜಕವೂ ರೋಚಕವೂ ಆದ ಇಂಥಹ ಕಥೆಗಳೆಂದರೆ. ಹಲವರಿಗೆ ಜೀವ. ಇದರ ಪರಿಣಾಮವನ್ನಾಗಿಯೇ ಜನಾಭಿರುಚಿ ತೀರ ವಿಕೃತವಾಗಿದೆ. ಭವಿಷ್ಯ ಅಂಧಕಾರಮಯವಾಗಿದೆ. ಸಿನೆಮಾ—ನಾಟಕ—ಕಥೆ—ಕಾದಂಬರಿಗಳು ಸಮಿಷ್ಟಿಯಾದರೆ ಅಕರ್ಷಣೆಯಿಲ್ಲವೆ ಮುಂದುವರಿಯುವುದೇ ಇಲ್ಲ. ಮುಂಗಲಾಯಿ ಕಾಲಕ್ಕಿಂತಲೂ ಹೆಚ್ಚಾಗಿ ಜನತೆಯಿಂದು ವಿಲಾಸಪ್ರಿಯವಾಗಿದೆ; ಬರ್ಬರರ ಕಾಲಕ್ಕಿಂತ ಮಿಗಿಲಾಗಿ ಜನ ಬರ್ಬರವಾಗಿದೆ.

ಜನಜನವೂ ಸ್ವಾರ್ಥಲೋಲುಪವಾಗಿದೆ; ಈ ಲೋಲುಪತೆ ಬೆಳೆಯುತ್ತಲೇ ಇದೆ. ಸಮಾಜ, ಧರ್ಮ, ದೇಶ ಅಥವಾ ರಾಷ್ಟ್ರಕ್ಕೆ ತಟ್ಟುವ ಹಾನಿಯು ಬಗ್ಗೆ ಅದಕ್ಕೆ ಚಿಂತೆಯಿಲ್ಲ. ಕೇವಲ ತನ್ನ ಸ್ವಾರ್ಥಸಿದ್ಧಿಯೊಂದೇ ಜನತೆಯು ಚರಮೋದ್ದೇಶ ಸಮಾಜಹಾನಿ, ರಾಷ್ಟ್ರ ಹಾನಿ ಅದಕ್ಕೆ ಅಗೋಚರ. ಆಗಣ್ಯ. ಅದುದರಿಂದಲೇ ಅತ್ಯಾಚಾರ, ದ್ವೇಷ, ಹಿಂಸೆ, ಅವಾಚಾರ ಮತ್ತು ಅನ್ಯಾಯಗಳ ಬಲವನ್ನೇ ಹೆಚ್ಚಿಸಿವೆ. ಇದರ ಬಲದಿಂದಲೇ ಹಣ ಗಳಿಸಲು, ಪದವಿ ಪಡೆಯಲು ಪ್ರಯತ್ನಿಸುತ್ತಿರುತ್ತಾರೆ. ದೇಶದಲ್ಲಿ ಎದ್ದಿರುವ ಗೂಂಡಾಗಿರಿ, ವಂಚಕ ಮನೋಭಾವ ಇದಕ್ಕೆ ಪ್ರತ್ಯಕ್ಷ ನಿದರ್ಶನ. ಲಕ್ಷಾಂತರ ರೂಪಾಯಿ ಅನ್ಯಾಯದಿಂದ ಗಳಿಸುವ ಉದ್ದೇಶ ದಿಂದಲೇ ಸಾವಿರಾರು ರೂಪಾಯಿಗಳನ್ನು ಚುನಾವಣೆಗಳಲ್ಲಿ ವೆಚ್ಚ ಮಾಡುತ್ತಾರೆ. ಮಧ್ಯಮ ವರ್ಗದ ಜನತೆಯ ಸ್ಥಿತಿ ಅತ್ಯಂತ ಶೋಚನೀಯ.

ದೇಶದ ಸ್ಥಿತಿಗತಿಗಳು ಇದೇ ರೀತಿ ಮುಂದುವರಿದರೆ, ಆದರ ಗೌರವ ಪಾತಾಳಗಿಳಿಯುವುದೆ. ರಾಷ್ಟ್ರಪ್ರೇಮವು ಮತ್ತು ಆತ್ಮೋನ್ನತಿಯು ಭಾವನೆಯು ಅಭಾವವೇ ನಮ್ಮ ಅಂತಃಜಗತ್ತಿಗೆ ಮುಖ್ಯ ಕಾರಣ. ಈ ಸದ್ಯಗಣಗಳಿಗೆ ನೀರು ಹೊಯ್ದು ಬೆಳೆಸಲು ನಾವು ಎಷ್ಟು ಕಡೆ ಮಾಡುತ್ತೇವೆಯೋ ಅಷ್ಟು ಬೇಗನೇ ಫಲ, ಪರಿಣಾಮಗಳಿಂಡಿವಾಗಿಯೂ ಆಗುತ್ತದೆ. ಅಶಿಸ್ತಿನಲ್ಲೇ ಹುಟ್ಟಿದ, ಬೆಳೆದ ಶಿಕ್ಷಣ ಪಡೆದ ಮಕ್ಕಳು ಶಿಸ್ತಿನ ಕೈವಾರಿಗಳಾಗಿ ಬದುಕುವುದು ಸಾಧ್ಯವಿಲ್ಲ. ಶಾಲೆ—ಕಾಲೇಜುಗಳಲ್ಲಿ ಆಸ್ಪೃಶ್ಯಕ ವ್ಯವಹಾರ ನಿರಂತರವಾದವರು, ಸ್ವೈರವೃತ್ತಿಗೆ ಮಾರುಹೋದವರು ಬೆಳೆದ ಮೇಲೆ ನೇರವಾಗುವವರು ಇಲ್ಲವೆಂದಲ್ಲ; ಕಡಮೆ. ಈ ಪರಿಸ್ಥಿತಿ ತಪ್ಪದೆ ಹೋದರೆ, ಭಾರತದಿಂದ ಧರ್ಮ-ನೀತಿ-ಶಾಂತಿ ಇತ್ಯಾದಿಗಳು ಸಂಪೂರ್ಣ ಹೊರಟು ಹೋಗುವುವು.

ನೈತಿಕ ಪುನರುತ್ಥಾನದಲ್ಲಿ ನಾವು ಆಸಕ್ತಿ ತೋರಿಸಬೇಕು; ಭಾವಿ ಜನಾಂಗವನ್ನು ಅಧಃಪತನದಿಂದ ಬದುಕಿಸಬೇಕು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. No. 10/1970

ಶ್ರೀ ಗಜಾನನ ಕ್ಲೋತ್ ಸ್ಟೋರ್ಸಿನ ಹೋಲ್‌ಸೇಲ್ ಡಿಪಾರ್ಟಮೆಂಟಿನ ಪಾಲುಗಾರರಲ್ಲಿ ಕೆ. ಮಾಧವ ಶೆಣೈ ಕೂಡಾ —ವಾದಿರು

ಮಂತು

ಪಿ ಶೀನ ಸೆಟ್ಟಿ-ಜವುಳಿ ವ್ಯಾಪಾರಸ್ಥ-ಮೂಡ ನಿಡಂಬೂರು ಗ್ರಾಮದ ಬನ್ನಂಜೆ-ಹಾಲಿ ಪೆರ್ಡೂರು ಕರಬಾ —ಪ್ರತಿವಾದಿ

ಸದರಿ ಪ್ರತಿವಾದಿರಿಗೆ—

ಪ್ರತಿವಾದಿಯು ವಾದಿರ ಅಂಗಡಿಯಿಂದ ತಾರೀಕು 27.10.69ರಲ್ಲಿ ಕಡವಾಗಿ ಕೈಯುಕ್ಕೆ ಪಡೆದ ಜವುಳಿ ಕೈಯಬಲ್ಲಿ ಬಾಕಿ ಮೊಡಿಕೊಂಡ ಅಕಲು ಆಯವೇಜು, ವಡ್ಡಿ ಕೂಡಾ ರೂಪ್ಯಾ 124-64ಕ್ಕೆ ವಾದಿರು ಪ್ರತಿವಾದಿಯ ಮೇಲೆ ಮೂಡಿದ ಸದರಿ ವ್ಯಾಜ್ಯವು ತಾರೀಕು 9.7.1970ಕ್ಕೆ ಪ್ರಥಮ ಕೈಪ್ಟಿಬಕ್ಕೆ ಯಿದೋಣಾಗಿಯದೆ. ಆ ದಿವ್ಸ ಸದರಿ ಪ್ರತಿವಾದಿಯು ಸ್ವತಹಾ ಯೂ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಹರಿಸಿದಯಾದ್ರಿ-ಪ್ರತಿವಾದಿಯು ಸ್ವೈರ್ ಹಾಜರಿಯಿಂದ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಯೂ ಮೂಲಕ ಸದರಿ ಪ್ರತಿವಾದಿಗೆ ತಿಳಿಯಪಡಿಸೋಣಾಗಿಯದೆ.

H. Ramanatha Pai
Advocate for Plaintiffs

ಉಡುಪಿ, ತಾರೀಕು, 10.6.1970

ಮಿತ ಕುಟುಂಬ ಯೋಜನೆಗೆ

ಮಿತ ಸಂತತಿ

ಬೆಲೆ 0-75 ಪೈಸೆ ಮಾತ್ರ.

ನವಭಾರತ ಪುಸ್ತಕ ಭಂಡಾರ.

ಪಾಲುಕೋಟೆ, ಉಡುಪಿ, ದ. ಕ.

ಕಾರ್ಯಾನಿರ್ವಹಣೆಗೆ ಪೂರ್ವಸಿದ್ಧತೆಗಳೂ ನಾಡಿನ ಇಂದಿನ ಪರಿಸ್ಥಿತಿಯಲ್ಲಿ ಹೆಚ್ಚು ರಚನಾತ್ಮಕವೂ ಪ್ರಗತಿ ಪಥವೂ ದ ಕೂಡಿದುದೂ ಆಗಿರಲಿ ಎಂದು ಆಶಿಸುತ್ತ ತಮ್ಮ ನಿರ್ಧಾರಗಳು ಕಾಂಗ್ರೆಸ್ ಸಂಸ್ಥೆಯನ್ನು ಹೆಚ್ಚು ಬಲಪಡಿಸಲು ಸಹಾಯವಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

(ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಂ. ಪುಟ್ಟೇಗೌಡರು ಮಾಡಿದ ಸ್ವಾಗತ ಭಾಷಣ.)

ವಿನೋಬಾರ ಶಿಕ್ಷಣದ ದೃಷ್ಟಿ

1. ಕಾರಣವಿಲ್ಲದೆ ಅಂಜಬಾರದ. ಭಯದ ಕಾರಣವೇ ಇದ್ದಾಗ ದೇವರನ್ನು ನೆನೆಸಬೇಕು. ದೇವರ ಸ್ಮರಣೆಯು ಮುಂದೆ ಅಂಜಿಕೆಯನ್ನು ಮಾಯವಾಗಿಸುವುದು.

2. ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳುತ್ತ ಹೋಗಬೇಕು. ನಿನ್ನೆ ಮಾಡಿದ ತಪ್ಪುಗಳು ಪುನಃ ಇಂದು ಆಗಬಾರದು. ಇಂದು ಆದ ತಪ್ಪುಗಳು ನಾಳೆ ಆಗಬಾರದು. ಇಷ್ಟೆಂದು ಕಾಳಜಿ ವಹಿಸಬೇಕು.

3 ವಿಚಾರಗಳನ್ನು ಸರಿಯಾಗಿ ತಿಳಿದುಕೊಳ್ಳಬೇಕು. ವಸ್ತುಸ್ಥಿತಿ ಸರಿಯಿಂದ ವಿಚಾರಗಳನ್ನು ಶೋಧಿಸಿ ಬಿಡಬಾರದು.

4. ಅವಶ್ಯಕತೆ ಬಿದ್ದಾಗ ತನ್ನ ಶಕ್ತಿಯ ಪ್ರಕಾರ ಇನ್ನೊಬ್ಬನಿಗೆ ನೆರವಾಗಬೇಕು. ನಮಗೂ ಇಂಥ ಸಹಾಯವು ಅನೇಕರಿಂದ ಸಿಕ್ಕಿದೆ ಎಂಬುದನ್ನು ಮರೆಯಬಾರದು.

5. ಪ್ರತಿಯೊಂದರಲ್ಲೂ ಮುಂದೆ ನುಗ್ಗಬಾರದು. ಅತ್ಯವಶ್ಯವಾದುದನ್ನು ಮಾತ್ರ ಬೇಕು.

6 ಏನಾದರೊಂದು ಉತ್ಪಾದಕ ಶ್ರಮ ಮಾಡಿದಹೊರತು ಉಣ್ಣಬಾರದು.

7 ದಿನಾಲು ತಪ್ಪದೆ ಸ್ವಲ್ಪಕಾಲ ನಿಯಮಿತವಾಗಿ ಅಭ್ಯಾಸ ಮಾಡಬೇಕು.

8. ಹಿರಿಯರ ಸೇವೆಯಲ್ಲಿ ದೇಹ ಇವೆ ಸಬೇಕು.

9. ನೆಟ್ಟಗೆ ಕೂಡ್ರಬೇಕು. ನೆಟ್ಟಗೆ ನಿಲ್ಲಬೇಕು. ನೆಟ್ಟಗೆ ವಿಚಾರ ಮಾಡಬೇಕು.

10. ಯಾರೊಬ್ಬರಿಗೂ ಹೊಡೆಯಬಾರದು. ಮನಸ್ಸು ನೋಯಿಸಬಾರದು.

11 ಸತ್ಯದಿಂದ ನಡೆಯಬೇಕು. ಸತ್ಯ ಮಾತಾಡಬೇಕು.

12. ಸಿಟ್ಟು ಬಾರದು. ಸಿಟ್ಟು ಬರುವುದು ದುರ್ಬಲತೆಯ ಲಕ್ಷಣ. ನಾವು ನಮ್ಮ ಭೋಗದ ಸಲುವಾಗಿ ಇಲ್ಲ; ಜಗತ್ತಿನ ಸೇವೆಗೆ ಇದ್ದೇವೆ.

13. ಗಡಿಬಿಡಿ, ದಾಂಧಲೆ, ಉಡಾಳತನ ಮಾಡಕೂಡದು.

14. ಅನ್ಯರ ತಪ್ಪುಗಳನ್ನು ಹೆಚ್ಚು ಮಾತಾಡಬಾರದು. ಗುಣಗಳನ್ನೇ ಹುಡುಕಬೇಕು.

15. ಅನ್ಯರ ದೋಷ ನೋಡಿ ನಮಗೂ ದೋಷವಾಗಬೇಕು. ಅನ್ಯರ ದೋಷ ದೂರ ಮಾಡಬೇಕೆಂಬ ಕಳವಳವಿರಬೇಕು.

16. ಯಾವುದೇ ವ್ಯಸನ ಹತ್ತಗೊಡಬಾರದು. ಕಿಂಡಿಬಾಕತನ ಇರಬಾರದು. ಕ್ಷಿಪ್ರದಲ್ಲೇ ಸಮಾಧಾನ ಪಡಬೇಕು.

17. ಸಿಡುಕು ಸ್ವಭಾವ ಇರಬಾರದು. ಎಲ್ಲರೊಡನೆ ಕೂಡಿ ನಡೆಯಬೇಕು. ಮೆಲ್ಲನೆ ಮಾತಾಡಬೇಕು.

18. ಕೆಟ್ಟ ಕೆಲಸ ಮಾಡಲಿಕ್ಕೆ ನಾಚಿಕೆ ಆಗಿಸಬೇಕು. ಮರ್ಯಾದೆ ಬಿಡಬಾರದು.

19. ಕೃತ್ರಿಮವಾಗಿ ಕೈ, ಕಾಲು, ಕಣ್ಣು ಮೊದಲಾದವುಗಳನ್ನು ಅಲ್ಲಾಡಿಸಬಾರದು.

20. ತಮ್ಮ ಶಕ್ತಿಯ ಬಗೆದಿಂದ ಯಾರಾದರೂ ನಮ್ಮನ್ನು ದಬ್ಬಲು ಬಂದರೆ ನಾವು ಹಿಂದಿರಿಯಬಾರದು.

21. ದುರ್ಬಲ ಮನಸ್ಸ್ಯನೇನಾದರೂ ಉಪದ್ರವ ಮಾಡಿದರೆ ಕ್ಷಮಿಸಬೇಕು.

22. ಶರೀರಕ್ಕೆ ಸ್ವಲ್ಪವೂ ಕೂಡ ಏನಾದರೂ ಆದೊಡನೆ ವ್ಯಾಕುಲರಾಗಬಾರದು. ತಾಳ್ಮೆ ಇರಬೇಕು.

23. ಸ್ವಚ್ಛತೆಯ ಕಡೆಗೆ ಲಕ್ಷ್ಯವಿರಬೇಕು.

24. ಯಾರೊಬ್ಬರಲ್ಲಿ ಮತ್ಸರ ಮೂಡಬಾರದು. ತಾನು ಮೇಲೆ ಬಂದವರೊಳಗೆ ತನ್ನಿಂದಾಗಿ ಇನ್ನೊಬ್ಬನನ್ನು ಕೆಳಗೆ ಎಳೆಯುವಂತಾದರು.

25. ತಾನು ಹೆಚ್ಚಿನವನೆಂದೆನಿಸುತ್ತಿರಬಾರದು. ಇದೇ ನಿಜವಾದ ದೊಡ್ಡಸ್ತಿಕೆ.

ಚಿಕ್ಕ ಮಕ್ಕಳ ಶಿಕ್ಷಣದ ದೃಷ್ಟಿಯಿಂದ ಭಗವದ್ಗೀತೆಯಲ್ಲಿಯ ದೈವೀ ಸಂಪತ್ತಿಯ ಲಕ್ಷಣಗಳು ಸರಳವಾದ ಪ್ರಾಥಮಿಕ ಅರ್ಥವನ್ನು ಇಲ್ಲಿ ಕೊಡಲಾಗಿದೆ. ಕೊನೆಯ ಆರ್ಥಗಳನ್ನು ಜ್ಞಾನದೇವರು ಜ್ಞಾನೇಶ್ವರಿಯಲ್ಲಿ ಹೇಳಿದ್ದಾರೆ.

ಶಾಲೆಯಲ್ಲಿ ಗಣಿತ, ಇತಿಹಾಸ, ಭೂಗೋಲ ಮೊದಲಾದ ವಿಷಯಗಳ ಶಿಕ್ಷಣ ವಂತೂ ಕೊಟ್ಟೇ ಕೊಡುತ್ತಾರೆ ಅದರಲ್ಲಿ ಸುಧಾರಣೆ ಎಂದು ನಾವು ಉದ್ಯೋಗ ಒಂದನ್ನು ಸೇರಿಸಿದ್ದೇವೆ. ಜೀವನದಲ್ಲಿ ಗಣಿತ ಮೊದಲಾದವುಗಳ ಉಪಯೋಗ ಎಂಟೆಂಟು ದಿನ ನಿರ್ವಾದ. ಉದ್ಯೋಗದ ಅವಶ್ಯಕತೆಯಂತೂ ಹೇಳುವುದೇ ಬೇಡ. ಆದರೆ ಇಷ್ಟರಿಂದಲೂ ಸಾಲಲಿಲ್ಲ. ಶಿಕ್ಷಣದಲ್ಲಿ ಗುಣಾತ್ಮಕವಾದ ಕಡೆಗೆ ಮುಖ್ಯ ದೃಷ್ಟಿ ಇರಲೇ ಬೇಕು. ಆದಕ್ಕಾಗಿಯೇ ಉದ್ಯೋಗ ಮತ್ತು ಇತರ ವಿಷಯಗಳನ್ನು ಹೊಂದಿಸಿಕೊಳ್ಳಬೇಕು.

ವಿಷಯಗಳ ವಿಧಾನಗಳ ಮೇಲೆ ಶಿಕ್ಷಣ ಸೇವಾಪತ್ರಿಕೆಯನ್ನು ನಿಶ್ಚಯಿಸುವದಂತೂ ಕಷ್ಟವೇ, ಉದ್ಯೋಗವಿಲ್ಲದೆ ಗುಣವಿಕಾಸವಾಗುವದೇ ಇಲ್ಲ ಗುಣಗಳ ಪರೀಕ್ಷೆಯೂ ಆಗುವದಿಲ್ಲ. ಆದ್ದರಿಂದಲೇ ಉದ್ಯೋಗ ಕಲಿಸಬೇಕು. ಅದರಿಂದ ಮಕ್ಕಳು ಸ್ವಾವಲಂಬಿಗಳಾಗುವರೆಂಬದೂ ಒಂದಿದೆ. ವಿಚಾರವನ್ನು ಸುಯೋಗ್ಯ ವ್ಯಕ್ತಪಡಿಸಲು ಬಾರದಿದ್ದರೆ ಸರಿಯಾಗಿ ಸಂರಕ್ಷಣೆಯೂ ಆಗಲಾರದು. ತಪ್ಪು ತಿಳುವಳಿಕೆ ಹಬ್ಬಿ ಹಿಂಸೆಯೂ ಆಗುವ ಸಂಭವವಿದೆ. ಆದ್ದರಿಂದ ಭಾಷೆಯ ಅಭ್ಯಾಸವು ಸಹ ಗುಣ ವಿಕಾಸದಲ್ಲಿ ಬಂದೇ ಬರುತ್ತದೆ. ಆದರೆ ಇವೆಲ್ಲಕ್ಕೆ ಶಿಕ್ಷಣ ದೃಷ್ಟಿಯಿಂದ ಸ್ವತಂತ್ರ ಮಹತ್ವವಿಲ್ಲ

ವಿಚಾರ ವಿಷ!

ಅಮೃತ! ವಿಚಾರವೂ ವಿಷವಾಗಬಲ್ಲದು; ಅಮೃತವೂ ಆಗಬಲ್ಲದು. ಸದ್ವಿಚಾರಿಗಳು ಅಮೃತಗುಣವುಳ್ಳವರಾಗಿಸಿ; ದುರ್ವಿಚಾರಗಳು ವಿಷಗುಣವುಳ್ಳವಾಗಿವೆ. ಆದ್ದರಿಂದ ದೀರ್ಘಾಯು ಸಾಧಕರು ಸದಾ ಸದ್ವಿಚಾರಗಳನ್ನೇ ಹೊಂದ ಬೇಕು.

ಏಳಿಗೆ ನಮ್ಮದಿ, ನಲ್ಮೆಗಳು ಸದ್ವಿಚಾರಗಳಾಗಿವೆ; ಹಗೆ, ಕೇಳ್ಮೆ, ಹೇಷಿಕೆಗಳು, ದುರ್ವಿಚಾರಗಳಾಗಿವೆ. ತನ್ನ ಏಳಿಗೆ, ನಮ್ಮದಿಗಳನ್ನು ನೀಚನೂ ನೆನೆಸುತ್ತಿರುವನು; ಅದು ಅವನಿಗೆ ಒಳಿತನ್ನೇ ಮಾಡುವುದು; ಅದರಿಂದ ಅವನ ನೆತ್ತರು ಫಜ್ಜೆಳವಾಗುವುದು. ಆದರೆ ಜೊತೆಗೆ ಹೆರರ ಬಗೆಗಿನ ಏಳಿಗೆ, ನೆಮ್ಮದಿ, ನಲ್ಮೆಗಳನ್ನು ಯೋಚಿಸುತ್ತಿದ್ದರೆ ಅವರ ನೆತ್ತರು ಇಮ್ಮಡಿ ನಿರ್ಮಲವಾಗುವುದು; ವಪು ಮಹಾಬಲವುಳ್ಳದಾಗಿಪುದು; ಶಾಂತಿ, ಸೈರಣೆಗಳು ನೆಲೆ— ಪಿಲ್ಲವು. ಆದುದರಿಂದ ಹಿರಿಗಾಗಿ ಅಲ್ಲ, ನನ್ನ ನೆಮ್ಮದಿಗಾಗಿಯೇ ಸದ್ವಿಚಾರಗಳ ಸಾಧನೆ ಮಾಡುವಾ.

ಹಾಗಿಲ್ಲದೆ ಹೆರರಿಗೆ ಕೆಡುಕನ್ನು ಬಗೆಯುವುದಂತಿರಲಿ ಬಯಸಿದರೂ ನಾವು ನಮ್ಮ ನೆತ್ತರೇ ಕೆರಾಗುವುದು. ನಮ್ಮ ನೆಮ್ಮದಿ, ಏಳಿಗೆಗಳೇ ಹದಗೆಡುವವು. ಹಗಲೊಡೆಯನಿಗೆ ಉರುಳಿದರೆ ನಮ್ಮ ಮೊಗದ ಮೇಲೆಯೇ ಎಂಜಲು ಬೀಳುವುದಲ್ಲವೇ?

ಪೊಡವಿಗೆ ಚಳಿ, ಗಾಳಿ, ಬಿಸಿಲು, ಮಳೆಗಳ ವರದಾಪ ಮಾಡಿ ಪ್ರಾಣಿಗಳನ್ನು ಪೋಷಿಸುವವಳು ಪ್ರಕೃತಿಮಾತೆಯಾಗಿರುವಾಗ ಹೆರರಿಗೆ ಒಳಿತ್ತು, ಕೆಡುಕುಗಳನ್ನು ಬಗೆಯುವ ಬಲ್ಮೆ ನಮ್ಮದಲ್ಲ. ತಮ್ಮ ಬಾಯಿಕೆ, ಮಾಳ್ಕೆಗಳು ವಿಶ್ವಶಕ್ತಿಯು ಬಿಡುಗಾಳಿಯಲ್ಲಿ ದಿಕ್ಕುಗೆಟ್ಟು ಓಡವೇ? ತಮ್ಮ ಅಲ್ಪ ಬಲದ ಆರಿವಿನ್ಮೆಂಟು ಮಾಡವೇ?

ಆದರೆ ಸದ್ವಿಚಾರಗಳು ನಮ್ಮ ಬಗೆಗಾಗಲಿ, ಹೆರರ ಬಗೆಗಾಗಲಿ, ತಮ್ಮಲ್ಲೆ ಮಹಗಳನ್ನೇ ಹೇಳಿಕ್ಕುವವು; ನಮ್ಮನ್ನೆ ಕ್ಕುಗು, ನಮ್ಮಾಡಿಗಳನ್ನು ನಿರ್ಮೂಲಗೊಳಿಸಿ ನೆಮ್ಮದಿ, ಏಳಿಗೆಗಳಿಗೇ ಸಾಧಕವಾಗುವವು.

ಎಲ್ಲರಿಗೂ ಒಳಿತಾಗಲಿ ಏಳಿಗೆಯಾಗಲಿ, ನೆಮ್ಮದಿಯಾಗಲಿ, ಎಂದು ಹಾರೈಸುವಾ! "ಲೋಕಾಃ ಸಮಸ್ತಾಃ ಸುಖಿನೋ ಭವಂತು" ಎಂಬ ಶಾಂತಿ ಸಂಗೀತ ತತ್ವ ವೈಮನಸ್ಯಗಳ ಕಣಕಣದಲ್ಲಿಯೂ ಮಾರ್ದನಿಯಾಗಲಿ.

—ತಾರಾದಾಸ (ದೀರ್ಘಾಯು)

ಉಡುಪಿ ಮುನ್ಸಿಫ್ ಕೋರ್ಟ್‌ನಲ್ಲಿ

S. C. No. 194/1969

ಶ್ರೀ ಗಣಾನನ ಕ್ಲೋತ್ ಸ್ಟೋರ್ಸ್‌ನ ಹೋಲ್‌ಸೇಲ್ ಡಿಸ್ಟ್ರಿಬ್ಯೂಟರ್‌ನ ಪಾಲುಗಾರನು ಕೆ. ಸೂಧರ ಶೆಣೈ ರು. ಕೂಡಾ — ವಾದಿ

ಮತ್ತು

ವನದುರ್ಗಾದೇವಿ ಕ್ಲೋತ್ ಸ್ಟೋರ್ಸಿನ ಪ್ರೋಪ್ರೈಟರ್ ಕೆ. ಬಾಲಕೃಷ್ಣ ಹೆಗ್ಡೆ ಇವರ ವ್ಯಾಪಾರಸ್ಥ — ಕುಂದಾಪುರ ತಾಲೂಕು ಸಲ್ವಾಡಿಯ ಮಲ್ಲಿರುವನ. — ಪ್ರತಿವಾದಿ

ಯಿದರೊಳಗೆ

ಸದರಿ ಪ್ರತಿವಾದಿಗೆ—

ಪ್ರತಿವಾದಿಯು ವಾದಿರ ಆಂಗಡಿಯಲ್ಲಿ ತಾರೀಕು 10-1-1969ರಿಂದ 19.6.69ರ ವರೆಗೆ ನಮ್ಮಿದ ಲೇವಾದೇವಿ ಬಾಬ್ತು ಪ್ರತಿವಾದಿಯಿಂದ ವಾದಿರಿಗೆ ಬರ್ತ್ಕ ಆಸಲು, ಬಡ್ಡಿ ಕೂಡಾ ರೂಪಾಯಿ 467.12ಕ್ಕೆ ವಾದಿರು ಪ್ರತಿವಾದಿಯು ಮೇಲೆ ವಾದಿದ ಸದರಿ ವ್ಯಾಜ್ಯವು ತಾರೀಕು 4 — 7 — 1970ಕ್ಕೆ ಪ್ರಥಮ ತನ್ನಿ ಬಗ್ಗೆ ಯಿಡೋಣಾಗಿಯಿದೆ. ಆ ದಿವ್ಸ ಸದ್ರಿ ಪ್ರತಿವಾದಿಯು ಸ್ವತಹಾ ಯೂ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಆದರೆಯಾದೆಯಿದ್ದು ಪ್ರತಿವಾದಿಯು ಗೈರು ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನವಾಲ್ಪಡುವದೆಂದು ಯಿಲ್ಲಿ ಮೂಲಕ ತಿಳಿಸಲಾಗಿಯಿದೆ.

H. Ramanatha Pai
Advocate for Plaintiff

ಉಡುಪಿ, ತಾ. 9.6.1970

ಕುಂದಾಪುರ ಮುನ್ಸಿಫ್
ಕೋರ್ಟ್‌ನಲ್ಲಿ

S. C. 180/69

ಕೃಷ್ಣಪ್ಪ ಶೆಟ್ಟಿ — ವಾದಿ
ತಿಮ್ಮ ಪೂಜಾರಿ — ಪ್ರತಿವಾದಿ.

ಸದ್ರಿ ವಾದಿ ಕಡೆಯಿಂದ ಈ ಮೂಲ್ಯ ಜಾಹೀರ ಮಾಡಿಕೊಳ್ಳುವದೇನೆಂದರೆ,

ತಿಮ್ಮ ಪೂಜಾರಿ — ಕಾವೇರಿ ಹೆಂಗ್ಸಿನ ಮಗ, ಹೆಂಗಳ್ಳಿ ಗ್ರಾಮದ ಕೊಂಡ್ಕತ್ತಲ್ಲಿ ರುವವ.

ವಾದಿಗೆ ಪ್ರತಿವಾದಿ ಬರಿಕೊಟ್ಟ ಡಿಸ್ಕರಂಡ ನೋಟಿನ ಅಸಲು ಬಡ್ಡಿ ಕೂಡಾ ರೂ. 464 — 00ಬರೋಡಿ ಕೊಳ್ಳುವರೆ ವಾದಿ ಮಾಡಿದ್ದಾನೆ 7.7.70ಕ್ಕೆ ಆಪ್ಪೈರೆ ತನ್ನಿಗೆ ಯಿಟ್ಟಿದೆ. ಆ ಕುರಿತು ನಾವು ಉದಾರಣೆಯಿದ್ದೆ ಸದ್ರಿ ದಿವ್ಸ ಹಗಲು 11ಗಂಟೆಗೆ ಮೇಲ್ಕಂಡ ಕೋರ್ಟ್ ಮುಂದೆ ಸ್ವತಹಾ ಪ ಹಕೀಲರುದ್ವಾರ ಹಾಜ್ರಾಗಿ ಜಾಹೀರ ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ನಮ್ಮ ಗೈರ ಹಾಜರಿಯಲ್ಲಿ ಏಕಕ್ಷೆಪ್ತವಾಗಿ ತೀರ್ಮಾನಾಲ್ಪಡುವದೆಂಬ ಖಂಡ್ಡಿ ವಾದಿ ಕಡೆಯಿಂದ ಈ ಮೂಲ್ಯ ತಿಳಿಯ ಪಡ್ಸಿದೆ.

U. Viltal Shetty
Advocate for Plaintiff

Kundapoor, Date. 9-6-70

ಸಜ್ಜನರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಪಾಕೀಯದಲ್ಲಿ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಜನಪ್ರತಿನಿಧ್ಯ ಉದ್ಯೋಗವಲ್ಲ

೧೯೭೨ರ ಆರಂಭದಲ್ಲಿ ದೇಶದಲ್ಲಿ ಐದನೆಯ ಬಾರಿಗೆ ಸಾರ್ವತ್ರಿಕ ಚುನಾವಣೆಗಳು ನಡೆಯಬೇಕು. ಕೆಲವು ರಾಜ್ಯಕೇಯ ವೀಕ್ಷಕರು ಅನ್ನುವಂತೆ ಅದು ಅಷ್ಟು ದೂರ ಹೋಗುವುದಿಲ್ಲ. ಈ ವರ್ಷದ ಕೊನೆಯಲ್ಲಾಗಲೀ ಮುಂದಿನ ವರ್ಷದ ಆದಿಯಲ್ಲಾಗಲೀ ನಡೆಯಬಹುದು. ಅದೇನಿದ್ದರೂ ಅಧಿಕಾರಾರೂಢರು ತಮ್ಮ ಅಧಿಕಾರವನ್ನು ಉಳಿಸಲು ಅನುಕೂಲವಾದ ವಾತಾವರಣ ನಿರ್ಮಿಸಿ ಹೊರಟಿದ್ದಾರೆ. ವಿವಿಧ ಪಕ್ಷ-ಪಂಡಿತರು ತಂತಮ್ಮ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಿಸುವ ಕೆಲಸದಲ್ಲಿ ನಿರತರಾಗಲು ಪ್ರಯತ್ನಿಸಿದ್ದಾರೆ.

ರಾಜ್ಯಕೇಯ ಪಕ್ಷಗಳು ಚುನಾವಣೆಯಲ್ಲಿ ಗೆದ್ದು ಜನಹಿತ ಸಾಧನೆಯನ್ನು ಮಾಡಬೇಕು. ಜನಪ್ರತಿನಿಧಿಗಳು ಜನಪ್ರಿಯ ವ್ಯಕ್ತಿಯಾಗಿರಬೇಕು; ಜನಸೇವಾನಿರತರಾಗಿರಬೇಕು. ಪ್ರಾತಿನಿಧ್ಯವೆಂಬ ಸೇವೆ ಮಾಡಲೊಂದು ಅಧಿಕಾರಯುತ ಸ್ಥಾನವೆಂಬ ಮಾತ್ರ. ಆದರೆ, ಇಂದು ಇದರ ಅರ್ಥ ತೀರ ವಿಚಿತ್ರವಾಗಿದೆ. 'ಜನಪ್ರತಿನಿಧಿ'ವೂ ಒಂದು ಉದ್ಯೋಗವೆನ್ನುವಂತಹ ದುರವಸ್ಥೆ ಒದಗಿ ಬಂದಿದೆ! ಸರಕಾರಿ ಉದ್ಯೋಗಿಗಳಿಗಿಂತಲೂ ಹೆಚ್ಚಾಗಿ ಈ ಜನತಾ ಉದ್ಯೋಗಿಗಳು ಸೇವಾಮಂತ್ರಗಳಾಗಿಯೂ ಉದ್ಧರಿಸುವವರಾಗಿಯೂ ಬೆಳೆದು ಬರುತ್ತಿದ್ದಾರೆ.

ರಾಜ್ಯಕೇಯವೂ ಒಂದು ದಂಧೆಯೆನಿಸಿವಷ್ಟು ಕೆಳಮಟ್ಟಕ್ಕೆ ಬಂದಿರುವುದರಿಂದಲೇ ರಾಜ್ಯಕೇಯದಿಂದ ಸೇವಾಧಾವನೆ ದೂರಾಯನ ಮಾಡಿದೆ. ಸ್ವಾರ್ಥಸಾಧನೆಗೆ ಅಕ್ಕ ಸ್ವಾಧವನ್ನು ಹೇಗೆ ಬಳಸಿಕೊಳ್ಳಬಹುದೆಂದೇ ತಲೆ ಕರ್ಚು ಮಾಡುವವರು ಹೆಚ್ಚುತ್ತಿರುವಂಬ ಹೋಗಿದ್ದಾರೆ. ತಮ್ಮ ವ್ಯಕ್ತಿಗತ ಸಾಧನೆ ಪಕ್ಷಗತ ಹೋಗ್ಯತೆಯಿಂದ ಗೆದ್ದು ಬರುವವರು ಅಪರೂಪವೇ; ವಿವಿಧ ಪಕ್ಷ—ಅವಿಶ್ವ—ಮಹತ್ವಾಕಾಂಕ್ಷೆಗಳಂಗಿ ಚುನಾವಣೆಯಲ್ಲಿ ನಿಲ್ಲುವ ಹುರಿಯಾಳುಗಳು ಮತದಾರರಿಗೂ ಅವುಗಳಿಂದ ಕುಡಿಸಿ ಗೆದ್ದು ಬರುವ ಪ್ರಸಂಗವೇ ಹೆಚ್ಚು.

ಜನಪ್ರತಿನಿಧ್ಯವೊಂದು ಆಕರ್ಷಕ ಉದ್ಯೋಗ. ಇದಕ್ಕೆ ಶಾಲೆ-ಕಾಲೇಜುಗಳ ಸದವಿ ಬೇಕಾಗಿಲ್ಲ. 'ಜನಸೇವೆ' ಮಾಡುವುದಕ್ಕಾಗಿಯೇ ಇವರಿಗೆ ಸಂಬಳ ದೊರೆಯುತ್ತದೆ; ಭತ್ತೆ ದೊರೆಯುತ್ತದೆ; ಇನ್ನು ತರ ಇತರರಿಗಿಲ್ಲದ ಸೌಲಭ್ಯಗಳು ದೊರೆಯುತ್ತವೆ. ಶಾಸನ ಸಭೆಗಳಲ್ಲಿ ಇವರಿಗೆ ಸಂಪೂರ್ಣ ರಕ್ಷಣೆಯಿದೆ. ಇದರ ಮೇಲೆ, ಸರಕಾರದ ಮೇಲೆ ಪ್ರಭಾವ ಬೀರಿಯೂವುದಾದರೂ ಬೋರ್ಡ್ ಸಮಿತಿಯ ಸದಸ್ಯರಾದರೆ ಪ್ರತ್ಯೇಕ ಭತ್ತೆಯಿದೆ. ಯಾವುದೂ ದೊರೆಯದೆ ಹೋದರೇನು, ತಮಗೋ ತನ್ನವರಿಗೋ ಏನಾದರೊಂದು ಕಂಟ್ರಾಕ್ಟು, ಪರ್ಮಿಟ್ಟು ಗಿಟ್ಟಿಸಿಕೊಂಡರೆ, ಬೇರಾವುದೂ ಬೇಡ.

ಪಂಜಾಬು ಶಾಸನ ಸಭಾಸದರ ವೈಭವ ನೋಡಿ. ತಿಂಗಳಿಗೆ ಐದುನೂರು ರೂಪಾಯಿ ಸಂಬಳ. ಸಭೆ ಇಲ್ಲದಾಗ ದಿನಕ್ಕೆ ಮೂವತ್ತೈದು ರೂಪಾಯಿ ಭತ್ತೆ! ಉಚಿತ ವಸತಿ, ಟೆಲಿಫೋನ್ ಬಿಟ್ಟು. ತಿಂಗಳಿಗೆ ರೂ. ೫೦ ಟೆಲಿಫೋನ್ ವೆಚ್ಚ. ಪಂಜಾಬು— ಪೆಪ್ಸು ಸಾರಿಗೆ ಕಾರ್ಪೋರೇಶನ್‌ನಲ್ಲಿ ಉಚಿತ ಪಂಜಾರ-ಸಾಲದ್ದಕ್ಕೆ ಅವನಿಗೂ ಅವನ ಕುಟುಂಬ (ಕೆಂಡತಿ ಮಾ ಗಂಡ) ವರ್ಷಕ್ಕೆ ೮೦೦೦ ಕಿಲೋಮೀಟರ್ ಉಚಿತ ಪ್ರಯಾಣ ಸೌಲಭ್ಯ!

ದೇಶದ ಹೆಚ್ಚಿನೆಡೆ ಇಷ್ಟೆಲ್ಲ ಇದ್ದರೂ ಇದಕ್ಕೆ ಸಮೀಪಗತ ಸೌಲಭ್ಯ ಎಲ್ಲ ಜನಕಾ ಪ್ರತಿನಿಧಿಗಳಿಗೆ ಇದೆ. ಮಾಲ್ಯ ಮೂವತ್ತಕ್ಕೆಂದು ಬೆಂಗಳೂರಿಗೆ ಹೋಗುವ ಶಿಕ್ಷಕರಿಗೆ ಈಗ ಆರು ರೂಪಾಯಿ ಭತ್ತೆ. ನಮ್ಮ ಸರಕಾರ ಮಂಜೂರು ಮಾಡಿದೆ. ಮೂಸಿಕ ಏನೂರು ರೂಪಾಯಿ ಸಂಬಳವಿರುವ ನೌಕರನು ಸರಕಾರಿ ಕಾರ್ಯಭಾರದ ಮೇಲೆ ಸಂಜಾತ ಹೋದರೆ, ಅವನಿಗೆ ದಿನಭತ್ತೆ ಎಂಟು ರೂಪಾಯಿ— ಅದೇ ಜನಪ್ರತಿನಿಧಿಗೆ ಅಲ್ಲಿ ಮೂವತ್ತೈದು!

ಪ್ರಾತಿನಿಧ್ಯವೊಂದು ಉದ್ಯೋಗವಾಗಿ ಪರಿಣಮಿಸಿದೆ. ಅದುದರಿಂದಲೇ ಅದರಲ್ಲಿ ಸ್ಪರ್ಧಿಸುವ, ಗೆದ್ದುಬರುವ ಮನೋಧರ್ಮ ಬೆಳೆದು ಬಂದಿದೆ. ಈ ಉದ್ದೇಶವಿಂದ ಗೆದ್ದುಬಂದವರಿಂದ ಸೇವೆ ಹೇಗೆ ಪಡೆದೀತು? ಒಂದು ಕಾಲವಿತ್ತು. ಜನಪ್ರತಿನಿಧ್ಯ ಉದ್ಯೋಗವಾಗಿರಲಿಲ್ಲ; ಅದು ಸೇವಾಧಾವನೆಯಿಂದಲೇ ನಡೆಯುತಿತ್ತು; ವೇತನಭತ್ತೆ ಪ್ರತಿನಿಧಿಗಳಿಂದ ಜನಸೇವೆಯನ್ನೂ ನಿರೀಕ್ಷಿಸಬಾರದು.

ಜನಜಾಗೃತವಾಗಬೇಕು; ಯಾವ ದಾಕ್ಷಿಣ್ಯಕ್ಕೂ ಕಟ್ಟುಬೀಳದೆ ನಮ್ಮ ಸೇವಾಕಾಂಕ್ಷಿಗಳನ್ನೆ ತಮ್ಮ ಪ್ರತಿನಿಧಿಗಳಾಗಿ ಆಯ್ಕೆ ಮಾಡಬೇಕು. ರಾಜ್ಯಕೇಯ ಪಕ್ಷಗಳು ಗೆಲ್ಲಲು ನಿಲ್ಲಿಸುವ ನಾನಾ ಬಗೆಯ ಡೊಂಬರಾಟಗಳಿಗೋ ಸರ್ಕಸ್ಸಿಗೋ ಮರುಳಾಗದೆ 'ಜನಪ್ರತಿನಿಧ್ಯ'ದ ಗೌರವವನ್ನು ಉಳಿಸಿಕೊಳ್ಳಬೇಕು. ಇಲ್ಲವಾದರೆ, ಪ್ರಾತಿನಿಧ್ಯವು ಪವಿತ್ರ ಉದ್ಯೋಗದ ಮಾತ್ರವೆನಿಸೀತು. ಇದು ಪ್ರಜಾಪ್ರಭುತ್ವಕ್ಕೆ ಅಪಕಾರಿಯಾಗಿರಲಿ.

ಉದ್ಘಾಟನೆ

ಬೈಲಹೊಂಗಲ ಯಂ. ಯಂ ಶಾಲೆಯಲ್ಲಿ ೬ನೇ ತರಗತಿಯ ಉದ್ಘಾಟನೆಯು ತಾ. ೪-೬-೭೦ ರಂದು ಡಾ| ಶ್ಯಾಮ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ತಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಶ್ರೀ ಕೃಷ್ಣ ರಾಜ ಸರಕಾಯರು ಸ್ವಾಗತ ಭಾಷಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಗ್ಲೇಡ್ಸನ್ ಜಕ್ಕನ್ನರು ಶಾಲಾ ವರದಿಯನ್ನು ಓದಿದರು. ೬ನೇ ತರಗತಿಯ ಉದ್ಘಾಟನೆಯನ್ನು ಉಡುಪಿ ರೇಂ ಜನಪರೀಕ್ಷಾಧಿಕಾರಿಗಳಾದ ಶ್ರೀಯುತ ಶ್ರೀಪತಿ ರಾವ್ ಇವರು ನೆರವೇರಿಸಿದರು. ಶಾಲೆಗೆ ಹೆಚ್ಚಿನ ನೆರವಿತ್ತ ಶ್ರೀ ಮರ್ಸ ಆರ್. ಎಸ್. ಭಟ್ಟರನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು. ಸಭಿಕರ ಪರವಾಗಿ ಶ್ರೀ ಜೋಬ್ ಡಿ. ಆಮ್ಮನ್ನರೂ ಶ್ರೀ ಜನಾರ್ದನ ಭಟ್ಟರೂ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣದ ತರುವಾಯ ಮುಖ್ಯೋಪಾಧ್ಯಾಯರಿಂದ ಧನ್ಯವಾದವು ಸಮರ್ಪಿಸಲ್ಪಟ್ಟಿತು.

ಬೀಳ್ಕೊಡುವ ಸಮಾರಂಭ

ದಗರವಾಗಿ ಸಾಗರಕ್ಕೆ ತೆರಳಲಿರುವ ಉಡುಪಿ ವಿಭಾಗದ ಎಕ್ಸಿಕ್ಯೂಟಿವ್ ಇಂಜಿನೀಯರ್ ಶ್ರೀ ಯು. ಲಕ್ಷ್ಮಣ ಶೆಟ್ಟರನ್ನು ತಾ. ೩-೬-೭೦ರಂದು ಸಂಬಂಧ ಪಟ್ಟ ಶಿಬಂದಿಯವರು ಸತ್ಕರಿಸಿ ವಿದಾಯ ಕೋರಿದರು. ಸಮಾರಂಭದ ಅಧ್ಯಕ್ಷತೆಯನ್ನು ತಾಲೂಕು ಬೋರ್ಡು ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ವಹಿಸಿದ್ದರು. ಶ್ರೀ ವೆರಿಯರ್ ಪಿಂಟೋ ರವರು ಸ್ವಾಗತಿಸಿದರು. ಶ್ರೀಗಳಾದ ಕೆ. ರಘುರಾಮ ಶೆಟ್ಟಿ, ಕೆ. ರವೀಂದ್ರನಾಥ ಶೆಟ್ಟಿ, ಬಿ. ಸಿದ್ದಪ್ಪ, ಕೆ. ವೇಣುಗೋಪಾಲ, ರಾಮಚಂದ್ರಗುಪ್ತ, ಬಿ. ಎನ್. ಗಣೇಶಾಚಾರ್ ಮೊದಲಾದವರು ಪೂರ್ಣಾವಧಿ ಅತಿಥಿಗಳ ಸಾಧನೆಗಳನ್ನು ಕೊಂಡಾಡಿದರು. ಅಧ್ಯಕ್ಷರು ಶ್ರೀ ಶೆಟ್ಟರ ಕಾರ್ಯಗಳನ್ನು ಶ್ಲಾಘಿಸಿ ಮಾತನಾಡಿದರು. ಅತಿಥಿಗಳು ಉತ್ತರಿಸಿದ ಬಳಿಕ ಹುಣಸಿದ ಚೀರ್ಸ್ ವಹಿಸಿಕೊಂಡ ಹೊಸ ಎಕ್ಸಿಕ್ಯೂಟಿವ್ ಇಂಜನಿಯರ್ ಎಂ. ಎಸ್. ರಂಗಣ್ಣನವರು ಮಾತನಾಡಿದರು. ಭೋಜನಾನಂತರ ಶ್ರೀ ಕೆ. ಎಂ. ಕೃಷ್ಣನ್ ನಂದಿಸಿದರು.

ವಿದಾಯ ಸತ್ಕಾರ

ಮೂಲ್ಕಿಯ ವಿಜಯಾಬ್ಯಾಂಕ್ ಶಾಖೆಯಲ್ಲಿ ಮೆನೇಜರರಾಗಿದ್ದ ಶ್ರೀ ಕೆ. ಎಸ್. ಆಳ್ವರಿಗೆ ಉಜ್ರೆ ಶಾಖೆಗೆ ದಗರವಾದ ಪ್ರಯುಕ್ತ ಅವರಿಗೆ ಬಿಲ್ಲವರ ಸಮಾಜ ಸೇವಾ ಮಂದಿರದಲ್ಲಿ ಇತ್ತೀಚೆಗೆ ವಿದಾಯ ಸತ್ಕಾರವೀಯಲಾಯಿತು. ಡಾ| ಕೆ. ಬಾಬು ಶೆಟ್ಟರು ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಶ್ರೀ ಸೋಮಪ್ಪ ಸುವರ್ಣರು ಸ್ವಾಗತಿಸಿ ಅತಿಥಿಗಳ ಪರಿಚಯ ಮಾಡಿದರು.

ಶ್ರೀಗಳಾದ ಶಂಕರ ಶೆಟ್ಟಿ, ಎಂ. ಉಮೇಶ ಪ್ರಭು, ಡಾ| ಕೆ. ಪಿ. ನಂಧ್ಯಸ್ತಿ, ಜೆ. ಎಸ್. ಮೂಲ್ಕಿ, ಕೆ. ಯಂ. ಶೆಟ್ಟಿ, ಎಂ. ಸಿ. ದೇವ ರಾವ್, ಎಂ. ಎಸ್. ಹರಿಪಾಡಿ ಇವರು ಸಂದರ್ಭೋಚಿತ ಭಾಷಣ ಮಾಡಿದರು. ಶ್ರೀ ಪಿ. ಎಸ್. ಸುಂಡ್ಕೂರು ವಂದನೆಗಳನ್ನರ್ಪಿಸಿದರು.

ನಿರ್ಮಲಾ ಕ್ಲಿನಿಕ್‌ನ ಉದ್ಘಾಟನೆ

ಶಂಕರಪುರದಲ್ಲಿ ಹೊಸತಾಗಿ ತಾ. ೩೧ರಂದು ಡಾ. ಎಡ್ವರ್ಡ್ ಲೋಬೋರವರ ಖರ್ಮಲಾ ಕ್ಲಿನಿಕ್‌ನ ಉದ್ಘಾಟನೆಯನ್ನು ಶಾಸನ ಸಭಾಸದ್ಯ ಶ್ರೀ ಬಿ. ಭಾಸ್ಕರ ಶೆಟ್ಟಿಯವರು ನೆರವೇರಿಸಿದರು. ಉಡುಪಿಯ ಡಾ. ಭಾಸ್ಕರ ಡಿ. ಪಾಂಡೇಶ್ವರವರು ಅಧ್ಯಕ್ಷತೆ ವಹಿಸಿದ್ದರು.

ತನ್ನ ಉದ್ಘಾಟನಾ ಭಾಷಣದಲ್ಲಿ ಶಾಸಕ ಬಿ ಭಾಸ್ಕರ ಶೆಟ್ಟಿಯವರು ಶಂಕರಪುರದ ಮಾಲ್ಲಿಗೆಹೂವಿನ ಪರಿಮಳ ಭಾರತವಾದ್ಯಂತ ಪಸರಿಸಿದೆ. ಜನಪದಿತ ಪ್ರದೇಶವಾದೀರೂ ಶಾಸಕತ್ವ ಡಾಕ್ಟರುಗಳಿಲ್ಲ. ಡಾ. ಎಡ್ವರ್ಡ್ ಲೋಬೋರವರು ಆ ಕೊರತೆಯನ್ನು ನೀಗುವರೆಂಬ ವಿಶ್ವಾಸ ನನಗಿದೆ. ಗ್ರಾಮೀಣ ಪ್ರದೇಶದ ಜನತೆಯ ಜನರ ಸೇವೆಗೈಯ್ಯಲು ಬಲ್ಲ ಡಾಕ್ಟರುಗಳ ಸಂಖ್ಯೆ ಹೆಚ್ಚಲಿ ಎಂದರು.

ಶ್ರೀ ಶೇಷಾದ್ರಿ ವಿಠಲಂ ಪಿಂಟೋ, ಶ್ರೀ ಪಕ್ಕೀರ್ ಡೇಸಾ, ಕೆ. ಫಾ. ವಿಕ್ಟರ್ ಸಲ್ಡಾನ, ಡಾ. ವೆಂಕಟಕೃಷ್ಣ ಮೊದಲಾದವರು ಶ್ರೇಯಸ್ಸನ್ನು ಕೋರಿದರು.

ಡಿ. ಪುಟ್ಟುಸ್ವಾಮಿ ನಿಧನ

ಮಂಗಳೂರು, ಜೂನ್ 7, ಮಂಗಳೂರಿನ ಪ್ರಸಿದ್ಧ ವಕೀಲರೂ ವಿವೇಕಾಭ್ಯುದಯ ಪತ್ರಿಕೆಯ ಸಂಪಾದಕರೂ ಸಿ. ಪಿ. ಸಿ. ಸಾರಿಗೆ ಸಂಸ್ಥೆಯ ಅಧ್ಯಕ್ಷರೂ ಆದ ಶ್ರೀ ಡಿ. ಪುಟ್ಟುಸ್ವಾಮಿಯವರು ತಮ್ಮ ೬೨ನೇ ವರ್ಷ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ದಿವಂಗತರು ಧರ್ಮಸ್ಥಳ ಮಂಜಯ ಹೆಗ್ಗಡೆಯವರ ಸಹೋದರರೂ ಜಿಲ್ಲೆಯ ಜೈನ ಸಮಾಜದ ಗಣ್ಯವ್ಯಕ್ತಿಗಳಾಗಿದ್ದು ಹಲವು ಧಾರ್ಮಿಕ ಹಾಗೂ ಸಾರ್ವಜನಿಕ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿದ್ದರು.

ಹೈಸ್ಕೂಲುಗಳಿಗೆ

ನವಯುಗ

ಾಜ್ಯದ ಡಿ. ಪಿ. ಐ. ಯವರು ನವಯುಗ ಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಿತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-165—66ರ ಪತ್ರಕಂತೆ ನಿಧಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸಬೇಕೆಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

SYNDICATE BANK

Scheme of Financing of the Primary Co-operative Societies

The demand for short term agricultural credit has been estimated at Rs. 2,000 crores by the end of the Fourth Plan period and Medium Term credit during the period at Rs. 500 crores. Of these, the Co-operative Credit agencies may at best meet only about Rs. 750 crores. The Reserve Bank of India has proposed a scheme for financing of Primary Credit Co-operative Societies by Commercial Banks to fill up the gap and meet the credit requirements. All the nationalised Banks and State Bank of India, its subsidiaries and some other non-nationalised Banks have been called upon to finance the Co-operative Societies under the Scheme.

Syndicate Bank has taken over 90 Societies for financing through our Yadgiri, Chitradurga, Tumkur, Tiptur, Robertsonpet, Chamarajanagar, Gundlupet, and Bylakuppe Branches in Mysore State and 80 Societies in Andhra Pradesh through our Alwal, Hyderabad-Basheerbagh, Nellore, Hindupur, Cuddapah, Rayachoti, Jammalamadugu and Proddattur Branches.

Necessary personnel to supervise the Societies have been appointed and given sufficient training in the procedure of supervising the credit and general Banking and posted to the Branches. They are inspecting the Societies and preparing Normal Credit Statements of these Societies for ensuing "Khariff" crop. We have already started sanctioning loans to these Primary Co-operative Societies and upto 2-6-1970, we have sanctioned credit limit of Rs. 10.31 lakhs to 1007 members through 28 Societies in Mysore State and Rs. 11.16 lakhs to 580 members through 21 Societies in Andhra Pradesh.

ಗೇಹರಾಜ್ಯದಲ್ಲಿ

ರಾಜಸ್ಯ ಕುಟಿಲಾಗತಿಃ

"ಇವತ್ತು ನೋಡಿ, ಥೂತೋ ಬಂದು ಮನೆಯೆಲ್ಲಾ ನೋಡಿ ಹೋದ್ರು..."

"ಯಾರು? ಕುಂದಾಪುರದ ಕಳ್ಳ ಬೆಳ್ಳಗಟ್ಟೆ ವಸೆ ಗೋಡೆಯೊಳಗೆ ಹೋಯಿತೂಂತ...."

"ಅಲ್ರಿ, ಬೆಳ್ಳಗಟ್ಟೆಯಿಂದ ಮನೆ ಕಟ್ಟೋಕಾಗುತ್ತಾ?"

"ಚಿನ್ನದ ಗಟ್ಟಿಯಿಂದ ರಾತ್ರೋರಾತ್ರಿ ಮನೆ ಹಿಟ್ಟು ಕಟ್ಟಿಸಿಕೊಂಡವರಿದ್ರು...."

"ಹ್ಞೂಂ, ಭಾರೀ ವಿಚಿತ್ರಯೆಲ್ಲ....ಇನ್ನು ನೋಟ್ ನಿಂದ್ಲೂ ಗೋಡೆ ಇಟ್ಟಾರು...."

"ಆ ಕಾಲವೂ ಬಂದೀತೂನ್ನೂ ಜಪಾನ ಮೂದರಿ ಕೃಷಿ ಫಲಪ್ರದವೆಂದು ನಿಷ್ಣಾತ ಮೇಲೆ ಜಪಾನ ಹೂದರಿ ಮನೆಯೂ ಬಂದೀತು...."

"ಅಂದ್ರೆ?"

"ಇವನಿವ ಮನೆಗಳಿಗೆ ನೆವ್ಮ ಜಾಪೆ ಮಗ್ಗಲ್ಬಡ, ವಡ್ಡಾಸಲ್ಲು ಬೇಡವೇ ಬೇಡಾಂತಾರೆ. ಬೇರೆ ಕಾಗದದಿಂದ್ಲೇ ಎಲ್ಲಾ ಮಾಡಿಕೆ ಕೊತಾನೆ..."

"ಏನು ಮನೆಯೋ ಅದು!"

"ಅಲ್ವೇ ಜಪಾನ ಅಂದ್ರೆ ಭೂಕಂಪ ಪಕ್ಕ ದೇಶ. ಅಲ್ಲಿ ದಿನಾ ನೂರಕ್ಕೆ ರಫ್ ಭೂಕಂಪವ ಪ್ರೂ ಆಗುತ್ತೇನ್ನೆ. ಆ ದ್ರಿಂದ ಮನೆಗಳಲ್ಲಿ ಅವ್ರು ಹೆಚ್ಚು ಬಂಡ ನಳ ತೊಡಗಸೋದಿಲ್ಲ...."

"ಹೆಹ್ಞಂ....ಸರೀನ್ನಿ. ಎಲ್ಲಾ ಪರೂ ಮನೆ ಉರುಳಿದರೆ....ನೋಡಿ, ಅವ್ರು ಖಂದವ್ರು ಮನೆಯೊಡೆಯರು ಥಾರು, ಬಾ ಸವಾಗಿರುವವರು ಥಾರು ಅಂತ ಕೇಳಿ ವನೇ ಕೋಣೆನೆಲ್ಲಾ ಲೆಕ್ಕಾಚಾರ ಮಾಡಿದ್ರ."

"ಇದೆಂಥದವ್ವಾ...."

"ಆ ಮೇಲೆ ಇದಕ್ಕೆ ಏನೂಂತ ಹಾಕ್ಬ ಹುದೂಂದು...."

"ಥಾರೀ ತರ್ಜಾಪೆಯಿದೆ...."

"ಇದು ಬಾಡಿಗೆ ಮನೆ ಅಲ್ಲ. ನಾವಿ ರೋಕೇ ಸಾಲ ಮಾಡಿ ಕಟ್ಟಿದ್ದು ಅಂದೆ. ಆದ್ರಿ ಆಕ್ಟ್ ಪ್ರಕಾರ ಬಾಡಿಗೆ ಮಹೆಗೂ ಸ್ವಂತ ವಾಸ್ತವ್ಯದ ಮನೆ ಗೂ ವ್ಯತ್ಯಾಸ ಏನಿಲ್ಲ. ನಿಮ್ಮ ವನೆಗೆ ಪೂರು ರೂಪಾಯಿ ಬಾಡಿಗೆ ಕೊಡ ಬಹುದು ಅಂದ್ರು..."

"ಆಗಲ್ರು; ಒಳ್ಳೆ ಪ್ರಾಮಾಣಿಕ ಕಳ್ಳನನ್ನು ಕರ್ಕೊಂಡು ಬಾ ಅಪ್ಪ ದೇ ಕೆತ್ತು....."

"ಅದೂ ಅಂದೆ. ಆದಕ್ಕೆ ಅವ್ರಂದ್ರು—ನಾವು ಬಾಡಿಗೆ ರಿವಿಜನ್ ಮಾಡೋರು ಮಾತ್ರ, ಬಾಡಿಗೆ ದಾರ್ನ್ನ ತರೋರು ಅಲ್ಲಾಂತ...."

"ಅಲ್ವೆ, ಮನೇ ಕಟ್ಟೋರು ನಾವು, ಆದಕ್ಕೆ ಸಾಲವೋ ಸೋಲವೋ ಮಾಡಿ ಹಣತರೋರು ನಾವು, ಬಾಡಿಗೇ ಮನೇ ನಾದ್ರೆ ಬಾಡಿಗೆದಾರ್ನ್ನ ಹಿಡಿದುತರೋರು ನಾನ್, ಅವ್ರು ಕೊಡೋ ಕಿರುಕುಳ ಸಹಿಸೋರು ನಾವು, ಕೊನೇ ಮೂರು ತಿಂಗಳು ಬಾಡಿಗೆ ಹಿಡ್ಸಿ ಹಿಡಿದ್ರೆ ನಷ್ಟ ತುಂಬೋರು ನಾವು— ಅದ್ರೂ ಬಾಡಿಕ್ಕೆಗೊತ್ತು ಮಾಡೋ ಅಧಿಕಾರ ಮಾತ್ರ ಅವ್ರಿಗೆ.'

'ಅಲ್ರಿ ಅವ್ರಿಗೆ ಆ ಅಧಿಕಾರವಿಲ್ಲಾನ್ನಿ. ಅವ್ರಿಗಿರೋದು ಮನೆಗಂದಾಯು ಗೊತ್ತು ಮಾಡೋ ಅಧಿಕಾರ ಮಾತ್ರ.?'

"ಅಯ್ಯೋ, ಏನಂತೀಯೆ? ಮನೆಗಂದಾಯು ಮನೆ ಬಾಡಿಗೆಯು ಒಂದಂಶವೆಂದು ಮೊನ್ನೇ ಗೊತ್ತಾಗಿರಂತ್ರೆ. ಅದು ಗೊತ್ತು ಮಾಡಿದ್ರೇನಂ?'

"ಅದು ಹೌದೂನ್ನಿ. ಆ ಮೇಲೆ ನೋಡಿ ಆಚೇ ರಮಮ್ಮ ಥಾರೀ ಮಾತಾಡೇ ಬಿಟ್ಟು...."

'ಏನೂಂತ?'

'ಆ ಮನೆಗೆ ಬಾಡಿಗೆ ಎಷ್ಟೂಂತ ಕೇಳಿದ್ರು...'

'ಹ್ಞೂಂ....'

'ಇಪ್ಪತ್ತು ಅಂದ್ಲು...'

'ಹ್ಞಾಂ....'

'ಅಷ್ಟೇನಾ, ಸುಳ್ಳು ಹೇಳ್ಬೇಡಾ ಅಂದ್ರು'

"ಯಾಕ್ರಿ ಹೇಳ್ಬೇಕೂಂತಂದ್ರು...ಮೂರಾದ್ರೂ ನಲವತ್ತು ಕೊಡಬೇಕೂಂತಂದ್ರು ಅವ್ರು...."

'ಆದೇ ಇವ್ರ ಅಧಿಕ....'

'ಆಗ ಅವಳು ಅಂದ್ಳು ನೀವು ಹೀಗೇ ಮಾಡಿ'

"ಇಪ್ಪತ್ತರ ಮೇಲಿದ್ದ ತೆರಿಗೆಯನ್ನ ನಲವತ್ತರ ಮೇಲೆ ಹಾಕಿ ಆಗ ಮನೆಯೆಡೆಯರು ನಿಮ್ಮ ರೆಕವಂಡೇಶನ್ನಿನ ಮೇಲೆ ಬಾಡಿಗೇನ ಇಪ್ಪತ್ತರಿಂದ ನಲವತ್ತಕ್ಕೇರಿಸ್ತಾರೆ...ನಾನೆಲ್ಲ ಮಂಸ್ಸಿಪಾಲ್ಟಿ ಆಫೀಸಿನ ಮುಂದು ಧರಣಿ ಪಾಪ್ಟೇಣಾ ದೀತು- ಕಡಿಮೆ ಬಾಡಿಗೇಗೆ ಮನೆ ಕಟ್ಟಿ ಕೊಡೀಂತ...'

'ಶಾಧಾನ್, ಧೀರೆ ಕಣೆ ಅಕೆ; ಅಲ್ಲವೇ ಮತ್ತೆ? ಏನೋಪಾಪ ನಿಕ್ಕವರ ಮನೇಲಿ ಕೂಲಿ ಚಾಲಿ ಮಾಡಿ ಬದುಕಿಕೆಂಡಿದಾಕೆ. ಅಕ್ಕ ಮೇಲೆ...'

'ನೋಡಿ, ಈಗ ಈ ವರ್ಷ ತಪೂಪೆ ಯೂಗಲಿದೆ...'

'ಏನು?'

'ಅಲ್ಲಾ, ಮುನ್ಸಿಪಾಲ್ಟಿಯವ್ರು ಹೀಗೇ ಮಡೆ ಕೊಂಡು ಹೋಗ್ತೆ; ಮನೆಯೊಡೆಯರಿಗೆ ಬಾಡಿಗೆ ಏರಿಸೋ ಹಾಗಿಲ್ಲ ಅಂತಾಯಿತು...'

'ಅದು ಹೇಗೆ? ಬಾಡಿಗೆ ನಿಯಂತ್ರಣ ಕಾನೂನು ಇದೇ ಹಾನೆ?'

'ಆಲ್ರಿ, ಬಾಡಿಗೆ ನಿಯಂತ್ರಣ ಕಾನೂನು ಇದೇ; ಆದ್ರೆ ಕರ ನಿಯಂತ್ರಣ ಕಾನೂನು ಹೂತೆ ಇಲ್ಲ?'

'ನೋಡವ್ರು, ಒಕ್ಕಲಿಗೆ ನೇಜಿ ಕೊಡದಿದ್ದರೂ ರಕ್ಷಣೆಯ ದೆ ಕೆಲಸ. ಆದ್ರೆ ಭೂಮಾಲಿಕರು ತೀರ್ವ ಏನಕ್ಕ ಕೊಡಬೇಕು...'

'ಇದು ಸಮಾಜವಾದ ಮೂದರಿಯಲ್ಲ; ಹಾಡರು....'

'ಏನು ಬೇಕಾದರೂ ಅವ್ಲು....ನಗರದಲ್ಲಿ ವಾಸ್ತವ್ಯದ ಮನೆಗಳ ಅಭಾವ ತೀವ್ರ ವಿರುವಾಗ ನಗರ ಸಭೆಯು ಉಪಕ್ರಮ ಹೊಸ ಮನೆ ಕಟ್ಟುವವರಿಗೆ ಉತ್ತೇಜನ ನೀಡುವುದಿಲ್ಲ.'

'ಏಕೆ ಹಾಗಂತೀರಿ?'

'ಹತ್ತು ಸಾವಿರ ರೂಪಾಯಿಯಷ್ಟ ಬ್ಯಾಂಕಿಕ್ಷಿಟ್ಟಿರೆ ವರ್ಷಕ್ಕೆ ಏಳುನೂರು ರೂಪಾಯಿ ಬಡ್ಡಿ ಸಿಗುತ್ತೆ. ಅಷ್ಟು ವೆಚ್ಚ ಮಾಡಿ ನಿವೇಶನಕೊಂಡು ಮನೆಕಟ್ಟಿಸಿದ್ರೆ ಹಾನ್ಮೂರು ರೂಪಾಯಿನೂ ಬಾಡಿಗೇ ದಕ್ಕೋದಿಲ್ಲ. ಇಪ್ಪತ್ತಲ್ಲಿ ಎರಡೂವರೆ ತಿಂಗಳದ್ದು ಮುನ್ಸಿಪಾಲ್ಟಿ ತಿನ್ನುತ್ತೆ; ಮೂರುತಿಂಗ್ಳು ಬಾಡಿಗೆದಾರ ಮುಳ್ಳುತ್ತಾನೆ. ಉಳಿದದ್ದು ರಿಪೇರಿಗೆ ಸರಿಯೂಗುತ್ತೆ...."

'ಅದು ಹೌದಣ್ಣಿ. ಅದ್ರೂ ಅದರ ಎಂಬಲ್ಲ ವರ್ಷೇ ವರ್ಷೇ ವಿನ್ತೆ....'

'ನೂರುವುದಾದ್ರೆ ಮಾತ್ರ ನೋಡು....' ಅದ್ರೂ ಕೇಳನ್ನೋದು? ಮೂಕ್ಕೇಟು ಡೌನ್ ಆದ್ರೆ...'

'ಹ್ಞೂಂ, ಅದೂ ಸುಯೇ.'

"ನೋಡ, ಭೂಕಂದಾಯು ಕಂದಾಚಾರಾಂತ ಅದನ್ನು ರದ್ದು ಮಾಡಬೇಕೆಂದು ಅಂತಾರೆ. ಕೆಲವು ರಾಜ್ಯದಲ್ಲಿ ರದ್ದಾಗಿಬೇನಕ್ಕೆ. ಹಾಗೆಯೇ ಈ ಮನೆ ಗಂದಾಯವೂ ಅಷ್ಟೇ ರೀತಿಯ ಕಂದಾಚಾರ. ಪಂಜಾಬದಲ್ಲಿ ಇಂತ ತೆರಿಗೆ ಯನ್ನು ರದ್ದು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಬಾಡಿಗೆವ ನೆಗಂದಾಯವಿರಲಿ ಸ್ವಂತ ವಾಸ್ತವ್ಯದ ಮನೆಗೇ ಕಂದಾಯು ತೆರಬೇಕು. ನೋಡ, ನವ್ಮನ್ನೇ ನೋಡು, ಅವ ಹೇಳಿದಂತೆ ನೂರು ರೂಪಾಯಿ ಬಾಡಿಗೇಕಾದ್ರೆ ಇನ್ನೂರೈವತ್ತು ತೆರಿಗೆಯಾಯ್ತು. ಹನ್ನೆರಡರಂತೆ ಸಾಲ ಮಾಡಿದ್ದಕ್ಕೆ ಸಾವಿರದ ಇನ್ನೂರು ಬ್ಯಾಂಕಿಗೆ ಕೊಡೋಣಾಯ್ತು. ಅವನ ಬಾಡಿಗೆಗಿಂತ್ಲೂ ಬಡ್ಡಿ—ತೆರಿಗೆ ಹೆಚ್ಚು ಕೊಡುವಂತಾಯ್ತು. ಮತ್ತೇನು, ಅಷ್ಟ ಕೊಡೋಕೆ ನವ್ಮಲ್ಲಿ ತಾಕತ್ತು ಇದೆಯೆ? ಬಡ್ಡಿಗೆ ಸುನೆ ಏಲಂ ಆಗೋಯ್ತು; ನಿನೇ ಕನಕ್ಕೆ ಹಾಕಿದ ಹಣ ಫೀರಿಲ್ಲಿ ಬಳ್ಕೊಂಡೋಯ್ತು. ಮತ್ತೆ ಹಾನು ನೀನು ಕೈ ಕಟ್ಟಕೊಂಡು ನಿಕ್ಕ ಗೋಳಿ ಮರದಡಿ ನೆಲೆಗಾಲವನ್ನೂ ನಿಕ್ಕವರ ಜಗಲಿ ಬಳಿ ಮಳೆಗಾಲವೆಲ್ಲಾ ನೂಕಿದರಾಯ್ತು...."

'ಭೂಮಾಲಿಕರು, ಮನೆಯೊಡೆಯರನ್ನೆಲ್ಲ ಈ ದಿನಕ್ಕೆ ಕಂದಾ ಹಾಕಿಬ್ರೇನೆ ಇಂದಿನ ಸರಕಾರ ಇನ್ನೂ ಒಂಭತ್ತು ವರ್ಷಕಾಲ ಉಳೀಬಹುದು....'

'ಇದೆಲ್ಲ ಸಮಾಜವಾದ ಬ್ಯಾಂಕಿನಲ್ಲಿ ಹಡೆಯುವ ಸಮಾಜ ದ್ರೋಹಗಳು.'

'ಅಲ್ಲಾ, ಏನು ಮಾಡೋದು?'

"ಮತ್ತೆನ್ನೇನು ಮಾಡೋದಕ್ಕಿದೆ, ರಾಜಾ ಕಾಸ್ಯ ಕಾರಣಂ; ಅಂದವ್ರೇ ಕಾಲಕ್ಕೆ ಕುಟಿಲಾಗತಿಃ ಅಂದ್ರು. ರಾಜಸ್ಯ ಕುಟಿಲಾಗತಿಃ ಎಂಬ ಹೇಳಲು ಅಂಜಿದವರು ಹೀಗೆ ಪರ್ಯಾಯ ವಾಗಿ ಅದಷ್ಟು ಸಾರಿದ್ದರೆಂಥ ತೋರ ತ್ತೆ."

"ನಮ್ಮಲ್ಲಿನ ಜುದ್ಧಿ ಜೀವಿಗಳೂ ಹಾಗೇ ಅನ್ನಿ. ನೇರವಾಗಿ ಹೇಳೋ ತಾಕತ್ತು ಯಾರಿಗಿದೆ? ಯಾರಿಗಿದ್ರೂ ಹೇಳೋ ಎಂಟೆ ತೋರಿದ್ರೆ ಅವನ್ನೆಲ್ಲ ಉನ್ಮತ್ತ ನೆಂದೋ ಪ್ರವರ್ತನೆಂದೋ ತಿಳಿಗೇಡಿ ಯೆಂದೋ ಪ್ರತಿಗಾಮಿಯೆಂದೋ ಹಸರಿಸಿ ಅಪನಾನಿಕರಲ್ಲಿ ಮೂಗಡಿಯೂ ಸಿಸ್ತಾರೆ...'

'ಹ್ಞೂಂ.... ಹೋಗ್ಲಿ ಬಿಡು, ಭವಿಷ್ಯದ ಚಿಂತೆಯಲ್ಲಿ ಇಂದೇಕೆ ವರ್ತಮಾನ ಭವಿಷ್ಯದ ಬಗ್ಗೆ ಆಶೆಯಿಟ್ಟು ಕೊಂಡರೇನೇ ಹದ್ಯಕ್ಕಾದ್ರೂ ಸುಖ."

'ಹ್ಞೂಂ....'

"ಹ್ಞಾಂ...."

"ಶ್...."

—ಗೋರಾ.

ದರಿದ್ರನಾರಾಯಣನ ಸೇವೆಯಷ್ಟು ಎಲ್ಲರೂ ಮಾಡಲೇಬೇಕು. ಈ ಮುಖ್ಯ ಒರೆಗಲ್ಲಿನ ಮೇಲೆ ಪ್ರಕ್ರಿಯೆ ಪ್ರತಿಯೆಂದು ಯೋಜನೆ ಇಲ್ಲವೆ ಕಾರ್ಯಕ್ರಮ ತಯಾರಿಸಬೇಕು.

ಈ ದೃಷ್ಟಿಯಿಂದ ಅಂತ್ಯೋದಯ ಸಾರ್ವಜನಿಕ ಸರ್ವೋದಯ ದೃಷ್ಟಿಯು ಯೋಗ್ಯವಾಗಿದೆ.

—ಗಾಂಧೀಜಿ

ಉಡುಪಿಗೆ ಬಂದಾಗ

ಮನರಂಜನೆಯ ಸಮಸ್ಯೆ ನಿಮಗಿಲ್ಲ!

ಅತ್ಯುತ್ತಮ ಚಲಚ್ಚಿತ್ರಗಳನ್ನು ಪ್ರದರ್ಶಿಸುವ

ಎರಡು ಶ್ರೇಷ್ಠ ದರ್ಜೆಯ ಚಿತ್ರಮಂದಿರಗಳು

ನಿಮ್ಮ ಬೇಸರವನ್ನು ನೀಗಿಸಲು ಇಲ್ಲಿವೆ.

ಅಲಂಕಾರ್ (ಫೋನ್: 327) ಆಸ್ಪತ್ರೆ ರಸ್ತೆ

ಕಲ್ಪನಾ (ಫೋನ್: 437) ಉಪೇಂದ್ರಬಾನ್

ಕುಂದಾಪುರದ ನವೀಕೃತ ಭವ್ಯ ಚಿತ್ರಮಂದಿರ—

ಗೀತಾಂಜಲಿ

ಮ್ಯಾಲಕರು:

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಎಸ್. ಆರ್. ಬಿಲ್ಡಿಂಗ್ಸ್, ಉಡುಪಿ (ದ. ಕ.)

ಮುಖಿಂಡರ ಮಾರ್ಗದರ್ಶನ

ಹಾಸನ—ಮಂಗಳೂರು ರಸ್ತೆಯಲ್ಲಿ ನೆಲಮಂಗಲದಿಂದ ಕೇವಲ ಹತ್ತಾಲ್ಕು ಮೈಲಿ ದೂರದಲ್ಲಿದೆ ಮಲ್ಲರಬಾಣವಾಡಿ ಎಂಬ ಹಳ್ಳಿ. ಇಲ್ಲಿ ಭೂಮಿ ಫಲವತ್ತಾಗಿದ್ದರೂ ಮುಗಿಲ ಮೋರೆ ನೋಡಿ ಬೆಳೆ ಬರಬೇಕು. ಹಳ್ಳಿಯ ಕೆರೆಯ ನೀರಿನಿಂದ ಹೆಚ್ಚಿನ ಜಮೀನಿಗೆ ನೀರಿನಾಶ್ರಯ. ಮಳೆ ಬಾರದಿದ್ದರೆ ಕೆರೆ ಒಣಗಿ ಭೂಮಿ ಬಿರಿದು ಫಲ್ಲುವದು. ಇಲ್ಲಿನ ಜನ ಕಷ್ಟಪಟ್ಟು ದುಡಿಯುವವರು, ಅತಿಥಿಸತ್ಕಾರ ಪ್ರಿಯರು.

ಮಲ್ಲರಬಾಣವಾಡಿಯಲ್ಲಿ ಜಡವರ್ತೆ ಹೆಚ್ಚು. ಇಲ್ಲಿನ ಗ್ರಾಮದೇವ ವೀರಭದ್ರ ನಿಗೂ ದಾರಿದ್ರ್ಯ ತಗಲಿದೆ. ಇವನಿಗೆ ವಾರಕ್ಕೊಮ್ಮೆ ಮೂತ್ರ ಪೂಜೆ ಸಲ್ಲುತ್ತಿದೆ. ಹಿಂದೆ ಜೋಳರಾಜರೂ ಸ್ಥಳೀಯ ಜನರೂ ಈ ದೇವಾಲಯವಕ್ಕೆ ಅಸ್ಥೆಯಿಂದ ವೈಭವದಿಂದ ಪೋಷಿಸಿದ್ದರು. ಇದೀಗ ಹಾಳುಬಿದ್ದ ದೇಗುಲವಾಗಿ ನಿಂತಿದೆ. ಶೌರ್ಯ ಸಾಹಸದ ಪ್ರತೀಕವಾಗಿದ್ದ ವೀರಕಲ್ಲು ಇಂದು ದೇವಾಲಯದ ಒಳಿ ದಿಕ್ಕಿಲ್ಲದೆ ನಿಂತಿದೆ. ಧ್ವಜಸ್ತಂಭಕ್ಕೆ ಧ್ವಜವಿಲ್ಲ. ವೀಪಸ್ತಂಭದಲ್ಲಿ ದೀಪ ಉರಿಯುತ್ತಿಲ್ಲ. ಗತವೈಭವದ ಭಗ್ನಾವಶೇಷವಾಗಿ ಈ ಶಿಲೆಗಳು ಇಲ್ಲಿ ನಿಂತಿವೆ.

ಮಲ್ಲರಬಾಣವಾಡಿಯ ಹಣ್ಣು ಹಣ್ಣು ಮುದುಕ ಸಿದ್ಧಲಿಂಗಯ್ಯನವರು ತುಂಬು ಜೀವನ ಮಾಡಿದವರು. "ಹೋದಿ, ಎಂಭತ್ತು ವರುಷಗಳ ಹಿಂದೆ ನನ್ನ ಹಳ್ಳಿಯಲ್ಲಿ ಕೇವಲ 50 ಮನೆಗಳಿದ್ದವು. ಜನಸಂಖ್ಯೆ ಎರಡುಸಾವಿರ. ಈಗ ನನ್ನ ಅವಿಭಕ್ತ ಕುಟುಂಬವೊಂದರಲ್ಲಿಯೆ ಮೂವತ್ತು ಜನ ಇದ್ದೇವೆ. ಪ್ರತಿ ಮನೆಯಲ್ಲಿಯೂ ಸುಮಾರಾಗಿ ಐದು ಮಕ್ಕಳು. ಮಕ್ಕಳ ಸಂಖ್ಯೆ ಬೆಳೆಬೆಳೆದಂತೆ ನಮ್ಮ ಹಳ್ಳಿಯ ಜನವೂ ಹೆಚ್ಚಲಿಲ್ಲ; ಸೌಕರ್ಯಗಳು ಬೆಳೆಯಲಿಲ್ಲ.

1888ರಲ್ಲಿ ನಮ್ಮ ಹಳ್ಳಿಯಲ್ಲಿ ಶಾಲೆ ಪ್ರಾರಂಭವಾಯಿತು. ಅದ ನನಗೆ ಸುಮಾರು ಏಳು ವರ್ಷವಿರಬೇಕು. ನಾನೂ ನನ್ನ ತಮ್ಮನೂ ಇನ್ನು ಕೆಲ ಹುಡುಗರು ಪ್ರತಿನಿತ್ಯವಾಗಿ ಈ ಶಾಲೆ ಸೇರಿದೆವು. ನನಗೆ ಆಗ 90 ವರ್ಷ. ನಮ್ಮ ಹಳ್ಳಿಯ ಎಲ್ಲ ಮಕ್ಕಳು ಇಲೇ ಶಾಲೆಯಲ್ಲಿ ಓದಿದ್ದಾರೆ.

ನನ್ನ ಕಾಲದಲ್ಲಿ ಈ ಹಳ್ಳಿಯಲ್ಲಿ ಬಹಳಷ್ಟು ಜನ ಚಟ್ಟಿಗಳ —ಕಸ್ತಿ ಆಳುಗಳು ಇದ್ದರು. ಅದಕ್ಕೆಂದೇ ಮಲ್ಲರಬಾಣವಾಡಿ ಎಂಬ ಹೆಸರು ಈ ಊರಿಗೆ. ಊರ ಸುತ್ತಲೂ ಕೋಟಿಗಟ್ಟಲೆ ಗೋಡೆ ಹಬ್ಬಿತ್ತು. ಜನಸಂಖ್ಯೆ ಹೆಚ್ಚಿದಂತೆ ಜನ ಕೋಟೆಯ ಗೋಡೆಯನ್ನು ಉರಳಿಸಿ ಅಲ್ಲಿ ಮನೆಕಟ್ಟಿದರು. ಏರುತ್ತಿರುವ ಜನಸಂಖ್ಯೆಗೆ ಜಾಗವೇ ಸಾಲದಂತಾಗಿದೆ.....

ನಾವೆಲ್ಲ ಎಷ್ಟೆ ಶ್ರದ್ಧೆಯಿಂದ ಮೈ ಮುರಿದು ದುಡಿಯುತ್ತಿದ್ದೆವು! ಫಲವು ಕಷ್ಟಪಟ್ಟು ದುಡಿದಂತೆ ಈಗಿನವರೂ ದುಡಿದರೆ, ನಾನು ಖಂಡಿತ ಹೇಳುತ್ತೇನೆ ಈ ಹಳ್ಳಿಯ ದಾರಿದ್ರ್ಯ ತೊಲಗಿ ಹೋಗುತ್ತದೆ.....

ಕುಟುಂಬಯೋಜನೆಯ ವಿಷಯ ಕೇಳುತ್ತೀರಾ? ನಮ್ಮಲ್ಲಿ ಈ ವಿಷಯ ಎಲ್ಲರಿಗೂ ತಿಳಿದಿದೆ. ದಿನ ಬೆಳಗಾದರೆ ರೇಡಿಯೋದಲ್ಲಿಯೂ ಅದೇ ಹಾಡು, ಪತ್ರಿಕೆಗಳಲ್ಲಿಯೂ ಅದೇ ಮಾತು. ನಮ್ಮ ಇಂದಿನ ಸ್ಥಿತಿಯಲ್ಲಿ ಕುಟುಂಬ ಯೋಜನೆಯನ್ನು ಅಳವಡಿಸಲು ಬೇರೆ ಮಾರ್ಗವೇ ಇಲ್ಲ. ಅವಶ್ಯವಾಗಿ ಇದು ಬೇಕು"—ಇದೆಲ್ಲವನ್ನು ಹೇಳಿವಾಗ ಸಿದ್ಧಲಿಂಗಯ್ಯನವರ ಕಣ್ಣಲ್ಲಿ ನೀರೂರಿತ್ತು.

ಸಿದ್ಧಲಿಂಗಯ್ಯನವರಿಗೆ ಇಬ್ಬರು ಮಕ್ಕಳು. ಅವರಲ್ಲಿ ಹಿರಿಯಪುತ್ರನಾದ ಆಡಿನಪ್ಪನಿಗೆ ಏಳು ಮಕ್ಕಳು. ಕಿರಿಯವನಾದ ಸಿದ್ಧಲಿಂಗಯ್ಯನಿಗೆ ಹನ್ನೆರಡು ಮಕ್ಕಳು. ಕೈಯಾರಿದ ಮೇಲೆ ಇವರಿಗೆ ಜ್ಞಾನೋದಯವಾಯಿತು.

ಮಲ್ಲರಬಾಣವಾಡಿಯ ಗ್ರಾಮಪಂಚಾಯತಿಯ ಈಗಿನ ಅಧ್ಯಕ್ಷರೂ, ಹಿಂದಿನ ಅಧ್ಯಕ್ಷರುಗಳೂ ಕುಟುಂಬ ಯೋಜನೆಯಲ್ಲಿ ಹಳ್ಳಿಯ ಜನರಿಗೆ ಮಾರ್ಗದರ್ಶಕರಾಗಿದ್ದಾರೆ. ಹೀಗಾಗಿ ಮಲ್ಲರಬಾಣವಾಡಿಯ ಜನರು ಊರಿನ ಗ್ರಾಮದ ಮುಖಂಡರಿಂದ ಸ್ಫೂರ್ತಿ ಪಡೆದು ಚಿಕ್ಕ ಕುಟುಂಬದ ಆದರ್ಶವನ್ನು ಅಳವಡಿಸಿಕೊಳ್ಳಲು ಮುಂದೆ ಬರುತ್ತಿದ್ದಾರೆ.

ಕುಂದಗೋಳ

ಹಿಂದುಸ್ತಾನಿ ಸಂಗೀತ ಪ್ರೇಮಿಗಳಲ್ಲಿ ಶವಾಯಿ ಗಂಧರ್ವರ ಹೆಸರನ್ನು ಕೇಳದವರು ವಿರಳ. ಕುಂದಗೋಳವೇ ಇವರ ಜನ್ಮಭೂಮಿ. ಕುಂದಗೋಳಕ್ಕೆ ಹುಬ್ಬಳ್ಳಿಯಿಂದ ಹತ್ತೆರಡು ಮೈಲು ದೂರ. ಇದುವೇ ಈ ತಾಲೂಕಿನ ಕೇಂದ್ರಸ್ಥಳ. ಕುಂದಗೋಳ ಮೊದಲು ಜಮಖಂಡಿ ಸಂಸ್ಥಾನದ ಒಂದು ಭಾಗವಾಗಿತ್ತು. ಸಂಸ್ಥಾನಗಳು ವಿಲೀನವಾದಾಗ ಕುಂದಗೋಳ ಧಾರವಾಡ ಜಿಲ್ಲೆಯಲ್ಲಿ ಸೇರ್ಪಡೆಯಾಯಿತು. ಇಲ್ಲಿಯ ಜನಸಂಖ್ಯೆ ಸುಮಾರು ೧೦.೦೦೦. ಹತ್ತಿ, ಸೇಂಗಾ, ಇತ್ಯಾದಿಗಳಿಗೆ ಕುಂದಗೋಳ ಒಂದು ದೊಡ್ಡ ವ್ಯಾಪಾರ ಕೇಂದ್ರ. ಇಲ್ಲಿ ಎರಡು ಹೈಸ್ಕೂಲುಗಳಿವೆ. ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ಇದಕ್ಕೆ ತನ್ನ ಸುತ್ತಲ ಹತ್ತು ಕೇಂದ್ರಗಳಿಗೆ. ಇಷ್ಟೆಲ್ಲ ಸುತ್ತ ಮುತ್ತಲ ಜನ ಹಳ್ಳಿಗಳ ಲಕ್ಷಾಂತರ ಜನರಿಗೆ ಸೇವೆ ಸಲ್ಲಿಸುತ್ತಿವೆ.

ಕುಂದಗೋಳದ ಸುತ್ತಮುತ್ತಲಿನ ಹಳ್ಳಿಗಳ ಭೂಮಿ ಫಲವತ್ತಾಗಿದೆಯಾದರೂ ಅಲ್ಲೇಕ ರೈತರಿಗೆ ಹೊಟ್ಟೆಬಟ್ಟೆಗೆ ಸಾಕಾಗುವಷ್ಟು ಆದಾಯ ವಿಲ್ಲ. ಇದ್ದ ಆದಾಯವೂ ಸಂತಾನಶಾಸ್ತ್ರ ಮಕ್ಕಳುಳ್ಳ ಖಡ ಕುಟುಂಬಗಳಿಗೆ ಜೀವನೋಪಾಯಕ್ಕೆ ಸಾಕಾಗುವುದಿಲ್ಲ. ಕುಟುಂಬ ಯೋಜನೆ ತಮ್ಮ ಆರ್ಥಿಕ ಪರಿಸ್ಥಿತಿಯ ಸುಧಾರಣೆಗೆ ಸಹಾಯವಾಗಬಹುದೆಂಬ ಭಾವನೆ ದೂರ ದೂರದ ಹಳ್ಳಿಹಳ್ಳಿಗಳಲ್ಲಿ ಸಾಕಷ್ಟು ಹುಟ್ಟಿಲ್ಲ. ಆದರೆ ಕುಂದಗೋಳದ ಸುತ್ತ ಮುತ್ತಲ ಜನರಲ್ಲಿ ಸುಮಾರು ೧೦೦ಕ್ಕೆ ೮೩ ಮಂದಿಗೆ ಕುಟುಂಬಯೋಜನೆ ವಿಚಾರತಿಳಿದಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬಂದ ಹತ್ತಿಮುತ್ತೂರಿನ ಗೋವಿಂದಪ್ಪ ಎಂಬ್ಲಿಗೂಡಿನ ಬಸಪ್ಪ, ಶಿವಪ್ಪ ಇವರೆಲ್ಲ ಕುಟುಂಬ ಯೋಜನೆ ಅಕ್ಷರಶಃ ಎಂದು ಮನಗಂಡವರು. ಗೋವಿಂದಪ್ಪನಿಗೆ ಎರಡೇ ಮಕ್ಕಳು—ಒಂದು ಹೆಣ್ಣು, ಒಂದು ಗಂಡು. ಆಗ ವರ್ಷದ ಗೋವಿಂದಪ್ಪ, "ನನಗೆ ಎರಡೇ ಮಕ್ಕಳು ಸಾಕು. ಇವರನ್ನು ಸಾಕಿ ಸಲಹಿದರೆ ನಾನು ಧನ್ಯ. ಹೆಚ್ಚು ಕೂಲಿ ಕೆಲಸದಿಂದ ಬರುವ ಆದಾಯವು ನನ್ನ ಹಾಗೂ ನನ್ನ ಹೆಂಡತಿಯ ಹೊಟ್ಟೆಬಟ್ಟೆಗೆ ಸಾಕಾಗುತ್ತಿಲ್ಲ" ಎಂದು ತನಗೆ ಆಪರೇಷನ್ ಮಾಡಿದ ಡಾಕ್ಟರರ ಕಡೆ ಕೈ ತೋರಿಸಿ, "ಇವರೇ ತನಗೆ ದಾರಿ ತೋರಿಸಿದವರು" ಎಂದು ನಗುತ್ತ ಹೇಳಿದ. ಗೋವಿಂದಪ್ಪ ಲಂಬಾಣಿ ಜಾತಿಗೆ ಸೇರಿದವ.

ಬಸಪ್ಪನ ಕತೆಯೇ ಬೇರೆ. ಇವನಿಗೆ ಇಬ್ಬರು ಹೆಂಡಿರು. ಇವರ ೨೧ ಮಕ್ಕಳಲ್ಲಿ ಬದುಕಿರುವ ಮಕ್ಕಳು ೧೮. ಬಸಪ್ಪನಿಗೆ ಈಗ ಸುಮಾರು ೫೦ ವರ್ಷ. ಮೂರು ವರ್ಷಗಳ ಹಿಂದೆ ಸಂತಾನೋತ್ಪತ್ತಿಗೆ ಪೂರ್ಣ ವಿರಾಮ ಹಾಕಿದ ಬಸಪ್ಪ ಹದಿನೈದು ಎಕರೆ ಭೂಮಿ ಮಕ್ಕಳಲ್ಲಿ ಹಂಚಿಹೋದರೆ ಹೇಗೆ ಜೀವನ ಸಾಗುವುದು? ಕುಟುಂಬ ಯೋಜನೆಯಿಂದ ಪ್ರಯೋಜನವಿದೆಯೆಂದು ಮನಗಂಡ. "ಹೆಚ್ಚು ಮಕ್ಕಳಿದ್ದರೆ ಹೆಚ್ಚು ಸಂಪತ್ತು ಇದ್ದಂತೆ ಎಂಬ ಮಾತು ಹಳೆಯ ಕಾಲದ್ದು. ಈಗ ಈ ಮಾತಿಗೆ ಅರ್ಥವೇ ಇಲ್ಲ", ಎನ್ನುತ್ತಾನೆ ಬಸಪ್ಪ. ಮೂರು ಮಕ್ಕಳ ತಂದೆ ಫಕೀರಪ್ಪ ಮಲ್ಲಪ್ಪ, ಐದು ಮಕ್ಕಳ ತಂದೆ ಹಮ್ಮಾಸಾಹೇಬ, ಮೂರು ಮಕ್ಕಳುಳ್ಳ ಆಡಿವೆಪ್ಪ ಇವರೆಲ್ಲ ಕುಟುಂಬಯೋಜನೆ ಮಾಡಿಸಿಕೊಳ್ಳಲೇಬೇಕೆಂದು ನಿರ್ಣಯಿಸಿದ್ದಾರೆ. ಇಲ್ಲಿ ಕುಟುಂಬಯೋಜನಾ ಕಾರ್ಯಕ್ರಮ ೧೯೬೬ರಲ್ಲಿ ಆರಂಭವಾಗಿದೆ. ಈ ವರೆಗೆ ಸುಮಾರು ಎರಡುಸಾವಿರ ಗಂಡಸರು ಆಪರೇಶನ್ ಮಾಡಿಕೊಂಡಿದ್ದಾರೆ. ಇಂಗ ವಹಿಸುವಿಗೆ ಯಂತ್ರಧಾರಣೆಯಾಗಿದೆ. ಸುಮಾರು ೩೭೦ ಮಂದಿ ತಪ್ಪದೆ 'ಫಲೋದ್ಧ ಉಪಯೋಗಿಸುತ್ತಿದ್ದಾರೆ.

ಈ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಊರ ಪ್ರಮುಖರು ಸಹಾಯ ಮಾಡಿದ್ದಾರೆ. ಇವರಲ್ಲಿ ದಿವಂಗತ ತುಂಗಾದೇವಿ ನಾಡಿಗೇರ ಇವರ ಸ್ಮರಣಾರ್ಥವಾಗಿ ಶ್ರೀಯುತ ನಾಡಿಗೇರರು ಹದಿನಾರು ಸಾವಿರ ರೂಪಾಯಿಗಳಷ್ಟು ಈ ಕೇಂದ್ರಕ್ಕೆ ದಾನವಾಗಿ ಕೊಟ್ಟು ನಾಲ್ಕು ಎಕರೆ ವಿಸ್ತೀರ್ಣದ ಸ್ಥಳವನ್ನು ಒದಗಿಸಿದ್ದು ಅನುಕರಣೀಯ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ
O. S. No. 11/1970
ಶ್ರೀ ಸೋದೆ ವಾದಿರಾಜ ಮಠ —ವಾದಿರು
ಮತ್ತು
ಬಡ್ಡಿ ಶೆಟ್ಟಿ —ಪ್ರತಿವಾದಿರು
ಯಿವರೊಳಗೆ
ಪ್ರತಿವಾದಿ—
ಈಡು ಶೆಟ್ಟಿ, ಅಂತಪ್ಪ ಶೆಡ್ತಿ, ಮಗ ಉ
ಕಾಲಾಡಿಕಳು ಸೊಡೆ ಗ್ರಾಮದವರಿರುವವ.
ಕಿಮ್ಮಂದ ವಾದಿಗೆ ಬಹಾ ತೀರಿಳ
ರಿದ ಗೇಜಿ ಬಾಕಿ ಕೇಳಿ, ದಾಖ್ಲು ಪೂಡಿ
ಮೇಲ್ಕಂಡ ದಾವೆಯು ತಾರೀಕು 4.7.70
ಯಿಟ್ಟಿದೆ. ಅದಿಪ್ಪ ವೆಳಿಗ್ಗೆ 11ಗಂಟೆಗೆ
ಕೋರ್ಟು ಮುಂದೆ ಹಾಜರಾಗಿ ಉದಾಹರಿಸು
ರಿ ತಪ್ಪಿದ್ರೆ ಏಂಪು ಗೈರ್ ಹಾಜರಿಯಲ್ಲಿ ಸ
ದಾವೆಯನ್ನು ತೀರ್ಮಾನಿಸಲ್ಪಡುವುದು.

(By order of court)

V. G. Kedlaya
M. A. L. L. B. Advocate, Udipi,
ತಾ. 4.6.70

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

114 ವರ್ಷದಿಂದ ಹೆಚ್ಚಿರುವ "ವಿಜಯಾ ಬ್ಯಾಂಕ್"ನಲ್ಲಿ

ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ

"ಜೀವನ-ನಿಧಿ"ಯಲ್ಲಿ

ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೫.

ಆಡಳಿತ ಕೇಂದ್ರ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1

EDUCATIONAL:—

Good Foundation in English—Through "Mental Picture Reading Method". New Invention for Intellectuals for mastery in English by and by.

Octagenarian,
C/o Post Master,
VITTAL, S. Kanara
29—5—1970

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

NAVAYUGA 16-6-1970
Registered with the Registrar of News Papers for India under No. R. N. 3546/'57

REGD. No. B. G. 126
LICENCE No. 33
Licensed to Post without Prepayment

ನಿರ್ದರ್ಶನ

ಸಾಮುದಾಯಿಕ ಪ್ರಾರ್ಥನೆ

ವ್ಯಕ್ತಿಗತ ಪ್ರಾರ್ಥನೆಯನ್ನು ಬಿಟ್ಟು ಸಾಮುದಾಯಿಕ ಪ್ರಾರ್ಥನೆಗಾಗಿ ಏಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು ಎಂದು ಕೆಲವರು ಪ್ರಶ್ನೆ ಮಾಡುವರು. ಸಾಮುದಾಯಿಕ ಪ್ರಾರ್ಥನೆಯನ್ನು ಮಾಡಿಯೇ ತೀರಬೇಕೆಂಬ ಕಟ್ಟಾಜ್ಞೆ ನಿಯಮಗಳನ್ನು ಮಾಡಿದ ಸಂಸ್ಥೆಯಲ್ಲಿದ್ದವರು ಇಂತಹ ಪ್ರಶ್ನೆ ಮಾಡುವುದನ್ನು ಆಶ್ಚರ್ಯಪಡುವಲ್ಲಿ. ಇಂಥವರಿಗೆ ಸಂತೃಪ್ತಿಯಾಗುವಂತೆ ಉತ್ತರಿಸುವುದೂ ಬಹಳ ಕಷ್ಟವಲ್ಲ. ಏಕೆಂದರೆ ಪ್ರಶ್ನೆ ಕರ್ತೃಗಳು ಪೂರ್ವಗ್ರಹ ದೂಷಿತರಾಗಿದ್ದರೆ ಅಂಥವರನ್ನು ಯಾವ ಬದ್ಧಿವಂತನೂ ಸಂತೃಪ್ತರನ್ನಾಗಿ ಮಾಡಲು ಸಮರ್ಥನಾಗನು. ಜಿಜ್ಞಾಸಾ ಬುದ್ಧಿಯಿಲ್ಲದೆ ಜಿಜ್ಞಾಸಾ ಬುದ್ಧಿಯಿದ್ದವರನ್ನು ಮಾತ್ರ ಸರಿಯಾದ ಉತ್ತರದಿಂದ ಸಂತೃಪ್ತರಾಗಿಸುವುದು ಸಾಧ್ಯವಾಗಬಹುದು.

ವ್ಯಕ್ತಿಗತ ಪ್ರಾರ್ಥನೆಯಲ್ಲಿ ನಾವು ಕೇವಲ ನಮ್ಮ ಬಲದ ಮೇಲೆಯೇ ಈಶನ ಅನುಸಂಧಾನ ಮಾಡುವ ಪ್ರಯತ್ನ ಮಾಡುವೆವು. ಸಾಮುದಾಯಿಕ ಪ್ರಾರ್ಥನೆಯಲ್ಲಿ ನಮಗೆ ಅನ್ಯರ ಬಲದ ಸಹಾಯವು ದೊರೆಯುವುದು. ಭಕ್ತಿಭಾವವೆಂಬ ಪ್ರೇರಣೆಯಾಗಿ ಪ್ರಾರ್ಥನೆಗಾಗಿ ಒಂದು ಕಡೆಗೆ ಕೂಡಿದ ಪ್ರತಿಯೊಬ್ಬ ವ್ಯಕ್ತಿಯು ಪುಣ್ಯವಂತನೆ ಆಗಿರುವನು. ಇಂತಹ ಪುಣ್ಯವಂತರು ಕೂಡಿ ಪ್ರಾರ್ಥಿಸುವಾಗ ಒಬ್ಬನು ವ್ಯಕ್ತಪಡಿಸಬಹುದಾದ ಸಹಾಯವನ್ನು ಪಡೆದೇ ತೀರುವನು. ಆಗ ಅವನು ಪ್ರಯತ್ನಿಸಿದ ಸಾಧನೆಯಲ್ಲಿ ಅವನಿಗೆ ಅಪೂರ್ವವಾದ ಯಶಸ್ಸು ಲಭಿಸುವುದು. ಇಂತಹ ಸಾಮುದಾಯಿಕ ಪ್ರಾರ್ಥನೆಯಲ್ಲಿ ತನ್ನ ಸಾಮರ್ಥ್ಯವನ್ನು ಇರುವ ಅನೇಕರು ಭಕ್ತಿಯಿಂದ ಬಲವು ತನಗೆ ಸಹಾಯವಾಗಿ ದೊರೆಯುವುದೆಂಬ ಅನುಭವನ್ನು ಮಾಡಿಕೊಳ್ಳದಿರಲಾರರು. ಪುಣ್ಯಾಶ್ರಯಗಳಲ್ಲಿ ಬಲವು ದೊರೆಯುವುದರಿಂದ ತನ್ನ ಬಲವು ಸಮೃದ್ಧವಾಗುವಂತೆ ಭಾಸವಾಗುವುದು. ಇದಲ್ಲದೆ ಹೊರ ಪ್ರಾರ್ಥನೆಗಳನ್ನು ಸಾಮುದಾಯಿಕವಾಗಿ ಆಲಿಸುವಾಗ ಅವರೊಡನೆ ಪ್ರಸ್ಪರ್ಧೆಯನ್ನು ಮನಸ್ಸಿನಲ್ಲಿ ಹುಟ್ಟಿಸಿಕೊಂಡಾಗುವುದು. ಆಗ ಭೂತ ಕಾಲದ ಅನೇಕ ಮಹಾ ವ್ಯಕ್ತಿಗಳ, ಅನುಭವಿಗಳ ಸಹಾಯವು ದೊರೆಯುವುದು, ಅಂತೆಯೇ ಒಬ್ಬ ಪ್ರಸಿದ್ಧ ಸಮರ್ಥರೊಪನು ತನ್ನ ಅನುಭವವನ್ನು ಹೀಗೆ ಹೇಳಿದ್ದಾನೆ- "ಯೋಗಿ ಜನರು ಏಕಾಂತದಲ್ಲಿ ಕುಳಿತು ಧ್ಯಾನ ಮಾಡುತ್ತಿರುವ ಫಲಕ್ಕಿಂತ ಭಕ್ತರು ಒಂದು ಕಡೆ ಕೂಡಿ ಕೊಂಡು ಪ್ರಾರ್ಥನೆ ಮಾಡುವ ಸಮಾನದಲ್ಲಿದೇವನು ಹೆಚ್ಚು ಪ್ರೀತಿಯಿಂದ ಪ್ರತ್ಯಕ್ಷನಾಗುವನು" ಯೋಗಿಯು ಕೇವಲ ತನ್ನ ಬಲದ ಮೇಲೆ ಸಾಧನೆ ಮಾಡುತ್ತಿರುವಾಗ ಅವನ ಧ್ಯಾನವು ಅಖಂಡಿತವಾಗುವ ಬದಲು ಖಂಡಿತವಾಗುವ ಸಂಭವನೇ ಹೆಚ್ಚು. ಆದರೆ ಭಕ್ತರು ಒಂದುಗೂಡಿ ಕೂಡಿಕೊಂಡು ದೇವನ ಭಜನೆಯನ್ನು ಮಾಡುವಲ್ಲಿ ದೇವನು ಉಪಸ್ಥಿತನಾಗದಿರುವುದಕ್ಕೆ ಅವಕಾಶವೇ ದೊರೆಯುವುದಿಲ್ಲ. ಒಬ್ಬರಿಗೆ ವಂಚಿತರಾದ ಅನುಭವವು ಲಾಭವಾಗುವುದು "ಎಲ್ಲಿ ಪಂಚರುವರೋ ಅಲ್ಲಿ ಪರಮೇಶ್ವರ ನಿರುವನು". ಈ ಲೋಕೋಕ್ತಿಯು ರಹಸ್ಯವಾದರೂ ಇದೇ ಆಗಿದೆ.

ಸಾಂದ್ರ ಶಿಕ್ಷಣ ಯೋಜನೆ

(ಒಂದನೇ ಪುಟದಿಂದ)

ಭಕ್ತಾದಿಗಳಿಗಾಗಿ ಪ್ರಾರ್ಥನಾಶಾಲೆಗಳಲ್ಲಿ ರಂಜಿಸುವ ಕಾರ್ಯಕ್ರಮಗಳಿಂದ ಮಿಂಚಿಬಿಟ್ಟಿದೆ. ಆದರೆ, ಈ ಕಾರ್ಯಕ್ರಮಗಳು ಹೇಗೆ ಕಳೆಗುಂದುತ್ತಿದೆ, ಅಲ್ಲಿ ಈಗ್ಗೆ ಅನುಭವಿಸಲು ಏನು ಸಾಲುತ್ತಿಲ್ಲ!

ಶಿಕ್ಷಣವೆಂಬುದು ದೀರ್ಘಕಾಲೀನ ಬಂಡವಾಳ ಹೂಡಿದ ಬಂಡವಾಳ ಫಲ ಕೊಡಲು ಬಹುಕಾಲವಬೇಕು. ಶಿಕ್ಷಣ ಗುಡಿಕೈಗಾರಿಕೆಯಲ್ಲಿ ಬ್ರಹತ್ ಉದ್ಯಮ ಕೈಗಾರಿಕೆ ಇದನ್ನು ತಿಳಿಸಿದೆ "ಶಿಕ್ಷಣ ಹೂಡಿದ ಬಂಡವಾಳ ಫಲ ಕೊಡಲು ಬಹುಕಾಲವಾಗುವುದು" ಎಂಬ ಸಾಮಾನ್ಯ ಅನುಭವವನ್ನು ಮಾಡಿಕೊಳ್ಳದಿರಲಾರರು. ಪುಣ್ಯಾಶ್ರಯಗಳಲ್ಲಿ ಬಲವು ದೊರೆಯುವುದರಿಂದ ತನ್ನ ಬಲವು ಸಮೃದ್ಧವಾಗುವಂತೆ ಭಾಸವಾಗುವುದು. ಇದಲ್ಲದೆ ಹೊರ ಪ್ರಾರ್ಥನೆಗಳನ್ನು ಸಾಮುದಾಯಿಕವಾಗಿ ಆಲಿಸುವಾಗ ಅವರೊಡನೆ ಪ್ರಸ್ಪರ್ಧೆಯನ್ನು ಮನಸ್ಸಿನಲ್ಲಿ ಹುಟ್ಟಿಸಿಕೊಂಡಾಗುವುದು. ಆಗ ಭೂತ ಕಾಲದ ಅನೇಕ ಮಹಾ ವ್ಯಕ್ತಿಗಳ, ಅನುಭವಿಗಳ ಸಹಾಯವು ದೊರೆಯುವುದು, ಅಂತೆಯೇ ಒಬ್ಬ ಪ್ರಸಿದ್ಧ ಸಮರ್ಥರೊಪನು ತನ್ನ ಅನುಭವವನ್ನು ಹೀಗೆ ಹೇಳಿದ್ದಾನೆ- "ಯೋಗಿ ಜನರು ಏಕಾಂತದಲ್ಲಿ ಕುಳಿತು ಧ್ಯಾನ ಮಾಡುತ್ತಿರುವ ಫಲಕ್ಕಿಂತ ಭಕ್ತರು ಒಂದು ಕಡೆ ಕೂಡಿ ಕೊಂಡು ಪ್ರಾರ್ಥನೆ ಮಾಡುವ ಸಮಾನದಲ್ಲಿದೇವನು ಹೆಚ್ಚು ಪ್ರೀತಿಯಿಂದ ಪ್ರತ್ಯಕ್ಷನಾಗುವನು" ಯೋಗಿಯು ಕೇವಲ ತನ್ನ ಬಲದ ಮೇಲೆ ಸಾಧನೆ ಮಾಡುತ್ತಿರುವಾಗ ಅವನ ಧ್ಯಾನವು ಅಖಂಡಿತವಾಗುವ ಬದಲು ಖಂಡಿತವಾಗುವ ಸಂಭವನೇ ಹೆಚ್ಚು. ಆದರೆ ಭಕ್ತರು ಒಂದುಗೂಡಿ ಕೂಡಿಕೊಂಡು ದೇವನ ಭಜನೆಯನ್ನು ಮಾಡುವಲ್ಲಿ ದೇವನು ಉಪಸ್ಥಿತನಾಗದಿರುವುದಕ್ಕೆ ಅವಕಾಶವೇ ದೊರೆಯುವುದಿಲ್ಲ. ಒಬ್ಬರಿಗೆ ವಂಚಿತರಾದ ಅನುಭವವು ಲಾಭವಾಗುವುದು "ಎಲ್ಲಿ ಪಂಚರುವರೋ ಅಲ್ಲಿ ಪರಮೇಶ್ವರ ನಿರುವನು". ಈ ಲೋಕೋಕ್ತಿಯು ರಹಸ್ಯವಾದರೂ ಇದೇ ಆಗಿದೆ.

ಹಾದಿತ, ಸಾಕಷ್ಟು ಗಮನ ಯೋಗ್ಯ ಪ್ರೌಢ ಶಿಕ್ಷಣ ಕೇಂದ್ರ ಶಿಕ್ಷಣ ಸಚಿವರೇ ಶಿಕ್ಷಣಕ್ಕೆ ಒದಗಿಸಿದ ಹಣವಿಲ್ಲವೆಂದು ಮರುಗತ್ತಾಗಿ. ಶಿಕ್ಷಕರ ಸಾಗರೆ-ಸಬರವೇ ಸಚಿವರೆಂಬುದ ನಾಣ್ಣುಡಿಯ ವ್ಯಕ್ತಿಗತ ಅಭಿಪ್ರಾಯವಾಗೇ ಉಳಿದಿನೆ ಎಲ್ಲೂ ಸಮಾಜದ ಶಿಕ್ಷಣ ಭಂಡಾರ ಬರಿದೇ ಇರದು. ಹಾಗಾದರೆ "ಆಕ್ಷರ"ಗಳ ಕನಸೇಕೆ? ಏಸೇಕಗಳಲ್ಲಿ ಪ್ರಶಂಸೆ ಪತ್ರ ಯಾಕೆ ಮತ್ತೆ?

ಬಳ್ಳಾರಿಯ ಸಾಂದ್ರ ಶಿಕ್ಷಣ ಯೋಜನೆ ಪುಸ್ತಕ-ದ ಖರ್ಚಿಗಳಲ್ಲಿ ಯಶಸ್ವಿಯಾದರೆ ಖಂಡಿತವಾಗಿಯೂ ಸಾಲದು ಪ್ರಾಮಾಣಿಕವಾಗಿಯೂ ಅದು ಯತ್ನಿಸಬೇಕು. ನೆಂಟರಲ್ಲಿ ಪ್ರೀತಿ-ಒಕ್ಕೆಯಲ್ಲಿ ಆಸೆಯೆಂಬ ನೀತಿ ತಳೆದಾದೆ ಯೋಜನೆ ಹೆಚ್ಚು ಫಲ ದೇಶಕ್ಕೆ ದೊರೆಯುವಂತೆ ಪ್ರಾಮಾಣಿಕವಾಗಿ ಪ್ರಯತ್ನವಿಲ್ಲಿ ನಡೆಸುಬೇಕು. ಯೋಜನೆಗಾ ಯೇ ಯೋಜನೆಯಾಗಬಾರದು.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ — **English Made Easy**

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಅಂಗ್ಲಭ್ಯಾಸಬೋಧಿನಿ.
ಬೆಲೆ: ರೂ. 2—00

Letter Writing Made Easy — **ಸುಲಭದಲ್ಲಿ ಪತ್ರಲೇಖನ**

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ವಿವಿಧ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ — ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ತಮ್ಮ ಅತ್ಯಪೂರ್ವ ಬರೆದ ಗೀತೆಯ ಅನುವಾದ.
400 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು — **Home Remedies**

ಡಾ। ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಕೈಪಿಪ್ಪೆದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ವಿಧಾನಗಳಿವೆ.
ಹೆಂಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2 -00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

M. C. No. 2/1970

ಬಿ. ರಾಮಣ್ಣ —ಅರ್ಜಿದಾರ.
ಮತ್ತು
ಕದಿಲ —ಯೆದ್ರಿಳು
ಇವರಿಬ್ಬರಿಗೆ

ಹೇಳಿಕೆಯು

ಉಡ್ಪಿ ತಾಲ್ಲೂ ಪೆರ್ಡೂರು ಗ್ರಾಮದ ಸರ್ವೆ ನಂಬ್ರ ಮೇಸ್ತ್ರಿಬೆಟ್ಟು ಮಾಗಣೆ, ಸದ್ರಿ ನಂಬ್ರದ ಯಜಮಾನ ಕಮಲಂಬಾರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲಿನ ಅರ್ಜಿದಾರನು ಇವರಿಂದ ವಿನಾಹಜ ವಿಚ್ಛೇದನ ಪಡೆಯುವರೆ ಮೇಲಿನ ದಾವಾ (ಅರ್ಜಿ) ಹೂಕಿದ್ದು ಆದನ್ನು ನಿನ್ನ ಹಾಜರಾತಿ ಬಗ್ಗೆ ತಾರೀಕ್ಕು 2.7.70ಕ್ಕೆ ಇಟ್ಟಿರುತ್ತಾರೆ. ನೀವೂದೇನಾದ್ರೂ ಉದಾಸೀನತೆಯಿಂದ ಆಕ್ಷೇಪಿಸಿದ್ದಲ್ಲಿ ಈ ಕೋರ್ಟಿಗೆ ಮುಂದಿನ ದಿನ ಬೆಳಿಗ್ಗೆ 11 ಗಂಟೆಗೆ ಖುದ್ದಾಗಿಯೂ ವಕೀಲರ ಮುಖಾಂತರ ಹಾಜರಾಗಿಕ್ಕೆಬ್ಬು. ತಪ್ಪಿದಲ್ಲಿ ನಿನ್ನ ಗೈರು ಹಾಜರಿಯಲ್ಲಿ ಸದ್ರಿ ನಂಬ್ರವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ಕೋರ್ಟು ಮುಕ್ಕಾಂ ಪ್ರಕಾರ.

P. N. Gopalkrishna Rao
B. A., L. L. B.,
Advocate for Petitioner.

ಉಡ್ಪಿ, ದಿ. 5. ತಾರೀಕ್ಕು 5-6-70

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 331/1969

A. ದೊಡ್ಡಣ್ಣ ಶೆಟ್ಟಿ —ವಾದಿ
ಮತ್ತು
ಮಂಜಯ್ಯ ಶೆಟ್ಟಿ ವಗೈರೆರು—ಪ್ರತಿವಾದಿರು

ಪ್ರತಿವಾದಿ ಅನಂತರಾಮ ಶೆಟ್ಟಿ, ತಮ್ಮಪ್ಪ ಶೆಟ್ಟಿ ಮಾಗ ಉಡ್ಪಿ ತಾಲ್ಲೂ ಸಾಂತೆಕಟ್ಟು ಗ್ರಾಮದ ಸಾಂಕೋಡು ಪರಿಯಲ್ಲಿರುವವರಿಗೆ.

ಮಾದಿಯು ಪ್ಲೈಂಟ್ A. ಶೆಡ್ಯೂಲಿನಲ್ಲಿ ನಿವರ್ಸಿರುವ ಆಸ್ತಿಗಳನ್ನು 31 ಪಾಲುಗಳನ್ನಾಗಿ ವಿಂಗಡಿಸಿ, ಅಥವ ಒಂದು ಪಾಲನ್ನು ಕೊಡಬೇಕಾಗಿ ವಗೈರೆ ವಿಷಯದ ಕೇಳಿ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 29.6.1970ನೇ ಬೆಳಿಗ್ಗೆ 11 ಗಂಟೆಗೆ ಯಿಟ್ಟಿರುವದರಿಂದ ಸದರಿ ತಾರೀಕಿನಲ್ಲಿ ನೀವೆ ಸ್ವತಹಾ ಅಥವಾ ವಕೀಲರ ಮುಖಾಂತರ ಹಾಜರಾಗಿ ಸದ್ರಿ ದಾವೆಯ ವಿಷಯದಲ್ಲಿ ನಿಮ್ಮ ಉದಹರಣೆಯಲ್ಲಿ ಡಾಖಲು ಮಾಡಬಹುದಾಗಿಯೂ ಹಪ್ಪಿದಲ್ಲಿ ಸದರಿ ದಾವೆಯ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುವುದೆಂಬುದಾಗಿಯೂ ಈ ಮೂಲಕ ನಿಮಗೆ ಕೋರ್ಟು ಹುಕುಮು ಪ್ರಕಾರ ತಿಳಿಯಪಡಿಸಿದೆ ಗುತ್ತದೆ.

S. Rajagopal Achar
Advocate for Plaintiff

Karkala, Date-4-6-70

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಿಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

Edited, Printed & Published by K. H. Shetty at the Navayuga Press, Udipi, S. India.



NAVAYUGA 25—6—1970 ಸಂಪುಟ 49 ಸಂಚಿಕೆ 42

ರಾಷ್ಟ್ರೀಯ ಐಕ್ಯ ಮತ್ತು ರಾಜಕೀಯ ಪಕ್ಷಗಳು

ಮತೀಯ ಸೌಹಾರ್ದ ಮುಂತಾದ ರಾಷ್ಟ್ರೀಯ ಐಕ್ಯದ ಮಾತು ನಡೆಯುತ್ತದೆ. ಸೌಹಾರ್ದಯ ಬಿಸಿ ಆರಿದ ಮೇಲೆ ಎಲ್ಲಾ ಸಾಮಾನ್ಯವಾಗಿ ಬಿಡುತ್ತ . ಇದೊಂದು ಮುಂದರಿಯುತ್ತಿರುವ ಪ್ರಹಸನ. ಸಂಪ್ರದಾಯ ವಿರೋಧಿ ವೆಂದು ಹೇಳಿಕೊಳ್ಳುತ್ತಿರುವ ಸಭ್ಯ ಜೋತಿಷಿಯವರು ಕೂಡಾ ಈ ಸಂಪ್ರ ಯಕ್ಕೆ ವಿರುದ್ಧವಾಗಿರುವುದಿಲ್ಲ. ಮನ ಮಹಲು ಕಟ್ಟಿಸುವುದರಲ್ಲಿ ಹಾಗೂ ರೆಯುವ ಜಗಳದಲ್ಲಿ ಮುಖಂಡಿ ಎನಿ ಕೊಳ್ಳುತ್ತಿರುವ ಪ್ರಚಲಿತ ಪ್ರಧಾನಿ ಂದಿರಾ ಗಾಂಧಿಯವರು. ಅವರು ತನ್ನ ಆಡಳಿತ ಕಾಂಗ್ರೆಸ್ಸಿನ ಕೆಂಟರ್‌ಲ್ಲದ ಣಿಯಂತಿದ್ದಾರೆ. ಇವರು ಹಿಂದಿನ ಪ್ರ ನಿ ಜವಾಹರ್‌ಲಾಲ ನೆಹರೂರವರ ಪ್ರಜ್ಞೆಯಲ್ಲೇ ಮುಂದರಿಯುತ್ತಿದ್ದಾರೆ. ವರು ರಾಷ್ಟ್ರೀಯ ಐಕ್ಯದ ಹೆಸರಿನ ಲೆ ಸಭೆಗಳನ್ನು ಕರೆಯುತ್ತಿದ್ದಾರೆ. ದಕ್ಕೆ ಬಳಸಲಾಗಿರುವ ಹೆಸರು ಅಥವಾ ದ್ಧ ಸಮೂಹ—ನೇಶನಲ್ ಇಂಟೆಗ್ರೇ ನ್ ಕೌನ್ಸಿಲ್. ಇದು ಆರ್ಸನೋರ್ಡ್ ಂಗ್ಲ ಪದ ಸಮೂಹ ಇರಬಹುದು. ರಾಜ ೀಯ ಜೀವನದಲ್ಲಿ ಅದೂ ಅವರೆ ಆರ್ಸ್ ಕೋರ್—ಕಾಂಗ್ರೆಸ್ಸಿನ ಚಿಕ್ಕ) ಮತ್ತೆ ಫೋರ್ಡ್ (ಕಾಲ್ಲೊಳಿ) ಇರಬಹುದು. ವಾಗಿ ರಾಷ್ಟ್ರೀಯ ಐಕ್ಯವನ್ನು ಬಯ ವ ಭಾರತೀಯನಿಗೆ ಅದು ಹೇಗಿರ ಹುದು? ಭಾರತೀಯನಿಗೆ ಜೇಬ್ದ ಭಯ? ಇಂದಿರೆಗೆ ಹಾಗೂ ಅವರ 'ಇಂ ಸುನ್'ರಿಗೆ ಇಷ್ಟವಾದರೆ ಸರಿ. ಜವಾ ರ್‌ಲಾಲ ಶೈಹ್ರೂಜಿಯವರು ಈ ವಿಷ ಯದಲ್ಲಿ ಹೇಳುತ್ತಿದ್ದುದೇನೆ?—ನಾವೊಂ ದು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿದ್ದೇವೆ. ಗಳು ಆ ಮಾರ್ಗದಲ್ಲಿ ಮತ್ತಷ್ಟು ಎಂದುವರಿದಿದ್ದಾರೆ. ಅವರು ತುಂಡು ಳನ್ನು ಜೋಡಿಸುವ ಕೆಲಸದಲ್ಲಿದ್ದಾರೆ. ದು ಇವರ ಇಂಟೆಗ್ರೇಶನ್. ಈ ವಿಷ ಯದ ಮೇಲೆ ಮಾತಾಡಲು ಅವರು ನೇಕಾನೇಕ ರಾಜಕೀಯ ಪಕ್ಷಗಳನ್ನು ರೆದಿದ್ದಾರೆ. ಆ ರಾಜಕೀಯ ಪಕ್ಷ ಳಿಗೂ ರಾಷ್ಟ್ರೀಯ ಐಕ್ಯಕ್ಕೂ ಇರುವ ಂಬಂಧವಾದರೂ ಏನ?

ಕೇಂದ್ರದಲ್ಲೂ ರಾಜ್ಯದಲ್ಲೂ ಇಷ್ಟರ ವರೆಗೆ ಬಿಡದೆ ರಾಜ್ಯವಾಳಿಕೊಂಡು ಬಂದಿರುವದು ಕಾಂಗ್ರೆಸ್ಸು. ಕಾಂಗ್ರೆಸ್ಸನ್ನು ವದು (ಇಂಡಿಯನ್ ನೇಶನಲ್ ಕಾಂಗ್ರೆಸ್ಸು) ಒಂದು ಪಕ್ಷವಾಗಿರದೆ ಪಕ್ಷ ಗಳ ಪಕ್ಷ ಅಂದರೆ ಕಾಂಗ್ರೆಸ್ಸಾಗಿದ್ದುದರಿಂದ ಅದರಲ್ಲಿ ಅನ್ಯಾನ್ಯ ಅಭಿಪ್ರಾಯುಗಳ ಪ್ರಮುಖರೂ ಇದ್ದರು. ಕಾಂಗ್ರೆಸ್ಸು ಒಂದು ಪಾರ್ಟಿಯಾಗಿರೊದನೆ ಅವರು ಹೊರಗೆ ಹೋಗಲಿಲ್ಲ. ಸ್ವಾಭಾವಿಕವೇನು ಆದರೂ ಹಳೆಯ ವಾಸನೆ ಅಥವಾ ರೂಢಿಯೋದಾಗಿ, ಒಲವಿನಿಂದಾಗಿ ಹೊರಹೋಗದೆ ದೇಶವಿಭಜನೆಗೆ ಎದುರಾಗಿದ್ದು, ಕಾತ್ಮೀರದ ಮೇಲೆ ನಡೆದ ಆಕ್ರಮಣವನ್ನೆದುರಿಸಲು, ಸೈನ್ಯಕ್ಕೆಳುಹಿಸಿರೋ ನೇಹಾದಲ್ಲಿಕುಲ್ಲು-ಮುಳ್ಳು ಇಲ್ಲದ ಕಲ್ಲುಮಣ್ಣನ್ನು ಬಿಟ್ಟುಕೊಡುವ ಧಾರಾಳ-ಮನಸ್ಸಿನವರನ್ನೆದುರಿಸುತ್ತ ತಮ್ಮ ಬೋಳು ತಲೆಯನ್ನು ತೋರಿಸುತ್ತ, ಇದನ್ನು ಕಡಿಯು ತ್ತೀರೇನೆಂದು ಕೇಳಿದವನು, ಜೈನಾ ಆಕ್ರಮಣವನ್ನು ಖಂಡಿಸಿದವರು, ಮುಸ್ಲಿಂ ಲೀಗಿನೊಡನೆ ಸಂಬಂಧ ಬೆಳೆಸಿ ಕೊಳ್ಳಬಾರದೆಂದವರು, ಕಮ್ಯುನಿಸ್ಟರನ್ನು ನಂಬಬಾರದೆನ್ನುವವರೂ ಕಾಂಗ್ರೆಸ್ಸಿನಲ್ಲೇ ಇದ್ದರು. ಅಂತಹವರೆಲ್ಲ ಇಂದು ಇಂದಿರಾಜೀಯವರೇ ಬೇರ್ಪಡಿಸಿ ಬಿಟ್ಟಿದ್ದಾರೆ. ಅಧಿಕಾರದ ಅಂಗಳದಿಂದ ಹೊರಗಟ್ಟಿ ಬಿಟ್ಟಿದ್ದಾರೆ. ಅವರು ಹಿಂದೆ ನಡೆದಿರುವ ಆಕ್ರಮಣದ ಕಾರಣ ತುಟಿ ಎರಡು ಮೂಡದೆ ಆ ಭೂಪ್ರದೇಶಗಳಿಗೆ ಎಳ್ಳು ಕಾಳು ಬಿಡುವ ಎನೆಗಾರಿಕೆ ಪ್ರದರ್ಶಿಸಿದ್ದಾರೆ. ಹೊಂದಿಕೆಂದರೆ ಭಾರತ ಅವರಿಗೊಂದು ದೇಶವಲ್ಲ ಭಾರೀ ಜಮೀನು ಅಷ್ಟೆ. ಅದೇ ದೃಷ್ಟಿಯಿಂದ ಇಲ್ಲಿರುವ ಪ್ರಜೆಗಳನ್ನೂ ಅವರು ಕಾಣುತ್ತಿದ್ದಾರೆ. ಹಿಂದೂಗಳಿಗೊಂದು ರೀತಿಯ ಕಾನೂನ, ಮುಸ್ಲಿಮರಿಗೆ ಬೇರೆ, ಕ್ರಿಸ್ತೀಯರಿಗೆ ಇನ್ನೊಂದು, ಹೀಗೆ ಭಿನ್ನ ಭಿನ್ನ ಕಾನೂನಿಗಳು, ಒಂದೇ ರಾಷ್ಟ್ರವೆಂದಾದಲ್ಲಿ ಎಲ್ಲರಿಗೂ ಅನ್ವಯವಾಗ ವ ಒಂದೇ ರೀತಿಯ ಕಾನೂನು ಇರಬೇಕಲ್ಲವೇ? ಇವಕ್ಕೆ 'ಸರಿ'ಕ್ಕೆನ್ನುವ ಪಕ್ಷ ಗಳು ಯಾವುವು?

ಪಾಕಿಸ್ತಾನ ನಿರ್ಮಾಣದ ಕೊಡೆ ಹೊತ್ತುಕೊಂಡಿರುವವರು ತಾವೆಂದು ಧೈರ್ಯ ದಿಂದ ಹೇಳುತ್ತಿರುವವರು ಮುಸ್ಲಿಂ ಲೀಗಿನವರು. ಕಾಂಗ್ರೆಸ್ಸು ವಿಭಜನೆಯ ಎಣಿಸಿದರೂ ಮುಸ್ಲಿಂ ಲೀಗು ಅಂಕಿಸಿದಲ್ಲ. ಇಷ್ಟಿ ಅದೆಂದೂ ಒಂದು ರಾಷ್ಟ್ರ ಇದ್ದಿರಲಿಲ್ಲವೆಂಬ ದೇ ಅವರ ಅನಿಸಿಕೆಯ ಅಸಹ್ಯಕಾರ. ಕೇರಳದಾದ್ಯಂತ ಅಲ್ಲದೆ ಮಂಗಳೂರಿನ ವರೆಗೂ ಅದರ ಸಶಕ್ತ ಶಾಖೆಗಳಿಗಾಗಿ ಭರದಿಂದ ಸಾಗುತ್ತಿವೆ. ಇಂದಿರಾಜೀಯವರ ಇಂಟೆಗ್ರೇಶನ್ ಕ್ಷೇತ್ರ ಕೇಳಿಬಂದಂತೆ ಇತ್ಯಾದಿ ಲೀಗಿನವರು ಭಿನ್ನ ರಾಷ್ಟ್ರವಾದದ ಬೊಬ್ಬೆ ಜೋರು ಜೋರಾಗಿ ಕೇಳಿ ಬರುತ್ತಿದೆ. ಅವರು ಕಾಂಗ್ರೆಸ್ಸಿನೆಡೆ ಸವಾಲನ್ನೆಸೆದಿದ್ದಾರೆ. ಕಾಂಗ್ರೆಸ್ಸಿನ ಚರಿತ್ರೆಯೇ ಭಿನ್ನ-ರಾಷ್ಟ್ರವಾದವನ್ನು ಒಪ್ಪಿಕೊಂಡಿದ್ದು, ಅದರಂತೆ ಪಕ್ಷ ತೀರ್ಮಾನಿಸಿಕೊಂಡಿದ್ದು ಮುಂದಕ್ಕೂ ಹಾಗೆನೇ ನಾಗಬೇಕೆಂದು ಮುಸ್ಲಿಂ ಲೀಗು ಅವರಿಗೆ ಜ್ಞಾಪಕಪಡಿಸಿ ಬುದ್ಧಿವಾದ ಹೇಳುತ್ತಿದೆ. ಕಾಂಗ್ರೆಸ್ ಹಾದಿನ್ನೆತ್ತಿದೆ! ಅಂತೆಯೇ ಚರಿತ್ರೆಯು ಪಟಗಳಿಂದಲೂ ಪ್ರಥ್ವೀರಾಜ್, ರಾಣಾಪ್ರತಾಪ, ಛತ್ರಪತಿ ಶಿವಾಜಿ, ಬಾಜಿರಾವ್, ಗಾಂಧೀಜಿಯವರ ಕಸಬುಗಳನ್ನು ತೆಗೆದು ಹಾಕಲು ಪ್ರಯತ್ನಿಸುತ್ತಿದೆ. ಇಂದಿರಾಜೀಯವರ ಇಂಟೆಗ್ರೇಶನ್ ದಾರಿಯಲ್ಲಿ ಇವರ ತೊಡಕುಗಳಿವು. ನೆಕ್ಕೂ ಲದಸಂಬನ ರೋಡ್‌ರೋಲರ್ ಎಳೆದು ಈ ಎರಡು ತೊಡರುಗಳನ್ನು ತೆಗೆದುಹಾಕಲು ಪ್ರಯತ್ನ ನಡೆಯುತ್ತಿದೆ. ಮುಸ್ಲಿಂಲೀಗಿಗಳಿಗೆ ಅದರಿಂದ ಕೃಪ್ತಿಯೂದೀತೆ? ಕಾಂಗ್ರೆಸ್ಸು ಮತಾಂತರಕ್ಕೆ ವಿರುದ್ಧವೆ ಬ್ಬನ್ನು ಸರಿಯುತ್ತಿದೆಯೂದಲ್ಲಿ ಕಮ್ಯುನಿಷ್ಟರು ಗಟ್ಟಿಯೆಣ್ಣೆಯನ್ನೇ ಧಾರಾಳವಾಗಿ ಸುರಿಯುತ್ತಿದ್ದಾರೆ ರಾಜಕೀಯೋದ್ಯಮಿಗಳಿಗೆ ಇನೊಂದು ರಾಜಕೀಯದಂಧೆ, ಜೂಜು! ಇಂಡೋನೇಶ್ಯಾದತ್ತ ನನ್ನು ದೃಷ್ಟಿ ಹರಿಯಿಸಬೇಕು. ಅಲ್ಲಿ ಇಷ್ಟಾಂ ಸರಕಾರ ಇದೆ, ಅದು ಹಿಂದೂ ವಿರೋಧಿ ಏನು? ರಾಮಾಯಣ, ಗೀತೆಗಳನ್ನು ಅಲ್ಲಿ ಶಾಲೆ-ವಿದ್ಯಾಲಯಗಳಲ್ಲಿ ಕಡ್ಡಾಯವಾಗಿ ಕಲಿಸಲಾಗುತ್ತಿದೆ. ಪ್ರಜಾಪ್ರತಿನಿಧಿ ಸಭಾಂಗಣದಲ್ಲಿ ಮನುವಿನ ಮೇಲಿನ ಸ್ಥಾನವನ್ನು ಕೊಡಲಾಗಿರುತ್ತದೆ. ಅಫಘಾನಿಸ್ತಾನದಲ್ಲಿ ಶಾಲೆ-ವಿದ್ಯಾಲಯಗಳಲ್ಲಿ ಗೀತೆಯನ್ನು ಕಲಿಸಿಕೊಡಲಾಗುತ್ತಿದೆ. ಆದೇ ಬಿಯಾವ ಐಗುಪ್ತವನ್ನು ಮರೆತಿಲ್ಲ. ಮುಸ್ಲೀ ಆಕ್ರಮಣದ ಹಿಂದೆ ಇದ್ದ ರಾಜ ಮಹಾರಾಜರುಗಳನ್ನು ಇಂದು ಇಜಿಪ್ಟ್ ಅಪಮಾನಗೊಳಿಸುವದಿಲ್ಲ. ಪಶ್ಚಿಮಏಷಿಯಾ ರೂಡಾ ಇರಾನಿಯರ ಸ್ಮೃತಿಪಟಲದಿಂದ ಮಾಸಿಗುವದಿಲ್ಲ ಈ ಭಾವನೆ ಫ ವ್ಯಕ್ತಿಗಳಿಗೆ ಬೆಳೆದು ಬರಬೇಕು.

ಭಾರತವನ್ನು ಭಿನ್ನ ಭಿನ್ನ ರಾಷ್ಟ್ರೀಯರ ಚಕ್ರವೆಂದು ಬಂಡಾಯ ಬಾಸುಷ್ಟ ರವರು ಕಮ್ಯೂನಿಸ್ಟರು. ಅವರು ಒಂದೆಡೆ ಮಹತ್ವಾಕಾಂಕ್ಷೆಯರನ್ನು ಮಹಾಧಿಕಾರಿಗಳನ್ನಾಗಿಸಿದಲ್ಲಿ, ಇನ್ನೊಂದೆಡೆ ಹಿಂದೂಗಳನ್ನು ಹೀಗಳೆಯುತ್ತಿದ್ದಾರೆ. ಅದ್ಯಾವ ಗರುಡ ಕಮ್ಯೂನಿಸ್ಟನೇ ಇರಲಿ—ಅವರ ಅಭಿಪ್ರಾಯದ ಪ್ರಕಾರ ಒಂದ ರಾಷ್ಟ್ರವೆಂದಲ್ಲಿ ಅಲ್ಲಿ ಒಂದೇ ಭಾಷೆ ಇರಬೇಕು. ಮೈಸೂರಿನಲ್ಲಿ ಕನ್ನಡ ಇರುವದರಿಂದ ಅವಂಗೆ ಕರ್ನಾಟಕ ಒಂದು ರಾಷ್ಟ್ರ ಇಪೆ. ಹಾಗೇನೇ ತಮಿಳ್ನಾಡು, ಕೇರಳ, ಮಹಾರಾಷ್ಟ್ರ, ಗುಜರಾತ, ಸೌರಾಷ್ಟ್ರ ಇತ್ಯಾದಿ ... ಇತ್ಯಾದಿ ... ಕಮ್ಯುನಿಸ್ಟರು ರಾಜಕೀಯ ಮೂರೀಚ ರಿದ್ದಾರೆ ಭಾಷೆಯು ಆಧಾರವ ಮೇಲೆ ರಾಷ್ಟ್ರವೆಂದು ಹೇಳುವ ಕಮ್ಯೂನಿಸ್ಟರೇ ಇನ್ನೊಂದು ಕಡೆಗೆ ಮುಖ ತಿರುಗಿಸಿ—"ರಾಷ್ಟ್ರವು ಬಂಡವಾಳಷಾಹಿಗಳ ಬಾಬತ್ತಾದೆ, ಗೊಡ್ಡು ಸಂಪ್ರದಾಯವಾದಿಗಳ ಕಪ್ಪು ಅಭಿಪ್ರಾಯ ಇದೆ. ಈಗ ಅದ ಚೆಲುವಣಿಕೆ ಬರಲು ಸಾಧ್ಯವಿಲ್ಲ; ಇನ್ನು ಬರಲಿಕ್ಕಿರುವುದು ಒಂದೇ ಒಂದು ರಾಷ್ಟ್ರ. ಅದುವೇ ಪ್ರಸಂಚದ ಕಾರ್ಮಿಕರ ರಾಷ್ಟ್ರ. ಅದಕ್ಕೆ ರಾಜಧಾನಿಯೇ ರಷ್ಯಾ..." ಗಿಲಿ ಬಯಿಸಾತರ ಭಾಷಣ ಬಿಗಿಯುತ್ತಾರೆ! ಯಾವಾದೂ ನಡುವೆ 'ಏಕಶ್ಯಾ! ಜೈನಾ'ವೆಂದರೆ ಚಟ್ಟನೆ ಇನ್ನೆಷ್ಟಿಬ್ಬ 'ಹಾದಯ್ಯಾ, ಜೈನಾದ ಮೂಲಕ ರಷ್ಯಾ ಅದು ಲೆನಿನ್ ಸೂಚಿಸಿರುವ ಪ್ರಸಂಚದ ಪಟ್ಟ'ವೆಂದು

(ಹನ್ನೆರಡನೇ ಪುಟ ನೋಡಿ)

ಸೂರ್ಯೋಪಾಸಕರು ಭಾರತಕ್ಕೆ ಬಂದರು

ಸಾವಿರಾರು ವರ್ಷಗಳನ್ನು ವ್ಯಾಪಿಸಿರುವ ಪುರಾಣಗಳು ಮೂಲರೂಪದಲ್ಲಿಯೇ ಇಂದು ಇವೆಯೆ? ಅಥವಾ ಅವುಗಳಲ್ಲಿ ಏನಾದರೂ ಪರಿವರ್ತನೆಗಳು ಸಂಭವಿಸಿವೆಯೆ? ಪುರಾಣಗಳು ಮೂಲರೂಪವನ್ನೇ ಉಳಿಸಿಕೊಂಡಿವೆಯೆಂದು ಯಾರೂ ಹೇಳಲಾರರು. ಹೇಳಿದರೂ ಅದು ಅಸಾಧುವಿಶ್ವಾಸ. ವೇದಗಳ ರಕ್ಷಣೆಗಾಗಿ ಪದಪಾಠ ಮಾತ್ರವಲ್ಲದೆ, ಜಟೆ, ಮಾಲೆ, ಶಿಖೆ, ರೇಖೆ, ಧ್ವಜ, ದಂಡ, ರಥ ಹಾಗೂ ಘನವೆಂಬ ಎಂಟು ಬಗೆಯ ವಿಕೃತಿಗಳು ತಲೆದೋರಿದುವು. ಇದಕ್ಕೆ ಮಂತ್ರಗಳೂ ಇಲ್ಲ; ಪದ ಮತ್ತು ಅಕ್ಷರಗಳು ಗಣನೆಗೊಳಗಾಗಿದ್ದುವು. ಈ ನೇಸದಲ್ಲಿಯೂ ಶಾಖಾಭೇದಕ್ಕವಕಾಶವಾಗಿ ಪಾಠಭೇದಗಳೂ ಕೆಲವೆಯೂ ಕಂಡು ಬಂದಿವೆ. ಹಾಗಿರುವಾಗ, ಪುರಾಣಗಳು ಅಸ್ಪೃಷ್ಟವಾಗಿಯೇ ಉಳಿಯುವುದು ಹೇಗೆ ಸಾಧ್ಯ? ಅನೇಕ ರಾಜಮಹಾರಾಜರು ತಮ್ಮ ಕುಲಿನವೆಂದು ಕರೆದುಕೊಳ್ಳುವಲಭಿಲಾಷೆಯಿಂದ ಪುರಾಣೋಕ್ತ ರಾಜವಂಶ ವೃಕ್ಷವನ್ನು ಆಶ್ರಿತ ವಿದ್ವಾಂಸರಿಂದ ನಿಳೆಸಿಕೊಂಡರು. ತಮ್ಮ ಆಶ್ರಯದಾತ ರಾಜನನ್ನು ಪ್ರಶಂಸಿಸಿ ಪ್ರಸನ್ನಗೊಳಿಸಲು ಪಂಡಿತೋತ್ತಮರೂ ಪುರಾಣಗಳನ್ನು ಬೆಳೆಸಿಕೊಂಡು ಬಂದರು. ಇದಕ್ಕೆ ಜ್ವಲಂತ ಉದಾಹರಣೆ ಭವಿಷ್ಯಪುರಾಣ. ಪೌರೋಹಿತ್ಯ ಶ್ವರ ಪ್ರೆಸ್ಟಿನಲ್ಲಿ ಮುದ್ರಿತವಾದ ಇದರ ಒಂದು ಅವೃತ್ತಿ ನಿಜಕ್ಕೂ ಕ್ರಾಂತಿಕಾರಿ. ಇದರಲ್ಲಿ ಬಾಬರ, ಹುಮಾಯೂನ ಮತ್ತು ಅಕ್ಬರನನ್ನು ಕೆಸಸಲಾಗಿದೆ. ಇಷ್ಟರಿಂದಲೇ ಕೃಪ್ತವಾಗದ ಈ ಅವೃತ್ತಿ ಭಾರತದ ಮಹಾರಾಣಿಯೆನಿಸಿದ ಇಂಗ್ಲೆಂಡಿನ ವಿಕ್ಟೋರಿಯಾ ಮಹಾರಾಣಿಯ ಅವತಾರವನ್ನು ಭವಿಷ್ಯ ಹೇಳಿದೆ. ವಿವಿಧ ಮಹಾಚಾರ್ಯರೂ ಮಹತ್ತು ಪಂಡಿತರೂ ತಮ್ಮ ಕವಿತನಕ್ಕೆ ತೋಚಿದಂತೆ ಅಲ್ಪ ಸ್ವಲ್ಪ ಪರಿವರ್ತನೆ ಮಾಡಿದರು. ಹಾಗಿದ್ದರೆ ಈ ಭವಿಷ್ಯ ಪುರಾಣವು ಸಂಪೂರ್ಣವಾಗಿ ಪ್ರಕ್ಷಿಪ್ತವೆಂದು ಮಾತ್ರ ಹೇಳಲಾಗದು.

ಇದಕ್ಕೆ ಪ್ರಬಲ ಕಾರಣಗಳೂ ಇವೆ. ಅಸ್ಪಷ್ಟ ಭವಿಷ್ಯತ್ಕಾಲದಲ್ಲಿ ಭವಿಷ್ಯ ಪುರಾಣದ ಹೆಸರು ಬರುತ್ತದೆ. ಹಾಲ್ಟ್ಜರ್ ಈ ಅಭಿಪ್ರಾಯವನ್ನು ಪ್ರೊ. ಮಾಕ್ಸ್ಮೂಲರ ಕೃತಿಯೆಂದು ಒಪ್ಪಿಕೊಂಡಿದ್ದಾರೆ. ಆದರಿಂದ ಭವಿಷ್ಯ ಪುರಾಣವು ರಚಿತಗೊಂಡು ಇಂದಿಗೆ ೨೬೦೦ ವರ್ಷಗಳಾದರೂ ಸಂದಿರಬೇಕು. ಈ ಸುದೀರ್ಘಾವಧಿಯಲ್ಲಿ ಪುರಾಣದ ಸ್ವರೂಪ ಕಾಲಕಾಲಕ್ಕೆ ಬದಲಾಗುತ್ತ ಬಂದಿರಬೇಕು.

ಭವಿಷ್ಯ ಪುರಾಣದ ಒಂದು ಕತೆಯಲ್ಲಿ (೧೫೯-೪೬) ಸಾಂಬನು ಶಾಕ ದ್ವೀಪದಿಂದ ಸೂರ್ಯ ಪೂಜೆಗಾಗಿ ಮಗಾಜಾರ್ಯನನ್ನು ಕರೆತಂದನೆಂದು ಹೇಳಿದೆ. ವಿಷ್ಣು ಗೋತ್ರದ ಸಜಿಷ್ಣುವೆಂಬ ಬ್ರಾಹ್ಮಣನ ಮಗಳು ನಿಕ್ಷುಭೆಯಲ್ಲಿ ಭಗವಾನ್ ಭಾಸ್ಕರನ ಕೃಪೆಯಿಂದ ಜರಾಶಬ್ದ, ಜಂತಾಸರರೆಂಬ ಗಂಡು ಮಕ್ಕಳು ಹುಟ್ಟಿದರಿಂದೂ ಮಗಾಜಾರ್ಯನು ಅವರ ವಂಶಜನೆಂದೂ ಉಲ್ಲೇಖವಿದೆ.

ಪ್ರೊ| ರಾಮಾಜಸ ಗೌತರೆಂಬ ವಿದ್ವಾಂಸರು ಈ ಅಗ್ಗೆ ಹೇಳಿತ್ತಾರೆ: ಈ ಘಟನೆಯು ಸುಮಾರು ಪಾಲ್ಕಾವರೆ ಸಾವಿರ ವರ್ಷಗಳಷ್ಟು ಪ್ರಾಚೀನವಾದದ್ದು, ಪರ್ಷಿಯನ್ನರ ಧರ್ಮಗ್ರಂಥ 'ಛಂದಾವಸ್ತಾ'ದ ಮಿಹಿರನ ಸ್ತುತಿಯಿಂದ ಒಂದೊಮ್ಮೆ ಸಂಯೋಜಿತವಾಗಿದ್ದ-ಅಗ್ನಿಉಪಾಸಕ ಪರ್ಷಿಯನ್ನರ ನಡತೆ ಬಲವಾದ ಹೋರಾಟ ಪಡೆಯಿತೆಂದೂ ತಿಳಿಯುತ್ತದೆ. ಇದರ ಪರಿಣಾಮವಾಗಿಯೇ ಸಾಯೆರ್ಷಾಪಾಸಕ ಯಹೂದಿಯರು ಭಾರತಕ್ಕೆ ಬಂದು ನೆಲಸಿದರು. ಪರ್ಷಿಯನ್ನರ ಹೇಳಿಕೆಯಂತೆ ಈ ಘಟನೆ ನಡೆದು ಪಾಲ್ಕಾವರೆ ಸಾವಿರ ವರ್ಷಗಳು ಗತಿಸಿದುವು. ಇದನ್ನು ನಂಬುವುದಾದರೆ, ನಾಲ್ಕಾವರೆ ಸಾವಿರ ವರ್ಷ ಪೂರ್ವದ ಘಟನೆಯೊಂದು ಭವಿಷ್ಯ ಪುರಾಣದಲ್ಲಿ ಸೇರಿಕ್ಷಿಪ್ತವಾಗಿದೆಯೆನ್ನಲೇ ಬೇಕು. ಐತಿಹಾಸಿಕ ದೃಷ್ಟಿಯಿಂದ ವಿಮರ್ಶಿಸಿದರೂ ಪರ್ಷಿಯನ್ನರು ಹೇಳಿದಸಂಖ್ಯೆಯಕ್ಕೂ ಭಾರತೀಯ ಸಂಖ್ಯೆಯಕ್ಕೂ ಹೊಂದಾಣಿಕೆ ಇದೆ. ಭವಿಷ್ಯ ಪುರಾಣೋಕ್ತ ಸಾಂಬನು ಶ್ರೀ ಕೃಷ್ಣನ ಮಗನಂತೆ. ಶ್ರೀ ಕೃಷ್ಣನ ಈ ಭೂಮಂಡಲವನ್ನು ತ್ಯಜಿಸಿದ ದಿವಸವೇ ಇಲ್ಲಿ ಕಲಿಯುಗವಾರಂಭವಾಯಿತು. ನನ್ನು ಪಂಜಾಂಗನುಸಾರ ಕಲಿಯುಗ ಆರಂಭವಾಗಿ ಇಂದಿಗೆ ಐದು ಸಾವಿರದ ಎಪ್ಪತ್ತು ವರ್ಷಗಳು ಸಂದವು. ಮಹಾಭಾರತ ಯುದ್ಧದ ಸಹಾಯಕ್ಕೂ ಸಾಂಬನು ಹೊಂದಾಣಿಕೆ ಇದೆ.

ವಾಯುಪುರಾಣದಲ್ಲಿ ಯೋಗದ ಪಾಶುಪತರೂಪವೆಂಬುದೊಂದರ ಉಲ್ಲೇಖವಿದೆ. ಈ ಯೋಗ ಮುದ್ರೆಯನ್ನು ಹೋಲುವ ಮುದ್ರೆಯೊಂದು ಮೊಹೆಂಜೊದಾರೋವಿನ ಭಗ್ನಾವಶೇಷಗಳಲ್ಲಿ ದೊರೆತಿದೆ. ಈ ಅವಶೇಷಗಳ ನಿರ್ಮಾಣ ಕಾಲವು ಪ್ರಾಚೀನದಲ್ಲಿ ಪ್ರಾಚೀನವೆಂದು ಪುರಾತತ್ವವೇತ್ತರು ನಿರ್ಣಯಿಸಿದ್ದಾರೆ. ಪ್ರಾಗಂಕಶೆಯು ಆರಂಭಕಾಲದ ಭಾವನೆಗಳನ್ನು ನಮ್ಮ ಪುರಾಣಗಳು ರಕ್ಷಿಸಿಕೊಂಡು ಬಂದಿರಬೇಕಾದರೆ, ಪುರಾಣಗಳು ಅರ್ವಾಚೀನವೆಂದು ಹೇಳುವುದು ಅಸಂಗತವಾದುದು. ಪುರಾಣಗಳು ನಮ್ಮ ಪ್ರಕಾಶಕಾಲದ ಸಾಂಸ್ಕೃತಿಕ ಸ್ತೂಪಗಳು; ಆದುದರಿಂದಲೇ ಈ ಸಾವಿರಾರು ವರ್ಷಗಳ ಅವಧಿಯಲ್ಲಿ ಅವುಗಳ ಮೇಲೆ ಅನೇಕ ಪ್ರಕಾರದ ಆಘಾತಗಳು ನಡೆದರೂ ಅವು ಉಳಿದು ಬಂದಿವೆ; ನಾವು ಅವನ್ನು ಸಂಪೂರ್ಣ ಧ್ವಂಸದಿಂದ ಉಳಿಸಿಕೊಂಡು ಬಂದಿದ್ದೇವೆ.

ಪುರಾಣಗಳ ಸಂಖ್ಯೆ ಹದಿನೆಂಟು. ಏಕೆ? 'ಪುರಾಣ' ಶಬ್ದದ ಅರ್ಥ ಸೃಷ್ಟಿ ನಿರ್ಮಾಣದ ಕಥೆ. ಸೃಷ್ಟಿ ಪ್ರಕ್ರಿಯೆಯಲ್ಲಿ ಒಂದು ಪುರಾಣಕ್ಕೂ ಇನ್ನೊಂದು ಪುರಾಣಕ್ಕೂ ಸೂಕ್ಷ್ಮವಾದ ಭಿನ್ನತೆಯಿದೆ. ಸೃಷ್ಟಿ ಉತ್ಪತ್ತಿಗೆ ಸಂಬಂಧಿಸಿದಂತೆ ೧೮ ಮತಗಳಿವೆ. ಆದುದರಿಂದಲೇ ಒಂದೊಂದು ಮತದ ಸೃಷ್ಟಿ ಉತ್ಪತ್ತಿ ರಹಸ್ಯವು ಒಂದೊಂದು ಪುರಾಣವಾಯ್ತು. ವ್ಯಾಳ ಮಹರ್ಷಿಯು ೧೮ ಪುರಾಣಗಳನ್ನು ಬರೆದರೂ ಅವು ೧೮ ಎಂದೇ ಪರಿಗಣಿಸಲಾದುದು. ಸಮಾಧಾನವಾದ ಪ್ರತಿಪಾದಕವಾದ ಎರಡು ಪುರಾಣಗಳಿಂದ ಲೋಮಹರ್ಷಣ ಸೂತನು ಒಂದನ್ನು ಮಾತ್ರ ಸ್ವೀಕರಿಸಿ ಇನ್ನೊಂದನ್ನು ಬಿಟ್ಟುಬಿಟ್ಟನು. ಅವನ ಪುತ್ರ ಉಗ್ರಶ್ರವನು ಎರಡನ್ನೂ ಒಂದಾಗಿ ತಿಳಿಯದೆ ೧೮ ಪುರಾಣಗಳ ಪಂಥವನ್ನೇ ಮಂಡಿಸುವಂತೆ ಮಾಡಿದನು. ಬೇರೆಬೇರೆ ಪುರಾಣಗಳಲ್ಲಿ ಪುರಾಣಗಳ ಹೆಸರುಗಳು ಬೇರೆಬೇರೆಯಾಗಲು ಇದೇ ಕಾರಣ. ೧೮ ಪುರಾಣಗಳ ನಾಮಗಣನೆಯಿರುವಲ್ಲಿ ಪದ್ಮ, ಬ್ರಹ್ಮವೈವರ್ತ, ಭವಿಷ್ಯ, ಭಾಗವತ, ಮಾರ್ಕಂಡೇಯ, ಲಿಂಗ, ವಿಷ್ಣು; ಶಿವ ಮತ್ತು ಸ್ಕಂದಪುರಾಣಗಳು—ಶಿವ ಪುರಾಣವನ್ನು ಅಷ್ಟಾದಶ ಪುರಾಣಗಳಲ್ಲಿ ಒಂದೆಂದು ಒಪ್ಪಿಕೊಂಡು ವಾಯು ಪುರಾಣವನ್ನು ನಿರಾಕರಿಸಿವೆ. ದೇವೀ ಭಾಗವತ, ನಾರದ, ಮತ್ಸ್ಯ ಮತ್ತು ವಾಯ ಪುರಾಣಗಳು ಶಿವಪುರಾಣವನ್ನು ತ್ಯಜಿಸಿ ವಾಯು ಪುರಾಣವನ್ನು ಒಪ್ಪಿಕೊಂಡಿವೆ. ಮಾರ್ಕಂಡೇಯ ಪುರಾಣವು ಲಿಂಗಪುರಾಣದ ಬದಲು ನೃಸಿಂಹ ಪುರಾಣವನ್ನು ಸೇರಿಸಿಕೊಂಡು ೧೮ ಸಂಖ್ಯಾ ಪೂರ್ತಿ ಮಾಡುತ್ತವೆ. ಕೂರ್ಮ ಪುರಾಣವು ೧೮ ಪುರಾಣಗಳ ಕೆಸರನ್ನೂ ಪಡೆದಿವೆಯಾದರೂ ಪುರಾಣಗಳಲ್ಲಿ ಸೃಷ್ಟಿವಾದವು ಒಂದೇ ಆಗಿರುವುದರಿಂದ ಸಂಖ್ಯೆಯನ್ನು ೧೮ ಎಂದೇ ನಿಗದಿಪಡಿಸಿತ್ತದೆ. ದೇವೀಭಾಗವತದ ಟೀಕಾಕಾರನು ದೇವೀಭಾಗವತವನ್ನು ೧೮ ಪುರಾಣಗಳಲ್ಲಿ ಒಂದಾಗಿ ಭಾವಿಸಿಲ್ಲನೆ. ಇದಕ್ಕೆಂದೇ ಅವನು ಭಾಗವತವನ್ನು ಹೊರತಳಿದರೆ ಸ್ಥಾನದಲ್ಲಿ ದೇವೀಭಾಗವತವನ್ನು ಪ್ರತಿಷ್ಠೆ ಮಾಡಿತ್ತಾನೆ. ಇದು ಆತನ ಅಭಿಪ್ರಾಯ ಮಾತ್ರ. ಸೃಷ್ಟಿವಾದದೊಡನೆ ಇದಕ್ಕೆ ಭಿನ್ನ ಮತವಿಲ್ಲ. ಶಾಕ್ತ ಸಂಪ್ರದಾಯಕ್ಕೆ ಪ್ರಧಾನ ಸ್ಥಾನವನ್ನು ಕೊಡುವುದೇ ಅವನ ಮಹತ್ತೇಶ್ಯವಿರುವಂತೆ ತೋರುತ್ತದೆ. ಕೆಲವರು ಅಧ್ಯಯನಶೀಲ ಪಂಡಿತರು ಶಿವಪುರಾಣವನ್ನು ವಾಯು ಪುರಾಣವನ್ನು ಒಂದಾಗಿ ಭಾವಿಸಿ ಸಂಖ್ಯಾ ಸಮನ್ವಯಗೊಂದು ಪರಿಹಾರ ಸೂಚಿಸಿದ್ದಾರೆ. ಆದರೆ, ಇದು ಸಾಧ್ಯವಾಗುವುದಿಲ್ಲ. ಏಕೆಂದರೆ, ಶಿವ ಪುರಾಣದಲ್ಲಿ ವಾಯು ಸಂಹಿತೆಯು ಬರುವುದಾದರೂ ಅದಕ್ಕೆ ಹೊರತಾದ ಇನ್ನೊಂದು ವಾಯುಪುರಾಣವಿದೆ. ಇದು ಇತಿಹಾಸಜ್ಞರಿಗೆ ಅತ್ಯಂತ ಪ್ರಿಯವಾದ. ಮಹಾಭಾರತದ ವಿವಿಧ ಪರ್ವದಲ್ಲಿಯೂ ಈ ಪುರಾಣದ ಹೆಸರು ಉಲ್ಲೇಖವಾಗುತ್ತದೆ.

ಹೂವುದನ್ನು ಬಿಡಬೇಕು ಎಂಬ ಪ್ರಶ್ನೆ ಪುರಾಣ ರಚನಾ ಕಾಲದಿಂದಲೂ ಉಳಿದು ಬಂದಿದ್ದು. ಪುರಾಣಗಳ ಸಂಖ್ಯೆಯನ್ನು ೧೮ಕ್ಕೇ ನಿಲ್ಲಿಸಬೇಕೆಂಬೇಷವೂ ಇಂದಿನ ಪರಿಸ್ಥಿತಿಯಲ್ಲಿ ಇಲ್ಲ. ಎಲ್ಲರ ಅಂಬೋಣಕ್ಕೂ ಮನ್ನಣೆ ಕೊಡುವುದರಿಂದ ಹಾನಿಯೇನೂ ಇಲ್ಲ. ಭಗವಾನ್ ಹೇಳಿದೆ ಇದ್ದ ಶಾಂತರಸವನ್ನು ಒಂಭತ್ತನೆಯ ರಸವೆಂದು ಎಲ್ಲರೂ ಒಪ್ಪಿಕೊಂಡಿರುವಾಗ, ಪುರಾಣಗಳನ್ನು ೧೮ ಎಂದು ಸ್ವೀಕರಿಸಿದರೆ ಹಾನಿಯೇನಿಲ್ಲ? —ಗೋ

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಆಕ್ಕಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ವಲ್ಲಭ
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಪೋಷ್ಟ್ : 526
ಸಂಪುಟ ೪೯
ಸಂಚಿಕೆ ೪೨
VOL. 49
No. 42

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೨೫—೬—೧೯೭೦

1921 ಸ್ಥಾಪನೆ
ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ ರೂ. 10/-

Advt. Rate Rs. 3/- per colm. cm.

ವಿಲ್ಸನ್ ಪರಾಜಯ

ಬ್ರಿಟನ್ನಿನ ಪ್ರಧಾನಮಂತ್ರಿಯೂಗಿದ್ದ ಶ್ರೀ ಹೆರಾಲ್ಡ್ ವಿಲ್ಸನ್ನರು ಲೇಬರ್ ಪಕ್ಷದ ಸರಕಾರವನ್ನು ಎರಡು ಬಾರಿ ರಚಿಸಿದರೇನೋ ನಿಜ. ಆದರೆ, ಎರಡೂ ಸಲವೂ ಅವರು ಪೂರ್ಣಾವಧಿಯವರೆಗೆ ಉಳಿಯಲಿಲ್ಲ. ಅವಧಿ ಮುಗಿಯುವುದಕ್ಕೆ ಕೆಲವೇ ತಿಂಗಳುಗಳಿರುವಾಗ ಅವರು ಪಾರ್ಲಿಮೆಂಟನ್ನು ವಿಸರ್ಜಿಸಿ ಸಾರ್ವತ್ರಿಕ ಚುನಾವಣೆಗಳನ್ನು ಎದುರಿಸಲು ಸನ್ನದ್ಧ ಮಾಡಿದರು. ಹಲವಾರು ಸಮಸ್ಯೆಗಳು ಜಟಿಲವಾಗಿ ಬ್ರಿಟಿಷ್ ನಾಗರಿಕರನ್ನು ಕಾಡುತ್ತಿದ್ದರೂ ಲೇಬರ್ ಪಕ್ಷದ ಗೆಲವಿನಲ್ಲಿ ಅಪನಂಬಿಕೆ ತೋರಿ ಬಂದಿದ್ದರೂ ಹೆರಾಲ್ಡ್ ವಿಲ್ಸನ್ನರು ಮೊದಲಬಾರಿಗೆ ಅಬ್ಬರದ ಜಯಭೇರಿ ಬಾರಿಸಿದ್ದರು. ಈ ವಿಜಯದಿಂದ ಪ್ರೇರಿತರಾಗಿಯೇ ಎರಡನೆ ಬಾರಿಯೂ ಅವರು ಚುನಾವಣಾರಣಕ್ಕಿಳಿದರು. ಅನೇಕ ಪೂರ್ವಭಾವಿ ಪರಿಶೀಲನೆಗಳು ಲೇಬರ್ ಪಕ್ಷದ ವಿಜಯವನ್ನೇ ಘೋಷಿಸಿದ್ದುವು. ಕೊನೆಯ ಗಳಿಗೆಯಲ್ಲಿ ಅದರ ಪ್ರಚಂಡ ವಿಜಯವೇ ಪರಿಶೀಲನೆಯು ಪ್ರಮಾಣವಾಗಿತ್ತು. ದುರ್ದೈವದಿಂದ ಇವೆಲ್ಲವೂ ಪೊಳ್ಳಾಗಿ ಹೋಯಿತು. ಎಷ್ಟು ಪ್ರಚಂಡ ಜಯಭೇರಿ ಬಾರಿಸುವ ಫಿರಂಗಿಯಿ ತೆಪ್ಪೇ ಅಷ್ಟೇ ಪ್ರಚಂಡವಾಗಿ ಅದು ಅಪಜಯವನ್ನೊಪ್ಪಿಕೊಳ್ಳಬೇಕಾಗಿ ಬಂತು. ಹುತಪೆಟ್ಟಿಗೆಗಳು ಭವಿಷ್ಯವನ್ನು ವಿಲ್ಸನ್ನರಿಗೆ ತೀರ ವಿರುದ್ಧವಾಗಿ ಫಿರ್ಣಯಿಸಿದುವು.

ಯಾವ ಮಂತ್ರಿಪಟ್ಟವೆಂದು ಯೋಚಿಸುವ ಅಗತ್ಯವಿಲ್ಲ. ಅನುಭವದಲ್ಲಿ ಕ್ಯಾಬಿನೆಟ್ಟಿಗೆ, ಪ್ರಾಯದಲ್ಲಿ ರಾಜ್ಯಮಟ್ಟಕ್ಕೆ ಇವರು ಲಾಡುಕ್ಯ. ಅವೆರಡೂ ಇಲ್ಲವಾದರೆ ಉಪಮಂತ್ರಿ—ಪಾರ್ಲಿಮೆಂಟರಿ ಸೆಕ್ರೆಟರಿ ಏನಾದರೂ ಒಂದು.

ಡಬ್ಲ್ಯೂ ಶ್ರಿಬ್ಲ್ಯೂ ಗ್ಯಾಜುವೇಟರರು ಬಸ್ ಕಂಡಕ್ಟರರಾಗಲು ಮುಂದೆ ಬರುತ್ತಾರೆ. ಇದು ಹೊಟ್ಟೆಪಾಡಿಗೆ ಎಂದರೆ ಅಪಚಾರ— ಅಲ್ಲಿಯಾದರೂ ತಮ್ಮ ಬುದ್ಧಿವಂತಿಕೆಯ ಉಪಯೋಗ ಜನ ಸೇವೆಗೆ ಸಿಗುವಂತಾಗಲಿ ಎಂದು.

ಆದರೆ, ಶ್ರೀಮತಿ ಇಂದಿರಜ್ಜಿಯವರು ತಯಾರಿಸಿದ ಲಿಸ್ಟಿನಲ್ಲಿ ಶ್ರೀ ಎಂ.ವಿ.ಕೆ. ಅವರ ಹೆಸರಿದ್ದಂತೆ ಕಾಣುವುದಿಲ್ಲ. ವ್ಯಾಯಃ ಅಜ್ಜಿಯಾದ ಉತ್ಸಾಹದಲ್ಲಿ ಅಕೆ ಮೈಮರೆತಿರಬಹುದು; ಅಥವಾ ಶ್ರೀ ಕೆಂಪಲ್ಲರ ಹೆಸರಿನ ಮುಂದೆ ಇವರದ್ದು ಎದ್ದು ತೋರದಿರಬಹುದು.

ಶ್ರೀಮತಿ ಇಂದಿರಜ್ಜಿ ನೆನಪಿಡಬೇಕು— ಅವರು ತಮ್ಮ ಯೋಗ್ಯತೆಯು ಉಚಿತಯೋಗ ರಾಜ್ಯಕ್ಕೆ ಆಗಬೇಕೆಂದು ಮುಖ್ಯಮಂತ್ರಿ ಯಾಗುವ ಆಸೆಯಿಟ್ಟುಕೊಂಡು ದಿಲ್ಲಿಯಿಂದ ಬೆಂಗಳೂರಿಗೆ ಬಂದರು. ಶ್ರೀ ನಿಜಲಿಂಗಪ್ಪನವರು ಆಡ್ಡಿಯಾದ್ದರಿಂದ ಅವರಿಗುವ ತಮಗೆ ಬೆಂಗಳೂರೇ ಬೇಡ ವೆಂದು ಮತ್ತೆ ದಿಲ್ಲಿಗೆ ಹೋದವರು.

ಸಿಂಡಿಕೇಟ್ ಸ್ವಾಯತ್ತರು ಶ್ರೀ ಜತ್ತಿಯವರಿಗೊಂದು ರಾಜ್ಯಪಾಲಗಿರಿ ಕೊಡಿಸಿದರೂ ತನಗೇನಕ್ಕೂ ಕೊಡಲಿಲ್ಲವೆಂದು ಮಾರುಗ ತಿಸ್ಡ ಅವರು ಕಾಂಗ್ರೆಸ್ ಹೋಳಾಟದಲ್ಲಿ ಅಧಿಕಾರಾರೂಢರಿಗೆ ಸೆಡ್ಡು ಹೊಡೆದು ಕೊಂಡರು. ಈಗ ಅಕೆಯು ತನ್ನಂತಹ ಸರ್ವಯೋಗ್ಯನನ್ನು ವಂಚಿಸಿದರೆ ಈ ಅಪಮಾನವನ್ನು ಸಹಿಸಲಾದೀತೆ?

ಆಗ ಶ್ರೀ ದೇವರಾಜ ಅರಸರು ಇಂಡಿಕೇಟಿಗರಾಗೇ ಮುಂದ ವರಿಯುತ್ತಾರೆ. ಶ್ರೀ ಕೃಷ್ಣಪ್ಪನವರು ಶ್ರೀ ಜೆನ್ನಯ್ಯ ಕಾಂಗ್ರೆಸ್ ಧ್ವಜಕೆ ಸೇರಬಹುದು?

ಶ್ರೀಮತಿ ಗಾಂಧಿ ಸಮಾಧಾನ ಹೇಳಬಹುದು. ಈಗಿನ ಮಂತ್ರಿಸ್ಥಾಪನೆ ನೀರಮೇಲಿನ ಗುಳ್ಳೆ. ಕಡ್ಯವೇ ಚುನಾವಣೆ ನಡೆಸಲ್ಕೇನೆ. ಆಗ ಖಂಡಿತವಾಗಿಯೂ ವಿಜಯಗೆ ಕ್ಯಾಪ್ಟನೆಟ್ ರ್ಯಾಂಕು. ವಿಮ್ಮಂತಹ ಯುವಜನತೆ ವಿಶಾಲ ಅನುಭವದ ಸಂಪೂರ್ಣ ಸ್ಯಯೋಜನೆ ಈ ಅಜ್ಜಭಾರತೀರಾಜ್ಯಗೆ ಆಗಲೇಬೇಕು. ಅಥವಾ ರಾಜ್ಯದಲ್ಲಾದರೂ ನೀವು ಮುಖ್ಯಮಂತ್ರಿಯಾಗಬೇಕು. ಅದಕ್ಕಾಗಿ ಸಿಂಡಿಕೇಟಿನ ವಿರುದ್ಧ ಪಿತೂರಿ ಮಾಡಿ ಅದನ್ನು ಮಟ್ಟು ಮೇಲಗಿಸಿರಿ.

ಶ್ರೀ ಕೃಷ್ಣಪ್ಪನವರು ಉಬ್ಬುತ್ತಾರೆ. ಮುಂದಿನ ಚುನಾವಣೆಗಳ ವರೆಗೆ ಕಾಯುತ್ತಾರೆ.

ಮುಸಪೆಟ್ಟಿಗೆಗಳ ಭವಿಷ್ಯ ಜ್ಯೋತಿಷಿ ಹೇಳುತ್ತಾನೆ. ಗೆದ್ದರೂ ಗೆಲ್ಲಬಹುದು; ಗೆಲ್ಲುವ ಸಂಭವ ಬಹಳವಾಗಿದೆ.

ಕೇಂದ್ರದಲ್ಲಾಗಲಿ ಸುವಿಶ್ರ ಶರಕಾರವೇ ಗತಿಯೆನ್ನುವ ರಾಜ್ಯಕಾರಣಿಗಳಿಗೆ ಈ ಭವಿಷ್ಯ ನಾಶಿಕೆಯಷ್ಟು ಉತ್ಸಾಹ ನೀಡುತ್ತದೆ. ಶ್ರೀ ಕೃಷ್ಣಪ್ಪನವರಿಗೂ ಆಶ್ಚೆ.

ಕನ್ನಡ ಪುಸ್ತಕಗಳು

ಹೈಸ್ಕೂಲ್, ಹಯರ್ ಸೆಕೆಂಡರಿ ಸ್ಕೂಲ್, ಕಾಲೇಜು ಮೊದಲಾದುವುಗಳ ಯಾವತ್ತೂ ವಾಚನ ಭಂಡಾರಗಳಿಗೆ ಉಪಯುಕ್ತವಾದ ಕರ್ನಾಟಕದ ವಿವಿಧ ಲೇಖಕರ ಹಾಗೂ ಪ್ರಕಾಶಕರ ಕತೆ, ಕಾದಂಬರಿ, ಕವನ, ವಿಮರ್ಶೆ ಇತ್ಯಾದಿ

ಕನ್ನಡ ಪುಸ್ತಕಗಳು

ನಮ್ಮಲ್ಲಿ ದೊರೆಯುತ್ತವೆ.

ಪಟ್ಟಿಗಾಗಿ ಕೆಟಲಾಗಿಗೂ ವಿಶೇಷ ಸಹಲತ್ತುಗಳಿಗೂ ಬರೆಯಿರಿ :

ನವಭಾರತ ಪುಸ್ತಕ ಭಂಡಾರ

ರಿಜಿಸ್ಟರ್ಡ್ ಪಬ್ಲಿಷರ್ಸ್,

ಪಾಲುಕೋಟಿ, ಉಡುಪಿ, ದ. ಕ.

ವಿಷವೃಕ್ಷ ಹೂಬಿಡಹೊರಟಿದೆ

(ನಾಲ್ಕನೇ ಪುಟದಿಂದ)

ಗುಜರಾತ್ ರಾಯಸರ ಅಭಿಪ್ರಾಯದಲ್ಲಿ ರಾಜವ ದಾರಾಜರ ಹಲ್ಲುಗಳನ್ನು ಕೇಳಲು ಕಾನೂನು ಆಡುವುದರಿಂದ ಸ್ವತಂತ್ರ ಪಕ್ಷಕ್ಕೆ ಭವಿಷ್ಯವೇ ಇಲ್ಲ. ಇನ್ನು ಸಿಂಡಿಕೇಟಿಗರು ಎದುರಿಸಬೇಕಾದದ್ದು ಜನಸಂಘದ ಸವಾಲನ್ನು. ಇದು ಇತ್ತೀಚೆಗಿನ ವರ್ಷದಲ್ಲಿ ಪ್ರಬಲವಾಗುತ್ತ ಬರುತ್ತಿದೆ. ಇದರೊಂದಿಗೆ ಮೈತ್ರಿ ಸಾಧಿಸುವುದರಿಂದ, ಅದರ ಶಕ್ತಿ ಸಂವರ್ಧನೆಗೆ ಉತ್ತಮ ವಾತಾವರಣ ನಿರ್ಮಾಣವಾಗುವ ಸಾಧ್ಯತೆಯೇ ಹೆಚ್ಚಲ್ಲದೆ ಕಡಿಮೆಯಾಗುವುದಿಲ್ಲ. ಪ್ರಬಲವಾದ ಮೇಲೆ ಅದರೊಡನೆ ಹೋರಾಡುವುದಕ್ಕಿಂತ ಈಗಲೇ ಅದನ್ನು ಎದುರಿಸಿ ಅಣಗಿಸುವುದು ಉತ್ತಮ— ಇದು ಗುಜರಾತ ಸಿಂಡಿಕೇಟಿಗರ ಅಭಿಪ್ರಾಯ.

ದ್ರಾವಿಡ ಮುನ್ನೇತ್ರ ಕಳ್ಗಗಂ ಬಾಲಾವಸ್ಥೆಯಲ್ಲಿದ್ದಾಗ ತಿರು ಕಾಮರಾಜರು ಅದನ್ನು ದುರ್ಬಲ—ಅಬಲ, ಬಾಲಗ್ರಹ ಬಡೆದು ಸಾಯುತ್ತದೆಂದು ನಂಬಿ ಹಾಲೂಡಿದರು. ಈ ಹಾಲು ಅದಕ್ಕೆ ಅವ್ಯತವಾಗಿ ತಿರು. ಕಾವ ರಾಜರನ್ನೇ ಕಬಳಿಸಿತು. ಇಂತಹ ಮತ್ತೊಂದು. ಪ್ರಕಂಡ ಬರಬಾರದೆಂದು ಗುಜರಾತದ ನೀತಿಯೆಂದರೆ ಅತಿಶಯವಿಲ್ಲ. ಬೆಳೆಲಿಯ ಸಿಂಡಿಕೇಟ್ ಎಂಬಿಸಿ ಈ ಬಗ್ಗೆ ಚರ್ಚಿಸಿ ಒಂದು ನಿರ್ಧಾರಕ್ಕೆ ಬಂದೀತೆ.

೦ ೦ ೦

ಕರ್ನಾಟಕದ ಕಾಂಗ್ರೆಸ್ಸು (ಸಿಂಡಿಕೇಟ್) ದೃಢವಾಗಿದೆ ಎಂದು ಹೇಳುತ್ತಿರುವಂತೆಯೇ ಅದನ್ನು ಒಡೆಯುವ ಪ್ರಯತ್ನಗಳು ಹಿಂದಿನಿಂದಲೂ ನಡೆಯುತ್ತ ಬಂದಿವೆ. ಇದೀಗ ಧೀ ಸ್ಯಯತ್ನವೊಂದು ಫಲಿಸಿದು ಸಚಿವಾದ ಶ್ರೀ ಮಹದೇವ್ಯ ದಾಲಿ ಮತ್ತು ಶ್ರೀ ರಾಚಯ್ಯನವರು ಇಂಡಿಕೇಟ್ ಕಾಂಗ್ರೆಸ್ಸನ್ನು ಸೇರುವರೆಂದು. ಸುದ್ದಿ ಹುಟ್ಟಿಸಿ ಅದಕ್ಕೆ ಬಿರುಸಿನ ಪ್ರಚಾರ ನೀಡಲಾಯಿತು. ಸುದ್ದಿ ಮನೆಮನೆಗೂ ಮುಟ್ಟುವ ವರೆಗೂ ಸಚಿವದ್ವಯರು ಇದನ್ನು ತಮರ್ದಿಸಲೂ ಇಲ್ಲ; ನಿರಾಕರಿಸಲೂ ಇಲ್ಲ. ಈ ಪರಿಸ್ಥಿತಿ ಚಿಂತೆಗೀಡು ಮಾಡಿತ್ತು.

ತಡವಾಗಿಯಾದರೂ ಶ್ರೀ ಮಹದೇವ್ಯ ದಾಲಿಯವರು ತಾನು ಇಂಡಿಕೇಟ್ ಸೇರುವೆನೆಂಬುದು ಬೇಷವ ಬ್ಲಾರಿಯ ಗಾಳಿಸುದ್ದಿಯೆಂದು ಹೇಳಿದರು. ಶ್ರೀ ರಾಚಯ್ಯನವರೂ ಸದ್ಯದಲ್ಲಿಯೇ ಹೇಳಿಕಾರು. ಅವರಿಬ್ಬರ ದಿನ ತಳವಿದ ಕಾರಣ ಮಾತ್ರ ತಿಳಿಯದು. ಇಂಡಿಕೇಟ್ ಅಧ್ಯಕ್ಷ ಶ್ರೀ ಜಗಜ್ಜೀವನರಾಮರೂ ನಾಯಕ ಫಕ್ರುದ್ದೀನ್ ಅಲಿ ಅಹಮ್ಮದರೂ ಕರ್ನಾಟಕಕ್ಕೆ ಧಾರಿಬಂದು ಇಲ್ಲಿ ಜಾತೀಯ ಪ್ರಶ್ನೆಯನ್ನು ಕೆದಕಿತ್ತರೆಂದು ಊಹಿಸುವುದು ತಪ್ಪಾಗದು. ಜಾತೀಯ ತೆಯನ್ನು ತಂತಮ್ಮ ಲಾಭಕ್ಕೆ ಬಳಸಿಕೊಳ್ಳುವುದು ನಮ್ಮ ದೇಶಕ್ಕೆ ಅಂಟಿಬಂದ ಜಾಡ್ಯಮಾನ. ಜಾತೀಯತೆಯ ಬಗ್ಗೆ ದಿನಗಟ್ಟಲೆ ಭಾಷಣ ಬಿಗಿಯುವ ಮಹನೀಯರೇ ಇದನ್ನು ತೆಗೆಯಹೊರಡುವುದು ಅವರಿಗೂ ದೇಶಕ್ಕೂ ಕ್ಷೇಮವು ತರುವುದಿಲ್ಲ.

ಕುಟುಂಬ ಯೋಜನೆ ಅತ್ಯಗತ್ಯ

ನಮ್ಮ ದೇಶದಲ್ಲಿ ಕೊಡುಗೈ ದಾತಾರಗಳಿಗೆ ಕೊರತೆ ಇಲ್ಲ. ಹಿಂದಿನ ಕಾಲದಲ್ಲಿ ಧರ್ಮಶಾಲೆ, ಛತ್ರಾಲಯಗಳನ್ನು ಕಟ್ಟಿಸುತ್ತಿದ್ದವರು ಇಂದು ಶಾಲೆ ಆಸ್ಪತ್ರೆಗಳನ್ನು ಕಟ್ಟಿಸಲು ಮುಂದೆ ಬರುತ್ತಿರುವುದು ಸಂತೋಷದ ಸಂಗತಿ

ಬೆಂಗಳೂರಿನ ಜನನಿಬಿಡ ಬಾಪೂಜಿನಗರದ ಪ್ರದೇಶದಲ್ಲಿ ಇಲ್ಲಿನ ಶ್ರೀ ವಿಶ್ವನಾಥಪ್ಪ, ಶ್ರೀಮತಿ ಜಯಮ್ಮ ಹಾಗು ಶ್ರೀಮತಿ ರತ್ನಮ್ಮ ಅವರ ಔದಾರ್ಯದ ಕೊಡುಗೆಯ ಫಲವಾಗಿ ಹೆರಿಗೆ ಆಸ್ಪತ್ರೆಯೊಂದು ಅಸ್ತಿತ್ವದಲ್ಲಿ ಬಂದಿದೆ. ಈ ಪ್ರಸೂತಿಗೃಹಕ್ಕೆ ವಿಶಾಲವಾದ ಕಟ್ಟಡವಿದೆ. ಮೈಸೂರಿನ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರವರೇ ಈ ಕಟ್ಟಡಗಳ ಅನ್ವಯರ್ ಹಾಕಿದ್ದಾರೆ.

ಈ ಪ್ರಸೂತಿಗೃಹವನ್ನು ಈಗ ಬೆಂಗಳೂರು ನಗರ ಕಾರ್ಪೊರೇಷನ್ನಿನವರು ನಡೆಸುತ್ತಿದ್ದಾರೆ ಇಲ್ಲಿ 40 ಹಾಸಿಗೆಗಳಿವೆ. ಹೆಚ್ಚಾಗಿ ಪ್ರಸೂತಿ ಹಾಗು ಶಿಶುಕಲ್ಯಾಣ ವಿಷಯಗಳಿಗೆ ಇಲ್ಲಿ ಪ್ರಾಧಾನ್ಯವಿದ್ದರೂ 1966ರಿಂದ ಕುಟುಂಬ ಯೋಜನಾ ವಿಷಯಕ್ಕೂ ಹೆಚ್ಚಿನ ಗಮನವನ್ನು ಇಲ್ಲಿ ಕೊಡಲಾಗುತ್ತಿದೆ. ಜನಸಂಖ್ಯೆಯ ಆಸ್ಫೋಟನೆಯೇ ನಡೆಯುತ್ತಿರುವ ಇಂದಿನ ಕಾಲದಲ್ಲಿ ಚಿಕ್ಕ ಕುಟುಂಬಗಳ ಅವಶ್ಯಕತೆಯನ್ನು ಇಲ್ಲಿ ಬಂದ ತಾಯಂದಿರಿಗೆ ಮನದಟ್ಟಾಗುವಂತೆ ಹೇಳಲಾಗುತ್ತಿದೆ. ಕುಟುಂಬ ಯೋಜನೆ ಮಾಡಿಸಿಕೊಳ್ಳಲು ಒಪ್ಪಿದ ತಾಯಂದಿರನ್ನು ಮಲ್ಲೇಶ್ವರದ ಪ್ರಸೂತಿಗೃಹಕ್ಕೆ ಕರೆಸಿಕೊಂಡು ಹೋಗಿ ಶಸ್ತ್ರಚಿಕಿತ್ಸೆಗೆ ಏರ್ಪಡಿಸಿ ಕೊಡಲಾಗುತ್ತಿದೆ. ಇಹುವರೆಗೆ ಬಾಪೂಜಿನಗರದಿಂದ ಮೆಟರ್ನಿಟಿ ಹೋಂನವರು 150 ಮಹಿಳೆಯರ ಶಸ್ತ್ರಚಿಕಿತ್ಸೆಗೆ ವ್ಯವಸ್ಥೆ ಮಾಡಿದ್ದಾರೆ. ಅಲ್ಲದೆ 950 ಮಂದಿಗೆ ತಾತ್ಕಾಲಿಕ ಫಲಿತಾಂಶಗಳನ್ನು ಅನುಸರಿಸಲು ಮನವೊಲಿಸಿದ್ದಾರೆ.

ಇತ್ತೀಚೆಗೆ ಕೇಂದ್ರ ಸರಕಾರದ ಆರೋಗ್ಯ ಮತ್ತು ಕುಟುಂಬಯೋಜನಾ ಮಂತ್ರಿ ಶಾಖೆಯ ಕಾರ್ಯದರ್ಶಿ ಶ್ರೀ ಬಿ. ಪಿ. ಪಟೇಲ್, ಭಾರತದಲ್ಲಿರುವ ಯುಎಸ್‌ಎಐಡಿ ಮಿಶನ್ನಿನ ಡೈರೆಕ್ಟರ್ ಮಿನಿಸ್ಟರ್ ಶ್ರೀ ಲಿಯನಾರ್ಡೋ ಎ ಶ್ಯಾಕಿಯೋ ಅವರೊಡನೆ ಈ ಪ್ರಸೂತಿಗೃಹಕ್ಕೆ ಭೇಟಿ ಇತ್ತಿದ್ದಾರೆ.

ಹನುಮಂತನಗರದ ಶ್ರೀಮತಿ ಲೀಲೇಶ್ವರಿ ಹಾಗು ಅಮ್ಮನಕೊಪ್ಪದ ಶ್ರೀಮತಿ ಲಕ್ಷ್ಮಮ್ಮನವರು ಈ ಕೇಂದ್ರದಿಂದ ದೊರೆತ ಸಾಲಿಗ್ರಾಮಿ ಕಮ್ಮ ಸಂತೋಷ —ಕೃತಜ್ಞತೆಗಳನ್ನು ಸೊಬಗಿನ ಮೂಕನಾಡುತ್ತ "ಈ ಕೇಂದ್ರದ ಡಾಕ್ಟರರ ಉಪದೇಶ ನಮಗೆ ಹಿಡಿಸಿದೆ. ಅದರಿಂದ ನಮಗೆ ನಿಜವಾಗಿ ಕೃಪ್ತಿಯೆನ್ನಿಸಿದೆ. ಮೂರು ಮುಳ್ಳಿನಿಂತ ಹೆಚ್ಚು ಮುಳ್ಳುಗಳನ್ನು ಸಾಕಿ ಸಲಹುವುದು ನಮಗೆ ತುಂಬ ಕಷ್ಟ. ಹೆಚ್ಚು ಮುಳ್ಳಾಗದಂತೆ ಸಂಸಾರ ಚಿಂತೆಯೂ ಹೆಚ್ಚುವದು" ಎಂದು ಕುಟುಂಬಯೋಜನೆಯ ಅಗತ್ಯತೆಯನ್ನು ಒತ್ತಿ ಹೇಳಿದರು.

ಹೈಕೋರ್ಟ್ ನ್ಯಾಯಾಧೀಶರಾಗಿ ಜಗನ್ನಾಥ ಶೆಟ್ಟಿ ನೇಮಕ

ಮೈಸೂರು ಹೈಕೋರ್ಟಿನ ಎಡಿಶನಲ್ ನ್ಯಾಯಾಧೀಶರುಗಳಾಗಿ ಎಡ್ವೋಕೇಟ್ ಶ್ರೀ ಕೆ. ಜಗನ್ನಾಥ ಶೆಟ್ಟಿ ಮತ್ತು ಶ್ರೀ ಇ. ವೆಂಕಟರಾಮಯ್ಯ ಇವರು ನೇಮಕಾಜ್ಞಪ್ತಿದಾರರಾಗಿದ್ದಾರೆ. ಶ್ರೀ ಜಗನ್ನಾಥ ಶೆಟ್ಟರು ಉಡುಪಿಯವರು. ಅಂಬಲಪಾಡಿಯವರಾಗಿದ್ದು ಉಡುಪಿ ಬೋರ್ಡಿಂಗ್ ಹೈಸ್ಕೂಲಲ್ಲಿ ಶಿಕ್ಷಣ ಹೊಂದಿದವರು. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಇವರು ಅನಂತರ ಮಂಗಳೂರಿನ ಎಲೋಶಿಯಸ್ ಕಾಲೇಜಿನಲ್ಲಿ ಕಾಲೇಜ್ ಶಿಕ್ಷಣ ಪಡೆದು ಪೈದರಾಬಾದಿಗೆ ತೆರಳಿ ಅಲ್ಲಿ ಪೈತೃಕ ಮನೆ ನ್ಯಾಯವಾದಿ ಕಾಲೇಜ್ ಶಿಕ್ಷಣಗಳಿಸಿ ಅಲ್ಲಿಯೇ ಪಶೀಲ ಪೈತೃಕವನ್ನು ಕೈಕೊಂಡಿದ್ದರು. ಭಾಷಾವಾರು ಪ್ರಾಂತ್ಯ ರಚನೆಯ ಕಾಲದಲ್ಲಿ ಬೆಂಗಳೂರಿಗೆ ಬಂದು ಪಶಾಲಕ್ಷ್ಯನ್ನು ಏರ್ಪಡಿಸಿ ಪ್ರಾಕ್ಟಿಸ್ ಪಡೆದರು. ಈ ಇವರೆಡನ ಲೆಕ್ಚರರಾಗಿಯೂ ಹೊರುಗಳಿಸಿದ್ದರು.

ರಮೇಶ ಜೈಯವರ ವಿದೇಶ ಪ್ರವಾಸಾನುಭವ

ಸಾಲ್ಕಿ ತಿಂಗಳುಗಳ ಪಶೀಲ ಪಯೋಜನೆಯ ಮೂಡಿಕೊಂಡು ಇಂದ ಶ್ರೀ ಟಿ. ರಮೇಶ್ ಜೈ ದಂಪತಿಗಳಿಗೆ ಮುಚ್ಚಾಲದಲ್ಲಿ ಇತ್ತಿದ ತಾ. 16ರಂದು ಡಾ. ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ಸನ್ಮಾನ ಸಮಾರಂಭ ಒಂದನ್ನು ಏರ್ಪಡಿಸಲಾಗಿತ್ತು. ಶ್ರೀ ರಮೇಶ ಜೈಗಳು ತಮ್ಮ ಪ್ರವಾಸಾನುಭವಗಳನ್ನು ಪಶದಪಡಿಸುತ್ತಾ, ವಿಶ್ವ ಪಯೋಜನೆಯ ಮೂಡಿ ಇಂದರೂ ನಮ್ಮ ದೇಶವು ಬಹು ರಮ್ಯ ಪ್ರದೇಶಗಳಲ್ಲಿ ಒಂದೆನ್ನಿಸುತ್ತದೆ ಎಂದರು. ಭಾರತೀಯ ಜನ ಬಾಧ್ಯಿಳ ಶಕ್ತಿಯಲ್ಲಿ ಯಾವ ರಾಷ್ಟ್ರದವರಿಗೂ ಕಡಮೆಯೇನಿಲ್ಲ. ಆದರೆ ಕಡಮೆ ಪ್ರಮಾಣದಲ್ಲಿರುವ ಆಧ್ಯಯನ ಪ್ರವೃತ್ತಿಯಲ್ಲಾ ನಾವು ಹಿಂದೆ ಬಿದ್ದಿದ್ದೇವೆ. ದುಡಿಮೆಯ ಪ್ರವೃತ್ತಿ ನಮ್ಮವರಲ್ಲಿ ಕಡಮೆಯೆಂಬು ಅವರು ಅಭಿಪ್ರಾಯ ಪಟ್ಟರು. ಜ್ಞಾನಗಳಿಕೆಗೆ ಸತತ ಪ್ರಯತ್ನ ಇಡೀತು, ಪಶುಗೆ ಸಿಗುವ ಸಕಲ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಜ್ಞಾನಾಭಿವೃದ್ಧಿ ಪಡಿಸಿಕೊಳ್ಳಬೇಕು. ನಾವು ಮಾಡಬೇಕಾದ ಕೆಲಸಗಳ ಬಗ್ಗೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕು ಎಂದವರು ಹೇಳಿದರು.



ಅದರಲ್ಲಿ ಇಂದ್ರಜಾಲವೇನೂ ಇಲ್ಲ!

ಸಿಂಡಿಕೇಟ್ ಬ್ಯಾಂಕಿನಲ್ಲಿ ಕ್ಯುಮುಲೇಟಿವ್ ಠೇವಣಿ ಯೋಜನೆಯಂತೆ ಪ್ರತಿ ತಿಂಗಳು ರೂ. 10/-ರಂತೆ ಠೇವಣಿ ಇಡುತ್ತ ಬಂದರೆ 60 ತಿಂಗಳುಗಳ ನಂತರ ನಿಮಗೆ ರೂ. 709/- ದೊರಕಿಸುವುದು.

ಉಳಿಸಲು ಸುಲಭ ಮತ್ತು ಗಳಿಸಲೂ ಸುಲಭ!

120 ತಿಂಗಳುಗಳ ಪರಮಾವಧಿ ಅವಧಿ ವರೆಗೆ ತಿಂಗಳಿಗೆ ಕನಿಷ್ಠ ರೂ. 5/-ರಂತೆ ಸ್ವೀಕರಿಸಲ್ಪಡುತ್ತದೆ. ಮತ್ತು ಈ ಸಿ. ಡಿ. ಖಾತೆಯು ಆಪ್ತಾಯಸ್ಥರ ಪೆಸರಿನಲ್ಲೂ ತೆರೆಯಲ್ಪಡುತ್ತದೆ. ನಿಮ್ಮ ಸೇವಿಂಗ್ಸ್ ಬ್ಯಾಂಕ್ ಮತ್ತು ಚಾಲ್ತಿ ಖಾತೆಗಳಿಂದ ಸಿ. ಡಿ. ಕಂತಿಗೆ ಪ್ರತಿ ತಿಂಗಳು ವರ್ಗಾಯಿಸಲು ನಿಮ್ಮ ನಿರ್ದೇಶನಗಳನ್ನು ನಾವು ಗೌರವಿಸುತ್ತೇವೆ. ಕೌಂಟರುಗಳಲ್ಲಿ ನೀವು ಕಾಯುವ ಅವಶ್ಯಕತೆಯಿಲ್ಲ.

ಹೆಚ್ಚಿನ ವಿವರಗಳಿಗೆ 400ಕ್ಕೂ ಮಿಕ್ಕಿದ ನಮ್ಮ ಶಾಖೆಗಳಲ್ಲಿ ಯಾವುದಾದ ರೊಂದರ ಸಂಪರ್ಕ ಬೆಳೆಸಿರಿ.

ಪ್ರತಿಯೊಂದು ಬ್ಯಾಂಕಿಂಗ್ ಅವಶ್ಯಕತೆಗೆ ಪ್ರತಿಯೊಬ್ಬರ ಬ್ಯಾಂಕು.

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಛೇರಿ : ಮಣಿಪಾಲ

ಕೆ. ಕೆ. ಪೈ
ಫ್ಲಸ್ಟೋಡಿಯನ್

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

J. A. I. O. S. 656/1962

ರುಕ್ಮಿಣಿ ಹೆಗ್ಗಡ್ತಿ ಸಹಾ —ಆರ್ಜಿದಾರರು
ಮತ್ತು
ನೋಪಾಲಕೃಷ್ಣ ಹೆಗ್ಡೆ ಸಹಾ —ಎದಿರು

ಆ, ಗಂಗೆ ಹೆಗ್ಗಡ್ತಿ, ಅಮ್ಮಕ್ಕೆ ಹೆಗ್ಗಡ್ತಿರ ಮಗಳು

39 ಮುಖಾಂಬಿ ಹೆಗ್ಗಡ್ತಿ
37 ಇಂದಿರಾ ಹೆಗ್ಗಡ್ತಿ
34 ವೇಣಿಬಾಕ
35 ಹೇಮಾ
38 ಜಯಲಕ್ಷ್ಮಿ
37 ವಿಜಯಲಕ್ಷ್ಮಿ
} ಗಂಗಮ್ಮ ಹೆಗ್ಗಡ್ತಿರ ಮಕ್ಕಳು

58 ಚಂದ್ರಪ್ರಭ
39 ರವಿಕಲ
} ಮೈನರರು ಯಜರಗಾರ್ಡಿಯನ ತಾ ಶ್ರೀ ಎದ್ರಿಳು

41 ಕಿಟ್ಟ ಹೆಗ್ಡೆ ಕಾಳಿ ಹೆಗ್ಗಡ್ತಿರ ಮಗ,
64 ವಿಮಲಾ ಪೆಗ್ಡೆ
65 ಜಗನ್ನಾಥ ಹೆಗ್ಡೆ
} ಪುಟ್ಟಯ್ಯ ಹೆಗ್ಡೆರ ಮಕ್ಕಳು

4ನೆಯ್ದು 41ನೇಯವರು ಕಾರ್ಕಳ ತಾಲ್ಲೂ ಮುಡಾಡ್ಡಿ ಗ್ರಾಮದ ತೆಂಕೆಕಾಡು ಮನೆಯಲ್ಲಿ ಭಾಗ ೫೨.೫೨.೩೬೦ರಿಂದ ೫೨ನೇ ವರೆಗಿನವರು ಸದ್ರಿ ಮುಡಾಡ್ಡಿ ಗ್ರಾಮದ ಜೊತೆ ಮನೆ ಜುಡ್ಡಿಮನೆ ೫೨.೫೭ನೇಯವರು ಸದ್ರಿ ಮುಡಾಡ್ಡಿ ಗ್ರಾಮದ ಕೆಂಕೆಕಾಡು ಜಮ್ಮು ಎಂಬ ಕ್ರಯಮನೆ ಮಾಡಿಸಿದ್ದರು.

ಸದ್ರಿ ಎಡ್ರಿವಾದ ಒಡಂಬಡಿಕೆ ಈ ಮೂಲಕ ಕಾಲಮಿತಿಯಲ್ಲಿ ಸಿವಿದ್ಯಮಾನವಾಗಿದೆ.

ಸದ್ರಿ ದಾವೆಯು ತಾ. 14.4.1962ರಲ್ಲಿ ಆ ಪ್ರಕಟಿಸಿದರು ತಿಳಿಸಲ್ಪಡುವಂತೆ ಹಿಸೆ ಪಡೆಯಲು ದಾವೆ ಹೂಡಿದ ಸದ್ರಿ ಪ್ರೈವಲ ತಿಳಿಸಿ ಆರ್ಜಿದಾರರು ದಾಖಲು ಮಾಡಿದ ಸದ್ರಿ ಪ್ರೈವಲ ತಿಳಿಸಿ ಆರ್ಜಿದಾರರು ತಾ. 6.7.1970ಕ್ಕೆ ಸಲ್ಲಿಸಿದ ಪಾಜಿ ಬಗ್ಗೆ ಇತ್ಯರ್ಥಗೊಂಡಿದೆ. ಆಕ್ಷೇಪಣೆ ಇದ್ದಲ್ಲಿ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿಗೆ ಮುಂದೆ ಹಾಜರಾಗಿ ಆ ದಾಖಲೆಯ ಕೊಡಬೇಕಾಗಿದ್ದು. ತಪ್ಪಿದ್ದಲ್ಲಿ ಸದ್ರಿ ಗೈರು ಹಾಜರಿಯಲ್ಲಿ ಆರ್ಜಿ ತೀರ್ಮಾನವಾಗುವ ದು ಎಂತ ಕೋರ್ಟಿನ ಹುಕುಂ ಪ್ರಕಾರ ತಿಳಿಯುದೆ.

K. S. Kamath
Advocate for Petitioners

ಕಾರ್ಕಳ, 28—6—70

ಕೃತಜ್ಞತಾ ಸಮರ್ಪಣೆ

ನಮ್ಮ ಪುತ್ರಿ ಸೌ| ಉಷಾಳ ವಿವಾಹ ಸಮಾರಂಭದ ಶ್ರೀ ಬಾಳ್ಕಯ್ಲು ಲಕ್ಷ್ಮಣ್ಣ ಶೆಟ್ಟಿಪುತ್ರ ಚಿ| ವಿಟ್ಠಲ ಶೆಟ್ಟಿರೊಂದಿಗೆ ತಾ. 21-6-70ರಂದು ಮಂಗಳೂರಿನ ಡಾಕ್ ಬಾಸ್ಕೊ ಹೋಲ್‌ನಲ್ಲಿ ಜರಗಿದ ಸುಸಂಭ್ರಮದಲ್ಲಿ ನಮ್ಮಅವಂತ್ರಣವನ್ನು ಸ್ವೀಕರಿಸಿ ಸಮಾರಂಭದಲ್ಲಿ ಭಾಗವಹಿಸಿ ವಧೂವರರಿಗೆ ಆಶೀರ್ವದಿಸಿದ ಎಂದೆಂದಿಗೂ ಮರೆಯಲಾಗದ ಉಚಿತ ಉಡುಗೊರೆಗಳನ್ನಿತ್ತು ಸಹಕರಿಸಿದ ಹಾಗೂ ವೈರವಾದ ಪೂರವತ್ತೂ ಹಿತೈಷಿಗಳಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಶ್ರೀಮತಿ ಲಕ್ಷ್ಮೀ ಜೆ. ರೈ.
ಶ್ರೀ ಕೆ. ಜತ್ತಪ್ಪ ರೈ, ಎಂ. ಎಲ್. ಸಿ.
(ಕುಂಬ್ರ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 45/1970

ಉಡುಪಿ ಅದಮಾರು ಮಠದ ಶ್ರೀವಿಶ್ವಪ್ರಸನ್ನತೀರ್ಥ ಸ್ವಾಮಿರು —ವಾದಿರು
ಮತ್ತು
ನೆಗೆಗೂರಿ ತಿಮ್ಮಪ್ಪ— ಮಹಮ್ಮದೆಲ್ ಸೋಜಿಗ ಮಗ—ಉಡುಪಿಕಾರಾಳು ಉದಿಯಪ್ಪರ ಗ್ರಾಮದ ಬೊಳ್ಜೆ —ಪ್ರತಿವಾದಿ.
ಇದರಿಂದಾಗಿ.

ಸದ್ರಿ ಪ್ರತಿವಾದಿಗೆ ಯಾ ಮೂಲ್ಕ ತಿಳಿಸುವದೇನಂದರೆ:-

ಮೇಲ್ಕಂಡ ವಾದಿರು, ಪ್ರತಿವಾದಿಯಂತೆ ಬರತಕ್ಕ ಜಾಲಗೆಣಸಿ ಅಸಲು ಬಡ್ಡಿ ಆಯವೇಕೆಗೆ ದಾಖ್ಲು ಮಾಡಿದ ಸದ್ರಿ ದಾವೆಯು ತಾ. 18—7—70ಕ್ಕೆ ಯತೋಚಾಗಿಯದೆ. ಆ ಕಾರಣ ಪ್ರತಿವಾದಿಗೆ ಆಕ್ಷೇಪಣೆ ಹೇಳತಕ್ಕದ್ದು ಯದ್ದಿ ಸದ್ರಿ ದಿನ್ನ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿಗೆ ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಯೆಂಬ ಸದ್ದಿ ಪ್ರತಿವಾದಿಗೆ ತಿಳಿಸೋಚಾಗಿಯಚ್ಚೆ.

V. R. Kidyur.
Advocate for Plaintiff,

ಉಡುಪಿ, 25—6—70

ಸಂಸತ್ತನ್ನು ವಿಸರ್ಜಿಸುತ್ತಾರೆಯೆ?

ಬಹುತದ ಶಂಕೆ ಬಂದಾಗ ಸಂಸತ್ತನ್ನು ವಿಸರ್ಜಿಸಿ ಚುನಾವಣೆಗಳನ್ನು ನಡೆಸುವುದು ಪಾರ್ಲಿಮೆಂಟರಿ ಪ್ರಜಾಸತ್ತೆಯ ಸತ್ ಸಂಪ್ರದಾಯ. ಬ್ರಿಟನ್ನಿನಲ್ಲಿ ಪ್ರಧಾನಿ ಹೆರಾಲ್ಡ್ ವಿಲ್ಸನ್ನರು ಮೆಟ್ಟಿದ್ದು ಈ ದಾರಿ. ಒಮ್ಮೆ ಅವರು ಚುನಾವಣೆಗಳಲ್ಲಿ ಜಯಭೇರಿ ಬಾರಿಸಿದರು; ಆದರೆ, ಎರಡನೆಯ ಬಾರಿ ಸೋತುಹೋದರು. ಸಾಮಾನ್ಯವಾಗಿ ಬ್ರಿಟನ್ನಿನ ಪ್ರಜಾಸತ್ತೆಯು ಸ್ಥೀ ಹೋಲುವ ಭಾರತೀಯ ಪ್ರಜಾಪ್ರಭುತ್ವಕ್ಕೆಹತ್ತು ಹಲವು ರೀತಿಯಲ್ಲಿ ಬ್ರಿಟನ್ನೇ ಪಥದರ್ಶಕ. ಅಧಿಪಿಕ ಸಂವಿಧಾನವಿದ್ದರೂ ಯಶಸ್ವೀ ಆಡಳಿತ ಬ್ರಿಟನ್ನಿನಲ್ಲಿ ನಡೆಯಲ್ಪಡುತ್ತಿದೆಯೆಂಬುದು ನೂರಕ್ಕೆ ನೂರರಷ್ಟು ಸತ್ಯ.

ಶ್ರೀಮತಿ ಇಂದಿರಾ ಗಾಂಧಿಯವರನ್ನು ಕಾಂಗ್ರೆಸಿನ ಪ್ರಾಥಮಿಕ ಸದಸ್ಯತನದಿಂದ ಕಿತ್ತುಹಾಕಿದ ಬಳಿಕ, ಅವರೇ ಅದೊಂದು ಪಕ್ಷವನ್ನು ಕಟ್ಟಿಕೊಂಡರು. ಆದನ್ನು ಆಡಳಿತ ಕಾಂಗ್ರೆಸ್ ಎಂದು ಕರೆದುಕೊಂಡರು. ಆಡಳಿತ ನಡೆಸುವ ಹೆಬ್ಬಯಕೆಯಿಂದಲೇ ಸೃಷ್ಟಿಗೊಂಡ ಈ ಪಕ್ಷ ಸದ್ಯ ಕೇಂದ್ರದಲ್ಲಿ ಅಧಿಕಾರಾರೂಢವಾಗಿದೆ. ಹರಿಯಾಣ, ಮಹಾರಾಷ್ಟ್ರ, ಮಧ್ಯಪ್ರದೇಶ, ಆಂಧ್ರ ಪ್ರದೇಶ ರಾಜ್ಯಗಳಲ್ಲೂ ಅದು ಸರ್ಕಾರಾರೂಢವಾಗಿದೆ. ಒಂದು ವೇಳೆ ಅದರ ಕೈಗಳಿಂದ ಆಡಳಿತ ಜಾರಿಹೋದರೆ, ಅದು ಲಂಗೋಟಿಯೂ ಇಲ್ಲದ ದೀಕಾಂಬರದಾಸನಂತಾಗುವುದು.

ಕಳೆದ ಎಂಟು ತಿಂಗಳುಗಳಲ್ಲಿ ಶ್ರೀಮತಿ ಗಾಂಧಿ ಸಂಸತ್ತಿನಲ್ಲಿ ತನ್ನ ಬಹುಮತವನ್ನು ತೋರಿಸಿಕೊಟ್ಟಿದ್ದಾರೆ. ಬಜೆಟ್ ಅಧಿವೇಶನದಲ್ಲಿ ಆಕೆಯ ಸರಕಾರ ಉರುಳುವುದೆಂದು ಭಾವಿಸಿದ್ದವರ ಊಹೆ ಖರಿಯು ಊಹೆಯಾಗಿಯೇ ಉಳಿಯಿತು. ಐ. ಎ. ಎಸ್. ಅಧಿಕಾರಿಗಳ ವಿಶೇಷ ಸವಲತ್ತು ರದ್ದುಗೊಳಿಸುವ ತಿದ್ದುಪಡಿ ಮಸೂದೆ ಮಂಡಿಸಲು ಅನುಮತಿ ನೀಡಿದ ಪ್ರಸಂಗವೊಂದುಳಿದರೆ, ಆಕೆಯು ಬಹುಮತದಲ್ಲಿ ಎಂದೂ ಸಂದೇಹವೇ ಬರಲಿಲ್ಲ. ಈ ಮಸೂದೆಯು ಜಾರಿಯಾದ್ದು, ಪ್ರಧಾನಿಯ ಪಕ್ಷ ಆದನ್ನು ಬೆಂಬಲಿಸಿತ್ತು. ಆದುದರಿಂದ ಆ ಸೋಲು ಸೋಲೇ ಆದರೂ ಸೋಲೆಂದು ಒಪ್ಪಿಕೊಳ್ಳಬೇಕಾದ ಅಗತ್ಯವಿಲ್ಲ.

ಹಾಗೆಂದು ಶ್ರೀಮತಿ ಇಂದಿರಾ ಗಾಂಧಿ ನಿರಾಪದಳೆ? ಅಲ್ಲವೆಂಬುದು ಸಂಶ್ಲೇಷಿತ ಬೆಳಕಿನಷ್ಟು ಸ್ಪಷ್ಟ. ಪಾರ್ಲಿಮೆಂಟಿನಲ್ಲಿ ಬಹುಮತವುಳಿಸಿಕೊಳ್ಳಲು ಆಕೆ ಅನ್ಯಾನ್ಯ ಪಕ್ಷಗಳ ಮರಿ ಹೋಗಲೇ ಬೇಕಾಯ್ತು; ಹೋಗಿದ್ದಾಗಿದೆ. ಮೊರ್ಜಿದೇಸಾಯರು, ಲಿನಿನಿಸ್ಟರೂ ಇವರ ಅಪ್ಪಟ ಮಿತ್ರರು. ದ್ರಾವಿಡ ಮುನ್ನೇಟ್ರ ಕಳ್ಳಗಂ ಇಂದಿರಾ ಗಾಂಧಿಗೆ ಹೊಟ್ಟು. ಭಾರತೀಯ ಕ್ರಾಂತಿದಳ, ಬಂಗ್ಲಾ ಕಾಂಗ್ರೆಸ್ ಎಲ್ಲವೂ ಅವರ ಹಿತವಂದಿಗರೇ. ಈ ಸ್ವಾರಸ್ಯ ಎಲ್ಲಿಯವರೆಗೆ ಎಂದರೆ, ಒಕಿಸ್ಸಾದಲ್ಲಿ ಸ್ವತಂತ್ರ ಪಕ್ಷದ ನಾಯಕತ್ವದ ಸರಕಾರವುರುಳಿಸಲು ಆಡಳಿತ ಕಾಂಗ್ರೆಸ್ಸು ಬಯಸಿದ್ದರೆ, ಗುಜರಾತದಲ್ಲಿ ಸ್ವತಂತ್ರ ಪಕ್ಷದೊಡನೆ ಸೇರಿಕೊಂಡು ಸಂಸ್ಥಾ ಕಾಂಗ್ರೆಸ್ ಸರಕಾರವನ್ನು ಉರುಳಿಸುವ ಇರಾದೆಯೂ ಅದಕ್ಕಿತ್ತು. ಈ ಸರಸಯ ಸಾಧನೆದ ತಂತ್ರ ಅವರು ಅದೆಷ್ಟು ಪ್ರಯತ್ನಿಸಿದರೂ ಯಶಸ್ಸಿಗಳಿಸಲಿಲ್ಲವೆಂಬ ವಿಷಯ ಬೇರೆತನ್ನ ಕುತಂತ್ರಗಳು ಬಯಲಾಗುತ್ತಿವೆಂಬ ಮೂಗ ವ್ಯಕ್ತಿಸಿಕೊಳ್ಳುವುದಕ್ಕಾಗಿ "ಸರಕಾರವುರುಳಿಸುವುದು ನಮ್ಮ ಗುರಿಯಲ್ಲ"ವೆಂದು ಅವರು ನೀಡಿದ ಹೇಳಿಕೆ ದ್ರಾಕ್ಷಿಹುಣ್ಣು ಹುಳಿ ಎಂದು ನೆರಿ ನೀಡಿದ ಹೇಳಿಕೆಯನ್ನು ನೆನಪಿಗೆ ತರುತ್ತದೆ.

ಶ್ರೀಮತಿ ಇಂದಿರಾ ಗಾಂಧಿಯವರು ತಾನು ಬಲ ಪಂಥೀಯಳಲ್ಲವೆಂಬ ದನ್ನು ಜಗಜ್ಜಾಹೀರು ಮಾಡುತ್ತಾರೆ. ಹಾಗಾದರೆ, ಎಡ ಪಂಥೀಯರೇ ಎಂದರೆ, ಅದೂ ಅಲ್ಲವೆಂದು ಆಕೆ ಹೇಳಲೇ ಬೇಕಾಗಿದೆ. ಆದುದರಿಂದ ಬಲದಲ್ಲಿ ಬಲ ಮತ್ತು ಎಡದಲ್ಲಿ ಎಡ ಪಂಥಗಳನ್ನು ತ್ಯಜಿಸಿ ಬಲ ಎಡ ಪಂಥವನ್ನು ಆಕೆ ಹಿಡಿಯುವ ದುಸ್ಸಾಹಸ ಮಾಡಿದ್ದಾರೆ. ಆತ್ಮ ಬಲ ಪಂಥೀಯರೂ ಇತ್ತ ಎಡ ಪಂಥೀಯರೂ ತನ್ನನ್ನು ಬೆಂಬಲಿಸ ಬೇಕು ಎಂಬುದು ಅವರ ಆಪೇಕ್ಷೆ. ಅದಕ್ಕಾಗಿಯೇ ಅವರ ಪ್ರಯತ್ನ. ಈ ಭಾವಲಿತನದಿಂದ ಇಂದಿರೆಗೆ ಆಳಿ ಅಧಿಕಾರ ನಡೆಸಲು ಸಮರ್ಥೆಯೂ ಆದರೂ ಇನ್ನು ಮುಂದುವರಿಯುವುದ ಕಷ್ಟಸಾಧ್ಯವೆನಿಸಿದಾಗ, ಮತ್ತೊಂದು ಡಳಿತ ಪಕ್ಷವನ್ನು ಹುಟ್ಟಿಹಾಕಿದರೆ, ಆಶ್ಚರ್ಯವಿಲ್ಲ. ಜಾತೀಯ ಗಲಭೆಗಳನ್ನು ಹತ್ತಿಕ್ಕಲು ಜಾತೀಯ ಸಂಘ-ಸಂಘಟನೆಗಳಿಗೆ ನಿಷೇಧ ಹೇರುವ ವಿಚಾರ ಆಕೆಯದ್ದು. ಆದರೆ, ಮುಸ್ಲಿಂಲೀಗನ್ನು ಬಹುಶ್ರವಿಸುವ ಕೆಚ್ಚು ಆಕೆಯಲ್ಲಿಲ್ಲ. ನಿಜವಾದ ಹಿಂದು ಯಾರು ಎಂದು ವ್ಯಾಖ್ಯಾನ ಮಾಡುವುದೇ ಆಕೆಗಿಂದು ಕೇಸು. ಹಿಂಸೆಯಲ್ಲಿ ತೊಡಗುವವರು ಹಿಂದುಅಲ್ಲವೆಂಬುದು ನಿಜ. ತಮ್ಮ ವೇಲೆ ಅಕ್ರಮಣ ಮಾಡಿದವರನ್ನು ರಕ್ಷಿಸಿ ಕಾಪಾಡುವುದೂ ಹಿಂದುತ್ವವಲ್ಲವೇನು? ಭಾರತೀಯ ಜನಸಂಘ, ಹಿಂದೂ ಮಹಾಸಭೆಗಳು ಜಾತೀಯ ಪಕ್ಷಗಳೆಂದು ಹಿಂದಿನಿಂದಲೂ ಹೇಳಿಸಿಕೊಂಡಿವೆ. ಪ್ರಧಾನಿ ಶ್ರೀಮತಿ ಗಾಂಧಿಯವರು ಈ ಸಾಲಿಗೆ ಸಂಸ್ಥಾ ಕಾಂಗ್ರೆಸ್ಸನ್ನು ಸೇರಿಸುವ ಪ್ರಯತ್ನ ಮಾಡಿದ್ದಾರೆ. ಎಲ್ಲ ರಾಜ್ಯ ಕೇಂದ್ರ ಪಕ್ಷಗಳೂ ಜಾತೀಯತೆಯನ್ನು ತಮ್ಮ ಲಾಭಕ್ಕಾಗಿ ಕೆದಕಿಯೇ ಕೆದಕುತ್ತವೆ. ಹಾಗಿರುವಾಗ ಜಾತೀಯ-ಅಜಾತೀಯ ಪಕ್ಷಗಳೆಂದು ನಿರ್ಧರಿಸುವುದು ಹೇಗೆ?

ರಾಜ್ಯಕೀಯ ಪಕ್ಷಗಳು ಹಲವಾರು ವಿಷಯ ದೇಶದಲ್ಲಿ ಇವುಗಳೇ ತಮ್ಮ ತಮ್ಮಲ್ಲಿ ಹೊಡೆದಾಡಿಕೊಂಡ ಉದಾಹರಣೆಗಳು ಹಲವಿವೆ. ಇವೇಕೆ ಅಗಣ್ಯವಾಗಬೇಕು? ವಕ್ಷೀಯರು ಹಿಂಸೆಯಲ್ಲಿಯೇ ನಿರತರಾದವರು. ಉಳಿದ ಕಮ್ಯುನಿಸ್ಟರು ಇದ್ದವರಿಂದ ಸಲಿಯುವುದನ್ನೇ ಧ್ಯೇಯವಾಕ್ಯವಾಗಿಟ್ಟುಕೊಂಡವರು. ಇತ್ತೀಚೆಗೆ ಶ್ರೀಮತಿ ಗಾಂಧಿಯವರೂ ಇಂತಹದೇ ಮಾತಾಡಿದ್ದಾರೆ. ಚುಟ್ಟಿಯಿಲ್ಲದವರಿಗೆ ಬಟ್ಟೆ ತಯಾರಿಸಿಕೊಡುವ ಕಷ್ಟ ಯಾರಿಗೆ ಬೇಕು? ಚುಟ್ಟಿ ಹೊಡ್ದವರಿಂದ ಅದನ್ನು ಕಿತ್ತುಸುಟ್ಟುಹಾಕಿದರೆ, ಅಷ್ಟಕ್ಕೆ ಸಮಾನತೆ ಸ್ಥಾಪಿಸಿದಂತೆಯೇ ಅಲ್ಲವೇನು?

ಶ್ರೀಮತಿ ಗಾಂಧಿಯವರ ಸಿಂಹಾಸನವೀಗ ಗದಗದನೆ ಅಲ್ಲಾಡುತ್ತಿದೆ. ಅವರ ಶುಷ್ಕೀಕರಣ ನೀತಿಯಿಂದ ಅಧಿಕಾರದಲ್ಲಿ ಉಳಿಸುಬಹುದೆಂದು ಭಾವಿಸಿದ್ದರು. ಆದರೆ, ಇದರ ಪರಿಣಾಮ ಬಾಗಿಲಿಗೆ ಸ್ವಪಕ್ಷೀಯರಲ್ಲಿ ಟೀಕೆಗೆ ಗುರಿಯಾದರು. ತನ್ನ ವೇಲೆ ಅಸಮಾಧಾನವಿದ್ದರೆ ಬೇರೆಯವರಫ್ಲ ಪ್ರಾಯೋಕರನ್ನಾಗಿ ಮಾಡಿಕೊಳ್ಳಿ ಎಂದು ಆಕೆ ಕಣ್ಣೀರ ನಡುವೆ ಬಿಕ್ಕಸಿದೇಕಾದರೆ, ನಾಯಕರನ್ನು ಉಗ್ರವಾಗಿ ಟೀಕಿಸಬಾರದೆಂದು ಶ್ರೀ ಜಗಜ್ಜೀವನರಾಮರು ಕೈಮುಗಿದು ಬೇಡಿಕೊಳ್ಳಬೇಕಾದರೆ, ಶ್ರೀಮತಿಯವರು ವೃಥಾ ತಂತಿಯ ಮೇಲೆಯೇ ನಡೆಯುತ್ತಿವೆಂಬುದು ಸ್ಪಷ್ಟ. ಈ ನಡಿಗೆ ಬಲಕ್ಕೆ ವಾಲಿದರೆ ಎಡವೂ, ಎಡಕ್ಕೆ ವಾಲಿದರೆ ಬಲವೂ ತಪ್ಪಿ ಹೋಗಿ ಆಕೆ ಪಾತಳಿಗೆ ಬೀಳಲೇಬೇಕಾಗುತ್ತದೆ.

ಇದನ್ನು ತಪ್ಪಿಸಿ ತಾನೇ ದಿಟ್ಟತನದಿಂದ ಗದ್ದುಗೆಯನ್ನೇರಿ ಕುಳಿತುಕೊಳ್ಳಲು ಇರುವ ಉಪಾಯವೊಂದೇ ಒಂದು—ಸಾರ್ವತ್ರಿಕ ಚುನಾವಣೆಗಳನ್ನು ಏರ್ಪಡಿಸಿ, ಸಂಪೂರ್ಣ ಬಹುಮತ ಗಳಸುವುದು. ಈ ಬಗ್ಗೆ ಸಂಸ್ಥಾ ಕಾಂಗ್ರೆಸ್ಸು ಕೆಲವು ಸಮಯದ ಹಿಂದೆಯೇ ಸೂಚನೆ ನೀಡಿದೆ. ಇದನ್ನು ಆಡಳಿತ ಕಾಂಗ್ರೆಸ್ಸು ನಿರಾಕರಿಸಿದರೂ ಶ್ರೀಮತಿ ಗಾಂಧಿ ಎಂದೋ ಈ ಬಗ್ಗೆ ನಿರ್ಧಾರಕ್ಕೆ ಬಂದಿದ್ದಾರೆ ಬೇರೆ ಬೇರೆ ರಾಜ್ಯಗಳಲ್ಲಿ ತನ್ನ ಬೇರು ಬಲವಾಗಿ ಬೇರೂರುವುದನ್ನೇ ಅವರು ಇವಿರು ನೋಡುತ್ತಿದ್ದಾರೆ. ತನಗೆ ಪಕ್ಕಂತಿ ರಾಜ್ಯಗಳ ರಾಜ್ಯಕೀಯ ವೇವಿಕೆಗಳನ್ನು ರೂಪಿಸಲು ಅವರು ತನ್ನ ಮುಂಠಿಗಳನ್ನೂ ಸದ್ಯವೇ ರಾಜ್ಯರಾಜ್ಯಕ್ಕೆ ಕಳಸುತ್ತಾರೆ. ಇದರ ಪೂರ್ವಭಾವಿಯಾಗಿಯೇ ಅವರು ಸಾರ್ವತ್ರಿಕ ಚುನಾವಣೆಗಳು ನಿರೀಕ್ಷಿಸಿರುವುದಕ್ಕಿಂತ ಬೇಗನೇ ನಡೆಯಲಿದೆ ಎಂಬ ಸೂಚನೆಯನ್ನು ಪಾಟ್ನದಲ್ಲಿ ಕೀಡಿದ್ದಾರೆ.

ಚುನಾವಣೆಗಳನ್ನು ನಡೆಸುವ ಅಧಿಕಾರ ಚಲಾಯಿಸುವುದು ಆಕೆಗೆ ತ್ಯಾರದಾಟಕವಾಗಿದೆ, ನಾಳ್ಕಡಿ ಉದ್ದದ ಹೊದಿಕೆಯನ್ನು ಅರಡಿಗೆ ಹೊದಿಸುವುದು ಹೇಗೆ ಸಾಧ್ಯ? ಚುನಾವಣೆಗಳಲ್ಲಿ ಆಕೆ ಬಹುಮತದಿಂದ ಗೆದ್ದು ಬರುವ ಅಶಯವಿಟ್ಟುಕೊಳ್ಳುವುದು ಸಹಜ; ಆದರೆ, ಇದು ಖಂಡಿತಕ್ಕೂ ಅಸಾಧ್ಯ. ಆಗ ಆಕೆ ಏನು ಮಾಡುತ್ತಾರೆ? ಬೇರಾದವರ ಸರಕಾರ ರಚಿಸಲಿ ಎಂದು ಕೈಕಟ್ಟಿ ಮೂಕ ಪ್ರೇಕ್ಷಿಕೆಯಾಗಿ ಕುಳಿತಿರುತ್ತಾರೆಯೇ? ಅಥವಾ ಮತ್ತೊಂದು ಬಾರಿ ತಂತಿ ನಡಿಗೆಗೆ ಆರಂಭಿಸುತ್ತಾರೆಯೇ? ಇದು ನಿರ್ಧಾರವಾಗ ಮೇಲೆಯೇ ಪಾರ್ಲಿಮೆಂಟಿನ ವಿಸರ್ಜನೆಯಾಗಬೇಕು. ಅಷ್ಟರಲ್ಲಿ ಜಿನಿಯ ಇವಿ ಕಳೆಯಲೂ ಕಳೆಯಬಹುದು.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿಪಸು
ಪಾತೀಯುದಗಳ ಉಪಾಹಾರಕ್ಕೆ ಅನ್ಯ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಭಂಜ ಸುಮನ	1—20
ಹೆಂಗುಸರ ಕತೆಗಳು	2—00
ಭುಡಿಮುತ್ತುಗಳು	1—50
ರಂಜಗಡ್ಡಾಯ	2—00
ಪುಷ್ಪವನ	2—00
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ವಿಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80

ನವಭಾರತ ಪುಸ್ತಕ ಭಂಡಾರ,
ಉಡುಪಿ.

NAVAYUGA 2—7—1970
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಸ್ವಾವಲಂಬನೆಯೇ ಸ್ವರಾಜ್ಯ

(ವಿನೋಬಾ)

ಪ್ರತಿಯೊಂದು ಕೆಲಸ ಸರಕಾರವು ಮಾಡಬೇಕೆಂದು ಜನರು ಅನ್ನುತ್ತಾರೆ—ಜೀವನ ಕಸಗಿಂತ ಹೆಚ್ಚಾಗಿ ಸರಕಾರದ ಕಸವನ್ನೇ ಜನರು ನಡೆಸಿದ್ದಾರೆ. ನನಗಂತೂ ಅನಿಸುತ್ತದೆ—ಗ್ರಹಣದಿನೇ ಆಗಸ್ಮಾಗಿ, ಇದು ಹಿಂದುಸ್ಥಾನದ ಜನರ ಪಾರತಂತ್ರ್ಯ ದಿನವಾಗಿ ಬಿಟ್ಟಿತೆ! ಆ ಮೊದಲು ಪ್ರಭುತ್ವವಿರಲಿಲ್ಲ ತಾವಾಗಿ ಕೆಲಸಕ್ಕೆ ಮುಂದಾಗುತ್ತಿದ್ದರು. ಬಿಹಾರದಲ್ಲಿ ಭೂಕಂಪವಾಯಿತು. ಗುಜರಾತಿನಲ್ಲಿ ನೆರೆಹಾವಳಿ ಬಂತು, ಆಗ ದೇಶದ ಪ್ರಮುಖರೇ ಮುಂದಾಗಿ ಸಹಾಯ ಮಾಡುತ್ತಿದ್ದರು. ಆದ್ದರಿಂದ ಜನರೂ ಅವರ ಬೆನ್ನಿಗೆ ಬರುತ್ತಿದ್ದರು. ಆದರೆ ಇಂದು ಅಂಗ್ರೇಜು ರಾಜ್ಯವೇನೂ ಇಲ್ಲ. ನಮ್ಮದೇ ರಾಜ್ಯವಾಗಿದೆ. ಹೀಗಿದ್ದು ಜನರು ಪರಾಧೀನರಾಗಿ ಹೋಗಿದ್ದಾರೆ. ಮತ್ತು ಸರಕಾರವು ಮಾಡಲಿ ಸರಕಾರವು ನೋಡಲಿ, ಎಂದು ಹೇಳಹತ್ತಿದ್ದಾರೆ. ನಾನು ಕೇಳುವಷ್ಟೇ—ನೀವು ಹೆಜ್ಜೆಗೆ, ಸರಕಾರ ಹೆಜ್ಜೆಗೆ? ನೀವು ಬಾವಿಯಲ್ಲಿರುವಂತಿದ್ದೀರಿ; ಸರಕಾರವು ಬಾಲ್‌ದಿಯಂತಿದೆ. ಪ್ರತಿ ಊರಿನ ಜನರು ತಿರಿಗೆ ಕೊಟ್ಟರೆ ಸರಕಾರ ನಡೆಯುತ್ತದೆ. ಪ್ರತಿ ಊರಲ್ಲಿ ಬಟ್ಟೆ ತಯಾರಿಸಿಕೊಳ್ಳಬೇಕು, ಊರಲ್ಲಿ ಬೆಳೆಯುವ ಪ್ರತಿಯೊಂದು ಕಚ್ಚಾ ಮಾಲಿನಿಂದ ಪಕ್ಕಾ ಮಾಲು ಊರಲ್ಲೇ ತಯಾರಿಸಿಕೊಳ್ಳಬೇಕು. ಊರಲ್ಲಿ ಭೂಮಿ ಇಲ್ಲದವರಿಗೆ ಭೂಮಿ ಕೊಡಬೇಕು; ಎಂದು ಜನರೆಲ್ಲ ನಿರ್ಧಾರ ಮಾಡಿ ನಿರ್ಧಾರಿಸಿದರೆ ಅವರಿಗೆ ತಡೆಯುವವರಾರು? ಎಲ್ಲಿ ಎಲ್ಲ ಜನರ ಮೈ ಮೇಲೆ ಗಿರಚಿಯು ಬಟ್ಟೆ ಇದೆ. ಇದು ಪೇಟೆಯ ಜನರ ಗುಲಾಮಗಿರಿಯನ್ನು ತೋರಿಸುತ್ತದೆ. ನಾವು ಒಂದು ಸಣ್ಣ ವಾಕ್ಯ ಹೇಳಹತ್ತೇವೆ—ಇಡೀ ದೇಶದ ಜನರು ಸ್ವತಂತ್ರವಾದರೆಯೇ ಪೂರ್ಣ ಸ್ವರಾಜ್ಯ ಬಂದಂತೆ ಆಯ್ತು. ಪ್ರತಿಯೊಂದು ಊರು ಸ್ವತಂತ್ರ ಆದಾಗಲೇ ಸರ್ವೋದಯವಾದಂತೆ ಲೆಕ್ಕ. ಇಷ್ಟೂ ಪ್ರತಿಯೊಂದು ಊರು ಸ್ವತಂತ್ರವಾಗಿಲ್ಲ. ಊಹಿಸಿರಿ ಹಳ್ಳಿಗಳೆಲ್ಲ ಶಹರಗಳನ್ನು ಅವಲಂಬಿಸಿವೆ. ಫಿವ್ಯಾಲಿಯಲ್ಲಿ ಕಚ್ಚಾ ಸರಕಿನಿಂದ ಫಿವ್ಯಾ ಊರಲ್ಲಿಯೇ ಪಕ್ಕಾ ಸಾಮಗ್ರಿ ತಯಾರಿಸಿಕೊಳ್ಳಹತ್ತಿದರೆ ಮಾತ್ರ ಈ ನಿಮ್ಮ ಪರಾಧೀನತೆಯು ದೂರಾಗುವುದು. ಸರ್ವೋದಯವಾಗುವದು ಊರೂರು ಸ್ವತಂತ್ರ ಆದಮೇಲೆ ಪ್ರತಿಯೊಬ್ಬ ಮನುಷ್ಯನೂ ಸ್ವತಂತ್ರನಾಗಬೇಕು. ನಾನು ಮೊದಲು ಹೇಳಿದಂತೆ ಇಡೀ ದೇಶವು ಸ್ವತಂತ್ರ ಆದರೆ ಸ್ವರಾಜ್ಯ, ಪ್ರತಿಯೂರು ಸ್ವತಂತ್ರ ಆದರೆ ಸರ್ವೋದಯ, ಮತ್ತು ಪ್ರತಿಯೊಬ್ಬ ಮನುಷ್ಯ ಸ್ವತಂತ್ರ ಆದರೆ ರಾಮರಾಜ್ಯ ಆಗುತ್ತದೆ.

ಕಾಮ ಕ್ರೋಧ ಮತ್ತು ಲೋಭ ಇವು ಮನುಷ್ಯರ ವೈರಿಗಳು. ಇವುಗಳಲ್ಲಿ ಲೋಭವೇ ಎಲ್ಲಕ್ಕೂ ಹೆಚ್ಚಿನ ವೈರಿ. ಪಕ್ಷಿಗಳಲ್ಲಿ ಕಾಮವಿಕಾರವು ಹೆಚ್ಚು. ಪಶುಗಳಲ್ಲಿ ಕ್ರೋಧ ಹೆಚ್ಚು. ಮನುಷ್ಯರಲ್ಲಿ ಕ್ರೋಧವಿರುತ್ತದೆ. ಆದರೆ ಕ್ರೋಧವಲ್ಲಿ ಹುಲಿಗೆ ಸಂಗಟ್ಟುವವರಾರಿದ್ದಾರೆ? ಆದರೆ ಲೋಭವು ಮಾತ್ರ ಮನುಷ್ಯರಲ್ಲೇ ಇರುತ್ತದೆ. ಯಾಕೆಂದರೆ ಮನುಷ್ಯ ರಕ್ಷಿಸಂಗ್ರಹ ಮಾಡುವ ವೃತ್ತಿ ಇದೆ. ಇದೊಂದು ದೊಡ್ಡ ವೈರಿ. ಮನುಷ್ಯನು ತನ್ನ ಮನಸ್ಸಿನೊಳಗಿಂದ ಈ ಕಾಮ, ಕ್ರೋಧ ಮತ್ತು ಲೋಭಗಳೆಂಬ ಮೂವರು ವೈರಿಗಳನ್ನು ಹೊಡೆದೋಡಿಸಿದಾಗಲೇ ನೂತ್ರ ಸ್ವತಂತ್ರನಾಗಬಲ್ಲ. ಮತ್ತು ಆಗಲೇ ರಾಮರಾಜ್ಯ ಆಗುವುದು. ನಮಗೆ ಸ್ವರಾಜ್ಯವಂತೂ ಸಿಕ್ಕಿದೆ. ಇನ್ನು ಸರ್ವೋದಯ ಆಗುವದು ಬಾಕಿ ಉಳಿದಿದೆ. ಮತ್ತು ರಾಮರಾಜ್ಯವಾಗುವದಾದರೋ ಅದಕ್ಕೂ ಮುಂದಿನ ಮಾತು, ಅದಕ್ಕೋಸ್ಕರವೇ ನಾವು ಈ ಕಾರ್ಯ ಆರಂಭಿಸಿದ್ದೇವೆ.

ಸ್ವಾರ್ಥ ಸಾಧನೆಗೆ ಬಹುವಿಧ ವೇಷ

(ಒಂದನೇ ಪುಟದಿಂದ)

ಗೆ ಪೂರ್ವ್ಸ್ ವಾದಿಗಳೇ ಕಾರಣವೆಂದು ಅವರು ಹೇಳಿರುವರು. ಕಣ್ಣಾನೂರಿನಲ್ಲಿ ನಡೆದ ಉಪಚುನಾವಣೆಗಳಲ್ಲಿ ಕಮ್ಯುನಿಸ್ಟ್ ಮೂರ್ಸ್ ವಾದಿಗಳು ಹಿಂದೂಗಳ ಬಲಿ ಮುಸ್ಲಿಮರನ್ನು, ಮುಸಮ್ಮದೀಯರು ಬಲಿ ಹಿಂದೂಗಳನ್ನು ಹೀಗಳೆದು ಗೆದ್ದು ಬಂದಿದ್ದಾರೆ. ತಮ್ಮ ಕಾರ್ಯಕರ್ತರನ್ನು ಒಂದೆಡೆ ಸೇರಿಸಿ ಅವರ ತರಬೇತಿಗಾಗಿ ಶಿಬಿರ ಏರ್ಪಡಿಸಿ, ಅದು ಮಟ್ಟಾಲಿನಿಂದ ಓಡಿ ಬಂದಿರುವ ನಿರಾಶ್ರಿತ ಹಿಂದೂಗಳ ಶಿಬಿರವೆಂದು ಮೂರ್ಸ್‌ವಾದಿ ಕಮ್ಯುನಿಸ್ಟರು ಪ್ರಚಾರ ಮಾಡುತ್ತಿದ್ದರು. ಹಾಗಾಗಿ ಮ.ಟ್ಟಾಲಿನಿಂದ (ಮುಸ್ಲೀಮರೇ ಹೆಚ್ಚು ಅಲ್ಲಿರ ವದು) ಯಾರೂ ಮತಗಟ್ಟೆಗೆ ಹೋಗಲಿಕ್ಕಾಗಿರುವದಿಲ್ಲ. ಅದೇ ರೀತಿ ಅವರು ನಡೆದಿಗಳನ್ನು ಹಾಳುಗೆಡವಿ ಹಿಂದೂಗಳು ಆ ರೀತಿ ಮಾಡಿದ್ದೆಂದು ಪ್ರಚಾರ ನಡೆಸಿರುವರು. ಕೋಮು ಕೋಲಾಹಲಗಳ ಬೆನ್ನಲ್ಲಿ ಬಾಗಿರುವವರು ಮೂರ್ಸ್ ವಾದಿ ಕಮ್ಯುನಿಸ್ಟರೆಂದು ಆ ವರದಿ ಸ್ಪಷ್ಟವಾಗಿ ಸೂಚಿಸಿದೆ.

ಇದರಿಂದ ಕೋಮುವಾರು ಕೋಲಾಹಲಕ್ಕೆ ಮುಸ್ಲಿಂ ಲೀಗಿಗರೂ ಕಮ್ಯುನಿಸ್ಟರೂ ಕಾರಣವೆಂಬುದನ್ನು ಅದ್ಯಾರೂ ಅರಿತುಕೊಳ್ಳಬಲ್ಲರು. ಇದರಲ್ಲಿನ ಪೈಶಿಷ್ಟ್ಯವೆಂದರೆ ಕಮ್ಯುನಿಸ್ಟರು ಅವುಗಳಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸುವಿಲ್ಲ. ಅಲ್ಲದೆ ಅವರು ಮೇಲೆ-ತೇಲಿಕೊಂಡಾಟವನ್ನು ಸಂಘಟನಾತ್ಮಕವಾಗಿ ಆಡುತ್ತಾರೆ. ರಕ್ತ ಹರಿಯಲ್ಲಿ ಕಮ್ಯುನಿಸ್ಟರ ಕೈವಾಡ ಇದ್ದೇ ಇರುತ್ತದೆ ಎನ್ನಲು ಬೆಂಕಿಗಾಹುತಿ ಆಗುತ್ತಿರುವಲ್ಲಿ ಕಮ್ಯೂನಿಸ್ಟರ ಹಸ್ತಕ್ಷೇಪ ಇದ್ದೇ ಇರುತ್ತದೆ. ಅವರು ಮತೀಯ ಪೂರಾನೂರಿಗೆ ಮುಸ್ಲಿಂ ಲೀಗಿಗರನ್ನು ಉಪಯೋಗಿಸಿಕೊಳ್ಳುತ್ತಾರೆ, ದೇಶಭಕ್ತರೆನ್ನು ಹದಿಬದೆಯರು ಆಪತ್ಕಾಲದಲ್ಲಿ ಕಾಂಗ್ರೆಸ್ಸಿನ ಆಶ್ರಯವನ್ನು ಪಡೆಯುತ್ತಾರೆ. ಸಾಪರ್ಶ ಭಾಷೆಗೆ ಅಡ್ಡಿಯಾಗಲು ದ್ರಾ. ಮು. ಕ. ವಕ್ಷ್ಯ ಉಪಯೋಗಿಸಿಕೊಳ್ಳುತ್ತಾರೆ. ಅಧಿಕಾರದಾಸನವನ್ನು ಹಿಡಿಯಲು ಸ್ವತಂತ್ರ ಪಾರ್ಟಿ, ಜನ ಸಂಘದೊಂದಿಗೂ ಸೇರುತ್ತಾರೆ. ಅವೇ ರೀತಿ ತಮ್ಮ ಕಾರ್ಯಸಾಧನೆಗೆ ಯಾವ ವೇಷ ಬೇಕಾದರೂ ಹಾಕಿಕೊಳ್ಳುತ್ತಾರೆ.

—ಶಿವಶಂಕರ

ಪ್ಲಾಸ್ಟಿಕ್ ಕಾರು

ಮೂನಿಕ್: ಆಸ್ಟ್ರೇಲಿಯಾದಿಂದ ಅಲ ಸ್ಯಾಕರಿಗೆ ಪ್ರತೀ ವರ್ಷ 28 ಲಿಯ ಕಾರುಗಳು ಇಲ್ಲಿಯ ಕಾರ್ಖಾನೆಗಳಿಂದ ಜಗತ್ತಿನ ರಸ್ತೆಗಳಿಗೆ ಬಂದಿಳಿಯುತ್ತವೆ. ದಿನದಿಂದ ದಿನಕ್ಕೆ 15000 ವಾಹನಗಳು ಕೇವಲ ಜರ್ಮನಿಯಲ್ಲಿ ಹೆಚ್ಚುತ್ತಿವೆ. ವಾಲ್ಕ್ಸ್ ವೇಗನ್, ಮರ್ಸಿಡಿಸ್, ಪೋರ್ಸ್ ಚೆ, ಪೊಪಲ್ ಮತ್ತು ಪೋರ್ಡ್—ರಸ್ತೆಗಳಲ್ಲಿ ಅರಣ್ಯ ಯುದ್ಧವನ್ನೆ ಮಾಡತ್ತಿವೆ. ಪ್ರದರ್ಶನಾ ಕೋಣೆಗಳಲ್ಲಿ ಇಂದು ಹೊಳೆಯುತ್ತಿರುವ ಈ ಕಾರುಗಳು ಉಪಯೋಗಕ್ಕೆ ಬಂದ ಕೆಲವೇ ಕಾಲದಲ್ಲಿ ತುಕ್ಕು ಹಿಡಿದು ಕಾಂತಿ ಹೀನವಾದಾಗ ಇದನ್ನು ತಿಳಿಯುವ ಪ್ರಸಂಗ ಬರುತ್ತಿದೆಯಲ್ಲಾ; ಇದಕ್ಕೇನು ಉಪಾಯ?

ಫ್ರೆಂಕ್‌ಫರ್ಟ್‌ನಲ್ಲಿ ನಡೆದ ಅಂತರ್ ರಾಷ್ಟ್ರೀಯ 'ವೊಟೊವೆ ಬೈಲ್' ಪ್ರದರ್ಶನದಲ್ಲಿ ಇಂತಹ ತುಕ್ಕು ಹಿಡಿಯದ ಮರ್ಸಿಡಿಸ್ ಕಾರು ಮತ್ತು ಪ್ಲಾಸ್ಟಿಕ್ ಕಾರುಗಳನ್ನು ಜರ್ಮನಿ ಪ್ರದರ್ಶಿಸಿತ್ತು.

"ಪ್ಲಾಸ್ಟಿಕೆನೊಂದಿಗೆ ಜೀವನ ಎಂಬ" ವಾಕ್ಯ ಇಂದಿನ ನವಯುಗದಲ್ಲಿ ಮನೆ ಮಾತಾಗಿ ಸರ್ವತೆಯಲ್ಲಿ ರೂಪುಗೊಂಡಿದೆ. ಟೆಲಿವಿಜನ್, ಹಡಗು, ವಿಮಾನ ಮುಂತಾದುವುಗಳೇ ಇಂದು ಪ್ಲಾಸ್ಟೀಕಿನಿಂದ ತಯಾರಾಗುತ್ತಿವೆ. ಜರ್ಮನಿಯಲ್ಲಿ ಅಧಿಕ ಪ್ಲಾಸ್ಟಿಕನ್ನು ಬಳಸುವ ರಾಜ್ಯವೆಂದರೆ ಹೆಸರಲ್ ರಿಪಬ್ಲಿಕ್ ಆಫ್ ಜರ್ಮನಿ. ಪ್ರತೀ ವರುಷ ಇಲ್ಲಿ 60 ಲಿಯ ಜನರಿಗೆ ರೀತರು 30 ಕಿಲೋಗ್ರಾಮ್ ಪ್ಲಾಸ್ಟೀಕನ್ನು ವರ್ಷಂಪ್ರತಿ ಉಪಯೋಗಿಸುತ್ತಿದ್ದಾರೆ. ಜಗತ್ತಿನಲ್ಲಿ ಅಧಿಕ ಪ್ಲಾಸ್ಟೀರ್ ಮತ್ತು ರಬ್ಬಾಯನಿಕ ಬಟ್ಟೆಗಳನ್ನು ತಯಾರಿಸುವ ಎರಡನೇ ರಾಷ್ಟ್ರವೆಂದರೆ ಫೆಡರಲ್ ರಿಪಬ್ಲಿಕ್ ಆಫ್ ಜರ್ಮನಿ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಅಂಗ್ಲಸ್ವಯಂಬೋಧಿನಿ.
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನನಿತ್ಯ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅಪೂರ್ವವಾದ 450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ। ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಕೈಪಿಪ್ಪೆದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ರೋಗಿಲಿಗಳಿಗೂ ಮನೆಯಲ್ಲೆ ಮದ್ದು ಮಾಡುವ ವಿಧಾನಗಳಿವೆ. ಹೀಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ

NAVAYUGA 9—7—1970 ಸಂಪುಟ 49 ಸಂಚಿಕೆ 44

ಕೇಂದ್ರ ಸಚಿವ ಸಂಪುಟದ

ಪುನಾರಚನೆಯ ಬಾರೀ ಹಿನ್ನೆಲೆ

ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಯವರು ತಮ್ಮ ಸಚಿವ ಸಂಪುಟವನ್ನು ಪುನಾರಚಿಸಿದರು. ಕೆಲವರು ಹೊಸಬರನ್ನು ಅದಕ್ಕೆ ಸೇರಿಸಿಕೊಂಡರು. ಹೊಸ ಮುಖಗಳಲ್ಲದವರಿಗೂ ಇದರಲ್ಲಿದ್ದಾರೆ; ಹಳೆಯ ಹುದ್ದೆಗಳಲ್ಲೂ ಇದ್ದಾರೆ. ಒಂದು ಕಾಲದಲ್ಲಿ ಕಾಂಗ್ರೆಸ್ಸಿನ ಹಿರಿಯ ಶಕ್ತಿವಾಗಿದ್ದವರೂ ಇದ್ದಾರೆ. ಅಂತೂ ಎಂದೋ ಆಗುತ್ತದೆ ಆಗುತ್ತದೆ ಎಂದು ನೀರೀಕ್ಷಿಸಿದ್ದ ಘಟನೆ ದೀರ್ಘ ಘಟಿಸಿತು. ಕಾಲ ಪರಿಪಕ್ವವಿನ್ನೂ ಆಗಿಲ್ಲ. ಮುಂದಿನ ತಿಂಗಳಿಗೆ ಇನ್ನೂ ಮೈಸೂರು ಸಂಪುಟದ ವಿಸ್ತರಣೆಯೂ ಆಗುವುದು ಎಂದು ಹೇಳಿ ನಿರಾಶರಾದ ಎಂಪಿಗಳಿಗೆ ಶಮನಿಟ್ಟುಕೊಳ್ಳುವಂತೆ ಮಾಡಿದ್ದಾರೆ. ಚಿವ ಸಂಪುಟದ ವಿಸ್ತರಣೆ ಮತ್ತಷ್ಟಾಗಿ ಆಗುತ್ತದೆ, ಇದನ್ನು ಹೆಚ್ಚಾಗಿ ಗಮನಿಸಿದೆ ಬೇರೆ ಇಲ್ಲ. ಜೊತೆಗೆ ಸಚಿವ ಶಾಖೆಗಳಲ್ಲಿ ಅದಲು ಬದಲು ಹಂಚಿಕೆಯಿಂದ ಮೊದಲಿನ ಸ್ಥಿತಿಯೇ ಬದಲಾಗಿದೆ.

ಸಾರ್ವತ್ರಿಕ ಚುನಾವಣೆಗಳು ಬೇಗನೆ ಬರುವುದೆ ಹೋದರೂ ಇನ್ನು ಒಂದೂವರ್ಷದಲ್ಲಿ ನಡೆಯುವಿವೆ. ಮರುಹಂಚಿಕೆಯು ಬೇಕೆನಿಸಿದ್ದರೆ, ಕಡಿದು ಪಕ್ಷ ಆರು ತಿಂಗಳುಗಳಿಗೆ ಮೊದಲಾದರೂ ಆಗಬಹುದಿತ್ತು. ಈಗ ಅಂತಹ ಪ್ರಶ್ನೆಯಿಗನೂ ಸಂಭವಿಸಿಲ್ಲ. ಹಾಗಾಗಿ ಮರುಹಂಚಿಕೆಯು ಹಿಂದೆ ಧಾರಿ ರಾಜ್ಯಕೀಯ ಪಡಗಿದೆಯೆಂದು ಊಹಿಸಲು ಬಲವಾದ ಕಾರಣವಿದೆ. ಮಂತ್ರಿಗಳನ್ನು ತೆಗೆದು ಸುವುದು, ಅವರಿಗೆ ಕಡಿಮೆ ಬಂದ ಖಾತೆಗಳನ್ನು ಒಪ್ಪಿಸುವುದ ಪ್ರಧಾನಿಗೂ ಅಧಿಕಾರವೆಂಬುದಕ್ಕೆ ಪ್ರತಿ ಮಾತಿಲ್ಲ. ಶ್ರೀಮತಿ ಮುಂಜರ್ಜಿ ಭಾಯಿಯವರೆ ಖಾತೆಗಳಿಂದ ಅರ್ಥ ಖಾತೆಯನ್ನು ಕಿತ್ತುಕೊಂಡು ಉಪಪ್ರಧಾನಿಯಾಗಿ ಮುಂದುವರಿಯುವಂತೆ ಕೇಳಿಕೊಂಡಾಗ ಶ್ರೀಮತಿಗಾಂಧಿಯವರು ಅವರ ಈ ಅಧಿಕಾರವನ್ನೇ ತೋರಿಸಿದ್ದರು. ಈ ಅಧಿಕಾರ ಪ್ರದರ್ಶನದ ಹಿಂದೆ ಮರಿಯೂಗಿದ್ದ ಕರಾಳ ರಾಜ್ಯಕೀಯ ಕೆಲವು ಧನಿಗಳ ಖಂಡರ ಬೆಳಕಿಗೆ ಬಂತು. ಇದೇ ಬಗೆಯ ಇನ್ನೊಂದು ರಾಜ್ಯಕೀಯ ಸಂಚು ಈಗಿನ ಮರುಹಂಚಿಕೆಯಲ್ಲಿಲ್ಲವೆಂದು ಹೇಳುವುದು ಕಷ್ಟ.

ಕೇಂದ್ರದಲ್ಲಿ ಶ್ರೀಮತಿ ಗಾಂಧಿಯವರ ಸ್ಥಾನ-ಮಾನ ಆರಂಭದಿಂದಲೂ ಸುಲಲಿತವಾಗಿರಲಿಲ್ಲ. ಪಂ. ನೆಹರುರವರ ಫಲಾನಂತರ ಶ್ರೀ ಶಾಸ್ತ್ರಿಯವರು ಅವರ ಉತ್ತರಾಧಿಕಾರಿಯಾಗಿ ಆಯ್ಕೆಯಾದದ್ದು ಶ್ರೀ ಕಾಮರಾಜರ ಚಾಕಚಕ್ಯತೆಯಿಂದ. ಆ ವೇಳೆಯಲ್ಲೂ ಶ್ರೀ ಮುರಾರ್ಜಿ ದೇಸಾಯಿಯವರು ತಮ್ಮ ಉಮೇದ್ವಾರಿಕೆಯನ್ನು ಮುಂದೆ ಮಾಡಿದ್ದರು. ಶ್ರೀ ಶಾಸ್ತ್ರಿಯವರ ಅಕಾಲ ಮೃತ್ಯುವಿನ ನಂತರ ಶ್ರೀ ದೇಸಾಯಿಯವರ ಬಲ ಹೆಚ್ಚಾಯಿತು. ಆದರೆ, ಶ್ರೀ ಕಾಮರಾಜ—ನಿಜಲಿಂಗಪ್ಪನವರ ರಾಜ್ಯಕೀಯ ನಾಟಕದಲ್ಲಿ ಶ್ರೀಮತಿ ಗಾಂಧಿಯವರ ಕಡೆಗೆ ಕೇಂದ್ರೀಕರಿಸಿತು. ಆದರೆ ಶ್ರೀಮತಿಯವರ ಪ್ರಧಾನಿ ಪದವಿಯಲ್ಲಿ ಅನಾಸಕ್ತರಾಗಿದ್ದರೆಂದು ಹೇಳುವುದೂ ಇದ್ದಾರೆ. ಆದರೆ, ಅನಂತರ ಅವರು ಸ್ವೀಕರಿಸಿದ ಸಿಂಹಾಸನವನ್ನು ಬಿಟ್ಟು ಕೊಡದಿರಲು ದೃಢ ನಿರ್ಧಾರ ತಳೆದಿದ್ದಾರೆ. ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳ ಫಲಿತಾಂಶವೂ ಶ್ರೀ ದೇಸಾಯಿ—ಶ್ರೀಮತಿ ಗಾಂಧಿಯವರ ನಡುವೆ ಹೋರಾಟ ನಡೆಯಿತು. ಆಗ್ರಹಾಯ ಕರಾಳ ಫಲಿತದ ಮೇರೆಗೆ ಶ್ರೀ ದೇಸಾಯಿಯವರು ಶ್ರೀಮತಿಯವರನ್ನು ಬೇಬಲಿಸಿದರು. ತನ್ನ ಪ್ರತಿಸ್ಪರ್ಧಿಗಳನ್ನು ತೇಜೋಹೀನರಾಗಿ ಮಾಡಿ ತನ್ನ ಸ್ಥಾನ-ಮಾನಗಳನ್ನು ಭದ್ರಪಡಿಸಿಕೊಳ್ಳುವುದು ರಾಜ್ಯಕೀಯ ಪಿಪಾಸುಗಳ ವಿಶೇಷವೃತ್ತಿ. ಶ್ರೀಮತಿ ಗಾಂಧಿಯವರೂ ಇದಕ್ಕೆಂತ ಹೊರಗಾಗಿರುವುದು ಅಸಾಧ್ಯ.

ತನ್ನನ್ನು ಕಾಂಗ್ರೆಸ್ ಅಧ್ಯಕ್ಷರು ಪಕ್ಷದಿಂದ ಕಿತ್ತು ಹಾಕಿದ ಮೇಲೆ ಶ್ರೀಮತಿ ಗಾಂಧಿ ತನ್ನದೇ ಆದ ಪಕ್ಷವೊಂದನ್ನು ಕಟ್ಟಿಕೊಂಡರು. ಅದೇ ಕಾಂಗ್ರೆಸ್ ಎಂದು ಹೇಳತೊಡಗಿದರು. ಶ್ರೀ ದೇಸಾಯಿಯವರು ಈಗ ಆವರ ಪಕ್ಷದಲ್ಲಿದ್ದಾರೆ. ಹಾಗಾಗಿ ಅವರಿಗೆ ಅಂಜಬೇಕಾಗಿಲ್ಲ. ಆದರೆ, ಶ್ರೀಮತಿಯವರ ಪ್ರಬಲ ಪ್ರತಿಸ್ಪರ್ಧಿಯನ್ನೆನ್ನಿಸಿರುವ ಆವರ ಪಕ್ಷದಲ್ಲೇ ಇದ್ದ ಬೆಳೆಯುತ್ತಿದ್ದಾರೆ. ಮುಂಬಯಿಯ ಆನಭಿಷಿಕ್ತ ದೊರೆಯೆಂದು ಒಂದು ಕಾಲದಲ್ಲಿ ಕೆಸರಾದ ಕೆಲವರಲ್ಲಿ ಶ್ರೀ ಯಶವಂತರಾವ್ ಬಲವಂತರಾವ್ ಚವನರೂ ಒಬ್ಬರು.

ಶ್ರೀ ಚವನರು ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದು, ಅಲ್ಲಿಂದ ಕೇಂದ್ರಕ್ಕೆ ಹಾರಿದ್ದು ಎಲ್ಲವೂ ಆಕಸ್ಮಿಕ. ದ್ವಿಭಾಷಾ ರಾಜ್ಯ ಮುಂಬಯಿ ವಿಭಜನೆಗೊಂಡಾಗ, ಶ್ರೀ ಚವನರು ಇನ್ನೂ ಹೊಸದಾಗಿದ್ದವರು ಶ್ರೀ ಮುರಾರ್ಜಿಯವರ ಪರಿಧಿಯಲ್ಲಿ ಪಳಗಿದ ಇವರ ಚೇಟಿ ಮೇಲೆ ಬಿತ್ತು; ಮುಂದೆ ಮಹಾರಾಷ್ಟ್ರದಲ್ಲಿ ತನ್ನ ಶಕ್ತಿಸಾನ ಧೈರ್ಯಗಳನ್ನು ಇವರು ತೋರಿಸಿಯೇ ಭಾರತ ಪ್ರಸಿದ್ಧರಾದರು. ಕೆಲವು ಚೀನಾವು ಭಾರತದ ಮೇಲೆ ಆಕ್ರಮಣ ಮಾಡಿದಾಗ, ಸಮ ಸಾಕ್ಷಿಕ್ಷ ವ್ಯಕ್ತಿ ಶ್ರೀ ವಿ. ಕೆ. ಕೃಷ್ಣ ಮೆನನ್ ಸ್ಥಾನದಲ್ಲಿ ರಕ್ಷಣಾ ಮಂತ್ರಿಯಾಗಿದ್ದರು. ಶ್ರೀ ಮೆನನ್ ಅವರನ್ನು ಕಿತ್ತುಹಾಕಬೇಕೆಂಬ ಬೇಡಿಕೆ ಬಲವತ್ತರವಾದುದರಿಂದ ಪಂ. ನೆಹರು ಜನರ ಮುಂದೆ ತಲೆಬಾಗಿದರು. ಮುಂಬಯಿಯಿಂದ ಶ್ರೀ ಚವನರನ್ನು ದಿಲ್ಲಿಗೆ ಪಿಂತಕ್ಕೆ ಕರೆದರು. ಅಲ್ಪಾವಧಿಯಲ್ಲೇ ಚೀನೀಯರು ಅಕ್ರಮಣವನ್ನು ನಿಲ್ಲಿಸಿದ್ದರಿಂದ ಶ್ರೀ ಚವನರ ಕೀರ್ತಿ ಧವಳಗಿರಿಯಿತು. ಮುಂದವರು ಗೃಹ ಮಂತ್ರಿ ಯಾಗಿ ಉಳಿದರು.

ಶ್ರೀ ಮುರಾರ್ಜಿಭಾಯಿಯನ್ನು ಮನೆಗೆ ಕಳಿಸಿದ ಮೇಲೆ ಶ್ರೀಮತಿ ಗಾಂಧಿ ತಾನೇ ಅರ್ಥಶಾಖೆಯನ್ನಿಟ್ಟುಕೊಂಡು ಬ್ಯಾಂಕುಗಳ ರಾಷ್ಟ್ರೀಕರಣವನ್ನು ಘೋಷಿಸಿದರು. ರಾಷ್ಟ್ರೀಕರಣವನ್ನು ಬಹಳ ತೀಕ್ಷ್ಣರು ಸ್ವಾಗತಿಸಿದರೂ ರಾಷ್ಟ್ರೀಕೃತ ಬ್ಯಾಂಕುಗಳ ನೀತಿಗಳ ಬಗ್ಗೆ, ಯಾರೊಬ್ಬರಿಗೂ ಸಮಾಧಾನವಿಲ್ಲ. ಲೋಕಸಭೆಯ ಉಪಾಧ್ಯಕ್ಷರಾಗಿದ್ದ ಶ್ರೀ ಖಾಡಿಲ್ಕರರನ್ನು ಆ ಹುದ್ದೆಗೆ ರಾಜೀನಾಮೆ ಕೊಡಿಸಿ ಅರ್ಥಶಾಖೆಯ ಸ್ಟೇಟ್ ಮಂತ್ರಿಯನ್ನಾಗಿ ನೇಮಕ ಮಾಡಿದಾಗ ಮಂದೊಂದು ದಿನ ಶ್ರೀ ಖಾಡಿಲ್ಕರರೇ ಅರ್ಥಶಾಖೆಯ ಕ್ಯಾಬಿನೆಟ್ ದರ್ಜೆಗೇರಬಹುದೆಂದು ಊಹಿಸಲಾಗಿತ್ತು. ಆದರೆ, ಈಗ, ಶ್ರೀ ಖಾಡಿಲ್ಕರರನ್ನು ಅರ್ಥಶಾಖೆಯಿಂದಲೇ ದೂರವಿಟ್ಟಿದ್ದರಿಂದ ಅವರು ಇದಕ್ಕೆ ಖಾಲಾಯ ಕೈಯಿಂದ ಶ್ರೀಮತಿ ಗಾಂಧಿ ಪ್ರಶಕ್ತಿ ನೀಡಿದರೆನ್ನಬಹುದು.

ತನ್ನ ಕ್ರಾಂತಿಕಾರಿ—ಪ್ರಗತಿಪರ ಅರ್ಥ ನೀತಿಯನ್ನು ಅನುಷ್ಠಾನಕ್ಕೆ ತರುವವರೆಗೆ ತಾನೇ ಅರ್ಥ ಮಂತ್ರಿಯಾಗಿರಬೇಕೂ ಮಂದುವರಿಯುವ ಇರಾದೆ ಹೊಂದಿದ್ದ ಶ್ರೀಮತಿ ಗಾಂಧಿಯವರ ಮನಸ್ಸನ್ನು ಇದೀಗ ಬದಲಾಯಿಸಿದ್ದಕ್ಕೆ ರಾಜ್ಯಕೀಯವೇ ಕಾರಣ ತನ್ನ ಹೊರೆಯನ್ನು ಕಡಮೆ ಮಾಡಿಕೊಳ್ಳುವುದಕ್ಕಾಗಿ ಅವರೆ ಅರ್ಥಶಾಖೆಯನ್ನು ಬಿಟ್ಟುಕೊಡುವುದಾದರೆ ಆಶ್ಚರ್ಯ ಬೇರೆ. ಅದನ್ನು ಶ್ರೀ ಚವನರಿಗೆ ನೀಡಿ, ತಾನು ಅವರ ಕೈಯಿಂದ ಗೃಹ ಖಾತೆಯನ್ನು ತೆಗೆದುಕೊಂಡುದರಿಂದ ಈ ವಾದಕ್ಕೆ ಭಾರಿ ಪುಷ್ಟಿ ಬರುತ್ತದೆ. ಬ್ಯಾಂಕುಗಳ ರಾಷ್ಟ್ರೀಕರಣದಿಂದ ಏನನ್ನೂ ಸಾಧಿಸಲಾಗಿಲ್ಲವೆಂಬ ಆರೋಪವನ್ನು ಶ್ರೀಮತಿ ಗಾಂಧಿ ಈಗ ಹೊತ್ತಿದ್ದಾರೆ. ತನ್ನ ಆರ್ಥಿಕ ನೀತಿಯಲ್ಲಿ ದೃಢ ವಿಶ್ವಾಸವುಳ್ಳ ಇನ್ನೊಬ್ಬ ವ್ಯಕ್ತಿ ಶ್ರೀ ಜಗಜೀವನರಾಮ್ ತೆಗೆದು, ತನ್ನ ನೀತಿಯ ವಿಫಲತೆಗೆ ಶ್ರೀ ಚವನರನ್ನು ನಿಮಿತ್ತವಾಗಿಸುವ ಮೂಲಕ ಅವರನ್ನು ಬಲಿಗಂಬಕ್ಕೆ ಕಟ್ಟಿ, ಅವರ ಪ್ರತಿಷ್ಠೆಯನ್ನು ಕುಗ್ಗಿಸಿ, ಮುಂದಿನ ಸಾರ್ವತ್ರಿಕ ಚುನಾವಣೆಗಳನಂತರ ಅವರು ತನಗೆ ಎದುರು ನಿಲ್ಲದಂತೆ ಮಾಡುವ ರಾಜ್ಯಕೀಯ ಕುತಂತ್ರವಿದು ಎಂದರೂ ತಪ್ಪಾಗದು. ಏಕೆಂದರೆ, ಶ್ರೀಮತಿ ಗಾಂಧಿಯವರ ಅರ್ಥ ನೀತಿ ಈಗ-ಗಲೇ ಉಗ್ರ ಟೀಕೆಗೆ ಒಳಗಾಗಿದೆ. ಆಕೆಯ ಟೀಕಾಕಾರರಲ್ಲಿ ಆಕೆಯ ಪ್ರಶ್ನೆಯರೂ ಸೇರಿದ್ದಾರೆ.

ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಆಕೆ ಗೃಹಖಾತೆಯನ್ನೂ ವಶಪಡಿಸಿಕೊಂಡಿದ್ದಾರೆ. ಇತ್ತೀಚೆಗೆ ಜಾತೀಯ ಗಲಭೆಗಳು ನಡೆದಾಗ, ಬಂಗಾಳದಲ್ಲಿ ನಕ್ಸಲೈಟರು ತಮ್ಮ ನೀಲಿ ನಕ್ಷೆಯನ್ನು ತ

(ಹನ್ನೆರಡನೇ ಪುಟ ನೋಡಿರಿ)

ಪರಸ್ಪರ ಪ್ರೇಮಕ್ಕೆ ಮಹಾದ್ವಾರ

ಧಾರ್ಮಿಕ ಸ್ವಾತಂತ್ರ್ಯ

ಮಹಾರಾಜ ಮಾಂಧಾತ ವಿಶ್ವ ವಿಖ್ಯಾತ. ಅವನ ರಾಜ್ಯ ಭಾರತ ತುಂಬ, ಮೂಶ್ರವಲ್ಲದೆ ದೂರ ದೂರ ದೇಶಗಳಿಗೂ ವ್ಯಾಪ್ತವಾಗಿತ್ತು. ಅವನ ಪ್ರಜೆಗಳಲ್ಲಿ ಆರ್ಯರೂ ಇದ್ದರು; ಅರ್ಯೇತರರೂ ಇದ್ದರು. ಇವರೆಲ್ಲ ಒಂದಾಗಿ ಹೇಗೆ ಆಳಬೇಕೆಂಬುದು ಅವನಿಗೆ ತೋಚಲಿಲ್ಲ. ಆದುದರಿಂದ ಈ ಉದ್ದೇಶ್ಯದಿಂದ ಅವನು ಭಗವಂತ ವಿಷ್ಣುವನ್ನು ಕುರಿತು ತಪಸ್ಸು ಮಾಡಿದನು. ಮಹಾರಾಜನ ತಪಸ್ಸಿನಿಂದ ಪ್ರಸನ್ನನಾದ ವಿಷ್ಣುವು ಇಂದ್ರನ ವೇಶ್ಯಾಸ್ತ್ರಿ ರಾಜನ ಮಂಬೆ ಕಾಣಿಸಿಕೊಂಡನು. ತನ್ನ ಸಾವಂತ ರಾಜರಿಂದ ಸುತ್ತುವರಿದ ಮಾಂಧಾತನು ಇಂದ್ರರೂಪಧಾರಿ ವಿಷ್ಣುವನ್ನು ಪರಿಪರಿಯಿಂದ ಪೂಜಿಸಿದನು.

ಕೊನೆಗೆ ತನ್ನ ಸ್ಥಿತಿಯನ್ನು ತೋಡಿಕೊಂಡನು. ಪಾಕಶಾಸನ, ಭಗವಂತನಿಂದ ಕೆಲವು ಸಂಗತಿಗಳನ್ನು ತಿಳಿದುಕೊಳ್ಳುವ ಸದುದ್ದೇಶದಿಂದ ನಾನು ತಪಸ್ಸನ್ನಾಚರಿಸಿದೆವು. ಇನ್ನೂ ಅತನು ಪ್ರತ್ಯಕ್ಷನಾಗಲಿಲ್ಲ. ಆತನನ್ನು ಒಲಿಸಿಕೊಳ್ಳಲು ದೀರ್ಘ ಕಾಲೀನ ತಪಸ್ಸು ಅನಿವಾರ್ಯವೆಂದೆನಿಸುತ್ತದೆ. ಆದರೆ, ರಾಜ್ಯದ ಹಿತದೃಷ್ಟಿಯಿಂದ ನನ್ನ ವನ್ನು ನ ಶಂಕೆಗಳಿಗೆ ತೀರ್ಪು ಸಮಾಧಾನ ದೊರೆಯುವುದು ಅತ್ಯಗತ್ಯವಾಗಿದೆ. ನೀನು ಕೃಪೂರಿಸಿ ಸ್ವರ್ಗಲೋಕದ ಮಹಾರಾಜ ತಾನೆ? ನಿನ್ನ ಅನುಭವವು ಯಾವುದಕ್ಕೂ ಕಡಿಮೆಯಾಗದು. ನನ್ನಂತಹ ಲಕ್ಷೋಪಲಕ್ಷ ರಾಜರು ಈ ಭೂಲೋಕದಲ್ಲಿ ರಾಜ್ಯ ಭಾರ ಹೊತ್ತಿರಿ; ಅದರ ಫಲ ಫಲಗಳನ್ನು ಅನುಭವಿಸಲು ಪರಲೋಕಗತನಾಗಿರುತ್ತಾರೆ. ಇದೇನೂ ನಿನಗೆ ತಿಳಿಯದ ಹಂಗಿಯಲ್ಲ ನೀನೆ ನನಗೆ ರಾಜ್ಯ ಧರ್ಮದ ಬಗ್ಗೆ ಕೆಲವು ವಿಚಾರಗಳನ್ನು ನಿರ್ವಿಕಲ್ಪನಾಗಿ ತಿಳಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಪಸ್ಪ ಮಂಪಿನಲ್ಲಿ ಮೂಡಿಗುವ ಶಂಕೆಗಳಿಗೆ ಕೂಡ್ಯ ಸಮಾಧಾನ ಹೇಳಿ ನನ್ನ ಸ್ಪಷ್ಟ ಅನುಗ್ರಹಿಸಬೇಕೆಂದು ಕೈವಂಗಿ ಮುಂತ್ತೇನೆ.

ನನ್ನ ರಾಜ್ಯದಲ್ಲಿ ಯವನರಿದ್ದಾರೆ; ಕಿರಾತರಿದ್ದಾರೆ ಗಾಂಧಾರರೂ ಚೀನರೂ ನೆಲಸಿದ್ದಾರೆ. ಶಬರ, ಬರ್ಬರ, ಶಕ, ತುಷಾರ, ಕಂಗ, ಪಹ್ಲವ, ಆಂಧ್ರ, ಮದ್ರ ಪಾಂಡ್ರ, ಪುಲಿಂದ, ರಮಠ, ಕಾಂಬೋಜ ಮೊದಲಾದ ಬುಡಕಟ್ಟಿಗೆ ಸೇರಿದ ಪ್ರಜೆಗಳು ವಾಸವಾಗಿದ್ದಾರೆ. ಈ ಅನ್ಯ ಧರ್ಮಾವಲಂಬಿಗಳಲ್ಲದೆ ಬ್ರಾಹ್ಮಣಾದಿ ಆರ್ಯ ಧರ್ಮೀಯರೂ ಇದ್ದಾರೆ. ಆಂದರೆ, ನನ್ನ ರಾಜ್ಯದಲ್ಲಿ ಒಂದು ಧರ್ಮವಲ್ಲ, ಅನೇಕ ಧರ್ಮಾವಲಂಬಿಗಳಿದ್ದಾರೆ. ನಾನು ಯಾವ ಧರ್ಮವನ್ನು ರಕ್ಷಿಸಲಿ? ನನ್ನ ರಾಷ್ಟ್ರ ಧರ್ಮವನ್ನಾಗಿ ಏನನ್ನು ಗೊತ್ತುಪಡಿಸಲಿ? ಎಲ್ಲ ಬಗೆಯ ಪ್ರಜೆಗಳನ್ನು ಹೇಗೆ ಒಂದಾಗಿ ಆಳಲಿ?'

ಮಾಂಧಾತನ ಈ ಪ್ರಶ್ನೆಯನ್ನು ಕೇಳಿದ ಇಂದ್ರನೇ ಹೇಳಿದನು: "ಮಹಾರಾಜ, ಇದರಲ್ಲಿ ಯೋಚಿಸತಕ್ಕ ವಿಷಯವೇನಿದೆ? ಈ ಸಂಬಂಧದಲ್ಲಿ ಋಷಿಗಳು ಸ್ಪಷ್ಟವಾಗಿ ಹೇಳಿದ್ದಾರೆ—

ಯಸ್ಮಿನ್ ದೇಶೇ ಹಿಯೋ ಧರ್ಮಃ
ಸದಾಚಾರ ಸ್ವಸಂಸ್ಥಿತಃ
ತಥೈವ ಪರಪಾಲ್ಯೋಸ್ಯಾ
ಯದಾವಂಶಾಕ್ಷಪಂ ಗತಃ ॥

ಒಂದು ದೇಶವು ವಶಕ್ಕೆ ಬಂದಿತೆಂದರೆ, ಆ ದೇಶದ ಪ್ರಜಾಜನರ ಧಾರ್ಮಿಕ ವಿಚಾರ, ಸದಾಚಾರ ಮತ್ತು ಅವರ ಸಂಸ್ಥೆಗಳನ್ನು ರಕ್ಷಿಸಿಕೊಂಡು ಬರುವುದು ವಿಜಯಶಾಲಿ ರಾಜನ ಪರಮ ಹಾಗೂ ಚರಮ ಕರ್ತವ್ಯವಾಗಿರುತ್ತದೆ."

ಮುಂದೆ ಪರಿದೂ ಇಂದ್ರನೇ ಹೇಳಿದನು: 'ಪ್ರತ್ಯೇಕ ವ್ಯಕ್ತಿಗಳು ಅಭಿರುಚಿ ಭಿನ್ನ ಭಿನ್ನವಾಗಿರುತ್ತದೆ. ಆದುದರಿಂದ ಒಬ್ಬಿಬ್ಬರ ವಿಚಾರ ಧಾರೆಯೂ ಒಂದೊಂದು ದಾರಿಯಲ್ಲಿ ಹರಿಯುತ್ತದೆ.

ಮುಂಡೇ ಮುಂಡೇ ಮತಿರ್ಭಿನ್ನಾ
ಸರ್ಕಟೇ ತರ್ಕ ಪರಂತಪ ॥
ಸ್ವಭಿಪ್ರಾಯಸ್ಯ ಕುರು ಪೂಜಾಂ
ಸ್ವೇಷ್ಟಂ ವೈ ಪೂಜಯಂತಂ ತೇ ॥

ಆದುದರಿಂದ ನೀನು ನಿನಗೆ ಬೇಕಾದ ಆರಾಧ್ಯ ದೇವರನ್ನು ಪೂಜಿಸು. ಪ್ರಜೆಗಳಿಗೂ ಅವರವರ ಇಷ್ಟದಂತೆ ಅವರವರು ಮೆಚ್ಚುವ ದೇವರನ್ನು ಆರಾಧಿಸಲು ಅವಕಾಶವನ್ನು ಕಲ್ಪಿಸು. ತಮ್ಮತಮ್ಮ ಧರ್ಮಾಚರಣೆ ಮಾಡಲು ಪ್ರಜೆಗಳಿಗೆ ಸಂಪೂರ್ಣ ಸ್ವಾತಂತ್ರ್ಯವಿರಲಿ. ಬೇರೆಯವರ ಅಥವಾ ಬೇರೆ ಸಮುದಾಯದವರ ಧಾರ್ಮಿಕ ಸ್ವಾತಂತ್ರ್ಯಕ್ಕೆ ಭಾದೆ ತರುವ ವರೆಗೆ ಎಲ್ಲರೂ ಈ ಧಾರ್ಮಿಕ ಸ್ವಾತಂತ್ರ್ಯವನ್ನು ಅನುಭವಿಸಲಿ ತಾತ್ಪರ್ಯ. ಸೌವ್ಯವಸ್ಥೆ ಮತ್ತು ಶಾಂತಿಯು ರಾಜ್ಯದಲ್ಲಿ ನೆಲಸಿ ಪುದಕ್ಕಾಗಿ ಪ್ರಜೆಗಳೆಲ್ಲರೂ ಅಹಿಂಸೆ, ಸತ್ಯ, ಅಸ್ತೇಯ, ಶೌಚ, ಇಂದ್ರಿಯ ನಿಗ್ರಹ, ದಾನ, ದಯೆ, ಮತ್ತು ಶಾಂತಿಗಳೆಂಬ ಸಾಧಾರಣ ಧರ್ಮಗಳನ್ನು ಅವಶ್ಯವಾಗಿ ಪಾಲಿಸತಕ್ಕ ಪರಿಯಲ್ಲಿ. ಜನರು ಆತ್ಮೋತ್ಕರ್ಷ, ಲೋಕಹಿತ ಮತ್ತು ಪರಮಾರ್ಥಗಳಿಗಾಗಿ ಧರ್ಮವನ್ನು ಆಚರಿಸುತ್ತಿದ್ದರು. ಸ್ವಾರ್ಥ, ಪೈಶುನ್ಯ, ದಂಭ ಅಥವಾ ಫಲಾಪೇಕ್ಷೆಗಳಿಗೆ ಧರ್ಮವು ಎಂದೂ ಅವಕಾಶ ಕಲ್ಪಿಸಿ ಕೊಡಲಿಲ್ಲ. ಅವರವರ ಕಟ್ಟುಪಾಡುಗಳು ಅವರವರ ವಟ್ಟಿಗೆ ಸೀಮಿತವಾಗಿದ್ದುವು. ಪರರ ಧರ್ಮವನ್ನೂ ಅವರ ಅಭಿಪ್ರಾಯವನ್ನೂ ಎಲ್ಲರೂ ಮನ್ನಿಸುತ್ತಿದ್ದರು.

ಮಾಂಧಾತನ ರಾಜ್ಯದಲ್ಲಿ ಪರಸ್ಪರ ಪ್ರೇಮವೆ ಧರ್ಮವು ಮಹಾದ್ವಾರವಾಯಿತು. ಪ್ರಜೆಗಳ ಸುಖಕ್ಕೆ ಆಕರವಾಯಿತು. ಧಾರ್ಮಿಕ ಸ್ವಾತಂತ್ರ್ಯವನ್ನು ಎತ್ತಿಹಿಡಿಸು, ಅದನ್ನು ನಿಷ್ಠೆಯಿಂದ ವ್ಯವಹಾರಕ್ಕೆ ತಂದ ಮಹಾರಾಜ ಮಾಂಧಾತನು ಕೊನೆಗೆ ಸ್ವರ್ಗವಡೆದನು.

(ಅಂಗಿರಾ ಪುರಾಣ—ಅಧ್ಯಾಯ ೧೦)

—ಗೋ.

ಬಡಗಿಯ ಅಪೂರ್ವ ಸಂಶೋಧನೆ

ಗುಂಡೆರಾಯಂಗನ ಜೀವನದಲ್ಲಿ ಅದೊಂದು ಅಪೂರ್ವ ದಿನ. ಎಲ್ಲ ಸಾಮಾನ್ಯ ಬಡಗಿಯರಂತೆ ಬಾಗಿಲು ಮತ್ತು ಕಿಟಕಿಗಳನ್ನು ತಯಾರಿಸುತ್ತಿದ್ದ ಈತ ಒಮ್ಮೆ ಯಂತ್ರವನ್ನು ತಯಾರಿಸುವುದರಲ್ಲಿ ಯಶಸ್ವಿಯಾಗಿದ್ದಾನೆ. ಇದೇನೂ ಅವನಿಗೆ ಸಾಮಾನ್ಯ ಕೆಲಸವಾಗಿರಲಿಲ್ಲ. ಈ ಒಕ್ಕು ಯಂತ್ರಗಳು ತಯಾರಿಸಲು ಅವನಿಗೆ ಬಹಳ ದಿನಗಳ ಬೇಕಾದವು. ಈ ಯತ್ನದಲ್ಲಿ ಹಣ ದಾನಿ ಸಂದರಸಿಂಗ ಮೊದಲಿನ ಸ್ವಭಾವದಲ್ಲಿ ಯಾವ ಬದಲಾವಣೆಯೂ ಕಂಡು ಬಂದಿಲ್ಲ. ಅವನು ಎಂದಿನಂತೆ ಈಡಲೂ ಸಂತಾ ಸಂಗಳಜೀವಿ. ಶಿಷ್ಟಣ ಹಾಗೂ ತರಬೇತಿ ಇಲ್ಲದೆ ಹೋದರೂ ಅವನು ತನ್ನ ಕೌಶಲ್ಯ ಹಾಗೂ ಸಾಹಸದಿಂದಾಗಿ ಇಂದು ಒಬ್ಬ ಶ್ರೀಮಂತನಾದ ಸನ್ನಿ ಗೈಗಾರಿ ಕೋದ್ಯೋಗಿ ಯೆನಿಸಿದ್ದಾನೆ.

ಸಂದರಸಿಂಗ್ ಪಂಜಾಬಿನ ಬೇಸಾಯಗಾರರು ದಪಗಳ ಮೇಲಿನಿಂದಾಗಿ ಜೋಳದ ದಂಟು ಮುಂತಾದವನ್ನು ಸಣ್ಣಸಣ್ಣದಾಗಿ ಕತ್ತರಿಸಲು ಪದನ್ನು ಕಂಡಿದ್ದ. ಇದು ತುಂಬ ಶ್ರಮ ಹಾಗೂ ಹೆಚ್ಚು ಕಾಲ ತೆಗೆದುಕೊಳ್ಳುವುದನ್ನು ಜೆನ್ನಾಗಿ ಮನಗಂಡಿಕೊಂಡ. ಕೆಲವು ಹೋರಂಗಗಳಿಗೆ ಸಾಕಾಗುವಷ್ಟು ಮೇವನ್ನು ಕತ್ತರಿಸಲು ಅನೇಕ ಗಂಟೆಗಳು ಪರಿಶ್ರಮಿಸಬೇಕು. ಈ ದಂಟು ಕತ್ತರಿಸುವ ಕ್ರಮವನ್ನು ಯಂತ್ರಗಳ ಮೂಲಕ ಕೈಗೆಂಡರೆ ಶ್ರಮ ಕಡಿಮೆಯಾಗುವುದನ್ನು ಸಿಂಗ್ ತಿಳಿದ. ಇದಕ್ಕಾಗಿ ಪ್ರಯತ್ನಗಳನ್ನು ಕೈಗೊಂಡ. ಒಂದು ಬಗೆಯ ಯಂತ್ರವನ್ನು ತಯಾರಿಸಿ ತನಗೆ ಬೇಕಾದ ಇಂಜಿನಿಯರಿಂಗ್ ಬಿಡಿಗೆ ಪರಿಶೀಲನೆಗಾಗಿ ತೋರಿಸಿದ ಆ ಯಂತ್ರ ಅಷ್ಟೇನೂ ಜೆನ್ನಾಗಿರಲಿಲ್ಲ. ಆದರೆ ಇಂಜಿನಿಯರ್ ಸಿಂಗ್‌ನಿಗೆ ಉತ್ತೇಜನ ಕೊಡಿದರು.

ಒಂದಾದ ಮೇಲೆ ಒಂದರಂತೆ ಮಾದರಿಗಳನ್ನು ತಯಾರಿಸಿ ತಂದ. ಸಿಂಗನ ಸಹನೆ ಏಕರೀತಿಯಾಗಿತ್ತು. ಹೊಸ ಹೊಸ ಬಗೆಯ ಯಂತ್ರ ಕಂಡು ಹಿಡಿಯುವ ಹಾದಿಯಲ್ಲಿ ನಡೆದ ಸಂಶೋಧನೆಗಾಗಿ ಬೇರಾಗಿ ವಸ್ತ್ರ ಕ್ಷಣವೂ ಆತನಲ್ಲಿರಲಿಲ್ಲ. ಹೊಸ ಬಗೆಯ ಯಂತ್ರ ಕಂಡು ಹಿಡಿಯುವ ಪ್ರಯತ್ನದಲ್ಲಿ ತನ್ನ ಜೀವನ ಕ್ಕಾಗಿ ಸುರಾಡಿಸುವುದು ಕಷ್ಟವಾಯಿತು.

ತನ್ನ ವೆಚ್ಚನ ಇಂಜಿನಿಯರ್ ಹಾಗೂ ಅಧಿಕಾರಿಯೊಬ್ಬರ ಸಹಾಯದಿಂದಾಗಿ ಈ ಪ್ರಯತ್ನವನ್ನು ಮುಂದುವರಿಸುವ ಸಾಲದ ನೆರವು ದೊರೆಯಿತು. ಹೊಸ ಜೈತನ್ಯ ಅವನಲ್ಲಿ ಮೂಡಿತು. ಹೊಸ ಯಂತ್ರಕ್ಕೆ ಒಂದು ಸ್ವರೂಪ ಕೊಡುವುದರಲ್ಲಿ ಯಶಸ್ವಿಗೂದ. ಈ ಹೊಸ ಒಕ್ಕು ಯಂತ್ರವನ್ನು ತಯಾರಿಸುವ ಮಟ್ಟಿಗೆ ಅವರ ಮಾದರಿಗಳನ್ನು ಪೂರಲಾಗುತ್ತದೆ. ಇದೊಂದು ಸುಳವಾದ ಪೆಟ್ಟಿಗೆ ರೂಪದಲ್ಲಿರುವ ಯಂತ್ರ. ಗೋಧಿಸಂಟುಗಳನ್ನು ಈಗ ವಿದ್ಯುಜ್ಜಾಲಿತ ಯಂತ್ರದಿಂದ ಕಟ್ಟರೆ ಧಾನ್ಯವೊಂದು, ಕಡೆ ಬರುವುದಲ್ಲದೆ, ದಂಟುಗಳನ್ನು ಜೆನ್ನಾಗಿ ಕತ್ತರಿಸಲ್ಪಡುವುದು. ಧಾನ್ಯವನ್ನು ಬೇರ್ಪಡಿಸುವುದು ಮತ್ತು ದನಗಳಿಗೆ ಮೇವನ್ನು ತಯಾರಿಸುವುದು ಈ ಎರಡು ಕೆಲಸಗಳನ್ನು ಈ ಯಂತ್ರವೇ ಮಾಡುತ್ತದೆ.

ಸದ್ಯದಲ್ಲಿ ಸಂದರಸಿಂಗ್ 50 ನೌಕರರನ್ನು ನಿರ್ವಹಿಸುವ ಕಾರ್ಖಾನೆಯ ಮಾಲೀಕನಾಗಿದ್ದಾನೆ.

Gram: VISHWA Tel: 29111

When at Bangalore

Stay at

HOTEL NATARAJA

Restaurant, Boarding & Lodging,

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಫೋನ್ : 526

ಸಂಪುಟ ೪೯
ಸಂಚಿಕೆ ೪೪
VOL. 49
No. 44

ಸ್ಥಾಪನೆ: 1921

ಸ್ಥಾಪಕರು:
ದಿ| ಎ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೯—೨—೧೯೭೦

ವಾರ್ಷಿಕ ಚಂದಾ ರೂ. 10/-

Advt. Rate Rs. 3/- per colm. cm.

ಸ್ವಾವಲಂಬಿ ಉದ್ಯೋಗದತ್ತ

ದೇಶದ ಜನತೆಯು, ಜನತೆಯನ್ನು ಆಳುವವರ ತಲೆತಿನ್ನುವ ಸಮಸ್ಯೆ ಏರುದ್ಯೋಗ. ಪೂರ್ಣಾವಧಿಯ ಏರುದ್ಯೋಗಿಗಳು, ಅಪೂರ್ಣಾವಧಿಯ ನಿರುದ್ಯೋಗಿಗಳೆಂಬ ಭೇದ ಕೆಲವೆಡೆ ಇದ್ದರೂ ನಿರುದ್ಯೋಗದ ನಗರಗಳಲ್ಲಿಯೂ ಹಳ್ಳಿಗಳಲ್ಲಿಯೂ ಏಕಸಮವಾಗಿ ವ್ಯಾಪಿಸಿಕೊಂಡಿದೆ. ದಿನವಿಡಿಂದ ದಿನಕ್ಕೆ ಆದು ವೃದ್ಧಿಗೊಳ್ಳುತ್ತಲೇ ಹೋಗುತ್ತಿದೆ. ದೇಶದಲ್ಲಿ ವ್ಯಾಪ್ತವಾಗಿ ಬೆಳೆಯುತ್ತಿರುವ ಆತಿಶಿಕ್ಷಿತ-ಪುಂಡಾಟಿಕೆಗಳಿಗೆ ಸಶಿಕ್ಷಿತ ನಿರುದ್ಯೋಗಿಗಳು ಕಾರಣರೆಂದು ಬೊಟ್ಟುಮಾಡಿ ತೋರಿಸುವವರಿದ್ದಾರೆ. ಹಳ್ಳಿಗಳಲ್ಲಿಯೂ ಕಲುಷಿತ ವಾತಾವರಣ ಏರುದ್ಯೋಗಿಗಳಿಂದಲೇ ನಿರ್ವಹಣವಾಗುತ್ತವೆ. ಕೈತನ ಮಶಿನಿಗೂ ನಾವು ನಗರದ ಶಾಕ್ಷಿತೀಕ್ಷುಗಳನ್ನು ಕಲಿಸಿಕೊಟ್ಟಿದ್ದೇವೆ; ಕೆಸರು ತುಳಿಯುವುದು ಹೇಸಿಕೆ ಕೆಲಸವೆಂದು ಹೇಳಿಕೊಟ್ಟಿದ್ದೇವೆ. ಹಾಗಾಗಿ ಆತ ತಂದೆಗೂ ದೇಶಕ್ಕೂ ಸವ.ಸ್ಯೆಯಾಗಿಯೇ ಬೆಳೆದು ಬಂದಿದ್ದಾನೆ. ದುಡಿಯುವ ಮಗನೇ ಅರ್ಥ ಹೊಟ್ಟೆ ಉಣ್ಣುವಾಕ, ದುಡಿಯದವನನ್ನು ಸೇರಿಕೊಂಡು ಗಂಜಿ ಫೀರು ನೂತ್ರ ಕುಡಿಯುವಂತಾಗಿದೆ. ಸ್ವಾತಂತ್ರ್ಯ ದೊರಕಿ ಕಾಲು ಶತಮಾನ ಸಲ್ಲುತ್ತ ಬಂದರೂ ಏರುದ್ಯೋಗ ನಿವಾರಣೆಯ ಹಲವು ಪ್ರಯತ್ನಗಳು ನಡೆಯುತ್ತ ಬಂದರೂ ನಾವು ಈ ದಿನೆಯಲ್ಲಿ ಮುಂದುವರಿಯುವ ಬದಲು ಹಿಂದೆ ಸರಿಯುತಿದ್ದೇವೆ. ಇದಕ್ಕೆ ಹೆಚ್ಚುತ್ತಿರುವ ಜನಸಂಖ್ಯೆಯೂ ಒಂದು ಕಾರಣ.

ಆದರೂ ನಾವು ಈ ಬಗ್ಗೆ ವಹಿಸಿದ ಕಾಳಜಿ ಬಹಳ ಅತ್ಯಲ್ಪ. ಅಷ್ಟರಸ್ಥರಿಗೆಲ್ಲ ಕಾರಖಾನೆಗಳ ಕೆಲಸ ಕೊಡಲು ಬ್ರಿಟಿಷ ಸಾರ್ವಭೌಮರಿಗೇ ಸಾಧ್ಯವಾಗಿರಲಿಲ್ಲ. ಎಲ್ಲ ಪ್ರಜೆಗಳನ್ನೂ ಸಾಕ್ಷರರನ್ನಾಗಿಸಲು ಉಚಿತ ಶಿಕ್ಷಣ ಯೋಜನೆಯನ್ನು ಜಾರಿಗೆ ತಂದ ಪ್ರಜಾಸತ್ತಾಗದ ಫಲಿತದ ವಿಷಯವೇ. ದೇಶದ ಸಂಪತ್ತನ್ನು ದ್ವಿಗುಣಿತ, ತ್ರಿಗುಣಿತಗೊಳಿಸುವ ರೀತಿಯ ಉದ್ಯೋಗವಿಂದು ಬೇಕು. ಇದಕ್ಕೆ ಉತ್ಪನ್ನವೊಂದೇ ಮಾರ್ಗ. ಬೃಹತ್ ಉದ್ಯಮಗಳಿಗೆ ಬಂಡವಾಳವು ಬಹಳ ಬೇಕಾಗುವುದರಿಂದ ಸಣ್ಣ ಪ್ರಮಾಣದ ಕೈಗಾರಿಕೆಗಳು ನಮಗೆ ಏರುದ್ಯೋಗ ಶಾಶ್ವತವಾಗುತ್ತವೆ. ಕೇಂದ್ರ ಸರಕಾರದಲ್ಲಿ ಮಂತ್ರಿಯಾಗಿದ್ದ ಶ್ರೀ ಮನುಭಾಯಿ ಶಹಾ ಈ ಬಗ್ಗೆ ದೇಶಕ್ಕೆ ಕರೆ ನೀಡಿದ್ದಾರೆ. ದೇಶದ ಆರ್ಥಿಕ ಪರಿಸ್ಥಿತಿ ಇದೇ ರೀತಿ ಮುಂದುವರಿದರೆ, ಇನ್ನು ಕೆಲವೇ ವರ್ಷಗಳಲ್ಲಿ ತಲೆಗೆ ಗಾಗುವುದು ಖಂಡಿತ. ಗ್ರಾಮೀಣ ಪ್ರದೇಶಗಳಲ್ಲಿ ಜನರಿಗೆ ಉದ್ಯೋಗ ಕಲ್ಪಿಸಿಕೊಡುವ ಸಲುವಾಗಿ ವಿಶೇಷ ಯೋಜನೆಯೊಂದನ್ನು ಕೈಕೊಳ್ಳಬೇಕು. ಇದರಂತೆ ದೇಶವ್ಯಾಪಿಯಾಗಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ದೊಡ್ಡ ಕೈಗಾರಿಕೆಗಳು ಸಣ್ಣ ಘಟಕಗಳನ್ನು ಬದುಕಲು ಬಿಡಬೇಕು. ಶ್ರೀ ಶಹಾರು ಹೇಳುವಂತೆ ಈ ಬೃಹತ್ ಯೋಜನೆಗೆ ಒಂದು ಸಾವಿರ ಕೋಟಿ ರೂಪಾಯಿಗಳ ಬಂಡವಾಳ ಬೇಕಾಗಬಹುದು. ಈ ಬಂಡವಳದಿಂದ ರಾಷ್ಟ್ರೀಯ ಉದ್ಯೋಗ ವಂಡಳಿಯೊಂದನ್ನು ಸ್ಥಾಪಿಸಬೇಕು. ಇಂದು ದೊಡ್ಡ ಕೈಗಾರಿಕೆಗಳಲ್ಲಿ ಹೆಚ್ಚಿನ ಜನರಿಗೆ ಉದ್ಯೋಗ ದೊರೆಯುವುದು ಸಾಧ್ಯವಿಲ್ಲ. ಹಕ್ಕಾರುಪೊಗಾರು ಜನರು ಮಾಡುವ ಕೆಲಸವನ್ನು ಒಂದೇ ಒಂದು ಯಂತ್ರ ಮಾಡುವ ಕಾಲವಿದು. ಆದುದರಿಂದ ಸ್ವಾವಲಂಬನೆಯತ್ತ ಸಾಗಿಸುವ ಸಣ್ಣ ಸಣ್ಣ ಕೈಗಾರಿಕೆಗಳು ಆರಂಭವಾಗಿ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ರೂಪ ಗೊಳ್ಳುವಂತಾಗಬೇಕು. ನಿರುದ್ಯೋಗಿಗಳಿಗೆ ಬೇಗನೇ ಏನಾನೊಂದು ಉದ್ಯೋಗ ತೋರಿಸಿಕೊಡದೆ ಹೋದರೆ, ಅವರು ದೇಶಕ್ಕೆ ಭಾರವಾಗುವುದ ಮಾತ್ರವಲ್ಲ ಅವರಿಂದಾಗಿ ದೇಶದ ಆರ್ಥಿಕ ಮತ್ತು ರಾಜ್ಯಕೀಯ ಸ್ವರೂಪಗಳು ಬದಲಾಗಿ ಹೋಗಬಹುದು. ಈ ಒಂದು ಸಾವಿರ ಕೋಟಿ ರೂಪಾಯಿಗಳ ಬಂಡವಳವನ್ನು ಕೂಡಿಸಲೂ ಅವರು ಸಲಹೆ ನೀಡಿದ್ದಾರೆ. ಎಲ್ಲ ಪ್ರಕಾರದ ತೆರಿಗೆಯ ಮೇಲೆ ರೂಪಾಯಿಗೆ ಆರ್ಧ ಪೈಸೆಯಷ್ಟ ಅಧಿಭಾರ ವಿಧಿಸಬಹುದು.

ಕೇಂದ್ರ—ರಾಜ್ಯ ಸರಕಾರಗಳು ಏರುದ್ಯೋಗ ಸಮಸ್ಯೆಯತ್ತ ತೀವ್ರ ಗಮನ ನೀಡುತ್ತ ಬಂದಿದ್ದರೂ ಅದು ಭೀಮಪ ಕೊಟ್ಟಿಗೆ ಕಾಸಿನ ಮಜ್ಜಿಗೆಯಾಗಿದೆ. ಪರಾವಲಂಬಣ ಮನೋವೃತ್ತಿಯನ್ನೇ ಬೆಳೆಸುವ ನವ್ಯ ಶಿಕ್ಷಣ ಪ್ರಣಾಳಿಯು ಬದಲಾಗಿ ಸ್ವತಂತ್ರ—ಸ್ವಾವಲಂಬೀ ವಾತಾವೃತ್ತಿ ಬೆಳೆಯುವಂತಾಗಬೇಕು. ಬ್ಯಾಂಕುಗಳೂ ನಿರುದ್ಯೋಗಿಗಳಿಗೆ ಸ್ವತಂತ್ರ ಉದ್ಯೋಗ ಅವಲಂಬಿಸಲು ಸಲಹೆಯನ್ನೂ ಆರ್ಥಿಕ ಸಹಾಯವನ್ನೂ ನೀಡಲು ಈಗೀಗ ಮುಂದೆ ಬಂದಿವೆ. ಆದರೆ, ಬ್ಯಾಂಕುಗಳಿಗೆ ಬಲವಾದ ಭದ್ರತೆ ಬೇಕಾಗುತ್ತದೆ; ಏರುದ್ಯೋಗಿಯು ಇಂತಹ ಭದ್ರತೆ ನೀಡಲು ಅಸಮರ್ಥನಾಗಬಹುದು. ಸರಕಾರ ವಲಯದಿಂದ ಇಂತಹ ಪ್ರಯತ್ನ ಪಡೆಯುವಂತಾದರೆ ಅದು ಸ್ವಾಗತಾರ್ಹ. ನಿರುದ್ಯೋಗಿಗೆ ಸ್ವಾವಲಂಬಿ ಜೀವನ ನಡೆಸಲು ನೀಡುವ ಈ ಸಹಾಯವು ಅತನ ಮತ್ತು ದೇಶದ ಪ್ರಗತಿಗೆ ವಿಜಯಸ್ಯೆ ಸಹಕಾರಿಯೂಗುವುದು ಖಂಡಿತ. ಹರಿಜನ—ಗಿರಿಜನರನ್ನು ಉದ್ಧರಿಸುವ ಯೋಜನೆಯಂತೆಯೇ ಈ ಯೋಜನೆಯನ್ನೂ ಕೈಕೊಂಡರೆ, ಮೊದಲಿನದ ಕ್ಕಿಂತ ಎರಡನೆಯದರಲ್ಲಿ ಯಶಸ್ಸು ಬೇಗನೇ ಸಿಗಬಹುದು. ಶ್ರೀ ಶಹಾರ ಸಲಹೆಯನ್ನು ಕೇಂದ್ರ ಸರಕಾರ ಪರಿಶೀಲಿಸಿದ್ದರೆ, ರಾಜ್ಯಸರಕಾರಗಳೂ ಇದರ ಕಡೆ ಹಿಂದಬೇಕು.

ಜಪಾನಿನ ಅನುಭವ

ಕರ್ನಾಟಕದ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಜಪಾನಿನ ಪ್ರವಾಸ ಮುಗಿಸಿ ಬಂದರು. ಸಾಮಾನ್ಯವಾಗಿ ಅಧಿಕಾರಿಗಳ ಪ್ರವಾಸ ಆತಿಥ್ಯ ಸ್ವೀಕಾರದಲ್ಲೇ ಪರ್ಯವಸಾನಗೊಳ್ಳುವುದು. ನಡೆದು ಬಂದ ಮಾರ್ಗ. ಆದರೆ, ಶ್ರೀ ಪಾಟೀಲರ ಪ್ರವಾಸ ಇದಕ್ಕೆ ಭಿನ್ನವಾಯಿತು. ದ್ವಿತೀಯ ಲೋಕ ಸಮರದ ನೇಲೆ ಸರ್ವಧ್ವಂಸವಾಗಿದ್ದ ಜಪಾನವು ನಿರಂತರ ಶ್ರಮ, ಆದನ್ನು ಉತ್ಸಾಹ, ಸತತ ಪ್ರಯತ್ನಗಳಿಂದ ಮತ್ತೆ ಜೀವಕಳಿ ಕೊಂಡಿದ್ದ ವಿಶ್ವಕ್ಕೇ ಮಾದರಿ. ಆದನ್ನು ಸರಿಯಾಗಿ ಅರ್ಥಮಾಡಿ ಕೊಂಡು ಬಂದ ಶ್ರೀ ಪಾಟೀಲರು ಅಲ್ಲಿನಂತೆಯೇ ಗಣಿ—ಕೈಗಾರಿಕೆ ಉದ್ಯಮ ಬೆಳೆಸಲು ರಾಜ್ಯಕ್ಕೆ ಸಹಾಯ-ಸಹಕಾರ ಪಡೆಯುವ ಭರವಸೆ ತಳೆದು ಬಂದಿದ್ದಾರೆ.

ಶ್ರೀ ಪಾಟೀಲರು ರಾಜ್ಯದ ಬಗ್ಗೆ ತೋಂಬ ಕಾಳಜಿ ವಹಿಸಿ ತ್ತಿರುವವರು. ಹಗಲಿರುಳು ರಾಜ್ಯದ ಏಳಿಗೆಯನ್ನೇ ಚಿಂತಿಸುತ್ತಿರುವವರು. ಇಂತಹರ ವ್ಯಕ್ತಿತ್ವವನ್ನು ಗಾಳಿಗೆ ತೂರುವ ಪ್ರಯತ್ನವೂ ಅಲ್ಲಲ್ಲಿ ನಡೆಯುತ್ತಿದೆ. ಆವರು ಇಂಡಿಕೇಟ್ ಕಾಂಗ್ರೆಸ್ಸಿಗೆ ಸೇರುವರೆಂಬ ಅಪಪ್ರಚಾರವೂ ನಡೆದಿದೆ ಜುನಾವಣೆಗಳು ಹತ್ತಿರವಾಗುತ್ತಿರ ವಂತೆ ರಾಜ್ಯಕೀಯ ಊಹಾಪೋಹಗಳೂ ಅಪಪ್ರಚಾರಗಳೂ ಲಂಡುಲಗಾಮಿಲ್ಲದೆ ನಡೆಯುತ್ತಿರುತ್ತವೆ. ಇಂತಹ ರಾಜ್ಯಕೀಯ ದುರುದ್ದೇಶಪೂರಿತ ಹೇಳಿಕೆಗಳಿಂದ ಶ್ರೀ ಪಾಟೀಲರು ಮಹನೀಯರೆದ ರಾಜ್ಯಕ್ಕೆ ಸರ್ವಾಂಗೀಣ ಉನ್ನತಿಗಾಗಿ ತಮ್ಮ ಜೀವನವನ್ನು ಮುಡಿಪಿಟ್ಟಿದ್ದಾರೆ; ರಾಜ್ಯದ ಆರ್ಥಿಕ ಗತಿಗೆ ಹೊಸ ದಾರಿಯೊಂದನ್ನವರು ತೋರಿಸಲಿದ್ದಾರೆ.

ಎಲ್ಲೈಸಿಯ ವಿಕೇಂದ್ರೀಕರಣ ಯೋಜನೆ

ಜೀವ ವಿಮಾ ಕಾರ್ಪೋರೇಶನ್ನಿನ ಮಂಗಳೂರು ಶಾಖೆಯ ಅಧಿವೃದ್ಧಿ ಅಧಿಕಾರಿಗಳ ಸಭೆಯು ಇತ್ತೀಚೆಗೆ ನಡೆಯಿತು ಇದರಲ್ಲಿ ಕಾರ್ಪೋರೇಶನ್ನಿನ ಚೇಯರ್‌ಮೆನ್ ಶ್ರೀ ಟಿ. ಎ. ಪೈಯನವರೂ ಭಾಗವಹಿಸಿದ್ದರು.

ಎಲ್. ಐ. ಸಿ ಯು ಅಧಿಕಾರ ವಿಕೇಂದ್ರೀಕರಣ ಯೋಜನೆಯೊಂದನ್ನು ಕಯಗೊಳಿಸಿದ್ದು ಅದರಂತೆ ಪ್ರತಿ ವಿಭಾಗವೂ ಒಂದೊಂದು ಸ್ವತಂತ್ರ ಮುಖ್ಯ ಕಛೇರಿಯೂಗುತ್ತದೆ. ಅಲ್ಲಿನ ಅಧಿಕಾರಿಯು ಸ್ವತಂತ್ರವಾಗಿ ವಿಭಾಗದ ಕೆಲಸ ಕೊಳ್ಳುತ್ತಾನೆ. ಎಂದು ಈ ಯೋಜನೆಯ ಸಂಯೋಜಕತ್ವವನ್ನು ಶ್ರೀ ಪೈ ತಿಳಿಸಿದರು.

ದೇಶದಲ್ಲಿ ಇಲ ಕೋಟಿ ಜನರಿದ್ದರೂ ಒಂದು ಕೋಟಿ ವಿಮಾದಾರರಿಲ್ಲದಿರುವುದು ಸತ್ಯವನ್ನವರು ಶ್ಯಾಮಪಡಿಸಿ, ಕೈಲ್ಲಮುಗಳ ಏಜೆಂಟರುಗಳಲ್ಲಿ ಅನಪೇಕ್ಷಿತ ವಿಶ್ವಾಸವಿರುವುದೆಂಬ ಭೀತಿಯನ್ನು ದೂರಮಾಡಿದರೆ, ಸೇವಾಸ್ಪೃಹಿ ಪ್ರಗತಿ ಆರ್ಥಿಕಾಭಿವೃದ್ಧಿಯಾಗುವುದೆಂದವರು ಭರವಸೆ ವ್ಯಕ್ತಪಡಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬ್ಯಾಂಕಿಂಗ್ ಆಸಕ್ತಿಯಂತೆಯೇ ಜೀವವಿಮೆಯಲ್ಲೂ ಆಸಕ್ತಿ ತುಂಬಿರುವ ಬಗ್ಗೆ ಅವರು ಸಂತೋಷಪಟ್ಟರು.

ಕೈಲ್ಲಮುಗಳ ಪ್ರಾಮಾಣಿಕತೆಯಲ್ಲಿ ತ್ವರೆ, ಸಾಲಿನಿ ದಾರರಿಗೆ ಸಮುಚಿತ ಸೇವೆ, ಏಜೆಂಟರಿಗೆ ಆಕರ್ಷಕ ಪೊರೆಯುವ ಬದಲಾವಣೆಯನ್ನವರು ಜಯಸಿದರು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. 296/1969

K. ಜಂಪಯ್ಯ ಪಡಿವಾಳ —ವಾದಿ
ಶ್ರೀಮತಿ ಸಪಾ —ಪ್ರತಿವಾದಿರು

3ನೇ ಪ್ರತಿವಾದಿ_ಶಂರಪಾ, w/o ಜಯಕರ ಪೂಂಜ

4ನೇ ಪ್ರತಿವಾದಿ ಅನಂತಪದ್ಮನಾಭ ರಿವೇ ಪ್ರತಿವಾದಿ—ಹೆಣ್ಣು ಮಗು —ಮೈನರು by ಗಾರ್ಡಿಯನಳು

ಕಾಯ್ದು 3ನೇ ಪ್ರತಿವಾದಿಗು ಕಂಡಿಂದ ನೇ ನೇ ನೀಡಿನಿದ ಪ್ರತಿವಾದಿರು ಪುತ್ತೂರು ತಾಲ್ಲೂಕು ಬಂಟ್ವಾಳ ಗ್ರಾಮದ ಮಾರ್ಪಾಳ ಬೀಡು ಎಂಬಲ್ಲಿರುವವರಿಗೆ—Post Kadaba

ತಾ. 29_7_1968ರಲ್ಲು ಪಾಪರ್ಣಿಗೆ 1ನೇ ಮತ್ತು 2ನೇ ಪ್ರತಿವಾದಿರು ಬರೆಕೊಟ್ಟ ದಿ. ಪ್ರೋನೋಟಿನ ಅಸ್ಸಲು ಬಡ್ಡಿ ವಗೈರೆಕೇಳಿ ಪಿಟ್ಟು ವಗೈರೆರ ಮೇಲೆ ವಾದಿಯು ದಾಕ್ಕು ಮೂಡಿದ ದಾವೆಯು ನಮ್ಮ ಹಾಜರಾತಿ ಬಗ್ಗೆ ತಾ. 17—7—70ಕ್ಕೆ ಇಟ್ಟರೆಂಟ್ಟಾರೆ. ಆದ್ದರಿಂದ ಆ ಬಾಬ್ತು ನಿಮ್ಮ ಆಕ್ಷೇಪವಿದ್ದಲ್ಲಿ ಇಲ್ಲಿ ಸದ್ರಿ ತಾರೀಕಿಗೆ ವೇಲ್ಲಾಪಿಸಿದ ಕೋರ್ಟಿನ ಮುಂದೆ ಬೆಳಿಗೆ 10 ಘಂಟೆಗೆ ಖುದ್ದಾಗಲೀ ವಕೀಲರ ಮುಖಾಂತ್ಯವಾಗಲೀ ಹಾಜ್ರಾಗಿ ಉತ್ತರಿಸಬೇಕಳ್ದು. ಇಪಕ್ಕೆ ತಪ್ಪಿದರೆ ಪಿಮ್ಮ ಉಜರು ನಿಮ್ಮಾ ಸೆಲ್ಲೀ ದಾವೆಯು ತೀರ್ಮಾನವಾದೀತು. ತಿಳಿದಿರಲಿ.

(By order)
Sd. M.J. Padiwala
ವಾದಿ ಕಡೆ ವಕೀಲ

ಕಾರ್ಕಳ, ತಾ. 1.7.1970

ಸಂಘಟನೆಗೆ ಆಗ್ರಸ್ಥಾನ ಬೇಕು

ಪಂಜಾಬದಲ್ಲಿನ ಅಕಾಲಿ ದಳಕ್ಕೆ ಬೆಂಬಲವನ್ನು ಜನಸಂಘ ಘೋಷಿಸಿದ್ದುದರಿಂದ ಶ್ರೀ ಬಾದಲ್ಲರ ಅಧಿಕಾರಕ್ಕೆ ಬಾದಲ್ ಕವಿಯತೊಡಗಿದೆ. ಸಮ್ಮಿಶ್ರ ವಿಧಾನ ಸಭೆಯನ್ನು ರಚಿಸುವ ಅಗತ್ಯವಿಲ್ಲವಾದರೂ ಬಹುಮತಕ್ಕಾಗಿ ಅಕಾಲಿಗಳು ಇನ್ನಾರನ್ನಾದರೂ ಹೊಂದಿಕೊಂಡಿರಲೇ ಬೇಕು. ಮೂಜಿ ಮುಖ್ಯಮಂತ್ರಿ ಶ್ರೀ ಗುರ್ನಾಮ್ ಸಿಂಗರು ಇಂದಿರೇಟ್ ಮಂತ್ರಿರ ಸಹಾಯದಿಂದ ಸರಕಾರ ರಚಿಸುವ ಸಾಧ್ಯತೆಯ ಬಗ್ಗೆ ವಿಚಾರ ಫಡಿಸಿದರು. ಜನ ಸಂಘದ ಬೆಂಬಲವನ್ನು ಕಳ್ಕಿಸಿಕೊಳ್ಳದೆ ಹೋದರೆ ಅದು ಸಾಧ್ಯವಿಲ್ಲ. ಅಕಾಲಿದ ಳೇ ಅ ಸದಸ್ಯರಿದ್ದು ಏಳೆಂಟು ಪದಸ್ಯರ ಬೆಂಬಲ ಅವರಿಗೆ ಬೇಕು. ಹಾಗಾಗಿ ಪಕ್ಷಾಂತರಕ್ಕೆ ಲಕ್ಷಾಂತರ ಹಸ್ತಾಂತರವಾಗುವ ಸನ್ನಿವೇಶ ಖಂಡಿತ ಸಂಭವಿಸಬಹುದು.

ಅದು ಹೇಶಸ್ವಿಯೂಗದೆ ಹೋದರೆ, ಪಂಜಾಬದಲ್ಲಿ ಸರಕಾರ ರಚನೆಗೊಳ್ಳುವುದೂ ಸಾಧ್ಯವಿಲ್ಲ. ಕೇರಳದಲ್ಲಿ ಶ್ರೀ ಅಚ್ಯುತ ಮೆನನ್ನರು ಮಾಡಿದರೆ ಶ್ರೀ ಬಾದಲ್ ಶಾಸನ ಸಭೆಯನ್ನು ವಿಸರ್ಜಿಸಲು ಸಲಹೆ ನೀಡುವ ಅಧಿಕಾರವನ್ನು ಕಳೆದು ಕೊಂಡಿದ್ದಾರೆ. ಜನಸಂಘವು ಶ್ರೀ ಬಾದಲ್ಲರಿಗೆ ತನ್ನ ಬೆಂಬಲವಿಲ್ಲವೆಂದು ರಾಜ್ಯಪಾಲರಿಗೆ ಅದಾಗಲೇ ತಿಳಿಸಿದೆ. ಹೀಗಾದಲ್ಲಿ ಮುಂದೇಷ್ಟು? ರಾಷ್ಟ್ರಪತಿ ಆಡಳಿತ ಅನಿವಾರ್ಯ. ಮಧ್ಯಾವಧಿ ಚುನಾವಣೆಗಳು ನಡೆದರೂ ನಡೆಯದೆ ಒಂದಲ್ಲೇ ಚುನಾವಣೆ ಜರುಗಿಸಿದರೂ ಯಾವುದೇ ಒಂದು ಪಕ್ಷ ಬಹುಮತ ಗಳಿಸುವುದು ಕಷ್ಟ. ಪ್ರಾದೇಶಿಕ ಭಾವನೆಯನ್ನು ಜಾಗೃತಗೊಳಿಸಿದರೂ ಅಕಾಲಿ ದಳದ ಭವಿಷ್ಯ ಅಸ್ಪಷ್ಟ.

ಂ ಂ ಂ

ಪಶ್ಚಿಮ ಬಂಗಾಳದಲ್ಲಿ ಸಮ್ಮಿಶ್ರಸರಕಾರ. ಅಲ್ಲಿ ಸ್ಥಾಪಿತವಾದ ಇತ್ತೀಚೆಗಿನ ಸರಕಾರಗಳೂ ಸಮಸ್ಯಾಕ್ಷಯವಾಗಿದ್ದುವು. ರಾಜ್ಯಪಾಲ ಧರ್ಮವೀರರೂ ಕೆಲವು ರಾಜ್ಯ ಕಾರಣಗಳಿಗೆ ನಿರ್ಣಯಗಳಾದರೆ ತುತ್ತಾಗಿದ್ದರು. ಈಗಿನ ರಾಜ್ಯಪಾಲರಾದ ಧವನ್ನರೂ ಇದಕ್ಕೆಂತ ಹೊರತಾಗಿಲ್ಲ. ವಿಧಾನ ಸಭೆಯನ್ನು ಅಮಾನತ್ತುಗೊಳಿಸಿ ರಾಷ್ಟ್ರಪತಿಗಳ ಆಳ್ವಿಕೆಯನ್ನು ಅಲ್ಲಿ ಹೇರಿದ್ದರೂ ಪಶ್ಚಿಮ ಬಂಗಾಳದಲ್ಲಿ ಕಾನೂನು-ವ್ಯವಸ್ಥೆಗಳನ್ನೂ ಮರುಸ್ಥಾಪನೆಯಾಗಲಿಲ್ಲ. ಬಂಗ್ಲಾ ಕಾಂಗ್ರೆಸ್‌ನ ನೇತೃತ್ವದ ಸಂಯುಕ್ತರಂಗ ಸರಕಾರವೂ ಪಶ್ಚಿಮ ಬಂಗಾಳವನ್ನು ಎಲ್ಲಿ ಕೊಂಡೊಯ್ದಿದೆ ಯೆಂಬುದಕ್ಕೆ ಬೇರೆ ಪುರಾವೆ ಬೇಡ.

ಮಾರ್ಕ್ಸಿಸ್ಟ್‌ರೂ ನಕ್ಸಲೀಯರೂ ನಿರಂತರ ಚಟುವಟಿಕೆ ತೋರಿಸುತ್ತಿರುವ ರಾಜ್ಯವಿದು. ರಾಜ್ಯಪಾಲ್ ಧವನ್ನರೂ ಕಮ್ಯುನಿಸ್ಟ್ ಪರರೆಂಬ ಅಪವಾದಕ್ಕೆ ಗುರಿಯಾದವರು. ಕೇಂದ್ರ ಗೃಹಖಾತೆಯ ಸಹಾಯ ಮಂತ್ರಿ ಚವನರು ಪ್ರಯತ್ನ ಪಟ್ಟರು ತಿಂಗಳು ಗಳೇಂದ ಪ್ರಯತ್ನಿಸಿದರೂ ಇಂದಿಗೂ ಸರಿಸ್ಥಿತಿ ಕೈಗೆ ನಿಲುಕಿಲ್ಲ. ಅಲ್ಲಿ ಹಾಡುಹಗಲಿನಲ್ಲಿ ರಸ್ತೆ ನಡುವಲ್ಲೇ ಕೊಲೆ ನಡೆಯುತ್ತದೆ; ದರೋಡೆ ಪಡೆಯುತ್ತದೆ. ಸಾಮಾನ್ಯ ವಂತರ ಸಾಮಾನ್ಯ ಬಟ್ಟೆಯಾಗಿ ಬಿಕರಿಯಾಗುತ್ತದೆ. ಆಸ್ಪತ್ರೆಗಳ ಮೇಲೆ ಆಕ್ರಮಣ ನಡೆಯುತ್ತದೆ-ಇವೆಲ್ಲ ಶ್ರೀಸಾಮಾನ್ಯನ ಹೆಸರಿನಲ್ಲಿ. ಶ್ರೀಸಾಮಾನ್ಯರ ಪ್ರಧಾನಿ ಇಂದಿರಾಗಾಂಧಿಯವರೇ ಗೃಹ ಸಚಿವರೂ ಆದಮೇಲೆ ಇವನ್ನೆಲ್ಲ ಮೂಕ ಪ್ರೇಕ್ಷಕರಾಗಿ ನೋಡುತ್ತ ಕುಳಿತಿರುತ್ತಾರೆಯೆ? ಈ ಜಪರಿಯೂ ಸರಕಾರವೊಂದಿದೆಯೆಂದು ತೋರಿಸಿಕೊಡುತ್ತಾರೆಯೇ ನೋಡಬೇಕು.

ಂ ಂ ಂ

ನವದೆಹಲಿಯಲ್ಲಿ ಇಂದಿಕೇಟ್ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಮಾತನಾಡದ್ದೇಶವೂ ನಡೆಯಲಿಲ್ಲ. ಇಂದಿಕೇಟಿನ ನಿಂದೆ ತಪ್ಪಿಸಲಾರ್ಥವೆಯ ಜೊತೆಗೆ ಅದನ್ನು ಪುಷ್ಟೀಕರಿಸಲೆಂಬಂತೆ ಕಾಂಗ್ರೆಸ್ ವಿಭಜನೆಗೆ ಕಾರಣರೆಂಬುದನ್ನು ಎಲ್ಲರಿಗೂ ತಿಳಿಯುವಂತೆ ಪುಸ್ತಕವೊಂದನ್ನು ಬಿಡುಗಡೆ ಮಾಡಿದ್ದೇ ಮಾಡಿದ್ದು. ಇಂದಿಕೇಟ್ ಪರರು ಇದಕ್ಕೆ ಉತ್ತರ ಕೊಡುವ ಗೋಜಿಗೆ ಹೋಗಲಾರರು. ಅಧಿಕಾರವುಳಿಸುವುದು ಅವರ ಧರ್ಮ, ಅದಕ್ಕಾಗಿಯೇ ಅವರದ್ದೆಲ್ಲಾ ಕರ್ಮ.

ಶ್ರೀ ಎಸ್ಸಿನ್ ಮತ್ತವರ ಸ್ನೇಹಿತರು ಇನ್ನಾದರೂ ಫಿಂದೆಯನ್ನು ಫಿಲ್ಲಿಸಬೇಕು. ಒಡಕಿಗೆ ಕಾರಣರಾರು ಎಂಬುದನ್ನು ಸಂಶೋಧನೆ ಮಾಡಿ ಡಾಕ್ಟರೇಟ್ ಗಳಿಸುವುದು ಯಾರಿಗೂ ಬೇಡವಾಗಿದೆ. ಒಡಕು ಮಾಡಿದ್ದು, ಅದು ತುಂಬಿ ಬರದಷ್ಟು ಬಲಿತಿದ್ದು, ಪಕ್ಷ ಇಬ್ಭಾಗವಾದದ್ದು ಜಗಜ್ಜಾಹೀರಾತೆ ಕಾಂಗ್ರೆಸ್ಸಿನ ತತ್ವ ನೀತಿ ಧೋರಣೆಗಳಲ್ಲಿ ವಿಶ್ವಾಸ ಹುಟ್ಟಿಸಿ ಜನತೆಯನ್ನು ಜಾಗೃತಗೊಳಿಸಿ ಪಕ್ಷವನ್ನು ಬಲಪಡಿಸುವುದು ಇಂದಿಗೆ ಅತ್ಯಗತ್ಯ. ಕಪ್ಪೆಗಳನ್ನು ತೂಗುವವಲ್ಲಿ ಫಿಧಾನ ಮಾಡಿದರೆ, ಇದ್ದ ಕಪ್ಪೆಗಳೂ ತಪ್ಪಿಯಿಂದ ಹಾರಿ ಹೋದಾವು. ಸಾರ್ವತ್ರಿಕ ಚುನಾವಣೆಗಳು ಸಮೀಪಗತವಾಗಿ ಬರುತ್ತಿರುವುದರಿಂದ ವಿಘಟನೆಯು ಕಾರಣ ಪ್ರಚಾರಕ್ಕಿಂತ ಸಂಘಟನೆಯು ಕರ್ತವ್ಯ ಆಗ್ರಸ್ಥಾನ ಪಡೆಯುಬೇಕು.

ಂ ಂ ಂ

ಕರ್ನಾಟಕದ ಸರಕಾರದ ಎಲ್ಲ ಇಲಾಖೆಯು ಮೇಲೆ ಅರೋಪಗಳ ಸರಮಾಲೆ ಆಸ್ಪತ್ರೆಗಳಲ್ಲಿ ಡಾಕ್ಟರು ಇಲ್ಲ; ಇದ್ದರೆ, ಔಷಧಿಗಳನ್ನು ಹಿಂದಿನ ಬಾಗಿಲಿನಿಂದ ಮಾರುತ್ತಾರೆ ಸಾರಿಗೆ ಬಸ್ಸುಗಳ ಕಂಡಕ್ಟರು ತಾರೀಸ್ ಡಾಕೆ ಬಂಗಲೆ ಕಟ್ಟಿದ್ದಾರೆ.... ಇದೇ ರೀತಿ ಮುಂದುವರಿದು ಸರಕಾರಿ ಶಿಕ್ಷಣಾಲಯಗಳು ದನದ ದೊಡ್ಡಿಗಳು; ಖಾಸಗಿ ಶಿಕ್ಷಣಾಲಯಗಳು ಜೀವ ಹಿಂಡುವ ಪೂಜಾರಿಗಳಿಗೆ ಸರಸ್ವತೀ ಮಂದಿರಗಳು.... ಎಂಬಲ್ಲಿ ವರೆಗೂ ಮುಂದುವರಿದಿದೆ. ಖಾಸಗಿ ಶಿಕ್ಷಣಾಲಯಗಳಲ್ಲಿ ಸರಕಾರ ಫಿಗದಿ ಮಾಡಿದ ಶುಲ್ಕಕ್ಕಿಂತ ಹೆಚ್ಚು ಹಣವನ್ನು ಯಾವುಯಾರಿಂದೋ ರಾಜಕಾರಣ ವಸೂಲು ಮಾಡುತ್ತಾರೆಂಬ ಆರೋಪ ಹಿಂದೆಯೂ ಇತ್ತು.

ಶಿಕ್ಷಣ ಸಚಿವ ಶ್ರೀ ಶಂಕರೇ ಗೌಡರು ಇಂತಹ ಅಕ್ರಮಗಳನ್ನು ಪತ್ತೆ ಮಾಡಲು ವಿಶೇಷ ಅಧಿಕಾರಿಗಳನ್ನು ನೇಮಿಸಿದ್ದು ಸ್ವಾಗತಾರ್ಹ. ಸಿಗರೇಟು-ಕಾಫಿ-ಸಿನೆಮಾ-ಜೋಳಿಗೆಗಳಿಗೆ ಸೂರುಗಟ್ಟಲೆ ವೆಚ್ಚ ಮಾಡುವ ಮುಖ್ಯಳ ಹೆತ್ತವರು ಉತ್ತಮ ಶಿಕ್ಷಣ ಪಡೆಯಲು ಹೆತ್ತರಷ್ಟು ಸಹಾಯ ನೀಡಿದರೆ ಗಂಟೇನು ಮಣಿಗುತ್ತದೆ?-ಈ ಪ್ರಶ್ನೆ ಬೇರೆ. ಸಮಾಜವಾದದಲ್ಲಿ ಸಮಾನತೆ ಬೇಕು. ಶಿಕ್ಷಣಾಲಯಗಳಲ್ಲಿ ಅಧ್ಯಾಪಕರ ಸಂಖ್ಯೆ ಇಳಿಸಿ ವಿದ್ಯಾರ್ಥಿಗಳ ಸಂಖ್ಯೆ ಏರಿಸಿ ಕುರಿಗಳ ಕೊಟ್ಟಣವನ್ನಾಗಿಸಿದ ನೇಲೆ ಎಲ್ಲ ಕುರಿಗಳನ್ನೂ ಒಂದೇ ರೀತಿ ನೋಡಿಕೊಳ್ಳಬೇಕಾದ್ದು ಧರ್ಮ ಅವರದ್ದು. ವಸೂಲು ಮಾಡಿದ ಹಣ ಶಾಲೆಗಳ ಬೆಳ್ಳಿಕ್ಕೆ ಬಿಟ್ಟಲ್ಲ ತ್ತದೆಯೇ ಅಡಳಿತಗಾರರ ಕಿಸೆ ಸೇರುತ್ತದೆಯೇ ಎಂಬುದನ್ನು ಸಾಮಾನ್ಯ ವಿಚಾರಿಸಲೇ ಬೇಕು ಎಂಬ ಸಲಹೆ ನವ್ಯದ್ದು.

ಂ ಂ ಂ

ಪಾಕಿಸ್ತಾನದ ಅಧ್ಯಕ್ಷ ಶ್ರೀ ಯಾಹ್ಯಾಖಾನರು ಮೊಸ್ಕೋವಿಗೆ ಹೋಗಿ ಬಂದರು. ಅವರ ಯಾತ್ರೆಯು ಪರಿಣಾಮ ಇಷ್ಟು ಬೇಗನೇ ಹೊರಪಡುವುದಿಲ್ಲ ಇತ್ತ ಮುಂದಿನ ವರ್ಷದ ಚುನಾವಣೆಗಳ ನಂತರವೇ ಅದರ ಫಲಿತಾಂಶ ಹೊರಬೀಳಬಹುದು. ಆದರೆ ಯಾತ್ರೆಯ ಮೂಲ ಉದ್ದೇಶ ಪಾಕಿಸ್ತಾನದ ಸಂರಕ್ಷಣಾ ವ್ಯವಸ್ಥೆಯನ್ನು ಬಲಪಡಿಸುವುದೇ ಆಗಿತ್ತೆಂದು ತೋರುತ್ತದೆ. ಪಾಕಿಸ್ತಾನದ ಸಂರಕ್ಷಣಾ ವ್ಯವಸ್ಥೆಯನ್ನು ನೋಡುವಾಗ, ಅದರ ಭಾರತ ನೀತಿಯನ್ನು ಗಮನಿಸುವಾಗ, ದೇಶಾಯರ ಭವಿಷ್ಯವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಸಿಕ್ಕಿಂನಿಂದ ಶಸ್ತ್ರಾಸ್ತ್ರಗಳು ಬರುವುದೇ ಪಾಕ್ ಸಂರಕ್ಷಣಾ ತಂತ್ರ. ಇದಕ್ಕೆ ಕೊಪ್ಪರಿಗೆ ಎತ್ತಿದ್ದರೂ ಸಾಲದು. ಅಧಿಕಾರ ಬೇಕಾದವರು ಹೀಗೆ ಮಾಡಲೇಬೇಕು. ಪಾಕಿಸ್ತಾನದಲ್ಲಿ.

ಪುತ್ತೂರು ಪ್ರಿನ್ಸಿಪಲ್ ಕೋರ್ಟಿನಲ್ಲಿ

O. S. 213/69

ಪುಂಜಾಳಕಟ್ಟೆ ಸೈ ... ವಾದಿ.
ಸೆಟ್ಟಿಕಾರ ಜಂಬ್ರಯ್ಯ ಸೆಟ್ಟಿ ... ಪ್ರತಿವಾದಿರು 1ನೇ ಪ್ರತಿವಾದಿ

ವಕೀಲರಾದ ರಾಮಮೋಹನ ರಾವ್, ಸಾಮ್ರಾಯರು ಮತ್ತು ವೆಂಕಟೇಶ ಭಟ್, ಪುತ್ತೂರು ಇವರಿಗೆ.

ಸದರಿ 1ನೇ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಸಾ. 10-4-66ರಲ್ಲಿ ರೂ. 1000/ಕ್ಕೆ 1ನೇ ಪ್ರತಿವಾದಿ ಮುಮ್ತಾಜ್ ಬ್ಯಾರಿ ಇವರಿಗೆ ಬರೆಕೊಟ್ಟ ದಿ. ಕ್ರಯನೋಟಿನ ಅಸಲು ಬಡ್ಡಿ ವಸೂಲು ಮಾಡುವ ಹಕ್ಕನ್ನು ಇವರು ತಾರೀಕು 25-12-66ರಲ್ಲಿ ವಾದಿಗೆ ಪರಾಧಾರೆ ಕೊಟ್ಟಿದ್ದರಿಂದ ವಾದಿಯು 1ನೇ ಪ್ರತಿವಾದಿಯ ಮೇಲೆ ಮೂಕ್ಯ ದಿತ್ತ ಕೇಳಿ ಪಡಿದ ಈ ದಾವೆಯನ್ನು ಸಾ. 9-7-70ಕ್ಕೆ ನಿಮ್ಮ ನೋಟೀಸಿಗೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸಿದ ಕಕ್ಷಿದ್ದು ಕಪ್ಪಿದ್ದಲ್ಲಿ ನಿಮ್ಮನ್ನು ಶಿಕ್ಷಾ ಪೂರ್ವಿಯಲ್ಲಾಗಿ ಕಾಯಿದೆ ಪ್ರಕಾರ ತೀರ್ಮಾನಿಸಲಾಗುವುದು.

Sd/- M. Rammohan Rao
Advocate for Plff.

Puttur, 29.6.70

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಕಾರ್ಕಳ IInd ಎಡಿಶನಲ್ ಮುನ್ಸೀಫ್ ಕೋರ್ಟಿನಲ್ಲಿ

R. R. C. No. 711/1969

B. ಕೃಷ್ಣರಾವ್ ಕೂಡಾ ... ಅರ್ಜಿದಾರರು ಮತ್ತು

ಸೇಸಿ ಶೆಟ್ಟಿ ... ಎದುರು ಪಕ್ಷ

ಎದುರು ಪಕ್ಷ— ಸೇಸಿ ಶೆಟ್ಟಿ, ಅಚ್ಚಣ್ಣ ಶೆಟ್ಟಿ ಸೊಸೈ, ಕಾರ್ಕಳ ತಾಲೂಕು ಸಾಣೂರು ಗ್ರಾಮದ ನಂಜಬೆಟ್ಟು ಎಂಬಲ್ಲರುವವರು.

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ನಿಮ್ಮಿಂದ ಅರ್ಜಿದಾರರಿಗೆ ಕಲಂ 81-B-ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟಿನಂತೆ ಕೋರ್ಟಿನವರಿಂದ ಮಾರಾಟ ಮಾಡಿದ ಮೇಲ್ಕಂಡ ಗೇರು ಅರ್ಜಿ ವ್ಯವಹಾರದಲ್ಲಿ ಕಾಯ್ದು ಹಾಗೂ ಆ ಬಗ್ಗೆ ಕಾರ್ಕಳ 27.7.1970ಕ್ಕೆ ಇಡೋಣಾಗಿಯಿದೆ. ಆ ಸಮಯಕ್ಕೆ ನೀವು ಹಾಜರಾಗದಿದ್ದರೆ ಕಾರ್ಕಳ 27.7.1970ಕ್ಕೆ ಪೂರ್ವಾಹ್ನ ಗಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಖುದ್ದಾಗಲೀ ಯಾ ವಕೀಲರ ಮೂಲಕವಾಗಲೀ ಹಾಜರಾಗಿ ಉದಹರಿಸಿದ ಕಕ್ಷಿದ್ದು, ಕಪ್ಪಿದ್ದಲ್ಲಿ ಕೋರ್ಟಿನವರಿಗೆ ಯಾವ್ಕ್ತ ಕಂಡಂತೆ ತೀರ್ಮಾನಿಸಲಾಗುವುದು ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯಿದೆ.

D. Venkatesh Bhat,
ಅರ್ಜಿದಾರರ ಪರ ವಕೀಲರು.

Karkala, 1—7—1970.

ತೆಂಗಿನ ತೋಟ ಬೆಳೆಸಲು ಸಾಲ ನೀಡುವ ವಿಶೇಷ ಯೋಜನೆ

(A. R. C. SCHEME)

ನಮ್ಮ ದೇಶದ ಅವಶ್ಯಕತೆಗಿಂತ ಬಹಳ ಕಡಿಮೆ ಪ್ರಮಾಣದಲ್ಲಿ ತೆಂಗು ಮತ್ತು ಕೊಬ್ಬರಿ ದೇಶದಲ್ಲಿ ಉತ್ಪತ್ತಿಯಾಗುತ್ತಿದೆ. ದೇಶದ ಅವಶ್ಯಕತೆಯ ಶೇಕಡ 20ಕ್ಕಷ್ಟನ್ನು ಸಿಲೋನ್, ಮಲಯ ಮೊದಲಾದ ಹೊರದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಇದರಿಂದ ನಮ್ಮ ದೇಶದ ಹೆಚ್ಚು ಹಣದ ವಿದೇಶಿ ವಿನಿಮಯ ವ್ಯರ್ಥವಾಗುತ್ತಿದೆ. ತೆಂಗಿನಕಾಯಿ ಮತ್ತು ಕೊಬ್ಬರಿ, ಹೆಚ್ಚುತ್ತಿರುವ ದುಬಾರಿ ಬೆಲೆಯಿಂದ, ಸಾಮಾನ್ಯ ಜನರ ದಿನಂಪ್ರತಿ ಬಳಕೆಗೆ ಎಲುಕದಂತಾಗಿದೆ.

ತೆಂಗಿನ ಬೆಳೆಯು ಮೈಸೂರು ರಾಜ್ಯದ ಅತಿ ಮುಖ್ಯ ವಾಣಿಜ್ಯ ಬೆಳೆಗಳಲ್ಲೊಂದಾಗಿದೆ. ರಾಜ್ಯದಲ್ಲಿ ಸುಮಾರು 2,70,000 ಎಕರೆಗಳಷ್ಟು ತೆಂಗಿನ ತೋಟವಿದೆಯೆಂದು ಇದರಿಂದ ವರ್ಷಂಪ್ರತಿ 45 ಕೋಟಿ ತೆಂಗಿನಕಾಯಿಗಳು ಉತ್ಪತ್ತಿಯಾಗುತ್ತಿವೆಯೆಂದು ಅಂದಾಜು ಮಾಡಲಾಗಿದೆ. ನಮ್ಮ ದೇಶದ ತೆಂಗಿನ ಬೆಳೆಯ ವಿಸ್ತೀರ್ಣ ಮತ್ತು ಉತ್ಪನ್ನದಲ್ಲಿ ಮೈಸೂರು ರಾಜ್ಯ ಎರಡನೆ ಸ್ಥಾನವನ್ನು ಪಡೆದಿದೆ. ರಾಜ್ಯದ ಕೆಲವು ಪ್ರದೇಶಗಳಲ್ಲಿ ತೆಂಗಿನ ಬೆಳೆಯ ಅಭಿವೃದ್ಧಿಗೆ ಹೆಚ್ಚಿನ ಅವಕಾಶವಿದ್ದಾಗ್ಯೂ ರೈತರ ಆರ್ಥಿಕ ಮುಗ್ಗಟ್ಟಿನಿಂದ ಈ ಬೆಳೆಯು ಹೆಚ್ಚು ವಿಸ್ತೀರ್ಣವಾಗಲು ಅವಕಾಶವಾಗಿಲ್ಲ. ಆದುದರಿಂದ ತೆಂಗಿನ ಬೆಳೆಯು ಉತ್ಪತ್ತಿಯನ್ನು ಹೆಚ್ಚಿಸುವ ಪ್ರಮುಖ ರೈತರ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸುವ ಸಲುವಾಗಿ ತೆಂಗು ಬೆಳೆಸಲು ಅವಕಾಶವುಳ್ಳ ರೈತರಿಗೆ ಉತ್ತೇಜನ ಕೊಟ್ಟು ಜಮೀನು ಅಭಿವೃದ್ಧಿ ಬ್ಯಾಂಕುಗಳ ಮೂಲಕ ಹಣ ಒದಗಿಸಿಕೊಡಲು ಮೂಡಿರುವ ಈ ವಿಶೇಷ ಯೋಜನೆಗೆ ಅಗ್ರಿಕಲ್ಚರಲ್ ರೀ ಫೈನಾನ್ಸ್ ಕಾರ್ಪೋರೇಷನ್‌ನ ಅನುಮತಿ ದೊರೆತಿದೆ ಮತ್ತು ವೈಸರಾಯರು ಸರ್ಕಾರದ ಅನುಮತಿ ದೊರೆಯಲಿದೆ.

ಈ ಅಭಿವೃದ್ಧಿ ಯೋಜನೆಯು ರಾಜ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ, ಉಡುಪಿ, ಕಾರ್ಕಳ, ಮಂಗಳೂರು, ಸುಳ್ಯ, ಪುತ್ತೂರು, ಸುಳ್ಯ, ಬಂಟ್ವಾಳ, ಬೆಳ್ತಂಗಡಿ ತಾಲೂಕುಗಳಿಗೂ ಮತ್ತು ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲ, ಸಿರ್ಸಿ, ಸಿದ್ದಾಪುರ, ಕುಮಟೆ, ಬಟ್ಕಳ್ ಮತ್ತು ಹೊನ್ನಾವರ ತಾಲೂಕುಗಳಿಗೂ ಅನ್ವಯಿಸಲ್ಪಟ್ಟಿರುತ್ತದೆ. ಈ ಯೋಜನೆಗೆ ಸರ್ಕಾರ ಸಾಲಿನಲ್ಲಿನ ಶೇಕಡ 8ಕ್ಕ ರೂಪಾಯಿಗಳ ಖರ್ಚಿನ ಪರದಲ್ಲಿ ಎಕರೆಯೊಂದಕ್ಕೆ 1,760 ರೂಪಾಯಿಗಳು ಮತ್ತು ಬದುವಿನ ಮೇಲೆ ನೆಡುವ 60 ತೆಂಗಿನ ಕಾಯಿಗಳ ಆಧಾರದ ಮೇಲೆ 1,400 ರೂಪಾಯಿಗಳ ಕರಮಿತಿಗೊಳಪಟ್ಟು 47.40 ಲಕ್ಷ ರೂಪಾಯಿಗಳನ್ನು ದೀರ್ಘಾವಧಿ ಸಾಲದ ರೂಪದಲ್ಲಿ ಒದಗಿಸಿಕೊಡಲು ಏರ್ಪಡಿಸಿರುತ್ತೆ.

ಈ ವಿಶೇಷ ಯೋಜನೆಯಲ್ಲಿ ಹಣವನ್ನು 6 ವಾರ್ಷಿಕ ಕಂತುಗಳ ಮೂಲಕ ಬಟವಾಡೆ ಮಾಡಿದ ಹಣದ ಸದುಪಯೋಗದ ಸರ್ಟಿಫಿಕೇಟನ್ನು ತಾಂತ್ರಿಕ ಇಲಾಖಾಧಿಕಾರಿಗಳಿಂದ ಪಡೆದು ವಿಲೇವಾರಿ ಮಾಡಲಾಗುತ್ತದೆ.

	1ನೇ ಕಂತು ರೂ.	2ನೇ ಕಂತು ರೂ.	3ನೇ ಕಂತು ರೂ.	4ನೇ ಕಂತು ರೂ.	5ನೇ ಕಂತು ರೂ.	6ನೇ ಕಂತು ರೂ.	ಒಟ್ಟು ರೂ.
ಎಕರೆಯ ಆಧಾರದ ಮೇಲೆ	860	180	180	180	180	180	1,760
ಬದುವಿನ ಮೇಲೆ ನೆಡುವ 60 ಸಸಿಗಳ ಆಧಾರದ ಮೇಲೆ	500	180	180	180	180	180	1,400

ಈ ಯೋಜನೆಯಲ್ಲಿ ಒಟ್ಟು 3,000 ಎಕರೆ ಪ್ರದೇಶದಲ್ಲಿ ಹೊಸದಾಗಿ ತೆಂಗಿನ ತೋಟಗಳನ್ನು 3 ವರ್ಷಗಳ ಅವಧಿಯಲ್ಲಿ ಮಾಡಿಸಲ್ಪಡಿಸಲು ನಿಶ್ಚಯಿಸಲಾಗಿದೆ. ಜಮೀನು ಅಭಿವೃದ್ಧಿ ಬ್ಯಾಂಕುಗಳ ಶಿಫಾರಸಾಗಳಿಸಲ್ಪಡುವ ರೈತಬಾಂಧವರಿಗೆ ತಾಂತ್ರಿಕ ಸಲಹೆಯಂತೆ ಹಣ ಮಂಜೂರಾತಿ ಮತ್ತು ಬಟವಾಡೆ ಮಾಡಲು ಏರ್ಪಡಿಸಲಾಗಿದೆ. ಸಾಲದ ಪೂರ್ಣಾವಧಿ ೧೫ ವರ್ಷಗಳಾಗಿದ್ದು ಮೊದಲ೧೦ ವರ್ಷಗಳಲ್ಲಿ ಆಸಾ ವರ್ಷದ ವರೆಗೆ ಆಗುವ ಬಡ್ಡಿಯನ್ನು ಮಾತ್ರ ಪ್ರಾವತಿ ಮಾಡಬೇಕಾಗುವುದಿಲ್ಲ. ಮೊದಲನೆಯ ವರ್ಷ ಜಮೀನಿನಿಂದ ಯಾವ ಆದಾಯವೂ ಇರುವುದಿಲ್ಲದಿರುವುದರಿಂದ ಆ ವರ್ಷ ಸಂಪೂರ್ಣ ಹಣವನ್ನು ಬಡ್ಡಿಯನ್ನು ಎರಡನೇ ವರ್ಷ ಸಲ್ಲಬೇಕಾದ ಬಡ್ಡಿಯು ಜೊತೆಗೆ ಸೇರಿಸಿಕೊಡುವ ಹಾಗೆ ಏರ್ಪಡಿಸಿದೆ. ೧೧ನೇ ವರ್ಷದಿಂದ ೧೫ನೇ ವರ್ಷದ ವರೆಗೆ ೫ ಸಮ ವಾರ್ಷಿಕ ಕಂತುಗಳಲ್ಲಿ ಪೂರಾ ಹಣವನ್ನು ಮರು ಪ್ರಾವತಿ ಮಾಡಬೇಕಾಗಿರುತ್ತದೆ.

ಆದುದರಿಂದ ಈ ಯೋಜನೆಗೆ ಒಳಪಡುವ ತಾಲ್ಲೂಕಿನ ರೈತಬಾಂಧವರು ಆಯಾ ತಾಲ್ಲೂಕಿನ ಪ್ರಾಥಮಿಕ ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕುಗಳ ಸದಸ್ಯರಾಗಿ ಅರ್ಜಿಗಳನ್ನು ಸಲ್ಲಿಸಬೇಕಾಗಿ ಕೋರಲಾಗಿದೆ.

ತಾಂತ್ರಿಕ ವಿಚಾರಣೆಯ ವರೂ ಸಹ ಈ ವಿಶೇಷ ಯೋಜನೆಯು ಪ್ರತ್ಯು ಬ್ಯಾಂಕಿನ ನಿಗದಿಪಡಿಸಿರುವ ಷರತ್ತುಗಳಿಗೆ ಒಳಪಡುವಂತೆ ಅರ್ಜಿಗಳನ್ನು ಸ್ವೀಕರಿಸಿ ತಮ್ಮ ಸಲಹೆಯೊಂದಿಗೆ ಅರ್ಜಿದಾರರನ್ನು ಆಯಾ ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಕಳುಹಿಸಬಹುದಾಗಿರುತ್ತದೆ.

ನಿಬಂಧನೆಗಳು

ತೆಂಗಿನ ತೋಟ ಬೆಳೆಸಲು ಆಸಕ್ತಿಯುಳ್ಳ ಪ್ರತಿಯೊಬ್ಬ ರೈತನೂ ತೆಂಗಿನ ತೋಟ ಬೆಳೆಸಲು ಬೇಕಾಗುವ ಒಂದು ಎಕರೆ ಜೊತೆಗೆ ಇತರ ಬೆಳೆ ಬೆಳೆಯುವ ೫ ಎಕರೆ ಹಿಡುವಳಿ ಜಮೀನನ್ನು ಹೊಂದಿರಬೇಕು. ಅಥವಾ ಇತರ ವಾರ್ಷಿಕ ಆದಾಯ ೧,೫೦೦ ರೂ.ಗಳಾದರೂ ಇರಬೇಕು ಹಿಡುವಳಿ ಜಮೀನಿನ ಮೇಲೆ ಯಾವ ವಿಧವಾದ ಪರಭಾರೆಯೂ ಇಲ್ಲದೆ ಆ ಜಮೀನಿಗೆ ಅರ್ಜಿದಾರನೇ ಪೂರ್ಣ ಹಕ್ಕುದಾರನಾಗಿರಬೇಕು ಮತ್ತು ಆ ಜಮೀನು ಅರ್ಜಿದಾರನ ಸ್ವಾಧೀನಾನುಭವದಲ್ಲಿರಬೇಕು.

ಈ ವಿಶೇಷ ಯೋಜನೆಯು ಗುರಿಯನ್ನು ನಿಯಮಿತ ಅವಧಿಯೊಳಗೆ ಸಾಧಿಸಬೇಕಾಗಿರುವುದರಿಂದ ರೈತ ಭಾಂದವರು ತೆಂಗಿನ ಬೆಳೆಯ ವಿಶೇಷ ಯೋಜನೆಯು ಉಪಯೋಗವನ್ನು ಹೊಂದಿ ತೆಂಗಿನ ಬೆಳೆಯನ್ನು ಅಭಿವೃದ್ಧಿಪಡಿಸಿ ತಮ್ಮೊಳಗೆ ಆರ್ಥಿಕಾಭಿವೃದ್ಧಿಪಡಿಸಿಕೊಳ್ಳುವುದೇ ಅಲ್ಲದೆ ಈ ವಿಶೇಷ ಯೋಜನೆಯು ಸಫಲತೆಗೆ ಸಹಕಾರ ಪರಿಂದ ಆಶಿಸಲಾಗಿದೆ.

ಈ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಈ ಯೋಜನೆಯು ವ್ಯಾಪ್ತಿಗೆ ಒಳಪಟ್ಟ ತಾಲ್ಲೂಕು ಅಭಿವೃದ್ಧಿ ಬ್ಯಾಂಕುಗಳು ಮತ್ತು ತೋಟಗಾರಿಕೆ ಇಲಾಖಾಧಿಕಾರಿಗಳಿಂದ ಪಡೆಯಬಹುದು.

ಬಿ. ಎಸ್. ವಿಶ್ವನಾಥನ್
ಅಧ್ಯಕ್ಷರು
ಸಿ. ಬಿ. ನಾವಳ್ಳಿ
ಕಾರ್ಯದರ್ಶಿ
ಬಿ. ಹೊನ್ನಲಿಗೇಗೌಡ
ವಿಶೇಷಾಧಿಕಾರಿ
(ಮೈಸೂರು ರಾಜ್ಯ ಸಹಕಾರ ಭೂ ಅಭಿವೃದ್ಧಿ ಬ್ಯಾಂಕ್ ಲಿ, ಬೆಂಗಳೂರು 18)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
114 ಶಾಖೆಗಳಿಂದ ಹಬ್ಬುರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸ್:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1

ಮಹಾಪುರುಷರ ವಾಣಿಗಳು

(ಕೂಡಸಭಂಗ)

ಹಾಲಿನಲ್ಲಿ ನೀರು ಬೆರೆತರೂ ಹಂಸಕ್ಷೀರವನ್ನು ಬಿಟ್ಟು ಹಾಲನ್ನೇ ಗ್ರಹಿಸುವ ಹಂಸ. ಆದರಂತೆಯೇ ನಮ್ಮ ಮಾನಸ ಹಂಸವು ಒಳ್ಳೆಯದನ್ನೇ ಗ್ರಹಿಸಬೇಕೆಂದು ಮಹಾಪುರುಷರ ಈ ಕೆಳಗಿನ ವಾಣಿಗಳನ್ನು ಹಿಂದಿಯಿಂದ ಅನುವಾದಿಸಿ ಸಂಗ್ರಹಿಸಿ ಕೊಡಲಾಗಿದೆ.

೧) ಮನಸ್ಸು, ವಾಣಿ ಮತ್ತು ಶರೀರದಿಂದ ಸಂಪೂರ್ಣ ಸಂಯಮದಿಂದಿರುವುದರ ಹೆಸರೇ ಬ್ರಹ್ಮಚರ್ಯ.

೨) ಜ್ಞಾನಿಯಾಗುವುದರ ಸಾರವೆಂದರೆ ಯಾರಿಗೂ ಹಿಂಸೆ ಮಾಡದಿರುವುದು.
—ಮಹಾವೀರ.

೩) ದುಃಖದ ಉತ್ಪತ್ತಿ ಪಾಪದಿಂದ ಹುಟ್ಟುತ್ತದೆ. —ಬುದ್ಧ.

೪) ದೇವತೆಗಳು ಪರಿಶುದ್ಧ ಮಗುವಿಗೆ ಸಹಾಯ ಮಾಡುತ್ತಾರೆ. —ಋಗ್ವೇದ.

೫) ಜೀವನದ ರಹಸ್ಯವು ಸೇವೆಯಲ್ಲಿದೆ.

೬) ಸೇವಾಭಾವದಿಂದ ಮಾಡುವ ಸೇವೆಯು ಸಲುವಾಗಿಯೇ ಯಾರು ಜೀವಿಸುತ್ತಾರೋ ಅವರು ಸಂಸಾರದಲ್ಲಿದ್ದರೂ ಸನ್ಯಾಸಿಗಳು.

೭) ನಿರ್ಭಯತೆಯು ಇತರ ಶ್ರೇಷ್ಠ ಗುಣಗಳ ವಿಕಾಸದ ಸಲುವಾಗಿ ಅತ್ಯವಶ್ಯವಾಗಿದೆ.

೮) ತಪಶ್ಚರ್ಯವು ಜೀವನದ ಎಲ್ಲ ಕ್ಷೇತ್ರಗಳಿಗೂ ದೊಡ್ಡ ಕಲೆ.

೯) ಮಾನವನು ಜ್ಞಾನಿಗಳ ಕಳ್ಳು ಕಡೆದು ಲಕ್ಷ್ಯವು ಚರಿತ್ರ ನಿರ್ಮಾಣವೇ ಆಗಿದೆ. —ಗಾಂಧೀ.

೧೦) ಈಶ್ವರ, ಗುರು, ಆತ್ಮಾ, ಧರ್ಮ ಮತ್ತು ಶರೀರ (ಸಂತ) ಈ ಐದು ಪೂಜಾ ಸ್ಥಾನಗಳು. —ವಿನೋಬಾ.

[ಸಂಗ್ರಹ: ಸಿದ್ಧರಾಮಜ]

READ &
ADVERTISE IN
NAVAYUGA WEEKLY

ರಾಜ್ಯಕೀಯದ ಬಿಸಿಬಿಸಿ ತುಪ್ಪ

ದೆಹಲಿಯಲ್ಲಿ ಇಂಡಿಕೇಟ್ ಕಾಂಗ್ರೆಸ್ಸಿನ ನೇತೃತ್ವದಲ್ಲಿ ನ ಅಧಿವೇಶನ ಸೇರಿ ಅದರ ಬಿಸಿ ತಣ್ಣಗಾಯಿತು ಎನ್ನುವಾಗ, ಸಿಂಡಿಕೇಟ್ ಕಾಂಗ್ರೆಸ್ಸಿನ ಅಧಿವೇಶನ ಸನ್ನಿವೇಶ. ಈಗ ಅದೂ ಮುಕ್ತಾಯ. ಎರಡು ಅಧಿವೇಶನಗಳಿಂದ ತಂತಮ್ಮ ನಿರ್ಧಾರಕ್ಕೆ ಕೃತಿಗಳ ವನ್ನೆಡೆ, ಸ್ವರೂಪಂಸೆ, ಪರರ್ಪ್ಪಗಳ ಫಿಂದನೆ ಈ ಸಾಮಾನ್ಯ ಗಣಗಳನ್ನು ಬಿಟ್ಟರೆ, ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ವಿಶೇಷ ಅಧಿವೇಶನಗಳು ಪಕ್ಷ ಕ್ಕಾಗಲೀ ದೇಶಕ್ಕಾಗಲೀ ಎಳ್ಳಿನಷ್ಟು ಉಪಕಾರ ಮಾಡಲಿಲ್ಲ.

ಅಧಿಕಾರಾರೂಢರು ತಮ್ಮ ಅಧಿಕಾರವನ್ನು ಬಲಪಡಿಸಲು ಕ್ರಮಗಳನ್ನು ಕೈಕೊಂಡರು. ಅಧಿಕಾರ ವಂಚಿತರಾದವರು ತಮ್ಮ ಕೃತಿಗಾಗಿ ಪಶ್ಚಾತ್ತಾಪ ಪಡುವುದರಲ್ಲಿ ನಿರತರಾದರು. ಇದರಿಂದ ಅಧಿಕಾರ ಕೈಗೆಟುಕುವುದಿಲ್ಲವೆಂಬುದು ಅವರಿಗೆ ಗೊತ್ತಿದ್ದರೂ ತಮ್ಮ ನಾಲಿಗೆಗು ತೀಟೆಗಳನ್ನು ಅವರು ಹೇಗಾದರೂ ತೀರಿಸಿಕೊಳ್ಳಲೇ ಬೇಕೆಂಬ ಪರಿಸ್ಥಿತಿ ರಾಜ್ಯಕೀಯ ವಾತಾವರಣ ದೇಶದಲ್ಲಿ ದಿನದಿಂದ ದಿನಕ್ಕೆ ಬದಲಾಗ ಹತ್ತಿದೆ. ಇಂಗ್ಲೆಂಡಿನಲ್ಲಿ ಥಾರ್ ಬಹುಮತದ ವಿಜಯ ಭೇರಿ ಬಾರಿಸಲು ಸಿದ್ಧರಾಗಿದ್ದ ಎಡ ಪಕ್ಷವಾದ ಕೂಲಿಗಾರರಕ್ಷ್ಯ ಬಲ ಪಂಥದ ಟೋರಿಗಳು ಜಾಯಿ ಮುಚ್ಚಿಸಿದರು. ಸಂಪತ್ತಿನ ವಿಕರ್ಷಣೆಗೆಯ್ದು ಜನ ದೊಬಲಗಳಿಸುವುದು ಸಾಧ್ಯವೆಂಬ ಶ್ರೀ ಹೆರಾಲ್ಡ್ ವಿಲ್ಸನ್ ರ ಭಾವನೆ ಎಲ್ಲಕಾಲಕ್ಕೂ ಮಾನ್ಯವಾಗುವುದಿಲ್ಲವೆಂದು ತೋರಿಸಿಕೊಡುವಲ್ಲಿ ಇಂಗ್ಲಿಸರು ಯಶಗಳಿಸಿದರು.

ಭಾರತದ ನೆರೆಯ ಸಿಂಹಳದಲ್ಲಿಯ ಕಥೆಯೂ ವಿಲಕ್ಷಣ. ಶ್ರೀ ಡಿಲ್ಲಿ ಸೇನಾನಾಯಕೆಯವರ ಬಲ ಪಂಥೀಯ ಪಕ್ಷವು ಮತ್ತೆ ಸಿರಿಮಾವೋ ಭಂಡಾರ ನಾಯಿಕೆಯವರು ಅದರ ವೇಲೆ ತಿಂತಾಡಿದರು. ಬ್ರಹ್ಮದೇಶದಲ್ಲಿ ಪ್ರಜಾಸ್ವಭುತ್ವದ ಸರಕಾರ ರಚಿಸಿ ನ ಪ್ರಯತ್ನ ಸಾಗುತ್ತಿದೆ ಮಾತ್ರ. ಪಾಕಿಸ್ತಾನದಲ್ಲಿ ಸಾರ್ವತ್ರಿಕ ಚುನಾವಣೆಗಳಮಾತ ಆಗಾಗ ಕೇಳಿಬರುತ್ತಿದೆ. ಬೆಳಗಾರದ ವೇಲೆ ಪರಿಣಾಮ ಬೀರುವ ದೇಶವೆಂದರೆ ಸಿಂಹಳ ಮಾತ್ರ. ಅಲ್ಲಿ ವಾವ ಪಂಥೀಯರ ಮೇಲಾಗ್ಗೈ ಸಾಧಾರಣ ಇಲ್ಲಿಯೂ ಆಗಬಾರದೇನು?

ಶ್ರೀಮತಿ ಇಂದಿರಾಗಾಂಧಿಯವರ ಒಲವು ಮಾಮಪಂಥಿಯತ್ತ ವಾಲಿಕೊಂಡಿದೆಯೆನ್ನುವುದಕ್ಕಿಂತ ಅವರು ಮಾಮ ಪಂಥೀಯ ನೀತಿಯನ್ನೇ ಹೊರಗಡೆ ಸ್ವೀಕರಿಸಿದ್ದಾರೆನ್ನುವರು ಹೆಚ್ಚು. ಆದರೆ, ಇದು ಪೂರ್ಣ ಸತ್ಯವಲ್ಲ. ಶ್ರೀಮತಿಯವರು ಅಧಿಕಾರ ಗ್ರಹಣ ನೀತಿಯನ್ನು ಒಪ್ಪಿದ್ದಾರೆ. ಆದಕ್ಕೆ ತಕ್ಕಂತೆ ಆಗಾಗ ತನ್ನ ನೀತಿಯನ್ನೂ ಬದಲಿಸುತ್ತಾರೆ. ಅವರ ಸಮಾಜವಾದವು ಮಾಮಪಂಥೀಯ ಅನಾದಿಯದ್ದು; ಆದರೆ, ಇದು ಅಡವು ದಕ್ಕೆ ಮಾತ್ರವೇ ಹೊರತ ಮಾತುವು ದಕ್ಕಲ್ಲ. ತನ್ನ ವಿರೋಧಿಗಳನ್ನು ಜಾತೀಯ ವಾದಿಗಳೆಂದು, ದೇಶದ್ರೋಹಿಗಳೆಂದು, ಸಮಾಜವಾದ ವಿರೋಧಿಗಳೆಂದು, ಪ್ರತಿಗಾಮಿಗಳೆಂದು ನಿಂದಿಸುವ ಶ್ರೀಮತಿಯವರು ತಮ್ಮ ಪಕ್ಷದವರ ವೇಲಂತೂ ಉರಿದಾಡುವುದಿದೆ.

ಪ್ರಧಾನಿಯವರ ಎಡ ಸಮಾಜವಾದ ದಿಂದ ಅಸಮಾಧಾನಗೊಂಡ ಅವರ ಬೆಂಬಲಿಗರು ತುಟಿ ಬಿಚ್ಚಿದಾಗ ಬೇರೆ ರೂಪವನ್ನು ತಾಳಿ, ಕರನ್ಸಾಗಿ ಅರಿಸುವ ಸ್ವಾತಂತ್ರ್ಯ ನಿಮಗಿದೆಯೆಂದು ಅವರನ್ನು ನೆನೆಪಿಸಿ ತಮ್ಮ ಬ್ರಹ್ಮಾಸ್ತ್ರವನ್ನೇ ಬಿಟ್ಟರು. ಅಸಮಾಧಾನಿಯುಕರುರು ಸ್ವರು ಹಾಗೆ ಮಾಡುವುದಕ್ಕೂ ಹಿಂಜರಿಯುವುದಿಲ್ಲವೆಂದು ಅರಿಗೂ ಗೊತ್ತು. ಆಕುದರಿಂದಲೇ ಪೂರ್ವನಿರ್ಧಾರಿತ ನಾಟಕದ ಕಂತಿನಂತೆ ಮಾಡಿದ ಮಾತಿನಂತೆ ಅಧ್ಯಕ್ಷ ಜಗಜ್ಜೀವನರಾಮರು ನಡುವೆ ಬಾಯಿ ಹಾಕಿ ಪ್ರಧಾನಿಯು ಉಪ್ಪೇಗವನ್ನೂ ಟೀಕಾಕಾರರ ಉಗ್ರತೆಯನ್ನೂ ಸಮಸಾಧಾನಕ್ಕೆ ತಂದರು. ಆಡುವ ಮಾತು ಮಾಡುವ ಮಾತುಗಳ ನಡುವೆ ಬೆಟ್ಟ ದಷ್ಟು ಅಂತರವಿದೆಯೆಂಬುದನ್ನು ಈ ಪಳಗಿದ ರಾಜ್ಯಕಾರಣಿ ಯುವಜನರಿಗೆ ತಿಳಿಸಿ ಹೇಳಬೇಕಾಯಿತು.

ಆತಳಿತ ಪಕ್ಷದ "ಕಾಯಕರು" ಪ್ರಧಾನಿಯು ಸಂಸತ್ತನ್ನು ವಿಸರ್ಜಿಸಿ ಚುನಾವಣೆಗಳನ್ನು ಏರ್ಪಡಿಸುವ ವಿಚಾರ ಮಾಡಬೇಕೆನ್ನುತ್ತಾರೆ. ಇದರಲ್ಲಿ ಪ್ರಧಾನಿಗೇ ಹೆಚ್ಚು ಲಾಭವಿದೆಯೆನ್ನುತ್ತಾರೆ. ಇಂಡಿಕೇಟು ಕಾಂಗ್ರೆಸ್ಸಿನಿಂದ ಸ್ವತ್ಯೇಕವಾದ ನಂತರ ಉಪಚುನಾವಣೆಗಳಲ್ಲಿ ಅದರ ಬಲ ಕೆಚ್ಚಲಿಲ್ಲವಾದರೂ ಯಥಾಸ್ಥಿತಿ ಮುಂದುವರಿದಿದೆ. ಪ್ರಧಾನಿಯವರು ರಾಜ್ಯಕೀಯವಾಗಿ ಎಷ್ಟು ಆಳಕ್ಕೆ ಬೇರು ಬಿಟ್ಟಿದ್ದಾರೆಂದು ಈಗಲೇ ಎಲ್ಲರಿಗೂ ತಿಳಿದಿಲ್ಲ. ಹೆಚ್ಚಿನವರಿಗೆ ಆಕೆಯಮ್ಮ ಜಂ. ಜವಾಹರಲಾಲರ ಮಗಳಾಗಿಯೇ ಗೋಚರಿಸುತ್ತಿದ್ದಾರೆ. ರಾಜ್ಯಕೀಯದ ಆ ಆಳ ತಿಳಿಯುವುದವರು, ಗಾಂಧೀ—ನೆಹರೂರವರ ಪರಮ ಭಕ್ತರೆಲ್ಲ ಈಗೆಗೆ ವಶವಾಕುವುದರಲ್ಲಿ ಅವರಿಗೆ ಸಂದೇಹವಿಲ್ಲ. ವಮಾತ್ಮಾ ಗಾಂಧಿಯವರ ನಿಧನಾನಂತರ ಏತತ್ ಅಡಿಯತ್ತೆಯು ದಶಕದಲ್ಲಿ ಪಂ. ನೆಹರು ಜೀವಂತರಿದ್ದರು ಎಲ್ಲಕ್ಕರಲ್ಲಿ ಗಾಂಧಿಯೂ ಇದ್ದಾರೆ; ನೆಹರೂ ಇದ್ದಾರೆ. ಆದುದರಿಂದ ಮಕ ಪೆಟ್ಟೆಗೆಗಳು ತಮ್ಮ ಪರವಾಗ ಕ್ರಮೆಯಂ ಮದು ಅವರ ವಾದ.

ಟೀಗಲೇ ಚುನಾವಣೆ ನಡೆಸಬೇಕೆಂಬ ಯೋಚನೆಗೆ ಇನ್ನೆರಡು ಅಂಶಗಳು ಸಮರ್ಥನೆ ನೀಡುತ್ತವೆ. ಆಡಳಿತವಿಗೆ ತನ್ನ ಕೈಗಳಲ್ಲಿರವಾಗ, ಪ್ರಧಾನಿಯವರು ರಾಜ್ಯಕೀಯ ಪರಿಸ್ಥಿತಿಯನ್ನು ತಕ್ಕಗೆ ಬೇಕಾದಂತೆ ತಿರುಗಿಸಿಕೊಳ್ಳಬಲ್ಲರು. ಬಡೆದಂತೆಯೂ ಕೂಗಿದಂತೆಯೂ ನಟಿಸಲು ಆಕೆಗೆ ಯಾರೂ ಹೇಳಿಕೊಡಬೇಕಾಗಿಲ್ಲ. ಸಿಂಡಿಕೇಟ್ ಕಾಂಗ್ರೆಸ್ಸು ಇಂಡಿಕೇಟನ್ನು ಫಿಂಸಿಸುವುದರಲ್ಲಿ ತಮ್ಮ ಸೈದ ಅಪರಾಧಗಳಿಗಾಗಿ ಪಶ್ಚಾತ್ತಾಪ ಪಡುವುದರಲ್ಲಿ ನಿರತವಾಗಿರುವೆಯೇ ಹೊರತು ತನ್ನ ಬಲ ಹೆಚ್ಚಿಸಿಕೊಳ್ಳುವಲ್ಲಿ ರಚನಾತ್ಮಕವಾಗಿ ಕಾರ್ಯಮಾಡಲು ಆರಂಭ ಮಾಡಿಲ್ಲ. ಸ್ವತಂತ್ರ ಪಕ್ಷಕ್ಕೆ ಮುಂದಿನ ವರ್ಷಗಳಲ್ಲಿ ಭವಿಷ್ಯವೇ ಇಲ್ಲವೆಂದು ಸಿಂಡಿಕೇಟ್ ಹೇಳುವಾಗ, ಅದರ ಕಾರ್ಯಕರ್ತರು ಅದರ ಶಿಸ್ತಿಗೆ-ಕೊಳ್ಳಕ್ಕೆಗಳನ್ನು ವಂಚಿಸುತ್ತಾ ಸಿದ್ಧತೆ ನಡೆಸಿದ್ದಾರೆ. ಜನಸಂಘದ ಬಲ ಕುಗ್ಗಿಸುವುದು ಇಂಡಿಕೇಟಿಗೆ ಅಸಾಧ್ಯವಾಗಿರುವುದರಿಂದ ಅದನ್ನು ಹಲವಾರು ರೀತಿಗಳಿಂದ ಟೀಕೆಗೆ ಗುರಿಮಾಡಿ ಜನಸಮನದಲ್ಲಿ, ತಮ್ಮ ಬೀಜ ಬಿತ್ತುವ ಪ್ರಯತ್ನ ಮಾಡುತ್ತಿದ್ದಾರೆ; ಇತರ ರಾಜ್ಯಕೀಯ ಪಕ್ಷಗಳೂ ಚುನಾವಣೆಗಳಿಗೆ ತಕ್ಕ ಸಿದ್ಧತೆಗಳನ್ನು ಮಾಡಿಕೊಂಡಿಲ್ಲವೆನ್ನುವಾಗಲೇ ತಮ್ಮ ಸಿಂಹಾಸನವನ್ನು ಮುಂದಿನ ವರ್ಷಗಳ ವರೆಗೆ ಏಳಿ ಫಿರಾಪದಗೊಳಿಸಬಾರದೆಂಬ ಶ್ರೀಮತಿ ಗಾಂಧಿಯವರ ಇಂಗಿತ.

ಇದಕ್ಕೆ ಪಕ್ಷೀಯ ವಾತಾವರಣವೂ ಇನ್ನೊಂದು ಕಾರಣ. ಈಗಾಗಲೇ ಪಂ ನನ್ನು ಉಗ್ರವಾಗಿ ಟೀಕಿಸುತ್ತಿರುವ ಯುವಕರು ಇನ್ನೂ ಒಂದೂವರ್ಷ ಹೆಚ್ಚು ಕೊಡಿದರೆ, ತನ್ನ ವೇಲಿರುವ ವಿಶ್ವಾಸವನ್ನೇ ಗೊತ್ತುವಳಿ ತಂದರೆ ಗತಿಯೇನು? ಯುವಕನರಲ್ಲಿ ತಮ್ಮ ವೇಲಿರುವ ವಿಶ್ವಾಸ ಸಂಪೂರ್ಣ ಹಾರಿಹೋಗುವುದಕ್ಕೆ ಮೊದಲೇ ಮುಂದಿನ ಕ್ರಮ ಕೈಕೊಳ್ಳುವುದು ವಾಸಿಯೆಂದು ಆಕೆಗೆ ತೋರಿದೆ. ತನ್ನ ಆರ್ಥಿಕ ನೀತಿಯನ್ನು ವ್ಯವಹಾರಿಗೆ ಅನುಕೂಲವಾಗುವಂತೆ ಹೊಸೆಗಾರಿಯನ್ನು ಶ್ರೀ ಚವ್ಹಣರಿಗೆ ವೀಡಿ ತಾವು ಜಾನಾವಣಾ ಭೇರಿ ಬಾರಿಸಲು ತಿರುಗಾಡಲು ಆಕೆಯಿಂದ ಸಿದ್ಧರಾಗಿದ್ದಾರೆ.

ಶ್ರೀ ಜಗಜ್ಜೀವನರಾಮ, ಫಕ್ರುದ್ದೀನ್ ಅಲಿ ಅಹಮ್ಮದರು ಪ್ರಧಾನಿಯವರ ಬಲಗೈ ಎಡಗೈಯೆನಿಸಿದ್ದ ದಿನಗಳೆಲ್ಲಾ ಸಂದುವು. ತಮ್ಮ ಸ್ವಾರ್ಥಕ್ಕೆ ಅವರಿಬ್ಬರನ್ನೂ ಬಳಸಿಕೊಂಡ ಆಕೆ ಈಗ ಅವರನ್ನು ಕುಣಿಸಹೊರಟಿದ್ದಾರೆ. ಸಚಿವ ಸಂಪುಟದ ಪುನಾರಚನೆಯ ನೆವನದಲ್ಲಿ ಅವರಿಬ್ಬರ ಮೇಲೂ ತನ್ನ ವಾದವಿಟ್ಟಿದ್ದಾರೆ. ಪಕ್ಷದ ಅಧ್ಯಕ್ಷರಿಗಿಂತಲೂ ಪ್ರಧಾನಿಯೇ ಮೇಲು ಎಂಬ ದಮ್ಮು ಮತ್ತೊಮ್ಮೆ ತೋರಿಸಿಕೊಟ್ಟಿದ್ದಾರೆ. ಅಧಿಕಾರ ಲಾಲಸಿಗರು ಆತ್ಮಭಿಮಾನವನ್ನು ಮರೆತು ಆತ್ಮಾಸ್ಫೋಟನವನ್ನು ಪ್ರಧಾನಿಗೆ ವಾರಕೊಂಡಿದ್ದಾರೆ. ಯಾವ ಕಡೆಯಿಂದ ಯಾವ ಬಗೆಯ ಟೀಕೆ ಹೊಡೆದರೆ ಪ್ರಧಾನಿ ವೈಯೆಲ್ಲ ಕೆವಿಯಾಗಿ ಕೇಳುತ್ತಿದ್ದಾರೆ.

ತಾನು ರಬ್ಬರ್ ಸ್ಟಾಂಪಿನ ಅಧ್ಯಕ್ಷನಲ್ಲವೆಂದು ಹೇಳುತ್ತಿರುವ ರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯವರ ಮತ್ತು ಪ್ರಧಾನಿ ಗಾಂಧಿಗೆ ಒಗಟಿನಂತಾಗಿದೆ. ಆತಂತೆ ವಾಡುವುದಕ್ಕೆ ಹೆಸರಾದ ಶ್ರೀ ಗಿರಿಯವರನ್ನು ಶ್ರೀಮತಿ ಗಾಂಧಿ ತಿಳಿದುಕೊಂಡದ್ದು ಕಡಿಮೆಯಾಯ್ತು. ಹಾಗಾಗಿ ತಾನು ಸಂಸತ್ತನ್ನು ವಿಸರ್ಜಿಸುವ ಸಲಹೆ ನೀಡಿದರೂ ಅವರು ಒಪ್ಪುತ್ತಾರೆಂಬ ಗ್ಯಾರಂಟಿಯಿಲ್ಲ. ಶ್ರೀ ಗಿರಿಯವರು ಶ್ರೀಮತಿ ಗಾಂಧಿಗೂ, ಶ್ರೀಮತಿ ಗಾಂಧಿಯವರು ಇಂಡಿಕೇಟಿಗೂ, ಇಂಡಿಕೇಟು ಭಾರತಕ್ಕೂ ನಂಗಲಾರದ ಬಿಸಿ ತಪ್ಪವಾಗಿದ್ದಾರೆಂಬುದು ಈಗ ಬಹಿರಂಗವಾಗಿ ತೊಡಗಿದೆ.

ಉಡುಪಿಗೆ ಬಂದಾಗ

ಮನರಂಜನೆಯ ಸಮಸ್ಯೆ ನಿಮಗಿಲ್ಲ!

ಅತ್ಯುತ್ತಮ ಚಲಚ್ಚಿತ್ರಗಳನ್ನು ಪ್ರದರ್ಶಿಸುವ

ಎರಡು ಶ್ರೇಷ್ಠ ದರ್ಜೆಯ ಚಿತ್ರಮಂದಿರಗಳು

ನಿಮ್ಮ ಬೇಸರವನ್ನು ನೀಗಿಸಲು ಇಲ್ಲಿವೆ.

ಅಲಂಕಾರ್ (ಫೋನ್: 327) ಆಸ್ಪತ್ರೆ ರಸ್ತೆ

ಕಲ್ಪನಾ (ಫೋನ್: 437) ಉಪೇಂದ್ರಬಾಗ್

ಕುಂದಾಪುರದ ನವೀಕೃತ ಭವ್ಯ ಚಿತ್ರಮಂದಿರ—

ಗೀತಾಂಜಲಿ

ವ್ಯವಸ್ಥಾಪಕರು:

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಎಸ್. ಆರ್. ಬಿಲ್ಡಿಂಗ್ಸ್, ಉಡುಪಿ (ದ. ಕ.)

ಸಂಗ್ರಾಹ್ಯ ಸಂಕಲನಗಳು

ತಿಲ್ಲಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಕರಿಜಡು ಪ್ರಬಂಧಗಳು	1—00
ಕಾರಿಕ ಪ್ರಪಂಚ	1—50
ಜೀವಕಳೆ	1—00
ಅನುವಾದಿತ ಕತೆಗಳು	1—20
ಭಂಜ ಸುಮನ	1—20
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—50
ಪಂಚಗಜ್ಜಾಯ	2—00
ಪುಷ್ಪವನ	2—00
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ನಿಕಾಂಕಿ ನಾಟಕಗಳು	1—00
ಭಾರತದ ನಾಲ್ಮುಮುಖಿಗಳು	1—00
ದೇಶವಿದೇಶದ ಮಹಾ ಜೀವಿಗಳು	1—80

ಸರ್ವಭಾರತ ಪುಸ್ತಕ ಭಂಡಾರ, ಉಡುಪಿ.

ಪರಭಾಷಾಭಿಮಾನಿ ಪ್ರಧಾನಿ

ಭಾರತದ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಸೌಹಾರ್ದಿಯುಟಿಗೆ ಹೋಗಿದ್ದರು. ಅಲ್ಲಿನ ಪ್ರಧಾನಿ ಶ್ರೀ ಶಿವಸಾಗರ ರಾಮಗುಲಾಮ್‌ರವರು ಅವರಿಗೆ ಸ್ವಾಗತ ಬಯಸಿದರು. ಆಗ ಇಂದಿರಾಜೀಯವರು ಫ್ರೆಂಚ್ ಭಾಷೆಯಲ್ಲಿ ಸ್ವಾಗತ ಭಾಷಣಕ್ಕೆ ಉತ್ತರವಿತ್ತರು. ಒಂದಿಷ್ಟೂ ತಪ್ಪಿಲ್ಲದೆ ಅವರು ಮಾತಾಡಿದರೆಂದು ಅವರಿಗೆ ಫ್ರೆಂಚ್ ಭಾಷಾಜ್ಞಾನ ಜೆನ್ನಾಗಿಯೆಂದು ಪತ್ರಿಕೆಗಳು ಪ್ರಕಟಿಸಿದ್ದುವು.

ನಮ್ಮ ಪ್ರಧಾನಿಗಳವರು, ಭಾರತದ ಪ್ರಧಾನಿಗಳವರು ಫ್ರೆಂಚಿನಲ್ಲಿ ಭಾಷಣವಿತ್ತರು! ನಮ್ಮ ದೇಶದ ಭಾಷೆ ಫ್ರೆಂಚ್? ಅಥವಾ ಆ ದೇಶದ ಭಾಷೆ ಫ್ರೆಂಚೇ? ಎರಡೂ ಅಲ್ಲ. ಅಲ್ಲಿ ಫ್ರೆಂಚ್ ಭಾಷೆಯ ಭಾವ ಇದೆ. ಪೊಂಡಿಚೇರಿಯಲ್ಲಿ ಇಲ್ಲವೇ? ನಮ್ಮ ಪ್ರಧಾನಿಗಳರು ಅಲ್ಲಿಗೆ ಬಂದಾಗಲೆಲ್ಲಾ ನಮ್ಮ ಜನರು ಖಳಿಸುವಾಗ ಫ್ರೆಂಚಾಡುತ್ತಾರೇನು? ಹಲವಾರು ದೇಶಗಳ ಪ್ರಧಾನಿಗಳು, ಅಧ್ಯಕ್ಷರು ನಮ್ಮ ದೇಶಕ್ಕೆ ಬರುತ್ತಿರುತ್ತಾರೆ. ಅವರ್ಯಾರೂ ಆ ದೇಶದ ಭಾಷೆ ಹೊರತು ಅನ್ಯ ಭಾಷೆಗಳಲ್ಲಿ ಸ್ವಾಗತಕ್ಕೆ ಬದಲೀಯುವದಿಲ್ಲ. ಅವರಿಗೆ ಅನ್ಯ ಭಾಷೆಗಳ ವೇಲೆ ಹತೋಟಿ ಇಲ್ಲ, ಇಂದಿರಾಜೀಯವರಿಗೆ ಮಾತ್ರ ಇದೆಯೆಂದು ಅರ್ಥವೇನು? ನಮ್ಮ ದೇಶದ ಯಾವ ಭಾಷೆಯೂ ಅನ್ಯ ದೇಶಗಳವರಿಗೆ ರುಚಿಸುವ ಸ್ಥಿತಿಯಲ್ಲಿ ಇಲ್ಲವೇನು? ಇಲ್ಲಿಯ ಭಾಷೆಗಳ್ಯಾವವೂ ಅವರಿಗಷ್ಟು ಗೊತ್ತಿಲ್ಲದೇನು? ಅಕ್ಸಪೋರ್ಡಿನಲ್ಲಿ ಅವರಿಗೆ ಫ್ರೆಂಚ್ ಹೇಳಿಕೊಟ್ಟರೆ ಬಹುಶಃ ಹಿಂದಿ ಹೇಳಿ ಕೊಡದಿರಬಹುದು. ಅದರೂ ಆ ಭಾಷೆ ಅವರಿಗೆ ಗೊತ್ತಿಲ್ಲವೇನು? ಅದು ಇಲ್ಲಿಯ ಸಂಪರ್ಕ ಭಾಷೆಯೆಂಬುದು ಅವರಿಗೆ ಜ್ಞಾಪಕ ಇಲ್ಲವೇನು?

ಆಡುವ ಭಾಷೆಗೂ ಇಷ್ಟು ವಾದವೇ? ಯಾವ ಭಾಷೆಯಾದರೇನೆಂದು ಕೆಲವರು ಕೇಳಬಹುದು. ಹೌದು. ಅದಕ್ಕೇನೇ ಅನ್ನುವದು ಭಾಷಾ ಭಿನ್ನಾನವೆಂದು, ದೇಶಾಭಿನ್ನಾನವೆಂದ. ನಮ್ಮ ಭಾಷೆಗಳ ಮೇಲೆ ನಮಗೆ ಗೌರವ ಇರಬೇಕು. ಇದು ರಾಷ್ಟ್ರದ ಗೌರವದ ಪ್ರಶ್ನೆ. ಪ್ರಧಾನಿಯವರಿಗೆ ಇಷ್ಟು ಬಂದ ಭಾಷೆಯಲ್ಲಿ ಮಾತಾಡುವ ವ್ಯಕ್ತಿ ಸ್ವಾತಂತ್ರ್ಯವೂ ಇಲ್ಲವೇನು? ರಾಷ್ಟ್ರದ ಗೌರವದ ಪ್ರಶ್ನೆ. ವ್ಯಕ್ತಿ ಸ್ವಾತಂತ್ರ್ಯವು ನಪ್ಪವಾಗಲೇಬೇಕು. ಇಲ್ಲವಾದಲ್ಲಿ ಅದು ಒಂದು ಕೆಟ್ಟ ನಿಷಯವಾಗುತ್ತದೆ. ಇಂದಿರಾಜೀ ಫ್ರೆಂಚ್ ಭಾಷೆಗಾಗಿ, ಲಿದರನ್ನೋ, ಪೋಲೀಷನ್ನೋ..... ಯಾವದನ್ನು ಬೇಕಾದರೂ ಉಪಯೋಗಿಸಲು ಪೂರ್ಣ ಸ್ವತಂತ್ರರಿದ್ದಾರೆ. ಆದರೆ ನಮ್ಮ ಪ್ರಧಾನಿಯವರು ಸ್ವಾಗತ ಭಾಷಣಗಳಿಗೆ ನಮ್ಮ ದೇಶದ ಭಾಷೆಗಳಲ್ಲಿ ಬದಲೀಯಬೇಕು. ಅಲ್ಲಿಗೆ ಅವರು ಶ್ರೀಮತಿ ಇಂದಿರಾ ಗಾಂಧಿ ನೆಹ್ರೂ ಅಥವಾ ಶ್ರೀಮತಿ ಪಿರೋಜ್ ಗಾಂಧಿಯಾಗಿ ಹೋಗಿಲ್ಲ. ಅವರು ಭಾರತದ ಪ್ರಧಾನಿಯಾಗಿ ಹೋಗಿದ್ದಾರೆ. ನಮ್ಮೆಲ್ಲರ ಪ್ರತಿನಿಧಿಯಾಗಿ ಹೋಗಿದ್ದಾರೆ. ಇಲ್ಲಿನ ಸಂವಿಧಾನದಲ್ಲಿರುವ ಭಾಷೆಗಳನ್ನು ಗಂಭೀರ್ಯ ಭಾಷೆಯೆಂದು ಪರಿಗಣಿಸಿದಿಯೋ ಆ ಭಾಷೆಯನ್ನವರು ಮಾತಾಡಬೇಕು.

ಅದೂ ಅಲ್ಲದೆ ಮಾರಿಷಿಯಸ್ ನಿನಲ್ಲಿರುವ ವರಲ್ಲಿ ಹೆಚ್ಚಿನವರು ಭಾರತೀಯ ಸಂಜಾತರಿದ್ದಾರೆ. ಅಲ್ಲಿನ ಪ್ರಧಾನಿ ಶಿವಸಾಗರ ರಾಮಗುಲಾಮ್‌ರವರು ಇಲ್ಲಿಗೆ ಬಂದು ನವಿಂದ ಸ್ಫೂರ್ತಿಯನ್ನು ಪಡೆಯುತ್ತಿದ್ದಾರೆ. ಸ್ವತಂತ್ರ ಮಾರಿಷಿಯಸ್ ಸ್ವತಂತ್ರ ಭಾಷೆಯೆಂದು ಹಿಂದಿಯನ್ನು ಬಳಕೆಗೆ ತರುವ ಯೋಚನೆಯಲ್ಲಿವೆ. ಅದಿಂದು ಅಲ್ಲಿಯ ಶ್ರೀವಾರ್ನೆನ ಭಾಷೆ ಶ್ರೀಸಾಮಾನ್ಯನ ಪ್ರತಿನಿಧಿ ಕಾನೆಂದು ತಾನೇ ಹೇಳಿಕೊಳ್ಳುತ್ತಿರುವ ಇಂದಿರಾಜೀಯವರು ಸೌಹಾರ್ದಿಯಸಿನ ಶ್ರೀಸಾಮಾನ್ಯನ ಬಳಿ ಗುಲಾಮಿ ಮನೋಭಾವನೆಯನ್ನುಂಟುಮಾಡುವ ಫ್ರೆಂಚ್ ಭಾಷೆಯಲ್ಲಿ ಮಾತಾಡಿದರು! ಅಲ್ಲಿಯ ಜನತೆಗೂ ಹಿಂದಿ ಅರ್ಥವಾಗುತ್ತದೆ, ಇಂದಿರಾಜೀಯವರೂ ಹಿಂದಿ ಗೊತ್ತು. ಹಾಗಿದ್ದೂ ಅವರು ಫ್ರೆಂಚ್ ಭಾಷೆಗೆ ಹೊರೆಹೊದರು. ಅದೆಕ್ಕೇನು ಕಾರಣ?

ಕೆಲವು ಸರಯದ ಹಿಂದೆ ಅದೇ ದ್ವೀಪಕ್ಕೆ ತವಿಳುನಾಡಿನ ಮಂತ್ರಿಯೊಬ್ಬರು ಹೋದ್ದರು. ಅವರಿಗೆಲ್ಲಿ ಹೋದೆಡೆಗಳಲ್ಲೆಲ್ಲಾ ಕಣ್ಣಿಗೆ ಕಂಡುಬಂದದ್ದು ಹಿಂದಿ ಅವರು ಹಿಂದಿ ವಿರೋಧಿ ದ್ರಾವಿಡ ಮುನ್ನೇತ್ರ ಕಳಗಮಿಗೆ ಸೇರಿದವರು. ಅವರಿಂತು ಅದನ್ನು ಸಹಿಸಿಕೊಂಡಾರು? ಇಲ್ಲೇ ಸಹಿಸಿಕೊಂಡಿಲ್ಲವೆಂದ ಮೇಲೆ ದೂರದ ದ್ವೀಪದಲ್ಲಿ ಸಹಿಸಿಕೊಳ್ಳುವದೇ? ಅವರು ಅಲ್ಲೇ ಸೆರಗನ್ನಲ್ಲಿ ಗಂಟು ಹಾಕಿಕೊಂಡು ಬಂದ್ರು, ಇಲ್ಲಿ ದೊಡ್ಡ ರಾದ್ಧಾಂತ ಮಾಡಿ ಬಿಟ್ಟರು. ದೂರದ ಪುಟ್ಟ ದ್ವೀಪದ ಮೇಲೆ ಹಿಂದಿ ಆಕ್ರಮಣವೆಂದು ಆರ್ಭಟಿಸಿದರು. ಅವರನ್ನು ಸಮಾಧಾನ ಮಾಡಲು ದಿಲ್ಲೀಶ್ವರರು ಏನೇನೋ ಹೇಳಿದರು.

ಇಂದಿರಾಜಿ ಇಂತಹ ವಿಷಯಗಳನ್ನು ಮರೆಯಲಾರರು. ರಾಷ್ಟ್ರಾಭಿಮಾನದ ಬಿಗುವಿಗೆ ಹೋದಲ್ಲಿ ದಿಲ್ಲಿ ಸಿಂಹಾಸನ? ದ್ರಾ. ಮು. ಕ.ದವರು ಬೆಂಬಲ ಹಿಂದಕ್ಕೆ ತೆಗೆದುಕೊಂಡರೆ, ತಾನು ಉಳಿಯುವದೆಂತ? ಅಧಿಕಾರ ಕೈಬಿಟ್ಟು ಹೋಗುವಾಗ ಭಾಷಾಭಿಮಾನ ಕಟ್ಟಿಕೊಂಡು ಏನು ಮಾತ ವುದು? ಗಣತಂತ್ರದ ಇಂದಿರಾಜೀಯವರ ಕೈಯೊಳಗೇನೇ ಇದೆ. ಅಭಿಮಾನದ ಸಿದ್ಧಾಂತದಿಂದ ಸಿಗುವದೇನಿದೆ? ಪ್ರಯೋಗದ ಪರಿಣಾಮ ಪಟ್ಟನೆ ಪರಿಚಯವಾಗುತ್ತದೆ. ಇದುವೇ ಇಂದಿರಾಜೀಯವರ ಇಂಗಿತ. ಅವರಿಗೆ ದೇಶದ ಗಾತ್ರವಕ್ಕಿಂತಲೂ ಅಧಿಕಾರದ ಆಸನ ಬೇಕಾಗಿದೆ. ಇದಕ್ಕೆ ಮಾರಿಷಿಯಸ್ ನಿನಲ್ಲಿ ಅವರು ಪಡೆದುಕೊಂಡಿರುವದೇ ಎದುರಿಗಿರುವ ಮಹನೀಯರುವ ಉದಾಹರಣೆ.

—ಶ್ರೀ ಶಿವಶಂಕರ.

೧೭೦ನೆಯ ಶತಮಾನಗಳ ನಡುವಿನ
ಭಾರತದ ಕೈಕಸಬು

ಸೋವಿಯೆತ್ ವಿದ್ವಾಂಸರೊಬ್ಬರ ಲೇಖನ.

ಭಾರತದ ಅರ್ಥಿಕ ಇತಿಹಾಸವು ಸೋವಿಯೆತ್ ವಿದ್ವಾಂಸರ ಗಮನವನ್ನು ತೀವ್ರವಾಗಿ ಸೆಳೆದಿದೆ. ಭಾರತದಲ್ಲಿ ೧೭ನೆಯ ಶತಮಾನದಿಂದ ೧೮ನೆಯ ಶತಮಾನದ ಆರಂಭದ ವರೆಗೆ ತಲೆಯೂರಿ ನಿಂತಿದ್ದ ಕೈಕಲೆಯ ಸ್ವರೂಪ ಕುರಿತು ಎ. ಐ. ಚಿಚೆರೋವ್ ಅವರು ಇತ್ತೀಚೆಗೆ ಮೊಸ್ಕೋದಲ್ಲಿ ಪ್ರಕಟಿಸಿರುವ (ಚರಿತ್ರೆಯ ಸವಸ್ಯೆಗಳು) ಎಂಬ ಲೇಖನವೊಂದನ್ನು ಪ್ರಕಟಿಸಿದ್ದಾರೆ.

"ವಸಾಹತು ಪಾದಾಕ್ರಾಂತಕ್ಕೆ ಮುಕ್ತಾಗತ್ತಿದ್ದ ಸಮಯದಲ್ಲಿ ಭಾರತದ ಸಾಮಾಜಿಕ ವಸ್ತು ಆರ್ಥಿಕ ರಚನೆಯ ವಿಶೇಷ ಗಮಲಕ್ಷಣಗಳು" ಎಂಬ ಶೀರ್ಷಿಕೆಯಲ್ಲಿ ಅವರು ಈ ಲೇಖನವನ್ನು ಬರೆದಿದ್ದಾರೆ. ಭಾರತವು ವಸಾಹತು ದಾಸ್ಯಕ್ಕೆ ಬಲಿಯೂಗುತ್ತಿದ್ದ ಸಮಯದಲ್ಲಿದ್ದ ಅದರ ಸಾಂಪತ್ತಿಕ ಅಭಿವೃದ್ಧಿ ವಟ್ಟವು ಕೇವಲ ಇತಿಹಾಸಕಾರರ ಅನಕ್ಕೆಯನ್ನು ಮಾತ್ರವೆ ಆಕರ್ಷಿಸಿದ್ದಿಲ್ಲ. ರಾಷ್ಟ್ರೀಯ ವಿಮೋಚನಾ ಸಂಘರ್ಷದಲ್ಲಿ ಆಪ್ತ ದೇಶಾಭಿಮಾನವನ್ನು ತುಂಬಲು ಹಂಬಲಿಸುತ್ತಿದ್ದವರ ಗಮನವನ್ನೂ ಸೆಳೆದಿದ್ದಿತು ಎಂದು ಲೇಖಿಕರು ಹೇಳುತ್ತಾರೆ. ಜವಾಹರಲಾಲ್ ನೆಹ್ರು ಅವರೂ ತಮ್ಮ "ಭಾರತ ದರ್ಶನ"ದಲ್ಲಿ ಇದಕ್ಕೆ ಗಮನ ವಿತ್ತಿರುವುದನ್ನು ನಾವು ಕಾಣಬಹುದು. ಇಂಗ್ಲೀಷರು ಭಾರತವನ್ನು ಪಾದಾಕ್ರಾಂತ ಮಾಡಿಕೊಳ್ಳುತ್ತಿದ್ದ ಸಮಯದಲ್ಲಿ "ಅದರ ಸಾಂಪತ್ತಿಕ ಸ್ಥಿತಿಯು ಅತ್ಯುನ್ನತ ಪಟ್ಟವನ್ನು ತಲಪಿತ್ತು. ಕೈಗಾರಿಕಾ ಕ್ರಾಂತಿಯು ಪೂರ್ವಗಾಮಿ ಅವಧಿಯಲ್ಲಿ ಗೂಡ ವಟ್ಟವನ್ನು ಮುಟ್ಟಬಹುದಿತ್ತೋ ಆ ಮಟ್ಟವನ್ನು ತಲಪಿತ್ತು" ಎಂದು ಅವರು ಹೇಳುತ್ತಾರೆ.

ವಸಾಹತು ನೊಗವು ಭಾರತದ ಸ್ವತಂತ್ರ ಬೆಳವಣಿಗೆಗೆ ಭಂಗವನ್ನುಂಟು ಮಾಡುವುದಕ್ಕೆ ಮೊದಲು ಭಾರತವು ಸಾಧಿಸಿದ್ದ ಸಾಮಾಜಿಕ ಜೀವನ ವಟ್ಟವನ್ನೂ ಸಾಂಪತ್ತಿಕ ಸ್ಥಿತಿಯನ್ನೂ ಎ. ಐ ಚಿಚೆರೋವ್ ಇಲ್ಲಿ ವಿವರವಾಗಿ ವಿಶ್ಲೇಷಿಸುತ್ತಾರೆ. ಭಾರತ ಮತ್ತು ಬ್ರಿಟನುಗಳಲ್ಲಿ ಪ್ರಕಟಗೊಂಡ ಮಾಹಿತಿಯನ್ನೇ ಅವರು ವಿಶ್ಲೇಷಣೆಯು ಆಧರಿಸಿದ್ದರೂ ಕೂಡ ಇಲ್ಲಿಗಳಲ್ಲಿ ಕೆಲವು ಅದರಲ್ಲೂ ಬ್ರಿಟನಿನ ಬೂರ್ಜ್ವಾ ಚರಿತ್ರಕಾರರು ಬರೆದವುಗಳು.....ವಧ್ಯ ಹುಟ್ಟಾದ ಆಪ್ಪೆರು ಭಾರತದಲ್ಲಿರುವ ಭಾರತದ ಸಾಂಪತ್ತಿಕತೆ ಸ್ಥಿತಿಯನ್ನು ಅರಿದೋ ಅರಿದು ದೆಯೋ ಕನಿಷ್ಠ ಅಂದಾಜನ್ನಿತ್ತಿ ಕಾಣಿಸಿದ್ದುವು.

ಕಳೆದ ಐದಾರು ವರ್ಷಗಳಲ್ಲಿ ಬಹುತೇಕ ಭಾರತೀಯ ವಿದ್ವಾಂಸರು, ೧೮ ಮತ್ತು ೧೯ನೆಯ ಶತಮಾನದ ಭಾರತೀಯ ಸಾಂಪತ್ತಿಕ ಸ್ಥಿತಿಯ ಕುರಿತು ಬರೆದ ಕೃತಿಗಳನ್ನೇ ಪರೀಕ್ಷಿಸುತ್ತ ಮಾಲಿಕ ಅದರ ನಿಜವಾದ ಸ್ಥಿತಿಯನ್ನು ತೋರಿಸಲು ಯತ್ನಿಸಿರುವುದಾಗಿ ಎ. ಐ. ಚಿಚೆರೋವ್ ಅವರೇ ತಿಳಿಸಿದ್ದಾರೆ.

ಈ ಕಾಲದಲ್ಲಿಯ ಕೈಕಸುಬು ಉತ್ಪನ್ನಗಳ ಆರ್ಥಿಕ ಸಂಘಟನೆಗಳನ್ನು ಸಾಮಂತಾಯಿಶೋರಯೋಗಿ ಕೈಕಸಬಿನವರೂ ಕೈಕರೂ ಸರಕು ಉತ್ಪಾದನೆಗೆ ವ್ಯವಸ್ಥೆಗೆ ಪರಿವರ್ತನೆಗೊಂಡ ಪ್ರಕ್ರಿಯೆಯನ್ನು ಒಳಗೊಂಡಿಯ ವಿಶೇಷವಾಗಿ ಹೊರ ದೇಶೀಯ ವ್ಯಾಪಾರದ ಬೆಳವಣಿಗೆ ಮತ್ತು ಸಿದ್ಧನಸ್ತ ತಂತ್ರಾಂಶಯ ಆರಂಭ ಮೊದಲಾದುವುಗಳನ್ನು ಶವ ಈ ಲೇಖನದಲ್ಲಿ ಪರೀಕ್ಷಿಸಿನೋಡಿದ್ದಾರೆ. ಈ ವಿಶ್ಲೇಷಣೆಯಿಂದ ಚಿಚೆರೋವರು ೧೭ನೆ ಶತಮಾನದಲ್ಲಿ ಈ ಹೊಸ ಪ್ರಕ್ರಿಯೆಗಳು ಊಳಿಗಮಾನ್ಯ ಭಾರತದಲ್ಲಿ ಎಲ್ಲೆಲ್ಲೋ ಕಂಡುಬರುತ್ತಿದ್ದವೆಂಬ ಹಾಗೂ ದೇಶದ ಕೆಲವೇ ಪ್ರದೇಶಗಳಲ್ಲಿ ಕೈಕಸುಬು ಕಾಣಬರುತ್ತಿತ್ತೆಂಬ ತೀರ್ಮಾನಕ್ಕೆ ಬರುತ್ತಾರೆ. ಆದರೆ ೧೮ನೆಯ ಶತಮಾನದ ಕೊನೆಯ ಭಾಗದಲ್ಲಿ ಹಾ

(ಬಾಕಿಯನ್ನೇ ಪುಟ ನೋಡಿರಿ)

ಅಂದು ನಾವೇ ಜಗದ್ಗುರುಗಳು! ಆದರೆ, ಇಂದು....?

ಮಾನವ ಸಂಸ್ಕೃತಿಯು ಜನಕ, ಪ್ರಸಾರಕ ವತ್ತು ಸಂರಕ್ಷಕ ದೇಶವೊಂದಿದ್ದರೆ, ಅದು ಭಾರತ. ಕುರುಡು ಕತ್ತಲೆಯಲ್ಲಿ ಜಗವೆ ಕಂಗೆಡತ್ತಿರುವಾಗ, ಆದಕ್ಕೆ ಮಾನವತೆಯ ದೀಕ್ಷೆ ಕೊಟ್ಟದ್ದು ಭಾರತ. ಮಾನವ ಜಾತಿಯು ಆದಿ ಉದ್ಭವ ಭೂಮಿ. ಭಾರತ. ಜಗದ್ಗುರು ವಿನ ಸ್ಥಾನ ಪಡೆಯಬಲ್ಲ ದೇಶ ಭಾರತವೊಂದೇ. ಇಲ್ಲಿನ ಸಂಸ್ಕೃತ್ರರು ದೇಶ-ವಿದೇಶಗಳಿಗೆ ತೆರಳಿ, ಛಿನ್ನಭಿನ್ನ ರಾಷ್ಟ್ರಗಳನ್ನು ಕಟ್ಟಿದರು; ಅದಕ್ಕು ಉತ್ತಮ ರೀತಿಯಲ್ಲಿ ಆಳಿದರು. ವಿಶ್ವದ ನಾಗರಿಕತೆಯು ಇತಿಹಾಸಜ್ಞರು ಭಾರತೀಯು ನಾಗರಿಕತೆಯೇ ಅತ್ಯಂತ ಪ್ರಾಚೀನತಮವೆಂದೂ ಅದು ನೇ ಮಂಡಿಪ ನಾಗರಿಕತೆಗೆ ಬಲವಾದ ಆಧಾರ ಹಾಕಿತೆಂದೂ ಸಾರುತ್ತಾರೆ.

ಚೀನಾದೇಶದಲ್ಲಿ

ಸರ್ ಡಬ್ಲ್ಯೂ. ಜೋನ್ಸ್ ಆಭಿಪ್ರಾಯದಂತೆ ಹಿಂದುಗಳಿಂದಲೇ ಚೀನೀ ಲಿಪಿ ಉತ್ಪತ್ತಿಯಾಯಿತು. ಚೀನಾದ ಪ್ರಸಿದ್ಧ ಇತಿಹಾಸಜ್ಞ ಹಿಂ-ಕುಶನು ಇದೇ ಅಭಿಪ್ರಾಯವನ್ನು ನವ ಥಿಸಿಕ್ತಾನೆ. 'ಚೀನಾದ ಲೋಪಾಂಗ ಶ್ಯಾಂತದಲ್ಲಿ ಹಿಂದೆ ಹತ್ತು ಸಾವಿರ ಹಿಂದು ಪ್ರಚಾರಕರು ಇದ್ದರೆಂದು ಅತ ಬರೆದಿದ್ದಾನೆ. ಚೀನೀ ಸುಧರ್ಮ ಶಾಸ್ತ್ರ 'ಜೋಕೆಂಗ್' ಹೇಳುವಂತೆ ಕ್ರಿಸ್ತನಿಗೆ ೨೬೦೦ ವರ್ಷ ಪೂರ್ವದಲ್ಲಿ ಭಾರತದ ಕಾಶ್ಮೀರ, ಪಂಜಾಬ ಮೊದಲಾದ ಪ್ರಾಂತಗಳಿಂದ ಹೊರಟು ಬಂದ ಭಾರತೀಯರು ಚೀನಾದ ಸಂಚಾಂಗ ಹಾಕಿದರು. ಇದನ್ನೇ ಹೋಲುವ ಹೇಳಿಕೆ ಮಹಾಭಾರತದಲ್ಲಿಯೂ ಬರುತ್ತದೆ. ಚೀನೀಯಾತ್ರಿಕ ಹ್ಯೂಯೆಕ್ ಸಾಂಗನಿಗೆ ಕಾಮರೂಪದಕಾಸಕ ಭಾಸ್ಕರವರ್ಮನೆಂಬವನು ಅಸಾಮ ರಾಜ್ಯದ ಒಂದ ನಕ್ಷೆಯನ್ನು ಬಳುವಳಿ ಕೊಡಿದ್ದನು. ಈ ನಕ್ಷೆಯಲ್ಲಿ ನೇಪಾಳವನ್ನು ಭಾರತದ ಭೂಭಾಗವೆಂದು ಗುರುತಿಸಲಾಗಿತ್ತು. ಚೀನಾದ ಹೆಚ್ಚಿನ ಭೂಭಾಗವೂ ಭಾರತದ ನಕ್ಷೆಯಲ್ಲೇ ಅಂತರ್ಗತವಾಗಿತ್ತು. ಚೀನಾದ ವರ್ಣ ವ್ಯವಸ್ಥೆ, ನಿಸರ್ಗಪೂಜಕ ಧರ್ಮ ವ್ಯವಸ್ಥೆ, ಶ್ರಾದ್ಧ ವಿಧಿಕ್ರಮ ಯುಕ್ತ ರುಟೋಂಬದ್ಧತೆ ಮತ್ತು ತಾಯೋ ಮತದಲ್ಲಿ ಜೋಗಿನಿಸ್ಥ ಮತ್ತು ಮಂತ್ರ ತಂತ್ರಗಳ ಪ್ರಭಾವ-ಇವೆಲ್ಲವೂ ಭಾರತದ ಸಂಸ್ಕೃತಿದ ಪ್ರತಿರೂಪವಾಗಿವೆ. ಇದಕ್ಕಾಗಿ ಚೀನಾವು ಭಾರತಕ್ಕೆ ಬಹಿಸೂಣಿರಲೇ ಬೇಕು. ಇತ್ತೀಚೆಗೆ ಶಮನ್ಯಸಿಜಂ ಪ್ರಚಾರದಲ್ಲಿ ಪ್ರಾಚೀನ ಸಂಸ್ಕೃತಿಯನ್ನು ಸಮೂಧಿಗೈದು ಆಧುನಿಕ ವಾದೋ ಸಂಸ್ಕೃತಿಯನ್ನು ಸ್ಥಾಪಿಸುವ ಪ್ರಯತ್ನ ನಡೆಯುತ್ತಿದೆಯೆಂಬ ವಾತು ಬೇರೆ.

ಜಪಾನದಲ್ಲಿ ಕ್ಷತ್ರಿಯರಾಜರು

ಕಳಾಸು ಜಪಾನದ ಪ್ರತಿಷ್ಠಿತ ವಿದ್ವಾಂಸ. ಆತನು ಜಪಾನಿ ಸಂಸ್ಕೃತಿ ಭವನತ್ತ ಭಾರತೀಯ ಸಂಸ್ಕೃತಿಯ ಆಧಾರ ಸ್ತಂಭನ ವೇಲೆ ನಿಂತಿದೆಯೆಂದ ಹೇಳಿದ್ದಾನೆ. ಜಪಾನೀಯರು ಮೊದಲ್ಲಿ ಭಾರತೀಯ ವಿದ್ವಾಂಸ ಬುದ್ಧಿಸೇನ ಭಾದ್ವಾಜನ ನೆನಪಿಗಾಗಿ ನಾರಾದಲ್ಲಿ ಒಂದು ಮಂದಿರವನ್ನು ಸ್ಥಾಪಿಸಿದರು. ಬುದ್ಧಿಸೇನನು ಕೆಲವು ಸಂಗಾತಿಗಳನ್ನು ಕೂಡಿಕೊಂಡು ಒಕ್ಕೈಕ್ಕೆ ಧರ್ಮ ಪ್ರಚಾರಕ್ಕಾಗಿ ಹೋದನು; ಅಲ್ಲೇ ಉಮಹಾಕಾರ್ಯಕ್ಕಾಗಿ ತಮ್ಮ ಜೀವನವನ್ನು ಮುಡುಪಿಟ್ಟನು. ಚಂದ್ರವಂಶದ ಕ್ಷತ್ರಿಯರು ಜಪಾನದಲ್ಲಿ ಮೊತ್ತಮೊದಲಿಗೆ ಸಾಮ್ರಾಜ್ಯ ಕಟ್ಟಿದರೆಂದು ಹಲವು ವಿದ್ವಾಂಸರು ಹೇಳುತ್ತಾರೆ. ಜಪಾನದ ಉಪಾಸನಾ ಪದ್ಧತಿ ಮತ್ತು ಧಾರ್ಮಿಕ ಮಹತ್ಸಣೆಗಳ ವೇಲೆ ಹಿಂದೂ ಧರ್ಮದ ಸ್ಪಷ್ಟ ಮುದ್ರೆ ಬಿದ್ದಿದೆ. ಜಪಾನವು ದೀಪಾವಳಿ ಹಬ್ಬವನ್ನು ಆಚರಿಸುತ್ತದೆ. ಭಾರತೀಯರಂತೆಯೇ ಶ್ರಾದ್ಧದ ಮೂಲಕ ಪೂರ್ವಜರಿಗೆ ಕೃತಜ್ಞತೆ ಸಲ್ಲಿಸುತ್ತದೆ.

ಐಗುಪ್ತದಲ್ಲಿ ಕಣ್ಮರು

ಕ್ರಿ. ಪೂ. ೪೬೯-೪೯೨ ಮಧ್ಯಾವಧಿಯಲ್ಲಿ ಭಾರತೀಯ ದಾರ್ಶನಿಕರು ಯೂನಾನಿಗೆ ಹೇಗೆ ಬರುತ್ತಿದ್ದರೆಂಬುದಕ್ಕೆ ಪ್ರಬಲ ಆಧಾರಗಳು ದೊರೆಯುತ್ತವೆ. ಶ್ರೀಪ್ರೋಕಾನು ಥಿಯಾನಾದ ಮಾಲನಿವಾಸಿಗಳು ಕ್ಷತ್ರಿಯರೆಂದು "ಇಂಡಿಯಾ ಇನ್ ಗ್ರೀಸ್" ಎಂಬ ಪುಸ್ತಕದಲ್ಲಿ ಬರೆದಿದ್ದಾನೆ. 'ಹಿಂದುಗಳೇ ಎಂಟು ಸಾವಿರ ವರ್ಷಗಳಿಗೆ ಮೊದಲು ಐಗುಪ್ತ ನಾಗರಿಕತೆಗೆ ಪ್ರಾಣಪ್ರತಿಷ್ಠೆ ಮಾಡಿದರು' ಎಂದು ರಶ್ಯದ ವಿದ್ವಾಂಸ ಕರ್ನಲ್ ಅಲ್ಟಾಟನ್ ನಂಬಿದ್ದಾನೆ. ಯೂನಾನಿನ ಪ್ರಜೆಗಳು ನಿಸರ್ಗ ಪೂಜಕರಾಗಿದ್ದರು. ಐಗುಪ್ತದ ಜನರು ದನ ಮತ್ತು ಸೂರ್ಯರನ್ನು ಪೂಜಿಸುತ್ತಿದ್ದರಂ ದು "ಅಲ್ಲಿಂತ ವರೆಗಾದ ಉತ್ಪ್ರವನದಿಂದ ಗೊತ್ತಾಗಿದೆ, ಡಾ| ಪ್ರಾಣನಾಥನು ಶೋಧಾನಂತರ ಈ ನಿಷ್ಕರ್ಷೆಗೆ ಬಂದಿದ್ದಾರೆ: "ಐಗುಪ್ತದಲ್ಲಿ ಸಂಸ್ಕೃತವು ರಾಜ್ಯಭಾಷೆ ಆಗಿತ್ತು. ಅಲ್ಲಿಯ ಭಾಷೆಯಲ್ಲಿ ಸಾವಿರಾರು ಸಂಸ್ಕೃತ ಪದಗಳು ಇಂದಿಗೂ ಉಳಿದುಕೊಂಡಿವೆ. ಅಲ್ಲಿನ ದೇವಾಲಯಗಳು ಭಾರತದ ಸೂರ್ಯ ಮಂದಿರಗಳ ಶೈಲಿಯಲ್ಲಿ ನಿರ್ಮಾಣವಾಗಿವೆ. ಹಿಂದೂ ದೇವದೇವತೆಯು ಹೆಸರುಗಳನ್ನೇ ಕೊಂಚ ಕೊಂಚ ಪರಿವರ್ತಿಸಿ ತಮ್ಮ ದೇವ—ದೇವತೆಗಳನ್ನು ಅವರು ಹೆಸರಿಸಿದ್ದಾರೆ.' ಈ ಪರಿವರ್ತನೆಯು ಉಚ್ಚಾರ ಭೇದದಿಂದ ಆಗಿರುವುದೂ ಸಾಧ್ಯ. ಮಹರ್ಷಿ ಕಣ್ವರು ಐಗುಪ್ತಕ್ಕೆ ಹೋದರೆಂದೂ ಅಲ್ಲಿ ಅವರು ಹತ್ತು ಸಾವಿರ ಜನರಿಗೆ ದೀಕ್ಷೆ ನೀಡಿದರೆಂದೂ ಭವಿಷ್ಯಪುರಾಣದಲ್ಲಿ ಉಲ್ಲೇಖವಿಗುತ್ತದೆ.

ರೋಮಿನಲ್ಲಿ ವೇದಿ

ರೋಮಿನಲ್ಲಿ ಭಾರತದಂತೆಯೇ ವೇದಿಗೆ ಪ್ರಧಾನ್ಯತೆಯಿದೆ. ವಿವಾಹವಾಗುತ್ತಿತ್ತ. ಶವದಹನವೂ ಪ್ರಚಲಿತವಿತ್ತು. ನಾಲ್ಕು ದಿನಗಳ ತನಕ ಮೃತ್ಯು ಸೂತಕವಿತ್ತು. ಭಾರತದ ಹಿಂದೆ ಐದೂವರೆ ಕೋಟಿ ವಿದೇಶೀ ಮುದ್ರೆಗಳನ್ನು ರೋಮು ದಿಂದ ಗಳಸಲಾಗಿತ್ತು.

ಸಿಂಧು-ಸುಮೇರು

"ನ್ಯೂ ಲೈಟ್ ಅನ್ ದಿ ಮೋಸ್ಟ್ ಏನ್ಸ್ಯೆಂಟ್ ಈಸ್" ಎಂಬ ದು ಗಾರ್ಡನ್ ಚಯಿಲ್ಡ್‌ನ ಉದ್ಗ್ರಂಥ. ಇದರಲ್ಲಿ ಸಿಂಧು ನದೀ ಕಣಿವೆಯು ನಾಗರಿಕತೆಯು ಸುಮೇರಿಯನ್ ನಾಗರಿಕತೆಗೆ ಮೂಲವೆಂದ ಆತ ಘೋಷಿಸಿದ್ದಾನೆ. ಲಿಯೊನಾರ್ಡ್ ವೂಲಿಯೂ ಇದೇ ನಿಷ್ಕರ್ಷೆಗೆ ಬಂದಿದ್ದಾನೆ. ಹರಪ್ಪ ಮತ್ತು ಮೊಹೆಂಜೆದಾರೋಗಳ ನಾಗರಿಕತೆಯು ಆರಂಭಿಕ ಸಭ್ಯತೆಯು ಅವಶೇಷಗಳಲ್ಲವೆಂದೂ ಅದರ ವಿಕಸಿತ ನಾಗರಿಕತೆಯು ಪ್ರತೀಕಗಳೆಂದೂ ಸರ್ ಜಾನ್ ಮಾರ್ಶಲ್ ಅಭಿಪ್ರಾಯಪಟ್ಟಿದ್ದಾರೆ.

ಇರಾಣದಲ್ಲಿ ಯಜ್ಞೋಪವೀತ

ಇರಾಣವನ್ನು ಸ್ಥಾಪಿಸಿದವರು ಭಾರತೀಯರೆಂಬುದು ಆಕರ್ಷಿಗ್ದ. ಅಥರ್ವವೇದದ ಆಧಾರದ ಮೇಲೆಯೇ ಜೋಂದಾವೇಸ್ತಾಕ್ಕೆ ಹೆಸರಾಯಿತ್ತು. "ಜೋಂದ್" "ಛಂದಸ್" ಎಂಬುದರ ರೂಪಾಂತರ "ಅವೇಸ್ತಾ" ಎಂಬುದು ವೇದದ ಪರಿವರ್ತಿತ ರೂಪ. ಜೋಂದ್ ಭಾಷೆಯ ಶಬ್ದಗಳಲ್ಲಿ ಮೂರಕ್ಕೆ ಎಕ್ಕಟ್ಟರಷ್ಟು ಸಂಸ್ಕೃತದ್ದು. ಗಾಥಾ ಪೂರ್ವ ಮತ್ತು ಯಗ್ನೇದಗಳ ನಡುವೆ ಭಾಷಾಗತ ಹಾಗೂ ಭಾವಗತ ಸಾಮ್ಯ ಬಹಳವಿದೆಯೆಂದು ಡಾ| ತುರಾಪುರವಾಲರು ಹೇಳುತ್ತಾರೆ. ಇರಾನೀಯರು ಗೋಪೂಜಕರು; ಅಗ್ನಿ ಹೋಮ ಉಪಾಸಕರು. ಪುನರ್ಜನ್ಮದಲ್ಲಿ ವಿಶ್ವಾಸವಿಟ್ಟಿಳಿವರು. ಅವರು ಯಜ್ಞೋಪವೀತವನ್ನು ಧರಿಸುತ್ತಾರೆ. ಅವರ ಸಮಾಜ ವ್ಯವಸ್ಥೆಯ ವೇಲೆ ಭಾರತೀಯ ವರ್ಣವ್ಯವಸ್ಥೆಯ ಛಾಯೆ ಗಾಢವಾಗಿ ಮೂಡಿ ಬಂದಿದೆ.

ಕಾಬೂಲಿನಲ್ಲಿ ಮಠ ಮಂದಿರ

ಕ್ರಿ. ಶ. ೬೫೦ರಲ್ಲಿ ಗಂಧಾರದ ವೇಲೆ ಕ್ಷತ್ರಿಯರ ಅಧಿಕಾರವಿತ್ತೆಂದು ಹ್ಯೂ ನೆನ್ ಸಾಂಗನ ಬರೆದಿದ್ದಾನೆ. ಸಂಸ್ಕೃತದ ವಿಹಾ ವ್ಯಾಕರಣ ಗ್ರಂಥಕಾರ ಪಾಣಿನಿಯು ಅಫಘಾನಿಸ್ತಾನದವನೆಂದು ಕೆಲವರನ್ನುತ್ತಾರೆ. ಪಶ್ತೋ ಮತ್ತು ಸಂಸ್ಕೃತಗಳ ನಡುವೆ ನಿಕಟ ಸಂಬಂಧವಿದೆ. ಕಾಬೂಲಿನಲ್ಲಿ ಹಿಂದೂ ದೇವಾಲಯಗಳೂ ಇವೆ. ಅಲ್ಲಿ ಬೈರಾಗಿಗಳು, ಉದಾಸಿಗಳು, ಖಾಥರು ಮತ್ತು ಸನ್ಯಾಸಿಗಳ ಹಲವಾರು ಮಠಗಳೂ ಇವೆ. ಸಂಸ್ಕೃತ ಭಾಷೆಯ ಅಧ್ಯಯನಕ್ಕೆ ಅನುಕೂಲ ಕಲ್ಪಿಸಿದ ವಿಶೇಷಗಳಲ್ಲಿ ಅಫಘಾನಿ ಸ್ಥಾನಕ್ಕೆ ಅಗ್ರಸ್ಥಾನ ದೊರೆಯುತ್ತದೆ.

(ಉಳಿದುದು ಮುಂದಿನ ವಾರ)

ಬೆಳಕು ಮತ್ತು ಗಾಳಿಯನ್ನು ಕೊಡುವ ವಿಚಿತ್ರ ದೀಪ

ಮಂಗಳೂರು: ಹೆದರಲ್ ರಿಪಬ್ಲಿಕ್ ಆಫ್ ಜರ್ಮನಿಯ ಮಂಗಳೂರಿನಲ್ಲಿರುವ ಸಿಮೆನ್ಸ್ ಸಂಸ್ಥೆ ಒಂದು ವಿಚಿತ್ರ ದೀಪವನ್ನು ತಂದು ಮಾರಿಕೆಗಿರುವರು. ಈ ವಿದ್ಯುತ್ ದೀಪ ಬೆಳಕನ್ನೂ ಗಾಳಿಯನ್ನೂ ಕೊಡುತ್ತದೆ. ದೊಡ್ಡ ದೊಡ್ಡ ಆಫೀಸುಗಳಲ್ಲಿ, ಲೆಕ್ಚರ್ ಹಾಲುಗಳಲ್ಲಿ, ಸೊಪರ್ ಮಾರ್ಕೆಟುಗಳಲ್ಲಿ ಈ ದೀಪಗಳು ತುಂಬಾ ಉಪಯುಕ್ತ. ಈ ಹವಾಮಾನ ದೀಪದ ಪ್ರತ್ಯೇಕ ಪ್ರಯೋಜನವೆಂದರೆ ಇದು ಕೋಣೆಯಲ್ಲಿ ತುಂಬಿರುವ ಸೀಸಿದ ಗಾಳಿಯನ್ನು ಏಕಕಾಲಕ್ಕೆ ಹೀರುವಂತೆ ಆದೇ ಸಮಯಕ್ಕೆ ದೀಪದಿಂದ ಹೊರಬರುವ ಉಷ್ಣವನ್ನು ನೆಲೆಪಿ ಕೊಳ್ಳುತ್ತದೆ. ಇದೇ ಸಮಯದಲ್ಲಿ ಹೊಸ ಗಾಳಿ ಕೋಣೆ ತುಂಬಾ ಹರಡಲ್ಪಡುತ್ತದೆ. ಉಷ್ಣ ಕಾಲದಲ್ಲಿಯಂತೂ ಕೂಡಾ ಈ ದೀಪದಿಂದ ವೈವಿಧ್ಯತೆಗೊಳ್ಪುವ ಮಾತಾವರಣ ತುಂಬಾ ಆಪ್ತವೆಂದನಿಸುವುದು. ಇದರ ತಾಂತ್ರಿಕ ವಿಧಾನವನ್ನು ಈ ರೀತಿಯಲ್ಲಿ ವಿವರಿಸಬಹುದು. ಉಪಯೋಗಿಸಲ್ಪಟ್ಟ ವಾಯು ದೀಪದ ಮೂಲಕ ಪರದೆಯ ಆಕಾರದಂತೆ ಕಾಲುವೆಯೊಂದಕ್ಕೆ ದಬ್ಬಲ್ಪಡುತ್ತದೆ. ಇದರ ಪ್ರತಿರುದ್ಧ ಶುದ್ಧ ವಾಯು ಹೊರಗಿನ ಉಷ್ಣತೆಗೆ ಅಳವಡಿಸಿ ಗಾಳಿ ಶುದ್ಧೀಕರಣ ಯಂತ್ರದಿಂದ ಕೋಣೆಯೊಳಗೆ ಮಚ್ಚುಬುವ ನಳಿಗೆಯ ಮೂಲಕ ತುಂಬಲ್ಪಡುತ್ತದೆ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾಶ್ಚಿಮಾತ್ಯರ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

ಚಾರು ಚಯನ

ಇಂಡಿಕೇಟ್ ಕಾಂಗ್ರೆಸಿನ ಅಧ್ಯಕ್ಷ ರಾಗಿ ಆಯ್ಕೆಯಾದಾಗ ಶ್ರೀ ಜಗಜ್ಜೀವನ ರಾಮ್ ಕೇಂದ್ರದಲ್ಲಿ ಆಹಾರ ಸಚಿವರಾ ಗಿದ್ದರು. ಮಂದವರು ಸಚಿವ ಸ್ಥಾನವ ನ್ನು ಬಿಟ್ಟುಕೊಡಬೇಕೆಂದು ಹಲವರು ಕೇಳಿಕೊಂಡರೂ ಅವರು ತುಟಿ ಪಿಟಕ್ಕೆ ನ್ನಲಿಲ್ಲ.

ಅವರ ಪ್ರಾಯಿಕೆ ಶ್ರೀಮತಿ ಇಂದಿರಾ ಗಾಂಧಿಯವರು ರಾಜಿನಾಮೆಯು ಬೇಡಿಕೆ ಯನ್ನೆ ಸವ ಥಿಸಲೂ ಇಲ್ಲ, ಅಲ್ಲಗಳೆ ಯಲೂ ಇಲ್ಲ. ಅತ್ಯಾಕ್ಷಿಯ ಹೇಳಿಕೆ ಯಂತೆ ಶ್ರೀ ರಾಮರು ಯಾವುದಾದರೂ ಒಂದನ್ನು ಬಿತಬಹುದು, ಎರಡನ್ನೂ ಬಿ ಡಬಹುದು. ಅಥವಾ ಎರಡನ್ನೂ ಉಳಿಸಿ ಕೊಳ್ಳಲೂ ಬಹುದು.

ರಾಜ್ಯಕೀಯ ನಾಯಕರು ಮಂತ್ರಿ ಯಾಗಬೇಕೆಂದು ಏನೇನೆಲ್ಲ ಮಾಡುವಾಗ ದೊರಕಿದ ಮಂತ್ರಿತಪವನ್ನು ಕೈಬಿಡುವ ಷ್ಟು ಶ್ರೀ ರಾಮ್ ಮೂರ್ಖರಾಗಲಿಲ್ಲ. ಮನೆಯಲ್ಲಿ ಮತ್ತೊಮ್ಮೆ ಬಂದು ನೆಲಸಿದ ಮಹಾಲಕ್ಷ್ಮಿಯನ್ನು ಬಿಟ್ಟುಬಿಡುವುದೆ?

ಶ್ರೀ ರಾಮರು ಬೇಡಿ ಅಧ್ಯಕ್ಷಗಿರಿ ಪಡೆದವರಲ್ಲ. ಎರಡು ತಿಂಗಳ ಕಾಲಾವ ಧಿಯಲ್ಲೇ ವಿವಾದಾತ್ಮಕ ಅಧ್ಯಕ್ಷರಾಗಿ ಹೆರಿದಾಡಿದ ಶ್ರೀ ನಿಜಲಿಂಗಪ್ಪರ ಉತ್ತರಾ ಧಿಕಾರಿ ಹೊರಬ ಎಂದು ಶ್ರೀಮತಿ ಗಾಂ ಧಿಗೆ ದಿಕ್ಕು ತೋರದಾಯಿತು.

ದಕ್ಷಿಣಾ ಭಾರತೀಯರಾದ ಶ್ರೀ ಎ ಸ್ಸೆಸ್ ಮತ್ತು ಕಾಮರಾಜರಿಗೆ ಲಾಭ ಕೊಡಲು ದಕ್ಷಿಣದ ಕುದುರೆಯೇ ಬೇ ಕೆಂದು ಅವರು ತಿಳಿದು ಆಂಧ್ರದ ಶ್ರೀ ಡಿ. ಸಂಜೀವಯ್ಯನವರನ್ನು ಎತ್ತಿ ಹಿಡಿ ದರು.

ಶ್ರೀ ಸಂಜೀವಯ್ಯನವರೂ ಸಿದ್ಧರಿದ್ದ ರು. ಸರ್ಕಾರದಲ್ಲಿ ಹೊರ ಹುದ್ದೆಯ ನ್ನೂ ಕೊಡಿಸಲು ಮುಂದಾಗದ ಸಿಂಡಿ ಕೇಟಿನ ಪೀಲೆ ಅವರಿಗೆ ಮುನಿಸು. ಪಾ ಲಿಗೆ ಖಂಡದ್ದನ್ನು ಪಂಚಾವೃತವೆಂಬ ಜಗೆಯುವವರು ಅವರಲ್ಲವಾದರೂ ಸಹು ಯೋಚಿತ ಜಾಣ್ಮೆಗೆ ಅವರು ಮತ್ತೊಂದು ಹೆಸರು.

ಆದರೆ, ಶ್ರೀ ಬ್ರಹ್ಮಾನಂದ ರೆಡ್ಡಿ ಬ ಡಲಿಲ್ಲ. ಶ್ರೀ ಸಂಜೀವಯ್ಯ ಇಂಡಿ ಕೇಟ್ ಗದ್ದುಗೆಗೇರುವ ಭಾಗ್ಯ ಅಂಧ್ರ ಬ್ರಹ್ಮ ಬರೆಯಲಿಲ್ಲ. ಮತ್ತಾರೆಂದು ಮತ್ತಾರೆಂದು ಯೋಚಿಸಲು ಬಿಡುವೆಷ್ಟೆ?

ಶ್ರೀ ರಾಮ್ ಫೀಲ್ಡ್ ರಪ್ಪೆ...

ತಥ ಸ್ತು.....

ಆದದ್ದೆಲ್ಲಾ ಒಳತೇ ಆಯ್ತು. ಶ್ರೀ ಸಂಜೀವಯ್ಯನವರಿಗೆ ಮಂತ್ರಿ ಪಟ್ಟ, ಅದು ದೊರೆಯದೆ ಹೋಗಿದಿದ್ದರೆ ಅವರು ಆಪಾದ ಕೇಟಾಗುತಿದ್ದರೆಂದು ಹೇಳಬರುತ್ತಿರಲಿಲ್ಲ.

ಶ್ರೀ ರಾಮರು ಆರು ತಿಂಗಳು ಇಂಡಿ ಕೇಟಿಗೆ ರಪ್ಪೆ ಫೀಡಿದರ ; ಇತಿಗೆ ತನ್ನ ಹ ಳೆಯ ಕೇಸು—ದೇಶಕ್ಕೆ ಆಹಾರ ಫೀಡ ವು ದನ್ನೂ—ಬಿಡಲಿಲ್ಲ

ಶ್ರೀಮತಿ ಗಾಂಧಿಗೆ ಇದು ಸಂಬರಿಲ್ಲ. "ಶ್ರೀ ರಾಮರೇ, ಮಂತ್ರಿಪದವಿ ಬಿಟ್ಟು ಬಿಡಿ" ಎನ್ನುವಂತಹ ದಾಪ್ಷೆಶ್ ಈಗಲೇ ಆಕೆ ಕೋರಿಸಿದರೆ, ಚುನಾವಣೆ ಯಲ್ಲಿ ಹೆರಿಜನರ ಮತ ಹರಿಹಂಚು. ಸಿಮ್ಮನಿದ್ದರೆ ಹುಬಕರ ಕಸಿವಿ ಸಿ.

ಉಪಾಯ ಫಿಪುಣೆಯಾದ ಆಕೆ ಬೇರೆ ಯೇ ಉಪಾಯ ಹೂಡಿದರು. ದೇಶ ಕ್ಕೆ ಆಹಾರ ಫೀಡಿ ಯಶ ಗಳಿಸಿದರು. ಈಗಕ್ಷಣಕ್ಕೆ ಫೀಡಿ ಎಂದರು—ಪರದೇಶಕ್ಕೆ ಕೇಬಲ್ ಕಳಿಸಿ.

ಶ್ರೀ ರಾಮ್ ಪುಣ್ಯಕ್ಕೆ ಪುನಾರಚ ನೆಯು ಹೆಸರಲ್ಲಿ ಕೈ ಬಿಡಲಿಲ್ಲ!

ಹೊಸ ಕೇಸು ಗುರುತರ; ಅಧ್ಯಕ್ಷಗಿರಿ ಫಿರ್ವಹಣೆ ಕಷ್ಟತರ. ಆದ್ದರಿಂದ ರಾಜಿ ನಾಮೆ—

ಅನಸರ ಬೇಡಿ. ಮುಂದೆ ಆಗಾ ರೆಂದು ತುಸ ತಲೆ ತುರಿಸೋಣ.

ಯಾರಿದ್ದಾರೆ?

ಹಿಂಸೊಮ್ಮೆ ತಡಯಾಂದ್ದ ಸಂಜೀ ವಯ್ಯ....

"ಊಹ್ಞೂಂ. ಮಂತ್ರಿಪದವಿ ದಕ್ಕಿದ ಹೇಲೆ ಈ ಕಛಡಾ ಒಛಡಾ ಯಾಕೆ? ಮಂತ್ರಿ ಸಿಸುವನ್ನೇ ತಂದರೇಮು?

ಛೆ, ಎರಡೇ ತಿಂಗಳಲ್ಲಿ ತಂಬ ಗೋ ಟಾಳೆ ಮಾಡಿದವರು ಈ ನೇಳೆಯುಲ್ಲಿ...

ಅಷ್ಟರಲ್ಲಿ ಒಂದು ಸ್ವರ—ಪ್ರಧ ಫಿ ಯೇ ಆಗಲಿ.

ಆಕೆ ಸ್ವಯಂಸಿದ್ಧೆ. ಆದರೆ, ಶ್ರೀ ನಾಮಾನ್ನನ ಕಲ್ಯಾಣಕ್ಕಾಗಿ ಆಕ್ಷಣ ಕ್ಷಿಗೆ ಸಂಧಿಯಾಗಿ ದ ಡಿಯುವ ಆ ಕೆಯು ಅನ ಪವು ಸೇವೆಯನ್ನೇ ಸರ್ವಾಧಿ ಕಾರವೆಂದು ಕರೆಯುವ ತಲೆ ತಿರುಕರು ಚುನಾವಣೆಗಳ ವೇಳೆಯಲ್ಲಿ....

ಮತ್ತಾರು?

ನಿಜ್ಜಿ ಸ್ವಪ್ಪ. ಪಮ್ಮ ಕವಲಾಪತಿ ತ್ರಿ ಪಾಠಿಯವರನ್ನು ಕರಿಸೋಣ.

ಅವರಿಗೆ ಬಿಡುವಿಲ್ಲ. ಉತ್ತರ ಪ್ರದೇಶ ದ ಪ್ರಧಾನ ಸಭೆಯಲ್ಲಿ ಶ್ರೀ ಚರಣ ಸಿಂಗ ರ ಸರಕಾರ ಫರ್ಜಾಯ ಬಿದ್ದುಹೋಯ್ತು. ಆದರೆ, ಸಿಂಗರ ಮೇಲಿನ ವಿಶ್ವಾಸ ಗೊ ತ್ತುವಳಿ ಮಂಜೂರಾಯ್ತು. ಈಗ ಅವರೇ ಲವಿಸಾ ಬಿಟ್ಟರೆ, ಚರಣ ಸಿಂಗರೂ ಸಿಂ ಹಾಸನ ಬಿಡಬೇಕಾಪೇಕು.

ಹಾಗಾಗಬೇರೆ ಟಿಲಿಫೋನೇ ಶರಣು. ಏನಂತೀರಿ ತ್ರಿಪಾಠಿಯವರೆ? "ಅನ್ನೋ ದೇನು? ನೋಡ್ರಿ, ನಾನೇ ಮುಖ್ಯಮಂ ತ್ರಿಯಾಗ ಬೇಕೆಂದು ಶ್ರೀ ಸಿ. ಬಿ. ಗುಪ್ತ ರಿಗೆ ತಿರುಪತಿನಾಮ ಹಾಕಿದೆ. ಆದರೆ ಚರಣಸಿಂಗರು ಹಿಡಿದ ಪಟ್ಟು ಬಿಡಲಿಲ್ಲ. ಇದೀಗ ಅವರು ರಾಜಿನಾಮೆ ಕೊಡುವಂ ತೆ ಹೇಗಾದರೂ ಮಾಡಿ ಫಾನೇ....

ಮುಖ್ಯಮಂತ್ರಿಯಾಗ ಬೇಕಂತೀ ರಾ?

ಕೊಡಿ ಶ್ರೀಮತಿಯವರೇ, ನೀವು ಅನ್ಯ ಥಾ ತಿಳಿದುಕೊಳ್ಳ ಬೇಡಿ. ರಾಜ್ಯದ ರಾ ಜ್ಯಕೀಯದಿಂದ ಇಷ್ಟು ಬೇಗನೇ ನಿವೃ ತ್ತಿ ದಿಟ್ಟಿಸಿ ಅಧಿಕಾರ ಹೀನ ಗದ್ದುಗೆಗೆ ಕೆದರೆ ಫನ್ನ ಭವಿಷ್ಯ...

ಆದೆಲ್ಲ ಯೋಚನೆ ಬಿಟ್ಟು ಬಿ ಡಿ. ನಿಮ್ಮ ಒಳಿತು ಕೆಡಕುಗಳೇ ನ ಮ್ಮವು. ಚುನಾವಣೆಗಳು ಹತ್ತಿರ ಬಂದುದರಿಂದ ಹೊಸಿಗಾರರೇ ನಮಗೆ ಬೇಕು.

ನಿಮ್ಮ ಗೌರವಕ್ಕೆ ಭಂಗ ಆದೂ ನಿಶ್ಚಿಂತೆಯಿಂದ ಹ್ಞೂಂ ಅನ್ನಿ. ಸಸು ಎ ರಡು ತಿಂಗಳು ನೋಡಿದರು. ರಾಮರು ಆರು ತಿಂಗಳು ದೂಡಿದರು. ನೀವು ಒಂ ದೆಂಟು ತಿಂಗಳಾದರೂ ಸರಿ ಧಾರಿಸಿ. ನಿಮ ಗೆ ಸಾಧ್ಯವೇ ಆಗಲಿಲ್ಲವೆಂದರೆ, ಬಿಟ್ಟು ಬಿಡ ವುದಕ್ಕಾಗಿ ತೆಯೆ? ಹೇಗೂ ಈಗ ಲೇ ಜನ ಸರ್ವಾಧಿಕಾರಿ ಅಂತಾರೆ. ಅಂ ದುಕೊಳ್ಳಲಿ. ನಮಗೆ ನಮ್ಮ ಅತ್ಮಸಾಕ್ಷಿ ಜಾಗೃತವಾಗಿದ್ದರೆ ಸಾ.

ಹಾಗಾದರೆ ಶ್ರೀಮತಿಯವರೇ, ಶ್ರೀ ರಾಮರೂ ಅಧ್ಯಕ್ಷಗಿರಿಗೆ ನಾಲಾಯಕ್ಕಾ ದರು. ಮೂರನೆಯವನಾದ ಖಾನೂ ಹಾಗೇ ಅನ್ನಿ. ಕೇಂದ್ರದಲ್ಲಾಗಲೀ ರಾಜ್ಯದ ಲ್ಲಾಗಲೀ ಒಂದು ಕಾರ್ಯಂ ಮಂತಿಪಟ್ಟ ತೆಗೆಸಿಕೊಡುವ ಬಗ್ಗೆ ಗಂಭೀರವಾಗಿ ಯೋಚಿಸಿ. ಫಾನೂ ಫಾಲ್ಕು ದಿನ ಯೋ ಚಿಸಿ ದಿಲ್ಲಿಗೆ ಬರ ತ್ತೇನೆ.

—ಕನ್ನೆಸ್ಸರ ಕಡಿಯಿತು. ಶ್ರೀಮತಿ ಗಾಂಧಿ ಇನ್ನೊಂದು ಯಜ್ಞಾಶಯನವನ್ನು ಹಿಡಿದು ತರುತ್ತಾರೆ— ಚುನಾವಣೆಗಳ ಮುಸ್ಸಂಜೆಯ ವರೆಗೆ ಸಿಂಹಾಸನವನ್ನು ಲಂಕರಿಸಲು.

ಭಾರತದ ಕೈಕಸಬು

(ಏಳನೇ ಪುಟದಿಂದ)

ಸೂರ್ಯನೆ ಶತಮಾನದ ಅಂತಿಮ ಭಾಗ ದಲ್ಲಿ ಭಾರತದ ಹಲವು ಅಭಿವೃದ್ಧಿಗೊಂಡ ಪ್ರದೇಶಗಳಲ್ಲಿ ಬಂಡವಾಳವಾದೀ ಉತ್ಪಾ ದನಾ ವಿಧಾನದ ಅಂಶಗಳು, ಅವುಗಳ ಪ್ರ ಕಟಿಸು ಪ್ರವೃತ್ತಿಯ ಏಕಸ್ವರೂಪದ್ವಾರಿ ದಿದ್ದರೂ ವ ತ್ತು ಭಿನ್ನಭಿನ್ನ ಲಕ್ಷಣಗಳನ್ನು ತೋರಿಸುತ್ತಿದ್ದವಾದರೆ ಕಂಡುಬರೊಡ ಗಿದ್ದುವು. ವಸಾಹತು ಆಡಳಿತವು ದೇಶ ದ ಸಹಜ ಬೆಳವಣಿಗೆಗೆ ಅಡ್ಡಿ ಪಡಿಸಿತೆಂ ದೂ, ಭಾರತವು ಬಂಡವಾಳವಾದದೆಡೆಗೆ ಪ್ರಗತಿಗೊಳ್ಳಲು ದೀರ್ಘವಾದ ತಡೆಯಾ ಯಿತೆಂದೂ ಹೇಳುತ್ತ ಚಿಚೆರೋವ್ ರು ತಮ್ಮ ಲೇಖನವನ್ನು ಮುಗಿಸುತ್ತಾರೆ.

ಅಪೂರ್ವ ಯಕ್ಷಗಾನ

ಉಡುಪಿ ಜೂನ್ 29:— ಬನ್ನಂಜೆ ಸು ಧಾಲಿಂಗೇಶ್ವರ ಯಕ್ಷಗಾನ ಮಂಡಳಿಯ ಆ ಶ್ರಯದಲ್ಲಿ ಜಿಲ್ಲೆಯ ಪ್ರಸಿದ್ಧ ಆರ್ಥಧಾರಿಗಳ ಸಮ್ಮಿಲನದಿಂದ 28ರಂದು ಡಾ। ಪಿ. ವಿ. ವ್ಯಾಸರಾವ್ ಇವರ ಅಧ್ಯಕ್ಷತೆಯಲ್ಲಿ ಸು ಧಾಲಿಂಗೇಶ್ವರ ದೇವಸ್ಥಾನದ ಪಾಠಿಯಲ್ಲಿ ಶ ಕ್ಯಸಾರಥ್ಯವೆಂಬ ಯಕ್ಷಗಾನ ಕೂಟವು ಜರ ಗಿತು. ಸಾಧ್ಯದ ಕಾರ್ಯಂ ಅಧ್ಯಕ್ಷ ಅಮ್ಮಂ ಜೆ ನಾಗೇಶ್ ನಾಯಕರು ಸ್ವಾಗತಿಸಿದರು; ಪ್ರಧಾನ ಕಾರ್ಯದರ್ಶಿ ನಾರಾಯಣ ಶೇರಿ ಗಾರರು ವರದಿಯನ್ನು ಓದಿದರು. ನೀತಾನಿ ಗಣಪಯ್ಯ ಶೆಟ್ಟರು ಯಕ್ಷಗಾನ ಸಂಘಗಳು ಮಾಡಬೇಕಾದ ಕೆಲಸಗಳ ಬಗ್ಗೆ ಸಂಪದನೆಯ ನ್ನು ಇತ್ತರು. ಅಧ್ಯಕ್ಷ ಡಾ. ಪಿ. ವಿ. ವ್ಯಾ ಸರಾಯರು ಪೌರಾಣಿಕ ಮಹಾಪುರುಷರ ವೈ ಕ್ತಿಕ್ಷ ಸಮಾಜದ ಮೇಲೆ ನ್ಯಾಯ, ನೀತಿ, ಧ ರ್ಮ, ಸದಾಚಾರ ಮುಂತಾದ ಸದ್ಗುಣಗಳ ತತ್ವಪೋಷಣೆಯ ಯಕ್ಷಗಾನದ ಮೂಲಕ ಆಗ ಬೇಕೆಂಬ ತನ್ನ ಆಶಯವನ್ನು ವ್ಯಕ್ತಪಡಿಸಿ ದರು. ಶ್ರೀ ಕೆ. ನಾರಾಯಣ ಶೆಟ್ಟಿಯವರ ಹಾಡುಗಾರಿಕೆ ಎಂ. ಶಬ್ಬರಾವ್ ಮೃದಂಗ ಗೋವರ್ಧನರಾವ್ ಚಿಂಡೆ, ಸರ್ವ ಶ್ರೀ ಪೊ ಲ್ಯ ದೇವಪ್ಪ ಶೆಟ್ಟಿ, ಮಟ್ಟಿಕೋಟೆ ಶಬ್ಬರಾ ವ್, ನೀತಾನಿ ಗಣಪಯ್ಯ ಶೆಟ್ಟಿ ಯಮ್. ವೆಂಕಟಾಚಲ ಭಟ್, ಜನ್ನಿ ಬೆಟ್ಟು ಗೋಪಾ ಲ ಶೆಟ್ಟಿ, ಬಾ. ಲ. ನಾ. ಉಪಾಧ್ಯಾಯ, ರಾ ಮಚಂದ್ರ ಭಟ್ ರಾಮಮಾಸರಾವ್, ಜೆ. ಶಂಭುಶೆಟ್ಟಿಗಾರ್, ಬಿ ನಾರಾಯಣ ಶೇರಿ ಗಾರ ಇವರೇ ಮೊದಲಾದ ಕಲಾವಿದರಿಂದ ಯಕ್ಷಗಾನವು ಯಶಸ್ವಿಯಾಗಿ ಜರಗಿದ ಬಳಿ ಕ ಜನ್ನಿ ಬೆಟ್ಟು ಗೋಪಾಲ ಶೆಟ್ಟಿ ಧನ್ಯವಾದ ಸಮರ್ಪಿಸಿದರು.

ಸಂತಾಪ ಸೂಚನೆ

ಶಿವಮೊಗ್ಗ, 28-6-70 ಡಾ। ವೈ ಆರ್. ಶೆಟ್ಟ ಅಧ್ಯಕ್ಷತೆಯಲ್ಲಿ ಜರಗಿದ ಸ್ಥಳೀಯ ಮೆಡಿಕಲ್ ರಿಲೀಫ್ ಎಸೋಸಿಯೇಶನ್ ಅ ಡಳಿತ ಮಂಡಳಿಯ ಸಭೆಯಲ್ಲಿ, ಇತ್ತೀಚಿಗೆ ನಿ ಧನರಾದ ಡಾ। ಎಸ್. ಉಮೇಶರಾವ್ ಶ್ರೀ ಎಸ್. ವಿ. ಕಾಮತ್, ಡಾ। ಟಿ. ಎಸ್. ಕೆ ನಂದ್ಯಾಗ್ ಇವರ ನಿಧನಕ್ಕಾಗಿ ಸಂತಾ ಪ ಸೂಚಿಸಿ ಇವರು ಗೈದ ಸೇವೆಯನ್ನು ಸ್ಮ ರಿಸಲಾಯ್ತಲ್ಲದೆ ಮೃತರ ಆತ್ಮಗಳಿಗೆ ಚಿರಶಾಂತಿ ಕೋರಲಾಯ್ತು.

ವಿದೇಶ ಪ್ರಯಾಣ

ಮಂಗಳೂರಿನ ಎಸ್. ವಾಮನನಾಯಕ ರ್ ಎಂಡ್ ಸನ್ಸ್ ಮತ್ತು ನಾಯಕ್ ಕ್ಲೋ ಕ್ ಇಂಡಸ್ಟ್ರೀಸ್ ಇವುಗಳ ಪಾಲುದಾರರೂ ಶ್ರೀ ಎಸ್. ವಾಮನನಾಯಕರ ಪುತ್ರರೂ ಆದ ಶ್ರೀ ಎಸ್. ದೇವದಾಸ ನಾಯಕರು ಕಳೆದ ತಿಂಗಳು 20ರಂದು ಗಡಿಯೂರ ತಯೂ ರಿಕಾ ಕೈಗಾರಿಕೆಯ ವಿಶಿಷ್ಟ ಅಧ್ಯಯನಕ್ಕಾ ಗಿ ಫ್ರಾನ್ಸ್, ಲಂಡನ್, ಅಮೇರಿಕಾ ಮತ್ತು ಟೋಕಿಯೋಗಳಿಗೆ ತೆರಳಿದ್ದಾರೆ. ನಮ್ಮ ದೇ ಶದಲ್ಲಿ ಪ್ರಪ್ರಥಮವಾಗಿ ಇಲೆಕ್ಟ್ರಿಕ್ ಬ್ಯಾಟರಿಯಿಂದ ಚಲಿಸುವ ಎಲಾರಿ ಕ್ಲೋ ಕ್ ಕಯಾರಿಸುವ ಕಾರಿನ ಅಧ್ಯಯನ ನಡೆ ಸುವುದೇ ಇವರ ಪ್ರಯೊಜಿತ ಮುಖ್ಯ ಉ ದ್ದೇಶವನ್ನಾಗಿದೆ.

ಚೆಂದಾದಾರರಲ್ಲಿ ವಿನಂತಿ

ಹಿಂದಿನ ವರ್ಷ ಚಾಲ್ತಿವರ್ಷದ ಚಂ ದಾಹಣ ಬಾಕಿ ಇರುವವರು ದಯವಿಟ್ಟು ಆದನ್ನು ಆದಷ್ಟು ಬೇಗನೆ ಕಳುಹಿಸಿ ಕೊ ಟ್ಟು ಸಹಕರಿಸ ಬೇಕಾಗಿ ವಿನಂತಿ. ಈ ಬಗ್ಗೆ ಪ್ರತ್ಯೇಕ ವಿನಂತಿ ಪತ್ರವನ್ನು ಕಾ ಯದೆ ಈ ಸೂಚನೆಯನ್ನೇ ವಿನಂತಿಯೆಂ ದು ತಿಳಿದು ಹಣ ಕಳುಹಿಸಿಕೊಡುವಂತೆ ಕೇಳಿಕೊಳ್ಳುತ್ತೇವೆ.

ಮೆನೇಜರ್, ನವಯುಗ

ಪುಟ್ಟಸ್ವಾಮಿ IInd ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

I. A. II in O. S. 377/64

ಮುರುಡೇವಿ ಸಹಾ —ಅರ್ಜಿದಾರರು.

ಅಮ್ಮತ್ತಾಪತಿ ಸಹಾ —ಎದ್ರಿರು.

ಎದ್ರಿರು—

9 ಮುರುಡೇವಿ, ಶಿವದೇವಿ ಮಗಳು.

10 ಪದ್ಮಾವತಿ, 11 ವಿಜಯ—ಮುರು ದೇವಿಯ ಮಕ್ಕಳಿಗೆ ಮಕ್ಕಳು.

ಗಾಡಿಯೊನ ತಾಯಿ ನೀನೇ ಎದ್ರಿ ನರಿ ಮೊಗ್ಯ ಗ್ರಾಮಸ್ತರು

3ರಿ ಮ್ಮನರ ನೀನಾಕಮೊರಿ, ಗಾರ್ಡಿ ಯನ ತಂದೆ ನಾಗಕುಮಾರ್, ತಮ್ಮಯ್ಯ ಆ ಚ್ರಿ ಮಗ, ಬಂಗಾಡಿ ಗ್ರಾಮ.

26 ಜಿನರಾಜ ಬಂಡಾರಿ 28 ಸಾಂತಪ್ಪ— ಮಾಜಪ್ಪ ಆಚ್ರಿ ಮಕ್ಕಳು.

—28 ಪದಂಗಡಿ ಗ್ರಾಮ, 29 ಹೊಂಬುಜ, ಶಿವಮೊಗ ಜಿಲ್ಲಾ.

ಇವರಿಗೆ ಕೋರ್ಟ್ ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಅರ್ಜಿದಾರರ ಕಡೆಯಿಂದ ದಾವಾ ಆಸ್ತಿಗ ನನ್ನು ತಿಂಗಳಿಸುವ ಬಗ್ಗೆ ಫೈನಲ್ ಡಿಕ್ರಿಗೆ ಪಾತಕದ ಅರ್ಜಿಯನ್ನು ಫಮ್ಮ ನೋಟೀಸಿನ ಬಗ್ಗೆ ಜಾ. 14-7-70ಕ್ಕೆ ಇಟ್ಟಿರುತ್ತದೆ. ಸ ದ್ರಿ ದಿವಸ ತಾ ಕೋರ್ಟ್ ಮುಂದೆ ಹಾಜರಾ ಗಿ ಉಡಹರಿಸ ತಕ್ಕದ್ದು. ತಪ್ಪಿದ್ದಲ್ಲಿ ಫಮ್ಮ ನ್ನು ತಿವ್ಯಾ ಪೂರ್ತಿ ಯಾಕ್ಷ ಕಾಂತಂತೆ ತೀ ರ್ಮಾನಿಸಲಿದೀತು.

Sd/- M. Sadashiva Rao

Vakil for Petitioners

ಕಾ. 29-6-70

ಯುವಕರಿಗೊಂದು ಪಂಥಾಹ್ವಾನ

ಥಳಥಳಿಸುವ ಅತ್ಯಂತ ಸುಂದರ ಸುದೃಢ ಕಟ್ಟಡಗಳ ಮೇಲೆ ನಿಂತಿದೆ? ಅದರ ಶಿಖರವನ್ನು ಎಲ್ಲರೂ ನೋಡುತ್ತಾರೆ; ಆದರೆ ಯಾರಾದರೂ ಆದರ ಅಡಿಪಾಯವನ್ನು ನೋಡಿದ್ದುಂಟೆ?

ಜಗತ್ತು ಥಳುಕಿನ್ನು ನೋಡುತ್ತದೆ; ಬಾಹ್ಯ ಆವರಣವನ್ನು ನೋಡುತ್ತದೆ, ಆ ವರಣದೊಳಗಿರುವ ಸತ್ಯವನ್ನು ಯಾರಾದರೂ ನೋಡುವ ಪ್ರಯತ್ನ ಮಾಡಿದ್ದಿಲ್ಲ.

ಸತ್ಯ ಯಾವಾಗಲೂ 'ಶಿವ'-ಕಲ್ಯಾಣಕಾರಕ, ಆದರೆ ಅದು ಸದಾ 'ಸುಂದರಂ' ಆಗಿರಬೇಕಾದುದು ಅಗತ್ಯವಿಲ್ಲ. ಸತ್ಯಸಧ್ಯೆನ ಶಿವವಾಗಿರತ್ತದೆಯೇ ಹೊರತು ಸುಂದರವಾಗಿಯೇ ಇರುವುದಿಲ್ಲ.

ಸತ್ಯ ಕಠೋರವಾಗಿರುತ್ತದೆ; ಸತ್ಯವೂ ಅನಪೇಕ್ಷಿತವೂ ಆಘಳಿ-ಜಳಿ; ಅವು ಒಟ್ಟಿಗೆ ಜನಿಸುತ್ತವೆ; ಒಟ್ಟಿಗೆ ಬೆಳೆಯುತ್ತವೆ. ವೈತ್ಯ ಅವಳಿಜವಿ.

ನಾವು ಕಠೋರತೆಯಿಂದ ಹರದಾರಿ ಜಾರಿತ್ತೇವೆ; ಅನಪೇಕ್ಷಿತತೆಯಿಂದ ಮುಕ್ತಗು ಮುರಿಯುತ್ತೇನೆ—ಅಂದರೆ, ಸತ್ಯದಿಂದ ಯೋಜನ ದೂರವೋಡುತ್ತೇವೆ.

ಹಾಗಿಲ್ಲವಾದರೆ, ಕಟ್ಟಡದ ಪ್ರಶಂಸೆಯನ್ನು ಪಂಚಾಂಗದ ಪ್ರಶಂಸೆಯಿಂದ ಆರಂಭ ಮಾಡಬೇಕಾಗಿತ್ತು;

ತಾನು ಕಡಿಕ—ಹಿಡಿಕಲ್ಕೊಳಗಾಗಿ ಶಿಖರದಲ್ಲಿ ನಿಂತು ಪ್ರೇಕ್ಷಕರ ಕಣ್ಣುಗಳಿಗೆ ಹಿತವನ್ನುಂಟು ಮಾಡುವ ಕಲ್ಲು ಧನ್ಯ.

ಆದರೆ, ಭೂಮಿಯೊಳಗಡೆ ಮೂಗುಡಿ ಹೂತ.ಕೊಂಡು ಕಟ್ಟಡವನ್ನು ಎತ್ತಿ ಹಿಡಿದ ನೊದಲ ಕಲ್ಲು ಅತ್ಯಂತ ಧನ್ಯ.

ಈ ಮೊದಲ ಕಲ್ಲಿನ ಮೇಲೆಯೇ ಇಡಿಯ ಕಟ್ಟಡದ ಭಾರ—ಭವಿಷ್ಯ ನಿಂತಿದೆ. ಮೊದಲ ಕಲ್ಲು ಅಲ್ಲಾಡಿಬಿಟ್ಟರೆ ಸುಂದರ ಸಂದರ ಶಿಖರ— ಗೋಪುರಗಳ ನಯನ ಮನೋಹರ ಭವನ ಇಸ್ಟೀಟಿಕ್ ಮನೆಯೂಗುತ್ತದೆ.

ನಾವು ಗುಡಿ—ಗೋಪುರಗಳ ಗೀತ ಡಾಡುವುದನ್ನು ಬಿಟ್ಟು ಪಂಚಾಂಗದ ಗೀತ ಡಾಡಬೇಕು.

ಜಗತ್ತಿಗೆ ಭವನ ಬೊರಿಪುಬೇಕು, ಗಡಿ,ಗೋಪುರಗಳು ಕಾಣಿಸಿಗಬೇಕೆಂದು ನೆಮದಲ ಕಲ್ಲು ತಾನು ಮಣ್ಣಿನೊಳಗಡೆ ಅಡಗಿ ಸಂಕಟ ಸಹಿಸುತ್ತಿದೆ. ಮೇಲಿನ್ನಿಲ್ಲ ಕಲ್ಲುಗಳಿಗಿಂತ ಅದು ಅತ್ಯಂತ ಬಲಶಾಲಿ ಎಂತಲೇ ಅದು ಉಳಿದೆಲ್ಲ ಕಲ್ಲುಗಳ ಭಾರವನ್ನು ಹೊತ್ತುಕೊಂಡಿದೆ.

ಗ.ಡಿ-ಗೋಪುರಗಳ ಭವಿಷ್ಯ ಅಡಿಕಟ್ಟಿನ ಮೇಲಿದೆಯೆಂಬ ಜನ್ನು ಜೆನ್ನಾಗಿ ತಳದ.ಕೊಂಡಾಗ ಅದು ತಾನು ಅಡಿಯಲ್ಲಿ ಉಳಿತ ಕೆಗಂಡಿತು.

ಗುಡಿ-ಗೋಪುರ ಮೂವತ್ತು ಅಡಿ ತಲೆಯೆತ್ತಿ ನಿಲ್ಲಲೆಂದು ತಾವು ಮೂರು ಅಡಿ ಒಳದಲ್ಲಿ ಸವಾಧಿ ಕಟ್ಟಿಕೊಂಡಿತು. ತನ್ನ ಒಡನಾಡಿ ಕಲ್ಲು-ಕಟ್ಟಿಗೆಗಳು ಒಳ್ಳೆಯ ಗಾಳಿ-ಬೆಳಕನ್ನು ಕಾಣಲಿ, ಜಡತ್ವಿನಿಂದ ಪ್ರಶಂಸೆ ಪಡೆಯಲಿ ಎಂದು ತನ್ನ ಗೋರಿ ತಾನೇ ತೋಡಿಕೊಂಡಿತು.

ಜಗತ್ತೊಂದು ಸುಂದರ ಸೃಷ್ಟಿ ನೋಡಲೆಂದು ತನ್ನ ಅಸ್ತಿತ್ವವನ್ನೇ ಇಲ್ಲವಾಗಿಸಿತು.

ಸುಂದರ ಸೃಷ್ಟಿಗೆತ್ಯಾಗ ಅವಶ್ಯ. ಈ ತ್ಯಾಗ ಕಲ್ಲಿನದ್ದಾಗಬಹುದು; ಮನುಷ್ಯರದ್ದೂ ಆಗಬಹುದು.

ಸುಂದರ ಕಟ್ಟಡವಾಗಬೇಕಾದರೆ, ಗಟ್ಟಿ ಮುಟ್ಟಾದ ಸದೃಢವಾದ ಕೆಲವು ಕಲ್ಲು ಗಳು ಪಂಚಾಂಗದಲ್ಲಿ ಮಣ್ಣಿನಡಿ ಹೂತು ಹೋಗಬೇಕು. ಸುಂದರ ಸಮಾಜವಾಗಬೇಕಾದರೆ, ಕೆಲವು ಬುದ್ಧಿಜೀವಿಗಳು ಮೂಕ ಬಲಿದಾನದ ಬಾಸಿಂಗ ತೊಡಬೇಕು.

ಖ್ಯಾತಿ, ಪ್ರಶಂಸೆ, ಪ್ರಸಿದ್ಧಿ ಗುಡಿಯ ಶಿಖರದಲ್ಲಿ, ಮಂದಿರದ ಕಲಶದಲ್ಲಿನ ಕಲ್ಲಿ ಗಲ್ಲು; ಹೊಸಹೊದ ಕಲ್ಲಿಗೆ. ಅದಕ್ಕೆ ಅಂದವಿಲ್ಲ, ಚಂದವಿಲ್ಲ; ಅದು ಸದಾ ಅಗೋಚರ. ಇಂತಹ ಬಲಿದಾನವೇ ಸಮಾಜದ ಅಡಿಪಾಯ.

ಯೇಸುಕ್ರಿಸ್ತನ ಬಲಿದಾನದಿಂದ ಕ್ರೈಸ್ತಮತ ಅಮರವಾಗಲಿಲ್ಲ; ಕ್ರೈಸ್ತಮತ ಅಮರವಾದದ್ದು ಆ ಮತದ ಪ್ರಚಾರಕ್ಕಾಗಿ ಅನಾಮಧೇಯರಾಗಿ ಜೀವ ತ್ಯಾಗ ಮಾಡಿದವರಿಂದ.

ಈ ಜಗರಲ್ಲಿ ಆದೆಷ್ಟು ಮಂದಿಯನ್ನು ಜೀವಂತ ಸಡಲಿಲ್ಲ? ಶೂಲಕ್ಕೇರಿಸಲಿಲ್ಲ? ಗುಂಡ್ಗಾಡುಗಳಲ್ಲಿ ಕಾಡ ಜೀವಿಗಳಿಗೆ ಬೇಟೆಯಾಗಲಿಲ್ಲ?

ಈ ಜಗರ ಹಸಿಯಿಕ? ಅವರ ಬಗ್ಗೆ ಯಾರು ಮಾತಾಡ ತ್ತಾರೆ? ಆದರೆ, ಕ್ರೈಸ್ತಮತ ಈ ಜನರ ತ್ಯಾಗದ ಫಲದಿಂದಲೇ ಬೆಳೆದು ನಿಂತಿದೆ.

ಅವರು ಪಂಚಾಂಗದ ಕಲ್ಲುಗಳು. ಅವರ ಬಲಿದಾನದಿಂದಲೇ ಇಗರ್ಜಿಯು ಕ್ರೂಜೆ ತಲೆಯೆತ್ತಿ ನಿಂತಿದೆ?

ಭಾರತವಿಂದು ಸ್ವತಂತ್ರ. ಆದರ ಸುಖವನ್ನು ನಾವಿಂದು ಉಣ್ಣುತ್ತೇವೆ; ಅನುಭವಿಸುತ್ತೇವೆ. ಈ ಪ್ರಜಾಸತ್ತೆಯ ಗುಡಿಗೋಪುರಗಳನ್ನು ಕಾಣುತ್ತೇವೆ. ಇದರಡಿಯ ತ್ಯಾಗ-ಬಲಿದಾನದ ಪಾಯದ ಕಲ್ಲುಗಳನ್ನು ಮರೆತುಬಿಟ್ಟಿದ್ದೇವೆ.

ಅಂದು ದೇಶದ ಮೂಲೆಮೂಲೆಯಲ್ಲಾ ದಧೀಚಿಗಳು ಹುಟ್ಟಿದರು. ಅವರು ತಮ್ಮೆಲುಬುಗಳನ್ನ ದಾನ ಮಾಡಿ ವಿದೇಶೀ ವೃತ್ರಾಸುರ.ರಥವನ್ನು ಸಂಹಾರ ಮಾಡಿದರು.

ನಾವು ನೋಡಿದ್ದು ಮಾತ್ರ. ಸತ್ಯವೆಂಬುದು ಸಂಪೂರ್ಣ ಸುಳ್ಳು ಸಂಕೋಚನೆಯಿಂದಲೇ ಸತ್ಯ ಪ್ರಕಟವಾಗುತ್ತದೆ. ಅಡಿಪಾಯವನ್ನು ಕಲ್ಲುಗಳತ್ತ ಲಕ್ಷ್ಯಹರಿಸುವುದು ನಮ್ಮ ಧರ್ಮ.

ಹೊರಾರು ವರ್ಷಾನಂತರ ನಾವಿಂದು ನವ ಸಮಾಜ ನಿರ್ಮಾಣಕ್ಕೆ ಬದ್ಧ ಕಂಕಣರಾಗಿದ್ದೇವೆ. ಈ ನವ ಸಮಾಜದ ನಿರ್ಮಾಣಕ್ಕಾಗಿಯೇ ಪಮಗಿಂದು ಪಾಯದ ಕಲ್ಲುಗಳು ಬೇಕು.

ಪ.ಣ ಬರಿಯ ದುಃಖ....

ಗ.ಡಿ-ಗೋಪುರಗಳಲ್ಲಿ ನೆಂಕೊಂಡು ಮೆರೆದಾಡಲೆಂದೇ ಎಲ್ಲ ಕಲ್ಲುಗಳೂ ಆಕುರವಾಗಿವೆ; ಪಾಯದ ಕಲ್ಲಾಗಿ ತನ್ನ ಜೀವನ-ಜೀವ ತ್ಯಾಗ ಮಾಡಲು ಹೂವ ಕಲ್ಲೂ ಸಿದ್ಧವಿಲ್ಲ.

ಏಳು ಲಕ್ಷ ಹಳ್ಳಿಗಳ ಭವನನಿರ್ಮಾಣ, ಸಾವಿರಾರು ನಗರಗಳ, ಕಾರಖಾನೆಗಳ ನವನಿರ್ಮಾಣ-ನಮ್ಮ ಧ್ಯೇಯ, ಯಾವ ಶಾಸಕನಿಂದಲೂ ಅಧಿಕಾರಿಯಿಂದಲೂ ಆಗದ ಕೆಲಸವಿದು. ಈ ಕಾರ್ಯದಲ್ಲಿ ತಮ್ಮನ್ನು ತಾವು ಸಮರ್ಪಿಸಿಕೊಳ್ಳುವ ಭವಯುವಕರ ಅಗತ್ಯವಿದೆ.

ಹೊಸ ಪ್ರೇರಣೆಯಿಂದ ಅಮೂರ್ತಾಜೆತರಾದ, ನವಚೇತನದಿಂದ ಅಭಿಭೂತರಾದ ಪ್ರಶಂಸೆಗಳಿಂದ ದೂರವುಳಿದ, ಪಕ್ಷ ಪಂಗಡಗಳಿಗೆ ಸೇರದಿರುವ ಭವಯುವಕರಿಂದ ಬೇಕಾಗಿದ್ದಾರೆ.

ಗ ಡಿ-ಗೋಪುರಗಳಲ್ಲಿ ಸೇರಿಕೊಳ್ಳುವ ಆಯಕೆಯಿಲ್ಲದ, ಕಲಶವೆಂದು ಕರೆದು ಕೊಳ್ಳುವ ಕಾಮನೆಯಿಲ್ಲದ, ಎಲ್ಲ ವಾಸನೆಗಳಿಂದಲೂ ದೂರವಿದ್ದು ನವನಿರ್ಮಾಣದ ಅಡಿಪಾಯವಾಗ ಬಲ್ಲ ನವಯುವಕರು ಬೇಕಾಗಿದ್ದಾರೆ.

ಮೇಲೇಳಲು ಅತ್ಯವಿರುವ ನಮ್ಮ ಸಮಾಜ ಕೂಗುತ್ತಿದೆ—ನಮ್ಮ ಪಾಯದ ಕಲ್ಲು ಎಲ್ಲಿದೆ?

ದೇಶದ ನವನಿರ್ಮಾಪಕರಿಗೆ ಇದೊಂದು ಪಂಥಾಹ್ವಾನ.

(ಆಧಾರ ಶ್ರೀ ರಾಮಮನೋಹರ ಲೋಹಿಯರವರ)

ಗಿರಿಜನರಿಗೆ ಬಟ್ಟೆ ಬರೆ ಹಂಚೋಣ

ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿಯ ಸಮಾಜ ಕಲ್ಯಾಣ ವಿಭಾಗದ ವತಿಯಿಂದ ಗಿರಿ ಜನರಿಗೆ ಬಟ್ಟೆ ಬರೆ ಹಂಚುವ ಸಮಾರಂಭವು ಕೊರಂಗ್ರಪಾಡಿ ಕೊರಗರ ರೆಸಿಡೆನ್ಸಿಯಲ್ ಶಾಲಾ ಸಭಾಭವನದಲ್ಲಿ ತಾ. 28-6-70 ರಂದು ತಾಲೂಕು ಬೋರ್ಡಿನ ಸದಸ್ಯ ಶಿರ್ವಾದಿ ವಿಲಿಯಂ ಪಿಂಟೋರವರ ಅಧ್ಯಕ್ಷತೆಯಲ್ಲಿ ಜರಗಿತು.

ಸಭೋದಿಯಲ್ಲಿ ಪೆಲಾಫೀರ್ ಇನ್ಸ್‌ಸ್ಟೈಲ್ ಶ್ರೀ ಕೆ. ವಿನೋದ ಕುಮಾರ ರಾಯರು ಸ್ವಾಗತ ಭಾಷಣ ಮಾಡಿ ಸಮಾಜ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳನ್ನು ವಿವರಿಸಿದರು. ಶ್ರೀ ಕಟ್ಟೆಯವರು ಪ್ರಯೋಜಿತ ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಗಿರಿಜನರಿಗೆ ಸರಕಾರ ಒದಗಿಸುತ್ತಿರುವ ಸೌಲಭ್ಯಗಳನ್ನು ವಿವರಿಸಿ ಅವರು ಬೇರೆಯವರನ್ನೇ ಹೊಂದಿಕೊಂಡಿರುವ ಪ್ರವೃತ್ತಿಯನ್ನು ತೊಡೆದು ಹಾಕಿ ಸ್ವತಂತ್ರ ಪ್ರಜೆಗಳಾಗಿ ಪೂಜ್ಯ ಬಾಪೂಜಿಯವರ ಆಶಯದಂತೆ ಬದುಕಿ ಬೇಕೆಂದರು.

ಸ್ವಾವಲಂಬನೆಯತ್ತ ಎಕೆಡೆಮಿ ಪರಿವಾರ

ಮಣಿಪಾಲದ ಎಕೆಡೆಮಿಯ ವಾರ್ಷಿಕ ಮಹಾಭೆಸಯು ಜೂನ್ ತಾ. ೭ರಂದು ನಡೆಯಿತು. ರಿಜಿಸ್ಟ್ರಾರ್ ಡಾ| ಟಿ. ಮಾಧವ ಪೈಯವರು ೩೦ ಎಕೆಡೆಮಿ ವಿದ್ಯಾ ಸಂಸ್ಥೆಗಳ ಪ್ರಗತಿ ವಿವರಸಕ್ಕ ಇದೇ ರೀತಿಯ ಪ್ರೇಕ್ಷಣೆಗೆ ಸಾಧ್ಯವಾದರೆ, ಹತ್ತು ವರ್ಷಗಳಲ್ಲಿ ಇವೆಲ್ಲ ಸ್ವಾವಲಂಬಿಯೂಗುತ್ತವೆಂದರು. ವಿದ್ಯಾರ್ಥಿ ಕಲೆಯಗಳಲ್ಲದೆ ಕಾಲೇಜುಗಳಿಗೆ ಅವನ್ನು ಒದಗಿಸುವುದರಿಂದ ಶಿಕ್ಷಣದ ಪ್ರಯೋಜನವು ಹೆಚ್ಚಾಗುವುದೆಂಬ ಆಶಯ ವ್ಯಕ್ತ ಪಡಿಸಿದರು.

ಎಕೆಡೆಮಿಯ ಕಾರ್ಯದರ್ಶಿ ಶ್ರೀ ಟಿ. ರಾಮೇಶ ಪೈಯವರು ಶಿಕ್ಷಣದಲ್ಲಿನ ಅಸಮ್ಯವನ್ನು ನಿವಾರಿಸುವ ಬಗ್ಗೆ ಸಲಹೆ ಕೀಡಿ, ಈ ಸಂಬಂಧದಲ್ಲಿ ವಿದೇಶಗಳನ್ನು ಅನುಸರಿಸಿದರೆ ತಪ್ಪಲ್ಲವೆಂದರು. ಉದಾಹರಣೆಗೆ ಇಂಜಿನಿಯರಿಂಗ್ ಕಾಲೇಜು ಸೇರಲು ಬಯಸುವ ಒಬ್ಬ ವಿದ್ಯಾರ್ಥಿಗೆ ಭಾಷೆಗಳಲ್ಲಿ ಉತ್ತೀರ್ಣನಾಗುವುದನ್ನು ಪಿಡ್ಡಾಯವಿಲ್ಲ ಮಾಡಬೇಕೆಂದೂ ಅವನ ಶಿಕ್ಷಣವನ್ನು ನಿಲ್ಲಿಸುವುದರಿಂದ ಏನು ಪ್ರಯೋಜನ? ಎಂದವರು ಪ್ರಶ್ನಿಸಿದರು.

ಶಿಕ್ಷಣಾಲಯಗಳಲ್ಲಿ ಸೀಟು ದೊರಕಿಸಲು ಬೇಕಾಗಿ ಬಂದಾಗ ಹೆಚ್ಚು ಜನರಿಗೆ ಶಾಲೆ-ಕಾಲೇಜುಗಳಿಗೆ ಸೇರಿಸಲಾಗುತ್ತಿದೆ. ಶಿಕ್ಷಣ ಮುಗಿದು ಹೊರ ಹೋದ ಮೇಲೆ ವಿದ್ಯಾರ್ಥಿಗಳು ಅನ್ನು ಮರೆತು ಬಿಡುತ್ತಾರೆ. ಹೆಚ್ಚಿನವರೂ ಹಳ್ಳಿಯ ವಿದ್ಯಾರ್ಥಿಗಳು ಶಿಕ್ಷಣ ಸಂಸ್ಥೆಗಳ ವಾತಾವರಣಗಳಲ್ಲಿ ಅಸಕ್ತ ರಾಗುವಂತೆ ಹೇಗೆ ಪಡಿಸಬೇಕೆಂಬುದನ್ನು ಪರಿಶೀಲಿಸಬೇಕೆಂದರು ಸಲಹೆ ಕೀಡಿದರು.

ತಮ್ಮ ಮಕ್ಕಳನ್ನ ಸುಶಿಕ್ಷಿತರನ್ನಾ ಮಾಡುವ ಹೊಣೆಗಾರಿಕೆಯನ್ನು ಸರಕಾರ ಒಪ್ಪಿಸುವುದರಿಂದ ಕೆಟ್ಟ ಪರಿಣಾಮವಾಗುವುದೆಯೆಂದು ಎಚ್ಚರಿಸಿದ ಶ್ರೀ ಪೈಯವರು ಕೃಷಿಕರು ಶಿಕ್ಷಣಾಲಯಗಳಲ್ಲಿ ಆಸಕ್ತಿ ತೋರಿಸಬೇಕೆಂದು ಕರೆ ಕೀಡಿದರು.

ಶ್ರೀಗರಾವ ಕೆ. ಪಿ. ಮುಖಂಡಿ ಪ್ರಾಂಶುಪಾಲರು ಕೆ. ಕೆ. ಪೈ ಸಿ. ಶ್ರೀಪತಿ ಆಚಾರ್ಯ ಮೊದಲಾದವರೂ ಮೂಕಾಜಿ ಎಕೆಡೆಮಿ ಸಂಸ್ಥೆಗಳನ್ನು ಬಲಪಡಿಸುವ ಬಗ್ಗೆ ಹಲವಾರು ಸಲಹೆಗಳನ್ನು ಕೀಡಿದರು.

ಶಿಕ್ಷಣದಲ್ಲಿ ಅಸಮ್ಯವೇಕೆ?

[ಶ್ರೀ ಟಿ.ರಾಮೇಶ ಯು. ಪೈ.]

ನಮ್ಮ ದೇಶದಲ್ಲಿ ಮಕ್ಕಳ ಶಿಕ್ಷಣ ವೆಚ್ಚ ರುತ್ತಿದೆಯೆಂಬ ಪೂರು ಕೇಳುತ್ತದೆ. ಈ ರಿಳೆ ವಿದೇಶಗಳಲ್ಲೂ ಇದೆ. ಅದು ಮಕ್ಕಳ ಕ್ಷರತಲೆನೋವಿಗೆ ಕಾರಣವಾಗಿದೆ. ಅದು ರಿಂದವೆಚ್ಚ ಕಡಿಮೆಮಾಡುವ ಯೋಜನೆಯೂ ದನ್ನು ಅಲ್ಲಿ ರೂಪಿಸಿದ್ದಾರೆ.

ಕಾಲೇಜಿಗೆ ಹೋಗ ಬಯಸುವವರೆಲ್ಲರೂ ನಾಲ್ಕು ವರ್ಷಗಳ ಶಿಕ್ಷಣ ಪಡೆಯ ಬೇಕಾಲ್ಲ ಪಕ್ಷ ಹಾಗೂ ತರಬೇತಿಯ ಒಟ್ಟು ಅವಸರವನ್ನು ಹಂತ ಹಂತವಾಗಿ ವಿಭಜಿಸಿ ಪದಕಾಲೇಜುಗಳಲ್ಲಿ ಡಿಪ್ಲೊಮೊಗೂ ಅವಕಾಶ ನೀಡಿದ್ದಾರೆ. ಡಿಪ್ಲೊಮೊ ಮಾಡಿಕೊಂಡವರು ವೆರನಾಗಿ ಕಾಲೇಜುಗಳಿಂದ ಹೊರಬರಬಹುದು. ತಮ್ಮ ಆಭ್ಯಾಸವನ್ನು ಮುಂದುವರಿಡಿಸ್ತಿ ಪಡೆಯಲೂ ಬಹುದು. ಡಿಪ್ಲೊಮೊ ಪಠ್ಯಕ್ರಮ ದಿಸ್ತಿ ಗಳನ್ನು ಏಕಕಾಲದಲ್ಲಿ ಕಲಿಯುವ ಅವಕಾಶವೂ ಇದೆ.

ಔವಸೋಪಯೋಗಿಯಲ್ಲದ ವಿಷಯಗಳನ್ನು ಕಲಿತು ಡಿಗ್ರಿ ಪಡೆಯುವ ಚಟ ಈ ದ್ಧತಿಯಿಂದ ದೂರವಾಗುವುದು. ಶಿಕ್ಷಣಕ್ಕಾಗಿ ನಡೆಯುವ ಅನವಶ್ಯ ವ್ಯಯವೂ ತಪ್ಪುತ್ತದೆ. ಅವಶ್ಯವಾಗುವುದು.

ನಮ್ಮ ದೇಶದ ಜನಸಾಗಿ ಕಾಲೇಜುಗಳಲ್ಲಿ ಶಿಕ್ಷಣ ಪಡೆಯುವುದು ಅಮೆರಿಕನ್ನರಿಗೆ ತುಲನಾತ್ಮಕವೆನಿಸಿದೆ. ಅದುದರಿಂದ ಅವರು ಈ ಬಗ್ಗೆ ಆಸಕ್ತಿ ಮೂಡಿದೆ ಇಲ್ಲಿ ಶಿಕ್ಷಣ ಮುಗಿಸಿದ ಭಾರತೀಯ ವಿದ್ಯಾರ್ಥಿಗಳು ೪ ವರ್ಷ ವಿದೇಶಗಳಲ್ಲಿ ಉದ್ಯೋಗವನ್ನು ಸಂತ್ರಂತವಾಗಿ ನಡೆಸಲು ತಳ್ಳ ಬಂಡವಳ ಸಿದ್ಧರಾಗಿ ದೇಶಕ್ಕೆ ಮರಳಿ ಬರಬಹುದು. ಇದೂ ಒಂದು ದೇಶಸೇವೆ.

(ರೋಟರಿ ಕ್ಲಬ್ಬಿನಲ್ಲಿ ಮಾಡಿದ ಭಾಷಣದ ಸಾರಾಂಶ)

ವಿನೋದ ಪ್ರಧಾನ ನಾಟಕ

ಶ್ರೀ ಎಸ್. ವೆಂಕಟರಾಜರ

= ರಂಗಭೂಮಿ =

ಜನರಲ್ಲಿ ಒಂದು ಹೊಸ ಹುರುಪು ಹು.ಕಿ ಅದು ಫಲಕಾರಿಯಾಗಿಸಿ ವಿನಾಶಕ ಹೇತುವಾಗುವುದು. ಇದು ಜನತೆಯ ಸಶಕ್ತಿಯಾದ ದೌರ್ಬಲ್ಯ. ಅದರಿಂದಾ ಹಲವು ಸಂಸ್ಥೆಗಳು ಅವಿರ್ಭವಿಸಿ, ಅಂತ್ಯೇ ಅಂತರ್ಧಾನವಾಗುತ್ತಿರುವುವು. ಈ ಶತ್ಯದ ಸೂಕ್ಷ್ಮ ಪರಿಶೀಲನೆಯೆ 'ರಂಗಭೂಮಿ' ನಾಟಕ.

ಅಕರ್ಷಕ ಮುಖ ಪತ್ರದಿಂದೊಡಗೂಡಿದ ಪ್ರಥಮ ಸಾಮಾಜಿಕ ನಾಟಕ.

ಬೆಲೆ 0-75. ಟಿ. ಖರ್ಚು ಪ್ರತ್ಯೇಕ

ನವಭಾರತ ಪುಸ್ತಕ ಭಂಡಾರ, ಉಡುಪಿ.

ೀಹರಾಜ್ಯದಲ್ಲಿ—

ಎಲ್ಲಾ ಕಾಲಕ್ಕೂ ಹೀಗೇ ನಿಲ್ಲುತ್ತೆ?

"ಅಲ್ರಿ, ಸಂಪ್ರಿಯಾದವರೆಲ್ಲರೂ ಒಂ
ೀ ತರಾಂತ ತೋರುತ್ತೆ..."

"ಏನಾಕೆ?"

"ನೋಡಿ, ಹತ್ತು ವಾಡುವ ಮಂತ್ರಿ
ಳು ನಮ್ಮೋಶದಲ್ಲಿ ಮಾತ್ರವೆಂದು ತಿಳಿ
ಂಡಿದ್ದೆ...ಈಗ..."

"ಏನಾಯ್ತು?"

"ಬಿಳಿಯರ ದಕ್ಷತೆ ಅಭಿಕೆಯಲ್ಲೂ
ಂಥದ್ದೆ ಮೇತ್ರಿಯಿದ್ದಾರಂತ...."

"ಹ್ಞೂಂ....ಅಧಿಕಾರವುಳ್ಳವರು ಏನೂ
ಾಡಿಯಾರು...."

"ಹಾಗಲ್ಲ ಫೋಡಿ, ಅಧಿಕಾರವಿದ್ದವ
ಳೂ ಹಾಗೆ ಮಾಡ್ತಾರೇನು?"

"ಯಾರಿಗೆ ಗೊತ್ತು? ಅಧಿಕಾರಿಗಳು
ರ ಪ್ರಬಲರಾಗಿದ್ದರೆ, ಅವರೇನು ಮಾ
ಡ್ತಾರು ತುಟಿ ಪಿಟಿಕ್ಕೆನ್ನುವುದಿಲ್ಲ..."

"ರಾಕೆ? ಹೆದರಿಕೆಯೇನು?"

"ನೋಡಮ್ಮ, ಗುಲಾಬಿ ಹೂ ನೋ
ದ್ದಿಯಲ್ಲ....?"

"ಇಲ್ಲದೆ ಉಂಟೆ? ಅದ್ರ ಮೇಲೆ
ನಗೆ ಭಾರೀ ಆಸೆ ಕೂಡ...."

"ಅದೇ ಸುಕೋಮಲ, ಸಂದರ ಪ
ಾಬಿ ಹೂವಿನ ಸುತ್ತಮುತ್ತ ಮುಳ್ಳು
ಳನ್ನೆ ಮಾಡಿದೆ...."

"ಅದ್ದರಿಂದ್ಲೇ ಕೊಯ್ಯುವುದು ಕಷ್ಟ."

"ದೇವರು ಗುಲಾಬಿಯ ಗಿಡ್ಡಿಗೆ
ಳ್ಳು ಫೋಡಿ ದೊಡ್ಡ ತಪ್ಪು ಮಾಡ
ಲ್ಲವೆ?"

"ಅದು ಸರಿ...."

"ಆದ್ರೆ, ದೇವ್ರ ತಪ್ಪನ್ನು ಯಾರಾ
ೂ ಎತ್ತಿ ಹೇಳುತಿದ್ರೆ?"

"ಫೋಡಿ, ದೇವ್ರು ದೊಡ್ಡವನು. ಅವ
ನ್ನು ಟೀಕಿಸುವ ಯೋಗ್ಯತೆ ನನಗೆ ನಿ
ಗೆ ಹೇಗೆ ಬರಬೇಕು?"

'ಕೇಗೆ ಬರಬೇಕು ಅಂದ್ರೆ?' ಕಾವ್
ಕ್ಸ್ವಾತಂತ್ರ್ಯವುಳ್ಳವರು."

'ಆದು ಸರಿ. ಪುಣ್ಯಕ್ಕೆ ನೀನೇನು ಟೀ
ಿದರೂ ದೇವ್ರು ಈಗ ನೇರ ಆಕ್ಷನ್
ೋಡಿಲ್ಲಂತ ಖಾತ್ರಿ ಬೇರೆ...."

"ಅಲ್ರಿ, ದೇವ್ರೂ ಆಕ್ಷನ್ ತೆಗೊ
ಂಡಿದೆಯೆ?"

"ನೋಡಿ, ಕುಂಬಳಬ್ಯಾಗೆ ಹಿಡಿ ಹ
ು, ಗೋಳಿಂಬರಕ್ಕೆ ಮಿಡಿಹುಣ್ಣು ಕೊ
ನೆಂದು ದೇವ್ರನ್ನು ಟೀಕಿಸಿದನ
ಒಬ್ಬ, ಅವನಿಗೆ ಸಂಯೂದ ಉತ್ತರ
ಿಲ್ತೆ ದೇವ್ರು?"

'ಆ ಮೂಗಿಳ ಮೇಲೆ ಗೋಳೆಹಣ್ಣು
ಬೆಳೆಯಕ್ಕೆ ತಾನೆ?"

'ಹೌದು, ಪಾಪ, ಅವನ ಮೂಗಿಳ
ಾರು ಹೋಗಲು ಎಂಟು ದಿವಸವಾದ
ು ಬೇಗಾದೀತು...."

"ಇಲ್ಲಿ ಕೇಳಮ್ಮ, ಹೇಳಿ ಕೇಳಿ ಅ
ಂದು ಕತೆ..."

"ಕತೆಯಂತೆ ಕತೆ. ನೋಡೋಣ
ಮ್ಮ ಮೂಗಿನ ಮೇಲೆ ಗೋಳಿ ಹಣ್ಣು
ಿ ನೋವಾಗೋಲ್ವೆ?"

"ಬಿಡ್ರಿ ತಾಕೆ?"

"ರಾಕೆ ಬೀಳ್ಬಾರ್ದೇನು?"

"ಅಲ್ರಿ, ನಾನು ಗೋಳಿ ಮರದಡಿ
ಅಂಗಾತನೆ ಮಲಗಿದ್ರೆ ತಾನೆ ಬೀಳೋ
ಭಯ?"

"ಹಾಗೆ ಬನ್ನಿ ಮತ್ತೆ....ಆ ದಾರಿಗ
ು ಮಲಗಿದ...ದೇವ್ರನ್ನು ಟೀಕಿಸಿದ. ಆ
ವಮ ಉತ್ತರವನ್ನು ಪ್ರತ್ಯಕ್ಷ ಪ್ರಯೋ
ಗದ ಮೂಲಕವೇ ತಿಳಿಸಿದ—"

"ಆದೊಂದು ಕಾಕತಾಳೀಯ..."

"ಫೋಡಿ, ದೇವ್ರ ದಯೆ ಅನ್ನುವುದು
ಈಗ ಕಾಕತಾಳೀಯವೆಂದಾಗಿ ಬಿಟ್ಟಿದೆ."

"ಹೇಗೆ?"

"ಇಲ್ಲಿ ಕೇಳಿ. ಇದು ಲಾಟ್ರಿ ಹುಗ"

"ಹ್ಞೂಂ...."

"ಒಂದು ರೂಪಾಯಿಯೋ ಮತ್ತೆ ಕೆಲ
ವೊಮ್ಮೆ ಅದಕ್ಕೂ ಕಡಮೆಯೋ ತೆಕ್ಕು
ಟೀಟು ಕೊಳ್ಳುತ್ತಾರೆ. ತಮ್ಮ ಟಿಕೇ
ಟಿಗೇ ಪ್ರಥಮ ಬಹುಮಾನ ಬರಲಿಂತ
ಕೈ ಮಗಿದ ಕೊಂಡು...."

"ಹ್ಞೂಂ...."

"ಆದ್ರೆ ನೋಡಿ, ಆ ರೀತಿ ದೇವ್ರನ್ನು
ಪ್ರಾರ್ಥಿಸೋರು ಎಲ್ರೂನೂ. ಬಹು
ಮಾನ ಸಿಗೋದು ಒಬ್ಬನಿಗೆ ಮಾತ್ರ.
ಇದು ಕಾಕತಾಳೀಯ ಹೇಗಾದೀತ?
ಯಾರ ಹೊಲೆ ದೇವ್ರ ಅನುಗ್ರಹ ಬಿದ್ದಿ
ದೆಯೋ ಅವ್ರಿಗೆ ಬಹುಮಾನ ಸಿಗುತ್ತೆ."

"ಅದು ಸರೀನ್ನು. ಅಲ್ಲ, ಉಳಿದವ್ರು
ದೇವ್ರಿಗೇನು ಅಪ್ಪಾಯ ಮಾಡಿದ್ದಾರೆ?"

'ಅದು ಮಾಡಿದವ್ರಿಗೇ ಗೊತ್ತಿರೋದಿ
ಲ್ಲ; ಮತ್ತೆ ನಮಗೆ ಹೇಗೆ ಗೊತ್ತಾ
ಸ್ಪೀಕು?"

'ಈಗ ಸಂತೋಷಾಯ್ತು...."

"ಏನು?"

"ತಕರಾರಿಲ್ಲ ಕುಂಡಾಯ್ತು...."

'ಹಾಗಾದ್ರೆ ಕೇಳಿ, ಧರ್ಮರಾಯನ
ಮ್ಮ ಯಮದೂತರು ನರಕಕ್ಕೆ ಕೊಂಡೊ
ಯ್ದಾಗ ಅವನೇ ಕೇಳಿದ— ನಾನು ಈ
ನರಕ ಹೇಗೆ ಕಾಣುವಂತಾಯ್ತು? ಅಂ
ತ. ಆದ ಅಶ್ವತ್ಥಾಮೋ ಹತಃ ಕುಂ
ರಃ ಎಂದು ತಾನೆಂದಿದ್ದ ಮೂತಿಲ ಭೀ
ಕರತೆಯನ್ನು ಮನವರಿಕೆ ಮಾಡಿಕೊಡ
ದೇಕಾಯ್ತು."

"ನೋಡ, ಅದೆಲ್ಲ ಕತೆಯ ಮಾತು.
ಲ್ಲ, ಸ್ವರ್ಗ-ನರಕಗಳೆಂಬುದೇ ಇಲ್ಲ ಅ
ನ್ನುವವರು ನಾವು...."

'ನೀವು ಯಾಕೆ ಹಾಗಂತೀರ? ಸುಖ
ಸಂತೋಷವನ್ನು ಸ್ವರ್ಗ ಅನ್ನಿ; ದುಃಖ
ದ ಮ್ಮಾನಗಳನ್ನು ನರಕ ಅನ್ನಿ.'

"ಹ್ಞೂಂ...."

"ಧರ್ಮರಾಯ ದುಃಖ ದುಮ್ಮಾನಗಳಿಗೆ
ಗುರಿಯೊದನೆನ್ನಿ...."

'ಹ್ಞೂಂ...'

"ಆಗ ತನಗೆ ಈ ಪರಿಯ ದುಃಖ
ಕೆ ಬಂಕೂಂತ ಯೋಚಿಸಿದನೆನ್ನಿ...."

"ಆಯ್ತು...."

"ಆಗ ಅವನಿಗೇ ತಾಪು ಮಾಡಿದ ತ
ಪ್ಪು ಮನವರಿಕೆಯಾಯಿತೂನ್ನಿ...."

"ಸರಿ, ಒಪ್ಪಿದೆ, ಅದ್ರೆ ನೋಡು..."

"ಏನು?"

"ಧರ್ಮರಾಯನಿಗೇನೋ ತಾನು ಆಡಿ
ದ ಮೂತಿಲ ಭೀಕರ ಪರಿಣಾಮ ಮನವರಿ
ಕೆಯಾಯ್ತು. ಆದರೆ, ಎಲ್ಲರಿಗೂ ಅದಾ
ಗುವುದು ಸಾಧ್ಯವೇನು?"

"ಆದವರು ತಪ್ಪು ತಿದ್ದಿಕೊಂಡು ಸಂ
ಾರ್ಗುತ್ತಾರೆ, ಸಮ ಸಂತೋಷಗಳನ್ನು
ಅನುಭವಿಸುತ್ತಾರೆ. ಆಗದವರು ಮತ್ತೂ
ಮತ್ತೂ ತಪ್ಪು ಮಾಡುತ್ತಲೇ ಹೋಗು
ತ್ತಾರೆ; ಕಷ್ಟ ಕಾರ್ಪಣ್ಯಗಳಿಗೆ ಹುಟ್ಟಿಕೂ
ಗ ತ್ತಾರೆ...."

'ಒಂದ್ರೀತಿಯಿಂದ ಆದೂ ಸರೀನ್ನು.
ಆದ್ರೂ...."

"ಏನು"

"ಇದಷ್ಟೆಲ್ಲ ನೆಂಬುವುದು..."

"ನೋಡಿ ಫೋಡಿಗೆಲ್ಲಾ ಹಾಗೇ ಅಲ್ರಿ,
ಬೆಂಕಿ ತಾಗಿಕೊಳ್ಳಿ ಮೈಗೆ...."

"ಸರಿ...."

"ಆದನ್ನು ಅರಿತುಕೊಂಡು ನಂದಿನಿ
ಟೀಕೆಸ್ಟೆ ನಡೆಸಿದರೆ ಗೌರವಾಗುತ್ತೆ. ಇಲ್ಲ,
ಪೂರ್ತ ಸುಟ್ಟು ಹೋಗುತ್ತೆ.'

'ಆದು ಹೌದು. ಅಂದ್ರೆ ತಿಳಿದುಕೊ
ಳ್ಳೋ ತಾಕತ್ತು ಎಲ್ಲರಲ್ಲೂ ಇರುತ್ತೆ?'

'ಇಲ್ಲಾನ್ನಿ, ಆದ್ರೂ ತಿಳಿದವರು ಹೇಳಿ
ದ್ದನ್ನೆ ಕೇಳಬೇಕ...."

"ಸುಳ್ಳು ಹೇಳಿದ್ರೆ?"

'ಆದಕ್ಕೇನು ಮಾಡೋಕಾಯ್ತು? ಸುಳ್ಳು
ಹೇಳಿದವ್ರಷ್ಟ ಧಂಬಕ್ಕೆ ಅರ್ಹರಾದವ
ರನ್ನೆ...."

'ನೋಡು, ನಾವೆಲ್ಲ ಮಹಫೋಡಿ ಪ್ರತಿ
ನಿಧಿಗಳಮ್ಮ ಆಸೇಂಬ್ಲಿಗೆ ಇದೇ ತಿಕ್ಕ
ಆಪರೇಷನ್ ಶ್ರೇವೆ ಆದ್ರೆ ಎಂಪ್ಲೈ
ಮೆಂಟ್ಸಿ ಆದ್ಮೇಲೆಯೋ ಮಂತ್ರಿಯಾ
ದ್ಮೇಲೆಯೇ ಅವ್ರು ತಮ್ಮ ಲಾಭ-
ನಷ್ಟಗಳ ಲೆಕ್ಕಾಚಾರದಲ್ಲೇ ನಿರತರಾ
ದಾಗ ನಾವು ಮಾಡಿದ್ದು ತಪ್ಪು ಅನಿ
ಸ್ತದೆ...."

'ಮುಂದಿನ ಬಾರಿ ತಿದ್ದಿ ಕೊ
ಳ್ಳೋದ..."

"ಆಗೂ ಹಾಗೆಯೇ ಆದರೆ?"

"ಏನು ಮಾಡೋದು ಹೇಳಿ, ಅವ್ರು
ಇದೇ ರೀತಿ ಎಲ್ಲ ಕಾಲಕ್ಕೂ ನಿಲ್ಲೋ
ದಿಲ್ಲ..."

"ರಾಕೆ ನಿಲ್ಬೇಕು? ಐದು ವರ್ಷ
ಮಂತ್ರಿಯಾದ ಮಾತ್ರಕ್ಕೆ ಐದು ತಲೆ
ಮಾರಿಗೆ ತಿಂದು ತೇಗುವಷ್ಟು ಸಂಪತ್ತು
ಕೂಡಿಹಾಕಿಕೊಳ್ಳುವಾಗ...."

"ನಾನೂ ಅನ್ನೋದು ಅದನ್ನೇ."

"ಈಗ ಎಲ್ರಾ ಅನ್ನೋದೂ ಅದೇ-
ಅದ್ರೂ ಸಮಾಧಾನಾಂತಾಂದ್ರೆ ನೀನಂದ
ಹಾಗೆ ಎಲ್ಲ ಕಾಲಕ್ಕೂ ಹೀಗೇ ನಿಲ್ಲು
ತ್ತೇಂತ...."

"ಹ್ಞೂಂ....ಏನಿದು?"

"ಏನಿಲ್ಲಾ ಕಣ್ಮಿ...."

—ಗೋರಾ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ತಯಾರಿಸಲ್ಪಟ್ಟ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಕಾರಿ
ಆಯುರ್ವೇದೀಯ ಸಿದ್ಧೌಷಧಗಳು
ಹಾಗು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿದೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಹೈಸ್ಕೂಲುಗಳಿಗೆ
ನವಯುಗ
ರಾಜ್ಯದ ಡಿ. ಪಿ. ಐ. ಯವರ ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ಕಮ್ಮ ನಂ. ಸಿ. ಎಲ್. 4. 17-4/65—66ರ ಪತ್ರದಂತೆ ನಿಧಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾ ಗಿರದ ಎಲ್ಲ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹ ಕರಾಂತೆ ವಿನಂತಿಸುತ್ತೇವೆ.
ವಾರ್ಷಿಕ ಚಂದಾ ರೂ. 10/- ಮಾತ್ರ.
ಮೆನೇಜರ್, ನವಯುಗ, ಉಡುಪಿ.

'ಭಾರತ ಮಾರ್ಗ'ದ ಭಾರತ ಮಿತ್ರ

ಇ. ಎಮ್. ಫಾರ್ಸ್ಟರ್

— ಶ್ರೀ ನುರಳೀಧರ ಉಪಾಧ್ಯ, ಹಿರಿಯಡಕ.

ಇಪ್ಪತ್ತನೆಯ ಶತಮಾನದ ಪ್ರಾರಂಭದ ಇಂಗ್ಲೀಷ್ ಕಾದಂಬರಿಕಾರರಲ್ಲಿ ವರ್ಜೀನಿಯಾವೂಲ್ಫ್, ಇ. ಎಮ್. ಫಾರ್ಸ್ಟರ್, ಡಿ. ಎಚ್. ಲಾರೆನ್ಸ್ ಪ್ರಸಿದ್ಧರು. ಇ. ಎಮ್. ಫಾರ್ಸ್ಟರ್ ಕಾದಂಬರಿಕಾರ ಮಾತ್ರವಲ್ಲ ವಿಮರ್ಶಕರೂ ಸ್ವತಂತ್ರ ವಿಚಾರವಾದಿಯೂ ಆಗಿದ್ದರು. ಅವರು ಬರೆದ ಕಾದಂಬರಿಗಳು ಕೇವಲ ಐದು. ಅವರಿಗೆ ಕೀರ್ತಿ ತಂದ ದು "ಎ ಪ್ಯಾಸೆಜ್ ಟು ಇಂಡಿಯಾ" — ಭಾರತ ಮಾರ್ಗ.

ಎಡ್ವರ್ಡ್ ಮಾರ್ಗನ್ ಫಾರ್ಸ್ಟರ್ ಹುಟ್ಟಿದ್ದು ಹತ್ತೊಂಭತ್ತನೆಯ ಶತಮಾನದ ಕೊನೆಯ ಭಾಗದಲ್ಲಿ. ಅವರು ಸ್ವತಂತ್ರ ಮಾನವತಾವಾದದ ಆದರ್ಶಗಳನ್ನು ಈ ಶತಮಾನಕ್ಕೆ ತಂದರು. ಟ್ರಾನ್ಬ್ರಿಡ್ಜ್ ಸ್ಕೂಲ್, ಕೆಂಬ್ರಿಜ್‌ನ ಕಿಂಗ್ಸ್ ಕಾಲೇಜುಗಳಲ್ಲಿ ಅವರ ವ್ಯಾಸಂಗ. ಲೂಯಿಸ್ ಡಿಕಿನ್ಸನ್‌ರೊಡನೆ ಬೆಳೆದ ಸ್ನೇಹ ಅವರಿಗೆ ಸಹಕಾರಿಯಾಯಿತು.

ಭಾರತ ಮಿತ್ರ

ಫಾರ್ಸ್ಟರ್ ಭಾರತೀಯರಿಗೆ ಪ್ರಿಯರಾಗಿರುವುದು ಅವರು 'ಭಾರತ ಮಾರ್ಗ'ದ ಲೇಖಕರಾದ ದಿಂದ. ಅದಕ್ಕಿಂತಲೂ ಹೆಚ್ಚಾಗಿ ಅವರು ಭಾರತದ ಹಿತಚಿಂತಕರಾದ ಸ್ನೇಹಿತರು ಎಂಬುದಕ್ಕಾಗಿ. ಇತ್ತೀಚಿಗಿನ ವರೆಗೆ ಪಾಶ್ಚಾತ್ಯರಲ್ಲಿ ಭಾರತ ಎಂದರೆ ರಾಜಾ ಮಹಾರಾಜರು, ದಿವ್ಯಭೂಷಣಗಳ, ಹಾವುಗಳು, ಆನೆಗಳ "ವಿಚಿತ್ರ ರಾಜ್ಯ" ಎಂಬ ಭಾವನೆಯಿತ್ತು. ಈ ಕತ್ತಲ ವಾತಾವರಣದಲ್ಲಿ ಮೊತ್ತಮೊದಲಾಗಿ ಬೆಳಕು ಮೂಡಿಸಿದರು—ಫಾರ್ಸ್ಟರ್; ಅವರು ಭಾರತಕ್ಕೆ ಮೂರು ಸಲ ಭೇಟಿ ಕೊಟ್ಟರು. ಮೊದಲ ಸಲ ೧೯೨೧ರ ಅವಧಿಯಲ್ಲಿ ಬಂದಾಗಲೇ ಅವರು 'ಭಾರತ ಮಾರ್ಗ'ವನ್ನು ಕಲ್ಪಿಸಿಕೊಂಡರು. ಅವರು ಭಾರತವನ್ನೆಲ್ಲಾ ಸುತ್ತಾಡಿದರು—ಅದರ ವಿಶಾಲ ಪ್ರವಾಸಿಯಂತಲ್ಲ. ಇಲ್ಲಿನ ಜನತೆಯ ಹೃದಯವನ್ನು, ಅಂತರಂಗವನ್ನು ಅರ್ಥಮಾಡಿಕೊಳ್ಳಲು ಅವರು ಪ್ರಯತ್ನಿಸಿದರು. ಭಾರತದ ಮಂದಿರಗಳಲ್ಲಿ, ಮಸೀದಿಗಳಲ್ಲಿ, ಗಿರಿಗಳ್ಳದರಲ್ಲಿ ಮೇಲುಪೋಟಕ್ಕೆ ಕಾಣದ ಆಂತರಿಕವಾದ ಆರ್ದ್ರವಿದೆ, —ಸತ್ಯವಿದೆ, ಎಂದು ಅವರಿಗೆ ಅನ್ನಿಸಿತು. ಇಲ್ಲಿನ ಸಾಂಸ್ಕೃತಿಕ ಪರಂಪರೆ ಆಧ್ಯಾತ್ಮಿಕ ದರ್ಶನದಿಂದ ಅವರು ಸ್ಫೂರ್ತಿ ಪಡೆದರು.

ಫಾರ್ಸ್ಟರ್ ಎರಡನೆಯ ಸಲ ಭಾರತಕ್ಕೆ ಭೇಟಿಯಿತ್ತದ್ದು ೧೯೨೧ರಲ್ಲಿ. ಮೊದಲ ಭೇಟ್ಟಿಯಲ್ಲಿ ಪರಿಚಯವಾಗಿದ್ದ ಮಹಾರಾಜರೊಬ್ಬರ ಆಪ್ತಕಾರ್ಯದರ್ಶಿಯಾಗಿ ಅವರು ಕೆಲವು ತಿಂಗಳ ಕಾಲ ಕೆಲಸ ಮಾಡಿದರು. ಈ ಭೇಟಿಯ ಅವಧಿಯಲ್ಲಿ ತನಗುಂಟಾದ ಅನುಭವಗಳು ಎಷ್ಟು ಮಹತ್ವವೆಂಬುದನ್ನು ಅವರು ತಿಳಿದಿದ್ದರು. ಈ ಭೇಟಿಯ ನಂತರ ಅವರು ಅನುಭವಗಳಿಂದ ಪರಿಪಕ್ವವಾಗಿ "ಭಾರತ ಮಾರ್ಗ" ಕಾದಂಬರಿಯಾಗಿ ರೂಪುಗೊಂಡಿತು. ಮೂರನೆಯ ಭಾರತ ಭೇಟಿಯಲ್ಲಿ ಹಿ. ಇ. ಎಚ್. ಹೆಸ್ಸೆಯವರನ್ನಾಗಿ, ತಾನು ಗೌರವಿಸುವ ಅದರಸವ ಭಾರತ ಎಜೈಕ್ಟಿರುವುದನ್ನು ಕಂಡು ಅವರು ಸಂತೋಷಪಟ್ಟರು.

ಭಾರತದ ವಿಳಿಗೆಯಿಂದ ಲೋಕಕ್ಕೆ ಹಿತವಿದೆ ಎಂಬುದನ್ನು ಕಂಡುಕೊಂಡ ಪಶ್ಚಿಮದ ಬುದ್ಧಿಜೀವಿಗಳಲ್ಲಿ ಫಾರ್ಸ್ಟರ್ ಪ್ರಮುಖರು. ಜೀನಾ, ಇತ್ತೀಚೆಗೆ ವಿಶ್ವದ್ರೋಹವೆಸಗಿ ಭಾರತದ ಮೇಲೆ ಆಕ್ರಮಣ ಮಾಡಿತು. ಆಗ ಫಾರ್ಸ್ಟರ್ ಭಾರತಕ್ಕೆ ನೆರವು ನೀಡಬೇಕೆಂದು ಪಶ್ಚಿಮದ ರಾಷ್ಟ್ರಗಳಿಗೆಲ್ಲ ಕರೆಯಿತ್ತರು. ಅನೇಕ ಮಂದಿ ಇಂಗ್ಲೀಷಿನಲ್ಲಿ ಬರೆಯುವ ಭಾರತೀಯ ಲೇಖಕರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳಕಿಗೆ ಬರಲು ಕಾರಣ ಫಾರ್ಸ್ಟರ್.

ಕಾದಂಬರಿಕಾರ:

ತಮ್ಮ ಕಾದಂಬರಿಗಳಲ್ಲಿ ಫಾರ್ಸ್ಟರ್ ಎರಡು ತರದ ಪಾತ್ರಗಳನ್ನು ಚಿತ್ರಿಸುತ್ತಾರೆ. ಎರಡು ವಿಧದ ಜನಜೀವನದಲ್ಲಿರುವ ಸೂಕ್ಷ್ಮ ಭೇದವನ್ನು ವಿವರಿಸುತ್ತಾರೆ. ಅವರ ಕಾದಂಬರಿಗಳಲ್ಲಿ ಸಂಪ್ರದಾಯಶೀಲರು ಮತ್ತು ಸಹಜಪ್ರವೃತ್ತಿಯ—ಗುಣ, ವೈಚಿತ್ರ್ಯ, ಆಂತರಿಕ ಹೊಂದಾಣಿಕೆಗಳು ಬಹು ಮುಖ್ಯವೆಂದು ಭಾವಿಸುವ ಜನರು ಒಬ್ಬರಿಗೊಬ್ಬರು ಎದುರಾಗುತ್ತಾರೆ. ಸಂಪ್ರದಾಯಶೀಲ ಸಮಾಜವನ್ನು ಫಾರ್ಸ್ಟರ್ ವಿಡಂಬನೆಯಿಂದ ಚಿತ್ರಿಸುತ್ತಾರೆ. ಅವರ ಚಿತ್ರಣ ಬಲ್ಲಿರುವ ಜಾಣತನವನ್ನು, ಫವಿರಾದ ಹಾಸ್ಯವನ್ನು ಕಾಣೆಂದಿಗೂ ಮರೆಯಲಾರೆವು. ಸಹಜ ಪ್ರವೃತ್ತಿಯ ಪಾತ್ರಗಳನ್ನು ವಿವರಿಸುವಲ್ಲಿ ಅವರ ವಾಸ್ತವ ಪ್ರಜ್ಞೆಯನ್ನು ನಾವು ಗುರುತಿಸಬಹುದು.

ಫಾರ್ಸ್ಟರ್ ತಮ್ಮ ಇಪ್ಪತ್ತಾರನೇ ವಯಸ್ಸಿನಲ್ಲೇ ಬರೆದ 'ನೇರ್ ಏಂಜಲ್ಸ್ ಫಿಯರ್ ಟು ಟ್ರೆಡ್' ಅವರ ಪ್ರಥಮ ಕಾದಂಬರಿ. ಹೃದಯವಂತಿಕೆಶೂನ್ಯವಾದ ಇಂಗ್ಲೀಷ ಮಧ್ಯಮವರ್ಗದ ಕಟ್ಟುಬೊಪ್ಪುದು, ಸಹಜ ಮಾನವೀಯ ಮೌಲ್ಯಗಳಿಂದ ತುಂಬಿದ ಇಟಾಲಿಯನ್ ಸಂಸ್ಕೃತಿಯೊಂದಿಗೆ ಘರ್ಷಿಸುವುದು ಈ ಕಾದಂಬರಿಯ ವಸ್ತು. 'ದಿ ಲಾಂಗೆಸ್ಟ ಜರ್ನಿ' "ಅವರ ಅತಿ ನಾಟಕೀಯ ಅತಿ ಭಾವೋದ್ದೀಪ್ತಕೃತಿ" ಎನಿಸಿಕೊಂಡಿದೆ. 'ದಿ ಲಾಂಗೆಸ್ಟ ಜರ್ನಿ' ಮತ್ತು "ಎ ರೂಮ್ ವಿದ್ ಎ ವ್ಯೂ"ಗಳಲ್ಲಿ ಎರಡು ಭಿನ್ನಸ್ವಭಾವ ಸ್ವರೂಪದ ಪ್ರಪಂಚಗಳ ತಾಕಲಾಟವನ್ನು ಕಾಣಬಹುದು. ತನ್ಮದೇ ಆದ ತೀಕ್ಷ್ಣ ನೈಯುಕ್ತಿಕತೆಯುಳ್ಳ ಇಬ್ಬರು ಸಹೋದರಿಯರ ಸುತ್ತಲೂ ಹೆಣೆಯಲಾದ ಅದ್ಭುತ ಘಟನಾವಳಿಯೇ 'ಹೋವರ್ಡ್ಸ್ ಎಂಡ್'ನ ಫಾರ್ಸ್ಟರ್‌ರಿಗೆ ಪ್ರಿಯವಾದ ಆಂತರಿಕ ಹೊಂದಾಣಿಕೆಯ ತತ್ವವನ್ನು ಇದರಲ್ಲೂ ಕಾಣಬಹುದು. ಅಪಾರ ಜನಪ್ರಿಯತೆ ಗಳಿಸಿ ವಿಮರ್ಶಕ ಗೌರವಕ್ಕೆ ಪಾತ್ರವಾದ 'ಭಾರತಕ್ಕೆ ಮಾರ್ಗ' ಫಾರ್ಸ್ಟರ್ ರ ಪ್ರಸಿದ್ಧ ಕಾದಂಬರಿ. ರಾಷ್ಟ್ರವ್ಯಾಪಕವಾದ ಸಾಮಾಜಿಕ ವಿಮರ್ಶೆಯಿರುವ ಈ ಕೃತಿ ಅನೇಕ ಬಹುಮಾನಗಳನ್ನು ಗಳಿಸಿದೆ.

ಭಾರತವನ್ನು ಕುರಿತಾದ ಫಾರ್ಸ್ಟರ್ ರ ಇನ್ನೊಂದು ಕೃತಿ "ದಿ ಹಿಲ್ ಆಫ್ ದೇವಿ" ೧೯೫೩ರಲ್ಲಿ ಪ್ರಕಟವಾಯಿತು. ಇದರಲ್ಲಿರುವ ಭಾರತದ ಚಿತ್ರ ನೆನಪು ವಿಚಿತ್ರ ಅನ್ನಿಸುತ್ತದೆ. ರೆಕ್ಸ್ ವಾರ್ನರ್ ಹೇಳಿದಂತೆ ಅವರ ಕಾದಂಬರಿಗಳ "ಅಶ್ಯಪ್ತಿಯ ಮತ್ತು ಹತಾಶೆಯ ಗಡಿಯನ್ನು ದಾಟಿಹೋಗುತ್ತವೆ..... ಅವರ ಚಿತ್ರಿಸಿದ ಲೋಕವನ್ನು ಪ್ರವೇಶಿಸಿದ ಕನಸನ್ನು ಕನಸಿನ ನೋಟುಗಳಿಂದ, ಸ್ವಪ್ನಗಳ ಅನುಭವಗಳಿಂದ ಶ್ರೀಮಂತವಾಗುತ್ತದೆ." ಶಣ್ಣ ಕತೆಯ ಕಲೆಯಲ್ಲೂ ಫಾರ್ಸ್ಟರ್‌ಗೆ ಸಿದ್ಧಿಸಿದೆ. ಅವರ ಎರಡು ಕಥಾಸಂಗ್ರಹಗಳು ಪ್ರಕಟವಾಗಿವೆ.

ಭಾರತ ಮಾರ್ಗ

"ಭಾರತ ಮಾರ್ಗ" ಕಾದಂಬರಿಯ ಕ್ಷೇತ್ರವು "ಚಂದ್ರಪುರ" ಹಾಗೂ ಅದರ ಸುತ್ತಮುತ್ತಣ ಪ್ರದೇಶಗಳಿಗೆ ಸೀಮಿತವಾಗಿದೆ. ಇಲ್ಲಿನ ಜಿಲ್ಲಾಧಿಕಾರಿ ರೊನಿ ಹೀಸ್ಲೊಪಸಿಗೂ ಎಡೆಲಾಗೂ ಮದುವೆ ನಿಶ್ಚಯವಾಗಿರುವುದರಿಂದ ಎಡೆಲಾ ಇಂಗ್ಲೆಂಡಿನಿಂದ ಬಂದಿದ್ದಾಳೆ. ಅವಳ ಜೊತೆ ಗಾರ್ಡಿಯಲ್ಲಾಗಿ ಮಿಸೆಸ್ ಮೂರ್ ಬಂದಿದ್ದಾಳೆ. ಎಡೆಲಾ ನೈಜ ಭಾರತವನ್ನು ನೋಡಬೇಕೆಂಬ ತನ್ನ ಆಸೆಯನ್ನು ವ್ಯಕ್ತಪಡಿಸುತ್ತಾಳೆ. ಇದಕ್ಕಾಗಿ ತರುಣ ಡಾಕ್ಟರ್ ಡಾ! ಅಜೀಜ್ ಪ್ರಸಿದ್ಧ 'ಮರಬಾರ್' ಗವಿಗಳಿಗೆ ಒಂದು ಪ್ರವಾಸವನ್ನು ಏರ್ಪಡಿಸುತ್ತಾನೆ. 'ಮರಬಾರ್'ಗಳಲ್ಲಿ ಎಡೆಲಾ ಒಂದು ಗವಿಯನ್ನು ಪ್ರವೇಶಿಸಿ ಹೊರಗೋಡಿ ಬಂದು ಡಾ. ಅಜೀಜ್ ತನ್ನನ್ನು ಹಿಂಬಾಲಿಸಿ ಅವಮಾನಿಸಿದನೆಂದು ಆರೋಪಿಸುತ್ತಾಳೆ. ಅವಳ ಸಾರ್ವಜನಿಕವಾಗಿ ಆರೋಪಿಸುವುದರಿಂದ ಸೆನ್ಸೇಷನಲ್ ಪರಿಸ್ಥಿತಿಯೊಂದು ಉಂಟಾಗುತ್ತದೆ. ವಿಚಾರಣೆಯ ವ್ಯವಸ್ಥೆಯಾಗಿ ಎಡೆಲಾಳನ್ನು ಸಾಕ್ಷಿಗಾಗಿ ಕರೆಯಲಾಗುತ್ತದೆ. ವಿಚಾರಣೆಯು ಫಿರ್ಯಾದುಗಳ ಹಂತದಲ್ಲಿರುವಾಗ, ಗವಿಯಲ್ಲಿ ಯಾರೂ ತನ್ನನ್ನು ಹಿಂಬಾಲಿಸಿಲ್ಲವೆಂದು ಎಡೆಲಾ ಸಾರುತ್ತಾಳೆ. (ಅವಳು 'ಮನೋವಿಕಲ್ಪ' 'ಭ್ರಾಂತಿ' 'ಮಾಯೆ'ಯ 'ರೋಗಿ'ರಾಗಿದ್ದಳೋ? ಪತ್ತೆಹಚ್ಚಲಾಗದ ಅಕ್ರಮ ಪ್ರವೇಶಗಾರನೊಬ್ಬನ ಕೈಗೆ ಸಿಲುಕಿದ್ದಳೋ? ಅಲ್ಲವಿದ್ದಿದ್ದರೆ ಹೇಗೆನ್ನು?) ವಿಚಾರಣೆ ಬಿದ್ದುಹೋಗುತ್ತದೆ. ಸ್ವಲ್ಪ ಸಮಯ ನಿಶ್ಯಬ್ದವಾದ ಪರಿಸ್ಥಿತಿ ಏರ್ಪಟ್ಟು ಸಾರ್ವಜನಿಕ ವ್ಯವಸ್ಥೆ ಹದಗೆಡುವ ಭಯವುಂಟಾಗುತ್ತದೆ. ಎಡೆಲಾ ತನ್ನವರೆಲ್ಲರ ತಿರಸ್ಕಾರಕ್ಕೆಳಗಾಗಿ ಮದುವೆಯಾಗದೆ ಇಂಗ್ಲೆಂಡಿಗೆ ಹಿಂದಿರುಗುತ್ತಾಳೆ. ಇದಕ್ಕೆ ಮೊದಲೇ ಇಂಗ್ಲೆಂಡಿಗೆ ಹಿಂದಿರುಗಿದ್ದ ಮಿಸೆಸ್ ಮೂರ್—ಇಂಗ್ಲೀಷರ ಮತ್ತು ಭಾರತೀಯರ ಮೈತ್ರಿಯ ಸಂಕೇತವಾಗಿದ್ದವಳು—ಸಮುದ್ರಯಾನದಲ್ಲಿ ಸಾವನ್ನಪ್ಪುತ್ತಾಳೆ. ಮಿಸೆಸ್ ಮೂರ್‌ಳ ಮಗ ಮತ್ತು ಮಗಳು ಭಾರತಕ್ಕೆ ಬಂದು

(ಉಳಿದ ಭಾಗ ನೋಡಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಕಾರಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಫೋನ್ : 526

ಸ್ಥಾಪನೆ: 1921

ಪುಟ ೮
ಸಂಚಿಕೆ ೪೫
Vol. 49
No. 45

ನವಯುಗ

ಸ್ವಾಗತಕರು:
ದಿ! ಎ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ ರೂ. 10/-

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೧೬—೭—೧೯೭೦

Advt. Rate Rs. 3/- per colm. cm.

ಸಮಯೋಚಿತ ನಿರ್ಧಾರ

ಕರ್ನಾಟಕ ರಾಜ್ಯದ ಮೇಲೆ ಪ್ರಕೃತಿಯ ಕರಕಣಿ ಜಾಸ್ತಿ. ಇಲ್ಲಿಯ ಪ್ರಾಕೃತಿಕ ಸಂಪತ್ತು ಸಂಪೂರ್ಣ ಆನಷ್ಟೆಗೆ ಗುರಿಯಾಗಿದ್ದ ಕಾಲವೊಂದಿತ್ತು. ಈಗ, ರಾಷ್ಟ್ರದ ಸಂಪನ್ಮೂಲಗಳನ್ನು ಹುಡುಕಿ ಅವನ್ನು ಜನೋಪಯೋಗಿಯಾಗಿ ಬಳಸಿಕೊಳ್ಳುವ ಪ್ರಯತ್ನ ಬಹುಮುಖವಾಗಿ ನಡೆಯತೊಡಗಿರುವುದು ಸಂತೋಷ. ಜಲವಿದ್ಯುತ್ ಉತ್ಪಾದನೆಯಲ್ಲಿ ಇಡೀಯ ದೇಶಕ್ಕೇ ಮಾದರಿಯಾಗಿ ನಿಂತ ಶರಾವತಿ ಯೋಜನೆಯು ಹೆಸ್ಸಲ್ಲೇ ಕಾಳೀನದಿಯತ್ತ ಗಮನ ಹರಿಯಿತು. ವಿದ್ಯುತ್ತನ್ನು ಹೊಂದುವ ಬಯಕೆಯಿಂದ ರಾಜ್ಯ ಸರಕಾರ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಪ್ರಯತ್ನಶೀಲವಾಗಿ ನಡೆಯಿತು; ಸಧ್ಯದ ಅಂದಾಜಿನಂತೆ ಸುಮಾರು ನೂರು ಕೋಟಿ ರೂಪಾಯಿಗಳ ಬಂಡವಾಳ ಹೂಡಬೇಕಾಗಿ ಬರುವ ಬೃಹತ್ ಯೋಜನೆಯಿದು. ಇಷ್ಟು ಬಂಡವಾಳ ಕೂಡಿಸುವುದು ರಾಜ್ಯ ಸರಕಾರ ಮತ್ತು ರಾಜ್ಯದ ವಿದ್ಯುನ್ಮಂಡಲಿಗಳ ಆರ್ಥಿಕ ಪರಿಸ್ಥಿತಿಗೆ ಹೊರಗಾದ ಸಂಗತಿ. ಆದ್ದರಿಂದ ಭವಿಷ್ಯದಲ್ಲಿ ವಿದ್ಯುದ್ಯೋಜನೆಗಳನ್ನು ಫಿರ್ಮಾಣ ಮಾಡುವ ಹೊಣೆಗಾರಿಕೆಯನ್ನು ಸ್ವಾಯತ್ತ ಕಾರ್ಪೋರೇಶನ್ನೊಂದಕ್ಕೆ ಒಪ್ಪಿಸಿಕೊಡಲು ರಾಜ್ಯ ಸರಕಾರ ನಿರ್ಧರಿಸಿದೆ. ಇದು ನಿಜಕ್ಕೂ ಸಮರ್ಪಕವಾದ ಸಮಯೋಚಿತ ನಿರ್ಧಾರ. ಕಾರ್ಪೋರೇಶನ್ನಿನ ಅಧಿಕೃತ ಬಂಡವಾಳ ಸದ್ಯಕ್ಕೆ ರೂ. ೧೨ ಕೋಟಿಗಳು. ಲಿಮಿಟೆಡ್ ಕಂಪೆನಿಯಷ್ಟೆ ಸ್ವರೂಪದ ಕಾರ್ಪೋರೇಶನ್ನಿನ ಬಂಡವಾಳವನ್ನು ಕುಂಠಿಸುವುದು ರಾಜ್ಯ ಸರಕಾರ ಮತ್ತು ವಿದ್ಯುನ್ಮಂಡಲಿಗಳು ಮಾತ್ರ. ಮತ್ತಾರಿಗೂ ಪಾಲುಗಳನ್ನು ಕೊಳ್ಳುವ ಅಧಿಕಾರವಿಲ್ಲ. ಆದರೆ ಮುಂದೆ ಸಾರ್ವಜನಿಕರಿಂದ ಕಾರ್ಪೋರೇಶನ್ ಸಾಲವನ್ನು ಪಡೆಯಬಹುದು.

ರಾಜ್ಯದ ಜಲವಿದ್ಯುದ್ಯೋಜನೆಗಳತ್ತ ನೆರೆರಾಜ್ಯದ ಕಣ್ಣು ಬಿದ್ದಿದೆ. ಸ್ವಲಾಭಕ್ಕಾಗಿ ಅವು ಇಲ್ಲಿ ಯೋಜನೆಗಳನ್ನು ಕೈಗೊಳ್ಳುವ ಅವಕಾಶ ನೀಡಿದರೆ, ಸಂತೋಷದಿಂದ ಮುಂದೆ ಬರಲು ತುದಿಗಾಲ ನೇಲೆ ನಿಂತಿವೆ. ಈ ಪೈಪುವೆ ರಾಷ್ಟ್ರೀಯ ಸಂಘಟನೆ ಮತ್ತು ವಿದ್ಯುದ್ವಿತರಣೆಯ ಪ್ರಶ್ನೆಗಳನ್ನು ಮುಂದಿಟ್ಟು ಜಲವಿದ್ಯುದ್ಯೋಜನೆಗಳನ್ನು ಕೇಂದ್ರ ಸರಕಾರವೆ ಕೈಕೊಳ್ಳಬೇಕೆಂದು ಹೇಳುವವರೂ ಕೆಲವರು ತೋರುತ್ತಾರೆ. ಈ ನಡುವೆ ಶ್ರೀ ವೀರೇಂದ್ರ ಪಾಟೀಲರ ಸಚಿವ ಸಂಪುಟವು ಮಾಡಿದ ನಿರ್ಣಯ ಎಂಟೆದೆಯದ್ದು; ರಾಜ್ಯದ ಹಿತದೃಷ್ಟಿಯಿಂದ ಅತ್ಯಂತ ಪ್ರಶಂಸನೀಯವಾದುದು. ನಿಯೋಜಿತ ಕಾರ್ಪೋರೇಶನ್ನಿನ ವಿದ್ಯುತ್ ಯೋಜನೆಗಳ ಮೂಲ ಕಂಡಕೊಂಡು ಅವಶ್ಯ ಕಾರ್ಯಸಾಧಕತೆಗಳಿಸಲು ಪೂರ್ಣ ವಿಷಯವಾದರೂ ಆದರ ಮುಖ್ಯ ಉದ್ದೇಶ, ವಿರಾಟ್ ಕಾಳೀ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದೇ ಆಗಿದೆ. ಶರಾವತಿಗಿಂತಲೂ ಕಾಳಿ ಹೊಜನೆಯು ಗಾತ್ರದಲ್ಲೂ ಪರಿಣಾಮ-ಪರಿಣಾಮಗಳಲ್ಲೂ ಹಿರಿದು. ಯೋಜನೆ ಮುಕ್ತಾಯಗೊಂಡಾಗ ೧೫ ಲಕ್ಷ ಕಿಲೋವ್ಯಾಟ್ ವಿದ್ಯುತ್ತು ದೊರೆಯಲಿದೆ. ಇದನ್ನು ಹಂತ ಹಂತವಾಗಿ ಆರಂಭಿಸಬೇಕಷ್ಟೆ. ಮೊದಲ ಹಂತವು ಪೂರ್ಣಗೊಳ್ಳುವಾಗ ೧೬೫ ಮೆಗವಾಟ್ ಉತ್ಪಾದನಾ ಸಾಮರ್ಥ್ಯದ ಎಳು ಘಟಕಗಳು ಫಿರ್ಮಾಣಗೊಳ್ಳುತ್ತವೆ. ಇದಕ್ಕೆ ತಗಲುವ ವೆಚ್ಚ ರೂ. ೩೮ ಕೋಟಿಗಳು. ಇದರ ಕೆಲಸ ಸಧ್ಯವೇ ಆರಂಭವಾದರೆ ಇದನ್ನು ಮೂರು-ನಾಲ್ಕು ವರ್ಷಗಳಲ್ಲಿ ಕಾಳಿಯ ವರಪ್ರಸಾದ ಕನ್ನಡಿಗರಿಗೆ ದೊರೆಯಲಿದೆ. ಈ ಯೋಜನೆಗೆ ಕೇಂದ್ರ ಸರಕಾರದ ಒಪ್ಪಿಗೆಯೂ ಸದ್ಯ ಸಿಗುವ ನಿರೀಕ್ಷೆಯೂ ಇದೆ. ಫೀರಾವರಿ ಯೋಜನೆಗಳಿಗೆ ಅನುಮತಿ ನೀಡಲು ವಿಳಂಬವೆಸಗುವ ಕೇಂದ್ರ ಸರಕಾರ ವಿದ್ಯುತ್ತಿನೊಡನೆ ಸರಸವಾಡುವುದು ಸಾಧ್ಯವಿಲ್ಲ. ಕೇಂದ್ರ ಸರಕಾರದ ನೆರವು ಸಿಗದೆ ಹೋದರೂ ರಾಜ್ಯ ಹಿತದೃಷ್ಟಿಯಿಂದ ರಾಜ್ಯ ಸಂಪನ್ಮೂಲಗಳ ಬಲದಿಂದಲೇ ಫೀರಾವರಿ ಯೋಜನೆಗಳನ್ನು ಮುಗಿಸುವ ದಿಟ್ಟತನ ತೋರಿಸಿದ ರಾಜ್ಯ ಸರಕಾರ ಕಾಳಿ ಯೋಜನೆಯನ್ನು ಕೈ ಬಿಡುವ ಅಥವಾ ಅದನ್ನು ಮುಂದೂಡುವ ಪ್ರಮೇಯವಿಲ್ಲ. ನಾಲ್ಕು ನೆಯ ಯೋಜನೆಯಲ್ಲಿ ವಿದ್ಯುತ್ ಪೂರೈಕೆಗೆ ಒದಗಿಸಿದ್ದ ಬರಿಯ ಏಳು ಕೋಟಿ ರೂಪಾಯಿಗಳು. ಇದು ಏನೇನೂ ಸಾಲದೆಂಬುದಕ್ಕೆ ಗೊತ್ತು. ಕಾರ್ಪೋರೇಶನ್ನಿನ ಸರಕಾರಿ ಪಾಲಿಕೆ ಬಂಡವಾಳಕ್ಕೂ ಇದು ಸಾಲದು. ಆದ ದರಿಂದ ರಾಜ್ಯ ಸರಕಾರವು ಸಾರ್ವಜನಿಕರ ನೆರವನ್ನು ಬಯಸುವುದು ಸ್ವಾಭಾವಿಕ.

ರಾಜ್ಯದ ಮುಖ್ಯಮಂತ್ರಿಗಳೇ ಕಾರ್ಪೋರೇಶನ್ನಿನ ಅಧ್ಯಕ್ಷರಾಗಿದ್ದು ಉಳಿದ ಎಂಟು ಡೈರೆಕ್ಟರರು ಇದಕ್ಕೆರುತ್ತಾರೆ. ಇದರ ಅಧ್ಯಕ್ಷರೂ ಖಂಡಮಾಳ ಹೂಡುವವರೂ ಸರಕಾರೀ ವಲಯದವರೇ. ಆದುದರಿಂದ ಇದು ಸರಕಾರಿ ಉದ್ಯಮವೂ ಹೌದು. ಖಾಸಗಿ ಉದ್ಯಮಗಳ ಜಗ್ಗೆ ದಕ್ಷತಾಪತ್ರಯ ಹರಡಿ ತ್ತಿರುವ ಈ ಕಾಲದಲ್ಲಿ ಇದು ಸಮರ್ಥನೀಯ. ಆದರೂ ಲಿಮಿಟೆಡ್ ಕಂಪೆನಿಯ ಸ್ವರೂಪದಲ್ಲಿರುವ ಕಾರ್ಪೋರೇಶನ್ ಸಂಪತ್ತು ಕೂಡಿಸುವ ಜಿಲ್ಲಾವಾರು ಸೌಲಭ್ಯಗಳನ್ನೂ ಪಡೆಯಬಹುದೆ. ಯೋಜನೆಗಳ ಮೂಲವರಸುವುದು, ಅವಶ್ಯ ಆರಂಭಿಸುವುದು ಮತ್ತು ಕೊನೆಗೊಳಿಸುವುದು ಪ್ರೈವೇಟರ ಕಾರ್ಯಧಾರವಾಗಿ ಉಳಿದು, ವಿತರಣೆಯ ಹೊಣೆಗಾರಿಕೆಯನ್ನು ರಾಜ್ಯದ ವಿದ್ಯುನ್ಮಂಡಲಕ್ಕೆ ಒಪ್ಪಿಸಿಕೊಡುವುದರಿಂದ ಸದಬರಾಯಿಸುಳ್ಳಿ ವಿಕತೆ ಮೂಡಬಹುದೆ; ಕಾರ್ಪೋರೇಶನ್ನಿಗೂ ತನ್ನ ಮಾಲಿಕ್ಯ ಧೋರಣೆಗಳತ್ತ ಮುನ್ನಡೆಯಲು ಹೆಚ್ಚಿನ ಅನುಕೂಲ ಸಿಗುತ್ತದೆ. ಆದರೆ, ರಾಜ್ಯದ ವಿದ್ಯುನ್ಮಂಡಲದ ಅವಿ ನಡಿಗೆ ಲಂಚಾವತಾರ ಕಾಟಗಳನ್ನು ನಂಬಿಕೊಂಡು ಹೊಸ ಉದ್ಯಮಗಳನ್ನು ಸ್ಥಾಪಿಸುವುದೇ ಮೊದಲಾದುವುಗಳು ಅಸಾಧ್ಯ. ಆದ್ದರಿಂದ ರಾಜ್ಯ ಸರಕಾರವು ವಿದ್ಯುನ್ಮಂಡಲದ ಕಿವಿ ಹಿಂಡುವದ ಅತ್ಯಗತ್ಯ.

ನವಯುಗ
ಸ್ವಾತಂತ್ರ್ಯೋತ್ಸವ ಸಂಚಿಕೆ

ಆಗೋಸ್ತು ೧೫ ಸಮೀಪಿಸುತ್ತಿದೆ; ಭಾರತೀಯರಾದ ನಮಗೊಂದು ಪರಮ ಪವಿತ್ರ ದಿನ. ಸ್ವಾತಂತ್ರ್ಯ ದಿನೋತ್ಸವದ ಸವಿನೆನಪನ್ನು ಚಿರಂತನವಾಗಿರಿಸಲು ತಮ್ಮ ನೆಚ್ಚಿನ ನವಯುಗವು ನಾಡಿನ ಸುಪ್ರಿಯಾತ ಬರಹಗಾರರ ರಾಜಕೀಯ ಹಾಗೂ ಸಾಂಸ್ಕೃತಿಕ ವೌಲ್ಯವಿರುವ ಲೇಖನಗಳೆಂದ ಕೂಡಿದ ವಿಶೇಷಾಂಕವನ್ನು ಎಂದಿನಂತೆ ಈ ವರ್ಷವೂ ಪ್ರಕಟಿಸುತ್ತದೆ.

ಈ ಜನಪ್ರೀತ ಪತ್ರಿಕೆಯು ಅಸಂಖ್ಯ ಜನರ ಕೈಸೇರುತ್ತ ತಮ್ಮ ಉದ್ದಿಮೆ-ವ್ಯವಹಾರಗಳ ನೈಜದರ್ಶನವನ್ನು ಎಲ್ಲರಿಗೂ ಒದಗಿಸುವುದು. ಆ ಪ್ರಯುಕ್ತ ಜಾಹೀರಾತುದಾರರು ದಯವಿಟ್ಟು ಆದಷ್ಟು ತ್ವರಿತವಾಗಿ ತಮ್ಮ ಜಾಹೀರಾತನ್ನು ಕಳುಹಿಸಿ ಸಹಕರಿಸುವಂತೆ ಅಪೇಕ್ಷಿಸಲಾಗಿದೆ.

ಸಂದರ್ಭೋಚಿತವಾದ ಸಣ್ಣ ಲೇಖನ, ಕವನಗಳನ್ನು ತಾ. 25-7-1970ರ ತನಕ ಸ್ವೀಕರಿಸಲಾಗುವುದು.

ಬೆಂಗಳೂರಿಗೆ ಗಾಂಧಿ

(ಪ್ರಥಮ ಪುಟದಿಂದ)

ಶ್ರೀಮತಿ ಇಂದಿರಾ ಗಾಂಧಿಯವರ ಕರ್ನಾಟಕಕ್ಕೆ ಎಂದೋ ಭೇಟಿ ನೀಡಬೇಕಿತ್ತು; ಇಂದಾದರೂ ಬರುತ್ತಾರೆಂದು ಸಂತೋಷಪಡಬೇಕು. ಈ ಸಂತೋಷದ ನಡುವೆ ದುಃಖ; ಏಕೆಂದರೆ, ಅವರು ಪ್ರಧಾನಿ ಮಂತ್ರಿಯಾಗಿಯೇ ಇಲ್ಲಿ ಬರಲಿಲ್ಲ: ಶ್ರೀಮತಿ ಗಾಂಧಿಯಾಗಿ ಅಥವಾ ತನ್ನ ಕಾಂಗ್ರೆಸ್ಸಿನ ಪಾಯಿಕೆಯಾಗಿ ಬರುತ್ತಾರೆ; ಮುಂದೆ ಅವಧಿಕೃತ ಬೆಟ್ಟಿಯ ನಡೆನೆಯೂ ಅಧಿಕೃತ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಉದಾರ ಮನಸ್ಸಿಂದ ಒಪ್ಪಿಗೆಯಿತ್ತರು! ಶ್ರೀಮತಿ ಗಾಂಧಿಯವರ ಬೆಟ್ಟಿಯು ಉದ್ದೇಶ ಹೊಗಲಿಸಷ್ಟು ಸ್ಪಷ್ಟ. ಕೋನುವಾರು ಗಾಳಿಗಳ ಬಗ್ಗೆ ಧ್ವನಿಸಿದ ನೆನಪದಲ್ಲಿ ಗೃಹಮಂತ್ರಿಗಳವರು ರಾಜ್ಯ ರಾಜ್ಯ ಪ್ರವಾಸ ಮಾಡಬೇಕೆಂದು, ಮೊದಲು ಸಿದ್ಧಾರೂಢಿಸಿ, ಈಗ ಪ್ರಧಾನಿಯೇ ಗೃಹಮಂತ್ರಿಯೂ ಆದ್ದರಿಂದ ಹಾಗೆ ಸಂಚಾರ ಹೊರಟಿಲ್ಲ ವೆಂದಿನ ದಾರಿ ಹಾಗೆ ಬಂದಾರ. ಇಂಡಿಕೇಟ್ ವಿಭಾಗವಧಿ ಅಧ್ಯಕ್ಷ ಶ್ರೀ ಸಜ್ಜಲಿಂಗಪ್ಪ, ಆಧ್ಯಕ್ಷ ಜಗಜೀವನರಾವರ ಬೆಂಗಳೂರಿಗೆ ಬಂದರು. ಒಲೆಯೂರಿದರು. ದಟ್ಟವಾದ ಹೊಗೆ ನಾಲ್ಕೂ ನಿಟ್ಟಿಗೆ ಶಬ್ದವಂತೆ ಮೂಡಿದರು. ಬೆಂಕಿ ಮಾತ್ರ ಉರಿಯಲಿಲ್ಲ. ಈಗ ಶ್ರೀಮತಿ ಗಾಂಧಿಯವರು ಬೆಂಗಳೂರಿಗೆ ಬರುತ್ತಾರೆಂದ ಕೂಡಲೇ ಇಲ್ಲಿ ಅವರ ಚೇಲರು ಹೊಗೆಯೂಡಿಸಿದರು. ರಾಜ್ಯ ಸಚಿವ ಸಂಪುಟದ ಕೆಲವು ಸದಸ್ಯರು ಇಂಡಿಕೇಟ್‌ರಂಗುವರೆಂದರೆ; ಮುಖ್ಯ ಮಂತ್ರಿಯೇ ಸಿಂಡಿಕೇಟನ್ನ ತ್ಯಜಿಸುತ್ತಾರೆಂದರು; ಇದಕ್ಕೆ ಶ್ರೀ ಎಸ್ಸೆನ್ನರ ಅಧ್ಯಕ್ಷಾನುಧಿವಗಿದ್ದವರೆಗೆ ಗಡಿಯಿಟ್ಟರು. ಜಪ ಇದವನ್ನು ನಂಬುವಂತೆ ಮಾಡಿ ಇಂಡಿಕೇಟಿನತ್ತ ಜನರೊಲವು ಹರಿಸುವ ಪ್ರಯತ್ನ ಗೆದ್ದಿದ್ದು. ಈಗ ಶ್ರೀಮತಿ ಗಾಂಧಿ ಬಂದು ಮಾತನಾಡಿದ್ದನ್ನು ಮಂತ್ರಿ ಸಾಧನೆ ಅಳತೆಯಿಂದ ಕೂಡಿದ್ದ ನಿರಾಶಾದಾಯಕ ಶ್ರೀ ಎಂ. ವಿ. ಕೃಷ್ಣಪ್ಪನವರನ್ನು ಸಂಘಾಧಿಸಿಗೊಳಿಸಿದ್ದಲ್ಲದೆ; ಮಂತ್ರಿಯಾದ ಶ್ರೀ ಕೆಂಗಲ್ಲರ ಬೆಲೆಗಳಿಂದ ಪ್ರಕಂಸೆ ಗಳಿಸಿದ್ದು; ಅವರ ವಿರೋಧಿಗಳನ್ನು ಸಾಂತ್ವನ ಮಾಡುವುದು. ರಾಜ್ಯದ ಕಾಂಗ್ರೆಸ್ ಸಂಘಟನೆಯನ್ನ ಒಡೆಯುವು, ಅದು ಅನಿವಾರ್ಯವಾದರೆ, ಪಕ್ಷೀಯ ಸಂಘಟನೆಯನ್ನು ಮುರಿಯಲು ತಮ್ಮ ಬಿಡಿಶಕ್ತಿಯನ್ನು ಬಳಸುವುದು. ಶ್ರೀಮತಿ ಗಾಂಧಿಯವರು ಈ ಕಾರ್ಯಕ್ಕಾಗಿ ಮೂರನೆಯವರಾಗಿ ಬಂದಿ

(ಪತ್ರನೇ ಪುಟ ನೋಡಿರಿ)

ಗೇಹರಾಜ್ಯದಲ್ಲಿ

ಸರ್ವಿಸ್ಸೆಂದು ಕರೆಯುವ ಬಿಜಿನೆಸ್ಸು

"ಅಲ್ರಿ, ನಿಮ್ಮತ್ರ ನಮ್ಮೂರಿಂದು ಗವ್ಮೆಂಟ್ರು ಅಸಲಿದೆ..."

"ಏನ ?"

"ನೋಡಿ, ನಮ್ಮ ದೇಶದಲ್ಲಿ ಡಾಕ್ಟರುಗಳ ಸಂಖ್ಯೆ ಕಡಮೆ."

"ಈಗ ಡಾಗೇನಿಲ್ಲ. ಕಂಬ ಸುಧಾರಿಸಿದ್ದೀವೆ...."

"ಅದ್ರೂ ಕಡಮೆ ಕಡಮೆಯೇ ಆಲ್ವೆ?"

"ಏನು ಹೇಳ್ಬೇಕಾ ನೀನು? ನಮ್ಮ ದೇಶದಲ್ಲಿ ಮೆಡಿಕಲ್ ಕಾಲೇಜುಗಳಲ್ಲಿ ವಿಶೇಷವಾಗಿ ವಿದ್ಯಾರ್ಥಿಗಳಿಗೂ ಪ್ರವೇಶ ಕೊಡಿಯುತ್ತದೆ."

"ಹಾಗ್ರಿ, ನಮ್ಮವರಿಗೆ ಪ್ರವೇಶ ನಿರಾಕರಿಸಿ ವಿದೇಶೀಯರನ್ನು ಡಾಕ್ಟರರಾಗಿ ಮಾಡುತ್ತೀವೆ...."

"ಅದು ಕಾಸು ಮಟ್ಟಿಗೆ ನಿಜಾನ್ನು. ಆದ್ರೂ...."

"ಅದ್ರೂ ಇಲ್ಲ, ಹೋದ್ರೂ ಇಲ್ಲ, ನಮ್ಮಲ್ಲಿ ವಿದೇಶೀಯರನ್ನು ಡಾಕ್ಟರು ಮಾಡ ವುದು ಎಂದರೆ, ಅನೂ ಒಂದು ಬಿಜಿನೆಸ್. ಯಾರು ಹೆಚ್ಚು ಹಣ ಕೊಡುತ್ತಾರೋ ಅವರಿಗೆ ಸೀಟು...."

"ನೋಡು, ಅಂಥ ಕಡೆಯಲ್ಲಿ ವಿದೇಶ ಗಳಿಂದ ನಮ್ಮಲ್ಲಿಗೆ ಹಣ ಬರುತ್ತದೆ; ನಮ್ಮ ಸರಕಾರದ ಹಣವೇನೂ ಖರ್ಚಾ ಗೋದಿಲ್ಲ...."

"ಅದು ಸರಿ. ಆದ್ರೆ ನನಗೆ ಡಾಕ್ಟರು ಬೇಡವೆ? ಡಕ್ಟರಿ ಕಾಲೇಜನ್ನು ವ್ಯಾಪಾರಿ ಅಂಗಡಿಯಾಗಿ ಮಾಡಿದರೆ ಬಿಜಿನೆಸ್ಸು ನಡೆಯಬಹುದಷ್ಟೆ."

"ಯಾಕೆ, ಫಲಗೇನಾ ಕಡಿವೆ ? ಓಣಿ ಓಣಿಯಲ್ಲಿ ವತ್ತಿಬರಿದ್ದಾರೆ; ಬೀದಿಬೀ ದಿಯಲ್ಲಿ ಡಾಕ್ಟರಕಿದ್ದಾರೆ...."

"ಅದು ಪೇಟೆಯ ಕಥೆಯಾಯ್ತು. ಹಳ್ಳಿಗಳಲ್ಲಿ ?"

"ಅಲ್ಲ, ಈಗೇನು ಹಳ್ಳಿಯವರು ಮದ್ದು ಮಾಡ್ತಾನೇ ಇಲ್ಲವೆ?"

"ಇದ್ದಾರೆನ್ನಿ. ಮನೆಮನೆಯ ಮೃ ದುಕ-ಮದುಕೆಯೂ ಡಾಕ್ಟರರಾಗಿದ ರಾಬೆಂದಿತ್ತು. ಅದೀಗ ದೂರ ಹೋ ಯಿ, ಆದಿಡಾಕ್ಟರರ ಮನೆಯೊಳಗುವ ಕಾಲ ಬಂತಿದೆ."

"ಪದ್ಧತಿ ಹೊಸ ವೈದ್ಯಪದ್ಧತಿಗಿಂತ ಹಳೆ ದೆಂಬುದು ದಾನಿ."

"ನಿಮಗೆ ಗ್ರಾಮೋದ್ಯಾರದ ಮೂತಾ ರ ಬಹುದು...."

"ಯಾಕೆ ಗ್ರಾಮೋದ್ಯಮದಲ್ಲಿ ಕಾಲಿ, ಹಿಸ್ಟ್ರಿ ಏನಿದೆ ?"

"ಅಪಾರ ಇತಿಹಾಸ ಪ್ರಸಿದ್ಧ...."

"ಅಲ್ರಿ, ಅದೆಲ್ಲ ಏನಕ್ಕೆ ಬಂತಕ್ಕೆ?"

"ಬೇಡ, ಡಾಕ್ಟರರನ್ನಾದರೂ...."

"ಸರೀನ್ನಿ. ಸರಕಾರವೇನು ಹುಮ್ಮ ನುಳಿದಿದೆಯೇಳಿ? ಹಳ್ಳಿಗಾಡುಗಳಲ್ಲಿ ಡಾಕ್ಟರುಗಳು ನೇಸ ವಂತೆ ಪ್ರಯತ್ನ ಮಾಡುತ್ತಿದೆ...."

"ಇರ್ಬಹುದೂನ್ನಿ. ಆದ್ರೆ ಅದಿನ್ನೂ ಪ್ರಯತ್ನ ಮಾತ್ರವಾಗಿಯೇ ಉಳಿದಿದೆ. ಊರ ಡಾಕ್ಟರೂ ಹಳ್ಳಿಗೆ ಬರುವುದಿಲ್ಲ."

"ನೋಡಮ್ಮ, ಅದಕ್ಕೆ ಏನು ಮಾಡ ಬೇಕು? ಡಾಕ್ಟರು ಹಳ್ಳಿಗೆ ಬರಲು ಕೇಳ ದಿದ್ದರೆ, ಬಲಾತ್ಕಾರವಾಗಿ ಎಳೆದು ತರ ಲಾಗುತ್ತೆ?'

"ಅಲ್ಲ, ಸರಕಾರ ಒಬ್ಬೊಬ್ಬ ವೈದ್ಯ ರನ್ನು ತಯಾರಿಸಲು ಒಂದೊಂದೂವ ರೆ ಲಕ್ಷ ರೂಪಾಯಿ ವೆಚ್ಚ ಮಾಡ ವಾ ಗ, ಗ್ರಾಮೀಣ ಪ್ರದೇಶಗಳಲ್ಲೇ ಸೇವೆ ಮಾಡಬೇಕೆಂದೇಕೆ ಖಡ್ಡಾಯ ಮಾಡ ಬಾರದು?'

'ಮಾಡಬಹುದೂನ್ನು. ಆದರೆ, ಅದ ರಿಂದ ಪ್ರಯೋಜನವೆ?"

"ಹಾಗಾದರೂ ಗ್ರಾಮಕ್ಕೆ ವೈದ್ಯರೇ ಇಲ್ಲ ದಂತೆ ಸೇವೆ..."

'ಲಬವಂತದ ಮೂಳಿಸ್ಸಾನ.... ಬೆಕ್ಕ ಮ್ಮ ಸ್ಸಾನ ಮಾಡಿಸಿದರೇನು?'

'ಡಾಗಾದರೂ....'

'ನೋಡು, ಕೇಂದ್ರದ ಆರೋಗ್ಯ ಸಚಿ ವ ಶ್ರೀ ಕೆ. ಕೆ. ಶಹ ಇದಷ್ಟೇ ಹೇಳಿದ್ದಾ ರೆ. ಆದರೆ, ನಿರೀಕ್ಷಿಸಿದ ಸತ್ಪರಿಣಾಮ ಇದ ರಿಂದ ಆಗೋದಿಲ್ಲ....'

'ಯಾಕೆ?'

'ಕಾನೂನ-ರಾಯದೆಗಳಿಂದ ಏನು ಸಾನೇ ಸಾಧಿಸಿದಂತಾವೀಕ್ಷ? ವೈದ್ಯರು ಹಳ್ಳಿಗಳಿಗೆ ಹೋಗಲು ಕೇಳಿದೆ ಇದ್ದರೆ?'

'ಹೌದಗುವಂತೆ ಮಾಡಬೇಕ.'

'ಮಾಡಬೇಕು ನಿಜ, ಆದರೆ, ಕಾನೂ ನಿನ ಬಲದಿಂದಲ್ಲ, ಅವರ ಮನ ವೊಲಿಸಿ....'

'ಅವರು ಒಲಿಯುತ್ತಾರೆಯೆ?'

'ಒಲಿಲಿಲ್ಲಾಂತಾದರೆ ಯಾಕೆ ಒಲಿ ಯೋದಿಲ್ಲಾಂತ ವಿಚಾರ ಮಾಡಬೇಕು'

'ಯಾಕೆ?'

"ನೋಡಮ್ಮ, ಹಳ್ಳಿಗಳಲ್ಲಿ ಸರಿಯಾದ ವಸತಿ ವ್ಯವಸ್ಥೆಯಿಲ್ಲ; ನಗರಗಳ ನಾಗರಿ ಕತೆಯಲ್ಲೇ ಬೆಳೆದು ಡಾಕ್ಟರಂತಾದವರು ಹಳ್ಳಿಗಾಡಿನಲ್ಲಿ ದಿನವೂಡುವುದೆಂತು? ವಿದ್ಯುತ್ತು ಸರಬರಾಯಿಯಿಲ್ಲದ ಹಳ್ಳಿಗ ಕಷ್ಟ? ಇವನ್ನೆಲ್ಲ ಸಹಿಸಿದರೂ ಬಡವ ರಾದ ಹಳ್ಳಿಗರು ಔಷಧಿಯ ಬೆಲೆಯನ್ನ ಕೊಡದೆ ಹೋದರೆ, ಡಾಕ್ಟರು ಅದನ್ನು ತುಂಬಿಕೊಳ್ಳುವುದೆಂತು?"

'ಛೆ, ಅಂಥವರು ಇಲ್ಲನ್ನಿ. ಇದ್ದರೂ ಕಡಿಮೆಯೆನ್ನಿ. ನಗರಗಳಲ್ಲೂ ವಂಚಕ ರು ಇದ್ದಾರೆ....'

'ಇದ್ದಾರೆ ಆದ್ರೆ, ಹಳ್ಳಿಗಳಲ್ಲಿ ಇಂತಹ ಪ್ರಸಂಗಗಳೇ ಹೆಚ್ಚು. ಇಂದಿಲ್ಲಿ, ನಾಳೆ, ನಾಳೆ ಅಂತ....'

'ಹ್ಞೂಂ....ಅದ್ರೂ ಡಾಕ್ಟ್ರು ನಮ್ಮ ಮೂಡಿಕೊಳ್ಳೋದಿಲ್ಲನ್ನಿ. ಒಂದಕ್ಕೆ ಎ ರಡು ಸೇರಿಸೇ ಮನೂಲು ಮಾಡುತ್ತಾರೆ.'

"ಇರಬಹುದು. ಆದರೆ, ಹಳ್ಳಿಯ ಜೀವ ನ ವಿಟ್ಟು ಸುಧಾರಿಸಬೇಕು; ಅವಶ್ಯಕ ಅ ನುಕೂಲತೆಗಳು ಹಳ್ಳಿ ಹಳ್ಳಿಗೂ ವ್ಯಾಪ ಹಾರಿಕವಾಗಿ ದೊರೆಯ ಬೇಕು"

"ಅದು ಯಾವ ಕಾಲಕ್ಕೋ...."

'ಆಷ್ಟೂ ನಿರಾಶೆಪಡುದರೆ ಹೇಗೆ?'

"ಅಲ್ರಿ, ಅದೂ ಆಗುತ್ತೆನ್ನಿ. ಆಗು ವುದಕ್ಕೆ ಹಲವು ಕಾಲವಾದ್ರೂ ಬೇಕಾ ದೀತ. ಅನುವರೆಗೆ ಹಳ್ಳಿಗರು...."

"ಅದಕ್ಕೆ ಕಾನೂನನು ಮಾಡಬೇಕೂಂ ತೀಯ?"

"ಹ್ಞೂಂ...."

"ನೀನು ಇಂತಹ ಊರಲ್ಲೇ ವೈದ್ಯ ಮಾಡಬೇಕು ಎಂದು ವಿಧಿಸುವವರು ಆ ದಕ್ಕೆ ತಕ್ಕ ಅನುಕೂಲತೆಗಳನ್ನೂ ಒದ ಗಿಸಬೇಡವೆ?"

"ಅಂದ್ರೆ ?"

'ಡಾಕ್ಟರರಿಗೆ ವಸತಿ, ಔಷಧಿ ಇಡಲು ತಕ್ಕ ಕೋಣೆ... ಪೇಷೆಂಟುಗಳು, ಅವರ ಬಿಲ್ಲು...."

'ಅಲ್ರಿ, ಪೇಷಂಟ್ ಗಳನ್ನೂ ಅವರ ಬಿಲ್ಲುಗಳನ್ನೂ ಸರಕಾರವೇ ಕೊಡ ಬೇಕೇ?"

"ಸರಕಾರ ಹೇಳಿದ ಕಡೆ ಶೋಷು ಇ ಟ್ಟರೆ, ಅಲ್ಲಿ ಬಿಜಿನೆಸ್ ಆಗದೆ ಇದ್ದರೆ ಅವ ತಿನ್ನುವುದೇನನ್ನು?"

"ನೋಡಿ, ವೈದ್ಯಕೀಯ ಬಿಜಿನೆಸ್ಸು ಅಲ್ಲ, ಅದು ಸರ್ವಿಸ್ಸು...."

"ಸರೀನ್ನು. ಆದರೆ, ಅದು ಬರಿಯ ಸರ್ವಿಸ್ಸು ಅಲ್ಲ; ಕರ್ವಿಸ್ಸೆಂದು ಕರೆಯು ವ ಬಿಜಿನೆಸ್ಸು.... ಬರಿಯ ಸರ್ವಿಸ್ಸಾದರೆ, ಯಾರು ವೈದ್ಯಕೀಯ ಮಾಡ್ತಾರೆ?"

"ಅಂದ್ರೆ ಮಂತ್ರಿಯಾಗೋದೂ ಸರ್ವಿ ಸ್ಸು ಅಂದ ಹಾಗೆ...."

"ಅಲ್ವೆ ಮತ್ತೆ?"

"ಹಾಗಾನ್ರೆ ಏನು ಮಾಡಬಹುದೀಗ?"

'ಮಾಡೋದೇನು? ನೋಡು, ಸುಂ ಸುಮ್ಮನೆ ಪ್ರತಿಜ್ಞೆ ಮಾಡೋದ್ರಿಂದ ಯಾ ವ ಪ್ರಯೋಜನವೂ ಇಲ್ಲ. ಮಾಡಿದ ಪ್ರ ತಿಜ್ಞಾ ಪ್ರಜ್ಞೆಯೇ ಇಲ್ಲವಾದರೆ, ವ್ಯರ್ಥ ಅದಕ್ಕೆ ವೈದ್ಯರನ್ನು ಹಳ್ಳಿಗಳಿಗೆ ಆಕರ್ಷಿ ಸುವ ಕಾರ್ಯನಡೆಯಬೇಕು...'

'ಹೇಗೆ?'

"ಹಳ್ಳಿಗರಿಗೆ ಹೋಗುವ ಡಾಕ್ಟರರಿಗೆ ಹೆಚ್ಚಿನ ಉತ್ತೇಜನ ನೀಡಬೇಕು; ಪ್ರೋ ತ್ಸಾಹ ಕೊಡಬೇಕು; ನೆರವು ನೀಡಬೇಕು"

'ಹ್ಞೂಂ....ಅಂದ್ರೆ ಒಂದು ಬಗೆ ಅಮಿ ಶ ತೋರಿಸಬೇಕು....'

'ಆಲ್ರೆ, ಸಂತಾನ ನಿಯಂತ್ರಣಕ್ಕೆ ರೂ ಪಾಯಿ, ಟ್ರಾನ್ಸಿಸ್ಟರುಗಳನ್ನು ಕೊಡುವ ಆ : ಸವಾಗ, ಸ-ಸ್ಯತ ಕಲಿಯ ಲು ಊಟ-ವಸತಿಯು ನ್ಯವಸ್ಥೆ ಬಿಟ್ಟು ಮಾ ಡುವಾಗ, ಇದೇನು ಹೆಚ್ಚಾಯಿತೆ?'

"ಹೆಚ್ಚಾಗಲಿಲ್ಲ. ಅದ್ರೆ ನಮ್ಮೆಲ್ಲ ಸಮ ಸ್ಯೆಗಳಿಗೂ ಅವಿಚ್ಛ ತೋರಿಸುವುದೇ ಪರಿ ಹಾರ ನಾ ಫವೆಂದು...."

"ಕಳವಳ ತಾನೆ? ಆಲ್ವೆ ಇದರಲ್ಲಿ ಅಂ ಥ ವಿಚಾರವೇನೂ ಇಲ್ಲ. ಆಶೆ—ಅವಿಶ-ಲಂಜೆ-ರುಶ ಪತ್ರಿಕೆಗಳಿಗೆ ಮೂಡನಸಿಗಿಂತ ಲೂ ಪ್ರಾಚೀನವಾದ ಇತಿಹಾಸ. ಆದ್ದರಿಂ ದ ಜಗತ್ತಿನಾ ರಾಷ್ಟ್ರದಲ್ಲಿ ಲಂಚಾಸುರನ ತಾಂಡವ ನೃತ್ಯ ನಡೆಯುತ್ತದೆ. ಆತ ನೊಂದಿಗೆ ಜನತೆಯೂ ಧ್ವನಿಸ'ೀ ಹೋದರೆ, ಬದುಕೇ ಅಸಾಧ್ಯವಾಗು ತ್ತದೆ...."

"ಒಳ್ಳೆ ಉಪದೇಶವಿದ್ದು."

"ಉಪದೇಶವಲ್ಲವಿದು; ಇದ್ದ ವಸ್ತು ಸ್ಥಿತಿಯನ್ನಷ್ಟೇ ನಿರೂಪಿಸಿದೆ."

"ಏನೋಪ್ಪ ಭವಿಷ್ಯದ ಬಗ್ಗೆ ಅಲೋ ಚಿಸಿದರೆ ನಾನಸ ತುಂಬಿ ಹೋದ ಕವಿ ಯುತ್ತದೆ."

"ಚಿಂತೆ ಮಾಡಬಾರದು; ಇಂದಿನ ದಿನ ಸುದಿನಾಂತ ಕಾಲಕ್ಕೆ ತಕ್ಕ ಕೋಲ ಕಟ್ಟುವವರೇ ಎಲ್ಲರೂ..."

"ನಾವೂ...?"

"ನಾವೂ ಈ ನೆಲದಲ್ಲೇ ಇಸುವವರು ತಾನೇ?"

"ಹ್ಞೂಂ...."

—ಗೋರಂತ

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಸರಿಜಯ ಪ್ರಬಂಧಗಳು	1—00
ಘಾಟಿಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಶುಂಕ ಸುಮನ	1—20
ಹೆಂಗುಸರ ಕತೆಗಳು	2—00
ಭುಡಿಮುತ್ತುಗಳು	1—50
ಕುಂಡಗಜ್ಞಾಯ	2—00
ಪುಷ್ಪವನ	2—00
ಮುತ್ತಿನ ನೂಲೆ	1—80

ನವಭಾರತ ಪುಸ್ತಕ ಭಂಡಾರ, ಉಡುಪಿ.

ಎಲ್ಲರೂ ರಾಜಾ ಪಾರ್ಟು ಬಯಸುವ

ಸರಕಾರವೆಂಬ ನಾಟಕ ಕಂಪೆನಿ

ಜನತಾ ನಿಯಂತ್ರಣವು ಜನಪ್ರಿಯವಾಗುತ್ತ ಬರುವ ಕಾಲವಿದು. ತಿಳುವಳಿಕೆಯುಳ್ಳವರೆಲ್ಲರೂ ಮಿತಸಂತಾನಕ್ಕೆ ಅವಶ್ಯವಾದ ಚಿಕಿತ್ಸೆಯನ್ನು ಸ್ವೇಚ್ಛೆಯಿಂದಲೇ ಮಾಡಿಕೊಳ್ಳಲು ಮುಂದು ಬರುವ ವಾತಾವರಣ. ಜನ—ಧನಗಳಿಗೆ ಹೆಗಲಾದ ನಮ್ಮ ದೇಶ ರಾಜ್ಯಕೀಯ ಪಕ್ಷಗಳಿಗೂ ನಾಮಾಂಕಿತ. ಮೊದಲೇ ವಿತೀರಿದ ಸಂಖ್ಯೆಯಲ್ಲಿ ಪಕ್ಷಗಳು, ಮತ್ತು ಅವುಗಳಿಂದ ಸಿಡಿದು ಹೊಸಕಾಗಿ ಹುಟ್ಟಿಕೊಂಡವುಗಳೆಂದು ಅಮಿತ ಪಕ್ಷಗಳು. ಇವುಗಳಲ್ಲಿ ಅಪಿಲ ಭಾರತೀಯ ತಳಹದಿಯುವ ಕೆಲವು, ರಾಜ್ಯ—ಜಿಲ್ಲಾ ವಟ್ಟದವು ಹಲವು. ಒಬ್ಬ ವ್ಯಕ್ತಿಯ ಸತ್ತುಮತ್ತ ಹೆಣೆಗೆ ಂಡವೂ ಒಂದೊರಡು.

ಪಕ್ಷೋತ್ಪತ್ತಿ ಕಾರ್ಯಕ್ಕೆನ್ನೂ ಮಿತ ಸಂತಾನ ಚಿಕಿತ್ಸೆ ನಡೆದಿಲ್ಲ. ಅಭಿಪ್ರಾಯ ಭೇದ ಕಾಡುತ್ತಿರುವ ನಮ್ಮ ದೇಶದಲ್ಲಿ ಪ್ರಜಾ ಜನತೆಗೆ ವಿತಿ ಹೇರಲು ಹೋಗುವಷ್ಟು ಉತ್ಸಾಹ ಪಕ್ಷ ವಿತಿಯ ಬಗ್ಗೆ ಇಲ್ಲ. ಪ್ರಜೋತ್ಪತ್ತಿಯ ದುಷ್ಪ ಪರಿಣಾಮವನ್ನು ನಾವು ಜೆನ್ನಾಗಿ ಅರಿತುಕೊಂಡಿದ್ದೇವೆ; ಆದರೆ ಪಕ್ಷೋತ್ಪತ್ತಿಯ ದುಷ್ಪರಿಣಾಮಗಳನ್ನು ಪ ನವರಿಕೆ ಮಾಡಿಕೊಂಡಿಲ್ಲ. ಏಕೆಂದರೆ, ಇದರ ಭೀಕರ ಪರಿಣಾಮವು ಜನಜೀವಪದಲ್ಲಿ ತಕ್ಷಣ ಪ್ರಭಾವ ಬೀರುವುದಿಲ್ಲ.

ಮಕ್ಕಳ ಸಂಖ್ಯೆ ಹೆಚ್ಚಾದರೆ, ತಾಯ್ತಂದೆಗಳಿಗೆ ಆಕ್ಷಣದಿಂದಲೇ ತ್ರಾಸು, ಅವುಗಳ ಹೊಟ್ಟೆ ಹೊರೆಯ ಬೇಕು, ಬಟ್ಟೆ ಬರೆ ಬರಬೇಕ; ಶಿಕ್ಷಣ—ಉದ್ಯೋಗಗಳಿಗೆ ಗಮನ ಹರಿಸಬೇಕು—ಇಂಡವಾಳ ದೀರ್ಘ ಕಾಲೀನವಾದರೂ ಅದು ಅನಿವಾರ್ಯ. ಆದುದರಿಂದಲೇ ಜಿಂತೆ. ರಾಜ್ಯಕೀಯ ಪಕ್ಷಗಳ ಸಂಖ್ಯೆ ಹೆಚ್ಚಾದರೆ, ಏನೂ ಚಿಂತೆಯಿಲ್ಲ. ಯಾರಾದರೂ ಏಳುತ್ತಾರೆ, ಇಲ್ಲವೇ ಬೀಳುತ್ತಾರೆ, ನನಗೇ ನಂತೆ ಎಂಬ ಉದಾಸೀನ ಭಾವ. ರಾಜ್ಯಕೀಯದಲ್ಲಿ ನಿರಂತರ ಆಸಕ್ತರಾದವರಿಗೂ ಪಕ್ಷೋತ್ಪತ್ತಿಯಿಂದ ಆತಂಕವೆನಿಸುವುದಿಲ್ಲ. ಆದುದರಿಂದಲೇ ಇದು ಹೆಚ್ಚುತ್ತ ಬಂದೀಗ ಸ್ಫೋಟಕವೆನಿಸುವಂತಿದೆ.

ಪಕ್ಷೋತ್ಪತ್ತಿಯ ಪರಿಣಾಮ ಕೂಡಲೇ ತೆ ಗಿಸಿರುವುದಿಲ್ಲ. ಒಂದು ವೇಳೆ ಹಾಗಿದ್ದರೂ ಆದರಿಂದ ಜನತೆ ಹೆಚ್ಚು ಪ್ರಭಾವಿತವಾಗುವುದೂ ಇಲ್ಲ. ಆದರೆ, ಈ ಅನಿಷ್ಟದ ರಾದ್ರಾವತಾರ ದೀರ್ಘ ಕಾಲದ ನಂತರ ಅನುಭವ ವೇದ್ಯವಾಗತ್ತದೆ. ನಮ್ಮ ದೇಶದಲ್ಲಂತೂ ಅದು ಈಗ್ಗೆ ಮೂರು—ನಾಲ್ಕು ವರ್ಷಗಳಲ್ಲೇ ಎದ್ದು ಕಾಣತೊಡಗಿದೆ. ಬುದ್ಧಿಜೀವಿಗಳೆಲ್ಲರೂ ಚಿಂತಿಸುವಂತೆ ಮಾಡಿದೆ; ಇದಕ್ಕೇನು ಪರಿಹಾರವೆಂದು ತಲೆಕೆರೆದುಕೊಳ್ಳುವಂತೆ ಮಾಡಿದೆ. ೧೯೬೭ರ ನಂತರ "ಪಕ್ಷೋತ್ಪತ್ತಿ" ಪನ್ನ ಸಹಸ್ರ ಪಾಲಿಗೆದ ಇನ್ನು ಚಾಚಿ ದೇಶದ ಪ್ರಜೆಗಳನ್ನು ಕಬಳಿಸಲಾರಂಭ ಮಾಡಿದೆ.

೧೯೬೭ರ ಸಾರ್ವತ್ರಿಕ ಚುನಾವಣೆಗಳ ನಂತರ ಕೆಲವು ರಾಜ್ಯಗಳಲ್ಲಿ ಸಂಯುಕ್ತ ರಂಗ ಸರಕಾರಗಳು ಎರ್ಪಟ್ಟವು. ಈ ರಂಗಗಳಲ್ಲಿ ಪರಸ್ಪರ ವಿರೋಧಿ ರಾಜ್ಯಕೀಯ ನೀತಿಯುಳ್ಳ ತಳಿದ ಪಕ್ಷಗಳೂ ಒಂದಾದವು. ಅಧಿಕಾರ ದಬ್ಬಾಳಿಕೆಯನ್ನು ಏರಿದವು. ಪರಿಣಾಮವಾಗಿ ಸರಕಾರಗಳೂ ಉಳಿಯಲಿಲ್ಲ. ಜನತೆಗೆ ಯೋಗ್ಯ ಸರಕಾರವೂ ಲಭ್ಯವಾಗಲಿಲ್ಲ. ವಧ್ಯ ಪ್ರದೇಶದ ಗೋವಿಂದನಾರಾಯಣ ಸಿಂಗರು ರಾಜ್ಯದ ಫಿಕ್ಸ್ ಮೂತಿಯ ವ್ಯಕ್ತಿಯಾಗಿ ಒಂದೂವರೆ ವರ್ಷ ಉಳಿದರು. ದಿನಕ್ಕೆ ನಾಲ್ಕು ಬಾರಿಯಾದರೂ ಟೋಪಿ ಬದಲಾಯಿಸುವ ಸಾಮರ್ಥ್ಯ ಹೊಂದಿದ್ದ ಇವರು ಬೇಕಾದವರಿಗೆ ಬೇಕಾದಾಗ ಮಂತ್ರಿ ಮಾಡಿ, ಮಾಜಾದೂ ಕೋರಿ ರಾಜ್ಯಕೀಯ ಜೋಡಿಗಾದರೆಂದು ಹೆಸರಾದರು. ಆದರೂ ಅವರ ಮೋದಿ ಬಳುಕಾಲ ಕಡೆಯಲಿಲ್ಲ. ಅವರ ಸರಕಾರವೆಂಬ ಹೆಸರಿನ ನಾಟಕ ಕಂಪೆನಿ ಉರಿಳಿಯೇ ಹೋಯಿತು. ಆ ಎರಡು ವರ್ಷ ಜನತೆ ತೆರಿಗೆ ತೆತ್ತಿದ್ದು ಮಾತ್ರ ಒಂದು; ಮಂತ್ರಿ ವರ್ಗಗಳಿಗೆ ಸಂಬಳ ಭತ್ತೆ ಕ್ಲಪ್ತ ಸಮಯಕ್ಕೆ ಸಂದಾಯವಾಯಿತು; ಅಡಳಿತ ಯಂತ್ರ ಡೋಲಾಯಮಾನ ನೋಡು ತ್ತ ಸರಕಾರವನ್ನ ಮಾಡಿತು.

ಕೇರಳದಲ್ಲಿ ಮಾರ್ಕ್ಸ್‌ವಾದಿಗಳು ಸಂಯುಕ್ತ ರಂಗದ ನೇತಾರರಾದರು. ರಾಜ್ಯದಲ್ಲಿ ಅರಾಜಕತೆಯನ್ನು ಹರಡುವಲ್ಲಿ ಅವರು ಸಾಕಷ್ಟು ಯತ್ನಗಳನ್ನಿಸಿದರು. ನಕ್ಸಲೀಯರ ಹಾವಳಿ, ಭೂ ಆಕ್ರಮಣಕಾರರ ಹುಡುಗು ಇನ್ನಿಲ್ಲವಾಗಲು ಬೀಜ ಬಿತ್ತಿದ್ದು ಕೇರಳದೇ. ಜನರಕ್ಷಣೆ—ಭದ್ರತೆಯಲ್ಲಂತೆ ನವೆಯುತ್ತಿತ್ತು. ಸಂಯುಕ್ತ ರಂಗದ ಅಂಗ ಪಕ್ಷಗಳ ಪರಸ್ಪರ ಹೊಡೆದಾಟದಿಂದ ಮುಖ್ಯಮಂತ್ರಿ ನೇತೃತ್ವ ಮಾರಿಯಪ ಬಲಕಮ್ಯುನಿಸ್ಟರು ಸ್ವತಂತ್ರಾರಂಭರು. ತನ್ನ ಸೂತ್ರವೂ ಮಂತ್ರಿಯಲಿದೆಯೆಂದು ತಿಳಿದ ಶ್ರೀ ಅಚ್ಯುತ ಮೆನನ್ನರು ಶಸನಸಭೆಯನ್ನೇ ವಿಸರ್ಜಿಸಿದರು.

ಉತ್ತರ ಭಾರತದ ವಿಶಾಲ ಪ್ರದೇಶದಲ್ಲಿ ಸಂಯುಕ್ತರಂಗದ ಸರಕಾರಗಳು ಒಂದಲ್ಲ ಒಂದು ಕಾರಣದಿಂದ ಪತನವಾದುದರಿಂದ ಮಧ್ಯಾವಧಿ ಚುನಾವಣೆಗಳು ನಡೆದುವು ಆದರೆ, ಇದರ ಫಲಿತಾಂಶವಾಗಿ ಯಾವ ರಾಜ್ಯಕೀಯ ಸಮಸ್ಯೆಯೂ ಕೋಲಾಹಲ ಸಾಧ್ಯವಾಗಲಿಲ್ಲ. ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ಆಡಳಿತ ಬಂತು. ಬಿಹಾರ, ಉತ್ತರ ಪ್ರದೇಶ ಮತ್ತು ಪಂಜಾಬಗಳಲ್ಲಿ ಒಬ್ಬೊಬ್ಬರು ಮುಖ್ಯಮಂತ್ರಿಗಳು ಹೊರ ಒಂದು ಈ ಎರಡೆನೆಯವರು ಅಧಿಕಾರ ಹಿಡಿದಿದ್ದಾರೆ. ಇವರಲ್ಲೂ ಪಂಜಾಬಿನ ಪ್ರತಾಪ ಸಿಂಗ್ ಬಾದಲ್ಲರ ಸುತ್ತ ಮೋಡ ಕವಿದಿದೆ. ತನಗೆ ಬಹುಮತವಿದೆಯೆಂದೂ ಅದನ್ನು ದೃಢಪಡಿಸಲು ಸಿದ್ಧವೆಂದೂ ಅವರು ಜೋಳುತ್ತಾರೆ. ಆದರೆ, ಇದು ಸಾಧ್ಯವೆಂದು ಆತಂಕಿಸುವುದಿಲ್ಲ. ಉತ್ತರ ಪ್ರದೇಶದ ಶ್ರೀ ಚಂದ್ರಭಾನು ಗುಪ್ತರಪ್ಪ ಇಳಿಸಿ ಅಧಿಕಾರಕ್ಕೇರಿದ ಚರಣಸಿಂಗರ ಚರಣವೂ ದೃಢವಾಗಿದೆಯೆಂದು ಜೋಳಲಾಗದು. ಇಂಡಿಕೇಟ್ ನಾಯಕ ಶ್ರೀ ಕವಲಾಪತಿ ತ್ರಿಪಾಠಿಯವರ ತಿಪ್ಪರಲಾಗದಿಂದ ಅಲ್ಲಿ ಚರಣಸಿಂಗರಿಗೆ ಇಂಡಿಕೇಟ್ ಬೆಂಬಲ ಲಭ್ಯವಾಯಿತ್ತು. ಭಾರತೀಯ ಕ್ರಾಂತಿದಳವು ಇಂಡಿಕೇಟನ್ನು ವಿಲೀನಗೊಳ್ಳುವ ಪ್ರಾಕಾರಗಳೂ ಬಹಿರಂಗವಾಗಿ ಕೇಳಬಂದುವು. ಯಾವುದು ಯಾವುದರಲ್ಲಿ ವಿಲೀನವಾಗಬೇಕೆಂಬುದೇ ದೊಡ್ಡ ಪ್ರಶ್ನೆ. ಸದ್ಯದಲ್ಲಿ ಅಧ್ಯಕ್ಷರಾಗಿರುವುದರಿಂದಲೇ ಚರಣಸಿಂಗರು ಮುಖ್ಯಮಂತ್ರಿಯಾಗಿರುವುದು ಸಾಧ್ಯವಾಗುತ್ತಿದೆ. ನಾಳೆ ಅವರು ಇಂಡಿಕೇಟರೆಂದಾದಾಗ ಈ ಪದವಿ ಅವರಿಗೆ ಸಿಗುವುದಿಲ್ಲ. ತ್ರಿವೇದಿಯವರು ಚರಣಸಿಂಗರನ್ನು ಮೆಟ್ಟಿಸಲ್ಲುತ್ತಾರೆ. ಇಂದಿರಾಗಾಂಧಿಯವರಿಗೆ ಸಸ್ತ ಸದ್ಯ ತ್ರಿಪಾಠಿಯ ಮೇಲಿದೆ ಚರಣಸಿಂಗರು ತನ್ನ ಪಕ್ಷದ ಕ್ರಿಯಾಶೀಲ ಪ್ರಧಾನ ಸದಸ್ಯರ ಮೇಲೆ ತಿನ್ನನ ಕ್ರಮ ಕೈಕೊಳ್ಳಲು ಆರಂಭ ಮಾಡಿದ್ದಾರೆ. ಇದರ ಕಾರಣ ಪರಿಣಾಮಗಳು ಇನ್ನೂ ಅಜ್ಞಾತ.

ಬಿಹಾರದ ಪರಿಸ್ಥಿತಿ ಇದಕ್ಕಿಂತ ಬೇರೆಯಲ್ಲ. ಇಂಡಿಕೇಟ್ ಯಾರ್ಮಾರನ್ನೋ ಪುಸಲಾಯಿಸಿ ಗದ್ದುಗೇರಿಸಿದೆ. ಇಂಡಿಕೇಟ್ ಪ್ರಭಾವವನ್ನು ಇಲ್ಲವಾಗಿಸುವುದಕ್ಕಾಗಿಯೇ ಅದರದ್ದೆಲ್ಲ ಪ್ರಯತ್ನ. ರಾಜ್ಯಕೀಯ ಅಸ್ಥಿರತೆ ದೇಶವನ್ನು ಎಲ್ಲಿಗೆ ತಂದು ಪಿಲ್ಲಿಸುವುದೆಂಬುದಕ್ಕೆ ಬಂಗಾಳವೇ ಸಾಕ್ಷಿ; ಅಲ್ಲಿ ಈ ನಾಲ್ಕು ವರ್ಷಗಳಲ್ಲಿ ಕೊಲೆ-ಸುಲಿಗೆ, ಅನ್ಯಾಯ-ಅತ್ಯಾಚಾರಗಳನ್ನು ಬಿಟ್ಟು ಏನೇನೂ ನಡೆದಿಲ್ಲ. ಏಳು ಪಕ್ಷಗಳು, ಹದಿನಾಲ್ಕು ಪಕ್ಷಗಳು, ಇಪ್ಪತ್ತೊಂದು ಪಕ್ಷಗಳು ಒಂದಾಗಿ ಸಂಯುಕ್ತರಂಗ ರಚಿಸಿಕೊಂಡುದರ ಪರಿಣಾಮು ಇದಕ್ಕಿಂತ ಬೇರೆಯಾಗುವುದಿಲ್ಲ. ಈ ಸ್ಥಿತಿಯಿಂದ ಆಡಳಿತ ಕೆಟ್ಟುಹೋಗುತ್ತದೆ; ಕಾನೂನು-ಸುವ್ಯವಸ್ಥೆ ಇಲ್ಲವಾಗುತ್ತದೆ. ಪ್ರಗತಿ ಎಂಬುದು ಪಸ್ತಕದ ಜದನೆಕಾವಿಯಾಗುತ್ತದೆ. ಅರಾಜಕತೆ ವ್ಯಾಪಕವಾಗಿ ಜನಜೀವನವೇ ಅಸ್ತವ್ಯಸ್ತವಾಗುತ್ತದೆ; ಇದು ಘೋರಕವಾಗುತ್ತದೆ. ಇದು ರಾಜ್ಯಕೀಯ ಆತ್ಮಹತ್ಯೆಗಿಂತ ಭಿನ್ನವಲ್ಲ ಇದಕ್ಕಾಗಿ ರಾಜ್ಯಕೀಯ ಪಕ್ಷಗಳು ಕಡಿವಾಣ ಹಾಕಬೇಕು. ಗುಡಿಕೈಗಾರಿಕೆಗಳನ್ನು ದೊಡ್ಡ ಕೈಗಾರಿಕೆಗಳು ನಾಶ ಪಡಿಸಿದರೆ ಅದಂದಿ ದೇಶಕ್ಕೆ ಹಾನಿಯಿದೆ. ಆದರೆ ಸಣ್ಣ ಹುಟ್ಟು ಪಕ್ಷಗಳು ಸತ್ತು ಹೋದರೆ ದೇಶಕ್ಕೆ ಲಾಭವೇ ಇದೆ.

ರಾಜ್ಯಕೀಯ ಪಕ್ಷಗಳು ತಂತಮ್ಮಲ್ಲಿ ಅಕ್ಯವಿವರ್ಕೆ ಮಾಡಿಕೊಳ್ಳಬೇಕು. ಸಮಾಜವಾದವೇ ನಮ್ಮ ದೇಶದ ಎಲ್ಲ ರಾಜ್ಯಕೀಯ ಪಕ್ಷಗಳ ಮೂಲ ಮಂತ್ರ

(ಎಂಟನೇ ಪುಟನೋಡಿ)

ನಿಮಗೆ ಗೊತ್ತೆ ?

ಸಾಮಾಜಿಕ ಭದ್ರತಾ ಠೇವಣಿ

ಯೋಜನೆಯನ್ವಯ

ಐದು ವರ್ಷದ

ಠೇವಣಿಯಲ್ಲಿರಿಸಿದ

ರೂ. 5000/-

5 ವರ್ಷಗಳ ಕಾಲ ನಿಮಗೆ ಪ್ರತಿ ತಿಂಗಳೂ 27 ರೂಪಾಯಿಗಳನ್ನು ತರುತ್ತದೆ. ನುತ್ತು ಅದೇ ಮೊತ್ತವನ್ನು 7 ವರ್ಷಗಳ ತೇವಣಿಯಿರಿಸಿದರೆ 7 ವರ್ಷ ಕಾಲ ಪ್ರತಿ ತಿಂಗಳೂ 29 ರೂಪಾಯಿ ತರುತ್ತದೆ. ಜೊತೆಗೆ ನಿಮ್ಮ 5000/- ರೂ. ಅಖಂಡವಾಗಿ ದೊರೆಯುತ್ತದೆ.

ವಿವರಗಳಿಗೆ ನಮ್ಮ 400ಕ್ಕೂ ಮಿಕ್ಕಿದ ಶಾಖೆಗಳಲ್ಲಿ ಯಾವದಾದರೊಂದರ ಸಂಪರ್ಕ ಬೆಳೆಸಿರಿ.

ಪ್ರತಿಯೊಂದು ಬ್ಯಾಂಕಿಂಗ್ ಅವಶ್ಯಕತೆಗೆ
ಪ್ರತಿಯೊಬ್ಬನ ಬ್ಯಾಂಕು.

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಛೇರಿ : ಮಣಿಪಾಲ

ಕೆ. ಕೆ. ಪೈ
ಕಸ್ಟೋಡಿಯನ್

ಗಾಂಧೀಜಿ ಮತ್ತು ಅವರ ಸಮಕಾಲೀನರು

ರವೀಂದ್ರನಾಥ ಠಾಕೂರ

ಲೇ:— ಡಾ॥ ಬಾಬಾನಿ ಭಟ್ಟಾಚಾರ್ಯ.



ಸವಾಡಗಳು ಅಪರೂಪ. ಇತ್ತೀಚಿನ ಭಾರತದ ಇತಿಹಾಸದಲ್ಲಿ ಇಂತಹ ಅದ್ಭುತ ಪವಾಡವೊಂದು ನಡೆಯಿತು. ವಿಶ್ವ ಖ್ಯಾತಿಯ ಇಬ್ಬರು ಮಹಾನಾಯಕರಾದ ಮಹಾತ್ಮ ಗಾಂಧಿ ಮತ್ತು ರವೀಂದ್ರನಾಥ ಠಾಕೂರರು ಒಂದೇ ದೇಶದಲ್ಲಿ ಒಂದೇ ಕಾಲದಲ್ಲಿ ಬಾಳಿದರು.

ರವೀಂದ್ರನಾಥ ಠಾಕೂರರು ಜನಿಸಿದ ಎಂಟು ವರ್ಷಗಳ ನಂತರ ಗಾಂಧೀಜಿ ಅವರು ಜನಿಸಿದರು. ಆಷ್ಟೇ ಅವಧಿಯ ಅಂತರದಲ್ಲಿ ಅವರಿಬ್ಬರೂ ಕಣ್ಮರೆಯಾದರು. ಇಬ್ಬರೂ ತಮ್ಮ ಜೀವನದಲ್ಲಿ ಮಹತ್ತಾದ್ಯೆಗಳಿಗೆ ಹೆಸರಾದರು. ಠಾಕೂರರು ಜನ್ಮತಃ ಮಹಾನುಭಾವರು. ಸಹಜ ಸರಿ ಶ್ರವಣದಿಂದ ಅವರು ಇನ್ನಷ್ಟು ಹೆಸರು ಗಳಿಸಿದರು. ಗಾಂಧೀಜಿ ಅವರು ಸಾಮಾನ್ಯರಂತೆ ಹುಟ್ಟಿದವರು. ಸಾಮಾನ್ಯರಾದರೂ ಅವರ ಆಧ್ಯಾತ್ಮ ಜೈತನ್ಯ ಬಲಿಷ್ಠವಾಗಿತ್ತು. ಈ ಒಂದು ಪ್ರಬಲ ಜೈತನ್ಯವೇ ಗಾಂಧೀಜಿ ಅವರ ವ್ಯಕ್ತಿತ್ವವನ್ನು ತಪ್ಪದೇ ಅದ ರೀತಿಯಲ್ಲಿ ರೂಪಿಸಿತು. ಇದಕ್ಕಾಗಿ ಕಠಿಣತಮ ಹೋರಾಟ ಅಗತ್ಯವಿತ್ತು. ಈ ಹೋರಾಟವೇ ಗಾಂಧೀಜಿ ಅವರಿಗೆ ಮಹಾ ವಿಜಯವನ್ನು ತಂದು ಕೊಟ್ಟಿತು. ಈ ವಿಜಯದಿಂದ ಗಾಂಧೀಜಿ ಅವರ ವ್ಯಕ್ತಿತ್ವ ಮೂಸವನ ಆತ್ಮಶುದ್ಧಿಯು ಇತಿಹಾಸದಲ್ಲೇ ಒಂದು ಅದ್ಭುತ ದೃಷ್ಟಾಂತವಾಗಿ ಪರಿಣಮಿಸಿತು.

ಪ್ರಸ್ತುತ ಶತಕದ ಮೊದಲ ದಶಕದಲ್ಲಿ ರವೀಂದ್ರರು ತಮ್ಮ ಅತ್ಯಂತ ಮನೋಜ್ಞವಾದ ಕವನಗಳನ್ನು ರಚಿಸಿದರು. ಈ ಕವನಗಳ ರಚನೆಯಿಂದಾಗಿ 1913 ರಲ್ಲಿ ಅವರು 'ನೊಬೆಲ್' ಪಾರಿತೋಷಕವನ್ನು ಪಡೆದರು. ಆದೇ ದಶಕದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಮಹಾತ್ಮ ಗಾಂಧಿಯವರು ತಮ್ಮ ಜೊತೆ ಜೀವನ ಧರ್ಮವನ್ನು ರೂಪಿಸಿಕೊಳ್ಳುತ್ತಿದ್ದರು. ಮಂಬೆಲಿ ಜೀವನ ಧರ್ಮವೇ ಹೋರಾಟದ ಹೊಸದೊಂದು ಕ್ರಾಂತಿಕಾರಿ ನಿಧಾನವೊಂದಕ್ಕೆ ನಾಂದಿಯಾಯಿತು. ರವೀಂದ್ರರು ಗೀತಾಂಜಲಿಯನ್ನು ರಚಿಸಿದಾಗ ಗಾಂಧೀಜಿ ಅವರ ಸತ್ಯಾಗ್ರಹ ರೂಪು ಗೊಂಡಿತು. ಕೆಲವು ಜನರು ಹೊಸಬಗೆಯ ಪ್ರತಿಭಟನಾ ಚಳುವಳಿಯನ್ನು ಕೈಗೊಳ್ಳಲು ದೃಢವಾಗಿ ನಿಶ್ಚಯ ಮಾಡಿದರು. ಇದರಿಂದಾಗಿ ಅವರಲ್ಲಿ ಭಯ ಮಾಯವಾಯಿತು. ಸತ್ಯಾಗ್ರಹ ಕ್ರಮದಲ್ಲಿ ಎದುರಾಳಿಗಳಿಗೆ ಹಿಂಸೆಯೂಗ ಬಾರದು. ಶತ್ರುಗಳ ಒಂದು ಹಫಿರಕ್ತವೂ ಸಹ ಹರಿಯಬಾರದು. ಆದರೆ ಸತ್ಯಾಗ್ರಹಿಯೇ ಎಲ್ಲಾ ಬಗೆಯ ನೋವನ್ನು ಅನುಭವಿಸಬೇಕು. ಸತ್ಯಾಗ್ರಹಿಯ ರಕ್ಷಣೆ ಹಿರಿಯ ಬೇಕು, ಎಂಬುದು ಅಹಿಂಸಾತ್ಮಕವಾದ ಹೋರಾಟದ ತಿರುಳು.

ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ ಫಲವಾಗಿಯೂ ಕ್ರಾಂತಿಕಾರಕವಾಗಿತ್ತು. ಆದರೆ 'ಸತ್ಯಾಗ್ರಹ'ದ ಪರಿಣಾಮ ಮತ್ತು ಮಹತ್ವ ಜಗತ್ತಿಗೆ ತಿಳಿಯಲು ಕೆಲವು ವರ್ಷಗಳೇ ಬೇಕಾಯಿತು. ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ ಚಳುವಳಿ ಹೆಚ್ಚು ಫಲ ಪ್ರದವಾಯಿತು. ದಕ್ಷಿಣ ಆಫ್ರಿಕಾದಿಂದ ಗಾಂಧೀಜಿ ಅವರು ಇಪ್ಪತ್ತು ವರ್ಷಗಳ ನಂತರ ಹಿಂತಿರುಗಿದ ನಂತರ ಈ ಪ್ರಯೋಗ ಒಂದು ಬಲಿಷ್ಠ ಶಕ್ತಿಯಾಗಿ ಪರಿಣಮಿಸಿತ.

ಅಪೂರ್ವ ಮಿಲನ

ಗಾಂಧೀಜಿ ಅವರು ದಕ್ಷಿಣ ಆಫ್ರಿಕಾದಿಂದ 1915ರಲ್ಲಿ ಭಾರತಕ್ಕೆ ತಮ್ಮ ಕೆಲಸ ಆಪ್ತಯಾಯಿಗಳೊಡನೆ ಹಿಂದಿರುಗಿ ಬಂದರು. ಗಾಂಧೀಜಿ ಬಂದ ಆ ಸಮಯದಲ್ಲಿ ಅವರೂ ಮತ್ತು ಅವರ ಆಪ್ತೆಯಾಯಿಗಳೂ ಶಾಂತಿನಿಕೇತನದಲ್ಲಿ ಇರುವಂತೆ ರವೀಂದ್ರರು ಆಹ್ವಾನಿಸಿದರು. ಆಗ ಗಾಂಧೀಜಿಯವರು ಶಾಂತಿನಿಕೇತನಕ್ಕೆ ಹೋದಾಗ ಮೊತ್ತಮೊದಲಿಗೆ ಅವರಿಬ್ಬರ ಪರಸ್ಪರ ಭೇಟಿಯಾಯಿತ. ದಕ್ಷಿಣ ಆಫ್ರಿಕಾದಲ್ಲಿ ನಡೆಯುತ್ತಿದ್ದ ಸತ್ಯಾಗ್ರಹ ಚಳುವಳಿಯನ್ನು ರವೀಂದ್ರರು ಸೂಕ್ಷ್ಮವಾಗಿ ಗಮನಿಸಿದ್ದರು. ಗಾಂಧೀಜಿ ಅವರಿಗೆ ಬರೆದ ಪತ್ರವೊಂದರಲ್ಲಿ ಸತ್ಯಾಗ್ರಹದ ಬಗ್ಗೆ ಪ್ರಸ್ತಾಪಿಸುತ್ತಾ "ಸತ್ಯಾಗ್ರಹ ಸ್ವಪರಿತ್ಯಾಗದ ಮೂಲಕ ಮೂಸವನ ಶ್ರೇಷ್ಠತೆಯನ್ನು ಸಾರುವ ಮಾರ್ಗವಾಗಿದೆ" ಎಂಬುದಾಗಿ ಅಭಿಪ್ರಾಯಪಟ್ಟರು.

ಇಬ್ಬರು ಮಹಾವ್ಯಕ್ತಿಗಳ ಮೊದಲ ಭೇಟಿ ಸಾಂಸ್ಕೃತಿಕ ಇತಿಹಾಸದಲ್ಲೇ ಒಂದು ಚಿರಸ್ಮರಣೀಯ ಘಟನೆಯೂಗಿದೆ. 1917ರಲ್ಲಿ ಕಲ್ಕತ್ತಾದಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನದಲ್ಲಿ ಅವರಿಬ್ಬರು ಎರಡನೇ ಬಾರಿಗೆ ಭೇಟಿಯಾದರು. ಕಾಂಗ್ರೆಸ್ ಅಧಿವೇಶನದ ಮೊದಲ ದಿನ ರವೀಂದ್ರನಾಥ ಠಾಕೂರರು ತಮ್ಮ ಸ್ವರಚಿತ "ಭಾರತದ ಪ್ರಾರ್ಥನೆ" ಎಂಬ ಪದ್ಯವೊಂದನ್ನು ಹಾಡಿದರು. ಇದಾದ ಒಂದು ವರ್ಷದ ನಂತರ ಗಾಂಧೀಜಿಯವರು ಸಿ.ಎಫ್. ಆಂಡ್ರೂಸ್ ಅವರಿಗೆ ಪತ್ರವೊಂದನ್ನು ಬರೆದರು. ನೀವು ಹಾಗೂ ಗುರುದೇವ್ ಅವರು ಜೀವನದಲ್ಲಿ ಅಶ್ಯಕ್ತವು ಕೆಲಸಗಳನ್ನು ಮಾಡುತ್ತಿದ್ದೀರಿ. ನೀವು ನೈಜ ಪದ್ಯಗಳನ್ನೇ ರಚಿಸುತ್ತಿದ್ದೀರಿ; ಅವು ಜೀವಂತ ಪದ್ಯಗಳು" ಎಂಬುದಾಗಿ ಪ್ರಶಂಸಿಸಿದರು.

ಕೋಮು ವಾರು ಸಮಸ್ಯೆ ತೀವ್ರಪ್ತಿ ವಿರೋಧಿಸಿ 1932ರ ಸುಮಾರಿನಲ್ಲಿ ಮಹಾತ್ಮ ಗಾಂಧಿಯವರು ಯರವಾಡಾ ಜೈಲಿನಲ್ಲಿ ಆಮರಣ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಬೇಕೆಂದು ನಿರ್ಧರಿಸಿದರು. ತಮ್ಮ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸುವ ಮುಂಚೆ ರವೀಂದ್ರರ ಆಶೀರ್ವಾದವನ್ನು ಬಯಸಿ ಅವರಿಗೆ ಪತ್ರವೊಂದನ್ನು ಬರೆದರು. 'ನಿಮ್ಮ ಆಶೀರ್ವಾದವೇ ನನಗೆ ರಕ್ಷೆ' ಎಂಬುದಾಗಿ ಆದರಲ್ಲಿ ಬರೆದರು. ಗಾಂಧೀಜಿಯವರ ಈ ಪತ್ರ ರವೀಂದ್ರರಿಗೆ ಹಲವು ಮುನ್ನವೇ ರವೀಂದ್ರರಿಂದ ಗಾಂಧೀಜಿ ಅವರಿಗೆ ತಂತಿ ಸಂದೇಶವೊಂದು ಬಂದಿತು. "ಭಾರತದ ಐಕ್ಯಮತ್ಯ ಮತ್ತು ಸಮಗ್ರತೆಗಾಗಿ ನಿಮ್ಮ ಜೀವವನ್ನು ತ್ಯಾಗ ಮಾಡುತ್ತಿರುವುದು ಸರ್ವತಾಯೋಗ್ಯ" ಎಂಬ ದಾಗಿ ತಂತಿ ಸಂದೇಶದಲ್ಲಿ ರವೀಂದ್ರರು ತಿಳಿಸಿದ್ದರು. ಇದಾದ ಕೆಲವು ದಿನಗಳ ನಂತರ ಗಾಂಧೀಜಿ ಅವರ ಜಳಿಯಲ್ಲೇ ಇರಲು ರವೀಂದ್ರರು ಪೂನಾಕ್ಕೆ ತೆರಳಿದರು ಅಲ್ಲಿ ಗಾಂಧೀಜಿ ಅವರಿಗಾಗಿ ಒಂದು ಪದ್ಯವನ್ನು ಹಾಡಿದರು. ಈ ಒಂದು ಘಟನೆ ಇಬ್ಬರು ಸಾಯಿಗಳನ್ನೂ ಭಾವನಾತ್ಮಕವಾಗಿ ತೀರ ಹತ್ತಿರಕ್ಕೆ ತಂದಿತು.

ವಿಶ್ವ ನೈತ್ರಿಯ ವಿಶ್ವಭಾರತಿ

ವಿಶ್ವ ಭಾರತಿ ಅನೇಕ ಸಂದರ್ಭಗಳಲ್ಲಿ ಹಣಕಾಸಿನ ಮುಗ್ಗಟ್ಟನ್ನು ಅನುಭವಿಸಿತು. ಇದಕ್ಕಾಗಿ ಪೂಡಾತ್ಮಾ ಗಾಂಧಿಯರು ಅನೇಕ ಸಂದರ್ಭಗಳಲ್ಲಿ ಚಂದಾಹಣವನ್ನು ಎತ್ತಿದರು. ಠಾಕೂರರು ಕಣ್ಮರೆಯಾದ ನಂತರ ಗಾಂಧೀಜಿ ಅವರ ಶಾಂತಿನಿಕೇತನಕ್ಕೆ ಕೊನೆಯ ಭೇಟಿಯನ್ನು ನೀಡಿದರು. ಇಡೀ ವಿಶ್ವದಲ್ಲೇ ಗುರುದೇವ ಅವರು ಭಾರತದ ರಸರನ್ನು ಅಜರಾಮರಗೊಳಿಸಿದ್ದಾರೆ. ಅವರ ಆಸರೆಯನ್ನು ನಾವು ಕಳೆದು ಕೊಂಡೆವು. ಅವರಾಗಿ ಅವ್ಯಕ್ತಶಕ್ತಿಯ ಅಥವಾ ಇತರ ಶಕ್ತಿಗಳ ಪ್ರತಿಮೆಗಳ ಸ್ಮಾರಕಗಳನ್ನು ನಿರ್ಮಿಸಿದರೆ ಅದು ಪ್ರಯೋಜನವಾಗದು. ಅವರ ಧ್ಯೇಯಗಳನ್ನು ಸಾಧಿಸಬೇಕು. ಅದೇ ನಿಜವಾದ ಸ್ಮಾರಕ ಎಂಬುದಾಗಿ ಆಶ್ರಮದಲ್ಲಿದ್ದವರಿಗೆ ಗಾಂಧಿಯವರು ಹೇಳಿದರು.

ದೃಷ್ಟಿಕೋನದಲ್ಲಿನ ವ್ಯತ್ಯಾಸ

ಇಷ್ಟಾದರೂ ಅವರ ವಿಚಾರ ಹಾಗೂ ದೃಷ್ಟಿಕೋನ ಇವುಗಳಲ್ಲಿ ಸಾಕಷ್ಟು ವ್ಯತ್ಯಾಸಗಳು ಕಂಡ ಬರುತಿದ್ದವು. "ಎರಾಸ್ಮಸ್ ಮತ್ತು ಲ್ಯೂಥರ ಅವರಿಬ್ಬರಲ್ಲಿ ಕಂಡು ಬರುವಷ್ಟು ವ್ಯತ್ಯಾಸವೇ ಇವರಿಬ್ಬರಲ್ಲಿ ಇತ್ತು. ವಿಶ್ವದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಸೃಷ್ಟಿಸುವುದರಲ್ಲಿ ಅವರಿಬ್ಬರೂ ತಮ್ಮದೇ ಆದ ರೀತಿಯಲ್ಲಿ

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
114 ಶಾಖೆಗಳಿಂದ ಹಬ್ಬರುವ "ವಿಜಯಾ ಬ್ಯಾಂಕ್"ನ್ನು
ಸಂಪರ್ಕ ಬೆಳೆಸಿರಿ.
ಶೇವಡಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.
ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.
ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಸಿ. ಬಿ. ಫಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1

ರಾಜ್ಯಕೀಯ ಹಾಸ್ಯನಾಟಕ

ಶ್ರಮಿಸುತ್ತಿದ್ದಾರೆ" ಎಂಬುದಾಗಿ ಅವರು ಬ್ರಿಟಿಷರ ನಡುವೆ ಇದ್ದ ವ್ಯತ್ಯಾಸಗಳ ಬಗ್ಗೆ ವಿಮರ್ಶಿಸಿ ತಾ. ಅವೇಶಿತವಾದ ಸುಕ್ತಿ ಸಿದ್ದ ಜಾರ್ ಹೇಸ್ಟ್ಸ್ ಹೋಲ್ಟ್ಸ್ ಅವರು ಹೇಳಿದ್ದಾರೆ.

1919ರಲ್ಲಿ ಜಲಿಯನ್‌ವಾಲಾಬಾಗ್‌ನಲ್ಲಿ ನಡೆದ ಘೋರಕೃತ್ಯಗಳ ವಿರುದ್ಧ ಇಬ್ಬರೂ ತಮ್ಮ ಸ್ವಾತಿಶಯಗಳನ್ನು ಸ್ಮಕ್ತಪಡಿಸಿದರು. ಈ ಸಂದರ್ಭದಲ್ಲಿ ರವೀಂದ್ರರು ತಮ್ಮ ನೈಟ್‌ಹುಡ್ ಪದವಿಯನ್ನು ತ್ಯಾಗಮಾಡಿ ವೈಸ್ರಾಯರಿಗೆ ಕಾಗದವೊಂದನ್ನು ಬರೆದು "ಜಾಲಿಯನ್‌ವಾಲಾ ಹತ್ಯಾಕಾಂಡ ಸಸ್ಯ ಸಭ್ಯತ ಸರಕಾರಗಳ ಇತಿಹಾಸದಲ್ಲೇ ಅತ್ಯಂತ ಹೇಯವಾದ ದುರಂತವಾಗಿದೆ" ಎಂದು ತಿಳಿಸಿದರು. ವೈಸ್ರಾಯರಿಗೆ ಪತ್ರ ಬರೆಯುವ ಮುನ್ನ ಗಾಂಧೀಜಿ ಅವರ ಬಗ್ಗೆ ತಳೆದಿದ್ದ ವಿಶ್ವಾಸವನ್ನು ವ್ಯಕ್ತಪಡಿಸಿ ಅವರಿಗೂ ಪತ್ರವನ್ನು ಬರೆದರು. "ಬುದ್ಧನು ತನ್ನ ಕಾಲದಲ್ಲಿ ತಿಳಿಸಿದಂತೆ ಕೋಪವನ್ನು ಸಹನೆಯಿಂದಲೂ, ಕೇಡನ್ನು ಒಳಿತಿನಿಂದಲೂ ಜಯಿಸಬೇಕು. ಎಂಬುದಾಗಿ ಬೋಧಿಸಿದ್ದೀರಿ, ಎಲ್ಲಾ ಬೆಂಬಲವಿಲ್ಲದ ನೈತಿಕ ಮಟ್ಟ ಶಕ್ತಿಯು ವಿರುದ್ಧ ಎದೆಸೆಟ್ಟುವುದೇ ಸ್ವಯಂ ವಿಜಯಕ್ಕೆ ಸಮಾನ. ತ್ಯಾಗ ಮನೋಭಾವ ಎಂದೂ ಧರ್ಮಾಧಿಕತೆಗೆ ಇಳಿಯಬಾರದಿರಲಿ ಎಂದು ನನ್ನ ಪ್ರಾರ್ಥನೆ" ಎಂಬುದಾಗಿ ಗಾಂಧೀಜಿಯವರಿಗೆ ಬರೆದ ಪತ್ರದಲ್ಲಿ ತಿಳಿಸಿದರು.

ಯಾವ ವಿಷಯಕ್ಕಾಗಿ ತಾ ಕೂರರು ಹೆದರಿದ್ದರೋ ಅದು ನಿಜವಾಯಿತು. ಭಾರತದಲ್ಲಿ ಮೊದಲನೇ ಸತ್ಯಾಗ್ರಹ ಚಳುವಳಿ ಆರಂಭವಾಯಿತು. ಈ ಸಂದರ್ಭದಲ್ಲಿ ತಾಳ್ಮೆಯಿಂದ ಯೂರೋಪ್ ಮತ್ತು ಅಮೆರಿಕಾಗಳಲ್ಲಿ ಹದಿನಾಲ್ಕು ತಿಂಗಳ ಪ್ರವಾಸವನ್ನು ಕೈಗೊಂಡಿದ್ದರು. ವಿಶ್ವಭಾರತಿಯನ್ನು ಜಗತ್ತಿನ ವಿಶ್ವವಿದ್ಯಾಲಯವನ್ನಾಗಿ ಫಲಿಸಲು ವಿದೇಶಗಳಿಂದ ಅತ್ಯವಶ್ಯಕವಾದ ಸಹಕಾರ ಗಳಿಸುವುದೇ ಈ ಪ್ರವಾಸದ ಮುಖ್ಯೋದ್ದೇಶವಾಗಿತ್ತು. ಮೊದಲ ಬಾರಿಗೆ ಸತ್ಯಾಗ್ರಹದ ಪ್ರಗತಿಯನ್ನು ತಿಳಿದು ರವೀಂದ್ರರು ಹರ್ಷಗೊಂಡರು. 1921ರಲ್ಲಿ ಬರೆದ ಪತ್ರದಲ್ಲಿ "ಆಶ್ಚರ್ಯ ಸಂಗತಿ. ಇದೇ ನಿಜವಾದ ಸ್ವಾತಂತ್ರ್ಯ. ಪಾಶವೀಕತ್ತಿಗಿಂತಲೂ ನೈತಿಕಬಲ ಹೆಚ್ಚು ಬಲಿಷ್ಠವಾದ್ದು ಎಂಬುದು ಇದರಿಂದ ಸಿದ್ಧವಾಯಿತು. ಕೃಶಕಾಯರೂ ಐಹಿಕ ಸಖನನ್ನು ತ್ಯಜಿಸಿದವರೂ ಆದ ಗಾಂಧೀಜಿಯವರು ಸಾಧುಸ್ವಭಾವದವರಲ್ಲಿ ಸುಪ್ತವಾಗಿದ್ದ ಶಕ್ತಿಯನ್ನು ಜಾಗೃತಗೊಳಿಸಿದ್ದು ಸತ್ಯವಾಗಿದೆ" ಎಂಬುದಾಗಿ ಸತ್ಯಾಗ್ರಹವನ್ನು ವಿವರಿಸಿ ಗಾಂಧೀಜಿಯವರನ್ನು ಪ್ರಶಂಸಿಸಿದರು. ಭಾರತದಲ್ಲಿ ಜನತಾ ಚಳುವಳಿ ಹೊಸ ತಿರುವು ತೆಗೆದುಕೊಂಡದ್ದನ್ನು ಗಮನಿಸಿದ ಅವರಿಗೆ ದಿಗ್ಭ್ರಮೆಯಾಯಿತು. ಪಾಶ್ಚಿಮಾತ್ಯ ಶಿಕ್ಷಣ ನಾಗರೀಕತೆಗಳ ಬಗ್ಗೆ ಭಾರತದಲ್ಲಿ ತಿರಸ್ಕಾರ ಮನೋಭಾವ ಪ್ರಬಲವಾಗುತ್ತಿದ್ದಂತೆ, ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳ ಸಾಂಸ್ಕೃತಿಕ ಬಾಂಧವ್ಯ ಬೆಳವಣಿಗೆ ಕುಂಠಿತವಾಗುತ್ತದೆ ಎಂಬ ಆರೋಪ. ಅದಕ್ಕಾಗಿ ಜಾತೀಯ ಸಂಘಟನೆಗಳಿಗೆ ಬಹಿಷ್ಕಾರ ಹೇರುವ ದುರಾಲೋಚನೆ.

ಸಂಘಟನೆ ಒಂದು ನೀತಿಯ ಮೇಲೆ ನಡೆಯುತ್ತದೆ. ಹಿಂದೂ-ಮುಸ್ಲಿಂ-ಕ್ರೈಸ್ತ ....ಎಲ್ಲ ಮತಗಳೂ ಒಂದೊಂದು ನೀತಿ-ತಿನ್ನು-ಆಚಾರ ಸಂಹಿತೆಯ ಆಧಾರದ ಮೇಲೆ ತಲೆಯೆತ್ತಿ ನಿಂತ ಸಂಘಟನೆಗಳು.

ಕಾಂಗ್ರೆಸ್ಸು, ಸ್ವತಂತ್ರ, ಕಮ್ಯೂನಿಸ್ಟ್ ಮೊದಲಾದುವೂ ಕೆಲವೊಂದು ನೀತಿ-ತಿನ್ನು-ಆಚಾರ ಸಂಹಿತೆಯ ಮೇಲೆ ಕಟ್ಟಿದ ಸಂಘಟನೆಗಳು.

ಈ ಸಂಹಿತೆಯನ್ನು ವಿರಿದಾಗಿ ಬಹಿಷ್ಕಾರ ಹೇರುವುದು ಇದ್ದದ್ದೇ.

ರಾಜ್ಯಕೀಯ ಅಂಧಾದಂಧಿಯಲ್ಲಿ ಎಲ್ಲವನ್ನೂ ಮರೆತ ನಾವು ಹಿಂದಿನ ಕಾಲದಿಂದಲೂ ನಡೆದು ಬಂದ ಸಂಘಟನೆಗಳನ್ನು ಮೆಚ್ಚುವುದಿಲ್ಲ. ರಾಜ್ಯಕೀಯ ಪಕ್ಷಗಳಲ್ಲಿ ಅಲ್ಪಸಂಖ್ಯಾಕರನ್ನು ಎಂದೂ ಎತ್ತಿ ಹಿಡಿಯುವುದಿಲ್ಲ.

ಧಾರ್ಮಿಕ ಸ್ವಾತಂತ್ರ್ಯ ನಮಗಿದೆ. ಎಲ್ಲರೂ ಸಮ ಹಕ್ಕುಗಳಿಗೆ ಒಗ್ಗುವ ರಾಜ್ಯಕೀಯ ನೀತಿಯನ್ನು ಮನ್ನಿಸುವಂತೆ, ಧಾರ್ಮಿಕ ನೀತಿಗಳನ್ನೂ ಅನುಷ್ಠಾನಕ್ಕೆ ತರಲಿ, ಆಕ್ಷೇಪವೇಕೆ? ಹಿಂದುವಿರಲಿ, ಮುಸ್ಲಿಮರಿರಲಿ, ತಂತಮ್ಮ ಮತಾಚರಣೆಯುಂತೆ ನೆಮ್ಮದಿಯಿಂದ ಇರಬಾರದೇಕೆ?

ಪ್ರಜಾಪ್ರಭುತ್ವದಲ್ಲಿ ಬಹುಮತಕ್ಕೆ ಮನ್ನಣೆ, ಬಹುಸಂಖ್ಯಾರನ್ನೇ ಅಲ್ಪಸಂಖ್ಯಾಕರು ಅನುಕರಿಸಬೇಕೆಂಬುದು ಮೂರ್ಖ ಆಮಿಷಿಕ.

ಕಾಂಬೋಡಿಯೂದ ಪದಚ್ಯುತ ದೊರೆ ಸಿಂಹನೊರೊಡಿಗೆ ಮರಣದಂಡನೆ.ಅವರ ಮೇಲೆ ಹೇರಿ ಸಿದ್ಧವಾದ ಆರೋಪ ಪೀಠಿದ್ರೀಹಾದಿ.

ದಂಡನೆ ವಿಧಿಸಿದ್ದು ಸೇನೆಯ ನ್ಯಾಯ ಮಂಡಲಿ. ಸೇನೆಯಿರುವುದು ನಾಲ್ ಲೋಲರ ಕೈಯಲ್ಲಿ.ನಾಲ್‌ಲೋಲ್ ಸದ್ಯದಲ್ಲಿ ಕಾಂಬೋಡಿಯೂದ ಸರ್ವಾಧಿಕಾರಿ.

ಕೆಂಪು ಚೀನಾದಲ್ಲಿ ಸುಖಿದಿಂದ ದಿನ ದೂಡುತ್ತಿರುವ ಸಿಂಹನೊಕರು ಸದ್ಯ ಮೃತ್ಯುವನ್ನಪ್ಪುವುದು ಅಸಾಧ್ಯ. ಕೆಂಪು ಚೀನಾದ ರಕ್ಷಣೆ ವ್ಯವಸ್ಥೆಯನ್ನು ಯಾವ ಪಾಗಲೀ ಅವನ ದೂತರಾಗಲೀ ಭೇದಿಸಲು ಅಸಮರ್ಥರು.

ಒಂದು ದಿನ ಸಿಂಕ್ಕೂಕರು ಬಲಶಾಲಿಗಳಾಗಿ ಕಾಂಬೋಡಿಯೂವನ್ನು ಹಿಡಿದೂ ಕೊಂಡಾರೆ?

ಕಾಲ್‌ಲೋಲರ ಬಂಧನ. ಅವರ ಮೇಲೆ ದೇಶದ್ರೋಹಕ್ಕೆಂತಲೂ ಮಿಗಿಲಾದ ಆರೋಪ, ಅದರ ರುಜುವಾತು, ಒಂದೊಂದು ಅಕ್ಷರಕ್ಕೂ ಬೇರೆ ಬೇರೆ ಮೃತ್ಯು ದಂಡನೆ.

ಇದು ರಾಜ್ಯಕೀಯ ಹಾಸ್ಯ ನಾಟಕ ವೇಷಸಾಕುನು. ಅದರೆ, ಇಂತಹ ನಾಟಕ ಹಿಂದೆಯೂ ನಡೆದಿದೆ; ಇಂದೂ ನಡೆಯುತ್ತಿದೆ. ಹಿಂದೆ ಸರ್ವಾಧಿಕಾರಿಯು ಸ್ವೈರವೃತ್ತಿಯ ಹೆರಲ್ಲಿ; ಇಂದು ಸಾರ್ವಜನಿಕರ 'ನ್ಯಾಯ ಮಂಡಲಿಯ' ಕೆಸರಿನಲ್ಲಿ.

o c o

ಪೊನ್ನೆ ಮೊನ್ನೆಯವರೆಗೂ ಗೃಹ ಮಂತ್ರಿಯಾಗಿದ್ದ ಶ್ರೀ ಯಶವಂತ ರಾವ್ ಬಲವಂತ ರಾವ್ ಚವನರು ಈಗ ಅರ್ಥ ಮಂತ್ರಿಗಳಾದರು.

ಇದರಿಂದಲೇ ಅವರ ಧ್ವನಿ ಬದಲಾಯಿತು.

ಕೋಮುವಾರು ಗಲಭೆಗಳಿಗೆ ಬಳಸುವ ಸಾಮಾನ್ಯಕರನ್ನೇ ಬೆಂಬಿಟ್ಟು ಮೂಡುವುದು ಗೃಹ ಮಂತ್ರಿಗಳ ಜಾಯಮಾನ.

ಶ್ರೀ ಚವನರು ಈಗ ಇಂತಹ ಗಲಭೆಗಳಿಗೆ ಎಡೆಗೂ ಕೋಮು ನವರು ಕಾರಣರೆಂದು ಹೇಳುತ್ತಾರೆ.

ಎರಡೂ ಕೈ ಒಂದಕ್ಕೊಂದು ತಾಗದೆ ಸದ್ದು ಏಳುವುದಿಲ್ಲವೆಂಬ ಸತ್ಯ ಮನವರಿಕೆ ಯಾಗಲು ಅವರು ರೂಪಯಿಗೆ ಕೈ ಕೊಡಬೇಕಾಯಿತು.

ಬಹುಸಂಖ್ಯಾಕರು ಎಂಬ ಭೇದ ಕಲ್ಪನೆ ಅನವಶ್ಯ. ಜಾತ್ಯತೀತ ನೀತಿಯನ್ನು ಒಪ್ಪಿಕೊಂಡ ನಾವು ಈ ರೀತಿ ಜಾತಿ ವ್ಯವಸ್ಥೆಯನ್ನು ಪುರಸ್ಕರಿಸುವುದು ಸಾಧುವಲ್ಲ

ರಾಜ್ಯಕೀಯ ಭಿನ್ನ ನೀತಿಗಳ ತಳಹದಿಯಲ್ಲಿ ಹೋರಾಟ ನಡೆಯುವುದು ಈ ಕಾಲದಲ್ಲಿ ಸಹಜವೇ; ಆದರೆ, ಆತಣಿಸಿಯ ವಿಧಿನಿಷೇಧಗಳ ಹೊಡೆದಾಟ ಬಡಿದಾಟ ಅಸಹನೀಯ.

ಪರಮತ ಸಹಿಷ್ಣುತೆಯನ್ನು ರಾಜ್ಯಕೀಯ ಪಕ್ಷಗಳೂ ಒಪ್ಪಿಕೊಂಡು ಎಲ್ಲರಿಗೂ ಮಾರ್ಗದರ್ಶನ ಮಾಡಬಾರದೇಕೆ?

o o o

ಭಾರತೀಯ ಜನಸಂಘ ಸತ್ಯ ರಾಷ್ಟ್ರೀಯ ಸ್ವಯಂಸೇವಕ ಸಂಘಗಳ ಮೇಲೆ ಪ್ರಧಾನಿಯು ಬಿರುಗಣ್ಣು. ಜಾತೀಯ ಸೌಹಾರ್ದವನ್ನು ಇವು ಕೆಣಕುತ್ತವೆ ಎಂಬುದಾಗಿ ಅವರ ಅಭಿಪ್ರಾಯ.

ಜಾತೀಯ ಸಂಘಟನೆಗಳು ಜಾತೀಯ ಸಂಹಿತೆಯ ಆಧಾರದ ಮೇಲೆ ಸಂಘಟನೆಗೊಂಡಿರುವುದು ಸತ್ಯ. ಆದರೆ ಅವುಗಳ ಉದ್ದೇಶ ಜಾತೀಯ ಸಂಹಿತೆಯ ಪ್ರಚಾರವಲ್ಲ. ಜಾತೀಯ ಸಂಹಿತೆಯ ಆಧಾರದ ಮೇಲೆ ಸಮಾಜದ ಸರ್ವತೋಮುಖ ಅಭಿವೃದ್ಧಿ ಅವುಗಳ ಗುರಿ.

ಜಾತೀಯ ಸಂಹಿತೆಯ ಆಧಾರದ ಮೇಲೆ ಸಮಾಜದ ಸರ್ವತೋಮುಖ ಅಭಿವೃದ್ಧಿ ಸಾಧ್ಯವಿಲ್ಲವೆಂಬ ಸತ್ಯ ಮನವರಿಕೆಯಾಗಲು ಅವರು ರೂಪಯಿಗೆ ಕೈ ಕೊಡಬೇಕಾಯಿತು.

ಬಹುಸಂಖ್ಯಾಕರು ಎಂಬ ಭೇದ ಕಲ್ಪನೆ ಅನವಶ್ಯ. ಜಾತ್ಯತೀತ ನೀತಿಯನ್ನು ಒಪ್ಪಿಕೊಂಡ ನಾವು ಈ ರೀತಿ ಜಾತಿ ವ್ಯವಸ್ಥೆಯನ್ನು ಪುರಸ್ಕರಿಸುವುದು ಸಾಧುವಲ್ಲ

ರಾಜ್ಯಕೀಯ ಭಿನ್ನ ನೀತಿಗಳ ತಳಹದಿಯಲ್ಲಿ ಹೋರಾಟ ನಡೆಯುವುದು ಈ ಕಾಲದಲ್ಲಿ ಸಹಜವೇ; ಆದರೆ, ಆತಣಿಸಿಯ ವಿಧಿನಿಷೇಧಗಳ ಹೊಡೆದಾಟ ಬಡಿದಾಟ ಅಸಹನೀಯ.

ಪರಮತ ಸಹಿಷ್ಣುತೆಯನ್ನು ರಾಜ್ಯಕೀಯ ಪಕ್ಷಗಳೂ ಒಪ್ಪಿಕೊಂಡು ಎಲ್ಲರಿಗೂ ಮಾರ್ಗದರ್ಶನ ಮಾಡಬಾರದೇಕೆ?

o o o

ಭಾರತೀಯ ಜನಸಂಘ ಸತ್ಯ ರಾಷ್ಟ್ರೀಯ ಸ್ವಯಂಸೇವಕ ಸಂಘಗಳ ಮೇಲೆ ಪ್ರಧಾನಿಯು ಬಿರುಗಣ್ಣು. ಜಾತೀಯ ಸೌಹಾರ್ದವನ್ನು ಇವು ಕೆಣಕುತ್ತವೆ ಎಂಬ ಆರೋಪ. ಅದಕ್ಕಾಗಿ ಜಾತೀಯ ಸಂಘಟನೆಗಳಿಗೆ ಬಹಿಷ್ಕಾರ ಹೇರುವ ದುರಾಲೋಚನೆ.

ಸಂಘಟನೆ ಒಂದು ನೀತಿಯ ಮೇಲೆ ನಡೆಯುತ್ತದೆ. ಹಿಂದೂ-ಮುಸ್ಲಿಂ-ಕ್ರೈಸ್ತ ....ಎಲ್ಲ ಮತಗಳೂ ಒಂದೊಂದು ನೀತಿ-ತಿನ್ನು-ಆಚಾರ ಸಂಹಿತೆಯ ಆಧಾರದ ಮೇಲೆ ತಲೆಯೆತ್ತಿ ನಿಂತ ಸಂಘಟನೆಗಳು.

ಕಾಂಗ್ರೆಸ್ಸು, ಸ್ವತಂತ್ರ, ಕಮ್ಯೂನಿಸ್ಟ್ ಮೊದಲಾದುವೂ ಕೆಲವೊಂದು ನೀತಿ-ತಿನ್ನು-ಆಚಾರ ಸಂಹಿತೆಯ ಮೇಲೆ ಕಟ್ಟಿದ ಸಂಘಟನೆಗಳು.

ಈ ಸಂಹಿತೆಯನ್ನು ವಿರಿದಾಗಿ ಬಹಿಷ್ಕಾರ ಹೇರುವುದು ಇದ್ದದ್ದೇ.

ರಾಜ್ಯಕೀಯ ಅಂಧಾದಂಧಿಯಲ್ಲಿ ಎಲ್ಲವನ್ನೂ ಮರೆತ ನಾವು ಹಿಂದಿನ ಕಾಲದಿಂದಲೂ ನಡೆದು ಬಂದ ಸಂಘಟನೆಗಳನ್ನು ಮೆಚ್ಚುವುದಿಲ್ಲ. ರಾಜ್ಯಕೀಯ ಪಕ್ಷಗಳಲ್ಲಿ ಅಲ್ಪಸಂಖ್ಯಾಕರನ್ನು ಎಂದೂ ಎತ್ತಿ ಹಿಡಿಯುವುದಿಲ್ಲ.

ಧಾರ್ಮಿಕ ಸ್ವಾತಂತ್ರ್ಯ ನಮಗಿದೆ. ಎಲ್ಲರೂ ಸಮ ಹಕ್ಕುಗಳಿಗೆ ಒಗ್ಗುವ ರಾಜ್ಯಕೀಯ ನೀತಿಯನ್ನು ಮನ್ನಿಸುವಂತೆ, ಧಾರ್ಮಿಕ ನೀತಿಗಳನ್ನೂ ಅನುಷ್ಠಾನಕ್ಕೆ ತರಲಿ, ಆಕ್ಷೇಪವೇಕೆ? ಹಿಂದುವಿರಲಿ, ಮುಸ್ಲಿಮರಿರಲಿ, ತಂತಮ್ಮ ಮತಾಚರಣೆಯುಂತೆ ನೆಮ್ಮದಿಯಿಂದ ಇರಬಾರದೇಕೆ?

ಪ್ರಜಾಪ್ರಭುತ್ವದಲ್ಲಿ ಬಹುಮತಕ್ಕೆ ಮನ್ನಣೆ, ಬಹುಸಂಖ್ಯಾರನ್ನೇ ಅಲ್ಪಸಂಖ್ಯಾಕರು ಅನುಕರಿಸಬೇಕೆಂಬುದು ಮೂರ್ಖ ಆಮಿಷಿಕ.

ವಾರ್ಷಿಕ ಮಹಾಸಭೆ

ಬಂಟರ ಯಾನೆ ನಾಡವರ ಸಂಘ ಮುಂಬಾಯಿ:— ಸಂಘದ ವಾರ್ಷಿಕ ಮಹಾಸಭೆಯು ಇದೇ ತಿಂಗಳ 19ನೇ ಕಾರೀಕು ಆದಿತ್ಯವಾರ ಭಾರತಾ ಸ್ವಿಚ್ಸ್ ಮತ್ತು ಗೈಡ್ಸ್‌ಕಾಲ್ ಶಿವಾಜಿ ಪಾರ್ಕ್ ಮುಂಬಯಿ ಇದರ ಸಭಾಗೃಹದಲ್ಲಿ ಅಪರಾಹ್ನ ಗಂಟೆ 2.30ಕ್ಕೆ ಸಂಘದ ಅಧ್ಯಕ್ಷೆ ಡಾ| ಪಯೋವಿದ್ರಿ ಜಗನ್ನಾಥ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಸದಸ್ಯರೆಲ್ಲರೂ ಸಕಾಲದಲ್ಲಿ ಕುಟುಂಬಿಕರಾಗಿ ದಯಮಾಡಿ ಚಿತ್ಕೈಸಿ ಅಂದಿನ ಕಾರ್ಯಕ್ರಮಗಳನ್ನು ಚಂದಗಾಣಿಸಿ ಕೊಡಬೇಕಾಗಿ ಆದರದಿಂದ ವಿನಂತಿಸಲಾಗಿದೆ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾಕೀಯದಲ್ಲಿ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಸಲಾಗುವುದು.

ನವಭಾರತ ಪುಸ್ತಕ ಭಂಡಾರ.
ಪಾಲಿತೋಟಿ, ಉಡುಪಿ, ದ. ಕ.

ಚಾರುಚಯನ

ಗೆದ್ದವರದೇ ಸತ್ಯವಾನಿ?

ರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯವರು ದೇಶ ತುಂಬ ಸಂಚಾರ ಹೊಟ್ಟಿದ್ದಾರೆ. ಹಿಂದಿನವರು ಪೂರ್ಣಾವಧಿಯಲ್ಲಿ ಮಾಡಿದಷ್ಟು ತಿರುಗಾಟ ಶ್ರೀ ಗಿರಿಯವರು ಐದು ವರ್ಷದಲ್ಲೇ ಮಾಡಿದರೂ ಲಚ್ಚರಿಯಿಲ್ಲ.

ಶ್ರೀ ಗಿರಿಯವರು ಸ್ವತಂತ್ರ ಮನೋವೃತ್ತಿಯವರು. ಕೈಕಟ್ಟಿ ಕುಳಿತುಕೊಳ್ಳುವುದು ಅವರಿಗೆಂದೂ ಅಸಾಧ್ಯ. ಬೆಂಗಳೂರು ನಿರ್ಮಲೀಕರಣದ ಪಿನ ಜಾತಿಯನ್ನು ಮೊದಲು ಹಿಡಿದವರೇ ಅವರು.

ತಾನು ರಬ್ಬರ್ ಸ್ಟಾಂಪ್ ರಾಷ್ಟ್ರಪತಿ ರಾಗಿ ಉಳಿಯಲು ಅವರು ಎಂದೂ ಬಯಸಲಿಲ್ಲ; ಮುಂದೆಯೂ ಬಯಸುವುದಿಲ್ಲ. ಅವರು ಬೆಳೆದು ಬಂದ ಬಗೆಯೇ ಹಾಗೆ; ಜಾಯಮಾನವೇ ಹಾಗೆಂದರೂ ಸರಿಯೇ.

ರಾಜಕಾರಣಿಗಳ ಬಗ್ಗೆ ಶ್ರೀ ಗಿರಿಯವರು ತಮ್ಮ ಟೀಕಾಸ್ತ್ರಗಳನ್ನಷ್ಟಿಗ ತುರುಸಿನಿಂದ ಬಿಡಹೊರಟಿದ್ದಾರೆ.

ಸಮಾಜದ ಬಗ್ಗೆ ತಮ್ಮ ಕರ್ತವ್ಯ ಕರ್ಮವೂ ಹೊಣೆಗಾರಿಕೆಯ ನಿರ್ವಹಣೆಯನ್ನೂ ನಿಭಾಯಿಸುವಲ್ಲಿ ರಾಜಕಾರಣಿಗಳು ಅಸಫಲರಾಗಿದ್ದಾರೆಂದು ಈಗ ರಾಷ್ಟ್ರಪತಿ ದೂರುತ್ತಾರೆ.(ಕನ್ನ ಮೆಚ್ಚಿನವ ಪಡೆನ್ನ?)

ಇದನ್ನು ದೂರನ್ನು ಪ್ರಜೆಯೊಂದ ಟೀಕೆಯೆನ್ನುವುದು ಹೆಚ್ಚು ಸಮಂಜಸ; ಬೇಕಾದರೆ ಉಗ್ರಟೀಕೆ ಎನ್ನೋಣ.

ರಾಜಕಾರಣಿಗಳು ಜನಸೇವಕರಾಗಬೇಕು ಎಂದವರು ಹತ್ತೋತ್ತೆ ನೀಡಿದರು. ಹಿರಿಯರ್ಗ ಹಿರಿಯ ಸ್ಥಾನಾಪನ್ನರಿಗೆ ಹಿತೋಕ್ತಿ ಅಪ್ಪಣೆಯೆಂದು ನಂಬುವಸಂಪ್ರದಾಯಪ್ರಿಯರು ನಾವು.

ಸರಕಾರವೆಂಬ ನಾಟಕ ಕಂಪೆನಿ

(ಬಿದನೇ ಪುಟದಿಂದ)

ಕ್ರಾಂತಿ-ಹಿಂಸೆಗಳಿಂದ ಇದನ್ನು ಸಾಧಿಸಬಹುದೆನ್ನುವವರು ಕೆಲವರು; ಶಾಂತಿ-ಅಹಿಂಸೆಗಳ ದಾರಿ ಹಿಡಿಯುವವರು ಕೆಲವರು. ಪಾಕಿಸ್ತಾನ ಸಮಾಜವಾದ ದಿಗಳು ಕೆಲವರು ಸಂಘಟಕರಾಗಿ ಮೂಡಿಕ್ಕಿರುವ ಪಕ್ಷಗಳು ಮೂಡಿಕ್ಕಿಯಿರುವುದರಿಂದ ಭದ್ರ ಸರಕಾರವು ರಚಿತಗೊಳ್ಳುವುದು. ಆಗಲೇ ಜನತೆಗೂ ಉತ್ತಮ ಆಡಳಿತ ದೊರೆಯುವುದು ಸಾಧ್ಯ. ಬರಿಯ ಚುನಾವಣಾ ಪೈತ್ರಿಯಿಂದ ವಿಜಯಗಳಿಸಿ ಗದ್ದುಗೆಯೇರಬಹುದೇ ಹೊರತು ದೇಶಕ್ಕೆ ಪ್ರಯೆಜನ ತಂದು ಕೊಂಡಂತಾಗಲಿಲ್ಲ. ಭಾಷಾವಾರು ರಾಜ್ಯ ವಿಭಜನೆಯಿಂದ ಇಂದ್ಯ ರಾಜ್ಯ ವಿವಾದಗಳು ಎನ್ನುವ ಪ್ರಗತಿ ಸಾಧನೆಗೆ ಭಾದಕವಾದಂತೆಯೇ ಪಕ್ಷ-ಪಕ್ಷ ವಿವಾದಗಳು ದೇಶವನ್ನು ವಿನಾಶಗೊಳಿಸುತ್ತವೆ ಅದುದರಿಂದ ಪ್ರಜೋತ್ಪತ್ತಿ-ರಾಜ್ಯೋತ್ಪತ್ತಿಗಳಿಗೆ ಮಿತ ಬಯಸುವಂತೆಯೇ ಪಕ್ಷೋತ್ಪತ್ತಿಗೂ ಮಿತಿ ಬಯಸಬೇಕು.ಮುಂದಿನ ಚುನಾವಣೆಗಳಿಗೆ ಮೊದಲೇ ಜನ ಎಚ್ಚರವಾಗಬೇಕು. ಇಲ್ಲವಾದರೆ, ಅಧಿಕಾರ ಲಾಲಸಿಗರು ದೇಶವನ್ನೇ ಹರಿದು ಹಂಚಿ ತಿಂದಾರು.

ಸೇನೆಯನ್ನು ಗೈದು ಜನಪ್ರಿಯರಾಗಿ ಮುಂದೆ ಜನಕಾ ಪ್ರತಿನಿಧಿಗಳಾಗುವ ವರ್ಗದವರು ಕೆಲವರಿದ್ದರು. ಆವರು ಇಹದಲ್ಲಿ ಶಾಂತಿ ಸುಖಪಡಲಿಲ್ಲ; ತಮ್ಮ ಬೆಂಬಲಿ ಮಂಕಳಿಗಾಗಲೀ ಬಂಧು ಮಿತ್ರರಿಗಾಗಲೀ ಕೂಡಿಡಲಿಲ್ಲ; ಪರಲೋಕದ ಸುಖದಾಸೆಯಿಂದ ಯಾರಿಗೂ ಬೇಡವಾದವರಾಗಿ ಮೂಲೆ ಸೇರಿಕೊಳ್ಳಲಿಲ್ಲವಾದ್ದಾರೆ.

ಇದು ಪ್ರಜಾತಿಯ ಯುಗ. ಜನಸೇವೆಯೇ ನಮ್ಮ ಪ್ರಗತಿಯ ಚಾಲಕ ಗುರಿ. ಈ ಗುರಿ ಮುಟ್ಟುವುದಕ್ಕೆ ಮೊದಲು ಕೆಲವೊಂದು ಹಂತಗಳನ್ನು ದಾಟಿ ಹೋಗಬೇಕು. ಸೇವೆಗೊಂದು ಉತ್ತಮ ಅವಕಾಶ ಬೇಕು; ಅಂತಹ ಅವಕಾಶ ನೀಡುವ ಕಾನೂನೇನು ನಮ್ಮ ದೇಶದಲ್ಲಿ ರಾಜ್ಯಕಾರಣ.

ಬರಿಯ ರಾಜ್ಯಕಾರಣಿಗಳೂದರೇನು? ಒಣರೊಟ್ಟಿ ಒಳ್ಳೆ ಮೇಲೆ ಸಕ್ಕರೆ—ತುಪ್ಪ ಬೇಡವೆ? ಅದಕ್ಕಾಗಿ ಎಮ್ಮೆಲ್ಯೆ ಯೋ ಎಂಪಿಯೋ ಆಗಬೇಕು— ಇದು ಸೇವೆಗೊಂದು ರಹದಾರಿ.

ಎಮ್ಮೆಲ್ಯೆ-ಎಂಪಿ ಸಾವಿರಾರು ಜನರು. ತಾವು ಮಾಡಬಯಸುವಾದ ಸೇವೆ ಎತ್ತಿ ತೋರಿ ಬೇಡವೆ? 'ಆಧಿಕಾರ' ಮುದ್ರೆ ಇಲ್ಲವಾದರೆ ರುಚಿಯೇನು? ಅದಕ್ಕೊಂದು ಕೊಟ್ಟಕೊನೆಗೆ ಉಗಮಂತ್ರಿ ಪಟ್ಟ.

ತನಗಿಂತ ಅರ್ಹರೂ ಅದಕ್ಷರೂ ಸ್ಟೇಟ್-ಕ್ಯಾಬಿನೆಟ್ ರ್ಯಾಂಕಿಪಲ್ಲಿರುವಾಗ, ತನಗಾದ ಅಪಮಾನವನ್ನು ತೊಳೆಯಲೆಂದೂ ಕೂಡುವುದು ಹೇಗೆ ಸಾಧ್ಯ?

ಜವಾಬ್ದಾರಿ – ಅರು ಸಣ್ಣದಿರಲಿ, ದೊಡ್ಡದಿರಲಿ, ಜವಾಬ್ದಾರಿಯೇ. ತನ್ನ ಇಲಾಖೆಯ ಅಧಿಕಾರಿಗಳನ್ನು ತನಗೆ ಬೇಕಾದಂತೆ ತನಬೇತಿಗೊಳಿಸಿ ಅವರಿಗೆ ಜನಸೇವೆಯ ಪ್ರಥಮ ಪಾಠ ಕಲಿಸುವಷ್ಟರಲ್ಲಿ ಐದು ವರ್ಷ ಸವೆದು ಹೋಗುತ್ತದೆ ಜನಸೇವೆಗೆಂದು ಮತ್ತೊಂದು ಅವಧಿಗೂ ಪ್ರಾತಿನಿಧ್ಯ ಮಾಡಿಕೊಂಡರೆಯೇ.

ಈ ನಡುವೆ ಪ್ರಧಾನಿಯೋ ಮುಖ್ಯಮಂತ್ರಿಗೋ ಗೃಹಚಾರಿ ಹಿಡಿಯಬಹುದು. ಕೈಗೆ ಬಂದ ಜನಸೇವಾಕಾಶವನ್ನು ಕಳೆದುಕೊಳ್ಳದಂತೆ ಕೋಡುವುದಕ್ಕೆ ಎರಡು ಕಣ್ಣು ಸಾಲದು, ಮಾಡುವುದಕ್ಕೆ ಎರಡು ಕೈ ಸಾಲದು.

ಜನರಿಗೇನು ಬೇಕೆಂದು ನೋಡುವುದಕ್ಕೆ ಕಣ್ಣುಗಳನ್ನು ಎಲ್ಲಿಂದ ತರಬೇಕು? ಸೇವೆ ಮಾಡುವುದಕ್ಕೆ ಕೈಗಳನ್ನು ಎಲ್ಲಿಂದ ತರಬೇಕು?

ಸಮಾಜದಬಗ್ಗೆ ಅವರಿಗೆ ಕರ್ತವ್ಯದ ನೆನಪಿನೆ; ಹೊಣೆಗಾರಿಕೆಯ ತಿಳುವಳಿಕೆಯಿದೆ. ಚುನಾವಣೆಯ ಸಾಧನೆಯ ಮೊದಲ ಹಂತಗಳಲ್ಲೇ ಅವರು ಸಾಕಸವಿಂದ ಹೋರಾಡುತ್ತಾರೆ; ಕೊನೆ ಮುಟ್ಟುವ ಅವಕಾಶವೇ ಅವರಿಗೆ ದೊರೆತಿಲ್ಲದಿರುವಾಗ ಅಸಫಲರೆಂದು ಹೆಸರುಗುವುದು ಅನ್ಯಾಯವಲ್ಲವೆ?

ನವ್ಯ ದೇಶ ಸ್ವಾರ್ಥಿಗಳಿಂದ ತೊಡಿದೆ ಎಂದು ರಾಷ್ಟ್ರಪತಿಗಳು ಅಪ್ಪಣೆ ಕೊಟ್ಟಿದ್ದಾರೆ.

ಜನಸೇವೆ ಹೊಡಬೇಕು, ಮಾಡತ್ತಲೇ ಇರಬೇಕು, ಮಾಡುತ್ತಲೇ ಜೀವಬಿಡಬೇಕು ಎಂಬುದು ಸ್ವಾರ್ಥ ಹೇಗಾಗುತ್ತದೆಂದು ಸ್ವಷ್ಟವಿಲ್ಲ. ನಮ್ಮ ದೇಶದಲ್ಲಿ ಎಲ್ಲವೂ ನಡೆಯುವುದು ಜನಸೇವೆಯು ಕಸರಲ್ಲಿ; ಕರ್ತವ್ಯ ಪಾಲನೆಯ ಹೆಸರಲ್ಲಿ ಜನಸೇವೆ-ಕರ್ತವ್ಯ ಪಾಲನೆಯ ದೃಷ್ಟಿಯನ್ನೇ ಸ್ವಾರ್ಥವೆನ್ನುವುದಾದರೆ ಬರೋಣವಿ. ಆದಿಲ್ಲವಾದರೆ ಜನಸೇವೆ ಪವಿತ್ರವೂ ಆಗಲೂ ಹೇಗೆ?

ಸ್ವಾತಂತ್ರ್ಯದ ನಂತರ ಸತ್ಯ, ಶಾಂತಿ, ಅಹಿಂಸೆ ಏಕತೆ ಕೈಗಳು ಮೊದಲು ಅಹಾರವಾದುದೆಂದು ರಾಷ್ಟ್ರಪತಿಗಳಿಗೆ ನೋವು.

ಸ್ವಾತಂತ್ರ್ಯಕ್ಕೆ ಕೊಡಲು ಬ್ರಿಟಿಷರೂ ಅನಗು ಸಾಕಷ್ಟು ಕೆಲವೇ ಕೆಲವು ಬಿಳಿನಾಯಿಗಳೂ ಸತ್ಯವಂತರಾಗಿದ್ದರು; ಚಾರಿತ್ರಶೀಲರಿದ್ದರು; ವಿಶ್ವಾವಾದಿಗಳಾಗಿದ್ದರು. ಭಾರತೀಯರೆಲ್ಲರೂ ಇದಕ್ಕೆ ದೂರರಾಗಿದ್ದರು.

ಸ್ವಾತಂತ್ರ್ಯದೊಡನೆ ಭಾರತೀಯರಲ್ಲೇ ಆಳವರು, ಆಳಿಸಿಕೊಳ್ಳುವವರು ಎಂಬೆರಡು ವರ್ಗದವಾಯ್ತು. ಆಳುವವರು ಸೇವೆ ಮಾಡುವವರು; ಆಳಿಸಿಕೊಳ್ಳುವವರು, ಅದನ್ನು ಮಾಡಿಸಿಕೊಳ್ಳುವವರು.

ಆಳುವವರು, ಮಾಡಿಸುವವರು, ಆಳಿಸಿಕೊಳ್ಳುವವರು; ಮಾಡಿಸಿಕೊಳ್ಳುವವರು, ಅಡಿಸಿಕೊಳ್ಳುವವರು ಆಳುವವರ್ಗ.

ಮೊದಲನೆಯ ವರ್ಗದವರು ಸತ್ಯಶೀಲರು, ಚಾರಿತ್ರವಂತರು, ಐಶ್ವರ್ಯವಂತರು. ಎರಡನೆಯ ವರ್ಗದವರು ಏನೇನೂ ಇಲ್ಲದವರು.

ಈ ಪರಿಭೇದ ಹಿಂದೆಯೂ ಇತ್ತು; ಇಂದೂ ಇದೆ, ಮುಂದೆಯೂ ಇರುತ್ತದೆ, ಗೆದ್ದವರದೇ ಸತ್ಯ ತಾನೇ?

Gram: VISHWA Tel: 29111

When at Bangalore

Stay at

HOTEL NATARAJA

Restaurant, Boarding & Lodging,

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಸಿಹಿಮೂತ್ರ ರೋಗಿಗಳ ಕೋಶದ ಅಧ್ಯಯನ

ಸಿಹಿಮೂತ್ರ ವ್ಯಾಧಿಗೆ ಗುರಿಯಾಗಿದ್ದಂಥವರ ಕೋಶಗಳು ಟೆಸ್ಟ್‌ಟ್ಯೂಬಿನಲ್ಲಿ ಸಹಜ ಸ್ಥಿತಿಯವರ ಕೋಶಗಳಿಗಿಂತ ಅಸಂಬದ್ಧವಾಗಿ ವಿಕಸಿಯುವುವು ಎಂದು ಅಮೆರಿಕದ ಇಬ್ಬರು ಸಂತತಿ ವಿಜ್ಞಾನಿಗಳು ಕಂಡುಹಿಡಿದಿದ್ದಾರೆ.

ಈ ಸಂಶೋಧನೆಯು ಆನುವಂಶಿಕ ವ್ಯಾಧಿಯೊದ ಸಿಹಿಮೂತ್ರದಲ್ಲಿನ ಮೂಲಭೂತ ರಾಸಾಯನಿಕ ದೋಷಗಳ ಬಗೆಗೆ ತಿಳಿಯಲು ಹೊಸ ಉಪಾಯವನ್ನು ಒದಗಿಸುವುದು.

ಮಸಾಚುಸೆಟ್ಸ್ ಜನರಲ್ ಆಸ್ಪತ್ರೆಯ ಡಾ| ಜಾನ್‌ಡಬ್ಲ್ಯು. ಲಿಪ್ಟ್‌ಫೀಲ್ಡ್ ಮತ್ತು ಡಾ| ಸಾಮ್ಯುವೆಲ್ ಸೋಲ್ ಸ್ಟೀನ್ ಅವರುಗಳು, ಸಹಜ ಆರೋಗ್ಯವಂತರ ಹಾಗೂ ಸಿಹಿಮೂತ್ರ ವ್ಯಾಧಿ ಪೀಡಿತರ ಚರ್ಮದಿಂದ ಪಡೆಯಲಾದ ಸ್ವಾಯು ಕೋಶ (ಫೈಬ್ರೊಬ್ಲಾಸ್ಟ್ಸ್)ಗಳ ಬೆಳವಣಿಗೆಯ ತುಲನಾತ್ಮಕ ಸಾಮರ್ಥ್ಯವನ್ನು ಅಧ್ಯಯನ ಮಾಡಲು ವಿಶೇಷವಾಗಿ ಅಭಿವೃದ್ಧಿಪಡಿಸಲಾದ ಲ್ಯಾಬರೇಟರಿ ಪ್ರಯೋಗ ತಂತ್ರಗಳನ್ನು ಬಳಸಿದರು.

"ಸಿಹಿಮೂತ್ರ ಪೀಡಿತರ ವಂಶವಾಹಿಗಳು ಗುಂಪುಗುಂಪಾಗಿ ಬೆಳೆಯುವ ಸಾಮರ್ಥ್ಯವಿರುವ ಫೈಬ್ರೊಬ್ಲಾಸ್ಟ್‌ಗಳ ಸಂಖ್ಯೆಯನ್ನು ಕಡಿಮೆಮಾಡುವುವು ಎಂದು ಈ ಪ್ರಯೋಗಗಳು ಸೂಚಿಸುತ್ತವೆ" ಎಂದು ಡಾ| ಲಿಪ್ಟ್‌ಫೀಲ್ಡ್ ವರದಿಮಾಡಿದ್ದಾರೆ.

ಇದಕ್ಕೆ ಕಾರಣವಿನ್ನೂ ಸ್ಪಷ್ಟವಾಗಿಲ್ಲ. ಪರಿಣಾಮಗಳು ಬೇಗ ಮುಪ್ಪಾಗುವುದು ಕಾರಣವಿರಬಹುದು ಎಂದು ಡಾ| ಲಿಪ್ಟ್‌ಫೀಲ್ಡ್ ಹೇಳಿದ್ದಾರೆ.ಸಹಜ ಕೋಶಗಳಲ್ಲಿ ಗುಂಪಾಗಿ ಬೆಳೆಯುವ ಸಾಮರ್ಥ್ಯವು (ಪ್ಲೇಟಿಂಗ್ ಎಫಿಷಿಯೆನ್ಸಿ ಎಂದು ಇದಕ್ಕೆ ಹೆಸರು) ಮಧುಸ್ರಾವಕತೆ ಕಡಿಮೆಯಾಗುವುದು ಎಂದವರು ನುಡಿದರು.

20,30 ಮತ್ತು 40ನೇ ತಲೆಮಾರುಗಳ ಸ್ವಾಯುಗಳಲ್ಲಿನ ಡಯಬಿಟಿಕ್ ಕೋಶಗಳಲ್ಲಿನ ಪ್ಲೇಟಿಂಗ್ ಸಾಮರ್ಥ್ಯವು ಸಹಜ ಕೋಶಗಳಿಗಿಂತ ಗಮನಾರ್ಹವಾಗಿ ಕಡಿಮೆಯಿರುವುದು ಕಂಡುಬಂದಿದೆ. 50ನೆಯ ತಲೆಮಾರಿನ ಅತಿ ಹಳೆಯ ಕೋಶಗಳಲ್ಲಿ ಮಾತ್ರ ಈ ವ್ಯತ್ಯಾಸವು ಕಂಡುಬಂದಿಲ್ಲ.

'ಪ್ಲೇಟಿಂಗ್ ಸಾಮರ್ಥ್ಯದ ಕಿಡಾರವು ಕೋಶಗಳ ಸಂಬಂಧದಲ್ಲಿ ಸಾಮಾನ್ಯವಾದಂಥ ಹೆಚ್ಚಿನ ದೋಷಗಳ ಬಗೆಗೆ ಸಂತೀಧನೆಯಲ್ಲಿ ಸಹಾಯಕವಾಗಿ ಬಹುದು. ಏಕೆಂದರೆ ಗುಂಪಾಗಿ ಬೆಳೆಯುವ ಫೈಬ್ರೊಬ್ಲಾಸ್ಟ್‌ನ ಸಾಮರ್ಥ್ಯವು ಅವರ ಆರೋಗ್ಯದ ಬಗೆಗೆ ಕಿಂಚ ಪರೀಕ್ಷೆಯಾಗಿರುವುದು" ಎಂದು ಡಾ| ಲಿಪ್ಟ್‌ಫೀಲ್ಡ್ ಹೇಳಿದ್ದಾರೆ. ಇದು ಸಿಹಿಮೂತ್ರ ಮತ್ತು ವಾಥಿಕ್ಕಳಿಕ್ಕೆ ಮಾತ್ರ ಸೀಮಿತವಲ್ಲ, ಇನ್ನೂ ಅನೇಕ ವಂಶವಾಹಿಗಳ ವ್ಯಾಧಿಕರ ಪರಿಣಾಮಗಳಿಗೂ ಅನ್ವಯವಾಗುವುದು.

ಸಿಹಿಮೂತ್ರವ್ಯಾಧಿಯ ಒಂದು ಪ್ರಮುಖ ಲಕ್ಷಣವೆಂದರೆ, ಈ ವ್ಯಾಧಿಗೆ ತುತ್ತಾದವರಲ್ಲಿ ಚಿಕ್ಕ ವಯಸ್ಸಿಗೇ ಉಗ್ರವಾದ ಹೃದ್ರಕ್ತನಾಳದ ಕಾಹಿಲೆಗಳು ಹುಟ್ಟಿಕೊಳ್ಳುವ ಪ್ರವೃತ್ತಿಯಿರುವುದು.

ಈಶ್ವರಾನುಭವ - ಗಾಂಧೀಜಿ

ನಾವೂ ನೀವೂ ಈ ಕೋಣೆಯಲ್ಲಿ ಕುಳಿತುಕೊಂಡಿರುವೆವೆಂಬುದು ಎಷ್ಟೊಂದು ನಿಜವೊ', 'ದಕ್ಕೂ ಹೆಚ್ಚು ನಿಜವಾದುದು ದೇವರ ಅಸ್ತಿತ್ವ. ಹೀಗೆಂದು ನನ್ನ ಪ್ರತೀತಿ. ನಾನಾದರೋ ನೀರು, ಗಾಳಿ ಸಕ ಇಲ್ಲದೆ ಬದುಕಿಗಬಹುದು; ಆದರೆ ದೇವರ ಹೊರತು ಬದುಕಿರುವುದು ಅಸಾಧ್ಯ ಎಂಬುದನ್ನು ನಾನು ದೃಢವಾಗಿ ಪ್ರತಿ ಪಾದಿಸಬಲ್ಲೆ. ಕೀವ ನನ್ನ ಕಣ್ಣುಗಳೆದುರಿನ ಕತ್ತಲೆಯನ್ನು ಕಂಡಿದೆಯಷ್ಟೆ, ಅದರಿಂದ ನಾನು ಸಾಯಲಾರೆ. ನನ್ನ ಮೂಗನ್ನು ಕಂಡರಿಸಬಹುದು, ಅದು ನನ್ನೆನ್ನು ಕೊಲ್ಲಲಾರದು ಆದರೆ ದೇವರ ವೇಲಿನ ಭಕ್ತಿ ಶ್ರದ್ಧೆಗೆ ಕೀವು ಸಂಕಂಡ ಹಾಕಿದರೆ. ಆಗ ಖಂಡಿತ ನನ್ನ ನಾಶ ಖಂಡಿತ. ಇದೆಂದು ಮೂಢ ನಂಬಿಕೆಯೆಂದು ನೀವು ಹೇಳಬಹುದು. ನನ್ನ ಮಟ್ಟಿಗಾದರೋ, ಈ ಮೂಢ ನಂಬಿಕೆಯು ಸ್ವಾಗತಾರ್ಹ. ನಾನು ಇದನ್ನು ಅಪ್ಪಿಕೊಂಡಿರುವೆ. ಹೇಗೆ ನನ್ನ ಬಾಲ್ಯಜೀವನದಲ್ಲಿ ಸಾಕಟದ ಇಲ್ಲವೆ ಅಂಜಿಕೆಯ ಸಂದರ್ಭ ಗದಲ್ಲಿ ರಾಮ ನಾಮಕ್ಕೆ ನಾನು ಅಪ್ಪ ಕಾಕಿಕೊಂಡಿರುತ್ತಿದ್ದೆನೋ ಅದೇ ರೀತಿ, ಈ 'ಮೂಢ ನಂಬಿಕೆಯು' ಈಗ ನನ್ನ ಸಂಜೀವಿನಿಯಾಗಿದೆ.

ಹದಿನೈದು ವರುಷದವನಾಗುವ ಪೊದಲೇ ನಾನು, ಬಡ್ಡಿ ಪರ್ವರ್ಕವಾಗಿ ದೇವರನ್ನು ನಂಬಿಕೊಂಡು ವರ್ತಿಸಹತ್ತಿದೆ. ಅಪರ್ವಸಾಕ್ಷೆ ಪರಮಾತ್ಮನ ಸಾನ್ನಿಧ್ಯದ ಅರಿವು ನನ್ನ ಹೃದಯುಕ್ಕನ್ನಿಸಿದ ಒಂದು ಕ್ಷಣವೂ ಇಲ್ಲ. ಅವನ ತಾಳ ದಂತೆ ಕುಣಿಯಲು ನಾನು ಸಾಕಷ್ಟದಿಂದ ಕೃಯತ್ನಿಸುತ್ತಿರುವೆ. ದೇವರು ನನ್ನನ್ನು ಬಿಟ್ಟುಕೊಟ್ಟನೆಂದು ನನಗನಿಸಿದ ಒಂದು ಕ್ಷಣವೂ ಹನ್ನೆನೆಪಿನಲ್ಲಿಲ್ಲ.

ನಾನು ದೇವರ ಗುಲಾಮ

ಕೆಲಸ ಹೆಗೆದುಕೊಳ್ಳುವುದರಲ್ಲಿ ಈ ಲೋಕದೊಡೆಯನಿಗೆ ಸಾಗಟ್ಟುವ ಪಿಷ್ಟರ ಒಡೆಯನು ಯಾರೂ ಇಲ್ಲ. ಏವತ್ತು ವರ್ಷಗಳಿಂತ ಹೆಚ್ಚು ಕಾಲ ನಾನು ಆತ್ಮ-ಸಂತೋಷದಿಂದ ಈ ಜಗದೊಡೆಯನ ಗುಲಾಮ ನಾಗಿಬಿಟ್ಟಿರುವೆ. ವರುಷಗಳು ಉರುಳಿದಂತೆ, ಅವನ ದನಿ ನನಗೆ ಹೆಚ್ಚೆಚ್ಚು ಸ್ಪಷ್ಟವಾಗಿ ಕೇಳ ಹತ್ತಿದೆ. ಸುತ್ತಲೂ ಘನಘೋರ ಕತ್ತಲೆಯು ನನ್ನನ್ನು ಅವರಿಸಿದಾಗಲೂ ಆತನು ನಕ್ಷತ್ರವನ್ನು ಬಿಟ್ಟುಕೊಡಲಿಲ್ಲ. ನಾನೇ ಘನ್ನ ಮೇಲೆ ಅನರ್ಥವನ್ನು ತಂದೊಡ್ಡಿಕೊಳ್ಳುತ್ತಿರುವ ಪ್ರಸಂಗದಲ್ಲಿ, ಅವನು ನನ್ನನ್ನು ಸ್ವತಂತ್ರವಾಗಿ ವರ್ತಿಸಲು ಬಿಡದೆ, ನನ್ನನ್ನು ಉದ್ದರಿಸಿರುವನು. ಈ ನಿಷ್ಠುರ ಸ್ವಾಮಿಯಾನರೋ ಹರಪರಿಯಿಂದ ನಿನ್ನ ಸೇವೆಯನ್ನೆಷ್ಟೆ ಮಾಡಿದರೂ ಸಾಲದು, ಮತ್ತು ಯಾವ ಕಾಲಕ್ಕೆ ನಿನ್ನ ಶ್ರದ್ಧೆಯೂ ನಿನ್ನ ಕೈಬಿಟ್ಟು ಹೋಗದಿರಲಿ ಎಂದು ನಿವೇದಿಸಿಕೊಳ್ಳುವುದೋ, ಇಲ್ಲವೆ, ದೇಹವೇ ನಿವೆಗೆ ವಿಶ್ರಾಸಸ್ಥಾನ ಮಾಡು ತ್ತಿದ್ದು, ಈಗ ತನ್ನ ಪಾಶವ ಸಮಿಪಿಸಿ ಕೆಂದು ನಿವೆಗನಿಸುವದೋ, ಆ ಕ್ಷಣಕ್ಕೆ ಆತನೂ ಒಂದಿಲ್ಲೊಂದು ತರದಿಂದ ನಿನ್ನ ಸಹಾಯಕ್ಕೆ ಬಗ್ಗವನ ಮತ್ತು "ನೀವು ಶ್ರದ್ಧೆ ಕಳಕೊಳ್ಳಕೂಡದು. ನೀವು ಕೇವಲ ಸೂಜನೆ ಮಾಡಿ ಕರೆದರೆ ನಾಕು, ನಾನು ನಿಮ್ಮ ವೆರವಿಗೆ ಹಾಜರಾಗುವೆ. ಆದರೆ ಇಷ್ಟೊಂದು ನಿಜ—ನಾನು ನನ್ನ ಯೋಜನೆಗೆ, ನನ್ನ ಶರ್ತಗಳಗನ ಸ್ವಯಿಸಿ, ನಿವ್ಯಸಹಾಯಕ್ಕೆ ಬರುವೆನೇ ಹೊರತು ನಿವ್ಮ ಯೋಜನೆಗನ್ವಯಿಸಿರು ಲ್ಲೆಂಬ ಸಂಕತಿಯನ್ನು ಆ ದೇವರು ನಿಮಗೆ ಮನಗಾಣಿಸಿ ಕೊಡ ತ್ತಾನೆ.

ಅಹಂಭಾವ ಬಿಟ್ಟು ಪರಮಾತ್ಮನ ಕೈಯಲ್ಲಿ ಯಂತ್ರವತ್ತಾ ಆಗಿ ನಡೆಯಿರಿ

ಸುಸ್ಥಿತಿವಾಗಿ ನಡೆಯುವ ಯಂತ್ರವು ಹೇಗೆ ಯಂತ್ರಿಕನ (ಯಂತ್ರ ನಡಿಸುವವನ) ಕರೆಗೆ ಸಹಜ ಓಗೊಟ್ಟ ನಡೆಯುವದೋ, ಹಾಗೆಯೇ ಭಕ್ತನು ಆ ಮಹಾ ಯಂತ್ರಗಾರ (ಪರಮಾತ್ಮ)ನು ಜಾಲನೆ ಕೊಟ್ಟ ರೀತಿಯಲ್ಲಿ ಹೆಜ್ಜೆಯಿಡುತ್ತ, ಜಗತ್ತಿನಲ್ಲಿ ಶಕ್ತ ಪಾತ್ರವನ್ನು ನಿರ್ವಹಿಸುವನು ಹೀಗಿರುವದೀಂದ, ಬಾಹ್ಯ ಘಟನೆಗಳ ಕುರಿತು ಯಂತ್ರದ ಪ್ರತಿಕ್ರಿಯೆಯಲ್ಲಿ ಸಳಜತೆಯಿರುವಂತೆ, ಭಕ್ತನು ಸಹ ಸುತ್ತಲಿನ ಘಟನೆಗಳನ್ನು ಯಥಾರ್ಥವಾಗಿ ಗ್ರಹಣ ಮಾಡುವನೆ. ಆ ಕುರಿತು ಅವನ ಪ್ರತಿಕ್ರಿಯೆಯಲ್ಲಿಯೂ ಸಹಜತೆಯಿರುವದು. ಮಾನವನಾದರೋ ಬುದ್ಧಿಯುಕ್ತ ಪ್ರಾಣಿ. ಹೀಗಿದ್ದೂ ಯಂತ್ರವತ್ ನಡೆಯುವದು ಬಲು ಕಠಿಣ. ಆದರೆ ನಾವು ನಮ್ಮ "ಅಹಂ" "ತಾನು" ಎಂಬ ಭಾವನೆಯನ್ನು ಶೂನ್ಯಗೊಳಿಸ ಬೇಕಾಗಿದ್ದರೆ, ಅ ರೀತಿ ವರ್ತಿಸದೆ ಬೇರೆ ದಾರಿಯಿಲ್ಲ. ಅಂತೆ ವರ್ತಿಸಿದ್ದಲ್ಲಿ ನಾವು ಪೂರ್ಣತ್ವವನ್ನೆ ವಟ್ಟುವ ಆಶೆ ಹಿಡಿಯಬಹುದು.

ಅಂತರಾತ್ಮದ ದನಿ ಹೇಗೆ ಕೇಳಿಸುವದು?

ಆತ್ಮಶುದ್ಧಿಗಾಗಿ ಸಾಧಿಸಲು ಸತತ ಪ್ರಯತ್ನ ನಡೆಸಿದ್ದರ ಫಲವಾಗಿ, ನಾನು ನನ್ನ ಅಂತರಾತ್ಮದ ದನಿಯನ್ನು ಸರಿಯಾಗಿ ಹಾಗೂ ಸ್ಪಷ್ಟವಾಗಿ ಕೇಳಿಕೊಳ್ಳುವ ಯೋಗ್ಯತೆಯನ್ನು ಕೆಲಮಟ್ಟಿಗೆ ವಿಕಾಶ ಗೊಳಿಸಿಕೊಂಡಿರುವೆ. ಪ್ರತಿಯೊಬ್ಬ ಮಾನವನೂ, ಪರಮಾತ್ಮನ ಪ್ರತಿನಿಕ್ಕ ಪ್ರಕಟನಾಗಬಹುದೆಂದು ನನ್ನ ದೃಢ ನಂಬಿಕೆ. ಆದರೆ, ಆ ಅಂತರಾತ್ಮನ ಆ ಸೂಕ್ಷ್ಮ ನಿಃಶಬ್ದ ದನಿಗೆ ನಾವು ಕಿವಿಗೊಡುವದೇ ಇಲ್ಲ. ಒಳಗಿಂದ ಕೇಳಿಸುವ ಈ ಅಂತರಾತ್ಮನ ಸೂಕ್ಷ್ಮ ನಿಃಶಬ್ದ ದನಿಗೆ ನಾವು ಹಿಜಕಿ ಹಾಕಿದೆನೆಂದರೆ ಆ ಕ್ಷಣಕ್ಕೇ ನಾನು ನಿರುಪಯೋಗಿಯಾಗಿ ಬಿಡುವೆ. ಯಾವ ಈ ಅಂತರಾತ್ಮನ ದನಿಯನ್ನು ಕೇಳುವ ಸಂಕಲ್ಪ ಮಾಡುವರೋ ಅವರು ಅದನ್ನು ಕೇಳಬಲ್ಲರು. ಆದರೆ ಹೇಗೆ ಇತರ ವಿಷಯಗಳಲ್ಲೋ ಹಾಗೆ ಇದಕ್ಕೂ ಸಹ ಪೂರ್ವ ಭಾವಿಸುವಿಗೆ ನಿಶ್ಚಿತ ಸಾಧನೆಯನ್ನು ಕೈಕೊಳ್ಳಬೇಕಾದದು ಅವಶ್ಯ.

ಮೊನವನೆ. ಸ್ವಲನಶೀಲನು. ತನ್ನ ಹೆಜ್ಜೆಗಳು ಸಾಯುಗಿ ಬೀಳುತ್ತಲಿವೆಯೆಂದು ಅವನು ನಿಶ್ಚಿತ ಹೇಳಲಾರ. ತನ್ನ ಪ್ರಾರ್ಥನೆಗೆ ದೇವರಿಂದ ಪ್ರತ್ಯುತ್ತರ ಸಿಕ್ಕಿತೆಂದು ಅವನು ಭಾವಿಸಿರುವದು, ಅವನ ಸತ್ಯತೆಯ ಅಹಂಕಾರದ ಪ್ರತಿಧ್ವನಿಯೇ ಆಗಿರುವ ಸಂಭವವಿಲ್ಲದಿಲ್ಲ. ಮೊನವನು ಸಂಪೂರ್ಣ ಪಾಪರಹಿತನಾಗಬೇಕು, ಪಾಪದ ವಿಚಾರವೂ ಆತನಿಗೆ ಸೋಂಕ ಕೂಡದು ಆಗಲೇ ಅವಧಿಗೆ ಮೊನವೇ ಕರೆದ ಕ್ಷಣಕ್ಕೆ ಆಪ್ಪದವಿಲ್ಲದೆ ಸಾಯೂದ ಮಾರ್ಗದರ್ಶನವು ಲಭ್ಯವಾಗುವದು. ನಾನಾದರೋ ಇನ್ನೂ ಪೇಚಾಡ ತ್ತಿರುವೆ, ಇನ್ನೂ ಆ ದಾರಿಯಲ್ಲಿ ಪ್ರಯತ್ನ ನಡಿಸಿರುವೆ, ಹಪ್ಪುಗಳನ್ನೇ ಮಾಡುತ್ತಿರುವೆ ಆ ಪೂರ್ಣ ವ್ಯಕ್ತಿಯೂಗಿಗುವೆ.

—ಸಂಕಲನ-ತಿಮ್ಮಪ್ಪ ನಾಯಕ

(ಮಾಯ್ ಲಿಜನ್" ಈ ಪುಸ್ತಕದಿಂದ ಉದ್ಧೃತ)

ಉಡುಪಿಗೆ ಬಂದಾಗ

ಮನರಂಜನೆಯ ಸಮಸ್ಯೆ ನಿಮಗಿಲ್ಲ!

ಅತ್ಯುತ್ತಮ ಚಲಚ್ಚಿತ್ರಗಳನ್ನು ಪ್ರದರ್ಶಿಸುವ

ಎರಡು ಶ್ರೇಷ್ಠ ವರ್ಜೆಯ ಚಿತ್ರಮಂದಿರಗಳು

ನಿಮ್ಮ ಬೇಸರವನ್ನು ನೀಗಿಸಲು ಇಲ್ಲಿವೆ.

ಅಲಂಕಾರ್ (ಫೋನ್: 327) ಅಸ್ಪತ್ರೆ ರಸ್ತೆ

ಕಲ್ಪನಾ (ಫೋನ್: 437) ಉಸೇಂದ್ರಬಾಗ್

ಕುಂದಾಪುರದ ನವೀಕೃತ ಭವ್ಯ ಚಿತ್ರಮಂದಿರ—

ಗೀತಾಂಜಲಿ

ಪ್ಲಾಲಕರು:

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಎಸ್. ಆರ್. ಬಿಲ್ಡಿಂಗ್ಸ್, ಉಡುಪಿ (ದ. ಕ.)

READ & ADVERTISE IN NAVAYUGA WEEKLY

ಡಾ|| ಎಮ್. ಉಮೇಶ ರಾವ್

ಸ್ಥಾಯಿ ಕಾಂತ್ರಿಕ ಸಮಿತಿಯ ಮೂಜೆ ಅಧ್ಯಕ್ಷರೂ ಕಳೆದ ಜನವರಿಯಲ್ಲಿ ಪರಿಯಲಾದ ಜರಗಿದ 25ನೇ ಕೃಯ ಮತ್ತು ಎದೆರೋಗಗಳ ರಾಷ್ಟ್ರೀಯ ಪರಿಷತ್ತಿನ ಅಧ್ಯಕ್ಷರೂ ಆದ ಡಾ|| ಎಂ. ಉಮೇಶರಾಯರು ತಾರೀಕು 8.6.70ರಂದು ಅವರ ಹುಟ್ಟೂರಾದ ಮಂಗಳೂರಲ್ಲಿ ನಧನರಾದರೆಂದು ತಿಳಿಸಲು ನಾವು ವ್ಯಥಿಪಡುತ್ತೇವೆ.

1901ರಲ್ಲಿ ಗೌರವಾನ್ವಿತ ಸಾರಸ್ವತ ಕುಟುಂಬದಲ್ಲಿ ಜನಿಸಿದ ಡಾ|| ಉಮೇಶರಾಯರು ಮಂಗಳೂರಲ್ಲಿ ಅವರ ಬಾಲ್ಯ ಶಿಕ್ಷಣವನ್ನು ಪಡೆದರು. 1926ರಲ್ಲಿ ಅವರು ಮದ್ರಾಸು ಮೆಡಿಕಲ್ ಕಾಲೇಜಿನಿಂದ ಉತ್ತೀರ್ಣರಾಗಿ ಹೊರಬಂದು ಕಲ್ಕತ್ತದ ರಾಯಲ್ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹೈಜೀನ್ ಎಂಡ್ ಪಬ್ಲಿಕ್ ಹೆಲ್ತ್ ಮತ್ತು ಮೈಸೂರಿನ ಕೆ. ಪಿ. ಟ್ಯೂ ಬರ್ಕುಲೋಸಿಯಂನಲ್ಲಿ ಕ್ಷಯರೋಗದ ಕುರಿತ ಉನ್ನತ ಶಿಕ್ಷಣ ಹೊಂದಿದರು. ಅವರು 1929ರಲ್ಲಿ ವೇಲ್ಸ್‌ನಲ್ಲಿ ಆವರ್ಟ್. ಡಿ. ಡಿಗ್ರಿಯನ್ನು ಪಡೆದರು. ಅವರು ಟ್ರಿನಿಡಾಡ್ ಯಿಂಟ್ ಸನಿಟೋರಿಯಂನಲ್ಲಿ ಮತ್ತು ಲಂಡನ್ನಿನ ಬ್ರಾಂಪ್ಟನ್ ಆಸ್ಪತ್ರೆ ಯಾಗೂ ಇಂಗ್ಲೆಂಡಿನ ಕಾರ್ಪರ್ಟರ್ ಕಾಲೇಜಿನಲ್ಲಿ ವಿಶೇಷ ಪರಿಣತಿ ಪಡೆದರು.

ಡಾ|| ಉಮೇಶರಾಯರು ಮೇಟಿ ಪಟ್ಟಣಗಳ ಮೆಡಿಕಲ್ ಆಫೀಸರಾಗಿ ವಿವಿಧ ಹುದ್ದೆಗಳನ್ನು ಹೊಂದಿದ್ದರು. ಅವರು ಮಂಗಳೂರಿನ ಪ್ರಧಾನ ಸರ್ಕಾರಿ ಆಸ್ಪತ್ರೆಯಲ್ಲಿ ಟಿ. ಬಿ. ಶಾಖೆಯ ಮುಖ್ಯಸ್ಥರೂ, ಮೆಡಿಕಲ್ ಮತ್ತು ಟಿ. ಬಿ. ವಾರ್ಡುಗಳ ಗೌರವ ವೈದ್ಯರೂ ಆಗಿದ್ದರು. ಮಂಗಳೂರಿನ ಕಸ್ತೂರ್ ಬಾ ಮೆಡಿಕಲ್ ಕಾಲೇಜಿನಲ್ಲಿ ಟಿ. ಬಿ. ಪ್ರೊಫೆಸರರೂ ಆಗಿದ್ದರು. 1961ರಲ್ಲಿ ನಿವೃತ್ತರಾದ ಮೇಲೆ ಮಂಗಳೂರು ಕೃಷ್ಣಾನ ಆಸ್ಪತ್ರೆಯಲ್ಲಿ ಸಲಹೆಗಾರರಾಗಿ ಮುಂದುವರಿದರು. ಅವರು ಇಂಡಿಯನ್ ಮೆಡಿಕಲ್ ಎಸೋಸಿಯೇಶನ್ನಿನ ಜ. ಕ. ಶಾಖೆಯ ಗೌರವ ಕಾರ್ಯದರ್ಶಿಯಾಗಿ ಅನಂತರ ಅಧ್ಯಕ್ಷರಾಗಿ ಆಸ್ಪತ್ರೆಟ್ಟರು. ಅವರು ದಕ್ಷವಕ್ತೃ ಸೈಂಟ್ ಜಾನ್ಸ್ ಅಂಬುಲೆನ್ಸ್ ಎಸೋಸಿಯೇಶನ್ನಿನ ಗೌರವ ಕಾರ್ಯದರ್ಶಿಗಳಾಗಿದ್ದರು. ಮಂಗಳೂರಿನ ಫೆಡರೇಶನ್ ಆಫ್ ವೆಲ್‌ಫೇರ್ ಪಬ್ಲಿಷರ್ ಇದರ ಅಧ್ಯಕ್ಷರಾಗಿ ಸಲಹೆಯ ಯಶಸ್ಸಿಗೆ ಹೆಗಲಾಗಿ ಬಹುಪೂಷಕರಾಗಿದ್ದರು. ಮಂಗಳೂರು ನಾಗರಿಕರ ಸಮಿತಿಯ ಅಧ್ಯಕ್ಷರಾಗಿ ಸಾರಸ್ವತ ವಿದ್ಯಾ ಸಂಸ್ಥೆಯ ಬೆಳವಣಿಗೆಯಲ್ಲಿ ಟಿಯ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ಡಾ|| ಉಮೇಶರಾಯರು ದ. ಕ. ಜಿಲ್ಲಾ ಟಿ. ಬಿ. ಎಸೋಸಿಯೇಶನ್ನಿನ ಸ್ಥಾಪನೆಗೆ ಕಾರಣೀಭೂತರಾಗಿದ್ದರು. ಅವರ ದಯೆಳತ್ವ ಮತ್ತು ಮಾನವತಾ ಮನೋಧರ್ಮ, ಶ್ರದ್ಧೆ ಮತ್ತು ಕಾರ್ಯಸಮರ್ಪಣಗಳು ಸ್ವಯಂ ಸೇವಾ ಕ್ಷೇತ್ರದಲ್ಲಿ ಪರಿಪೂರ್ಣವಾಗಿದ್ದವು ಅವರು ಟಿ.ಬಿ. ಉತ್ಸವ ಸಂದರ್ಭಗಳಲ್ಲಿ ಸ್ಪಷ್ಟಿಸಲ್ಪಡದ ನಮಿಯುವ ಕಾರ್ಯಕರ್ತರೂ ಆಗಿದ್ದರೆಲ್ಲದೆ ದ. ಕ. ಜಿಲ್ಲಾ ಸಂಘದ ಗೌರವ ಕಾರ್ಯದರ್ಶಿಯಾಗಿ ಟಿ. ಬಿ. ಎಸೋಸಿಯೇಶನ್ನಿಗೆ ಉತ್ತಮ ಸೇವೆ ಸಲ್ಲಿಸಿದರು. ಅವರು 1964ರಿಂದ 1970ರವರೆಗೆ ಭಾರತದ ಕ್ಷಯರೋಗ ಸಮಿತಿಯ ಸ್ಥಾಯಿ ಟೆಕ್ನಿಕಲ್ ಕಮಿಟಿಯ ಮೆಂಬರರಾಗಿದ್ದರು ಮತ್ತು ಕೇಂದ್ರ ಕಮಿಟಿಯ ಸದಸ್ಯರಾಗಿದ್ದರು. ಕಳೆದ ಎರಡು ವರ್ಷಗಳಿಂದ ವೈದ್ಯಕೀಯ ರಾಜ್ಯ ಕ್ಷಯರೋಗ ಸಲಹಾ ಸಮಿತಿಯ ಉಪಾಧ್ಯಕ್ಷರಾಗಿದ್ದರು. 1969ರಲ್ಲಿ ಭಾರತದ ಕ್ಷಯರೋಗ ಸಮಿತಿಯು ಆವರ ಟೆಕ್ನಿಕಲ್ ಕಮಿಟಿಯ ಅಧ್ಯಕ್ಷರನ್ನಾಗಿ ಆವರನ್ನು ಆಲಿಸಿಸಿ ಹಾಗೂ 25ನೇ ಕೃಯ ಮತ್ತು ಎದೆರೋಗಗಳ ರಾಷ್ಟ್ರೀಯ ಪರಿಷತ್ತಿನ ಅಧ್ಯಕ್ಷರನ್ನಾಗಿ ಚುನಾಯಿಸಿತು.

ಡಾ|| ಉಮೇಶರಾಯರ ನಧನದಿಂದ ಭಾರತದ ಕ್ಷಯರೋಗ ಸಮಿತಿಯು ಹಿರಿಯ ಕಾರ್ಯಕರ್ತನನ್ನು ಕಳಕೊಂಡಂತಾಯಿತು.

ಜಗನ್ನಾಥ ಎಜ್ಯುಕೇಶನ್ ಸೊಸ್ಯಾಟಿ (ರಿಜಿಸ್ಟರ್ಡ್)

ವಾರ್ಷಿಕ ಮುನ್ನಡೆ

ದಿ. ಪರೇಲ ಶ್ರೀ ಕೆ. ಜಗನ್ನಾಥ ಸೆಟ್ಟರವರು ಉಡುಪಿ ತಾಲೂಕಿನ ಕೊರಂಗ್ರಪಾಡಿ ಗ್ರಾಮಕ್ಕೆ ಸುಮಾರು ಪಾಲ್ವತ್ತು ವರ್ಷದ ಹಿಂದೆ ಪರೇಲಕನದ ಆಡಳಿತ ದಲ್ಲಿದ್ದು, ಗ್ರಾಮದ ಏಳ್ಗೆಗಾಗಿ ತುಂಬಾ ಶ್ರಮಪಡುತ್ತಿದ್ದರು. ದಿವಂಗತರ ಸ್ಮರ ಣಾರ್ಥವಾಗಿ, ಕೆವ ಎಸ್ಟರು ಶ್ರೀ ಸಂತಾನ ಜೆ. ಸೆಟ್ಟರವರು ಮುಂಬಾಯಿ ಮಹಾನಗರ ದಲ್ಲಿ ಈ ವೇಲಿನ ಸಂಸ್ಥೆಯನ್ನು ತಾ 31—5—1969 ರಂದು ಸ್ಥಾಪಿಸಿದರು.

ಕೊರಂಗ್ರಪಾಡಿ ಗ್ರಾಮದ ಮತ್ತು ಆಸ್ಪ ಪಕ್ಕದ ಇನ್ನಿತರ ಕನ್ನಡ ಶಾಲಾ ಬಡ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಸಲುವಾಗಿಯೂ ಇನ್ನಿತರ ತರದ ಸಹಾಯ ನೀಡುವರೆಯೂ ಈ ಸಂಸ್ಥೆ ಯನ್ನು ಸ್ಥಾಪಿಸಲಾಯಿತು.

ಶ್ರೀ ಎಸ್. ಜೆ. ಸೆಟ್ಟಿ.
ಸ್ಥಾಪಕ-ಅಧ್ಯಕ್ಷ

ಶ್ರೀ ಜೆ. ಸೆಟ್ಟರು, ಮುಂಬಾಯಿಯಲ್ಲಿರುವ ಹಲವಾರು ಸಂಘ ಸಂಸ್ಥೆಗಳ ಕಾರ್ಯಕಲಾಪಗಳಲ್ಲಿ ಭಾಗವ ಹಿಸಿ ಅವುಗಳ ಏಳ್ಗೆಗಾಗಿ ತುಂಬಾ ಶ್ರಮ ಪಡುತ್ತಿರುವವರು. ಈ ಸೇವಾಭಾವದ ಕಶ್ಚಿತ್ವಶಾಲಿ ತರುಣರನ್ನೆ ಸಂಸ್ಥೆಯ ಪ್ರಥಮ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು. ಈ ಸಂಸ್ಥೆಯು, ಅವರ ಮಾರ್ಗದರ್ಶನದಿಂದ ದಿನೇ ದಿನೇ ಅಭಿವೃದ್ಧಿಗೊಳ್ಳುತ್ತಾ ಒಂದು ವರ್ಷದ ಅವಧಿಯಲ್ಲೇ ಉಚ್ಚ ವರ್ಗದ ಸಂಸ್ಥೆಯ ಸ್ಥಾನಕ್ಕೆ ಮುಟ್ಟಿರುವುದೆಂದು ತಿಳಿಸಲು ತುಂಬಾ ಅಭಿಮಾನವೆನಿಸುತ್ತದೆ.

ಈ ಸಂಸ್ಥೆಯು ಸನ್ 1969—70ನೇ ವರ್ಷಕ್ಕೆ ಈ ಕೆಳಗೆ ನಮೂದಿಸಿದಂತೆ ಸಹಾಯವನ್ನಿತ್ತಿರುತ್ತದೆ:

ಕೊರಂಗ್ರವಾಡಿ ಬೋರ್ಡು ಎಲಿಮೆಂಟರಿ ಶಾಲಾ ಬಡ ವಿದ್ಯಾರ್ಥಿಗಳ ಪುಸ್ತಕ, ವಸ್ತ್ರ ಇತ್ಯಾದಿಗಳಿಗೆ ರೂ. 200-00

Vನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಮೊದಲನೇ ಸ್ಥಾನ ಪಡೆದ ವಿದ್ಯಾರ್ಥಿಗೆ ಬಹುಮಾನ ರೂಪವಾಗಿ ರೂ. 21-00

ಮಣಿಪುರ ಬೋರ್ಡು ಎಲಿಮೆಂಟರಿ ಶಾಲೆಯ IVನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಮೊದಲನೇ ಸ್ಥಾನ ಪಡೆದ ವಿದ್ಯಾರ್ಥಿಗೆ ಬಹುಮಾನ ರೂಪವಾಗಿ ರೂ. 21-00

ಮಣಿಪುರ ಹೈಯರ್ ಎಲಿಮೆಂಟರಿ ಶಾಲೆಯ VIIನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಮೊದಲನೇ ಸ್ಥಾನ ಪಡೆದ ವಿದ್ಯಾರ್ಥಿಗೆ ಬಹುಮಾನ ರೂಪವಾಗಿ ಕೊಟ್ಟ ಧನಸಹಾಯ ರೂ. 31-00

ಸುಭೋದಿನಿ ಹೈಯರ್ ಎಲಿಮೆಂಟರಿ ಶಾಲೆಯ VIIನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಮೊದಲನೇ ಸ್ಥಾನ ಪಡೆದ ವಿದ್ಯಾರ್ಥಿಗೆ ಬಹುಮಾನ ರೂಪವಾಗಿ ಕೊಟ್ಟ ಧನಸಹಾಯ ರೂ. 31-00

ಪೆರಂಪಳ್ಳಿ ಹೈಸ್ಕೂಲ್, ಆಲೆವೂರು S.S.L.C. ಪರೀಕ್ಷೆಯಲ್ಲಿ ಮೊದಲನೇ ಸ್ಥಾನ ಪಡೆದ ವಿದ್ಯಾರ್ಥಿಗೆ ಬಹುಮಾನ ರೂಪವಾಗಿ ಕೊಟ್ಟ ಧನಸಹಾಯ ರೂ. 51-00

ಈ ಮೇಲಿನ ಬಹುಮಾನಗಳನ್ನು "ಕೊರಂಗ್ರಪಾಡಿ ಪರೇಲ ಶ್ರೀ ಕೆ. ಜಗನ್ನಾಥ ಸೆಟ್ಟಿ ಮೆಮೋರಿಯಲ್ ಪ್ರೈಜ್" ಎಂಬ ಆಭಿಧಾನದಲ್ಲಿ ಕೊಡಲಾಯಿತು.

ಈ ಸಂಸ್ಥೆಯು ಆರ್ಥಿಕ ಸ್ಥಿತಿಯಲ್ಲಿ ತುಂಬಾ ಪ್ರಗತಿಯನ್ನೆಗೊಂಡ ಕಾರಣ ಸನ್ 1970-71 ನೇ ಸಾಲಾ ವರ್ಷಕ್ಕೆ ಕೆಳಗೆ ನಮೂದಿಸಿದ ಪ್ರಕಾರ ಉತ್ತಮ ಬಡ ವಿದ್ಯಾರ್ಥಿಗಳಿಗೆ ಸಹಾಯ ಧನ ಕೊಡುವರೆ ಕಳೆದ ವಿಂಟಿಂಗಿನಲ್ಲಿ ನಿಶ್ಚಯಿಸಿರುತ್ತದೆ

ಕೊರಂಗ್ರಪಾಡಿ ಬೋರ್ಡು ಎಲಿಮೆಂಟರಿ ಶಾಲೆಗೆ ಒಂದನೇ ಕ್ಲಾಸಿನಿಂದ ಏಳನೇ ಕ್ಲಾಸಿನ ವರೆಗೂ ವಾರ್ಷಿಕ ಪರೀಕ್ಷೆಯಲ್ಲಿ ಮೊದಲನೇ ಬಹುಮಾನ ರೂಪವಾಗಿ ಧನಸಹಾಯ ರೂ. 51-00

ಮಣಿಪುರ ಹೈಯರ್ ಎಲಿಮೆಂಟರಿ ಶಾಲೆಯ VIIನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಮೊದಲನೇ ಸ್ಥಾನ ಪಡೆದ ವಿದ್ಯಾರ್ಥಿಗೆ ಬಹುಮಾನ ರೂಪವಾಗಿ ಧನಸಹಾಯ ರೂ. 31 00

ಮಣಿಪುರ ಬೋರ್ಡ ಎಲಿಮೆಂಟರಿ ಶಾಲೆಯ IVನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆಯುವ ವಿದ್ಯಾರ್ಥಿಗಳಿಗೆ ಬಹುಮಾನ ರೂಪವಾಗಿ ರೂ. 21-00

ಪೆರಂಪಳ್ಳಿ ಹೈಸ್ಕೂಲ್, ಆಲೆವೂರು, S. S. L. C. ಪರೀಕ್ಷೆಯಲ್ಲಿ ಮೊದಲನೇ ಸ್ಥಾನ ಪಡೆದ ವಿದ್ಯಾರ್ಥಿಗೆ ಬಹುಮಾನ ರೂಪವಾಗಿ ರೂ. 51-00

ಸುಭೋದಿನಿ ಹೈಯರ್ ಎಲಿಮೆಂಟರಿ ಶಾಲೆ, ಆಲೆವೂರು VIIನೇ ತರಗತಿಯಲ್ಲಿ ಪ್ರಥಮ ಸ್ಥಾನ ಪಡೆಯುವ ವಿದ್ಯಾರ್ಥಿಗಳ ಸಲುವಾಗಿ ರೂ. 31-00

ಕೊರಂಗ್ರಪಾಡಿ ಬೋರ್ಡ್ ಎಲಿಮೆಂಟರಿ ಶಾಲಾ ಬಡ ವಿದ್ಯಾರ್ಥಿಗಳ ಸಲುವಾಗಿ ಮಂಜೂರಾದ ಸ್ಕಾಲರ್‌ಶಿಪ್ ರೂಪವಾಗಿ ವಿನಿಯೋಗಿಸಲ್ಪಟ್ಟ ಹಣ ರೂ. 250-00

ದಕ್ಷಿಣ ಕನ್ನಡ ಜಿಲ್ಲೆಯ ಶಾಲಾ S. S. L. C. ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳ ಸಲುವಾಗಿ ಬಹುಮಾನ ರೂಪವಾಗಿ ವಿನಿಯೋಗಿಸಲ್ಪಟ್ಟ ಹಣ ರೂ. 101-00

ಮತ್ತು

ಕೊರಂಗ್ರಪಾಡಿ ಬೋರ್ಡ್ ಎಲಿಮೆಂಟರಿ ಶಾಲಾ ಕಟ್ಟಡಕ್ಕೆ ಕೊಡಲು ನಿಶ್ಚಯಿಸಿರುವ ಧನ ಸಹಾಯ ಮೊಬಲಗು ರೂ. 4000-00

ಮುಂದಿನ ವರ್ಷದಿಂದ ಬಡ ವಿದ್ಯಾರ್ಥಿಗಳ ಸಲುವಾಗಿ ಇನ್ನೂ ಹೆಚ್ಚಿನ ಸಹಾಯ ನೀಡುವರೆ ಈ ಸಂಸ್ಥೆಯ ಪ್ರತಿಯೊಬ್ಬ ಸದಸ್ಯನೂ ಉತ್ಸಾಹದಿಂದ ಶ್ರಮಪಡುತ್ತಿರುವರು.

ಈ ಸಂಸ್ಥೆಯು ಆಡಳಿತಾ ಕ್ರಮಾಕ್ಷರವಾಗಿ, ಮೊದಲಿನ ವರ್ಷದ ಸದಸ್ಯರೇ 1970-71ರಲ್ಲಾ ಸಹಿಯಿಕ್ಕಿದಂದಿಂದ ಪುನಃ ನೇಮಿಸಲ್ಪಟ್ಟಿದ್ದರಿಂದ, ಅವರೇ ಮುಂದಿನ ಆಡಳಿತಾ ಮೆಂಬರ್‌ರಾಗಿ ಉಳಿದಿರುವರೆಂದು ತಿಳಿಸಲು ಅತ್ಯಂತ ಅಭಿಮಾನವಾಗುತ್ತಿದೆ. ಅವರ ಹೆಸರು ಈ ಕೆಳಗೆ ಕೊಡಲಾಗಿದೆ:—

1)	ಶ್ರೀಮಾನ್	ಎಸ್. ಜೆ. ಸೆಟ್ಟಿ	—ಸ್ಥಾಪಕ-ಅಧ್ಯಕ್ಷ
2)	,,	ಎಚ್. ಎಸ್. ರಾವ್	—ಉಪಾಧ್ಯಕ್ಷ
3)	,,	ಎಸ್. ಡಿ. ಬಸ್ರೂರ್	—ಗೌ. ಪ್ರಧಾನ ಕಾರ್ಯದರ್ಶಿ
4)	,,	ಜಿ. ಬಿ ಸೆಟ್ಟಿ	—ಕೋಶಾಧಿಕಾರಿ
5)	,,	ಪಿ. ಸಿ. ಕೋಟ್ಯಾನ್	—ಉಪ-ಕಾರ್ಯದರ್ಶಿ
6)	,,	ಎನ್. ಎಸ್. ಸೆಟ್ಟಿ	—ಸದಸ್ಯರು
7)	,,	ವಿ. ಎಲ್. ಆಪ್ಟೆ	— ,,
8)	,,	ಟಿ. ಬಿ. ಸೆಟ್ಟಿ,	— ,,
9)	,,	ಸಿ. ಕೆ ಸುಬ್ರಮಣ್ಯಂ	— ,,
10)	,,	ಎಸ್. ಎಸ್. ಹೆಜ್ಮಾಡಿ	— ,,
11)	,,	ಎಸ್. ಎಸ್. ರಾವ್	— ,,
12)	,,	ಎಸ್. ವಿ. ಭಟ್	— ,,
13)	,,	ಬಿ. ಎಸ್. ಸೆಟ್ಟಿ	— ,,
14)	,,	ಸಿ. ಆರ್. ಪನಿಕರ್	— ,,
15)	,,	ಕೆ. ವಿ. ಸೆಟ್ಟಿ	— ,,
16)	ಶ್ರೀಮತಿ	ವಿಮಲಾಕ್ಷಿ ಎಸ್. ಸೆಟ್ಟಿ	— ,,
17)	,,	ಪ್ರೇಮಲತಾ ಜಿ. ಸೆಟ್ಟಿ	— ,,

ಕೊರಂಗ್ರಪಾಡಿ ಗ್ರಾಮದಿಂದ ನೇಮಿಸಲ್ಪಟ್ಟ ಸ್ಕಾಲರ್‌ಶಿಪ್ ಎಡ್ವೈಸರಿ ಕಮಿಟಿ ಸದಸ್ಯರು:—

1) ಕೊರಂಗ್ರಪಾಡಿ ಪಂಚಾಯತ್ ಬೋರ್ಡಿನ ಅಧ್ಯಕ್ಷರಾಗಿರುವ— ಶ್ರೀಮಾನ್ ಕೆ. ಬಾಲಕೃಷ್ಣ ಸೆಟ್ಟಿ.
2) ಕೊರಂಗ್ರಪಾಡಿ ಶಾಲಾ ಮುಖ್ಯೋಪಾಧ್ಯಾಯಿನಿ— ಶ್ರೀಮತಿ ಕೆ. ರಮಾಬಾಯಿ.
3) ಕೊರಂಗ್ರಪಾಡಿ ಗ್ರಾಮದ ಪರೇಲ್—ಶ್ರೀಮಾನ್ ಕೆ. ಶ್ಯಾಮ ಸೆಟ್ಟಿ ಮತ್ತು
4) ದಕ್ಷಿಣ ಕನ್ನಡ ಜಿಲ್ಲಾ ಪ್ರತಿನಿಧಿಯಾಗಿ — ಶ್ರೀಮಾನ್ ಕೆ. ಸುಂದರ ಸೆಟ್ಟಿ (ಕೊರಂಗ್ರಪಾಡಿ ಶಾಲಾ ಉಪಾಧ್ಯಾಯರ)

(ಮುಂದಿನ ಪುಟದಿಂದ)

ದ್ದಾರೆ; ಮೊದಲಿಬ್ಬರು ಮುಖ ಕರಿಮಾಡಿ ಹೋದಂತೆ ಈಕೆಯೂ ಹೋಗುತ್ತಾರೆ. ಶ್ರೀಮಂತಿಕೆ ಯಜಮಾನಿಕೆಯಲ್ಲೇ ಬೆಳೆದು ಬಂದ ಶ್ರೀಮತಿಗೆ ಒಲೆ ಮುಂದಲಬಂಬಿ ತೀಡುಹೊಗೆಯೆದ್ದೊಡನೆಯೇ ದೂರ ಹೋಗುವುದು ಅರಿವಿನ್ನಭಾವ, ದೇಶದ ಪ್ರಗತಿಗಾಗಿ ತನ್ನ ಬುದ್ಧಿಶಕ್ತಿಯನ್ನು ಬಳಸುವುದನ್ನು ಬಿಟ್ಟು ರಾಜ್ಯಸರ್ಕಾರಗಳನ್ನು ಉರುಳಿಸಲು ಆದನ್ನು ಅಪವ್ಯಯ ಮಾಡುವುದು ಶ್ರೀಮತಿಗೆ ಸಲ್ಲದೆಂದು ತಿಳಿಹೇಳದೂ ಕೇಳದ ಶ್ರೀಮತಿ ಗಾಂಧಿಗೆ ಕನ್ನಡಿಗರು ಈ ಬಗ್ಗೆ ಚಿಕ್ಕಾಗೇ ಬುದ್ಧಿ ಕಲಿಸಬೇಕು.

ಯಕ್ಷಗಾನ

ಪೇಲಂಪಾಡಿ ಜನಾರ್ದನ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ತಾರೀಖು 4.7.70ರಂದು 'ರಾವಣವಧೆ' ಎಂಬ ಕಥಾ ಭಾಗದ ಯಕ್ಷಗಾನ ಕೂಟವು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಮಂಡಳಿಯ ವರಿಂದ ಪ್ರದರ್ಶಿಸಲ್ಪಟ್ಟಿತು.

ಶ್ರೀಯುತ ಬಿ ಗೋವಿಂದ ಭಟ್ಟರು ಅತಿಥಿಗಳಾಗಿದ್ದ ಈ ಕಾರ್ಯಕ್ರಮದಲ್ಲಿ ಹಲವು ಕಲಾವಿದರು ಭಾಗವಹಿಸಿದ್ದರು.

ದಿನಕರರಾಯರ ನಿಧನ

ಉಡುಪಿ, ಕೃಷಿ ಇಲಾಖೆಯ ನಿವೃತ್ತ ಡಿಪ್ಯುಟಿ ಡೈರೆಕ್ಟರ್ ಶ್ರೀ ಕೆ. ದಿನಕರರಾಯರು ತಾ. 10—7—70ರಂದು ನಿಧನರಾದರು. ಇವರು ನಿವೃತ್ತರಾದ ಮೇಲೆ ಬೆಂಗಳೂರಿನಲ್ಲಿ ಖಾಸಗಿ ಸಂಸ್ಥೆಯೊಂದರಲ್ಲಿ ಸೇವೆ ಸಲ್ಲಿಸುತ್ತಿದ್ದರು ಅಲ್ಲಿಂದ್ಯಾಕೆ ಕಮಿತ್ತ ಕೆಲಸ ಕ್ಕೆ ಜಿಗಿದು ಊರಿಗೆ ಬಂದವರು ಸ್ಥಳೀಯ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ದಿವಂಗತರು ನಿವೃತ್ತ ಡಿಪ್ಯೂಟಿ ಅಲಿಕ್ಟರ್ ರಾವ್ ಸಾಹೇಬ್ ಕಲ್ಯಾಣಪುರ ಕೃಷ್ಣಯ್ಯನವರ ಪ್ರಥಮ ಪುತ್ರರು.

ಇ. ಎಮ್. ಫಾರ್ಸ್ಟರ್

(ಎರಡನೇ ಪುಟದಿಂದ)

ೀಯ 'ಉತ್ಸವ'ವೊಂದರ ವರ್ಣನೆ ನೊಂದಿಗೆ ಕಾದಂಬರಿ ಮುಗಿಯುತ್ತದೆ. ಈ ಕಾದಂಬರಿಯಲ್ಲಿ "ವಜೀದಿಗಳು" 'ಗವಿಗಳು' "ದೇವಾಲಯಗಳು" ಎಂಬ ಮೂರು ಭಾಗಗಳಿವೆ. ಹೊರ ಪೋಟ ಕ್ಕೆ ಕಾದಂಬರಿಯು ಮಾನವಸ್ಥಿತಿಗೊಳಿ ದ ಘಟನೆಗಳ ಸಮೂಹದಂತೆ ಕಾಣಿಸು ವುದಾದರೂ ಅದಕ್ಕೆ ಅಂತರಿಕವಾದ ಗೂ ನಾರ್ಥವಿದೆ.

ಫಾರ್ಸ್ಟರ್ ವೈಯಕ್ತಿಕ ಸಂಬಂಧ ಸಾ ಮಾಜಿಕ ಸ್ಥಿತಿಗಳೆರಡ ಅಕ್ಷರಾದಲೇಖಿಕರೆಂಬು ವನ್ನು ಭಾರತಮಾರ್ಗ ಸಿದ್ಧಪಡಿಸುತ್ತದೆ. ಬಳುವ ಮತ್ತು ಅಳಿಸಿಕೊಳ್ಳುವವರ ನ ಡೆ ಪರಸ್ಪರ ತಿಳಿವಳಿಕೆ, ಅಂತರಿಕ ಸೊಂದಾಣಿಕೆ ಉಂಟಾಗಿದೆಯೆ? ಇದಕ್ಕೆ ಸುತ್ತರ—"ಸಾಧ್ಯವಿಲ್ಲ". ಭಾರತದ ಕರುಣ ಡಾ। ಅಜೀಜ್ ಮತ್ತು ಇಂಗ್ಲೆಂಡಿ ಂದ ಬಂದಫೀಲ್ಡಿಂಗ್ ಗೆಳೆಯರಾಗಲು ಬಯಸಿ ತ್ತಾರೆ. ಆದರೆ ನಿಜವಾದ ಗೆಳೆತನ ಬೆಳೆಸಲು ಅವರಿಂದ ಸಾಧ್ಯವಾಗುವುದಿಲ್ಲ ಈ ಅಂತರಿಕ ಹೊಂದಾಣಿಕೆಯ ಅಸಾಧ್ಯ ತೆಯನ್ನು ಕೊನೆಯ ಅಧ್ಯಾಯದಲ್ಲಿ ಸಂ ದರವಾಗಿ ಚಿತ್ರಿಸಲಾಗಿದೆ. 'ಭಾರತ ಮಾ ರ್ಗ'ದ ಪೆಂಗ್ವಿನ್ ಆವೃತ್ತಿಯಲ್ಲಿ ಲೇಖ ರೂಪೇಮೆಂಬಂತೆ ವಿಲಿಯಮ್ ಎಂಪ್ಸ್ ನ್ನರು ಬಿಡಿಸಿದ ಇಂದೋರಿನ ಸೂರ್ಯನಿ ಯ ಮೇಲಣ ಕಲ್ಲಿನ ಸೇತುವೆಯ ಚಿತ್ರ ಒದೆ.

ಭಾರತಮಾರ್ಗವನ್ನು ನಾವು ಪುನರ್ಶಾ ಸ್ತ್ರದ ಹಿನ್ನೆಲೆಯಿಂದ ನೋಡಬೇಕು. ಪ್ರ ಸಿದ್ಧ ನವ್ಯವಿಮರ್ಶಕ ಎಫ್.ಆರ್.ಲೆವಿಸ್ ಹೇಳುವಂತೆ ಭಾರತಮಾರ್ಗ, ಎಲ್ಲ ವಿಮರ್ಶೆಯನ್ನು ಲಕ್ಷಿಸಿಯೂ ಒಂದು ಚಿರಕೃತಿ; ನಮ್ಮ ಕಾಲದ ಒಂದು ಮಹತ್ವದ ದಸ್ತಾ ನೇಡು ಮೂಕ್ಯವಲ್ಲ, ನಿಜವಾಗಿಯೂ ನು ರಿಯಲಾಗದಂಥ ಒಂದು ಸಾಹಿತ್ಯಕೃತಿ."

ಇತರ ಕೃತಿಗಳು:—

ಫಾರ್ಸ್ಟರ್ ವಿಮರ್ಶಕರೂ ಆಗಿದ್ದರು. "ವರ್ಡ್ಸ್‌ವರ್ತ್" "ಅಜಾ ಮಥೇಯತ್ವ" ಇವು ಅವರ ವಿಮರ್ಶಾ ಗ್ರಂಥಗಳು. "ಆಸ್ಪೆಕ್ಟ್ಸ್ ಆಫ್ ದಿ ನಾ ವೆಲ್" ಅವರು ನೀಡಿದ ಕ್ಲಾರ್ಕ್ ಸ್ಮಾರ ಕ ಭಾಷಣಗಳ ಸಂಗ್ರಹ. ಈ ಚಿಕ್ಕ ಪುಸ್ತಕಕ್ಕೆ ಒಂದು ಪ್ರಸಿದ್ಧ ವಿಮರ್ಶಾ ಗ್ರಂಥವಾಗಿದೆ. ಇಂಗ್ಲೀಷ್ ಗದ್ಯದ ಬೆಳ ವಣಿಗೆ (ಗದ್ಯಲೇಖಕರ ಗದ್ಯಶೈಲಿ ಎರಡು ದಶಕಗಳ) ಯ ಕುರಿತು ಫಾ ರ್ಸ್ಟರ್ ಒಂದು ವಿಮರ್ಶೆ ಬರೆದಿದ್ದಾರೆ. "ಟಾಕಿಂಗ್ ಟು ಇಂಡಿಯಾ" ಭಾರತ ವನ್ನು ಕುರಿತಾದ ಅವರ ಭಾಷಣಗಳ ಸಂಗ್ರಹ. "ವಾಟ್ ಐ ಬಿಲೀವ್" ಭಾರತವ ನ್ನು ಕುರಿತಾದ ಅವರ ಲೇಖನ ಸಂಗ್ರ ಹವಾಗಿದೆ. ತನ್ನ ವಿಶ್ವರಾಗಿದ್ದ ಲೂಯಿ ಸ್ ಡಿಕಿನ್‌ಸನ್‌ರ ಜೀವನ ಚರಿತ್ರೆಯನ್ನು ಫಾರ್ಸ್ಟರ್ ಬರೆದಿದ್ದಾರೆ.

ವಿಚಾರವಾದಿ

ಅವರು ನಂಬಿಕೆಗಳನ್ನು ನಂಬಿಕೊಂಡಿ ಲ್ಲ. ಇಂದಿನ ಜಗತ್ತಿನಲ್ಲಿ ತಾರ್ಕಿಕ, ಶಾಂತ ತೆ, ಸಹಾನುಭೂತಿಗಳು ಅದೃಶ್ಯವಾಗುತ್ತಿ ವೆಯೆಂದು ಅವರು ಮಾರ್ಗದರ್ಶಿಸುತ್ತಾರೆ. "ಜಗತ್ತು ಇಂದಿಗಿಂತ ಮುಂದೆ ಒಳ್ಳೆಯ ದಾಗಲು ಸಾಧ್ಯವಿಲ್ಲ" ಎನ್ನುವ ಫಾರ್ಸ್ಟರ್ ನಿರಾಶಾವಾದಿಯಲ್ಲ. ಅವರು ಪ್ರಜಾ ಪ್ರಭುತ್ವವನ್ನು ಬೆಂಬಲಿಸುತ್ತಾರೆ. ಇದಕ್ಕೆ ಎರಡು ಕಾರಣಗಳನ್ನು ಕೊಡುತ್ತಾರೆ. ಒಂದನೆಯದಾಗಿ ಅದು ವಿಭಿನ್ನತೆಯನ್ನು ಒಪ್ಪಿಕೊಳ್ಳುತ್ತದೆ. ಎರಡನೆಯದಾಗಿ ಅದು ವಿಮರ್ಶೆಗೆ ಅವಕಾಶ ನೀಡುತ್ತದೆ. ಫಾರ್ಸ್ಟರ್ ಉದಾರ ಪ್ರವೃತ್ತಿಯವರು ವಿಕಾಸವಾದಿಗಳು.

ವ್ಯಕ್ತಿತ್ವ

ತನ್ನ ಎಂಬತ್ತನೆಯ ಹುಟ್ಟು ಹಬ್ಬದ ಸಂದರ್ಭದಲ್ಲಿ ಬಿ. ಬಿ. ಸಿ. ಸಂದರ್ಶನ ವೊಂದರಲ್ಲಿ ಫಾರ್ಸ್ಟರ್ ಹೀಗೆಂದಿದ್ದರು: 'ನಾನು ಬರೆಯಬೇಕೆಂದು ಕೊಂಡಷ್ಟು ಬರೆಯಲಾಗಲಿಲ್ಲ....ಎರಡು ಕಾರಣಗಳ ಗಾಗಿ ನಾನು ಬರೆಯುತ್ತೇನೆ. ಭಾಗಶಃ ಹಣಕ್ಕಾಗಿ, ನಾನು ಗೌರವಿಸುವ ಜನರ ಗೌರವವನ್ನು ಗಳಿಸುವುದಕ್ಕಾಗಿ. ನಾನೇನು ಮಹಾಕಾದಂಬರಿಕಾರನಲ್ಲ' ಈ ವಿನಯದ ಮಾತು ಅವರ ವ್ಯಕ್ತಿತ್ವಕ್ಕೆ ಬಣ್ಣ ಕೊಡುತ್ತದೆ. 'ಭಾರತ ಮಾರ್ಗ'ವನ್ನು ಚಿತ್ರೀಕರಿಸಬೇಕೆಂದು ಚಿಕ್ಕ ನಿರ್ಮಾಪಕರು ಆಶಿಸಿದ್ದರು. ತನ್ನ ಕಾದಂಬರಿಯನ್ನು ಚಿತ್ರೀಕರಣಕ್ಕಾಗಿ ಮಾರಲು ಫಾರ್ಸ್ಟರ್ ನಿರಾಕರಿಸಿದರು.

ಗೆಳೆತನ, ವೈಯಕ್ತಿಕ ಸಂಬಂಧ, ಅಂ ತರಿಕಹೊಂದಾಣಿಕೆಗಳಿಗಾಗಿ ಬಾಳಿದ ಫಾ ರ್ಸ್ಟರ್ ಗೆಳೆಯರಬಳಿಯಲ್ಲೇ ಕೊನೆಯು ಸಿರೆಳೆದರು. ಇಂಗ್ಲೀಷ ಮಿಡ್‌ಲ್ಯಾಂಡ್ಸ್ ನ ತಮ್ಮ ಸ್ನೇಹಿತರ ಜೆ ತೆಕಾರಣ ತೆರಳಿ ದ್ದ ಅವರು 7-6-1970ರಂದು ತನ್ನ ತೊಂಬತ್ತನೆಯ ವಯಸ್ಸಿನಲ್ಲಿ ನಿಧನ ರಾದರು.

ತನ್ನ ಭಾರತಮಿತ್ರತ್ವದಲ್ಲಿ ವ್ಯಕ್ತವೀ ಯ ತೆಯ ನ್ನೇ ವೆರೆದಿದ್ದ ಫಾರ್ಸ್ಟರ್ ತೀರಿ ಕೊಂಡದ್ದರಿಂದ ಭಾರತ ತನ್ನ ನಿಜವಾದ ಸ್ನೇಹಿತನೊಬ್ಬನನ್ನು ಕಳೆದುಕೊಂಡಿತು. ಸಾಹಿತ್ಯ ಪ್ರಪಂಚದ ಮಹಾಕಾದಂಬರಿ ಕಾರರೊಬ್ಬರು ಇನ್ನಿಲ್ಲವಾದರು. ವಿಚಾರ ವಾದಿಯೊಬ್ಬರು ಪ್ರಪಂಚಗಳಿದರು.

ಸರೋಜಿನಿ ನಾಯ್ಡುರನ್ನು ಮೆಚ್ಚಿಕೊಂಡ ತಾಜಿಕ್ ಮಹಿಳೆ

ನವದೆಹಲಿ, ಜೂನ್ 26, 1970. "ಸರೋಜಾ ನಾಯುಡು ಅವರು ಕೇವಲ ದೊಡ್ಡ ಕವಯಿತ್ರಿ ಮತ್ತು ರಾಜಕಾರಣಿ ಮಾತ್ರವೆ ಆಗಿರಲಿಲ್ಲ, ಅಸ್ಸೇ ಹಿರಿಯ ಮಹಿಳೆ ಆಗಿದ್ದರು. ಆದಷ್ಟೇ ಕೇಸು ಕಾರ್ಯಗಳಿದ್ದರೂ ಅವರು ತಮ್ಮ ಮನೆ ಮತ್ತು ಕುಟುಂಬಗಳನ್ನು ನೋಡಿಕೊಳ್ಳಲೂ ಪುರುಸೊತ್ತು ಮಾಡಿಕೊಳ್ಳುತ್ತಿದ್ದರು. ಇದೇ ನನ್ನನ್ನು ಆಕರ್ಷಿಸಿದ್ದು" ಎಂಬುದಾಗಿ ತಾಜಿಕಿಸ್ತಾನದ ಸೆಶೋಧಕ ವಿದುಷಿ ಶ್ರೀಮತಿ ಮಲೋಹರ್ ಶಹೋಬೋವಾ ಹೇಳಿದ್ದಾರೆ.

ಶಹೋಬೋವಾ ಅವರಿಗೆ ಕೇವಲ ಐದು ವರ್ಷಗಳ ಹಿಂದಷ್ಟೇ ಈ ಮಹಾ ಕವಯಿತ್ರಿಯಬಗ್ಗೆ, ರಾಜಕಾರಣಿಯಬಗ್ಗೆ—ಸರೋಜಿನಿ ನಾಯುಡು ಅವರಬಗ್ಗೆ—ಅಷ್ಟಕ್ಕೆ ಉಂಟಾಯಿಸಿ. ಮಹಾತ್ಮಾ ಗಾಂಧಿ ಮತ್ತು ಜವಹರಲಾಲ್ ನೆಹ್ರೂ ಅವರ ಕೃತಿಗಳನ್ನು ಓದಿತ್ತಿದ್ದಾಗ ಪದೆ ಪದೆ ಸರೋಜಿನಿ ನಾಯುಡು ಅವರ ಹೆಸರು ಪ್ರಸ್ತಾಪಕ್ಕೆ ಬರುತ್ತಿದ್ದುದನ್ನು ಕಂಡು ಅವರ ಬಗ್ಗೆ ಹೆಚ್ಚಿನ್ನು ತಿಳಿಯಬಯಸಿದರು.

ಭಾರತಕ್ಕೆ ಬರುವ ಮುನ್ನ ಶ್ರೀಮತಿ ಶಹೋಬೋವಾ ಅವರು ಸರೋಜಿನಿ ನಾಯುಡು ಅವರ ಕೆಲವ ಕವನಗಳನ್ನು ತಾಜಿಕ್ ಕವಿತೆಗಳು ಮತ್ತೂ ಅವರ ಕವಿತಾನುವಾದಗಳ ಸಂಗ್ರಹವನ್ನು ಪ್ರಕಟಿಸಿದ್ದರು. ಪ್ರವಾಸ ದೊಡನೆ ಇದರ ಪ್ರತಿಗಳೆಲ್ಲ ಮಾರಾಟವಾಗಿ ಹೋದವಂತೆ. ಸೋವಿಯೆಟ್ ಜನರಿಗೆ ಭಾರತೀಯ ಸಾಹಿತ್ಯದತ್ತ ಆಸಕ್ತಿಯನ್ನು ತೋರಿಸಲು ಇದೊಂದೆ ಅವರು ತಿಳಿಸಿದರು.

ಶ್ರೀಮತಿ ಶಹೋಬೋವಾ ಅವರು ಸರೋಜಿನಿ ನಾಯುಡು ಅವರಬಗ್ಗೆ ಸಾಧ್ಯವಿರುವಷ್ಟು ಹೆಚ್ಚು ಮಾಹಿತಿ ಸಂಗ್ರಹಿಸಲು ಭಾರತಕ್ಕೆ ಫೆಬ್ರುವರಿ 1ರಂದು ಬಂದಿದ್ದು ಆಗಸ್ಟ್ ತಿಂಗಳ ಮಧ್ಯದ ವರೆಗೂ ಇದ್ದಿರುತ್ತಾರೆ. ಶ್ರೀಮತಿ ನಾಯುಡು ಅವರ ಬಗ್ಗೆ ಪರಿಚಯವನ್ನು ಭೇಟಿ ಮಾಡಿ ಮಾತುಕತೆ ಕಡೆಸಿದುದಕ್ಕಾಗಿ ಅವರಿಗೆ ತುಂಬಾ ಸಂತೋಷವಾಗಿದೆ. ಅವರು ಈಗಾಗಲೆ ಮುಂಬೈ ಮತ್ತು ಜೈದರಾಬಾದು ಪಟ್ಟಣಗಳಿಗೆ ಭೇಟಿ ಕೊಟ್ಟು ಬಹಳಷ್ಟು ಮಾಹಿತಿ ಸಂಗ್ರಹಿಸಿದ್ದಾರೆ.

—ಎ. ಪಿ. ಎನ್.


ಮುಂದಿನ ಮುಗುಳ್ನಗೆಯ
ಮೊದಲು
ಮೊದಲು
ಮೊದಲು

NAVAYUGA 16—7—1970
Registered with the Registrar of News Papers for India under No. R. N. 3546/'67

REGD. No. B. Gr 178
LICENCE No. 33;
Licensed to Post without Prepayment

ಅಮೆರಿಕದ ಮಾತೃಭೂಮಿ

ಆಫ್ರಿಕೆಯ ಕತ್ತಲಲ್ಲಿ

ಆಫ್ರಿಕೆಯ ಕತ್ತಲೆಯ ಖಂಡವೆಂಬ ಹೆಸರಿಂದ ಇನ್ನೂ ದೂರವಾಗಿಲ್ಲ. ಆದರೆ ಇತ್ತೀಚೆಗೆ ಬಹಳ ಹಿಂದೆಯೇ ಭಾರತೀಯ ಸಂಸ್ಕೃತಿ ಹರಡಿತ್ತು. ಯುರೋಪೀಯರು ವಸಾಹತುಶಾಹಿ ಆಳ್ವಿಕೆಯ ನಟ್ಟವಾದ ಕಾಡುಗಳಲ್ಲಿ ಮತ್ತು ಕೆಸರು ನೆಲದಲ್ಲಿ ಸಂಚರಿಸಿದ್ದಾರೆ. ಆಫ್ರಿಕನ್ ಭಾಷೆಗಳಲ್ಲಿ ಸಂಸ್ಕೃತ ಪದಗಳು ಇವೆಯೆನ್ನುತ್ತಾರೆ ಅವಳು. ಆಫ್ರಿಕನ್ನರು ಒಂದು ದೇವ ಮೂರ್ತಿಯ ಮುಂದೆ ಕೀರ್ತನೆ-ಹವನಗಳನ್ನು ಮಾಡುತ್ತಾರೆಂದೂ ಆ ಮೂರ್ತಿಯು ಗೋಪಾಲ ಕೃಷ್ಣನನ್ನು ಹೋಲುತ್ತದೆಂದೂ ಆಕೆ ಬರೆದಿದ್ದಾಳೆ. ಹೂವೇ ಹಿಂದೂ ವಿವಾಹ ಪದ್ಧತಿಗಳ ದೇವ-ದೇವತೆಗಳ ಚಿತ್ರಗಳನ್ನು ಪ್ರಕಾಶಪಡಿಸಿದ್ದಾನೆ. ಬಟ್ಟೆ ಹಚ್ಚಿಕೆ ಚಿತ್ರ, ಪಲ್ಲಕ್ಕಿ ಕಟ್ಟಿಕೊಂಡ ಪ್ರಾಣಿ, ಸಾಮಿಕೊಂಬುಗಳು, ಬಿಸಿ ಪಾತ್ರೆ, ಜಲಪ್ರಪಾತ ಮೊದಲಾದವೆಲ್ಲ ಎಷ್ಟು ಇವೆಲ್ಲವೂ ಆದರಣೀಯವೆ. ಇದು ಹಿಂದೂ ವಿಶ್ವಾಸದ ಪ್ರಭಾವವೇ ಎಂದು ಹೇಳಬೇಕು.

ಸ್ಯಾಟೀರಿಯಾದ ಶಿಕರದಲ್ಲಿ

ಸ್ಯಾಟೀರಿಯಾದ ಮಂದಿರಗಳಲ್ಲಿ ಮದಾಕಾಲಕ್ಷೇಪವನ್ನೂ ಸಂಸ್ಕೃತದಲ್ಲಿ ಯೇ ನಡೆಯುತ್ತಿದೆ. ಅಲ್ಲಿನ ಮಂದಿರಗಳೂ ಮೂರ್ತಿಗಳೂ ಹಿಂದುತ್ವದಿಂದ ಪ್ರಭಾವಿತವಾಗಿವೆ. ಮಂಗೋಲಿಯಾ ನಿವಾಸಿಗಳು ತಮ್ಮ ಮನೆ ಬಿಗಿಲನ್ನು ಸ್ವಸ್ತಿಕ, ಕಲಶ, ಪದ್ಮ ಮತ್ತು ಶಂಖ ಚಿಹ್ನೆಗಳಿಂದ ಅಲಂಕರಿಸುತ್ತಾರೆ. ದೇವಾಲಯಗಳಲ್ಲಿ ಮಂಟಪಗಳು ಮುಂದೆ ತಪ್ಪದೆ ದೀಪಗಳನ್ನು ಬೆಳಗಿಸುತ್ತಾರೆ; ಧೂಪ ದೀಪಗಳಿಂದ ಅಲ್ಲಿ ಪೂಜೆ ನಡೆಯುತ್ತದೆ.

ಜರ್ಮನಿಯಲ್ಲಿ, ಕರ್ಮಣ್ಯರು

ಜರ್ಮನ್ ಎಂಬ ಶಬ್ದವು ಸಂಸ್ಕೃತದ 'ಕರ್ಮಣ್ಯ'ವೆಂಬುದರ ಅಪಭ್ರಂಶವೆಂದು ಸಿದ್ಧಪಡಿಸಲು ಕೆಲವು ಜರ್ಮನ್ ವಿದ್ವಾಂಸರೇ ಮುಂದೆ ಬಂದರು. ಇದು ಕೆಲವು ಶತಮಾನದಲ್ಲಿ. ಭಾರತದಿಂದ ಕೆಲವು ಬ್ರಾಹ್ಮಣರು ಜರ್ಮನಿಗೆ ಬಂದರು. ಅವರೇ ಜರ್ಮನಿಗೆ ಆ ಹೆಸರನ್ನು ಇಟ್ಟರು ಎಂದು ಅವರ ಅಂಬೋಣ. ಇಂದಿಗೂ ಜರ್ಮನ್ ವಿದ್ವಾಂಸರಿಗೆ ವೇದ, ಉಪನಿಷತ್, ಗೀತೆ, ರಾಮಾಯಣ, ಮಹಾಭಾರತ ಮೊದಲಾದ ಸಂಸ್ಕೃತ ವಾಙ್ಮಯವನ್ನು ಪರಿಶೀಲಿಸಿದರು; ಭಾರತೀಯ ದರ್ಶನ, ಭಾಷಾ ವಿಜ್ಞಾನ, ಪತ್ರಕಾರಿಕೆ, ಕೋಶಕಲೆ ಮೊದಲಾದುವುಗಳ ಬಗೆಗೂ ಉಲ್ಲೇಖನೀಯ ಸಹಕಾರ ನೀಡಿದರು. ಅಲ್ಲಿನ ಹಲವೊಂದು ವಿಶ್ವವಿದ್ಯಾಲಯಗಳಲ್ಲಿ ಭಾರತೀಯ ಭಾಷೆಗಳ ಅಧ್ಯಯನ-ಸಂಶೋಧನೆಗಳಿಗೆ ಅವಕಾಶವಿದೆ. ಯೋಗಾಭ್ಯಾಸದ ಶಾಲೆಗಳೂ ನಡೆಯುತ್ತಿವೆ. ಜರ್ಮನ್ ಮಹಿಳೆಯರು ಭಾರತೀಯ ವೇಷ-ವಿನ್ಯಾಸಗಳನ್ನು ಬಹಳವಾಗಿ ಮೆಚ್ಚುತ್ತಾರೆ.

ರಶ್ಯನ್ ಲೋಕದಲ್ಲಿ

ಶ್ರೀಮತಿ ನೋಲ್ಕೋವರವರ ಅಭಿಪ್ರಾಯದಲ್ಲಿ ರಶ್ಯನ್ ಭಾಷೆಗೆ ಜನಸಾಮಾನ್ಯತೆ. ರಶ್ಯನ್ ಭಾಷಾ ಶಾಸ್ತ್ರಿಯು ಕಾರ್ಯಕ್ರಮಕ್ಕೋ ರಶ್ಯನ್ ಭಾಷೆಯನ್ನು ಬಂಗಾಳಿ, ಹಿಂದೀ ಮತ್ತು ಸಂಸ್ಕೃತ ಭಾಷೆಗಳಿಗೆ ಹತ್ತಿರವೆಂದು ಹೇಳುತ್ತಾನೆ. ಹಿಂದಿಯ ಶಿಕ್ಷಣ ಅಲ್ಲಿ ಅನಿವಾರ್ಯ. ಯೋಗಾಸನಗಳ ಬಗೆಗೂ ಅವರಲ್ಲಿ ಅವಿತಾ ಸಕ್ತಿ ಇದೆ. ಸ್ವಾಮಿ ಪ್ರಣವಾನಂದ ಸರಸ್ವತಿಯವರು ಯೋಗ ವಿಷಯದಲ್ಲಿ ಭಾಷಣ ಮಾಡಿದಾಗ, ಭೀಷಣ ಶೀತ ವಲಯವನ್ನು ಸಹಿಸಿಕೆ ಂತು ನಾವಿರಾರು ರಶ್ಯನ್ನರು ಅದನ್ನು ಕೇಳಿದ್ದರು. ಪಿಕಿಲಿಂಗ್ರಿನ 'ಪ್ರಾಚೀನ ಭಾರತೀಯ ಮತ್ತು ಲಿಥುವಾನಿಯನ್ ಭಾಷೆಗಳು ಹಾಗೂ ಸಂಸ್ಕೃತದೊಡನೆ ನಿಕಟ ಸಂಬಂಧ' ಎಂಬ ಪುಸ್ತಕದಲ್ಲಿ ಎ. ಎಫ್. ಗಿಲ್ಫೆರ್ಡಿಂಗ್‌ನ "ಸ್ಲಾವ್ ಮತ್ತು ಸಂಸ್ಕೃತ ಭಾಷೆಗಳ ಅತ್ಯೋನ್ಯತೆ"ಯಲ್ಲಿ, ಎ. ಪಿ. ವಿಶುತ್ಸ್ಕಿಯ 'ಸಂಸ್ಕೃತ ಭಾಷೆ ಮತ್ತು ಶಬ್ದಗಳೊಡನೆ ಸ್ಲಾವಿಕ್‌ನ ತುಲನೆ'ಯಲ್ಲಿ ರಶ್ಯನ್ ವಿಜ್ಞಾನ ಅಕಾಡೆಮಿಯು 'ಸಂಸ್ಕೃತ ವಾಕ್ಯ ರಶ್ಯನ್‌ಗಳ ಸಮಾನತೆ'ಯಲ್ಲಿ ಭಾಷಾಶ್ಲೇಷದಲ್ಲಿ ರಶ್ಯದ ವೇಲೆ ಸಂಸ್ಕೃತದ ಆಳವಾದ ಪ್ರಭಾವ ಬಿದ್ದಿರುವುದನ್ನು ಎತ್ತಿ ತೋರಿಸಲಾಗಿದೆ. ಗೀತೆ, ರಾಮಾಯಣ, ಹರಿವಂಶ ಪುರಾಣ, ಭಾಗವತ ದೋಗ್ಯೋವನಿಸಮ್ಸು, ಬೃಹದಾರಣ್ಯಕೋಪನಿಷತ್, ಹಿತೋಪದೇಶ, ಪಂಚತಂತ್ರ; ಮುದ್ರಾರಾಕ್ಷಸ ಮೊದಲಾದ ಭಾರತೀಯ ಗ್ರಂಥಗಳ ಅನುವಾದಗಳು ಅಲ್ಲಿ ಅತ್ಯಂತ ಲೋಕಪ್ರಿಯವಾಗಿವೆ. ವಾರಾಣಸೀಕೋವನ ಹಿಂದೀಯ ಅನುಪಮ ಗ್ರಂಥ 'ರಾಮಚರಿತ ಮಾನಸ'ವನ್ನು (ತುಲಸೀ ರಾಮಾಯಣ) ಮತ್ತು ಅವಳ ಹೆಂಡತಿ ಸರಸ್ವತಿಯು ಗುಜರಾತಿಯ 'ದಿವ್ಯಾ'ನೆಂಬ ಗ್ರಂಥವನ್ನು ರಶ್ಯನ್ ಭಾಷೆಗೆ ಅನುವಾದಿಸಿದ್ದಾರೆ. ಸಂಸ್ಕೃತ ನಾಟಕಗಳನ್ನಾಧರಿಸಿ ಅಭಿನಯಿಸುತ್ತಾರೆ. ವಿಶ್ವಕವಿ ರವೀಂದ್ರನಾಥ ಠಾಕೂರರ ಕೃತಿಗಳು ಅಲ್ಲಿನ ಮೂವತ್ತು ನಾಲ್ಕು ಭಾಷೆಗಳಲ್ಲಿ ಅನುವಾದಿತವಾಗಿವೆ

ದೂರದ ಅಮೇರಿಕೆಯಲ್ಲಿ

'ಭಾರತವು ನಮಗೆಲ್ಲ ಮಾತೃಭೂಮಿಯಾಗಿತ್ತು; ಸಂಸ್ಕೃತವು ಐರೋಪ್ಯ ಭಾಷೆಗಳಿಗೆ ಜನನಿಯಾಗಿತ್ತು. ಅದು ನಮ್ಮ ದರ್ಶನಕ್ಕೂ ತಾಯಿಯೂ ಆಗಿತ್ತು. ಆರಬ್ಬರ ವರ್ಷಗಳುದ್ದಲ್ಲಿ ಮನುಷ್ಯ ಅಧಿಕಾಂಶ ಗಣಿತಕ್ಕೂ ಭಾರತವೇ ತವರ್ನೆ. ಬುದ್ಧನ ಮೂಲಕ ಕ್ರೈಸ್ತ ಧರ್ಮದಲ್ಲಿನ ಆದರ್ಶಗಳಿಗೆ ಮೂಸೆ; ಗ್ರಾಮ ಸಮುದಾಯಗಳ ರೂಪದಲ್ಲಿ ಸ್ವಾಯತ್ತ ಶಾಸನ ವಕ್ತು ಪ್ರಜಾತಂತ್ರಗಳಿಗೆ ತಾಯಿ. ಹೀಗೆ ಭಾರತವು ನಮಗೆ ಹಲವಾರು ಬಗೆಯಿಂದ ಜನ್ಮಧಾತ್ರಿ-ಇದು ಅಮೆರಿಕೆಯ ಸುಪ್ರಸಿದ್ಧ ತತ್ವಜ್ಞಾನಿ ವಿಲ್ ಡ್ಯೂರೆಸ್ಟ್‌ನ ಹೇಳಿಕೆ.

ಅಮೆರಿಕೆಯನ್ನು ಸೂರ್ಯವಂಶದ ರಾಜರು ಸ್ಥಾಪಿಸಿದರೆಂದು ವಿದ್ವಾಂಸರ ಅಭಿಮತ. ಭಾರತೀಯರಿಂದ ಅಲ್ಲಿ ವಿವಾಹ ಸಂಬಂಧ ಸ್ಥಾಪಿತವಾಯಿತೆಂದ ಮಹಾಭಾರತ ಮೊದಲಾದ ಗ್ರಂಥಗಳಿಂದ ತಿಳಿಯಬಹುದೆ. ಇಂದಿಗೂ ಅಮೆರಿಕೆಯ ಹಲವೆಡೆ ಸೂರ್ಯ ಮಂದಿರಗಳಿವೆ. ಭಾರತೀಯ ಸಾಹಿತ್ಯ ದರ್ಶನ, ಕಲೆ, ಭಾಷೆ, ಧರ್ಮ ಮೊದಲಾದುವುಗಳಲ್ಲಿ ಅಲ್ಲಿನ ವಿದ್ವಾಂಸರಲ್ಲಿ ಬಹಳ ಆಸಕ್ತಿಯಿದೆ. ಭಾರತೀಯ ಯೋಗಿಸಮಯಗಳ ಬಗ್ಗೆ ಅಲ್ಲಿ ದಿನದಿಂದ ದಿನಕ್ಕೆ ಅಭಿರುಚಿ ಬೆಳೆಯುತ್ತ ಬರುತ್ತಿದೆ.

ಎತ್ತರದ ಟಿಬೇಟಿನಲ್ಲಿ

ಟಿಬೇಟಿನ ಹೊತ್ತವೆಂದರೆ ರಾಜಕೀಯ ಸಲಹೆಗಾರ ಪ್ರಸೇಕಜಿಕಪ ಪುಸ್ತಕ. ಟಿಬೇಟಿನ ಲಿಪಿಗಳು ದೇವನಾಗರಿ ಲಿಪಿಯನ್ನೇ ಹೊಂದಿಕೊಂಡಿದೆ. ಇಂದಿಗೂ ನಾಗರಿ ಅಕ್ಷರಗಳ ಪ್ರಚಾರ ಅಲ್ಲಿದೆ. ಗಣೇಶ, ಇಂದ್ರ, ಕಾಳಿ, ಯಮ, ಗರುಡ ಮೊದಲಾದವರ ಉಚಾಸನೆ ಟಿಬೇಟಿನಲ್ಲಿ ನಡೆಯುತ್ತದೆ. ದೀಪೋತ್ಸವದ ಆಚರಣೆಯೂ ಇದೆ. ಟಿಬೇಟಿನ ವಿವಾಹ ಪದ್ಧತಿಯು ಹಿಂದೂ-ಪ್ರಣಾಳಿಯನ್ನೇ ಬಹುವಾಗಿ ಹೋಲುತ್ತದೆ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ — English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಅಂಗ್ಲಸ್ವಯಂ ಬೋಧಿನಿ.
ಬೆಲೆ: ರೂ. 2—00

Letter Writing Made Easy — ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ವಿವಿಧ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ — ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅಭಿವಾದ.
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು — Home Remedies

ಡಾ! ವಿ. ಆರ್. ಕೊರಡ್ಕರ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಕೈಪಿಡ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ವಿಧಾನಗಳಿವೆ. ಹೆರಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ಹೈಸ್ಕೂಲುಗಳಿಗೆ
ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಎಸ್. ಎಲ್. 4. 17-4/65—66ರ ಪತ್ರದಂತೆ ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.
ವಾರ್ಷಿಕ ಚಂದಾ ರೂ. 10/- ಮಾತ್ರ.
ಮೆನೇಜರ್, ನವಯುಗ, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 23—7—1970 ಸಂಪುಟ 4
ಸಂಚಿಕೆ 4

ಶಿಕ್ಷಣದಿಂದ ರಾಷ್ಟ್ರೀಯ ಸಮಗ್ರತೆ

ಲೇಖಕರು : ಡಾ। ವಿ. ಕೆ. ಆರ್. ವಿ. ರಾವ್

ಸ್ವಾತಂತ್ರ್ಯವನ್ನು ಗಳಿಸಿ ಇಪ್ಪತ್ತೈದು ವರುಷಗಳಾಗಿವೆ. ಆದರೂ ಸಹಾ ನಾವಿನ್ನೂ ರಾಷ್ಟ್ರೀಯ ಸಮಗ್ರತೆ ಸಮಸ್ಯೆಯನ್ನು ಎದುರಿಸುತ್ತಲೇ ಇದ್ದೇವೆ. ಅಭಿವೃದ್ಧಿ ಹೊಂದುತ್ತಿರುವ ಪಶ್ಚಿಮ ಸಮಾಜದಲ್ಲಿ ವರ್ಗಸಂಬಂಧವಾದ ಪ್ರಶ್ನೆ ಮಟ್ಟ ವರ್ಗಕಲಹಗಳು ಗಣತಂತ್ರೀಯ ರೀತಿಯಲ್ಲಿ ಬೆಳೆಯುತ್ತಿವೆ. ಇದೇ ಕಾಲಕ್ಕೆ ಭಾಷಾವಾದ,ಜಾತೀಯವಾದ, ಪ್ರಾಂತೀಯತೆ ಮತ್ತು ಕೋಮುವಾದಗಳಂತಹ ವಿವಿಧ ಕಾರಕ ವರ್ತ, ಸಮಾಜವಿರೋಧಿಶಕ್ತಿಗಳ ಬಲಹಂಚಿಕೆಯಾಗುತ್ತಿರುವಂತಿದೆ. ರಾಜಕೀಯ ಅಸ್ಥಿರತೆ, ಸಾಮಾಜಿಕ ಬಿಕ್ಕಟ್ಟು ಹಾಗು ಆರ್ಥಿಕ ಜಡತೆಗೆ ಕಾರಣವಾಗುವಂತಹ ಸನ್ನಿವೇಶಗಳು ಏರ್ಪಟ್ಟಿವೆ ಆದರೆ ಈ ಸಮಸ್ಯೆಯಿಂದ ದೂರವಾಗುವ ಉಪಾಯವೇನೆಂಬುದು ಸ್ಪಷ್ಟವಾಗಿಲ್ಲ.

ರಾಷ್ಟ್ರೀಯ ಸಮಗ್ರತೆಯನ್ನು ಹೊಂದುವ ರೀತಿ ಸಾಧಿಸಬೇಕೆಂದು? ಯಾರು ಸಾಧಿಸಬೇಕು ಮತ್ತು ಹೇಗೆ? ಎಂಬುದು ಈ ಸಂದರ್ಭದಲ್ಲಿ ಏಳುವ ಮುಖ್ಯವಾದ ಪ್ರಶ್ನೆಗಳು. ಇಂತಹ ಒಂದು ಹಿನ್ನೆಲೆಯಲ್ಲಿ ಶಿಕ್ಷಣಸಂಸ್ಥೆಗಳ ಕರ್ತವ್ಯಗಳು, ಅವು ನಡೆಸುತ್ತಿರುವ ಕಾರ್ಯ ಕಲಾಪಗಳ ಬಗ್ಗೆ ಪರಾಮರ್ಶಿಸುವುದು ಅಗತ್ಯವಾಗಿದೆ. ಶಿಕ್ಷಣ ಸಂಸ್ಥೆಗಳು ಈಗ ಹೊಸ ಕಾರ್ಯರೂಪಗಳನ್ನು ಕೈಗೊಳ್ಳಬೇಕಾಗಿದೆ. ಹೊಸ ಚುಗೆಯ ನಾಯಕತ್ವವನ್ನು ಒದಗಿಸಬೇಕಾಗಿದೆ. ಶಿಕ್ಷಣಸಂಸ್ಥೆಗಳು ಕೇವಲ ಜ್ಞಾನಾರ್ಜನೆಯ ಪೀಠಗಳಾಗದೆ ಬದಲಾಗುತ್ತಿರುವ ವಾತಾವರಣಕ್ಕೆ ಹೊಂದಿಕೊಂಡು ಹೋಗಬೇಕಾಗುವುದು ಅವಶ್ಯಕವಾಗಿದೆ. ರಾಷ್ಟ್ರೀಯ ಐಕ್ಯತೆ, ಸಮಗ್ರತೆ ಮತ್ತು ಭಾವೈಕ್ಯದಂತಹ ಇನ್ನು ಅನೇಕ ಮಹತ್ವ ವಿಷಯಗಳಲ್ಲಿ ಕೃಷ್ಣಣಿಕ ಸಂಸ್ಥೆಗಳು ಪ್ರಮುಖ ಪಾತ್ರವನ್ನು ವಹಿಸಬೇಕಾಗಿದೆ. ಸಮಾಜದ ಪ್ರಯೋಜನಕ್ಕಾಗಿ ವಿದ್ಯಾರ್ಥಿಗಳನ್ನು ಆಜೀವೋಪಯುಕ್ತವಾಗಿ ಸಮರ್ಥಗಳ ಮಾಡುವುದೇ ಈ ಸಂಸ್ಥೆಗಳ ಮುಖ್ಯಕಾರ್ಯವಾಗಿದೆ. ವಿವಿಧ ಭಾಷೆಗಳು, ಬೇರೆ ಬೇರೆ ಜನಾಂಗಗಳು ಮತ್ತು ಬೃಹತ್ ರಾಷ್ಟ್ರವಾದ ಭಾರತದಲ್ಲಂತೂ ಈ ಸಂಸ್ಥೆಗಳ ಪಾತ್ರ ಅತ್ಯಂತ ಮಹತ್ವ ಪೂರ್ಣ. ಕೇವಲ ಶಿಕ್ಷಣ ಸಂಸ್ಥೆಗಳೇ ರಾಷ್ಟ್ರೀಯ ಸಮಗ್ರತೆಯನ್ನು ಕರುಣಿಸಲು ಸಾಧ್ಯವಿಲ್ಲವೆಂಬುದು ನನಗೂ ತಿಳಿದಿದೆ ರಾಷ್ಟ್ರೀಯ ಸಮಗ್ರತೆ ಸಾಧಿಸಲು ಇರುವ ಅನೇಕ ಸಾಧನೆಗಳಲ್ಲಿ ಇದೂ ಒಂದು ಸಾಧನ. ಇದೇ ಶಿಕ್ಷಣ ಸಂಸ್ಥೆಗಳಿಂದಲೇ ಸಮಾಜದ ನಾಯಕರು ಹೊರ ಬರುತ್ತಾರೆ.

ದೇಶದ ಹಿತದೃಷ್ಟಿಯಲ್ಲಿ ಶಿಕ್ಷಣ ಸಂಸ್ಥೆಗಳ ಪ್ರಥಾಪಾತ್ರವನ್ನು ಲಕ್ಷದಲ್ಲಿಟ್ಟುಕೊಂಡು ಶಿಕ್ಷಣ ಮತ್ತು ಯುವಜನ ವ್ಯವಹಾರ ಶಾಖೆಯವರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ರಾಷ್ಟ್ರೀಯ ಗಾಂಧೀಜಿಯ ಜನ್ಮಶತಾಬ್ದಿ ಸಮಿತಿಯು ರಾಷ್ಟ್ರೀಯ ಸಮಗ್ರತಾ ಉಪಸಮಿತಿಯೊಂದನ್ನು ಈ ದೃಷ್ಟಿಯಿಂದ ರಚಿಸಲಾಗಿದೆ. ಈ ಸಮಿತಿಯವರು ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ವಿದ್ಯಾರ್ಥಿಗಳಲ್ಲಿ ಪ್ರಾಂತೀಯವಾದ ಮುಂತಾದ ವುಗಳನ್ನು ಹೋಗಲಾಡಿಸಲು ಸೂಕ್ತ ಕ್ರಮಗಳನ್ನು ಕೈಕೊಂಡಿದ್ದಾರೆ. ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಈ ಸಮಿತಿಯಲ್ಲಿದ್ದಾರೆ.

ರಾಷ್ಟ್ರೀಯ ಗಾಂಧೀಜಿ ಜನ್ಮಶತಾಬ್ದಿ ಸಮಿತಿ ಮತ್ತು ವಿಶ್ವವಿದ್ಯಾಲಯಗಳ ಧನಸಹಾಯ ಮಂಡಲಿ....ಇವು ಉಪಸಮಿತಿಗಳಿಗೆ ಹಣಕಾಸಿನ ನೆರವನ್ನು ನೀಡುತ್ತಿವೆ. ವಿಶ್ವ-ವಿದ್ಯಾಲಯಗಳ ಮಟ್ಟದ ರಾಷ್ಟ್ರೀಯ ಸಮಗ್ರತಾ ಉಪಸಮಿತಿಗಳ ಆಶ್ರಯದಲ್ಲಿ ವಿಚಾರಗೋಷ್ಠಿಗಳು, ಅಧ್ಯಯನ ತರಗತಿಗಳು, ಪ್ರದರ್ಶನಗಳು, ಸಾಹಿತ್ಯಕಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಮುಂತಾದವುಗಳನ್ನು ಏರ್ಪಡಿಸಲಾಗುತ್ತಿದೆ. ದೇಶದ ಬೇರೆ ಬೇರೆ ವಿಶ್ವವಿದ್ಯಾಲಯಗಳ ನಡುವೆ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ವಿಶ್ವ-ವಿದ್ಯಾಲಯದ ವಿದ್ಯಾರ್ಥಿಗಳು ಬೇರೆ ಬೇರೆ ವಿಶ್ವವಿದ್ಯಾಲಯಗಳಿಗೆ ಬೇಟಿ ನೀಡಲು ಅವಕಾಶಗಳನ್ನು ಕಲ್ಪಿಸಿ ಕೊಡಲಾಗಿದೆ. ಸಮಿತಿಗಳ ಆಶ್ರಯದಲ್ಲಿ ಬೇರೆ ಬೇರೆ ಪ್ರದೇಶಗಳನ್ನು ಈ ರೀತಿ ಇತಿಹಾಸ, ಸಂಸ್ಕೃತಿ ಮುಂತಾದ ವಿಷಯಗಳ ಬಗ್ಗೆ ಭಾಷಣಗಳನ್ನು ಏರ್ಪಡಿಸಲಾಗುತ್ತಿದೆ

ದೇಶದ ಐಕ್ಯತೆಯ ದೃಷ್ಟಿಯಿಂದ ದೇಶದ ಎಲ್ಲ ಭಾಷೆಗಳಲ್ಲಿ ಸಣ್ಣ ಕಿರುಹೊತ್ತಗೆ ಸಂಸ್ಕೃತಿಯೊಂದನ್ನು ಪ್ರಕಟಿಸಲಾಗಿದೆ. ಇದರಲ್ಲಿ ಸುಮಾರು 3000 ಪದಗಳಷ್ಟು ಆಯಾ ಭಾಷೆಯ ಇತಿಹಾಸದ ಬಗ್ಗೆ ತಿಳಿಸಿ, ರಾಷ್ಟ್ರೀಯ ಸಮಗ್ರತೆ ಬಗ್ಗೆ ಗಾಂಧೀಜಿಯ ಅಭಿಪ್ರಾಯವನ್ನು ಈ ಹೊತ್ತಿಗೆಯಲ್ಲಿ ಕೊಡಲಾಗಿದೆ.

ಶಾಲೆಯ ಪಠ್ಯಪುಸ್ತಕಗಳು

ರಾಷ್ಟ್ರೀಯ ಸಮಗ್ರತಾ ಸಮಿತಿಯ ಸಭೆಯೊಂದು ಶ್ರೀನಗರದಲ್ಲಿ 1968ರ ಜೂನ್ ತಿಂಗಳಲ್ಲಿ ಏರ್ಪಡಿತು ಶಾಲೆಯ ಪುಸ್ತಕಗಳ ಸಮಸ್ಯೆಯ ಬಗ್ಗೆ ಚರ್ಚಿಸಲಾಯಿತು. ಪ್ರೌಢಶಿಕ್ಷಣಾಂದ ಹಿಡಿದು ವಿಶ್ವವಿದ್ಯಾಲಯದವರೆಗೆ ಶಿಕ್ಷಣ ಪದ್ಧತಿಯನ್ನು ಪುನರ್ ಪರಿಶೀಲಿಸ ಬೇಕೆಂದು ತೀರ್ಮಾನಿಸಲಾಯಿತು. ಪ್ರಜಾತಂತ್ರಭದ್ಧವಾದ ದೇಶದ ಐಕ್ಯತೆ, ಪ್ರಜಾತ್ರಭದ್ಧವಾದಲ್ಲಿ ನಂಬಿಕೆಯನ್ನು ಹೆಚ್ಚಿಸುವುದು; ಹೊಸ ಸಮಾಜವೊಂದನ್ನು ನಿರ್ಮಾಣ ಮಾಡುವುದ—ಇವು ಈ ಹೊಸ ಯೋಜನೆಯ ಉದ್ದೇಶ. ಈ ದೃಷ್ಟಿಯಿಂದ ಭಾರತ ಸರಕಾರ ಪಠ್ಯಪುಸ್ತಕಗಳ ರಾಷ್ಟ್ರೀಯ ಮಂಡಳಿಯೊಂದನ್ನು ರಚಿಸಿದೆ. ರಾಜ್ಯ ಸರಕಾರಗಳ ಪಠ್ಯಪುಸ್ತಕ ಮಂಡಳಿಗಳು ಈ ಸಂಸ್ಥೆಗೆ ತಮ್ಮ ಸಲಹೆ ಸೂಚನೆಗಳನ್ನು ನೀಡುತ್ತಿವೆ.

ಶಿಕ್ಷಕರ ಕಲ್ಯಾಣ

ಶಿಕ್ಷಕರು ಸಮಾಜ ಬದಲಾವಣೆಗೆ ಮಹತ್ವ ರಾಷ್ಟ್ರೀಯ ಸಾಮರಸ್ಯಕ್ಕೆ ಹೆಚ್ಚಿನ ಸೇವೆ ಸಲ್ಲಿಸಿದ್ದಾರೆ. ರಾಷ್ಟ್ರದ ನಿರ್ಮಾಣ ಕಾರ್ಯ ಶಕ್ತಿಗಳ ನಿರ್ಮೂಲನಕ್ಕೆ ಅವರು ನೆರವಾಗಬೇಕು. ರಾಷ್ಟ್ರೀಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿಯು ಪರಿಷತ್ತಿನವರು ವ್ಯಾಪಕವಾದ ಮಟ್ಟದಲ್ಲಿ ಅನೇಕ ವಿಚಾರಗೋಷ್ಠಿಗಳನ್ನು ಏರ್ಪಡಿಸಿ ಶಾಲಾ ಶಿಕ್ಷಕರಿಗಾಗಿ 'ಶಿಕ್ಷಕರ ಕೈಪಿಡಿ' ಯೊಂದನ್ನು ಪ್ರಕಟಿಸಿದ್ದಾರೆ. ಈ ಕೈಪಿಡಿಯು ಶಿಕ್ಷಕರು ವರ್ತು ವಿದ್ಯಾರ್ಥಿಗಳಲ್ಲಿ ಜಾತೀಯವಾದ ಮತ್ತು ಪ್ರಾದೇಶಿಕವಾದ ಮುಂತಾದವುಗಳ ಬಗ್ಗೆ ಸಮಕಾಲೀಕ ಭಾವನೆಗಳನ್ನು ಹೋಗಲಾಡಿಸುವುದಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡುತ್ತದೆ.

ರಾಷ್ಟ್ರೀಯ ಸಮಗ್ರತೆಯ ಶಾಲಾ ಕ್ರಮ ಇನ್ನು ಹೆಚ್ಚು ತೀವ್ರಗೊಳಿಸಲು ಈಗಾಗಲೇ ಸಲಹೆಯೊಂದನ್ನು ರಚಿಸಲಾಗಿದೆ.

ಶಿಕ್ಷಣ ತಜ್ಞರು, ಯುವಜನರ ಮತ್ತು ವಿದ್ಯಾರ್ಥಿ ನಾಯಕರ ಸಲಹೆಗಳನ್ನು ರಚಿಸಲಾಗಿದೆ. ಪಠ್ಯಕ್ರಮ, ಪಠ್ಯಪುಸ್ತಕಗಳನ್ನು ಪರಿಷ್ಕರಿಸುವುದು, ವಿದ್ಯಾರ್ಥಿ ಸಂಘಗಳಲ್ಲಿರುವ ತೊಡಕುಗಳನ್ನು ನಿವಾರಿಸುವುದು, ಕೋಮುವಾರು ಭಾವನೆಗಳು ಇಲ್ಲದಿರುವಂತೆ ಶಾಲಾವುದು ಈ ಸಮಿತಿಯ ಮುಖ್ಯ ಧ್ಯೇಯಗಳಾಗಿವೆ.

ಅಂತರರಾಜ್ಯ ವಿದ್ಯಾರ್ಥಿ—ಶಿಕ್ಷಕ ಶಿಬಿರಗಳು

ರಾಷ್ಟ್ರೀಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿಯು ಸಹಕಾರದೊಂದಿಗೆ ಕೇಂದ್ರ ಶಿಕ್ಷಣ ಸಂಸ್ಥೆ ಈಗಾಗಲೇ ಸಾಲ್ಕು ಅಂತರ-ರಾಜ್ಯ ವಿದ್ಯಾರ್ಥಿ-ಶಿಕ್ಷಕ ಶಿಬಿರಗಳನ್ನು ಏರ್ಪಡಿಸಿದೆ. 1969-70ರಲ್ಲಿ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಇಂಥಹ ಶಿಬಿರಗಳನ್ನು ಏರ್ಪಡಿಸಲು ಯೋಜಿಸಲಾಗಿದೆ. ಭಾರತದ ಪ್ರಮುಖ ಸಾಂಸ್ಕೃತಿಕ ಜೀವನ ಚರಿತ್ರೆ ಕುರಿತ ಪುಸ್ತಕಗಳನ್ನು ರಾಷ್ಟ್ರೀಯ ಪುಸ್ತಕಟ್ರಸ್ಟ್‌ವನು ಪ್ರಕಟಿಸುತ್ತಿದ್ದಾರೆ. ಶ್ರೀ ಸಾವೂನ್ನನಿ ಸರಳ ಭಾಷೆಯಲ್ಲಿ ಮುಖ್ಯ ವಿಷಯಗಳನ್ನು ತಿಳಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಸುಮಾರು 100 ಪುಸ್ತಕಗಳನ್ನು ಮೊದಲಿನ ಸುತ್ತಿನಲ್ಲಿ ಪ್ರಕಟಿಸಲು ಉದ್ದೇಶಿಸಲಾಗಿದೆ. ಸಾಮಾನ್ಯ ಓದುಗನಿಗೆ ಭಾರತದ ಬೇರೆ ಬೇರೆ ವಿಷಯಗಳನ್ನು ತಿಳಿಸುವ ದೃಷ್ಟಿಯಿಂದ ಸಚಿತ್ರ ಪುಸ್ತಕಗಳನ್ನು ಬಾಲ್ಯಪುಸ್ತಕಾಲಯ ಸಹಕಾರದಿಂದ ಹೊರತರುವ ಯೋಜನೆಯು ಬಗ್ಗೆ ಶಿಕ್ಷಣ ಮಂತ್ರಿಶಾಲೆಯವರು ಯೋಚಿಸಿದ್ದಾರೆ.

ನೆಹರು ಬಾಲಪುಸ್ತಕಾಲಯ

ಶಿಕ್ಷಣ ಕುರಿತ ಪಾರ್ಲಿಮೆಂಟ್ ಸದಸ್ಯರ ಸಮಿತಿಯು ಶಿಫಾರಸುಗಳಿಂದಾ

(ಪುಸ್ತಕದ ಪುಟ ನೋಡಿ)

ಪ್ರಜಾಪೀಡನಚತುರ — ವೇಣ

ಪ್ರಾಚೀನ ಕಾಲದಲ್ಲಿ ವೇಣನೆಂಬ ರಾಜನಿದ್ದನು. ಅವನ ತಂದೆ ಅಂಗ, ತಾಯಿ ಸುನೀಥೆ. ಅವನಿಗೆ ಧರ್ಮ ಮಾರ್ಗ ತ್ಯಾಜ್ಯ; ಅಧರ್ಮ ಮಾರ್ಗವೇ ಅತ್ಯಂತ ಪ್ರಿಯ. ಅವನ ರಾಜ್ಯದಲ್ಲಿ ವರ್ಣ ಸಾಂಕರವಾಯ್ತು;

ಎಳೆತನದಿಂದಲೇ ವೇಣನ ಮನಸ್ಸು ಜೀವ —ಪ್ರಾಣ ಕಂಟಕವಾಗಿ ಬಳೆದನು. ಮನೆಮನೆಗೂ ನಿಗ್ಗಿ ಮಕ್ಕಳನ್ನೆಳೆದು ತಂದು; ಹಗ್ಗಗಳಿಂದ ಕಟ್ಟಿ, ನೀರಿಗೆಸೆದು ಅವರು ಮುಳುಗಿ ಸಾಯುವುದನ್ನು ಕಣ್ಣಾರೆ ಕಾಣುವುದು ಅವನ ಪ್ರತಿನಿತ್ಯದ ವಿನೋದ. ಇದೇ ಬಗೆಯಾಗಿ ವೇಣನ ಪ್ರಜಾರಂಜಕನಾಗದೆ ಪ್ರಜಾಭಂಜಕನಾಗಿ ಅರಮನೆಯಲ್ಲಿ ದೊಡ್ಡವನಾದನು. ಈತನ ಕೀಟಲೆ ತಾಳದೆ ಪ್ರಜೆಗಳು ರಾಜ ಅಂಗನಲ್ಲಿ ದೂರಿತ್ತರು. ಮಹಾರಾಜನು ಭಾವಿರಾಜನಿಗೆ ತಿಳಿಹೇಳಿದನು. ಆದರೆ ಯುವರಾಜನೊಂದಕ್ಕೂ ಕಿವಿಗೊಡಲಿಲ್ಲ. ಅಂಗನು ನೊಂದು ರಾಜಪದ ತ್ಯಜಿಸಿ ವನವಾಸವಾರಂಭಿಸಿದನು.

ದೇಶದಲ್ಲಿ ಅರಾಜಕತೆ ಹರಡಿತು. ಕೆಲವರು ಯುವರಾಜನನ್ನೇ ಮಹಾರಾಜ ಪದವಿಗೇರಿಸಿದರು. ರಾಜನಾದದ್ದೇ ತಡ, ವೇಣನು ಅಜ್ಞೆ ಹೊರಡಿಸಿ ವರ್ಣ-ಆಶ್ರಮ, ಕುಲ-ಧರ್ಮಗಳ ಅಮಷ್ಠಾನವನ್ನು ಸಂಪೂರ್ಣ ನಿಷೇಧಿಸಿದನು. 'ರಾಜ್ಯದಲ್ಲಿ ಯಾರೂ ಯಜ್ಞ ಮಾಡಬಾರದು, ದಾನ ನೀಡಬಾರದು; ಹವನ ನಡೆಸಬಾರದು' (ನ ಯಷ್ಟವ್ಯಂ, ನ ದಾತವ್ಯಂ ನ ಹೋತವ್ಯಂ ದ್ವಿಜಃ ಕ್ವಚಿತ್) ಎಂದು ಘೋಷಿಸಿದನು. ಈ ಘೋಷಣೆಯಿಂದ ಧರ್ಮಕ್ಕೆ ಲೋಪವಾಗುವುದೆಂದು ಕೆಲವರು ರಂಜನ ಬಳಿಗೆ ನಿಯೋಗ ಹೋದರು. "ಮಹಾರಾಜ, ನೀನು ಉತ್ತಮ ಕುಲ ಸಂಜಾತ. ರಾಜ ಸಿಂಹಾಸನ ಮಂಡಿತನಾಗಿ ಧರ್ಮಚ್ಯುತಿಗೆ ಸಿದ್ಧರಾಗುವುದೇಕೆ? ವಾತಾವರಣ ಸಹಜ ಬಂಧು ಧರ್ಮ. ಧರ್ಮಜ್ಞತರು ಲೋಕದಲ್ಲಿ ಬಹು ಕಾಲ ಬದುಕಲಾರರು. ಕರ್ತವ್ಯ-ಕರ್ಮಭ್ರಷ್ಟ ರಾಜನಿಗೆ ಕರ್ತವ್ಯ ಕರ್ಮನಿಷ್ಠ ಪ್ರಜೆಗಳು ಅಂಜುವುದಿಲ್ಲ. ಕ್ರಮೇಣ ರಾಜನ ಪ್ರಜೆಗಳು ಅನಯ ಸುತ್ತ ಹೋಗುತ್ತಾರೆ" ಎಂದು ಕೈಜೋಡಿಸಿ ನಿವೇದಿಸಿಕೊಂಡರು.

ಅವರು ಮುಂದುವರಿದು ಅರಿಕೆ ಮಾಡಿಕೊಂಡರು: ಅಧರ್ಮಿಯು ದೇಶದ ರಾಜನಾಗಿರುವುದು ಅಥವಾ ದೇಶವು ಅರಾಜಕವಾಗಿರುವುದು ಒಂದೇ ಸಮ. ಸೃಷ್ಟಿಪಾಲಕ ಪರಮೇಶ್ವರನ ಭಯ ಮತ್ತು ಗೌರವಗಳಲ್ಲದ ದೇಶದಲ್ಲಿ, ವಿಷ್ಣುವಿನ ಮೂಜೆ ನಡೆಯದಲ್ಲಿ ಅರಾಜಕತೆ ತಾನೇ ತಾನಾಗಿ ಹರಡಿತ್ತದೆ. ಜನರು ಬಲಾತ್ಕಾರವಾಗಿ ಪರಸ್ತ್ರೀಯರನ್ನು ಅತ್ಯಾಚಾರಕ್ಕೆಳಸುತ್ತಾರೆ. ಬ್ರಾಹ್ಮಣರ ಕೃಷಿ ಕ್ರಿಯೆಗಳಲ್ಲಿ ಕ್ಷತ್ರಿಯರು ಬ್ರಾಹ್ಮಣರಲ್ಲಿ ಕವಿ ಸಲಾರಂಭಿಸುತ್ತಾರೆ. ಇದರಿಂದ ಸಂಕರ ಸೃಷ್ಟಿಯೊಗುತ್ತದೆ. ಧರ್ಮ ದುರ್ಗತಿ ಹೊಂದುತ್ತದೆ; ರಾಜ್ಯ ಕಾರಾಜ್ಯವಾಗುತ್ತದೆ. ಒಳ್ಳೆಯ ಅರಸನು ಧರ್ಮಪತ್ನಿಯಾಗಿರುತ್ತಾರೆ."

'ಸರಿಯೇ; ನಮ್ಮ ದೇಶದಲ್ಲಿ ಸಂಕರವನ್ನು ಹರಡಿಸೋಣ. ಆದರಿಂದ ಏನು ಪರಿಣಾಮವಾಗುವುದೆಂಬುದನ್ನು ಕಾದುನೋಡೋಣ' ಎಂದ ಮಹಾರಾಜ ವೇಣನ ನೇರಾಗಿ ಅಂತಃಪುರ ಹೊಕ್ಕನು.

ರಾಜನು ಬಲಾತ್ಕಾರವಾಗಿ ವರ್ಣಸಂಕರ ನಡೆಸಿದನು. ಕ್ಷತ್ರಿಯರು ಬ್ರಾಹ್ಮಣ ಸ್ತ್ರೀಯರನ್ನು ಕವಿದರು. ರಾಜನು ಧರ್ಮವನ್ನು ಅವಹೇಳನೆ ಮಾಡಿ, ತಾನು ಅತ್ಯಂತ ಲಾಲಸೆಯಿಂದ ಘೋರಾರು ಧರ್ಮ ವಿರೋಧವಾದ ಕಾನೂನ ಗಳನ್ನು ಮಾಡಿದನು. "ಎಲ್ಲ ವಿಧದ ಯಜ್ಞಗಳಲ್ಲೂ ನನ್ನನ್ನೇ ಪೂಜಿಸಬೇಕು, ನನ್ನ ಸ್ಥಾನ, ನಡೆಯ ಬೇಕು. ನನಗಾಗಿಯೇ ಯಜ್ಞ ಕ್ರಿಯೆಗಳೂ ಹವನವೂ ನಡೆಸುವೇಕು.' ಎಂಬ ಶಾಸನ ಹೊರಡಿಸಿದನು.

ಮುನೀಶ್ವರಾದಿ ಮಹರ್ಷಿಗಳಿಗೆ ಈ ಅಧರ್ಮ ಶಾಸನವನ್ನಿಸಿಗೆ ಸಾಂಬರಲಿಲ್ಲ. ಆ ವಕ್ಷಿಲ್ಲರೂ ಕೂಡಿಕೊಂಡು ಈ ವಿಚಿತ್ರ ಶಾಸನವನ್ನು ಹಿಂದೆಗೆದುಕೊಳ್ಳ ಬೇಕೆಂದು ರಾಜನನ್ನು ಪ್ರಾರ್ಥಿಸಿಕೊಂಡರು- 'ಅಧರ್ಮ ಮಾರ್ಗ ಪ್ರವೃತ್ತನಾಗಿದ್ದೀಯೇ. ನೀನು ಮಾಡಿದಂತೆ ಹೊರೂ ಇದುವರೆಗೂ ಮಾಡಿದ್ದಿಲ್ಲ. ನಮ್ಮ ದೇಶದ ಪರಂಪರೆಗೆ ನಿನ್ನ ಶಾಸನ ಸರ್ವಥಾ ಅನುಕೂಲವಲ್ಲ. ಪಟ್ಟಾಭಿಷೇಕದ ವೇಳೆ ಪ್ರಜಾಪಾಲನೆ ಮಾಡುತ್ತೇನೆಂದು ಮಾಡಿದ್ದ ಪ್ರತಿಜ್ಞೆಯನ್ನು ನೆನಪಿಸಿಕೋ. ಪ್ರಜಾಪಾಲನೆ ಮಾಡು.'

ಮಹಾರಾಜ ವೇಣನಿಗೆ ನಗು ಬಂತು. "ಮಹರ್ಷಿಗಳೇ, ಜೀವ ನನ್ನದು. ದೇಶದ ಧರ್ಮ ನಿರೂಪಿಸುವವನೂ ನಾನೇ. ನಾನು ಯಾರ ಮಾತು ಯಾಕೆ ಕೇಳಬೇಕು? ನಾನು ಮಾಡಿದ್ದು ಸಮರ್ಪಕವಾದದ್ದು, ಅದೇ ಧರ್ಮಸಮ್ಮತವಾದದ್ದು. ಪರಾಶ್ರವ, ಶಾಸ್ತ್ರ ಜ್ಞಾನ, ತಪಸ್ಸು, ಸೈನ್ಯ ಬಲ ಮೊದಲಾದುವುಗಳಲ್ಲಿ ನನ್ನ ಸಮಾನರು ಈ ಲೋಕದಲ್ಲಿ ಯಾರಿದ್ದಾರೆ? ನೀವು ನನ್ನನ್ನೇ ಮಹಾತ್ಮನೆಂದು ತಿಳಿಯಿರಿ. ಹಾಳು ನಿಮ್ಮ ಭಕ್ತನಲ್ಲ; ನಿಮ್ಮ ಮಾತು ಕೇಳುವ ಅಗತ್ಯವೂ ನನಗಿಲ್ಲ. ಸ್ವಇಚ್ಛೆಯಿಂದ ಇಡಿಯ ದೇಶವನ್ನು ಸುಟ್ಟು ಬಿಡಲೂ ನಾನೇ ಸರ್ವಸ್ವತಂತ್ರನ. ಪ್ರಜಾಪತಿಯೂ ಧರ್ಮನಿರ್ಮೋಚನೂ ನಾನೇ ಎಂದು ತಿಳಿದುಕೊಂಡು ನಡೆದು ಕೊಳ್ಳಿ." ಎಂದನು ವೇಣ.

ಮಹರ್ಷಿಗಳಿಗೆ ವೇಣನ ಮೇಲೆ ಕರುಣೆ ಮೂಡಿತು— "ವೇಣ, ಈ ರೀತಿಯ ದುರ್ವಾಸನೆ ನಿನಗೆ ತರವಲ್ಲ. ನೀನು ಪ್ರಜಾಪಾಲಕನು ಮೃತ್ಯುನೇಯೇ. ಪ್ರಜಾಪಾಲನೆಯು ಧರ್ಮದಿಂದ ಮೃತ್ಯು ನಾಧ್ಯ. ಅದುದರಿಂದ ಪಾಪಕರ್ಮಗಳಿಂದ ದೂರವಿದ್ದು ಧರ್ಮವನ್ನು ಪಾಲಿಸಿಕೊಂಡು ಬಾ" ಎಂದು ಹಿತವಾದ ನುಡಿದರು.

ವೇಣನೇನು ಈ ಬಗ್ಗೆ ತಲೆ ಕೆಡಿಸಿಕೊಳ್ಳುವವನೆ? "ನೀವು ಯಾವುದನ್ನು ಧರ್ಮವೆನ್ನುತ್ತೀರಿ? ನಾನೇ ಪರಮ ಧರ್ಮ. ಇದನ್ನು ನಾನೇ ರಕ್ಷಿಸುವವನು. ಆದ ದರಿಂದ ನನ್ನದೇ ವೇದವಾಕ್ಯ; ನಾನೇ ಧರ್ಮಸ್ವರೂಪ. ನನ್ನ ಆಜ್ಞಾಪಾಲನೆ ಮಾಡುವುದು ನಿಮ್ಮ ಕರ್ತವ್ಯ."

ಋಷಿಗಳು ಮತ್ತೂ ಹೇಳಿದರು-"ಮಹಾರಾಜ, ಬುದ್ಧಿಯನ್ನು ಸ್ಥಿಮಿತಕ್ಕೆ ತಂದುಕೋ. ಘೋರಿಂಶಕನಾಗಬೇಡ. ನೀನು ಬಹಳ ಶಕ್ತಿಶಾಲಿಯಿರಬಹುದು. ಆದರೆ, ಪ್ರಜಾಪೀಡನೆಯು ದಪ್ಪ ಪಾಪವೆಂಬುದನ್ನು ಯೋಚಿಸಿ ನೋಡು."

"ಜಗತ್ತಿನಲ್ಲಿ ನನಗಿಂತ ಬುದ್ಧಿವಂತರು ಮತ್ತೊಬ್ಬರಿಲ್ಲ. ಋಷಿಗಳೆಲ್ಲ ಗೊತ್ತು. ನನ್ನ ಆಜ್ಞಾಭಂಗಕ್ಕೆಯ್ದುವವರಿಗೆ ದಂಡನೆ ನೀಡುವುದೂ ನನಗೆ ಗೊತ್ತು." ಋಷಿಗಳು ಕೆರ್ರೀಭೆಗೊಂಡರು. ಋಷಿ ಕೋಪವನ್ನು ಕಂಡ ವೇಣನು ಅಂಜಿದನು. ಶಾಪಭಯದಿಂದ ಕಂಗೆಟ್ಟನು. ಪ್ರಾಜ್ಞ ಪತಿ ಕಾರ್ಯದರ್ಶಿ ಪ್ರಜೆಗಳು ತನಗೆ ವಿರುದ್ಧರಾಗುವರೆಂಬುದು ಅತನಿಗೆ ಈಗ ಮನವರಿಕೆಯಾಯ್ತು. ಆವನು ಓಡಿಹೋಗಿ ಬಿವಿರ ಹಿಂಡಲಲ್ಲಿ ಅವಿತುಕೊಂಡನು. ಜನತೆ ಅತನನ್ನು ಹುಡುಕತೊಡಗಿತು. ಅತನನ್ನು ಅರಸಿ ಎಳೆತಂದಿತು. ರಾಜ ಪದದಿಂದ ಕೆಳಕ್ಕಿಳಿಸಿತು; ದೇಶಾಂತರ ಕಳುಹಿಸಿತು.

ಪದಚ್ಯುತ ವೇಣ ಕಾಡು ಸೇರಿದನು. ಅಲ್ಲೊಂದು ಕುಟೀರ ಕಾಣಿಸಿತು. ಅದು ತ್ರಿಣಬಿಂದು ಮಹರ್ಷಿಯದ್ದು. ಓಡಿಬಂದ ವೇಣನಿಗೆ ಆತ ಆಶ್ರಯವಿತ್ತನು; ಅಭಯ ನೀಡಿದನು. ಮುನಿಯ ಸಂಪರ್ಕದಿಂದ ವೇಣನ ಮನಸ್ಸು ಪರಿಶುದ್ಧವಾಯಿತು. ಕಾಮಕ್ರೋಧ ವಿರಹಿತನಾಗಿ ರೇವಾನದೀ ತಟದಲ್ಲಿ ಆತ ತಪಸ್ಸು ಮಾಡತೊಡಗಿದನು. ತನ್ನ ಪೂರ್ವಾಯುಷ್ಯವನ್ನು ಪ್ರಜಾಪೀಡನಾ ಪ್ರಾಯಶ್ಚಿತ್ತದಲ್ಲಿ ಕಳೆದನು. ಭಾವನಾಮಯ ಭಗವಂತನು ಆತನೊಡನೆ ಕೇಳಿದ—"ಲೋಭದಲ್ಲಿ ಉರುಳಿ, ತಪ್ಪುದಾರಿಯಲ್ಲಿ ಜಾರಿಬಿದ್ದ ನಿನ್ನ ಆಜ್ಞಾವನೆಲ್ಲ ಈಗ ಎಲ್ಲಿ ಓಡಿಹೋಯಿತು?"

"ನನ್ನ ಪೂರ್ವಜನ್ಮದ ಪಾಪದ ಫಲವಾಗಿ ಅಜ್ಞಾನವಶನಾಗಿ ನಿನ್ನಿಂದ ಪ್ರಜಾಪೀಡನೆಯ ಘೋರ ಪಾಪಕಾರ್ಯ ನಡೆಯಿತು. ನನ್ನನ್ನು ಅದುಂದ ಉದ್ಧರಿಸು"—ವೇಣ ಭಗವಂತನ ಮುಂದೆ ತಲೆಬಾಗಿ ಕೈಮುಗಿದು ಹಣೆ ಚಾಚಿದನು.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

READ & ADVERTISE IN
NAVAYUGA WEEKLY

ಫೋನ್ : 526

ಸ್ಥಾಪನೆ: 1921

ಸಂಪುಟ ೪೯
ಸಂಚಿಕೆ ೪೬
VOL. 49
No. 46

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೨೩—೭—೧೯೭೦

ಸ್ಥಾಪಕರು:
ದಿ ವಿ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ ರೂ. 10/-

Advt. Rate Rs. 3/- per colm. cm.

ಹಗರಣದ ಭೆಟ್ಟಿ

ಇಂಡಿಕೇಟ್ ಪ್ರತಿಷ್ಠಾಪಕಾಚಾರ್ಯ ಶ್ರೀಮತಿ ಇಂದಿರಾಗಾಂಧಿಯವರು ತನ್ನ ಖಾಸಗಿ ಸಂದರ್ಶನವೆಂದು ಕರ್ನಾಟಕವನ್ನು ಭೆಟ್ಟಿ ಮಾಡಿದರು. ಆಕೆಯು ಪ್ರಧಾನ ಮಂತ್ರಿಯೂ ಆಗಿರುವುದರಿಂದ ಈ ರಾಜ್ಯ ಸಂದರ್ಶನವು ಸಂಪೂರ್ಣ ಯಶಸ್ವಿಯೂ ಗುಣಂತೆ ಮೂಡುವುದು. ರಾಜ್ಯ ಸರಕಾರದ ಕರ್ತವ್ಯವೂ ಹೌದು. ಈ ಸಂಬಂಧದಲ್ಲಿ ಬಹಳಷ್ಟು ಹಣವೂ ವೆಚ್ಚವಾಗಿದ್ದರೂ ಅವಾವುದೂ ಭೆಟ್ಟಿಯು ನೀಡಿದ ಪ್ರಯೋಜನಾಮ ಬೀರಲಿಲ್ಲವೆಂಬುದು ಸಂತೋಷದ ಸಂಗತಿ. ಪ್ರಧಾನಿಯು ಪ್ರವಾಸವನ್ನು ಭಂಗಗೊಳಿಸುವಲ್ಲಿ ಸರಕಾರವೇಕಟಬದ್ಧವಾಗಿದೆಯೆಂದು ಶ್ರೀ ಸಿದ್ಧವೀರಪ್ಪನವರಂತಹ ಇಂಡಿಕೇಟ್ ನಾಯಕರು ದೂರಿದ್ದರೂ ಇದರಲ್ಲಿ ಹುರುಳೇ ಇರಲಿಲ್ಲವೆಂಬುದಕ್ಕೆ ಪ್ರತ್ಯಕ್ಷವೇ ಸಾಕ್ಷಿಯೂಯಿತು. ಹತ್ತು ಹಲವು ಪರಂಪರೆಗಳಿಗೆ ಹೆಸರಾದ ಕರ್ನಾಟಕವು ರಾಜ್ಯಕೀಯ ಭಿನ್ನಾಭಿಪ್ರಾಯಗಳಿಗೂ ಪರ್ವಪರಂಪರೆಯೂ ಏನೇನೂ ಸಂಬಂಧವಿಲ್ಲ ವೆಂಬುದನ್ನು ಮತ್ತೊಮ್ಮೆ ತೋರಿಸಿ ಕೊಟ್ಟಿತು. ಇದನ್ನು ಪ್ರಧಾನಿಯವರೂ ಅರಿತು ಕೊಳ್ಳ ಬೇಕು. ಯಾರು ಯಾರ ಮೂಗನ್ನೋ ಕೇಳಕೊಂಡು ಹೊಣೆಗೆಟ್ಟವರಂತೆ ಅಧಿಕಾರದಲ್ಲಿರುವವರು ನಡೆದು ಕೊಳ್ಳಬಾರದು.

ಶ್ರೀಮತಿ ಗಾಂಧಿಯವರ ಈ ಖಾಸಗಿ ಸ್ವರೂಪದ ಸಂದರ್ಶನದ ಮುಖ್ಯೋದ್ದೇಶವೇನೆ? ಅವರು ಭೆಟ್ಟಿಯಲ್ಲಿ ವಿಶೇಷ ಪ್ರಕಟಿಸಿದ ರೀತಿ-ನೀತಿಯನ್ನು ಅವಲೋಕಿಸುವಾಗ ಒಂದು ಮಾತು ಸ್ಪಷ್ಟವಾಗಿ ತ್ತದೆ—ರಾಜ್ಯದಲ್ಲಿ ಇಂಡಿಕೇಟಿನ ಬಲ ಸಂವರ್ಧನವೇ ಮುಖ್ಯೋದ್ದೇಶವೆಂದು ಹೇಳಲಾಗುತಿದ್ದರೂ ಸಿಂಡಿಕೇಟಿನ ಬಲ ಮುರಿದೇ ಈ ಬಲ ಸಂವರ್ಧನ ಮಾಡುವುದು ಮುಖ್ಯ ಗುರಿ. ಏಕೆಂದರೆ, ಸಿಂಡಿಕೇಟ್ ಪ್ರಬಲವಿರುವ ದಕ್ಷಿಣದ ರಾಜ್ಯ ಕರ್ನಾಟಕ. ಸತ್ಯ ಹೇಳುವುದಾದರೆ, ಶ್ರೀ ದೇವರಾಯಯವರ ಗುಜರಾತಕ್ಕಿಂತಲೂ ಸದೃಢ ಸರಕಾರ ಇಲ್ಲಿದೆ. ಶ್ರೀ ವೀರೇಂದ್ರ ಪಾಟೀಲರು ಮುಖ್ಯಮಂತ್ರಿತನವನ್ನು ನಿರ್ವಹಣೆಯಿಂದ ಫಿಥಾಯಿಸಿಕೊಂಡು ಹೋದುದೇ ಇದಕ್ಕೆ ಕಾರಣವೆನ್ನುವುದಕ್ಕಿಂತ ಶ್ರೀ ನಿಜಲಿಂಗಪ್ಪನವರಿಗೆ ಅಖಿಂಡ ಹೆಂಬಲವಿಲ್ಲಿತ್ತು, ಅದೇ ಮುಂದುವರಿಯಿತು ಎಂದು ಹೇಳಿದರೂ ಸರಿಯೇ. ಜಾತೀಯತೆ ಮತ್ತು ಪ್ರಾದೇಶಿಕತೆಗಳಿಗೆ ಹೆಸರಾದ ಕರ್ನಾಟಕಕ್ಕೆ ಒಂದು ಸುದೃಢ ಸರಕಾರವನ್ನು ತಂದು ಕೊಟ್ಟವರು ಶ್ರೀ ನಿಜಲಿಂಗಪ್ಪ ಗುಂಪಿನವರು. ಹಳೆಯ ಮೈಸೂರಿಗರು ಎಲ್ಲರೂ ಅಧಿಕಾರಲಿಪ್ಸುರಾಗಿ ತಂತಮ್ಮೊಳಗೆ ಹೊಡೆದಾಡಿ ಕ್ತಿದ್ದಾಗ, ಉತ್ತರ ಕರ್ನಾಟಕದವರು ಒಂದಾಗಿ ಅವರೆದೆಯು ವೇಲೆ ನಿಂತದ್ದು ಸತ್ಯ. ಆದುದರಿಂದ, ಉತ್ತರ ಕರ್ನಾಟಕದಲ್ಲಿ ಶ್ರೀ ನಿಜಲಿಂಗಪ್ಪನವರಿಗೆ ಇರುವ ಜನಾಭಿಪ್ರಾಯವನ್ನು ತಿರುಗಿಸಿ ತನ್ನತ್ತ ಹರಿಯುವಂತೆ ಮಾಡುವುದು ಶ್ರೀಮತಿ ಗಾಂಧಿಯವರ ಪ್ರಚಲಿತ ಸಂದರ್ಶನದ ಪ್ರಧಾನೋದ್ದೇಶ. ಅವರು ಭೆಟ್ಟಿ ನೀಡಿದ ಸ್ಥಳಗಳಾದರೂ ಮತ್ತೆಯಾಗಿ ಅವೇ. ಬೇರೆ ಬೇರೆ ಕಾರಣಗಳನ್ನು ಮುಂದೊಡ್ಡಿ ಅವ್ಯಕ್ತವಾಗಿ ರಾಜ್ಯ ಸರಕಾರವನ್ನು ನಿಂದಿಸಿ, ತನ್ನ ಪ್ರತಿಪ್ಕೆಯನ್ನು ಮೆರೆಯಿಸಿ, ಇಂಡಿಕೇಟೊಂದೇ ಸಮೂಹವಾದದ ಕೈಗಾಕಿಯೆಂದು ಹಂಗುರಿಸಾರುವ, ಸಿಂಡಿಕೇಟು ಜಾತೀಯವಾದಿಗಳ, ಬಂಡವಳ ಶಾಹಿಗಳ ಆಶ್ರಯ ಪಡೆದಿದೆಯೆಂದು ಹೇಳುವ, ಒಂದು ಕಾಲದಲ್ಲಿ ಕಾಂಗ್ರೆಸ್ ಆಗಿದ್ದವರು ಈಗ ಕಾಂಗ್ರೆಸ್ ಫೀತಿಯನ್ನೇ ಮರೆತುಬಿಟ್ಟು ಅದಕ್ಕೆ ವಿರುದ್ಧವಾಗಿ ನಡೆಯುತ್ತಿದ್ದಾರೆಂದು ಘೋಷಿಸುವ ಮೂಲಕ ತನ್ನ ಪಕ್ಷದ ಪ್ರಚಾರವನ್ನು ಬಿರುಸಿನಿಂದಲೇ ಮಾಡಿದ್ದಾರೆ. ಶ್ರೀ ನಿಜಲಿಂಗಪ್ಪನವರ ಮೇಲೆ ವ್ಯಕ್ತಿಗತ ದ್ವೇಷ ಬಾಧಿಂದ ಇಂಡಿಕೇಟು ಅದ ಕೆಲವು ಮಾಜಿ ಮಂತ್ರಿಗಳೂ ಹಳೆಯ ಮೈಸೂರಿಗರೂ ಆವರ ಅನುಯಾಯಿಗಳಾಗಿದ್ದಾರೆ. ಶ್ರೀಮತಿಯವರನ್ನು ಎಳೆದೋ ರಾಜ್ಯಕ್ಕೆ ಕರೆದುಕೊಳ್ಳ ಬೇಕೆಂದಿದ್ದ ಶ್ರೀ ದೇವರಾಜ ಅರಸರ ಜಯಕ್ಕೆ ಇಷ್ಟ ತಡವಾಗಿಯಾದರೂ ಈಡೇರಿತು; ಆದರೆ, ಅವರ ಇನ್ನೊಂದು ಹೆಬ್ಬಯಕೆ—ಸಿಂಡಿಕೇಟನ್ನು ಪೆಟ್ಟು ನಿಶ್ಶಾವುದು—ಈಡೇರಿಸಿಕೊಳ್ಳುವುದು ಮಾತ್ರ ಮುಂದಿನ ಮಹಾಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಸಂಪೂರ್ಣ ಬಹುಮತ ಗಳಿಸಿದಲ್ಲಿ ಮಾತ್ರ ಸಾಧ್ಯವಾಗಬಹುದು.

ಶ್ರೀಮತಿ ಗಾಂಧಿಯವರಿಗೆ ಬೀದರದಲ್ಲಾಗಲೀ ಉಳಿದೆಡೆಯಾಗಲೀ ದೊರೆತ ಸ್ವಾಗತ ಅಕೆ ಪ್ರಧಾನ ಮಂತ್ರಿಯಾಗಿಯೂ ಬಂದಿರುವುದರಿಂದ ಎಂಬುದನ್ನು ಸುರಿಯುವಾರದು. ಅಧಿಕಾರ ಸ್ಥಾನದಿಂದ ಇಳಿದು ಇಂಡಿಕೇಟ್ ನಾಯಕೆಯಾಗಿ ಮೂಕ್ಕಲಕೆ ಇಳಿದ ಬರುತಿದ್ದರೆ, ಆಗ ಬೆಂಬಲ ಆದಕ್ಕೆ ಸರಿ ಸಾಗೇ ಸಿಗುತಿತ್ತು. ಶ್ರೀಮತಿ ಗಾಂಧಿಯವರು ತಮ್ಮ ರಾಜ್ಯಕೀಯ ಉದ್ದೇಶಗಳಿಗೆ ಅಧಿಕಾರ ಸ್ಥಾನವನ್ನು ಹೇಗೆ ಬಳಸಿ ಕ್ತಿದ್ದಾರೆಂಬುದಕ್ಕೆ ಅವರ ಈ ಖಾಸಗಿ ಪ್ರವಾಸವೊಂದು ಉದಾಹರಣೆ. ಶ್ರೀಮತಿಯವರು ಬೆಳಗಾಂವಿ ಪ್ರಶ್ನೆಯ ಇತ್ಯರ್ಥಕ್ಕೆ ಬಹಳ ಕಾಲ ಕಳೆಯಿತೆಂಬುದನ್ನು ಒಪ್ಪಿಕೊಂಡರು, ಅಕುರದ ನಿರ್ಧಾರ ಗಡುವಾಂತರಕಾರಿಯೆಂಬ ಹೇಳಿಕೆ ಇನ್ನೂ ಬಹುಕಾಲ ಪ್ರಶ್ನೆಗೆ ಉತ್ತರವರ ಸುವುದಿಲ್ಲವೆಂಬ ಸೂಚನೆ ನೀಡಿದರು. ಆದರೆ, ಈಗ ತಿಳಿದಿರುವಂತೆ ಬೆಳಗಾಂವಿ ನಗರ ಛೇದಪಥದ ಪರಿಹಾರ ಸೂತ್ರ ರಚಿಸಿ ಟುಂದಿರುವ ಆಕೆ ದಿಲ್ಲಿಗೆ ಹೋದೊಡನೆಯೇ ಅದನ್ನು ಘೋಷಿಸಬಹುದು; ಅಥವಾ ಮುಂದಿನ ಜನಾವಣೆಗಳ ವರೆಗಾದರೂ ಸುಮ್ಮನಿರುವಂತೆ ಮಹಾರಾಷ್ಟ್ರದ ನಾಯಕರಿಗೆ ಕೈ ಮುಗಿಯಬಹುದು. ಒಂದು ವಿಷಯ ಸತ್ಯ—ಶ್ರೀಮತಿ ಗಾಂಧಿಯವರು ಪ್ರಧಾನಮಂತ್ರಿಯೂ ಗಿರುವವರೆಗೆ ಬೆಳಗಾಂವಿ ಸಂಪೂರ್ಣವಾಗಿ ಕರ್ನಾಟಕದಲ್ಲಿ ಉಳಿಯುವುದಿಲ್ಲ. ತಮ್ಮದನ್ನು ಉಳಿಸಿಕೊಳ್ಳಲು ಕನ್ನಡಿಗರು ಂದಾಗಬೇಕು; ಮಗು ಅಳದೆ ಹೋದರೆ ತಾಯಿ ಹಾಲೂಡುವುದಿಲ್ಲ; ಈಗತಾವೇ ಅಜ್ಜಿಯೂದವಳು ಎತ್ತಿಕೊಂಡು ಮುದ್ದಾಡುವುದಿಲ್ಲ.

ಶೇಖರಿಗೆ ಅಂಕುಶ ಬೇಕು

ಕಾಶ್ಮೀರದ ಮಾಜಿ ಪ್ರಧಾನ ಮಂತ್ರಿ ಶ್ರೀ ಶೇಖ ಅಬ್ದುಲ್ಲರವರ ಬಗ್ಗೆ ಈಗ ದೇಶ ಕಂಬ ಅತಿಮಾಧಾನ ಟುಂಬಿದೆ. ಇಪ್ಪತ್ತ ವರುಷವರ್ಷಗಳಿಗೆ ಮೊದಲ ಕಾಶ್ಮೀರವನ್ನು ಭಾರತದಲ್ಲಿ ವಿಲೀನಗೊಳಿಸುವ ದಿಟ್ಟ ಹೆಜ್ಜೆ ಇಟ್ಟು ಅದರಲ್ಲಿ ಯಶಗಳಿಸಿದ ಶ್ರೀ ಶೇಖರು ಅನಂತರ ಹಲವು ಬಾರಿ ತಮ್ಮ ನಿಲುವಲ್ಲಿ ಬದಲಾವಣೆ ಮಾಡಿದರು. ಈಗ 'ಸ್ವಾತಂತ್ರ್ಯವನ್ನು ಬಿಟ್ಟುಲಲ್ಲಿ ಇಟ್ಟು ಯಾರೂ ಕೊಡುವದಿಲ್ಲ; ಅದನ್ನು ಕಿತ್ತು ಪಡೆಯಬೇಕು' ಎಂದು ಅವರು ಕಾಶ್ಮೀರಿಗಳಿಗೆ ಉಪದೇಶ ಫೀಡಿದ್ದಾರೆ. ಅವರ ಜನಮತ ಗಣನಾವಾರಂಗವು ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಸ್ಪರ್ಧಿಸಲಿ. ಸ್ಪರ್ಧಿಸಿದೆ. ಪ್ರಾದೇಶಿಕ ಭಾವನೆಯು ಫಿಟ್ಟಿನಲ್ಲಿ ಇದು ವಿವಾದನೆಗೆ ವಿಘಟನೆಗೆ ಕಾರಣವಾಗಬಹುದು, ಶ್ರೀ ಶೇಖ ಅಬ್ದುಲ್ಲರವರ ಮೂಲ-ಉದ್ಧಾರಗಳು ದೇಶದ ಶಾಂತಿಯನ್ನು ಕೆಡಿಸುವಂತಿವೆಯೆಂದೂ ಕಾಶ್ಮೀರ ಪ್ರಶ್ನೆಯು ಲಂದೇ ಮಗದಿರೆಯೆಂದೂ ಇಂದಿನ ಪ್ರಧಾನ ಹೇಳುತ್ತಾರೆ. ಆದುದರಿಂದ ಇದಕ್ಕೊಂದು ಕೊನೆಯೊಗಬೇಡವೆ? ಶ್ರೀ ಶೇಖರ ಅಪಲಾಪಸ್ಥ ಬೇರೆಯಲ್ಲದ್ದೆಂದು ಸುಮ್ಮನಿರುವುದು ಎಂದೂ ಸಾಧ್ಯವಿಲ್ಲ. ಅವರ ಈ ಹುಚ್ಚು ಮಾತಿನ ಪರಿಣಾಮಗಳಿಗೆ ಇತರರನ್ನು ಹೊಣ್ಣರಾಗಿಸ ತ್ತದೆ. ಇದರಿಂದ ಪರಿಣಾಮ ಭೀಕರವಾಗುತ್ತದೆ. ಶ್ರೀ ಶೇಖರು ಈಗ ಸ್ವತಂತ್ರ ಕಾಶ್ಮೀರದ ಕನಸು ಕಾಣತೊಡಗಿರುವುದು; ಕಾನದರೆ ಅನೈತಿಕ ಪವಾಬವೆಂದು ಸುಂದರಸ್ವಪ್ನ ಸುಖ ಅಪಾಯವಿಸ ಸ್ತಿರ ವುದು—ಲೋಕಕ್ಕೇ ತಿಳಿದ ಸಂಗತಿ. ಇದರಿಂದ ಅವರು ಈ ಮಂದಿಸ್ತಾಗುವುದಲ್ಲಿ ಆನಂದಕುಂದಿಲ ರಾಗಬಹುದು; ಆದರೆ ಭಾರತದ ಐವತ್ತು ಕೋಟಿ ಜನತೆಗೆ ದುಃಖದ ಸಾಮೂಹ ಫೀಡಿತರಿದ್ದಾರೆ. ಆದುದರಿಂದ ಶ್ರೀ ಶೇಖರ ನಾಲಿಗೆಗೊಂದು ಕಡಿವಾಣ ಹಾಕುವ ಬಗ್ಗೆ ದೇಶ ವಿಘಟನಾ ಹೇಳಿಕೆ ನಿಡುವುದನ್ನು ಪ್ರತಿಭಟಿಸುವ ಬಗ್ಗೆ ಅಂಕುಶ ಹೇರುವುದು ಅನಿವಾರ್ಯ.

ಚಾರುಚುಯನ

ಕಾಲೇಜಿನಲ್ಲಿ ತನಗೆ ಸೀಟು ಕೊಡಲಿಲ್ಲವೆಂಬ ಕಾರಣಾಂತರ.

ತನ್ನ ಭವಿಷ್ಯವನ್ನು ಕೆಡಿಸಿದರೆಂಬ ಸಿಟ್ಟಿನಿಂದ-

ನಿನ್ನ ಭವಿಷ್ಯವನ್ನೂ ಅಂಧಕಾರಮಯವಾಗಿಸುವೆನೆಂಬ ಛಲದಿಂದ-

ಪ್ರಿನ್ಸಿಪಾಲರು ಕಾಲೇಜಿದ ಸೀಟ್ಟಲಾ ಹತ್ತತ್ತಿರುವಾಗ.

ಪ್ರವೇಶ ರ್ಥಿಯೊಬ್ಬ ಕಬ್ಬಿಣದ ಸಲಕೆ ಯಿಂದ—

ಅವರ ತಲೆಗೆ ಹೊಡೆದನಂತೆ! ಆಸ್ಪತ್ರೆ ಸೇರಿದ ಪ್ರಿನ್ಸಿಪಾಲರು ಅಲ್ಲೇ ಕೊನೆಯುಸಿರೆಳೆದರಂತೆ.

ಇದು ವಿದ್ಯಾರ್ಥಿಸಮುದಾಯಕ್ಕೇ ಲಜ್ಜಾಸ್ಪದ—ಸರಸ್ವತಿ ವಂದಿರದಲ್ಲೇ ನರಪಶುವನ್ನು ಬಲಿ—ಎಂದು ಮುಂತಾದ ಹೇಳಿಕೆಗಳು ಸದ್ದಿಯ ಬಾಲ.

ಆಗಬಾರದ್ದು ಆಗಿ ಹೋದ ಮೇಲೆ, ಮನೆಗೆ ಬೆಂಕಿ ಬಿದ್ದ ಮೇಲೆ ಕಾರಣವರಿಸುವುದು ಜಾಣತನವಲ್ಲ.

ಇಮ ಹೀಗೆಯೇ ನಡೆಯುತ್ತ ಹೋದರೆ, ಶಿಕ್ಷಣದಲ್ಲಿ ಗುಣಾತ್ಮಕ ಸ್ಥಾನವನೆಳೆನಿತೂ ಇಲ್ಲ, ಶಿಕ್ಷಣ ಸೌಲಭ್ಯಗಳು ವಿಸ್ತಾರವಾಗುತ್ತ ಬಂದಂತೆ ಅವರ ಗುಣ ಇಳಿಯುತ್ತ ಬರುತ್ತಿದೆ.

ಪ್ರಿನ್ಸಿಪಾಲರೇ ವಿದ್ಯಾರ್ಥಿಗಳ ಮೊದಲ ಬೇಟೆಯಲ್ಲು.

ಪರೀಕ್ಷೆಗಳಲ್ಲಿ ಅವ್ಯವಹಾರ ಮಾಡಿದ್ದಕ್ಕೆ ತಮ್ಮ ತಮ್ಮವರನ್ನು ಹಿಡಿದು ಕೊಟ್ಟದ್ದಕ್ಕೆ ಅಂಕಗಳಸಲಾರದೆ ಅನ ತ್ತೀರ್ಣರಾದದ್ದಕ್ಕೆ ಅಥವಾ ಇನ್ನಾವುದೇ ತಾನು ತನ್ನವರು ಒಪ್ಪದ ಕೃತಿಗೆ ದ್ದಕ್ಕೆ ಶಿಕ್ಷಕರು ಬೇರೆ ಬೇರೆ ರೂಪದ ಶಿಕ್ಷೆ ಅನುಭವಿಸಿದ್ದುಂಟು. ಶಿಕ್ಷಕರ ಮನೆಗೆ ಕಲ್ಲು ಬಿದ್ದದ್ದುಂಟು ತೋಟ ಹೂರಿ ಹೋದದುಂಟು, ಪೆಟ್ಟು ತಿಂದದ್ದುಂಟು, ಹದರಿಸಿಕೊಂಡದ್ದೂಟು, ಘೇರಾವ್‌ಗೆ ಕುಕ್ಕಾದದ್ದುಂಟು ಏನಿಲ್ಲವೆಂದರೂ ಬೆನ್ನಾವಿಸಿ ಬೆದರಿಕೆ—ಎಚ್ಚರಿಕೆ ಪತ್ರಗಡೆದದ್ದುಂಟು.

ಇದೇ ದಾರಿಯು ಕೊನೆಯು ವೈಲಿಲ್ಲ

(ಹತ್ತನೇ ಪುಟ ನೋಡಿರಿ)

ಗೇಹರಾಜ್ಯದಲ್ಲಿ

ಲಾಂಗ್ ಲೀವ್ ಮಾನವ್ ವಾದ್

"ಚಲ್ರಿ, ಇದೂ ಸಾಧ್ಯನೇನು?"

"ಏನು?"

"ಅಲ್ಲ, ಬಂಗಾಳದ ಭಾರಿ ಭರ್ಜರಿ ಬಂಧು ಶಾಂತಿಯಿಂದ ಅಹಿಂಸೆಯಿಂದ ಗೆದ್ದು ಹೋಯಿತಂತೆ...'

"ಹ್ಞೂಂ, ಹಾಗೇಂತ ವರದಿ ಮಾಡಿವಾರೆ...."

'ಅಲ್ಲ, ಬೇರೆಲ್ಲಿಯೂದ್ರೂ ಹಾಗಾಯಿತೆಂದು ಹೇಳಿದರೆ ನಂಬಬಹುದು. ಆದ್ರೆ, ಆರಾಜಕತೆಯು ತಲೆಮಾರಿನೆಯೂದ ಬಂಗಾಳದಲ್ಲಿ ಅದು ಸಾಧ್ಯಾಂತ ವರದಿ ಓದಿದ ನೇಲೆ ತಿಳೀತು.'

"ಏನು ಭಾರೀ ವ್ಯಂಗ್ಯ ಅಡುತ್ತೀಯ?"

"ಏನು?"

"ಅಲ್ಲ, ವರದಿಗಾರರು ತಪ್ಪು ವರದಿ ಮಾಡಿವರೂಂತ ದೂರೋದೆ?"

'ಛೆ, ಅದ್ರೂ ಪೂರ್ತಿ ಸತ್ಯವಲ್ಲಾಂತ'

'ಅಲ್ವೆ, ಗಲಭೆ ಪಡೆಯಲೇ ಇಲ್ಲಾಂತ ಯಾರಂದರು? ಕೆಲವೆಡೆ ಗೊಂದಲ ನಡೆದಿತು; ಪೋಲೀಸ — ಮಿಲಿಟರಿ ಮೊದಲಾವನರ ವಾಹನಗಳ ಮೇಲೆ ಬಾಂಬುದಾಳಿಯೂ ನಡೆಯಿತು- ಸಣ್ಣಪುಟ್ಟ ಹಿಂಸಾಕಾಂಡಗಳೂ ನಡೆದವು, ಆದರೆ....'

'ಆದರೆ ಏನು?'

'ಇದಕ್ಕೆಲ್ಲಾ ಬಂದು ಆಚರಣಾಕಾರರೇ ಕಾರಣರೆಂದು ಹೇಳುವುದು ಸಾಧ್ಯವಿಲ್ಲ....'

'ಮತ್ಯಾರು? ಸುಮ್ಮನೆ ಕುಳಿತು ಕೊಂಡವರು ಅಥವಾ ಪೋಲೀಸರು, ಸೈನಿಕರು....'

"ಅವರನ್ನೇಕೆ ಬೊಟ್ಟು ಮಾಡಬೇಕು?"

'ವಃ ಕ್ಯಾರೂಂದ್ರೆ...."

"ಜೇಕೆ ಕೇಳಿ ಬಂಗಾಳ ನೆಹ್ರೂಯರ ಜನ್ಮಭೂಮಿ, ಕರ್ಮಭೂಮಿ..."

'ಓಹೋ, ಕಾವ್ಯ ಗೆಯ್ದು ಅಕ್ಕಾಯಗಳಿಗೆಲ್ಲ ನಕ್ಕಳಿಯರನ್ನು ಬೊಟ್ಟುಮಾಡಿ ತೋರಿಸಕ್ಕಾಗಲ್ಲ ತಾನೆ?"

"ಬಂದುಗಾರರು ಜಾಗರೂಕರಾಗಿರಲಿ."

"ಅನ್ನಲೇ ಬೇಕೆನ್ನಿ, ಆಡಳಿತಗಾರರು ಹಾಗೇ ಅನ್ನಬಹುದು."

"ಏಕೆ?"

'ಏಕೆಂದರೆ, ಎಡ — ಬಲ ಕಮ್ಯುನಿಸ್ಟರು ಶ್ರೀಮತಿ ಗಾಂಧಿಗೆ ಬೇಷರ್ತ್ ಬೆಂಬಲ ಸೂಚಿಸಲಿಲ್ಲ ಕೊಡುತ್ತಾರೆ. ಅವಳ ವಿರುದ್ಧ ಕಟ್ಟೀಕರಿಸಿದೆ ಹೋದರೆ ಇಂದಿರಜ್ಜಿ ಮೂಲೆ ಸೇರಿ ಬಿಡುವುದು..."

"ಹಿ, ನಿನ್ನ ಬುದ್ಧಿ ಭಾರೀದೂರ ಓಡುತ್ತೆ ದೆ.'

"ಆದಿರ್ಲಿ, ಸರಕಾರವೆಂಬ ಹುಂಕ್ರವೂ ಸುಮ್ಮಸುಳಿಯಲಿಲ್ಲವೆನ್ನಿ. ಬಲವಾದ ಬಂದೋಬಸ್ತಿ ಇದ್ದುದ್ದರಿಂದ ಗೊಂದಲವೆಬ್ಬಿಸಲು ಬಂದುಕಾರರಿಗೆ ಧೈರ್ಯ ಸಾಕಾಗಲಿಲ್ಲ..."

"ಅದೇನೇ ಇರಲಿ, ಬಂಗಾಳದಲ್ಲಿ ಬಾಸು ಅತ್ಯಂತ ಜುಶಕ್ತಿಯಯ್ತು."

"ಹ್ಞೂಂ, ಕೆಲಸ-ಕಾರ್ಯಗಳೆಲ್ಲ ತಿಂತು ಜನ ಜೀವನವೂ ಒಂದು ದಿನ ಸ್ಥಗಿತವಾಯ್ತು...."

"ಇದು ಬಂದಿನ ನೇಲಿಪ ಅಭಿಮೂಪ ದಿಂದ ಎಂದು ಹೇಳಲಾಗದು."

"ಮತ್ತೆ?"

"ಬಂದುಗಾರರ ಉಪದ್ರವವನ್ನು ಎದುರಿಸುವ ಗೋಜಿಗೆ ಹೋಗದವರು, ಅವರಿಗೆ ಭಯಭಕ್ತರಾದವರು...."

'ಅದು ಸರಿನ್ನಿ. ಈ ಬಂದು—ಪ್ರದರ್ಶನ ಯಾರಿಗೆ ಬೇಕು?'

'ಬಂದುಗಾರುಗೆ ಬೇಕೇ ಬೇಕು...."

'ಅಲ್ಲ, ಕಲ್ಕತ್ತ ನಗರದ ಕಾರಖಾನೆಗಳು ಕೆಲಸ ಮಾಡದ್ದರಿಂದ ಸರಾಸರಿ ಒಂದು ಕೋಟಿ ರೂಪಾಯಿಗಳ ಪಸ್ಪುವಾಯಿತಂತೆ...'

ಹಾಗಾದರೆ, ಇಡಿಯ ರಾಜ್ಯಕ್ಕಾಗಿ ನಷ್ಟ ಹತ್ತನ್ನಾದರೂ ಮಟ್ಟಿ ಇರಬಹುದು."

"ಹ್ಞೂಂ....ಆದರೆ, ಆದರ ಫಲ?"

"ಫಲವೇನು?"

"ನೋಡು, ಮಧ್ಯಾವಧಿ ಚುನಾವಣೆಗಳನ್ನು ಕೂಡಲೇ ಪಡೆಸಬೇಕು ಎಂದು ಮುಂತಾದುವು ಎಡ ಕಮ್ಯುನಿಸ್ಟರ ಬೇಡಿಕೆ."

'ಪೋಲೀಸ್ ದಮನ ನೀತಿ ನಿಲ್ಲಬೇಕೆಂಬಿತ್ಯಾದಿ ಬಲ ಕಮ್ಯುನಿಸ್ಟರ ಕೇಳಿಕೆ'

"ಇವರಿಬ್ಬರಿಗೂ ಹೆತ್ತಾರು ಪಕ್ಷಗಳ ಬೆಂಬಲ."

"ಒಂದು ನೋಡಿ, ಈಗ ಬಂದು ಕರೆದವರೆಲ್ಲ ಅಧಿಕಾರದ ರುಚಿಯನು ಸವಿ ನೋಡಿದವರೇ...."

"ಹ್ಞೂಂ, ಏನಾಯ್ತು?"

"ಅಗೋದೇಕು? ಪ್ರಧಾನಿ ಕರ್ನಾಟಕದ ಪ್ರವಾಸ ಮೊಟಕು ಮಾಡಿ ದಲ್ಲಿಕ್ಕೆ ಹಾರಿ ಹೋದರು."

"ಫಲ?"

'ರಾಜ್ಯಕೀಯ ನಾಯಕರನ್ನು ಬೆಟ್ಟಿ ಮಾಡಿದರು....'

'ಮತ್ತೆ?'

'ಮಾರಳೆ ಹಾರಿದರು....'

"ಸರೀರಿ, ಪರಿಣಾಮ?"

"ಎಲ್ಲಿಲ್ಲಾನ್ನ. ಕಲಕತ್ತೆಯ ಜನತೆಯಲ್ಲಿ ತಮ್ಮ ಬಗ್ಗೆ ಅಭಿಮಾನ ಮೂಡಿಸಿದರಷ್ಟೆ."

"ಅಲ್ರಿ, ಬಂದು—ಪ್ರದರ್ಶನ—ಆರಾಜಕತೆಗಳಿಂದ ಹೊಂದು ವರ್ಷದ ಬಂಗಾಳಿಗಳ ಶಾಂತ್ಯ ಹೃದಯದಲ್ಲಿ ಅಭಿಮಾನ ವಾದರೂ ಹೇಗೆ ಮೊಳಕೆ ಬಂದೀತು?"

"ಅದಕ್ಕೇ ಇನ್ನೂ ಕೆಲವು ಬಂದುಗಳು ನಡೆಯಬೇಕು; ಪ್ರಧಾನಿ ಉರುಸ್ ಮನೆವಾರ್ತೆ ಮಂತ್ರಿಯವರು ಅಲ್ಲೇ ಉಳಿಯಬೇಕು; ಜನತೆಯಲ್ಲಿ ಧೈರ್ಯ, ಸೈರಿತ ಬಲವನ್ನು ಮೂಡಿಸಬೇಕು...."

"ಹ್ಞೂಂ, ಅದೂ ಆಗಬಹುದು. ಅಲ್ರಿ, ಬಂದು-ಪ್ರದರ್ಶನವೆಂಬ ಉತ್ಪಾದನೆಯು ಮೂರ್ಖಗಳೆಲ್ಲ ಬಂದಾದರೆ, ಉಣ್ಣುವವರು ಯಾರು?"

'ಶ್ರೀಮತಿ ಇಂದಿರಾಗಾಂಧಿ ಪ್ರಧಾನಿಯಾಗಿರುವವರೆಗೆ ಈ ಬಗ್ಗೆ ಆಲೋಚನೆ ಆವಗತ್ಯ. ಮೂಢಹೃದಯ ಆಕೆಯದ್ದು.'

'ಆಕೆಯು ಈಗ ಮೂಡಿಯಾಗಿ ಉಳಿದಿಲ್ಲ; ಅಜ್ಜಿ ಆಗಿದ್ದಾರೆ....'

"ಅಜ್ಜಿಯಾದರೇನು? ಪಶು—ಪಕ್ಷಿ ರಾಜ—ರಾಣಿಯರ ಆದ್ಭುತರಮ್ಯ ಕಟ್ಟು ಕತೆ ಕಟ್ಟುವ, ಹೇಳುವ ಅಧಿಕಾರ ಆಕೆಗೆ ತಾನಾಗೇ ಬಂದಿಲ್ಲ?"

'ಅದು ಸರಿನ್ನಿ. ಈಗ ಆಕೆ ಮೂಡು ಕ್ಷೀರವುದಾದರೂ ಇನಕ್ಕೆಂತ ಬೇರೆ ಯಲ್ಲ.'

'ಆದಿರ್ಲಿ, ನನಗೊಂದೇ ಆಲೋಚನೆ'

'ಏನು?'

"ಬಂಗಾಳಿಗಳು ಮಧ್ಯಾವಧಿ ಚುನಾವಣೆಗಳನ್ನು ಈಗ ಬಯಸುತ್ತಾರೆಯೇ ಅಂತ...."

'ಅಲ್ರಿ, ಅವರು ಬಯಸುವಿದ್ದೇನು? ರಾಜ್ಯಕೀಯ ಪಂಡಿತರಿಗಳು ಜಯ.ಸಂತ್ರೆ. ಮಂದೆ ನಡೆಯಬಹುದಾದ ಚುನಾವಣೆಗಳಲ್ಲಿ ತಮ್ಮ ಕಡೆಗೆ ಜನರೊಲವು ಗಳಿಸುವುದೇ ಅವರು ಬಂದಾಚರಿಸಿದ ಮುಖ್ಯ ಉದ್ದೇಶ..."

'ಇರಬಹುದು; ಆದ್ರೂ ಒಂದು ಮಾತು...."

"ಏನ?"

'ಈ ಬಂದ್ವಾದಿಗಳಿಂದ ಜನ ರೋಸಿ ಹೋಗಿನೆ; ಹೆದರಿ ಕಂಗಾಲಾಗಿದೆ. ಆದ್ದರಿಂದ ಈ ಮೂಲಕ ಜನರೊಲವು ಗಳಿಸಬಹುದೆಂದು ಯಾರಾದರೂ ನಂಬಿದ್ದರೆ, ಅದು ಮಹಾ ಮೂರ್ಖತನವಾಗುವುದು..."

'ಅಂದರೆ, ಅದು ಬೇಡವೆಂಕಲೆ?'

"ಸಂವಿಧಾನ ನೀಡಿದ ಈ ಹಕ್ಕು ಅತ್ಯಮೂಲ್ಯವಾದುದು.'

"ಯಾರಲ್ಲಾಂತಾರೆ? ನೋಡಿ, ಎರಡೂ ಕಡೆಯವರು ಒಂದೇ ದಿನ ಬಂದು ಮಾಡಿದ್ದರಿಂದ ಅದರ ಬೆಲೆ ಒಂದೆರಡು ಕೋಟಿ ಮೀರ್ತಾಯಿತು..."

'ಅದೇ ಅಂದದ್ದು. ಅಷ್ಟು ಬೆಲೆ ತೆತ್ತು ಬಂದು ಮಾಡಿದ್ದರಿಂದ ಯಾರಿಗಾದರೂ ಏನು ದಕ್ಕಿತು?'

"ಏನೂಂದ್ರೆ? ಬಂದುಗಾರರಿಗೆ ಅಷ್ಟೆ ಸಂತೋಷ...."

"ಹಾದಷ್ಟು, ಕೋಟಿ ಜನರ ಸಂತೋಷವನ್ನು ಕಿತ್ತುಕೊಂಡು ಸಾವಿರಾರು ಜನರು ಹಂಬಿಕೊಂಡರು- ಇದು ಸಮಾಜವಾದ-ಸಮತಾವಾದ...."

"ನೋಡಿ, ಈ ವಾದಗಳ ಹೆಸರೆತ್ತಿದರೆ ಫಲಗೆ ಸುಟ್ಟು ಬರುತ್ತೆ..."

"ನೋಡೋಣ, ಸುಟ್ಟಫಲ ಭರದಲ್ಲಿ ಭತ್ತ ಸರಿದರೆ ಅರಳು ಎಳ ಬಹುದೇಂತ."

'ಅಲ್ಲ, ನಿವಗೆ ಇದ್ರಲ್ಲಿಯೂ ತಮಾಶೆ'

"ಮತ್ತೆಂಥದ?"

"ನೋಡಿ, ಫಲಗೆ ವಿಶ್ವಾಸವಿರುವುದು ಒಂದೇ ವಾದ"

"ಹ್ಞೂಂ ಅದು...."

"ಮಾನವತಾವಾದ...."

"ನೀವೆಷ್ಟು, ಸೂಕ್ಷ್ಮನಾವಾದ ಸಾಧ್ಯ ಮಾತ್ರ; ಸಮತಾ, ಸಮೊಡ, ಪ್ರತಿ, ಪ್ರ

(ಒಂಭತ್ತನೇ ಪುಟ ನೋಡಿ)

ಸಿಂಡಿಕೇಟ್ ಬ್ಯಾಂಕ್

ಸಾಮಾಜಿಕ ಹಿತ ಕೇವಣಾತಿ ಯೋಜನೆ

ಕಾರ್ಯಗತಗೊಳಿಸಿದೆ



ಧಾರ್ಮಿಕ ಶೈಕ್ಷಣಿಕ ಮತ್ತು ದಾನ ಸಂಸ್ಥೆಗಳಿಗೆ

ನೀವು ಕೇವಣಿ ಇರಿಸಿದ 5000 ರೂಪಾಯಿಗಳಿಗೆ 7 ವರ್ಷದ ತನಕ ಪ್ರತಿ ತಿಂಗಳೂ 31 ರೂಪಾಯಿ ಪಡೆಯುತ್ತೀರಿ. ಕೊನೆಯಲ್ಲಿ ನಿಮ್ಮ ಕೇವಣಿ 5000/- ಹಾಗೇ ದೊರೆಯುತ್ತದೆ.

ಇದಕ್ಕೆ ನಿಮ್ಮದು ಧಾರ್ಮಿಕ ಅಥವ ಶೈಕ್ಷಣಿಕ ಅಥವ ದಾನ ಸಂಸ್ಥೆ ಹೌದೆಂದು ಸರಕಾರಿ ಅಧಿಕಾರಿಗೆ ಮನದಟ್ಟಾಗಬೇಕು.

ವಿವರಗಳಿಗೆ ನಮ್ಮ 400ಕ್ಕೂ ಹೆಚ್ಚಿನ ಬ್ರಾಂಚುಗಳಲ್ಲಿ ಒಂದನ್ನು ಸಮೀಪಿಸಿರಿ.

ಪ್ರತಿಯೊಂದು ಬ್ಯಾಂಕಿಂಗ್ ಆವಶ್ಯಕತೆಗಳಿಗೆ
ಪ್ರತಿಯೊಬ್ಬನ ಬ್ಯಾಂಕು.

ಸಿಂಡಿಕೇಟ್ ಬ್ಯಾಂಕ್

ಹೆಡ್ ಆಫೀಸು : ಮಣಿಪಾಲ

ಕೆ. ಕೆ. ಪೈ
ಚೆಯರ್ಮನ್

ಕುರುಡುದಾರಿಯನ್ನು ರಾಜಮಾರ್ಗವೆನ್ನುತ್ತಾರೆ

ಸಿಂಡಿಕೇಟ್ ಕಾಂಗ್ರೆಸ್ಸು ಪ್ರಜಾಸತ್ತಾತ್ಮಕ ಪಕ್ಷಗಳ ಸಂಯುಕ್ತ ರಂಗವನ್ನು ಕಟ್ಟುವ ಬಗ್ಗೆ ಅಂತಹ ಪಕ್ಷಗಳಿಗೆ ಕರೆ ಕೊಟ್ಟಿದೆ. ಈ ಕರೆಯು ಸ್ವತಂತ್ರ ಮತ್ತು ಜನಸಂಘಗಳಿಗೆ ಮಾತ್ರ ಕೊಡಲ್ಪಟ್ಟಿದೆಯೆಂದು ಪ್ರಧಾನಿ ಕಾಂಗ್ರೆಸ್ಸಿಗರು ಪ್ರಚಾರಕ್ಕೆ ತೊಡಗಿದ್ದಾರೆ. ಈ ಪ್ರಚಾರವು ಬರಿಯ ಅಪಪ್ರಚಾರವೆಂದೂ ಸಿಂಡಿಕೇಟ್ನನ್ನು ಜನರ ಕಣ್ಣಿಗೆ ಕೆಸರೆರಚಿ ತೋರಿಸುವ ರಾಜಕೀಯ ಕುತಂತ್ರವೆಂದೂ ಅದರ ನಾಯಕರು ಸ್ಪಷ್ಟಪಡಿಸಿ, ಕಮ್ಯುನಿಸ್ಟರೂ ಸ್ವದೇಶಿನಿಷ್ಠೆಯನ್ನು ವ್ಯಕ್ತಪಡಿಸಿ ಪ್ರಜಾತಂತ್ರದಲ್ಲಿ ವಿಶ್ವಾಸ ತೋರಿಸಿದರೆ, ಅವರಿಗೂ ಕರೆ ಕೊಡ.ತ್ತೇನೆಯೆಂದು ಹೇಳಿದ್ದಾರೆ. ಇವೆಂದೂ ಆಗುವ ಹೋಗುವ ಕಾರ್ಯವಲ್ಲವೆಂಬ ಪ್ರಶ್ನೆ ಬೇರೆ.

ಎಡ.ುಲ ಪಂಥಗಳ ಹೋರಾಟದಲ್ಲಿ ಬಲಕ್ಕೆ ಪೆಟ್ಟು ಬಿದ್ದಿರುವುದು ಗಣನೀಯ. ಇದರಿಂದ ಅದು ಮತ್ತು ಜೇತವಾಸದೆ ಹೋದರೂ ಅತಿಶಯ ವಿಲ್ಲ. ಕಾಂಗ್ರೆಸನ್ನು ಕೋಳು ಮಾಡಿದ ಶ್ರೀಮತಿ ಗಾಂಧಿ ಬಲವನ್ನು ಮುರಿದು ಹಾಕುವಲ್ಲಿ ಯಶಗಳಿಸಿದ್ದಾರೆನೋ ನಿಜ; ಆದರೆ, ಅವರು ಎಡವನ್ನೇ ನಂಬಿ ಉಳಿತರೆ ಪೀಠದಲ್ಲಿ ನಿಲ್ಲುವುದಿಲ್ಲ; ನಂಬದೆ ಇದ್ದರೂ ಸಿಂಹಾಸನ ದ ಕ್ಯ ವು ದಿ ಲ್ಲ. ಆದುದರಿಂದ ಎಡವನ್ನೇ ನಂಬಿರುವಂತೆ ಜನರಿಗೆ ಪ್ರಚೋದಿಸುತ್ತಾರೆ, ಬಲವೂರ್ಗದಲ್ಲಿ ನಡೆಯುತ್ತಾರೆ; ಕನ್ನ ಅಸಮರ್ಥತೆಗೆ ಇತರರನ್ನು ಬೊಟ್ಟು ಮಾಡುವ ಅಭ್ಯಾಸ ಅವರ ಜಾಯಮಾನ.

ಕಮ್ಯುನಿಸ್ಟರೆಂಬವರು ಹಲವರು. ಏಕೆಂದರೆ, ಕ್ರಾಂತಿಯು ಪಾಪೋಜ್ಞಾರ ಮಾಡ.ವ ಅಧಿಕಾರ ಎಡದವರಿಗಿರುವಂತೆ ಬಲದವರಿಗಿಲ್ಲ. ಅದುದರಿಂದ ಬಾವಲಿ ಪ್ರಧಾನಿಯು ತುರ.ಬು ಬಿಚ್ಚಲು ತಾವೆಲ್ಲ ಒಂದು ಸಂಯುಕ್ತ ರಂಗ ಕಟ್ಟಿಕೊಳ್ಳೋಣವೆಂದು ಎಸ್ಸೆಸ್ಪಿಯ ಶ್ರೀ ಜಾರ್ಜ್ ಫೆರ್ನಾಂಡಿಸರು ಕರೆ ಕೊಡಿದರು ಆದರೆ, ಇದನ್ನು ಕೇಳಿದವರೆಷ್ಟು? ಕಮ್ಯುನಿಸ್ಟರ ಎಂದೂ ಹುಂಪುಗಳು ಇದನ್ನು ತಳ್ಳಿ ಹಾಕಿದುವು. ಪ್ರಸವಾ ಪಕ್ಷವು ಇದರಿಂದ ಯಾವ ಲಾಭವೂ ಇಲ್ಲವೆಂದು ತನ್ನ ಫಿರಾಸಕ್ತಿಯನ್ನು ವ್ಯಕ್ತ ಪಡಿಸಿತು. ಇನ್ನು ಉಳಿದುಳಿದ ಬೆರಳೆಣಿಕೆಯಷ್ಟು ಬಲವಿರುವ ಕೆಲವರು ಒಂದಾಗದಿದ್ದರೂ ಆಪ್ತೆ, ಒಂದಾಗದಿದ್ದರೂ ಆಪ್ತೆ.

ಪ್ರಧಾನಿ ಶ್ರೀಮತಿ ಗಾಂಧಿಯವರನ್ನು ಅವರ ಪ್ರಗತಿಪರ ಕ್ರಮಗಳಿಗಾಗಿ ಕಮ್ಯುನಿಸ್ಟ್ ಬಣಗಳು ಬೆಂಬಲಿಸುತ್ತವೆ. ಸೋವಿಯತ್ತು ಶ್ರೀಮತಿಯವರ ರಾಜ್ಯಕೀಯ ಜಾಣ್ಮೆಯನ್ನು ಮುಕ್ತಕಂಠದಿಂದ ಪ್ರಶಂಸಿಸುತ್ತಿದೆ. ಕೆಂಪು ಚೀನವಾದರೂ ಹಿಂದಿನಂತೆ ಕೂರಲಗುಗಳಿಂದ ಅಕೆಯನ್ನು ತಿವಿಯುತ್ತಿಲ್ಲ. ಆದುದರಿಂದ ಅಕೆಗೆ ಕಮ್ಯುನಿಸ್ಟರ ಬಲವಿದೆ. ಮುಂದೆ ನಡೆಯುವ ಚುನಾವಣೆಗಳಲ್ಲಿ ಅವರು ಪ್ರಧಾನಿಯೊಂದಿಗೆ ಒಡಂಬಡಿಕೆಗೆ ಬಂದರೂ ಬರಬಹುದು; ಅಥವಾ ಒಡಂಬಡಿಕೆಯನ್ನು ವಿರೋಧಿಸಿ, ಸ್ವತಂತ್ರವಾಗಿಯೇ ಸ್ಪರ್ಧಿಸಬಹುದು. ಆದರೆ, ಶ್ರೀಮತಿ ಗಾಂಧಿಯವರು ಮತ್ತೆ ಅಧಿಕಾರಕ್ಕೆ ಬರಲು ಕಮ್ಯುನಿಸ್ಟ್ ಬಣಗಳು ತುಂಬು ಹೃದಯದ ಬೆಂಬಲ ನೀಡುವುದು ಮಾತ್ರ ನಿಶ್ಚಯ.

ಇದು ರಾಜ್ಯಕೀಯ ಚಾಣಕ್ಯ ನೀತಿ. ಬ್ರಿಟಿಷರು ಭಾರತದ ರಾಜ—ಮಹಾರಾಜರನ್ನು ಒಬ್ಬರ ಎದ ರೊಬ್ಬರನ್ನು ಎತ್ತಿ ಕಟ್ಟಿ, ನೆರವು ನೀಡಿ, ಕೊನೆಗೆ ತಮ್ಮ ಸಾಮ್ರಾಜ್ಯ ಸ್ಥಾಪಿಸಿದ್ದು ಇತ್ತೀಚೆಗೆ. ಶ್ರೀಮತಿ ಗಾಂಧಿಯವರ ಅಲ್ಪ ಮತದ ಸರಕಾರವನ್ನು ಬೆಂಬಲಿಸುತ್ತ, ಅವರನ್ನು ಅಧಿಕಾರದಲ್ಲಿ ಉಳಿಸ ತ್ತ, ಆಕೆಯ ವೇಲೆ ತಮ್ಮ ಅಧಿಕಾರ ಚಲಾಯಿಸ ವ ಸದಿನವನ್ನು ಕಮ್ಯುನಿಸ್ಟರು ನೋಡುತ್ತಾರೆ. ರಾಜ್ಯಕೀಯ ಚತ.ರತೆಯೂದ ಶ್ರೀಮತಿ ಗಾಂಧಿ ಈ ಜಾಲದಲ್ಲಿ ತನ್ನನ್ನು ಸಿಕ್ಕಿಸಿಕೊಳ್ಳುವಾರರು. ಯಾವುದೇ ಶರ್ತವಿಲ್ಲದೆ ಎಲ್ಲ ದೇಶ ಪಕ ಸರಕಾರು ಸ್ವೀಕರಿಕ ವುದು ಭಾರತದ ವಿದೇಶ ನೀತಿಯ ತಿರುಳೆ. ಎಲ್ಲವರಿಂದ ಬೇಷರತ್ ಬೆಂಬಲ ಗಳಿಸುವುದು ಶ್ರೀಮತಿ ಗಾಂಧಿಯವರ ರಾಜ್ಯತೀತಿಯ ಸ್ವಾರಸ್ಯ. ಇದರಿಂದ, ಶ್ರೀಮತಿಯ ವರು ಪ್ರಧಾನಿಯೊಗಿ ಮುಂದುವರಿಯಬಹುದು; ಆದರೆ ಅದರಿಂದ ಜನತೆಯ ಕಲ್ಯಾಣ ಮಾತ್ರ ಆಗುವುದಿಲ್ಲ.

ಸಿಂಡಿಕೇಟ್ ಪ್ರಜಾಸತ್ತಾತ್ಮಕ ಪಕ್ಷಗಳಿಗೆ ನೀಡಿದ ಕರೆಯನ್ನು ಕೇಳುವ ಪಕ್ಷಗಳೆಂದರೆ, ಸ್ವತಂತ್ರ ಮತ್ತು ಜನಸಂಘಗಳು ಮಾತ್ರ. ಇವೆರಡೂ ಬಲಪಂಥೀಯವೆಂದೂ ಕರೆಸಲಾಗಿವೆ. ಒಂದು ಬಂಡವಶಾಹಿಗಳದ್ದು. ಇನ್ನೊಂದು ಕೋಮುವಾರಿಗಳದ್ದೆಂದುಜಪಮಾಲೆಗಳಲ್ಲಿ ವಿಷಬೀಜ ಎಂದೋ ಬಿತ್ತಲಾಗಿದ್ದು ಇಂದದು ಮೊಳಕೆ ಒಂದು ಬೆಳೆದು ಒಂದಿದೆ. ಇದನ್ನು ಮುರಿದು ಹಾಕುವ ಸ್ಪಯತ್ನ ನಡೆಯುತ್ತ ಒಂದಿದ್ದರೂ ಅದು ಯಶಗಳಿಸಿಲ್ಲ. ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಹೆಚ್ಚಿನ ರಾಜ್ಯಗಳಲ್ಲೂ ಕೇಂದ್ರದಲ್ಲೂ ಯಾವುದೇ ಒಂದು ಪಕ್ಷವು ನಿಚ್ಚಳ ಬಹುಮತ ಪಡೆಯುವುದಿಲ್ಲವೆಂಬುದೀಗ ಹಗಲಿನಷ್ಟು ತಿಳಿಯೂಗಿದೆ. ಆದುದರಿಂದ ಎಲ್ಲೆಡೆಯೂ ಸಂಯುಕ್ತ ಸರಕಾರಗಳೇ ಏಚಿತವಾಗ ಬೇಕಷ್ಟೆ.

ಕಮ್ಯುನಿಸ್ಟರೆನ್ನು ಜನ ಬಹುಮತದಿಂದ ಆರಿಸುವುದು ಸಾಧ್ಯವಿಲ್ಲ. ಅವರು ಹೊರಗುಳಿದರೂ ಉಳಿದ ಸಣ್ಣ ಸಣ್ಣ ಪಕ್ಷಗಳು ಒಂದಾದರೂ ಪ್ರಧಾನಿಗೇ ಬೆಂಬಲ ಕೊಡುವ ನಂಬಿಕೆಯಿಲ್ಲ. ಎಸ್ಸೆಸ್ಪಿ ಏಪರ್ಡಿಸುವ ಸಂಯುಕ್ತರಂಗವು ಪ್ರಧಾನಿಗೆ ವಿರ.ದ್ಧವಾಗಿರುವುದರಿಂದ ಆಕೆಗೆ ಹೆದರಿಕೆ. ಉತ್ತರ ಭಾರತದಲ್ಲೂ ಇತ್ತೀಚೆಗೆ ದಕ್ಷಿಣದಲ್ಲೂ ಜನಸಂಘವು ಪ್ರಬಲವಾಗುತ್ತ ಬರುತ್ತಿದ್ದು, ಅದು ಸಿಂಡಿಕೇಟನ್ನು ಸೇರಿದರೆ, ಸ್ವತಂತ್ರ ಪಕ್ಷದ ಒತ್ತಾಸೆಯೂ ಲಭ್ಯವಾದರೆ, ಆಕೆಯ ಅಧಿಕಾರಕ್ಕೆ ಗಂಡಾಂತರ ಬರುವ ಸಂಭವವಿದ್ದೇ ಇದೆ. ಡೊಂಬರಾಟವನ್ನು ಎಲ್ಲಾ ಸಮಯದಲ್ಲೂ ಆಡುತ್ತ ಕುಳಿತರೆ, ಒಮ್ಮೆ ಉರುಳುವುದು ಶತಃಸಿದ್ಧವೆಂದು ಆಕೆಗೂ ಗೊತ್ತು. ಆದುದರಿಂದ ಈ ಸಂಯುಕ್ತ ರಂಗದ ಬಗ್ಗೆ ಎತ್ತಿಲ್ಲದ ಪ್ರಚಾರ ನೀಡುವಲ್ಲಿ ಆಕೆಯೂ ಆಕೆಯ ಚೇಲರೂ ನಿರತರಾಗಿದ್ದಾರೆ. ಈ ಸಂಯುಕ್ತ ರಂಗದಿಂದ ತನ್ನ ಅಧಿಕಾರಕ್ಕೆ ಮುಳಿವು ಬರದೀತೆಂದು ಶರಣು ಹೋಗುವುದನ್ನು ಬಿಟ್ಟು, ದೇಶ ದಿವಾಳಿಯೂದೀತೆಂಬಂತೆ ಮೊತಾಡುತ್ತಿದ್ದಾರೆ.

ಶ್ರೀಮತಿ ಗಾಂಧಿಯವರು ಇಂದು ಜನತೆಯ ಬಗ್ಗೆ ಹೆಚ್ಚು ತಲೆಕರಿಸಿಕೊಳ್ಳುತ್ತಿಲ್ಲ. ಅವರ ಕರ್ನಾಟಕ ಸಂಚಾರ ಕಾರ್ಯಕ್ರಮವೂ ಇದಕ್ಕೊಂದು ನಿದರ್ಶನ. ಆಕೆ ಪ್ರಧಾನಿ ಮಂತ್ರಿಯಾಗಿ ರಾಜ್ಯಕ್ಕೆ ಬರಲಿಲ್ಲ. ಇಂಡಿಕೇಟ್ ನಾಯಕಿಯಾಗಿ ಬಂದರು; ಇಲ್ಲಿನ ಸಿಂಡಿಕೇಟಿಗರನ್ನು ಕನ್ನ ಸೆರಗಿನೆಡೆ ಸೆಳೆಯುವ ಪ್ರಯತ್ನ ಮಾಡಿದರು. ಅಲ್ಪ ಮ.ಟ್ಟಿಗೆ ಯಶವನ್ನೂ ಪಡೆದರು; ಇಂಡಿಕೇಟ್ಕಿಂದೇ ಪ್ರಗತಿಪರರು ಜನಕಲ್ಯಾಣೇಚ್ಛು ಪಕ್ಷವೆಂದು ಡಂಗುರ ಸಾರಿದರು.

ಬೆಳಗಾಂವಿ ಪ್ರಶ್ನೆಯು ಇತ್ಯರ್ಥಕ್ಕೆ ಅಪರೇಶನೊಂದೇ ಉತ್ತರವೆಂಬುದೀಗ ಹಣಾಂಗುರವಾಗಿದೆ. ಈಗ ಶ್ರೀಮತಿಯವರೇ ಮನೆವಾರ್ತೆಯು ಸುಪರ್ದಿ ಮಾಡುವವರಾದುದರಿಂದ ಕನ್ನಡಿಗರನ್ನು ಹೇಗೂ ಮರುಳು ಗೊಳಿಸಬಹುದು. ಶ್ರೀ ಚವನರಿಂದ ಗೃಹಖಾತೆಯನ್ನು ಕಿತ್ತುಕೊಳ್ಳಿರೆಂದು ಆಕೆಯನ್ನು ಯಾರೂ ಕೇಳಲಿಲ್ಲ; ಆತನೆ, ಅವರು ಗೃಹಸಚಿವರಾಗಿರುವ ವರೆಗೆ ತಮಗೆ ನ್ಯಾಯ ಸಿಗುವ ಭರವಸೆಯಿಲ್ಲವೆಂದು ಹೇಳಲಾಗಿತ್ತು. ಅಂದು ಬೆಳಗಾಂವಿ ವಿಭಜನೆ ಅನ್ಯಾಯವಾಗಿತ್ತು; ಇಂದು ಅದನ್ನು ಪ್ರಧಾನಿಯೇ ಮಾಡುವುದರಿಂದ ಅನ್ಯಾಯವಾದರೂ ಆಗಬಹುದು. ಮುಂಬಯಿಗರ ಬೆಂಬಲಕ್ಕಾಗಿ ಬೆಳಗಾಂವಿ ಅವರಿಗೆ ಕೊಡಬೇಕ; ಕನ್ನಡಿಗರೆಲ್ಲರೂ ಇಂಡಿಕೇಟ್ ಸೇರಿಬಿಟ್ಟರೆ, ಅವರಿಗೆ ಪರಿಹಾರವೆನ ಕೊಡಿ ಬೆಳಗಾಂವಿಯನ್ನೆ ಕನ್ನಡಿಗರ ಕೈಯಲ್ಲೇ ಉಳಿಸಬಹುದ. ಪ್ರಧಾನಿ ಶ್ರೀಮತಿಯವರು ತಮ್ಮ ಕರ್ನಾಟಕ ಸಂದರ್ಶನದ ನೇಳೆ ಈ ಚಾಣಕ್ಯ ನೀತಿಯನ್ನು ರಹಸ್ಯವಾಗಿ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪ ಟೀಲರ ಕಿವಿಗೂ ಹಾಕ ಬಹುದು. ಇದಕ್ಕವರು ಒಪ್ಪದೆ ಹೋದರೆ, ಬೆಳಗಾಂವಿಯ ನ್ನು ಮಹಾರಾಷ್ಟ್ರಕ್ಕೆ ದಾಖಲು ಮಾಡ ಬಹುದು; ಇಲ್ಲವೇ ಅಪರೇಶನ್‌ಗೆ ಅದು ಸುರಿಸೂಗಡ ಬಹುದು.

ಶ್ರೀಮತಿ ಗಾಂಧಿಯವರಿಗೆ ತಾವು ತುಳಿದ ಕುರುಡು ದಾರಿಯೇ ರಾಜಮಾರ್ಗವೆಂದು ಎಲ್ಲರೂ ಒಪ್ಪಿಕೊಳ್ಳುವಂತೆ ಮಾಡುವ ಹಠ; ವೆಂಡುತನ. ಇದರಲ್ಲಿ ಅಕೆ ಯಶಗಳಿಸ ಬಹುದು. ಏಕೆಂದರೆ, ಅಧಿಕಾರ ಲಾಲಸೆ ಈ ಕೇಸ ಮಾಡಿಸುತ್ತದೆ. ಆದರೆ, ಕತ್ತಲನ್ನು ಹಗಲೆಂದು ಎಲ್ಲ ಕಾಲಕ್ಕೂ ಕರೆಯುವತ್ತು ಎಲ್ಲರೂ ಮೂರ್ಖರಾಗಲಾರರು. ಶ್ರೀಮತಿ ಇಂದಿರಾ ಗಾಂಧಿಯೆಂಬ ನವಭಾರತದ ಶಿಲ್ಪಿಯು ಮಗಳು ಕಾಂಗ್ರೆಸ್ ವೃಕ್ಷವನ್ನು ಮುರಿದು ಹಾಕಿದರು; ದೇಶವನ್ನು ಅರಾಜಕತೆಗೆ ಳಿಸಿದರ; ಪ್ರಜಾ ಸತ್ತೆಯು ಕಸರಲ್ಲಿ ಸಲಿಗೆ—ದರೋಡೆಗಳನ್ನು ಎತ್ತಿ ಹಿಡಿದು ಪ್ರಜಾ ಸ್ವಾತಂತ್ರ್ಯದ ಗೋಣು ಮುರಿದರು ಎಂದು ಭಾವಿ ಇತಿಹಾಸಕಾರರು ಬರೆಯುವುದಕ್ಕಾಗಿ ಬಂದರೂ ಬರಬಹುದು. ಶ್ರೀಮತಿ ಗಾಂಧಿಯವರು ಪಶ್ಚಾತ್ತಾಪಕ್ಕೆ ಪ್ರಯತ್ನ ಮಾಡುವುದನ್ನು ಬಿಟ್ಟು, ಅಪಪ್ರಚಾರ ನಿರತರಾಗುವುದರಿಂದ ದೂರವಿದ್ದ ಅಧಿಕಾರದ ದುರುಪಯೋಗ ಮಾಡಿಕೊಳ್ಳದೆ ಚುನಾವಣಾ ವೈದಾಳದಲ್ಲಿ ವಿರೋಧಿಗಳನ್ನು ಪ್ರಜಾಸತ್ತಾತ್ಮಕವಾಗಿ ಎದುರಿಸುವುದನ್ನು ಕಲಿತುಕೊಳ್ಳಬೇಕು.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
114 ವರ್ಷಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ಗಳನ್ನು
ಸಂಪರ್ಕಿಸಿರಿ.

ಠೇವಣಾತಿಗಳ ಮೇಲೆ 7¼% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ವೈಶಿಷ್ಟ್ಯ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:— ಬೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು—1

ದಯಮಾಡಿ
ನಿಮ್ಮ ಬಾಕಿ ಚಂದಾ
ಹಣವನ್ನು ಕಳುಹಿಸಿರಿ

ಕಾಶ್ಮೀರದ ಸುಲ್ತಾನನಾಗುವ ಹೆಬ್ಬಯಕೆ

ಲೇಖಕರು: ಶ್ರೀ ಶಿವಶಂಕರ.

ಕಾಶ್ಮೀರದಲ್ಲಿ ಪ್ರಥಾನಿಸಿಗೊಂಡಿದ್ದು, ನಂತರ್ಕ ಕಾರಾಗ್ರಹದ ಹೆಸರಾಲ್ಲಿ ವಿರಾಮದ ರಾಜಭೋಗ ಜೀವನವನ್ನು ಅನುಭವಿಸಿದ ಶೇಖ್ ಅಬ್ದುಲ್ಲಾ ಇನ್ನೂ ಕಾಶ್ಮೀರದ ರಾಜನಾಗುವ ಕನಸನ್ನು ಕಾಣುತ್ತಿದ್ದಾರೆ. ಕಾಶ್ಮೀರದ ಮೇಲೆ ಪಾಕಿಸ್ತಾನ ಆಕ್ರಮಣ ನಡೆಸಿದಾಗ ಕಾಶ್ಮೀರವನ್ನು ಭಾರತದೊಂದಿಗೆ ವಿಲೀನಗೊಳಿಸಲಾಗಿತ್ತು. ಅದಕ್ಕೆ ಶೇಖ್ ಅಬ್ದುಲ್ಲಾ ಅಂದು ಒಪ್ಪಿದ್ದರು. ಆದರೆ ಆಗ ಭಾರತದ ಪ್ರಧಾನಿಯಾಗಿದ್ದ ಪಂಡಿತ ಜವಾಹರಲಾಲ ನೆಹರೂಜೀಯವರು ಮಹಾಗಣ್ಣನ್ನು ತೂಗನ್ನೆತ್ತಿದರು. ಅಲ್ಲಿಯ ಜನರು ತಮಗೆ ಇಷ್ಟಬಂದಂತೆ ಮತ ನೀಡಬಹುದು — ಕಾಶ್ಮೀರ ಭಾರತದೊಂದಿಗೆ ವಿಲೀನವಾಗಬೇಕೆ; ಕಾಶ್ಮೀರ ಪಾಕಿಸ್ತಾನದೊಂದಿಗೆ ಸೇರಬೇಕೆ; ಕಾಶ್ಮೀರ ಪ್ರತ್ಯೇಕ ದೇಶವಾಗಬೇಕೆಯಬೇಕೆ- ಮೈಸೂರು, ತಿರುವಾಂಕೂರು, ಜೋಧಪುರ, ಗ್ವಾಲಿಯರ್‌ಗಳಂತೆ ಅಂದು ಕಾಶ್ಮೀರ ಭಾರತದಲ್ಲಿ ಸೇರಿಕೊಂಡಿದ್ದರೂ ಅಲ್ಲಿಯವರಲ್ಲಿ ಹೆಚ್ಚಿನವರು ಮಹಾರಾಜನೆಂಬ ಏಕವ್ಯಕ್ತಿ ಆಡಳಿತದಿಂದಾಗಿ ಜವಾಹರಲಾಲ್‌ಜೀ ಅರಿತಿರಲಿಲ್ಲ ಎಂದು ತೆಗೆದಿದ್ದರು. ಯಾವ ಅಧಿಕಾರದಿಂದ ಅವರು ಆ ಆಶ್ವಾಸನೆ ಇತ್ತರೋ! ಅದನ್ನು ಇಂದು ಶೇಖ್ ಅಬ್ದುಲ್ಲಾ ಬಿಡಲು ತಯಾರಿಲ್ಲ. ಹೋದಿ ಡೆಗಳೆದ ಇದೇ ಪ್ರಚಾರ. ಜವಾಹರಲಾಲರ "ರಾಜಕೀಯ ಚಾಣಾಕ್ಷತನ"ದಿಂದಾಗಿ ಕಾಶ್ಮೀರ ಪ್ರಶ್ನೆಯ ರೂಪುರೇಷೆಗಳೇ ಬದಲಾಯಿಸಿದವು. ಅಲ್ಲಿ ಇವತ್ತು ಪ್ರಶ್ನೆಯೇ ಬರುವದಿಲ್ಲ.? ಎಲ್ಲಿ ರೂ ಜವಾಹರಲಾಲರ ಮಾತಿಗೆ ಸುಯೆನ್ನಲು ಸಿದ್ಧರೇ ವಿನಃ ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೆನ್ನಲು ಸಿದ್ಧರಿಲ್ಲ. ನೆಹರೂಜೀ ಕಾಲವಾದರೂ ಕಾಶ್ಮೀರ ಪ್ರಶ್ನೆ ಉಳಿದುಕೊಂಡಿದೆ. ಪ್ರಾಮಾಣಿಕತೆ ಸ್ವಲ್ಪವಾದರೂ ಭಾರತದೊಂದಿಗೆ ಇದೆ. ಧೀರ ಕಠಿಣ ನಿರ್ಧಾರವನ್ನು ಪೂರ್ಣ ಕಾಶ್ಮೀರವನ್ನು ಭಾರತದಲ್ಲಿರುವಂತೆ ಕ್ರಮಕೈಗೊಳ್ಳುತ್ತಿದ್ದರು. ಇಂದು ಆ ಪ್ರಶ್ನೆಯೇ ಇರದಂತೆ ವರ್ತಿಸುತ್ತಿದ್ದರು. ಜವಾಹರಲಾಲ ನೆಹರೂಜೀಯವರ ಮುಸ್ಲಿಂ ತುಷ್ಟೀಕರಣ ನೀತಿಯಿಂದಾಗಿ ಶಾಂತಿಪ್ರಿಯರು ಕೋಟಿಯಿಸಿಕೊಂಡು ಅರ್ಧದಿಂದಲೇ ಬಂಧಕ್ಕೆ ಬಳಲಬೇಕಾಯಿತು.

ಜವಾಹರಲಾಲರಿಂದ ಜಯಕಾರ, ವಿಶೇಷಕ್ಕಾಗಿ ಜೋರಾಡಿದವರಿಗೆ ಏಟು! ಇದು ಇನ್ನೊಂದು ಘಟನೆ.

ಇಂತಹ ದುರ್ಘಟನೆಗಳು ನಡೆಯುತ್ತಲೆ ಬಂದಿವೆ. ಇವು ಇನ್ನೂ ಇತ್ಯರ್ಥ ಕಂಡಿಲ್ಲ. "ಕಾಶ್ಮೀರ ಪ್ರಶ್ನೆ"ಯೂ ಉಳಿದುಕೊಂಡಿದೆ. ಜವಾಹರಲಾಲರ ಬದಲು ಅವರ ಪ್ರೀತಿಯ ಮಗಳು ಇಂದಿರಾಜೀ ಅದೇ ಕಾರ್ಯದಲ್ಲಿದ್ದಾರೆ. ಈ ಅವಕಾಶದ ಪೂರ್ಣ ಲಾಭಪಡೆಯಲು ಶೇಖ್ ಅಬ್ದುಲ್ಲಾ ಪ್ರಯತ್ನಿಸುತ್ತಿದ್ದಾರೆ. ಜಶಕೆಯ ಕೋಪಾಗ್ನಿಯಿಂದ ವಿಶ್ರ ಅಬ್ದುಲ್ಲಾನನ್ನು ರಕ್ಷಿಸಲು ಕಾರಾಗ್ರಹದ ಹೆಸರಾಲ್ಲಿ ರಾಜಭೋಗದ ವಿಶ್ರಾಂತಿ ಮಾಡಿಕೊಟ್ಟರು ಜವಾಹರಲಾಲ ನೆಹರೂಜೀ. ಶತ್ರುವಾಗಿ ಕಾರಾಗೃಹಕ್ಕೆ ಅವನನ್ನು ಕಳುಹಿಸಿದ್ದಲ್ಲಿ ವಿಚಾರಣೆ ನಡೆಯಬೇಕಾಗಿತ್ತು. ದೇಶದ್ರೋಹ, ಶಿಕ್ಷೆ ಕೊಲೆ ನಡೆಸಿದ ಆಪರಾಧ ಅವರ ಮೇಲಿದೆನ್ನಲಾಗುತ್ತಿದೆ. ಹಾಗಿದ್ದರೂ ಅವರಿಗೆ ಶಿಕ್ಷೆ ವಿಧಿಸಿರುವದಿಲ್ಲ; ನ್ಯಾಯಲಯದ ಮುಂದೆ ನಿಲ್ಲಿಸಿರುವದಿಲ್ಲ. ಶೇಖ್ ಅಬ್ದುಲ್ಲಾ ಅದನ್ನು ಪ್ರಚಾರಕ್ಕಾಗಿ ಬಳಸಿಕೊಂಡು ಭಾರತದಲ್ಲಿ ಸ್ವಾತಂತ್ರ್ಯವೇ ಇಲ್ಲ. ಇರುತ್ತಿದ್ದಲ್ಲಿ ವಿಚಾರಣೆ ನಡೆಸದೆ ಯಾವ ಸರಕಾರವಾದರೂ ಒಬ್ಬನನ್ನು ಹೆಸ್ಸೆರಡು ವರ್ಷ ಬಂಧನದಲ್ಲಿಡುವದುಂಟೇ ಎಂದು ಅವರು ಕೇಳುತ್ತಿದ್ದಾರೆ. ಇದಕ್ಕೂ ಇಂದಿರಾ ತುಟಿ ಎರಡು ಮಾಡಿರುವದಿಲ್ಲ. ಆದರೆ ಬಿಡಲು ಶೇಖ್ ಅಬ್ದುಲ್ಲಾ ಡಿಲ್ಲಿಗೆ ಬಂದಾಗ ಭವ್ಯಸ್ವಾಗತವನ್ನೀಡಿ ಸತ್ಕರಿಸುತ್ತಾರೆ.ಶೇಖರ ಪ್ರಚಾರಕ್ಕೆ ಇನ್ನೇನು ಬೇಕು?

ತನ್ನ ಪ್ರಚಾರಕ್ಕೆ ಅದ್ಯಾವದೂ ಅಡ್ಡಿಯಿಲ್ಲವೆಂಬುದನ್ನರಿತಿರುವ ಶೇಖ್ ಅಬ್ದುಲ್ಲಾ ಈಗ ಧೈರ್ಯವಾಗಿ ಪ್ರತ್ಯೇಕ ಕಾಶ್ಮೀರವನ್ನು ಕೇಳುತ್ತಿದ್ದಾರೆ. ಅದಕ್ಕಾಗಿ ಇನ್ನು ಮುಂದೆ ಪ್ರಾರ್ಥನೆ, ವಿಶಂತಿ, ಮನವಿ, ಬೇಡಿಕೆ, ಚಳುವಳಿ, ಸತ್ಯಾಗ್ರಹ, ಗೇರೋ....ಏನೂ ಇಲ್ಲ. ಅವರಿಗುಳಿದಿರುವದು ಒಂದೇ ಒಂದು ಮಾರ್ಗವಂತೆ ಅದು ಮೇ ಆಲ್ಜೀರಿಯಾದ ಮುಸ್ಲಿಮರು ತೋರಿಸಿಕೊಟ್ಟಿರುವ ದಾರಿ. ಅವರು ಕಾಶ್ಮೀರದಲ್ಲಿ ಜರಗಿದ ರಾಜ್ಯಜನತಾ ಸಮಿತಿಯಲ್ಲಿ ಮಾತಾಡುತ್ತ, "ಸ್ವಾತಂತ್ರ್ಯವನ್ನು ಯಾರೂ ಹರವಾಡದಲ್ಲಿ ತಂದಿಟ್ಟು ಕೊಡುವದಿಲ್ಲ, ಅದಕ್ಕಾಗಿ ಹೋರಾಡಿ ಗೆಲ್ಲಬೇಕು. ಇಂಡೊನೇಷಿಯದವರು ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರನ್ನೆದುರಿಸಿ ಹೋರಾಡಿ ಸ್ವಾತಂತ್ರ್ಯ ಪಡೆದಿರುವರು. ಅದೇ ರೀತಿ ಅಲ್ಜೀರಿಯನ್ನರು ಬ್ರಿಟಿಷರನ್ನೆದುರಿಸಿ ಸ್ವಾತಂತ್ರ್ಯ ಪಡೆದಿರುವರೆಂದಿರುವರು. ಹಾಗಿರುವದರಿಂದ ಕಾಶ್ಮೀರಿಗಳು ಗಮ್ಯನೆ ಇರುವದು ಖಾತ್ರಿಯಾಯಿತೇನ್ನ? ಅವರು ಕಾಶ್ಮೀರದ ಸ್ವಾತಂತ್ರ್ಯಕ್ಕಾಗಿ ಅಯುದ್ಧ ಮಾಡಬೇಕು! ಭಾರತದ ಸೇನೆಯನ್ನು ಸೋಲಿಸಬೇಕು! ನಮ್ಮ ಪ್ರಧಾನಿ ಶೇಖ್ ಅಬ್ದುಲ್ಲಾನನ್ನು ಆಮಂತ್ರಿಸಿ, ಸತ್ಕರಿಸಿ, ಅವರಿಗೆ ಸ್ವಾತಂತ್ರ್ಯವನ್ನು ಸ್ವೀಕರಿಸಿರೆಂದು ಕೇಳಿ ಕೊಳ್ಳಬೇಕೆ!.... ಶೇಖ್ ಅಬ್ದುಲ್ಲಾ ಕನಸು ಕಾಣುತ್ತಿದ್ದಾರೇನ ? ಕನಸ್ಸು, ಅವರು ಇಂದಿರಾಜೀಯವರ ಇಂಗಿತವನ್ನು ಅರಿತುಕೊಂಡಿದ್ದಾರೆ. ಮೇಘಾಲಯ ಅವರಿಗೆ ಮೇಘಾಲಯವೆಂದೇಶವನ್ನಿತ್ತಿದೆ. ಬಂಗಾಲ, ಕೇರಳ, ಪಂಜಾಬ, ಬಿಹಾರ, ಗೋವಾ... ಚುನಾವಣೆಯ ಚಟಪಟಿಕೆ ಶುರುವಾಗಿದೆ. ಈ ಪಾಕಿಸ್ತಾನ ಅನ್ಯಾನ್ಯ ರಾಷ್ಟ್ರಗಳಿಂದ ಯುದ್ಧೋಪಕರಣಗಳನ್ನು ಸಂಗ್ರಹಿಸಿಕೊಂಡು ಸಜ್ಜಾಗಿತ್ತಿದೆ ಚೈನಾ ಅಣುಗುಂಡನ್ನು ಹಾರಿಸಿ ನಕ್ಷೆಲೀಯರಿಗೆ ನಾನಾಲೋಟಕ್ಕೆ ಪಜ್ಜೆ ಮೂಡಿತ್ತಿದೆ. ಕಾಂಗ್ರೆಸ್ಸು ಒಡೆದುಹೋಗಿದೆ. ಅಧಿಕಾರಕ್ಕಂಟಿಕೊಂಡಿರಲು ಇಂದಿರಾಜೀ ಮುಸ್ಲಿಂಲೀಗು, ದ್ರಾವಿಡ ಮುನ್ನೇಟ್ರ ಕಳಗ್ಗಂ, ಅಕಾಲಿದಳ, ಕವರ್ನಮೆಂಟ್ ಪಾರ್ಟಿಗಳೊಂದಿಗೆ ಸ್ನೇಹ ಬೆಳೆಸಿರುವ ಇಂದಿರಾಜೀ, ಮೇಘಾಲಯವನ್ನಿತ್ತಿರುವ ಇಂದಿರಾಜೀ ಪ್ರತ್ಯೇಕ ಕಾಶ್ಮೀರವನ್ನು ಅಬ್ದುಲ್ಲಾನಿಗೆ ಕೊಡಲಾರರೇನ ? ರಾಜ್ಯದ ದೃಷ್ಟಿಯಲ್ಲಿ ಕಾಶ್ಮೀರ ಪ್ರತ್ಯೇಕವಾಗಿರಲಿ, ಆದರೆ ಕಾಶ್ಮೀರದಿಂದ ಲೋಕಸಭೆಗೆ ಸದಸ್ಯರು ಬರಬೇಕು, ಅವರು ಇಂದಿರಾಜಿಗೆ ಬೆಂಬಲ ನೀಡಬೇಕು ಈ ಶರತ್ತಿನ ಮೇಲೆ ಸ್ವಾಯತ್ತಾಧಿಕಾರವನ್ನು ಅಬ್ದುಲ್ಲಾನಿಗೆ ಇಂದಿರಾಜೀ ಕೊಟ್ಟಲ್ಲಿ ಆಶ್ಚರ್ಯವೇನೂ ಇಲ್ಲ. ಎಷ್ಟಾದರೂ ಜವಾಹರಲಾಲಜೀ ಕೊಟ್ಟಿದ್ದ ಆಶ್ವಾಸನೆಯು ಹೆಚ್ಚೆಯಲ್ಲಿ ಮುನ್ನಡೆ ತಾನೇ! ಮತದಾನ ಇಲ್ಲದೆನೇ ಪ್ರತ್ಯೇಕ ಕಾಶ್ಮೀರ! ಇಂದಿರಾಜೀಗೆ ಇದನ್ನು ತಿಳಿಸಲಿಕ್ಕಾಗಿಯೇ ಅಬ್ದುಲ್ಲಾ ಸಭೆಯನ್ನು ಕರೆದಿದ್ದರ. ಆ ಸಭೆಯು ಉದ್ದೇಶ ಸ್ವಾತಂತ್ರ್ಯ ಪಡೆಯುವ ದಿನವನ್ನು ತೀರ್ಮಾನಿಸಲಿಕ್ಕೆಂದು ಅಬ್ದುಲಾ ಹೇಳಿರುವರು. ಈ ರೀತಿ ಸಭೆಯಲ್ಲಿ ಕೂಡುಕೊಂಡು ತೀರ್ಮಾನಗಳನ್ನು ಪತ್ರಿಕೆಗಳಿಗೆ ಕೊಡುವದರಿಂದ ಸ್ವಾತಂತ್ರ್ಯ ಸಿಗುತ್ತದೆಂಬ ಭರವಸೆ ಶವಲಿಗಿರುವದಿಲ್ಲ-"ಭಾರತದ ಅಥವಾ ಪಾಕಿಸ್ತಾನದ ತೊಡೆಯಲ್ಲಿ ಕೂತುಕೊಳ್ಳುವದಿಂದ ನಾವು ಸ್ವಾತಂತ್ರ್ಯವನ್ನು ಪಡೆಯುವಲಾರೆವು. ಅದ್ಯಾರೂ ನಮಗದನ್ನು ತಂದು ಕೊಡಲಾರರು ನಾವದನ್ನು ಕಸಿದುಕೊಳ್ಳಲೇ ಬೇಕು..... ನಾವು ನಮ್ಮ ಬಲದಿಂದ ಭಾರತವನ್ನೆದುರಿಸಲೆವು. ಇಂದಿನವರೆಗೂ ಇಂಡಿಯಾದ ಬೆದರಿಕೆಯು ಮಾತು ಫಲವನ್ನಿತ್ತಿರುವದಿಲ್ಲ, ಇನ್ನು ಮುಂದಕ್ಕೂ ಕೂಡಾ ಅದಕ್ಕೆ ಯಶಸ್ಸು ಸಿಗುವದಿಲ್ಲ. ಇಷ್ಟು ಮುಂದೆ ಧಮ್ಮನ್ನಿಟ್ಟು ಚಳಲು ಸಾಧ್ಯವೇ ಇಲ್ಲ...."

ಕಾಶ್ಮೀರದ ಹೆಚ್ಚಿನಂಶ ಪಾಕಿಸ್ತಾನದ ವಶದಲ್ಲಿದೆ. ಅದನ್ನು ಬಿಡಿಸಿಕೊಳ್ಳುವ ಕುರಿತು ಅಬ್ದುಲ್ಲ ಅವೇನನ್ನು ಹೇಳಿರುವದಿಲ್ಲ. ಯಾಕೆ? ಪಾಕಿಸ್ತಾನ ಇಸ್ಲಾಮಿ ದೇಶವಿದೆ. ಅದು ಮಾತ್ರವಲ್ಲ, ಅದಕ್ಕೆ ಚೈನಾದೊಂದಿಗೆ ಚಕ್ಕಂದ, ರಷ್ಯಾದೊಂದಿಗೆ ರಹಸ್ಯ, ಅಮೆರಿಕದೊಂದಿಗೆ ಆಪ್ತತೆ ಇದೆ. ಅದನ್ನು ಕೆರಳಿಸಲು ಅಬ್ದುಲ್ಲಾ ಸಿದ್ಧನಿಲ್ಲ. ನಾಗಾಗಳು ಹೆದರಿಸಿ ನಾಗಾಲ್ಯಾಂಡ್, ಮೇಘಾಲಯಗಳನ್ನು ಕಡಿದುಕೊಂಡಿಲ್ಲವೇ? ಅಷ್ಟೆಲ್ಲಾ ಏಕೆ? ಭಾಷಾವಾರು ರಾಜ್ಯರಚನೆ ಹೇಗಾಯಿತು? ಮದ್ರಾಸಿನಲ್ಲಿ ರಕ್ತದ ಹೊಳೆ ಹರಿಯಲಿಲ್ಲವೇ? ಗುಜರಾತ-ಮಹಾರಾಷ್ಟ್ರ ಹೇಗೆ ಬೇರ್ಪಟ್ಟವು? ಪಂಜಾಬ ಹೇಗಾಯಿತು? ಅಬ್ದುಲ್ಲಾ ಆದೇನು ಕಣ್ಣುಮುಚ್ಚಿಕೊಂಡಿದ್ದಾರೆಯೇ? ಇವೆಲ್ಲವನ್ನು ನೋಡುತ್ತಿದ್ದಾರೆ. ಈ ದೇಶದಲ್ಲಿ ಪ್ರತ್ಯೇಕತೆಗೆ ಪ್ರೋತ್ಸಾಹ ಇದೆಯೆಂಬುದನ್ನವರು ಅರಿತುಕೊಂಡಿರುವರು. ಚ್ವಲ್ಪ ಸಮಯ ಸದ್ದು ಮಾಡದೆ ಸನ್ನಗಿದ್ದವರೀಗ ಸಮಯನೋಡಿ ಗರ್ಜಿಂದಿದ್ದಾರೆ. ಮೇಘಾಲಯ ಫಿರ್ಯಾತೆ ಇಂದಿರಾದೇವಿ ನಂದನವನ ಕಾಶ್ಮೀರವನ್ನ ಕಡೆಗಣಿಸದುಂಟೇ?

ಕಾಶ್ಮೀರವೂ ಭಾರತದ ಅವಿಭಾಜ್ಯ ಅಂಗ, ಕೇರಳವೂ ಅವಿಭಾಜ್ಯ ಅಂಗ. ಆಸೇತು ಹಿಮಾಚಲ ಇರುವ ಈ ದೇಶ ನಮ್ಮ ಪ್ರೀತಿಯ ಪವಿತ್ರ ಮಾತೃಭೂಮಿ. ಇದನ್ನು ತುಂಡು ಮಾಡುವದನ್ನ ನಾವು ಸಹಿಸಲಾರೆವು. ನಾವೆಲ್ಲರೂ ಆ ಭ್ರಾಂತ ಮತೆಯ ಮಕ್ಕಳಿದ್ದೇವೆ. ಅಲ್ಲಿ ಕೇಳು-ಮೇಲು, ಉಚ್ಚ-ನೀಚ ಬೇಧ ಭಾವನೆಗೆ ಎಡೆಯೇ ಇಲ್ಲ. ಎಲ್ಲರೂ ಒಂದೇ ಪರಂಪರೆಗೆ ಸೇರಿದವರು.... ಎ

Gram: VISHWA Tel: 29111

When at Bangalore

Stay at

HOTEL NATARAJA

Restaurant, Boarding & Lodging,

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ದಿಗ್ಬಂಧನದಲ್ಲಿ ಸಮಾಜವಾದ

ಪ್ರಧಾನಿ ಇಂದಿರಾ ಗಾಂಧಿಯವರು ಕಾಂಗ್ರೆಸ್ ಮಹಾವಿಘಟನಾನಂತರ ಕರ್ನಾಟಕಕ್ಕೆ ಬಂದಿದ್ದಾರೆ. ಅವರು ಬಂದು ಮೂರು ವರ್ಷದೊಳಗೆ ಇದೇನೂ ಪ್ರಾಕೃತಿಕ ವಿಕೋಪವಲ್ಲ; ಬರುವುದಕ್ಕೆ ಮೊದಲೇ ಬೇಕಷ್ಟು ಕಾರಣ ಯಾರಿಗೂ ತಿಳಿದಿದೆ. ಪ್ರಧಾನಿಯವರು ತನ್ನ ಪಕ್ಷದ ಪಕ್ಷದ ಸರಕಾರವಿರುವ ರಾಜ್ಯದಲ್ಲಿ ಸಂಚಾರ ಕೈಕೊಳ್ಳುವುದು ಇದು ಹೊಸ ಸಂಪ್ರದಾಯವಾದರೂ ಈಗ ಎದ್ದ ಸಮಸ್ಯೆಗಳು ಮುಂದಿನವಕ್ಕೆ ಮಾದರಿ.

ಪ್ರಧಾನಿಯವರು ರಾಜ್ಯ ಸರಕಾರಕ್ಕೆ ತನ್ನ ಸಂತೋಷನದ ವಿಷಯ ಬಹಳ ಸಡವಾಗೇ ತಿಳಿಸಿದರು. ಅಧಿಕೃತ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಉತ್ಸಾಹವನ್ನು ವ್ಯಕ್ತ ಪಡಿಸಿದರು. ಆದರೆ, ಇಂಡಿಗೇಟಿನ ರಾಜ್ಯ ಅಧ್ಯಕ್ಷ ಶ್ರೀ ದೇವರಾಜ ಅರಸು ಒಂದ ಅಧಿಕೃತ ಕಾರ್ಯಕ್ರಮವನ್ನು ಮಾತ್ರ ಸೇರಿಸಿದರು. ಶ್ರೀಮತಿ ಗಾಂಧಿಯವರದ್ದು ಇದು ಖಾಸಗಿ ಕಾರ್ಯಕ್ರಮ. ಇದನ್ನು ರೂಪಿಸುವ ಜವಾಬ್ದಾರಿ ತನ್ನದೂ. ಅವರಾಶವರದ್ದರಿಂದ ಉಳಿದಲ್ಲಿ ಅಧಿಕೃತ ಕಾರ್ಯಕ್ರಮಗಳನ್ನು ಕೈಬಿಡ ಬೇಕಾಯಿತೂ. ಮುಖ್ಯ ಮಂತ್ರಿಯವರು ತಮಗೆ ಬೇಕಾದರೆ, ಪ್ರಧಾನಿಯನ್ನು ಅಧಿಕೃತ ಭೆಟ್ಟಿ ನೀಡುವಂತೆ ಕೇಳಿಕೊಳ್ಳಲು ಸ್ವತಂತ್ರರು. ಅವರು ಹಾಗೆ ಮಾಡುವುದನ್ನು ಬಿಟ್ಟು, ಖಾಸಗಿ ಪಕ್ಷೀಯ ಸಂದರ್ಶನದ ವೇಳೆ ತಲೆ ಹಾಕುವು ದೇಕೆ ಎಂಬವರ ವಾದ.

ನ್ನು ವರೆಗೆ ಇಂದಿರಾ ಗಾಂಧಿಯವರಿಂದ ಭಡಿ ಏಟು ತಿಗುತ್ತದೆ. ಹವ್ಯ ಬಲದಿಂದ ಭಾರತ ಸರಕಾರವನ್ನ ಎದುರಿಸಿ, ಸೋಲಿಸಿ, ಸ್ವತ್ಕೇಶ ಕಾಶ್ಮೀರ ದೇಶವನ್ನು ಅಬ್ದುಲ್ಲಾ ಸ್ಥಾಪಿಸ ಕ್ತಾರಂತೆ. ಅವರು ಕಾಲುಕೆದರಿ ಕಾಳಗಕ್ಕೆ ಕರೆಯುತ್ತ ಬರುವಾಗ ಇತ್ತ ಇಂದಿರಾ ಏನು ಮಾಡುತ್ತಿದ್ದಾರೆ? ದುರದೃಷ್ಟವಶಾತ್ ಹಿಂದಿನ ಯಾವುದಕ್ಕಿಂತ ಇಂದಿನ ಪ್ರಧಾನಿಗಳಿಗೂ ರಕ್ಷಣಾ ಮಂತ್ರಿಗಳಿಗೂ ಸೈನಿಕರಿಂದರೆ ತಮ್ಮ ಸೇವಕರೆಂಬ ಅಭಿಪ್ರಾಯ. ಅವರು ದೇಶರಕ್ಷಣೆಗಾಗಿ, ಮಾತೃಭೂಮಿಯನ್ನು ಕಾಪಾಡಲು ಭೋಗ ಜೀವನಕ್ಕೆ ತಿಲಾಂಜಲಿ ಇತ್ತ, ಪ್ರಾಣವನ್ನು ತೃಣ ಸಮಾನವೆಂದು ಬಗೆದು ಮಂತಂದಕ್ಕೆ ಬಂದಿರುವವರೆಂಬ ಅಭಿಜ್ಞಾನವೇ ಇರುವಂತಿಲ್ಲ ಅದರಲ್ಲೂ ಇಂದಿರಜ್ಜಿಯವರ ದೃಷ್ಟಿಯಲ್ಲಿ ಸೇನಾಬಲವೆಂದರೆ ದೇಶದ ದಾರ್ಬಲ್ಯವೇ ಇವೆ. ದೊಡ್ಡ ಒಲಕಾಲಿ ಸೇವೆ ಇದೆಯೆಂದರೆ ಆ ದೇಶ ದರ್ಬಲವೆಂದೇ ಅವರ ಕಾಗುಣಿತ. ಇಲ್ಲಿ ಸೇನೆಯನ್ನು ಆಧುನಿಕ ಮಾರಣಾಯುಧಗಳಿಂದ ಸುಸಜ್ಜಿತಗೊಳಿಸಿಕೊಳ್ಳಲಾಗುತ್ತಿದೆ. ಇಂದಿರಾಜ್ಜಿ ಅದನ್ನು ಪ್ರತ್ಯೇಕತೆ ಪ್ರೇತ್ಸಾಹಿಸಲಿಲ್ಲ. ಏಕತೆಗೆ ಎಟು ಕೊಡಲು ಉದಯೋನ್ಮಿಸಿಕೊಂಡರೂ ಆಶ್ಚರ್ಯವಿಲ್ಲ. ಈ ಧೈರ್ಯದಿಂದಲೇ ಅಬ್ದುಲ್ಲಾ ಕಾಶ್ಮೀರದ ಸ್ವತಂತ್ರಾಗುವ ಕನಸು ಕಾಣುತ್ತಿದ್ದಾರೆ. ಇಂದಿರಾ ರಾಣಿ ಅವರ ಇಚ್ಛೆ?

ಶ್ರೀ ಅರಸರ ಜೀಳಿಕೆಯು ಅರ್ಥವತ್ತಾಗಿದೆ. ಶ್ರೀಮತಿ ಗಾಂಧಿಯವರ ಅಧಿಕೃತ ಭೆಟ್ಟಿಯ ದಲ್ಲವೆಂದವರ ಬಹಿರಂಗ ಪಡಿಸಿದ್ದಾರೆ. ಅಂದರೆ, ತನ್ನ ಪಕ್ಷದ ಸಂಘಟನೆಯೊಡನೆ ಹಿಂಡಿಕೇಟ್‌ನ ಮುಂದೆ ಹುಮ್ಮಸ್ಸಾರುವಂತೆ ಮಾಡುವುದೇ ಅವರ ಪಾಲ್ಗೊಂದ್ದೇಶವೆಂದು ಅಪರೋಕ್ಷವಾಯ್ತು. ಪ್ರಧಾನಿ ಶ್ರೀಮತಿಯಾಗಿ ಶ್ರೀ ದೇವರಾಜ ಅರಸರು ಹತ್ತಾರು ಹಿಂಡಿಕೇಟಿಗರನ್ನು ಹಿಡಿದು ತಂದು ಇಂದಿರಾಗಾಂಧಿಯವರಲ್ಲಿ ನಿಮ್ಮೆ ತೋಸ ವೆಂದು ಪ್ರತಿಜ್ಞೆಯನ್ನು ಮಾಡಿಸಿದರೆ ವಿಶೇಷ. ಶ್ರೀಮತಿ ಗಾಂಧಿಯವರೂ ಇದನ್ನೇ ಬಯಸಿತ್ತಾರೆ. ತನ್ನನ್ನೇ ತಾನು ದೇವರೆಂದು ತಿಳಿದ ಕೊಂಡಿರುವ ಅಕೆಗೆ ಇದರಿಂದ ಸಂಪೂರ್ಣ ತೃಪ್ತಿಯಾದರೂ ಆಗಬಹುದು.

ಈಗ ಮೂಜಿ ಆಗಿರುವ ಶ್ರೀ ಎಚ್. ಸಿದ್ಧವೀರಪ್ಪನವರು ಭಾರಿ ಗಂಡು ಬಿಟ್ಟಿದ್ದಾರೆ. ಪ್ರಧಾನಿಯವರ ರಾಜ್ಯ ಸಂದರ್ಶನದ ವೇಳೆ ಅಕೆಯನ್ನು ಅಪಪೋಷಿಸಲು ಸಂಘಟಿತ ಪ್ರಯತ್ನ ರಾಜ್ಯದ ಸಚಿವ ಸಾಮಟು ಮಾಡುತ್ತಿದೆಯೆಂದು ಅವರ ಆರೋಪ. ಹಿಂಡಿಕೇಟಿನ ಇಪ್ಪತ್ತು ಶ್ರೀ ಎಸ್ ನಿಜಲಿಂಗಪ್ಪ ಇದಕ್ಕೆ ಸಾಲಹೆ ಮಾಡಿದ್ದಾರೆಂದು ಹೇಳುವಷ್ಟೂ ಅವರು ಮುಂದೆ ಹೋಗಿದ್ದಾರೆ. ಇದು ಸಂಪೂರ್ಣ ಬೇಜವಾಬ್ದಾರಿಯ ಅಪೋಲ ಕಲ್ಪಿತ ಊಹಾಪೋಹ ವಾತ್ಸವೆಂದು ಅಧಿಕೃತ ವಲಯವು ಸ್ಪಷ್ಟಪಡಿಸಿದೆ.

ಶ್ರೀಮತಿ ಗಾಂಧಿಯವರ ತಲೆತಿರುಕ ಕನವನ್ನು ಒಪ್ಪದ ಕೆಲವರಾದರೂ ಎಲ್ಲ ರಾಜ್ಯಗಳಲ್ಲಿದ್ದಾರೆ. ಕರ್ನಾಟಕವು ಅಕೆಗೆ ಎದ್ದಾರಿಗಿ ನಿಂತುದರಿಂದ ಇಲ್ಲಿ ಅಕೆಯ ರಾಜ್ಯಕೀಯ ವಿರೋಧಿಗಳು ಹೆಚ್ಚಿರಬಹುದು. ಬೆಳಗಾಂವಿಯ ವಿಭಜನೆಯ ಮಾತೀಗೆ ಸ್ಪಷ್ಟವಾಗಿ ಕೇಳಿದ್ದರಿಂದ ವಿಭಜನಾ ವಿರೋಧಿಗಳೂ ಆಕೆಯ ಸೋಲಿ ಕುಪಿತರಾಗಿರುವುದು ಸಾಧ್ಯವಿದೆ. ಹೊರ ರಾಜ್ಯಗಳಲ್ಲಿರುವ ಕನ್ನಡದ ನೆಲವನ್ನು ಕರ್ನಾಟಕಕ್ಕೆ ಸೇರಿಸಬೇಕೆಂಬ ವಾದಕ್ಕೂ ಈಗ ಪುಷ್ಟಿ ಬಂದಿದೆ. ಶ್ರೀಮತಿ ಗಾಂಧಿಯವರು ಈಗ ಖಾಸಗಿ ಭೆಟ್ಟಿಗೆಂದು ಬಂದಿದ್ದರೂ ಅಕೆ ಪ್ರಧಾನಿಯೂ ಹೌದು, ಗೃಹಮಂತ್ರಿಯೂ ಹೌದು. ಆದುದರಿಂದ ಅಕೆಯು ಮುಂದೆ ಪ್ರದರ್ಶನ ಕಡೆದರೆ, ಅದು ಸ್ವಾಭಾವಿಕವೇ. ಇದರಲ್ಲಿ ರಾಜ್ಯ ಸರಕಾರದ ಉತ್ತೇಜನ ವಿದೆಯೆಂಬುದು ತನ್ನ ಹೆಳುವನ್ನು ಬೇರೆಯವರ ಮೇಲೆ ಎತ್ತಿಹಾಕುವ ಘೋರ ಕೃತ್ಯವೆಂದು ಹೇಳಲೇ ಬೇಕು.

ಂ ಂ ಂ

ಶ್ರೀ ವೀರೇಂದ್ರ ಪಾಟೀಲರು ಈಗ ತುಂಬ ಜಂಕಿಗೆ ಗುರಿಯಾಗಿದ್ದಾರೆ. ರಾಜ್ಯದಲ್ಲಿ ತನ್ನ ರಾಜಕೀಯ ಪಕ್ಷವು ಸುದೃಢವಾಗಿದ್ದರೂ ಒಂದೊಂದೇ ಕಂಟಕಗಳು ಅಲ್ಲಾಡತೊಡಗಿವೆ. ಇದನ್ನು ಗಟ್ಟಿ ಮಾಡುವುದರಲ್ಲೇ ಅವರು ವಿಚಿಂತೆಗೆ ಗುರಿಯಾಗಿದ್ದಾರೆ. ಈ ವಿಷಯ ವೆ ಶ್ರೀಮತಿ ಇಂದಿರಾ ಗಾಂಧಿಯವರ ರಾಜ್ಯ ಸಂದರ್ಶನದ ಕಾರ್ಯಕ್ರಮವು ಅವರ ಮನಸ್ಸನ್ನು ತುಂಬ ಸತಾಯಿಸಿದೆ. ಅಧಿಕೃತ ಕಾರ್ಯಕ್ರಮಗಳಲ್ಲಿ ಹೆಚ್ಚಿನವನ್ನ ಸಮಯೂ ಭಾವದ ಪೆಟ ಹೋಳೆ ತಪ್ಪಿಸಿಕೊಳ್ಳಲಿ ದೆ. ಶ್ರೀಮತಿ ಗಾಂಧಿಯವರು ತನ್ನ ಭೆಟ್ಟಿಯ ಸಂಗತಿಗಳನ್ನು ತಡವಾಗಿಯಾದರೂ ಮುಖ್ಯಮಂತ್ರಿಗೆ ತಿಳಿಸಿದ್ದು ಅಕೆ ಪ್ರಧಾನಿಯಾಗಿದ್ದುದರಿಂದ. ಪ್ರಧಾನಿಯೂ ಆದ ಶ್ರೀಮತಿ ಗಾಂಧಿಯವರ "ಖಾಸಗಿ ಸಂದರ್ಶನ" ನಿರಾತಂಕವಾಗುವಂತೆ, ಈ ವೇಳೆ ಯಾವ ದುರ್ಘಟನೆಯೂ ನಡೆಯದಂತೆ ಶ್ರೀ ಪಾಟೀಲರು ಮಂಜಾಗರೂಕತೆ ವಹಿಸಲೇಬೇಕು. ಸಾಕಷ್ಟು ಭದ್ರತಾ ವ್ಯವಸ್ಥೆಯನ್ನೂ ಏರ್ಪಡಿಸಬೇಕು. ಈ ಉದ್ದೇಶದಿಂದಲೇ ಅಕೆ ಸರಕಾರಕ್ಕೆ ತಿಳಿಸಿದ್ದು.

ಸರಕಾರದಲ್ಲಿ ಮಂತ್ರಿ-ಮಾಗಧರೂಗಳವರು ಖಾಸಗಿ ಸಂದರ್ಶನ ನೀಡುವುದನ್ನು ವಿರೋಧಿಸಲಾಗುವುದಿಲ್ಲ. ಅವರೂ ಒಂದಲ್ಲ ಒಂದು ರಾಜ್ಯಕೀಯ ಪಕ್ಷಗಳಿಗೆ ಸೇರಿದವರಾದುದರಿಂದ ಆ ಪಕ್ಷಗಳ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದು ಅಗತ್ಯವೇ. ಆದರೆ, ಖಾಸಗಿ ಸಂದರ್ಶನದ ವೇಳೆ ಸರಕಾರವು ಮಾಡುವ ಭವ್ಯತಾವ್ಯವಸ್ಥೆ ಮೊದಲಾದವುಗಳಿಗಾಗಿ ಸರಕಾರದ ಬೊಕ್ಕಸ ಬರಿದು ಮಾಡುವುದು ಸರಿಯೂಗುವುದಿಲ್ಲ. ಪಕ್ಷಕ್ಕೆ ಬೇಕೆಂದರೆ, ವ್ಯಕ್ತಿಗೆ ಬೇಕೆಂದರೆ; ತಗಲುವ ವೆಚ್ಚವನ್ನು ಪಕ್ಷವು ಸರಕಾರಕ್ಕೆ ತುಂಬಿಕೊಡ ಬೇಕು. ಒಂದೊಂದೇ ಪಕ್ಷದ ಸರಕಾರಗಳಿದ್ದಾಗ ಈ ಪ್ರಶ್ನೆಯೂರೂ ಎತ್ತಲಿಲ್ಲ. ಇಂದು ಪರಿಸ್ಥಿತಿ ಹಾಗಿಲ್ಲ. ಆದುದರಿಂದ ಈ ಬಗ್ಗೆ ಕಟ್ಟು ನಿಟ್ಟಾದ ನಿಯಮ ಮಾಡಲು ಕಾಲ ಪರಿಪಕ್ವವಾಗಿದೆ.

ಂ ಂ ಂ

ಕಾಂಗ್ರೆಸ್ ಮಹಾ ವಿಘಟನೆಯ ಬೇಳೆ ಶ್ರೀ ಯು. ಎಸ್. ದೇಛಾರರು ಅದನ್ನು ತಪ್ಪಿಸಲು ಮಿತಿಮೀರಿ ಪ್ರಯತ್ನಿಸಿದವರಲ್ಲಿ ಒಬ್ಬರು. ಒಮ್ಮೆ ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದ ಶ್ರೀ ದೇಛಾರರು ಯಾವ ಅತಿರೇಕ ಕಾರಣಕ್ಕೆ ಕುನ್ನ ಒಕ್ಕುವವರಲ್ಲ. ಅವರು ಅಧ್ಯಕ್ಷರಾಗಿದ್ದ ಅವಧಿಯಲ್ಲೇ ಕಾಂಗ್ರೆಸ್ಸು ಸಮಾಜವಾದದ ತತ್ವವನ್ನೆ ಸ್ವೀಕರಿಸಿತ್ತು. ಮುಂದೆ ಕಾಂಗ್ರೆಸ್ಸು ದಕ್ಷಾಂಶ ಆರ್ಥಿಕ ನೀತಿಯನ್ನು ಒಪ್ಪಿಕೊಂಡರೂ ಸಮಾಜವಾದದತ್ತ ಮಾಲಿದ್ದು ಅವಡಿಯು ಲ್ಲೇ. ಆದುದರಿಂದ ಸಮಾಜವಾದವ ಹೆಸರಲ್ಲೇ ಕಾಂಗ್ರೆಸ್ಸು ಒಡೆದ ಲುವ್ಯದ್ದವಾಗ ಬಾಗ ಹೇಂದಾಣಿಕೆ ಸಾಧಿಸುವ ಅಧಿಕಾರ ಶ್ರೀ ದೇಛಾರರಿಗಿತ್ತು. ಇಂದಾದರೂ ಎರಡು ಹೋಳುಗಳನ್ನೂ ಒಂದಾಗಿಸಲು ಸಾಧ್ಯವಿದ್ದಲ್ಲಿ, ಅವರಿಗೂ ಅವರಂತಹ ಕೆಲವರಿಗೂ ಸಾಧ್ಯವೇ ಸಾಧ್ಯ.

ಶ್ರೀ ದೇಛಾರ್ ಇಂದು ಸಂಪೂರ್ಣ ನಿರಾಶೆಯೊಂಡಿದ್ದಾರೆ. ಅವರೂ ಅದನ್ನವರು ನುಚ್ಚಿಡುವ ಪ್ರಯತ್ನ ಮಾಡ ತ್ತಾರೆ. ಕಾಂಗ್ರೆಸ್ ತಂಕುಡಿಗಳು ಒಂದಾಗಲು ಸಮಯ ಪಕ್ವವಾಗಿಲ್ಲವೆಂದವರು ಮರೆ ಮಾಚಲು ಹವಣಿಸಿದ್ದಾರೆ. ಶ್ರೀಮತಿ ಗಾಂಧಿಗೆ ಪಕ್ಷ ಬೇಡ, ಅಧಿಕಾರ ಬೇಕು; ಶ್ರೀ ಎಸ್.ಆರ್‌ಗೆ ಅಧಿಕಾರವಿಲ್ಲವಾದರೂ ಚಿಂತೆಯಿಲ್ಲ ಪಕ್ಷ ಬೇಕು, ಅದುದರಿಂದಲೇ ಅವರು ತಮತಮ್ಮ ವ್ಯಕ್ತಿನಿಷ್ಠ ಭಾವನೆಗಳಿಗೆ ಒಪ್ಪುವಂತಹ ಹೆಸರುಗಳಿಂದ ತಂತವ್ಯ ತುಣುಕುಗಳನ್ನು ಕರೆದುಕೊಂಡಿದ್ದಾರೆ. ಶ್ರೀಮತಿಯವರದ್ದು ಆಡಳಿತ ಕಾಂಗ್ರೆಸ್ಸು, ಶ್ರೀಮತೂರವರದ್ದು ಸಂಸ್ಥಾ ಕಾಂಗ್ರೆಸ್ಸು ಇವರಿಬ್ಬರಿಗೂ ಬೇಡವಾದ ಒಗ್ಗಟ್ಟನ್ನು ಶ್ರೀ ದೇಛಾರರಿಗೆ ಬೇಕೇ?

ಅತಿರೇಕದ ಕ್ರಾಂತಿವಾದಿಗಳಿಗೆ ದೇಶದ ಮೇಲೆ ಅಸಿಯಿಲ್ಲ; ಅವರು ಕ್ರಾಂತಿ ಪ್ರಿಯರು ಮಾತ್ರ. ಅತಿರೇಕದ ಸಂಸ್ಥಾನಾಯವಾದಿಗಳಿಗೂ ದೇಶ ಬೇಡ; ಕಮ್ಮಿ ಹಳೆಯು ಡಾದೊಂದೇ ನಾಶ; ಅವರು ಸದಾ ಶಾಂತಿಪ್ರಿಯರು ಆದರೆ, ಬರಿಯ ಶಾಂತಿಯುಗಲ್ಲೇ ಬರಿಯ ಕ್ರಾಂತಿಯುಗಲ್ಲೇ ದೇಶವನ್ನು ಮನ್ನಡೆಸುವುದಿಲ್ಲ. ಆದುದರಿಂದಲೇ ಎಲ್ಲ ರಾಜ್ಯಕ್ಕೂ ಪಕ್ಷಗಳೂ ನವ್ಯ ದೇಶದಲ್ಲಿ ಸಮಾಜವಾದದ ಜಪ ಮಾಡುತ್ತಿವೆ. ಅವರ ಸಮಾಜವಾದವಿನ್ನು ಅವರವರ ಬುದ್ಧಿಯ ಪರಿಧಿಯಿಂದ ಹೆಚ್ಚಿರಲಿ ಸಾಕುತ್ತಿಲ್ಲ. "ಸಮಾಜವಾದ"ದ ದಿಗ್ಬಂಧನವುಕ್ತವಾದರೆ ಮಾತ್ರ ಪ್ರಗತಿ ಸಾಧ್ಯ. ಶ್ರೀ ದೇಛಾರರು ಇದೇ ದುನೋನೈತ್ತಿಯವರ.

ಂ ಂ ಂ

(ಒಂಭತ್ತನೇ ಪುಟ ನೋಡಿರಿ)

ಮರುಗುವುದು ಸಾಕು, ಕ್ರಮವಿಂದು ಬೇಕು

ಎಂಟು ವರ್ಷಗಳಿಗೆ ನೊದಲ ಕತೆ. ಅದು ಒಂದೆರಡನ್ನು ಬಿಟ್ಟು ಉಳಿದೆಲ್ಲ ರಾಜ್ಯಗಳಲ್ಲೂ ಜೋಡಿಪ್ತಿನ ಸರಕಾರವಿದ್ದ ಕಾಲ. ಕೇಂದ್ರ ಸಂಪತ್ತಿನಲ್ಲಿ ಈ ಜೋಡಿತ್ತುಗಳು ತಂಬಿ ತುಳುಕಾಡುವ ಬಹುಮತಹೊಂದಿದ ಸರ್ವಕಾಲ. ವಿಶ್ವ ಪ್ರಾಯಕ ಲೋಕವಂದ್ಯ ಭಾರತೀಯ ಸತ್ಪತ್ರಾಗ್ರೇಸರ ಪಂ. ಜವಾಹರಲಾಲ ನೆಹರುರವರ ಪ್ರಧಾನಿತ್ವ. ಭಾರತವನ್ನು ವಿಶಭಾಷ ಸೂತ್ರದಿಂದ ಪೋಣಿಸಿ, ಸದಾ ವಿಶೀಕೃತ ರಾಷ್ಟ್ರವಾಗಿಸಬೇಕೆಂಬ ಹೆಬ್ಬಯಕೆ ಅವರಿಗೆ. ಸಂವಿಧಾನದ ಒಲವೂ ಅವಂಗೆ. ಅವರ ಮೂತನ್ನು ವಿಂರಿ ನಡೆವವರು ಆಗ ಜೋಡಿತ್ತು ಪಕ್ಷದಲ್ಲಿ ಯಾರೊಬ್ಬರೂ ಇಲ್ಲ.

ರಾಷ್ಟ್ರಭಾಷೆಯೆಂದೋ ರಾಜ್ಯಭಾಷೆಯೆಂದೋ ಆತಳಿತ ಭಾಷೆಯೆಂತೋ ಸಂಪರ್ಕ ಸಾಧನ ಭಾಷೆಯೆಂದೋ ಭಾರತೀಯರೆಲ್ಲರೂ ಹಿಂದಿ ಬಲ್ಲವರಾಗಬೇಕು. ಹಿಂದೀತರರೆಲ್ಲ ಹಿಂದಿಯ ಬಗ್ಗೆ ಹಿಂದೀಯರೆಲ್ಲ ಹಿಂದೀತರ ಭಾಷೆಗಳ ಬಗ್ಗೆ ಇದ್ದ ಅಸಹಿಂಜವನ ವಿನೋಭಾವಗಳನ್ನು ದೂರವಾಡಲು, ಸವಾನ ಪೊರೆಯನ್ನು ಎಲ್ಲರ ಮೇಲೂ ಹೊಸಲು ತ್ರಿಭಾಷಾ ಸೂತ್ರವನ್ನು ವ್ಯವಹಾರಕ್ಕೆ ತರಲಾಯ್ತು. ನಮ್ಮ ದೇಶದ ಭಾಷಾ ಸಮಸ್ಯೆಗೆ ತ್ರಿಭಾಷಾ ಸೂತ್ರವೊಂದೇ ಸರ್ವಶ್ರೇಷ್ಠ ಪರಿಹಾರವೆಂದು ಡಂಗುರ ಸಾರಲಾಯ್ತು.

ಪ್ರಧಾನಿ ನೆಹರುರವರು ಹಿಂದಿಯನ್ನು ಕಡ್ಡಾಯವಾಗಿ ಹೇರುವುದಿಲ್ಲವೆಂದು ಭರವಸೆ ಕೊಡದೆ ಹೋಗಿದ್ದರೆ, ತಮಿಳುನಾಡಿನ ಹಿಂದೀ ವಿರೋಧಿ ಚಳವಳಿ ಆಗಲೇ ಉಲ್ಬಣಗೊಳ್ಳುತ್ತಿತ್ತು. ತಂದೆಯ ಮಾತನ್ನು ಮಗಳು ಮೀರಿದ್ದರಿಂದ ಮದ್ರಾಸಿನ ಚಳವಳಿ ಕರ್ನಾಟಕ, ಆಂಧ್ರ ಮತ್ತು ಕೇರಳಗಳಿಗೂ ಹರಡಿ ಹಲವಾರು ಉತ್ಪಾತಗಳಿಗೆ ಕಾರಣವಾಯ್ತು. ಈಗ ಹಿಂದಿಯನ್ನು ಕಲಿಯುವವರೆಲ್ಲಿ ಅಸಕ್ತಿ ಮೂಡಿಕೊಳ್ಳಲಿಲ್ಲ. ಕಲಿಸಿಕಲಿವಾದ ವಾತಾವರಣವನ್ನೆ ಯಾರೂ ತಳಿಗೊಳಿಸಲಿಲ್ಲ. ಉತ್ತರ ಭಾರತದ ಶ್ರೀ ಸೀಳಾ ಗೋವಿಂದದಾಸರಂತವರು ಇನ್ನೂ ತಮ್ಮ ಬಿಗುಹನ್ನು ಬಿಟ್ಟುಕೊಡಲಿಲ್ಲ.

ಸ್ವತಂತ್ರ ಭಾರತವನ್ನು ಹೂವೊಬ್ಬ ಮೆಚ್ಚಿಲ್ಲ; ಮೂವೊಂದು ಭಾಷೀಯರು ಶಾಸನ ಮಾಡುತ್ತಿಲ್ಲ. ಕೇಂದ್ರ ಸರಕಾರದ ಮೇಲೆ ಹಿಂದಿಯನ್ನು ಹೇರುವ ಬಗ್ಗೆ ಒತ್ತಾಯ ಮಾಡುವವರು ತಾವು ತ್ರಿಭಾಷಾ ಸೂತ್ರವನ್ನು ತಿಪ್ಪೆಗೆ ಸೆದದನ್ನು ಮರೆತೇ ಬಿಡುತಿದ್ದಾರೆ. ಅಂದರೆ, ಅವರು ಸವಾರಿ ಮಾಡಬಯಸುತ್ತಾರೆ; ಕುದುರೆಯೊಗಲು ಸಿಪ್ಪರಿಲ್ಲ. "ಅಂಗ್ರೇಜಿ ಹಟಾವೋ" ಚಳವಳಿಯು ಹಿಂದೀ ಭಾಷಾ ರಾಜ್ಯಗಳಲ್ಲಿ ಇಷ್ಟೂ ಸುಸ್ತುವಾಗೇ ಇದೆ. ದಕ್ಷಿಣೀ ಭಾಷಾ ಹಟಾವೋ ಮಾಡುತ್ತಲೇ ಇದ್ದಾರೆ. ಈ ಭಾಷಾ ದ್ರೋಹವೇಕೆ?

ಒಂದೀ ಮಾಧ್ಯಮದ ಶಾಲೆಗಳು, ವಿಶ್ವವಿದ್ಯಾಲಯಗಳು ದಕ್ಷಿಣ ಭಾರತದಲ್ಲಿ ಸ್ಥಾಪನೆಮಾಡಲು ಕೆಲವರು ಮನಸ್ಸು ಮಾಡಿದ್ದಾರೆ. ಕರ್ನಾಟಕದ ರಾಜಧಾನಿಯಲ್ಲಿ ಹಿಂದೀ ಮಾಧ್ಯಮದ ಕೇಂದ್ರ ವಿಶ್ವವಿದ್ಯಾಲಯವೊಂದು ಅರಂಭವಾಗಬೇಕೆಂದು ಕೆಲವು ತಿಂಗಳುಗಳ ಹಿಂದೆ ಕೇಳಿಕೊಳ್ಳಲಾಗಿತ್ತು. ಈ ಮೂತಿಗೆ ಕೆಲವು ಪತ್ರಿಕೆಗಳೂ ಜಪತೆಯೂ ವಿರೋಧ ವ್ಯಕ್ತ ಪಡಿಸಿದುವು. ದಾಕ್ಷಿಣಾತ್ಯರ ಮೇಲೆ ಹಿಂದಿಯನ್ನು ಹೇರುವ ಪ್ರಯತ್ನವಿದು ಎಂದು ಅನಂತೂಸಿಲಾಯ್ತು. ಆಂದರೆ, ಹಿಂದಿಯ ಬಗ್ಗೆ ಇನ್ನೂ ಕನ್ನಡಿಗರ ಅಂತರಾಳದಲ್ಲಿ ಮಾಡಿದ ದುರ್ಭಾವನೆ ದೂರವಾಗಿಲ್ಲವೆಂದೇ ಇದರ ಅರ್ಥ. ಈ ದುರ್ಭಾವನೆಯು ಹಿಂದೀ ಭಾಷೆಯ ಬಗ್ಗೆ ಎಂದು ಹೇಳುವುದಕ್ಕಿಂತ ಹಿಂದೀ ಭಾಷೆಯೊಡವರ ಮೇಲೆಂದು ಹೇಳುವುದು ಹೆಚ್ಚು ಸಮಂಜಸ.

ತಮಿಳುನಾಡೊಂದನ್ನು ಬಿಟ್ಟು ಉಳಿದೆಲ್ಲ ರಾಜ್ಯಗಳು ಬೇಕಾಬೇಡ ಬೇಡವಾಗಿಯೋ, ಮನಸ್ಸಿದ್ದೋ, ಇಲ್ಲದೆಯೋ ಕೇಂದ್ರ ಸರಕಾರವು ಕೊಡುತ್ತಿರುವ ಸಹಾಯಧನದ ವ್ಯಯಕ್ಕಾಗಿಯೋ ಶಾಲಾಶಿಕ್ಷಣದಲ್ಲಿ ಹಿಂದಿಯನ್ನು ಕಲಿಸುತ್ತಿವೆ. ಹಿಂದೀ ಕಲಿಸಲು ಅಧ್ಯಾಪಕರು ಎಲ್ಲೆಡೆಯೂ ಇಲ್ಲದಿದ್ದರೆ, ಆಕಾರಣ ಹಿಂದಿಯನ್ನು ಕಲಿಸದೆ ಹೋದರೆ, ಅದು ಅಡಳಿತಾತ್ಮಕ ದೋಷವನ್ನೇ ಹೊರತು ಸರಕಾರೀ ನೀತಿಯ ದೋಷವಲ್ಲ. ಈ ರೀತಿಯಲ್ಲಿ ಹಿಂದಿಯನ್ನು ಪಾಶ್ಚಾತ್ಯದ ಸೇರಿಸಿ ಹೊರಗಿನವರ ಕಣ್ಣಿಗೆ ಮಣ್ಣೆರಚಿ ವಾಟಕವಾದರೂ ನಡೆಯುತ್ತಿವೆ. ಈ ನಾಟಕದಿಂದ ಹಿಂದಿಯ ಉದ್ಧಾರವಾಗುವ ಮಾತು ದೂರವೇ ದೂರ. ಹಿಂದಿಯು ಅಧ್ಯಯನದ ಪಠ್ಯವಸ್ತುವಾಗಿ ಅಸಕ್ತಿ ಮೂಡುವುದಿಲ್ಲ; ಹಿಂದಿಯು ಮರಣೋತ್ತರ ಸಮಾಧಿಯಲ್ಲ, ಜೀವಂತ ಸಮಾಧಿಯಾಗುತ್ತಿದೆಯೆಂಬ ವಾಸ್ತವ ಬೇರೆ. ಓದಲಾಗದಿದ್ದರೂ ಬರೆಯಬಲ್ಲರಾದ್ದರೂ ಪರೀಕ್ಷೆಯಲ್ಲಿ ಪೂರ್ಣ ತೆಗೆದುಕೊಳ್ಳಬಹುದಿದ್ದರೂ ವಿದ್ಯಾರ್ಥಿ ಹಿಂದೀ ಕಲಿಯುವ ತ್ರಾಸೆ. ಕಡ್ಡಾಯವಾಗಿ ಕಲಿಯಲೇ ಬೇಕು. ತ್ರಿಭಾಷಾ ಸೂತ್ರದ ಕಚ್ಚಾ ಪರಿಪಾಲಕರು ತಾವೇ ನಾವು?

ಇದು ಕರ್ನಾಟಕದ ಕತೆ. ಇದನ್ನೇ ಹೋಲುವಂತೆ ಉಳಿದ ಹಿಂದೀತರ ರಾಜ್ಯಗಳ ನೀತಿಯಿರಬಹುದು. ತಮಿಳುನಾಡೊಂದು ದ್ವಿಭಾಷಾ ಸೂತ್ರವನ್ನು ಅನುಸರಿಸುತ್ತದೆ. ಉಳಿದೆಲ್ಲ ರಾಜ್ಯಗಳಿಗೆನ್ನೂ ತ್ರಿಭಾಷಾ ಸೂತ್ರ. ಆದರೆ, ಕೇಂದ್ರ ಶಿಕ್ಷಣ ಸಚಿವ ಡಾ| ವಿ. ಕೆ. ಆರ್. ವಿ. ರಾವ್ ಅವರು ತ್ರಿಭಾಷಾಸೂತ್ರ ಹಿಂದೀತರ ರಾಜ್ಯಗಳಲ್ಲಿ ವಿಫಲವಾಗಿದೆ ಎಂದು ಅಪ್ಪಣೆ ಕೊಡಿಸಿದ್ದಾರೆ. ಹಿಂದೀತರರು ಹಿಂದೀ ಕಲಿಯಲು ಹೋಸ ಪುದರ ಹಕ್ಕರಲ್ಲೊಂದು ವಾಲು ಆಸಕ್ತಿಯನ್ನೂ ಹಿಂದೀಯರು ಇತರ ಭಾಷೆ ಕಲಿಯಲು ತೋರಿಸುತ್ತಿಲ್ಲವೆಂದು ಇದರ ಅರ್ಥ. ಇದರ ಅಂತರಾಳವೇನು? ಹಿಂದೀ ಭಾಷೀಯರು ದಕ್ಷಿಣದ ಭಾಷೆಗಳನ್ನು ಕಲಿಯಲು ಆಸಕ್ತರಾಗಿಲ್ಲ; ತ್ರಿಭಾಷಾಸೂತ್ರವನ್ನು ಒಪ್ಪಿಕೊಂಡಂತೆ ಮಾಡಿ ಹಿಂದೀತರ ಭಾಷೀಯರೆಲ್ಲ ಹಿಂದಿಕಲಿಯುವಂತೆ ಮಾಡುವ ಉಪಾಯ ನಿಪುಣರು ಅವರು. ಈ ಉಪಾಯ ನಿಪುಣರ ರಹಸ್ಯೋಪಾಯ ಬಹಿರಂಗಗೊಂಡುದಂದಲೇ ಹಿಂದೊಮ್ಮೆ ಸ್ಫೋಟವಾಯ್ತು.

ಹಿಂದೀ ಭಾಷೀಯರು ಸವಾರಿ ಮಾಡುವ ಮನೋಭಾವವನ್ನು ಇನ್ನೂ ಬಿಟ್ಟಿಲ್ಲ. 'ರಾಷ್ಟ್ರೀಯ ಐಕ್ಯ'ದ ಜಪ ಮಾಡುತ್ತ ಹಿಂದಿಯನ್ನು ಎಲ್ಲರ ಮೇಲೂ ಹೇರಿಬಿಡುವ ಹವಣಿಕೆಯವರದ್ದು. ಇದು ಅನ್ಯಾಯವಾಗುವುದಿಲ್ಲ; ಆದರೆ ತೋರಿಕೆಗೆ ನ್ಯಾಯಬದ್ಧತೆಯೂ ಆಗುವುದಿಲ್ಲ. ಒಂದು ಸಂಪರ್ಕ ಭಾಷೆಯಿರಬೇಕೆಂದು ಎಲ್ಲರೂ ಗೊತ್ತು. ಇದು ಸ್ವದೇಶಿ ಭಾಷೆಯಾಗುವುದು. ಅಧಿಕ ಸಂಖ್ಯಾಕರಿಗೆ ಉಪಪ್ರಭ ಫೀಡದಂತೆ ಹಿಂದಿಯಾಗುವುದೂ ಸಮಂಜಸ. ಆದರೆ, ಹಿಂದೀವಾದಿಗಳ ದುರುದ್ದೇಶ ಮತ್ತು ಅಸಮಂಜಸ ನೀತಿ-ನಡಾವಳಿಗಳೇ ಈಗಿನ ವಿದ್ವೇಷೀ ವಾತಾವರಣಕ್ಕೆ ಮೂಲ. ಹಿಂದೀ ಭಾಷೀಯರು ತಮ್ಮ ಉದ್ದುರ ಟುಷನ ಬಿಟ್ಟುಕೊಡಬೇಕು, ಹೊಂದಾಣಿಕೆಗೆ ಸೊಂಟಕಟ್ಟಬೇಕು; ಹಿಂದೀತರವಾದ ಭಾರತೀಯ ಭಾಷೆಯೊಂದನ್ನು ಕಲಿಯುವಲ್ಲಿ, ಕಲಿಸುವಲ್ಲಿ ಅಸಕ್ತಿ ತೋರಿಸಬೇಕು.

ಭಾಷೆಯು ಸಂಗಡಿ ವ್ಯಾಪಾರವಲ್ಲವೆಂಬುದು ನಿಜ. ಆದರೆ, ಅದನ್ನೆ ವ್ಯಾಪಾರಮಟ್ಟಕ್ಕೆ ನಾವು ಕೊಂಡುಹೋಗಿದ್ದೇವೆ. 'ನೀನೆಷ್ಟು ನನ್ಮದನ್ನು ಕಲಿಯುತ್ತೀರೋ ಅಷ್ಟೇ ನಿನ್ಮದನ್ನು ಕಲಿಯುತ್ತೇವೆ' ಎಂಬ ಮನೋಭಾವ ನನೆಮಾಡಿಬಿಟ್ಟಿಸಿ. ಇದು ದೂರವಾಗಬೇಕಾದರೆ, ಮಾನಸಿಕ ಸಾಮಂಜಸ್ಯ ಮೂಡಬೇಕು. ದೇಶದ ಪ್ರಶ್ನೆಯನ್ನು ಮುಂದೆಮಾಡುವವರು ಅದೇ ಪ್ರಶ್ನೆಯ ಮೇಲೆ ತುಸು ಶ್ರಮ ಪಡಲು, ಅಂಧಾಭಿಮಾನ ಸ್ವಜಿಸಲು ಸಿದ್ಧರಾದ ಬೇಕು. ಅಧಿಕಾರ ಸ್ಥಾನದಲ್ಲಿರುವವರು ತ್ರಿಭಾಷಾಸೂತ್ರ ವಿಫಲವೆಂದು ಮರುಗುವುದರಲ್ಲಿ ಕೃಪ್ತರಾಗದೆ ಹಿಂದೀ ರಾಜ್ಯಗಳಲ್ಲಿ ಅದು ಸಫಲವಾಗುವಂತಹ ಶ್ರಮ ಕೈಕೊಳ್ಳ ಬೇಕು. ಸಕಾಲದಲ್ಲಿ ಈ ಶ್ರಮ ಕೈಕೊಳ್ಳದೇ ಹೋದರೆ, ಭಾಷಾ ಸೂತ್ರವನ್ನು ವ್ಯವಹಾರಕ್ಕೆ ತರಲು ಹರಿಹರ ಪ್ರಶ್ನೆಯಿಂದಲೂ ಸಧ್ಯವಿಲ್ಲ. ತಮಿಳುನಾಡಿಗೂ ವಿಗಿಲಾದ ಕಟ್ಟುನಿಟ್ಟಿನ ಭಾಷಾಸೂತ್ರವನ್ನು ಹಿಂದೀರಾಜ್ಯಗಳು ಅನುಸರಿಸಿಕೊಂಡು ಬರುವಾಗ ಹಿಂದೀತರ ರಾಜ್ಯಗಳಿಗೆ ಭಾಷಾಭಿಮಾನವಿಲ್ಲವೇನು? ಈ ಅಭಿಮಾನ ಎಲ್ಲರಿಗೂ ಇದ್ದೇ ಇರುವುದು ಸಹಜ.

ಉಡುಪಿಗೆ ಬಂದಾಗ

ಮನರಂಜನೆಯ ಸಮಸ್ಯೆ ನಿಮಗಿಲ್ಲ!

ಅತ್ಯುತ್ತಮ ಚಲಚ್ಚಿತ್ರಗಳನ್ನು ಪ್ರದರ್ಶಿಸುವ

ಎರಡು ಶ್ರೇಷ್ಠ ದರ್ಜೆಯ ಚಿತ್ರಮಂದಿರಗಳು

ನಿಮ್ಮ ಬೇಸರವನ್ನು ನೀಗಿಸಲು ಇಲ್ಲಿವೆ.

ಅಲಂಕಾರ್ (ಫೋನ್: 327) ಆಸ್ಪತ್ರೆ ರಸ್ತೆ

ಕಲ್ಪನಾ (ಫೋನ್: 437) ಉಪೇಂದ್ರಬಾಗ್

ಕುಂದಾಪುರದ ನವೀಕೃತ ಭವ್ಯ ಚಿತ್ರಮಂದಿರ—

ಗೀತಾಂಜಲಿ

ಮ್ಯಾನೆಜರುಗಳು:

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಎಸ್. ಆರ್. ಬಿಲ್ಡಿಂಗ್ಸ್, ಉಡುಪಿ (ದ. ಕ.)

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಜಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಪೆಂಗುಸರ ಕತೆಗಳು	2—00
ಪುಡಿಮುಸ್ತುಗಳು	1—50
ಪಂಚಗಜ್ಜಾಯ	2—00
ಪುಷ್ಪವನ	2—00
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ವಿಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦

ದಿಗ್ಬಂಧನದಲ್ಲಿ ಸಮೂಜವಾದ

(ಏಳನೇ ಪುಟದಿಂದ)

ಸಮೂಹ ಕ್ಯಾಜ್ಯದ ಅರಜ-ಇಸ್ರಾಯೇಲ್ ಬಿಕ್ಕಟ್ಟು ದಿನದಿನವೂ ಹೊಸ ಹೊಸ ರೂಪ ತಾಳುತ್ತಿದೆ. ಇತ್ತೀಚಿಗಿನ ವಿಕಗಳಲ್ಲಿ ಅಲ್ಲಿ ಹೋರಾಟ ಮುಂದುವರಿಯುತ್ತಿದ್ದಂತೆಯೇ ಜಗತ್ತಿನ ಮಹಾರಾಷ್ಟ್ರಗಳು— ರಷ್ಯವತ್ತು ಅವೆರಿಕೆಗಳ ಒಂದು ಸಾರ್ವತ್ರಿಕ ಸೀತಿಗೆ ಬಂದು ಯುದ್ಧವಮನ ಕ್ಕೆ ಪ್ರಯತ್ನಿಸುತ್ತಿವೆಯೆಂದು ಸಂಜಲಾಗಿತ್ತು. ಆದರೆ, ಜಗತ್ತು ಇಟ್ಟುಕೊಂಡ ಈ ಆಸೆಯು ನೀರಿನಲ್ಲಿ ಬಳಕೊಂಡು ಹೋಯಿತ್ತು.

ಐದುತ್ಕೃಷ್ಟ ಶಸ್ತ್ರಾಸ್ತ್ರಗಳನ್ನು ಪೂರಯಿಸಲು ಸೋವಿಯ ತ್ತು ಮುಂದೆ ಬಂತು. ಇಸ್ರೇಲಿಗೆ ಅಗತ್ಯವಾದ ಖಾಂಬರ್ ವಿಮಾನಗಳನ್ನು ಒದಗಿಸಲು ಅಧ್ಯಕ್ಷ ನಿಕ್ಸನ್ನರು ರಹಸ್ಯ ಆಜ್ಞೆ ಕೀಡಿದರು. ಮುಂದೇನು? ಯುದ್ಧವಿರಾಮಕ್ಕೆ ಮುಂದಾಗಬೇಕಾದವರೇ ಯುದ್ಧಾಗ್ನಿಗೆ ತುಪ್ಪ ಸುರುವಿ ಅದನ್ನು ಜೀವಂತ ವಿಡಲು ಅಶಿಸಿದ್ದಾರೆ. ಇದು ಹೀಗೇ ಫಡೆದರೆ, ರಷ್ಯ—ಅಮೆರಿಕೆಗಳೇ ನೇರವಾಗಿ ಹೊಡೆದಾಡುವ ಘಟ್ಟ ಬಂದರೂ ಬರಬಹುದು. ವಿಯೆತನಾಮ ಕಾಂಬೋಡಿಯಗಳಲ್ಲಿನ ಹೋರಾಟವನ್ನು ಸಜೀವವಾಗಿಡುವುದು ಅಮೆರಿಕೆಗೆ ಜೀವಾಗಿದೆ; ಅಂತೆಯೇ ಅರಬ ರಾಷ್ಟ್ರಗಳ ಮೇಲೂ ವಕ್ರದೃಷ್ಟಿಯಿಡುವುದು ಇಬ್ಬರಿಗೂ ಇಷ್ಟ. ಇಂತಹದರಿಂದ ಶಾಂತಿ ನೀಕ್ಷಿಸ ಬುದು ಕನಸಿನ ಮಾತಾದೀತು.

ಲಾಂಗ್ ಲೀವ್ ಮಾನವ್‌ವಾದ್

(ನಾಲ್ಕನೇ ಪುಟದಿಂದ)

ಗತಿ, ಭಾಂಯೊ, ಪ್ರಯೋಗ ರಹಸ್ಯ .... ಇತ್ಯಾದಿತ್ಯಾದಿಗಳು ಸಾಧನ-ಸಾಧನದಿಂದ ಸಾಧ್ಯ ಸಿದ್ಧಿಯೊಗಬೇಕು. ಅದ್ರಿದ ಒಬ್ಬೆಬ್ಬರದು ಒಂದೊಂದು ವಾದ...'

'ನೋಡಿ ನಾನನ್ನು ವಂತೆ ಮಾನವತಾವಾದವೇ ಸಾಧನವೂ ಸಾಧ್ಯವೂ ಆಗಬೇಕು. ಯಾಕಾಗಬಾರದು?'

'ಅಯ್ಯೋ, ಯಾಕಾಗಬಾರದು? ಆಗಲೇಬೇಕು, ಇಫ್ ಕ್ವೆಲಾಬ್ ಹೆಂದಾಬಾದ್ ಲಾಂಗ್ ಲಿವ್ ಮಾನವ್‌ವಾದ್....'

"ಛೆ, ಛೆ ಏನಿದೊಂತ....?'

'ಅಲ್ಲ, ನಿನ್ನ ಬೇಕೆನ ಬಗ್ಗೆ ಜನಾಭಿಪ್ರಾಯ ಮೂಡಿಸಬೇಡವೆ?'

'ನಾನು ಬಿಡೀಂದ್ರೆ....ನೀತ್ತ ಯಾವಾಗ್ಲೂ ಹೀಗೇ....'

'ಹೇಗೆ?"

'ನಿನ್ನ ವಾದ ನಕ್ಷಗೆ ಜೆನ್ನಾಗಿ ಅರ್ಥವಾಗುತ್ತದೆ...'

"ಸಧ್ಯ ಒಬಾವಾದೆ...."

"ಅಯ್ಯೋ, ಇದೆಂಥದೀರಿ...'

'ಇದು ನನ್ನವಾದ, ಈಗ ಬರಲಿ ಮುಂದೆ ನಿನ್ನವಾದ....'

"ಅಂತೂ..."

"ಗುರಿಯೆಂದೇ, ದಾರಿ ನೂತ್ರ ಬೇರೆ ಬೇರೆ...."

"ಹ್ಞೂಂ...."

—ಗೋರಾ.

'ಸಿಂಡಿಕೇಟ್ ಬೇಂಕ್' ಕರೆಗೆ ಭರೇರಾ ಮಾರ್ದನಿ

ಮಡಕೆಯ ನಿಧಿ ಲಾಭದಾಯಕ ಉಳಿತಾಯಕ್ಕೆ

ಅದೊಂದು ಹಿತಕರ ಜೀವನದ ದಿನ. ಭರೇರಾ ಚಟುವಟಿಕೆಯಿಂದ ತುಂಬಿ ತುಳುಕುತ್ತಿದೆ. ಉತ್ತೇಜಿತ ನಿರೀಕ್ಷೆಯು ವಾತಾವರಣ ಎಲ್ಲೆಡೆ ಹರಡಿದೆ. ಪ್ರತಿಯೊಬ್ಬರ ಕಣ್ಣಲ್ಲಾ ಆಸೆ ಮಿನುಗುತ್ತಿದೆ. ಭರೇರಾದ ಪಶ್ಚಿಮದ ಕೊನೆಯಲ್ಲಿ ಕಟ್ಟೆರುವ ಹೊಸ ಕಟ್ಟಡ ಪೂರಾರು ರೈತರ, ಕುರಿಗಾಹಿಗಳ, ಜವಿನಾರ್ಥರ, ಲೇವಾದೇವಿಗಾರರ ಆಕರ್ಷಣೀಯ ಕೇಂದ್ರ. ಆ ಕಟ್ಟಡ— ಸಾಂಪ್ರದಾಯಿಕತೆಯಿಂದ ನವೀನತೆಯ ದಾರಿದ್ರ್ಯದಿಂದ ಸಂಪನ್ನತೆಯ ಪರಿವರ್ತನೆಯ ಸಂಕೇತ.

ಸಂದರ್ಭ— ಸಿಂಡಿಕೇಟ್ ಬ್ಯಾಂಕಿನ ಶಾಖೆಯೊಂದರ ಉದ್ಘಾಟನೆ.

ಬ್ಯಾಂಕಿನ ಹೊಳೆಯುವ ಬಿಳಿಯ ಕೌಂಟರ್‌ನ ಸತ್ತ ನಿಂತ ಹಲವಾರು ದೊರಗು ಬಟ್ಟೆಯ ಬಾರುಬಾಧಾರಿ ಮಹಿಳೆಯರು, ಹಿಂದಿನ ದಿನದ ವರೆಗೂ, ಮನೆ, ತೋಟ್ಟ ಹೊಲಗಳಲ್ಲಿ ಹುಗಿದಿಟ್ಟಿದ್ದ ಹಣ್ಣು ಕಟ್ಟುಂಬದ ಉಳಿತಾಯದ ನಿಧಿಯ ಚಿಕ್ಕಪುಟ್ಟ ಮಡಕೆ ಕುಡಿಕೆಗಳನ್ನು ಬಗ್ಗಿಸಿದರು. ಅದ್ಭುತ, ಅವುಗಳಲ್ಲಿದ್ದ ಸಂಗ್ರಹ 500 ರೂಪಾಯಿಗಳಿಂದ 20,000 ರೂಪಾಯಿಗಳ ವರೆಗೆ.

ಹಳೆಯ, ಹೊಸಕೆಲವಂತೂ ಸ್ತ್ರಾಂಶ್ಯಕ್ಕೂ ಹಿಂದಿನ ವರ್ಷಗಳವು ಹರಿದ ಕರೆನ್ಸಿ ನೋಟುಗಳು, ಬೆಳ್ಳಿಯ ಕಂಚಿನ ನಾಣ್ಯಗಳು ಎಲ್ಲ ಬೆಳಕು ಕಂಡವು. ಭರೇರಾದಲ್ಲಿ ಕುಟುಂಬದ ಉಳಿತಾಯಗಳಿಗೆ ಮಹಿಳೆಯರೇ ಕಸ್ಟೋಡಿಯನ್ನರು (ಸಂರಕ್ಷರು).

ಸಮೂರಂಭದಲ್ಲಿ ಪಲ್ಗೊಳ್ಳಲು ನಾವು ಭರೇರಾ ತಲಪಿದಾಗ ಸಂಜೆ ಐದು ಗಂಟೆ. ಪಶ್ಚಿಮದಂಚಿಗೆ ಸರ್ಕ್ಯಾವಿಯುತ್ತಿದ್ದ, ಭರೇರಾ ಹಳ್ಳಿಯ ಜೌಕೇದಾರನಿಗೆಳನ್ನು ತುಳುಸಿಸ್ತ ನವ್ಯನ್ನೆ ದುರಸಗೊಂಡು ಸಮೂರಂಭದ ಜಗೆಗೆ ನವ್ಯನ್ನು ಕೊಂಡೊಯ್ದು ಬ್ಯಾಂಕ್ ಆವರಣದ ಹೊರಗಡೆ ಕೊಂಚ ಎತ್ತರದಲ್ಲಿದ್ದ ಚಿಕ್ಕ ಚದರಾಕೃತಿಯ ನೆಲದ ಮೇಲೆ ಕೋಟೆಯು ಭದ್ರದ್ವಾರದಂತಹ ಪ್ರವೇಶ ದ್ವಾರವನ್ನು ಫಿರ್ಮಿಸಲಾಗಿತ್ತು.

ವಾತಾವರಣವನ್ನೆಲ್ಲ ನೋಡಿರು ಕಂರಗಳ ಗುಜು ಗುಜು ತುಂಬಿತ್ತು. ಸಮೂರಂಭ ತೊಡಗಲು ಇನ್ನೂ ವೇಳೆ ಇತ್ತು. ಪದ್ಮಾಸನ ಹಾಕಿ ಕೆಳಗೆ ಕೂತಿದ್ದ ಜನ ಹರ್ಟೆ ಹೊಡೆಯುತ್ತಿದ್ದರು. ಎಡಗಡೆಗೆ ಗಂಡಸರು ಬಲಗಡೆಗೆ ಹೆಂಗಸರು ಕುಳಿತ್ತಿದ್ದರು. ಅವರ ಬಟ್ಟೆಗಳ ಬಣ್ಣ ಕಣ್ಣಿಗೆ ಹೊಡೆಯುತ್ತಿತ್ತು. ಕೆಲವು ಮಕ್ಕಳು ಮುಂಭಾಗದಲ್ಲಿ ಕುಳಿತು ತವ ಕದಿಂದ ನೋಡುತ್ತಿದ್ದರು. ಕೆಲವು ತಾಯಂದಿರು ಮಡಿಲಲ್ಲಿ ಕೂಸಿತ್ತಿದ್ದವು. ಕೆಲವು "ದುಪಟ್ಟಾ"ದ ಮರೆಯಲ್ಲಿ ಮೊಲೆ ಕುಡಿಯುತ್ತಿದ್ದವು, ಕೆಲವು ಪಟ್ಟೆ ಪಟ್ಟೆ ಲಂಗಗಳಿಂದ ನಡೆಯುತ್ತಿದ್ದವು. ಇಪ್ಪತ್ತು ಮಂದಿ ಹೆಂಗಸರು ಸವಾರಂಭದೊಂದರಲ್ಲಿ ಪಾಲ್ಗೊಂಡದ್ದನ್ನು ನೋಡಿ ಆಶ್ಚರ್ಯ ಎನಿಸಿದರೂ ನಾವು ಸಂತೋಷ ಪಟ್ಟುಕೊಂಡೆವು. ಗ್ರಾವದ ಅಭಿವೃದ್ಧಿಯ ಬಗ್ಗೆ ಅದರ ಆಸಂದ ಸ್ಪಷ್ಟವಾಗಿತ್ತು. ಸಮೂರಂಭದಲ್ಲಿ ಗಂಡಸರಿಗಿಂತ ಹೆಂಗಸರೇ ಹೆಚ್ಚಿದ್ದರು. ಮಹಿಳೆಯರು ಸ್ವಾತಂತ್ರ್ಯ ಪಡೆದುಕೊಳ್ಳಿತ್ತಿದ್ದಾರೆ ಎಂದು ಪವ ಗೆ ಅನಿಸಿತು.

ಗೇಟಿನ ಮುಂಭಾಗ ಮುಖ್ಯ ಅತಿಥಿಯನ್ನು ಎದಿರ್ಗೊಳ್ಳಲು ಸಮೂರು ಇಪ್ಪತ್ತು ಮಂದಿ ಹಳ್ಳಿಯ ಪ್ರಮುಖರು ಹೂಮಾಲೆ ಹಿಡಿದು ಕಾಯ್ದು ನಿಂತಿದ್ದರು. ನೋಡಿದಂತೆ ಬದಿ ಕಾಲ ಮೇಲೆ ಕಾಲು ಹಾಕಿ ಕುಳಿತಿದ್ದ ಒಬ್ಬ ಮುದಿಕ ಬೊಚ್ಚು ಬಾಯಿ ತೆರೆದು ನೋಡುತ್ತಿದ್ದ.

5-30 ಹೊಡೆಯಿತು. ತನ್ನ ಹಿಂದೆ ಧೂಳೆಬ್ಬಿಸುತ್ತ ಬರುತ್ತಿದ್ದ ಕಾರೊಂದನ್ನು ಕಂಡು ಹೊರಗೆ ಕಾಯುತ್ತಿದ್ದ ಹಳ್ಳಿಯ ಹಿರಿಯರು ನೆಟ್ಟಗಾದರು. ಮುಖ್ಯ ಅತಿಥಿ ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಕಾರಿನಿಂದ ಇಳಿಯುತ್ತಿದ್ದಂತೆ 'ಕೆ. ಕೆ. ಪೈ ಜಿಂದಾಬಾದ್' ಘೋಷಣೆ ವಾತಾವರಣವನ್ನು ತುಂಬಿತು. ಶ್ರೀ ಪೈ ಕೈಜೋಡಿಸಿ ಊರ ಹಿರಿಯರ ವಂದನೆಗಳನ್ನು ಸ್ವೀಕರಿಸಿದರು. ಅವರಿಗೆ ಹೇರಳ ಹೂಮಾಲೆಗಳನ್ನು ಹಾಕಲಾಯಿತು. ಹೆಗಲಲ್ಲಿ ಡೋಲು ನೇತು ಹಾಕಿಕೊಂಡಿದ್ದ ಒಬ್ಬಾತ ಅದನ್ನು ಶಕ್ತಿ ಮೀರಿ ಹೊಡೆಯುತ್ತಿದ್ದ. ಶ್ರೀ ಪೈ ಅವರನ್ನು ಜನ ತುಂಬಿದ ದಾರಿಯ ಮೂಲಕ ಸಭಾಂಗಣಕ್ಕೆ ಕರೆದೊಯ್ಯಲಾಯಿತು. ಅಸಹಜ ತುಂಬಿದ್ದ ಸಭೆಯಲ್ಲಿ ಮೌನ ನೆಲೆಸಿತು. ಹರಟೆ, ಪಗಡೆ, ಮಕ್ಕಳ ಕೂಗು ಎಲ್ಲ ನಿಂತಿತ್ತು. ಜನ ಇನ್ನೂ ಬರುತ್ತಿದ್ದರು. ಇಂದವರಿಗೆ ಜಾಗ ಮಾಡಿಕೊಡಲು ಕುಳಿತಿದ್ದವರು ಒತ್ತಿ ಕುಳಿತರು. ಕೆಲವು ವಂದಿ ಮಕ್ಕಳಿಗೆ ಮೆಟ್ಟಿಲುಗಳಲ್ಲೂ ಕೆಲವರು ಕಟ್ಟಡದ ತಾರಸಿಯಲ್ಲೂ ಕುಳಿತಿದ್ದರು.

ಸಣ್ಣ ಸಣ್ಣ ಭಾಷಣಗಳಾದ ಮೆ ಪಂಚಾಯತಿನ ಅಧ್ಯಕ್ಷ ಸ್ವೀಕರ್ ಒದಗಿಸಲಾಗಿತ್ತು. ಭರೇರಾದ ಒಬ್ಬ ಯುವಕ ಹಳ್ಳಿಯ ಪರಿಸ್ಥಿತಿಗಾಗಿ ದುಡಿಯ ತ್ತಿರುವ ಹಲ ಸಂಸ್ಥೆಗಳನ್ನು ಹೊಗಳಿದ. ಒಬ್ಬ ಹಿರಿಯ ಜರ್ ಮೊಸ್ಟರ್ ದಶವ್ ಸಿಂಗ್ ಅತಿಥಿಗಳನ್ನು ಸ್ವಾಗತಿಸುತ್ತ ಈ ವರೆಗಿನ ಸಾಧನೆಗಳನ್ನು ಮತ್ತು ಭವಿಷ್ಯದ ಯೋಜನೆಗಳನ್ನು ವಿವರಿಸಿದ. ರೈತರಿಗೆ ಟ್ರಾಕ್ಟರುಗಳು ಸಿಗುವಂತಾಗಬೇಕು. ಬೋರ್‌ವೆಲ್ ಅನುಕೂಲತೆ ಬೇಕು. ಹಳ್ಳಿಯ ಎಲ್ಲ ವಿದ್ಯಾರ್ಥಿಗಳಿಗೆ ಉದ್ಯೋಗ ಸಿಗಬೇಕು. ಭರೇರಾ ಮತ್ತು ದಿಲ್ಲಿಗೆ ಟೆಲಿಫೋನ್, ಬಸ್, ರೈಲ್ವೆ ಸಂಪರ್ಕ ಏರ್ಪಡಬೇಕು, ಗ್ರಾಮಕ್ಕೆ ಒಂದು ಡಿಸ್ಪೆನ್ಸರಿ ಒಂದು ಡಾಲು ಮೊರಾರ್ಜಿ ಕೇಂದ್ರ ಬೇಕು ಎಂದು ದಶವ್‌ಸಿಂಗ್ ಹೇಳಿದ. ಸಂಪೂರ್ಣ ಶ್ರೀ ಗಿರಿಧ್‌ಲಾಲ್ ತನ್ನ ಭಾಷಣವನ್ನು ಓದಿ ಹೇಳಿದ.

"ಸಿಂಡಿಕೇಟ್ ಬ್ಯಾಂಕನ್ನು ಸ್ಥಾಪಿಸಿದವರೂ ನಿಮ್ಮಂಥ ಜನರ ಒಂದು ಸಣ್ಣ ಗುಂಪೇ ಎಂದು ಶ್ರೀ ಕೆ. ಕೆ. ಪೈ ಹೇಳಿದಾಗ ಸಭಿಕರು ಚಪ್ಪಾಳೆ ತಟ್ಟಿ ತಮ್ಮ

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No— 1 28337 2 29887 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಉಡುಪಿ ಮುನ್ಸಿಫರ ಕೋರ್ಟಿನಲ್ಲಿ

Ex. Case 12 /1970 in

S. C. 343/1967

ಎಚ್. ಶಡ್ಮನಾಭ ಶೆಟ್ಟಿ & ಪಸ್ಸ್ ಟೈ ಸಾಚ್ಸರ್ ಎಚ್. ವಧಿಕ ಕೆಟ್ಟಿ

—ಡಿಕ್ರಿ ಹೋಲ್ಡರ

ಮತ್ತು

ಅನಂತ ಪ್ರಭು ಕೊಡಾ

—ಜಡ್ಗ್‌ಮೆಂಟ್ ಡೆಟ್ಟರರು

ಇವರೊಳಗೆ

1) ಅನಂತ ಪ್ರಭು, ಸಾಂಡುರಂಗ ಪ್ರಭು ಗಳ ಮಗ 2) ನಾರಾಯಣ ಪ್ರಭು, 1ನೇ ಅನಂತ ಪ್ರಭುಗಳ ಮಗ, ಇಬ್ಬರೂ ಮ್ಯಾಪಾಡಿಗಳು, ಪಂಜರ್ಪಿ, ಹಿರಿಬೆಟ್ಟು ಗ್ರಾಮ, ಉಡುಪಿ ತಾಲೂಕು—ಇವರಿಗೆ,

ಮೇಲಿನ ಅಮಲ್ಜಾರಿ ಪಮ್ಮ ಹಾಜರಾತಿಗೆ ಬಗ್ಗೆ ಪ್ರಪ್ಪೆರು ಜಾರಿಗೆ ಶಾ. 14.8.1970ಕ್ಕೆ ಇಟ್ಟಿರುತ್ತದೆ ಸದ್ರಿ ತಾರೀಖು 14.8.1970 ರಂದು ಏನಿದೆ ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜರಾಗಿ ಪ್ರತ್ಯೇಪ ಹಾಜಿರು ಪಡಿಸ ತಕ್ಕದ್ದು. ತಪ್ಪಿದಲ್ಲಿ ಏನ್ನು ಗೈರು ಹಾಜರಿಯಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

— ಕೋರ್ಟು ಹುಕ್ಕುಂ ಪ್ರಕಾರ —

ಪಿ. ಬಾಲಕೃಷ್ಣ ಆರ್. ಶೆಟ್ಟಿ

ಡಿಕ್ರಿ ಹೋಲ್ಡರ ಕಡೆ ಎಡ್ವೊಕೇಟು

ಉಡುಪಿ, ದ. ಕ. 15.7.1970

ಇದೊಂದು ಭಾರೀ ಸುದ್ದಿ

ಆಫಂದ ವ್ಯತ್ಯಪಡಿದರು. 8,000 ರೂ ಪಾಯಿಗಳ ಬಂಡವಾಳದಲ್ಲಿ 1925ರಲ್ಲಿ ಸ್ಥಾಪನೆಯಾದ ಈ ಬ್ಯಾಂಕನ್ನು ಬಡವರೂ ಶ್ರೀಮಂತರೂ ಸೇರಿ ಬೆಳೆಸಿದ್ದಾರೆ. ಫಿಮ್ಮ್ ಹಳ್ಳಿಯಂಥ್ ಒಂದು ಹಳ್ಳಿಯಲ್ಲೇ ಸಿಂಡಿಕೇಟ್ ಬ್ಯಾಂಕಿನ ಮುಖ್ಯ ಕಚೇರಿ ಇದೆ. ಗೆಲುವಿನ ದಾರಿ ಯಾವುದು? ಉಳಿತಾಯದ ಹವ್ಯಾಸವೇ ಶ್ರೀಸಾಮಾನ್ಯ ಯನ್ನು ಕರುತ್ತದೆ, ನೀನೆಲ್ಲ ಉಳಿತಾಯ ಮಾಡುವುದಕ್ಕೆ ಕಲಿಯಬೇಕು. ಫಲಗೆ ದೊರಕುವ ಸ್ಪತಿಯೊಂದು ಸೈಸಾವನ್ನು ಉಳಿಸಿ ನಾವಿಷ್ಟು ಬೆಳವಣಿಗೆ ಹೊಂದಿದ್ದೇವೆ. ಉಳಿತಾಯದ ನೊತ್ತ ಒಂದು ಪೈಸೆಯಾದರೂ ನಾವು ಸ್ವೀಕರಿಸುತ್ತೇವೆ ಎಂದು ಶ್ರೀ ಪೈ ಹೇಳಿದರು.

ಪ್ರಗತಿಯ ಯುಗ

"ಈ ಬ್ಯಾಂಕು ಹಳ್ಳಿಯ ಅಭಿವೃದ್ಧಿಗೆ ನಾಂದಿಯಾಗಲಿ, ಪ್ರಗತಿಯ ಮತ್ತು ಶ್ರೀ ಮಂತಿಕೆಯ ಹೊಸಯುಗವೊಂದು ಇಂದಿನಿಂದ ತೊಡಗಲಿ" ಎಂದು ಶ್ರೀ ಪೈ ಆಶಿಸಿದರು. ನಮ್ಮ ವ್ಯಕ್ತಿ ನಿನ್ನಲ್ಲಿಗೆ ನಿನ್ನ ಉಳಿತಾಯವನ್ನು ಸಂಗ್ರಹಿಸಲು ಬರುತ್ತಾನೆ. ಆತನೊಂದಿಗೆ ಸಹಕರಿಸಿ, ನೀವೂ ಶ್ರೀಮಂತರಾಗಿ ಶ್ರೀರಿ ಎಂದು ಶ್ರೀ ಪೈ ಹೇಳಿದರು. ಭಕ್ತೀರಾ ಮತ್ತು ಹತ್ತಿರದ ಗ್ರಾಮಗಳಲ್ಲಿ ಮನೆಯಿಂದ ಮನೆಗೆ ಹೋಗಿ ಉಳಿತಾಯದ ಅಗತ್ಯವನ್ನು ಬ್ಯಾಂಕಿನ ಸಿಬ್ಬಂದಿಗಳು ಪೈಕರಿಗೆ ವಿವರಿಸುತ್ತಿದ್ದಾರೆ. ಈ ವಿಧಾನ ಇನ್ನೂ ಮುಂದವರಿಯುವುದು.

ಫಕೀರಾದ ಪ್ರಗತಿಗಾಗಿ ಬ್ಯಾಂಕಿನ ಆಡಳಿತ ವರ್ಗದವರು ಶಕ್ತಿವಿಂರಿ ದುಡಿಯುವರು. ದಿಢೀರಂಥ ನಾಗರಿಕ ಕೃತಕ ಸವಾಜದಲ್ಲಿ ಬದುಕುವುದಕ್ಕಿಂತ ಹಳ್ಳಿಗ ಮುಗ್ಧ ಜನರ ನಡುವೆ ಜೀವಿಸಲು ಆವರಿಗೆ ಆಸಕ್ತಿ. ತಮ್ಮ ಯಾವನ ಸಾರ್ಥಕ್ಯ ಮತ್ತು ಸಮಾಜ ಸೇವಾ ಪ್ರಜ್ಞೆಗೆ ಭಕೀರಾದಂಥ ಹಳ್ಳಿಗಳು ಒಳ್ಳೆಯ ಕಾರ್ಯ ಕ್ಷೇತ್ರವೆಂದು ಆವರು ತಿಳಿದಿದ್ದಾರೆ.

ಆಫಂತರ ಶ್ರೀ ಪೈ ಬೆಳ್ಳಿಯ ತಟ್ಟೆಯೊಂದರಿಂದ ಕೆಲವರಿಯನ್ನು ತೆಗೆದು ಕೆಂಪು ರಿಬ್ಬನ್ ಕತ್ತರಿಸಿ ಬ್ಯಾಂಚಿನ್ನು ತೆರೆದರು. ಸುತ್ತಲೂ ನೆರೆದಿದ್ದ ಗಿಂಡಿಗರು ಕಾಪೊಂದು ಘೋಷವನ್ನೇ ಜಯಿಸಿದವರಂತೆ ಸೀಟಿ ಹೊಡೆದರು. ಜೆಂಗಸರು ಹೆಮ್ಮೆ ಪಟ್ಟುಕೊಂಡರು. ಮಕ್ಕಳು ಏನೋ ಭಾರೀ ಕವಾಡಿ ಪಡೆಯುತ್ತಿದೆ ಎಂಬಂತೆ ವಿಕವಿಕ ನೋಡಿದರು. ಈಗಾಗಲೇ ಸಂಜೆಯಾಗಿತ್ತು. ಪಶ್ಚಿಮ ದಿಕ್ಕೆಲ್ಲ ಕೆಂಪಾಗಿತ್ತು. ಬ್ಯಾಂಕಿನ ಒಳಗೆ ಹೊರಭಪರಿಮಳ ಇನ್ನೂ ಪಟ್ಟವಾಗಿತ್ತು. ದೂರದ ಜಾತ್ರಾಪಾಲ್‌ನಲ್ಲಿ ಮಕ್ಕಳು ಟೆಲಿವಿಜನ್ ಕಾರ್ಯಕ್ರಮವೊಂದನ್ನು ನೋಡ ತ್ತಿದ್ದರು. ನಾಳೆ ಹಿಂತಿರುಗಿದಾಗ ಭಕೀರಾ ಒಂದು ಪೂರಿ ಗ್ರಾಮವಾಗಿರಲಿದೆ ಎಂಬ ಸರಪಂಚನ ಮಾತು ಕವಿಯಲ್ಲಿ ಮುಂಯ್ ಗುಡುತ್ತಿತ್ತು.

(ಕೃಪೆ— ಹಿಂದುಸ್ತಾನ್ ಟೈಮ್ಸ್ ನ್ಯೂಡೆಲ್ಲಿ)

ಬಾಗಲಕೋಟೆಯ ಶ್ರೀ ಬಿ. ಟಿ. ಮುರನಾಳ ತಾವು ಇಂಡಿಕೇಟ್ ಸೇರಿದ್ದೇನೆಂದು ಸಾರ್ವಜನಿಕ ಸಭೆಯಲ್ಲಿ ಘೋಷಿಸಿದರೆಂದು ವರದಿ.

ಇದರ ಬಗ್ಗೆ ಸಿಂಡಿಕೇಟಿನ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರಿಗೆ ವಿಶ್ವಾಸವಿಲ್ಲ. "ಫಜಗೇನೂ ತಿಳಿಸಿಲ್ಲ; ನಾನು ನಂಬುವುದಿಲ್ಲ" ಇದು ಅವರ ಮೊದಲ ಪ್ರತಿಕ್ರಿಯೆ.

ಶ್ರೀ ಮುರನಾಳರು ಇಂಡಿಕೇಟ್ ಸೇರಿದರೆಂಬುದು ಭಾರೀ ಸುದ್ದಿಯೂಗ ಬೇಕು ಯಾಕೆ? ಕಳೆದೊಂದು ವರ್ಷದಲ್ಲಿ ಫೆಬ್ರುವರಿಗಳಲ್ಲಿ ಸಿಂಡಿಕೇಟ್ ಬಿಟ್ಟ ಇಂಡಿಕೇಟಿಗೆ ಸೇರಿಲ್ಲವೆ?

ಸೇರಿದ್ದಾರೆ; ಸೇರುತ್ತಲೂ ಇದ್ದಾರೆ; ವಂದೆಯೂ ಸೇರ ಬಹುದು; ಆದರೆ, ಶ್ರೀ ಮುರನಾಳರು ಸೇರುವುದು ಮಾತ್ರ ಭಾರೀ ಸುದ್ದಿಯೇ ಆಗ ಬೇಕು.

ಏಕೆನ್ನುತ್ತೀರಾ? ಶ್ರೀ ಮುರನಾಳರು ಅಂತಂಥ ವ್ಯಕ್ತಿಯಲ್ಲ. ಶ್ರೀ ಎಸ್ಸೆನ್ನರ ಪರಮ ಭಕ್ತರು. ಹಿಂದೊಮ್ಮೆ ಶ್ರೀ ಎಸ್ಸೆನ್ನರಿಗಾಗಿ, ಆವರನ್ನು ಮುಖ್ಯಮಂತ್ರಿಯಾಗಿ ಮಾಡುವ ಸಲುವಾಗಿ, ತಾನ್ನು ತನ್ನ ಸ್ಥಾನವನ್ನು ತೆರೆವು ಮಾಡಿದ ತ್ಯಾಗಿ ಶ್ರೀ ಮುರನಾಳರು.

ಶ್ರೀ ನಿಜಲಿಂಗಪ್ಪನವರು ರಾಜಕೀಯವನ್ನಾಗಿ ವನವಾಸ ಮುಗಿಸಿ ರಾಮಪಟ್ಟಾಭಿಷೇಕವನ್ನು ಕೊಂಡು ಏಕಾಕಿಯಾಗೇ ಬೆಂಗಳೂರಿಗೆ ಬರಲು ಸೇತು ಹಾಕಿಕೊಟ್ಟವರು ಶ್ರೀ ಮುರನಾಳರು. ರಾಮಪಂಡನೇಯು ಯುದ್ಧ. ಕೃಷ್ಣಾರ್ಜುನರಂತಿಗಳು ಮೂಲ ರಾಮಯಣ — ಭಾರತಕಾರರ ತಲೆಗೆ ಹೊಳೆಯಲೇ ಇಲ್ಲ. ಆವರದನ್ನು ಬರೆಯು ಲಿಲ್ಲ.

ಹೇಳಿಕೇಳಿ ಕಂದಮೂಲ ಗಾಳಿ—ನೀರು ತಿನ್ನುವ ಋಷಿ ಮುನಿಗಳಿಗೆ ಇದೆಲ್ಲ ಎಲ್ಲಿಂದ ಸ್ಫುರಿಸ ಬೇಕು? ಬೆಳ್ಳಗಿದ್ದದನ್ನೆಲ್ಲ ಹಾಲೆಂದು ನಂಬುವ ಬೋಳೇ ಸ್ವಭಾವದವರು ಆವರು.

ಆವರು ನೋಡಿದ್ದನ್ನು ಮುಂದಿನವರು ನೋಡಿದರು. ರಾವ — ಆಂಜನೇಯರ ನಡುವೆ ಯುದ್ಧ ಹೂಡಿಸಿದರು; ಕೃಷ್ಣ — ಅರ್ಜುನರ ಕಡುವೆ ಕದನ ಹೂಡಿದರು. ದ್ರೌಪದಿ— ಅರ್ಜುನ ಯುದ್ಧ ನೂಡಿ ಕೊಂಡರು.

ಈಗ ಶ್ರೀ ಎಸ್ಸೆಸ್ — ಮುರನಾಳರ ನಡುವೆಯೂ ಇಂಥದೇ ಹುಸಿಕಾಳಗ ನಡೆದಿರ ಬಹುದೆ?

ಶ್ರೀ ಎಸ್ಸೆನ್ನರಿಗಾಗಿ ಶ್ರೀ ಮುರನಾಳರು ಮಾಡಿದ ತ್ಯಾಗ ಅಲ್ಪವೇನಲ್ಲ. ರಾಮನಿಗಾಗಿ ಆಂಜನೇಯನು ಮಾಡಿದ, ಅರ್ಜುನನಿಗಾಗಿ ಕೃಷ್ಣ ಭಗವಂತನು ಮಾಡಿದ ತ್ಯಾಗಕ್ಕಿಂತ ಇದು ಗುಲಗುಂಜಿಯು ಸ್ವಲ್ಪ ಕಡಿಮೆಯಲ್ಲ.

ರಾಮ ಭಕ್ತನ ಸೇವೆ-ತ್ಯಾಗದಿಂದ ಸಂಪ್ರೀತನಾಗಿ ಆತನಿಗೆ ಭಾವಿ ಬ್ರಹ್ಮ ಪಟ್ಟವನ್ನು ಪ್ರಧಾನ ಮಾಡಿದಂತೆ, ಅರ್ಜುನ ಕೃಷ್ಣನಿಗೆ ಏನನ್ನೂ ಕೊಡುವ ಸ್ಥಿತಿಯಲ್ಲಿಲ್ಲ; ತೆಗೆದುಕೊಳ್ಳುವುದೇ ಆ ಭ್ರಾತೃವಾದ ಅರ್ಜುನನಿಂದ ಕೃಷ್ಣಭೇಟಿ ಸೀರೀಕ್ಷಿಸಲಾರೆ.

ರಾಮನಯೋಗ್ಯತೆ ಹನುಮಂತನಿಗಿಂತ ನೂರುಪಾಲು. ಅರ್ಜುನನ ಯೋಗ್ಯತೆ ಕೃಷ್ಣನದರ ನೂರಲ್ಲಿ ಒಂದು ಪಾಲು.

ಶ್ರೀ ಎಸ್ಸೆನ್ನರಲ್ಲಿ ಅಂತಹ ಯೋಗ್ಯತೆಯನ್ನು ಕಂಡು ಕೊಂಡ ಶ್ರೀ ಮುರ್ನಾಳರು ಆವರಿಗಾಗಿ ತ್ಯಾಗ ಮಾಡಿದರು.

ಈ ತ್ಯಾಗದ ಬಲದಿಂದ ಮತ್ತೆ ಮುಖ್ಯ ಮಂತ್ರಿಯಾದ ಶ್ರೀ ಎಸ್ಸೆನ್ನರು ಶ್ರೀ ಮುರ್ನಾಳರಿಗೇನು ಮಾಡಿದರು? ಆವರ ಬಗ್ಗೆ ಆದೆಷ್ಟು ಕಾಳಜಿವಹಿಸಿದರು? ಮಂತ್ರಿಪಟ್ಟ ಕೊಡಲಿಲ್ಲ, ಕೊಡಿಸಲಿಲ್ಲ, ಕಂಟ್ರಾಕ್ಟು—ಗಿಂಟ್ರಾಕ್ಟು ಒಂದೂ ಇಪ್ಪೆಂ ತಿಲ್ಲ.

ತಮ್ಮ ತ್ಯಾಗವು ಫಲಪ್ರದವಾಗುವುದನ್ನು ಕಂಡೂ ಕಂಡೂ ಸುಮ್ಮನಿರಲು ಶ್ರೀ ಮುರ್ನಾಳರೇನು ಶ್ರೀರಾಮ ಯುಗದವರಲ್ಲ, ದ್ವಾಪರಯುಗದವರಲ್ಲ.

ತಾನೆಂದು ಮಾಡಿದ ಪಾಪ-ಪುಣ್ಯಗಳ ಫಲ ಈ ಕಾಲದಲ್ಲೇ ಸಿಗುವುದು ಕಲಿಯುಗದ ಯುಗಧರ್ಮವೆನ್ನುತ್ತಾರೆ.

ತಾನೆಂದು ಮಾಡಿದ ತ್ಯಾಗ ಪುಣ್ಯಕಾರ್ಯವಲ್ಲವೆಂದು ಶ್ರೀ ಮುರ್ನಾಳರು ಇಷ್ಟು ಕಡವಾಗಿಯಾದರೂ ತಿಳಿದುಕೊಂಡದ್ದು ಪ್ರಶಂಸಾರ್ಹ.

ಆ ಪಾಪಕರ್ಮವನ್ನು ತೊಳೆಯುವುದಕ್ಕಾಗಿಯೇ ಆವರು ಎಸ್ಸೆನ್ನರ ವಿರುದ್ಧ ನಿಂತರೆಂದು ತಿಳಿದುಕೊಳ್ಳ ಬಾರದೇಕೆ?

ತನ್ನ ಹಲವಾರು ಅನುಯಾಯಿ ಗಳನ್ನೂ ಕೂಡಿಸಿಕೊಂಡು ಪ್ರಾಯಶ್ಚಿತ್ತ ಗೈಯುವ ಶ್ರೀ ಮುರ್ನಾಳರ ವ್ಯಕ್ತಿತ್ವವನ್ನು ಇಂಡಿಕೇಟು ಹೊಗಳುತ್ತದೆ ಹೊಗಳಲೇ ಬೇಕು.

ಸಿಂಡಿಕೇಟು ಏನು ಮಾಡುತ್ತದೆ? ಹೋದವರೆಲ್ಲ ಹೋಗಲಿ, ಉಳಿದವರೇ ಸಾಕು ಎಂದು ತೃಪ್ತಿಪಡುತ್ತದೆಯೆ?

ಮತ್ತೇನು ತಾನೇ ಮಾಡಬಲ್ಲುದು?

ಚಾರಿತ್ರಿಕ ಯಜ್ಞ

(ಮೂರನೇ ಪುಟದಿಂದ)

ನ್ನು ಮೊದಲು ಮಟ್ಟಿದ ಕೀರ್ತಿ ಆ ವಿದ್ಯಾರ್ಥಿಗೆ ಸೇರಿದ್ದು.

ಅದ್ದಿ ಜೀವಿಗಳು ಯೋಚಿಸಬೇಕಾದ ಸಂಗತಿಯಿದು. ದುರ್ಘಟನೆಯೆಂದು ವಿಶಾದ ವ್ಯಕ್ತಪಡಿಸಿ ತೃಪ್ತರಾದರೆ ಸಾಲದು, ಗೊತ್ತುವಳಿ ಸ್ವೀಕರಿಸಿದರೆ ಸಾಲದು.

ನಮ್ಮ ವಿಶ್ವವಿದ್ಯಾರ್ಥಿಗಳು ಏನೆಲ್ಲವೂ ಮಾಡಿಬಿಡ್ತಾರೆಂಬುದಕ್ಕೆ ಇದೂ ಒಂದು ನಿದರ್ಶನ.

ಶಿಕ್ಷಣ ಸಂಸ್ಥೆಗಳ ಪಾವಿತ್ರ್ಯ ಭಂಗ ಮಾಡುವ ಅಧಿಕಾರ ಸರಕಾರಕ್ಕೂ ವಿಶ್ವವಿದ್ಯಾಲಯಕ್ಕೂ ಇಲ್ಲವೆಂಬ ಅರ್ಥವಾದಿಗಳು ವಿದ್ಯಾರ್ಥಿಗಳಿಗೆ ಇದೆಯೆನ್ನಲಾರದು.

ಬೆಂಗಳೂರಿನ ದುರ್ಘಟನೆ ಕೊನೆಯದಾಗ ಬೇಕು. ವಿದ್ಯಾರ್ಥಿಗಳ ಮಹೋಧರ್ಮವಿಸ್ಮಾದರೂ ಬದಲಾಗ ಬೇಕು.

ಶ್ರೀ ಮುನಿಗವಿಯಪ್ಪನವರ ಅಕ್ಕ ಬಲಿದಾನ ವಿದ್ಯಾರ್ಥಿಗಳ ವಿದ್ಯಾರ್ಥಿಪಾಲಕ ಅತ್ಮ ಶುದ್ಧಿಗೊಡಬೇಕು.

ಸಂತಾಪ-ವಿಷಾದ- ಗೊತ್ತುವಳಿಗಳು ಮೇರವಣಿಗೆ ಕರಕಾಳಿಗಳು ಏನೂ ಮಾಡುವುದಿಲ್ಲ. ವಿದ್ಯಾರ್ಥಿ ವಿದ್ಯಾರ್ಥಿಯೂ ತನ್ನ ವರ್ತನೆಯ ಬಗ್ಗೆ ಪುನರ್ವಿಮರ್ಶೆ ಮಾಡಿಕೊಳ್ಳ ಬೇಕು.

ಸಿಟಿ ಐಸ್ ಪ್ಲಾಂಟ್—
ಸುಂದರರಾಮು ಶೆಟ್ಟರಿಂದ
ಉದ್ಘಾಟನೆ

ಮಂಗಳೂರು ನಗರದ ಕೊಡಿಯಾಲ್ ಬೈಲಿನಲ್ಲಿ ಶ್ರೀ ರಾಮಕೃಷ್ಣ ಹೆಗ್ಗಡೆ ಮತ್ತು ಸಂಗಡಿಗರು ಹೊಸತಾಗಿ ಆರಂಭಿಸಿರುವ ಸಿಟಿ ಐಸ್ ಪ್ಲಾಂಟನ್ನು ತಾ. 15—7—1970ರಂದು ವಿಜಯಾ ಬ್ಯಾಂಕಿನ ಅಧ್ಯಕ್ಷ ಶ್ರೀ ಎಂ. ಸುಂದರರಾಮು ಶೆಟ್ಟರು ಉದ್ಘಾಟಿಸಿದರು. ದಿನವೊಂದಕ್ಕೆ ಹತ್ತು ಟನ್ ಐಸ್ ಉತ್ಪಾದಿಸುವ ಶಕ್ತಿಯುಳ್ಳ ಐಸ್ ಪ್ಲಾಂಟಿನ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಬೆಂಗಳೂರಿನ ವಾಲ್ಟಾಸ್ ಕಂಪೆನಿಯ ಜನರಲ್ ಮೆನೇಜರ್ ಶ್ರೀ ಎನ್. ಬಿ. ಜೈನ್ ಅವರು ವಹಿಸಿದ್ದರು. ಸಾಂಪ್ರದಾಯಿಕ ಉದ್ಘಾಟನೆ ನೆರವೇರಿದ ಬಳಿಕ ಸಮಾರಂಭದ ಥಿಯೊಸಾಫಿಕಲ್ ಲಾಜ್ ಭವನದಲ್ಲಿ ವರ್ಷಿಷ್ಠ ಸಮಾರಂಭದಲ್ಲಿ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಸ್ವಾಗತ ಭಾಷಣ ಮಾಡಿದರು. ಶ್ರೀ ಎಂ. ಸುಂದರರಾಮು ಶೆಟ್ಟರು ತಮ್ಮ ಉದ್ಘಾಟನಾ ಭಾಷಣದಲ್ಲಿ ಪ್ರಕೃತ ಯಂತ್ರೀಕೃತ ಮಾನವಾಗರಿಕೆಯಿಂದ ನಮ್ಮ ಕರಾವಳಿಯಲ್ಲಿ ಸಿಗುತ್ತಿರುವ ಮತ್ಸ್ಯ ಪ್ರಮಾಣ ಅಧಿಕವಾಗಿದೆ. ಅದನ್ನು ಕೆಡದ ರೀತಿಯಲ್ಲಿ ಪೋಷಣವಾಗಿ ಇಡಲು ಮಂಜುಗಡ್ಡೆಯ ಬೇಡಿಕೆಯು ದಿನೇ ದಿನೇ ಹೆಚ್ಚಾಗುತ್ತಿದೆ. ಇದನ್ನು ಗಮನಿಸಿಯೇ ಈ ಐಸ್ ಪ್ಲಾಂಟ್ ಪ್ರಾರಂಭವಾದುದು ಸಂತೋಷದಾಯಕವಾದುದು. ಈ ನೂತನ ಸಾಹಸೋದ್ಯಮಕ್ಕೆ ಜಯವಾಗಲಿ ಎಂದು ಹಾರೈಸಿದರಲ್ಲದೆ ಈ ಸಿದ್ಧಿ ಸಾಧನೆಗಳಿಗೆ ವಿಜಯಾ ಬ್ಯಾಂಕ್ ನೆರವೀಯಲು ಯಾವಾಗಲೂ ಸಿದ್ಧವಿದೆ ಎಂದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಐಸ್ ಪ್ಲಾಂಟಿನ ಸ್ಥಾಪನೆಯಿಂದಾಗಿ ಮಂಗಳೂರು ನಗರದ ಹಿಸು ಜೋವಸನೆಗೆ ವಿಶೇಷ ಸಾಕಾರ್ಯ ದೊರೆಯಲಿ ಎಂದು ಹಾರೈಸಿ ಇದನ್ನು ಸ್ಥಾಪಿಸಿದ ಶ್ರೀ ರಾಮಕೃಷ್ಣ ಹೆಗ್ಗಡೆ ಮತ್ತು ಸಂಗಡಿಗರನ್ನು ಅಭಿನಂದಿಸಿದರು. ಅಂತ್ಯದಲ್ಲಿ ಶ್ರೀ ರಾಮಕೃಷ್ಣ ಹೆಗ್ಗಡೆಯವರು ವಂದನೆಗಳನ್ನರ್ಪಿಸಿದರು.

ಸಕ್ಕರೆ ಸಂತಾನ

ಸಂಸಾರ ಯೋಜನೆಯು ಗಾಯತ್ರಿ ಮಂತ್ರ
ದೇಶದುದ್ಧಾರದ ವಿಶ್ವಕಳ ಸೇತ್ರ
ಹತ್ತತ್ತು ಮಕ್ಕಳ 'ಸಾಗರ ಸಂತಾನ'!
ವೈರ್ಥವಾಯಿತು ಬಾಳ್ವೆ ಫಜಕಲ ಅಪಹಾಸ
—'ಹೇಮಕವಂದ'

WANTED

Hindu Higher Primary School
Kemmannu, S. K.

1. Applications are invited from Secondary Grade Trained Teachers to serve in the vacancies likely to occur during the year 1970—71, so as to reach the undersigned on or before 5-8-1970.

2. They are directed to appear before the Selection Committee with all their testimonials on 15—8—1970 at 2 P. M. for interview in the School.

3. Preference will be given to local hands.

P. K. Venkata Rao,
Manager,
Hindu Higher Primary School,
Kemmannu.

Navayuga—dated 29-7-1970.

ಅವರು ಅಗಸ್ತ್ಯನನ್ನು ಪೂಜಿಸುತ್ತಾರೆ

ಯುರೋಪ್, ಅಮೆರಿಕೆ, ಆಫ್ರಿಕ ಮತ್ತು ಏಶ್ಯಾ ಭೂಖಂಡಗಳ ಹೆಚ್ಚಿನೆಡೆ ಭಾರತೀಯ ಸಂಸ್ಕೃತಿಯು ದಿಗ್ವಿಜಯ ಸಾಧಿಸಿದ ಸಂಗತಿಯನ್ನು ಹಿಂದಿನೆಳಿಡು ಸಂಜಿಕೆಗಳಲ್ಲಿ ಓದಿದಿರಿ. ಭಾರತೀಯರು ಆಗ್ನೇಯ ಏಶ್ಯಾದ ಮೇಲೆ ಬೀರಿದ ಪರಿಣಾಮವು ಎಲ್ಲಕ್ಕಿಂತ ಮಿಗಿಲಾದದ್ದು. ಭಾರತವನ್ನೂ ಒಳಗೊಂಡ ಆಗ್ನೇಯ ಏಶ್ಯಾವನ್ನು ಬ್ರಹದ್ಭಾರತವೆಂದು ಕರೆಯುವುದೇ ವಾಡಿಕೆಯಾಗಿ ಬಂದಿದೆ. ಇಲ್ಲಿನ ರಾಜ್ಯತೀಯ, ಆರ್ಥವ್ಯವಸ್ಥೆ, ಸಂಸ್ಕೃತಿ, ಜನತೆ— ಪ್ರತಿಯೆಂದೂ ಆ ದೇಶಗಳ ಮೇಲೆ ವಿಪುಲ ಪರಿಣಾಮ ಬೀರಿವೆಯೆಂಬುದು ಇತಿಹಾಸಜ್ಞರ ಸಂಶೋಧನೆಯ ಫಲವಾಗಿದೆ.

ಕ್ರಿಸ್ತ ಜನ್ಮಕ್ಕೆ ಮೊದಲೇ ಮೇಯ ದೇಶದಲ್ಲಿ ಹಿಂದಗಳು ನೆಲಸಿಕೊಂಡಿದ್ದರು. ಬಹಳ ಕಾಲದವರೆಗೆ ಸಂಸ್ಕೃತವೇ ಅಲ್ಲಿನ ರಾಷ್ಟ್ರ, ಭಾಷೆಯಂಗಿತ್ತು. ದೇವನಾಗರಿ ಲಿಪಿಯೇ ರಾಷ್ಟ್ರಲಿಪಿಯಿತ್ತು. ಪ್ರತಿ ಮನೆಯಲ್ಲೂ ಅಗ್ನ್ಯಾಯನವನ್ನಿಡುವುದು ಜನರು ಹೊಜಿಸುತ್ತಿದ್ದರು. ವೇದಸ್ಮೃತಿಯ ಆಧಾರದ ಮೇಲೆಯೇ ಮಲಯಾಳದ ರಾಜ್ಯಾಡಳಿತ ನಡಾಗುತ್ತಿತು. ಬ್ರಹ್ಮ-ವಿಷ್ಣು-ಶಿವ ಮೊದಲಾದ ಹಿಂದೂ ದೇವತೆಗಳನ್ನು ಮಲಾಯಾಳಿಗಳು ಭಕ್ತಿಯಿಂದ ಆರಾಧಿಸುತ್ತಿದ್ದರು. ಗುರುಕುಲ ಪದ್ಧತಿಯಲ್ಲಿ ಅವರು ಶಿಕ್ಷಣ ಪೂರೈಸುತ್ತಿದ್ದರು.

ಕ್ರಿಸ್ತಶಕ ೪೦೦ ನೆಯ ಸಂವತ್ಸರಕ್ಕೆ ಮುಂಚೆ ಜಾವಾ ದ್ವೀಪದಲ್ಲಿ ಶ್ರೀ ವಿಜಯವೆಂಬ ಹಿಂದೂ ಸಾಮ್ರಾಜ್ಯ ಸ್ಥಾಪನೆಗೊಂಡಿತ್ತು. ಈ ರಾಜ್ಯವು ಸುಮಾರು ಆರುನೂರು ವರ್ಷ ಪರ್ಯಂತ ಉನ್ನತ ಸ್ಥಿತಿಯಲ್ಲಿತ್ತು. ಇಂಡೋನೇಶ್ಯ ದ್ವೀಪ ಸಮೂಹಾದ್ಯಂತ ಬೋನಿಯೋದಲ್ಲಿ ಕ್ರಿಸ್ತಶಕ ಮೊದಲ ಶತಕದಲ್ಲೇ ಹಿಂದೂ ರಾಜ್ಯಗಳ ಆರಂಭವಾಗಿತ್ತು. ಹಲವಾರು ಎಳು-ಬೀಳುಗಳ ನಂತರ ಹಿಂದೂ ಕಾಲ್ಪನಿಕೆಯ ಶತಕಗಳಷ್ಟು ಹಿಂದುಗಳು ಪ್ರಬಲ್ಯಶಕರಾದರು.

ಶ್ರೀ ಎಚ್. ಎಲ್. ಮಿಲ್ ಎಂಬ ವಕೀಲ "ಇಂಟರ್ ನೇಶನಲ್ ಜಾಗ್ರಫಿ" ಎಂಬ ಪ್ರಮಾಣಿಕ ಪುಸ್ತಕವನ್ನು ಬರೆದಿದ್ದಾನೆ. ಅವರ ಲಭಿಪ್ರಾಯದಂತೆ ಜಾವಾ ನಿವಾಸಿಗಳಲ್ಲಿ ಹಿಂದೂ ರಕ್ತದ ಅಂಶ ನಿದೆ. ಜಾವೀ ಭಾಷೆಗೆ ಈಗ ತನ್ನದೇ ಆದ ಲಿಪಿಯಿದೆ. ಆದರೆ, ಅದ ಭಾರತದ ಲಿಪಿಯ ಆಧಾರದಿಂದಲೇ ರೂಪಿತಗೊಂಡದ್ದು. ಜಾವಾದ ಜನರಿಗೂ ಅಗಸ್ತ್ಯ ಮುನಿ ಅತ್ಯಂತ ಆದರಣೀಯ. ರಾಮಾಯಣವು ಇಡೀ ಜಾನಪದ ಕತೆಗಳಿಗೆ ಆಕರ; ಅತ್ಯಂತ ಲೋಕಪ್ರಿಯ. ಮಹಾಭಾರತದ ಆಧಾರದ ಮೇಲೆ ಬರೆದ ನಾಟಕಗಳನ್ನು ನೋಡುವುದೆಂಬರೆ, ಜಾವನ್ನರಿಗೆ ಅತ್ಯಂತಾಸಕ್ತಿ. ಸಂಸ್ಕೃತದ ಲೇಖಗಳೂ ಮೂರ್ತಿಗಳೂ ಇಲ್ಲಿ ಅನೇಕ ದೊರಕಿವೆ. ಶಿವ, ವಿಷ್ಣು ಮೊದಲಾದ ಹಿಂದೂ ದೇವತೆಗಳ ದೇವಾಲಯಗಳು ಇಂದಿಗೂ ಹಲವಾರು ಉಳಿದಿವೆ.

ಸಯಾಮದ ಜನರಿಗೆ ಇಂದ್ರನು ಅತ್ಯಂತ ಪ್ರಿಯನಾದವನು. ಭಾರತೀಯ ನಗರ ಮತ್ತು ಊರು ಮನುಷ್ಯರ ಹೆಸರುಗಳ ಅನುಕರಣೆಯಿಂದಲೇ ಸಯಾಮದ ನಗರ-ಊರು-ಮನುಷ್ಯರ ನಾಮಕರಣವಾಗಿದೆ ಥೈಲೆಂಡ್ ಅಥವಾ ಸಯಾಮದಲ್ಲಿ ರಾಮಾಯಣ-ಮಹಾಭಾರತಗಳು ಬಹಳ ಲೋಕಪ್ರಿಯ. ಇಲ್ಲಿನ ಮೂರ್ತಿಕಲೆಯು ಪೂರ್ಣ ಗುಪ್ತಕಾಲದ ಕಲ್ಪನೆಯ ಪ್ರಭಾವ ಸ್ಪಷ್ಟವಾಗಿ ಮೂಡಿಬಂದಿದೆ. ಇಲ್ಲಿನ ಉಚ್ಚ ನ್ಯಾಯಾಲಯದ ಮುಂದೆ ಗಡೆ ಗಂಗಾಧರ ಮಹಾದೇವನ ಮೂರ್ತಿಯನ್ನು ಗೋಚರವಾಗುತ್ತದೆ. ಆಕಾಶವಾಣಿ ಕೇಂದ್ರದ ಮುಖ್ಯದ್ವಾರದ ಮೇಲೆ ವೀಣಾಪಾಣಿಯಾದ ಸರಸ್ವತಿಯ ಮೂರ್ತಿ ಇಟ್ಟಿದ್ದಾರೆ. ಥಾಯಿ ಭಾಷೆಯ ಮೇಲೆ ಸಂಸ್ಕೃತದ ಅಚ್ಚಳಿಯದ ಪ್ರಭಾವ ಬಿದ್ದಿದೆ.

'ಬಾಲಿ' ದ್ವೀಪದಲ್ಲಿ ಹಿಂದೂ ಧರ್ಮವು ಪವಿತ್ರವಾಗಿ ಬದುಕಿಕೊಂಡು ಬಂದಿದೆ. ಅಪ್ಪು ಪವಿತ್ರವಾಗಿ ಅದು ಭಾರತದಲ್ಲಿಯೂ ಕಾಣಕಿಲ್ಲ' ಎಂದು ಸ್ವಾಮಿ ಸದಾನಂದರು 'ಬೃಹತ್ತರ ಭಾರತದಲ್ಲಿ ಹಿಂದೂ ಸಭ್ಯತೆ'ಯೆಂಬ ಪುಸ್ತಕದಲ್ಲಿ ಬರೆದಿದ್ದಾರೆ. ಇಷ್ಟರಿಂದಲೇ ಭಾರತೀಯ ಸಂಸ್ಕೃತಿಯ ಪ್ರಭಾವವು ಅಲ್ಲಿನ ಕಣಕಣದಲ್ಲೂ ಉಳಿದುಕೊಂಡಿದೆಯೆಂದು ಧಾರಾಳವಾಗಿ ಹೇಳಬಹುದು.

ಕಾಂಬೋಡಿಯಾದಲ್ಲಿ ಕ್ರಿಸ್ತಾಬ್ದಾರಂಭದಲ್ಲಿ ಹಿಂದೂ ರಾಜ್ಯ ಆರಂಭವಾಗಿತ್ತು. ರಾಮಾಯಣ-ಮಹಾಭಾರತಗಳ ಬಗ್ಗೆ ಅಲ್ಲಿ ಫಿಷ್ಯೆಯಿದೆ. ವಿಷ್ಣು, ಶಿವ, ಹನುಮಂತ ಮೊದಲಾದವರ ದೇವಾಲಯಗಳು, ಹಿಂದು ಹೆಸರುಗಳನ್ನೇ ಹೋಲುವ ಹೆಸರುಗಳು ಅಲ್ಲಿವೆ. ಸಂಸ್ಕಾರವಾದರೂ ಹಿಂದೂ ಸಂಸ್ಕಾರವನ್ನೇ ಹೋಲುತ್ತದೆ. ಸಂಸ್ಕೃತವು ಇಲ್ಲಿನ ರಾಜಭಾಷೆಗೂಗಿತ್ತು. ಇದಿಗೂ ಇವರ ಪ್ರಭಾವ ಕಡಿಮೆಯಾಗಿಲ್ಲ.

ಭಾರತವು ಹಿಂದಿನ ಕಾಲದಲ್ಲಿ ಸುಸಂಸ್ಕೃತ ಮತ್ತು ಸಂಬದ್ಧ ದೇಶವಾಗಿತ್ತು. ಅದು ಕಾನು ಹೊತ್ತು ಬೆಳೆದು ಬಂದುದಲ್ಲದೆ ಇತರರನ್ನೂ ಬೆಳೆಸಿತು. ಲೋಕ ದೀಪ ಬೆಳಗಿಸಿತು. ಆದರೆ, ಇತಿಹಾಸ ಕಾಲದಲ್ಲಿ ಮೂರಾರು ಆಘಾತಗಳಿಂದ ಅದು ತನ್ನ ಸಹಜ ಶಕ್ತಿಯನ್ನು ಕಳೆದುಕೊಂಡಿದೆ. ವಿದೇಶೀ ಸಂಸ್ಕೃತಿಯ ಅನುಕರಣೆಯಿಂದಲೇ ತನ್ನ ಶ್ರೇಯಸ್ಸಿಂದದು ನಂಬಿದೆ. ಈ ಪರಿಸ್ಥಿತಿ ದೂರವಾಗದೆ ಹೋಗದೆ, ನಾವು ತಲೆಯೆತ್ತಿ ನಿಲ್ಲುವಂತಿಲ್ಲ. ಜನಜೀವನದ ಮೂಲ ಮೂಶ್ಯಕೆಗಳು ಇಂದಿಗೂ ಸ್ವದೇಶೀಯಾಗಿರಿವಾಗಲೇ ಅವುಗಳ ಮೇಲೆ ಸ್ವದೇಶೀ ಸಾಂಸ್ಕೃತಿಕ ಮಂದಿರಗಳನ್ನು ಕಟ್ಟಲು ನಾವು ಮುಂದೆ ಬರಬೇಕು. ಇಲ್ಲ, ನಮ್ಮ ಅವನತಿ ಶತಃಸಿದ್ಧ.

ಸ್ವಂತ ರೋಗಿಯಿಂದಲೆ ರಕ್ತಪೂರಣ

ಉಳ್ಳೇಖನ ಟೆನಿಗೋವ್ ವಿಧಾನೀಯ ಆಸ್ಪತ್ರೆಗಳಲ್ಲಿ ಸ್ವತಃ ರೋಗಿಯ ರಕ್ತವನ್ನೇ ರಕ್ತಪೂರಣಕ್ಕೆ ಬಳಸಿಕೊಳ್ಳಲಾಗುತ್ತಿದೆ.

ಸ್ವಯಂ ರಕ್ತಪೂರಣ ವಿಧಾನವನ್ನು ಇತ್ತೀಚೆಗೆ ಪ್ರಾವ್ದ ಉಳ್ಳೇಖ ಪ್ರತಿಕೆಯು ತನ್ನದೊಂದು ಲೇಖನದಲ್ಲಿ ವಿವರಿಸಿದೆ. ಈ ವಿಧಾನವನ್ನು ಬಳಸಿ ಈಗಷ್ಟೆ 300 ಚಿಕಿತ್ಸೆಗಳನ್ನು ಪೂರೈಸಿರುವ ಡಾಕ್ಟರ್ ವಸಿಲಿ ಜುಡಾ ಅವರ ಹೆಸರನ್ನು ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ.

ಚಿಕಿತ್ಸೆ ನಡೆಯುವುದಕ್ಕಿಂತ ಬಹುಕಾಲ ಮೊದಲೇ ಮತ್ತು ಕೇವಲ ರೋಗಿಯ ಒಬ್ಬನಿಗೆಯಿಂದ ಪೂರ್ತಿ ರಕ್ತವನ್ನು ತೆಗೆದುಕೊಳ್ಳಲಾಗುತ್ತದೆ. ಸಾಮಾನ್ಯವಾಗಿ ಚಿಕಿತ್ಸೆಗೆ 8-10ದಿನ ಮೊದಲೇ ರಕ್ತವನ್ನು ತೆಗೆದುಕೊಳ್ಳಲಾಗುತ್ತದೆ. ಪ್ರಯೋಜನಗಳು ಅನೇಕ.

ರಕ್ತ ಹೊಂದಿಕೆಯ ಪರುಸ್ಕೆಯಿಲ್ಲ. ಅಲ್ಲದೆ ರಕ್ತದ ರೋಗಿಗಳ ವಿಷಯದಲ್ಲಂತೂ ಈ ವಿಧಾನ ಬಹುದೊಡ್ಡ ರೀತಿಯಲ್ಲಿ ಉಪಯುಕ್ತವೆನಿಸುತ್ತದೆ.

ಯಾವುದೇ ವೈರಸ್ ಬಾಧೆ ಅಪಾಯವೂ ಇಲ್ಲ. ತೆಗೆದುಕೊಂಡ ರಕ್ತದಲ್ಲಿರ ಬಹುದಾದ ಯಾವುದೇ ವೈರಸ್ಸು ರೋಗಿಯ ದೇಹದಲ್ಲಿ ಈ ಮೊದಲು ಇದ್ದದ್ದೇ.

ರೋಗಿಯ ಸ್ವಂತ ರಕ್ತವನ್ನೇ ಉಪಯೋಗಿಸಿಕೊಳ್ಳುವ ಸಾಧ್ಯತೆಯು, ವಿರ್ಣಾಟುಗಳನ್ನು ಇಪ್ಪತ್ತು ಗಂಟೆಗಳೊಳಗೆ ಕ್ರಮೇಣ ಅಸ್ಪತ್ರೆಗಳಲ್ಲಿ ಹೆಚ್ಚುತ್ತಿರುವ ರಕ್ತದಾನದ ಬೇಡಿಕೆಗಳ ಈಡೇರಿಕೆಯೂ ಸೂರೈಸಲ್ಪಡುತ್ತದೆ.

ರಕ್ತ ತೆಗೆದುಕೊಳ್ಳುವುದು ಆ ರೋಗಿಯ ಉಪಚಾರದ ಒಂದು ಭಾಗವಾಗಿಯೆ ಆಗುತ್ತದೆ. ಮುಂದಿನ ಚಿಕಿತ್ಸೆಗೆ ಅದು ರೋಗಿಯ ದೇಹವನ್ನು ತರಬೇತುಗೊಳಿಸುತ್ತದೆ ಮತ್ತು ದೇಹದ ಸಂರಕ್ಷಣ ಕ್ರಿಯೆಗಳನ್ನು ಉತ್ತೇಜಿಸುತ್ತದೆ—ಅದರಲ್ಲೂ ವಿಶೇಷವಾಗಿ ರಕ್ತ ಪೂರಣದ ಅಂಗಗಳಲ್ಲಿ.

ಮೊಸ್ಕೋದಲ್ಲಿ ಭಾರತೀಯ ನರ್ತಕರ ಯಶಸ್ಸು

ಮಾಸ್ಕೋ, ಜೂನ್ 26, ಮಾಸ್ಕೋದ ವೆರ್ಯಾಟ ಥಿಯೇಟರಿನಲ್ಲಿ ಭಾರತೀಯ ನೃತ್ಯ ಗಾತಿಯರಿತ್ತ ಕಲಾಪವು ಬಯಸದೊಡ್ಡ ಯಶಸ್ಸನ್ನು ಗಳಿಸಿದೆ.

ಉತ್ತರ ಮತ್ತು ದಕ್ಷಿಣ ಭಾರತಗಳ ನೃತ್ಯಗಳನ್ನೊಳಗೊಂಡಿರುವ ಕಾರ್ಯಕ್ರಮ ಮತ್ತು ಶ್ರೀಮತಿ ಕಮಲ ಅವರ ಕಲೆಯನ್ನು ಮಾಸ್ಕೋ ನಿವಾಸಿಗಳು ಪ್ರತ್ಯಕ್ಷ ಬಾರಿಗೇ ಪರಿಚಯ ಮಾಡಿಕೊಂಡರು.

ರತಿಯದ ಮುಂಭಾಗದಲ್ಲಿರುವ ಒಂದು ಪ್ರಧಾನ ಕೈಗಾರಿಕಾ ಪಟ್ಟಣವಾದ ಶಾಂಬೋಯ್‌ನಲ್ಲಿ ಅತಿಥಿಗಳು ಈ ಮೊದಲು ತಮ್ಮ ಆಗಮನಗಳನ್ನು ತೀರಿದ್ದರು ಮತ್ತು ರೈಲಿನಿಲ್ದಾಣ ಮಾಗೂ ಹಾಸ್ಕೆಂಟುಗಳಲ್ಲಿ ನೀಡಿದ್ದರು.

ಸೋವಿಯೆತ್ ಒಕ್ಕೂಟ ಮತ್ತು ಭಾರತಗಳ ನಡುವೆ ಸಾಂಸ್ಕೃತಿಕ ವಿನಿಮಯಗಳು ಏರ್ಪಾಡಾಗಿ ವಿಕಸಿಸುತ್ತಿವೆ. ಈ ವರ್ಷ ಸೋವಿಯೆತ್ ಒಕ್ಕೂಟದ ಜನಪ್ರಿಯ "ಬೆಲೋಯ್ ಜ್ಯಾ" ನೃತ್ಯ ತಂಡವು ದಿಲ್ಲಿಯಲ್ಲಿ ಅತಿಥಿ ಕಾರ್ಯಕ್ರಮಗಳನ್ನು ನೀಡಲಿದೆ. ಶರತ್ಕಾಲದಲ್ಲಿ ಇನ್ನೊಂದು ಭಾರತೀಯ ನರ್ತಕ ತಂಡವು ಸೋವಿಯೆತ್ ಒಕ್ಕೂಟದ ಪ್ರವಾಸಕ್ಕೆ ಹೋಗಲಿದೆ.

ಟಿ. ವಿ. ತೆರೆಯ ಮೇಲೆ ವಿದ್ಯಾಶಿಕ್ಷಣ

ಬ್ರಾಂಡೆ—ವಿನ್ಸಿನ್‌ಸ್ಟೋ (ಡಾಡ್): ಫೆಡರಲ್ ರಿಪಬ್ಲಿಕ್ ಜರ್ಮನಿಯಲ್ಲಿ ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿ ಕಸ್ಪು ಬೋರ್ಡ್‌ಗಳ ಮೇಲೆ ಬರೆದು ವಿವರಿಸುವುದಕ್ಕೆ ಬದಲಾಗಿ ಟೆಲಿವಿಷನ್ ತೆರೆಯ ಮೇಲೆ ಚಿತ್ರಪ್ರದರ್ಶನದಿಂದ ಶಿಕ್ಷಣವನ್ನು ನೀಡುವ ಕ್ರಮವನ್ನು ಪ್ರಾರಂಭಿಸಿದಾರೆ. ಉಪಾಧ್ಯಾಯರು ವಿದ್ಯಾರ್ಥಿಗಳಿಗೆ ಚಿತ್ರಗಳನ್ನು ಬೋರ್ಡಿನ ಮೇಲೆ ಬರೆಯುವ ಬದಲು ಅದನ್ನೇ ಚಿತ್ರವಾಗಿ ಕಮೂರಿಸಿ ಬೊಡ್ಡದಾಗಿ ಟಿ. ವಿ. ತೆರೆಯ ಮೇಲೆ ಪ್ರದರ್ಶಿಸಿ ಪಾಠ ಹೇಳುವುದು ಪ್ರತ್ಯಕ್ಷ ಪ್ರಭಾವ ಪೂರಿತವಾಗಬಹುದೆಂದು ಭರ್ಧರಿಸಿ ಈ ನೂತನ ಕ್ರಮವನ್ನು ಪ್ರಾರಂಭಿಸಿರುವರಿದೆ. ಈ ಕ್ರಮದಿಂದ ಪಾಠಗಳನ್ನು ಪೂರ್ಣವಾಗಿ ಗ್ರಹಿಸಲು ಮತ್ತು ಗ್ರಹಿಸಿದುದನ್ನು ವಿದ್ಯಾರ್ಥಿಗಳು ಶಾಶ್ವತಪಡಿಸಿಟ್ಟು ಕೊಳ್ಳಲು ಸಹಾಯವಾಗುವುದು. ಸೋವಿಯೆತ್ ವಿದ್ಯಾ ಇಲಾಖೆಯವರು ಈ ನೂತನ ವಿಧಾನವು ಹೆಚ್ಚು ಆಕರ್ಷಕವಾಗಿದೆಯೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. (ಯು. ಪಿ. ಎಸ್.)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾಶ್ಚಿಯದಲ್ಲಿ ಉಪಾಹಾರಕ್ಕೆ ಅನ್ಯ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬ್ಯೂ ಪೋಸ್ಟಿನಿಂದ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ,
ಪಾಲುಕೋಟೆ, ಉಡುಪಿ, ದ. ಕ.

NAVAYUGA 23—7—1970
Registered with the Registrar of News Papers for India under No. R. N. 3640/'67

REGD. No: B. Gr 178
LICENCE No. 33
Licensed to Post without Prepayment

ಗ್ರಾಮದ ಹಿರಿಯರಿಗೆ ನಿರ್ದೇಶನ

ಕೋಡಿಹರ್ನಿಂದ ಹತ್ತು ಮೈಲಿಲು ದೂರ ದಲ್ಲಿರುವ ಮೆದಿನಾಗ್ರಾಮದಲ್ಲಿ ಗೋಧೂಳಿ ಸಮಯ. ಈ ಕಂಫ್ಯಾರಾಲದಲ್ಲಿ ದಿನದ ಮೇವಿಗೆ ಹೋಗಿರುವ ಹಸುಗಳು ಧೂಳೆ ಬ್ಬಿಸಿಕೊಂಡು ವನೆಗೆ ಹಿಂದಿರಿ ಗುತ್ತವೆ. ಈ ಸಮಯದಲ್ಲಿ ಹಳ್ಳಿಗೆ ಭೇಟಿಕೊಡಲು ಬಂದಿರುವ ಅಲ್ಲಿಯ ಹಿರಿಯರೊಂದಿಗೆ ಮಾತನಾಡಲು ಸಾಧ್ಯ.

ಮೆದಿನಾ ಗ್ರಾಮದ ಮುಖಂಡರು ಹಿರಿಯರಾದ ಜಯ.ನಾರಾಯಣಸಿಂಗ, ಜಮ್ಮಸಿಂಗ ಮಾತ್ರ ಶಿಕ್ಷಣ ವಿಲ್ಲದಿದ್ದರೂ ಹೊಸ ಸೇವನೆ ಮಾಡುತ್ತ ಕುಳಿತಿದ್ದಾಗ ಕುಟುಂಬ ಯೋಜನಾ ಕಾರ್ಯಕರ್ತನೊಬ್ಬ ಈ ಶ್ರಮಾರ್ಜಿಗಳನ್ನು ಭೇಟಿಯಾದ. ಆತ ಗ್ರಾಮದ ಹಿರಿಯರಿಗೆ ಕುಟುಂಬ ಯೋಜನೆಯ ಮಹತ್ವದ ಬಗ್ಗೆ ತಿಳಿಸಿ ಹೇಳಿದ.

ಗತವೈಭವದಲ್ಲೇ ಸದಾ ಆಸಕ್ತನಾಗಿದ್ದ ಕಲ್ಯಾಣ ಸಿಂಗ್ ಕುಟುಂಬಯೋಜನಾ ಕಾರ್ಯಕರ್ತನನ್ನು ಕೇಳಿದ: "ನಮ್ಮ ಗ್ರಾಮ ಅನೇಕ ಶತಮಾನಗಳಷ್ಟು ಹಳೆಯದು. ಅನೇಕ ಸರ್ಕಾರಗಳು ಆಡಳಿತ ನಡೆಸಿವೆ. ಆದರೆ ಯಾವೊಂದು ಸರ್ಕಾರವೂ ಸಂತತಿ ನಿಯಂತ್ರಣದ ಅಗತ್ಯದ ಬಗ್ಗೆ ಮಾತೆತ್ತಿಲ್ಲ. ಈ ಸರ್ಕಾರ ಈಗ ಹೀಗೇಕೆ ಮಾತನಾಡುತ್ತಿದೆ?"

"ನಿನ್ನ ಈ ಪ್ರಶ್ನೆಯನ್ನು ಉತ್ತರಿಸುವುದು ಬಹಳ ಸುಲಭ ಸರದಾರರೇ" ಎಂದು ಗಾಬರಿಯಾದ ಕಾರ್ಯಕರ್ತ ಮಾತಿನ ಸರಣಿ ಮುಂದುವರಿಸಿದ: "ಹಿಂದೆ ಜನರು ಈಗಿನಷ್ಟು ರೋಗ ಮುಕ್ತರಾಗಿರಲಿಲ್ಲ. ಆದ್ದರಿಂದ ಇಂದು ಜನಸಂಖ್ಯೆ ಹೆಚ್ಚಿದೆ. ಇಂದು ವಿಜ್ಞಾನದ ಮತ್ತು ಯಂತ್ರಗಳ ಬಳಕೆಯಿಂದ ಕೃಷಿಯಲ್ಲಿ ಹೆಚ್ಚಿನ ಪರಿಣತಿ ಪಡೆಯಲಾಗಿದೆ. ಆದ್ದರಿಂದ ಸ್ವಲ್ಪ ಭೂಮಿಯಿಂದ ಹೆಚ್ಚು ಆಹಾರ ಧಾನ್ಯಗಳು ಸಾಧ್ಯವಾಗಿವೆ. ಈಗ ಹೆಚ್ಚು ಜನರು ಬದುಕಿರುತ್ತಾರೆ. ಆದ್ದರಿಂದಲೇ ಕುಟುಂಬ ಯೋಜನೆ ಅಗತ್ಯವಾಗಿದೆ."

"ಹಾಗಾದರೆ ಇದರ ಬಗ್ಗೆ ಸ್ವಲ್ಪ ಗೊತ್ತಿದೆ" ಎಂದು ಶಿಕ್ಷಕ ಮಿತ್ರರಾದ ಪುಷ್ಪರಾಜ್ ಗ್ರಾಮ. ಇದೇ ಹಿರಿಯೂರಾಜ್ಯದಲ್ಲೇ ಆಕ್ಸಫರ್ಡ ಯೋಗ್ಯತೆಯಲ್ಲಿ ಪೂರೈಸಿದೆ. ಆದರೆ ಇಂಥದೇ ಸನ್ನಿವೇಶದಲ್ಲಿ ಫ್ಲೇಗ್ ಸಾಂಕ್ರಾಮಿಕ ಹರಡಿದಾಗ ರೋಗಕ್ಕೆ ಭಗವಂತನೇ ಪ್ರೇತವನಗರವಾಗಿತ್ತೆಂದು ಓಡಿದ್ದೇನೆ. ಊರಿನ ಅನೇಕ ಬಡಾವಣೆಗಳಲ್ಲಿ ನಿವಾಸಿಗಳನ್ನು ಮಚ್ಚಲಾಗಿತ್ತು. ಬೀದಿ ನಾಯಿಗಳ ಪಾಲ್ಯವಾಗಿತ್ತು. ಖುತಲಾನ ಮುಂಡ್ಲಾನ ಮತ್ತು ಖಾನದಂತಹ ದೊಡ್ಡಗ್ರಾಮಗಳ ಕಾಲು ಭಾಗ ಜನ ಸಂಖ್ಯೆ ಅಳಿದು ಹೋಯಿತು."

'ಈ ಘಟನೆ ನಿನ್ನೆ ನಡೆದಂತಿದೆ, ಇದನ್ನು ಎಲ್ಲರೂ ಸ್ಮರಿಸುತ್ತಾರೆ' ಎಂದು ಹೇಳಿದ ಕಲ್ಯಾಣಸಿಂಗ್.

'ಫ್ಲೇಗ್ ಸಾಂಕ್ರಾಮಿಕ ಹರಡುವ ದಕ್ಕಿಂತಲೂ ಮುಂಚೆ, ಈ ಜಿಲ್ಲೆಯ ಅನೇಕ ಜನರು ಮಲೇರಿಯಾದಿಂದ ಮರಣಹೊಂದಿದರು. ಅನೇಕರು ಮಾಸ ಟ್ಟಲೆದರಳಿದರು.

ಈ ಪಿಡುಗಿನ ಸಂವತ್ಸರಗಳಲ್ಲಿ ಫಸಲನ್ನೂ ಕಟಾವು ಮಾಡಲಾಗಲಿಲ್ಲವೆಂದು ಪುಸ್ತಕಗಳಲ್ಲಿ ಓದಿದ್ದೇನೆ. ಬೆಳೆಯು ನೂಲೀಕರು ಫಸಲನ್ನು ಕಟಾವು ಮಾಡಿ ಅದರಲ್ಲಿ ಅರ್ಧಭಾಗವನ್ನು ಪ್ರತಿಫಲವಾಗಿ ನೀಡಲು ಸಿದ್ಧರಾಗಿದ್ದರೆಂದು ಕೇಳಿದ್ದೇನೆ" ಎಂದು ವಿಲ್ಕಿರಾಂ ಹೇಳಿದನು.

"ಕಾದು, ಆದ್ದರಿಂದಲೇ ಜನಸಂಖ್ಯೆ ವಿರಳವಾಗಿಲ್ಲ. ಅನೇಕ ವರ್ಷಗಳ ಕಾಲ ಇದ್ದೇ ಸ್ಥಿತಿಯಿದ್ದಿತು. ಈ ಸನ್ನಿವೇಶದಲ್ಲಿ ಕನಾರ್ಲ್‌ನಲ್ಲಿ ಜನಸಂಖ್ಯೆ ಇಳಿಮುಖವಾಯಿತು. ಆದರೆ ಈಗ ಈ ಸ್ಥಿತಿ ಬದಲಾಗಿದೆ. ಈಗ ಎಲ್ಲೆಲ್ಲೂ ಜನಸಂಖ್ಯೆ ಹೆಚ್ಚುತ್ತಿದೆ. ಆದ್ದರಿಂದ ಸರ್ಕಾರ ಮಿತ ಕುಟುಂಬಗಳು ಹಾಗೂ ಅಲ್ಪಸಂಖ್ಯೆಯಲ್ಲಿ ಮಕ್ಕಳಿರುವ ಬಗ್ಗೆ ಗಮನ ಕೇಂದ್ರೀಕರಿಸಿದೆ. ಈಗ ನಮ್ಮ ಗ್ರಾಮದಲ್ಲೇ ವಿಜ್ಞಾನದ ಸಹಾಯದಿಂದ ಮಿತಕುಟುಂಬ ಆದರ್ಶ ಸಾಧಿಸಲು ನಾವು ಪ್ರಯತ್ನಿಸಬಹುದೆ" ಎಂದು ಕುಟುಂಬಯೋಜನಾ ಕಾರ್ಯಕರ್ತ ನುಡಿದ.

ಇದುವರೆಗೆ ಗ್ರಾಮಸ್ಥರಿಗೆ ವಕ್ತಾರನಾಗಿ ಮಾತ್ರವಹಿಸಿದ ಕಲ್ಯಾಣಸಿಂಗ ಆರೆ ಗ್ಯ ಹಾಗೂ ದೀರ್ಘಾಯುಸ್ಸನ್ನು ಕುಟುಂಬಯೋಜನೆಯೊಂದಿಗೆ ಸಮನ್ವಯ ಮಾಡುವ ವಿಧಾನವನ್ನು ಅರಿತು ಕೊಂಡರು. ಕಲ್ಯಾಣಸಿಂಗ್ ಕುಟುಂಬ ಯೋಜನಾ ಕಾರ್ಯಕರ್ತನಿಗೆ ಕೃತಜ್ಞತೆಯ ವಂದನೆ ಸಲ್ಲಿಸಿದರು.

ಶಿಕ್ಷಣದಿಂದ ರಾಷ್ಟ್ರೀಯ ಸಮಗ್ರತೆ

(ಇಂದನೇ ಪುಟದಿಂದ)

ಮಕ್ಕಳಿಗಾಗಿ ಸುಲಭ ಬೆಲೆಯಲ್ಲಿ ದೊರೆಯುವ ಪುಸ್ತಕಗಳನ್ನು ಪ್ರಿಂಟಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಯೋಜನೆಯನ್ನು "ನೆಹರು ಬಾಲ ಪುಸ್ತಕಾಲಯ" ಎಂಬುದಾಗಿ ಕರೆಯಲಾಗಿದೆ. ಈ ಯೋಜನೆಯ ಪ್ರಕಾರ ಶಾಲ್ಕನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸುಮಾರು 100 ಪುಸ್ತಕಗಳನ್ನು ಪ್ರಕಟಿಸುವ ಸೌಕರ್ಯ ಇದೆ. ರಾಷ್ಟ್ರೀಯ ಸಮಗ್ರತೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಈ ಪುಸ್ತಕಗಳಲ್ಲಿ ಸೇರಿಸಲಾಗುವುದು. ಭಾರತದ ಸಂಸ್ಕೃತಿ, ಹಬ್ಬಗಳು, ಇತಿಹಾಸ ಪುರುಷರು, ಯಾತ್ರಾಸ್ಥಳಗಳನ್ನು ಕುರಿತ ವಿಷಯಗಳನ್ನು ಪುಸ್ತಕಗಳಲ್ಲಿ ಸೇರಿಸಲಾಗುವುದು. ಇತ್ತೀಚೆಗೆ ವಿಜ್ಞಾನದಲ್ಲಿ ನಡೆದಿರುವ ಮುನ್ನಡೆಬಗ್ಗೆಯೂ ಪ್ರಕಟಣೆಗಳಲ್ಲಿ ತಿಳಿಸಲಾಗುವುದು.

ಭಾರತ ಭಾಷೆಗಳ ಅಧ್ಯಯನ ಸಂಸ್ಥೆ

ದೇಶದ ವೇರೆ ವೇರೆ ಭಾಷೆಗಳ ವ್ಯಾಕರಣ, ಅರ್ಥ ಮತ್ತು ಪದಗಳ ನಡುವೆ ಇರುವ ಸಂಬಂಧವನ್ನು ತಿಳಿಸುವ ಸಲುವಾಗಿ ಕೇಂದ್ರ ಸರ್ಕಾರದ ಶಿಕ್ಷಣ ಇಲಾಖೆಯು ಮೈಸೂರಿನಲ್ಲಿ ಭಾರತ ಭಾಷೆಗಳ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಅಲ್ಲದೆ ಸುಮಾರು ನಾಲ್ಕು ಪ್ರಾದೇಶಿಕ ಸಂಸ್ಥೆಗಳನ್ನು ಪ್ರಾರಂಭಿಸುವ ಬಗ್ಗೆ ಉದ್ದೇಶವಿದೆ. ನಾರ್ವೀಕರಿಗೆ ದೇಶದ ವೇರೆ ವೇರೆ ಭಾಷೆಗಳನ್ನು ತಿಳಿಸುವುದು ಈ ಎಲ್ಲ ಪ್ರಯತ್ನಗಳ ಮುಖ್ಯ ಉದ್ದೇಶ. ಇದು ರಾಷ್ಟ್ರೀಯ ಸಮಗ್ರತೆಗೆ ಹೆಚ್ಚಿನ ನೆರವಾಗುವುದು.

ವಿಚಾರ ವಾಹಿನಿ

ಆರ್ಥಿಕ ಸಮಾನತೆಯು ಕಾರ್ಯಸಾಧ್ಯವಾದಾಗ ಮಾತ್ರ ಸಮಾಜದ ಪರಿಸ್ಥಿತಿ ಬದಲಾಗುವುದು ಮತ್ತು ಜೀವನ ಶಿಕ್ಷಣದಿಂದ ಮನುಷ್ಯರ ಪರಿಸ್ಥಿತಿ ಬದಲಾಗುವುದು.

ತಲೆಯ ಮೇಲೆ ಎಂಟು ಆಣೆಯ ಟೋಪ್ಪಿಗೆ ಹಾಕುತ್ತಾರೆ. ಆದರೆ ಕಾಲಲ್ಲಿ ಎಂಟು ರೂಪಾಯಿ ಜೋಡು ಮೆಟ್ಟಿಕ್ಕಾರೆ. ಇದರಿಂದ ಕಾಲಿನ ಯೋಗ್ಯತೆ ಹೆಚ್ಚೆಂದಾಯಿತೆ?

ಜೋಂಗಿ ಜನರಲ್ಲಿ ಕೂಡ ಸಜ್ಜನರೂ ಇರುತ್ತಾರೆ. ಆದರೆ ಅನರಲ್ಲಿ ವಿಶೇಷವಾದ ಗುಣ ಹುಟ್ಟುವುದು, ಪೋರಿಕೆಯುವುದೂ ಇಲ್ಲವೆಂಬುದೇ ಪ್ರಶ್ನೆ. ಪ್ರತಿಯೊಬ್ಬರಲ್ಲಿಯೂ ಸದ್ಗುಣಗಳು ಸ್ವಾಭಾವಿಕವಾಗಿದ್ದು, ದುರ್ಗುಣಗಳು ಪೂರ್ವ ತೋರಿಯುವು. ಪರಿಸ್ಥಿತಿ ಮೂಲಕ ಉಂಟಾಗುವುದು ಎಂದು ತಿಳಿಯಬೇಕು.

ನೈತಿಕ ಕಾರ್ಯಕ್ಕೆ ನೈತಿಕ ಬೆಲೆಯನ್ನೇ ಕಟ್ಟಬೇಕು. ಆರ್ಥಿಕ ಬೆಲೆಯನ್ನು ಕಟ್ಟಲು ಬಹಳಾರದು.

ಕೈಯಲ್ಲಿನು ಕತ್ತಿ ಕೊಡುವ ಮೊದಲು ಅದನ್ನು ಹೇಗೆ ಮತ್ತು ಏಕೆ ಉಪಯೋಗಿಸಬೇಕೆಂಬುದನ್ನು ಕಲಿಸಿ ಕೊಡಬೇಕು.

ಕೇವಲ ತರ್ಕದಿಂದ ಶಾಂತಿ-ಸಮಾಧಾನವಾಗುವುದಿಲ್ಲ; ಅನುಭವದಿಂದಲೆ ಶಾಂತಿ—ಸಮಾಧಾನವಾಗುತ್ತದೆ.

ವಾಣಿಯೇ ಅಂತರ್ ಮತ್ತು ಬಹಿರ್ ಜಗತ್ತನ್ನು ಕೂಡಿಸುತ್ತದೆ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಆನ್ವಯ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಅಂಗ್ಲಭ್ಯಾಸಬೋಧಿನಿ
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ದಿನವಹಿ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ: ವಿ. ಆರ್. ಕೊರಡ್ಡಳ್ಳಿರವರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಕೈಪಿಡೆ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ವಿಧಾನಗಳಿವೆ. ಜೊತೆಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 30—7—1970 ಸಂಪುಟ 49 ಸಂಚಿಕೆ 47

ಪುನಾವಣಾಪೂರ್ವವರ್ಷದ ಕೊಡುಗೆ

ಸಂಯುಕ್ತ ಸಮಾಜವಾದಿ ಮತ್ತು ಜಾ ಸಮಾಜವಾದಿ ಪಕ್ಷಗಳು ವಿಲೀನ ಳ್ಳುವ ಬಗ್ಗೆ ಮೂರು ಸಲ ಸಿನ ಮಾ ಕತೆಗಳು ಈಗಾಗಲೇ ಮುಗಿದಿವೆ. ಇ ಕಾಲ್ಪನಿಯು ಸುಳ್ಳು ಇವೆಲ್ಲಕ್ಕೇ ಆ ಭವಾಗಲಿದೆ. ಈ ಮಾತುಕತೆಯು ನಂ ಗೆ, ವಿಲೀನ ಬಗ್ಗೆ ಮಾತುಕತೆ ಪಡೆಯ ಕಾದ ಅಗತ್ಯವಿಲ್ಲವೆಂದೂ ವಿಲೀನವು ಂದು ದೇಶೆ ಪೂರ್ಣವಾಗದೆ ಹೋದ ಪೂರ್ಣತೆಯು ಗಟ್ಟಿ ಮುಟ್ಟಾಗುವುದೆಂ ಸಂಯುಕ್ತ ಸಮಾಜವಾದಿ ಪಕ್ಷದ ಸ್ಪಷ್ಟ ಶ್ರೀ ಕರ್ಪೂರಿ ಠಾಕುರ್ ಹೇಳು ದ್ದಾರೆ.

ಸಮಾಜವಾದವನ್ನೇ ಗುರಿಯಾಗಿಟ್ಟು ಂಡ ರಾಜಕೀಯ ಪಕ್ಷಗಳ ಭಾರ ಂದ ನೆಂದು ತಪ್ಪಾದ ಭಾವನೆಯಿಂ ನ್ನೂ ಇನ್ನೂ ಹೊಸ ಹೊಸ ಪಕ್ಷಗಳು ನಗಳು; ಇರುವ ಪಕ್ಷಗಳೇ ಸಂಖ್ಯೆಯು

ಕಡಿಮೆಯಾಗುವುದರಿಂದ ದೇಶದಲ್ಲಿ ಾಜಕೀಯ ಶಾಂತಿ ನೆಲಸಲು ಸಹಾಯ ದೀತು. ಈ ದಿಸೆಯಲ್ಲಿ ಉದ್ದೇಶಿತ ವಿ ನದ ಮಾತುಕತೆ ಯಶಸ್ವಿಯಾದರೆ, ದು ಮಂದಿನ ಬೆಳವಣಿಗೆಗೆ ಕಾರಣ ಾಗಬಹುದು.

ಆದರೆ, ಈ ವಿಲೀನತೆಯು ಎಷ್ಟು ಕಾ ನಿಲ್ಲುತ್ತದೆ ಎಂಬ ಪ್ರಶ್ನೆಯೆಂದಿದೆ. ಂದೊಮ್ಮೆ ಸಮಾಜವಾದಿ ಮತ್ತು ಪ್ರ ತ ಸಕ್ಷಗಳು ಒಂದಾಗಿ ಪ್ರಜಾ ಸಮಾ ವಾದಿ ಪಕ್ಷವೆನಿಸಿದ್ದನ್ನು ಅತ್ಯಂತ ಅ ಪ್ಪಾವಧಿಯಲ್ಲೇ ಸಮಾಜವಾದಿ ಪಕ್ಷ ಾಂದ ಒಡಿದು ಹೋದ ಘಟನೆಯನ್ನು ಮರೆ ುವುದು ಸಾಧ್ಯವಿಲ್ಲ- ಅಭಿಪ್ರಾಯ ಭೇದ ಸ್ವತಂತ್ರ—ಸಂಘಟನಾ ಸ್ವಾತಂತ್ರ್ಯ ಾ ರೀತಿಯಲ್ಲಿ ಅಪವ್ಯಯ ವಾಗುತ್ತಿರುವು ು ಯೂರಿಗೂ ನೆಮ್ಮದಿ ತರುವುದಿಲ್ಲ, ಅ ರೂ ನಿಯೋಜಿತ ಪ್ರಸವಾ ಮತ್ತು ಸಂ ರಗಳ ಐಕ್ಯವು ಚಿರಕಾಲದವರೆಗೂ ಉಳಿಯುವುದೆಂ ಹೇಳುವುದು ಸಾಧ್ಯವಿಲ್ಲ

ಸಂಯುಕ್ತ ಸಮಾಜವಾದಿ ಪಕ್ಷವು ಕಾಲಾವಧಿಯ ಭಂಗದ ಚಳು ಳಿಯನ್ನು ಕರೆತಂದಿಟ್ಟಿದೆ. ಹಿಂದೆ ಮಹಾತ್ಮಾ ಾಂಧಿಯವರು ವೈಕ್ತಿಯರ ವಿರುದ್ಧ ಾ ಬಗೆಯ ಚಳುವಳಿಗೆ ಕರೆ ನೀಡಿದ್ದರು. ರೆಕ್ಕೆ ಬಾದ ಪಕ್ಷವು ಸ್ವದೇಶಿ ಕಾ ನೂಲುಗಳನ್ನೇ ಉಡಿಸಲು ಉತ್ತೇಜನ ನೀಡುತ್ತಿದೆ. ಪಕ್ಷದ ನಾಯಕ ಶ್ರೀ ಜಾರ್ಜ್ ಫರ್ನಾಂಡಿಸ್ ಹೇಳುವಂತೆ ದೇಶದಲ್ಲಿ ತಲೆದೋರಿರುವ ರಾಜಕೀಯ ಹಿನ್ನೆಲೆಯು ಈ ಬಗೆಯ ಚಳವಳಿಕ್ಕೆ ತಕ್ಕ ವಸ್ತುಭೂಮಿ ತಯಾರಿಸಿಕೊಟ್ಟಿದೆ.

ಚಳುವಳಿಯ ಉದ್ದೇಶಗಳು ಇವು— ಭೂಮಿಯು ಸರ್ವತಕರನೆ, ಗರಿಷ್ಠ ವರ್ಷ ಮೇಲ್ಪಟ್ಟವರಿಗೆ ಮತದಾನದ ಹಕ್ಕು, ಕೂ ಗುಂಪಿಂಕ್ಕಿಂತ ಹೆಚ್ಚು ಈ ದೇಶದಲ್ಲಿ ಯಾರೂ ವೆಚ್ಚ ಮಾಡಬಾರದೆಂದು, ಶಾಸನಬದ್ಧ ವಿ ತ, ನಿರುದ್ಯೋಗಿಗಳಿಗೆ ಉ ದ್ಯೋಗ ಅಥವಾ ನಿರುದ್ಯೋಗ ಪರಿಹಾ ರ; ಮನೆಯಿಲ್ಲದವರಿಗೆ ಮನೆ.....ಬೇಡಿ ಕೆಗಳು ನಿಜಕ್ಕೂ ಹೃದಯ ಮುಟ್ಟುವಂ ಥವುಗಳು. ಆದುದರಿಂದ ಚಳುವಳಿಗೆ ವಿ ಪರೀತ ಬೆಂಬಲ ದೊರಕುವುದೇನೂ ಅ ಸಂಭವವಲ್ಲ. ಚಳುವಳಿ ಅಥವಾ ಹೋ ರಾಟವು ಬರಿಯ ತೋರಿಕೆಯದ್ದಾಗದಿರ ದೆಂದೂ ಕಾರ್ಯಕರ್ತರು ಸಾಧಿಸುವಂತಾಗ ಬೇಕೆಂದೂ ನಾಯಕರ ಉಪದೇಶ.

ಚಳುವಳಿಯು ವಿಧಾನದ ಸಂಪೂರ್ಣ ರೂಪರೇಷೆ ಬಹಿರಂಗವಾಗಲಿಲ್ಲ. ಆದ ರೂ ಕೆಲವು ಸಲಹೆಗಳು ತಿಳಿದಿವೆ. ಬ್ಯಾಂಕುಗಳು ಮತ್ತು ಖಜಾನೆಗಳ ಬಳಿ ನಿರುದ್ಯೋಗಿಗಳನ್ನು ಹೋಗಿ "ನಿರು ದ್ಯೋಗ ಭತ್ತೆ ಕೊಡಿರಿ" ಎಂದು ಒತ್ತಾ ಯಪಡಿಸಬೇಕೆಂಬ ಸಲಹೆ ಬಂದಿತಂತೆ. ಎಲ್ಲ ಬ್ಯಾಂಕುಗಳ ಮುಂದಲ್ಲವಾದರೂ ಈಗ ಸರಕಾರಿ ಒಡೆತನದಲ್ಲಿರುವ ಬ್ಯಾಂ ಕುಗಳ ಮುಂದೆ ಅಥವಾ ಸರಕಾರಿ ಖಜಾ ನೆಗಳ ಮುಂದೆ ಈ ಬಗೆಯ ಬೇಡಿಕೆ ಮುಂದಿಡಬಹುದು. ಮುಂದೊಂದು ದಿನ ತಿಜೋರಿ ಅಪಹರಿಸುವುದಕ್ಕೂ ಕರೆ ಹೊ ರಟೀತು.

ಗೃಹ ನಿರ್ಮಾಣ ಸಂಸ್ಥೆ ಕಟ್ಟಿಸಿದ್ದು ಸಣ್ಣ ಖಾಲಿ ಇರುವ ಮನೆಗಳನ್ನು ಮನೆ ಯಿಲ್ಲದವರು ಅಕ್ರಮವಾಸಿಕೊಳ್ಳಬೇಕೆಂಬು ದು ಇನ್ನೊಂದು ಸಲಹೆ. ಇನ್ನೇ ಸಲಹೆ ಇ ತರರ ಒಡೆತನದಲ್ಲಿರುವ ಮನೆಗಳ ಬಗೆ ಗೂ ಕ್ರಮೇಣ ಅನ್ವಯಿಸಬಹುದು. ಶಾಸಕರು ಶಾಸನಸಭೆ ಮತ್ತು ಸಂಸತ್ತುಗಳಲ್ಲಿ ಭಾಗವಹಿಸದೆ ಚಳುವಳಿಯಲ್ಲಿ ಸಕ್ರಿಯವಾಗಿ ಸೇರಿಕೊಳ್ಳಬೇಕೆಂದು ಸಂಘಟನೆಯು ತನ್ನ ಪಕ್ಷೀಯರಿಗೆ ಸಲಹೆ ನೀಡಿದೆ. ಸರಕಾರದ ಸಹಕಾರ ವಿರೋಧವನ್ನು ಎದುರಿಸಬೇಕೆಂದೂ ಅದು ನಿರ್ಧರಿಸಿದೆ.

ಪ್ರಸಕ್ತ ಪಕ್ಷವೂ ಈ ಕಾಮನು ಭಂಗ ಚಳುವಳಿಯಲ್ಲಿ ಪಾಲುಕೊಳ್ಳುವ ದು. ವಿಲೀನತೆಯು ಆ ದೇಶೆಯಲ್ಲಿ ಪೂ ರ್ಣಗೊಳ್ಳದೆ ಹೋದರೂ ಚಳುವಳಿಯಲ್ಲಿ ಅದು ಆಸಕ್ತಿ ತೋರಿಸಿದೆ. ಇದರಿಂದ ನಿಕ ಟ ಭವಿಷ್ಯದಲ್ಲಿ ಎರಡೂ ಒಂದಾಗುವುದ ಕ್ಕೆ ಚಳುವಳಿಯಲ್ಲಿ ಪ್ರಸವಾ ತಳೆಯುವ ಅಸಕ್ತಿಯು ಋಣಾಯುಳ ಗಟ್ಟಿವಾಗಿರು ತ್ತದೆಂದು ಹೇಳಬಹುದು.

ಇಂಡಿಕೇಟ್ ಮತ್ತು ಭಾರತೀಯ ಕ್ರಾಂತಿ ದಳಗಳ ವಿಲೀನಕ್ಕೆ ಸ್ಪಷ್ಟ ಎದ್ದು ಇ ದೀಗ ಸ್ಥಗಿತವಾಗಿದೆ. ಇಂಡಿಕೇಟು ಶ್ರೀ ಮತಿ ಗಾಂಧಿಯವರ ಸಕ್ತ ಹೆಣೆದು ಫಿಂ ತ ಪಕ್ಷವಾದರೆ, ದಳವು ಶ್ರೀ ಚರಣಸಿಂ ಗರ ಸತ್ತಮುತ್ತ ಬೆಳೆದು ಬಂದ ಪಕ್ಷ. ವಿಲೀನ ಪ್ರಶ್ನೆಯು ಕುರಿತವಾಗಲಿದ್ದ ಕಾರಣವೆಂದರೆ, ನಾಯಕಪಟ್ಟ ಯಾರಿಗೆ ದೊರೆಯಬೇಕು ಎಂಬುದ . ಶ್ರೀಮತಿ ಗಾಂಧಿ ತಮ್ಮ ಶ್ರೀ ತ್ರಿಪಾಠಿಯವರಾಗಬೇಕೆಂದರೆ, ಶ್ರೀ ಸಿಂಗ್ ತಾನೇ ಆಗಿರಬೇಕೆಂತ್ತಾರೆ. ಶ್ರೀ ತ್ರಿಪಾಠಿ ಕೂಡಲೀ ಶ್ರೀ ಸಿಂಗರಾಗಲೀ ಸ್ವತಂತ್ರವಾಗಿ ಏನೂ ಮಾಡಿ ಸ್ಥಿತಿಯಲ್ಲಿಲ್ಲ. ಆದ ದರಿಂದ ಇ ಬ್ಬರೂ ಒಲೆ ಬೀಸಿದ್ದಾರೆ; ಒಬ್ಬರು ಇ ನ್ನೊಬ್ಬರನ್ನು ತಮ್ಮ ಬಲೆಯಲ್ಲಿ ಸಿಕ್ಕಿ ಹಾಕುವ ತಂತ್ರವಾಡುತ್ತಿದ್ದಾರೆ. ಒಬ್ಬರ ತಂತ್ರ ಇನ್ನೊಬ್ಬರಿಗೆ ಗೊತ್ತು. ಆದ ದರಿಂದ ತಳ್ಳಿ ಫಕ್ಕನೆ ಯಾರೂ ಸೋಲುತ್ತಿ ಲ್ಲ. ಆಟ ಮುಂದುವರಿದರೆ, ಕೊನೆಗೆ ತ್ರಿ ಪರಿಯೇ ಸೋಲಬೇಕು. ಏಕೆಂದರೆ, ಸಿಂ ಗನಲ್ಲಿರುವಷ್ಟು ಸ್ವಾತಂತ್ರ್ಯ ತ್ರಿಪಾಠಿ ಗಿಲ್ಲ. ಇಂದಿರಾಗಾಂಧಿ ಬಿಡಿಸಿಕೊಟ್ಟ ನೀಲಿಗೆರೆ ದಾಟಿ ಅವರೆಂದೂ ಹೋಗ ಲಾರರು.

೧೯೭೦—೭೧ ಭಾರತಕ್ಕೆ ಚುನಾವ ಣಾಪೂರ್ವ ವರ್ಷ. ಆದುದರಿಂದ ಪಕ್ಷ ಗಳೆಲ್ಲವೂ ಈ ದೃಷ್ಟಿಯಿಂದಲೇ ಕಾರ್ಯ ತತ್ಪರವಾಗುತ್ತಿವೆ. ಬಂಗಾಳದ "ಸಮಾ ಬಂದು", ಸಿಂಡಿಕೇಟ್‌ನ "ಮಹಾಮೈತ್ರಿ' ಸಂವಿಧಾನದ ಕಾನೂನು ಭಂಗ ಚಳುವಳಿ ಇಂಡಿಕೇಟಿನ 'ಸಮಾಜವಾದ ಮಂತ್ರ' ಜನಸಂಘದ ಜಾತ್ಯತೀತ, ಸ್ವತಂತ್ರ ಪಕ್ಷದ ಸಮಾಜವಾದ, ಕಮ್ಯುನಿಸ್ಟರ ಪ್ರಜಾತ್ಯ—ಮೊದಲಾದುವುಗಳೆಲ್ಲವೂ ಚು ನಾವಣಾಪೂರ್ವ ವರ್ಷದ ಸೆಳಕು ಕೊ ಡಗೆಗಳು — ಬರಿಯ ಉಡುಪೆಳು ಕಾಂ ಗ್ರೆಸ್ಸು ಅಧಿಕಾರವಿದ್ದಾಗ ಅಧಿಕಾರವು ಕಳಸಿನ ಮಂಡಿಗೆಯೂರಾದ್ದವರಿಗೂ ಈಗ ಅದನ್ನು ಹೂರೊಂದಿಗಿಂದರೂ ತೂರಿ ಕೊಂಡು ಗಳಸುಹುದೆಂಬ ಹೇರಾಸೆ.

ಜನಸೇವೆಯೇ ರಾಜಕೀಯ ಪಕ್ಷಗಳ ಉದ್ದೇಶ ಅಧಿಕಾರವು ಈ ಸೇವೆಗೊಂ ದು ಸಾಧನವಾಗುವುದರಿಂದ ಅದನ್ನು ಬಯಸುವುದು ತಪ್ಪಲ್ಲ. ಜನಸೇವೆ ಸಾಧ್ಯವಾಗಬೇಕು; ಅಧಿಕಾರ ಸಾಧ್ಯವಾಗಬೇಕು. ಆದರೆ, ನಮ್ಮ ದೇಶದಲ್ಲಿ ಎಲ್ಲವೂ ತಿರುವುಮುರುವು! ಆದುದರಿಂದಲೇ ಎಲ್ಲೆಲ್ಲೂ ಹೇರಾಸೆ— ಪರಿಣಾಮವಾಗಿ ಎಲ್ಲರಿಗೂ ಫಿರಾಸೆ.

ಆಕಳು ಹುಲ್ಲು ತಿನ್ನುತ್ತದೆ, ಆದರೆ ತನ್ನ ಕರುವಿಗೆ ಹುಲ್ಲು ತಿನ್ನಿಸುವುದಿಲ್ಲ; ಹಾಲೇ ಕುಡಿಯುತ್ತದೆ. ಆದರಂತೆ ಸಾಧು ಸಂತರು ತರತರದ ಜ್ಞಾನವಮ್ಮು ಜೀರ್ಣಿಸಿಕೊಂಡು ಲೋಕಸಲಭ ಭಾಷೆಯಲ್ಲಿ ಗುಣಗ್ರಾಹೀ ಭಾಷೆಯಲ್ಲಿ ಗುಟುಕು ಗುಟಕಾಗಿ ಜನರಿಗೆ ಕುಡಿಸುತ್ತಾರೆ.

೦ ೦ ೦

ಬುದ್ಧಿದಾನ, ಶ್ರಮದಾನ ಮತ್ತು ಸ್ನೇಹ ದಾನ ಇವು ಮೂರೂ ಉತ್ತಮ ದಾನಗಳು. ಇವ್ಮು ಸಾಧ್ಯವಾಗಿ ಮಾಡ ಬಹುದಾದ ದಾನ ಬೇರೆ ಇಂದಿಲ್ಲ.

೦ ೦ ೦

ಭೂತಗಳ ಭಕ್ತಿ ಮಾಡಿದರೆ ಭೂತ ಆಗತ್ತೀವೆ. ಪರಮಾತ್ಮನ ಭಕ್ತಿ ಮಾಡಿದರೆ ಪರಮಾತ್ಮರಾಗ ತ್ತೀವೆ. ಪಂ ಡ್ಯ ಜನರು ಕಲ್ಲನ್ನ ಪೂಜೆ ಮಾಡುತ್ತಿ ದ್ದರ; ಅದ್ದರಿಂದ ಅವರ ಅಂತಃಕರಣ ಕಲ್ಲಾಗಿದೆ.

೦ ೦ ೦

ವಿಜ್ಞಾನವು ಸಂಗಡಿಗರಿಗಿಂತ ಸಹೋದ್ಯೋಗಿಗಳಿಂದ ಕಾರ್ಯಕ್ಕೆ ಹೆಚ್ಚು ಪ್ರೋತ್ಸಾಹ ಸಿಗುತ್ತದೆ.

೦ ೦ ೦

ಇಂದ್ರಪ್ರಸ್ಥ

"ನವಗಿರಿನಂದ"

ಪುರಾಣಕಾಲದಲ್ಲಿ ಪ್ರಖ್ಯಾತ ದೇಶದ ರಾಜನಾದ ಶತಾನೀಕನು ತನ್ನ ಶೌರ್ಯ ಪ್ರತಾಪಗಳಿಂದ ಭೂಮಂಡಲಕ್ಕೆಲ್ಲಾ ಚಕ್ರವರ್ತಿಯೆನಿಸುತ್ತಾ ಬರುತ್ತಿರುವಾಗ, ದಕ್ಷಿಣ ಭಾಗದಲ್ಲಿದ್ದ ರಾಕ್ಷಸರು ಅವನ ಶಕ್ತಿಯನ್ನು ವಿಂಗಡಿಸಿಕೊಂಡು ಬರುತ್ತಿದ್ದರು. ಆ ರಾಕ್ಷಸರನ್ನು ಜಯಿಸಲು ವಿಶೇಷವಾದ ಶಕ್ತಿಯನ್ನು ಸಂಪಾದಿಸಿಕೊಳ್ಳಬೇಕೆಂಬ ನಿರ್ಧಾರದಲ್ಲಿ ಶತಾನೀಕನು ತನ್ನ ವಂಶಜನಾದ ಸಹಸ್ರಾನೀಕನಿಗೆ ಪಟ್ಟ ಕಟ್ಟಿ ತಾನು ಇಂದ್ರನನ್ನು ಈ ವಿಷಯ ತಪಸ್ಸು ಮಾಡಲು ತೊಡಗಿದನು.

ಇದನ್ನು ತಿಳಿದು ದೇವೇಂದ್ರನು ಅವನ ಹತ್ತಿರ ಬಂದು, "ಶತಾನೀಕಾ, ನೀನು ನನ್ನನ್ನು ಕುರಿತು ತಪಸ್ಸು ಮಾಡಿ ಪ್ರಯೋಜನವಿಲ್ಲ. ನೀನು ಎಷ್ಟೇ ವರಶಕ್ತಿಯನ್ನು ಪಡೆದರೂ ರಾಕ್ಷಸನನ್ನು ಜಯಿಸಲಾರೆ, ಹಾನೇ ಅವರನ್ನು ಭೂವಿಯಿಂದ ವಂಚಿಸಿಬಿಡುತ್ತೇನೆ." ಎಂದು ಹೇಳಿದುದರಿಂದ, ಶತಾನೀಕನು ತಪಸ್ಸಿನಿಂದ ವಿರಮಿಸಿದನು.

ಅಂದಿನಿಂದಲೇ ದೇವೇಂದ್ರನು ತನ್ನ ವಜ್ರಾಯುಧದಿಂದ ಭೂವಿಯಲ್ಲಿರುವ ರಾಕ್ಷಸರನ್ನೆಲ್ಲ ಕೊಲ್ಲಲು ತೊಡಗಿದನು, ಅನೇಕ ರಾಕ್ಷಸರು ತಪ್ಪಿಸಿಕೊಂಡು ಪಾತಾಳಕ್ಕೆ ಓಡಿಹೋದರು. ಭೂಮಿಯಲ್ಲಿ ಒಬ್ಬ ರಾಕ್ಷಸನೂ ಕಾಡಲಿಲ್ಲ. ದೇವೇಂದ್ರನು ವಿಜಯ ಗರ್ವದಿಂದ ಎಲ್ಲಾ ಪ್ರಮುಖರನ್ನೂ ಕರೆದು ಭಾರಿಯಾದ ಔತಣ ಕೂಟವನ್ನು ಏರ್ಪಡಿಸಿದನು.

ಈ ದೊಡ್ಡಲೇ ಕಂಭಟಾಸುರನೆಂಬವನು ಇಂದ್ರನನ್ನು ಜಯಿಸಬೇಕೆಂತಲೇ ಬ್ರಹ್ಮನನ್ನು ಕುರಿತು ಘೋರ ತಪಸ್ಸನ್ನು ಮಾಡತೊಡಗಿದನು. ಏಕೆಂದರೆ ರಾಕ್ಷಸ ಕುಲಕ್ಕೆ ಇಂದ್ರನೇ ಶತ್ರುವಾಗಿರಬೇಕು ಎಂಬುದು ಅವನಿಗೆ ಗೊತ್ತಿತ್ತು.

ಬ್ರಹ್ಮನು ಅವನ ಮುಂದೆ ಕಾಣಿಸಿ, ಅವಶ್ಯವಾದ ವರಗಳು ಬೇರೆ ಯಾವ ವರವಾದರೂ ಕೇಳು ಎಂದಾಗ, ತನಗೆ ದೇವತೆಗಳಿಂದಾಗಲೀ, ಭೂಮಿಯಲ್ಲಿ ಹುಟ್ಟಿದವರಿಂದಾಗಲೀ ಮರಣ ಬಾರದಂತೆ ವರವನ್ನು ಬೇಡಿದ ಕಂಭಟಾಸುರ. "ತಥಾಸ್ತು" ಎಂದ ಬ್ರಹ್ಮ.

ಹೀಗೆ ಕಂಭಟಾಸುರನು ತಪಸ್ಸಿನಿಂದ ಹಿಂದಿರುಗಿದಾಗ, ಭೂವಿಯ ರಾಕ್ಷಸರೆಲ್ಲಾ ಇಂದ್ರನ ಹತ್ಯಮಾಡಿದ ಸಂಗತಿ ಅವನಿಗೆ ತಿಳಿಯಿತು. ಆಗ ಅತ್ಯಂತ ರೌದ್ರಾಕಾರನಾಗಿ ನೂತನೋತ್ಸಾಹದ ರಾಕ್ಷಸ ಸೇನೆಯೊಂದಿಗೆ ದೇವಲೋಕದ ಮೇಲೆ ಧಾಳಿ ತೆಗೆದನು. ಈ ಸಾರಿ ಇಂದ್ರನ ವಜ್ರಾಯುಧವೂ ನಿರರ್ಥಕವಾಯಿತು. ದೇವತೆಗಳೆಲ್ಲಾ ಹೆದರಿ ಓಡಿದರು. ಇಂದ್ರನು ಸಿಂಹಾಸನ ಚ್ಯುತನಾಗಿ ದಿಕ್ಕಿಲ್ಲದಹಕ್ಷಂತೆ ಹಿಮಾಚಲದ ಹಿಮದೊಳಕ್ಕೆ ಅಡಗಿಕೊಂಡನು.

ಗರ್ವಕರಗಿದ ಇಂದ್ರನು ಈಗ ತಾನಾಗಿ ಶತಾನೀಕನ ಬಳಿಗೆ ಹೋಗಿ, ಅವನ ಸಹಾಯವು ತಕ್ಷಣ ಬೇಕೆಂದು ಬೇಡಿದ. ಶತಾನೀಕನು ಎಣೆಯಿಲ್ಲದ ಕಾರ್ಯ ಪರಾಕ್ರಮಶಾಲಿ. ಅಂತೆಯೇ ತನ್ನ ಯೂವ ಶಕ್ತಿ ಸೇನೆಯೊಂದಿಗೆ ಇಂದ್ರನಿಗೆ ಸಹಾಯಕನಾಗಿ ಎದ್ದನು. ಇಂದ್ರನೂ ಇತರ ದೇವತೆಗಳನ್ನೂ ತನ್ನ ಸಹಾಯಕ್ಕೆ ಕೂಡಿಸಿ; ರಾಕ್ಷಸರ ಮೇಲೆ ಯುದ್ಧಕ್ಕೆ ತೊಡಗಿದನು. ಆದರೆ ದೇವರಾಜಧಾನಿ ಇಂದ್ರನಿಗೆ ಸಿಗುವ ಬದಲಾಗಿ, ಶತಾನೀಕನು ಕರಿಘಟಾಸುರನ ಕೈಯಲ್ಲಿ ಸಿಕ್ಕು, ಇಂದ್ರನು ಸೋತು ಸುಣ್ಣಾಗಿ ಓಡಿಹೋಗಿ, ಬ್ರಹ್ಮದೇವನ ಪಾದಕ್ಕೆ ಬಿದ್ದು ಬೊರೆ ಇಟ್ಟನು.

"ಇಂದ್ರಾ, ಕರಿಘಟಾಸುರನ ಸಾವು ಶತಾನೀಕನ ಕೈಯಲ್ಲೇ ಇದೆ. ನಿನ್ನ ಪಶ್ಚಾದಿಂದ ಹೀಗಾಯಿತು. ನಾನು ಅವನಿಗೆ ಕೊಟ್ಟ ವರವನ್ನು ಯೋಚಿಸಿ ನೋಡು ತ್ತ, ಕಾಲ ಕಾರ್ಕ್ಷೆ ಮಾಡಿ ನಿನ್ನ ಸ್ಥಾನವನ್ನು ಮರಳಿಗಳಿಸಿಕೊ" ಎಂದ ಬ್ರಹ್ಮ.

ಹೀಗೆ ಬ್ರಹ್ಮಾನುಗ್ರಹವಾದ ಮೇಲೆ ಇಂದ್ರನ ಪುನರ್ಜನ್ಮ ಹಗುರಾಯಿತು. ಅವನು ಎಲ್ಲಾ ದೇವ ಗಣಗಳನ್ನೂ ಅಪ್ಸರ ಸ್ತ್ರೀಯರನ್ನೂ ಒಂದುಗೂಡಿಸಿ, ದೊಡ್ಡ ದೊಂದು ವಿಜಯೋತ್ಸವವನ್ನು ಏರ್ಪಾಡು ಮಾಡಿದನು. "ಅಮರಾವತೀ ಪ್ರಾಪ್ತಿಗೆ ಪ್ರಾರಂಭೋತ್ಸವ" ಎಂದು ಆ ಉತ್ಸವಕ್ಕೆ ಹೆಸರಿಟ್ಟು ಶತಾನೀಕನ ಪುತ್ರನಾದ ಸಹಸ್ರಾನೀಕನನ್ನೂ ವಿಶೇಷ ಅತಿಥಿಯಾಗಿ ಆಶ್ವಾನಮಾಡಿದನು. ಅವನ ಮುಂದೆ ದೇವತೆಗಳ ವಿವಿಧ ಹಾವಭಾವ ಭಂಗಿ ಭೋಗ ವಿಲಾಸಗಳೊಡನೆ ಶೃಂಗಾರ ರಸವನ್ನು ಚಿಮ್ಮಿಸುವ ಔತಣಕೂಟವು ಜಾಗುತ್ತಿರಲು, ಯುವಕನಾದ ಸಹಸ್ರಾನೀಕನು ಉತ್ಸಾಹದಿಂದ ಅದರಲ್ಲಿ ಭಾಗಿಯಾಗಲಾರದೆ ಹೋದನು. ಎಲ್ಲರೂ ಅವರವರ ಪತ್ನಿಯರೊಂದಿಗೆ ನೃತ್ಯಗಾನ ಪಾನ ಸರಸ ವಿನೋದಗಳಲ್ಲಿರುವಾಗ, ಸಹಸ್ರಾನೀಕನು ಒಬ್ಬಂಟಿಗನಾಗಿ ಮೂಲೆಯಲ್ಲಿ ಕುಳಿತು ನೋಡುತ್ತಿರಬೇಕಾಯಿತು.

ಆಗ ಇಂದ್ರನು ಅವನನ್ನು ಕುರಿತು, "ಅಂದ ಹಾಗೆ ನಿನಗಿನ್ನೂ ವಿವಾಹವಾಗಿಲ್ಲ? ಏಕೆ ಮಾಡಿಕೊಳ್ಳಲಿಲ್ಲ?" ಎಂದು ಕೇಳಿದ.

"ನನ್ನ ತಂದೆ ರಾಕ್ಷಸರ ಪೀಡೆಯನ್ನು ಪರಿಹರಿಸಲಿಕ್ಕಾಗಿಯೇ ಶ್ರದ್ಧೆ ವಹಿಸಿದ್ದರು. ಕೊನೆಗೆ ರಾಕ್ಷಸರ ಕೈಯಲ್ಲಿಯೇ ಸತ್ತರು. ಆ ಚಿಂತೆಯಲ್ಲಿ ಮದುವೆಯ ನೆನಪೇ ಬಂದಿರಲಿಲ್ಲ."

'ಅದು ಪಿತೃ ಮತ್ತು ಸಹಜ. ನಿನ್ನ ತಂದೆಯ ಭಾವವು ಈಡೇರಬೇಕಾದರೆ ನೀನು ಉತ್ಸಾಹದಿಂದ ಕಾರ್ಯ ಮಗ್ನನಾಗಬೇಕು. ನಿನ್ನ ಚಿಂತೆಗೆ ನಾನೂ ಕಾರಣನಾಗಿರುವುದರಿಂದಲೇ ನಿನ್ನ ಶ್ರದ್ಧೆಯೂ ನಿನ್ನ ಮೇಲಿದೆ. ನಿನಗೆ ತಕ್ಕ ಕನ್ಯೆ ಅಯೋಧ್ಯಾ ರಾಜಕುವರಿ ಭೃಂಗಾವತಿ. ನೀನು ಹೋಗಿ ಕೇಳುವುದೇ ತಡ, ಅವಳೊಂದಿಗೆ ನಿನ್ನ ವಿವಾಹವಹೊಗಬಹುದೆ. ಈಗಲೇ ಹೋಗಿ ಅವಳನ್ನು ಮದುವೆಯಾಗು'.

ಮೊದಲೇ ಶೃಂಗಾರರಸ ಕಲ್ಪನೆಗಳಿಗೆ ಸಿಕ್ಕಿಬಿದ್ದ ಸಹಸ್ರಾನೀಕನು, ಇಂದ್ರನ ಸೂಚನೆಯಿಂದ ಭೃಂಗಾವತಿಯ ಸೌಂದರ್ಯವನ್ನು ಊಹಿಸಿಕೊಳ್ಳುತ್ತ ಅಯೋಧ್ಯೆಯ ದಾರಿ ಹಿಡಿದನೆ; ಅಯೋಧ್ಯೆಯ ಹತ್ತಿರ ಒಂದು ವನದ ದಾರಿಯಲ್ಲಿ ಪಯಣವಾಗ ಪರಧ್ಯಾನದಲ್ಲಿದ್ದ ಅವನಿಗೆ ಪಯಣಿಸಿಗೆ ಕುಳಿತಿದ್ದ ಒಬ್ಬ ಮುನಿ ಕಾಣಿಸಲಿಲ್ಲ. ಕಾಲಿನಿಂದ ಮುನಿಸುತ್ತನ್ನು ತಾಕಿಸಿಕೊಂಡು, ಅದೇನೂ ತಿಳಿಯದೆ ಮುಂದಡಿ ಇಟ್ಟು ಹೋಗಿಬಿಟ್ಟನು. ಎಚ್ಚರಕ್ಕೆ ಬಂದ ಮುನಿ ಕೋಪದಿಂದ ಅವನನ್ನು ನೋಡಿ, "ಸ್ತ್ರೀಚಿಂತೆಯಿಂದ ಕಾಲತಿಳಿಯದೆ ಪಡೆಯಂತ್ರಿರುವ ಅವನಿಗೆ ಪ್ರಿಯಳ ವಿಯೋಗ ದುಃಖವು ಕವಿಯಲಿ" ಎಂದು ಶಪಿಸಿದನು.

ಈ ಶಾಪದ ಮಾತುಗಳು ಕಿವಿಗೆ ಬಿದ್ದ ಕೂಡಲೇ ಸಹಸ್ರಾನೀಕನು ಹಿಂದಿರುಗಿ ನೋಡಿ, ತನ್ನ ತಪ್ಪನ್ನು ತಿಳಿದುಕೊಂಡು ಮುನಿಯ ಕಾಲಿಗೆ ಬಿದ್ದು, "ತಿಳಿಯದೆ ತಪ್ಪು ಮಾಡಿದೆ. ಕ್ಷಮಿಸಿ ಅನುಗ್ರಹಿಸಬೇಕು" ಎಂದು ಬೇಡಿಕೊಂಡನು.

ಮುನಿಯು ಕನಿಕರಿಸಿ, "ನಿನ್ನ ಪುತ್ರನಿಂದ ವಿಯೋಗದ ದುಃಖವು ಹೋಗುತ್ತದೆ. ಸಂತೈಸಿಂದಿರು" ಎಂದು ಅಭಯ ಹೇಳಿ ಕಳುಹಿಸಿದನು.

ಇಂದ್ರ ವಾಕ್ಯದಲ್ಲಿ ಅಚಲ ವಿಶ್ವಾಸವಿಟ್ಟ ಸಹಸ್ರಾನೀಕನು ಅಯೋಧ್ಯೆಯ ರಾಜನ ಬಳಿಗೆ ಹೋಗಿ, ತಾನು ಯೂರಿಂಬುದನ್ನು ಹೇಳಿ "ಕನ್ಯಾರ್ಥಿಯಾಗಿ ಬಂದಿದ್ದೇನೆ" ಎಂದನು.

ಅವಳ ಮಾತನ್ನು ಕೇಳಿ ಅಯೋಧ್ಯೆಯ ರಾಜನು ಗಾಬರಿಯೂದನು. ಕಾರಣ ಏನೆಂದರೆ ಭೃಂಗಾವತಿಯನ್ನು ನೋಡಿದರೆ ಯೂವನವೂ ಮುದುವೆ ಮಾಡಿಕೊಳ್ಳಲಾರೆ. ಅವಳನ್ನು ವರನ ದೃಷ್ಟಿಯಿಂದ ನೋಡುವವನ ಕಣ್ಣಿಗೆ ಅವಳು ವಿಕಾರವಾಗಿ ಕಾಣಿಸುವಳು. ಒಬ್ಬಿಬ್ಬರು ಅವಳನ್ನು ನೋಡಿ ಹೋದ ಮೇಲೆ ಅವಳು ವಿಕಾರಳಾಗಿರುವಳೆಂದು ಪುಕಾರು ಹರಡಿ ದುಷ್ಕರಿಂದ ಯೂವ ವರನೂ ಬಾರದೆ ಹೋಗಿದ್ದಮ. ಅವಳು ಹಾಗೆ ಕಾಣಿಸಲು ಕಾರಣ ಕೂಡಾ ಅದೇ ಯೂವನವನದಲ್ಲಿರುವ ಮುನಿಯೇ. ಒಂದು ದಿನ ಭೃಂಗಾವತಿ ಆ ಯೂವನಕ್ಕೆ ಹೋಗಿ ಮುನಿಯು ಸೊರಕಲು ರೂಪವನ್ನು ನೋಡಿ ಪಕ್ಕು ಕಾಡಿಸಿದ್ದೆ ತೂಡಿಸಿದುದಕ್ಕೆ ಕುಪಿತನಾದ ಆತನು, "ನಿನ್ನನ್ನು ನೋಡುವ ಪುರುಷನ ಕಣ್ಣಿಗೆ ನೀನೂ ವಿಕಾರವಾಗಿ ಕಾಣಿಸಿ ಘಗುವಿಧ ಪಾಲಾಗು" ಎಂದು ಶಪಿಸಿದನು. ಇದನ್ನು ತಿಳಿದು ತಂದೆಯೂ ಮಗಳೂ ಮುನಿಯ ಕಾಲಿಗೆ ಬಿದ್ದು ಕ್ಷಮೆ ಕೇಳಿಕೊಂಡಾಗ, "ಇವಳನ್ನು ನೋಡದೆಯೇ ಮದುವೆ ಮಾಡಿಕೊಳ್ಳುವ ವರನಿಂದ ಈ ಶಾಪ ಹೋಗುತ್ತದೆ" ಎಂದು ಅನುಗ್ರಹ ತೋರಿದ್ದ. ನೋಡದೆ ಯೂವ ಪುರುಷ ಮದುವೆಯೂಗುವನು?

ಅದಕ್ಕೇ ಗಾಬರಿಯೂದ ಅಯೋಧ್ಯಾ ರಾಜ, 'ನನ್ನ ಮಗಳನ್ನು ಮದುವೆಗೆ ಮೊದಲು ನೋಡ ಕೂಡದು. ಈ ವಿಷಯವ ಕ್ಕೆ ಒಪ್ಪಿಕೊಳ್ಳುವಿಯೂ?' ಎಂದು ಸಹಸ್ರಾನೀಕನನ್ನು ಕೇಳಿದ.

"ಒಪ್ಪಿಕೊಳ್ಳುತ್ತೇನೆ. ಇಂದ್ರನ ವಾಕ್ಯದಲ್ಲಿ ನನಗೆ ಪೂರ್ಣ ನಂಬುಗೆಯಿದೆ. ಇಂದ್ರನೇ ನನ್ನನ್ನು ಕಳುಹಿಸಿದ್ದಾನೆ" ಎಂದ ಸಹಸ್ರಾನೀಕ.

(ಹನ್ನೊಂದನೇ ಪುಟ ನೋಡಿರಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಪೋಷ್ : 526

ಸಂಪುಟ ೪೯
ಸಂಚಿಕೆ ೪೭
VOL. 49
No. 47

ಸ್ಥಾಪನೆ: 1921

ಸ್ಥಾಪಕರು:
ದಿ| ಎ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೩೦—೭—೧೯೭೦

ವಾರ್ಷಿಕ ಚಂದಾ ರೂ. 10/-

Advt. Rate Rs. 3/- per colm. cm.

ರಾಜ್ಯಪಾಲರ ವ್ಯಾಖ್ಯಾನ

ನಿರುದ್ಯೋಗ ದೇಶವೀಡಕ ಸಮಸ್ಯೆ. ಇದರ ಪರಿಹಾರ ವಿಧಾನದ ಬಗ್ಗೆ ಭಿನ್ನ ಮತ; ಆದರೆ, ಪರಿಹಾರ ಬೇಕೆಂಬ ವಿಚಾರದಲ್ಲಿ ಏಕಮತ. ದಿನದಿಂದ ದಿವಸಕ್ಕೆ ಸುಶಿಕ್ಷಿತರ ಸಂಖ್ಯೆಯಲ್ಲಿ ಏರಿಕೆ, ಜತೆಗೆ ನಿರುದ್ಯೋಗದಲ್ಲೂ ಹೆಚ್ಚಿಕೆ. ನವ್ಯ ಆಫೀಸುಗಳು, ಶಾಲೆ ಕಾಲೇಜುಗಳು, ಸರಕಾರೀ-ಖಾಸಗಿ ಯೋಜನೆಗಳು "ಶಿಕ್ಷಿತ"ರೆಲ್ಲರಿಗೂ ಉದ್ಯೋಗ ದೊರಕಿಸಿಕೊಡುವಲ್ಲಿ ಅತ್ಯಂತ ವಿಫಲವಾಗಿವೆ; ಇದು ಸಹಜವೇ. ಬೇರೆ ಬೇರೆ ಕ್ಷೇತ್ರಗಳಲ್ಲಿ ಯಂತ್ರಗಳು ಬಳಕೆಯಲ್ಲಿ ಬಂದುದರಿಂ ಪರಿಣಾಮವಾಗಿ ಯೂ ಕೆಲವಾರು ಉದ್ಯೋಗಾವಕಾಶಗಳು ಕಡಮೆಯಾದುವು. ಏಕ ತ್ರಿರುವ ಜನಸಂಖ್ಯೆಯ ಪ್ರಮಾಣದಲ್ಲಿ ಜೀವನಕ್ಕೆ ಅತ್ಯಗತ್ಯವಾದ ಆಹಾರವನ್ನೇ ಬೆಳೆಸುವಲ್ಲಿ ಆಶಕ್ತರಾದ ನಾವು ನಿರುದ್ಯೋಗ ಸಮಸ್ಯೆಯನ್ನು ಬಿಡಿಸ ಬಲ್ಲೆವೆ? ನಿರುದ್ಯೋಗವು ಹೆಚ್ಚುತ್ತಿರುವುದಕ್ಕೆ "ಉದ್ಯೋಗ" ಶಬ್ದಕ್ಕೆ ನಮ್ಮಲ್ಲಿ ಹೆಚ್ಚಿನವರು ಕಟ್ಟಿಕೊಂಡ ಅರ್ಥ ಮತ್ತು ಆಶಕ್ತತೆಗಳೇ ಕಾರಣ. ಒಂದು ಕಾಲದಲ್ಲಿ ದೇಶಾಂತ ಇಂಜಿನಿಯರರಿಗೆ ಸುಲಭದಲ್ಲಿ "ಉದ್ಯೋಗ" ದೊರೆಯುತ್ತಿತ್ತು. ಇಂದು ಪರಿಸ್ಥಿತಿ ಬದಲಾಗಿದೆ. ನಿರುದ್ಯೋಗಿ ಇಂಜಿನಿಯರು ಬೀದಿಗುಂಟು ಇದ್ದಾರೆ. ಬೇರೆಯವರಿಯಲ್ಲಿ ವೇತನಕ್ಕೆ ನಿಲ್ಲುವುದೇ ನಮ್ಮ ಉದ್ಯೋಗದ ರಹಸ್ಯ.

ಈ ಅರ್ಥವಿರುವತೆಗೆ ದೇಶ ಬೆಳೆಯುವುದಿಲ್ಲ. 'ನಮ್ಮ ಇಂಜಿನಿಯರರು ಸ್ವತಂತ್ರವಾಗಿ ಉದ್ಯೋಗ ಮಾಡಬೇಕು'ಎಂಬ ಕರೆ ಎಲ್ಲರೂ ಕೇಳಿದರು; ಆದರೆ, ಇದಕ್ಕೆ ಉತ್ತೇಜನ ದೊರೆಯಲಿಲ್ಲ. ಸುಶಿಕ್ಷಿತರಿಗೆ ಸ್ವತಂತ್ರ ಉದ್ಯೋಗ ಮಾಡಿಕೊಳ್ಳಲು ಅರ್ಥಿಕ ಸೌಲಭ್ಯಗಳನ್ನು ನೀಡಲು ಕೆಲವು ಬ್ಯಾಂಕುಗಳೂ ಮುಂದೆ ಬಂದುವು. ಆದರೆ, ಇದರ ಸದುಪಯೋಗ ಮಾಡಿಕೊಳ್ಳುವವರ ಸಂಖ್ಯೆಯೂ ಕಡಿಮೆ. ಅಂದರೆ, ಸ್ವತಂತ್ರ ಉದ್ಯೋಗವೆಂದರೆ, ಕೈಕಸರು ಮಾಡಬೇಕು; ಜವಾಬ್ದಾರಿ ಹೊರಬೇಕು—ಈ ಸಂಕಷ್ಟಗಳಿಗೆ ಅನುಭವಿಸಬೇಕು? ಕುರ್ಚಿಯಲ್ಲಿ ಆಸ್ತಿ ನೀಗೆ ಮುರಿದುದಂತೆ ಕುಳಿತು ತೂಕಡಿಸುತ್ತ ತಿಂಗಳ ಕೊನೆಗೆ ಹೂರಾರು ರೂಪಾಯಿ ಕೈಹಿಡಿಯುವುದೇ ಉದ್ಯೋಗವೆಂಬ ಕಲ್ಪನೆ ಅಚ್ಚಳಿಯದೆ ನಮ್ಮ ಸುಶಿಕ್ಷಿತರಲ್ಲಿ ಮೂಡಿದೆ; ಇಂತಹ ವಿಷ ಬೀಜ ಬಿತ್ತಿದವರು ಆಂಗ್ಲೇಯರಾದರೂ ಸ್ವತಂತ್ರರಾದ ಬಳಿಕ ನಾವು ಈ ಬೀಜವನ್ನೇ ಮತ್ತೂ ಮತ್ತೂ ಬಿತ್ತನೆ ಮಾಡುತ್ತಲೇ ಬಂದೆವು. ಕಾಯಕಕ್ಕೆ ಹೊಸ ಆಸ್ಪದವೂ ಇಲ್ಲದೆ ಪಸ್ತಕದ ಬದನೆಕಾಯಿಯ ಸವಿಯನ್ನು ವರ್ಣಿಸುವುದೀ ಧರ್ಮ ಶಿಕ್ಷಣದ ತಿರುಳು. ಪ್ರತ್ಯಕ್ಷ ಕೆಲಸಗಳ ಬಗ್ಗೆ ಮಾರ್ಗದರ್ಶನವಿದ್ದರೂ ಆ ಪುಗಳಿಗೆ ಅನುಕೂಲತೆಗಳೇ ಇಲ್ಲ. ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ಇದರಲ್ಲಿ ಆಸಕ್ತಿಯೇ ಇಲ್ಲ. "ವರ್ಕ್ ಎಕ್ಸ್‌ಪೀರಿಯನ್ಸ್" ಗೆಂದು ಪ್ರೌಢ ಶಾಲೆಗಳಲ್ಲಿ ಈಗ ವಾರಕ್ಕೆ ಮೂರು ತಾಸು ವಿನಿಯೋಜಿಸಿದ್ದರೂ "ವರ್ಕ್" ನಲ್ಲಿ ತರಬೇತಿ ಹೊಂದಿದ ಶಿಕ್ಷಕರು ಎಲ್ಲಿದ್ದಾರೆ? ವರ್ಕ್‌ನಲ್ಲಿ ಎಕ್ಸ್‌ಪೀರಿಯನ್ಸ್ ಬರುವಂತೆ ಅನುಕೂಲತೆಗಳು ಎಲ್ಲಿವೆ? ಇವಿಲ್ಲದೆ ಮೂರು ತಾಸು ಸಮಯವನ್ನು ಕೊಂದು ತಿನ್ನುವುದೇ ಪರಿಪಾಠ ಎಳೆಹರೆಯದಲ್ಲಿ ಶರೀರಶ್ರಮದಿಂದ ದೂರವೋಡುವ ಹವ್ಯಾಸ ಮೊಳೆದೋರಿದ ಮೇಲೆ ಅವರು ಕೈಕೆಸರು ಮಾಡುವುದುಂಟೆ?

ಕರ್ನಾಟಕದ ರಾಜ್ಯಪಾಲ ಶ್ರೀ ಧರ್ಮವೀರರು ರಾಜ್ಯದ ಇಂಜಿನಿಯರರಿಗೆ ಸಂಘದ ಸುವರ್ಣ ಮಹೋತ್ಸವದ ವೇಳೆ ಮಾಡಿದ ಭಾಷಣದಲ್ಲಿ ಒಂದು ಮುತ್ತು ಉದುರಿಸಿದರು: "ನೌಕರಿ ಮಾಡಿಕೊಂಡು ಕೆಲಸಗಾರರಿಗೆ ಮಾರ್ಗದರ್ಶನ ನೀಡಬಲ್ಲ ಇಂಜಿನಿಯರು ಸಮಾಜಕ್ಕೆ ಬೇಕು." ಇದು ಇಂಜಿನಿಯರರಿಗೆ ಮಾತ್ರವಲ್ಲ, ಎಲ್ಲ ಉದ್ಯೋಗದಾರರಿಗೂ ಅನ್ವಯಿಸುವ ಸಮಂಜಸೋಕ್ತಿ. ಇಂದು ಎಲ್ಲರೂ ದುಡಿಸುವವರನ್ನೇ ಹೊರತು ದುಡಿಯುವವರು ಇಲ್ಲ. 'ಹಾಗೆ ಆಗ ಬೇಕು, ಹೀಗೆ ಆಯಿತು' ಎನ್ನುವವರು ಹೇಗೆ ಮಾಡ ಬೇಕೆಂದು ಹೇಳುವುದನ್ನು ಕಲಿತು ಕೊಂಡಿದ್ದಾರೆಯೇ ಹೊರತು ಮಾಡುವುದನ್ನು ಕಲಿತುಕೊಂಡಿಲ್ಲ. ಜಪಾನು, ಇಂಗ್ಲೆಂಡ್, ಅಮೆರಿಕೆ, ರಶ್ಯ ಮೊದಲಾದೆಡೆ ಸಾಮಾನ್ಯ ಪ್ರಾಥಮಿಕ ಶಾಲಾ ಶಿಕ್ಷಣದ ಜತೆಗೆ ಸರಳ ಯಂತ್ರ ವಿಧಾನಗಳನ್ನು ಅರಿತುಕೊಳ್ಳುವ ಅವಕಾಶ ಪ್ರತಿಯೊಬ್ಬರಿಗೂ ಇದೆ. ಪ್ರತಿಯೊಬ್ಬರೂ ತಮ್ಮ ಆಸಕ್ತಿಯ ಕ್ಷೇತ್ರಗಳಲ್ಲಿ ಯಂತ್ರ—ತಂತ್ರ—ಕೃಷಿ ಇತ್ಯಾದಿಗಳ ರಹಸ್ಯವನ್ನು ಅನುಭವಿಸಿ ಕಲಿಯುತ್ತಾರೆ. ಪ್ರತಿಯೋಗದ

ಗೇಹರಾಜ್ಯದಲ್ಲಿ

ಕನ್ನಡದ ಮೇಲೆ ಆರಾಬಟ್ಟೆ ಧಾಳಿ

'ಆಲ್ರಿ, ಬೆಂಗಳೂರಲ್ಲಿ ಹಿಂದೀ ಮಾಧ್ಯಮದ ಕಾಲೇಜೊಂದು ಆರಂಭವಾಯ್ತಂತಲ್ಲಾ....'

"ಅದು ಬರೀ ಕಾಲೇಜು ಅಲ್ಲಕಣೆ, ಬಿ. ಎಡ್. ಕಾಲೇಜು."

"ಅಂದರೆ, ಪದವೀಧರರಿಗೆ ಶಿಕ್ಷಣ ತರಬೇತಿ ನೀಡುವುದು...."

'ಹ್ಞೂಂ...'

"ಆಲ್ರಿ, ನಮ್ಮ ರಾಜ್ಯದಲ್ಲಿ ಅದಕ್ಕೆ ಬೇಕಾದಷ್ಟು ಜನ ಸಿಗ್ತಾರಾ?'

"ಆಯ್ಯೋ, ಅದಕ್ಕೇನಂತೆ? ನಮ್ಮ ರಾಜ್ಯದಲ್ಲಿ ಸಿಗದಿದ್ದರೆ, ನೆರೆಯ ರಾಜ್ಯಗಳಲ್ಲಿ ಇದ್ದಾರೆ."

"ಅಂದ್ರೆ ನಮ್ಮ ರಾಜ್ಯದ ಕಾಲೇಜಿನಲ್ಲಿ ತರಬೇತಿಕೊಟ್ಟು ಬೇರೆ ರಾಜ್ಯಗಳಿಗೆ ಶಿಕ್ಷಕರನ್ನ ಓದಗಿಸ ಹೊರೊಂಟ್ತಾಯ್ತು."

"ನೀನು ಏನು ಬೇಕಾದ್ರೂ ತಿಳಿದುಕೋ. ಇದೂ ಒಂದು ಯೋಜನೆ. ಅದಕ್ಕೆ ಸರಕಾರದ ಸಹಾಯ...."

"ಆಲ್ರಿ, ಕೇಂದ್ರದ ಶಿಕ್ಷಣ ಖಾಬೆಸರು ರಾಜ್ಯ ಸಚಿವರು ಇದಕ್ಕೆ ಸಂಪೂರ್ಣ ಸಹಕಾರ. ಅನುಕೂಲ ನೀಡುವುದಾಗಿ ಹೇಳಿದ್ದಾರಂತೆ...."

'ಹೌದು...'

"ಅಲ್ಲ ನೋಡಿ, ಕೆಲವು ಸಮಯ ಮೊದಲು ರಾಜ್ಯಕ್ಕೆ ಹಿಂದೀ ಮಾಧ್ಯಮದ ವಿಶ್ವವಿದ್ಯಾಲಯ ಬೇಕೆಂದು ಹೇಳಲಾಯ್ತು...."

'ಹೂರೋ ಕೆಲವರು ಹೇಳಿದರು; ಆದರೆ, ಅದಕ್ಕೆ ಪತ್ರಿಕೆಗಳೂ ಜನರೂ ವಿರುದ್ಧ ಮಾತಾಡಿದರಲ್ಲ?'

'ಹೌದು, ಅದಕ್ಕೇ ನೋಡಿ, ಈಗ ವಿಶ್ವವಿದ್ಯಾಲಯ ಸ್ಥಾಪನೆ ಮಾತು ಬದಿಗಿಟ್ಟು ಹಿಂದಿ ಮಾಧ್ಯಮದ ಕಾಲೇಜುಗಳ ಸ್ಥಾಪನೆಗೆ ಸರಸ್ಕಾರ ಪ್ರಯತ್ನಿಸುತ್ತಾರಂತೆ.'

"ಹ್ಞೂಂ...ಹತ್ತಾರು ಕಾಲೇಜುಗಳು ಆರಂಭವಾಯಿತೆಂದಿಟ್ಟುಕೊಳ್ಳಿ, ಮತ್ತೇನು? ವಿಶ್ವವಿದ್ಯಾಲಯ ತಾನಾಗಿಯೇ ಸ್ಥಾಪನೆ ಹೊರಡುತ್ತೆ...."

'ನೋಡಿ, ಎಂಥ ಬುದ್ಧಿವಂತಿಕೆಂತ? ಅಡಿಪಾಯ ಕುಸ್ತಾರೆ ನೋಡಿ, ಹಿಂದಿಯನ್ನ ಹೇರಿ ನೀಲೂ ಕೆಲಸವಾದ ಮೇಲೆ ಇಂತ...'

'ಅಸಲೀ ಜಾಡಲ್ಲಿ ಕಲಿಸಂಕಾರಿ—ರಾಜ್ಯ ರಾಜ್ಯಗಳ ವ್ಯವಹಾರಕ್ಕೆ ಅನುಕೂಲ ವಾಗಲೆಂಬ ದೃಷ್ಟಿಯೊಂದು, ರಾಷ್ಟ್ರದ ಏಕತೆಗೆ ಸಾಧನವೆಂಬ ದೃಷ್ಟಿ ಎರಡೂ—ಇವುಗಳಿಂದ ಪೂರ್ವ ಹಿಂದಿಗೆ ಪ್ರಾಧಾನ್ಯ ನೀಡುತ್ತಿದೆ.'

"ಆಲ್ರಿ, ಅದ್ರ ಮೇಲೆ ಇತರ ಭಾಷೆಗಳ ಮೇಲೆ ಪಕ್ಷಪಾತ ತೋರುತ್ತಿಲ್ಲ ಅಂತಲೂ ಹೇಳ್ತಾರೆ."

'ಹೌದು....'

"ನೋಡಿ, ಹಿಂದಿಗೆ ಪ್ರಾಧಾನ್ಯ ನೀಡುವಾಗ ಇತರ ಭಾಷೆಗಳ ಬಗ್ಗೆ ಪಕ್ಷಪಾತ ತೋರಿಸದಂತಾಗಲಿಲ್ಲ ವೇನು?'

"ಹೇಗೆ? ನೋಡು, ಪ್ರತಿ ಭಾಷಾಭಿವೃದ್ಧಿಗೂ ಒಂದೊಂದು ಕೋಟಿ ರೂಪಾಯಿ ಅಯೂ ಭಾಷಾರಾಜ್ಯದ ಸರಕಾರಕ್ಕೆ ಕೇಂದ್ರ ಕೊಡುತ್ತದೆ. ಆಗ ಹಿಂದಿಯು ಬಗ್ಗೆ ತಾನಾಗಿಯೇ ಹೆಚ್ಚು ಹಣವೊರೆಯುತ್ತದೆ...."

"ಅದು ರಾಜ್ಯಗಳ ಕತೆಯೆಷ್ಟು. ಕೇಂದ್ರ ಸರಕಾರಕ್ಕೆ ಯಾವ ಭಾಷೆ?"

"ಕೇಂದ್ರದ ಭಾಷೆ ಕಿಚಡಿಯೆನ್ನು. ಆ ಭಾಷೆಯನ್ನೇ ಅದು ಎತ್ತಿ ಹಿಡಿದಿದೆ.'

'ಅಲ್ಲ, ರಾಜ್ಯ ರಾಜ್ಯಗಳ ವ್ಯವಹಾರ ಹಿಂದಿಯಲ್ಲಿ ಆಗ ಬೇಕು ಎಂದು ಕೇಂದ್ರ ಬಯಸಿದ್ದು ಪಕ್ಷಪಾತ; ಹಿಂದಿಯೊಂದೇ ರಾಷ್ಟ್ರೀಯ ಏಕತೆಗೆ ಸಾಧನವೆನ್ನುವುದೂ ಅಜ್ಞಾನದ ಪರಮಾವಧಿ—ಏನಂತೀರಿ?"

"ಏನನ್ನೋದು? ಅಲ್ಲ, ನೀನ್ಯಾಕೆ ತಮಿಳ್ನಾಡಿನ ಡಿಎಂಕೆ ನಾಯಿಕೆ ಹಾಗೆ ಮಾತಾಡ್ತೀಯ?"

"ಇಜ್ರಿಲ್ಲೇನಂಟ. ? ಹಿಂದಿಯನ್ನು ಹೇರಬಾದಿಲ್ಲ ಎಂದು ಹೇಳುವವರು ಎಂಥ ವಿರೋಧಾಭಾಸ ಆಡ್ತಾರೆ-ಮಾಡಾರೇಂತ...."

'ಅಲ್ರೀ; ಆಡಿದಂತೆ ಮಾಡ್ಲಿಕ್ಕೆ ಅನ್ರೇನು ಸಕ್ಕ ಹುರಿಬ್ಟಂದ್ರನ ಕುಲದವ್ರೆ?'

"ಅಲ್ಲಾ, ಅಲ್ಲಾ, ರಕ್ತ ಬೀಜಾಸುರನ ಕುಲದವ್ರು....'

'ಇದು ಭಾರೀ ದೊಡ್ಡ ಮೊತಾಯ್ತು."

"ಅದಿರ್ಲಿ, ಈ ಕಾಲೇಜನ್ನು ಬೆಂಗಳೂರಲ್ಲಿ ಆರಂಭ ಮಾಡಿದವ್ರು ಯಾರು?"

"ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವ್ರು...."

"ಅಂದ್ರೆ, ಮದ್ರಾಸಿನವ್ರು...."

"ಹ್ಞೂಂ...."

"ಆಗ ಸರಿಹೋಯ್ತು ನೋಡಿ...."

"ಏನ.?'

'ಅಲ್ಲ, ಮದ್ರಾಸಿನಲ್ಲಿ ತಮಗೆ ಏನೇನೂ ಬೆಂಬಲವಿಲ್ಲವೆಂದು ತಿಳಿದ ಈ ಹಿಂದಿ ವಾದಿಗಳು ಬೆಂಗಳೂರಲ್ಲಿ ತಮ್ಮ ಅಧಿಪತ್ಯಕ್ಕೆ ತೊಡಗಿದ್ದಾರೆ...."

"ಇದ್ರಲ್ಲಿ ಅಧಿಪತ್ಯವೇನು ಬಂತು? ಬೆಂಗಳೂರು ಹಿಂದಿ ಬೆಳೆಯಲು ತಕ್ಕ ರಾಜ್ಯ ಏದಾರುಹಿಂದೀ ಪ್ರಚಾರ ಸಂಸ್ಥೆಗಳು ಇಲ್ಲಿ ಹಿಂದಿಯ ಹೆಸರುಹೇಳಿಬದುಕಿಕೊಂಡಿವೆ. ಹಾಗಾರವಾಗ ಇದೂ ಒಂದು...."

"ಅದೇ ಅಂದದ್ದಲ್ಲ, ನೋಡಿ, ನಮ್ಮ ರಾಜ್ಯದಲ್ಲಿ ಹತ್ತು ಇರಲಿ, ಆದೆಲ್ಲ ನಮ್ಮ ಮೇ ಮದ್ರಾಸಿನವ್ರು ಇಲ್ಲಿ ಬಂದು ಹಿಂದೀ ಪ್ರಚಾರ ಮಾಡಬೇಕಾದ ಅಗತ್ಯ ಈಗ ಏನಿದೆ?"

"ಅದಕ್ಕೆ ಅವ್ರ ಸಂಸ್ಥೆಗಳು ಉತ್ತರ ಭಾರತ ಬೇಕು; ತಂತಮ್ಮಸ್ಥ ಜನರನ್ನು ಆಕರ್ಷಿಸ ಬೇಕು."

"ಹ್ಞೂಂ, ಇದ್ರಲ್ಲಿ ಮದ್ರಾಸಿಗರದ್ದು ತಪ್ಪಿಲ್ಲ ಹಾಗಾದ್ರೆ...."

"ಆಲ್ರೀ, ಮದ್ರಾಸಿನ ಅಂಗ ಸಂಸ್ಥೆಯೊಂದು ದಾರವಾಡದಲ್ಲಿದೆ ತಾನೆ?"

'ಅದು ಹಾಗಾದು; ಮದ್ರಾಸು ಕೇಂದ್ರ, ದಾರವಾಡ ರಾಜ್ಯ. ಕೇಂದ್ರದ್ದೇ ಸರ್ವಾಧಿಕಾರ....'

"ಅಂದ್ರೆ ನಿನ್ನ ಶಂಕೆ ತಿಳಿಯಿಸೊನ್ನು. ಮದ್ರಾಸಿಗರು ಹಿಂದಿಯ ಹೆಸರು ಇಲ್ಲಿಜ ಪಿಸಿ ತಮಿಳರನ್ನು ಎತ್ತಿ ಕಟ್ತಾರೆ...."

"ಹ್ಞೂಂ, ಆಯ್ತೆ...."

"ಅದಕ್ಕೆಲ್ಲ ನಮ್ಮ ದುರ್ಬಲತೆಯೇ ಕಾರಣ...."

'ಅಲ್ಲ ದುರ್ಬಲತೇಂತ ಸುಮ್ಮನೆ ಕುಳಿತರೆ ಹೇಗೆ?'

"ಮತ್ತೆ ಹೊಡುವುದೇನು?!

"ನೋಡು, ನಮ್ಮ ರಾಜ್ಯದಲ್ಲಿ ಹಿಂದಿ ಬೀಜ ಮೊಳಕೆ ಬರಲು ಒಳ್ಳೆಯ ನೆಲವಿದೆ, ಗಾಳಿಯಿದೆ...."

"ಅಂದರೆ?"

"ಇಲ್ಲಿ ಕೇಳು, ಹಾಗಿಲ್ಲವಾದ್ರೆ ನಾಲ್ಕಾರು ಹಿಂದೀ ಪ್ರಚಾರ ಸಂಸ್ಥೆಗಳು ಉಸಿರು ಹಿಡಿದು ಬಂದ ಕತಿದ್ದುವೇನು?"

"ಇಲ್ಲಾನ್ನಿ. ಅದ್ರೂ ನೋಡಿ, ತಮ್ಮ ಪ್ರಚಾರಕರಿಗೆ ಟೋಪಿ ಹಾಕೋದಕ್ಕೂ ಇಲ್ಲಿ ಅನುಕೂಲ ವಾತಾವರಣವಿದೇಂದ ಹಾಗಾಯ್ತು. ಇಲ್ಲಿ ಕನ್ನಡ ಸಿನೆಮೂ ನೋಡೋರಿಗಿಂತ, ಕನ್ನಡ ಗೀತೆ ಕೇಳೋರಿಗಿಂತ ತಮಿಳು ಸಿನೆಮೂ ನೋಡೋರು, ತಮಿಳು ಹಾಡು ಕೇಳೋರು ಹೆಚ್ಚು. ಅವ್ರಿಗಿಂತ ಹಿಂದೀ ಸಿನೆಮೂ—ಹಾಡುಗಳೆಂದ ಆಕರ್ಷಕರಾದವ್ರು ಲಕ್ಷ ಪಟ್ಟು ಹೆಚ್ಚು..."

"ಇದ್ದ ನಡುವೆ ಕಷ್ಟದ ಆನಾಥಶಿಶು"

'ಆಲ್ರೀ, ಕನ್ನಡ ಉಳಿಯು ಬೇಕು ಬೆಳೆಯು ಬೇಕು ಅನ್ನೋದು ಆದಮ್ಮು ಉಳಿಸಬೇಕು ಬೆಳಿಸಬೇಕು...'

"ಹೇಗೆ?"

"ಹೇಗೆಂದ್ರೆ? ಹಿಂದಿ—ತಮಿಳುಗಳ ನಡುವೆ ಜರ್ಜರಿತವಾದ ಕನ್ನಡವನ್ನು ಎತ್ತಿ ಹಿಡಿಯ ಬೇಕು. ಅದನ್ನು ಅತ್ಯಂತ ಆಕರ್ಷಕವಾಗಿ ಬೆಳೆಸಬೇಕು...."

'ಅಂದ್ರೆ, ಕನ್ನಡ ನಾಡಿನಲ್ಲೂ ಕೆಲವರಿಗೆ ಮಾತ್ರ ಕನ್ನಡ ಬೇಕೂಂತಾಯ್ತು'

"ಅಲ್ರೀ, ಫಿನ್ನ ಕನ್ನಡ ಬೇಕು ಯಾರಿಗೆ?"

'ಇನೇನು ಹೀಗಂತೀರಿ?'

"ಕನ್ನಡ ರಾಜ್ಯದಲ್ಲೇ ಕನ್ನಡ ಪಂಡಿತರಿಗೆ ಮೂರು ಕಾಸು ಬೆಲೆಯೆಂದಾದ ಮೇಲೆ ಮತ್ತಾರಿಗೆ ಕನ್ನಡ ಬೇಕು? ಫೆಲಕನ್ನಡವಾದರೆ ಸಾಕು, ಗಾಳಿ ಇಂಗ್ಲೀಷೇ ಆಡಬೇಕು."

"ಆಗ ಕನ್ನಡ, ತಮಿಳು-ಹಿಂದೀ ಯಾವುದೂ ಬೇಡ...."

'ಯಾಕೆ ಬೇಕು?'

"ಕನ್ನಡವನ್ನೂ ಇಂಗ್ಲಿಷ್ ಕಲಿಸುವವ್ರೇ ಕಲಿಸಿದರೆ ಚೆಂದವಿರುತ್ತೇಂತ ತುಕೋಳ ಮಹಾಶಯರು ಮೊತನ್ನು ಕನ್ನಡಿಗರ ಸರ್ಕಾರ ಒಪ್ಪಿಕೊಂಡಿದೆ. ಭಾರತೀಯ ಭಾಷಾ ಪಂಡಿತರು ಆಂಗ್ಲಭಾಷಾ ಪಂಡಿತರಿಗಿಂತ ಸಂಬಳದಲ್ಲಿ ಕಡಮೆ ಮಟ್ಟದವ್ರು?"

'ಇದೊಳ್ಳೇ ಕತೆ. ಆಲ್ರಿ, ಇವ್ರಿಗೆ ಇಂಗ್ಲೆಂಡಿನಿಂದ್ಲೇ ಜನ ತರಬಾಹುದಲ್ಲಾ....'

"ಅಷ್ಟ ಬಡ್ಡೇಕಲ್ಲಾ?"

'ಅಂತೂ ಕನ್ನಡದ ಮೇಲೆ ಮೂರಾಬಟ್ಟೆ ಧಾಳಿ...'

"ಮೂರಾಬಟ್ಟೆ ಯಾಕೆ, ಆರಾಬಟ್ಟೆ ಧಾಳಿಯೂ ನಡೆದೀತು....."

'ಅಂದ್ರೆ ಕನ್ನಡಿಗರು ಹೆಚವೀರ್ಯರ....'

"ಕನ್ನಡಿಗರು ಹೆಚವೀರ್ಯರು ಅಲ್ಲ, ತಾಳ್ಮೆವುಳ್ಳವರು.... ಅದ್ರೂ ನೋಡು, ತಾಳುವಿಗೊಂದು ಮಿತಿಯಿರುತ್ತನೆ...."

'ಹ್ಞೂಂ.... ನಿನ್ನ ಕನ್ನಡಶ್ರೇಷ್ಠ ಶಿಶುಪಾಲವಧೆಯೆಂದು ಮಾಡುತ್ತಾನೆ, ನೋಡೋಣ...'

'ನೋಡು ನೋಡು, ಶಿಶುಪಾಲವಧೆಯಾಗಬೇಕಾದ್ದು ಮೊತ್ತ ಆಗತ್ಯ...."

'ಹೌದು, ಹೌದಪ್ಪ...'

'ಏನ.?'

'ಏನೂ ಇಲ್ಲಾನ್ನಿ....

"ಹಾಪೀ?....'

—ಗೋರಾ.

ಪುಣ್ಯರು, ಫೀತಿಹಿತರು, ಎಷ್ಟೇ ಸುಳಿವೆ ಮಾಡಿಕೊಂಡರೂ ಅದರಲ್ಲಿ ಶಕ್ತಿ ಬರುವುದಿಲ್ಲ. ಪೂರಾರು ಶಾಸ್ತ್ರಗಳನ್ನು ಒಂದೆಡೆ ಇಟ್ಟ ಮಾತ್ರಕ್ಕೆ ಸುಖ ಆಗ ಬಲ್ಲದೇ?

ಂ ಂ ಂ

ಪಶುಗಳ ಸಮೂಹದಲ್ಲಿ ಸ್ಥಿರತೆ ಇರುವ ದಿಲ್ಲ.

ಂ ಂ ಂ

Gram : VISHWA Tel: 29111

When at Bangalore

Stay at

HOTEL NATARAJA

Restaurant, Boarding & Lodging,

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ತನ್ನ ಕಾಲನ್ನು ತಾನೇ ಚುಚ್ಚಿಕೊಂಡರು

ಶ್ರೀಮತಿ ಇಂದಿರಾ ಗಾಂಧಿಯವರ ಕರ್ನಾಟಕದ ಸಂದರ್ಶನವು ಅಧಿಕೃತವೋ ಅನಧಿಕೃತವೋ ಎಂಬ ಪ್ರಶ್ನೆ ದೂರವಿಟ್ಟು ನೋಡವಾಗ ಕೆಲವಂಶ ಅಭಿವ್ಯಕ್ತವಾಗುತ್ತಿದೆ. ಆಕೆಯ ಸಂದರ್ಶನವು ಸಂಪೂರ್ಣ ಸಫಲವಾಗುವಂತೆ ಮಾಡಬೇಕೆಂದೂ ಅದು ನಮ್ಮ ಕರ್ತವ್ಯವೆಂದೂ ಶ್ರೀ ವೀರೇಂದ್ರ ಪಾಟೀಲರು ಕರೆ ನೀಡಿದ್ದರು. ಸಚಿವ ಸಂಪುಟದ ಸಹಸ್ಥರೂ ಕೂಡಿಕೊಂಡಂತೆ ಕೆಲವರು ಸಂದರ್ಶನವು ಯಶಸ್ವಿಯಾಗುವಂತೆ ಮಾಡಹೊರಟ್ಟಿದ್ದಾರೆ ಎಂದೂ ಶ್ರೀಮತಿ ಗಾಂಧಿಯು ಅತಿಥೇಯರು ದೂರಿದ್ದರು.

ಸಂದರ್ಶನದ ವೇಳೆ ಗಡಿಪ್ರಶ್ನೆಯ ಸಂಬಂಧದಲ್ಲಿ; ಕೇಂದ್ರ ಸರಕಾರದ ಗತಿಗೆಟ್ಟ ನೀತಿಯಲ್ಲಿ ಆಕೆಗೆ ಒಂದೆರಡೆಡೆ ಮತಪ್ರದರ್ಶನ ನಡೆದರೂ ಯಾವ ದುಘಟನೆಗಳೂ ನಡೆಯಲಿಲ್ಲ. ಕನ್ನಡಿಗರು ಪ್ರಧಾನಮಂತ್ರಿಯನ್ನು ಹೃತ್ಪೂರ್ವಕ ಸ್ವಾಗತಿಸಿ ಗೌರವಿಸಿದರು. ಇದರಿಂದ ಆಕೆಯೂ ತೃಪ್ತಿಗೊಂಡಿದ್ದಾರೆಂದ ಮೇಲೆ ಶ್ರೀ ದೇವರಾಜ ಅರಸ್, ಶ್ರೀ ವೀರಪ್ಪನವರ ದೂರುಗಳು ವಿಲಕ್ಷಣವೆನಿಸಿವೆ. ಭೀಮನನ್ನು ಕಂಡರಾಗದ ದುರ್ಯೋಧನು ಕಲ್ಲುಮುಳ್ಳುಗಳಿಂದ ತನ್ನ ಕಾಲುಗಳನ್ನ ತನ್ನ ಕೈಯಿಂದಲೇ ಚುಚ್ಚಿಸಿಕೊಂಡು ಅಜ್ಞಾತ ಭೀಷ್ಮಪಲ್ಲಿ ಭೀಮನ ವೇಲೆ ದೂರು ಹಾಕಿದನಂತೆ! ಇಂದಿರೇಟ್ ನಾಯಕರ ವರ್ತನೆ ಇದಕ್ಕಿಂತ ಭಿನ್ನವೆಂದು ಯಾರೂ ತಿಳಿಯಲಾರರು.

ಂ ಂ ಂ

ಪಂ. ನೆಹರೂರವರ ಕೊನೆಯ ದಿನಗಳಲ್ಲಿ ತಿರುಪತಿ ತಿಮ್ಮಪ್ಪನ ನೆರಳಲ್ಲಿ ಕಾಂಗ್ರೆಸ್ಸಿನ ನಾಯಕರು ಸಭೆಸೇರಿ ನೆಹರು ಉತ್ತರಾಧಿಕಾರಿಯೊಂದಾಗ ಬೇಕೆಂಬ ಬಗ್ಗೆ ಪರ್ಯಾಲೋಚಿಸಿದ್ದರಂತೆ. ಆಂದು ಸಭೆ ಸೇರಿದವರು ಶಾಸ್ತ್ರಿಯವರನ್ನೂ ಗಾಂಧಿಯವರನ್ನೂ ಪ್ರಧಾನಿಯೊಂದಾ ಆಯ್ಕೆ ಮಾಡುವಲ್ಲಿ ಶ್ರಮಿಸಿದರು. ಈಗ ತಾವೆ ಹೆಸ್ತ ಕೂಸು ತಮ್ಮನ್ನೇ ನಂಗಬಂದಾಗ, ನಾಯಕರು ಮತ್ತೆ ಯೋಚಿಸಾಮಸ್ಥರಾಗಿದ್ದಾರೆ. ಪ್ರಜಾಸತ್ತೆ—ಜಾತ್ಯತೀತತೆ ಮತ್ತು ಸಮಾಜವಾದವೆಂಬ ತಾಮತ್ರಯಗಳನ್ನು. ಎಲ್ಲ ರಾಜ್ಯಕೀಯ ಪಕ್ಷಗಳು ಜಪಿಸುತ್ತಿವೆ. ಯಾರ ಜಪದಲ್ಲಿ ವಿಷ್ಣು ತುಂಬಿದೆಯೆಂದು ಹೇಳುವುದು ಸಾಧ್ಯವಿಲ್ಲ.

ದಕ್ಷಿಣ ರಾಜ್ಯಗಳಿಗೆ ಪರೀಕ್ಷೆಯಿಲ್ಲವಾದ ಈ ತಿರುಪತಿ ಸಭೆಯಲ್ಲಿ ತಮ್ಮ ಪಕ್ಷ ಪಕ್ಷ ಬಲವಾಗಿ ಭದ್ರಪಡಿಸುವ ಅವಶ್ಯವನ್ನು ಎಲ್ಲರೂ ಮನಗಂಡರು.

ತ್ರಿಗುಣೋಪೇತ ಪಕ್ಷಗಳೊಡನೆ ಮೈತ್ರಿನಡಿಕೊಳ್ಳಲು ಒಪ್ಪಿಕೊಂಡರು. ಶ್ರೀ ರಾವ ರಾಜ, ಶ್ರೀ ಸಂಜೀವರೆಡ್ಡಿ ಮತ್ತು ಶ್ರೀ ಎಸ್ಸೆನ್ ಕೂಡಿದಂತೆ ನಡೆದ ಈ ಸಭೆಯು ಮುಂದಿನ ಚುನಾವಣೆಗಳ ಧೋರಿಸ್ಥಿತಿಯಲ್ಲೇ ಸೇರಿತ್ತೆಂಬುದು ಸರ್ವವಿದಿತ. ಮುಖ್ಯವಾಗಿ ಈ ನಾಯಕರು ಏಂದು ಮೂತು ತಿಳಿದುಕೊಳ್ಳ ಬೇಕಿನ್ನಿ ಇತ್ತದೆ- ಪ್ರಧಾನಿಯಾಗ್ಯಾಗಲೀ ಅವರ ಪಕ್ಷವನ್ನಾಗಲೀ ದೂರುವುದರಿಂದ ಹೆಚ್ಚಿನ ಪ್ರಯೋಜನವಿಲ್ಲ. ತನ್ನ ರಾಜಕೀಯ ಪಕ್ಷದ ನೀತಿ—ಫಲುಮೆಗಳನ್ನು ನಾಕಷ್ಟು ಪ್ರಚಾರಗೊಳಿಸಿ ಜನಮಥವನ್ನಾಕರ್ಷಿಸಬೇಕು.

ಂ ಂ ಂ

ಇಂಡಿಕೇಟ್ ನೀಡಿದ ಮೈತ್ರಿಯು ಕರೆ ಎಲ್ಲ ತ್ರಿಗುಣೋಪೇತ ರಾಜ್ಯಕೀಯ ಪಕ್ಷಗಳಿಗೆ. ಆದರೆ, ಇದನ್ನು ಜನಸಂಘ ಮತ್ತು ಸ್ವತಂತ್ರ ಪಕ್ಷಗಳ ವಟ್ಟಿಗೆ ಸೀಮಿತಪಡಿಸಿದೆಯೆಂದು ಪ್ರಚಾರದಲ್ಲಿ ತೊಡಗಿದವರು ಇಂಡಿಕೇಟಿಗರು. 'ವಿಶಾಲ ಮೈತ್ರಿ' 'ಘನಮೈತ್ರಿ' ಎಂದು ವಿಂಗಡಿಸಿ ಆಕಾಶವಾಣಿಯೂ ಕೆಲವು ಸತ್ರಿಕೆಗಳೂ ವರ್ಣಿಸಿದವು. ಇಂಡಿಕೇಟಿಗರಿಗೆ ಬೇಕಾದದ್ದೂ ಇದೇ. ತಾನು ನಡೆಸುತ್ತಿರುವ ಆಪಾಯದ ದಾರಿಯೇ ಪ್ರಜಾಸತ್ತೆಯು ಉಳಿವಿಗೆ ಅನಿವಾರ್ಯವೆನ್ನುವ ಇಂಡಿಕೇಟ್ "ಘನ ಮೈತ್ರಿ"ಯು ಗುರಿಯನ್ನು ಯಶಗಳಿಸಿದಂತೆ ಪ್ರಯತ್ನ ನಡೆಯುತ್ತಿದೆ. ಆದರೆ ರಂದಲೇ ಆ ಮೈತ್ರಿಯು ಅತ್ಯಂತ ಅಪಾಯಕಾರಿಯೂದದ್ದು ಎಂದವರು ವರ್ಣಿಸಿದ್ದಾರೆ.

ಉದ್ದೇಶಿತ ಮೈತ್ರಿಯು ಕರೆಗೆ ಜನಸಂಘ ಮತ್ತು ಸ್ವತಂತ್ರ ಪಕ್ಷಗಳು ಓಗೊಟ್ಟಿವೆ. ಈ ಮೈತ್ರಿಯ ಸ್ವರೂಪವನ್ನು ಗೊತ್ತಾಗಬೇಕಷ್ಟೆ. ಇಂಡಿಕೇಟಿನೊಡನೆ ಕೂಡಿಕೊಂಡು ಗುಜರಾತದಲ್ಲಿ ಶ್ರೀ ಹಿತೇಂದ್ರ ದೇಸಾಯಿ ಸರಕಾರವನ್ನು ಉರುಳಿಸುವ ಹಂಚಿಕೆಯನ್ನು ಸ್ವತಂತ್ರ ಪಕ್ಷ ತ್ಯಜಿಸಿದೆ. ಕೇವಲೊಂದು ಹೊಂದಾಣಿಕೆಗಳಿಂದ ಈ ಮೂರು ಪಕ್ಷಗಳು ಮೈತ್ರಿ ಸಾಧಿಸಬಹುದು. ಉಳಿದ ರಾಜ್ಯಕೀಯ ಪಕ್ಷಗಳು ಇವನ್ನು ಒಲಪಂಥೀಯರುವೆಂದು ಕರೆಯುವುದರಿಂದ ಈ ಮೈತ್ರಿಯಲ್ಲಿ ಪಾಲ್ಗೊಳ್ಳಲಾರವು. ಆದರೂ, ಈ ಮೈತ್ರಿಯು ಯಶಸ್ವಿಯಾಗಿ ವಿಷ್ಣುಪೂರ್ಣವಾಗಿ ಕಾರ್ಯಗತವಾದರೆ, ಇಂಡಿಕೇಟಿನ ಅಪಾಯಕಾರಿ ವಿದೇಶ ಪ್ರೇರಿತ ರಾಜ್ಯನೀತಿಗೊಂದು ಮಟ್ಟುಗೋಲು ಹಾಕುವುದು ಸಾಧ್ಯವಾದರೂ ಆಗ ಬಹುದು. ರಾಜ್ಯಕೀಯವಾಗಿಯೂ ನಾವು ಅಧಃಪತನದತ್ತ ಸರಿಯುತ್ತಿರುವಾಗ, ಇಂತಹ ಪ್ರಯತ್ನ ವೊಂದು ಅಗತ್ಯವೆನಿಸುತ್ತದೆ.

ಂ ಂ ಂ

ಪಶ್ಚಿಮ ಬಂಗಾಳದ ವಿಧಾನ ಸಭೆಯನ್ನು ಆವೂನತ್ಯಗೊಳಿಸಿ ಅಲ್ಲಿ ರಾಷ್ಟ್ರಪತಿ ಆಳಿಕೆಯನ್ನು ಹೇರಿ ಇಮ್ಮು ನತುರು ವಾಯ್ತು. ಆದರೆ, ಅಲ್ಲಿ ರಾಜ್ಯಕೀಯ ಬೆಳವಣಿಗೆಯಾಗಲೇ ಇಲ್ಲ; ಬದಲಿಗೆ ಅರಾಜಕತೆ ಇನ್ನೂ ವಂದುವರಿಯುತ್ತಿದೆ. ಕಮ್ಯುನಿಸ್ಟ್ ಬಣಗಳ ನಾಯಕತ್ವದಲ್ಲಿ ವಿದೆದ ಬಂದ್‌ಗಳು ಯಶಗಳಿಸಿ, ಜನಜೀವನವನ್ನು ಮತ್ತಷ್ಟು ಕೆಡಿಸಿದುವು. ನಕ್ಸಲೀಯರ ದಾಳಿ ಯೂವ ಸಮಯದಲ್ಲೂ ಯಾರ ಮೇಲೂ ಎಲ್ಲೂ ನಡೆಯಬಹುದು. ನಾಗರಿಕರ ವಿಶ್ವ ಜೀವಿಗಳಿಗೆ ತೀರ ಅಭದ್ರತೆಯ ರಾಜ್ಯವದು.

ವಿಧಾನ ಸಭೆಯಲ್ಲಿ ಯಾವುದೇ ಪಕ್ಷವು ಬಹುಮತ ಪಡೆಯುವ ಲಕ್ಷಣ ಅಲ್ಲಿಲ್ಲ. ಆಥವಾ ಯಾವುದೇ ಪಕ್ಷವು ತನಗೆ ಬಹುಮತವಿದೆಯೆಂದ ಹೇಳಿಕೊಳ್ಳುವ ಗೋಜಿಗೂ ಹೋಗ ವುದಿಲ್ಲ. ಆಂಗ್ರೆ ಅಲ್ಲಿ ಯಾರ ಪಕ್ಷಕ್ಕೂ ಬಹುಮತವಿಲ್ಲ; ಸರಕಾರ ರಚಿಸಲು ಯಾರೂ ಉತ್ಸುಕರಿಲ್ಲ. ಆದುದರಿಂದಲೇ ಬೇಗನೇ ಸಾರ್ವತ್ರಿಕ ಚುನಾವಣೆಗಳು ನಡೆಯಬೇಕೆಂದು ಅವು ಬಯಸುತ್ತಿವೆ. ಇತ್ತೀಚೆಗೆ ಕಲಕತ್ತೆಗೆ ಭೆಟ್ಟಿ ನೀಡಿದ ಪ್ರಧಾನಿ ಉರ ಸ್ ಗೃಹಾದಿ ಮಂತ್ರಿ ಶ್ರೀಮತಿ ಗಾಂಧಿಯವರು ಚುನಾವಣೆಗಳಿಗೆ ಕಾಲವಿಷ್ಟೂ ಪರಿಪಕ್ವವಾಗಿಲ್ಲವೆಂದು ಅಜ್ಞಾಪಿಸಿ ಬಂದಿದ್ದಾರೆ. ಹಾಗಾದರೆ, ವಿಧಾನ ಸಭೆಯನ್ನಾದರೂ ಏಕೆ ವಿಸರ್ಜಿಸಬಾರದು ಎಂಬುದಕ್ಕೆ ಅವರೇ ಉತ್ತರ ಹೇಳುವುದಿಲ್ಲ. ತನ್ನ ಪಕ್ಷವು ಅಲ್ಲಿ ಬಲೆಯ ನ್ಯಾದರೂ ಎಷ್ಟುವಂತಾಗದೆ ಹೋದರೆ, ಅವರು ಚುನಾವಣೆಗೆ ಆತುರ ಪಡುವುದಿಲ್ಲ. ಆದರೆ, ಇದು ಸಾಧ್ಯವಾಗುವಷ್ಟರಲ್ಲಿ ಪಶ್ಚಿಮ ಬಂಗಾಳವು ಸಂಪೂರ್ಣ ಪ್ರಜಾಭಂಜಕರ ಕಸಿಮುಸ್ಸಿಯಲ್ಲಿ ಭದ್ರವಾಗಿರುತ್ತದೆ.

ಂ ಂ ಂ

ಉತ್ತರ ಪ್ರದೇಶದ ಮುಖ್ಯಮಂತ್ರಿ ಶ್ರೀ ಚರಣಸಿಂಗರು ಶ್ರೀಮತಿ ಗಾಂಧಿಗೇ ನೇರಂಗಲಾಕುವ ಕುತ್ಸಾಗಿದ್ದಾರೆ. ಇಂಡಿಕೇಟು ಆವರ ಸರಕಾರದಲ್ಲಿ ಕೂಡಿಕೊಂಡಿದ್ದರಿಂದ ಶ್ರೀಮತಿಯವರು ಬೆಟ್ಟಿದಷ್ಟು ಫಿರೀಕ್ಷಿಸಿದ್ದರು. ಆದರೆ ಅವರಿಗೆ ಎಲ್ಲಿನ ಸ್ಪಂದನವಿಲ್ಲ. ಭಾರತೀಯ ಕ್ರಾಂತಿದಳವನ್ನು ಹೇಗಾದರೂ ಮಾಡಿ ತನ್ನಲ್ಲಿ ಸೇರಿಸಿಕೊಂಡು ಚರಣಸಿಂಗರನ್ನು ತನ್ನ ಚರಣದಡಿ ಹೆಟ್ಟಬೇಕೆಂಬ ಆವರ ಇರಾದೆಯನ್ನು ಚರಣಸಿಂಗರು ಮೊದಲೇ ಅರಿತಿದ್ದರು. ವಿಲೀನತೆಯ ಹಿಂದಿ ತೋರಿಸುತ್ತ ಆವರು ಇಂಡಿಕೇಟ್ ದನವನ್ನು ಇನ್ನಷ್ಟು ಆಕರ್ಷಿಸಿ ಕೊಂಡೇ ಹೋಗುತಿದ್ದಾರೆ.

ಶ್ರೀ ಚರಣಸಿಂಗರಿಗೆ ಹೆಂಗಸರ ಬೇಲೆ ಅಪಾರ ದ್ವೇಷವೋ ತಿಳಿಯದು ಉತ್ತರ ಪ್ರದೇಶಕ್ಕೆ ಸ್ತ್ರೀ ಐ ಎ ಎಸ್. ಅಧಿಕಾರಿಗಳು ಬೇಡವೆಂದು ಆವರು ಆಂದಿದ

(ಎಂಟನೇ ಪುಟ ನೋಡಿ)



ಹದಿನೇಳನೆಯ ಶತಮಾನದ ಸ್ವಾತಂತ್ರ್ಯ ಸಮರ

ಲೇಖಕರು : ಹಂ. ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಮೊಗಲ ಚಕ್ರವರ್ತಿ ಔರಂಗಜೇಬನು ತನ್ನ ಆಯುಷ್ಯದ ಕೊನೆಯ ೨೫ ವರ್ಷಗಳಲ್ಲಿ ದಕ್ಷಿಣದಲ್ಲಿ ಸಂಚಾರಮಾಡುತ್ತಾ ಮರಾಠರನ್ನು ಸದೆಬಡಿಯುವುದರಲ್ಲಿ ಮಗ್ನನಾಗಿದ್ದನು. ಆ ಸಮಯದಲ್ಲಿ ಆಗ್ರಾ ಮತ್ತು ಮಧ್ಯಪ್ರದೇಶ ಅಳ್ವಿಕೆಗಳಲ್ಲಿ ಜಾಟ್ ರಜಪೂತರು ಸಂಘಟಿತರಾಗಿ ಔರಂಗಜೇಬನ ವಿರುದ್ಧ ದಂಗೆ ಹೂಡಿದರು. ರಾಜ್ಯಕ್ರಾಂತಿಯ ಈ ಅಂತಿಮ ದಂಗೆಯು ವಿಂಧ್ಯಪರ್ವತವನ್ನು ಸರ್ದಾರ್ ಚೂಡಾಮನ್ ಎಂಬವನು ವಹಿಸಿದ್ದನು. "ಥೂಣ್" ಮತ್ತು 'ಸಿಘ್ರಿನೀ' ಎಂಬೆರಡು ಆಯಕಟ್ಟಿನ ಸ್ಥಳದಲ್ಲಿ ಬಲವಾದ ದುರ್ಗಗಳನ್ನು ನಿರ್ಮಿಸಿದ್ದನು. ಮೊಗಲರಿಂದ ಕೊಳ್ಳೆಹೊಡೆದ ದ್ರವ್ಯದ ಸಾಮಗ್ರಿ ಇತರ ವಸ್ತು ಪಡವೆಗಳನ್ನು ಈ ದುರ್ಗದಲ್ಲಿ ಸಂಗ್ರಹಿಸಿಡುತ್ತಿದ್ದನು. ಔರಂಗಜೇಬನು ದಕ್ಷಿಣ ಭಾರತದ ಯುದ್ಧವನ್ನು ಮುಗಿಸಿ ಆಗ್ರಾಕ್ಕೆ ಬರುತ್ತಲೇ ರಜಪೂತ ಜಾಟರು ಹೂಡಿದ್ದ ದಂಗೆಯನ್ನಡಗಿಸಲಿಕ್ಕೆ ಸನ್ನದ್ಧನಾದನು. ಆಗ್ರಾದಲ್ಲಿದ್ದ ಮೊಗಲ್ ಸಂಧೀದಾರ್ ಶವಾಯಿ ಜಯಸಿಂಹನನ್ನು ಜಾಟರ ಹುಟ್ಟಡಗಿಸಲಿಕ್ಕೆ ನೇಮಕ ಮಾಡಿದನು. ಜಯಸಿಂಹನು ಕೂಡಲೇ ವಿಶಾಲ ಸೇನಾಸಮೇತನಾಗಿ ಥೂಣ ಜಿಲ್ಲೆಯನ್ನು ನಾಲ್ಕು ಕಡೆಗಳಿಂದಲೂ ಒಕ್ಕಮಣ ಮಾಡಿ ಭೀಕರ ಹೋರಾಟಕೊಟ್ಟು ವಶಪಡಿಸಿಕೊಂಡನು. ಈ ಯುದ್ಧದಲ್ಲಿ ಚೂಡಾಮನನ ಪುತ್ರರು ಓಡಿಹೋದರು; ಚೂಡಾಮನ್ ಸ್ವತಃ ವಿಷಪಾನ ಮಾಡಿ ಬಲಿದಾನವಾಗಿ ಸ್ವಾತಂತ್ರ್ಯ ಯುದ್ಧದ ಸ್ವಾಭಿಮಾನವನ್ನು ಉಳಿಸಿಕೊಂಡನು. ಜಾಟರ ಸರ್ವಸ್ವ ಸೇನೆ ಛಿದ್ರಛಿದ್ರವಾಗಿ ಜೀವಭಯ. ಆವರೆಲ್ಲರೂ ಅಧೋಗತಿಗೊಳಗಾದ ನಿಮಿತ್ತ ಸರ್ವರ ಭೂಮಿಯನ್ನು ಕೃಷಿಕ ಶಿಬ್ರಸ್ಥಗಳನ್ನು ತ್ಯಾಗ ಮಾಡಿ ಗ್ರಾಮಂತರ ಪ್ರದೇಶಗಳಿಗೆ ತೆರಳಿ ಬೇಸಾಯದಲ್ಲಿ ಪಲ್ಗೊಂಡರು. ಕಾಲ ಹೊಸಪಥ ಮಾಡತೊಡಗಿದರು.

ಜಯಸಿಂಹನು "ಥೂಣ್" ಪ್ರದೇಶವನ್ನು ಸಂಪೂರ್ಣ ಧ್ವಂಸಗೊಳಿಸಿದನು. ಒಂದು ದಿನ ಒಬ್ಬ ಜ್ಯೋತಿಷಿ ಜಯಸಿಂಹನ ಬಳಿಗೆ ಬಂದು "ಇಮ್ಮ ಮಂದಿಕ್ಕೆ ಈ ಪ್ರದೇಶದಲ್ಲಿ ಯಾವ ರಾಜವಂಶವೂ ತಲೆ ಎತ್ತದಂತೆ ಮತ್ತು ಈ ಪ್ರದೇಶದಲ್ಲಿ ಅಧಿಕಾರ ಸ್ಥಾಪಿಸದಂತೆ ತಾವು ಒಂದು ಉಪಾಯ ಮಾಡಬೇಕು" ಎಂದು ಹೇಳಿದನು. ಆದಾವ ಉಪಾಯವೆಂದು ವಿಚಾರಿಸಿದಾಗ ಜ್ಯೋತಿಷಿಯು "ತಾವು ೫೦ ಕತ್ತೆಗಳನ್ನು ತಂದು ಆಳ್ವಿಗಳ ಮೂಲಕ ಥೂಣ್ ಜಿಲ್ಲೆಯ ಭೂಮಿಯಲ್ಲಿ ಉಳುವ ಏರ್ಪಾಡು ಮಾಡಿ; ಈ ರೀತಿ ಕತ್ತೆಗಳು ಉತ್ತ ಈ ಭೂಮಿಯಲ್ಲಿ ಯಾರೊಬ್ಬರೂ ರಾಜನಾಗಲಿಕ್ಕಿಲ್ಲ; ಯಾವ ಶತ್ರುವೂ ಇದರ ಆಕ್ರಮಣ ಮಾಡಲಿಕ್ಕಿಲ್ಲ; ಕಾರಣ ಹೇಳಿದರೆ ಕತ್ತೆಗಳಿಂದ ಉಳಲ್ಪಟ್ಟ ಭೂಮಿ ಸರ್ವನಾಶವಾಗುವುದು" ಎಂದು ವಿವರಿಸಿದನು. ಆದರಂತೆ ಜಯಸಿಂಹರು ಕತ್ತೆಗಳಿಂದ ಅಳ್ವಿಯ ಭೂಮಿಯನ್ನು ಉಳುವಂತೆ ಏರ್ಪಾಡು ಮಾಡಿದನು. ಆದರೆ ಜ್ಯೋತಿಷಿಯು ಮೂತು ಸಳ್ಳಾಯಿತು. ಆದರಿಂದ ಏನೂ ಪರಿಣಾಮವಾಗದಿಲ್ಲ ಮೂತ್ರವಲ್ಲ ಮೊಗಲ ಸಾಮ್ರಾಜ್ಯ ಅಸ್ತಂಗತವಾಯಿತು. ಥೂಣ್ ಪ್ರಾಂತ್ಯಕ್ಕೆ "ರಾಜಾ ಸೂರಜ್‌ಮಲ್" ಎಂಬವನು ರಾಜನಾದನು. ಈತನು ಮಹಾ ಸಾಹಸಿಯೂಗಿದ್ದು ಮೂರುಸಲಡಿಲ್ಲಿಗೆ ಮಾತ್ರವೆಹಾಕಿ ಮೊಗಲ ಸಾಮ್ರಾಜ್ಯದ ಅಂತಿಮ ಬಾದಶಹ ಔರಂಗಜೇಬನ ಸಿಂಹಾಸನವನ್ನು ಅಲುಗಾಡಿಸಿ ಬಿಟ್ಟನು. ರಾಜಸಿಲ್ಲಿದಿದ್ದರೂ ಯುದ್ಧ ಸಾಗಿತು.

ಜಾಟ್‌ವಂಶದ ಇತಿಹಾಸದಲ್ಲಿ ಸೂರಜ್‌ಮಲ್ಲನಿಗೆ ಸರಿಸಮಾನನಾದ ಯೋಧನಾಗಲೀ ಕೂಟ ನೀತಿಜ್ಞನಾಗಲೀ ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಈ ವರೆಗೆ ಜನಿಸಿಲ್ಲ. ಮೊಗಲ ಶಾಸನ ದುರ್ಬಲವಾಗುತ್ತಿರುವ ಸಂದರ್ಭವನ್ನು ಉಪಯೋಗಿಸಿ ಭಾರತದಲ್ಲಿ ಪುನಃ ಹಿಂದೂ ಚಕ್ರವರ್ತಿ ಶಾಸನವನ್ನು ಸ್ಥಾಪನೆ ಮಾಡುವ ಇಚ್ಛೆಯಿಂದಿದ್ದನು. ಆದರಿಪರಾಠರು ಇವರೊಡನೆ ಸಹಕರಿಸದೆ ಇದ್ದುದರಿಂದ ನಿರಾಶನಾದನು. ಆದರೂ ಖಾನಿಪತದ ಘೋರ ಕದನದ ನಂತರ ಉತ್ತರ ಭಾರತದಲ್ಲಿ ಎಲ್ಲೆಗಿಂತಲೂ ಮಿಗಿಲಾದ ಶಕ್ತಿಶಾಲಿ ಏಕ ಛತ್ರಾಧಿಪತಿಯಾಗಿದ್ದನು. ಅವನ ಇಡೀ ಜೀವಮಾನ ದೇಶವನ್ನು ಪರಕೀಯರ ಕೈ ಹೋಗದಂತೆ ತಾವಾಡಿಕೊಳ್ಳುವ ಸಲುವಾಗಿ ಯುದ್ಧದಲ್ಲಿಯೇ ಕಳೆಯಿತು. ಈತನು ಎಡೆಬಿಡದೆ ಹನ್ನೆರಡು ಸಲ ಶತ್ರುಗಳ ಸಂಗ್ರಾಮಮಾಡಿ ಜಯಶೀಲನಾಗಿದ್ದನು. ಕಟ್ಟ ಕಡೆಗೆ ದೇಶದ್ರೋಹಿ ವಿಶ್ವಾಸಘಾತಕರ ಕುತಂತ್ರಗಳಿಂದಾಗಿ 'ಶಹದರಾ' ಎಂಬಲ್ಲಿಯ ಸಮರಾಪ ನಡೆದ ಡಿಲ್ಲಿಯ ಮೂರನೆಯ ಕದನದಲ್ಲಿ ಹತನಾದನು. ಆವನು ಸಾಯುವಾಗ ಅಪಾರವಾದ ಧನರಾಶಿ ಮತ್ತು ಒಂದು ಅಕ್ಷೋಹಿಣಿ ಸೈನ್ಯವನ್ನು ಬಿಟ್ಟು ಹೋದನು. ಆ ಸಂಧಿಗ್ಧ ಕಾಲದಲ್ಲಿ ಮರಾಠರು ಅವಘಿಗೆ ಸಕಾರ ಕೊಡುತ್ತಿದ್ದರೆ ಅಥವಾ ಅವಘಿಗೆ ಸರಿಸಮಾನನಾದ ಒಬ್ಬನಾದರೂ ಉತ್ತರ ರಾಧಿಕಾರಿ ಇರುತ್ತಿದ್ದರೆ ಭಾರತದ ರಾಜಕೀಯ ಇತಿಹಾಸವೇ ಪರಿವರ್ತನೆಯಾಗಿ ಹೋಗುತ್ತಿತ್ತು; ಕಳೆದುಹೋಗಿದ್ದ ಹಿಂದೂ ಸಾಮ್ರಾಜ್ಯ ಪುನರಪಿ ಸ್ಥಾಪಿಸಲ್ಪಡುತ್ತಿತ್ತು.

ಕ್ರಿ. ಶ. 1763 ದಕ್ಕಿಂಬ್ರ 25ರಂದು ಸೂರಜ್‌ಮಲ್ ಡಿಲ್ಲಿಯನ್ನು ನಾಲ್ಕು ಕಡೆಯಿಂದಲೂ ಮುತ್ತಿದನು. ದಕ್ಷಿಣದಲ್ಲಿ ಕೋಟ್ಲಾ ತನಕ ಉತ್ತರದಲ್ಲಿ ಗಾಂಜಿಯೊಬಾದ್ ಮತ್ತು ಶಾಹದರ ತನಕ ಇವುಗಳನ್ನು ವಶಪಡಿಸಿಕೊಂಡಿದ್ದನು. ಮೊದಲ ಪರದಾರ ನಜೀಬ್‌ಖಾನನು ಯುದ್ಧ ನಿಶ್ಚಿತ ಗಾಂಭೀರ್ಯ ಪೂರ್ಣವಾದ ಸಂಧಿ ಮಾಡಿಕೊಳ್ಳುವಂತೆ ಸೂರಜ್‌ಮಲ್‌ನನ್ನು ಕೇಳಿಕೊಂಡನು. ಆದರೆ ಸೂರಜ್‌ಮಲ್ ಭಾರತದಿಂದ ವಿದೇಶೀಯರು ಹಾಗೂ ವಿಧರ್ಮೀಯರ ಉಪಟಳದ ಸಂಪೂರ್ಣ ಹುಟ್ಟಡಗಿಸಬೇಕೆಂದು ಕಟಿಬದ್ಧನಾಗಿದ್ದನು. ಭಯಂಕರ ಕದನ ಭೇದಿಂದ ಸಾಗಿತು. ಶಹದರಾ ಎಂಬ ಆಯಕಟ್ಟಿನಲ್ಲಿ ಮಹಾ ಪರಾಕ್ರಮಿಗಳಾದ 30 ವಂದಿ ವೀರಯೋಧರನ್ನೊಳಗೊಂಡು ಅನೆಯ ಮೇಲೇರಿ ತನ್ನ ಸೇನಾನಾಯಕನನ್ನು ಹುರಿದುಂಬಿಸುತಿದ್ದನು. ಅನೆಯಿಂದಿಳಿದು ಕುದುರೆ ಸವಾರಿ ಒಂದು ಕಾಲು ಮೆಯನ್ನು ದಾಟುವಾಗ ಅಲ್ಲಿಯ ಸಮೀಪದ ದಟ್ಟವಾದ ಪೊದರುಗಳ ಮರೆಯಿಂದ ಗುಂಡಿನ ಸುರಿಮಳೆ ಅವನ ಮೇಲೆ ಬೀಳತೊಡಗಿತು. ಇದು ನಜೀಬನ ಸೇವೆಸಲ್ಲಿಸಿದ್ದ ಅಫಘಾನ ಸೈನಿಕರು ಹೊಡೆದ ಗುಂಡುಗಳೆಂದು ತಿಳಿಯಿತು. ಮೇಲಿಂದ ಮೇಲೆ ಗುಂಡುಗಳು ರಭಸದಿಂದ ಬೀಳತ್ತಲೇ ಸೂರಜ್‌ಮಲ್ ಕುದುರೆ ಮತ್ತು ಅಂಗರಕ್ಷಕರಲ್ಲಿ ಅನೇಕರು ಭೂವಿಗೊರಗಿದರು. ಇವರ ಪ್ರಾಣ ಉಳಿಸಲಿಕ್ಕೆ ಸೂರಜ್‌ಮಲ್ ಬಹಳ ಶ್ರಮಿಸಿದನು. ಅಷ್ಟರಲ್ಲಿ ಒಂದು ಗುಂಡು ಅವನ ಎದೆಗೆ ಬಡಿಯಿತು : ಅದೇ ಕಾಲು ಮೆಯ ದಡದಲ್ಲಿ ಅತನು ಬಿದ್ದು ಬಿಟ್ಟನು. ಉಳಿದ ಅಂಗರಕ್ಷಕರು ಓಡಿಹೋದರು. ಅಫಘಾನ ಸೈನಿಕರು ಸೂರಜ್ ಮಲ್‌ನ ಸಮೀಪಕ್ಕೆ ಓಡಿದರು. ಅಲ್ಲಿ ನೋಡಿದಾಗ ಅಜಾನುಬಾಹು ಹೃಷ್ಟಪುಷ್ಟ ಶೂರ ವೀರೋತ್ತೇಜಕ ಕಾಂತಿಯಿಂದ ಹೊಳೆಯುತ್ತಿರುವ ಮುಖದಿಂದ ಕೂಡಿದ್ದ ಒಬ್ಬ ಅಸಮ ಪರಾಕ್ರಮಿ ಗಂಡುಗಲಿ ಬಿದ್ದಿರುವುದನ್ನು ಕಂಡರು. ಶರೀರದಲ್ಲಿ ರತ್ನಖಚಿತ ಕೀರೀಟ, ಕುತ್ತಿಗೆಯಲ್ಲಿ ಅಮೂಲ್ಯವಾದ ಆಭರಣಗಳು ಹೊಳೆಯುತ್ತಿದ್ದವು. ಈತನೇ ನಜೀಬನ ಪರಮ ಶತ್ರು ಸೂರಜ್‌ಮಲ್ ಎಂದು ಕೂಡಲೇ ತಿಳಿದು ಅಫಘಾನ ಸರ್ದಾರ ಸೈನ್ಯಾಧಿಪತಿಯು ತನ್ನಲ್ಲಿದ್ದ ಪತ್ರಿಕಾರದ್ವೇಷವನ್ನು ತೀರಿಸುವ ಉದ್ದೇಶದಿಂದ ಹರಿತವಾದ ಖಡ್ಗದಿಂದ ಸೂರಜ್‌ಮಲ್‌ನ ಶರೀರವನ್ನು ಚಿತ್ರ ಹಿಂಸೆಗೊಳಪಡಿಸಿ ತಲೆಯನ್ನು ಕತ್ತರಿಸಿ ಕೀರ್ತಿಪತಾಕೆ ಕೊಂಡು ಹೋಗಿ ನಜೀಬ್‌ಖಾನನ ಮುಂದೆ ಕಾಣಿಕೆಯಾಗಿಟ್ಟನು ಈ ರೀತಿ ಮಹಾನ್ ಯೋಧ ಸ್ವಾತಂತ್ರ್ಯ ಪ್ರೇಮಿ ರಾಜಾ ಸೂರಜ್‌ಮಲ್ಲನ ಜೀವನ ರಣಕ್ಷೇತ್ರದಲ್ಲಿ ಪರಂಧಾಮವನ್ನೈದಿದರೂ ಶೂರರಾದ ಜಾಟರಿಗೆ ವಿಶ್ವಾಸ ಬರಲಿಲ್ಲ; ಅವರು ತಮ್ಮ ಪ್ರೀತಿಯ ರಾಜನಿಲ್ಲವಿದ್ದರೂ ಮೊಗಲ ವಿಧರ್ಮಿಗಳ ತನಕ ಸತತ ಹೋರಾಟ ಕೊಟ್ಟ ಶತ್ರುಗಳನ್ನು ಹಿಮ್ಮೆಟ್ಟಿಸಿ ಮಾತೃ ಭೂಮಿಯ ಋಣದಿಂದ ಮುಕ್ತರಾದರು.

ನವಯುಗ
ಸ್ವಾತಂತ್ರ್ಯೋತ್ಸವ ಸಂಚಿಕೆ

ಆಗೋಸ್ಟು ೧೫ ಸಮೀಪಿಸುತ್ತಿದೆ; ಭಾರತೀಯರಾದ ನಮಗೊಂದು ಪರಮ ಪವಿತ್ರ ದಿನ ಸ್ವಾತಂತ್ರ್ಯ ದಿನೋತ್ಸವದ ಸಡಿಲಿಸಲನ್ನು ಚಿರಂತನವಾಗಿರಿಸಲು ತಮ್ಮ ಸೆಟ್ಟಿನ ನವಯುಗದಲ್ಲಿ ನಾಡಿನ ಸಮಿಷ್ಟಾತ ಬರಹಗಾರರ ರಾಜಕೀಯ ಹಾಗೂ ಸಾಮಾನ್ಯಕಿಕ ಮಹತ್ವಪೂರ್ಣ ಲೇಖನಗಳಿಂದ ಕೂಡಿದ ವಿಶೇಷಾಂಕವನ್ನು ಎಂದಿನಂತೆ ಈ ವರ್ಷವೂ ಪ್ರಕಟಿಸುತ್ತಿದೆ.

ಈ ಜನಪ್ರೀತ ಪತ್ರಿಕೆಯು ಅಸಂಖ್ಯ ಜನರ ಕೈಸೇರುತ್ತ ತಮ್ಮ ಉದ್ದಿಮೆ, ವ್ಯವಹಾರಗಳ ವೈದಿಧರ್ಶನವನ್ನು ಎಲ್ಲರಿಗೂ ಒದಗಿಸುವುದು. ಈ ಪ್ರಯುಕ್ತ ಜಾಹೀರಾತುದಾರರು ದಯವಿಟ್ಟು ಅದಷ್ಟು ಶ್ವರಿತವಾಗಿ ತಮ್ಮ ಜಾಹೀರಾತನ್ನು ಕಳುಹಿಸಿ ಸಹಕರಿಸುವಂತೆ ಅಪೇಕ್ಷಿಸಲಾಗಿದೆ.

ಸಂದರ್ಭೋಚಿತವಾದ ಸಣ್ಣ ಲೇಖನ, ಕವನಗಳನ್ನು ತಾ. 5-8-1970ರ ತನಕ ಸ್ವೀಕರಿಸಲಾಗುವುದು.

ಸುವ್ಯವಸ್ಥಿತ ಯಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

114 ಶಾಖೆಗಳಿಂದ ಹಬ್ಬುರುವ "ವಿಜಯಾ ಬ್ಯಾಂಕ್"ನಲ್ಲಿ

ಸಂಪರ್ಕ ಬೆಳೆಸಿರಿ.

ಕೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ

"ಜೀವನ-ನಿಧಿ"ಯಲ್ಲಿ

ನಿಮ್ಮ ಉಳಿತಾಯವನ್ನು ವಿಶ್ವಾಸಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೫.

ಆಡಳಿತ ಕಛೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1

ಶಾಪ ಮತ್ತು ಅನುಗ್ರಹಶಕ್ತಿ

ಇದು ವಿಜ್ಞಾನಯುಗ. ಯಾವುದೇ ಪ್ರಕಾರದ "ಶಬ್ದ" ಎಂದೂ ನಷ್ಟವಾಗುವುದಿಲ್ಲ—ಇದೂ ವೈಜ್ಞಾನಿಕ ಸಂಶೋಧನೆಯ ಫಲ. ಸಾವಿರಾರು ವರ್ಷಗಳಿಗೆ ಮೊದಲು ಋಷಿಮುನಿಗಳ ಮಾತುಗಳಿಗೆ ಶಬ್ದರೂಪ ಕೊಡುವುದು ಸಾಧ್ಯವೆಂದು ವೈಜ್ಞಾನಿಕ ಅಭಿಪ್ರಾಯ—ಏಕೆಂದರೆ ಆ ಮಾತು ಪಕ್ಷವಾಗುವುದಿಲ್ಲ. ಈ ಸಂಬಂಧದಲ್ಲಿ ಅನೇಕಾನೇಕರು ಪ್ರಯತ್ನ ನಡೆಸುತ್ತಿದ್ದಾರೆ. ಪರಿಣಾಮ ತಿಳಿಯಬೇಕಷ್ಟೆ.

ನಾವು ವ್ಯವಹಾರ ತ್ರೇವೆ. ಆಗ, ಗಾಳಿಯಲ್ಲಿ ಶಬ್ದ ತರಂಗಗಳ ರೂಪ ಕಳೆಯುತ್ತವೆ. ಕಾಲ ಸಂದಂತೆ, ದೂರವಾದಂತೆ ಈ ವಾಯುತರಂಗಗಳು ಸೂಕ್ಷ್ಮತೆಯೂ ಕ್ಷೀಣವಾಗುತ್ತ ಹೋಗುತ್ತವೆ. ಆದರಿಂದ ನಾವು ಆ ತರಂಗಗಳ ಮೂಲರೂಪ ವಸ್ತು—ಮಾತನ್ನು— ನವ್ಯ ಕೆವಿಗಳಿಂದ ಕೇಳಲು ಅಶಕ್ತರಾಗಿ ಹೋಗುತ್ತೇವೆ. ಆತುದರಿಂದ, ಮಾತಾಡಿದ ತುಸು ಹೊತ್ತಿನ ಒಳಗೆ ಆ ಶಬ್ದವು ಸನೂಪ್ರವಾಗುತ್ತದೆ; ಅಥವಾ ಪಕ್ಷಗೊಳ್ಳುತ್ತದೆ ಎಂದು ತಿಳಿಯುತ್ತೇವೆ. ಆದರೆ, ಈ ತಿಳಿವಳಿಕೆ ತೋರಿಕೆಗೆ ಸತ್ಯವಾಗಿದ್ದರೂ ನಿಜವಾದ ಕರೆಯಲ್ಲ. ಶಬ್ದ ತರಂಗಗಳು ದುರ್ಬಲವಾಗುತ್ತ ಹೋಗಬಹುದು; ಇತರ ಶಬ್ದತರಂಗಗಳಿಂದ ಅವುಗಳ ಅಸ್ತಿತ್ವಕ್ಕೆ ಧಕ್ಕೆ ಬರುವಂತಾಗಬಹುದು; ಆದರೂ ಆ ಅಲೆಗಳು ಎಂದಿಗೂ ಅಸ್ತಿತ್ವ ಕಳೆದುಕೊಳ್ಳುವುದಿಲ್ಲ.

ಸೃಷ್ಟಿ ರಚನಾಕ್ರಮ ಅತ್ಯಂತ ವಿಚಿತ್ರ. ಇಲ್ಲಿ ಸ್ಥೂಲವಸ್ತುಗಳಿಂತ ಸೂಕ್ಷ್ಮ ವಸ್ತುಗಳು ಬಹು ದೀರ್ಘಕಾಲ ತಮ್ಮ ಅಸ್ತಿತ್ವವನ್ನು ಎತ್ತಿ ತೋರಿಸುತ್ತವೆ. ಸೂಕ್ಷ್ಮವಸ್ತುಗಳ ಪ್ರಭಾವವು ದೇಶ-ಕಾಲಾತೀತವಾಗಿರುತ್ತದೆ. ಸ್ಥೂಲಗಳಿಗೆ ಈ ಗುಣದ ಪ್ರಭಾವವೆಂದಿಗೂ ಇರುವುದಿಲ್ಲ. ವಿದ್ವಾಂಸರು ಅಭಿಪ್ರಾಯಿಸುವಂತೆ ಶಬ್ದವೇ ಅತ್ಯಂತ ಸೂಕ್ಷ್ಮ ಮತ್ತು ಅತ್ಯಧಿಕ ಸ್ಪರ್ಧಾವಶಾಲಿ. ಆದರೆ, ವಿಜ್ಞಾನ ಅದಕ್ಕಿಂತಲೂ ಸೂಕ್ಷ್ಮ ಮತ್ತು ಅದಕ್ಕೂ ಮಿಗಿಲಾದ ಪ್ರಭಾವಶಾಲಿ. "ಮನಸ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" ಎಂದು ಭಾರತೀಯ ಧರ್ಮಶಾಸ್ತ್ರದಲ್ಲಿ ಒಂದು ಸೂಕ್ತಿಯಿದೆ. ನಾವು ಯಾವ ಬಗೆ ಯೂಹಿ ಆಲೋಚಿಸುತ್ತೇವೆಯೋ ಆ ಬಗೆ ಯೂಹಿ ನಾವು ರೂಪಿತರೊಳ್ಳುತ್ತೇವೆ—ಇದು ಇದರ ಹಿಂದಿರುವ ರಹಸ್ಯ. ನಾವು ಭಿನ್ನಾಂತರ ಭಗವದ್ಭಾವನಿರತರಾಗಿದ್ದೆ, ಆತನ ಬಗ್ಗೆ ಆಲೋಚಿಸುತ್ತ, ವಿಚಾರ ಮಾಡುತ್ತ ಇದ್ದರೆ, ಕೆಲವಾರು ಘಳಿಗೆಯಾದರೂ ನಾವು ಭಗವಂತನಂತೆಯೇ ಮಹೂ ಮುಕ್ತರಾಗಬಲ್ಲೆವು; ಸಾಂಸಾರಿಕ ವಿಷಯಗಳ ಬಗ್ಗೆ ಚಿಂತಿಸುತ್ತ ಕುಳಿತರೆ, ನಾವು ಈ ಜಗತ್ತಿನಂತೆಯೇ ಮಹೂ ಮೋಹಬಂಧಿತರಾಗಿ ಉಳಿಯುವೆವು.

ಪರಮಾತ್ಮನೊಡನೆ ನೇರ ಸಂಪರ್ಕ ಸಾಧಿಸುವ ಶಕ್ತಿ ವಿಚಾರಕ್ಕಿದೆ. ಪರಮಾತ್ಮನ ಸಂಪರ್ಕ ಹೊಂದಿದವರು ಪರಮಾತ್ಮನಿಂದ ಶಕ್ತಿಪಡೆಯುತ್ತಾರೆ; ಆದುದರಿಂದ ಸರ್ವಶಕ್ತಿ ಸಂಪನ್ನ ಭಗವದ್-ಶಕ್ತಿಗೆ ಅವರ ಶಕ್ತಿ ಕಿಸವವಾಗುತ್ತ ಬರುತ್ತದೆ. ಪ್ರಾರ್ಥನೆಯ ಹಿಂದಿರುವ ಗುಟ್ಟು ಇದೇ. ಶಾಪ ವರ್ತು ವರದಾನಗಳಲ್ಲಿ ಅಡಗಿರುವ ರಹಸ್ಯವೂ ಇದೇ. ಒಬ್ಬನು ಶಪಿಸುವಾಗ ಅಶೀರ್ವಾದ ಮಾಡುತ್ತಾನೆ. ಆಗ ಆತನು ತನ್ನ ಹಿತ ಒಳಿತನ್ನು ಬಯಸಿ ಪರಮಾತ್ಮನೊಡನೆ ಪ್ರಾರ್ಥಿಸುತ್ತಾನೆ. ಗುರು ಹಿರಿಯರು ಪ್ರಸನ್ನರಾಗಿ, ಶುಭವಾಗಲೆಂದು ಆಶೀರ್ವದಿಸುವುದರೊಡನೆಯೇ ಅವರು ದೇವನೊಡನೆ ಬೇಡುತ್ತಾರೆ- "ದೇವರೆ, ಇವನಿಗೆ ಶುಭವನ್ನು ಮಾಡು" ನಮ್ಮನ್ನು ಆಶೀರ್ವದಿಸುವವನ ಮುಖದಿಂದ ಹೊರಟ ಮಾತು ವಾಯು ತರಂಗಗಳಲ್ಲಿ ವ್ಯಾಪ್ತವಾಗಿ ಸೂಕ್ಷ್ಮಾತಿ ಸೂಕ್ಷ್ಮವಾಗಿ ನವ್ಯನ್ನು ಕಲ್ಯಾಣದತ್ತ ಒಯ್ಯುವುದು. ಇದೇ ರೀತಿ 'ನೀನು ಹಾಳಾಗಿ ಹೋಗು' ಎಂದಾಗಲೂ ಈ ಮಾತಿನ ವಾಯುತರಂಗಗಳು ಪವ್ಯನ್ನು ನಾಶದತ್ತ ಕೊಂಡು ಹೋಗುತ್ತವೆ. ಆಶೀರ್ವಾದ ಮತ್ತು ಶಾಪದ ತಾತ್ವಿಕ ವಿವೇಚನೆಯಿದು.

ವರ ಅಥವಾ ಶಾಪಗಳು ಸೂಕ್ಷ್ಮಾತಿ ಸೂಕ್ಷ್ಮ ತರಂಗಗಳ ರೂಪ ಧರಿಸಿದರೂ ಅವು ಅಸ್ತಿತ್ವವನ್ನು ಕಳೆದುಕೊಳ್ಳುವುದಿಲ್ಲ. ಉದಾಹರಣೆಗೆ ಶಕುಂತಲೆ ದೂರ್ವಾಸರು ಕೊಡಿದ ಶಾಪ ಮತ್ತು ಅನುಗ್ರಹಗಳು ಕಂತನ್ನು ಪ್ರಭಾವವನ್ನು ತೋರಿಸಿಯೇ ಬಿಟ್ಟವು. ದುಷ್ಯಂತನು ಅಕೆಯು ಕೊಟ್ಟ ತಿಸ್ಕಾರಿದಾಗ ಮುಂದೆ ಸ್ವೀಕರಿಸಿದಾಗ ಶಾಪ-ಅನುಗ್ರಹಗಳೆರಡೂ ನೆನಪಿಗೆ ಬಂದುವು—ಕಿವಿಗೆ ಕೇಳಿಸಿದುವು.

ವರದಾನ ಮತ್ತು ಶಾಪಗಳಿಂದ ಕೊಡುವವನ ಪುಣ್ಯ ಕ್ಷಯವಾಗುತ್ತದೆ. ವರದಾನದಿಂದ ಇತರರಿ ಒಳಿತು ಸಾಧಿತವಾಗುವುದರಿಂದ ಆತನು ಹೊಸತಾಗಿ ಪುಣ್ಯ ಗಳಿಸುತ್ತಾನೆ ಶಪಿಸಿದ ಇತರರ ಅಶುಭ ಮಾಡುವುದರಿಂದ ಆತನ ಪುಣ್ಯ ಹ್ರಾಸವಾಗುವುದು; ಹೊಸ ಪಾಪವೂ ಸಂಚಿತವಾಗುವುದು. ಪರಮಾತ್ಮ ನ್ಯಾಯಸ್ವರೂಪ, ನಿರಪೇಕ್ಷ. ಪರರೊಂದಿಗೆ ಹೇಳಿದರೆಂದು ಹೊರ ಒಳಿತನ್ನೂ ಹಾನಿಯನ್ನೂ ಆತ ಮಾಡುವುದಿಲ್ಲ. ಕೇಳುವವನ ಪುಣ್ಯಫಲದಿಂದ ಪರಮಾತ್ಮನ ಫಲ ನಿರ್ಣಾಯಕ ನಿರ್ಣಾಯಕ್ರಿಯೆ ಮೂಲಕ ಫಲ ಲಭಿಸುವುದು. ಸರಿಯಾದ ಆಶೀರ್ವಾದ ಮಾಡುವ ಗುರುಹಿರಿಯರು ಪುಣ್ಯ ಗಳಿಸಿದವರು; ಅವರಿಂದ ಅವರ ವರ—ಆಶೀರ್ವಾದ—ಅನುಗ್ರಹಗಳಿಗೆ ಫಲ ಶೀಘ್ರ. ಅದೇ ರೀತಿ ಸರಿಯಾದ ಶಾಪ ನೀಡುವವನ ಪಾಪ ಸಂಚಯ ಮಾಡುತ್ತಲೇ ಇರುವುದರಿಂದ ಅವನ ಶಾಪ ನಿಷ್ಫಲವಾಗಿ ವಿಯೋಗಬಹುದು.

ಶಾಪ ಮತ್ತು ಆಶೀರ್ವಾದಗಳಲ್ಲಿ ಎರಡು ವಿಧಾಗ ಮಾಡುತ್ತಾರೆ: ವೈಚಾರಿಕ ಮತ್ತು ಶಾಬ್ದಿಕ. ವಿಚಾರಸಂಬಂಧವಾದದ್ದು ವೈಚಾರಿಕ; ಇದು ಶಬ್ದರೂಪದಲ್ಲಿ ಪ್ರಕಟವಾಗಬೇಕಾದ ಅಗತ್ಯವಿಲ್ಲ. ಮೂಕನಾಗಿದ್ದುಕೊಂಡೇ ಇದು ಶಪ್ತ ಪ್ರಭಾವ ತೋರಿಸಬಲ್ಲದು. ಕೆಲವು ಯೂತ್ರಿಕರು ಫಲಿಯನ್ನು ದೋಣಿಯಿಂದ ದಾಟಿಸಿದ್ದರು. ಆ ದೋಣಿಯಲ್ಲಿ ಇಬ್ಬರು ಸಾಧುಪುರುಷರಿದ್ದರು. ಇಬ್ಬರೂ ಮೌನೀ ಸರೂ ಇದ್ದರು. ಇವರಲ್ಲಿ ಒಬ್ಬ ಉದ್ದಂಡ. ಆತನು ಸಾಧುವನ್ನು ಕಳಿತಲ್ಲಿಂದ ಎಬ್ಬಿಸಿ, ತಾನವನ ಸ್ಥಳದಲ್ಲಿ ಕುಳಿತ. ಸಾಧು ಮೂತಾಡಲಿಲ್ಲ. ಜನರಂದರು, ಏನಾದರೂ ಶಾಪಕೊಡಿ. ಆವಗ ಜಡ ಮೂಲವೂ ಉರುಳಲಿ. ಆವರ್ಕೆ ಸಾಧು ಒಂದು ಮಾತನ್ನೂ ಆಡಲಿಲ್ಲ. ನೆರೆಯ ನೀರನ್ನು ಸೀಳುತ್ತ ದೋಣಿ ಮುಂದುವರಿಯುತ್ತಿತ್ತು. ಶರೀತಟದಲ್ಲಿ ಕಬ್ಬಿಣದ ಸಲಾಕೆಯೊಂದನ್ನು ನಾಟಿದ್ದರು. ದೋಣಿ ಕೆನಾರಿ ಮುಳ್ಳಲಿತ್ತು; ಅಷ್ಟರಲ್ಲೇ ಪೋಲೀಸಿನವನು ಬೇಗ ದಡ ಸೇರುವ ಆಶಯದಿಂದ ನದಿಗೆ ಹಾರಿದನು. ಅವನು ಸಲಾಕೆಯಲ್ಲಿ ಸಿಕ್ಕಿಕೊಂಡನು. ಸಾಧುವಿನ ಆಶಯವನ್ನ ಮಾಡಿದ್ದರ ಫಲವಿದು ಎಂದು ಎಲ್ಲರೂ ಆಡಿಕೊಂಡರು. ಸಾಧು ವೈಚಾರಿಕ ಶಾಪ ನೀಡಿದ್ದನು.

ಮೂತಿಳಿ ಮೂಲಕ ಪ್ರಕಟವಾಗುವ ಶಾಪ ಅಥವಾ ವರದಾನವು ಶಾಬ್ದಿಕ. ಮಾನವನಾಗಿದ್ದು ಈ ಜಗದ ಶಾಪವನ್ನು ನೀಡುವುದು ಸಾಧ್ಯವಿಲ್ಲ. 'ವೈಚಾರಿಕ' ದೊಡಕ್ಕೆ ಹೋಲಿಸುವಾಗ, ಇದರ ಪ್ರಭಾವ ಕಡಿಮೆ.

ಇಂದು ಜನರು ಸ್ವಾರ್ಥವಶದಿಂದ ಅಥವಾ ಸಾಮಾನ್ಯ ಕೃತಜ್ಞತಾ ಕಾರಣಗಳಿಂದ ಮಾತು ಮಾತಿಗೆ ಆಶೀರ್ವಾದ ಕೊಡ ತ್ತಾರೆ; ತಮ್ಮ ಸ್ವಾರ್ಥದಲ್ಲಿ ಎಳ್ಳಷ್ಟು ಬಾಧೆಯಾಯಿತೆಂದಾಗ, ಶಾಪಕೊಡುತ್ತಾರೆ ಇಂತಹ ಆಶೀರ್ವಾದ ಶಾಪಗಳು ಪೂರ್ಣವಾಗುವುದೆಂದು ಹೇಳಬರುವುದಿಲ್ಲ. ಆಶೀರ್ವಾದ ಅಥವಾ ಶಾಪಗಳು ತಮ್ಮ ಫಲನೀಡಬೇಕಾದರೆ, ಅವಕ್ಕೆ ಕೊಡುವವಳ ಪುಣ್ಯ ವಿಚಾರಗಳ ಸಮರ್ಥ, ದೃಢ ಬುನಾದಿಯಿರಬೇಕು.

ಮನುಸ್ಮೃತಿಯಲ್ಲಿ ಒಂದು ಶ್ಲೋಕವಿದೆ.

ಅಭಿವಾದನ ಶೀಲಸ್ಯ
ನಿತ್ಯಂ ವೃದ್ಧೋಪಸೇವಿನಃ
ಚತ್ವಾರಿ ತಸ್ಯ ವರ್ಧಂತೇ
ಆಯುರ್ವಿದ್ಯಾಯಶೋಬಲಂ॥

ಪ್ರತಿದಿನವೂ ತಾಯ್ತಂದೆಗಳು, ಗುರುಜನರು ಮೊದಲಾದವರನ್ನು ಸೇವಿಸುವವನು, ಆಯುಸ್ಸು, ವಿದ್ಯೆ, ಯಶಸ್ಸು ಮತ್ತು ಬಲಗಳನ್ನು ಹೆಚ್ಚಿಸಿಕೊಳ್ಳುತ್ತಾನೆ.

ಇದು ಸತ್ಯವೆಂದು ಅನೇಕರಿಗೆ ಅನುಭವಕ್ಕೆ ಬಂದಿದೆ.

ಪ್ರೇಮದ ಕಾಯದೆ ಇನ್ನುವಳ್ಳಿ ಮಾತ್ರ ಸ್ಥಿರತೆ ಇರುತ್ತದೆ.

ಂ ಂ ಂ

ಮಿತ ಕುಟುಂಬ ಯೋಜನೆಗೆ
ಅತ್ಯಪಯುಕ್ತ ಪುಸ್ತಕ

ಮಿತ ಸಂತತಿ

ಜನಪದಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬಾಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ.
ಪಾಲುಕೋಟೆ, ಉಡುಪಿ, ದ. ಕ.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27.

Phone No.— 1 28337
2 29837

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಸಂಗ್ರಾಹ್ಯ ಸಂಕಲನಗಳು		ಹೆಂಗುಸರ ಕತೆಗಳು	2—00
ಶಿಲ್ಪಿ	1—50	ನುಡಿಮುತ್ತುಗಳು	1—50
ಪ್ರತಿಜ್ಞಾ ಸೂರ್ತಿ	1—00	ರಂಜಗಜಜ್ಞಾಡು	2—00
ನೀತಿ ವಿನೋದ ಕತೆಗಳು	1—00	ಪುಷ್ಪವನ	2—00
ಕಥಾವಳಿ	2—00	ಮುತ್ತಿನ ಮಾಲೆ	1—80
ಪರಿಚಯ ಪ್ರಬಂಧಗಳು	1—00	ಹೂ ಗೊಂಚಲು	1—70
ಹಾಟಕ ಪ್ರಪಂಚ	1—50	ವಿಕಾಂಕಿ ನಾಟಕಗಳು	1—00
ಜೀವನಕಲೆ	1—00	ಭಾರತದ ನಾಲ್ಮುಮುಖಿಗಳು	1—00
ಅನುವಾದಿತ ಕತೆಗಳು	1—20	ನವಭಾರತ ಪುಸ್ತಕ ಭಂಡಾರ,	
ರಂಜ ಸುಮನ	1—20	ಉಡುಪಿ.	

ತನ್ನ ಕಾಲನ್ನು ತಾನೇ ಚೆಂಚ್ಚಿಕೊಂಡರು

(ಬದನೇ ಪುಟದಿಂದ)

ರಲ್ಲಿ ಗರ್ಭಾರ್ಥವೇನಿದೆ? ಅವರಲ್ಲಿ ಬಕ್ಷ ತೆಯಿಲ್ಲವೆಂದೆ? ಎದೆಗಾರಿಕೆಯಿಲ್ಲವೆಂದೆ? ಶ್ರೀ ಚರಣಸಿಂಗರು ಸಂವಿಧಾನದಲ್ಲಿ ಸ್ತ್ರೀ ಪುರುಷರಿಗೆ ಕೊಡ ಮೂಡಿದ ಸಮಾನಾವಕಾಶ—ಸಮಾನಾಧಿಕಾರಗಳನ್ನು ಕಸಿದು ಕೊಳ್ಳಲೇಕೆ ಮನಸ್ಸು ಮಾಡುತ್ತಾರೆ? ಅವರ ಈ ಸ್ತ್ರೀ ದ್ವೇಷಕ್ಕೇನು ಕಾರಣವಿರಬಹುದು? ಒಲಿದರೆ ನಾರಿಯೊಗುವನಲು ಮುನಿದರೆ ಮಾರಿಯೊಗುತ್ತಾಳೆಂಬುದು ಅವರಿಗೆ ಚೆನ್ನಾಗಿ ಗೊತ್ತು. ಬೆರಳು ತೋರಿಸಿದಾಗ ಕೈಯನ್ನೇ ನುಂಗುವ ಶ್ರೀಮತಿ ಗಾಂಧಿಯವರನ್ನು ಅವರೂ ತಿಳಿದುಕೊಂಡಿದ್ದಾರೆ. ಅವರಲ್ಲಿ ಮೊಳಕೆ ಬಂದಿರಬಹುದಾದ ಸ್ತ್ರೀ ದ್ವೇಷಕ್ಕೆ ಶ್ರೀಮತಿ ಗಾಂಧಿಯವರೆ ಮೊಂಡಾಟ್ಟಿ ರಾಜ್ಯಕೀಯವೇ ಮೂಲ ಪ್ರೇರಕ ಶಕ್ತಿಯಾಗಿದ್ದರೂ ವಿಸ್ಮಯವಿಲ್ಲ.

ಂ ಂ ಂ

ಪಂಚಾಯಿತಿ ಬಾದಲ್ ಸಚಿವ ಸಂಪುಟ ಅಸ್ತಿತ್ವಕ್ಕೆ ಬರುವುದಕ್ಕೆ ಕೊಡಲು ಉರುಳಿದ ಗುನ್ನಾಂ ಸಿಂಗರಿಗೆ ಬೆಂಬಲ ಘೋಷಿಸಲು ಉತ್ಸಾಹ ತೋರಿದ ಇಂಡಿಕೇಟ್ ಅಧ್ಯಕ್ಷ ಶ್ರೀ ಜಗಜ್ಜೀವನ ರಾಮರು ಇಂದು ನಿರಾಶರಾದರು. ಈಗ ಶ್ರೀ ಬಾದಲ್ಲರಿಗೆ ಒಲಿ ಕಡಿನೆಯೂಗಿದೆ. ಜನ ಸಂಘದವರು ಇವರಿಂದ ದೂರವಾಗಿದ್ದಾರೆ. ಅದುದರಿಂದ ಶ್ರೀ ರಾಮರಕ್ಷೆ ಅವರಿಗೆ ಬೇಕು. ಶ್ರೀರಾಮರ ಅಭಿಲಾಷೆಯೂ ಇದೇ. ಆದುದರಿಂದ ಶ್ರೀ ಬಾದಲ್ಲರಿಗೆ ಆಧಾರ ಸ್ತಂಭನಾಗಲು ಶ್ರೀರಾಮರು ಒಪ್ಪುತ್ತಾರೆ.

ಅಂದು ಗುನ್ನಾಂ, ಇಂದು ಬಾದಲ್, ಮುಂದಾರು ಕೋದಬೇಕು. ರಾಜ್ಯ ಕೀಯ ಪಕ್ಷಗಳು ಪರಸ್ಪರ ಸಹಕಾರ ನೀಡುವುದು ಪ್ರಜಾಸತ್ತೆಯಲ್ಲಿ ಅವಶ್ಯವಾಗಿ ಬಹುದು. ಆದರೆ, ಇಂಡಿಕೇಟು ರಾಜ್ಯ ಸರಕಾರದ ಮೇಲೆ ತನ್ನ ಅಂಕೆಯನ್ನು ಇಡಲು ಸೂಕ್ಷ್ಮವಾದ ಪ್ರಯತ್ನ ಮಾಡುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಇಂಡಿಕೇಟಿನ ಸಹಕಾರದ ಬಗ್ಗೆ ಪಕ್ಷಪಾತ ತೋರಿಸುತ್ತಿರುವ ಅವನ್ನು ಉರುಳಿಸಲು ಪ್ರಯತ್ನಿಸುತ್ತಿವೆಂದು ಶಸ್ತ್ರ ಹೇರು

ಹೈಸ್ಕೂಲುಗಳಿಗೆ

ನವಯುಗ

ರಾಷ್ಟ್ರಪತಿ ಪಿ. ವಿ. ಗಿರಿಯವರು ನವಯುಗ ವಾರಪತ್ರಿಕೆಯನ್ನು ರಾಷ್ಟ್ರದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನಾಲಯ ಭಂಡಾರಗಳಿಗೆ ಕಡ್ಡಾಯ ಮಾ. ಸಿ. ಎಲ್. 4. 17-4/65—66ರ ಪತ್ರದಂತೆ ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಕ್ಯಾಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮ್ಯಾನೇಜರ್, ನವಯುಗ, ಉಡುಪಿ.

ಹೊಸ ತರದ ಸತ್ಯಾಗ್ರಹ

ಶ್ರೀ

ಅಂಗ ಸೌಷ್ಠವಕ್ಕೂ ಶರ್ಕರಪಿಷ್ಟಗಳಿಗೂ ಎಣ್ಣೆ ಸೀಗೆ. ಆದುದರಿಂದ ಸುಂದರಿಯರಲ್ಲಿ ಸುಂದರಿಯೂಗಿ ಕಾಣಬೇಕೆಂದು ಬಯಸಿ ನವರು ಶರ್ಕರ ಪಿಷ್ಟಗಳನ್ನು ಮುಟ್ಟುವುದಿಲ್ಲವಂತೆ.

ಕೃಶಕಾಯರಾಗಿ ಬೆಳೆದು ಬರಿ ಬಯಸುವವರು ಹಾಲಿವುಡ್‌ನ ಸಿನೆಮಾ ತಾರೆಯರು; ಅವರ ಸೌಂದರ್ಯದ ರಹಸ್ಯವಿಡೀ ಜಗತ್ತಿನ ಇತರೆಡೆಯ ಲಲನಾಮಣಿಗಳೂ ಅವರಂತೆಯೇ ತಾವೂ ಸುರರಾಗದಿದ್ದರೂ ಸುರಸುಂದರಿಯರಂತಾ ಬೇಕೆಂದು ಬಯಸ ತ್ತಾರೆ.

ಕೃಶಕಾಯತೆಯೇ ಸೌಂದರ್ಯ. ಇದರ ಮೇಲೆ ಕೃತಕ ಸೌಂದರ್ಯ ವರ್ಧಕಗಳ ಬಳಕೆಯಿಂದ ವಿಶ್ವಾಂದು ಬಗೆಯ ಅದ್ಭುತ ಸುಂದರಿಯರಾಗಿ ಕಾಣಿಸ ಬಹುದು.

ನಡು-ಎಸ್-ಜಘನಗಳ ಸೌಷ್ಠವತೆಯು ದಾಮೋದರನನ್ನು ಉಳಿಸಿಕೊಳ್ಳಲು ಈ ಸರ—ಸುಂದರಿಯರು ಎಷ್ಟು ಪ್ರಯತ್ನ ಪಡುತ್ತಾರೆಂಬುದು ಅವರಿಗೇ ಗೊತ್ತು.

ಅಮೆರಿಕೆಯು ಲಾಸ್ ಏಂಜಲ್ಸ್‌ನ ಹೆ

ವರು ಸರಕಾರದ ಮೇಲೆ ತಮ್ಮ ಹಿತೋಪಯಿಷಿಗಳು ಅಪರೋಕ್ಷವಾಗಿ ಅವುಗಳ ಮೇಲೆ ಸವಾರಿ ಮಾಡಲು ನೀತಿ—ಶಕ್ತಿಗಳನ್ನೂ ದೂರ ಮಾಡುವುದು ಅವಿವೇಕದ ಪರಮಾವಧಿ.

ಸಿರುನಾರ್ಥಕವೆನ್ನುವ ಸೌಂದರ್ಯೋಪಾಸಕರು ಇದ್ದಾರೆ. ದೇವಲೋಕದ ಏಂಜಲ್ಸ್ ಅವರಿಕೆಯಲ್ಲಿ ಒಂದು ನೆಲೆಫಿಂಕ ಊಹಿದು. ಅವರ ವಂಶದವರೆಲ್ಲ ಏಂಜಲ್ಸ್ ಆಗಬೇಕು ತಾನೆ! ಆದುದರಿಂದಲೇ ಆದು ಸುರ—ಸುಂದರಿಯರ ಅಪ್ಸರಸೆಯರ ತವರೂರು.

ಇದೇ ಬಗೆಯ ಹುಚ್ಚು ಅಮೆರಿಕೆಯ ಯುವಕರಿಗೂ ತಗಲಿದೆಯೆಂಬ ಸುದ್ದಿ.

ಇದುವರೆಗೆ ಯುವತಿಯರು, ಆಜೀವ ಶೋಡಷ ವರ್ಷೀಯರು ನಪೋಲಿಯನ್‌ರಂತೆ ಕಾಣಿಸಿಕೊಳ್ಳಲು ಪ್ರಯತ್ನ ಶೀಲರಾಗಿದ್ದರೆ ಯುವಕರು ತಮ್ಮನ್ನು ಷೋಡಶ ವರ್ಷೀಯ ಅತಿಕ್ಷಿ ಕರಪೇಕ್ಷಲರಂತೆ ತೋರಿಸಿಕೊಳ್ಳಲು ಹೊರಟಿದ್ದಾರೆ.

ಅಮೆರಿಕೆಯ ಸೈನ್ಯದಲ್ಲಿ ಸೇರಿಕೊಳ್ಳಲು ಇಂದು ಅಮೆರಿಕನ್ ಯುವಕ ಸಿದ್ಧನಿಲ್ಲ. ಅದಕ್ಕಾಗಿ ಹೇಗಾದರೂ ಮಾಡಿ ತಾನು ನರಪೇಕ್ಷಲನಾದರೆ ಸಾಕು. ಅಮೆರಿಕನ್ ಸುಖ—ಸಂಪತ್ತಿನ, ವೈಭವಗಳ ತಂಗಾಳಿಯನ್ನು ಯಥೇಚ್ಛ ಸೇವಿಸಿ ಹಾಯಾಗಿರ ಬಹುದು ಎಂಬ ಯೋಚನೆ?

ಯುವತಿಯರನ್ನು ಹಿಂಬಾಲಿಸುತ್ತಿದ್ದ ಆತ ಅಕೆಯಿಂದ ಈ ರಹಸ್ಯವನ್ನರಿತು ಕೊಂಡಿದ್ದಾನೆ. ಶರ್ಕರ-ಪಿಷ್ಟಗಳ ವೃತಕ್ಕೆ ತೊಡಗಿದ್ದಾನೆ.

ಇದರಿಂದ ಆತನ ದೇಹದಾರ್ಢ್ಯ ಇಳಿಮುಖವಾಗುತ್ತದೆ; ಭಾರಕಡಿಮೆಯಾಗುತ್ತದೆ; ಆಂಗ ಸೌಷ್ಠವ ಸುಂದರ ರಾವಣನಂತೆ ರೂಪಗೊಂಡರೂ ಅವನು ರಾವಣನಾಗಿ ವುದಿಲ್ಲ; ಇದರಿಂದ ತನ್ನ ಸುರಸುಂದರಿಯನ್ನೆತ್ತಿಕೊಂಡು ಸುರಲೋಕಕ್ಕೂ ಹಾರಿಹೋಗ ಬಹುದು, ಆಕೆ ಬೇಡನೆಪ್ಪಿ ವವಳಲ್ಲ.

ಈ ಬಗ್ಗೆ ಇದ ವರೆಗಿದ್ದ ಆತಂಕವೊಂದು ದೂರವಾಗಬಹುದು.

ಈ ನರಪೇಕ್ಷಲರಾಗುವ ಇಚ್ಛೆ ಅವರೆಲ್ಲಿ ಏಕೆ ಮೂಡಿತ? ಸೈನ್ಯ ಸೇರಲು ಒಲ್ಲದ್ದರಿಂದ ಎಂದು ಹೇಳಿದರೂ ಅವರೇಕೆ ಸೈನ್ಯ ಸೇರ ಬಯಸ ವುದಿಲ್ಲ?

ಸುಂದರಾತಿ ಸುಂದರೆ ಯುವತಿಯರೂ ಅಮೆರಿಕನ್ ಸೈನಿಕರಿಗೆ ಅಪ್ಸಾಪ್ತರೇನೂ ಆಲ್ಲ. ಸರಳ ಲಭ್ಯರು.

ಹಾಗಾದರೆ ಮತ್ತೇಕೆ?

ಯುವತಿಯೊಬ್ಬಳಿಗಾಗಿ ಪ್ರಾಣ ಬಿಡು ವುದಕ್ಕೂ ಸಿದ್ಧರಾದ ಸಾಹಸಿ ಅಮೆರಿಕನ್ನರು ಪ್ರಾಣ ಭಯದಿಂದ ಸೈನ್ಯ ಸೇರಲು ಹಿಂಜರಿಯುತ್ತಾರೆಂದು ಹೇಳಲಾಗದು.

ಸೈನ್ಯದಲ್ಲಿ ಶಿಸ್ತು—ನಿಯಮಗಳು ಕಠಿಣ. ಯಾವ ನಿಯಮಗಳ ಸೊಗಕ್ಕೂ ಸಿಕ್ಕಿ ಹಾಕಿಕೊಳ್ಳದ ಸ್ವೈರ ಪ್ರವೃತ್ತಿಯೇ ಇದಕ್ಕೆ ಪ್ರೇರಕವಿರಬಹುದೆ?

ವಿಶ್ವವ್ಯಾಪಿಯಾಗಿ ಬೆಳೆಯುತ್ತಿರುವ ಈ "ಅತಿಸ್ತ" ಅಮೆರಿಕನ್ ಯುವಕರ ರೆಲ್ಲೂ ಮೂಡಿತೆ?

ಅಥವಾ ನಿಕ್ಸನ್ನರ ನೀತಿಯುಪ್ಪು ಪ್ರತಿಭಟಿಸುವ ಹೊಸತರದ ಒಂದು ಬಗೆಯ ಅನ್ನ ಸತ್ಯಾಗ್ರಹವೇ ಇದು?

ಗುಣಾಗಾ ಹಕತೆಯೇ ಪಾರಿವಾರಿಕ ಜೀವನದ ಅಡಿಗಲ್ಲು.

ಂ ಂ ಂ

ಸಹಾನುಭೂತಿಯೇ ಸುಧಾರಣೆಯ ಅಡಿಗಲ್ಲು.

ಂ ಂ ಂ

ನಾನಕರ ಜಲತರ್ಪಣ

ಒಮ್ಮೆ ನಾನಕರು ಹರಿದ್ವಾರಕ್ಕೆ ಹೋದಾಗ ಎಷ್ಟೋ ಜನರು ಪೂರ್ವದಿಕ್ಕಿಗೆ ಮೋರೆ ಮಾಡಿ ಏರು ನಿಂತಿರುವುದನ್ನು ಕಂಡರು ಹೀಗೆ ಏಕೆ ಮಾಡುತ್ತಿದ್ದೀರಿ ಎಂದು ಕೇಳಲು "ಸ್ವರ್ಗಸ್ಥರಾಗಿರುವ ನಮ್ಮ ಹಿತ್ರಗಳ ಆತ್ಮ ಶಾಂತಿಗಾಗಿ" ಎಂದು ಅವರು ಉತ್ತರ ಕೊಟ್ಟರು. ಈ ಉತ್ತರ ಕೇಳಿ ನಸುನಕ್ಕು ನಾನಕರು ಮರುಪ್ಪಣನೇ ಪಶ್ಚಿಮ ದಿಕ್ಕಿಗೆ ಮುಖ ತಿರುಗಿಸಿ ನೀರು ಸೋಕ ಹತ್ತಿದರು. ಇವರು ಆಶ್ಚರ್ಯಪಟ್ಟು ಹೀಗೇಕೆ ಮಾಡುತ್ತಿದ್ದೀರಿ? ಎಂದು ಕೇಳಲು ನನ್ನ ಊರು ಇದ್ದಿಂದ ಪಶ್ಚಿಮ ದಿಕ್ಕಿನಲ್ಲಿದೆ. ಈ ಪರ್ವ ನರಯಾಗಿ ಬಳಲುತ್ತಾಗದ್ದರಿಂದ ಅಲ್ಲಿಯ ನನ್ನ ಹೊಲ ಒಣಗಹತ್ತಿದೆ. ಆದ್ದರಿಂದ ಆ ಹೊಲಕ್ಕೆ ನೀರು ಸೋಕುತ್ತಿದ್ದೇನೆ" ಎಂದು ನಾನಕರೆ ಉತ್ತರಕೊಟ್ಟರು.

ಇದನ್ನು ಕೇಳಿ "ಇಲ್ಲಿ ಸೋಕಿದ ನೀರು ನಿಮ್ಮ ಊರಿಗೆ ಹೋಗಿ ಮುಟ್ಟುವುದೇ ಸಾಧ್ಯವಿಲ್ಲ, ಇದಿಷ್ಟೂ ಪಾಸುಗೆ ಕೆಯೆದೇಕೆ?" ಎಂದು ಯಾತ್ರಿಕರು ಚಿಪ್ಪೆ ಹೊಡಯತ್ತಿದರು.

"ಇಲ್ಲಿ ಸೋಕಿದ ನೀರು ನೂರು ಮೈಲಿನ ಮೇಲಿನ ನೆಲ್ಲ ಊರ್ಗಳೇ ಮುಟ್ಟುವುದಿಲ್ಲ ಅಂದ ಮೇಲೆ, ಸರಯೂಕಡಿಯ ನಮ್ಮ ಹಿತ್ರಗಳಿಗೆ ಹೇಗೆ ಮುಟ್ಟೀತು?" ಎಂದು ನಾನಕರು ಮರುಪ್ರಶ್ನೆ ಹಾಕಿ ಯಾತ್ರಿಕರನ್ನು ಪರಿತ್ಯರಿಸಿದರು.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಅಂಗ್ಲಭಾಷಾಬೋಧಿನಿ
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ವಿನೂತನ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅಪೂರ್ವಾನುವಾದ.
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ॥ ಪಿ. ಆರ್. ಕೊರಡ್ಡಯ್ಯರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಪುಸ್ತಕ. ಇದರಲ್ಲಿ ಮಳೆಗಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ವಿಧಾನಗಳಿವೆ. ಹೊರಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ಭವಿಷ್ಯದ ಭರವಸೆ ತುಂಬಿದ

ಹೃಷಿಕೇಶದ ಔಷಧ ಸ್ಥಾವರ

ದೇಶದಲ್ಲೇ ಆಂಟಿಬಯೋಟಿಕ್ ಔಷಧಗಳನ್ನು ನಿರ್ಮಿಸುವ ಅತ್ಯಂತ ದೊಡ್ಡ ಘಟಕವಾದ, 25 ಕೋಟಿ ರೂಪಾಯಿಗಳ ಹೃಷಿಕೇಶ ಸ್ಥಾವರವು ಈಗ ಐದು ವಿಧದ ಆಂಟಿಬಯೋಟಿಕ್ ಔಷಧಿಗಳನ್ನು ತಯಾರಿಸುತ್ತಿದ್ದು ಪೇಟೆಯಲ್ಲಿ ದೊರೆಯುವ ಇದೇ ಬಗೆಯ ಯಾವುದೇ ಉತ್ತಮ ಔಷಧಿಗಳೊಡನೆ ಈ ಔಷಧಿಗಳು ಸಾಟಿಯಾಗಿವೆ. ಇದು ಭಾರತ ಸರ್ಕಾರದ ಔಷಧ ಸಂಸ್ಥೆಯೊಂದ ಐಡಿಪಿಎಲ್‌ಗೆ ಸೇರಿದೆ.

ಕಳೆದ ವರ್ಷದ (1969) ನವೆಂಬರ್ ತಿಂಗಳಿಂದ ಉತ್ಪಾದನೆ ಮತ್ತು ಮಾರಾಟಗಳಿಂದೂ ಗಣನೀಯ ಏಕೆಯನ್ನು ತೋರಿಸಿಕೊಂಡು ಬಂದಿವೆ. ಹೃಷಿಕೇಶದಲ್ಲಿ ತಯಾರಿಸಲಾಗುತ್ತಿರುವ ಜೀವರಕ್ಷಕ ಔಷಧಿಗಳನ್ನು ಇಂದು ಅನೇಕ ರಾಜ್ಯ ಸರ್ಕಾರಗಳಿಗೆ, ಕೇಂದ್ರ ಸರ್ಕಾರದ ಸಂಸ್ಥೆಗಳಿಗೂ, ಖಾಸಗಿಯವರಿಗೂ ಒದಗಿಸಲಾಗುತ್ತಿದೆ. ಒಂದು ಔಷಧ ಸಂಸ್ಥೆಯು ಆರಂಭಿಸಿದ ಬಳಿಕ ಅದರ ಯಂತ್ರವಿನ್ಯಾಸವನ್ನು ಪೂರ್ಣ ಕರಗತ ಮಾಡಿಕೊಳ್ಳಲು ಮತ್ತು ಉತ್ಪಾದನಾ ಫಲದಾಯಕತೆಯನ್ನು ಸಾಧಿಸಲು ಕನಿಷ್ಠ ಎರಡು ವರ್ಷಗಳಾದರೂ ಬೇಕಾಗುತ್ತದೆ.

ಔಷಧಿ ಸಂಸ್ಥೆ ಬಗ್ಗೆ ಮಾತನಾಡುವಾಗ ಉತ್ಪಾದನೆಯನ್ನು ಸುಸ್ಥಿರಗೊಳಿಸುವ ಮತ್ತು ಅದರ ಉತ್ಪಾದನಾ ಫಲದಾಯಕತೆಯನ್ನು ಸಾಧಿಸುವುದು ಎನ್ನುವ ದಕ್ಕೆ ವಿಶೇಷ ಅರ್ಥವಿದೆ. ಒಂದು ಔಷಧ ಸ್ಥಾವರವು ತನ್ನ ಪ್ರಮಾಣೀಕೃತ ಔಷಧಗಳನ್ನು ಯೋಜಿತ ಉತ್ಪನ್ನಗಳಿಗೆ ಸಮಾನವಾಗಿ ತಯಾರಿಸಿದಾಗ ಅಥವಾ ಬೇರೆ ನೂತುಗಳಲ್ಲಿ ಹೇಳುವುದಾದರೆ, ಗುಣಮಟ್ಟದ ಕಟ್ಟುನಿಟ್ಟಾದ ಪರೀಕ್ಷೆಯಲ್ಲಿ ಅವರ ಒಂದೊಂದು ತಯಾರಿಕೆಯೂ ತೇರ್ಗಡೆಯಾದಾಗ ಅದು ಒಂದು ಅತ್ಯುತ್ತಮ ಸ್ಥಾವರವನ್ನು ಪಡೆಯುತ್ತದೆ. ಈ ಘಟ್ಟವನ್ನು ತಲಪಿದಾಗ ಮಾತ್ರವೇ ಉತ್ಪಾದನೆಯನ್ನು ಹೆಚ್ಚಿಸುವುದು ಮಿತವ್ಯಯದಾಯಕವಾಗುತ್ತದೆ. ಹೃಷಿಕೇಶ ಸ್ಥಾವರವು ಆರಂಭಿಸಿದ ತನ್ನ ಬಹುತೇಕ ತಯಾರಿಕೆಗಳಲ್ಲಿ ಈ ಮಟ್ಟವನ್ನು ತಲಪಿದೆ. ಐದು ತಯಾರಿಕೆಗಳಲ್ಲಿ ನಾಲ್ಕರ ಉತ್ಪಾದನಾ ಸುಸ್ಥಿರತೆಯನ್ನು ಸಾಧಿಸಲಾಗಿದೆ. (ಪೆನ್ಸಿಕೋನ್ ಪೆನ್ಸಿಲಿನ್, ಸೋಡಿಯಂ ಪೆನ್ಸಿಲಿನ್, ಸ್ಟೆಪ್ಟೋಮೈಸಿನ್ ಮತ್ತು ಟೆಟ್ರಾಸೈಕ್ಲೆಸ್.) ಆಕ್ಸಿ—ಟೆಟ್ರಾಸೈಕ್ಲಿನ್ ತಯಾರಿಕೆಯಲ್ಲಿ ಈಗ ಸ್ಥಾವರವು ಈ ಮಟ್ಟವನ್ನು ತಲಪಲು ಪ್ರಯತ್ನಿಸುತ್ತಿದೆ.

ಒಂದು ಔಷಧ ಕಾರ್ಖಾನೆಯ ಕೀರ್ತಿಯು ಸಹಜವಾಗಿಯೆ ಅದರ ತಯಾರಿಕೆಗಳ ಗುಣಮಟ್ಟವನ್ನೇ ಅವಲಂಬಿಸಿರುತ್ತದೆ. ಯಾವ ಔಷಧ ಕಾರ್ಖಾನೆಯೂ, ಅದರಲ್ಲೂ ನಾನಾ ಬಗೆಯ ಆಂಟಿಬಯೋಟಿಕ್ ಔಷಧ ತಯಾರಿಕೆಗಳ ಹೊಸ ದೊಡ್ಡ ಕಾರ್ಖಾನೆಯಂತೂ ಸಡಿಲು ಭಾವನೆಯಿಂದ ಇರುವಂತಿಲ್ಲ. ಸಾರ್ವಜನಿಕರ ಕಣ್ಣಿಚ್ಚಾರಿಕೆಗೆ ಒಳಗಾಗುವ ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಗಳಂತೂ ತನ್ನ ಗುಣಮಟ್ಟವನ್ನು ಕೆಳಸ್ಥಿತಿಯಲ್ಲಿಡುವಂತೆಯೆ ಇಲ್ಲ. ಅಂತೆಯೆ ಹೃಷಿಕೇಶದ ಸ್ಥಾವರವು ಅಂತಂಕ ಗುಣಮಟ್ಟ ಫಲಂತ್ಯಕ್ತ ಫಾವನ್ನು ಅತ್ಯಂತ ಉನ್ನತ ಶ್ರೇಣಿಯಲ್ಲಿಟ್ಟುಕೊಂಡಿದೆ. ಈ ಸ್ಥಾವರದಲ್ಲಿ ಗುಣಮಟ್ಟಗಳ ಫಲಂತ್ಯಕರಾದ ಡಾ. ಕಾತ್ಯಾಲ್ ಅವರು ಈ ಪ್ರತಿನಿಧಿಯೊಂದಿಗೆ ಮಾತನಾಡುತ್ತ ಈ ಸ್ಥಾವರವು ಪೇಟೆಗೆ ಹಾಕಿದ ಔಷಧಿಗಳ ಗುಣಮಟ್ಟ ಭಾರತದ ಪ್ರಮುಖ ಔಷಧ ಪಟ್ಟಿಕೆ (ಫಾರ್ಮಕೋಪಿಯ)ಯಲ್ಲಿ ಸೂಚಿಸಲಾಗಿರುವುದಕ್ಕಿಂತಲೂ ಉನ್ನತವಾಗಿವೆಯೆಂದು ತಿಳಿಸಿದರು. ಆದಕ್ಕೆ ದೃಷ್ಟಾಂತವಾಗಿ ಅವರು ಸ್ಥಾವರದಲ್ಲಿ ತಯಾರಾಗುವ ಸ್ಟೆಪ್ಟೋಮೈಸಿನಿನಲ್ಲಿ ಫಾರ್ಮಕೋಪಿಯವು ಅನುಮತಿ ನೀಡುವುದಕ್ಕಿಂತಲೂ ಕಡಿಮೆ ನಂಜು ಇದೆಯೆಂದು ತಿಳಿಸಿದರು. ಔಷಧಿಗಳ ಗುಣಮಟ್ಟವು ಅತ್ಯುತ್ತಮವಾಗಿರಬೇಕು ಮತ್ತು ಅವು ದೀರ್ಘ ಜೀವನವನ್ನೂ ಹೊಂದಿರಬೇಕು ಎಂಬುದನ್ನು ಭರವಸೆಗೊಳಿಸುವುದಕ್ಕೆ ಸ್ಥಾವರದವರು ತಮ್ಮ ನಿಷ್ಕಾರತೆಯನ್ನೇನು ಬಚ್ಚಿಟ್ಟುಕೊಳ್ಳುವುದಿಲ್ಲ.

ಸಿ. ಎನ್. ಜಾರಿಯವರ ಮಾತುಗಳಲ್ಲೇ ಹೇಳುವುದಾದರೆ ಈ ಸ್ಥಾವರದ ಮುಂದೆ ಎರಡು ಮುಖ್ಯ ಗುರಿಗಳಿವೆ: 'ಯಾವತ್ಕಾಲವೂ ಗುಣವಟ್ಟವು ಉನ್ನತವಾಗಿರಬೇಕು. ಉತ್ಪಾದನೆ ಹೆಚ್ಚಳ ಮತ್ತು ಬೆಲೆಗಳ ಇಳಿತ ಏಕಕಾಲಕ್ಕೆ ನಡೆಯುತ್ತಿರಬೇಕು.'

ಸ್ಥಾವರದ ಅಧಿಕಾರಿಗಳು ಇವೆರಡು ಗುರಿಗಳನ್ನು ಈಡೇರಿಸುವುದಕ್ಕಾಗಿ ಶ್ರಮಿಸುತ್ತಿದ್ದಾರೆ. ಇದರ ಫಲಿತಾಂಶವೂ ಉತ್ತೇಜನಕಾರಿಯಾಗಿದೆ. ಕಳೆದ ವರ್ಷದ ಆಗಸ್ಟ್ ತಿಂಗಳನಲ್ಲಿದ್ದ ಎರಡು ಟನ್‌ಗಳ ಉತ್ಪಾದನೆಯು ಈಗ ತಿಂಗಳೊಂದಕ್ಕೆ ಆರು ಟನ್ನುಗಳಷ್ಟು ಏರಿದೆ. ಈ ವರ್ಷದಲ್ಲಿ ತಿಂಗಳೊಂದಕ್ಕೆ 10 ಟನ್ನು ಆಂಟಿಬಯೊಟಿಕ್ ಔಷಧಿಗಳನ್ನು ತಯಾರಿಸಬೇಕೆಂಬುದೂ ಇದರ ಗುರಿ. ಈ ಗುರಿ ಸಾಧನೆಗೆ ಅವರು ಅತ್ಯುತ್ಸಾಹದಿಂದ ಶ್ರಮಿಸುತ್ತಿದ್ದಾರೆ. ಮೂಲ ದ್ರವ್ಯಗಳಿಂದ ಔಷಧಿ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ಮತ್ತು ದುಬಾರಿಯಾದ ದಾಸ್ತಾನುಪಡಿಕೊಂಡ ಆಮದು ಪದಾರ್ಥಗಳಿಗೆ ಬದಲು ದೇಶೀಯ ಆಗ್ಮೆಂಟೇಷನ್ ಪದಾರ್ಥಗಳನ್ನು ಬಳಸಿಕೊಳ್ಳುವ ಮೂಲಕ ಅವರು ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಿದ್ದಾರೆ.

ಈ ಎಲ್ಲ ಶ್ರಮಗಳ ಫಲವಾಗಿ, ಕಳೆದ ಒಂಭತ್ತು ತಿಂಗಳಲ್ಲಿ ಪೆನ್ಸಿಲಿನ್ ಉತ್ಪಾದನೆ ವೆಚ್ಚವು ಮೂರನೆ ಒಂದು ಭಾಗದಷ್ಟು ಕಡಮೆಯಾಗಿದೆ. ಇದೇ ಅವಧಿಯಲ್ಲಿ ಸ್ಟೆಪ್ಟೊಮೈಸಿನ್ ಉತ್ಪಾದನೆ ವೆಚ್ಚವು ಸೇ. 50 ಕಡಮೆಯಾಗಿದೆ.

ಉನ್ನತ ಉತ್ಪಾದನೆಯು ಹಾದಿಯಲ್ಲಿ ಹೃಷಿಕೇಶದ ಅಧಿಕಾರಿಗಳು ಎದುರಿಸುತ್ತಿರುವ ಅಡಚಣೆಗಳು ಅನೇಕವಾಗಿವೆ. ಕಳೆದ ಮೇ ತಿಂಗಳಲ್ಲಿ ಉತ್ಪಾದನಾ ಯೋಜನೆಯನ್ನು ಕಾರ್ಯಗತಗೊಳಿಸಲು ಬಹುದೊಡ್ಡ ಅಡ್ಡಿಯೊದಗಿದೆಂದರೆ, ಔಷಧಿಗಳ ಸಂಗ್ರಹಕ್ಕೆ ಬೇಕಾದ ಅಯೋನೀಕೃತ ಅಲ್ಯೂಮಿನಿಯಮ್ ಡಬ್ಬಗಳ ಅಭಾವ. ವಿಶೇಷ ರೀತಿಯ ಈ ಡಬ್ಬಿಗಳು ಕೆಲವೊಂದು ಕಚ್ಚಾಪದಾರ್ಥಗಳು ಮತ್ತು ಪೊಟ್ಟಣ ಕಟ್ಟುವ ಸಾಮಾಗ್ರಿಗಳು ಮೊದಲಾದವು ಪ್ರಸ್ತುತ ಬರಾಜುಗಾರರ ಪೇಟೆಯ ವಸ್ತುಗಳಾಗಿದ್ದು ಕೆಲವೇ ತಯಾರಕರು ಮಾತ್ರವೇ ಸರಬರಾಜು ಮಾಡುವುದರಿಂದಾಗಿದ್ದಾರೆ.

ಅದೇರೀತಿ ಪೆನ್ಸಿಲಿನ್ ಮತ್ತು ಸ್ಟೆಪ್ಟೊಮೈಸಿನ್‌ಗಳಿಗೆ ನ್ಯೂಟ್ರಲ್—ಸಲ್ಫೇಸ್ ವೈಯಲುಗಳ ಹಾಗೂ ಟೆಟ್ರಾಮೈಸಿನ್ ಮತ್ತು ಆಕ್ಸಿ—ಟೆಟ್ರಾಸೈಕ್ಲೆಸ್‌ಗಳಿಗೆ ಕ್ಯಾಪ್ಸೂಲುಗಳ ಸರಬರಾಜು ಕೂಡ ಸರಿಯಾಗಿಲ್ಲವಷ್ಟೇ ಅಲ್ಲ, ದೋಷಪೂರ್ಣ ಆಗಿದೆ. ಇವುಗಳನ್ನು ಸರಬರಾಜು ಮಾಡುವವರು, ತಮ್ಮ ವಚನಗಳನ್ನು ಪಾಲಿಸಲು ಖಾಸಗೀ ಸಂಸ್ಥೆಯುವರಾಗಿದ್ದಾರೆ. ಹೀಗೆ ಪೊಟ್ಟಣ ಸಾಮಗ್ರಿಗಳ ಅಭಾವದಿಂದಾಗಿ ಸ್ಥಾವರವು ತನ್ನ ಉತ್ಪಾದನಾ ಗುರಿಯನ್ನು ಮುಟ್ಟಲು ಶಕ್ತವಾಗಿಲ್ಲ. ಇದುಂದ ಅದರ ಮೂಲಬಂಡವೆಲೆ ಒಟ್ಟಾರೆ ಅದರ ಆರ್ಥಿಕ ಸ್ಥಿತಿಯ ಮೇಲೂ ಪರಿಣಾಮವಾಗುತ್ತದೆ.

ದೇಶದಲ್ಲೇ ಅತ್ಯಂತ ದೊಡ್ಡ ಆಂಟಿಬಯೊಟಿಕ್ಸ್ ಔಷಧಿ ಕಾರ್ಖಾನೆಯು ಮುಂದಿರುವ ಪ್ರತಿಕ್ಷೇಪಗಳಾದರೂ ಏನು ಎಂದು ಅಂತ್ಯದಲ್ಲಿ ನಾವು ಕೇಳಬಹುದು.

ಯಾವುದೇ ಮಾನ್ಯೂಫ್ಯಾಕ್ಚರಿಂಗ್ ಸಂಸ್ಥೆಯೂ ಲಾಭಕರವಾಗಿ ನಡೆಯಲು ಅಧಿಕಾರಿಗಳು ತುಂಬಾ ಎಚ್ಚರಿಕೆಯನ್ನು ತೋರಿಸುತ್ತಾರೆ. ಆದರೆ ಈ ಕಾರ್ಖಾನೆಯೂ ಮಿತವಾದ ದರಗಳಲ್ಲಿ ಜೀವರಕ್ಷಕ ಔಷಧಿಗಳನ್ನು ಪರಬರಾಜು ಮಾಡಬಲ್ಲ ವಿಶ್ವಾಸವನ್ನು ಆಡಿಯೆ ಆಡಿತೆಯೆಂಬ ನಿಶ್ವಾಸ ಅವರಿಗಿದ್ದೇ ಇದೆ.

ಐಡಿಪಿಎಲ್‌ನ ಆಂಟಿಬಯೋಟಿಕ್ ಔಷಧದ ಕಾರ್ಖಾನೆಯು ಟೆಟ್ರಾಸೈಕ್ಲಿನ್ ಮತ್ತು ಆಕ್ಸಿ ಟೆಟ್ರಾಸೈಕ್ಲೆಸ್‌ಗಳಂಥ ಕೆಲವೊಂದು ಅಗತ್ಯ ಔಷಧಿಗಳ ಬೆಲೆಗಳನ್ನು ಇಳಿಸುವಲ್ಲಿ ಸಹಾಯಕವಾಗಿದೆ. ಶ್ರೀ ಎಸ್. ಸಮ್ಮಾದಾರ್ ಅವರು ಈ ಮಾತನ್ನೇ ಗಟ್ಟಿಸಿಹೇಳಿದರು.

ಐಡಿಪಿಎಲ್ ಔಷಧ ಪೇಟೆಯನ್ನು ಪ್ರವೇಶಿಸಿ ಪೈಪೋಟಿ ಪಡಲು ವಿದೇಶಿ ಕಂಪೆನಿಗಳು ಟೆಟ್ರಾಸೈಕ್ಲೆನ್‌ನನ್ನು ಒಂದು ಕ್ಯಾಪ್ಸೂಲಿಗೆ ರೂ. 1ರಿಂದ ರೂ. 1-50ರ ತನಕ ಮಾರುತ್ತಿದ್ದುವು. 1968—69 ರಲ್ಲಿ 'ಐಡಿಪಿಲ್' ಒಂದು ಕ್ಯಾಪ್ಸೂಲಿಗೆ 60 ಪೈಸೆ ಬೆಲೆಯೊಡನೆ ಪ್ರವೇಶಿಸಿದಾಗ ವಿದೇಶಿ ಕಂಪೆನಿಗಳು ಒಂದು ಕ್ಯಾಪ್ಸೂಲಿಗೆ 80 ಪೈಸೆ ಗೊತ್ತುಪಡಿಸಿ ದರಗಳನ್ನು ಇಳಿಸಲೇಬೇಕಾಯ್ತು. ಈ ಆಧುನಿಕ ಔಷಧಗಳಲ್ಲಿ ವಿದೇಶೀ ಕಂಪೆನಿಗಳು ಭಾರತೀಯ ಗಿರಾಕಿಗಳನ್ನು ಕಂಪೆನಿ ತೀರ್ಮಾನ ಮಾಡಲಿದ್ದಾತನ್ನು ತಿದ್ದಾರೆಂಬ ಸತ್ಯ ಸಂಗತಿ ಮಾತ್ರ ಉಳಿದೇ ಉಳಿಯಿತು. ಸರ್ಕಾರವು ಇದನ್ನು ತಿಳಿದಿದೆ. ಅವರ ಉತ್ಪಾದನಾ ವೆಚ್ಚಕ್ಕೂ ಪೇಟೆ ಧಾರಣೆಗೂ ಯಾವ ಸಂಬಂಧವೂ ಇಲ್ಲ. ಪ್ರತಿ ಸರಬರಾಜು ದಾಸ್ತಾನನ್ನು—ಕಚ್ಚಾ ಕ್ಷೇತ್ರದ ಔಷಧ ಉದ್ದಿಮೆಯನ್ನು ನಿರ್ಮಿಸಿಕೊಳ್ಳದೆ ವಿದೇಶಿ ಕಂಪೆನಿಗಳು ತಮ್ಮ ಬೆಲೆಗಳನ್ನು ಇಳಿಸುವಂತೆ ಬಲಾತ್ಕರಿಸುವುದು ಸಾಧ್ಯವಾಗಲಿಕ್ಕಿಲ್ಲ.

ಹೃಷಿಕೇಶ ಔಷಧಿ ಸ್ಥಾವರವು ತನ್ನ ಪೂರ್ಣ ಸಾಮರ್ಥ್ಯದಲ್ಲಿ ಒಂದಂಶವನ್ನು ಮಾತ್ರವೆ ಸಾಧಿಸಿಕೊಂಡು ತನ್ನ ಆರಂಭ ಘಟ್ಟದಲ್ಲೇ ಕೆಲವೊಂದು ಆಂಟಿಬಯೋಟಿಕ್ ಔಷಧಿಗಳ ಪೇಟೆ ಧಾರಣೆಗಳಲ್ಲಿ ಇಂಥ ಮೂಲ ಬದಲಾವಣೆ ಮಾಡಿತೆಂದರೆ ಅದು ತನ್ನ ಸಂಪೂರ್ಣ ಸಾಮರ್ಥ್ಯವನ್ನು ತಲಪಿದಾಗ ಎಂಥ ಮಹತ್ವದ ಪಾತ್ರವನ್ನು ನಿರ್ವಹಿಸಬಲ್ಲುದೆಂಬುದನ್ನು ಯಾರೂ ಊಹಿಸಿಕೊಳ್ಳಬಹುದಾಗಿದೆ. ಈ ಸ್ಥಾವರವು ತನ್ನ ವಿಜ್ಞಾನಿಗಳ ಸಾಧನೆಗಳನ್ನೂ ಇತರ ಸಂಗತಿಗಳನ್ನೂ ಉಪಯೋಗಿಸಿಕೊಂಡು ಔಷಧಿಗಳ ಬೆಲೆಗಳನ್ನು ಇನ್ನೂ ಕಡಮೆ ಮಾಡಬಲ್ಲುದೆಂಬುದರಲ್ಲಿ ಒಂದಿಷ್ಟೂ ಅನುಮಾನವಿಲ್ಲ. ಮತ್ತೆ ಅದು ಅದರ ತನ್ನ ಸಂಚಿತ ಫಲ್ಯಗಳನ್ನು ತೊಡೆದು ಹಾಕಿ ಲಾಭಗಳಿಸಲಾರಂಭಿಸುತ್ತದೆ ಮತ್ತು ಇನ್ನೂ ಕಡಿಮೆ ಬೆಲೆಗೆ ಔಷಧಿಗಳನ್ನು ಮಾರಲು ಶಕ್ತವಾಗುತ್ತದೆ.

ಬಹುತೇಕರು ಪ್ರಾಥಮಿಕ ಶಿಕ್ಷಣದ ಹಿನ್ನೆಲೆಯುಳ್ಳವರಿರುವ ಕಾರಣ ಕಾರ್ಮಿಕರು, ವಿಜ್ಞಾನಿಗಳು ಮತ್ತು ಎಂಜನಿಯರುಗಳು, ಸೋವಿಯತ್ ತಜ್ಞರು ಮತ್ತು ಭಾರತೀಯ ಅಧಿಕಾರಿಗಳು ಉತ್ಪಾದನೆಯನ್ನು ಹೆಚ್ಚಿಸಲು, ಬೆಲೆಗಳನ್ನು ಕಡಮೆ ಮಾಡಲು ಮತ್ತು ಉದ್ದಿಮೆ ಸಂಸ್ಥೆಯು ಲಾಭಕರವಾಗುವಂತೆ ಮಾಡಲು ಏಕ ಮನಸ್ಸಿನಿಂದ ದುಡಿಯುತ್ತಿದ್ದಾರೆ. ಅಲ್ಪ ಬೆಲೆಗೆ ಗುಣವಟ್ಟದ ಔಷಧಿ ಇದೇ ಅವರ ಗುರಿ. ಮಿಲಿಯಂತರ ಜನರಿಗೆ ಆರೋಗ್ಯವನ್ನು ಭರವಸೆಗೊಳಿಸುವಲ್ಲಿ ದಲಿತ ಜನರ ಉದ್ಧಾರಕ್ಕಾಗಿ ಅವರು ತಮ್ಮದೆ ಆದ ಸಣ್ಣ ಕಾಣಿಕೆಯನ್ನು ಸಲ್ಲಿಸುತ್ತಿದ್ದಾರೆ.

—ಒ. ಪಿ ಮೆಹ್ರೋತ್ರ.

ಹೈಸ್ಕೂಲುಗಳಿಗೆ
ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಪಿ. ಎಲ್. 4. 17—4/65—66ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

ವಿನೋದ ಪುಟ

'ನನ್ನ ಕವಿತೆಗಳನ್ನು ಈಗ ಎರಡು ಪಾಲು ಹೆಚ್ಚು ಜನರು ಓದುತ್ತಿದ್ದಾರೆ.'

"ಅಭಿನಂದನೆ, ಏನಿಗೆ ಮದುವೆಯೂ ಯಿತೆಂದು ನನಗೆ ತಿಳಿದಿರಲಿಲ್ಲ"

೦ ೦ ೦

ಗಿರಾಕಿ : "ನಾನೊಂದು ಪುಸ್ತಕ ಕೊಳ್ಳಬೇಕು"

ಪೂರಾಟನ ಹಡಗಿ : 'ಒಂದಿಷ್ಟು ಲಘು ಸಾಹಿತ್ಯವೆ?'

ಗಿರಾಕಿ: "ಯಾವುದಾದರೂ ಸರಿ. ನನ್ನ ಕಾರೂ ಇಲ್ಲಿಯೆ ಇದೆ."

೦ ೦ ೦

ತನ್ನ ಗಂಡನ ಬಗ್ಗೆ ಅಧಿಕಾರಿಯ ವಡನೆಯೊಬ್ಬಳು ರತಿಯುದ ಸೈನಿಕ ಪಾಯಿಂಕ ಸುಬ್ರೊಮೊವ್ ಮುಂದೆ ದೂರಿಕೊಳ್ಳುತ್ತಿದ್ದಳು—

'ಸನ್ಯಾನ್ಯಕ್ಕೆ, ಆತ ನನ್ನನ್ನು ತಂಬಾ ಕೆಟ್ಟದಾಗಿ ನೋಡಿಕೊಳ್ಳುತ್ತಾರೆ' ಎಂದಳಾಕೆ.

"ಆದು ನನಗೆ ಸಂಬಂಧಪಟ್ಟ ವಿಷಯವಲ್ಲ"ಎಂದು ಸುಬ್ರೊಮೊವ್ ಉತ್ತರ ಸಿದರು.'

"ನಿನ್ನ ಬೆನ್ನ ಹಿಂದೆ ನಿನ್ನನ್ನು ಆತ ಕರೆಯುತ್ತಾನೆ.

'ಸನ್ಯಾನ್ಯ ಮಹಿಳೆಯೆ ನೀವು ಚೆಂತಿಸ

(ಮೂಲದೇ ಪುಟದಿಂದ)

ವ, ಹೂತ್ಕಾರ್ಥಿಗಳ ಶಿಕ್ಷಣಕ್ಷಣೆಯ ಭಾರವನ್ನು ಸಂಬಂಧಪಟ್ಟವರು ಹೊರ ಬೇಡವೆ? ಹೃಷಿಕೇಶದಿಂದ ವಾಹನಗಳನ್ನು ಬಿಗುವುದಕ್ಕೆ ಮೊದಲು ವಾತಾವರಣವನ್ನು ತಿಳಿದುಕೊಳ್ಳಬೇಡವೆ? ಛಾರೀ ನೆರೆ ಇಂದು ಅದರಲ್ಲಿ ವಾಹನಗಳು ಕೊಚ್ಚಿ ಹೋಗಬೇಕೆಂದರೆ, ಮಳೆ ಬಹಿ ದಿನಗಳಿಂದಲೂ ಬೀಳುತ್ತಿರಲೇಬೇಕೆನಿಸ ತ್ತದೆ. ಅಲಕನಂದೆಯಲ್ಲಿ ಕೊಚ್ಚಿ ಹೋದವರ ಸಂಖ್ಯೆ ಏವತ್ತಿರಬಹುದು; ಏನೊರಿರಬಹುದು; ಏದೂ ಇರಬಹುದು; ಪ್ರವಾಸೋದ್ಯಮ ವಂತ್ರಿ ಶಾಪೆರು ನೈತಿಕ ಹೊಣೆಗಾರಿಕೆ ಈ ನರಮೇಧದಲ್ಲಿ ಇದ್ದೇ ಇದೆ. ಇದರಿಂದ ಆದು ಹೊಸ ರೀತಿಯ ಟ್ಟಿಕ ಜಾರಿಕೊಳ್ಳುತ್ತದೆ. ಸಾಧ್ಯವಿಲ್ಲ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R.R.C. No. 92/70.

ಪೆನಗಾಡ — ವಾದಿ

ವಿ. ರಾಮಕೃಷ್ಣ ರಾವ್ — ಪ್ರತಿವಾದಿ

ಮೇಲಿನ ವ್ಯಾಜ್ಯದ ಪ್ರತಿವಾದಿ ಮೇಲಿನ ವ್ಯಾಜ್ಯದ ಪ್ರತಿವಾದಿ ಪುತ್ತೂರು ತಾಲೂಕು ಬಡಗನ್ನೂರು ಗ್ರಾಮದ ಮುಂಡ ಕೋಡಿಯಲ್ಲಿರುವ ಪಿರ್ಯಾದಿ ಬೊರ್ಕರ ಮಗ ವಿ. ರಾಮಕೃಷ್ಣ ರಾವ್‌ರವರಿಗೆ ಕೋರ್ಟ ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ—

ಮೇಲಿನ ವ್ಯಾಜ್ಯವು ನಿಮ್ಮ ಹಾಜರಾತಿ ಬಗ್ಗೆ ತಾರೀಖು 28.11.70ಕ್ಕೆ ಇಟ್ಟಿರುತ್ತದೆ. ಸದ್ರಿ ವ್ಯಾಜ್ಯದ ದಿನ್ನ ನಿಮ್ಮ ದೇನಾವಕರೂ ಅಕ್ಷೇಪಪಿಪ್ಪಲ್ಲಿ ಖುದ್ದು ಸ್ವತಹಾ ಯಾ ವಖೀಲರ ದ್ವಾರಾ ಹಾಜರಾಗಿ ಉದಪರಿಸಕೆಕ್ಕದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ನಂಬ್ರ ಪ್ರತೀರ್ಮಾನಿಸಲ್ಪಡುವುದು.

ಬಿ.ಕೆ. ಸೂರ್ಯನಾರಾಯಣ ರಾವ್,
ವಾದಿ ಕಡೆ ವಖೀಲ.
ಬೆಳ್ತಂಗಡಿ, 20-7-70.

ಬೇಕಾದ ವಿಷಯ ಆದಲ್ಲ.'

೦ ೦ ೦

ಪ್ರಖ್ಯಾತ ಜಂತು ಶಾಸ್ತ್ರಜ್ಞ ನ್ಯೂಜೀಲಿಂಗ್ ಕೋವಾಲೆವ್‌ಸ್ಕಿ ಒಮ್ಮೆ ಉಪನ್ಯಾಸ ನೀಡುತ್ತಿದ್ದಾಗ ಅವರ ವಿದ್ಯಾರ್ಥಿಯೊಬ್ಬ ಕೇವಲ ಕುಚೇಷ್ಟೆಗೆಂದೇ ಹೆಂಡ ನಂತೆ ಕೂಗಿದ. ಸ್ವತಃ ಕೋವಾಲೆವ್‌ಸ್ಕಿಯವರಷ್ಟೊಳಗೊಂಡು ಪ್ರತಿಯೆಬ್ಬರೂ ಫೊಳ್ಳನೆ ನಕ್ಕರು. ಕೋವಾಲೆವ್‌ಸ್ಕಿಯ ಪರು ನಂತರ ತಮ್ಮ ಗಡಿಯಾರದ ಕಡೆಗೆ ನೋಡಿಕೊಂಡು ಹೇಳಿದರು: "ಇದು ತುಂಬಾ ಫಿಧಾನವಾಯಿತು. ಈಗ ಇದು ಏಳು ಗಂಟೆ ಎಂದು ಹೇಳುತ್ತಿದೆ, ಆದರೆ ನಿಜವಾಗಿ ಇದ ಬೆಳಿಗಿನ ಮೂರು ಗಂಟೆಗೂ ಗಿರಿ ಬೇಕಿತ್ತು. ಪ್ರಾಣಿಗಳ ಸಹಜ ಸ್ವಭಾವ ಎಂದೂ ತಪ್ಪು ಮಾಡುವುದಿಲ್ಲ ಎಂಬ ನನ್ನಮೊತನ್ನು ನೀನು ನಂಬಬಹುದು."

೦ ೦ ೦

ಶ್ರೀಮಂತರೊಬ್ಬರು ಏಸ್ಕಿಮಿಯಿದ್ದ ಭಾರೀ ಬೆಣ ಕೂಟದಲ್ಲಿ ಉಕ್ರೇನಿನ ಪ್ರಖ್ಯಾತ ಕವಿ ಶಾರಾಸ್ ಶೆವಚೆಂಕೊ ಆವರೂ ಒಬ್ಬ ಅತಿಥಿಗಳಾಗಿದ್ದರು. ಆಹಾರ ಪದಾರ್ಥಗಳ ಭಾರ ತಡೆಯ ಲಾರದೆ ಮೇಜು ಗಳು ನರಳುತ್ತಿದ್ದುವು. ಬಹು ದೀರ್ಘಯೊತ್ತಿಯಂದ ಕೆವ್ ಜೆಂಕೊಗೆ ಹುಂದಾ ಹಸಿವಾಗಿತ್ತು. ಅಂತೆಯೇ ಕುಳಿತ ಊಟ ಮಾಡುವವರೆಲ್ಲಿ ಅವರೇ ಮೊದಲಿಗರಾದರು. ತಕ್ಷಣವೆ ಅತಿಥೇಯರು ಅವರ ಬಳಿ ಬಂದು 'ಮನುಷ್ಯನಿಗೂ ಹಂದಿಗೂ ಏನು ವ್ಯತ್ಯಾಸ?" ಎಂದು ಕೇಳಿದರು.

'ಮನುಷ್ಯ ತನಗೆ ಬೇಕಾದಾಗ ತಿನ್ನುತ್ತಾನೆ. ಹಂದಿ, ತನಗೆ ಕೊಟ್ಟಾಗ.'

೦ ೦ ೦

ವ್ಯಕ್ತಿಯೊಬ್ಬ ಸರ್ಕಸ್ಸಿನಲ್ಲಿ ಉದ್ಯೋಗ ಕೇಳಿಕೊಂಡ. "ನೀವು ಏನು ಮಾಡುಲ್ಲರಿ?" ಎಂದರು ವೆ ನೇಜರ್.

"ಒಂದೇ ಕಾಲಲ್ಲಿ ಹಾನು ಒಂದು ಹಸುವನ್ನು ತಿಂದೆ.ಹಾಕಬಲ್ಲೆ" ಆ ಮನುಷ್ಯ ಉತ್ತರಿಸಿದ.

'ಒಳ್ಳೆಯದು. ಒಂದು ದಿನದಲ್ಲಿ ನೀವು ಎರಡು ಬಾರಿ ಸಂಜೆ ಏಳು ಮತ್ತು ಹಿಂಭತ್ತು ಗಂಟೆಗೆ ಕಾಣಿಸಿಕೊಳ್ಳಬೇಕು.'

'ಸಾರಿ, ಇದು ನನಗೆ ಹೊಂದಿಕೆಯಾಗದ. ಡೂಕೆಂದರೆ ರಾತ್ರಿ ಊಟಕ್ಕೆ ನಮ ಡವೆ ಇಲ್ಲವಾಗುತ್ತದೆ.'

೦ ೦ ೦

ಅಸೂಕರ್ ಕಲಾವಿದನಿಗೆ ಅಮೂರ್ತವಾಗಿಯೆ ಹಣ ನೀಡಲಾದೀತೆ?

೦ ೦ ೦

'ಅದೇಕೆ ನೀವು ರಾಜಾನ ಪಾತ್ರವನ್ನೇ ಆಷ್ಟೊಂದು ಆಸಕ್ತಿಯಿಂದ ಕೇಳಿಕೊಳ್ಳುತ್ತೀರಿ?"

'ಯಾಕೆಂದರೆ ಎರಡನೇ ದೃಶ್ಯದಲ್ಲೇ ನನ್ನ ತಲೆ ಕತ್ತರಿಸಿ ಹಾಕಲಾಗುತ್ತದೆ. ಆದಾದ ಬಳಿಕ ಹಾನು ಮನೆಗೆ ಹೋಗಿ ಮಲಗಿಕೊಳ್ಳಬಹುದು.'

೦ ೦ ೦

ಪತ್ರಕರ್ತರೊಬ್ಬರು ಸರ್ಕಸ್ಸಿನಲ್ಲಿ ಸುತ್ತುಹಾಕುತ್ತ ಆಟಗಳ ನೋಡಿ.ತ್ತಿದ್ದರು.

'ಪಂಜರದಲ್ಲಿ ಸಿಂಹದೊಂದಿಗೆ ಇರುವ ಆ ಮೋರನಾರು? ಪ್ರಾಣಿಗಳನ್ನು ಹಕಗಿಸುವವನೆ?'

"ಪಳಗಿಸುವವನೆ? ದೇವರೆ! ಅವನು ದಿವಸಕ್ಕೆ ಒಮ್ಮೆ ಬಂದು ಸಿಂಹದ ಕೇಸರಗಳನ್ನು ಬಾಚಿ, ಹಲ್ಲುಗಳನ್ನು ಸ್ವಚ್ಛ ಗೊಳಿಸಿ ಹೋಗುವ ಹೆಡುಗ."

ಶಾಲಾ ಪಾರ್ಲಿಮೆಂಟಿನ ಉದ್ಘಾಟನೆ

ಮೂಡಬಿದ್ರೆ ಹೈಯರ್ ಸೆಕೆಂಡರಿ ಶಾಲಾ ಪಾರ್ಲಿಮೆಂಟಿನ ಉದ್ಘಾಟನೆಯನ್ನು ತಾ. 18 ರಂದು ಉಪ್ಪಿ ತಾಲೂಕು ಬೋರ್ಡ್ ಸದಸ್ಯ ಹಾಗೂ ಎಜ್ಯೂಕೇಟರ್ ಶ್ರೀ ಕಿ.ಪಿ.ಪಿಲಿಯಂ ಸಿಂಟೋರವರು ನೆರವೇರಿಸಿದರು.ಶಾಲಾ ನಾಯಕ ವಿದ್ಯಾರ್ಥಿಯ ಶ್ರೀ ಎಂ. ಸೋಮಪ್ಪ ರೈ ಅವರು ಸ್ವಾಗತಭಾಷಣ ಮಾಡಿದರು. ಶ್ರೀ ಎಂ. ಆದಿರಾಜ ಅವರು ಮುಖ್ಯ ಅತಿಥಿಗಳ ಪರಿಚಯ ಮಾಡಿಸಿದರು. ಶಾಲಾ ಪಾರ್ಲಿಮೆಂಟಿನ ಸ್ಪೀಕರ್, ಮುಖ್ಯಮಂತ್ರಿ, ಮಂತ್ರಿಮಂಡಲದ ಸದಸ್ಯರು ಮತ್ತು ವಿರೋಧ ಪಕ್ಷದ ಸದಸ್ಯರು ಪ್ರಜ್ಞಾವಿಧಿ ಸ್ವೀಕರಿಸಿದರು.

ಶ್ರೀ ಎಸ್. ವಿಲಿಯಂ ಸಿಂಟೋರವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಭಾರತ ಸ್ವಾತಂತ್ರ್ಯಪಡೆದ ಬಗೆಯನ್ನು ವಿವರಿಸಿ ಇಂದಿನ ಯುವಕರು ಪಾರ್ಲಿಮೆಂಟರಿ ಪ್ರಜಾಸತ್ತೆಯನ್ನು ಯಶಸ್ವಿಗೊಳಿಸುವರೆ ಅವರ ಒಳ ತಿರುಳನ್ನು ಅರಿತುಕೊಂಡು ಅನುಷ್ಠಾನಕ್ಕೆ ತರಬೇಕೆಂದೂ ಇಂದಿನ ಯುವಕರು ರಾಷ್ಟ್ರ ಪ್ರೇಮ, ತಿಸ್ಸು, ಸಂಯಮ, ಶ್ರದ್ಧೆಯಿಂದ ನಡೆದು ಹಿರಿಯರು ಕಷ್ಟಪಟ್ಟು ಗಳಿಸಿದ ಸ್ವಾತಂತ್ರ್ಯದ ರಕ್ಷಣೆಮಾಡಬೇಕೆಂದು ವಿನಂತಿಸಿಕೊಂಡರು.

ಕರುಣ ಎಂಜಿನಿಯರ್ ರಾಘವೇಂದ್ರ ರಾವ್ ನಿಧನ

ಉಡುಪಿಯ ಕರುಣ ಎಂಜಿನಿಯರಿಂಗ್ ಎಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ನಿನ ಯೋಜನಾ ವಿಭಾಗದ ಮುಖ್ಯಸ್ಥರಾಗಿ ದಕ್ಷ ಸೇವೆ ಸಲ್ಲಿಸುತ್ತಿದ್ದ ಶ್ರೀ ಎ. ಬಿ. ರಾಘವೇಂದ್ರ ರಾಯರು ತಾ. 24-7.70ರಂದು ಪ್ರಾತಃಕಾಲ ಉಡುಪಿ ಕೃಷ್ಣ ಮಠದ ವಧ್ವ ಸರೋವರದಲ್ಲಿ ಸ್ನಾನಮಾಡಲು ಹೋದಾಗ ಅಕಾಲಾತ್ಕಾಗಿ ಮುಳುಗಿ ತಮ್ಮ 80ನೇ ವರು ಪಥಲ್ಲಿ ಮರಣಕ್ಕೀಡಾದರು. ದಿವಂಗತರು ಮಣಿಪಾಲ, ಉಡುಪಿಯ ಕೆಲವೊಂದು ಆಧುನಿಕ ಕಟ್ಟಡಗಳ ನಿರ್ಮಾಣದ ಉತ್ಸಾಹೀ ಕರುಣ ಮೇಲ್ವಿಚಾರಕರಾಗಿ ಜನಾನುರಾಗ ಗಳಿಸಿದ್ದರು.

ದಿವಂಗತರು ಉಡುಪಿ ಪುರಸಭೆಯ ಮಾಜಿ ಉಪಾಧ್ಯಕ್ಷರಾಗಿದ್ದ ದಿ| ಎ.ಪಿ. ಕೃಷ್ಣ ರಾಜರ ಪುತ್ರರಾಗಿದ್ದು ಮಣಿಪಾಲ ಎಂಜಿನಿಯರಿಂಗ್ ಕಾಲೇಜಿನ ಮೊದಲ ತಂಡದಲ್ಲಿ ಸಿವಿಲ್ ಎಂಜಿನಿಯರಿಂಗ್ ಪದವೀಧರರಾಗಿದ್ದರು. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಇವರು ಯಂ.ಐ.ಯಂ. ಕಾಲೇಜಿನಲ್ಲಿ ಇಂಟರ್‌ಮೀಡಿಯೇಟ್‌ನಲ್ಲಿದ್ದಾಗ ಗಣಿತ ಪ್ರತಿಭೆಗಾಗಿ ಬಹುಮಾನಗಳಿಸಿದ್ದರು. ಎಂಜಿನಿಯರಿಂಗ್ ಶಿಕ್ಷಣ ಮುಗಿದೊಡನೆ ಭಾರತ ಕನ್ಸ್ಟ್ರಕ್ಷನ್ ಕಂಪೆನಿಯಲ್ಲಿಯೂ ಎಕಾಡೆಮಿಯ ಯೋಜನಾ ವಿಭಾಗದಲ್ಲಿಯೂ ಸ್ವಲ್ಪ ಸಮಯ ಸ್ವತಂತ್ರ ಕಂಟ್ರಾಕ್ಟರರಾಗಿಯೂ ಕೆಲವು ಕಟ್ಟೋಣಗಳನ್ನು ದಕ್ಷತಾಪೂರ್ವಕ ನಿರ್ವಿಸಿದ್ದರು. ಉಡುಪಿ ಕೃಷ್ಣಮಠದ ಬಡಗು ಮಾಳಿಗೆಯ ಜೀರ್ಣೋದ್ಧಾರ ಕೆಲಸವು ಸುಂದರವಾಗಿಯೂ ಶ್ರದ್ಧೆಯಿಂದ ನಡೆಯಲು ಇವರು ಪರಿಶ್ರಮಿಸಿದ್ದರು. ದಿವಂಗತರು ನಯವಿನಯದ ಸಾರ್ವಜನಿಕ ಕಾರ್ಯಕರ್ತರಾಗಿದ್ದುದಲ್ಲದೆ ಧಾರ್ಮಿಕ ಪ್ರವೃತ್ತಿಯವರೂ ಆಗಿದ್ದರು.

ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನ ಉಡುಪಿ

ಶ್ರೀ ಸನ್ನಿಧಿಯಲ್ಲಿ ವರ್ಷಂಪ್ರತಿ ನಡೆಯು ಬರುತ್ತಿರುವ ಭಜನೆ ಸಪ್ತಾಹ ಮಹೋತ್ಸವವು ತಾ. 7—8—1970ನೇ ಶುಕ್ರವಾರ ಮೊದಲ್ಗೊಂಡು ತಾ. 14—8—70ನೇ ಶುಕ್ರವಾರ ವರೆಗೆ ಪರ್ಯಂತ ನಡೆಯುವುದಾಗಿಯೂ, ಸರ್ವರೂ ಸಂತಮಂಡಳಿಯೊಡನೆ ಬಂದು ಶ್ರೀ ಹರಿನಾಮ ಕೀರ್ತನಾ ಮಹೋತ್ಸವದಲ್ಲಿ ಸೇವೆಗೈದು, ಸಾಂಗವಗೊಳಿಸಿ ಶ್ರೀ ದೇವರ ಶ್ರೀಮುಡಿ ಗಂಧ ಪ್ರಸಾದವನ್ನು ಸ್ವೀಕರಿಸಿ, ಶ್ರೀ ಕಾರ್ಯರಾಗಬೇಕಾಗಿ ಆಡಳಿತ ಪೊಕ್ಕೆಸ್ಸರ್ ಡಾ| ಪಿ. ರಾಘವೇಂದ್ರ ನಾಯಕರು ಆತ್ಮೀಯರಿಂದ ಅಪೇಕ್ಷಿಸುತ್ತಾರೆ.

ವಾದ—ವಿಚಾರ

ವಾದ ಹಾಗೂ ವಿಚಾರಗಳಲ್ಲಿ ವೈಚಾರಿಕ ಪಿದೆ. ವಿಚಾರವು ಸತ್ಯ ಪರಿಪೂರ್ಣತೆಯನ್ನು ಹುಡುಕುತ್ತಿರುವ ಮುಕ್ತ ಸರ್ವಸಾಕ್ಷಿಕ ಪ್ರಯಾಣವಾಗಿದೆ. ವಾದವಾದರೋ ಹೆಪ್ಪು ಗಟ್ಟಿ ಜಡವಾಗಿ ಬಿಟ್ಟಿರುತ್ತದೆ. ಅದು ಪರಿಪೂರ್ಣತೆಗೆ ಹೊಂದಲು ಬಯಸುವುದೇ ಇಲ್ಲ. ವಿಚಾರವು ಏರಿದ್ರೆ ವಾದವು ಬರ್ಫ. ವಿಚಾರವು ಜೀವನ; ವಾದವು ಮರಣ. ವಿಚಾರವು ಮನುಷ್ಯರನ್ನು ಜೋಡಿಸುತ್ತದೆ. ವಾದವು ಕಾದಾಡಿಸಲ್ಪಟ್ಟತ್ತದೆ. ವಾದವು ಘಾತಕವಾದ ಅಯಸ್ಕಾಂತವಾಗಿದೆ. ವಿಚಾರವು ಸಂಜೀವಿನಿಯಂಗಿದೆ.

ಸತ್ಯ

ಪ್ರಯೋಗದ ಒರೆಗಲ್ಲಿಗೆ ಹತ್ತುವುದೆ ಸತ್ಯ ಇಂದ ಸತ್ಯವೆಂದುಕಂಡದ್ದು ನಾಳೆಸುಳ್ಳೆಂದುಳಿ ಡುಬರಬಹುದು, ಇಪ್ಪೇ ಅಲ್ಲ. ಹಿಂದಿನ ಸಿದ್ಧ ಸತ್ಯಗಳನ್ನು ಸುಳ್ಳಾಗಿಸಾವ ಹೊಸ ಹೊಸ ಪ್ರಯೋಗಗಳನ್ನು ಪ್ರತಿನಿಕ್ಷವೂ ಮಾಡುತ್ತಲೇ ಹೋಗಬೇಕು. ಹೊಸ ಅನುಭವಗಳ ಬಡಿಕ್ಕೂ ಬಗ್ಗದೆ ಉಳಿಯಬಲ್ಲದ್ದೇ ಪೂರ್ಣ ಸತ್ಯವೆಂದು ತಿಳಿಯಬೇಕು. ಹಿಂದಿನ ಸತ್ಯವೆ ಸುಳ್ಳೆಂದಾದರೂ ಅಸಮಾಧಾನಗೊಳ್ಳಬಾರದು; ಯಾಕೆಂದರೆ ಅದರಿಂದಲೆ ಹೆಚ್ಚಿನ ಸತ್ಯವು ಹೊರಬೀಳುತ್ತದೆ.

ನಾಯಕರ ಯಜ್ಞೋಪವೀತ

ಗುರುನಾನಕರ ಯಜ್ಞೋಪವೀತಧಾರಣ ಸಮರೋಂಭದ ತಯಾರಿ ನಡೆದಿತ್ತು. ತುಂಬಾ ಜನ ಕೂಡಿದ್ದರು. ಧಾರಿಭೋಜನವೂ ನಡೆಯಲಿತ್ತು. ಆದರೆ ತಾನು ಯಜ್ಞೋಪವೀತ ಧರಿಸುವುದೇ ಇಲ್ಲ ಎಂದು ನಾನಕರು ಹೇಳಬಿಟ್ಟರು. ಲೇಳಿ ಎಲ್ಲರಿಗೂ ಆಘಾತವಾಯಿತು. "ಎಂದೂ ಹೊಲಸಾದದಂಥ, ಎಂದೂ ಹಿಂಯನಂಥ, ಎಂದೂ ಸುಡದಂಥ ಮತ್ತು ಜೀವನದ ಕೊನೆಯವರೆಗೂ ಜತೆ ಬಿಡದಂಥ ಪವಿತ್ರ ಯಜ್ಞೋಪವೀತವನ್ನೇ ತಾಮು ಧರಿಸತ್ತೇನೆ" ಎಂದು ಹೇಳಿ ನಾನಕರು ಅವರನ್ನೆಲ್ಲ ಸಮಾಧಾನ ಪಡಿಸಿದರು.

"ಇಂಥ ಯಜ್ಞೋಪವೀತ ಹೇಗೆ ತಯಾರಿಸಿಕೊಳ್ಳುವಿ" ಎಂಬ ಪ್ರಶ್ನೆಗೆ 'ದಯೆಯ ಅರಿಳಿಯಂದ, ಸಂತೋಷದ ಹೂಲನೂತು, ಸತ್ಯದ ಹುರಿಹಾಕಿ ಮತ್ತು ಸಂಯವದ ಗಂ.ಟಿಂ ಬಿಗಿದು' ಎಂದು ನಾನಕರು ಉತ್ತರಕೊಟ್ಟರು.

ಬರುವ ವಾರದ ಸಂಚಿಕೆ ಇಲ್ಲ

ತಾ. 13—8—70ಕ್ಕೆ ಹೊರಡುವ ಸ್ವಾತಂತ್ರ್ಯೋತ್ಸವ ಸಂಚಿಕೆಯು ಕಾರ್ಯಬಾಹುಳ್ಯದಿಂದಾಗಿ ಬರುವ ವಾರದ (ತಾ. 6—8—70ರ) ಸಂಚಿಕೆಯನ್ನು ತಿಳ್ಳಿಸಲಾಗಿದೆ.

ಮೆನೇಜರ್

ನವಯುಗಕ್ಕೆ

ಹೊಸದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೧

ಇಂದ್ರಪ್ರಸ್ಥ

(ಎರಡನೇ ಪುಟದಿಂದ)

ಈ ಮಾತನ್ನು ಕೇಳಿದ ಕೂಡಲೇ ಅಯೋಧ್ಯಾ ರಾಜನಿಗೆ ಬಹಳ ಸಂತೋಷವೂ ಆಶ್ಚರ್ಯವೂ ಆಯಿತು. ಅವನು ಅತ್ಯಂತ ಅಂದು ಭಕ್ತಿಭಾವದಿದ್ದು ಯಜ್ಞಯಾಗಗಳಿಂದ ಇಂದ್ರಾದಿದೇವತೆಗಳನ್ನು ಪ್ರೀತಿಪಡಿಸಿದವನು. ಆದಕ್ಕೆ ಇಂದ್ರನು ತನ್ನನ್ನು ಈ ವಿಧವಾಗಿ ಅನುಗ್ರಹಿಸಿದ್ದಾನೆ ಎಂದುಕೊಂಡನು.

ಮದುವೆಯಾದ ಮರುಕ್ಷಣದಲ್ಲಿಯೇ ಭೃಂಗಾವತಿಯು ಶಾಪ ಮೋಕ್ಷವಾಗಿ ಹೋಗಿತ್ತು. ನವಮನ್ಮಥಪಂತಹ ಸತ್ಯಸ್ವಾನೀಕನು ರತಿಯಂತಹ ಭೃಂಗಾವತಿಯೊಂದಿಗೆ ಸಕಲ ಸೌಖ್ಯಗಳನ್ನು ಅನುಭವಿಸುತ್ತ, ಅವಳ ಇಚ್ಛೆಗೆ ತನ್ನ ಇಚ್ಛೆಗಳನ್ನು ಸೇರಿಸಿ ಸ್ವೇಚ್ಛೆಯಿಂದ ಪ್ರಕೃತಿಸೌಂದರ್ಯದ ನೆಲೆವೀಡುಗಳಲ್ಲಿ ವಿಹರಿಸಿಕೊಂಡಿದ್ದನು. ಹಾಗಿರಲು ಒಂದಾನೊಂದು ದಿನ, ಬೆಟ್ಟದ ಬುಡದ ನದೀ ತೀರದ ಉದ್ಯಾವದಲ್ಲಿ ಇಬ್ಬರೂ ನಿದ್ದೆಯಲ್ಲಿದ್ದರು. ಆಗ ಇಂದ್ರನು ಕಳುಹಿಸಿದ ದೇವಸೂತನು ಮಹಾ ಪಕ್ಷಿ ರೂಪದಲ್ಲಿ ಬಂದು ಭೃಂಗಾವತಿಯನ್ನು ಎತ್ತಿಕೊಂಡು ಹಿಮಾಲಯ ಶಿಖರದಲ್ಲಿರುವ ಇಂದ್ರನ ಒಳಗೆ ಒಯ್ದನು. ಆಗ ಅವಳು ಗರ್ಭಿಣಿ.

ಎಚ್ಚೆತ್ತಾಗ ಪತ್ನಿಯನ್ನು ಕಾಣದ ಸಹಸ್ರಾನೀಕನು, ತನಗೆ ಮುನಿಸು ಶಾಪವು ಪ್ರವೇಶಿಸಿತೆಂದುಕೊಂಡು, ಶಾಪ ವಿಮೋಚನಾ ಕಾಲವನ್ನು ಕಾಯುತ್ತ ಶಾಂತವಾಗಿ ವೃಕ್ಷಸ್ಥನಂತೆ ದುಃಖಕಾಲವನ್ನು ಕಳೆಯಲು ತೊಡಗಿದನು.

ಹೊಸ ಕಳೆಕ್ಕೆ ಬಂದು ಬೆದರಿಕೊಂಡಿದ್ದ ಭೃಂಗಾವತಿಯನ್ನು ನೋಡಿ ಇಂದ್ರನು "ಹೆದರಬೇಡ ತಾಯೇ. ನಿಮ್ಮ ಹಾಗೂ ನಮ್ಮ ಒಳಿತಿಗಾಗಿಯೇ ಹೀಗೆ ಮಾಡಿದೆ. ನಿನಗೆ ಮುನಿಶಾಪ ತಗಲಿದ ಹಾಗೆಯೇ ನಿನ್ನ ಗಂಡನಿಗೂ ತಗಲಿದೆ. ನಿನ್ನ ಹೊಟ್ಟೆಯಲ್ಲಿ ಒಬ್ಬ ಮಹಾ ವೀರನು ಹುಟ್ಟಲಿದ್ದಾನೆ. ಅವನು ಭೂಮಿಯಲ್ಲಿ ಹುಟ್ಟಕೂಡದು. ನಿನ್ನೆನ್ನೂ ನಿನ್ನ ಮಗನ ನ್ನೂ ಕಣ್ಣಿನ ರೆಪ್ಪೆಗಳ ಹಾಗೆ ಕಾಪಾಡುವುದು ನನ್ನ ಭಾರ. ಅಭ್ಯುದಯ ಕಾಲವನ್ನು ಫಲಿಸ್ಪಿಸುತ್ತಾ ಸ್ವಲ್ಪ ಕಾಲ ನಮ್ಮೊಂದಿಗಿರು" ಎಂದು ಹೇಳಿ ಸನ್ಮಾನಪಡಿಸಿದನು.

ಪ್ರಸವ ಕಾಲದಲ್ಲಿ ಭೃಂಗಾವತಿ ದೇವ ವಿಮಾನದಲ್ಲಿ ಕುಮಾರನನ್ನು ಪ್ರಸವಿಸಿದಳು. ರಾಕ್ಷಸ ಫಲಕ್ಕೇ ತಪ್ಪಸ್ಸಿನ ಪುಣ್ಯಪಾಕವನ್ನು ಕೊಂಡ ಶತಾನೀಕನ ಅಪ್ಪನೇ ಈ ಮಹಾ ವಿನಮ್ರರುವುದನ್ನು ಕಂಡುಕೊಂಡ ಇಂದ್ರನು ಮಗುವಿಗೆ ಲಕ್ಷ್ಮಾನೀಕನೆಂಬ ಹೆಸರಿಟ್ಟನು. ಮಗುವಿನ ಆಟ ಪಾಟಗಳಿಂದ ಭೃಂಗಾವತಿಯೂ ಪತಿವಿಯೋಗ ದುಃಖವನ್ನು ಮರೆತಳು. ಲಕ್ಷ್ಮಾನೀಕನಿಗೆ ಬಿಕ್ಕಂದಿನಿಂದಲೇ ಇಂದ್ರನ ನೇರ ಅಕ್ಕರೆ ಭಕ್ತಿಗೌರವಗಳಿದ್ದುವು. ಅವನ ಆಟಗೆಲ್ಲ ವೀರಧೀರ ಪ್ರತಾಪಗಳಿಂದ ತುಂಬಿಕೊಂಡಿದ್ದುವು. ದೇವಗುರುಗಳು ಅವನಿಗೆ ಸಮಸ್ತ ವಿದ್ಯೆಗಳನ್ನೂ ಕಲಿಸಿದರು. ಧನುರ್ವೇದದಲ್ಲಿಯೂ ಅಪಾರ ಪಾಂಡಿತ್ಯವನ್ನು ಗಳಿಸಿದನು. ಯೌವನ ಯುದ್ಧವೆ ಬರುವುದೋ, ಯೌವನ ಇಂದ್ರನನ್ನು ಅಮರಾವತಿಯ ಸಿಂಹಾಸನದಲ್ಲಿ ನೋಡುವೆನೇ ಎಂದು ಕದಿನಾಲ್ಕು ವರ್ಷ ಪ್ರಾಯದಲ್ಲೇ ಲಕ್ಷ್ಮಾನೀಕನು ಹುರಿದುಂಬಿದನು. ಮಕ್ಕೆ ಇಂದ್ರನೂ ತಡಮಾಡಲಿಲ್ಲ. ಬಾಲಕ ಲಕ್ಷ್ಮಾನೀಕನೊಂದಿಗೆ, ದೇವಸೇನೆಗಳನ್ನೂ ಕೂಡಿಸಿ ಕರಿಘಟಾಸುರನ ಮೇಲೆ ದಂಡಯಾತ್ರೆ ಹೊರಟನು.

ಯುದ್ಧದಲ್ಲಿ ಲಕ್ಷ್ಮಾನೀಕನು ರಾಕ್ಷಸರ ವಿವಿಧಾಯುಧಗಳನ್ನು ಲಕ್ಷ್ಯ ಮಾಡದೆ, ಬ್ರಹ್ಮನಿಂದ ಅಕ್ಷಯಶಕ್ತಿಸಹಿತನೆನಿಸಿದನಂತೆ, ನೇರಾಗಿ ಕರಘಟಾಸುರನನ್ನೇ ಸಂಧಿಸಿ ಅವನ ತಲೆಯನ್ನು ಚೆಂಡಾಡಿದನು. ದೇವೇಂದ್ರನಿಗೆ ಅಮರಾವತಿ ದೊರಕಿತು. ಇಂದ್ರನು ಅಮರಾವತಿಯಲ್ಲಿ ಭಾರಿ ವಿಜಯೋತ್ಸವವನ್ನು ಏರ್ಪಡಿಸಿ ಸಹಸ್ರಾನೀಕವೇ ಮೊದಲಾದ ಸಭೆಗೆ ಬರಮಾಡಿಕೊಂಡು, "ಇಗೋ ನಿನ್ನ ವೀರಪುತ್ರನನ್ನು ನೋಡು. ನಿನ್ನ ತಂದೆಶತಾನೀಕನೇ ನಿನ್ನ ಮಗನಾಗಿ ಹುಟ್ಟಿದ್ದಾನೆ. ಇನ್ನು ನಿನ್ನ ಪತ್ನಿಯೊಂದಿಗೆ ಸುಖವಾಗಿರು" ಎಂದು ಹೇಳಿ ಭೃಂಗಾವತಿಯನ್ನೂ ಅವನ ಜತೆಮಾಡಿಸಿದನು.

ಈ ಲಕ್ಷ್ಮಾನೀಕನ ಕಾಲದಲ್ಲಿಯೇ ಪ್ರಸ್ಥಾನ ದೇಶಕ್ಕೆ ಇಂದ್ರಪ್ರಸ್ಥವೆಂಬ ಹೆಸರಾಯಿತು. ಇನ್ನೂ ಅನೇಕಾಂತರಗಳಲ್ಲಿಯೂ ಇಂದ್ರಪ್ರಸ್ಥವಾದ ಲಕ್ಷ್ಮಾನೀಕನು, ಇಂದ್ರನ ತೃಪ್ತಿಗಾಗಿ ಅನೇಕ ಯಜ್ಞಯಾಗಗಳನ್ನು ನಡೆಸುತ್ತ ತನ್ನ ದೇಶವನ್ನು ಇಂದ್ರಲೋಕವೆನಿಸಿದನಂತೆ.

ಚಾರುಚಯನ

ಪ್ರಧಾನಿಯವರ ಕರ್ನಾಟಕ ಸಂಚಾರ—ಇಂಡಿಕೇಟ್ ಅಧ್ಯರ್ಯ ಶ್ರೀ ದೇವರಾಜ ಅರಸು ಹೇಳುವಂತೆ ಇದು ಪ್ರಾಸಂಗಿಕ ಸಂದರ್ಶನ—ಅನಧಿಕೃತ ಭೇಟ್ಟಿ. ಶ್ರೀಮತಿ ಗಾಂಧಿಯು ಮೊತಿನಂತೆ ರಾಜ್ಯ-ರಾಜ್ಯಗಳನ್ನು ಸಂಚರಿಸಿ ಜನತೆಗೆ ಕೇಂದ್ರ ಸರಕಾರದ ಧ್ಯೇಯೋದ್ದೇಶಗಳನ್ನು ಪರಿಚಯ ಮಾಡಿಸುವುದು ಪ್ರಧಾನಿಯ ಕರ್ತವ್ಯ—ಅಂದರೆ, ಅಧಿಕೃತ ಸಂದರ್ಶನ ?

—ಇಲ್ಲಿಯೂ ದೊಡ್ಡ ಹಗರಣ. ಕರ್ನಾಟಕ—ಮಹಾರಾಷ್ಟ್ರ ಗಡಿಯ ಜಗ್ಗೆ ವಿವರ ಮೂಡುಕತೆಗಳು ಇಲ್ಲಿನಡೆಯಲಿಲ್ಲ. ಬೆಂಬಳೂರಿನ ಹವೆಗುಳ್ಳಿ ಮಂಗಾತೀ ವಿಷ ಬೀಜ ಬೆಳೆಸುವುದಿಲ್ಲ—ಇದು ಪ್ರಧಾನಿ—ಉರುಸ್-ಇಂಡಿಕೇಟ್ ನಾಯಿಕಾಶಿರೋಮಣಿಗಳಿಗೆ ತಿಳಿಯದ ಸಂಗತಿಯಲ್ಲ.

ಮಹಾಜನವರದಿಯನ್ನು ಒಪ್ಪಿಕೊಳ್ಳಿ ಇದು ಕನ್ನಡಿಗರ ಅಂದಿನ ಪ್ರಾರ್ಥನೆ; ಇಂದಿನ ಕಳಕಳಿಯು ವಿನೋದನೆ, ಮುಂದಿನ ದೃಢನಿಲುಮೆ.

ಇದ ವರೆಗೂ ಪಾಕಕಳಾಂ, ಪಾಲಿಸಿ ಆಪತ್ಸಂಸಿದ್ದ ಶ್ರೀಮತಿ ಗಾಂಧಿ ಕನ್ನಡದ ನೆಲದಲ್ಲಿ ಬಾಯಿ ಬಿಡಲೇ ಬೇಕಾಯ್ತು. ತನ್ನ ಇಂಗಿತವನ್ನು ಅವರು ಮರೆಮಾಚುವ ಪ್ರಯತ್ನ ಮಾಡಿದರೂ ಅದು ಅವ್ಯಕ್ತವಾಗಿ ವ್ಯಕ್ತವಾಯ್ತು.

ಮಹಾಜನ ವರದಿಯನ್ನೇ ಒಪ್ಪುವುದಾದರೆ, ಮತ್ತೆಕತೆ ಏಕೆ?

ಏಕೆ?

ಮತ್ತೆಕತೆ ಬೇಕೆಂದು ಕೇಳಿದವರು ಕನ್ನಡಿಗರಲ್ಲ; ಮಹಾಜನ ವರದಿಯನ್ನು ಒಪ್ಪಿದವರೆಂದವರು ಕನ್ನಡಿಗರಲ್ಲ; ಹೆಚ್ಚೇಕೆ, ಮಹಾಜನ ವರದಿ ಬೇಕೆಂದು ಕೇಳಿಕೊಂಡವರೂ ಕನ್ನಡಿಗರಲ್ಲ.

ಕನ್ನಡಿಗರ ಮಟ್ಟಿಗೆ ಬೇಳಗಾಂವಿ ಪ್ರಶ್ನೆ ಮುಗಿದು ಹೋಗಿದೆ; ಕಾರವಾರ, ಸುಪಾ, ಹಳಿಯಾಳಗಳ ಪ್ರಶ್ನೆಯೆಂಬುದೇ ಉಳಿದಿಲ್ಲ.

ಕಾಶ್ಮೀರದ ಪ್ರಶ್ನೆ ಹೇಗೆ ಇಲ್ಲವೆಂದಾಗಿದೆಯೋ ಹಾಗೆಯೇ ಬೆಳಗಾಂವಿ ಇಕ್ಕಾಡಿದಳ ಪ್ರಶ್ನೆ.

ಅದನ್ನು ಕೆದಕುಪಹಪಕು ಮರಾಠಿಗಳಿಗೆ. ಅದಕ್ಕಾಗಿ ಹಿಂಸಾಕಾಂಡಕ್ಕೂ ಮುಂದು ವರಿದು ಖಂಡಪರು ಮರಾಠಿಗಳು. ವಿಧ್ವಂಸಕ ಕಾರ್ಯಾಸಕ್ತರಾದವರು ಮರಾಠಿಗರು.

ಗಡಿ ವಿವಾದದ ಜಗ್ಗೆ ಕನ್ನಡಿಗರು ತೋರ್ಪಡಿಸಿದ ಶಾಂತ ಮನೋವೃತ್ತಿಯನ್ನು ಮೆಚ್ಚಿಕೊಂಡರು ಪ್ರಧಾನಿ. ಇದೇ ರೀತಿಯಲ್ಲಿ ಮುಂದುವರಿಯಿರಿ ಎಂದರು ಪ್ರಧಾನಿ.

ಸಮ್ಮನಿದ್ದರೆ, ಅಸಡೆಶತ್ರ ಮೂಡುವುದು ಸುಲಭ. ಕಂಗಡ ಮಗುವನ್ನು ಸನೂಧಾನಗೊಳಿಸಲು ಕಾಗದದ ಮಗುವನ್ನು ಜೊತೆ ಬೇಕಾಗುತ್ತದೆ.

ಒಂದು ಮಾತು ಸ್ಪಷ್ಟ. ಮಹಾಜನವರದಿಯನ್ನು ಒಪ್ಪಿಕೊಳ್ಳುವ ಪ್ರಸಂಗ ಬರುವುದೇ ಇಲ್ಲ; ಬರುವಂತಿದ್ದರೆ, ಇಷ್ಟು ಸಮಯ ವರದಿಯನ್ನು ಗೆದ್ದಲು ಹಿಡಿಸಬೇಕಾದ ಅವಶ್ಯಕತೆಯಿರಲಿಲ್ಲ.

ಹಾಗಾದರೆ, ಪ್ರಧಾನಿ ಉರುಸ್ ಗೃಹಸಚಿವನ ತಮ್ಮದೇ ಹೊಸ ಸೂತ್ರ ರಚಿಸಹೊರಟಿದ್ದಾರೆ—ಅದು ಬೆಳಗಾಂವಿ ವಿಭಜನೆ—

ಇದನ್ನು ಶ್ರೀಮತಿ ಗಾಂಧಿಯವರು ಬಾಯಿಬಿಟ್ಟು ಹೇಳಲಿಲ್ಲ. ದಿಹಲಿಯುಳ್ಳಿ ಕಶ್ಮರಿ—ಚೂರಿ ರೆಡಿಮೂಡಿಟ್ಟು ಬಿದರೆಗೆ ಹೊರಟ್ಟಿದ್ದರು ಆವರು.

ಪ್ರಧಾನಿಯು ಕರ್ನಾಟಕಕ್ಕೆ ಹೊರಡುವುದಕ್ಕೆ ಮೊದಲೂ ಮಹಾರಾಷ್ಟ್ರದ ಕಾಯಕರನ್ನು ಕಂಡರು; ಕರ್ನಾಟಕದಿಂದ ಹೋದವರೂ ಕೂಡಲೇ ಕಾಣಾಕ್ಕಾರೆ.

ಕನ್ನಡಿಗರು ಹಿಡಿದ ಹಠ ಬಿಡುವಲ್ಲ.

ಅವರು ಪ್ರಜಾಸತ್ತೆಯ ಮೂಲಸೂತ್ರವಾದ ತಿರುಳು ಕೊಡಕೊಳ್ಳುವುದನ್ನು ಒಪ್ಪಿಕೊಳ್ಳುವುದಿಲ್ಲ.

ಆದ್ದರಿಂದಲೇ ಅವರು ಇಂಡಿಕೇಟಿಗೆ ಪೂರ್ಣಬೆಂಬಲ ನೀಡಲು ಸಿದ್ಧರಿಲ್ಲ.

ಮತ್ತೆ ಅವರನ್ನ ಕೇಳುವುದೇನು? ಕುರಿಯಮ್ಮ ಕೇಳಿ ಚೂರಿ ಹಾಕುವುದುಂಟೇ?

ಅದೇನೋ ಸರಿ....ಆದರೂ....ಆತುರದ ನಿರ್ಧಾರ...

ಹೀಗೆಲ್ಲಾ ಮಾಡಿದರೆ, ಕರ್ನಾಟಕ ಕೈತಪ್ಪಿ ಹೋಗಿದೆ; ಮಹಾರಾಷ್ಟ್ರವೂ ಕೈಕೊಟ್ಟೀತು....ಇಶ್ಯರ್ಥ ಬೇಗ ಆಗಲೀ ಬೇಕು.

ಈಗ ಏನು ಮಾಡುವದಕ್ಕೂ ಬುದ್ಧಿ ಹರಿಯುದು...ಭಾರೀ ಚಿಂತೆ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾಕೀಯದಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಅಮೃತಾಂಜನ

● ತಲೆನೋವು ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

READ & ADVERTISE IN

NAVAYUGA WEEKLY

NAVAYUGA 30—7—1970
Registered with the Registrar of News Papers for India under No. R. N. 3546/'67

REGD. No. B. G. 176
LICENCE No. 33,
Licensed to Post without Prepayment

'ಶ್ರೀ ರಾಘವೇಂದ್ರ ಸ್ವಾಮಿಗಳು'

ನಮ್ಮ ದೇಶದ ಹಲ್ಲುಹಲ್ಲುಗೂ ಒಂದೊಂದು ಇತಿಹಾಸವಿದೆ. ಗುಡ್ಡ—ಗಾಡು, ನದಿ—ನಾಲೆಗಳಿಗೂ ಒಂದೊಂದು ಕಥೆ ಇದೆ. ಅವುಗಳ ಸುತ್ತಲೂ ಪವಿತ್ರ ವಾತಾವರಣ ಹುಟ್ಟಿಕೊಂಡಿದೆ. ಇಲ್ಲಿಯು ದೇಗುಲಗಳು ಭಕ್ತಿ—ಶ್ರದ್ಧೆಗಳ ನಿರಂತರ ಘಂಟಾನಾದ ಮೂಡುತ್ತವೆ. ಇದು ನಾಡಿ ನಾದ್ಯಂತ ಕಂಡುಬರುವ ಸಾಮಾನ್ಯ ದೃಶ್ಯ. ಹೀಗೆ ಸಂಸ್ಕೃತಿಯ ಬೇರುಗಳು ಆಳವಾಗಿ ಬೇರೂರಿರುವುದರಿಂದಲೇ ಇಲ್ಲಿಯ ಜನಾಂಗ ತನ್ನ ಪೀಳಿಗೆಯ ಎರಿದ ಅಘಾತಗಳನ್ನು ಸುಲಭವಾಗಿ ನೀರು ಕಡಿದಿದ್ದು. ಅಜೇಯವಾಗಿ, ಅಮರವಾಗಿ ಉಳಿದಿದ್ದು. ಬೆಳೆದಿದ್ದು.

ಅಂತಹ ಶ್ರೇಷ್ಠ ಸ್ಥಾನಗಳಲ್ಲಿ ಮಂತ್ರಾಲಯವೂ ಪ್ರಮುಖ. ಪ್ರಶಾಂತವಾಗಿ ಮೈ ಚಾಚಿಕೊಂಡು ಹರಿಯುತ್ತಿರುವ ತುಂಗಭದ್ರೆಯ ತಟದಲ್ಲೇ ಇದರ ಅಸ್ತಿತ್ವ. ಮೈಮರೆತು ಭಕ್ತಿಯಲ್ಲಿ ಮಿಂಬಿ ಹೋಗಿರುವ ಭಕ್ತಗಣಕ್ಕೆ ಇದೊಂದು ಅಕರ್ಷಣೀಯ ಸ್ಥಾನ. ಕಷ್ಟ ಕಾರ್ಪಣ್ಯಗಳಿಂದ ನೊಂದು ಬೆಂಡಾಗಿಹೋದವರಿಗೆ ಅಕ್ಷಯ ವಿಶ್ವಾಸವನ್ನು ಬೀರುವ ಮಹಿಮಾಸ್ಥಾನ. ಕುಪ್ಪತ್ತು—ಕಲ್ಲು ಕಗಳನ್ನು ತೊಡೆದು ದೇಹ—ಮನಸ್ಸುಗಳಿಗೆರಡನ್ನೂ ಶುಭ್ರ ಗೊಳಿಸುವ ಪವಿತ್ರ ಸ್ಥಾನ.

ಇಲ್ಲಿಂದು ಬೃಂದಾವನ. ಚಿಕ್ಕ ಮಕ್ಕಳಿಂದ ಹಿಡಿದು, ಕಡು ಮುಪ್ಪಿನ ಮುದುಕರವರೆಗೂ ಅಲ್ಲಿಗೆ ಧಾವಿಸುತ್ತಾರೆ. ಅದರ ಮುಂದೆ ನತವಸ್ತಕರಾಗುತ್ತಾರೆ. ಈ ಬೃಂದಾವನದೊಳಗೆ ಹೊಕ್ಕು ಇಂಚಿಗೆ ಇನ್ನೂರೆಕೊಂಭತ್ತೆಂಟು ವರ್ಷಗಳ ಕೆಳಗೆ ಸಮಾಧಿಸ್ಥರಾದ ಶ್ರೀ ರಾಘವೇಂದ್ರ ಸ್ವಾಮಿಗಳ ಪೆನಪಿನಿಂದ ದೋಷೋಂಹತಂಗಾಗುತ್ತಾರೆ ಅವರ ಜೀವನಗಾಥೆಯನ್ನು ಕೇಳುತ್ತಾರೆ.

ಜನನ—ಬಾಲ್ಯ

ಕುಂಭಕೋಣಂ ತಮಿಳುನಾಡಿನ ಒಂದು ಪ್ರಾಚೀನ ಗ್ರಾಮ. ಅಲ್ಲಿ ಕೃಷ್ಣ ಭಟ್ಟರೆಂಬ ಶಿಷ್ಟ ಪಂಡಿತರಿದ್ದರು. ಅವರು ವೀಣೆಯ ವಿದ್ವಾಂಸ ಸಹ ಆಕುದು. ವಿಜಯಪುರದ ಸಾಮ್ರಾಜ್ಯದ ಅವನಿಪ್ರಣೀಯ ಆಗಿದ್ದ ಕೃಷ್ಣದೇವರಾಯನ ಕಾಲದಲ್ಲಿ ಅವರು ಅಲ್ಲಿಗೆ ಬಂದರು. ಅವರ ಮೊಮ್ಮಗ ತಿಮ್ಮಣ್ಣ ಭಟ್ಟರು. ತಿಮ್ಮಣ್ಣ ಭಟ್ಟರಿಗೆ ಸಾಧ್ವಿ ಗೋಪಮ್ಮ ಎಂಬಾಕೆಯೊಂದಿಗೆ ವಿವಾಹವಾಯಿತು. ಸರಸ್ವತಿ ಲಕ್ಷ್ಮೀದೇವಿಯರು ಒಂದೆಡೆ ಕೂಡುವುದು ಅಕ್ಕಾಕೃತಿಕ. ಅಕ್ಷರಶಃ ಅವರನ್ನು ಒಡಕ ಕ ಕಾಡುತ್ತಿತ್ತು.

ಅಷ್ಟರಲ್ಲೇ ವಿಜಯನಗರದ ದೇವಿ ಭುವನೇಶ್ವರಿಯು ಮುಖದಲ್ಲಿ ಅಪಜಯದ ಸೋಲ್ಕರ ಕಳೆ ಇಣಕಿತು. ವರಾಹಾಂಕಿತ ಧ್ವಜ ಕೆಳಗಿಳಿಯಿತು. ಆದರೆ ಅತ್ಯಂತ ವಿದ್ವಜ್ಜನರು ತಬ್ಬಲಿಗಳಾದರು. ತಿಮ್ಮಣ್ಣ ಭಟ್ಟರು ಪತ್ನಿಯೊಂದಿಗೆ ಅಲ್ಲಿಂದ ಹೊರಬಿದ್ದು ಕಾಂಚೀಪುರದ ಸಮೀಪದ ಭುವನಗಿರಿಗೆ ಬಂದು ತಂಗಿದರು.

ಕಾಲಕ್ರಮದಲ್ಲಿ ಅವರಿಗೆ ವೆಂಕಮ್ಮ—ಗುರುರಾಜರೆಂಬ ಹೆಣ್ಣು—ಗಂಡು ಮಕ್ಕಳ ಜನ್ಮವಾಯಿತು. ಸಂಸಾರ ಸೌಕರ್ಯ ಸಾಗಿಸುತ್ತ ಶ್ರೀನಿವಾಸ ಸೇವೆಯಲ್ಲಿ ಅನನ್ಯ ಭಕ್ತಿಯಿಟ್ಟು ಆತನ ಸೇವೆಯಲ್ಲಿ ತಲ್ಲೀನರಾಗಿದ್ದರು. ಆಗಲೇ ರಾಘವೇಂದ್ರ ಸ್ವಾಮಿಗಳ ಜನನ. ಹುಟ್ಟಿದಾಗಿನ ಹೆಸರು ವೆಂಕಭಟ್ಟ.

ಶಿಶುವಿನ ಜನನ ತಂದೆತಾಯಿಯರಿಗೆ ಅನಂದದ ಅಮೃತಸಿಂಚನ ಮಾಡಿಸಿ. ಆದರ ಬೆಳವಣಿಗೆಯೂಗ.ತ್ತಿದ್ದಂತೆ ಮುಖಮಂಡಲ ತೇಜಸ್ಸಿನಿಂದ ಮಿಂಚಲಾರಂಭಿಸಿತು. ಆದರ ಜಾತಕ ಶಿಶು ಸರ್ವಜ್ಞನೂ, ಸರ್ವಪೂಜ್ಯನೂ ಆಗುವನೆಂದು ಹೇಳುತ್ತಿತ್ತು.

ಬ್ರಹ್ಮಶಕ್ತಿಯ ಆವಾಹನೆ.

ಕುಂಭಕೋಣದಲ್ಲಿ ಶ್ರೀ ಸುಧೀಂದ್ರತೀರ್ಥ ಶ್ರೀಪಾದಂಗಳವರು ಧಾರ್ಮಿಕ ಜೈತನ್ಯವನ್ನೆರೆಯುತ್ತಿದ್ದ ಬ್ರಹ್ಮಶಕ್ತಿ. ಅವರು ಒಮ್ಮೆ ಶ್ರೀ ವಿಜಯೀಂದ್ರ ಸ್ವಾಮಿಗಳ ಆರಾಧನೆ ನಡೆಸಿದರು. ತಿಮ್ಮಣ್ಣ ಭಟ್ಟರು ವೆಂಕಭಟ್ಟನನ್ನು ಕರೆದುಕೊಂಡು ಅಲ್ಲಿಗೆ ಹೋದರು. ಬಾಲಕನ ಮುಖದಲ್ಲಿ ಚಿಮ್ಮುತ್ತಿದ್ದ ತೇಜಸ್ಸು, ಕಣ್ಣಿನಲ್ಲಿ ಮಿಂಚುತ್ತಿದ್ದ ಕಾಂತಿ ಅವರ ದೃಷ್ಟಿಯನ್ನು ಕಟ್ಟಿಹಾಕಿದುವೆ. ಬಾಲಕನ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ನೀಡಬೇಕೆಂದು ಶ್ರೀಗಳವರು ತಿಮ್ಮಣ್ಣ ಭಟ್ಟರಿಗೆ ಆದೇಶ ನೀಡಿದರು.

ವಿದ್ಯಾಭ್ಯಾಸ ಪ್ರಾರಂಭವಾಯಿತು. ತಳ ಹುರುಳುಬುದ್ಧಿ, ಸೂಕ್ಷ್ಮಗ್ರಹಣ ಶಕ್ತಿ, ಅದ್ವಿತೀಯ ಸ್ಮರಣಾಶಕ್ತಿಗಳ ಮೂಲಕ ಸ್ವಲ್ಪದಿಂಗಳವಾಗಿ ವಿದ್ಯೆಯನ್ನು ಗಳಿಸುತ್ತಿರುವಾಗಲೇ ವೆಂಕಭಟ್ಟನ ಜೀವಕ್ಷದಲ್ಲಿ ಬರಸಿಡಿಲೊಂದು ಬಡಿಯಿತು. ವೃದ್ಧ ತಂದೆ ತಿಮ್ಮಣ್ಣ ಭಟ್ಟರು ತೀರಿಕೊಂಡರು. ಅಣ್ಣ ಗುರುರಾಜರೇ ತಮ್ಮನ ಉಪನಯನೇತ್ಯಾದಿಗಳನ್ನು ನಡೆಸಿ ವಿದ್ಯಾಭ್ಯಾಸಕ್ಕಾಗಿ ಭಾವ ಲಕ್ಷ್ಮೀಧರಸಿಂಹಾಚಾರ್ಯರ ಬಳಿಗೆ ಕಳಹಿಸಿದರು. ಭಾವನವರಿಂದ ಸಕಲ ವಿದ್ಯೆಗಳೂ ವೆಂಕಭಟ್ಟನ ಕರತಲಾಮಲಕವಾದುವು. ಜೊತೆಗೆ ವೀಣಾವಾದನದಲ್ಲಿಯೂ ಪರಿಣತನಾದ.

ವೆಂಕಭಟ್ಟನ ಪೂರ್ವಜರು ದ್ವೈತಮತಾನುಯಾಯಿಗಳು. ದ್ವೈತಮತದ ಅತಿ ಶ್ರೇಷ್ಠ ಗ್ರಂಥವಾದ 'ಶ್ರೀನ್ಯಾಯಸುಧೆ'ಯನ್ನು ಅಭ್ಯಸಿಸಲು ಇಚ್ಛೆಯಿಂದ ವೆಂಕಭಟ್ಟನು ಶ್ರೀ ಸುಧೀಂದ್ರ ತೀರ್ಥರ ಶಿಷ್ಯನಾದನು. ಕಡು ಬಡತನದಿಂದ ಹೀಡಿತನಾದರೂ ಹೊಟ್ಟೆ ಹಸಿವನ್ನು ಕೂಡ ಕಡೆಗಿಡಿದು ತನ್ನ ಜ್ಞಾನಪೃಪಿಯನ್ನು ಇಂಗಿಸಿಕೊಳ್ಳುವ ಮಹತ್ವಾಕಾಂಕ್ಷೆಯಿಂದ ವಿದ್ಯಾಭ್ಯಾಸವನ್ನು ಮುಂದುವರಿಸಿದ. 'ಪರಿಮಳ' ಎಂಬ ಮಹಾಗ್ರಂಥವನ್ನು ಬರೆದು ಶ್ರೀಗಳವರಿಂದ "ಪರಿಮಳಾಚಾರ್ಯ"ನೆಂಬ ಬಿರುದನ್ನು ಪಡೆದ. ಅನೇಕ ವಾದ-ವಿವಾದಗಳಲ್ಲಿ ಮುಂದಾಗಿ 'ಮಹಾಧಾತ್ಮ' ಪರಿಮಳ ವೆಂಕಟಾಚಾರ್ಯನೆಪಿಸಿಕೊಂಡ.

ಮೂವತ್ತನೆಯ ವಯಸ್ಸಿನಲ್ಲಿ "ಸರಸ್ವತಿ" ಎಂಬ ಕನ್ಯೆಯೊಂದಿಗೆ ವಿವಾಹವಾದ ಫಂತರ ಒಂದು ಮಗುವೂ ಆಯಿತು. ಆದರೆ ಬಡತನದ ಮೂಕ್ರ ಬೆಂಬಿಡಲಿಲ್ಲ. ದಿನನಿತ್ಯದ ಗ್ರಾಸಕ್ಕಾಗಿ ಸತತ ಹೋರಾಟ ನಡೆಯುತ್ತಲೇ ಇತ್ತು.

ಸಂಸಾರತ್ಯಾಗ—ಸಮಾಜಸೇವಾ ದೀಕ್ಷೆ

ವೃದ್ಧಾಪ್ಯದಲ್ಲಿ ಕಾಲಿಡುತ್ತಿದ್ದ ಶ್ರೀ ಸುಧೀಂದ್ರ ತೀರ್ಥರು ಯೋಗ್ಯ ಉತ್ತರಾಧಿಕಾರಿಗಾಗಿ ಸತ್ಪ ನೋಡಲಾರಂಭಿಸಿದರು. ಸಹಜವಾಗಿ ಇವರ ಕಣ್ಣು ವೆಂಕಭಟ್ಟನ ಮೇಲೆ ಬಿತ್ತು. ಭಟ್ಟರು ಸನ್ಯಾಸಾಶ್ರಮವನ್ನು ಸ್ವೀಕರಿಸಿದರು. ಸಂಸಾರ ಬಂಧನವನ್ನು ಕಡಿದುಕೊಳ್ಳಲು, ವಿಶಾಲ ಸಮಾಜ ಸಾಗರದಲ್ಲಿ ಧುಮುಕಿದರು. ಶಾಲಿವಾಹನ ಶಕೆ 1545ನೇ ರುಧಿರೋದ್ಗಾರಿ ಸಂವತ್ಸರದ ಫಾಲ್ಗುಣ ಶುದ್ಧ ಪಂಚಮಿಗೆಯಂದು ವೆಂಕಭಟ್ಟರು ಸನ್ಯಾಸಾಶ್ರಮ ಸ್ವೀಕರಿಸಿ ಶ್ರೀ ರಾಘವೇಂದ್ರ ತೀರ್ಥರಾದರು.

ಶ್ರೀ ಶಂಕರ ಭಗವತ್ಪಾದರು ಇಡೀ ಭಾರತವನ್ನು ಸುತ್ತಿ ರಾಷ್ಟ್ರದ ಏಕಾತ್ಮತೆಯನ್ನು ಎತ್ತಿ ಹಿಡಿದಂತೆ ಶ್ರೀ ರಾಘವೇಂದ್ರರೂ ತಮ್ಮ ದೇಶಸಂಚಾರ ಪ್ರಾರಂಭಿಸಿದರು. ಹರಿದ್ವಾರದಿಂದ ರಾಮೇಶ್ವರದವರೆಗೂ ಅವರ ಅಖಂಡ ರೂಪ್ರೆ ಜರುಗಿತು. ಮಠಗಳ ವಾದವಿವಾದಗಳೆಷ್ಟೋ ನಡೆದುವು. ಧರ್ಮ ಪ್ರಸ್ಥಾಪನೆಯ ಕಾರ್ಯ ಅವಿರತವಾಗಿ ನಡೆಯಿತು. ಜತೆಜತೆಗೆ ಜನಸಾಮಾನ್ಯರ ಅನೇಕ ಕಷ್ಟಗಳಿಗೆ ಇವರು ಕಾರಿದ ಹಿತವಚನಗಳೇ ಅಮೃತವಾಯಿತು. ಇವರ ಪ ಹಸ್ತದೇ ದುಃಖನಿವಾರಕವಾಯಿತು.

ಶ್ರೀ ರಾಘವೇಂದ್ರರಪ್ರತಿಭೆ ವಾಂಡಿತ್ಯಗಳು ಲೇಖನಿಯ ಮೂಲಕವೂ ಹರಿದು ಬರಲಾರಂಭಿಸಿದುವು: 14 ಧರ್ಮಗ್ರಂಥಗಳು ರಚನೆಯಾದುವು.

ಸೇವಾಕಪ್ಪಸರಿಹಾರಿ ಶ್ರೀ "ರಾಯರು"

ಕಡೆಯ ದಿನಗಳು ಬಳಿಸಾರಲಾರಂಭಿಸಿದಾಗ ತಮ್ಮ ಅಂತಿಮ ನಿವಾಸಸ್ಥಾನಕ್ಕಾಗಿ ಪುಂಗಭದ್ರಾತೀರದ ಮಂತ್ರಾಲಯವನ್ನು ಆರಿಸಿಕೊಂಡರು. ಬೃಂದಾವನವನ್ನು ಕಟ್ಟಿಸಿ ನಿಲ್ಲಿಸಿದರು.

ಕ್ರಿ.ಶ 1671. ಶಾಲಿವಾಹನ ಶಕೆ 1663, ವಿರೋಧಿನಾಮ ಸಂವತ್ಸರದ ಶ್ರಾವಣ ಬಹುಳ ಪಾಡ್ಯ. ಮಂಚಾಲಿನಿಂದ ಸಿದ್ಧನಾಡಿಕೊಂಡ ಯತಿವರ್ಯರು ವಿಪ್ರರ ವೇದಘೋಷ ವಿವಿಧ ವಾದ್ಯಗಳ ಮೊಳಕ ಇತ್ಯಾದಿಗಳ ಪವಿತ್ರ ವಾತಾವರಣದಲ್ಲಿ ಭಕ್ತವೃಂದದವರು ವೃಂದಾವನವನ್ನು ಪ್ರವೇಶಿಸಿ ಶ್ವಾಸಬಂಧನ ಮಾಡಿ ದೇವಧ್ಯಾನ ಪರರಾದರು.

ಶ್ರೀ ರಾಘವೇಂದ್ರರ ಅಮರ ವ್ಯಕ್ತಿತ್ವ ಜಗತ್ತಿನದಲ್ಲಿ ಸದಾ ಕಾಲಕ್ಕೂ ಬೆರೆತು ಹೋಗಿದೆ. ಮಾನವ ಸಮಾಜವನ್ನು ಕಾಡುವ ಚಿಂತಾಗ್ನಿಯನ್ನು ಆರಿಸಿ, ಫಲಂತರ ಅಶಾವಾದದ ಅಕ್ಷಯಶಕ್ತಿಯನ್ನು ತುಂಬುವ "ರಾಯರು" ಎಂಬ ಹೆಸರು ಜಗತ್ತಿನಾದ್ಯಂತರಲ್ಲಿ ಉತ್ಸಾಹ, ಚೈತನ್ಯಗಳನ್ನು ಚಿಮ್ಮಿಸುವ ಚಲಮೆಸುಗಾಡಿದೆ.

(ಲೇಖಕರು)

ಉಡುಪಿಗೆ ಬಂದಾಗ
ಮನರಂಜನೆಯ ಸಮಸ್ಯೆ ನಿಮಗಿಲ್ಲ!
ಅತ್ಯುತ್ತಮ ಚಲಚ್ಚಿತ್ರಗಳನ್ನು ಪ್ರದರ್ಶಿಸುವ
ಎರಡು ಶ್ರೇಷ್ಠ ದರ್ಜೆಯ ಚಿತ್ರಮಂದಿರಗಳು
ನಿಮ್ಮ ಬೇಸರವನ್ನು ನೀಗಿಸಲು ಇಲ್ಲಿವೆ.
ಅಲಂಕಾರ್ (ಫೋನ್: 327) ಆಸ್ಪತ್ರೆ ರಸ್ತೆ
ಕಲ್ಪನಾ (ಫೋನ್: 437) ಉಪೇಂದ್ರಬಾಗ್
ಕುಂದಾಪುರದ ನವೀಕೃತ ಭವ್ಯ ಚಿತ್ರಮಂದಿರ—
ಗೀತಾಂಜಲಿ
ಮ್ಯಾನೇಜರು:
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಎಸ್. ಆರ್. ಬಿಲ್ಡಿಂಗ್ಸ್, ಉಡುಪಿ (ದ. ಕ.)

Edited, Printed & Published by K. H. Shetty at the Navayuga Press, Udipi, S. India.

ನವಚೇತನ

INDEPENDENCE DAY SPECIAL

1970



Made out of the Finest Materials

MANGALORE GANESH BEEDIES

Smokers cannot afford to miss them

Daily Production

Exceeds 4 Crores Beedies

Head Office :

MANGALORE GANESH BEEDI WORKS

VINOBA ROAD : : MYSORE - 5

Telephone : 20241 **Telegrams : AROMA**

Edited, Printed & Published by [illegible] at the Navayuga Press, Udipi, S. India.

ನವಯುಗ

ಸ್ವಾತಂತ್ರ್ಯ ವಿಶೇಷಾಂಕ
1970

ಸಂಪುಟ : 49
ಸಂಚಿಕೆ : 48

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು:
ನವಯುಗ ಪ್ರೆಸ್
ಉಡುಪಿ

ವಾರ್ಷಿಕ ಚಂದಾ ರೂ. 10
ವಿಶೇಷ ಸಂಚಿಕೆಗಳು ಸಹಿತ

ಸಪ್ಟಂಬರ 1970ರಿಂದ
50ನೇ ಸಂಪುಟಾರಂಭ
ಸುವರ್ಣೋತ್ಸವ ವರ್ಷ



ಹಿತ ಹೃದಯಕ್ಕೆ ಸಂಜೀವಿನಿ ಬೇಕು

ವಿದೇಶೀಯರ ಕಪಿಮುಷ್ಟಿಯಿಂದ ಮುಕ್ತರಾದ ನಾವು ಏನೇನೋ ಸುವರ್ಣ ಸ್ವಪ್ನಗಳನ್ನು ಕಂಡೆವು. ಪ್ರಜಾಪ್ರಭುತ್ವ ಸಂಪನ್ನ ದೇಶವೆಂದು ಘೋಷಿಸಿದಾಗ ಆ ಕನಸುಗಳನ್ನು ನನಸು ಮಾಡುವ ಆತುರದಿಂದ ಹುಚ್ಚೆದ್ದು ಕುಣಿದಾಡಿದೆವು. ನಮಗಿನ್ನು ಬಂಧನವಿಲ್ಲ, ಬರವಿಲ್ಲ ಎಂದು ನಂಬಿದ್ದೆವು. ಹೊಟ್ಟೆ ತುಂಬ ಅನ್ನ, ಮೈತುಂಬ ಬಟ್ಟೆ, ಸ್ವಜೆ-ಪ್ರಜೆಗೂ ಮನೆ, ಮಗು ಮಗುವಿಗೂ ವಿದ್ಯೆ-ಇವೇ ನೊದಲಾದ ಭನೋದ್ವೇಶಗಳನ್ನು ಸಾಧಿಸಿಕೊಳ್ಳುವ ತವಕದಿಂದ ಮುಂದಡಿಯಿಡ ತೊಡಗಿದೆವು. ಸ್ವಾತಂತ್ರ್ಯದ ಸವಿಯನ್ನು ಚಿಪ್ಪರಿಸಲು ನಾವೆಲ್ಲ ಒಂದಾದೆವು. ಇವಕ್ಕೆ ಈಗ ಎರಡು ದಶಕಗಳ ಇತಿಹಾಸ ರೂಪಿತವಾಗಿದೆ. ಈ ಎರಡು ಹತ್ತುಗಳಲ್ಲಿ ನಾವು ಯೂವ ಮಿತಿಪತ್ತ ತೊಡಗಿದ್ದೇವೆ? ನಾವೇನನ್ನು ಬಯಸಿದ್ದೆವೋ ಅದು ನಮ್ಮುಣಾಗಲಿಲ್ಲ. ಏನನ್ನು ನಿರೀಕ್ಷಿಸಿದ್ದೆವೋ ಅದು ನಿಕರವಾಗಲಿಲ್ಲ. ನಮ್ಮ ಆಶಾಗೋಪುರ ಕುಸಿದು ಬಿದ್ದಿದೆ; ಮತ್ರವಲ್ಲ, ಅದು ಪಾತಳಿಗೆ ಬೀಳುತ್ತಿದೆಯೆಂದು ಭಾಸವಾಗಪತ್ತಿದೆ.

ಸ್ವಾತಂತ್ರ್ಯ ಸೂರ್ವದಲ್ಲಿನೆ ರಾಜಕೀಯ ಒಕ್ಕಟ್ಟು ಸ್ವಾತಂತ್ರ್ಯೋತ್ತರಕಾಲದಲ್ಲಿ ಉಳಿಯಲಿಲ್ಲ. ಹಿಂದೆ ಸ್ವಾತಂತ್ರ್ಯ ಪ್ರಾಪ್ತಿಯೊಂದೇ ಸಾಧ್ಯವಾಗಿತ್ತು; ಇಂದು ಸಮೃದ್ಧ-ಸುದೃಢ ರಾಷ್ಟ್ರ ನಿರ್ಮಾಣವೇ ನಮ್ಮ ಸಾಧ್ಯವಾಗ ಬೇಕಿತ್ತು. ವಿಭಿನ್ನ ಮನೋನೈತ್ತಿಯ, ಪರಸ್ಪರ ವಿರೋಧಿ ನೀತಿ-ನಿಲುಮೆಗಳ ರಾಜ್ಯಕೀಯ ಪಕ್ಷಗಳೂ ಇದನ್ನೇ ಸಾಧ್ಯವೆಂದು ಹೇಳುತ್ತಿವೆಯೇನೋ ನಿಜ; ಆದೆ. ಇದಕ್ಕಾಗಿ ಮೂಮುತ್ತಿರುವ ನಾಧನೆ-ಹಿಂದಿನ ಸಾಧನೆಯಂತೆ ನಿಷ್ಕಪಟವಾಗಿಲ್ಲ; ನಿರ್ವಂಚಕವಾಗಿಲ್ಲ. ರಾಜ್ಯಕೀಯ ಪಕ್ಷಗಳು ರತ್ತಬೀಜಾಸುರನ ವಂಶದಂತೆ ಬೆಳೆದು ಬರುತ್ತಿವೆ. ಶ್ರೀ ಸಾಮಾನ್ಯನ ಮೇಲೆ ಪ್ರಭುತ್ವ ಜೇರುವ ಸಾಹಸ ನೂಡುತ್ತಿವೆ. ಜಂಮು ವಿದೇಶೀಯ ವೃತ್ತಾಸುರನ ಬಂಧನದಲ್ಲಿನೊಂದ ನಾವು ಇಂದು ಸ್ವದೇಶೀ ನರಕಾಸುರನ ಸ್ವರ್ಣ ಪಂಜರದಲ್ಲಿ ಸೆರೆಯಿದ್ದೇವೆಯೆನಿಸುತ್ತಿದೆ.

ಕಳೆದ ವರ್ಷ ಭಾರತನ ಇತಿಹಾಸದಲ್ಲಿ ಹೆಸರಾಪದ್ದು. ಸ್ವಾತಂತ್ರ್ಯ ಪೂರ್ವದ ಭವ್ಯೇತಿಹಾಸದಿಂದ ಹಿಮೂಲಯದ ಉತ್ತುಂಗ ಗಿರಿಯಡರಿದ್ದ ಕಾಂಗ್ರೆಸ್ಸು ಪಕ್ಷ ಸೀಳಾಗಿ ಕುಸಿದು ಬಿದ್ದ ವರ್ಷವಿದು. ಇದು ಒಳಿತಿಗಾಗಿಯೇ ಎಂದು ಅಧಿಕಾರ ಸ್ಥಾನದಲ್ಲಿ ಉಳಿದುಕೊಂಡ ಕವಲು ಹೇಳಿಕೊಳ್ಳುತ್ತಿದೆ. ಆದರೆ, ವರ್ಷವೊಂದು ಉರುಳಿದರೂ ಈ ಕವಲು ಏನೇನೋ ಸಾಧನೆ ಮಾಡಿಲ್ಲದಿರುವುದನ್ನು ಕಾಣುವಾಗ, ಅಧಿಕಾರ ಲಾಲಸೆಯೇ ಈ ವಿಭಜನೆಗೆ ಪ್ರೇರಕ ಶಕ್ತಿಯೆಂದು ಬಿಚಿತವಾಗುತ್ತದೆ. ಆಡಳಿತ ಪಕ್ಷವಿಂದು ಬಹುಮತ ಪಡೆದಿಲ್ಲ. ಹಾಗಾಗಿ ಹಲವಾರು ಬಗೆಯ ರಾಜ್ಯಕೀಯ ತಂತ್ರಗಳನ್ನು ಉದು ಬಳಸಿಕೊಂಡು ಅಧಿಕಾರದಲ್ಲಿ ಮುಂದುವರಿದಿದೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು ಎಂದು ಪ್ರಚಾರ ಮಾಡಲಾಗುತ್ತಿದೆ. ಸಮಾಜವಾದವೇ ತಮ್ಮ ನೀತಿಯೆಂದು ಹೇಳಿಕೊಳ್ಳಲಾಗುತ್ತಿದೆ. ಆದರೆ, "ಪ್ರಭು" ಮತ್ತು "ಸಮಾಜವಾದ"ಗಳ ಅರ್ಥ ವಿವರಣೆಯಲ್ಲಿ ಮಾತ್ರ ಜನಜನಕ್ಕೂ ಭಿನ್ನತೆಯಿದೆ. ಇದೇನೀತಿಯಲ್ಲಿ ನಡೆದರೆ, ದೇಶ ಕಲ್ಯಾಣದ ಮಾತು ದೂರ ಸರಿದಂತೆ; ಅರಾಜಕತೆಗೆ ಕರೆಗೊಟ್ಟಂತೆ. ಈ ವಿಷಮತೆಯನ್ನು ಮನಗಂಡೇ ಪಾರ್ಲಿಮೆಂಟನ್ನು ವಿಸರ್ಜಿಸಿ ರಾಷ್ಟ್ರಪತಿಯ ಅಧಿಕಾರ ಕೆಲಕಾಲ ಬರಲಿ ಎಂಬ ವಾದ ತಲೆಯೆತ್ತಿದೆ.

ಇಂದಿನ ದಿನಪ್ರತಿಕೆಗಳನ್ನು ಓದಿದಾಗ ಸುದ್ದಿಗೆಂದೇ ಸೃಷ್ಟಿಗೊಂಡ ಕೆಲವು ರಾಜ್ಯಗಳಿವೆಂತೆ ಕಾಣುತ್ತಿದೆ. ಪಶ್ಚಿಮ ಬಂಗಾಳ ಮತ್ತು ಕೇರಳಗಳಲ್ಲಿ ನಕ್ಸಲೀಯರ ಸುಲಿಗೆ ದಿನದಿನಕ್ಕೂ ಹೆಚ್ಚುತ್ತಲೇ ಹೋಗುತ್ತದೆ. ಸಂವಿಧಾನ ದತ್ತವಾದ ವಿತ್ತ-ಜೀವಿತಗಳ ರಕ್ಷಣೆಯನ್ನು ಮೂಡಿಕೊಳ್ಳಲು ಅಲ್ಲಿನ ಪ್ರಜೆಗಳು ಭಗೀರಥ ಪ್ರಯತ್ನ ಮಾಡಿದರೂ ಅಸಮರ್ಥರಾಗಿದ್ದಾರೆ. ಸಮೂಜವಾದದ ಹೆಸರಿನಲ್ಲಾಗುವ ಈ ಅನ್ಯಾಯದ ರಕ್ತ ಕ್ರಾಂತಿಯನ್ನು ತಡೆಯಲು ಸರಕಾರ ಅಶಕ್ತವಾಗಿದೆ. ಎರಡೂ ರಾಜ್ಯಗಳಲ್ಲಿ ಈಗ ರಾಷ್ಟ್ರಪತಿ ಆಳಿಕೆ ಬಂದರೂ ಶ್ರೀ ಸಾಮಾನ್ಯನಿಗೆ ರಕ್ಷಣೆಯೆಂಬುದು ದೊರೆತಿಲ್ಲ; ದೊರೆಯುವುದೂ ಇಲ್ಲ. ಸಚ್ಚಿದಾನಂದ ಬಂಗಾಳದಲ್ಲಿ ಸರಕಾರವೊಂದಿದೆಯೇ ಎಂದು ಪ್ರಶ್ನಿಸುವಂತಾಗಿದೆ. ಅಲ್ಲಿ ಮುಷ್ಕರ-ಬಂದು-ಪ್ರತಿರ್ತನ ಅಕ್ರಮಣ-ಕೊಲೆ-ಸುಲಿಗೆ-ದರೋಡೆ ಮೊದಲಾದುವು ಹಾಡು ಹಗಲಲ್ಲೇ ನಡೆಯುತ್ತಿವೆ. ಕೇರಳದ ಪರಿಸ್ಥಿತಿಯೂ ಇದಕ್ಕೆ ಅತಿ ನಿಕಟ. ಸಂಜಾಬದ ಹುಲಿಗಳು ತಂತಮ್ಮಲ್ಲೇ ಹೊಡೆದಾಡಿಕೊಂಡರೂ ಸಂಪೂರ್ಣ ಅರಾಜಕತೆಯಿನ್ನೂ ನೆಲಸಲಿಲ್ಲದಿರುವುದು ಸಮಾಧಾನ. ಭಾರತದ ಶಿರ ಕಾಶ್ಮೀರದಲ್ಲಿ ಪಾಕಿಸ್ತಾನಿ ಗೂಢಚಾರರ ಕಾರುಬಾರ ನಿರಾತಂಕವಾಗಿಯೇ ಸಾಗುತ್ತಿದೆ. ಅಲ್ಲಿನ ರಾಜ್ಯಕೀಯ ಭಿನ್ನಾಭಿಪ್ರಾಯವೂ ಇದಕ್ಕೆ ಪುಟ ನೀಡಿದೆ. ಇನ್ನು ದೇಶದ ಒಂದೊಂದು ರಾಜ್ಯದ ರಾಜ್ಯಕೀಯ ಸ್ಥಿತಿಯೂ ಒಂದೊಂದು ಬಗೆಯಿದ್ದು, ರಾಜ್ಯ ರಾಜ್ಯಗಳ ವಿಭಿನ್ನ ನಿಲುಮೆ-ನೀತಿಗಳಿಂದ ನಮ್ಮ ವಿದೇಶ ವ್ಯವಹಾರದ ಸಿಕ್ಕಿಗೂ ಮಿಗಿಲಾಗಿ ಸ್ವದೇಶೀ ವ್ಯವಹಾರದ ಬ್ರಹ್ಮಗಂಟು ಬಿದ್ದಿದೆ. ಇದನ್ನು ಶ್ರೀ ಚವನರಿಂದ ಬಿಡಿಸಲಾಗಲಿಲ್ಲ; ಶ್ರೀಮತಿ ಗಾಂಧಿಯೇನು ಬಿಡಿಸಿಯಾರು? ಒಂದೊಂದು ರಾಜ್ಯದಲ್ಲೂ ಒಂದೊಂದು-ಎರಡೆರಡು ಖಾಸಗಿ ಸೇನೆಗಳು ತಲೆಯೆತ್ತಿವೆ. ಇವು ತನ್ನ ಹಿತಕ್ಕಾಗಿ ಬೇರೆಯವರ ಸುಖವನ್ನು ಕೆಡಿಸುವುದಕ್ಕಾಗಿಯೇ ನಿರ್ಮಿತಗೊಂಡುವು. ಈ ಸೇನೆಗಳ ಸಂಖ್ಯೆ-ಸೈನಿಕರ ಸಂಖ್ಯೆಯ ಬಗ್ಗೆ ಅಧಿಕೃತ ಲೆಖ್ಖಾಚಾರವಿಲ್ಲವಾದರೂ ವೇತನ ಭುಕ್ತ ಭಾರತೀಯ ಸೇನೆಯ ಸಂಖ್ಯೆ ಮಿರಿದೆಯೆಂದರೂ ಸರಿಯೂಗ ಬಹುದು. ಇದರಲ್ಲಿ ಕೆಲವಕ್ಕೆ ವಿದೇಶಗಳ ಒತ್ತಾಸೆಯೂ ಇನೆಯೆಂಬುದಕ್ಕೆ ಕೆಲವೆಡೆ ಆಧಾರ ದೊರೆತಿವೆ ನಮ್ಮ ಪ್ರಜಾ ಸರಕಾರ ಇವನ್ನು ದಮನಿಸುವಲ್ಲಿ ಸಂಪೂರ್ಣ ಅಸಕ್ತವಾಗಿದೆ. ನಕ್ಸಲೀಯರಿಂದ ದೇಶಕ್ಕೆ ಗಂಡಾಂತರವೆಂದು ಅರಿತಿದ್ದರೂ ಅದನ್ನು ಬಹಿಷ್ಕರಿಸಲು, ಅದರ ಪ್ರಭಾವವನ್ನು ತಡೆಗಟ್ಟಲು ಸರಕಾರ ಮುಂದಾಗುತ್ತಿಲ್ಲ. ಅದರ ಶಕ್ತಿಹೀನತೆ ಮತ್ತು ರಾಜ್ಯಕೀಯ ಅಶಕ್ತತೆಗಳಿಂದ ಉದು ಮೂಕ ಪ್ರೇಕ್ಷವಾಗಿಯೇ ಜನಹಿಂಸೆಗೊಳಗಾಗುತ್ತಿರುವುದನ್ನು ಕಾಣುತ್ತಿದೆ

ಕಳೆದೊಂದು ವರ್ಷದಲ್ಲಿ ಭಾರತೀಯ ಶ್ರೀಸಾಮಾನ್ಯನ ಆಶೆಯ ಮೇಲೆ ಬಲವಾದ ಆಘಾತ ಬಿದ್ದಿದೆ; ಆತ ಸಂಪೂರ್ಣ ನಿರಾಶನಾಗಿದ್ದಾನೆ. ಪ್ರಜಾಪ್ರಭುತ್ವ-ಸ್ವಾತಂತ್ರ್ಯ ಎಂದರೆ ಇದೇನೇಯೇ?-ಎಂದಾತ ಪ್ರಶ್ನಿಸುವಂತಾಗಿದೆ. ಆಡಳಿತ ವಿಧಾನಗಳಲ್ಲಿ ಪ್ರಜಾಪ್ರಭುತ್ವವು ದೋಷ ಪೂರ್ಣವಿದ್ದರೂ ಉತ್ತಮವೆಂಬ ಆತನ ನಂಬಿಕೆ ಮುರುಟಿದೆ. ಅದನ್ನು ಮತ್ತೆ ನೀರೆರೆದು ಚಿಗುರಿಸುವ ಕೆಲಸವಿಂದು ಆಗಬೇಕು. ಆ ಆಡಳಿತದಲ್ಲಿರುವ ಮತ್ತು ಆದಳತದಲ್ಲಿರದ ರಾಜ್ಯಕೀಯ ಪಕ್ಷಗಳು ಶ್ರೀಸಾಮಾನ್ಯನ ಹತ ಹೃದಯವನ್ನು ಸಂಜೀವಿನಿ ಸುರಿದು ಮತ್ತೆ ಜೀವಂತಗೊಳಿಸಬೇಕು; ಪ್ರಜಾಸತ್ತೆಯಲ್ಲಿ ನಂಬಿಕೆ ಕುದುರಿಸುವಂತಹ ರಚನಾತ್ಮಕ ಕಾರ್ಯ ತತ್ಪರರಾಗಬೇಕು.

ನಾವು—ನೀವು

'ನವಯುಗ'ದ ಸ್ವಾತಂತ್ರ್ಯ ಸಂಚಿಕೆಯಿದೀಗ ನಿಮ್ಮ ಕೈಗಳಲ್ಲಿದೆ. ನಮ್ಮ ಪ್ರಾರ್ಥನೆಯನ್ನು ಕೇಳಿ ಅನೇಕ ಹೆಸರಾಂತ ಬರಹಕಾರರು ತಮ್ಮ ಲೇಖನಗಳನ್ನು ಕಳಿಸಿಕೊಟ್ಟು ಸಂಚಿಕೆಯನ್ನು ಸಮಯೋಚಿತವೂ ಉಪಯುಕ್ತವೂ ಆಗುವಂತೆ ಸಹಕರಿಸಿದ್ದಾರೆ. ಇದಕ್ಕಾಗಿ ಅವರಿಗೆ ನಮ್ಮ ಅನಂತಾನಂತ ಕೃತಜ್ಞತೆಗಳು. ಜಾಹೀರಾತು ನೀಡಿ ನಮ್ಮೊಡನೆ ಸಹಕರಿಸಿದವರ ಋಣ ಚಿರಸ್ಮರಣೀಯ. ಸ್ವಾತಂತ್ರ್ಯ ದಿನದ ಶುಭಾಶಂಸೆಗಳನ್ನು ನಿಮಗೆಲ್ಲರಿಗೂ ಸಲ್ಲಿಸುವುದರೊಡನೆ ದೇಶಕ್ಕೆ ಸುಭಿಕ್ಷೆಯುಂಟಾಗಲೆಂದು ಈ ಸಂದರ್ಭದಲ್ಲಿ ಹಾರೈಸುತ್ತೇನೆ.

—ಸಂಪಾದಕ

ಸ್ವಾವಲಂಬನೆಯ ಮಾರ್ಗದಲ್ಲಿ ರಾಷ್ಟ್ರದ ಮುನ್ನಡೆ

ದೇಶದಲ್ಲಿ ಸ್ವಪರಿಪೂರ್ಣತೆಯನ್ನು ಸಾಧಿಸುವುದು ನಮ್ಮ ಪಂಚವಾರ್ಷಿಕ ಯೋಜನೆಗಳ ಮುಖ್ಯ ಗುರಿಗಳಲ್ಲಿ ಒಂದು. ಈ ಗುರಿಸಾಧನೆಗಾಗಿ ದೇಶೀಯ ಉತ್ಪಾದನೆ–ಕೈಗಾರಿಕಾ ಮತ್ತು ಬೇಸಾಯ ಉತ್ಪಾದನೆಯನ್ನು ಹೆಚ್ಚಿಸುವುದು ಹೆಚ್ಚುತ್ತಿರುವ ಜನಸಂಖ್ಯೆಗೆ ಅಗತ್ಯವಾದ ಬಳಕೆದಾರರ ವಸ್ತುಗಳನ್ನು ಉತ್ಪಾದಿಸುವುದು ಹಾಗೂ ವಿದೇಶೀ ವ್ಯಾಪಾರ ಸಮತೋಲನವನ್ನು ಕಾದುಕೊಳ್ಳುವುದು ಈ ವಿಷಯಗಳಲ್ಲಿ ಪ್ರಯತ್ನಗಳನ್ನು ಕೈಗೊಂಡು ಸಾಕಷ್ಟು ಪ್ರಮಾಣದಲ್ಲಿ ಯಶಸ್ಸನ್ನು ಸಾಧಿಸಲಾಗಿದೆ. ಮೊದಲನೇ ಪಂಚವಾರ್ಷಿಕ ಯೋಜನೆಯ ಆರಂಭದಿಂದ ಇಂದಿನವರೆಗೆ ಹಂತಹಂತವಾಗಿ ಸ್ವಪರಿಪೂರ್ಣತೆಯ ಗುರಿ ಸಾಧನೆಯತ್ತ ಮುನ್ನಡೆದಿದ್ದೇವೆ.

ಮೊದಲನೇ ಪಂಚವಾರ್ಷಿಕ ಯೋಜನೆಯನ್ನು ಕಾರ್ಯರೂಪಕ್ಕೆ ತಂದೆಸುಮಾರಿನ ಅವಧಿ. 1951ರಲ್ಲಿ ದೇಶದ ಚಿತ್ರವೇ ಬೇರೆಯಿತ್ತು. ಬೇಸಾಯ ಕ್ಷೇತ್ರದಲ್ಲಿ ನನ್ಯ ಪ್ರದೇಶ ಹಳೆಯ ಪದ್ಧತಿಗಳನ್ನೇ ಬಳಸುತ್ತಿದ್ದರು. ಸುಸಜ್ಜಿತ ಯಂತ್ರೋಪಕರಣಗಳನ್ನು ಉಳವಣಿಸಿಕೊಂಡ ಕೈಗಾರಿಕಾ ಸಂಸ್ಥೆಗಳ ಬಗಮದಿಂದಾಗಿ ಗೃಹ ಮತ್ತು ಸಣ್ಣ ಕೈಗಾರಿಕೆಗಳು ನಶಿಸಿಹೋಗುವ ಸ್ಥಿತಿಗೆ ಬಂತು. ಬೇಸಾಯ ಪ್ರಧಾನವಾದ ಕೈಗಾರಿಕೆಗಳು ಅತ್ಯಲ್ಪಸಂಖ್ಯೆಯಲ್ಲಿದ್ದವು. ಅದೂ ಅಲ್ಲದೆ ಅವುಗಳ ಅಭಿವೃದ್ಧಿ ವಿದೇಶಿ ಯಂತ್ರೋಪಕರಣಗಳನ್ನು ಅವಲಂಬಿಸಿತ್ತು. ಕೇವಲ ಎರಡು ವರ್ಷಕಗಳಲ್ಲಿ ದೇಶದ ಕೈಗಾರಿಕೋದ್ಯಮದ ಚಿತ್ರಪೂರ್ವ ಬದಲಾಗಿದೆ.

1950ರಲ್ಲಿ ಇದ್ದ ಒಟ್ಟು ರಾಷ್ಟ್ರೀಯ ವರಮಾನದಲ್ಲಿ ಕೈಗಾರಿಕಾ ಕ್ಷೇತ್ರದಿಂದ ವರಮಾನ ಶೇಕಡಾ 5ರಿಂದ 6ರಷ್ಟಿತ್ತು. 30ಲಕ್ಷ ಮಂದಿ ಕಾರ್ಮಿಕರಿಗೆ ಮಾತ್ರ ಉದ್ಯೋಗಾವಕಾಶ ದೊರಕಿತ್ತು. 1967-68ರ ವೇಳೆಗೆ ಕೈಗಾರಿಕಾ ಕ್ಷೇತ್ರದ ವರಮಾನ ಶೇಕಡಾ 10ರಷ್ಟಕ್ಕೇರಿದೆ. ಈಗ ದೇಶದಲ್ಲಿ 45ಲಕ್ಷ ಹೆಚ್ಚು ಮಂದಿ ಕಾರ್ಮಿಕರಿದ್ದಾರೆ. ದೇಶೀಯ ಕೈಗಾರಿಕಾ ವಸ್ತುಗಳ ಗುಣಮಟ್ಟವೂ ಸಾಕಷ್ಟು ಸುಧಾರಿಸಿದೆ.

ದೇಶದ ಬೃಹತ್ ಕೈಗಾರಿಕೆಗಳು ಉದಾಹರಣೆಗಾಗಿ–ಉಕ್ಕು ಮತ್ತು ಕಬ್ಬಿಣ, ರಾಸಾಯನಿಕ ವಸ್ತುಗಳು, ಇಂಜಿನಿಯರಿಂಗ್, ಔಷಧಿಗಳು, ಪೆಟ್ರೋಲಿಯಂ ಇವು ವಿಸ್ತರಣೆಗೊಂಡಿವೆ. ಪ್ರತಿ ವರ್ಷ ಈ ಎಲ್ಲಾ ಕೈಗಾರಿಕೆಗಳ ಸರಾಸರಿ ಉತ್ಪಾದನೆ ಏರುತ್ತಿದೆ ಎಂಬುದಾಗಿ ಕೈಗಾರಿಕಾ ವರದಿಗಳು ತಿಳಿಸುತ್ತಿವೆ. ಅತಿ ಸೂಕ್ಷ್ಮವಾದ ವಸ್ತುಗಳನ್ನು ದೇಶದಲ್ಲಿ ಇತ್ತೀಚೆಗೆ ಪ್ರಥಮ ಬಾರಿಗೆ ಕೈಗೊಳ್ಳಲಾಗಿದೆ. ಎಲ್ಲಾ ಬಳಕೆದಾರರ ವಸ್ತುಗಳನ್ನು ದೇಶದಲ್ಲಿ ತಯಾರಿಸುತ್ತಿದ್ದೇವಲ್ಲದೆ ಆವುಗಳಿಗಿರುವ ಬೇಡಿಕೆಯನ್ನು ದೇಶೀಯ ಉತ್ಪಾದನೆಯಿಂದಲೇ ಈಡೇರಿಸಲಾಗುತ್ತಿದೆ. ಕೈಗಾರಿಕಾ ವಸ್ತುಗಳ ಆಮದು ಕಡಿಮೆಯಾಗುತ್ತಾ ಬಂದಿದೆ. ಸಾರಿಗೆ ವ್ಯವಸ್ಥೆ, ವಿದ್ಯುಚ್ಛಕ್ತಿ, ನೀರಾವರಿ ಮತ್ತು ಸಣ್ಣ ಪುಟ್ಟ ಕೈಗಾರಿಕೆಗಳಿಗೆ ಅಗತ್ಯವಾದ ಇತರ ಬಂಡವಾಳ ವಸ್ತುಗಳನ್ನು ಈಗ ದೇಶದಲ್ಲಿ ಅಧಿಕ ಪ್ರಮಾಣದಲ್ಲಿ ತಯಾರಿಸುತ್ತಿದ್ದೇವೆ. ಭೂಪಾಲ್, ಹರಿದ್ವಾರ್ ಮತ್ತು ರಾಮಚಂದ್ರಪುರಗಳಲ್ಲಿರುವ ಹಾಗೂ ಖಾಸಗೀ ಕ್ಷೇತ್ರಗಳಲ್ಲಿರುವ ಕೈಗಾರಿಕೆಗಳು ವಿದ್ಯುಚ್ಛಕ್ತಿ ಉತ್ಪಾದನೆ ಪೂರೈಕೆ ಮತ್ತು ವಿತರಣೆಗೆ ಅಗತ್ಯವಾದ ಬಂಡವಾಳ ವಸ್ತುಗಳಲ್ಲಿ ಬಹುತೇಕವನ್ನು ಪೂರೈಸುತ್ತಿವೆ. ದೇಶದಲ್ಲಿಯೇ ತಯಾರಾದ ರೈಲ್ವೆ ಇಂಜಿನ್‌ಗಳೂ ವ್ಯಾಗೆನ್‌ಗಳೂ ಟ್ರಾಕ್ಟರ್‌ಗಳೂ, ಮೋಟಾರುಗಳು, ಕಾರ್‌ಗಳು ಪದಗುಗಳೂ, ಎರೋಪ್ಲೇನ್ ಈಗ ಬಳಕೆಯಲ್ಲಿವೆ.

ಬೃಹತ್ ಕೈಗಾರಿಕಾ ಕ್ಷೇತ್ರದಲ್ಲಿ ಅಷ್ಟೇ ಅಲ್ಲದೆ ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿಯೂ ಅಭಿವೃದ್ಧಿ ಕಂಡುಬಂದಿದೆ. ಸ್ವಸಂತೋಷದಿಂದ ರಿಜಿಸ್ಟರ್ ಆದ ಸಣ್ಣ ಕೈಗಾರಿಕಾ ಸಂಸ್ಥೆಗಳ ಸಂಖ್ಯೆ 1961ರಲ್ಲಿ 35,700ರಷ್ಟಿತ್ತು. ಇದು 1965ರ ವೇಳೆಗೆ 100,000ದಷ್ಟಾಗಿ 1968–69ರ ವೇಳೆಗೆ 1,40,000ವನ್ನು ಮುಟ್ಟಿದೆ. ಕೈಗಾರಿಕೋದ್ಯಮದಲ್ಲಿ ಬಹುಮುಖ ಪ್ರಗತಿ ಕಂಡುಬಂದಿದೆ. ಕೈಗಾರಿಕೋದ್ಯಮಿಗಳ ಆಸಕ್ತಿಯನ್ನು ಕೆರಳಿಸಿದೆ ಆಡಳಿತ ಕ್ರಮ ವ್ಯವಸ್ಥೆಗೊಳ್ಳುತ್ತಿದೆ. ಸಂಶೋಧನಾ ಸೌಲಭ್ಯಗಳೂ ಸಾಕಷ್ಟು ಹೆಚ್ಚಿನೆ. ದೇಶದ ವಿದೇಶಿ ವ್ಯಾಪಾರ ಸಮತೋಲನವೂ ದೇಶದ ಅಭಿವೃದ್ಧಿದೃಷ್ಟಿಯಿಂದ ಅನುಕೂಲವಾಗಿದೆ.

ಸತ್ಯದ ಸರ್ವಶ್ರೇಷ್ಠ ಅಭಿನಂದನವೆಂದರೆ ಅದನ್ನು ನಾವೇ ನಮ್ಮ ಆಚರಣೆಯಲ್ಲಿ ತರುವದು.

ಂ ಂ ಂ

ವಿಶ್ವದಲ್ಲಿಯ ಒಂದೇ ಒಂದು ಬೆಲೆಯುಳ್ಳ ವಸ್ತುವೆಂಬುದು ಆತ್ಮ.

ಂ ಂ ಂ

ಆತ್ಮವಿಶ್ವಾಸವು ಸಫಲತೆಯ ಮುಖ್ಯ ರಹಸ್ಯವಾಗಿದೆ.

ಂ ಂ ಂ

ಪಿಗ್ಮಿ

1928ರಲ್ಲಿ ಅದೊಂದು ಕಲ್ಪನೆ ಮಾತ್ರವಾಗಿತ್ತು

ನಾನು ಅಕ್ಟೋಬರ್ 1928ರಲ್ಲಿ ಜನ್ಮ ತಾಳಿದೆ. ಸಿಂಡಿಕೇಟ್ ಬ್ಯಾಂಕಿನಿಂದ ಸಾಕಿ ಸಲಹಲ್ಪಟ್ಟೆ. ಆಗ ನಾನು ಸಣ್ಣ ಮೊತ್ತವಾದ ಎರಡಾಣೆಯನ್ನು ಸಂಗ್ರಹಿಸುವುದಕ್ಕಾಗಿ ಬಾಗಿಲಿನಿಂದ ಬಾಗಿಲಿಗೆ ಸಂಚರಿಸುವಾಗ ಪರಿಹಾಸ್ಯಕ್ಕೊಳಗಾಗುತ್ತಿದ್ದೆ.

ಇಂದೀಗ ನಾನು ಪಿಗ್ಮಿ ಎಂದೇ ಪರಿಚಿತನಾದರೂ ನನ್ನ ಸ್ಥಾನವು ಬೃಹದಾಕಾರವಾಗಿ ಬೆಳೆದಿದೆ. ಎರಡು ಲಕ್ಷಕ್ಕೂ ಹೆಚ್ಚು ಜನರು ನನ್ನಲ್ಲಿಗೆ ಬಂದಿರುವರು. ಯಾರು ತಮ್ಮ ಭವಿಷ್ಯದ ಕುರಿತು ಹೆಚ್ಚು ವಿಚಾರವುಳ್ಳವರಾಗುವರೊ ಅವರಿಗೆ ನಾನು ನಿಜವಾಗಿಯೂ ತುಂಬಾ ಪ್ರಯೋಜನಕಾರಿಯೆಂದು ಮನಗಾಣುವೆನು.

ನಿಮಗೆ ಒಂದು ಪಿಗ್ಮಿ ಖಾತೆಯನ್ನು ತೆರೆಯಲು ದಿನಕ್ಕೆ 25 ಪೈಸೆ ಮಾತ್ರ ಬೇಕಾಗುವುದು ಮತ್ತು 7 ವರ್ಷಗಳಲ್ಲಿ ಇದು ರೂ. 700 ಆಗುವುದು. ದಿನಂಪ್ರತಿ ನಿಮ್ಮ ಕೊಡುಗೆಯನ್ನು ಸಂಗ್ರಹಿಸಲು ನಾನು ನಿಮ್ಮ ಬಾಗಿಲು ಕಾಯುವೆ.

ಭಾರತದಾದ್ಯಂತ ಪಸರಿಸಿರುವ ಸಿಂಡಿಕೇಟ್ ಬ್ಯಾಂಕಿನ 433 ಶಾಖೆಗಳಲ್ಲಿ ಯಾವುದಾದರೊಂದರಲ್ಲಿ ನೀವೇಕೆ ನನ್ನ ಸಂಪರ್ಕವಿಟ್ಟುಕೊಳ್ಳಬಾರದು?

ಸಾಮಾಜಿಕ ಸೇವೆಯಲ್ಲಿ ಉನ್ನತ ಬ್ಯಾಂಕಿಂಗ್

ಸಿಂಡಿಕೇಟ್ ಬ್ಯಾಂಕ್

ಹೆಡ್ ಆಫೀಸು : ಮಣಿಪಾಲ

ಕನ್ವೀನಿಯರ್ : ಕೆ. ಕೆ. ಪೈ

Edited, Printed & Published by K. H. Shetty at the Navayuga Press, Udipi, S. India.

ಸ್ವಾತಂತ್ರ್ಯ ದಿನಾಚರಣೆಯು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಸ್ಮರಣೆಯನ್ನುಂಟು ಮಾಡುವುದು ಸಹಜ. ಮೇಗವು ಸ್ವತಂತ್ರವಾಗಿ ಇಪ್ಪತ್ತಮೂರು ವರ್ಷಗಳು ಸಂದುವು. ಆದರೂ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಪಟ್ಟ ಸಂಪೂರ್ಣವಾದ ಇತಿಹಾಸವು ಬಂದಿಲ್ಲವೆನ್ನಬಹುದು. ಅದರ ಕಾರಣವಿಷ್ಟೆ, ಭಾರತ-ಪಾಕಿಸ್ಥಾನಕ್ಕೆ ಬ್ರಿಟನ್ ಅಧಿಕಾರ ವರ್ಗಾಯಿಸುವುದಕ್ಕೆ ಸಂಬಂಧಿಸಿದ ಅನೇಕ ಮೂಲ ಪತ್ರಗಳು, ದಾಖಲೆ ಪತ್ರಗಳು ಇನ್ನೂ ಪ್ರಕಟಗೊಂಡಿಲ್ಲ. ವಿ. ಪಿ. ಮೆನನರ ಮತ್ತು ಕ್ಯಾಂಪ್‌ಬೆಲ್‌ರವರ ಗ್ರಂಥಗಳು ಬಹುಮಟ್ಟಿಗೆ ಸ್ವಾತಂತ್ರ್ಯ ಹೋರಾಟದ ಕೊನೆಯ ಹಂತಗಳ ಚರಿತ್ರೆಯ ಬಗ್ಗೆ ಬೆಳಕು ನೀಡಿರುವುವು.

ಈ ದಿಸೆಯಲ್ಲಿ ಇತ್ತೀಚೆಗೆ ಬೆಳಕು ಕಂಡ ಒಂದು ಗ್ರಂಥವು ಯಜ್ಞ. ವಿ. ಹೊಡ್ಸನ್‌ರವರ "ದಿ ಗ್ರೇಟ್ ಡಿವ್ಯಾಡ್"—ಮಹಾ ವಿಭಜನೆ ಎಂಬ ಕೃತಿಯಾಗಿದೆ. ಹೊಡ್ಸನರವರು ವೈಸರಾಯರಾದ ಲೋರ್ಡ್ ಲಿನ್‌ಲಿತ್‌ಗೋರವರಿಗೆ ರಾಜ್ಯಾಂಗ ಸಲಹೆ ನೀಡುವ ಅಧಿಕಾರಿಯಾಗಿದ್ದರು. ಅವರು ಭಾರತದ ಆಂದಿನ ಮುಖ್ಯ ಮುಖಂಡರನ್ನು—ಗಾಂಧಿ, ನೆಹರೂ, ಜಿನ್ನಾ—ಮುಂತಾದವರನ್ನು ತಿಳಿದಿದ್ದರು. ಅವರು ಪುಸ್ತಕ ಬರೆಯಲು ಕೊನೆಯ

> ಶ್ರೀ ಎಚ್. ವಿ. ಹೊಡ್ಸನ್‌ರವರ "ದಿ ಗ್ರೇಟ್ ಡಿವ್ಯಾಡ್" ಎಂಬ ಇತ್ತೀಚಿಗಿನ ಗ್ರಂಥವನ್ನು ಇತ್ತೀಚಿನ ಮಿತ್ರರ ತಿಳಿವಳಿಕೆಗಾಗಿ ಪೂರ್ವದ ಭಾರತೀಯ ರಾಜಕೀಯ ಬೆಳವಣಿಗೆಯ ಮೇಲೆ ಕಂಡುಬೀಳಲು ಹಿಡಿಯುತ್ತದೆ. ಭಾರತೀಯ ರಾಜ್ಯಕಾರಣಗಳು ದಿಕ್ಕುಟ್ಟನ್ನು ಪಡಿಸಲಾರದು ಎಂಬ ಲಾರ್ಡ್ ವೇವಲ್ಲರ ಹೂಹು ಸತ್ಯವಾಯಿತು, ಇದು ಇಂದಿಗೂ ಸತ್ಯವಾಗೇ ಉಳಿದಿದೆ.
>
> **ಲೇಖಕರು:**
>
> **ಶ್ರೀ ಮ. ರಾಜೀವ.**

ವ್ಯಕ್ತಿಗಳೇ ವಿ. ಪಿ. ಮೆನನ್ ಮತ್ತು ಲೋರ್ಡ್ ಇಸ್ಮೆ.

1947ರ ಆಗಸ್ಟ್ 15ರಂದು ಭಾರತಕ್ಕೆ ಬ್ರಿಟಿಷರು ಅಧಿಕಾರವನ್ನು ಕೊಟ್ಟ ಕಥೆಯು ಬಹಳ ಹಿಂದೆಯೇ ಪ್ರಾರಂಭವಾಗಿತ್ತು. ಅದು ಕಥೆಯ ಕೊನೆಯೂಗಿತ್ತು. ಕ್ರಿ. ಶ. 1018ರಲ್ಲಿ ಮಹಮ್ಮದ್ ಘಜನಿಯು ಪಂಜಾಬನ್ನು ಆಕ್ರಮಿಸಿದಾಗ, 1192ರಲ್ಲಿ ಮಹಮ್ಮದ್ ಘೋರಿಯು ಪೃಥ್ವಿರಾಜನನ್ನು ಸೋಲಿಸಿದಾಗ ಮತ್ತು ಗಂಗಾಬಯಲನ್ನೂ ಬಂಗಾಳವನ್ನೂ ವಶಪಡಿಸಿದಾಗ—ಈ ಕಥೆಯು ಪ್ರಾರಂಭವಾಯಿತು. 1947ರಲ್ಲಿ ಕೊನೆಗೊಂಡ ಕಥೆಯು ಎಂಟು ಶತಮಾನಗಳ ಹಿಂದೆಯೇ ಪ್ರಾರಂಭವಾಗಿತ್ತು.

ಭಾರತವು ಸ್ವತಂತ್ರವಾಗಬೇಕು ಎಂಬುದನ್ನು ಬ್ರಿಟಿಷ್ ಮುಂದಾಳುಗಳು, ಮುತ್ಸದ್ದಿಗಳು ಒಪ್ಪಿಕೊಂಡಿದ್ದರು. ಯೂ 1909 ಇಸವಿಯು ಮಹತ್ವದ್ದು. ಮಿಂಟೊ-ಮೋರ್ಲೆ ಸುಧಾರಣೆಗಳು ಹಿಂದೂ—ಮುಸ್ಲಿಂ ಸಮಸ್ಯೆಯನ್ನು ತೀವ್ರಗೊಳಿಸಿದುವು. ಭಾರತೀಯ ಚರಿತ್ರೆಗೆ ಒಂದು ದೊಡ್ಡ ತಿರುವುಕೊಟ್ಟಂತಾಯಿತು. ಹಿಂದೂ-ಮುಸ್ಲಿಂ ಭೇದ ಭಾವನೆಗಳು ಬಿಗಿಯಾದುವು. "ಬ್ರಿಟಿಷರು ಹಿಂದೂ-ಮುಸ್ಲಿಂ ಪ್ರತಿಸ್ಪರ್ಧೆಯನ್ನು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಿರಬಹುದು. ಆದರೆ ಅವುಗಳನ್ನು ಬ್ರಿಟಿಷರು ಉಂಟು ಮಾಡಿಲ್ಲ....ಬ್ರಿಟಿಷರು ನೈಜವಾದಿಗಳು. ಅವರು ಭಾರತೀಯರ ಭಿನ್ನಾಭಿಪ್ರಾಯಗಳನ್ನು ತಮ್ಮ ಸ್ವಂತ-ಸ್ವಾರ್ಥಕ್ಕಾಗಿ ವಿನಿಯೋಗಿಸಿಕೊಂಡರು" ಎಂದು ಹೊಡ್ಸನ್ ಬ್ರಿಟಿಷ್ ನೀತಿಯನ್ನು ಅನುಮೋದಿಸುವರು. 1931ರ ಬಳಿಕ ಹಿಂದೂ ಮತ್ತು ಮುಸ್ಲಿಮರೊಳಗಿನ ಅಂತರವು ಇನ್ನಷ್ಟು ಅಗಲವಾಗಿ ಹೋಯಿತು. 1935ರ ಶಾಸನದನ್ವಯವಾಗಿ 1937ರಲ್ಲಿ ಪ್ರಾಂತಗಳಲ್ಲಿ ಸ್ವಾಯತ್ತತೆಯ ಸರಕಾರಗಳು ಬಂದುವು. ಮೂವತ್ತು ಮಿಲಿಯಕ್ಕೂ ಮಿಕ್ಕಿದ ಮತದಾರರಲ್ಲಿ ಶೇಕಡಾ 54ರಷ್ಟು ಮಂದಿ ಮತದಾನ ಮಾಡಿದ್ದರು. ಮುಸ್ಲಿಂಲೀಗ್ 485 ಮುಸ್ಲಿಂ ಸ್ಥಾನಗಳಲ್ಲಿ 108 ಸ್ಥಾನಗಳನ್ನು ಪಡೆದಿತ್ತು. ಹನ್ನೊಂದು ಪ್ರಾಂತಗಳಲ್ಲಿ ಕಾಂಗ್ರೆಸ್ ಪಕ್ಷವು 1585 ಸ್ಥಾನಗಳಲ್ಲಿ 711 ಸ್ಥಾನಗಳನ್ನು ಗೆದ್ದಿತ್ತು. ಕಾಂಗ್ರೆಸ್ ಪಕ್ಷವು ಏಳು ಪ್ರಾಂತಗಳಲ್ಲಿ ಅಧಿಕಾರಕ್ಕೆ ಬಂಡಿತು. ಕಾಂಗ್ರೆಸ್ ಪಕ್ಷವು ಮುಸ್ಲಿಂ ಸಂಖ್ಯೆಯು ಹೆಚ್ಚಾಗಿರುವ ಉತ್ತರ ಪ್ರದೇಶದಲ್ಲಿಯೂ ಮುಂಬಯಿಯಲ್ಲಿಯೂ ಮುಸ್ಲಿಂಲೀಗಿನೊಂದಿಗೆ ಸಂಯುಕ್ತ ಸರಕಾರ ರಚಿಸುವ ನಿರೀಕ್ಷಣೆಯಿತ್ತು. ಆದರೆ ಕಾಂಗ್ರೆಸ್ ಪಕ್ಷವು ಇದನ್ನು ನಿರಾಕರಿಸಿತು. ಇದು ಕಾಂಗ್ರೆಸಿನ ಮೇಲೆ ಮುಸ್ಲಿಮರಿಗಿದ್ದ ನಂಬಿಕೆಯನ್ನು ಶಿಥಿಲಗೊಳಿಸಿತು, ಪಾಕಿಸ್ಥಾನ ಚಳುವಳಿಗೆ ನಾಂದಿಯಾಯಿತು ಎಂದು ಹೊಡ್ಸನ್ ಅಭಿಪ್ರಾಯ ಪಡುತ್ತಾರೆ.

1937ರ ಅನಂತರ ಭಾರತೀಯ ಸ್ವಾತಂತ್ರ್ಯ ಹೋರಾಟದ ಕಥೆಯು ತೀರಾ ಕನಿಕರದ ಕಥೆಯಾಗಿದೆ. ಘಟನೆಗಳು ತೀವ್ರಗತಿಯಿಂದ ದುರಂತ ದಾರಿಯಲ್ಲಿ ದುಮುಕಿದುವು. ಕ್ರಿಪ್ಸ್ ಯೋಜನೆಯು ವಿಫಲವಾಯಿತು. ಗಾಂಧಿ-ಜಿನ್ನಾ ಮಾತುಗಳು ವಿಫಲವಾದುವು. ಭಾರತೀಯ ಮುಂದಾಳುಗಳು ರಾಜಕೀಯ ಬಿಕ್ಕಟ್ಟನ್ನು ಬಿಡಿಸಲಾರರು, ಬಗೆಹರಿಸಲು ಅಸಮರ್ಥರು ಎಂದು ಲೋರ್ಡ್ ವೇವಲರು 1944ರಲ್ಲಿ ತಾನಾಗಿಯೇ ಮುಂದಾಳುತನವಹಿಸಿ ಸೀಮ್ಲಾದಲ್ಲಿ ಮುಖಂಡರ ಸಮ್ಮೇಳನವನ್ನು ಕರೆದರು. ಆದೂ ವಿಫಲವಾಯಿತು. 1946ರಲ್ಲಿ ಕ್ಯಾಬಿನೆಟ್ ಮಿಶ್ಶನ್ ಭಾರತಕ್ಕೆ ಬಂದಿತು. ಕ್ಯಾಬಿನೆಟ್ ಮಿಶನಿನ ಯೋಜನೆಯು ಮೊದಲು ಯಶಸ್ವಿಯಾಗುವಂತೆ ತೋರಿತು. ಆದರೆ ತೊಡಕುಗಳು ತಲೆದೋರಿದುವು. ಇಲ್ಲಿ ಬ್ರಿಟಿಷ್ ಸರಕಾರವೂ ಕೂಡಾ ದ್ವಿಮುಖ ವ್ಯಕ್ತಿತ್ವದ್ದಾಗಿತ್ತೆಂದು ಹೊಡ್ಸನ್ ಬರೆದಿರುವರು.

ಇಲ್ಲಿಂದ ಇತಿಹಾಸದ ಇನ್ನೊಂದು ಅಧ್ಯಾಯವು ಆರಂಭವಾಯಿತು. ಭಾರತದ ಸ್ವಾತಂತ್ರ್ಯ ಹೋರಾಟದ ಅಂತಿಮ ಘಟ್ಟವು ಪ್ರಾರಂಭವಾಯಿತು. ಬ್ರಿಟಿಷ್ ಸಾಮ್ರಾಜ್ಯದ ಕೊನೆಯ ವೈಸರಾಯರಾದ ಲೋರ್ಡ್ ಮೌಂಟ್ ಬ್ಯಾಟನ್ ಈ ಅಂಕದ ಅತಿ ಮುಖ್ಯ ಪಾತ್ರದಾರರಾಗಿದ್ದರು. ಲೋರ್ಡ್ ಮೌಂಟ್‌ಬ್ಯಾಟನ್‌ರವರ ಯೋಜನೆಯು ದೇಶವಿಭಜನೆಯ ಯೋಜನೆಯಾಗಿತ್ತು. ಭಾರತದ ಎಲ್ಲಾ ರಾಜಕೀಯ ಮುಖಂಡರ ಒಪ್ಪಿಗೆಯಿಂದ ಆದನ್ನು ಮೌಂಟ್ ಬ್ಯಾಟನ್ ಕಾರ್ಯರೂಪಕ್ಕೆ ತಂದರು. ಅದು ಈ ಎಲ್ಲಾ

ನಲ್ವತ್ತೇಳನೇ ಇಸವಿಯನ್ನು ನಾವಿಂದು ನೆನಸಿದಾಗ

ಬ್ರಿಟಿಷ್ ವೈಸರಾಯರಾದ ಲೋರ್ಡ್ ಮೌಂಟ್‌ಬ್ಯಾಟನ್‌ರವರನ್ನು ಹಲವು ಭಾರಿ ಭೇಟಿಯಾಗಿದ್ದರು ಭಾರತ ಸರ್ಕಾರ ಹಾಗೂ ಪಾಕಿಸ್ಥಾನ ಸರ್ಕಾರಗಳಿಗೆ ಬ್ರಿಟಿಷ್ ಅಧಿಕಾರ ವರ್ಗಾಯಿಸಲು ಮಾಡಿದ ಮುಖ್ಯ ನಿರ್ಣಯಗಳಿಗೆ ಸಂಬಂಧಿಸಿದ "ಮೌಂಟ್‌ಬ್ಯಾಟನ್ ಪತ್ರ"ಗಳನ್ನೆಲ್ಲಾ ಅವರು ಪರಿಶೀಲಿಸಿರುವರು. ಈ ನಿಟ್ಟಿನಿಂದ ನೋಡುವುದಾದರೆ ಹೊಡ್ಸನ್‌ರವರ ಕೃತಿ "ದಿ ಗ್ರೇಟ್ ಡಿವ್ಯಾಡ್" ಭಾರತೀಯ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಒಂದು ಆಧಾರ ಗ್ರಂಥವಾಗಿದೆ.

1947ರಲ್ಲಿ ಬ್ರಿಟಿಷ್ ಸಾಮ್ರಾಜ್ಯದಿಂದ ಭಾರತವು ಬೇರ್ಪಟ್ಟದ್ದು ಚರಿತ್ರೆಯ ಒಂದು ಮಹತ್ವದ ತಿರುವು-ಮುರುವು ಆಗಿದೆ. ವಿಭಜನೆ ಹಾಗೂ ಸ್ವಾತಂತ್ರ್ಯ ಒಟ್ಟೊಟ್ಟಿಗೆ ಬಂದುವು. ಅದು ಒಂದು ಇನ್ನೊಂದಕ್ಕೆ ಕೊಟ್ಟ ಬೆಲೆಯಾಗಿತ್ತು. ವಿಭಜನೆಯಿಲ್ಲದೆ ಸ್ವಾತಂತ್ರ್ಯ ಬರುವುದು ಅನಿವಾರ್ಯವಾಯಿತು. ಅದು ಸ್ವಾತಂತ್ರ್ಯ ಪಡೆಯಲು ಕೊಡುವ ಅನಿವಾರ್ಯ ಬೆಲೆಯಾಯಿತು. ಆಂದಿನ ಪರಿಸ್ಥಿತಿಯಲ್ಲಿ ಸ್ವಾತಂತ್ರ್ಯ ಗಳಿಸಲು ಅನ್ಯ ದಾರಿಯಿಲ್ಲದೆ ಹೋಯಿತು. ಹೊಡ್ಸನ್‌ರವರ ಅಭಿಪ್ರಾಯದಲ್ಲಿ ಈ ಪರಿಹಾರವನ್ನು ಸೂಚಿಸಿದ ಕೀರ್ತಿ ಇಬ್ಬರು ಮಹನೀಯರಿಗೆ ಸೇರಿದುದಾಗಿದೆ. ಈ ಇಬ್ಬರು ಯಾರಾಗ? ಹೇಗೆ? ಎಂಬುದೇ ಪ್ರಶ್ನೆಗಳಾಗಿ ಬಗೆಹರಿಯದೆ ಉಳಿದಿದ್ದುವು. ಈ ಪ್ರಶ್ನೆಯು ಮೂಲಭೂತವಾಗಿ ಬಗೆಹರಿಯದೆ ಉಳಿಯಲು ಮುಖ್ಯ ಕಾರಣ ಮುಸ್ಲಿಮರ ಸಮಸ್ಯೆಯೂಗಿತ್ತು. ಈ ಪ್ರಶ್ನೆಯನ್ನು ಬಗೆಹರಿಸುವುದರ ಬಗ್ಗೆ ಬ್ರಿಟಿನಿನ ಮುಂದಾಳುಗಳೂ ಭಾರತೀಯ ಮುಖಂಡರೂ ಸುದೀರ್ಘಕಾಲ ಪರಿಹಾರಕ್ಕಾಗಿ ನಿಷ್ಫೆಯಿಂದ ಪ್ರಯತ್ನಿಸಿದರು. ಇತರ ಅಲ್ಪ ಸಂಖ್ಯಾತರ ಪ್ರಶ್ನೆಯೂ ಈ ಪ್ರಶ್ನೆಯೊಂದಿಗೆ ಸೇರಿತ್ತು. ಆದರೆ ಮುಸ್ಲಿಮರು ಇದರಲ್ಲಿ ಮುಖ್ಯ ಪಾತ್ರ ವಹಿಸಿದ್ದರು. ಮುಸ್ಲಿಮರ ಮನಸ್ಸಿನಲ್ಲಿ ತಾವು ಜಗತ್ತಿನ ದೊಡ್ಡ ಧರ್ಮಕ್ಕೆ ಸೇರಿದವರೆಂಬ ಭಾವನೆ ಬಲವಾಗಿ ಬೇರೂರಿತ್ತು. ಮುಸ್ಲಿಂ ಕೋಮಿನ ಸಂಖ್ಯಾ ಬಲ ಮತ್ತು ಅದು ಭಾರತದ ವಾಯುವ್ಯ ಪ್ರಾಗೂ ಈಶಾನ್ಯ ಭಾಗಗಳಲ್ಲಿ ಬಹುಮತ ಪಡೆದಿದ್ದುದು ಈ ಸಮಸ್ಯೆಗೆ ಬೆಂಬಲ ನೀಡಿದ್ದುವು. ಆದರೊಂದಿಗೆ ಭಾರತದ ಬಹುಭಾಗಗಳನ್ನು ಹಿಂದೆ ಆಳುತ್ತಿದ್ದೆವು ಎಂಬ ಚಾರಿತ್ರಿಕ ಸ್ಮರಣೆಯೂ ಮುಸ್ಲಿಂ ಮನಸ್ಸಿನಲ್ಲಿ ಮನೆ ಮಾಡಿತ್ತು. ಇವೆಲ್ಲವೂ ಭಾರತೀಯ ರಾಜ್ಯಾಂಗ ಸಮಸ್ಯೆಯಲ್ಲಿ ಮುಸ್ಲಿಂ ಸಮಸ್ಯೆಗೆ ಮಹತ್ವ ಕೊಡಲು ಕಾರಣವಾಯಿತು.

ಭಾರತದ ರಾಜ್ಯಾಂಗ ಚರಿತ್ರೆಯಲ್ಲಿ ಮುಂದಾಳುಗಳ ಅಭಿಪ್ರಾಯಗಳ ಅಂತಿಮ ನಿರ್ಣಯಕ್ಕೆ ವಿರುದ್ಧವಾಗಿದ್ದಿಲ್ಲ ಎಂದು ಹೊಡ್ಸನ್ ಬರೆಯುವರು. ಬೇರೆ ದಾರಿಗಳು ಇಲ್ಲದಿರುವಾಗ, ಭಾರತದ ಪ್ರಧಾನ ಪಕ್ಷಗಳೊಳಗೆ ಒಮ್ಮತವಿಲ್ಲದಿರುವಾಗ ತೃತೀಯ ಪಕ್ಷವಾದ ಬ್ರಿಟಿಷರದೇ ಅಂತಿಮ ನಿರ್ಣಯ ಅನಿವಾರ್ಯವಾಗಿತ್ತು. 'ವಿಭಜನೆಯ ಕೆಡುಕುಗಳ' ಬಗ್ಗೆ ಬ್ರಿಟಿಷ್ ಸರಕಾರಕ್ಕೆ ಮೌಂಟ್‌ಬ್ಯಾಟನರು ಬರೆದಿದ್ದರು. ದೇಶ ವಿಭಜನೆಯಲ್ಲದೆ ಸಮಸ್ಯೆಯ ಪರಿಹಾರವೇ ಇಲ್ಲವೆಂದು ಜಿನ್ನಾರವರು ಸಮರ್ಥಿಸಿದಾಗ ಪಂಜಾಬ್ ಮತ್ತು ಬಂಗಾಳಗಳ ವಿಭಜನೆಗಳನ್ನು ಮೌಂಟ್‌ಬ್ಯಾಟನ್ ರವರು ಕೇಳಿಕೊಂಡರು. 'ನಾನು ಆ ಹಳ್ಳಿಬನನ್ನು (ಜಿನ್ನಾರವರನ್ನು) ತೀರಾ ಹುಚ್ಚುಗೊಳಿಸಿದೆ' ಎಂದು ಮೌಂಟ್‌ಬ್ಯಾಟನ್ ಬರೆದಿರುವರು. ಒಂದು ವಿಭಜನೆ ಇನ್ನೊಂದು ವಿಭಜನೆಗೆ ನಾಂದಿಯಾಯಿತು. ಗಂಭೀರ ಪರಿಸ್ಥಿತಿಯು ಈ ಯೋಜನೆಯೇ ಸಾಧುವೆಂದು ತೋರಿಸಿತು. ನೆಹರೂ ಪಟೇಲರೂ ಇದುವೇ ಪರಿಹಾರವೆಂಬ ನಿರ್ಣಯಕ್ಕೆ ಬಂದಿದ್ದರು. ಇದಲ್ಲದಿದ್ದರೆ ಭಾರತವೂ ಕಾಂಗೋ ಲಾವೋಸ್, ವಿಯೆಟ್‌ನಾಂ ಮತ್ತು ಸೈಪ್ರಸ್ ದೇಶಗಳ ದಾರಿಯನ್ನು—ದೀರ್ಘ ಕಾಲದ ಅಂತಃಕಲಹ-ತುಳಿಯ ಬೇಕಾಗಿ ಬರುತ್ತಿತ್ತೆಂದು ಹೊಡ್ಸನ್ ಅಭಿಪ್ರಾಯಪಡುವರು.

(ಮುಂದಿನ ಪುಟ ನೋಡಿರಿ)

ಇಂದಿರಾ ಗಾಂಧಿ ಪ್ರಧಾನಿಯೊಗಿರುವದು ಯಿನ್ನು ಬೆತ್ತೆಸದು ಏನು ಕೆಲಸವನ್ನು ಸ್ಪಿನ ಮಂಡಿಗೆ—ಅದಕ್ಕೆನಾ ಅವರನ್ನು [illegible]

ಇಂದಿನ ಯುವಕರೇಕೆ ಹದಗೆಡುತ್ತಿದ್ದಾರೆ!

ಲೇಖಕರು:
ಪ್ರಿನ್ಸಿಪಾಲ್
ಕೆ. ರಾಮಕೃಷ್ಣ ಉಡುಪ,
ಕೋಲಾರ.

ಇಂದಿನ ಬೆಳಗಾಮೊಡನೆ ನಮ್ಮ ದೇಶದ ಹದಗೆಡುತ್ತಿರುವ ಯುವಕರ ವಾರ್ತೆ ಕೇಳಿ ಬರುತ್ತಿದೆ. ಒಂದೆಡೆ ಪರೀಕ್ಷಾ ಕಾಲದಲ್ಲಿ ನಿರೀಕ್ಷಕರ ಮೇಲೆ ಹಲ್ಲೆ ಮಾಡಿದ ವಾರ್ತೆ; ಮತ್ತೊಂದೆಡೆ ಕೆಂಪು ಬಾವುಟ ಏರಿಸಲೊಪ್ಪದ ಮುಖ್ಯೋಪಾಧ್ಯಾಯರನ್ನೇ ಹೊಡೆದ ಸುದ್ದಿ; ಇನ್ನೊಂದೆಡೆ ವಿಶ್ವವಿದ್ಯಾಲಯದ ಉಪಕುಲಪತಿಗಳಿಗೇ ಮುತ್ತಿಗೆ ಹಾಕಿದ ಸಮಾಚಾರ; ಎಲ್ಲಕ್ಕೂ ಮಿಕ್ಕಿನ ನಮ್ಮ ರಾಜಧಾನಿಯ ಪ್ರಮುಖ ಕಾಲೇಜಿನ ಹಿರಿಯ ಪ್ರಿನ್ಸಿಪಾಲರನ್ನೇ ವಿದ್ಯಾರ್ಥಿಯೊಬ್ಬ ಹೊಡೆಮ ಕೊಂಡ ಕರಾಳ ಸುದ್ದಿ! ಇವೆಲ್ಲ ಎಲ್ಲರ ಎದೆಯನ್ನೂ ನಡುಗಿಸ ತೊಡಗಿದೆ. ಇವೇಕೆ ಹೀಗಾಗುತ್ತಿದೆ? ಇದ ಕ್ಕೇನು ಪರಿಹಾರೌಷಧಿ? ಇನ್ನಾದರೂ ಯೋಚಿಸಿ ನೋಡಬೇಡವೇ?

ನಮ್ಮ ಪರಂಪರೆ:–

ವಿದೇಶಗಳ ಕಥೆ ಏನೇ ಇದ್ದರೂ 'ಗುರು ಬ್ರಹ್ಮಾ, ಗುರು ವಿಷ್ಣು, ಗುರುರೇವ ಮಹೇಶ್ವರ'–ಎಂದು ಮೊದಲಾಗಿ ಗುರುಗಳಲ್ಲಿ ತ್ರಿಮೂರ್ತಿಗಳನ್ನು ಕಾಣುವ ಪರಂಪರೆ ನಮ್ಮದು. 'ಆಚಾರ್ಯ ದೇವೋಭವ'–ಎಂದು ಅನಾದಿಕಾಲದಿಂದಲೂ ಆಚಾರ್ಯರನ್ನು ದೇವರನ್ನಾಗಿ ಭಾವಿಸುತ್ತಿದ್ದ ಸಂಸ್ಕೃತಿ ನಮ್ಮದು. ಗುರು ದ್ರೋಣಾಚಾರ್ಯರ ಪ್ರತಿಮೆಯ ಮುಂದೆಯೇ ವಿದ್ಯಾಭ್ಯಾಸ ನಡೆಸಿ, ಕೊನೆಗಾ ಗುರು ಕೇಳಿದಾಗ ಹೆಬ್ಬೆರಳನ್ನೇ ಗುರುದ ಕ್ಷಿಣೆಯಾಗಿ ಕತ್ತರಿಸಿ ಕೊಟ್ಟ ಏಕಲವ್ಯ ಈಗಲೂ ನಮ್ಮ ವಿದ್ಯಾರ್ಥಿಗಳಿಗೆ ಆದರ್ಶನಾಗಿದ್ದಾನೆ. ಪುರಾಣ ಕಾಲ ಮುಗಿದು ಇತಿಹಾಸ ಕಾಲಕ್ಕೆ ಬಂದರೂ ಶಿಷ್ಯ ಗುರು ವಿಗೆ ಇವಿರುನಿಂತ ಸಂದರ್ಭವೂ ಸಿಗಲಾರದು ನಂತರದ ಬ್ರಿಟಿಷರ ಆಡಳಿತ ಕಾಲದಲ್ಲೂ ಶಾಲಾ ಕಾಲೇಜುಗಳಲ್ಲಿ ಶಿಸ್ತು ಸಂಯಮಗಳಿಗೆ ಪ್ರಧಾನ ಸ್ಥಾನವಿತ್ತು. ಆದರಿಂದ ಸಾಮೂಹಿಕವಾಗಿಯೂಗಲಿ, ವೈಯಕ್ತಿಕವಾಗಿಯೂಗಲಿ ಗುರು ಶಿಷ್ಯರೊಳಗೆ ಜಗಳವಾದ ಸಂದರ್ಭವಿಲ್ಲವೆಂದೇ ಹೇಳಬೇಕು.

ಹಾಗಾದರೆ, ಇದು ಇತ್ತೀಚಿನ ದೋಷ; ಹೊಸದಾಗಿ ಆಮದಾದ ಕಾಯಿಲೆಯೆಂದಾಯಿತು. ಹಾಗಿದ್ದರೆ ಹೊಸದೋಷಕ್ಕೆ ಹಳೆಯ ಪಥ್ಯ, ಹೊಸ ಔಷಧ ನಡೆಸುವುದೇ ಸೂಕ್ತವಾದುದೆಂದು ಹೇಳಬೇಕಾಗುತ್ತದೆ.

ದೇಶಕ್ಕೆ ಸ್ವಾತಂತ್ರ್ಯ ಬರ ಬೇಕಾಗಿದ್ದ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನೂ ರಾಜಕೀಯಕ್ಕೆಳೆದು ಶಾಲಾ ಕಾಲೇಜುಗಳಿಂದ ಹೊರಬರ ಹೇಳಿದ್ದೇ ಈ ತರದ ಅಶಿಸ್ತಿಗೆ ನಾಂದಿಯೂಯಿತು. ಅಂದಿಗದು ಮಹಾ ಸಂಗ್ರಾಮ ಸಂದರ್ಭದಲ್ಲಿ ಸರಿಯೆಂದಾದರೂ ಗಾಂಧೀ ಶಿಷ್ಯರೆನಿಸಿಕೊಂಡವರು ಅದನ್ನು ಬೆಳೆಸಿಕೊಂಡು ಸಾಮಾನ್ಯ ಕಾರಣಗಳಿಗೂ ಬಳಸತೊಡಗಿದರು. ಸಾಲದುದಕ್ಕೆ ಶಾಲಾ ಕಾಲೇಜುಗಳ ಸಂಖ್ಯೆ ಅಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಸ್ವಾತಂತ್ರ್ಯೋತ್ತರದ ಎರಡು ದಶಕಗಳಲ್ಲಿ ಒಂದಕ್ಕೆ ಹತ್ತರಷ್ಟು ಬೆಳೆದು ಬಂತು. ಹಳ್ಳಿ ಹಳ್ಳಿಗಳಲ್ಲೂ ಹೈಸ್ಕೂಲು ಕಾಲೇಜುಗಳು ಬಂದು ವಿದ್ಯಾರ್ಥಿ ಸಂಖ್ಯೆ ಅಂಕೆ ಮೀರಿ ಬೆಳೆದು ಬರತೊಡಗಿತು. ಆದರೆ ಅದಕ್ಕನುಗುಣವಾದ ಸೇವಾದೃಷ್ಟಿಯ ಅಧ್ಯಾಪಕರು ಕಟ್ಟಡ, ಸರಂಜಾಮು,—ಇವೆಲ್ಲ ಸರಿಯಾದ ರೀತಿಯಲ್ಲಿ ಬೆಳೆದು ಬಾರದ್ದರಿಂದ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸುವುದು ಸಾಧ್ಯವಾಗದೆ ಹೋಗಿದೆ. ಎಷ್ಟೋ ಶಾಲಾ ಕಾಲೇಜುಗಳು ಕೇವಲ ವಿದ್ಯೆಯ ಮಾರಾಟದಂಗಡಿ [Teaching Shops]ಗಳಾಗಿ ಅಧ್ಯಾಪಕರೆಂದರೆ ಸಾಮಾನ್ಯ ಅಂಗಡಿಯಾಳಾಗಿ [Salesman] ದಿನ ದೂಡುವಂತಾಗಿದೆ. ಪರಿಣಾಮ–ಕಣ್ಣ ಮುಂದೆ ದೈತ್ಯಾಕಾರದ ಸಮಸ್ಯೆ ನಿಂತಿದೆ. ಭಸ್ಮಾಸುರನು ವರಕೊಟ್ಟ ಪರಶಿವನನ್ನೇ ಸುಡಲು ಹೊರಟಂತೆ ಶಿಷ್ಯ ಗುರುವನ್ನು ಕೊಂದು ಹಾಕಲು ಹಿಂಜರಿಯುವುದಿಲ್ಲವೆಂದಾಗಿದೆ. 'ಸಾಕ್ಷರಾ ವಿಪರೀತಾಶ್ಚೇತ್ ರಾಕ್ಷಸಾ ಏವ ಕೇವಲಂ'—ಎಂಬಂತೆ 'ಸಾಕ್ಷರ'ರು ತಿರುಗಿ ಬಿದ್ದರೆ 'ರಾಕ್ಷಸ'ರಾಗುತ್ತಾರೆಂಬುದು ಅರ್ಥದಲ್ಲಿಯೂ ಶಬ್ದದಲ್ಲಿಯೂ (ಸಾಕ್ಷರಾ> <ರಾಕ್ಷಸಾ) ಸರಿಯೆಂದಾಗಿದೆ.

ರಾಜಕೀಯ ಕಾರಣ:–

ಈಗಲೂ ರಾಜಕೀಯ ಕಾರಣವೂ ಪ್ರಧಾನವಾಗಿದೆ. ಸಮಾಜವಾದ, ಸಮತಾವಾದಗಳ ಹೆಸರಲ್ಲಿ–ಎಲ್ಲರಿಗೂ ಎಲ್ಲದರಲ್ಲಿಯೂ ಸಮಾನಾಧಿಕಾರ– ಎಂಬೀ ವಾದವನ್ನು ಹೆಜ್ಜೆ ಹೆಜ್ಜೆಗೂ ನಾವು ಕೂಗಾಡುತ್ತಿದ್ದೇವೆ. ಕಾರಖಾನೆಯ ಮೂಲಿಕನಿಗೂ ಕೂಲಿಗೂ ವ್ಯತ್ಯಾಸವಿರಬಾರದೆಂದು ಕೂಲಿಗಾರರನ್ನೆಲ್ಲ ಎತ್ತಿ ಕಟ್ಟಿದ್ದರಿಂದ ಎಷ್ಟೋ ಕಾರಖಾನೆಗಳೇ ಮುಚ್ಚಿ ಹೋಗಿವೆ. ಉಳುವವನೇ ಹೊಲದೊಡೆಯನಾದ್ದರಿಂದ, ಹಿಂದಿನ ಹೊಲದ ಮೂಲಿಕನನ್ನು ಹೊಡೆದು ಕೊಂದರೂ ರಾಜಕೀಯವಾಗಿ ಅದು ತಪ್ಪೆಂದು ಇತ್ತೀಚೆ ಹೇಳಲ್ಪಡುತ್ತಿಲ್ಲ. ಹಾಗಾಗಿ ಮೂಲಿಕನ ಮೂತನ್ನು ಕೂಲಿ ಕೇಳಬೇಕಾಗಿಲ್ಲ. ಮುಖಂಡನ ಮೂತನ್ನು ಆನುಯಾಯಿ ಕೇಳಬೇಕಾಗಿಲ್ಲ. ರಾಜಕೀಯ ಪಕ್ಷದ ಧುರೀಣನನ್ನು ಹೊರಹಾಕಿ ನಿರ್ನಾಮಗೊಳಿಸಿದರೂ ಅದು ಅಶಿಸ್ತಲ್ಲ. ಎಲ್ಲ ಬಿಟ್ಟು ನಮ್ಮ ಇಡೀ ದೇಶದ ಆಗು ಹೋಗುಗಳನ್ನೇ ನಿರ್ಣಯಿಸಲಿರುವ ವಿಧಾನಸಭೆ, ಲೋಕ ಸಭೆಗಳಲ್ಲೇ ಯಾವುದೇ ತರದ ಶಿಸ್ತಿಗೂ ಎಡೆಯಿಲ್ಲ; ಬೆಲೆಯಿಲ್ಲ ಎಂದಾದಾಗ ಅದರ ಪರಿಣಾಮ ಎಲ್ಲೆಲ್ಲೂ ಹಬ್ಬುವುದು ಸ್ವಾಭಾವಿಕ ತಾನೆ? ದಿಲ್ಲಿಯ ಗಾಳಿ ಹಳ್ಳಿ ಹಳ್ಳಿಗೂ ಹಬ್ಬಿ, ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ ಬಂದರೇನಾಶ್ಚರ್ಯ?

ಅಷ್ಟೇ ಅಲ್ಲದೆ, ಶಿಸ್ತು ಮುರಿದು, ಕಾನೂನು ವಿರೋಧಿಸಿದವರು ವೀರಾಧಿವೀರರೆಂದಾಗಿ ದೊಡ್ಡ ದೊಡ್ಡ ಸ್ಥಾನ ಮಾನಗಳಿಸುತ್ತಿರುವುದನ್ನು ಕಿರಿಯರು ಕಾಣುತ್ತಾರೆ. ಇಂದಿನ ಯುವಕರೇ ನಾಳೆ ದೇಶದ ಜವಾಬ್ದಾರಿ ವಹಿಸುವವರು. ಜವಾಬ್ದಾರಿ ಹೊತ್ತ ಮುಂದಾಳುಗಳೇ ಶಿಸ್ತು, ಪರಿಪಾಲಿಸಬಾರದೆಂದಿರುವಾಗ ಅದಕ್ಕನುಗುಣವಾಗಿಯೇ ಯುವಕನೂ ತನ್ನನ್ನು ತಯಾರು ಮಾಡಿಕೊಳ್ಳುತ್ತಿರುವುದು ಸ್ವಾಭಾವಿಕ ತಾನೇ? ಶಿಸ್ತು ವಿಧೇಯತೆಗಳು ಬೇಡವಾದ ಅನರ್ಹತಾ ಪತ್ರಗಳೆಂದು [Discipline is a disqualification] ಅತ ತಿಳಿದು ಕೊಂಡರೆ ಅದೆಂತು ತಪ್ಪಾಗಬಹುದು?

ಇಂತಹ ಕಲುಷಿತ ವಾತಾವರಣದಲ್ಲಿ ಗುರುಗಳೂ ಹೆತ್ತವರೂ ಎಚ್ಚರಗೊಂಡು ಕಿರಿಯರಾದರೂ ಶಿಸ್ತುಗೇಡಿಗಳಾಗದಂತೆ ನೋಡಿಕೊಳ್ಳಬೇಕು. ದೇಶಸೇವೆಯ ನೆಪದಲ್ಲಿ ನೀತಿಗೆಟ್ಟ ಮುಂದಾಳುಗಳಿಗೆ ಸಾಮೂಹಿಕ ಬಹಿಷ್ಕಾರ ಹಾಕಿ, ಅವರೆಜ್ಜೋಹಣವಂತರಿದ್ದರೂ, ಒತ್ತಾಯದ ನಿವೃತ್ತಿಯನ್ನು ಮಾಡಿಸಬೇಕು. ಹೀಗೆ ಕೆಲಮಟ್ಟಿಗಾದರೂ ನೀತಿ, ಧರ್ಮ, ಶಿಸ್ತುಗಳಿಗೆ ಸನ್ಮಾನದಲ್ಲಿ ಬೆಲೆ ಬರುವಂತಾದರೆ ಕಿರಿಯರೂ ಸರಿದಾರಿಗೆ ಬರುವಂತಾಗಬಹುದು.

ಇದೀಗ ಸಮಾಜದ ಕಥೆಯೊದರೆ, ಗುರುಗಳ ಕಥೆಯೂ ಸಾಮಾನ್ಯ ಇದೇ ತರದಲ್ಲಿದೆ. ಶಿಕ್ಷಣದ ಪ್ರಗತಿಯಲ್ಲಿ ಗುರು, ಶಿಷ್ಯ, ಮತ್ತು ಹೆತ್ತವರೆಂದು ತ್ರಿಮೂರ್ತಿಗಳ ಪಾತ್ರ ಸೇರಿಕೊಂಡಿದೆ. ಯಾವ ಕೆಲಸಕ್ಕೂ ಬಾರದವ ಇಂದು ಮೇಸ್ಟರಾಗುತ್ತಾನೆ. ಆದರಲ್ಲೂ, ಹಿಂದುಳಿದವರು, ಮುಂದೆ ಹೋಗಬಾರದವರು, ಅತ್ಯಂತ ಹಿಂದುಳಿದ ಪರಿಶಿಷ್ಟ ವರ್ಗದವರು—ಎಲ್ಲರೂ ಮೇಸ್ಟರಾಗಲೇ ಬೇಕು. ಸಮತಾವಾದ ಆಗ ತಾನೇ ಸಂಪೂರ್ಣವಾಗುವುದು! ಹಾಗಾಗಿ ಶಿಕ್ಷಣಕಾರ್ಯದಲ್ಲಿ ಅಭಿರುಚಿ ಇಲ್ಲದ, ಹಣಕ್ಕಾಗಿಯೇ ಕೆಲಸಕ್ಕೆ ಸೇರುವ ಗುರುಗಳು ಶಿಷ್ಯರನ್ನೆಂತು ಸರಿಯಾಗಿ ತರ ಬೇತು ಗೈದಾರು? ಗುರುಗಳಿಗೇ ತರಬೇತು ಬೇಕಾಗಿರುವಾಗ, ಶಿಕ್ಷಣದಲ್ಲಿ ಅಭಿರುಚಿ ಮೂಡ ಬೇಕೆಂದಿರುವಾಗ, ಶಿಷ್ಯರ ಅಭಿರುಚಿಯನ್ನು ಅವರೆಂತು ಹೆಚ್ಚಿಸಿಯಾರು?

ಸಾಲದುದಕ್ಕೆ, ಇತ್ತೀಚೆ ಹೊಸ ರಾಜ್ಯಕೀಯ ಧಾಳಿಯು ಶಿಕ್ಷಣ ಕ್ಷೇತ್ರದೊಳಗೂ ನಡೆದು, ಅಧ್ಯಾಪಕರುಗಳಲ್ಲಿಯೂ ಸಮತಾವಾದೀ, ಸಾಮ್ರಾಜ್ಯವಾದೀ ಸಂಗಡಗಳು ಮೂಡಿಬಂದಿದ್ದು ಆವ್ಯಾಹತ ಪ್ರಭಾವ ಹಾನಿಯನ್ನು ತರುತ್ತಿವೆ. ಕೆಲವು ಶಿಕ್ಷಕರು ಆಳುವ ಪಂಗಡದವರೆಂದಾದರೆ, ಅವರು ಎಲ್ಲ ಕಟ್ಟುಪಾಡುಗಳಿಗೂ ಮೀರಿನಿಂತ ಮಹಾಪುರುಷವರ್ಗಕ್ಕೆ ಸೇರಿದವರಾಗುತ್ತಾರೆ.ಹಾಗಾದಾಗ ಶಿಕ್ಷಣದ ಉದಾತ್ತ ಧ್ಯೇಯಗಳನ್ನು ದೇವರೇ ಕಾಪಾಡಬೇಕು.

ಇದಕ್ಕೆ ಪರಿಹಾರ ರೂಪವಾಗಿ ಸೇವಾದೃಷ್ಟಿಯುಳ್ಳ, ಶಿಕ್ಷಣ ಕ್ಷೇತ್ರದಲ್ಲಿ ಅಭಿರುಚಿಯುಳ್ಳ, ಅಧ್ಯಾಪಕರನ್ನಾಗಿಸುವಲ್ಲಿ ಮುಖ್ಯವಾಗಿ, ಸಮಾಜ, ಸರಕಾರಗಳು ಸಹಕರಿಸಬೇಕು. "ವೈದ್ಯ ಕೆಟ್ಟರೆ ರೋಗಿ ಸಾಯುತ್ತಾನೆ; ಉಪಾಧ್ಯಾಯ ಕೆಟ್ಟರೆ ಸಮಾಜವೇ ಸಾಯುತ್ತದೆ."—ಎಂಬ ಜಾಣನುಡಿಯನ್ನು ಎಲ್ಲರೂ ತಿಳಿದಿರಬೇಕು. ಅದಕ್ಕನುಗುಣವಾಗಿ ವರ್ತಿಸಬೇಕು.

ಹೆತ್ತವರ ಪಾತ್ರ:–

ಹೆಚ್ಚಿನ ಹೆತ್ತವರು ತಮ್ಮ ನುಳ್ಳಿನ್ನು ಶಾಲಾ ಕಾಲೇಜುಗಳಿಗೆ ಕಳಿಸಿ 'ಫೀಸು' ಕೊಟ್ಟು ಬಿಟ್ಟರೆ ತಮ್ಮ ಕೆಲಸವಾಯಿತೆಂದು ಭಾವಿಸುತ್ತಾರೆ. ಶಾಲೆಗೆ ವಿದ್ಯಾರ್ಥಿ ಹೋದರೂ ಆತ ಗುರುಗಳೊಡನಿರುವುದು ದಿನಕ್ಕೆ ನಾಲ್ಕೈದು ಘಂಟೆ ಮಾತ್ರ; ಆದೂ ವರ್ಷದಲ್ಲಿ ಹೆಚ್ಚೆಂದರೆ ೨೦೦ ದಿನಗಳ ಮಟ್ಟಿಗೆ. ಉಳಿದ ಸಮಯದಲ್ಲಾತ ಹೆತ್ತವರ ಅಂಕೆಯಲ್ಲೇ ಇರಬೇಕಾಗುತ್ತದೆ. ಹಾಗಾಗಿ ಆತನ ನೈತಿಕ, ಧಾರ್ಮಿಕ, ಶೈಕ್ಷಣಿಕ ಪ್ರಗತಿ ಸಾಧನೆಯಲ್ಲಿ ಮನೆಯವರೂ ಸಹಕರಿಸಬೇಕಾಗುತ್ತದೆ. ಮೇಲ್ವಿಚಾರಣೆ ಮಾಡುತ್ತಿರ ಬೇಕಾಗುತ್ತದೆ. ಅಷ್ಟೇ ಅಲ್ಲದೆ, ಕಿರಿಯರು–ಹಿರಿಯರು ಹೇಳಿದ್ದನ್ನು ಮಾಡುವುದಕ್ಕಿಂತ ಹೆಚ್ಚಾಗಿ, ಅವರು ಮಾಡಿದ್ದನ್ನು ಅನುಕರಿಸುತ್ತಾರೆ. ಹಾಗಾಗಿ ಕಿರಿಯರ ಏಳಿಗೆಗೋಸ್ಕರವಾದರೂ ಹಿರಿಯರು ತಮ್ಮ ಜೀವನವನ್ನು ಪರಿಶುದ್ಧವಾಗಿಟ್ಟುಕೊಳ್ಳಬೇಕು. ಮನೆಯ ವಾತಾವರಣದಲ್ಲಿ ಮೋಸ, ಸುಳ್ಳು, ಕಳ್ಳತನಗಳು ತಾಂಡವವಾಡುತ್ತಿದ್ದರೆ ಹುಡುಗನನ್ನು ಎಂತ ಪಾಠ ಶಾಲೆಗೆ ಕಳಿಸಿದರೂ ನೈತಿಕವಾಗಿ ಆತ ಮುಂದು ಬರುವುದು ಕಷ್ಟ.

ಇತ್ತೀಚೆ, ಜಾತ್ಯತೀತ ಸಮಾಜವೆಂಬ ಸೋಗಿನಲ್ಲಿ ನಾವು ಸಿಕ್ಕಿಬಿದ್ದು ಧಾರ್ಮಿಕ ನೈತಿಕ ಶಿಕ್ಷಣಗಳಿಗೆ, ಪಾಠಕ್ರಮದಲ್ಲಿ ತಿಲಾಂಜಲಿಯನ್ನಿತ್ತಿದ್ದೇವೆ. ವಿಜ್ಞಾನ ಶಿಕ್ಷಣದ ನೆಪದಲ್ಲಿ ಕೇವಲ ಸ್ವಾರ್ಥಪರ ಸುಖ ಸಾಧನೆಯ ಮಹತ್ವವನ್ನೇ ದೊಡ್ಡದಾಗಿಸುತ್ತಿದ್ದೇವೆ. ಭಾರತೀಯ ಸಂಸ್ಕೃತಿಯ ಮಹತ್ವ, ಪಾರಮಾರ್ಥಿಕ ತತ್ವಶಿಕ್ಷಣ, ಇಹಲೋಕ ಸುಖಕ್ಕೂ ಮಿಗಿಲಾದ ಆಧ್ಯಾತ್ಮಿಕ ಸುಖದ ಅರಿವು—ಇವನ್ನೆಲ್ಲ ಗಾಳಿಗೆ ತೂರಿಬಿಟ್ಟು, ಹುಚ್ಚು ಸುಖದ ಆಸೆಗೆ ತುದಿ ಮೊದಲೇ ಇಲ್ಲದಂತೆ ನಾವು ಕಿರಿಯರನ್ನು ಎತ್ತಿಕಟ್ಟುತ್ತಿದ್ದೇವೆ ಅಂತಹ ಹುಚ್ಚು ಸುಖ ಮೊರಕದಾಗ ಅವರಲ್ಲಿ ನಿರಾಶೆ

(ಮೂಲಪತ್ರಿಕೆಯ ಪುಟ ನೋಡಿರಿ)

ಅಶಾಂತ ವಿದ್ಯಾರ್ಥಿ ಸಮುದಾಯದ ವಿಸ್ತಾರವಾಗುತ್ತ ಹೋದಂತೆ ವಿದ್ಯಾರ್ಥಿಗಳು ಹದಗೆಡುತ್ತಲೇ ಹೋಗಿದ್ದಾರೆ ಇದು ಎಲ್ಲ ಬೇಕಾದರೆ ಸಮುದ್ರದ ವಿಸ್ತಾರಕ್ಕೆಂದು ಕಡೆ ಹಾಕಬೇಕು; ಮೇಧಾಶಕ್ತಿಗೆ ಅಗ್ರ ಪ್ರಾಶಸ್ತ್ಯ ನೀಡಬೇಕು. ಹಳ್ಳಿಗರನ್ನು ದಿಲ್ಲಿಗರೆನ್ನಾಗಿ ಮಾಡದೆ ದಿಲ್ಲಿಗರನ್ನು ಹಳ್ಳಿಗರನ್ನಾಗಿ ಮಾಡಬೇಕು.

Edited, Printed & Published by K. H. Shetty at the Navayuga Press, Udipi, S. India.

ಪ್ರಜಾಪ್ರಭುತ್ವದ ಈ ನಮ್ಮ ಯುಗದಲ್ಲಿ ಜಗತ್ತಿನ ಎಲ್ಲೆಡೆಗಳಲ್ಲೂ, ಅದರಲ್ಲೂ ಮುಖ್ಯವಾಗಿ ಭಾರತದಲ್ಲಿ, ನರನಾರಾಯಣನು ವೈಯಕ್ತಿಕ, ಧಾರ್ಮಿಕ, ಸಾಮಾಜಿಕ ಹಾಗೂ ರಾಷ್ಟ್ರೀಯ ಸ್ವಾತಂತ್ರ್ಯಗಳ ಪರಸ್ಪರ ಅವಾಂತರದ ಪರಿಣಾಮವಾಗಿ ಸಾಕಷ್ಟು ನತದೃಷ್ಟನಾಗಿದ್ದಾನೆ. ಪೂರ್ಣತೆಯತ್ತ ಮಾನವನ ಯಶಸ್ವೀ ಪಯಣಕ್ಕೆ ಆತ್ಯಗತ್ಯವೆನಿಸಿರುವ ಈ ನಾಲ್ಕು ಬೇರೆ ಬೇರೆ ನೆಲೆಯ ಸ್ವಾತಂತ್ರ್ಯ ಮೌಲ್ಯಗಳೂ ವಿಶ್ವದ ಇತಿಹಾಸದುದ್ದಕ್ಕೂ, ಶತ ಶತಮಾನಗಳಿಂದಲೂ ಇದೇ ರೀತಿ ಪರಸ್ಪರ ವಿರೋಧಿಗಳಾಗಿಯೇ ಇದ್ದು ಬಂದಿವೆ. ಆದರೆ ಯಾವುದೇ ರೀತಿಯ ಏಕಾಧಿಪತ್ಯಕ್ಕೂ ಳಗಾದ ಜನಾಂಗದಂತಲ್ಲದೆ ಪ್ರಜಾಪ್ರಭುತ್ವದ ವಾತಾವರಣದಲ್ಲಿ ಈ ಮೌಲ್ಯಗಳ ಪರಸ್ಪರ ವಿರೋಧದಿಂದ ಉಂಟಾಗಬಹುದಾದ ಅನಿಷ್ಟ ಪರಿಣಾಮಗಳು ಎಷ್ಟೋ ಹೆಚ್ಚು. ಏಕೆಂದರೆ ಪ್ರಜಾಪ್ರಭುತ್ವದಲ್ಲಿ, ಆ ರಾಜಕೀಯ ಪದ್ಧತಿಯ ಹೆಸರೇ ತೋರಿ ಕೊಡುವಂತೆ, ಪ್ರತಿಯೊಬ್ಬ ಪ್ರಜೆಯೂ ಒಬ್ಬ ಸ್ವತಂತ್ರ ವ್ಯಕ್ತಿ; ಪ್ರತಿಯೊಬ್ಬ ಸ್ವತಂತ್ರ ವ್ಯಕ್ತಿಗೂ ಅವನವನ ಧರ್ಮವನ್ನು ಹಿಂಬಾಲಿಸುವ, ಆಚರಿಸುವ ಸ್ವಾತಂತ್ರ್ಯ ಇದ್ದೇ ಇರಬೇಕು. ಆದರೂ ಪ್ರತಿಯೊಬ್ಬ ಸ್ವತಂತ್ರ ವ್ಯಕ್ತಿಯೂ ಸ್ವತಂತ್ರ ಸಮಾಜ ವೊಂದರ ಪ್ರಜೆಯಾಗಿರಲೇ ಬೇಕಿರುವುದರಿಂದ, ಸಾಮಾಜಿಕ ಸ್ವಾತಂತ್ರ್ಯವೆ ಅತಿಕ್ರಮಣದಿಂದಾಗಿ ಅವನ ವೈಯಕ್ತಿಕ ಮತ್ತು ಧಾರ್ಮಿಕ ಸ್ವಾತಂತ್ರ್ಯಗಳು ಕೆಲವು ವ್ಯವಹಾರ ಕ್ಷೇತ್ರಗಳಲ್ಲಿ ಯಾವಾಗಲೂ ಮತ್ತುಳಿದ ವಿಷಯಗಳಲ್ಲಿ ಕೆಲವೊಮ್ಮೆ ಕುಂಠಿತಗೊಳ್ಳುವುದು ಅನಿವಾರ್ಯವೇ ಆಗಿದೆ.

ಇನ್ನು ಹಲವು ರಾಷ್ಟ್ರಗಳ ಸಾಮಾಜಿಕ ಮೌಲ್ಯಗಳು ಒಂದೇ ಆಗಿರಬಹುದು; ಅಥವಾ ಒಂದೇ ರಾಷ್ಟ್ರದಲ್ಲಿ ಹೇವು ಸಾಮಾಜಿಕ ವಿಭಾಗಗಳಿರಬಹುದು. ರಾಷ್ಟ್ರೀಯ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವಲ್ಲಿ ಅಲ್ಲಾನೇ ಉಳಿಸುವ ನೆಪದಲ್ಲಿ ಪ್ರಜೆಗಳ ವೈಯಕ್ತಿಕ, ಧಾರ್ಮಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯಗಳಿಗೆ ಮೇಲಿಂದ ಮೇಲೆ ಹಾನಿಯೊಗುತ್ತಿರುವುದು ನಮ್ಮೆಲ್ಲರ ದಿನದಿನದ ಅನುಭವವಷ್ಟೆ. ಹೀಗಾಗಿ ಪ್ರಜಾಪ್ರಭುತ್ವದ ಪಾದಿಯಲ್ಲಿ ನಡೆಯುತ್ತಿರುವ ಯಾವುದೇ ಒಂದು ರಾಷ್ಟ್ರ ರಾಜಕೀಯ ಕ್ಷೇತ್ರದಲ್ಲಿ ಸಾಧಿಸಬಹುದಾದ ಪ್ರಗತಿಯು ಆ ನಾಡಿನವರು ಈ ನಾಲ್ಕು ನೆಲೆಯ ಸ್ವಾತಂತ್ರ್ಯ ಮೌಲ್ಯಗಳ ವಿಚಾರದಲ್ಲಿ ಸಿರೂಪಿಸಿಕೊಳ್ಳುವ ಸಮನ್ವಯದ ಇತಿಮಿತಿಗಳನ್ನೂ ಅವಲಂಬಿಸಿರುತ್ತದೆ. ನಮ್ಮ ದೇಶದ ಮಟ್ಟಿಗೆ ಹೇಳುವುದಾದರೆ ಈ ಕ್ಷೇತ್ರದಲ್ಲಿ ನಾವು ಸಾಧಿಸಿರುವ ಪ್ರಗತಿ ಅತ್ಯಲ್ಪವಷ್ಟೇ ಅಲ್ಲದೆ ಈ ನಾಲ್ಕು ನೆಲೆಗಳ ಸಾಮರಸ್ಯ ನಮ್ಮ ಜನಾಂಗದ ಮುನ್ನಡೆಗೆ ಅತ್ಯಗತ್ಯವೆಂಬ ಅರಿವು ಕೂಡ ನಮ್ಮಲ್ಲಿ ಇಲ್ಲವಾಗಿದೆ. ಇದಕ್ಕೆ ಕಾರಣ ನಮ್ಮಲ್ಲಿಯ ರಾಜಕೀಯ ಜ್ಞಾನದ, ಜಾಗೃತಿಯ ಕೊರತೆಯ ಜೊತೆಗೆ ನನಗನಿಸುವಂತೆ ನಮ್ಮ ಪರಂಪರೆಯೂ, ನಾವು ನಮ್ಮ ಪೂರ್ವಿಕರಿಂದ ಕಲಿತಿರುವ ಗುಣಾವಗುಣಗಳೂ ಹೌದು.

ಸ್ವತಂತ್ರ ವ್ಯಕ್ತಿ ಸ್ವತಂತ್ರ ರಾಷ್ಟ್ರದ ಆಧಾರಸ್ತಂಭ. ವ್ಯಕ್ತಿಯ ಸ್ವಾತಂತ್ರ್ಯಕ್ಕಿಂತ ಆವನ ಕುಲದ ಸ್ವಾತಂತ್ರ್ಯ, ಕುಲದ ಸ್ವಾತಂತ್ರ್ಯಕ್ಕಿಂತ ಗ್ರಾಮದ ಸ್ವಾತಂತ್ರ್ಯ, ಗ್ರಾಮದ ಸ್ವಾತಂತ್ರ್ಯಕ್ಕಿಂತ ಸಮಗ್ರ ರಾಷ್ಟ್ರದ ಸ್ವಾತಂತ್ರ್ಯ ಹೆಚ್ಚು ಅಮೂಲ್ಯವಾದುದು. ಹೆಚ್ಚಿನದಕ್ಕಾಗಿ ಆಯಾ ನೆಲೆಯ ಸ್ವಾತಂತ್ರ್ಯದ ಯಾವುದೇ ಮೌಲ್ಯವನ್ನು ಅಗತ್ಯಬಿದ್ದಾಗ ತ್ಯಜಿಸಲೇ ಬೇಕು. ರಾಷ್ಟ್ರದ ಉಳಿವಿಗಾಗಿ ಯಾವುದೇ ಧಾರ್ಮಿಕ ಮೌಲ್ಯವನ್ನು ಬಿಟ್ಟುಕೊಡಲು ನಾವು ಸಿದ್ಧರಾಗಬೇಕು.

ಸ್ವಾತಂತ್ರ್ಯದ ಬೆಲೆ

ಲೇಖಕರು :

ಡಾ|| ಕೊ. ನ್ಯಾ. ರಮೇಶ

ಈಗ, ವ್ಯಕ್ತಿ ಸ್ವಾತಂತ್ರ್ಯವನ್ನೇ ತೆಗೆದು ಕೊಳ್ಳೋಣ. ಆದಿ ಕಾಲದಿಂದಲೂ ನಮ್ಮ ಸಂಸ್ಕೃತಿಯು ಸಾಮೂಹಿಕ ನೆಲೆಯಲ್ಲಿ ಕುಲಗಳಿಗೆ ಅಂದರೆ ಕುಟುಂಬಗಳಿಗೆ ಹೆಚ್ಚಿನ ಹಾಗೂ ಅವುಗಳ ಸದಸ್ಯರಿಗೆ, ಅಂದರೆ ವ್ಯಕ್ತಿಗಳಿಗೆ, ಅತಿಕಡಿಮೆಯ ಸ್ವಾತಂತ್ರ್ಯವನ್ನು ಒದಗಿಸುವಂತದ್ದಾಗಿ ಇದ್ದು ಬಂದಿದೆ. 'ಪ್ರಾಸ್ತೇ ಷೋಡಶೇ ವರ್ಷೇ ಪುತ್ರಂ ಮಿತ್ರವದಾಚರೇತ್' (ಹದಿನಾರರ ಪ್ರಾಯ ಮುಟ್ಟಿದ ಮಗನನ್ನು ಮಿತ್ರನಂತೆ ಕಾಣಬೇಕು) ಎಂಬ ಹಿತೋಕ್ತಿಯನ್ನು ಉಸೇಕ್ಷಿಸಿದ ನಮ್ಮ ಪೂರ್ವಿಕರೂ, ಇಂದಿಗೂ ಉಪೇಕ್ಷಿಸುತ್ತಿರುವ ನಾವೂ "ತ್ಯಜೇದೇಕಂ ಕುಲಸ್ಯಾರ್ಥೇ" (ಕುಲದ ಅಂದರೆ ಕುಟುಂಬದ ಸಲುವಾಗಿ ವ್ಯಕ್ತಿಯನ್ನು ಆಡಗಿಸು!) ಎಂಬ ಮಾತನ್ನು ಹಿಂಬಾಲಿಸುತ್ತ ಬಂದಿದ್ದೇವೆ ನಮ್ಮಲ್ಲಿ ನಮ್ಮ ಪರಂಪರೆಯಿಂದ ಬಂದಿರಬಹುದಾದ ಹಾಗೂ ರಾಜಕೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವ್ಯಕ್ತಿ ಸ್ವಾತಂತ್ರ್ಯದ ಕುರಿತು ಜನ ಜಾಗೃತಿಯೇ ಇಲ್ಲವೆನ್ನಬಹುದು. ಎಲ್ಲೋ ಇಂಗ್ಲೆಂಡಿನಲ್ಲೂ ಅಮೇರಿಕದಲ್ಲೂ ಮತದಾನ ನೀಡುವ ಅರ್ಹತೆಯನ್ನು ೨೧ ರಿಂದ ೧೮ ರ ವ್ಯಾಯಕ್ಕೆ ಇಳಿಸಿದರೆಂದರೆ ನಾವೂ ನಮಗೂ ಅಂತಹುದೇ ಹಕ್ಕು ಬೇಕೆಂದು ಕೇಳುತ್ತೇವೆ. ಇಲ್ಲಿ ವ್ಯಕ್ತಿ ಸ್ವಾತಂತ್ರ್ಯದ ಬಗೆಗಿನ ಆಸಕ್ತಿಗಿಂತಲೂ ಭಾರತೀಯರ ದೈನಂದಿನ ಜೀವನದಲ್ಲಿ ತಲೆಯೆತ್ತಿ ಕಾಣುವ ಅಂಧಪರಾನುಕರಣೆಯದೇ ಎತ್ತಿದ ಕೈ.

ಇನ್ನು, ವಿಶ್ವದ ಇತಿಹಾಸದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನಗಳನ್ನು ಗಳಿಸಿಕೊಂಡಿರುವ ಬುದ್ಧ, ಅಶೋಕ, ಕಾಳಿದಾಸ, ತಂಜಾವೂರಾಚಾರ್ಯರು, ಮಧ್ವಾಚಾರ್ಯರು, ರಾಮಾನುಜಾಚಾರ್ಯರು, ಅಕ್ಬರ್, ಗಾಂಧಿ, ನೆಹರೂ ಇವರೆಲ್ಲ ಭಾರತೀಯರಲ್ಲವೇ? ನಮ್ಮ ನಾಡಿನಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆಲೆ ಇಲ್ಲದಿದ್ದಲ್ಲಿ ಅವರೆಲ್ಲ ಜಗದ್ವಿಖ್ಯಾತ ವ್ಯಕ್ತಿಗಳಾಗಿ ಪರಿಣಮಿಸುವುದು ಸಾಧ್ಯವಿತ್ತೆ? ಎಂದೆಲ್ಲ ಯೂರಾದರೂ ಪ್ರಶ್ನಿಸಬಹುದು. ಮೇಲೆ ಹೆಸರಿಸಲಾಗಿರುವ ವ್ಯಕ್ತಿಗಳ ಮಹತ್ವಕ್ಕೆ ಮುಖ್ಯ ಕಾರಣ ನಮ್ಮ ಸಮಾಜವು ಹಿಂದಿನಿಂದಲೂ ವ್ಯಕ್ತಿಯ ಸುತ್ತ ಮುತ್ತಲೂ ಕಟ್ಟಿ ಹಾಕಿರುವ ಅಡ್ಡಗೋಡೆ. ಯಾವಾಗಲಾದರೊಮ್ಮೆ ಯಾವನಾದರೊಬ್ಬ ಭಾರತೀಯನು ಧೈರ್ಯಮಾಡಿ ಈ ಅಡ್ಡಗೋಡೆಯನ್ನು ದಾಟಿ ಹೊರಬಂದು ಏನಾದರೊಂದು ಮಹತ್ಕಾರ್ಯವನ್ನು ಸಾಧಿಸಿದನೆಂದರೆ ಅವನನ್ನು ನಮ್ಮವರು ಅವತಾರಪುರುಷನೆನ್ನುತ್ತಾರೆ; ದೈವಾಂಶಸಂಭೂತನೆನ್ನುತ್ತಾರೆ; ಮಹರ್ಷಿ, ಮಹಾತ್ಮ ಎಂದೆಲ್ಲ ಕೊಂಡಾಡುತ್ತಾರೆ. ಇದು ವ್ಯಕ್ತಿ ಪೂಜೆಯೇ ಸರಿ. ವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆಲೆಕೊಡದ ಜನಾಂಗದಲ್ಲಿ ಮೂರ್ತವೇ ವ್ಯಕ್ತಿ ಪೂಜೆಯ ದುರ್ಬಲ ಮನೋಭಾವ ಕಾಣಿಸಿಕೊಳ್ಳುತ್ತದೆ ಎಂಬುದನ್ನು ಈಗಾಗಲೇ ಹಲವು ಹಿರಿಯ ವ್ಯಕ್ತಿಗಳು ಒತ್ತಿ ಹೇಳಿದ್ದಾರೆ. ಈ ಮೇಲಿನ ನನ್ನ ಹೇಳಿಕೆಗಳಿಂದ ಒಂದು ಮೂತಂತೂ ಸಿದ್ಧವಾಗುತ್ತದೆ; ನಾವು ಪ್ರಜಾಪ್ರಭುತ್ವದ ಪದ್ಧತಿಯನ್ನೇ ಬಳಸಿಯ ಶಸ್ವೀ ರಾಷ್ಟ್ರವೆನಿಸಿಕೊಳ್ಳ ಬೇಕಾದರೆ, ವ್ಯಕ್ತಿ ಸ್ವಾತಂತ್ರ್ಯದ ಮಟ್ಟಿಗೆ ನಮ್ಮ ಪರಂಪರೆಯನ್ನು ಬದಿಗೊತ್ತಿ ಪಾಶ್ಚಾತ್ಯರ ಸ್ವಾತಂತ್ರ್ಯ ಮನೋಭಾವನವನ್ನು ನಮ್ಮದಾಗಿಸಿ ಕೊಳ್ಳಬೇಕು. ಇತರರಿಂದ, ಅನರು ಯೂರೇ ಇರಲಿ, ನಮಗೆ ಒಳ್ಳೆಯದಾಗುವಂತಹ ಶೀಲವನ್ನು ಕಲಿಯುವುದರಲ್ಲಿ ತಪ್ಪೇನೂ ಇಲ್ಲವಷ್ಟೆ.

ಧಾರ್ಮಿಕ ಸ್ವಾತಂತ್ರ್ಯದ ಬಗೆಗೆ ನಮಗಿರುವ ತಪ್ಪು ತಿಳುವಳಿಕೆಯು ನಮ್ಮನ್ನಿಂದು ವಿಶ್ವದ ದೃಷ್ಟಿಯಲ್ಲಿ ಮತಾಂಧರನ್ನಾಗಿ ಮಾಡಿದೆ. ಜಗತ್ತಿನ ಎಲ್ಲ ಧರ್ಮಗಳ ಹೆಮ್ಮೆಯ ನೆಲೆಬೀಡಾಗಿ ಬೆಳಗ ಬೇಕಾಗಿದ್ದ ನಮ್ಮ ದೇಶದಲ್ಲಿ ಪರಧರ್ಮ ದ್ವೇಷವು ಆ ಗಿಂದಾಗ್ಗೆ ದುರಂತಗಳಗೆಡೆಮಾಡಿಕೊಟ್ಟು ಇಡಿಯ ದೇಶವನ್ನೂ ಅಸಹಕೀರ್ತಿಗೆ ಗುರಿ ಪಡಿಸುತ್ತಿದೆಯಷ್ಟೇ ಅಲ್ಲದೆ ನಾಡಿನ ಮುನ್ನಡೆಗೂ ಮುಟ್ಟುಗೋಲಾಗಿ ನಿಂತಿದೆ. ಯಾವುದೇ ಒಂದು ಧರ್ಮದವನಾದ ಭಾರತೀಯ ವ್ಯಕ್ತಿಗೆ ಬೇರೊಂದು ಧರ್ಮದ ಅನುಯಾಯಿ ಆಗಿರುವ ಮತ್ತೊಬ್ಬ ಭಾರತೀಯ ವ್ಯಕ್ತಿಯನ್ನು ದ್ವೇಷಿಸಲು ಹೆಕ್ಕಿರುವುದಾದರೂ ಎಂತು? ಇಂದು ಏಷ್ಯದ ಹಲವು ರಾಷ್ಟ್ರಗಳ ಪ್ರಧಾನ ಧರ್ಮವಾಗಿರುವ ಬುದ್ಧಮತವನ್ನು ಆ ನಾಡುಗಳ ಮೇಲೆ ಹೇರಿದವರೇ ನಾವಾಗಿರುವಾಗ ಮಾನವ ಸೃಷ್ಟಿಯ ಇನ್ನೆಲ್ಲ ಧರ್ಮಗಳೂ ತಮ್ಮ ತಮ್ಮ ಶಕ್ತಿಗನುಗುಣವಾಗಿ ನಮ್ಮ ಮಣ್ಣಿನ ಮೇಲೆ ನೆಲೆಯೂರಿದರೆ ತಪ್ಪೇನು? ಈ ಬಗ್ಗೆ ನಮ್ಮ ಪೂರ್ವಿಕರಿಗಿದ್ದ ಪಹಿಷ್ಣುತೆ, ಸಮತಾದೃಷ್ಟಿ, ನಮ್ಮಲ್ಲಿಲ್ಲವಾಗಿದೆ.

ಹಿಂದಿನಿಂದಲೂ ಭಾರತವು ಸಮತಾದೃಷ್ಟಿಗೆ ಹೆಸರುವಾಸಿಯಾಗಿತ್ತು. ನಮ್ಮ ನಾಡಿನ ಇತಿಹಾಸದಲ್ಲಿ ದ್ರಾವಿಡರು, ಆರ್ಯರು, ಶಕರು, ಹೂಣರು, ಗ್ರೀಕರು, ಅರಬರು, ಪರ್ಶಿಯನ್ನರು ಹೀಗೆ ಎಷ್ಟೋ ಜನಾಂಗದವರು ಮೇಲಿಂದ ಮೇಲೆ ವಲಸೆ ಬಂದು, ಅವರವರ ಧರ್ಮಗಳನ್ನು ಪ್ರಚಾರ ಮಾಡಿ ಹೆಬ್ಬಿ ಹರಡಿಸಿ, ಸರ್ವ ಧರ್ಮಗಳ ಮೇಳನ ಸ್ವರೂಪವಾದ ಹಾಗೂ ಸರ್ವ ಧರ್ಮ ಸ್ವಾತಂತ್ರ್ಯದ ಸಂಕೇತದಂತಿರಬೇಕಾದ ಹಿಂದೂ ಧರ್ಮಕ್ಕೆ ರೂಪಕೊಟ್ಟಿದ್ದಾರೆ. ಅಶೋಕ ಸಾಮ್ರಾಟನು ಸ್ವತಃ ಬೌದ್ಧಮತಾವಲಂಬಿಯಾದರೂ, ಇತರ ಎಲ್ಲ ಧರ್ಮಗಳವರನ್ನೂ ಸಮತಾದೃಷ್ಟಿಯಿಂದ ಕಾಣಬೇಕೆಂದು ತನ್ನ ಪ್ರಜೆಗಳಿಗೆ ಪದೇ ಪದೇ ಬುದ್ಧಿ ಹೇಳಿರುವನು. ತುಳುನಾಡಿನದೂ ಸಹ ಪರಧರ್ಮ ಸಹಿಷ್ಣುತೆಯ ಪರಂಪರೆಯೇ ಆಗಿದೆ ಎನ್ನುವುದನ್ನು 'ನವಯುಗ'ದ ಹಿಂದಿನ ವರ್ಷಗಳ ಕೆಲವು ವಿಶೇಷ ಸಂಚಿಕೆಗಳಲ್ಲಿ ನಾನು ಸಾಧಾರಣವಾಗಿ ತೋರಿಸಿ ಕೊಟ್ಟಿದ್ದೇನೆ.

ಆದರೆ ಈ ಸ್ತುತ್ಯ ಧರ್ಮ ಮನೋಭಾವವು ಕ್ರಿಸ್ತ ಶಕದ ಸುಮಾರು ೧೫-೧೬ನೆಯ ಶತಮಾನದಿಂದ ಕ್ರಮೇಣ ಕ್ಷೀಣವಾಗುತ್ತ ಬಂದಿದೆಯೆಂಬುದು ಅಲ್ಲಗಳೆಯ ಲಾರದ ಚಾರಿತ್ರಿಕ ಸತ್ಯ. ಇದಕ್ಕೆ ಮುಖ್ಯಕಾರಣ ಹಿಂದೂ ಮತ್ತು ಇಸ್ಲಾಂ ಧರ್ಮಗಳು. ಅನಂತರದಲ್ಲಿ ಕ್ರೈಸ್ತ ಧರ್ಮವು. ಒಂದಕ್ಕೊಂದು ಹೊಂದಿಕೊಳ್ಳಬೇಹೋದವೆಂದ್ದೇ. ಅದರ ಚೊದಲು ಭಾರತದ ಮಣ್ಣಿನ ಮೇಲೆ ನೆಲೆಯೂರಿದ ಪರರಾಷ್ಟ್ರೀಯರೆಲ್ಲರೂ ಕಾಲಕ್ರಮೇಣ ತಮ್ಮ ತಮ್ಮ ಧರ್ಮ ಕಲಾಚಾರಗಳನ್ನು ಹಿಂದೂ ಧರ್ಮದೊಂದಿಗೆ ವಿಲೀನಗೊಳಿಸಿ ಕಾಯೇನ ಮನಸಾ ವಾಚಾ ಹಿಂದುಗಳಾಗಿ ಹೋದರು. ಆದರೆ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ಹಿಂದೂ ಧರ್ಮದಷ್ಟೇ (ಅದಕ್ಕೂ ಹೆಚ್ಚೇ ಅಂದರೂ ಸುಳ್ಳಾಗಲಾರದು) ಮಾನವನ ಕುಲದಮೇಲೆ ಪ್ರಭಾವಬೀರಿವೆ. ಹಿಂದೂ ಧರ್ಮದಂತೆಯೇ ಮಾನವ ಕುಲಕ್ಕೆ ಶಾಶ್ವತವಾದ, ಶ್ರೇಷ್ಠವಾದ ಮಹದ್ಧರ್ಮ ಸಾಧನಗಳಾಗಿವೆ. ಏನೇ ಆಗಲಿ, ಇಂದಿನ ಪರಿಸ್ಥಿತಿಯಲ್ಲಿ ಒಂದು ಮಾತ ನ್ನಂತೂ ನಾವು ಕಡೆಗಣಿಸುವಂತಿಲ್ಲ— ಇಂದು ಪ್ರಚಾರದಲ್ಲಿರುವ ವಿವಿಧ ಧರ್ಮಗಳು ಒಂದರಲ್ಲೊಂದು ವಿಲೀನಗೊಳ್ಳುವ ಸಾಧ್ಯತೆಯೇ ಇಲ್ಲ. ಆದರೆ ನಮ್ಮ ದೇಶದ ನಿವಾಸಿಗಳೆಲ್ಲರೂ, ಅವರು ಯಾವ ಧರ್ಮದವರೇ ಇರಲಿ, ಕಾಯೇನ ಮನಸಾ ವಾಚಾ ಭಾರತೀಯರೇ ಹೌದು. ಎಲ್ಲ ಧರ್ಮದವರೂ ಒಬ್ಬರನ್ನೊಬ್ಬರು ಮೈತ್ರಿಯಿಂದ ಸಹಿಷ್ಣುತೆಯಿಂದ ಕಂಡು ಶಾಂತಿಯಿಂದ ಹಾಗೂ ಪರಸ್ಪರ ಸಹಕಾರದಿಂದ ಬಾಳುವ ಮನಸ್ಸು ಮಾಡಿದರೆ ಮಾತ್ರ ಭಾರತದ ಭವಿಷ್ಯ ಸುಶ್ರಾವ್ಯವಾದೀತು. ಹೀಗೆಂದು ತಿಳಿದು ಪ್ರಜಾಸಾಮಾನ್ಯರನ್ನು ಸರಿಯಾದ ಮಾರ್ಗದಲ್ಲಿ ಕರೆದೊಯ್ಯುವ ನೈತಿಕ ಹೊಣೆ ನಾಡಿನ ಬುದ್ಧಿಜೀವಿಗಳದ್ದಾಗಿದೆ.

ಸಾಮಾಜಿಕ ಕ್ಷೇತ್ರದಲ್ಲಂತೂ ನಮ್ಮ ನ್ನಿಂದು ಸೂರಾರು ಸಮಸ್ಯೆಗಳು ಕಾಡುತ್ತಿವೆ. ಧಾರ್ಮಿಕ, ಆರ್ಥಿಕ, ರಾಜಕೀಯಗಿಕ,

(ಮೂಲತ್ತನಾಲ್ಕನೇ ಪುಟ ನೋಡಿರಿ)

ಇಂದಿರಾ ಗಾಂಧಿ ಪ್ರಧಾನಿಯಾಗಿರುವಷ್ಟು ಯನ್ನು ಚಿತ್ತೈಸಿದು ಏನು ತೀರುವಷ್ಟನ್ನು ನೆನೆ ಮಂಡಿಗೆ—ಅಪಕೈನೇ ಆವರನ್ನು (ಮಾಹಿತಿ ಲುಪ ನಿಷೇಧಿಸಲಾಗಿದೆ)

ಸಮಾಜ ಪುಸ್ತಕದ ತೆರೆದ ಪುಟ

ಲೇಖಕರು :

ಶ್ರೀ ಕೂರಾಡಿ ಸದಾಶಿವ ಕಲ್ಕೂರ.

ಸಂಘ ಜೀವನಕ್ಕೆ ಅತಿಹೆಚ್ಚಿನ ಪ್ರಾಶಸ್ತ್ಯ ನೀಡಿ, ಲೇಖನ ಬರೆಯುವವರು, ಭಾಷಣ ಮಾಡುವವರು, ಮಾತಾಡುತ್ತಿರುವವರು ಸಂಘಾತಿತರಂತೆ ವರ್ತಿಸುತ್ತಾರೆಯೇ ಹೊರತು ನಿಜವಾದ ಸಂಘಾತಿತರಲ್ಲ. ಸಂಸ್ಕೃತಿಯ ಗೆಡ್ಡೆಯನ್ನು ಚಾರುಮಡಿಯ ಮಾಡುವಲ್ಲಿ ಇವರೆಲ್ಲರೂ ತಂತಮ್ಮ ಹಣ್ಣಿಯೊರನ್ನು ಬಳಸಿಕೊಂಡಿದ್ದಾರೆ. ಇವರ ವಿಷ ಚಕ್ರದಲ್ಲಿ ಸಿಕ್ಕಿ ನವದ ನಾಗ್ಯಮ ವರ್ಗದ ಶ್ರೀ ಸಾಮಾನ್ಯ ಇಡೀನ್ನು ನೋಡುತ್ತ ವಿವರಿಸಿದ್ದಾನೆ. ಸಮಾಜ ಪುಸ್ತಕವನ್ನು ಮುಚ್ಚಿಟ್ಟು ಆಕಾಶವಾದದಿಂದ ಜೀವ ಹಿಡಿದಿದ್ದಾನೆ.

ಈ ಅಧ್ಯಾಯವನ್ನು ಓದುವ ಹೊತ್ತಿಗೆ ನನ್ನ ಮನಸ್ಸಿಗೆ ತುಂಬಾ ನೋವಾಗುತ್ತಿದೆ. ಹಲಗಾಲದ ನೋವನ್ನು ಅನುಭವಿಸಿ ಈಗಿನ ನೋವನ್ನು ಸಹಿಸುತ್ತಿದ್ದೇನೆ. ತಾನುಂಡುವನ್ನು ಪರರಿಗೆ ಇಕ್ಕುವುದು. ನಾನು ಅಂಬಲಿಯನ್ನು ಕುಡಿದು ಅನ್ಯನಿಗೆ ಅಮೃತಾನ್ನವನ್ನು ನೀಡುವಷ್ಟು ಔದಾರ್ಯ ನನ್ನಲ್ಲಿ ಇಲ್ಲ. ಔದಾರ್ಯ ಎಂಬ ಶಬ್ದವನ್ನು ಕೇವಲ ಪೌರಾಣಿಕ ಗ್ರಂಥಗಳಲ್ಲಿ ಕಂಡಿದ್ದೇನೆ. ಆಧುನಿಕ ರಾಷ್ಟ್ರೀಯತೆಯು ನನ್ನ ನೆಲದ ದೋಷವನ್ನೆತ್ತಿ ಅಡಿದ್ದರೆ ನೋವಿನ ಜತೆಗೆ ಕ್ರೋಧವೂ ನನ್ನ ನೆತ್ತಿಗೇರುತ್ತಿತ್ತು. ನನ್ನ ನುಗನ ಗುಣ ಧರ್ಮವನ್ನನುಸರಿಸಿ ನಾನೇ ಜಾತಕ ಬರೆವಾಗ–ಗ್ರಾಮಜೋಯಿಸನು ಅವನಾದದಿಂದ ವಾಚಾಗುವನಷ್ಟೆ!

ಸಭೆಸಮಾರಂಭಗಳಿಗೆ ಇತ್ತೀಚೆ ನಾವು ಮೆಟ್ಟಿನ ಸಮ್ಮಣ್ ನೀಡಿದ್ದೇವೆ. ನಿರೀಕ್ಷಿಸಿದ ಮಟ್ಟಿಗಷ್ಟಿ ಜನ ಸೇರದೇ ಇದ್ದಲ್ಲಿ ಕೆಲಸ ಕೆಡಬಾರದೆಂಬ ಗುರಿಯೆಟ್ಟು. ಒಂದೆರಡು ಜತೆ ಫ್ಲಾಸಿನರ್ಫಕ ಸಂಯೋಜನೆಗೆ ನಾವು ಮರೆಯುವುದಿಲ್ಲ. ಒಂದು ವೈಲಾಜೆ ಹೆಣಸುತಿನ ಹೆಂಡತಿ ಸತ್ತವನಿಗೂ ನಮ್ಮ ಕೋಲಾಹಲ ಕೇಳಿಸಬೇಕು. ಪರಸ್ಪರ ವಿರಿಜಯ ಪವ್ಯಾಸವಿರುವ ಕೆಲವು ಘೂಪರು ಕೂಡಿದರೂ ಕೇಳುವರಲ್ಲಿ ಕುರ್ಚಿಗಳಷ್ಟೇ ಸಿಸ್ಸೀಮರು. ನಾವು ಆಡುವುದರಲ್ಲಿ ಎಷ್ಟು ಚತುರರೋ ಅಷ್ಟೇ ಇನ್ನೊಬ್ಬರು ನಮ್ಮ ಮಾತನ್ನು ಕೇಳಬೇಕೆಂಬುದರಲ್ಲಿ ಆಗ್ರಹಿಗಳು. ಗಾಂಧಿ ಸತ್ತ ಆ ಬಳಿಕ ದುರಾಗ್ರಹಗಳೆಲ್ಲ ಸತ್ಯಾಗ್ರಹಗಳಂಬ ಸಲ್ಲಕ್ಷಣ ಹೆಸರನ್ನೇ ಪಡೆದಿವೆ ಭಾಷಣವು ಭಾರತ ಭೂಷಣವು. ನಮ್ಮಲ್ಲಿ ಸಾಧನೆಗಳು ಇದನ್ನೇ ಆಧರಿಸಿ ನಿಂತಿವೆ. ಮತ ವೇತಾಲಗಳಿಗೂ ಈ ರೋಗ ಅಂಟಿದೆ. ಅದರದರ ಪರಾಧಿಕಾರಿಗಳು ದಿಕ್ಕಾಪಾಲಾಗಿದ್ದಾರೆ. ಪಿಚಾರಿ ಸಿದ್ಧ 'ತ್ರೀ ಶ್ರೀ ವೇದಸೂರ್ತಿಗಳು ಪ್ರೊಗ್ರಾಮಿಗೆ ಜೋಗಿದ್ದಾರೆ' ಎಂಬ ಉತ್ತರ ಅನ್ನೇ ಹೂಂದಿಕುಳಿತವನಿಂದ ಬರುತ್ತಿದೆ. ಇಂತಹ ಮನೋರಂಜನಾ ಕಾರ್ಯಕ್ರಮಗಳಿಗೆ ಮೇಕಪ್ಪಿನ, ಡ್ರೆಸ್ಸುಗಳ ಪಿಚಿತ್ರ ನೋಡುವವಸಿಗೂ ಟಿಕೇಟಿನ ಭಯಂಕರ.

ಒಬ್ಬರ ಮೇಜೊಬ್ಬರಂತೆ ಅನೇಕ ರಾಷ್ಟ್ರಗಳನ್ನು ರಾಜಕೀಯವಾಗಿ ಆಜರಿಸಿ —ಸಂಬಂಧಿಸಿದವರಿಗೆಲ್ಲಾ ಪರದಿಗಳನ್ನು ಬುಕ್ಕಿಸಿ, ಆಕಾಶವಾಣಿಕ್ಕೆ ಅಲಂಕಾರಗಳಲ್ಲೇ ಬರೆದು, ದಿವಾಳಿ ತೆಗೆದು ರಫಾನಿಸಿದೆವು. ಕೊನೆಗೆ ಗಾಂಧಿ ಶತಾಬ್ದಿಯಲ್ಲಿ ಹಳ್ಳಿ ಹಳ್ಳಿಯಲ್ಲಿ, ಗಲ್ಲಿಗಲ್ಲಿಯಲ್ಲಿ ಹೆಂಡದಂಗಡಿಗಳನ್ನು ಉದ್ಘಾಟಿಸಿ ಎಲ್ಲೆಲ್ಲಿ ರಸ್ತೆ, ಓಣಿ, ಮೈದಾನು, ಕುಮರಿ ಕಣಿವೆಗಳಿಗೆಲ್ಲಾ ಗಾಂಧಿ ತಾತನ ಹೆಸರಿಟ್ಟು ದಿವ್ಯ ಸ್ಮರಣೆ ಮಾಡಿದೆವು. ಆರವತ್ತಕ್ಕೆ ಅರೆ ಮರುಳು ಎಪ್ಪತ್ತಕ್ಕೆ? ಎಂಭತ್ತರ ಗಡಿದಾಟಿದ ರಾಜಕಾರಣಿಗಳಿಂದ ಇಪ್ಪತ್ತರ ಮಕ್ಕಳು ರಾಜಕೀಯ ಅಭ್ಯಸಿಸಿ ಪ್ರಜಾಪ್ರಭುತ್ವ ಸಾಕಷ್ಟು ಅನ್ನಿಸಿದುವು. ಮೂಲೆಯಲ್ಲಿ ಬಳ್ಳಿಲೆ ಕುಟ್ಟುತ್ತಿರುವ ಅಜ್ಜನಿಗೆ ಒಂಭತ್ತನೆ ತರಗತಿಯ ಮಗ ಹೇಳುತ್ತಿದ್ದಾನೆ "ನಾವು ಪ್ರಬುದ್ಧರು. ಪ್ರಗತಿಶೀಲರು, ವಿಕಾಸ ಯೋಜಕರು,ಕಲ್ಯಾಣರಾಷ್ಟ್ರ(Welfare State) ವನ್ನು ಕಟ್ಟುವ ಕರ್ತವ್ಯಗಳು" ನಾವು ದ್ವಿಕರಣ ಶುದ್ಧರು. ಇಪ್ಪತ್ತು ವರ್ಷದ ಹಿಂದೆ "ಕ್ವಾರಾಬಟ್ಟೆ" ಕಾಣದ ನಾವು ಇಂದು ಟೆರಿಲಿನ್ ಧಾರಿಗಳಾಗಿದ್ದೇವೆ. ಆ ಕಾಲದಲ್ಲಿ ರಾಗಿ ನೀರಿಗೆ ದಕಡಿಕ್ಕು ನೋಡುತ್ತಿದ್ದ ನಾವು ಸರಾಯಿ ಅಂಗಡಿಯಲ್ಲಿ ಸಾಲ್ಗಟ್ಟಿ ನಿಂತಿದ್ದೇವೆ. ರಸಿಕರೂ ಆಗಿದ್ದೇವೆ.

ಅಟ್ಟದಲ್ಲಿಟ್ಟ ಹಳೆಯ ಸೋರೆಕಾಯಿ ಬುರುಡೆಯನ್ನು ತಿಕ್ಕಿ ತೀಡಿ 'ಧರ್ಮ ಹಾಳಾಯ್ತು; ಸಂಸ್ಥಾಪನೆಯೊಗಲಿ' ಎಂಬ ರಾಗಮಾಲಿಕೆಯನ್ನು ನವ್ಯ ಧ್ವನಿಯಲ್ಲಿ ಹಾಡುತ್ತಿದ್ದೇವೆ. ಸ್ವಾಮಿಗಳ ಹಿಂದೆ ಪಾದ್ರಿಗಳು, ಪಾದ್ರಿಗಳ ಹಿಂದೆ ಕಾಜಿಗಳು—ಇವರೆಲ್ಲರ ಹಿಂದೆ ರಾಜಕಾರಣಿಗಳು —ಭಾರತ ಭೂಮಿಯನ್ನು ಶುದ್ಧ ಮಾಡುವುದಕ್ಕಾಗಿ ಹಣತೊಟ್ಟು ನಿಂತಿದ್ದಾರೆ. ಈ ನೆಲ ಹೇಗೆ? ಯಾರಿಂದ ಹೊಲಸಾಯಿತೋ? ನಾಸರಿಯೆ. ಇನ್ನೊಂದೆಡೆ ವೈಜ್ಞಾನಿಕ ಉತ್ಕರ್ಷ. ಎಲ್ಲೆಲ್ಲೂ ಕಾಂಕ್ರೀಟುಮಯ. ವಿದ್ಯುತ್ತಿನ ಬೆಳಕು. ಹೊಸ ಹೊಸ ಆಕರ್ಷಣೆಗಳು. ಸ್ಪರ್ಧಾ ಭಾವಗಳು, ಏನೋ ಒಂದು ಅತೃಪ್ತಿ, ತನ್ನ ಮನವು ಮೆಚ್ಚದೇ ಯಾರನ್ನೋ ಮೆಚ್ಚಿಸಲು ಹೊರಟ ಉದ್ವೇಗ, ಗುದ್ದಿ ಹಣ್ಣು ಮಾಡಿದ, ಅರ್ಧಂಬರ್ಧ ಸ್ಥಿತಿ. ತ್ರಿಕೋಣದರ್ಪಣವನ್ನು ಹಿಡಿದು ಕಂಡಾಗ—ಅದನ್ನೇ ಮತ್ತೂ ಮತ್ತೂ ಚಿಂತಿಸಿದಾಗ — ನೋಡುವುದಕ್ಕೂ, ಆಡುವುದಕ್ಕೂ. ಸಾಡುವುದಕ್ಕೂ ತಾತ್ವಿಕ ಸಂಬಂಧ ಕಾಣುವುದಿಲ್ಲ. ಒಂದು ಸಾಂಗತ್ಯದಲ್ಲಿ ಅವು ಮೈಚೈಸುವುದಿಲ್ಲ. ಪರಸ್ಪರರಲ್ಲಿ ವಿಶ್ವಾಸ, ಪ್ರೀತಿ, ವಾತ್ಸಲ್ಯ ಮುಂತಾದ ನಮ್ಮ ಹಳಬರು ಹೇಳುತ್ತಿದ್ದ ಶಬ್ದಗಳ ವರ್ತನೆ ಕಾಣುವುದಿಲ್ಲ. ದಿನದಿಂದ ದಿನಕ್ಕೆ ಇವು ಮಾಯವಾಗಿ ಆ ಸ್ಥಳದಲ್ಲಿ ಮತ್ತಾವುದೋ ವ್ಯಾಪಿಸುತ್ತದೆ! ಏನೇ ಬಂದರೂ ಬರಲಿ, ನಾಲಗೆ ಉಳಿಸಿಕೊಳ್ಳಬೇಕು' ಈ ಹಟ, ಈ ಪ್ರವೃತ್ತಿ ಅಡ್ಡ ಮಾರ್ಗ ಹಿಡಿದಂತಿದೆ. ಎಂತಹ ಗಂಭೀರ ಪರಿಸ್ಥಿತಿಯಲ್ಲೂ ತನ್ನ ಯಡವಟ್ಟನ್ನು ಒಂದು ನಗು ಪರಿಮಾರ್ಜನೆ ಮಾಡುತ್ತದೆ. ಇಂತಹ ದೊಂದು ಮುಖಹೇಡಿತನಕ್ಕೆ ಮದ್ದಿದೆಯೇ? ಎಷ್ಟೋ ರೋಗಗಳಿಗೆ ಇನ್ನೂ ಕಂಡುಹಿಡಿದಾಗಲಿಲ್ಲ. ಕಾಲಗರ್ಭದಲ್ಲಿ ಇದೆ.

ಜೀವನ ನಿರ್ವಹಣೆಯ ಉದ್ಯೋಗ—ಕೃಷಿಯೆನ್ನಿ, ವ್ಯಾಪಾರವೆನ್ನಿ, ಯಾವುದೇ ಬಗೆಯ ನೌಕರಿ–ವ್ಯವಹಾರವೆನ್ನಿ–ಒಬ್ಬನ ಶೋಷಣೆ ಇನ್ನೊಬ್ಬನಿಂದ, ಇನ್ನೊಬ್ಬನ ದ್ದು ಮತ್ತೊಬ್ಬನಿಂದ ನಡೆಯುತ್ತಾ ಇದೆ —ಪಟಾಕಿಸರದಲ್ಲಿ ಒಂದಕ್ಕೆ ಬೆಂಕಿ ಕೊಟ್ಟಂತೆ. ನಾವು ಭಾರತೀಯರು. ಕರ್ಮ ಭೂಮಿ ಸಂಜಾತರು, ಪ್ರಪಂಚಕ್ಕೆ ಪಂಚ ಶೀಲವನ್ನು ಬೋಧಿಸುವ ಗುತ್ತಿಗೆದಾರರು. ಶೋಷಣೆಯ ಮಡುವಿನಲ್ಲಿ ಈಜಾಡುತ್ತಿದ್ದೇವೆ. ದಡ ದೊರಕದ ವೈತರಣಿ ನಮಗೆ ಪ್ರಾಪ್ತಿಯಾಗಿದೆ. ವರ್ಷವರ್ಷಕ್ಕೆ ಹೊಸ ಹೊಸ ಕಾನೂನುಗಳನ್ನು ಸೃಷ್ಟಿಸಿ, ಈ ಸಂಕೋಲೆಯ ಚೀರಟಿಹುಳುವಾಗಿದ್ದೇವೆ. ಮನುಷ್ಯನ ಬೆಲೆ ಎಷ್ಟಕ್ಕೆ ತಲುಪಿದೆ? ಇವನಷ್ಟು ಅಗ್ಗದ ಯಾವ ವಸ್ತುವೂ ನಮ್ಮ ಮಾರುಕಟ್ಟೆಯಲ್ಲಿ ದೊರಕಲಾರದು, ಇಂದು ಎಲ್ಲಾ ವಸ್ತುಗಳ ಸೃಷ್ಟಿಗೆ ವತ್ತಾಯವಿದೆ; ಬೇಡಿಕೆಯಿದೆ; ಮನುಷ್ಯ ಸೃಷ್ಟಿ ಸಾಕು—ಎಂಬಷ್ಟಕ್ಕೆ ತಲುಪಿದೆ ಪರಸ್ಪರ ಕೋಷಣೆಯು ಇಪ್ಪತ್ತೊಂದನೇ ಶತಮಾನದ ಆದಿಗೆ ಎಲ್ಲಿಗೆ ತಲಪೀತು? ನಮ್ಮ ಅಂಗಡಿಗಳಲ್ಲಿ ಮಾನವನ ಎಲುಬಿನ ಕಿರಿಮಣಿಗಳು ದೊರಕುತ್ತವೆ. ಮಕ್ಕಳ ಚರ್ಮದ ಸೂಟ್‌ಕೇಸ್ ದೊರಕುತ್ತದೆ. ಬಾಣಂತಿ ತಲೆ ಬುರುಡೆಯ "ಪರ್ಸ್‌ಗೇ" ನಮ್ಮ ಮೇಜನ್ನು ಅಲಂಕರಿಸುತ್ತದೆ ನಮ್ಮ ಹೊಟೇಲುಗಳು "ಮಾನವನ ಮಾಂಸದ ಅಡುಗೆ ಸಿದ್ಧವಾಗಿದೆ" ಎಂಬ ಹಲಗೆಯನ್ನು ತೂಗಿಸುತ್ತವೆ. ಆಶ್ಚರ್ಯವಡಬೇಕಾಗಿಲ್ಲ. ನಮ್ಮ ಮಾನವ ಪ್ರೇಮ ಸಂಘಜೀವನದ ಸವಿ ಮುಗುಳ್ನಗೆಯಲ್ಲೇ ಅಷ್ಟು ಎತ್ತರಕ್ಕೆ ಏರಿದೆ. ಸಾತ್ವಿಕ ಗುಣವನ್ನು ಬೆಳೆಸಿಕೊಳ್ಳುವುದೇ ಅಪಾಯವಾಗಿದೆ. ಕನ್ನಡಿ ಹಾವಿನಂತಹ ಸ್ವಲ್ಪ ವಿಷವಿದ್ದಿದ್ದರೂ ಕಪ್ಪೆಗಳು ಬದುಕುತ್ತಿದ್ದುವು. ಕಗ್ಗತ್ತಲೆಯಲ್ಲೂ ಕಪ್ಪೆಯನ್ನು ಹಿಡಿದು ಹಿಡಿದು ಚೀಲಕ್ಕೆ ತುಂಬುವಷ್ಟು ಮನುಷ್ಯ ಮುಂದರಿದಿದ್ದಾನೆ. ಸಾತ್ವಿಕರು ಇನ್ನು ಮುಂದೆ ಬದುಕಲಾಪರು ಎಂಬುದಕ್ಕೆ ನವ್ಯಧ್ವನಿಯ ದೃಷ್ಟಾಂತವಾದೀತೋ ಏನೋ!

ಆದರ್ಶಕ್ಕಾಗಿ ಬದುಕಬೇಕೆ? ಬದುಕೆದುದೇ ಆದರ್ಶವಾಗಬಲ್ಲುದೇ? ಸಾವಿರ ದಾಸರು, ಶರಣರು ಬೋಧಿಸಿದ್ದಾರೆ–ಜೀವನ ಅಸ್ಥಿರನೆಂದು, ತಾಳ ತಂಬೂರಿ ವಿರಹತರಾಗಿ ಮತ್ತೊಂದು ಸೇರಿಸಬಹುದೊ ಏನೋ! 'ಜೀವನ ಅಸಫಲ' ಎಂದು ಸಾಹಿತ್ಯ, ಕಲೆ, ಶಿಕ್ಷಣ, ಯಾವುದೇ ಘನ ಉದ್ದೇಶವುಳ್ಳ ಚೈತನ್ಯ ಸ್ವರೂಪ ಜ್ಞಾನಗಳು ಈ ನೆಲದಲ್ಲಿ ಹೈಗೆಯ ಮೇಲೆ ಎಣ್ಣಿ ಸುರಿದಂತೆ. ನಮ್ಮ ಸಂಘಜೀವನ ಒಳ್ಳೇದಿಲ್ಲ. ಒಬ್ಬನ ಬದುಕಿಗೆ ಇನ್ನೊಬ್ಬನು ಮಾನ್ಯತೆಯನ್ನು ನೀಡುವುದಿಲ್ಲ. ಒಬ್ಬನನ್ನು ಸೋಲಿಸಲಿಕ್ಕೆ ಮತ್ತೊಬ್ಬ ಹಾತೊರೆದು ತನ್ನ ಜಾಲವನ್ನು ಪಸರಿಸಿರುತ್ತಾನೆ; ಆ ಜಾಲದಲ್ಲ ಬಿದ್ದವನು ಇನ್ನೊಬ್ಬನಿಗಾಗಿ ತನ್ನ ಬಲೆ ಬಿಟ್ಟಿರುತ್ತಾನೆ. ಕೊನೆಯಿಂದ ಕೊನೆಗೂ ನಾವು ಮನುಷ್ಯರಾಗಿ ಬಾಳುವ ಲಕ್ಷಣ ಕಂಡು ಬರುವುದಿಲ್ಲ. ಇವು ಅತಿಶಯೋಕ್ತಿಗಳೇ? ಅನುಭವರಾಹಿತ್ಯ ಶುಷ್ಕ ಆರೋಪಗಳೇ? ಬೀಸುವ ದೊಣ್ಣೆಗೆ ಎಲ್ಲರೂ ತಲೆಯೊಡ್ಡಿದ್ದೇವೆ. ಕುತ್ತಿಗೆಯ ಬಲವನ್ನು ಹೊಂದಿ ತಪ್ಪಿಸಿಕೊಳ್ಳುತಿದ್ದೇವೆ. ಯುಗಯುಗಗಳಿಂದ ಕೂಲಿಕಾರರಾಗಿ ಹುಟ್ಟಬಂದ ಸಂತತಿಗಳು ಇಂದಿಗೂ ಕೂಲಿಕಾರರಾಗಿಯೇ ಬದುಕಿವೆ. ಒಕ್ಕಲು ಮಕ್ಕಳಾಗಿಯೇ ಬಾಳವೆ. ಆತನೆಂದೂ ಗಂಡಸಾದುದಿಲ್ಲ. "ಆವಶ್ಯಮ್ ಪಿತರಾಚಾರಮ್" ಎಂದು ನಂಬಿ ಕೃಷಿ ಕರ್ಮವನ್ನೇ ತಲೆಮಾರಿನಿಂದ ತಲೆಮಾರಿಗೆ ಮಾಡುತ್ತಾ ಬಂದ ಸಂತತಿಗಳೆಷ್ಟೋ ಇವೆ. ಇಂದಿಗೂ ಆ ವರ್ಗ ಊರ್ಜಿತದಲ್ಲಿದ್ದಂತೆ ಕಾಣುವುದಿಲ್ಲ. ಅದರ ಸಾಲದ ಮಡುವು ವಿಸ್ತಾರವಾಗಿಯೇ ಇದೆ. ಆಲ್ಲಿಂದ ಕಿತ್ತು ಇಲ್ಲಿಗೆ, ಇಲ್ಲಿಂದ ಕಿತ್ತು ಅಲ್ಲಿಗೆ ಪ್ಲಾಸ್ಟಿಕ್ ಸರ್ಜರಿ ಮಾಡುತ್ತಾ ಬಂದಿವೆ. ವ್ಯಾಪಾರ ವೂರ್ಗವನ್ನವಲಂಬಿಸಿ ಹೊರಟವನು ಆರೆಂಟು ವರ್ಷಗಳಲ್ಲೇ ಲಕ್ಷಾಧೀಶನಾದುದನ್ನು ಕಣ್ಣಾರೆ ಕಾಣುತ್ತೇವೆ. ಸಾವಿರ ಮುಡಿ ಅಕ್ಕಿಯ ಹುಟ್ಟುವಳಿಯ ಮನೆಗೆಷ್ಟು ನೆಲಸಮವಾದುವು? ಜೋಪಡಿ ಅಂಗಡಿಗಳೆಷ್ಟು ಬಂಡಸಾಲೆಗಳಾದುವು? ನಮ್ಮ ಸಮಾಜ ಪುರುಷನ ಹೊಟ್ಟೆ ಬಹಳಷ್ಟು ಬೆಳೆದಿದೆ. ಕೈಕಾಲು, ತಲೆ ಸೊರಗಿದೆ. ಈ ದೇಹ ಬಹಳ ದಿನ ಬದುಕೀತೆ? ಹಳ್ಳಿ ಹಳ್ಳಿಯ ಕೃಷಿ ಕರ್ಮಿಗಳ ಬಡತನ ಬಿತ್ತರಿಸುವುದಕ್ಕೆ ಸಾವಿರವುಂಟು. ಇರಲೊಂದು ಮನೆ, ಹಾಸಿಹೊದೆಯಲು ಸಾಕಷ್ಟು ಬಟ್ಟೆ ಬರೆಯಿಲ್ಲದವರೂ ಅಸಂಖ್ಯಾತರಿದ್ದಾರೆ. ಸಾಮಾನ್ಯ ವ್ಯಾಪಾರಿಯೂ ಬಂಗಲೆ, ಕಾರು ಮುಂತಾದ ಆಧುನಿಕ ಸನಲತ್ತುಗಳನ್ನು ಪಡೆದಿರುತ್ತಾನೆ. ದೇಶದ ಸಂಪತ್ತು ಶ್ರಮ. ಗಾಂಧಿತಾತ ಅಂದಿದ್ದಾರೆ 'ಶ್ರಮವು ಅಮೂಲ್ಯ' ಎಂದು. ಅಂತಹ ಅಮೂಲ್ಯ ಸಂ

(ಮುಂದಕ್ಕೆ ಮುಂದನೇ ಪುಟ ನೋಡಿ)

Edited, Printed & Published by K. H. Shetty at the Navayuga Press, Udipi, S. India.

ಲೇಖಕರು :
ಶ್ರೀ ಗೌರೀಶ ಕಾಯ್ಕಿಣಿ

ನಿರುದ್ಯೋಗದ ನಯಾ ಪ್ರಶ್ನೆ

ರಾಜ್ಯಕೀಯ ದಾಂಧಲೆಯಂಚಲ್ಲೇ ಮೈಮರೆತವರಿಲ್ಲರೂ ಈಗ ನಿರುದ್ಯೋಗ ಪ್ರಶ್ನೆಯನ್ನು ದೊಡ್ಡದೆನ್ನ ಹೊರಟಿದ್ದಾರೆ— ಇದನ್ನು ನಿರ್ಮೂಲಿಸಲು ಸಲಹೆ ನೀಡತೊಡಗಿದ್ದಾರೆ. 'ದೀ ಕಾಲಂನ್ಸ್' ದಾಸ್ಯವೇ ಪರಮ ಸುಖವೆಂಬ ನಮ್ಮ ಯುವಜನರ ಮನೋಭಾವ ಬದಲಾಗದೆ ಹೋದರೆ, ಈ ಪೆಡಂಭೂತದ ಕಾಟ ದೂರವಾಗುವುದಿಲ್ಲ.

ನಮ್ಮ ದೇಶದ ಅತಿ ಅಗತ್ಯದ ಮತ್ತು ಮಹತ್ವದ ಸಮಸ್ಯೆ ಯಾವುದು? ಇಂದಿರಾ ಜಿಯ ಸರ್ಕಾರವನ್ನು ಉರುಳಿಸುವುದೇ? ಕೋಮುವಾರು ದೊಂಬಿಗಳನ್ನು ಕೊನೆಗಾಣಿಸುವುದೇ? ಕಮ್ಯುನಿಸ್ಟರ ವಿರುದ್ಧ ದೇಶದಾದ್ಯಂತ ಸರ್ವಪಕ್ಷೀಯ ಸಂಯುಕ್ತರಂಗವನ್ನು ಕಟ್ಟುವುದೇ? ಅಣುಬಾಂಬು ತಯಾರಿಸುವದೇ? ಚೀನ ಪಾಕಿಸ್ತಾನಗಳೊಂದಿಗೆ ಸಂಧಾನ ಮಾಡಿಕೊಳ್ಳುವದೇ? ಎಲ್ಲ ರಾಜಕೀಯ ಪಕ್ಷಗಳನ್ನೂ ವಿಸರ್ಜಿಸಿ ಜನರಲ್ ಕಾರ್ಯಪ್ಪನವರನ್ನೂ ಇತರ ನಿವೃತ್ತ ಸೇನಾಪತಿಗಳನ್ನೂ ಕರೆಯಿಸಿಕೊಂಡು ರಾಷ್ಟ್ರಾಧ್ಯಕ್ಷರು ಒಂದು ಸೈನಿಕ ಶಿಸ್ತಿನ ರಾಷ್ಟ್ರೀಯ ಸರಕಾರವನ್ನು ಕಟ್ಟಿ ಕೆಲಕಾಲ (೧೦ ವರ್ಷ?) ಆಡಳಿತ ನಡೆಸುವದೇ?

ಅಲ್ಲ. ಇದಾವುದೂ ಅಲ್ಲ. ಕಳೆದ ಜುಲೈ ೫ನೆಯ ದಿನಾಂಕಕ್ಕೆ ರಾತ್ರೆ ರಾಷ್ಟ್ರಾಧ್ಯಕ್ಷ ಶ್ರೀ ಗಿರಿಯವರು ಓಡಿಸಾದಲ್ಲಿ ಗೋಪಾಲಪುರದ ರೋಟರಿ ಮತ್ತು ಲೈನ್ಸ್ ಕ್ಲಬ್ಬುಗಳ ಸಂಯುಕ್ತ ಭೋಜನಕೂಟವೊಂದರಲ್ಲಿ ಮಾತನಾಡುತ್ತಾ ಅಪ್ಪಣೆ ಕೊಡಿಸಿದರು: "Unemployment is the problem of problems." ದೇಶದ ಸಮಸ್ಯೆಗಳಲ್ಲಿಯೇ ಮಿಗಿಲಾದ ಸಮಸ್ಯೆ ನಿರುದ್ಯೋಗದ್ದು. ರಾಷ್ಟ್ರಪತಿಗಳ ಅಭಿಪ್ರಾಯದಂತೆ ಇಂದಿನ ಅರಾಜಕತೆ, ನಕ್ಸಲೀಯ ಕೋಲಾಹಲ ದಂಗೆ ದೊಂಬಿ ಮುಂತಾದುವುಗಳಿಗೆಲ್ಲ ಈ ನಿರುದ್ಯೋಗವೇ ಮೂಲ. "Educated youth are leprived of all deserving comforts and their growing discontent has given scope for the speedy growth of Naxalism." "ಇಂದು ಸುಶಿಕ್ಷಿತ ಯುವಜನರಿಗೆ ನ್ಯಾಯವಾಗಿ ಸಲ್ಲಬೇಕಾದ ಸುಖ ಸೌಕರ್ಯಗಳನ್ನು ಅಲ್ಲಗಳೆಯಲಾಗುತ್ತಿದೆ. ಅವರ ಬೆಳೆಯುತ್ತಿರುವ ಅಸಂತೋಷವು ನಕ್ಸಲೀಯವಾದ ಭರದಿಂದ ಸೆಳೆಯಲು ಅವಕಾಶ ಮಾಡಿಕೊಟ್ಟಿದೆ."

ಈ ಗಂಭೀರ ವಿಶ್ಲೇಷಣೆ ಒಬ್ಬ ಹೊಣೆಗೆಟ್ಟ ಪತ್ರಿಕೋದ್ಯಮಿಯದಲ್ಲ. ಕೆಂಡ ಉಗುವ ಕಮ್ಯುನಿಸ್ಟ ಅಥವ ಕೂಲಿಕಾರ ಮುಂದಾಳಿನದೂ ಅಲ್ಲ. ಯಾವುದೇ ತರುಣ ತುರ್ಕನ ತುಂಟಾಟಿಕೆಯ ಮಾತೂ ಅಲ್ಲ. ಜೀವಮಾನವೆಲ್ಲ ಕಾರ್ಮಿಕರ, ದೀನ ದಲಿತರ ಸೇವೆಯಲ್ಲಿ ಸವೆಯಿಸಿದ ಜನತೆಯ ನಾಡಿ ಮಿಡಿತಕ್ಕೆ ಸದಾಕಾಲವೂ ಕಿವಿಗೊಟ್ಟು ದುಡಿಯುತ್ತಾ ಬಂದ ಒಬ್ಬ ಹಿರಿಯ ಮುತ್ಸದ್ದಿಯ ಮಾತಿದು.

ಈ ಸಮಸ್ಯೆಯ ಕುರಿತು ಶ್ರೀ ಗಿರಿಯವರಿಗೆ ಚಿಂತೆ ಇದ್ದಂತೆ ಗಾಬರಿಯಿಲ್ಲ. ಈ ವಿಷಯದ ಕೂಲಂಕಷ ವಿವೇಚನೆ ಆಲೋಚನೆ ಅವರು ಮಾಡಿದ್ದಾರೆ. "ಲಕ್ಷಾಂತರ ಜನಕ್ಕೆ ಕೆಲಸ" ಎಂದು ಈ ಬಗೆಗೆ ಒಂದು ಗ್ರಂಥವನ್ನು ಅವರು ಇತ್ತೀಚೆಗೆ ಪ್ರಕಟಿಸಿದ್ದಾರೆ. ಇತ್ತೀಚೆಗೆ ಜಿನೇವಾಕ್ಕೆ ಅಂತಾರಾಷ್ಟ್ರೀಯ ಕಾರ್ಮಿಕರ ಸಮ್ಮೇಳನಕ್ಕೆ ಅವರು ಹೋದಾಗಲೂ ಅವರು ಇದೇ ವಿಷಯವನ್ನಿಟ್ಟುಕೊಂಡು ಭಾಷಣಮಾಡಿದ್ದುಂಟು. ನಮ್ಮ ರಾಷ್ಟ್ರಪತಿಗಳ ಜಾಗೃತ ಪ್ರಜ್ಞೆಯ ತಾಳಕ್ಕೆ ಈ ಬೃಹದಾಕಾರದ ನಿರುದ್ಯೋಗದ ಕರಾಳ ಸಮಸ್ಯೆಯ ಅರಿವು ಉರಿಯುತ್ತಿರುವುದೆಂಬುದು ದೇಶದ ಕಲ್ಯಾಣಕ್ಕೆ ಜನತೆಯ ಕ್ಷೇಮಕ್ಕೆ ಮತ್ತು ರಾಷ್ಟ್ರದ ಅಭಿವೃದ್ಧಿಯ ಆಶ್ವಾಸನೆಗೆ ಒಂದು ಆಶಾಕಿರಣ.

ರಾಷ್ಟ್ರಪತಿ ಗಿರಿಗಳ ಆದಮ್ಯ ಆಶಾವಾದವು ಈ ಕುರಿತು ಈ ರೀತಿಯಲ್ಲಿ ವ್ಯಕ್ತವಾಗಿದೆ: The unemployment problem can be solved within ten years, if every inch of land is exploited and cottage industries at every house are established, besides starting pilot projects (to irodicate unemployment) in eveay district"— ದೇಶದಲ್ಲಿಯ ಅಂಗುಲ ಅಂಗುಲ ನೆಲವನ್ನು ಬಳಸಿಕೊಂಡರೆ ಮನೆಮನೆಗೂ ಒಂದೊಂದು ಗ್ರಾಮೋದ್ಯೋಗವನ್ನು ಸ್ಥಾಪಿಸಿದರೆ, ಪ್ರತಿ ಜಿಲ್ಲೆಯಲ್ಲಿಯೂ ನಿರುದ್ಯೋಗ ನಿವಾರಣೆಗಾಗಿ ಪೈಲಟ್ ಯೋಜನೆಗಳನ್ನೂ ಜತೆಗೆ ಆರಂಭಿಸಿದರೆ ೧೦ ವರ್ಷಗಳಲ್ಲಿ ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವೆಮೆ."

ಆದರೆ ಇದೆಲ್ಲ ಕೆಲಸ ಹೇಗೆ ನಡೆಯಬೇಕು? "on war footing"—ಯುದ್ಧದ ಭೂಮಿಕೆಯಿಂದ ಕಾರ್ಯ ನಿರ್ವಹಿಸಬೇಕಾಗಬೇಕು. ಅದಕ್ಕಾಗಿ ನಾಲ್ಕನೆಯ ಸಂಚವಾರ್ಷಿಕ ಯೋಜನೆಯನ್ನು ತಿದ್ದಿ ಬದಲಿಸಬೇಕು.—ಎಂದು ಹಿಂದಿನ ಕೇಂದ್ರ ಮಂತ್ರಿ ಶ್ರೀ ಮನುಭಾಯಿ ಶಾಹ ಅವರು ಹೇಳುತ್ತಾರೆ. ಸಿಂಡಿಕೇಟ್ ಕಾಂಗ್ರೆಸ್ಸಿನ ಅಖಿಲಭಾರತೀಯ ಸಮಿತಿಯ ಹೊಸದಿಲ್ಲಿಯ ಅಧಿವೇಶನದಲ್ಲಿ ಅವರು ಈ ಕುರಿತು ಗೊತ್ತುವಳಿಯನ್ನು ಮಂಡಿಸಿದರು. (ಕೃತಿ ಏನೇ ಆಗಿರಲಿ ಬಿಡಲಿ ಸಿಂಡಿಕೇಟ್ ಇಂಡಿಕೇಟ್‌ಗಳು ಗೊತ್ತುವಳಿಗಳಲ್ಲಿಯೇ ಒಬ್ಬರನ್ನೊಬ್ಬರು ತೀವ್ರತೆಯಲ್ಲಿ ಮೀರಿಸುವ ಸ್ಪರ್ಧೆ ನಡೆಯಿಸುತ್ತಿರುವಂತಿದೆ! ಅವರು ಉಭಯತರೂ ಒಬ್ಬರ ವಸ್ತ್ರಾಪಹರಣ ಒಬ್ಬರು ಮಾಡಲು ಹೆಣಗಾಡುತ್ತಿದ್ದಾರೆ!)

ರಾಷ್ಟ್ರೀಯ ದಿನಕೂಲಿ ನಿಧಿ, ಕಲಿತ ನಿರುದ್ಯೋಗಿಗಳಿಗೆ ಕೆಲಸ ಪೂರೈಸಲಿಕ್ಕೆ ರಾಜ್ಯ ಸರ್ಕಾರಗಳ ಸಹಕಾರದಿಂದ ಒಂದು ರಾಷ್ಟ್ರೀಯ ಕಾರ್ಪೊರೇಶನ್ ಸ್ಥಾಪಿಸಬೇಕು ಎಂದೆಲ್ಲ ಶ್ರೀ ಶಾಹ ಅವರು ಸೂಚಿಸಿದ್ದಾರೆ. ಇನೆಯ ಯೋಜನೆಯು ವಿಶೇಷವಾಗಿ ಎಂಜಿನಿಯರಿಂಗ್, ವೈದ್ಯಕೀಯ ಇತ್ಯಾದಿ ಶಿಕ್ಷಣ ಪಡೆದವರಿಗೆ ಉದ್ಯೋಗ ಕಲ್ಪಿಸುವದರಲ್ಲಿ ಅಸಮರ್ಥವಾಗುವದೆಂದು ಅನಿಸುತ್ತಿದೆ.

ವಸ್ತುಸ್ಥಿತಿಯೇನೆಂದರೆ. ಆರ್ಥಿಕ ವಿಕಾಸದ ವೇಗವು ಮಂದವಾಗಿದೆ. ಅದು ಭರದಿಂದ ಬೆಳೆಯಬೇಕು. ಇಲ್ಲವಾದರೆ ಮೊದಲೆ ಬಿಕ್ಕಟ್ಟಿಗೀಡಾದ ನಿರುದ್ಯೋಗ ನಿವಾರಣೆಯ ವಿಷಯ ಇನ್ನೂ ಹೆಚ್ಚು ಹೆಚ್ಚು ತೊಡಕಿಗೆ ಗುರಿ ಆಗದಿರದು.

'ಬುಭುಕ್ಷಿತಃ ಕಿಂ ನಕರೋತಿ ಪಾಪಂ?|
ಕ್ಷೀಣಾಃ ನರಾಃ ನಿಷ್ಕರುಣಾ ಭವಂತಿ||' ಎಂದ ಸುಭಾಷಿತಕಾರ ಮಾರ್ಕ್ಸ್‌ವಾದಿಯೂ ಇದ್ದಿಲ್ಲ ಮಾವೋವಾದಿಯೂ ಆಗಿದ್ದಿಲ್ಲ!

ಆರ್ಥಿಕ ಪ್ರಗತಿಯೊಂದು ಮಗ್ಗಲು. ಇನ್ನೊಂದು ಮಗ್ಗಲು ಶಿಕ್ಷಣ ಪಡೆದವರು ಮತ್ತು ಅವರಿಗೆ ಒದಗಬಲ್ಲ ಕೆಲಸಗಳು. ಇವೆರಡರ ತಾಳಮೇಳ ಕೂಡಿಸುವ ದಕ್ಷತೆ ಇಟ್ಟುಕೊಳ್ಳುವದು. ಆ ದಕ್ಷತೆ ನಮ್ಮ ಅಧಿಕಾರ ಮೋಹಿತ ರಾಜಕೀಯ ಧುರೀಣರು ಆಡಳಿತೆಗಾರಿಕೆಯ ನಿರ್ವಹಣೆಯಲ್ಲಿ ಸಾಕಷ್ಟು ಇಟ್ಟುಕೊಂಡಂತೆ ಇಲ್ಲ. ಆದ್ದರಿಂದ ನಿರುದ್ಯೋಗದ ಸಮಸ್ಯೆ ಇನ್ನಿಷ್ಟು ಉಗ್ರವಾಗಿದೆ.

ಈ ಗೊಂದಲಗೆಟ್ಟ ಪರಿಸ್ಥಿತಿಯ ಹೆಚ್ಚಿನ ಹೊಣೆ ಕಳೆದ ೩೨ ವರ್ಷ ಸತ್ತಾರೂಢವಾಗಿರುವ ಕಾಂಗ್ರೆಸಿನ ತಲೆಯ ಮೇಲೆಯೇ ಇದೆ. ಆದೀಗ ಕವಲೊಡೆದು ಒಬ್ಬರನ್ನೊಬ್ಬರು ದೂಷಿಸ ಬಹುದು, ದ್ವೇಷಿಸ ಬಹುದು. ಆದರೆ ಈ ಪಾತಕದ ಕಲಂಕ ಅನಿಭಕ್ತಿ ಕಾಂಗ್ರೆಸ್ಸಿನ ಹಣೆಗೇ ಬಡಿಯುವುದು. ಆದ್ದರಿಂದ ಸದ್ಯ ನತ್ತೆಯಿಂದ ಭ್ರಷ್ಟರಾದ ಮಾತ್ರಕ್ಕೆ ಸಿಂಡಿಕೇಟ್ ಶ್ರೇಷ್ಠಿಗಳು ಈ ಪಾಪದ ಹೊಣೆಯನ್ನು ತಪ್ಪಿಸಿಕೊಳ್ಳುವಂತೆ ಇಲ್ಲ.

ಇತ್ತೀಚೆಗೆ ಹೊಸದಿಲ್ಲಿಯಲ್ಲಿ ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆಸೇರಿತು. ಆದರಲ್ಲಿ ಎಂಜಿನಿಯರಿಂಗ್ ಪದವೀಧರರೂ ಡಿಪ್ಲೊಮೊಧಾರಿಗಳೂ ವಿಶೇಷ ತರಬೇತಿಯ ಕೆಲಸಗಾರರೂ ಜನ್ಮ ಕಾಲ ಮೇಲೆ ತಾವು ನಿಲ್ಲಲು ಸಾಧ್ಯವಾಗುವಂತೆ ಇಂಥವರಿಗೆ ಯಾವ ಶಿಕ್ಷಣ ನೀಡಬಹುದೆಂಬುದರ ಬಗೆಗೆ ಈ ಸಭೆಯಲ್ಲಿ ಜರ್ಜಿ ನಡೆಯಿತು. ಇಂಥವರಿಗಾಗಿ ಎಪ್ರೆಂಟೀಸ್ (ಉಮೇದವಾರಿ) ಯೋಜನೆಯನ್ನು ವಿಸ್ತರಿಸಬೇಕೆಂದು ನಿರ್ಣಯಿಸಲಾಯಿತು. ಈ ಯೋಜನೆಯ ಹೊಣೆ ಉದ್ದಿಮೆವಾರರ ಹೆಗಲಿಗೇರಿಸಿ ಅವರ ನೆಚ್ಚಿನ ಕೆಲಸಂಪ ಕೇಂದ್ರ ಸರಕಾರ ಹೊರಬೇಕೆಂದೂ ತೀರ್ಮಾನವಾಯಿತು. ಆದರೆ ಇದೆಲ್ಲ ಜ್ವಾಲಾಮುಖಿಯ ಮುಖಕ್ಕೆ "ಪೌಡ್ಡರ್" ಹಚ್ಚಿ ಅದನ್ನು ಗುಣಪಡಿಸಲು ಹೊರಟಂತೆ!

ಇತ್ತ ಇಂದಿನ ಶಿಕ್ಷಣ "ಅರ್ಥಕರ"ವಲ್ಲ. ಅದರಿಂದ ಕೆಲಸಗಾರಿಕೆಗೆ ಉತ್ತೇಜನ ಇಲ್ಲ. ಕೇವಲ ಕಾಗದಕೂನರ ಪಡೆಗಳು ಬೆಳೆದು ಯಾರಿಗೂ ಜಾಕರಿ ಸಿಗದಂತೆ ಆಗುತ್ತಿದೆ. ಎನ್ನುವ ಹುಯಿಲು; ಅತ್ತ ಈಗಲೂ ರಾಲೆ ಕಾಲೇಜುಗಳ ಬಾಗಿಲಿಗೆ ಹೆಸರು ಹಚ್ಚಿಸಿಕೊಳ್ಳುವ ತರುಣರ ಕ್ಯೂ ಹರವಾರಿಗೆ ಟ್ಟಲೆ! ಎಲ್ಲ ಬಗೆಯ ಕಾಲೇಜುಗಳ ಬಾಗಿಲಿಗೂ ಈ ಪ್ರವೇಶಾರ್ಥಿಗಳ ಮರುಳು ಜಾತ್ರೆ ಕಿಕ್ಕಿರಿದಿದೆ.

ಬಿಹಾರ ರಾಜ್ಯದಲ್ಲಿ ೮೭ ಸಾವಿರ ವಿದ್ಯಾರ್ಥಿಗಳು ಮಾಧ್ಯಮಿಕ ಶಾಲಾಂತ ಪರೀಕ್ಷೆ ತೇರ್ಗಡೆ ಮಾಡಿದರು; ಇಂಜಿನಿಯರರ ನಿರುದ್ಯೋಗ ಹೆಚ್ಚುತ್ತಿದ್ದರೂ ಅಲ್ಲಿ ಎಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶಾರ್ಥಿಗಳ ಸಂಖ್ಯೆ ಕುಗ್ಗಲಿಲ್ಲ. ಜಮ್ಮು ಕಾಶ್ಮೀರದಂಥ ಚಿಕ್ಕರಾಜ್ಯದಲ್ಲಿ ೧೩ ಸಾವಿರ ಮಕ್ಕಳು ಶಾಲಾಂತ ಪರೀಕ್ಷೆಮುಗಿಸಿ ನಿಂತಿದ್ದಾರೆ— ಕಾಲೇಜುಗಳ ಬಾಗಿಲಲ್ಲಿ! ಅಲ್ಲಿ ಎಂಜಿನಿಯರಿಂಗ್ ನೌಕರಿಇಲ್ಲವೆಂದು ಸುಮಾರುಮಂದಿ ವಿದ್ಯಾರ್ಥಿಗಳು ಮೆಡಿಕಲ್ ಶಿಕ್ಷಣದತ್ತ ಸುಗ್ಗುತ್ತಿದ್ದಾರೆ. ಲಕ್ಷಗಳಿಗೆ ೨೦೦೦ ಆರ್ಜಿಗಳು ಪ್ರವೇಶಕ್ಕಾಗಿ ಬಂದಿವೆ! ಈ ಪ್ರವೇಶಕ್ಕಾಗಿ ನೂರಕ್ಕೆ ೪೫ ಗುಣಗಳ ಆಗತ್ಯವಿತ್ತು. ಈ ಪ್ರಮಾಣ ಈಗ ನೂರಕ್ಕೆ ೫೦ರ ಗುಟ್ಟಕ್ಕೆ ಏರಿಸಬೇಕಾಯಿತು!

ಜೆಂಗಳೂರು ಮಟ್ಟಿಗೆ ಇಂದು ಎಂಜಿನಿಯರಿಂಗ್ ಶಿಕ್ಷಣದ ಆಕರ್ಷಣೆ ಕಡಿಮೆ ಆಗಿದೆ. ಇದಕ್ಕೆ ಒಂದು "ಸಾಕ್ಷಿ ಚಿತ್ರ" ಇಲ್ಲಿದೆ. ಒಂದು ಖಾಸಗೀ ಎಂಜಿನಿಯರಿಂ

(ಮುಂದಿನ ಪುಟಕ್ಕೆ ನೋಡಿರಿ)

ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,
ಉತ್ತಮ ವಜ್ರಗಳು
ಆಗಾಗ್ಗೆ ಹೊಸ ಹೊಸ ಸ್ಟೋಕ್‌ನಿಂದ
ಕೊಲಿಟಿಯಲ್ಲಿ, ಸ್ಯಾಜಿನಲ್ಲಿ, ಕ್ರಯವಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂಟಾ ಕೆರೆಟ ತೂಕವಲ್ಲಿ
ಬೇಕಾದವರು ಮುಂದಾಗಿ ಬಂದು ಪಡೆಯಬಹುದು.
ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

ಇಂದಿರಾ ಗಾಂಧಿ ಪ್ರಧಾನಿಯಾಗಿರುವದು ದೇಶಕ್ಕೆ ಒಳ್ಳೆಯದು ಎಂದು ಬೆಂಬಲ ಕೊಡುವವರನ್ನು ನಿಮ್ಮ ಮಂಡಿಗೆ—ಅವಕಾಶವೇ ಅವರಿಗಿಲ್ಲ (ಅನಾಮಧೇಯ ಪತ್ರವೊಂದರಿಂದ)

ಸ್ವಾತಂತ್ರ್ಯವಂಚಿತ ಹಸುಳೆಗಳು

ಸ್ವಾತಂತ್ರ್ಯಾನಂತರ ಅಧಿಕಾರಕ್ಕೆ ಬಂದವರು ಯುವಜನಾಂಗದನ್ನು ವಶಪಡಿಸಿಕೊಳ್ಳುವಿಕೆಯಿಂದ ನೋಡುತ್ತಲೇ ಬಂದರು. ಸ್ವಾತಂತ್ರ್ಯ ಪ್ರಾಪ್ತಿಗಾಗಿ ಹೋರಾಡುವ ಭಾಗ್ಯ ಇವರಿಗೆ ದಕ್ಕಲಿಲ್ಲ. ಹದಿನೆಂಟರ ಯುವಜನಾಂಗಕ್ಕೆ ಮತಾಧಿಕಾರ ಕೊಡಲು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಹಿಂದೆ ಮುಂದೆ ನೋಡುತ್ತಾರೆ. ಸ್ವಾತಂತ್ರ್ಯಾನಂತರ ಹುಟ್ಟಿಬಂದ ಹಸುಳೆಗಳು ಅಪರೋಕ್ಷವಾಗಿ ಸ್ವಾತಂತ್ರ್ಯದಿಂದ ವಂಚಿತರಾಗುತ್ತಿವೆ. ಇದು ನ್ಯಾಯವಲ್ಲವೆನ್ನುತ್ತಾರೆ—

ಲೇಖಕರು

ಶ್ರೀ ಶಿವಶಂಕರ

"ಒರಡರ ನಂತರ ಈಗಲ್ಲ. ನೂರರ ನಂತರ ಬೇಕೆಲ್ಲ." ಇಂದಿರಾ ಗಾಂಧಿ ನೆಹ್ರೂರವರ ಇಪ್ಪಿಡಾದ ಸ್ವರ. ಆದರೂ ಜನ ಸಂಖ್ಯೆ ಜೆಚ್ಚಾಗುತ್ತಾ 'ಇದೆ. ಎಲ್ಲಿ ನೋಡಿದರೂ ಉದ್ದನೆಯ ಸಾಲುಗಳು.ಮೂತೆಯರ ಮಡಿಲಲ್ಲಿ ಮಕ್ಕಳು ಇದ್ದೇ ಇವೆ. ಮಕ್ಕಳ ಕಿರಿಕಿರಿಯನ್ನು ಕೇಳಿ ಬೇಸತ್ತ ತಾಯಿ—ತಂದೆ 'ಸತ್ತೀಹೋಗು' ಆಶೀರ್ವಾದ ಮಾಡುತ್ತಾರೆ; ಯಾಕೆ ಹುಟ್ಟಿದೆಯೋ.... ರಾಗವೆಳೆಯುತ್ತಾರೆ. ಇಂದಿರಮ್ಮನೂ ಇದಕ್ಕೆ ಅಪವಾದವಲ್ಲ.

ಆಳ್ವಿಕರ ಸ್ವಾತಂತ್ರ್ಯ ಸಮರದಲ್ಲಿ ಝಾನ್ಸಿರಾಣಿ ಲಕ್ಷ್ಮಿಬಾಯಿ ನೀರತನದಿಂದ ಬ್ರಿಟಿಷರನ್ನೆದುರಿಸುತ್ತಿದ್ದಾಗ ತನ್ನ ಕರುಳಿನ ಕುಡಿಯನ್ನಲ್ಲ, ಸಾಕುಮಗುವನ್ನು ಬೆನ್ನಲ್ಲಿ ಕಟ್ಟಿಕೊಂಡೇ ಹೋರಾಡಿದಳು. ಅವಳು ಆ ಮಗುವಿಗೆ ಹಿಡಿಶಾಪವನ್ನು ಹಾಕಲಿಲ್ಲ.

ಅನಂತರ ಕ್ರಾಂತಿಯ ಸಮರದ ಬಡಲು ಶಾತಿಯ ಸತ್ಯಾಗ್ರಹ ಬಳಿಕೆಗೆ ಬಂದಾಗಲೂ ಅನೇಕ ಮೂತೆಯರು ಮಕ್ಕಳನ್ನು ಮಡಿಲಲ್ಲಿಟ್ಟುಕೊಂಡೇ ಬ್ರಿಟಿಷರ ಬಂಧಿಖಾನೆಗೂ ಹೋಗಲು ಹಿಂಜರಿದಿರಲಿಲ್ಲ. ವಾಯ್‌ಲೆಟ್ ಆಳ್ವರು ಅನಿರೀಕ್ಷಿತವಾಗಿ ಕಾಲವಾವಾಗ ಆಟಲ ಬಿಹಾರಿ ವಾಜಪೇಯಿಯವರು ಅವರನ್ನು ಜ್ಞಾಪಿಸಿಕೊಳ್ಳುತ್ತ ಈ ಗುಣವನ್ನೇ ನೆನಪು ಮಾಡಿಕೊಟ್ಟಿರುವರು.

ಹೆತ್ತಕರುಳಿನ ಹೃದಯಂತಃರಾಳದಲ್ಲಿ ಅಗ ಅದೆಂತಹ ಭಾವನೆ.ಯೋಚನೆಗಳಿದ್ದುವೋ ಏನೋ? ತಮ್ಮಂತೆ ತಮ್ಮ ಮಕ್ಕಳೂ ಮಾತೃಭೂಮಿಗಾಗಿ, ಸ್ವಾತಂತ್ರ್ಯರಕ್ಷಣೆಗಾಗಿ ಹೋರಾಡುವವರಾಗ ಬೇಕೆಂದು ಸಹಜವಾಗಿ ಅವರ ಮನಸ್ಸಿನಲ್ಲಿದ್ದಿರಬಹುದು. ಆದರೆ ಇಂದಿರಾಜಿಯವರ ಇತ್ತೀಚೆಗಿನ ಮಾತೊಂದನ್ನು ಕೇಳಿದಾಗ ಆ ಮೂತೆಯರು ಉತ್ಪ್ರೇಕ್ಷೆ ದೀರ್ಘದರ್ಶಿಗಳಾಗಿದ್ದಿರೆಂಬುದೂ ಸ್ಪಷ್ಟವಾಗುತ್ತದೆ. ಆದರೆ ಇಂದಿರಮ್ಮನವರು ಇಂದಿರಜ್ಜಿಯಾಗಿರುವಾದರೂ ಆ ಮಾತನ್ನು ಅವರು ಬದಲಾಯಿಸಿಕೊಂಡಿರುವದಿಲ್ಲ. ಭಾರತೀಯ ಜನಸಂಘದವರು ಹದಿನೆಂಟು ವರ್ಷ ಮೇಲ್ಪಟ್ಟವರಿಗೆ ಮತದಾನದ ಹಕ್ಕನ್ನೀಯಬೇಕೆಂಬುದನ್ನು ಪ್ರಚಾರ ಮಾಡುತ್ತಿದ್ದಾರೆ. ಪ್ರಧಾನಿ ಇಂದಿರಾಜೀ ಇದಕ್ಕೆ ವಿರುದ್ಧ ವಿದ್ದಾರೆಂಬುದು ಗಮನಾರ್ಹ. ಇಂದಿರಜ್ಜಿ ಪ್ರಧಾನಿಯೆಂಬುದರಿಂದ ಮಾತ್ರ ಅದು ಗಮನಾರ್ಹವಲ್ಲ. ಹೆತ್ತಕರುಳಿಗೆ ಹದಿನೆಂಟರ ದಂಟು ಹೇಗಿದ್ದೀತೆಂಬುದು ಚೆನ್ನಾಗಿ ಗೊತ್ತಿರುತ್ತದೆ. ಆ ಘಟ್ಟದಲ್ಲಿ ಮತದಾನದ ಹಕ್ಕನ್ನಿತ್ತು ಇವರು ಯಾವ ಘಟ್ಟ ಹತ್ತುವದು? ಆಟಲ ಬಿಹಾರಿ ವಾಜಪೇಯಿಯವರಿಗೆ ಅದರ ಅರಿವಿಲ್ಲವೇನು? ಇಂದು ಮತದಾನ ಸರಿಯೂದ ರೀತಿಯಲ್ಲಿ ನಡೆಯುತ್ತಿದೆಯೇ? ಜನರು ಮತದ ಮೌಲ್ಯವನ್ನು ಮನವಟ್ಟು ಮಾಡಿಕೊಂಡು ಮತದಾನಕ್ಕೆ ಮುಂದಕ್ಕೆ ಬಂದಲ್ಲಿ ಪ್ರಚಾರವಿಲ್ಲದೆನೇ ಭಾರತೀಯೆ ಜನಸಂಘೆ ಅಧಿಕಾರಕ್ಕೆ ಬರುವದರಲ್ಲಿ ಸಂದೇಹವಿಲ್ಲವೆನ್ನುವಾಗ ಮತದಾನ ಯಾವ ರೀತಿಯಲ್ಲಿ ಇಂದು ನಡೆಯುತ್ತಿದೆನ್ನುವದು ಸ್ಪಷ್ಟವಾಗುತ್ತದೆ. ಕಾಮಿನಿ .—ಕಾಂಚನಾಸ್ತ್ರಗಳ ಎದುರಿಗೆ ಜನಸಂಘ ನಿಲ್ಲಲಾರದೆ ಸೋಲನ್ನು ಅನುಭವಿಸ ಬೇಕಾಗಿದೆಯೆಂದು ಅದರ ಮುಂದಾಳುಗಳು ಹೇಳುತ್ತಿರುವಾಗ, ನಿರುದ್ಯೋಗದ ಈ ದಿನಗಳಲ್ಲಿ ಹದಿನೆಂಟರ ಹೈದನಿಗೆ ಮತದಾನದ ಹಕ್ಕು ಸಿಕ್ಕಿದರೆ ಹೇಗಾದೀತು? ಹದಿನೆಂಟರ ಹೈದರು ತಮ್ಮ ನೆಂಟರಿಂಬುದು ಅವರ ಅಭಿಪ್ರಾಯ. ಸಾಮಾನ್ಯವಾಗಿ ಆ ವಯಸ್ಸಿನವರು ವಿದ್ಯಾನಂತರಾಗಿ ಈಗ ಇರುವ ದರಿಂದ ತಮ್ಮ ತರುಣ ಪಕ್ಷಕ್ಕೆ ಅದರಿಂದ ಪ್ರಯೋಜನವಾದೀತೆಂಬುದು ಅವರ ಲೆಖ್ಖಾಚಾರ. ಅವರು ಬೇಕೆಂಬುದನ್ನು ಇಂದಿರಾಜೀ ಬೇಡವೆನ್ನುತ್ತಿದ್ದಾರೆ. ಇದಕ್ಕೇನು ಕಾರಣ? ಇಂದಿರಜ್ಜಿ ಮುದುಕಿ, ಆಟಲ ಬಿಹಾರಿ ವಾಜಪೇಯಿ ಯುವಕನೆನ್ನುವಂತಹ ಹಾಸ್ಯಪ್ರಧಾನ ವಿಷಯ ಬೇಡ. ನಿಜವಾದ ಕಾರಣವೇನು? ಇಂದು ಇಂದಿರಾರಾಣಿ ಒಳ್ಳೆಯದೆಲ್ಲದಕ್ಕೂ ವಿರುದ್ಧವಿದ್ದಾರೆನ್ನುವಂತಹ ಬೇರ್ಪಟ್ಟವರ ಬೇಧವಾದವೂ ಬೇಡ, ನಿಜವಾದ ಕಾರಣವೇನು?

ದಿವಂಗತ ಜವಾಹರಲಾಲ ನೆಹ್ರೂಜೀ ಕೋಪೋದ್ರಿಕ್ತರಾದಾಗ 'ನಾನ್‌ಸೆನ್ಸ್' ಎನ್ನುತ್ತಿದ್ದರು. ಅವರು 'ಪೆಂಟಾಸ್ಟಿಕ್ ನಾನ್‌ಸೆನ್ಸ್' ಎಂದಲ್ಲಿ ಮೂಗಿನ ತುದಿಯಲ್ಲ, ಇಡೀ ಮೂಗು ಕೆಂಪಾಗಿದೆಯೆಂದೇ ಅರ್ಥವಂತೆ, ಅದ್ಯಾಕೋ ಅವರ ಮಗಳು ಆ ಶಬ್ದಗಳನ್ನು ಉಪಯೋಗಿಸುವದಿಲ್ಲ. ಆದರೆ 'ಚಾ ಚಾ' ನೆಹ್ರೂ ನುಡಿಯುತ್ತಿದ್ದ ಒಂದು ಮೂತನ್ನು ಇಂದು ಇಂದಿರಜ್ಜಿ ಇನ್ನಷ್ಟು ಬಲವಾಗಿ ಹೇಳುತ್ತಾರೆ. ತನ್ನ ಅಭಿಪ್ರಾಯಕ್ಕೆ ವಿರುದ್ಧ ಕಂಡು ಬಂದಾಗ ಜೋರಾಗಿಂದು ಆ ಮಾತುಗಳನ್ನಾಡುತ್ತಾರೆ. ಜವಾಹರಲಾಲಜೀಯವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿಷಯ ಮಾತು ಬಂದಾಗ, ಈ ಚಡ್ಡಿ ಹಾಕಿಕೊಳ್ಳುವ ಹುಡುಗರು ಸ್ವಾತಂತ್ರ್ಯ ಸತ್ಯಾಗ್ರಹ ಸಮಯದಲ್ಲಿ ಎಲ್ಲಿದ್ದರು? ಅವರಿಗೆ ದೇಶದ ಕುರಿತು ಏನು ಗೊತ್ತೆಂದು ಕೇಳುತ್ತಿದ್ದರು. ಅದನ್ನು ಕಂಡುಕೊಳ್ಳಲು ಗಾಂಧಿ ಹತ್ಯೆಯ ನೆವನದಿಂದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೇಲೆ ಪ್ರತಿಬಂಧವನ್ನು ಹೇರಿದರು. ನ್ಯಾಯಾಲಯ ಹಾಗೂ ಸ್ವಯಂ— ಸೇವಕರ ಧೈರ್ಯೋತ್ಸಾಹಗಳಿಂದ ಪ್ರಭಾವಿಳರಾದ ನೆಹ್ರೂಜೀ ಅದೇನೂ ಶರ್ತವನ್ನು ಹಾಕದೆ, ಹೆಜ್ಜೇಕೆ ಯಾರಿಗೂ ತಿಳಿಸದೆ, ಇದಕ್ಕಿದ್ದಂತೆ ನಿರ್ಬಂಧವನ್ನು ಹಿಂದಕ್ಕೆ ತೆಗೆದು ಕೊಂಡು ಎಲ್ಲರಿಗೂ ಆಶ್ಚರ್ಯ-ಆನಂದಗಳನ್ನು ಒಂದೇ ಸಮಯದಲ್ಲುಂಟು ಮಾಡಿದರು. ಅದರಿಂದಲೂ ಅವರಿಗೆ ತೃಪ್ತಿ ಆಗಲಿಲ್ಲ. ಇನ್ನಷ್ಟು ಹತ್ತಿರದಿಂದ ಕಾಣಬೇಕೆಂಬಾಸೆಯಿಂದ ಜನವರಿ ಇಪ್ಪತ್ತಾರರಂದು ನಡೆಯುವ ಸೈನಿಕ— ಸಂಚಲನದಲ್ಲಿ ಸ್ವಯಂ ಸೇವಕರು ಭಾಗವಹಿಸುವಂತೆ ಪ್ರಧಾನಿ ಆಜ್ಞೆ ಇತ್ತರು. ಅದು ಅಂದಿನ ಕಥೆ. ಇಂದು ಜವಾಹರಲಾಲಜೀ ನಮ್ಮೊಡನಿಲ್ಲ. ಅವರ ಮಗಳು ಆ ಸ್ಥಾನದಲ್ಲಿದ್ದಾರೆ.

ಇಂದಿರಾ ರಾಣಿಯವರೂ ಜವಾಹರಲಾಲರು ಹೇಳುತ್ತಿದ್ದ ಚಡ್ಡಿಯ ಹುಡುಗರನ್ನು ಬಿಟ್ಟಿರುವದಿಲ್ಲ. ತನ್ನ ತಂದೆಯಂತೆ ಇವರೂ ಈ ಹುಡುಗರು ಸ್ವಾತಂತ್ರ್ಯ ಸತ್ಯಾಗ್ರಹದ ಸಮಯ ಎಲ್ಲಿದ್ದರು? ಎಷ್ಟು ಜನ ಅದರಲ್ಲಿ ಭಾಗವಹಿಸಿದ್ದರು?.... ಈ ರೀತಿ ಕೋಪೋದ್ರಿಕ್ತರಾದಾಗ ಜೋರಾಗಿ ಕೇಳುತ್ತಾರೆ. ಇತ್ತೀಚೆಗೆ ಇಂದ್ರಪ್ರಸ್ಥ (ಇಂದಿರಾಪ್ರಸ್ಥ)ದ ಚಾಂದನೀ ಚಾಕದಲ್ಲಿ ಚಾಂದನೀಯೊಗಿ ಅವರು ಅದೇ ಪ್ರಶ್ನೆಯನ್ನು ಜುಡಾಯಿಸಿದ್ದಾರೆ.

ಆಳ್ವಿಕರ ನಂತರ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ಬಳಿ ಸತ್ಯಾಗ್ರಹ ಮಾಡುವ ಅವಕಾಶ ಒದಗಿರುವದಿಲ್ಲ. ಅಂದರೆ ನಂತರ ಹುಟ್ಟಿದ ಮಕ್ಕಳಿಗೆ ಅದರಲ್ಲಿ ಭಾಗವಿಲ್ಲ. ಅವರೆ ಆ ಮೇಲೆ ಕಾಶ್ಮೀರಕ್ಕಾಗಿ ಸತ್ಯಾಗ್ರಹ, ಗೋವೆಗಾಗಿ, ಬೆರುಬಾರಿಗಾಗಿ, ಕಚ್ಚ್‌ಗಾಗಿ.... ಸತ್ಯಾಗ್ರಹಗಳು ನಡೆದಿವೆ. ಇದರಲ್ಲಿ ಗೋವಾ— ಪಾಂಡುಜೇರಿ ಸತ್ಯಾಗ್ರಹಗಳು ಮಾತ್ರ ಅನ್ಯರೆನ್ನೆದುರಿಸಿ ನಡೆದದ್ದು ಆದರೂ ನಿಜವಾಗಿ ಎದುರಿಸಿದ್ದು ಭಾರತದ ರಕ್ಷಣಾ ಅಂಗವನ್ನು;ಅಂದರೆ ಆಯಾಯಾ ಪ್ರಾಂತಗಳ ಪೋಲಿಸರನ್ನು. ಗೋವಾ ಸತ್ಯಾಗ್ರಹದ ಸಮಯ ಬೊಂಬಾಯಿಯ ಸರಕಾರ ಅದೆಂತು ವರ್ತಿಸಿದೆಂಬುದು ಮುರಾರ್ಜಿ ದೇಸಾಯಿಯವರಿಗೆ ಚೆನ್ನಾಗಿ ಗೊತ್ತು. ಕಾಶ್ಮೀರ, ಕಚ್ಚ್, ಬೆರುಬಾರಿ ಸ್ವಾತಂತ್ರ್ಯವನ್ನು ಉಳಿಸಿ ಕೊಳ್ಳಲಿಕ್ಕಾಗಿ

(ಮುಂದುವರಿದಂತೆ ಪುಟ ನೋಡಿರಿ)

Telegram : 'FOOD' Telephone : 5012

THE SOUTH KANARA CENTRAL CO-OPERATIVE WHOLESALE STORES LTD.,

POST BOX No. 124, 'SAHAKARI MAHAL',

MANGALORE—1.

Wholesalers in —

FOOD-GRAINS,
TEXTILES,
PROVISIONS,
CONSUMER GOODS,
etc.

Visit

JANATHA BAZAAR

for

all your requirements

Sri K. B. Jinaraja Hegde, B. Sc., LL. B.,
Vice-President.

Sri S. Narsapaya, B. A., B. L.,
President.

Edited, Printed & Published by K. M. Shetty at the Navayuga Press, Udipi, S. India.

ಲೇಖಕರು :
ಶ್ರೀ ಗೋಪಾಲಕೃಷ್ಣ ಹೆಗಡೆ,
ಕೇರೀಮನೆ.

ಹೆಂಗಸರು ಮತ್ತು ವರ್ತಮಾನಪತ್ರ

ಹೆಂಗಸರು—ವರ್ತಮಾನ ಪತ್ರಗಳ ನಡುವೆ ಸಮಾನ ಗುಣಧರ್ಮಗಳ ಸಂಘಟನೆಯಿದೆ. ಈ ಲಘು ಹರಟೆಯಲ್ಲಿ ನವಿರಾದ ಹಾಸ್ಯಮಯ ಶೈಲಿಯಲ್ಲಿ ಲೇಖಕರು 'ಸದಾ ನಗುತ್ತಿರಿ' ಎಂದು ಇಬ್ಬರಿಗೂ ಅಮೂಲ್ಯ ಸಲಹೆ ನೀಡಿದ್ದಾರೆ.

ಹೆಂಗಸರೆಂದರೆ ವರ್ತಮಾನ ಪತ್ರಗಳಿದ್ದ ಹಾಗೆ. ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿ ಬೇಗೆ ಎಷ್ಟು ಬೇಗನೇ ಆಶ್ಚರ್ಯಕರವಾದ ರೀತಿಯಲ್ಲಿ ಜಗಜ್ಜಾಹೀರವಾಗಿ ಬಿಡುವದೋ ಹೆಂಗಸರು ಅಂತಹ ಸುದ್ದಿ ಪ್ರಸಾರ ಕಾರ್ಯವನ್ನು ಬಹುಶಃ ಅವಕ್ಕೂ ವೇಗದಲ್ಲಿ ಮಾಡಬಲ್ಲರು ಎಂಬುದೇ ಈ ವಾಡಿಕೆಯ ಮಾತು ರೂಢಿಯಲ್ಲಿ ಬಂದಿರಲು ಸಾಕು. ಪತ್ರಿಕೆಯ ರೂಪ, ಗುಣ ವಿಶೇಷಗಳಲ್ಲಿಯೂ ಹೆಣ್ಣಿನ ರೂಪ, ಗುಣ, ವೈವಿಧ್ಯತಾ ವಿಶೇಷಗಳಲ್ಲಿಯೂ ಬಹುತೇಕ ಏಕರೂಪತೆ ಕಂಡುಬರುತ್ತಿರುವದು ಸ್ವಾರಸ್ಯದ ವಿಷಯ.

ದಿನ ಬೆಳಗಾಯಿತೆಂದರೆ ನಾವು ನಾನಾ ರೀತಿಯ ವರ್ತಮಾನ ಪತ್ರಗಳನ್ನು ನೋಡುತ್ತೇವೆ. ಬೇರೆಬೇರೆ ಬಣ್ಣ, ಆಕಾರಗಳಲ್ಲಿ ಆಕರ್ಷಕವಾಗಿ ವಿಷಯ ವೈವಿಧ್ಯತೆಯಿಂದ ಪ್ರಕಟವಾಗುವ ಪತ್ರಿಕೆಗಳನ್ನು ನೋಡಿದಾಗ ಹೆಂಗಸರು ಮತ್ತು ವರ್ತಮಾನ ಪತ್ರ ಇವುಗಳಲ್ಲಿ ಏನೇನೂ ಭೇದ ವಿಲ್ಲವೆಂಬ ಮಾತಿನಲ್ಲಿ ಸತ್ಯಾಂಶವಿದೆಯೆನ್ನಿಸುತ್ತದೆ. ಹಾಗೆ ನೋಡಿದರೆ ಹೆಂಗಸೂ ಹಾಗೆಯೇ ಅಲ್ಲವೇ? ಏನು ರೂಪ? ಏನವರ ಥಳುಕು-ಬೆಳಕು! ಒಬ್ಬರಂತೆ ಒಬ್ಬರಿಲ್ಲ. ಒಬ್ಬರ ರೂಪ ಶೃಂಗಾರದಂತೆ ಇನ್ನೊಬ್ಬರದಿಲ್ಲ. ವೈವಿಧ್ಯತೆಯೇ ಹೆಂಗಸರ ಇನ್ನೊಂದು ಹೆಸರೇನೋ ಎನ್ನುವಷ್ಟರ ಮಟ್ಟಿಗೆ ನವಿನಾಲಂಕಾರಗಳ ವರ್ಣಮಯ ರೂಪದರ್ಶನ. ಒಬ್ಬರು ಸೀರೆಯುಟ್ಟಂತೆ, ಹೆರಳು ಹಾಕಿದಂತೆ, ಹೂವು ಮುಡಿದಂತೆ, ತಿಲಕವಿಟ್ಟಂತೆ, ಬಗೆಬಗೆಯ ಸುಗಂಧ ದ್ರವ್ಯಗಳನ್ನು ವದಸಾರವಿಂದದಲ್ಲಿ ಹೊಯ್ದುಕೊಂಡಂತೆ ಇನ್ನೊಬ್ಬರು ಮಾಡಿದರೆ ಅದು ಹೆಣ್ಣುಕುಲವ ಅಪವಾದ. ಹಾಗೆಯೇ ಪತ್ರಿಕೆಯೂ ಕೂಡ! ಮಾಲಕರು ಹಣವಂತರಾದರೆ ಪತ್ರಿಕೆ ಉತ್ತಮ ತರಗತಿಯ ಕಾಗದದ ಮೇಲೆ ಸುಂದರ ಮುದ್ರಣದಿಂದ ಹೊರಬರುವಂತೆ ಹೆಣ್ಣಿನ ಅಲಂಕಾರ, ಆಭರಣ, ಸಿಂಗಾರಗಳೆಲ್ಲವೂ ಅವರವರ ಮನೆಯ ಆರ್ಥಿಕ ಪರಿಸ್ಥಿತಿಯನ್ನೇ ಅವಲಂಬಿಸಿವೆ. ಹಣವೊಂದಿಲ್ಲದಿದ್ದರೆ ಹೆಂಗಸರ ಸ್ಥಿತಿಯೂ ಪತ್ರಿಕೆಯಂತೆಯೇ ದುಃಸ್ಥಿತಿ!

ನಿನ್ನೆಯ ದಿನಪತ್ರಿಕೆ ಇಂದು ಹಳಸಿದ ಅನ್ನ. ಈ ವಾರದ ಪತ್ರಿಕೆ ಮುಂದಿನ ವಾರ ಹಳೆಯವಾಗುತ್ತದೆ. ಸುದ್ದಿ ತಾಜಾ ಇರಬೇಕು. ಹಾಗಿದ್ದರೆ ಮಾತ್ರ ಪತ್ರಿಕೆಗಳಲ್ಲಿ ಆವಕ್ಕೆ ಬೆಲೆ ಹೆಚ್ಚು. ಹೆಂಗಸರಿಗೂ ತಾಜಾ ಸುದ್ದಿಯ ಮೇಲೆಯೇ ಮೋಹ ಜಾಸ್ತಿ. ಇನ್ನೊಂದು ನೋಜಿಗವೆಂದರೆ, ಎಂಥಹ ಸುದ್ದಿಯನ್ನೇ ಆಗಲೀ ತಾಜಾ ಮಾಡುವ ಕಲೆ ಅವರಿಗೆ ಸಾಧಿಸಿರುತ್ತದೆ. ಹೆಂಗಳೆಯರ ಫ್ಯಾಶನ್ನಿನ ಕುರಿತಾಗಿಯೂ ಇದೇ ಮಾತನ್ನೇ ಹೇಳಬಹುದು. ಉದ್ಯತ್ತೋಳಿನ ರವಿಕೆ, ಪೈ ಕಾಣಿಸದ ಸೀರೆಗಳಿಗೆ ಇಂದು ಬೆಲೆಯಿಲ್ಲ. ಅವನ್ನು ಅಂಗಡಿಗಳಲ್ಲಿಟ್ಟು ಮಾರುವವನು ಹಾನಿಗೊಳಗಾಗಬೇಕಾಗುತ್ತದೆ. ಜಪ್ಪಲಿ ಪೆಟ್ಟದ ಹೆಣ್ಣು, ವಾಚಿಲ್ಲದ ಕೈ ವ್ಯರ್ಥ! ಹಳೆಯ ಆವೃತ್ತಿಗಳಿಗೆ ಯಾವಾಗಲೂ ಬೆಲೆಯಿಲ್ಲ. ಅವು ಹೆಣ್ಣೇ ಆಗಿರಲಿ, ಸುದ್ದಿ ಪತ್ರಿಕೆಯೇ ಆಗಿರಲಿ ಹೊಸ ಆವೃತ್ತಿಗಳಿಗೆ ಮಾತ್ರ ಬೇಡಿಕೆ.

ಸುಂದರವಾದ ಪತ್ರಿಕೆ ಕೈಯಲ್ಲಿದ್ದರೂ ಅದೊಂದು ಬಗೆಯ ಶೋಭೆ ಕೆಲವರಿಗೆ. ಹಾಗೆಂತಲೇ ಪತ್ರಿಕೆ ಹೊರಡಿಸುವವರು ಮುಖಪತ್ರದ ಕುರಿತು ಹೆಚ್ಚಿನ ಕಾಳಜಿ ವಹಿಸುವದು. ಹೆಂಗಸರಿಗೂ ಸುಂದರವಾದ ಮುಖ ಆಕರ್ಷಣೆಯ ಕೇಂದ್ರ ಬಿಂದು. ಜನ್ನಾಗಿರದಿದ್ದರೂ ಅದು ಜೆಂಪನಾಗಿ ಕಾಣಿಸಬೇಕೆಂಬ ಆಸೆ. ಮುದುಪೆಯೂ ಗಿರದ ಹೆಣ್ಣು ಸುಕ್ಕಳು ಈ ಜೆಂಪ 'ಕಾಣಿಸುವಿಕೆ'ಯಿಂದಲೇ ಮದುವೆಯಾಗಬಲ್ಲರು. ಮದುವೆಯಾದವರು ನಡೆಯುವ ನಾಣ್ಯವಾಗಿ ಉಳಿದುಕೊಳ್ಳಲು ಇದೊಂದೇ ಮಾರ್ಗ. ನೋಡುವವಕ್ಕೆ ಅಂದವಾಗಿರದ ಹೆಣ್ಣು ಹಾಗೂ ಮುನ್ನಾಗಿರದ ಪತ್ರಿಕೆ ಎರಡೂ ಒಂದರ್ಥದಲ್ಲಿ ರದ್ದಿಯೇ ಸರಿ. ಬಹುತೇಕ ಪತ್ರಿಕೆಗಳ ಮುಖಪತ್ರವನ್ನು ಹೆಣ್ಣಿನ ಸುಂದರ(!) ಚಿತ್ರಗಳನ್ನು ಪಾಕ ಜೆಂದ ಕಾಣುವಂತೆ ಮಾಡುವನರ ಗುಟ್ಟು ಇದೇ ಆಗಿರಬೇಕು.

ಕಾಲಮಾನ ಬದಲಾದ ಹಾಗೆಯೇ ಪತ್ರಿಕೆಯೂ ಹೆಂಗಸರ ಫ್ಯಾಶ್ನಿನಂತೆಯೇ ಬದಲಾಗುತ್ತ ಹೋಗುತ್ತದೆಯೆಂಬಾಯಿತು. ಅನ್ನರಿಂದಲೇ ಕಾಲವನ್ನು ಅಳುವ ತಾಕತ್ತು ಪತ್ರಿಕೆಗಳಿಗಿದೆ. ತಮ್ಮ ಗಂಡಂದಿರ ಮೇಲೆ ಅಧಿಕಾರ ಚಲಾಯಿಸುವ ಏಕಮೇವ ಶಕ್ತಿ ಹೆಂಗಸರಿಗಿರುವದಿಂದಲೇ ಅವರು ಅಚೇಯರು ಮರುಷ ಜಗತ್ತಿಗೆ! ಪತ್ರಿಕೆಗಳಾದರೂ ಇಂತಹ ಅನೇಕಾನೇಕ ಪರಾಶಗಳನ್ನು ನಿರ್ಮಿಸಿವೆ. ಭಗವಂತ ಪರಾವತಾರಗಳಲ್ಲಿ ಕೂಡಿ ಮೂಡಿರದ ಪರಾಕ್ರಮವನ್ನು ಪತ್ರಿಕೆಗಳು ಕೆಲ ಪುಟಗಳಲ್ಲಿ ಮಾಡಿ ತೋರಿಸುವದುಂಟು. ತನಗೆ ಬೇಕಾದವರನ್ನು ಹೊಗಳಿ, ಬೇಡಾದವರನ್ನು ತೆಗಳಿ ಬರೆಯುವ ಚಟವಿರಿಸಿಕೊಂಡ ಪತ್ರಿಕೆಗಳ ಸಂಪಾದಕರುಗಳು ಯಾವ ದೇವರಿಗೂ ಕಡಿಮೆಯಲ್ಲ. ಗಂಡಸರು ತಮ್ಮಿಂದ ಆಗದ ಕೆಲಸಗಳಿಗಾಗಿ ಹೆಂಗಸರನ್ನು ಉಪಯೋಗಿಸಿಕೊಳ್ಳುತ್ತಿದ್ದ ಕಾಲ ಇರಲಿಲ್ಲವೇ? ಇದೂ ಇಲ್ಲವೇ? ಪತ್ರಿಕೆಗಳು ಸರಕಾರವನ್ನೇ ನಡುಗಿಸಿವೆ ಸಾಮ್ರಾಟರಾಗಿ ಮೆರೆದವರು ಕೂಡ ಪತ್ರಿಕೆಗಳಲ್ಲಿ ಬಂದ ಒಕ್ಕಣೆಕೆಗಳಿಂದ ಅಲುಗಾಡಿ ಹೋಗಿದ್ದಾರೆ ಹೆಣ್ಣಾಗಿಯೂ ಸರ್ವನಾಶವಾದುದಿಲ್ಲವೇ? ಹೆಣ್ಣೇ ಸರ್ವನಾಶದ ಆದಿಸೆಲೆ.

ಸುದ್ದಿಗಳಿಗೂ ಪಾವಿತ್ರ್ಯವಿದೆ ಎಂದು ತಿಳಿದುಕೊಳ್ಳುವ ವಿಚಾರವಿದ್ದವರ ವಿಷಯ ಬೇರೆ. ಒದರ ಮಹತ್ವವರಿಯದೆ ಸುದ್ದಿಯ ರೂಪ ಕೆಡಿಸಿ ವಿಕೃತ ವರದಿ ಪ್ರಕಟಿಸುವ ಪತ್ರಿಕೆಗಳು ಕಾಲಗೆಟ್ಟ ಹೆಣ್ಣಿನ ಹಾಗೆ. ಹಣಕ್ಕಾಗಿ ಸುದ್ದಿ ಹುಟ್ಟಿಸುವ ಪತ್ರಿಕೆಗಳು ಹಣಕ್ಕಾಗಿ ದೇಹ ಮಾರುವ ಹೆಣ್ಣಿಗಿಂತ ಯಾವ ದೃಷ್ಟಿಯಲ್ಲಿಯೂ ಮೇಲಲ್ಲ. ಹೆಣ್ಣಿಗೂ ಪತ್ರಿಕೆಗೂ ಜೀವಕ್ಕಿಂತ ಮಿಗಿಲಾದುದು. ಶೀಲ ಮಾತ್ರ. ಪಾವಿತ್ರ್ಯವೇ ಅವುಗಳ ಸರ್ವಸ್ವ.

ಪತ್ರಿಕೆಗಳಲ್ಲಿ ಒರೆದದ್ದನ್ನೂ ಹೆಣ್ಣು ಹೇಳಿದ್ದನ್ನೂ ಎಲ್ಲ ಕಾಲದಲ್ಲಿಯೂ ನಂಬಬಾರದು. ಇವೆರಡೂ ಸುಳ್ಳು ಹೇಳಲು ಆಸ್ಪದ ಪ್ರಖ್ಯಾತರು ಎಂಬುದೇ ಇದರ ಕಾರಣ. ತಮ್ಮ ತಮ್ಮ ಕಾರ್ಯ ಸಾಧನೆಗಾಗಿ ಹೆಣ್ಣು ಸುಳ್ಳು ಹೇಳುವದೂ ಪತ್ರಿಕೆಗಳು ತಮ್ಮ ಹಿತಾಸಕ್ತಿಗಾಗಿ ಸುದ್ದಿಯ ಭಿನ್ನ ರೂಪವನ್ನು ಪ್ರಕಟಿಸುವದೂ ನಜವೇ ಇದೆ. ಎಲ್ಲರಿಗೂ ತಿಳಿದ ಈ ವಿಷಯ ಯಾರಿಗೂ ತಿಳಿಯದ ಹಾಗೆ ನಡೆದಿದೆ.

ಬಾಯಿಂದ ಅಪ್ಪಟವಾದ ಸುಳ್ಳನ್ನೇ ಹೇಳಿದರೂ ಮುಗುಳು ನಗುತ್ತಲಿರುವದು ಹೆಣ್ಣಿನ ಹುಟ್ಟುಗುಣ ನಗುಮುಖ ಸರ್ವತ್ರ ಸ್ವಾಗತಾರ್ಹ. ಹೃದಯದಲ್ಲಿ ಯಾಲಾ ಹೆಲನೇ ಕುಂಬರಲಿ-ನೂತು ಸೂಡಕ್ಕಾಗಿ ರಿಜೀಕು ಗಂಭೀರ ಮುಖ ಮುದ್ರೆಯ. ಒರಟು ಸ್ವಭಾವದ ಹೆಣ್ಣಾಗಲೀ; ಗಹನ ವಿಷಯಗಳಿಂದ ಕೂಡಿದ ಗಂಭೀರ ಮುಖ ಹೊತ್ತ ಪತ್ರಿಕೆಯಾಗಲೀ ಸಾರ್ವತ್ರಿಕ ಮನ್ನಣೆಗಳಿಸುವದು ಕಷ್ಟ. ಅಂತೆಯೇ ಪತ್ರಿಕೆಗಳಿಗೂ ಹೆಂಗಳೆಯರಿಗೂ ಒಂದು ಕಿವಿಮಾತು—ಸದಾ ನಗುತ್ತಿರಿ!

ಹೆಂಗಸರಿಗೂ ಪತ್ರಿಕೆಗಳಿಗೂ ತನ್ನಲ್ಲಿಯಿಸುವ ಇನ್ನೊಂದು ಬಹುಮುಖವಾದ ವಿಷಯವೆಂದರೆ ಅವರವರ ಅಭಿಪ್ರಾಯಗಳು. ಪತ್ರಿಕೆಯ ಅಭಿಪ್ರಾಯ ತವರ ಸಂಪಾದಕೀಯದಲ್ಲಿ ವ್ಯಕ್ತಿಗೊಂದರೆ ಹೆಣ್ಣಿನ ಅಭಿಪ್ರಾಯ ಅವಳ ಕೊನೆಯ ಮಾತು. ಅಭಿಪ್ರಾಯಗಳು ಅವರವರ ಒಲವಿನವೇ ಆಗಿರುತ್ತದೆಂಬುದರಲ್ಲಿ ಸಂಶಯವಿಲ್ಲ. ಪತ್ರಿಕೆ ತನ್ನ ಧೋರಣೆ, ಅಭಿಪ್ರಾಯಕ್ಕೆ ಒಮ್ಮಗರನ್ನು ಎಳೆಯಲು ಯತ್ನಿಸಿದ ಹಾಗೇ

(ಉಳಿದದ್ದು ಮುಂದಿನ ಸಂಚಿಕೆಯಲ್ಲಿ)



ಇಂದಿರಾ ಗಾಂಧಿ ಪ್ರಧಾನಿಯಾಗಿರುವದು ಯನ್ನು ಚಿತ್ರಿಸುವ ರೇಖಾ ಚಿತ್ರವನ್ನು ನಿನ್ನೆ ಮಂಡಿಗೆ—ಅವಳ್ಳನೇ ಅವರನ್ನು (ಉಳಿದದ್ದು ಪುಟ ಒಂಭತ್ತರಲ್ಲಿ)

ಪ್ರಜಾಪ್ರಭುತ್ವ ಮತ್ತು ಸಾಮ್ಯವಾದ

ಪ್ರಜಾಪ್ರಭುತ್ವದ ನೆಲೆ ಗುತ್ತಿಪ್ರಾಂತೀಯವಲ್ಲಿಲ್ಲ; ಪಾಲುದಾರಿಕೆಯಲ್ಲಿದೆ. ಆರ್ಥಿಕ ಏಕಸ್ವಾಮ್ಯವನ್ನು ಕತ್ತರಿಸುವುದು ಎಷ್ಟು ಅಗತ್ಯವೋ ರಾಜಕೀಯ ಏಕಸ್ವಾಮ್ಯವನ್ನು ತಪ್ಪಿಸುವುದೂ ಅಷ್ಟೇ ಅಗತ್ಯ.

ಲೇಖಕರು :
ಶ್ರೀ ಬಿ. ಎಚ್. ಶ್ರೀಧರ.

ಶಿಸ್ತು ಮತ್ತು ವಿಧೇಯತೆ

ಶಿಸ್ತು ಮತ್ತು ವಿಧೇಯತೆಗಳ ಸರಿ ಮೇಳ್ಚ ಉದಾಹರಣೆ ಸೈನಿಕ ಶಾಲೆಯಲ್ಲಿದೆ. ಅವುಗಳಿಲ್ಲದೆ ಯಾವ ಸೈನ್ಯವೂ ಜಯಗಳಿಸದು. ಸರ್ವಸಮ್ಮತಿಯಲ್ಲಿ ಒಂದಾದರೂ ಏಕಾಭಿಪ್ರಾಯವಿಲ್ಲದಲ್ಲಿ ಆ ದೊಂದು ಪಕ್ಷವನ್ನಿಸದು. ಅಂಥ ಏಕಾಭಿಪ್ರಾಯದ ವಿಷಯವು ಮೂಲಭೂತವಾದುದಾಗಿರಬೇಕು. ಅದು ಸೈದ್ಧಾಂತಿಕ. ಸಾಮಾಜಿಕತೆ ಇಲ್ಲದೆ ರಾಷ್ಟ್ರತ್ವವು ಯಾವ ದೇಶಕ್ಕೂ ಸಿದ್ಧಿಸದೆಂಬ ಕಾರಣದಿಂದ ೧೮೧೫ ರಿಂದ ೧೯೦೦ ಅಂಶಗಳ ವರೆಗಿನ ಸಮಾಜವಾದವು ಜಗತ್ತಿನ ವಿವಿಧ ರಾಷ್ಟ್ರಗಳಲ್ಲೆದೆ. ರಾಷ್ಟ್ರೀಯತೆಯಿಂದು ಆದ್ಯ ಶಿಸ್ತೆನ್ನಿಸಿದರೂ ಜಾಗತಿಕತೆಯನ್ನದು ನುರೆತಾಗ ಕೆಲವೊಮ್ಮೆ ರಾಷ್ಟ್ರೀಯರು ಪ್ರತಿಭಟಿಸುವುದು ಅಮೇರಿಕದ ಸಂಯುಕ್ತ ರಾಜ್ಯದಲ್ಲಿ ಕೂಡ ಈಗ ಕಂಡುಬಂದಿದೆ. ಇದು ಶ್ರೀ ವಿನೋಬಾಭಾವೆಯವರ "ಜಯ ಜಗತ್" ಎಂಬ ಘೋಷಣೆಯ ಸಮರ್ಥನೆ. ಜನಹಿಂಸೆಯು ಜಗನ್ನಿಷಿದ್ಧ— ಜಾಗತಿಕ ಯುದ್ಧ ಅನಿವಾರ್ಯವಾದಾಗಲೂ!

ಜ್ಞಾನ ಮತ್ತು ಕರ್ಮ

ಪರಂಪರಾಗತವಾದ ಶಿಸ್ತಿನ ವರ್ತನೆಯು ಅಜ್ಞಾನ ನಿಷ್ಕ್ರಿಯವಾದಾಗ ಪರದೇಶೀಯ-ಸ್ವದೇಶೀಯ ದುಃಶಾಸನರ ಆಳಿಕೆಗೆ ನಮ್ಮ ದೇಶ ಅನೇಕ ಸಲ ತುತ್ತಾಯಿತು. ಪ್ರತಿಯೊಂದು ಒಳ್ಳೆಯ ನಿಯಮಕ್ಕೂ ಸಾಂದರ್ಭಿಕ ಅಪವಾದವಿರುವುದನ್ನು ಮಹಾಭಾರತದ ಆಪದ್ಧರ್ಮ ಪರ್ವವು ಪ್ರಮಾಣಿಸಿದೆ. ಆದರೆ ಆಪದ್ಧರ್ಮವನ್ನು ನಿತ್ಯಧರ್ಮವೆಂದು ಗ್ರಹಿಸಿ ಆಚರಿಸತೊಡಗುವುದು ಅಶಿಸ್ತು, ಅಧರ್ಮ. ಆದುದರಿಂದ ಜ್ಞಾನ ಅಥವಾ ಯುಕ್ತಾಯುಕ್ತ ವಿವೇಕವಿಲ್ಲದ ಕರ್ಮ, ಶಿಸ್ತು, ಆಚಾರಗಳು ಹಾನಿಕರ.

ವಿದೇಶವು ಹೇಗೆ ಹೆಜ್ಜೆ ಹೆಜ್ಜೆಗೆ ಸುಸ್ಥಿರವಾಗುತ್ತ ಹೋಗಿದೆ ಹೆಚ್ಚು ಹೆಚ್ಚು ಸ್ವತಂತ್ರವಾಗುತ್ತ ಹೋಗುತ್ತಿದೆ. ಸಮಾಜವಾದ ಪ್ರಧಾನ ಬಂಡವಾಳಶಾಹಿ ಸಮಾಜವಾದ ಆದರೂ ಅಲ್ಲಿ ಕೈಗಾರಿಕ ಆಡಳಿತಾತ್ಮಕ ವ್ಯವಹಾರಗಳಲ್ಲಿ, ವ್ಯಾಪಾರಿಕ, ಔದ್ಯೋಗಿಕ ಅಭಿವೃದ್ಧಿಯಲ್ಲಿ ಸಾಮಾಜಿಕ (Code of Conduct) ನೀತಿಪ್ರಜ್ಞೆಯನ್ನು ಕಾಣಿಸಿಕೊಳ್ಳಲಾಗಿದೆಯೇ? ಜಾತ್ಯತೀತ-ಮತಾತೀತ ಒಗ್ಗರಣೆಗಳಲ್ಲಿ ಎಲ್ಲಾದರೂ ಭಾರತ ಸಾಧಾರಣವಾದ ವರ್ತನಾ ನಿಯಮಗಳ ಉಲ್ಲೇಖ ಕಂಡು ಬರುತ್ತದೆಯೇ?

ಭಾರತದ ಅನೇಕೀಕರಣ

ಈಗ ಒಬ್ಬರಿಗಿನ್ನೊಬ್ಬರು ನಮಸ್ಕಾರ ಮಾಡುವುದರಲ್ಲಿ ಕೂಡ ಭಾರತೀಯ ಏಕ ಪದ್ಧತಿಯಿಲ್ಲ. ಶಿಸ್ತುವಾದಿ ಇದನ್ನು ಮೊದಲು ಗಮನಿಸಿ ಸರಕಾರದಲ್ಲಿರುವ ಸೇವಕರಾದರೂ ಏಕಪದ್ಧತಿಯನ್ನು ಅನುಸರಿಸುವಂತೆ ವ್ಯವಸ್ಥೆಗೊಳಿಸಬೇಕು. ಉಡುಪು ಭಾಷೆಗಳ ಏಕ್ಯವೂ ಅಲ್ಲೇ ಪ್ರಾರಂಭವಾಗಬೇಕು. ಸದಾಚಾರದ ಬಾಹ್ಯಾಕಾರದ ಏಕರೂಪತೆ ಇಲ್ಲದ್ದು ಮಾನಸಶಾಸ್ತ್ರೀಯವಾಗಿ ರಾಜಕೀಯ ಪಕ್ಷಾಂತರ ವರೆಗಿನ ವಿವಿಧ ಅಶಿಸ್ತುಗಳಿಗೆ ತಾಯಿಬೇರಾಗಿದೆ. ಮನಃಶಾಸ್ತ್ರ ವಿಮುಖವಾದ ತರ್ಕಶಾಸ್ತ್ರವು ಅನ್ಯಾವ್ಯವಹಾರಿಕ. ಭಾರತದ ಜನಾಂಗಗಳ ಅನೇಕೀಕರಣವು ಸದಾಚಾರ ಭೇದದಿಂದ ಆರಂಭವಾಗುತ್ತದೆ. ಮತಾತೀತವೇತರವಾದ ಸದಾಚಾರ ಇಲ್ಲೆ ದುರ್ಬಲವಾದದ್ದೇ ಅದಕ್ಕೆ ಕಾರಣ. ಆದುದರಿಂದ ಸೆಕ್ಯೂಲಾರಿಜಮ್ಮಿನವರು ಆಂಗ್ಲೇಯ ಕೈಸ್ತಾಚಾರವನ್ನು ಸಾಮಾಜಿಕವಾಗಿ ಅನುಕರಿಸುತ್ತ ಬಂದಿದ್ದಾರೆ. ಇವರ ಪರಿಣಾಮವೇನೆಂದರೆ, ಭಾರತೀಯ ಐಹಿಕತೆಯು ಆಚಾರಾತೀತ; ಅದು ಇಲ್ಲವೇ ಇಲ್ಲ. ಅದು ಇದೆ ಎಂಬವರು ಹಿಂದು ಆಚಾರಪರಾಯಣರು. ಅವರು ಜಾತೀಯವಾದಿಗಳಾಗಿ ಹೋಗುತ್ತಾರೆ ಸೆಕ್ಯೂಲಾರಿಜಮ್ಮಿನ ದೃಷ್ಟಿಯಲ್ಲಿ! ಕೇವಲ ಸೆಕ್ಯೂಲಾರಿಜಮ್ಮಿನ ಘೋಷಣೆಗೆ ಇಲ್ಲಿ ಎಷ್ಟು ಬಿಡಿಗಾಸಿನ ಬೆಲೆ ಇದೆ ಈಗ?

ನೋಶಲಿಜಮ್ಮಿನಿಂದ ಸಂಪೂರ್ಣ ಅಸ್ಪೃಶ್ಯವಾದ ವ್ಯಾವಹಾರಿಕ ಕೆಪಿಟಾಲಿಜಂ ಹೇಗೆ ಇಲ್ಲವೋ ಹಾಗೇ ಸಂಪೂರ್ಣ ಮತಾತೀತವಾದ ಲೌಕಿಕತೆ ಎಂಬುದು ಜಗತ್ತಿನಲ್ಲಿ ಎಲ್ಲೂ ಇಲ್ಲ. ಆದುದರಿಂದ ಸೋಶಲಿಜಂ-ಸೆಕ್ಯೂಲಾರಿಜಮ್ಮುಗಳು ಉದಾರ ಮತವಾದಗಳು. ಅವುಗಳ ಪದ್ಧತಿಯ ಔದಾರ್ಯವು ಅಮಾನವೀಯ. ಈ ಎರಡೂ ಶಿಸ್ತಿನ ಆಭಾಸಗಳು. ಆರೋಗ್ಯಕರವಾದ ಅಳತೆಯ ಔದಾರ್ಯವು ಮಹಾಭಾಗದಲ್ಲಿರಬೇಕಾದ್ದು ಧರ್ಮ. ವ್ಯಕ್ತಿಗೂ ಗುಂಪಿಗೂ ಅದೇ ಶಿಸ್ತು.

ನಿರ್ಣಯಾಧಿಕಾರ ಮತ್ತು ಚುನಾಯಿತರು

ಆಡಳಿತಾದಿ ವ್ಯವಹಾರಗಳ ಔದಾರ್ಯದ ಪ್ರಮಾಣವನ್ನು ನಿರ್ಣಯಿಸುವ ಹಕ್ಕು ಈಗ ಚುನಾಯಿತ ಬಹುಸಂಖ್ಯರದಾಗಿದೆ. ಚುನಾಯಿತರಾಗುವ ಹೊಸ ವಿದ್ಯೆಯಂತೂ ಜನಜನಿತವಾಗಿದೆ.ಅದರಲ್ಲಿಲ್ಲದ ಶಿಸ್ತು ಮತ್ತು ನಿರ್ವಂಚಕತೆ ಇನ್ನೊಂದರಲ್ಲಿ ಉದಯಿಸಲಾರದು. ಅಶಿಸ್ತಿನಿಂದ, ಅಕ್ರಮದಿಂದ ಆಯ್ಕೆಹೊಂದಿದ ಪ್ರತಿನಿಧಿಗಳು ಪಕ್ಷಾಂತರ-ದೇಶಾಂತರ ಗಮನಗಳಿಗೆ ಅಂಜರು. ಬುಡ ಸಡಿಲವಾಗಿರುವಾಗ ತಲೆ ಬಿಗುವಾಗುವುದೆಂತು? ಚುನಾವಣೆಯ ವ್ಯವಹಾರದ ಉಗ್ರ ನಿಯಂತ್ರಣವು ಎಲ್ಲ ಶಿಸ್ತು-ಸಂಘಟನೆಗಳ ಬೀಜ. ಇಲ್ಲಿಯ ಅನಿಯಂತ್ರಿತತೆಯು ಪಾರ್ಲಿಮೆಂಟಿನಲ್ಲಿ ಕುಳಿತವರು ಮಾಡುವ ಮನಸ್ವಿ ವರ್ತನೆಯ ವರೆಗೆ ಬೆಳೆಯುವುದು. ಆದನ್ನು ಪರಿಹರಿಸಲು ಯಾರು ನಿರ್ಣಯಿಸುವವರು?

ಕಾಲೇಜು-ವಿಶ್ವವಿದ್ಯಾಲಯಗಳಲ್ಲಿರುವ ಹಿರಿಯ ಶಾಸ್ತ್ರಜ್ಞರು 'ಹುಡುಗರ ಜೇಚ್ಚುವುದರೊಳಾಯ್ತು ನಮ್ಮಯ ಔರ್ಯಂ' ಎಂದು ಗತಾನುಗತಿಕರಾಗುವುದು ಅನಪೇಕ್ಷಿತ. 'ಹುಡುಗರಿಂದ ಜೆಚ್ಚಿಸಿಕೊಳ್ಳುವ' ಪರಿಸ್ಥಿತಿ ಬಂದರೂ ಅವರು ಸಾರ್ವಜನಿಕರಿಗೂ ಮುಖಂಡರಿಗೂ ತಾತ್ವಿಕ ಮಾರ್ಗದರ್ಶನವನ್ನು ಯಾವ ರೀತಿಯಿಂದಲೂ ಮಾಡುತ್ತಿಲ್ಲ; ವರ್ತಮಾನ ಜೀವನದ ಧರ್ಮಯೋಗವನ್ನು ಸಾರುತ್ತಿಲ್ಲ. ಅವರು ಚುನಾಯಿತರನ್ನು ಅಲಕ್ಷಿಸಿ ಕುಳಿತುಬಿಟ್ಟಿದ್ದಾರೆ! ಹಲವರು ಚುನಾಯಿತರು ಮಾಡುವ ಪರೋಕ್ಷ-ಅಪರೋಕ್ಷ ಪುಷ್ಪತನದ ನಿಂದೆಗೆ ಅವರು ನಿಲ್ಲುವುದರಲ್ಲಿ ಶುದ್ಧೀಕರಣ ಸಾಮರ್ಥ್ಯವಿದೆ. ಅವರೂ ಚುನಾಯಿತ ಮನೋವೃತ್ತಿಯವರಾದರೆ? ದೇವರೇ ಗತಿ!

ಸರಕಾರದ ಹೊಣೆ

ಹೊಸದಾಗಿ ಸ್ವಾತಂತ್ರ್ಯ ಪಡೆದ ರಾಷ್ಟ್ರಗಳಲ್ಲಿ ವಿಶ್ವವಿದ್ಯಾಲಯಗಳ ಪಾತ್ರ ದೊಡ್ಡದು ಎಂಬುದನ್ನವು ಅರಿತುಕೊಂಡಂತಿಲ್ಲ. ವಿದ್ಯಾರ್ಥಿಗಳ ಚಾರಿತ್ರನನ್ನಷ್ಟೇ ಅಲ್ಲದೆ ಸಾರ್ವಜನಿಕರ ಹಾಗೂ ನಾಯಕರ ಚಾರಿತ್ರವನ್ನೂ ರೂಪಿಸುವ ಕರ್ತವ್ಯ ಅವುಗಳದ್ದು. ವಿಷಯ ಜ್ಞಾನದ ಜೊತೆಗೇ ವಿಷಯ ಜ್ಞಾನವೂ ಬೆಳೆಯಬೇಕು. ಮಾನವನು ವಿಷಯಿ. ವಿಷಯಾಧಿಕಾರವು ಅವನಿಗೆ ಭಾರತದಲ್ಲಿ ನೀತಿ ನಿರಪೇಕ್ಷವಾಗಬಾರದು,ಅಸಾಮಾಜಿಕತಾ ಪ್ರೇರಕವಾಗಿರಬಾರದು, ಸ್ವಾರ್ಥೈಕಪರಾಯಣತೆಗೆ ಉನ್ಮುಖವಾಗಿರಬಾರದು—ಎಂಬ ತಿಳಿವಳಿಕೆಯು ಅನೇಕ ಎಂ.ಇ.ಡಿ ಗಳಿಗೂ ಇಲ್ಲದಿರುವಾಗ ಮಿಕ್ಕವರ ಪಾಡೇನು?

(ಇಪ್ಪತ್ತೊಂಭತ್ತನೇ ಪುಟ ನೋಡಿರಿ)

"ಖಾದಿ" ರಾಷ್ಟ್ರಪ್ರೇಮ,
ಸ್ವಾವಲಂಬನೆ ಸಂಕೇತ

- ಖಾದಿ ಉದ್ಯಮದಲ್ಲಿ ಶೋಷಣೆಗೆ ಅವಕಾಶವೇ ಇಲ್ಲ.
- ಖಾದಿ ಉದ್ಯಮ ಗ್ರಾಮೀಣ ಕುಶಲ ಕರ್ಮಿಗಳಿಗೆ ಜೀವನಾಧಾರ ಒದಗಿಸುತ್ತದೆ. ತನ್ಮೂಲಕ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ನೆರವಾಗುತ್ತದೆ.
- ಖಾದಿ ಎಲ್ಲ ವಿಧ ಹಾಗೂ ಆಕರ್ಷಕವಾದ ವರ್ಣಗಳಲ್ಲಿ ಪ್ರತಿಯೊಬ್ಬರ ಅಭಿರುಚಿಗೆ ಸರಿಹೊಂದುವ ರೀತಿಯಲ್ಲಿ ದೊರೆಯುತ್ತಿದೆ.

ಖಾದಿ — ಬಡವರ ಉಸಿರು — ಜೀವನಾಧಾರ

ಮೈಸೂರು ರಾಜ್ಯ ಖಾದಿ ಹಾಗೂ
ಗ್ರಾಮೋದ್ಯೋಗ ಮಂಡಲ
ಬೆಂಗಳೂರು — ೯

Edited, Printed & Published by ಯು ಮಹಾಬಲೇಶ್ವರ ಅಡಿಗ at the Navayuga Press, Udipi, S. India.

ವಿಶಿಷ್ಟ ಜೀವನ ವಿಧಾನಗಳ ಗೋತ್ರವರ್ಗ

ನಾಮಾವಶೇಷವಾಗುತ್ತಿರುವ "ಆಳ್ವರ್"

ಲೇಖಕರು :
ಶ್ರೀ ಎಚ್. ಎಂ. ನಾರಾಯಣ ಭಟ್ಟ್

ನಮ್ಮ ರಾಷ್ಟ್ರವು ಸ್ವತಂತ್ರವಾಗಿ 22 ವರ್ಷಗಳಾದವು. ಈ ಅವಧಿಯಲ್ಲಿ ನಾವು ಸಾಧಿಸಿದ ಪ್ರಗತಿ ಅಸಾಮಾನ್ಯವಾದರೂ ಇನ್ನೂ ಅನೇಕ ಕಾರ್ಯಗಳು ಸಾಧಿಸಲ್ಪಡಬೇಕಾಗಿವೆ. ಆತಿ ಹಿಂದುಳಿದ ಪ್ರದೇಶಗಳ ಹಾಗೂ ಹಿಂದುಳಿದ ಗಿರಿಜನರ ಅಭಿವೃದ್ಧಿ ಕಾರ್ಯಗಳ ಬಗ್ಗೆ ವಿಶೇಷ ಶ್ರದ್ಧೆ ಹರಿಯಬೇಕಾಗಿದೆ. ಒಂದು ವಿಶಿಷ್ಟ ಪ್ರಾಕೃತಿಕ ವರ್ಗದವರ ಬಗ್ಗೆ ಇಲ್ಲಿ ವಿವರಿಸಲಾಗಿದೆ.

ಚಿಪ್ಪಟೆ ಮೂಗು, ದಪ್ಪ ತುಟಿ, ಸುರುಳು ಕೂದಲುಗಳಿರುವ "ಆಳರ್" ವರ್ಗದ ಗಿರಿಜನರು ಸ್ವಲ್ಪ ಕುಳ್ಳರೂ ಕರಿಯ ವರ್ಣದವರೂ ಆಗಿದ್ದಾರೆ. ಗುಹೆಗಳಲ್ಲಿ ವಾಸ ಮಾಡುವುದರಿಂದಾಗಿ ಈ ವರ್ಗದ ಜನರಿಗೆ 'ಆಳರ್' ಎಂಬ ಹೆಸರಾಗಿರಬೇಕು. ಪಾಲ್ಘಾಟು ಜಿಲ್ಲೆಯ ಆಮಿನಿಕಾಡು ಪ್ರದೇಶದಲ್ಲಿ ಸಾಧಾರಣವಾಗಿ ಕಾಣಸಿಗುವ ಆಳರ್ ಗೋತ್ರ ವರ್ಗಗಳ ಪೈಕಿ ಅತಿ ಹಿಂದುಳಿದವರು. ಸಂವಿಧಾನದತ್ತವಾಗಿ ಒದಗಿಸಲಾಗುವ ಅನೇಕ ಸೌಲಭ್ಯಗಳಿಗೆ ಆಳರ್ ವರ್ಗದವರು ಇನ್ನೂ ಆರ್ಹತೆ ಹೊಂದಿಲ್ಲವೆನ್ನಲಾಗಿದೆ. ಈ ಪ್ರಾಕೃತ ಮಾನವರ ಜನಸಂಖ್ಯೆ ಸಾಮಾನ್ಯ ಒಂದು ಸಹಸ್ರ. ಕೇರಳದ ಇತರೆಡೆಗಳಲ್ಲಿ ಈ ವರ್ಗದವರು ವಿರಳ.

ಅರ್ಧ ನಗ್ನರು

ಆಳರ್ ವರ್ಗದ ಸ್ತ್ರೀಪುರುಷರು ಅರ್ಧ ನಗ್ನರು. ಸೊಂಟಕ್ಕೊತ ಮೇಲೂ ಮೊಣಕಾಲಿನಿಂದ ಕೆಳಗೂ ಬಟ್ಟೆ ಧರಿಸುವ ಪದ್ಧತಿ ವಿರಳ. ಈ ಶತಮಾನದ ಮೂವತ್ತರ ದಶಕದ ವೇಳೆ ಇವರು ಮರದ ತೊಗಟೆಗಳ ನಾರುಗಳೇ ಎಲೆಗಳನ್ನಾಗಲೀ ಉಡುವಾಗಿ ಬಳಸುತ್ತಿದ್ದರು. ಅರಣ್ಯ ಸಂಪತ್ತಾದ ಸೌದೆ, ಜೇನು, ಮಯಣ, ಅರಗು ಇತ್ಯಾದಿಗಳನ್ನು ಸವಿೂಪದ ಪಟ್ಟಣಕ್ಕೆ ಕೊಂಡೊಯ್ದು ವಿಕ್ರಯಿಸಿ ನಿತ್ಯೋಪಯೋಗಿ ವಸ್ತುಗಳನ್ನು ತರುವ ಅಭ್ಯಾಸ ಮಾಡಿದ ಕೆಲವೇ ಮಂದಿ ಸ್ತ್ರೀಯರು ರವಿಕೆ ಧಾರಿಗಳನ್ನೂ ಪುರುಷರು ಅಂಗಿಧಾರಿಗಳನ್ನೂ ಅನುಕರಿಸಿದ್ದಾರೆ.

ನಿತ್ಯೋಪಯೋಗಕ್ಕೆ ಬೇಕಾದ ಮಣ್ಣಿನ ಪಾತ್ರೆಗಳನ್ನು ತಾವೇ ನಿರ್ಮಿಸ ಬಲ್ಲ ಆಳರ್ ವರ್ಗದವರಿಗೆ ಅಂತಹ ಪಾತ್ರೆಗಳೂ ಬೇಕಾಗುವುದು ಕಡಿಮೆ. ವಸ್ಯಫಲಗಳನ್ನೂ ಗೆಡ್ಡೆಗೆಣಸುಗಳನ್ನೂ ಸಂಗ್ರಹಿಸಿ ಸಂದರ್ಭವನ್ನು ಹೊಂದಿ ಹಸಿಯಾಗಿ ಅಥವಾ ಬೇಯಿಸಿ ತಿನ್ನುವ ಈ ಮಣ್ಣಿನ ಪಾತ್ರೆಗಳಿಗೆ ಮಾಂಸಾಹಾರವೂ ಇಷ್ಟ. ಬಿಲ್ಲು ಅಥವಾ ಆಯುಧಗಳನ್ನು ಪ್ರಯೋಗಿಸಿ ಇವರು ಹಕ್ಕಿಗಳನ್ನೋ ಮೃಗಗಳನ್ನೋ ಬೇಟೆಯಾಡುವುದಿಲ್ಲ. ಇತರ ನಿರ್ದಿಷ್ಟ ಉಪಾಯಗಳಿಂದಲೇ ಅವನ್ನು ಹಿಡಿಯುವ ವಾಡಿಕೆ. ಇವರಿಗೆ ಮರ್ಕಟ ಮಾಂಸ ಅತಿ ಹಿತಕರ. ಅಂತೆಯೇ ಗೋಮಾಂಸ ನಿಷಿದ್ಧ!

ವಿಷವೈದ್ಯ, ಮಂತ್ರವಾದ

ಈ ವರ್ಗದ ಜನರು ಹುಟ್ಟು ನೈಪುಣ್ಯಗಳಲ್ಲಿ ರೆಂದೂ ಇತರರು ಬೆಳೆಸಿದ ಹಣ್ಣು, ತರಕಾರಿ, ಕಾಳು, ಕೋಳಿ ಮುಂತಾದುವುಗಳನ್ನು ಅಪಹರಿಸುವುದರಲ್ಲಿ ಸಮರ್ಥರೆಂದೂ ನೆರೆಕರೆಯ ನಿವಾಸಿಗಳು ಆರೋಪಿಸಿ, ಹೆದರುತ್ತಾರೆ. ಅಂತೆಯೇ ಹುಟ್ಟು ಮಂತ್ರವಾದಿಗಳೆಂದೂ ವಿಶಿಷ್ಟ ಮೂಲಿಕೆ ಸಿದ್ಧೌಷಧಗಳುಳ್ಳ ವಿಷವೈದ್ಯರೆಂದೂ ಪರಿಗಣಿಸಿ ಗೌರವಿಸುತ್ತಲೂ ಬಂದಿದ್ದಾರೆ.

ಭೂತ-ಪ್ರೇತ ಬಾಧೆಗಳಿಗೆ ಆಳರ್ ಸ್ತ್ರೀಪುರುಷರಿಂದ ಮಂತ್ರವಾದ ಹಾಗೂ ವಿಷ ಬಾಧೆಗೆ ಔಷಧವನ್ನೂ ಮಾಡಿಸಿದ ಕಥೆಗಳು ಹಲವರಿಂದ ವರ್ಣಿಸಲ್ಪಡುತ್ತಿವೆ.

ಆಳರ್ ಕುಟುಂಬಗಳ ಪುನರ್ನಿವೇಶನ ಪದ್ಧತಿ ಪ್ರಾರಂಭವಾಗಿದ್ದು ಕೆಲವು ಮನೆಗಳನ್ನೂ ಕೇಂದ್ರ ಸರಕಾರದ ನೆರವಿನಿಂದ ಗಿರಿಜನ ಕಲ್ಯಾಣ ಖಾತೆ ನಿರ್ಮಿಸಿದೆ. ಆದರೆ, ಇಂತಹ ನಿವೇಶನಗಳಲ್ಲಿ ವಾಸ ಮಾಡಿ ಕೃಷಿ ಮಾಡಿ ಕುಳಿತಿರುವುದು ತಮ್ಮ ವೈಯುಕ್ತಿಕ ಸ್ವಾತಂತ್ರ್ಯಕ್ಕೆ ಹಿಡಿಸಿಪ್ಪಲ್ಲ ವೆಂಬ ಭಾವನೆ ಇಪ್ಪವರೇ ಹೆಚ್ಚು. ಶಾಶ್ವತವಾಗಿ ನಮುದಾಯಿಕ ಜೀವನ ನಡೆಸುತ್ತಾ ನೆಲಸಿವರೆ ಇಚ್ಛಾಸುಸಾರ ಒಲೆ ದಾಡುವುದು ಹೇಗೆ?

ಆಮಿನಿಕಾಡಿನ ಗಿರಿಜನರು ಮಾತಾಡುವ ಭಾಷೆಯಲ್ಲಿ ತಮಿಳು ಮತ್ತು ತುಳು ಶಬ್ದಗಳು ಅನೇಕ ಇವೆ.

• ಪರ್ಣ ಶಾಲೆಗಳು

ಬೇನಗೆಯಲ್ಲಿ ಅರಣ್ಯದಲ್ಲಿ ಎದ್ದಿಯಾದರೂ ತಾತ್ಕಾಲಿಕ ಒಲೆ ತಯಾರಿಸಿ ಬೆಂಕಿ ಹಚ್ಚಿ ಅಡಿಗೆ ಮಾಡಿ ಉಂಡು ವಿಹರಿಸುವ ಈ ವರ್ಗದವರು ರಾತ್ರಿ ವೇಳೆ "ಅಗ್ನಿಕುಂಡ"ಗಳ ಸುತ್ತಲೂ ಮಲಗಿ ನಿದ್ರಿಸುವುದರಿಂದಾಗಿ ಪ್ರತ್ಯೇಕ ಮೇಲ್ಛಾವಣಿ ಬೇಕೆಂದಿಲ್ಲ ಪ್ರಕೃತಿ ಮಾತೆಯ ಮಡಿಲಲ್ಲಿ ಆಕಾಶವೆಂಬ ಹೊದಿಕೆ ಹೊದ್ದು ನಿಶ್ಚಿಂತರಾಗಿ ಗೊರಕೆ ಹೊಡೆದು ನಿದ್ರಿಸುವ ಇವರಿಗೆ ಜೀವನವೇ ಕ್ಷಣಿಕ ವೆಂದು ಗೊತ್ತು. ಹಗಲಿಡೀ ಅಲೆದಾಡಿ ಸಿಕ್ಕಿದ ಹಣ್ಣುಹಂಪಲುಗಳನ್ನೋ ಇತರ ಖಾದ್ಯ ವಸ್ತುಗಳನ್ನೋ ಕತ್ತಲಾದಾಗ ಕಲಪಿದಲ್ಲಿಯೇ ತಂಗಿ, ಅಲ್ಲಿಯೇ ಸೇವಿಸಿ ನಿದ್ರಿಸುವ ಸ್ವಭಾವದವರಿಗೆ ಗುಡಿಸಲೇಕೆ? ಮನೆಯೇಕೆ?

ವನ್ಯ ಮೃಗಗಳಿಂದಲೂ, ಹಾವುಗಳಿಂದಲೂ ಮೈ ಕೊರೆಯುವ ಛಳಿಯಿಂದಲೂ 'ಅಗ್ನಿಕುಂಡ'ಗಳು ಇವರನ್ನು ರಕ್ಷಿಸುತ್ತವೆ. ಅಗ್ನಿಕುಂಡ ತಯಾರಿಸಲು ಬೇಕಾದಷ್ಟು ಮರದ ತುಂಡುಗಳೋ ತೊಗಟೆಗಳೋ ಬೇರುಗಳೋ ಕಾಡಿನಲ್ಲೇ ಸಿದ್ಧವಾಗಿ ಲಭಿಸುತ್ತವೆ. ಕಾವಲಿಗೆ ಮತ್ತೂ ಬೇಕಾದರೆ ನಾಯಿಗಳವೆ. ಮಳೆಗಾಲದಲ್ಲಿ ಬೇಕಾದಷ್ಟು ಗುಹೆಗಳಿವೆ. ಸೌಕರ್ಯವನ್ನೂ ಸಂದರ್ಭವನ್ನೂ ಹೊಂದಿ ಸ್ವತಂತ್ರವಾಗಿ - ಸ್ವಾವಲಂಭಿಗಳೆಂಬ ಮನೋಭಾವನೆಯಿಂದ ಬೇಕಾದರೂ ಜೀವನ ಮಾಡಬಲ್ಲರು. ಇನ್ನೂ ಬೇಕಾದರೆ— ಆಗತ್ಯವಿದ್ದಾಗ ಕೆಲವೇ ನಿಮಿಷಗಳಲ್ಲಿ 'ವರ್ಣಶಾಲೆ'ಗಳನ್ನು ನಿರ್ಮಿಸಲು ಸಾಧ್ಯ. ಕೆಲವು ಮರದ ಗೆಲ್ಲುಗಳನ್ನು ಕಡಿದರಾಯ್ತು. ನಾಲಿನ ಬಗ್ಗೆ ಕುಟುಂಬದ ಜೀವನದ ಬಗ್ಗೆ ಇವರಿಗೆ ಸ್ಪಷ್ಟವಾದ ಸಂಕಲ್ಪವಿಲ್ಲ.

ಮಕ್ಕಳ ಕಟ್ಟು

ಆಳರ್ ವರ್ಗದವರಿಗೆ ಮಕ್ಕಳ ಕಟ್ಟು. ಅನುಪಂತಿಕ ಹಕ್ಕು ಗಂಡು ಮಕ್ಕಳಿಗೆ ಮಾತ್ರ. ಸ್ತ್ರೀಯರು ಹೆರಿಗೆ ಯಂತ್ರಗಳು, ಮಕ್ಕಳ ಸಂರಕ್ಷಕರು ಎಂಬ ತಾತ್ಸಾರ ಭಾವನೆ. ಕುಟುಂಬದ ಯಜಮಾನ ಮೃತಪಟ್ಟ ಗುಡಿಸಲು ಅಥವಾ ಪರ್ಣಶಾಲೆಯನ್ನು ಕೂಡಲೇ ಪರಿತ್ಯಜಿಸಿ ಅದನ್ನು ಸುಟ್ಟುಹಾಕಿ ಬೇರೆ (ಗುಡಿಸಲು ಕಟ್ಟಿ) ಕಡೆ ವಾಸ ಪ್ರಾರಂಭ ಮಾಡಬೇಕೆಂಬ ಕಟ್ಟಳೆ ಆಚರಣೆಯಲ್ಲಿದೆ. ಎಲ್ಲಿಯೂ ಸ್ಥಿರವಾಗಿ ವಾಸಮಾಡ ಬಯಸದ ಇವರ ಜಂಗಮ ವಸ್ತುಗಳಲ್ಲಿ ಪ್ರಧಾನವಾದವು ನಾಯಿಗಳು. ನಾಯಿಗಳನ್ನು ಸಾಕದ ಕುಟುಂಬಗಳೇ ವಿರಳ. ಹಗಲುಲ್ಲಿ ಬೇಟೆಯಾಡಲೂ, ಹಗಲಿರುಳೆನ್ನದೆ 'ಮನೆ ಕಾವಲು' ಮಾಡಲೂ ಈ ನಾಯಿಗಳು ನೆರವಾಗುತ್ತವೆ. ಸಾಕುವವನ ಗುಡಿಸಲ ಪರಾರಕ್ಕೆ ಇತರರಾರೂ ಪ್ರವೇಶಿಸದಂತೆ ಜಾಗರೂಕರಾಗಿರುವ ಈ ನಾಯಿಗಳು ಸಣ್ಣ ಮಕ್ಕಳ ರಕ್ಷಣಾ ಕಾರ್ಯದಲ್ಲೂ ವಿಶೇಷ ಶ್ರದ್ಧೆ ಹರಿಸುವಂತೆ ತರಬೇತಿ ಹೊಂದಿರುವವು.

ತಾಯಿಗಂಡತನ

ಆಳರ್ ವರ್ಗದವರ ದಾಂಪತ್ಯ ಜೀವನ ಕುಪ್ರಸಿದ್ಧ. ತನಗೆ ರಕ್ತಸಂಬಂಧವುಳ್ಳನ ರೊಂದಿಗೇ ಲೈಂಗಿಕ ಜೀವನದಲ್ಲೀಪರ್ಡುವುದು ಸಾಧಾರಣ ಸ್ವಂತ ಸಹೋದರಿಯನ್ನಾಗಲೀ ಸೊಸೆಯನ್ನಾಗಲೀ ಮಗಳನ್ನಾಗಲೀ ವಿಧವೆಯಾದ ತಾಯಿಯನ್ನೇ ಆಬಲಿ ಪತ್ನಿಯಾಗಿ ಸ್ವೀಕರಿಸಬಾರದೆಂದಿಲ್ಲ. ಪುಷ್ಪವತಿಯಾಗುವ ಮುನ್ನವೇ ಹೆಚ್ಚಿನ ವಿವಾಹ ಬಂಧಗಳು. ದಾಂಪತ್ಯ ಜೀವನವನ್ನಾಗಲೀ ಲೈಂಗಿಕ ಜೀವನವನ್ನಾಗಲೀ ಸ್ವಾರಂಭಿಸಲು ವಿವಾಹವಾಗಿರಲೇಬೇಕೆಂದೂ ಇಲ್ಲ. ವಧೂವರರ ಪೈಕಿ ವರನಿಗೇ ಪ್ರಾಯ ಹೆಚ್ಚಾಗಿರಬೇಕೆಂದಿಲ್ಲ. ಪ್ರಾಯ ವ್ಯತ್ಯಾಸ ನೋಡುವ ಸಹನೆಯಿಲ್ಲದವಸ್ಟೂ ಪ್ರೇಮಾಂಧತೆ! ಪ್ರಾಯ ವ್ಯತ್ಯಾಸ ಎಷ್ಟೇ ಇದ್ದರೂ ಪರಸ್ಪರ ವಿವಾಹಕ್ಕೆ ಅಡ್ಡಿಯಾಗದು. ಭಾವೀ ವಧೂವರರು ತಂತಮ್ಮ ವಿವಾಹದಿಂದ ಬೇರ್ಪಟ್ಟು ಪ್ರತ್ಯೇಕವಾಗಿ ವಾಸಮಾಡಲಾರಂಭಿಸಿದರೂ ಅವರು ವಿವಾಹಿತ ದಂಪತಿಗಳಾಗಿ ಸರಿಗಣಿಸಲ್ಪಡುವರು.

ಆಚಾರಕ್ಕನುಗುಣವಾದ ವಿವಾಹವೆಂದಾದರೆ ವರನು ವಧುವಿನ ತಂದೆಗೆ ('ಪುರುಷಧನ'ವೆಂದೂ ಕರೆಯಬಹುದು) ಐದು ರೂಪಾಯಿಗಿಂತ ಕಡಿಮೆಯಾಗದ ಧನವನ್ನು ತೆರಬೇಕು. ಈ ಪುರುಷಧನವು ವಧುವಿನ ರೂಪಲಾವಣ್ಯವನ್ನೂ ವರನ ಸಾಮರ್ಥ್ಯವನ್ನೂ ಹೊಂದಿಕೊಂಡಿದೆ.

ಹಿರಿಯರ—ವಯೋವೃದ್ಧರ ಸಮಕ್ಷಮ ಉರಿಯುವ ದೀಪದಿರಲ್ಲಿ ಕುಳಿತು ವಧೂವರರು ಪರಸ್ಪರ ಆಹಾರ ಉಣ್ಣಿಸುವುದೇ ವಿವಾಹದ ಪ್ರಧಾನ ಕಾರ್ಯಕ್ರಮ.

ಆದರೆ, ಹಾಗೆ ಆಹಾರ ವಿನಿಮಯದ ಮುನ್ನ ವಧುವಿನ ಕೊರಳಿಗೆ ವರನು ನೂ

(ಇಲ್ಲಿಂದ ಮುಂದಿನ ಪುಟ ನೋಡಿರಿ)

THE PRESS
for NEAT CLEAR ARTISTIC PRINTING
NAVAYUGA PRESS
UDIPI
Printers for—
NAVAYUGA Weekly
We undertake all kinds of Bookwork job work etc.
PROPRIETORS:
NAVAYUGA ENTERPRISE LTD.
Regd. Office: PALUKOTE, UDIPI, S. K.

ಇಂದಿರಾ ಗಾಂಧಿ ಪ್ರಧಾನಿಯಾಗಿರುವದು ಹುನ್ನೂರು ವರ್ಷಗಳಷ್ಟು ಮೊದಲು ಯೋಚಿಸಿದ್ದ ಮಹಾನ್ ಸ್ತ್ರೀಯ ಮುಂದಿಗೆ—ಅವರಿಗೆ ಅವರನ್ನು (ಅನುವಾದ ಪುಟ ೨೨ರಲ್ಲಿ)

ಸುಮಂಗಲೆಯರ ಸೌಭಾಗ್ಯ ಅರಸಿನ

ಅರಸಿನ ಸುಮಂಗಲೆಯರ ಸೌಭಾಗ್ಯ, ಸೌಂದರ್ಯವರ್ಧಕ, ಸಾಂಪ್ರದಾಯಿಕ ಶುಭ ಸಾಮಗ್ರಿ. ಇದರ ಜತೆಗೆ ಅದು ವಿದೇಶ ವಿನಿಮಯವನ್ನು ಗಳಿಸಿ ಕೊಡುವ ವ್ಯಾಪಾರೀ ಬೆಳೆಯೂ ಹೌದು. ಅರಸಿನದ ಗುಣದೋಷಗಳ ವಿವೇಚನೆಯೊಡನೆ ಅದನ್ನು ಬೆಳೆಸುವ ಬವಣೆಗಳನ್ನೂ ಪರಿಚಯ ಮಾಡಿ ಕೊಡುವ ಪ್ರಯತ್ನ ಇಲ್ಲಿ ಮೂಡಲಾಗಿದೆ.

ಲೇಖಕರು

ಪ್ರೊ। ಎಂ. ಎಸ್. ಎಸ್. ರಾವ್

ಉಪಯುಕ್ತತೆ

ರಬ್ಬ ಹರಿದಿನಗಳಲ್ಲಿ ಅರಿಸಿನ, ಕುಂಕುಮ, ಅಕ್ಷತೆಗಳೊಂದಿಗೆ 'ಮಂಗಳ ನೃತ್ಯ'ವೆಂದು ಪೂಜೆಗೆ ಶ್ರೇಷ್ಠ. ನೀರು, ಸುಣ್ಣ, ಅರಸಿನ ಕವಡಿ ಶುಭಪ್ರಸಂಗಗಳಲ್ಲಿ 'ಆರತಿ'ಗೆಂದು ಕೆಂಪು ಓಕುಳಿ ತಯಾರಿಸುತ್ತಾರೆ. ಶಿಷ್ಟಾಚಾರ ಪಾಲಿಸುವ ಸಂಪ್ರದಾಯಸ್ಥ ಮಹಿಳೆಯರು ಸುಮಂಗಲೆಯರ ಸೌಭಾಗ್ಯ ಮತ್ತು ಸೌಂದರ್ಯ ವರ್ಧಕದ ಪ್ರತೀಕವೆಂದು ಅರಿಸಿನವನ್ನು ಕೈ, ಮೈಗೆ ಲೇಪಿಸಿಕೊಳ್ಳುವುದುಂಟು. ಮದುವೆ, ಮುಂಜಿಗಳಲ್ಲಿ ಶುಭ ಸಂಕೇತ ವೆಂದು ಅರಿಸಿನಕ್ಕೆ ಆಧ್ಯತೆ ಹೆಚ್ಚು. ಆಗ ಮೊದಲು ಮನೆಯಲ್ಲಿ ಅರಿಸಿನ ಪುಡಿ ತಯಾರಿಸಿದ ಮೇಲೆ ಇತರ ಕಾರ್ಯ ಗಳಿಗೆ ಆರಂಭ. ಹಬ್ಬಹುಣ್ಣಿಮೆಗಳಲ್ಲಿ ಮಹಿಳೆಯರು ಒಬ್ಬರನ್ನೊಬ್ಬರು ಆಮಂತ್ರಿಸುವಾಗ ಅರಿಸಿನ-ಕುಂಕುಮಕ್ಕೆಂದೇ ಹೇಳಿ ಕಳಿಸುವುದು ಭಾರತೀಯ ಸಂಸ್ಕೃತಿಯ ಕುರುಹು. ದೇವಿ ಯಲ್ಲಮ್ಮನ ಭಕ್ತರಿಗೆ 'ಭಂಡಾರ'ವೆಂದು ಅರಿಸಿನದ ಬಳಕೆಯೇ ಹೆಚ್ಚು. ವಿಶೇಷ ಹಬ್ಬಹರಿದಿನಗಳಲ್ಲಿ ಮಹಿಳೆಯರು ಅರಿಸಿನದ ಉಂಡೆ ತಯಾರಿಸಿ, ಅದು ಸೌರಿಯ ಸಂಕೇತ ವೆಂದು ಪೂಜಿಸುವುದುಂಟು.

ಆಡಿಗೆಯ ಪದಾರ್ಥಗಳಲ್ಲಿ ಆಕರ್ಷಕ ಬಣ್ಣ, ರುಚಿ, ಮತ್ತು ಆರೋಗ್ಯದ ದೃಷ್ಟಿ ಯಿಂದ ಅರಿಸಿನದ ಬಳಕೆ ಎಲ್ಲರಿಗೂ ಗೊತ್ತಿದ್ದಷ್ಟೇ. ಇದು ಒಂದು ರೀತಿಯಲ್ಲಿ ಸುಳ್ಳಲ್ಲ ಎನ್ನುವುದರಲ್ಲಿ ತಪ್ಪಿಲ್ಲ.

ಔಷಧೀಯ ದೃಷ್ಟಿಯಿಂದ ಸಣ್ಣ ಪುಟ್ಟ ಕಲ್ಲು, ಕೀಟ ಮುಂತಾದ ವ್ಯಾಧಿಗಳಿಗೆ ಅರಿಸಿನ ಮತ್ತು ಬಜೆ ಎರಡನ್ನೂ ಕೂಡಿಸಿ, ತೇದು, ಲೇಪಿಸಿದರೆ ಗುಣ ಶೀಘ್ರ. ಗಂಟಲುನೋವು ಮತ್ತು ಶ್ವಾಸಬಿದ್ದಾಗ, ಬಿಸಿ ಹಾಲಿನಲ್ಲಿ ಅರಿಸಿನ ಕೂಡಿಸಿ ಸೇವಿಸುವುದುಂಟು. ಕಜ್ಜಿ, ಹುಳಕಡ್ಡಿ ಮುಂತಾದುವುಗಳಿಗೆ ಅರಿಸಿನ, ತುಳಸಿ ಮತ್ತು ಉಪ್ಪು ಕೂಡಿಸಿ ಹಚ್ಚುವುದುಂಟು. 'ಮೈಲಿ' ಇಲ್ಲವಾ 'ದೀವಿ' ಹಾಕಿಸಿದಾಗ ಬೇವಿನ ಎಲೆ ಮತ್ತು ಅರಿಸಿನ ಕೂಡಿಸಿ, ಸುಣ್ಣಗೆ ಅರೆದು ಹುಣ್ಣಿನ ಮೇಲೆ ಲೇಪಿಸುವುದರಿಂದ ಅದು ಶೀಘ್ರ ಒಣಗಿ ಮಾಯುತ್ತದೆ. ದನಗಳಿಗೆ ಬರುವ 'ಶೆಲೆ' ರೋಗಕ್ಕೆ ಅರಿಸಿನ, ಬೆಳ್ಳುಳ್ಳಿ ಎರಡನ್ನೂ ಕರಿಬಟ್ಟೆಯಲ್ಲಿ ಸುತ್ತಿ. ಬೆಂಕಿಯಲ್ಲಿಟ್ಟು ಬರುವ ಹೊಗೆಯನ್ನು ದನಗಳ ಮೂಗಿಗೆ ಸೇರುವಂತೆ ಮಾಡಿ ಗುಣಪಡಿಸುತ್ತಾರೆ.

ಮನುಷ್ಯರಿಗೆ ಬರುವ 'ಫ್ಲೂ' ರೋಗಕ್ಕೂ ಹೀಗೇ ಮಾಡಿದರೆ ರೋಗ ಪರಿಹಾರ ಶೀಘ್ರವೆಂದು ಹೇಳಲಾಗುತ್ತದೆ. ಅರಿಸಿನ ಮತ್ತು ಎಳೇ ಗರಿಕೆ ಹುಲ್ಲನ್ನು ಕೂಡಿಸಿ, ಅರೆದು ಮಿತಿಮೀರಿದ ರೋಮಗಳಿರುವ ಮಕ್ಕಳ ಮೈ, ಕೈಗೆ ಹಚ್ಚಿ, ಸ್ನಾನ ಮಾಡಿಸಿದರೆ ಒಂದೆರಡು ವಾರಗಳೆಲ್ಲಿಯೇ ಅನಪೇಕ್ಷಿತ ರೋಮಗಳೆಲ್ಲ ಉದುರಿ, ಚರ್ಮ ನುಣುಪು, ಮೃದು ಮತ್ತು ಕಾಂತಿಯುತವಾಗುವುದೆಂದು ಹೇಳಲಾಗುತ್ತದೆ.

ಅರಿಸಿನಕ್ಕೆ ಇಂಗ್ಲೀಷಿನಲ್ಲಿ 'ಟರ್ಮೆರಿಕ್' (Turmeric), ಹಿಂದಿಯಲ್ಲಿ 'ಹಲ್ದ' (Halda), ತಮಿಳು-ಮಲಯಾಳಂನಲ್ಲಿ 'ಮಂಜಿಲ್' (Manzil) ಎಂದು ಕರೆಯುತ್ತಾರೆ. ಇದನ್ನು ಭಾರತದಲ್ಲಿ ಬಹು ಪುರಾತನ ಕಾಲದಿಂದಲೂ ಬೆಳೆಯಲಾಗುತ್ತಿದೆ. ಇದು ಕೇವಲ ಉಷ್ಣವಲಯದಲ್ಲಷ್ಟೇ ಬರುವ ಬೆಳೆ. ಇದರ ವ್ಯವಸಾಯ ಭಾರತ, ಇಂಡೋಚೀನ, ಈಸ್ಟ್ ಇಂಡೀಸ್ ಮತ್ತು ಚೀನದ ಕೆಲವು ಭಾಗದವರೆಗೆ ವಿಸ್ತರಿಸಿದೆ.

ಭೌಗೋಲಿಕ ಸನ್ನಿವೇಶ

ಅರಿಸಿನ ಸಮುದ್ರ ಪಾತಳಿಯಿಂದ ಹಿಡಿದು ಸುಮಾರು ೪ ಸಾವಿರ ಅಡಿಗಳ ಎತ್ತರ ಪ್ರದೇಶದಲ್ಲಿ ಬೆಳೆಯುತ್ತದೆ. ಪೂರ್ವ ಮತ್ತು ಪಶ್ಚಿಮ ಘಟ್ಟದ ಎತ್ತರ ಪರ್ವತ ಪ್ರದೇಶಗಳಲ್ಲಿ ಇವು ಕಾಡುಗಿಡವಾಗಿ ಬೆಳೆಯುವುದುಂಟು. ಇದರ ಬೆಳೆಗೆ ಅನುಕೂಲವಾದ ಭೂಗುಣವೆಂದರೆ—ಮರಳು ಮತ್ತು ಎರೆ ಮಣ್ಣು ಮಿಶ್ರಿತವಾದ ಜವಳು ಭೂಮಿಯೆನ್ನಬಹುದು. ಈ ಬೆಳೆಗೆ ಭೂಮಿಯಲ್ಲಿ ನೀರು ನಿಲ್ಲುವುದಾಗಲೀ, ಸುಣ್ಣ ಹೆಚ್ಚಿರುವುದಾಗಲೀ (alkalinity) ಹಿತಕರವಲ್ಲ. ಅದನ್ನು ನೀರು ಹಾಯಿಸಿಯಾಗಲೀ, ಇಲ್ಲವೆ ಮಳೆಯ ಕೃಪೆಗೇ ಬಿಟ್ಟು ಬೆಳೆಸಬಹುದು. ಪಶ್ಚಿಮ ಘಟ್ಟದ ತೀರ ಪ್ರದೇಶಗಳಲ್ಲಿ ಅದನ್ನು ಹೆಜ್ಜಾಗಿ (ಮನ್ಸೂನ್) ಮುಂಗಾರಿ ಮಳೆಯ ಸಹಾಯದಿಂದಲೇ ಬೆಳೆಯುತ್ತಾರೆ.

ಬೆಳೆಯ ಕ್ಷೇತ್ರ

ಭಾರತದಲ್ಲಿಯೇ ಇದು ಪೂರ್ವ ತೀರ ಪ್ರದೇಶಗಳು ಅದರಲ್ಲಿಯೂ ಆಂಧ್ರ ಮತ್ತು ಒರಿಸ್ಸಾ ರಾಜ್ಯಗಳಲ್ಲಿ ಪ್ರಾಮುಖ್ಯವಾಗಿ ಬೆಳೆಯುತ್ತದೆ. ಸ್ವಲ್ಪಮಟ್ಟಿಗೆ ಮುಂಬೈ ಮತ್ತು ಮದ್ರಾಸ್ ರಾಜ್ಯಗಳ ಕಡಲತೀರ ಪ್ರದೇಶಗಳಲ್ಲಿ ಬೆಳೆಯುತ್ತದೆ. ಆಂಧ್ರ ಪ್ರದೇಶದಲ್ಲಿ ಅರಿಸಿನ ಬೆಳೆಯು ಗುಂಟೂರು ಜಿಲ್ಲೆಯಲ್ಲಿ ಅದರಲ್ಲಿಯೂ 'ದುಗ್ಗಿರಾಲಾ' ಎಂಬಲ್ಲಿ ಕೇಂದ್ರೀಕೃತವಾದಂತಿದೆ. ದೇಶದಲ್ಲಿ ಉತ್ಪಾದನೆಯಾಗುವ ಅರಿಸಿನದ ಬಹುಭಾಗವೆಲ್ಲ ಇಲ್ಲಿಂದಲೇ ಬರುತ್ತದೆ. ಆ ರಾಜ್ಯದಲ್ಲಿ ಕಡಪೆ, ಕೃಷ್ಣ ಮತ್ತು ಪೂರ್ವ ಪಶ್ಚಿಮ ಗೋದಾವರಿ ಜಿಲ್ಲೆಗಳಲ್ಲಿಯೂ ಸಾಕಷ್ಟು ಬೆಳೆಯುತ್ತದೆ. ಮದ್ರಾಸ್ ರಾಜ್ಯದಲ್ಲಿ ಕೆಲಮಟ್ಟಿಗೆ ತಿರುಚಿರಪಳ್ಳಿ, ಸೇಲಂ, ಮತ್ತು ಕೊಯಮುತ್ತೂರು ಜಿಲ್ಲೆಗಳಲ್ಲಿ ಇದರ ವ್ಯವಸಾಯವುಂಟು.

ಒರಿಸ್ಸಾ ರಾಜ್ಯವೂ ಅರಿಸಿನದ ಬೆಳೆಗೆ ಹೆಸರುವಾಸಿಯಾಗಿದೆ. ಇದರ ನಂತರ ಗುಜರಾತ್‌ನ ಖಾರಿ ದೇಶದಲ್ಲಿಯೂ, ಮಹಾರಾಷ್ಟ್ರದ ಠಾಣಾ, ಸಾಂಗ್ಲಿ, ಸೊಲ್ಲಾಪುರ ಜಿಲ್ಲೆಗಳಲ್ಲಿಯೂ ತಕ್ಕ ಮಟ್ಟಿಗೆ ಅರಿಸಿನದ ಉತ್ಪಾದನೆಯಾಗುತ್ತಿದೆ. ಇತರ ರಾಜ್ಯಗಳಾದ ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಾಸ್ಥಾನ, ಪಂಜಾಬ, ಪಶ್ಚಿಮ ಬಂಗಾಲ, ಮತ್ತು ಮೈಸೂರು ರಾಜ್ಯಗಳಲ್ಲಿಯೂ, ಅಲ್ಲಲ್ಲಿ ಕೆಲವು ಕಡೆ ಅರಿಸಿನದ ಬೆಳೆ ತೆಗೆಯುತ್ತಾರೆ. ಒಟ್ಟಿನಲ್ಲಿ ಈ ಬೆಳೆ ಸುಮಾರು 1½–2 ಲಕ್ಷ ಎಕರೆ ಭೂಮಿಗಳಲ್ಲಿ ಸಾಗುವಳಿಯಾಗುತ್ತದೆ ಪದಗೊಳಿಸಿದ ಹಾಗೂ ಒಣಗಿಸಿದ ಅರಿಸಿನದ ಒಟ್ಟು ಪ್ರಮಾಣ ಸುಮಾರು 2 ಲಕ್ಷ ಟನ್ನುಗಳಿವೆಯೆಂದು ಲೆಕ್ಕ ಹಾಕಲಾಗಿದೆ.

ಆಮದು—ರಫ್ತು

ಈ ಅರಿಸಿನವನ್ನು ಯಾವುದೇ ಅನ್ಯ ದೇಶಗಳಿಂದ ಆಮದು ಮಾಡಿಕೊಳ್ಳುವ ಪರಿಸ್ಥಿತಿ ಭಾರತಕ್ಕಿಲ್ಲ. ಈ ದೇಶದಿಂದ ಪರ ದೇಶಗಳಿಗೆ ರಫ್ತಾಗುವ ಅರಿಸಿನದ ಪ್ರಮಾಣ ಸುಮಾರು 11–12 ಸಾವಿರ ಟನ್ನುಗಳಷ್ಟಿದ್ದು ಅದು ಒಟ್ಟು ಉತ್ಪಾದನೆಯ ಶೇ. 8–10 ರಷ್ಟಾಗುತ್ತದೆ. ಉಳಿದೆಲ್ಲ ಭಾಗವು ದೇಶದೊಳಗೇ ಬಳಸಲ್ಪಡುತ್ತದೆ. ಭಾರತದಿಂದ ಅರಿಸಿನವನ್ನು ಆಮದು ಮಾಡಿಕೊಳ್ಳುವ ದೇಶಗಳಲ್ಲಿ ಸಿಲೋನ್, ದಕ್ಷಿಣ ಆಫ್ರಿಕ, ಇರಾನ್, ಏಡನ್, ಅಮೆರಿಕ ಮತ್ತು ಇಂಗ್ಲೆಂಡ್ ದೇಶಗಳು ಗಣ್ಯವಾದುವು.

ಅರಿಸಿನದ ಜಾತಿ–ನಮೂನೆಗಳು

ವ್ಯವಸಾಯಿಕ ದೃಷ್ಟಿಯಿಂದ ಅರಿಸಿನದಲ್ಲಿ ಎದ್ದು ಕಾಣುವಂತಹ ಜಾತಿ ನಮೂನೆಗಳೇನು ಇಲ್ಲ. ಆದರೆ ಕೆಲವು ಪ್ರದೇಶಗಳಲ್ಲಿ ಬೆಳೆದ ಗಡ್ಡೆಗಳು ಮಾತ್ರ ಆವುಗಳ ಬಣ್ಣ, ಗುಣ ಇತ್ಯಾದಿಗಳಿಗೆ ಪ್ರಸಿದ್ಧವಾಗಿವೆ. ಮಲಬಾರ್ ಪ್ರದೇಶದಲ್ಲಿ ಬೆಳೆಯುವ ಗಡ್ಡೆಗಳು ಔಷಧೀಯ ದೃಷ್ಟಿಯಿಂದ ಕೆಲವು ವ್ಯಾಧಿಗಳಿಗೆ ಉತ್ತಮವೆಂದೂ ಪೂಣೆ ಬೆಂಗಳೂರು ಪ್ರದೇಶಗಳಲ್ಲಿ ಬೆಳೆಯುವುವು ಹೆಚ್ಚು ತೀಕ್ಷ್ಣವಾದ ಬಣ್ಣವನ್ನು ಹೊಂದಿರುವುದೆಂತಲೂ ಹೆಸರುವಾಸಿಯಾಗಿವೆ. ಕಾಡುಗಳಲ್ಲಿ ಬೆಳೆಯುವ ಅರಿಸಿನದ ಗಡ್ಡೆಗಿಂತ ವ್ಯವಸಾಯ ಮಾಡಿ ಬೆಳೆಸುವ ಗಡ್ಡೆಗಳು ಹೆಚ್ಚು ಸುವಾಸನೆಯುಳ್ಳದ್ದಾಗಿರುತ್ತವೆ. ಪೂರ್ವ ತೀರ ಪ್ರದೇಶಗಳಲ್ಲಿ ಬೆಳೆಯುವ ಅರಿಸಿನಗಡ್ಡೆಗಳು ಎಳೆಯವಿದ್ದಾಗ

(ಇಸ್ಪತ್ತಿಂಟನೇ ಪುಟ ನೋಡಿರಿ)

ಸ್ವಾತಂತ್ರ್ಯೋತ್ಸವದ ಶುಭಾಶಯಗಳು

ಕಾರವಾರದ ನಿಸರ್ಗ ಸೌಂದರ್ಯ ಸವಿಯಲಾಗಮಿಸುವ

ಪ್ರವಾಸಿ ಅತಿಥಿಗಳ ಹಾರ್ದಿಕ ಸತ್ಕಾರಕ್ಕೆ ನಾವು ಮೊಸಲು

ಉಡುಪಿ ಶ್ರೀಕೃಷ್ಣ ವಿಲಾಸ

ಮೈನ್ ರೋಡ್, ಕಾರವಾರ

'ಐಸ್‌ಕ್ರೀಮ್' ಮುಂತಾದ ತಂಪು ಪಾನೀಯಗಳು ನಮ್ಮ ವೈಶಿಷ್ಟ್ಯ

ಗ್ರಾಹಕರ ತೃಪ್ತಿಯೇ ನಮ್ಮ ಧ್ಯೇಯ

ಮ್ಯಾನೇಜರ್: ಕೆ. ಸಂಜೀವ ರಾವ್

Please visit & enjoy

UDIPI SHRI KRISHNA VILAS

Main Road, KARWAR

Printed & Published by K. H. Shetty at the Navayuga Press, Udipi, S. India.

ಬದುಕಿ ಬಾಳಲಿ ಬಾವುಟದ ಅಡಿಯಲಿ!

—೧—

ಸ್ವಾತಂತ್ರ್ಯ ಸುಖ ಬಯಸಿ, ಸರ್ವ ಕಷ್ಟವ ಸಹಿಸಿ
ಕಾದಿದೆವು ಸ್ವಾತಂತ್ರ್ಯ ಕದನದಲ್ಲಿ
ಧೈರ್ಯ ಸಾಹಸ ವರಿಸಿ, ಪಾರತಂತ್ರ್ಯವ ಹರಿಸಿ
ಸ್ವಾತಂತ್ರ್ಯ ಗಳಿಸಿದೆವು ಶೀಘ್ರದಲ್ಲಿ.

—೨—

ಸತ್ಯ-ಶಾಂತಿ-ಅಹಿಂಸೆ ಆಯುಧಗಳನು ಧರಿಸಿ
ಬಿಳಿಯರೆದೆಗೆಟ್ಟು ಕಾಲ್ತೆಗೆದರಂದು.
ಭೃತ್ಯಭಾವವು ತೊಲಗಿ, ಬಿಡುಗಡೆಯು ಬರಲೊದಗಿ
ನುಡಿದೆವೊಂದೇ ತಾಯ ಮಕ್ಕಳೆಂದು.

—೩—

ಸ್ವಾತಂತ್ರ್ಯ ಕೈಗೆ ಬರೆ, ಕಾಮಧೇನುವನು ಕರೆ—
ದುಂಬ ಕನಸನು ಕಂಡೆನಂದು ನಾವು;
ಆಂಗ್ಲೇಯರೊಡೆತನವು ತೊಲಗಿದರು, ಬಡತನವು
ಅಳಿದಿಲ್ಲ, ಕಳೆದಿಲ್ಲ ಕಾವು ನೋವು.

—೪—

ಬಿಡುಗಡೆಯ ಪಡೆದು ಸ್ವತಂತ್ರನಾಗಲು ಭರತ—
ಖಂಡ ಹರ್ಷಾಂಭೋಧಿಯಲಿ ಮುಳುಗಿತು.
ಜಡನಿದ್ರೆಯಿಂ ಜನರ ಬಡಿದೆಬ್ಬಿಸುವ ತೆರದಿ
ಜಯಭೇರಿ ಭಾರತದಿ ಮೊಳಮೊಳಗಿತು.

—೫—

ಸ್ವಾತಂತ್ರ್ಯ ಬರಲು ಸಚಿವರದಾಯ್ತು ಸಾಮ್ರಾಜ್ಯ
ನಡೆಯುತ ಮಹಾಚುನಾವಣೆಯ ಆಟ;
ಅಭಿವೃದ್ಧಿ ಹೆಸರಿನಲಿ ರಾಷ್ಟ್ರ ಸಾಲಕ್ಕೆ ಬಲಿ —
ಯಾಗೆ ದೇಶಕೆ ಬೇಕೆ ಬೇರೆ ಮಾಟ?

—೬—

ಪರರ ಸೊತ್ತಹರಿಸಿ, ಧನಿಕ ತಾನೆಂದೆನಿಸಿ
ಮೆರೆವ ಮಾನವನಿಗೆ ಧಿಕ್ಕಾರವಿರಲಿ,
ದೇಶ ಸೇವೆಗೆ ತನುವ ಧನವ ಧಾರೆಯನೆರೆವ
ನಿಃಸ್ವಾರ್ಥಿ ನರಗೆ ನಮಸ್ಕಾರ ಸಲಲಿ!

—೭—

ಸ್ವಾತುತ್ರ್ಯವೆಂದು ಸ್ವೈಚ್ಛೆಂದದಿಂ ವರ್ತಿಸುವ
ಸ್ವಾರ್ಥಿಗಳೆ ದೇಶದೇಳಿಗೆಗೆ ಕೊಡಲಿ.
ಅಜ್ಞಾನ—ಬಡವ - ಬಲಹೀನರನ್ನುದ್ಧರಿಸಿ
ಜ್ಞಾನ —ಧನ—ಬಲವ ಮುಡಿಪಾಗಿ ಕೊಡಲಿ!

—೮—

ಸ್ವಾತಂತ್ರ್ಯ ಸೌಧದಲಿ ಸುಖಶಯ್ಯೆಯಲಿ ಮಲಗಿ
ಸುಖಿಸಬೇಕೆಂಬಾಸೆ ಎನಗೆ ಇರದು;
ಅನ್ಯೋನ್ಯ ಪ್ರೀತಿ ವಿಶ್ವಾಸ ಸೌಹಾರ್ದದಲಿ
ಬಾಳ್ದಂದು ಬದುಕು ಬಂಗಾರವಹುದು.

—೯—

ಸ್ವಾತಂತ್ರ್ಯ ಸ್ವರ್ಗದಲಿ ಸುರಪತಿಯ ಪಟ್ಟದಲಿ
ಸುಖಭೋಗಭಾಗ್ಯವನು ಭನಿಸಲೆಳಸೆ
ಸ್ವಾತಂತ್ರ್ಯ ಬಂದಿಹುದು ಸರ್ವರೇಳಿಗೆಗಾಗಿ
ಭಾರತಾಂಬೆಯ ಬಂಧಮುಕ್ತಿಗೊಳಿಸೆ.

—೧೦—

ಸ್ವಾತಂತ್ರ್ಯ ಪೀಯೂಷದೊಂದಿಗೆ ಸ್ವಾರ್ಥ ವಿಷ
ಹಂತ! ಹುಟ್ಟಿಹುದದನು ಶಿವ ಕುಡಿಯಲಿ
ಸ್ವಾತಂತ್ರ್ಯಸುಧೆಯುಂಡು ಜನರು ಸುಮನಸರಾಗಿ
ಬದುಕಿ ಬಾಳಲಿ ಬಾವುಟದ ಅಡಿಯಲಿ!

—ಶ್ರೀ ಎಸ್. ತಿರುಮಲೇಶ್ವರ ಭಟ್ಟ, ವಿದ್ವಾನ್.

ಬುದ್ಧ

ಬಿದ್ಧ! ಅಲ್ಲೆ ಬೋಧಿ ಮರದಡಿಯಲ್ಲಿ ಧ್ಯಾನಿಸುತಿರು
ಶತ ಶತಮಾನ ಕಳೆದರೂ ಏಳಬೇಡ
(ಈ ನಾಡ ನೋಡಬೇಡ)
ಬಿಗಿದ ಪದ್ಮಾಸನದಿ ಕಣ್ಮುಚ್ಚಿ ತಪೋಮಗ್ನನಾಗು—
ಮತ್ತಲ್ಲೆ ಕಣ್ಮುಚ್ಚು!
ಬರಿಯ ಏಳು ವರ್ಷದ ತಪದ
ಸಾಧನೆಯಿಂದ ಸಿದ್ಧಿಸಿದೆಯಾ, ಬುದ್ಧಿ?—ಬುದ್ಧ!
ಮುಪ್ಪು, ಮರಣ, ರೋಗ ಚಿಂತೆಗಳಿಂದ
ನೊಂದಿರುವ ಜನತೆಯುದ್ಧಾರಕ್ಕೆ.
ದುಃಖ ಮೂಲವ ಶೋಧನೆಗೆ,
ಲೋಕಹಿತ ಸಾಧನೆಗೆ,
ಮಾರ್ಗತೋರುವ ಬುದ್ಧಿ ಸಿದ್ಧಿಸಿದೆಯಾ?—ಬುದ್ಧ!
ಸಟೆಯು ಸಲ್ಲದು, ಹಿಂಸೆ ಸಲ್ಲದು,
ಕಸಟ ಸಲ್ಲದು, ಕಳವು ಸಲ್ಲದು—
ಮತ್ತೆ ಬೋಧಿಸುವೆಯಾ ಆಷ್ಟಾಂಗ ಮಾರ್ಗ?—ಬುದ್ಧ!
'ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಷುಕದಾಚನ'
ಗೀತೆಯುಪದೇಶ ಮರಳಿ ಸಾರುವೆಯಾ?
ಭವದ ಬಂಧನ ಕಡಿದು, ಇಹದ ಮೋಹವ ತೊರೆದು
ಶುದ್ಧ ಜೀವನ ನಡೆಸೆ,
"ಪುನರಪಿ ಜನನಂ ಪುನರಪಿ ಮರಣಂ"
ಇಲ್ಲವೆನ್ನುವೆಯಾ?—ಬುದ್ಧ!
'ಜಪ ಬೇಡ, ತಪ ಬೇಡ, ನೇದಶಶನವು ಬೇಡ,
ಯಜ್ಞಕುಂಡಕೆ ಹೋಮಿಸಲು ಬೇಡ,
ಹಿಡಿಪ ಕರ್ಮವ ಬಿಡದೆ, ಧರ್ಮ ಜೀವನ ನಡೆಸೆ,
ಮರಳಿ ಜನಿಸವ ಮುಕ್ತಿ ಸತ್ಯ'
ತತ್ವ, ವೇದಾಂತಗಳು ಯಾರಿಗಾಗಿ?—ಬುದ್ಧ!
ಕಪಿಲವಸ್ತುವಿನರಸು ಶುದ್ಧೋದನನ ಮಗನಾಗಿ,
ಸತಿಶಿರೋಮಣಿ ಯಶೋಧರೆಯ ಕೈಹಿಡಿದು,
ಮುದ್ದು ಕುವರ ರಾಹುಲನಂ ಪಡೆದು,
ಸಕಲ ರಾಜವೈಭವವ, ಭೋಗಭಾಗ್ಯದ,
ಸುಖದ ಸುಸ್ಪತ್ತಿಗೆಯು ಲಭಿಸಿರಲು,
ಯಾವ ಕೊರತೆಗೆ ರಾಜ್ಯ ಬಿಟ್ಟೋಡಿದೆ?—ಬುದ್ಧ!
ಜಗತ್ತುಂಬ ಕಷ್ಟ, ದುಃಖದೊಳಿರಲು
ಅಧಿಕಾರ ಬೇಡವೆನ್ನುವೆಯಾ?
ರಾಜಾಧಿಕಾರ ನಡೆಸಲರಿಯದೆ
ನಟ್ಟಿರುಳು ಓಡಿಹೋಗಿರುವೆ —ಬರಿಹೇಡಿ!—ಬುದ್ಧ!
"ಬುದ್ಧ ಶರಣಂ ಗಚ್ಛಾಮಿ,
ಸಂಘಂ ಶರಣಂ ಗಚ್ಛಾಮಿ
ಧರ್ಮಂ ಶರಣಂ ಗಚ್ಛಾಮಿ"
ನುಡಿಯ ಬೇಕಾಗಿರುವ ನಾಡು
ಜನಹಿತವ ಕಡೆಗಣಿಸಿ,
ಅಧಿಕಾರ ಗದ್ದುಗೆಗೆ ಆಂಟಿ ಕೂತಿರುವ
ನಿನ್ನ ದೇಶದ ಜನರ ನೋಡಬೇಡ!—ಬುದ್ಧ.

—ಶ್ರೀ ಪಿ. ರಾಮ ಭಟ್, ಬಿ.ಎ.,ಬಿ.ಇಡಿ.,
ಪೆರಡಾಲ.

ಗಾಂಧಿ ಮಂದಿರ

ಎರಡು ಲಕ್ಷವ ಸುಂಗಿ ರಚಿಸಿದರು ಸದನ
ಮಂತ್ರಿ ಶ್ರೇಷ್ಠರು ಕಡಿಯಲಿದೋ "ಗಾಂಧಿ ಭವನ"
ಸಭೆ ನೃತ್ಯಗಳ ಜೊತೆಗೆ "ಬ್ಯಾಂಡಿ ಗೋಡ್ಸೆನು"
ಗಾಂಧಿ ಸೇವೆಗೆ ಮತ್ತೆ ಸಾಕ್ಷಿ ಬೇಕೇನು?

ರಾವಣ ದಿಗ್ವಿಜಯ!

ಚಂದ್ರನೆಡೆ ಸುತ್ತಾಡೆ ರೊಕ್ಕೆಟು ಬಾಣ
ಶಶಿ ಬೆದರಿ ಬಿವರಿದನು ಎಂಥ ಅಪಮಾನ!
ಗುರು ಶುಕ್ರರೂ ಕೂಡಿ ಓಡಿದರು ದೂರ
"ರಾವಣನ ದಿಗ್ವಿಜಯ"ಕುಂಟೆ ಪರಿಹಾರ!

'ದೇವಕೀನಂದನ', ನಿರ್ಜಾನ.

ಗಾನ ಜೀವನ



ನೀನಾರು ಸುಂದರಿಯೆ? ಗಾನರಸವಲ್ಲರಿಯೆ
ಹಾಡುತಿಹ ಭಂಗಿಯಲಿ ನಿಂತ ಬಾಲಿಕೆಯೆ!
ದೂರದಲ್ಲಿಹ ನಲ್ಲನನು ನೆನೆದು ದಿನವೆಲ್ಲ
ಹಾಡುವುದೆ? ಪೇಳೆನ್ನೊಳಿಂತು ನಾಚಿಕೆಯೆ?

೨

ಎನೆಯಿಕ್ಕದಿಹ ನಯನದಿಂದ ತನ್ನಯ ಪ್ರಿಯನ
ಬರವ ನೋಡುತಲಿಂತು ನಿಂತಿರುವುದೇನು?
ಬುಡುಬುಡಿಕೆ ಬಾರಿಸುತ ಬೇಸರ ನಿವಾರಿಸುತ
ಬಳುಕುತಿಹ ಬಳ್ಳಿಯೊಳು ನಿಂತ ಬೆಡಗೇನು?

೩

ಆಂತರಂಗದಿ ಹಾಡಿ ಲಲಿತರವ ಸುಖ ನೀಡಿ
ಭಾವುಕರ ಬಗೆಗೊಳಿಪ ಬಾಲೆ ನೀನಾರು?
ನಿನ್ನ ನವತಾರುಣ್ಯ ಲಲಿತತರ ಲಾವಣ್ಯ
ಕಂಡು ಸಂತಸ ಪಡದ ರಸಿಕನವನಾರು?

೪

ಮುಖ ಮೂಡಿಬಹ ಚಂದ್ರ, ಕುಚಕಲಶ ಘನಸಾಂದ್ರ
ಮೆರೆಯುತಿವೆ ಮೇಲದರ, ಮಣಿಹಾರಯಷ್ಟಿ
ಸುಳಿನಾಭಿ ರಸದ ಮಡು, ಬಳುಕುತಿಹ ನಿನ್ನ ನಡು
ತಪಚರಿಸಿ ಕೃಶವಾದುದೆನಲೊಂಪು ಮುಷ್ಟಿ!

೫

ಕವಿಗೇಳಿಸದ ಗಾನ ಹೊಕ್ಕು ಹೃದಯವನು ಮೆನ-
ಸೆಳೆಯುತಿವೆ ಸುಮುಖಿ, ನೇನೇಂ ಮಾಯಗಾತಿ?
ಏನೆಂಬೆ? ಬೇಲೂರ ಬಾಲೆಯೇ? ನಿನ್ನಧರ-
ದರ್ಶನದಿನಾಯ್ತು ದಿವ್ಯ ರಸಾನುಭೂತಿ!

ಕೊರಗು ದನಿ

(ಚತುರ್ಥ ಶತದಿ)

ಕನ್ನಡದ ಏಕತೆಯ ಮಾರ್ದನಿಯು ಕೇಳ್ವಾಗ
ಬನ್ನಬಡುತಿಪ ಗಡಿಯ ಜನವಿಂತು ಪೇಳ್ದುಂಕಿ
ತನ್ನತನವಿಂದಿಲ್ಲ, ತನಗಾರು ಹಿತರಿಲ್ಲ,
ತನ್ನ ಪಾಡೇ ಪಾಡು, ನಾಡು ಕಾಡಾಯ್ತು!
ನಾಡಿನಭಿಮಾನಿಗಳು ಕುಣ್ಣುಕೋರೈಸಿದರೆ
ನಾಳಿನಾ ದಿನವದನು ಕಳೆವೆವೆಂತೊ?
ಕನ್ನಡದ ಸಾಹಿತ್ಯ ಸಂಸ್ಕೃತಿಯ ಬಾಸವೊ?
ಇನ್ನು ಕೇಳುವರಾರು ನಮ್ಮ ಬವಣೆಯನು?
ರಾಜ್ಯದಾ ಕೇಂದ್ರವಾ ಹಿರಿಯಾಳುಗಳ ಮನವು
ಸುಮ್ಮನಾದುದು ಈಗ ಕಂಡು ನಮ್ಮನ್ನು!
ಬಾಳುವೆವು ಕಾಯವನು ಉಸಿರೊಂದು ಬಿಡುವನಕ,
ತಾಳುತಲಿ ನಾವಿಂತು ಪರರ ದಾಳಿಯನು!
"ಜಳದ ಊರಿಗೆ ಉಳಿದವನೆ ಗೌಡ"ನೆಂಬೆಂಬ
ಕಳಕಳಿಯ ಮಾತವಾ ನೆನಹಾಗುತಿಹುದು!

(ಕಾಸರಗೋಡು, ಬೆಳಗಾವಿ ಮೊದಲಾದೆಡೆಯ
ಗಡಿಗಳ ಜನರ ಅವಸ್ಥೆಯನ್ನು ನೆನೆದು ಬರೆದುದು!)

—ಶ್ರೀ ಕೆ. ವೆಂಕಟರಾಯಾಚಾರ್ಯ,
ಸುರತ್ಕಲ್ಲು.

೬

ಚೆನ್ನಕೇಶವನೋಲಗದ ಸಾಲೆಯನು ಸಾರ್ದು
ಗಾನಾಮೃತವ ಸುರಿಸುತವನ ಮನವೊಲಿಸಿ;
ಭಾವುಕರ ಮನತಣಿಸಿ ಗಾನಜೀವನೆಯೆನಿಸಿ
ಬಾಳು ಸೌಭಾಗ್ಯವತಿಯಾಗಿ ಮುದವೆರಸಿ!

—ಕಾವ್ಯಾರಾಧಕ.

ಹದಿನೈದು

ದಕ್ಷಿಣ ಕನ್ನಡದ ಶ್ರೀ ಮಹಿಷ-ಮಹಿಷಾಸುರಮರ್ದಿನಿ ವಿಗ್ರಹಗಳಲ್ಲಿ ವೈವಿಧ್ಯ

ಧಾರ್ಮಿಕ ಶಾಂತ ವಾತಾವರಣಕ್ಕೆ ದಕ್ಷಿಣ ಕನ್ನಡ ಮತ್ತೊಂದು ಹೆಸರು. ಇಲ್ಲಿ ಪೂರ್ವ ಚಾಲುಕ್ಯರಿಗಿಂದಲೂ ಮಹಿಷ—ಮಹಿಷಾಸುರ ವಿಗ್ರಹಾರಾಧನೆ ಮನೆಮಾಡಿಕೊಂಡಿದ್ದ ಜಿಲ್ಲೆಯಲ್ಲಿ ದೊರೆಯುವ ಈ ವಿಗ್ರಹಗಳ ಸಂಕ್ಷಿಪ್ತ ಪರಿಚಯವನ್ನು ಡಾ। ಭಟ್ಟರು ಈ ಲೇಖನದಲ್ಲಿ ಮಾಡಿಕೊಟ್ಟಿದ್ದಾರೆ.

ಲೇಖಕರು :

ಡಾ। ಪಿ. ಗುರುರಾಜ ಭಟ್

++ ++

ಪೌರಾಣಿಕ ಕಾಲದಿಂದಲೂ ತುಳುನಾಡೆಂದು ಪೆಸರು ಪಡೆದ ದಕ್ಷಿಣ ಕನ್ನಡ ಜಿಲ್ಲೆಯು ಧಾರ್ಮಿಕ ವೈವಿಧ್ಯದಿಂದ ಕೂಡಿದ ಸಂಗತಿ ಇತಿಹಾಸದ ಪುಟಗಳಿಂದಲೂ ಪ್ರತ್ಯಕ್ಷವಾಗಿಯೂ ವೇದ್ಯವಾಗುತ್ತದೆ. ವೈಷ್ಣವ ಶಾಕ್ತೇಯ, ಶೈವ ಸೌರ, ಗಾಣಪತ್ಯ ನುತ್ತು ಪರಿಪರ ಪಂಥಗಳು ಈ ನಾಡಿನಲ್ಲಿ ಒಟ್ಟೊಟ್ಟಿಗೆ ಅಸ್ತಿತ್ವದಲ್ಲಿದ್ದು ಅವುಗಳಿಗೆ ಸಂಬಂಧಿಸಿದ ಆರಾಧನಾ ಸಂಪ್ರದಾಯಗಳು ಇಂದಿನ ತನಕವೂ ಉಳಿಯುಮಿ ಬಂದಿವೆ. ಜೊತಾರಾಧನೆಯಂತೂ ಜನಸಾಮಾನ್ಯರ ನುತ್ತೀಯ ಮಾನಾಗಿ ಉಳಿಯುಮಿ ಬಂದಿದೆ. ಈ ಪಂಥಗಳು ಜನಸಮುದಾಯವನ್ನು ಪರಸ್ಪರ ಬೇರ್ಪಡಿಸದೆ ಜನರಲ್ಲಿ ಐಕ್ಯತೆಯನ್ನೇ ಸಾಧಿಸಿದಂತೆ ತಿಳಿದು ಬರುತ್ತವೆ. ಈ ಜಿಲ್ಲೆಯಲ್ಲಿ ಇತಿಹಾಸ ಕಾಲದಿಂದಲೂ ಸ್ಥಾಪಿತವಾದ ಶಾಂತಿಯುತ ವಾತಾವರಣವೇ ವ್ಯಾಪಕವಾದ ಸಂಪ್ರದಾಯಗಳು ಕಾಲಿಸಲವೆಗೆ ತಳಿಯದೆ ಉಳಿದುಬರಲು ಕಾರಣವೆನ್ನ ಬಹುದು. ಕುಲನಾಡಿನ ರಾಜಕೀಯ ಪರಿಸ್ಥಿತಿಯಲ್ಲಿ ರಾಜಕೀಯ ಉಲ್ಲೋಲ ಕಲ್ಲೋಲ ಒಮ್ಮೊಮ್ಮೆ ಕಂಡು ಬರುವುದಿಲ್ಲ. ಕೇರಳದ ನಾಯಕರ ಆಳ್ವಿಕೆಯಲ್ಲಿ ಜೈನಧರ್ಮಕ್ಕೆ ಉಂಟಾದ ತಾತ್ಕಾಲಿಕ ಅಪಘಾತವನ್ನು ಹೊರತಾಗಿ ಬೇರಾವ ಸಂದರ್ಭದಲ್ಲೂ ಮತೀಯ ಕ್ಷೋಭೆ ಕಂಡು ಬಂದುದಿಲ್ಲ. ಇದಾಗಿ ನೂರಾರು ಪ್ರಾಚೀನ ಸಂಪ್ರದಾಯಗಳೂ ಸಾವಿರಾರು ದೈವ ದೇವಸ್ಥಾನಗಳೂ ಗುಡಿಗೋಪುರಗಳು ಉಳಿದಿವೆ

ದಕ್ಷಿಣ ಕನ್ನಡದ ಧಾರ್ಮಿಕ ಚರಿತ್ರೆಯನ್ನವಲೋಕಿಸಿದಾಗ ಶಾಕ್ತೇಯ ಪಂಥವು ಸುಮಾರು ಕ್ರಿ. ಶ 7—8ನೇ ಶತಮಾನದಿಂದಲೂ ಬಹು ಪ್ರಬಲವಾಗಿದ್ದಂತೆ ತಿಳಿದು ಬರುತ್ತದೆ. ಈ ಶಾಕ್ತೇಯ ಪಂಥದ ಪ್ರಮುಖ ನಿಸ್ಸಾಹಾಕೆಯರ ಆರಾಧನೆ. ಮಹಿಷ ಮರ್ದಿನಿಯ ಆರಾಧನೆ. ರಾಜರಾಜೇಶ್ವರಿ—ಸಾತಾಯಿಣಿ ಆರಾಧನೆ, ಶಾರದಾ ಪೂಜೆ ಇತ್ಯಾದಿಯಾಗಿ ನೈವಿಧ್ಯ ಕಂಡು ಬರುತ್ತದೆ. ಈ ಜಿಲ್ಲೆಯಲ್ಲಿ ಮಹಿಷ ಮರ್ದಿನಿಯ ಆರಾಧನೆಯು ಎಷ್ಟು ಪ್ರಬಲವಾಗಿತ್ತೆಂದರೆ ಜಿಲ್ಲೆಯ ಇಡೀ ಒಂದು ಸಾವಿರ ಸಣ್ಣ ಗಳಿಗಿಂತಲೂ ಹೆಚ್ಚು ಪ್ರಾಚೀನವಾಗಿ ಕಂಡುಬರುವ ದೇವಾಲಯಗಳೇ ಸಾಕ್ಷಿ ರೂಪದಲ್ಲಿ ನಿಂತಿವೆ. ತುಳುನಾಡಿನ ಪ್ರಮುಖ ಮಹಿಷ—ಮಹಿಷಾಸುರ ಮರ್ದಿನಿ ದೇವಾಲಯಗಳಲ್ಲಿ ಕಂಡುಬರುವ ವಿಗ್ರಹಗಳ ಕಿರುಪರಿಚಯವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ದಕ್ಷಿಣ ಕನ್ನಡದಲ್ಲಿ ಸ್ಥಾಪಿತವಾದ ಈ ಶಕ್ತಿ ದೇವಾಲಯಗಳ ಮೂರ್ತಿಗಳನ್ನು ಪರಿಶೀಲಿಸಿದಾಗ ಅವುಗಳ ಶೈಲಿಯನ್ನಾಧರಿಸಿ ಕಾಲಗಣನೆ ಮಾಡಲು ಸಾಧ್ಯವಿದೆ. ಬಾದಾಮಿ ಚಾಲುಕ್ಯರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಸಾಮ್ರಾಟರು, ಕೆಳದಿನಾಯಕರು—ಇವರ ಕಾಲದ ಶಿಲ್ಪ ಶೈಲಿಯು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಮೂರ್ತಿಗಳಿರುವ ದೇವಾಲಯಗಳಲ್ಲಿ ಹಲವು ಜೀರ್ಣೋದ್ಧಾರಕ್ಕೊಳಪಟ್ಟಿದ್ದರೂ ಮೂಲಸ್ಥಾನ ಮೂರ್ತಿಗಳನ್ನು ಪರಿಶೀಲಿಸಿದಾಗ ಅವು ಕಾಲಮಾನದ ಪರಿಚಯವನ್ನು ಮಾಡಿಕೊಡ ಬಲ್ಲುವು.

ಈ ಸಂದರ್ಭದಲ್ಲಿ ಶಿಲ್ಪ ಶಾಸ್ತ್ರಕ್ಕೆ ಅನುಗುಣವಾದ ಕೆಲವು ಅನುಮಾನಿತ ಸತ್ಯ ಹಾಗೂ ಊಹೆನೆಗಳನ್ನೂ (assumptions) ಓದುಗರ ಅವಗಾಹನೆಗೆ ತರಲು ಬಯಸುತ್ತೇನೆ

1) ಮಹಿಷ ಮರ್ದಿನಿ ವಿಗ್ರಹಗಳು ಮಹಿಷಾಸುರ ಮರ್ದಿನಿ ವಿಗ್ರಹಗಳಿಗಿಂತ ಪ್ರಾಚೀನ. 2) ಮಹಿಷ ಮರ್ದಿನಿ ವಿಗ್ರಹಗಳಲ್ಲಿ ಮಹಿಷನ (ಕೋಣ)ಶಿಲ್ಪ ನಿರ್ದೇಶ ಮಾತ್ರವಿರುತ್ತದೆ ಮಹಿಷಾಸುರ ಮರ್ದಿನಿ ವಿಗ್ರಹಗಳಲ್ಲಿ ಮನುಷ್ಯನ ದೇಹ ಮಹಿಷನ ಶಿರಸ್ಸನ್ನು ಒಳಗೊಂಡ ಶಿಲ್ಪವಾಗಲೀ, ಮಹಿಷನ ದೇಹ ಮನುಷ್ಯನ ಶಿರಸ್ಸನ್ನು ಒಳಗೊಂಡ ಶಿಲ್ಪವಾಗಲೀ, ಮಹಿಷನ ಕುತ್ತಿಗೆಯಿಂದ ಅರ್ಧ ಯಾ ಸಂಪೂರ್ಣ ಹೊರಬಂದ ಅಸುರನ ಮೂರ್ತಿಯು ಶಿಲ್ಪವಾಗಲೀ ಕಂಡು ಬರುತ್ತನೆ. 3) ದೇವಿಯ ವಾಹನವಾದ ಸಿಂಹವು ನಿಶ್ಚಿಯ ರೂಪದಲ್ಲಿದ್ದರೆ, ಕಬನದಲ್ಲಿ ಭಾಗವಹಿಸುವ ನಿರ್ದೇಶಕ್ಕಿಂತ ಪ್ರಾಚೀನ. 4) ದೇವಿಯು ಧರಿಸಿದ ತ್ರಿಶೂಲದ ಅಗ್ರಭಾಗವು ಮೇಲ್ಮುಖವಾಗಿದ್ದರೆ ಅದು ಪ್ರಾಚೀನ. 5) ದೇವಿಯು ಧರಿಸಿಕೊಂಡ ಚಕ್ರ, ಶಂಖಾಯುಧಗಳು ಪ್ರಯೋಗ ರೀತಿಯಲ್ಲಿದ್ದರೆ ಇದು ಪ್ರಾಚೀನವಾಗ ಬಲ್ಲುದು 6) ಪ್ರಭಾವಳಿ ವಿರಹಿತವಾದ ಸಂಪೂರ್ಣ ವಿಗ್ರಹಗಳು ಕಾಲಮಾನದಲ್ಲಿ ಪ್ರಾಚೀನ. 7) ಪ್ರಮಾಣ ಕಲ್ಪನೆ ಕಡಿಮೆಯಿದ್ದು ವಿತಾಲಂಕಾರವುಳ್ಳ ವಿಗ್ರಹಗಳು ಇತರ ಮೂರ್ತಿಗಳಿಗಿಂತ ಪ್ರಾಚೀನ 8) ದರಿಸಿರುವ ವಸ್ತ್ರಾಲಂಕಾರವು ಕಟಿಬಂಧದ ರೀತಿಯಲ್ಲಿದ್ದರೆ, ಕೆಳಗಿನವರೆಗೆ ಹರಡಿರುವ ವಸ್ತ್ರವನ್ನು ಧರಿಸಿವ ಮೂರ್ತಿಗಳಿಗಿಂತ ಪ್ರಾಚೀನ. 9) ಮೇಲ್ಭುಜಗಳು ಭುಜದಿಂದಲೇ ಹೊರಟಿದ್ದರೆ ಅಥವಾ ಕೆಳ ಬಾಹುಗಳ ಕೆಳಗಣ ಭಾಗಗಳಿಂದ ಹೊರಟಿದ್ದರೆ ಅಂತಹ ವಿಗ್ರಹಗಳು ಪ್ರಾಚೀನ. 10) ಕಿರೀಟವು ಅತಿ ಚಿಕ್ಕದಾಗಿದ್ದರೆ, ಕಿರೀಟವಿರಹಿತವಾಗಿದ್ದರೆ, ಜಡೆ ಹೆಣೆದ ರೀತಿಯಿದ್ದಲ್ಲಿ, ಶಂಕುವಾಕಾರವಾಗಿದ್ದರೆ, ತುದಿಯಲ್ಲಿ ಕಲಶವಿರಹಿತವಾಗಿದ್ದರೆ ಅಂತಹ ಮೂರ್ತಿಗಳು ಪ್ರಾಚೀನ

ಮಹಿಷ—ಮಹಿಷಾಸುರ ಮರ್ದಿನಿ ವಿಗ್ರಹಗಳಲ್ಲಿ ದ್ವಿಭುಜ, ಚತುರ್ಭುಜ ಮತ್ತು ಅಷ್ಟಭುಜಗಳುಳ್ಳವುಗಳನ್ನು ನಮ್ಮ ಜಿಲ್ಲೆಯಲ್ಲಿ ಕಾಣಬಹುದು. ದ್ವಿಬಾಹು ಮೂರ್ತಿಗಳೂ, ಅಷ್ಟಬಾಹು ಮೂರ್ತಿಗಳೂ ಬಹಳ ವಿರಳ. ಚತುರ್ಭುಜ ಮೂರ್ತಿಗಳೇ ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ಸಾಮಾನ್ಯವಾಗಿ ಈ ಮೂರ್ತಿಗಳೆಲ್ಲ ಮೇಲಿನ ಬಾಹುಗಳಲ್ಲಿ ಚಕ್ರ ಶಂಖಗಳೂ, ಕೆಳಗಿನ ಬಲ ಬಾಹುವಿನಲ್ಲಿ ತ್ರಿಶೂಲವೂ, ಎಡಬಾಹುವಿನಲ್ಲಿ ಮಹಿಷನ ಬಾಲ ಯಾ ಸೊಡ್ಡು ಯಾ ಕೊಂಬು ಹಿಡಿದುಕೊಂಡ ನಿರ್ದೇಶವಿದೆ. ಸ್ಥೂಲವಾಗಿ ಹೇಳುವುದಾದರೆ ದ್ವಿಬಾಹು ಮಹಿಷ ಮರ್ದಿನಿ ವಿಗ್ರಹಗಳು ಅತಿ ವಿರಳ ಮತ್ತು ಹೆಚ್ಚು ಪ್ರಾಚೀನ. ಇವುಗಳು ಬೆರಳೆಣಿಕೆಯಲ್ಲೇ ಇರುವುವು ಎನ್ನಬಹುದು.

ನನಗಿಷ್ಟರ ತನಕ ದೊರಕಿದ ದ್ವಿಬಾಹು ಮಹಿಷ ಮರ್ದಿನಿ ವಿಗ್ರಹಗಳು ಈ ಕೆಳಗಿನಂತಿನೆ

1) ಪುತ್ತೂರು ತಾಲೂಕಿನ ವಿರಲವ ಪಂಚಲಿಂಗೇಶ್ವರ ದೇವಾಲಯದ ಉಪಸ್ಥಾನ ಮೂರ್ತಿಯೊದ ಹಳೆಯ ಮಹಿಷ ಮರ್ದಿನಿ (ಸ್ವಲ್ಪ ಭಿನ್ನವಾಗಿದೆ)ಇದು ಸು. ಕ್ರಿ. ಶ. 7ನೇ ಶತಕಕ್ಕೆ ಅನ್ವಯಿಸುವಂತಿದ್ದು ಪ್ರಾಯಃ ನಮ್ಮ ಜಿಲ್ಲೆಯ ಮಹಿಷ ಮರ್ದಿನಿ ವಿಗ್ರಹಗಳಲ್ಲೇ ಅತಿ ಪ್ರಾಚೀನವೆನ್ನ ಬಹುದು ಬೌದ್ಧ ಶಿಲ್ಪದ ಲಕ್ಷಣಗಳು ಇದರಲ್ಲಿ ಕಂಡು ಬರುತ್ತವೆ. ವಿಗ್ರಹದ ಎತ್ತರ 2ಅಡಿ. ಭುಜಗಳ ಸಂಖ್ಯೆ—ದ್ವಿಭುಜ. ಆಯುಧಗಳ ವೈಶಿಷ್ಟ್ಯ—ತ್ರಿಶೂಲ. ವಿಶೇಷ ಲಕ್ಷಣಗಳು—ಬಾದಾಮಿ ಚಾಲುಕ್ಯರ ಪೂರ್ವ ಕಾಲದ ಶಿಲ್ಪ ವೈಶಿಷ್ಟ್ಯವನ್ನೊಳಗೊಂಡಿದೆ.

2) ವಿರಲವ ಸಮೂಹವಿರುವ ಪುಣ್ಯವೆಂಬ ಗ್ರಾಮದಲ್ಲಿರುವ ಮೂಲಸ್ಥಾನ ಮಹಿಷ ಮರ್ದಿನಿ ವಿಗ್ರಹ (ಸು. ಕ್ರಿ. ಶ. 10-11ನೇ ಶತಕ) 2¼ ಅಡಿ—ದ್ವಿಭುಜ—ತ್ರಿಶೂಲ — ಪ್ರಭಾವಳಿ ವಿರಹಿತವಾದ ಗಟ್ಟಿ ದೊರಗು ಶಿಲೆಯಿಂದ ಕೊರೆದ ವಿಗ್ರಹ. ತಲೆಗಟ್ಟು, ಜಿಲ್ಲೆಯ ಹೆಚ್ಚಿನ ಜನಾರ್ದನ ವಿಗ್ರಹಗಳ ತಲೆಗಟ್ಟನ್ನು ಹೋಲುತ್ತದೆ.

3) ಮಂಗಳೂರಿನ ಸಮೂಹ ಉಳ್ಳಾಲ ಸೋಮನಾಥೇಶ್ವರ ದೇವಾಲಯದಲ್ಲಿರುವ ದ್ವಿಬಾಹು ಮಹಿಷ ಮರ್ದಿನಿಯ ಚಿಕ್ಕ ವಿಗ್ರಹ(ಸು ಕ್ರಿ ಶ. 8-9ನೇ ಶತಕ) 10 ಇಂಚು—ದ್ವಿಭುಜ—ತ್ರಿಶೂಲ— ಪ್ರಾಚೀನ ಉಬ್ಬು ಶಿಲ್ಪ—ಚಿಕ್ಕ ತಲೆಗಟ್ಟು.

4) ಉಡುಪಿ ತಾಲೂಕು ಬಾರಕೂರಿನ ಪಂಚಲಿಂಗೇಶ್ವರ ದೇವಾಲಯದ ನವರಂಗದಲ್ಲಿರುವ ಮಹಿಷಮರ್ದಿನಿಯ ಚಿಕ್ಕ ದಾದೊಂದು ಉಬ್ಬು ಶಿಲ್ಪ ಇದರ ಆಕಾರ ಮಾತ್ರ ಉಳಿದಿದೆ (ಸು. ಕ್ರಿ ಶ. 7-8ನೇ ಶತಕ) 10 ಇಂಚು—ಚತುರ್ಭುಜ—ಚಕ್ರ, ಶಂಖ, ತ್ರಿಶೂಲ- ಪ್ರಾಚೀನ ಉಬ್ಬು ಶಿಲ್ಪ. ತುಂಬಾ ಮೂಸಿ ಹೋಗಿದೆ.

ದ್ವಿಬಾಹು ಮೂರ್ತಿಗಳಲ್ಲಿ ಬಲಕೈಯಲ್ಲಿ ತ್ರಿಶೂಲವೂ ಎಡಕೈಯ್ಯಲ್ಲಿ ಮಹಿಷನ ಬಾಲವೂ ಹಿಡಿಕೊಂಡ ನಿರ್ದೇಶವಿರುತ್ತದೆ. ದೇವಿಯ ವಾಹನವು ಕಂಡು ಬರುವುದಿಲ್ಲ.

(ಇನ್ನೂ ಪತ್ರಿಕೆಯನೇ ಕುಡ ನೋಡಿರಿ)

Gram : VISHWA Tel : 29111

When at Bangalore

Stay at

HOTEL NATARAJA

Restaurant, Boarding & Lodging,

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಭಾರತದಲ್ಲಿ ನವತರಂಗಗಳು

(ಶುದ್ಧ ಹರಟೆ)

ಲೇಖಿಕೆಯರು :

ಶ್ರೀಮತಿ ಎಸ್. ಜೆ. ವಸಂತಕುಮಾರಿ, ಬಿ. ಎಸ್ಸಿ., ಮರವಂತೆ,

ಗದುಗಿನ ಭಾರತದಂತೆ ಜನಪ್ರಿಯ ಭಾರತವೊಂದನ್ನು ಬರೆಯಬೇಕೆಂಬ ಹಂಬಲ ಶಿವಪ್ಪನಿಗೆ. ಆತನಿಗೆ ಆಶ್ವತ್ಥಾಮಾಚಾರ್ಯರ ಅನುಗ್ರಹ ಸಿಗಲಿಲ್ಲ; ಆದರೆ, ಸುದೈವದಿಂದ ಸ್ವಪ್ನದಲ್ಲಿ ಹೆಂಡಕುಡುಕ ಬಲರಾಮ ಕಾಣಿಸಿದ— ಬರೆಯಬೇಕಾದ ಭಾರತದ ರೂಪರೇಷೆಯನ್ನು ಕೊಡಿ ಬಿಟ್ಟು ಬಿಟ್ಟ. ಇದ್ದೆ ಯಿಂದಿದ್ದ ಶಿವಪ್ಪನಿಗೆ ಏನು ಮಾಡಬೇಕು?

ಶಿವಪ್ಪನಿಗೆ ಗದುಗಿನ ನಾರಣಪ್ಪನಂತೆ ಒಂದು ರಸಭರಿತ ಭಾರತವನ್ನು ಬರೆಯುವ ಆತುರ. ಅದಕ್ಕಾಗಿ ಅವನು ನಿತ್ಯವೂ ಶಿವಾಲಯಕ್ಕೆ ಹೋಗಿ–'ಪರಮೇಶ್ವರಾ, ಒಂದು ವಿಚಿತ್ರ ಭಾರತವನ್ನು ಬರೆಯುವ ಶಕ್ತಿಯನ್ನು ದಯಪಾಲಿಸು' ಎಂದು ಪ್ರಾರ್ಥಿಸುತ್ತಿದ್ದನು. ಗದುಗಿನ ವೀರನಾರಾಯಣ ಸ್ವಾಮಿಯು ಅಶ್ವತ್ಥಾಮನನ್ನು ಮುಂದೆ ಹಾಕಿ–'ನ ಭೂತೋ ನ ಭವಿಷ್ಯತಿ' ಭಾರತವನ್ನು ನಾರಣಪ್ಪನಿಂದ ಬರೆಸಿದಂತೆ, ಶಿವನು ಯಾವನೋ ಒಬ್ಬ ಮಹಾವ್ಯಕ್ತಿಯನ್ನು ಮುನ್ನೂಕಿ ತನ್ನಿಂದ ಭಾರತವನ್ನು ಬರೆಸುವನೆಂದು ಶಿವಪ್ಪನ ದೃಢ ವಿಶ್ವಾಸ. ಅದಕ್ಕಾಗಿ ಇವನು ಲಕ್ಷಜನ ಸಂತರ್ಪಣೆ ನಡೆಯುವ ಧರ್ಮಸ್ಥಳದ ಮಹಾನಡಾವಳಿಗೆ ಹೋದ ಅಲ್ಲಿ ಭೋಜನ ಕಾಲದಲ್ಲಿ ಆಶ್ವತ್ಥಾಮನಂತಹ ವಿಭೂತಿ ಪುರುಷರ ಸಂದರ್ಶನಕ್ಕೇನಾದರೂ ಅವಕಾಶ ಬಂದೀತೆಂದು ಅವನ ತರ್ಕ. ಈ ಪ್ರಯೋಗದ ಮೊದಲ ರಾತ್ರಿ ಅವನು ನಿತ್ಯಕ್ಕಿಂತಲೂ ಬೇಗನೆ ನಿದ್ದೆ ಮಾಡಲು ಯತ್ನಿಸಿದ ಕಾರಣ, ಸದಾ ಶಿವನು ಅಂದು ರಾತ್ರಿ ಅವನಿಗೆ ಸ್ವಪ್ನದಲ್ಲಿ ಕೆಲವು ಸೂಚನೆ ಕೊಡಬೇಕಿತ್ತು. ಆರೆವ ಬೆಳಕು ಹರಿದ ಮೇಲೆ ಅವನೆದ್ದು ಎಷ್ಟು ನೆನಪು ಮಾಡಿದರೂ ದೇವ ದೇವನೂ ಆತನಿಗೆ ಯಾವುದೇ ಸೂಚನೆ ಕೊಟ್ಟಂತೆ ಹೊಳೆಯಲಿಲ್ಲ. ಆದರೂ ಆಶಾಜ್ಯೋತಿ ನೊಂದಿಸದೆ ಮೊತಿಸ ಮಂಜುನಾಥ ಕ್ಷೇತ್ರಕ್ಕೆ ಹೋದ. ಅಲ್ಲಿ ಎಲೆ ಹಾಕಿ ದೊನ್ನೆ ಬಡಿಸುವಾಗ ಮಕ್ಕಳ ಪಂಕ್ತಿಯ ಮುಂಬೆ ಕುಳಿತ ಶಿವಪ್ಪನು ಮಕ್ಕಳು ಏನಾದರೂ ಕೀಟಲೆಗೆ ಕೈಗೊಡದಿರಲೆಂದು ಸುತ್ತಲೂ ನೋಡುತ್ತಿದ್ದ. ಎಲ್ಲರೂ ಸುದ್ದಿ ಸುಳಾಕಿಲ್ಲದೆ ಭೋಜನ ಕಾರ್ಯದಲ್ಲಿ ತತ್ಪರರಾದರು. ಇದರಿಂದ ಶಿವಪ್ಪನಿಗೆ ನಿರಾಶೆ; ತೀರಾ ನಿರಾಶೆ.

ಒಂದು ರಾತ್ರಿ ಶಿವಪ್ಪನು ನಾರಣಪ್ಪನ ಭಾರತದ ಯುದ್ಧ ಪರ್ವದ ನಾಲ್ಕು ಸಂಧಿಗಳನ್ನು ಓದಿ, ಮುಚ್ಚಿ, ಆದಕ್ಕೆ ನಮಸ್ಕರಿಸಿ ಮಲಗಿದ. ನಿದ್ರೆಯಲ್ಲಿ ಅವನಿಗೆ ಜಲಚ್ಚಿತ್ರಸಂತಹ ಒಂದು ಭಾರೀ ಸ್ವಪ್ನ.

ಸಂಧ್ಯಾಕಾಲ. ಸಮುದ್ರತೀರ ಸೂರ್ಯನಂದು ಬೆಂಬಣ್ಣದಿಂದ ಮುಳುಗದೆ ಹೊಂಬಣ್ಣದಿಂದಲೇ ಮುಳುಗುವ ನಿರ್ಧಾರದಲ್ಲಿದ್ದ. ಸಮುದ್ರದ ತೆರೆಗಳೆಲ್ಲ ಈ ಶುಭ ಒಸಗೆಯನ್ನು ದಡಕ್ಕೆ ತಲಪಿಸಿ ಹಿಂದೆರಳುತ್ತಿದ್ದವು. ಶಿವಪ್ಪನಿಗೆ ಆ ಪ್ರದೇಶವು ತೀರಾ ಅಪರಿಚಿತವಾಗಿತ್ತು. ಅವನು ದೂರದ ದಿಗಂತದಲ್ಲಿ ದಿನಮಣಿಯು ಸಮುದ್ರದ ನೀಲಮಯ ಜಲರಾಶಿಯನ್ನು ತನ್ನ ಚಿತ್ರ ವಿಚಿತ್ರ ವರ್ಣ ಕಿರಣಗಳಿಂದ ಸಿಂಗರಿಸುವ ಸಡಗರವಲ್ಲಿದ್ದುದನ್ನು ನೋಡುತ್ತಿದ್ದನು. ಸೂರ್ಯನು ಪಶ್ಚಿಮಾಂಬುಧಿಯಲ್ಲಿ ಮುಳುಗಿದನು. ಆಗ ಆ ಸ್ಥಳದಿಂದಲೇ ತನ್ನೆಡೆಗೆ ದಿವ್ಯ ವ್ಯಕ್ತಿಯೊಂದು ಬರುತ್ತಿರುವಂತೆ ಶಿವಪ್ಪನಿಗೆ ಭಾಸವಾಯಿತು. ಆ ವ್ಯಕ್ತಿಯು ಹತ್ತಿರ ಬಂದಂತೆ ಅದರ ಹಸ್ತದಲ್ಲಿ ಒಂದು ಚಿಕ್ಕ 'ಡೈರಿ', ಹೆಗಲ ಮೇಲೊಂದು ಬ್ರಹ್ಮಾಂಡ ಮುಸಲವು ಕಾಣಿಸಿತು. ಆ ವ್ಯಕ್ತಿಯು ದೈತ್ಯನಂತಿಯಿಂದ ಶಿವಪ್ಪನನ್ನು ಕೆಸರು ಹಿಡಿದು ಕರೆಯಿತು. ಆಗ ಶಿವಪ್ಪನು ನೀರ ಮೇಲೆ ನಡೆಯುತ್ತಾ ಆ ಮಹಾ ವ್ಯಕ್ತಿಯ ಬಳಿಗೆ ಸಾರಿದ. ಆ ವ್ಯಕ್ತಿಯು ಅಚಾನುಬಾಹು, ನೀಲಾಂಬರ ಮತ್ತು ಮುಸಲಧಾರಿಯಾಗಿದ್ದನು. ಶಿವಪ್ಪನು ಧೈರ್ಯದಿಂದ–'ಮಹಾರಯ, ತಾವಾರು?' ಎಂದು ಜೊಕ್ಕವಾಗಿ ಕೇಳಿದನು.

'ನಾನು ಬಲಭದ್ರ–ಶ್ರೀ ಕೃಷ್ಣಾಗ್ರಜ'. ಆಗಂತುಕ ವ್ಯಕ್ತಿಯು ಮುಗಿಲು ಮೊಳಗುವಂತೆ ಮೊಳಗಿ ಬಿಟ್ಟ. ಶಿವಪ್ಪನು ಆ ವ್ಯಕ್ತಿಗೆ ನಮಸ್ಕರಿಸಿದ. ಅವನು ಶಿವಪ್ಪನನ್ನು ಆಶೀರ್ವದಿಸಿ–'ಶಿವಪ್ಪಾ ಈ ಪುಸ್ತಕವೇನು ಬಲ್ಲೆಯಾ?' ಎಂದನು. 'ಇಲ್ಲ'. "ಭಾರತ. ನೀನು ಇಂದಿನವರೆಗೆ ಬಯಸು. ತ್ತಿದ್ದ ಭಾರತ!" ಶಿವಪ್ಪನು ರೋಮಾಂಚನಗೊಂದನು. "ಭಾರತ? ಭಾರತ? ಯಾರು ಬರೆಯಲಿರುವ ಭಾರತ?" ಶಿವಪ್ಪನಿಗೆ ಮಾತಾಡುವಾಗ ನಾಲಿಗೆ ತಡವರಿಸುತ್ತಿತ್ತು. "ನೀನು ಬರೆಯ ಬೇಕಾಗಿರುವ ಭಾರತ. ಪಾಂಡವ ಪಕ್ಷಪಾತಿಯೂ ವ್ಯಾಸನೆಂಬ ಮುದಿ ಹಾರುವನೊಬ್ಬ ಜಯೋತಿಹಾಸವೆಂಬ ಭಾರತವನ್ನು ತಿರುಗಾ ಮುರುಗಾ ಬರೆದಿಟ್ಟಿದ್ದಾನೆ. ಅದರಲ್ಲಿ ಸುಟ್ಟು ತಿನ್ನುವ ಎಂದರೆ ಸತ್ಯಾಂಶ ಒಂದೂ ಇಲ್ಲ. ಅದಕ್ಕಾಗಿ ಭಾರತ ಕಥೆಯನ್ನು ಬಲ್ಲ ನಾನೇ ಅದನ್ನು ಈ 'ಡೈರಿ'ಯಲ್ಲಿ ಬರೆದು ತಂದಿದ್ದೇನೆ." ಬಲಭದ್ರನು ಪುಸ್ತಕವನ್ನು ಬಿಚ್ಚಿ ಓದತೊಡಗಿದನು.

"ಶ್ರೀ ಗಣೇಶಾಯ ನಮಃ–ಅಂಬಿಕೆ ಅಂಬಾಲಿಕೆಯರಿಗೆ ಧೃತರಾಷ್ಟ್ರ ಮತ್ತು ಪಾಂಡುವು ಹುಟ್ಟಿದ ಮೇಲೆ ವಿಚಿತ್ರವೀರ್ಯನಿಗೆ ಅಂತಃಪುರದ ಕಾಟ ಹೆಚ್ಚಿ ಕ್ಷಯರೋಗವು ಪ್ರಾಪ್ತವಾಯಿತು. ಭೀಷ್ಮನು ತಮ್ಮನ ಈ ಭೋಗ ಜೀವನಕ್ಕೆ ಕರುಬಿ, ವೈದ್ಯರಿಗೆ ಲಂಚಕೊಟ್ಟು ಅವರಿಂದ ವಿಚಿತ್ರವೀರ್ಯನನ್ನು ಸಪಾಯಿ ಮಾಡಿ ಬಿಟ್ಟು ಬಾಲಕ ಧೃತರಾಷ್ಟ್ರನು ಚಿಕ್ಕಂದಿನಿಂದಲೇ ಬೋದಾಳ ಶಂಕರ! ವಾಂಡುವಾದರೋ ಜೀರಸಾಲೆ ಮೆಣಸಿನ ಕೋಡು! ಧೃತರಾಷ್ಟ್ರನಿಗೆ ಚಿಕ್ಕಂದಿನಿಂದಲೂ ನಿದ್ರಾಕಾಲದಲ್ಲಿ ಕಣ್ಣು ತೆರೆದುಕೊಂಡು ನಿದ್ರಿಸುವ ಅಭ್ಯಾಸ. ಜಾಣನುರಿ ಪಾಂಡುವು ಭವಿಷ್ಯದ ಚಕ್ರವರ್ತಿ ಪದಕ್ಕಾಗಿ ಆಪಿಸಿ, ನಿದ್ರಿಸಿದ ಅಣ್ಣನ ತೆರೆದ ಕಣ್ಣಿಗೆ ಸುಣ್ಣದ ಪುಡಿ ಹೊಯ್ದು ಅದರ ಮೇಲೆ ಒಡನೆಯೇ ಕುದಿಯುವ ನೀರು ಸುರಿದ. ಇದರಿಂದ ಧೃತರಾಷ್ಟ್ರನು ಅಂಧನಾದ. ಮುಂದೆ ಈ ಅನ್ಯಾಯವು ತುಬ್ಬಾಗದೆ ಪಾಂಡುವೇ ಸಿಂಹಾಸನಾರೋಹಿದ.

ಧೃತರಾಷ್ಟ್ರ ಪಾಂಡುವಿಗೆ ಮುದುವೆಯಾಗಿ ಮಕ್ಕಳು ಹುಟ್ಟಿದರು. ಭೀಮನು ಶೈಶವದಿಂದಲೇ ಪಾಂಡಿಗ. ಒಂದು ದಿನ ಈ ಎಲ್ಲಾ ಮಕ್ಕಳು ಆಟವಾಡುತ್ತಿದ್ದಾಗ ಭೀಮನು ದುಶ್ಶಾಸನ ದುರ್ಯೋಧನರ ಕೆವಿಸುರಿದು ತಲಿಕೆ ಹಾಕಿಬಿಟ್ಟ. ಮಕ್ಕಳು ಬೊಬ್ಬಿಟ್ಟವು. ಮುಂಬೆ ಭೀಮನ ಇಂತಹ ಅನ್ಯಾಯಗಳನ್ನು ಕೌರವನು ಮನಸ್ಸಿನಲ್ಲಿಟ್ಟು ಕೊಳ್ಳಲೇ ಇಲ್ಲ. ಒಂದು ದಿನ ವೇಷ ಮರೆಸಿಕೊಂಡು ಸ್ತ್ರೀ ವೇಟಿಗೆ ಹೋದಾಗ ಪಾಂಡುವು ಕೊಲ್ಲಲ್ಪಟ್ಟನೆಂದು ವಾರ್ತೆ.

ಒಂದು ದಿನ ಕೌರವರು ಭೀಮನ ಶಕ್ತಿ ಪರೀಕ್ಷೆಸಲು ನಿದ್ರಿಸುತ್ತಿದ್ದ ಅವನ ಕೈಕಾಲು ಕಟ್ಟಿ ಗಂಗಾನದಿಯ ನಡುವಿಗೆ ಹಾಕಿದರು. ಅಲ್ಲಿ ಭೀಮನು ವಾಸುಕಿಯಿಂದ ಅಮೃತಪಾನ ಮಾಡಿ ಒಂದು ಆನೆಯ ಬಲದವನು ನೂರಾನೆಯ ಬಲದವನಾಗಿ ಮೇಲೆ ಬಂದು ಕೌರವರಿಗೆ ಕೃತಜ್ಞತೆ ತೋರಿಸುವ ಬದಲು, ಅವರನ್ನು ತಾನು ದ್ವೇಷಿಸತೊಡಗಿದುದಲ್ಲದೆ ಸಹೋದರರ ಮನಸ್ಸನ್ನೂ ಕೌರವರ ವಿಷಯದಲ್ಲಿ ಕೆಡಿಸಿ ಬಿಟ್ಟ. ಮುಂಬೆ ಬಿಲ್ಲು ವಿದ್ಯಾಭ್ಯಾಸ ಕಾಲದಲ್ಲಿ ಕೌರವನು ಆಗಿನ ಅರಸನಾಗಿದ್ದ ತನ್ನ ತಂದೆಯೊಡನೆ ಹಟ ಹಿಡಿದು ಪಾರ್ಥನಿಗೆ ದ್ರೋಣನಿಂದ "ಆಲಾಯಿದ ಟ್ಯೂಷನ್" ಕೊಡಿಸಿ ಸಮರ್ಥ ಬಿಲ್ಲಾಳುವನ್ನಾಗಿ ಮಾಡಿಸಿದನು. ಎಲ್ಲರಿಗೂ ಅಭ್ಯಾಸ ಮುಗಿದ ಮೇಲೆ ಪಾಂಡವರಿಗೆ ರಾಜ್ಯಾಡಳಿತದ ಅನುಭವವಾಗಲು ಅವರನ್ನು ವಾರಣಾವತಕ್ಕೆ ಕಳುಹಿಸಿದನು. ಅಲ್ಲಿ ಪಾಂಡವರ ರಾಜಾಗರೂಕತೆಯಿಂದ ಅರಮನೆಗೆ ಬೆಂಕಿ ಹಿಡಿಯಿತು. ಪಾಂಡವರು ಇದನ್ನೇ ನೆಪವೆಂದು ಕೌರವರು ಅರಗಿನ ಮನೆಕಟ್ಟಿ ಬೆಂಕಿ ಕೊಡಿಸಿದರೆಂದು ವಾರ್ತೆ ಸಾರಿದರು. ಪಾಂಡವರಲ್ಲಿ ಭೀಮನೊಬ್ಬ ಜೊಡ್ಡ ಸ್ವಜಾರಕ. ಇವನು ವಾರ್ತೆ ಹರಡುವುದರಲ್ಲಿ ಜರ್ಮನಿಯ ಗೋಬೆಲ್ಸನಿಗಿಂತ ಒಂದು ಹೆಜ್ಜೆ ಮುಂದೇ. ಬಾಪದ ಕೌರವರಿಗೆ ತಾವಾಯಿತು; ತಮ್ಮ ದಾರಿಯಾಯಿತು. ಇಂತವರಿಗೆ ಈ ಭೂಮಿಯು ಬದುಕಲು ಹೇಳಿಸಿದ ಸ್ಥಳವಲ್ಲ.

ಪಾಂಡವರು ಪಾಂಚಾಲಕ್ಕೆ ಹೋಗಿ ದ್ರೌಪದಿಯನ್ನು ಲಗ್ನವಾದರು. ಆಕೆಯು ಬಾಲ್ಯದಿಂದಲೂ ತುಂಬಾ ಹೆಂಗಾಮಿ! ದ್ರುಪದನು ತನ್ನ ಮಗಳ ಒಳ್ಳಿತನ್ನು ಹಾರೈಸಿ ಈ ಐವರಿಗೆ ಮದುವೆ ಮಾಡಿಕೊಟ್ಟನು. ಈ ಮಧ್ಯೆ ಭೀಮನು ಹಿಡಿಂಬೆಯಲ್ಲಿ ಪ್ರೇಮಭಿಕ್ಷುವಾಗಿ ಆಕೆಯನ್ನು ಮದುವೆ ಮಾಡಿಕೊಂಡಿದ್ದ. ಈ ನೆಂಟಸ್ತಿಕೆಗೆ ಒಪ್ಪಿಗೆ ಕೊಡದ ಬಕಾಸುರ ಹಿಡಿಂಬರನ್ನು ಭೀಮನು ಕೊಲೆಮಾಡಿ ಬಿಟ್ಟ. ಲಗ್ನವಾದ ಮೇಲೆ ದ್ರೌಪದಿಯಲ್ಲಿ ಉಚ್ಚ ಗೃಹಿಣೀ ಲಕ್ಷಣಗಳು ಕಾಣಿಸದೆ, ಅವರು ಹತಾಶರಾದರು. ಚಂದ್ರವಂಶದ ಗೌರವನನ್ನೇ ಗುರಿಯಾಗಿಟ್ಟು ಕೊಂಡ ಕೌರವರು ಅವಳಿಗೆ ಮಾನ ಭಂಗದಂತಹ ಶಿಕ್ಷೆಯನ್ನಾದರೂ ಕೊಟ್ಟು ಅವಳನ್ನು ದಾರಿಗೆ ತರ ಬೇಕೆನ್ನುವಾಗ ಕೃಷ್ಣನು ಆ ಪ್ರಯತ್ನಕ್ಕೆ ಕಲ್ಲು ಹಾಕಿದ.

ಈ ಪಾಂಡವರಲ್ಲಿ ಧರ್ಮರಾಯನು ವ್ಯವಹಾರ ಜ್ಞಾನವಿಲ್ಲದ ಶುದ್ಧ ಪಶು. ಇವನನ್ನು ತಿದ್ದುವುದು ತೀರಾ ಅಸಾಧ್ಯವೆಂದು ಕೌರವನಿಗೆ ಕಂಡಿತು. ಪ್ರಜಾರಂಜಕನಾದ ಆ ಮಹಾರಾಜನು ಭೀಮನು ಬಕಮಾರಿಯಂತೆ ಉಣ್ಣುವುದನ್ನು ಕಂಡು ಹೀಗೆ ಇವನು ಆಹಾರ ಧಾನ್ಯಗಳನ್ನು ನಾಶಮಾಡಿದರೆ ಮುಂದೊಂದು ದಿನ ಹಿಂಮಸ್ಥಾನಕ್ಕೆ ಆಹಾರವ ಅಭಾವ ಬಾರದಿರದೆಂದು ಭವಿಷ್ಯ ನುಡಿದ. ಅರ್ಜುನನಿಗೆ ತಾನೊಬ್ಬ ಬಿಲ್ಲುಗಾರನೆಂಬ ಒಣಜಂಭ. ನಕುಲ ಸಹದೇವರಿಗೆ ಏಸೆ ಬಂದರೂ ಹುಡುಗಾಟಿಕೆ ಮುಗಿಯಲಿಲ್ಲ. ದ್ರೌಪದಿಯ ತಿಟ್ಟ ಒಲವೆ ಒಯ್ಯಾರಗಳನ್ನೂ ಕಂಡು ಹೆತ್ತೋಟ ವಿರಿದ ಇವರ ಸಂಗರ್ಗನೇ ಬೇಡವೆಂಬ ಕೌರವನು ನಗರದಿಂದ ಇವರನ್ನೆಲ್ಲಾ ಹೊರಗೆ ಹಾಕಿಸಿದನು. ಆಗ ಈ ಪಾಂಡವರು ಜನರಿಗೆ ಮುಖ ತೋರಿಸಲು ನಾಚಿ ಕಾಡನ್ನು ಸೇರಿಕೊಂಡರು. ಕಾಡಿನಲ್ಲಿ ಪಾಂಡವರು ಸೇರಿಕೊಂಡಾಗ ಕೌರವನಿಗೆ ಮನಸ್ಸು ಕರಗಿ, ಪಾಂಡವರ ಶಕ್ತಿಯನ್ನೆಳೆಯಲು ಚಿತ್ರಸೇನನ ಕಾಳಗದ ಗದ್ದಲವನ್ನೆಬ್ಬಿಸಿದ. ಇದಕ್ಕಿಂತ ಕೆಲವು ದಿನಗಳ ಮೊದಲು ದ್ರೌಪದಿಗೆ ಬುದ್ಧಿ ಕಲಿಸಲು ದೂರ್ವಾಸನನ್ನು ಅರಣ್ಯಕ್ಕೆ ಕುರುರಾಜನು ಕಳುಹಿಸಿದರೆ ಕೃಷ್ಣನು ಪಂಚಾಯಿತಿಕೆ ನಡೆಸಿ ದೂರ್ವಾಸನನ್ನು ಹಿಂದೆ ಕಳುಹಿಸಿದ. ದ್ರೌಪದಿಯ ಹೇಳಿಕೆಯಂತೆ ಪಾಂಡವರು ಒಂದು ವರ್ಷ ಕೌರವರಿಗೆ ತಮ್ಮ ನೆರಳೂ ತಿಳಿಯ ಬಾರದೆಂದು ಅಡಗಿದ್ದರು. ಕೌರವನು ಗೋಗ್ರಹಣದ ಯುಕ್ತಿಯಿಂದ ಪಾಂಡವರ ಕ್ಷೇಮವನ್ನು ತಿಳಿದರೂ ಈ ಶೋಧನೆಯಲ್ಲಿ ಅವನು ಆವಾರ ನಷ್ಟಕ್ಕೆ ಗುರಿಯಾಗ ಬೇಕಾಯಿತು.

ಸಹೋದರರ ತಿದ್ದುವಾಡಿಗೆ ಕುರುರಾಜನು ಮಾಡಿದ ಪ್ರಯತ್ನಗಳಿಗೆಲ್ಲಾ ಪಾಂಡವರು ಅಪಾರ್ಥ ಮಾಡಿಕೊಂಡು ಯುದ್ಧ ಹೂಡಿದರು. ಭೀಮನು ದುಶ್ಶಾಸನನ ಚಿತ್ರ ಹಿಂಸೆ ಮಾಡಿ ಕೊಲ್ಲುವಾಗಲೂ, ಕೌರವನ ಊರು ಭಂಗ, ಮಕುಟ ಭಂಗಮಾಡಿ ಅವನ ಧೂಳು ಹಾರಿಸುವಾಗಲೂ ಆ ಇಬ್ಬರು ಸಹೋದರರೂ, ಪಾಪ, ಅಹಿಂಸಾವ್ರತಧಾರಿಗಳಾಗಿ ವೀರ ಸತ್ಯಾಗ್ರಹವನ್ನೇ ಕೈಗೊಂಡಿದ್ದರು. ನಿರಪರಾಧಿಗಳಾಗಿ ಉಚ್ಚ ಧ್ಯೇಯವನ್ನಿಟ್ಟುಕೊಂಡಿದ್ದ ದುರ್ಯೋಧನ, ದುಶ್ಶಾಸನರ ಮರಣವಾಗಿ ಹಿಂಸೆಯೇ ಜಯಿಸಿತು.

(ಇಪ್ಪತ್ತನಾಲ್ಕನೇ ಪುಟ ನೋಡಿ)

ಇಂದಿರಾ ಗಾಂಧಿ ಪ್ರಧಾನಿಯಾಗಿರುವದು ಯಾಕಿಷ್ಟು ಚರ್ಚೆಯಲ್ಲಿ ಬೇಕು ಬೇಡುವಷ್ಟು ಸ್ಪಷ್ಟ ಮುಂಡಿಗೆ—ಅವಳೆನೇ ಆಯಲಿನ್ನು (ಎಂಜಿನಿಯರ್ ಪುಟ ನೋಡಿ)

ಸಮಸ್ತ ದೇಶದ ಸರ್ವಾಂಗೀಣ ಸಮಸ್ಯೆಗಳಿಗೆ ಸೂಕ್ತ ಪರಿಹಾರ :

ಭಾರತೀಯ ಸಂಸ್ಕೃತಿಯ ಪುನರುತ್ಥಾನ

ನಮ್ಮಲ್ಲಿ ಕಾಡುವ ನೂರು ಸಮಸ್ಯೆಗಳು ಯಾರಿಗೂ ನೆಮ್ಮದಿ ತರುವುದಿಲ್ಲ. ಬಿಟ್ಟ ಪಕ್ಷ ಪ್ರಾಣಾಪಾಯವಂತೂ ಎಳ್ಳಿನ ಷ್ಟಾದರೂ ತೋರಿಬರುವುದಿಲ್ಲ. ನಮ್ಮ ಸಂಸ್ಕೃತಿಯ ಪುನರುತ್ಥಾನದಿಂದಲೇ ನಮ್ಮೆಲ್ಲ ಸಮಸ್ಯೆಗಳು ಉತ್ತರಿಸಲ್ಪಡುತ್ತವೆಯೆಂಬ ರಾಷ್ಟ್ರಾಭಿಮಾನ ಸೂಚಿಸುತ್ತಾರೆ ಶ್ರೀ ಕೆ. ಜಿ. ಹೆಗಡೆ.

ಲೇಖಕರು :
ಶ್ರೀ ಕೆ. ಜಿ. ಹೆಗಡೆ.

ವೈಚಲಿತ ಧಾರ್ಮಿಕ, ನೈತಿಕ, ಸಾಮಾಜಿಕ ಮತ್ತು ರಾಜಕೀಯ ಜಂಜಾಟಗಳಿಂದ ಜನತೆ ವಿಮುಕ್ತರಾಗ ಬೇಕಾದರೆ ಭಾರತೀಯ ಸಂಸ್ಕೃತಿಯ ಪುನರುತ್ಥಾನವಾಗ ಬೇಕು, ವಿನಃ ನಮಗೆ ಬೇರೆ ಮಾರ್ಗವೇ ಇಲ್ಲ.

ಸಮಗ್ರ ಜಗತ್ತಿನಲ್ಲೇ ಧರ್ಮ ಭೂಮಿ ಪುಣ್ಯಭೂಮಿ ಮತ್ತು ಸತ್ಕರ್ಮ ಭೂಮಿ ಯೆಂದು ಪ್ರಸಿದ್ಧಿಹೊಂದಿದ ನಮ್ಮ ಈ ಹಿಂದೂ ದೇಶದಲ್ಲಿ ಇಂದು ಧಾರ್ಮಿಕತೆ ರಭಸದಿಂದ ಮಾಯವಾಗುತ್ತಲಿದೆ. ಅಸತ್ಯ, ಅನಾಚಾರ ಮತ್ತು ಅಧರ್ಮಗಳೆಂಬ ಅಸುರೀಶಕ್ತಿಗಳು ಎಲ್ಲೆಡೆಯಲ್ಲೂ ತಲೆಯೆತ್ತಿ ನಿಂತಿವೆ. ಧರ್ಮಾಧಿಕಾರಿಗಳ ಧರ್ಮಾದರ್ಶ, ಪವಿತ್ರ ಜೀವನ, ಜನರ ಮೇಲಣ ಹಿಡಿತ ಪ್ರಭಾವ ಮತ್ತು ಮಾರ್ಗದರ್ಶನಗಳು ಕಡಿಮೆಯಾಗುತ್ತ ಹೋದಂತೆ ದೇವರು ಧರ್ಮಗಳ ಅಸ್ತಿತ್ವವೇ ಬದುಕಿನಲ್ಲಿ ಬೇಡವಾಗಿದೆ. ದೇವರು ಧರ್ಮಗಳ ಆವಶ್ಯಕತೆಯೇ ಜನ ಜೀವನದಲ್ಲಿ ಇಲ್ಲವಾದಾಗ ಮಾನವೀಯ ವ್ಯಕ್ತಿತ್ವ ಲಂಗುಲಗಾಮಿಲ್ಲದ ಕುದುರೆಯಂತೆ ಸ್ವೇಚ್ಛಾಪರ ಜೀವನದಲ್ಲಿ ಮೆಲುಕಾಡುತ್ತದೆ. ಈ ಸಂದರ್ಭದಲ್ಲಿ ನೈತಿಕ ಅಧಃಪತನ ಬೇರೂರುತ್ತದೆ.

"ಸಜ್ಜನರಿಗೆ ಸ್ವರ್ಗ; ದುರ್ಜನರಿಗೆ ನರಕ"—ಎಂದೆಲ್ಲ ಸದ್ಭಾವನೆಗಳ ಸಂಪುಟವೇ ಕಸದ ಬುಟ್ಟಿಯ ಪಾಲಾಗುತ್ತದೆ. ನೀತಿಗೆ ಪ್ರಾಮುಖ್ಯತೆಯೇ ಇಲ್ಲವಾದಾಗ ಅನೀತಿ ರಾಜ್ಯ ಚಲಿಸುತ್ತಿದೆ. ಅನೀತಿಯ ವ್ಯವಹಾರ ಎಲ್ಲಾ ಮಟ್ಟಗಳಲ್ಲೂ ತನ್ನಕೈ ವಾಡವನ್ನು ಪ್ರದರ್ಶಿಸುತ್ತದೆ. ಅಂದರೆ ನೈತಿಕ ಬಂಧನಗಳಿಂದ ಮಾನವನಿಗೆ ಸ್ವಾತಂತ್ರ್ಯ ಸಿಗುತ್ತದೆ. ಸಿಕ್ಕಿದೆ. ಕಟ್ಟು ಕಟ್ಟಳೆಗಳಿಂದ, ರೀತಿ ನೀತಿಗಳಿಂದ, ನಡೆ ನುಡಿಗಳಿಂದ ಮನುಷ್ಯ ಬಲು ದೂರ ಹೋದಂತೆ ಅನುಕೂಲ ಶಾಸ್ತ್ರವನ್ನು ರಚಿಸಿ ಅಥವಾ ಅಂತಹ ಸೂತ್ರಗಳನ್ನು ಅವಲಂಬಿಸಿ ತನ್ನ ನಡತೆ ವ್ಯಕ್ತಿತ್ವಗಳೇ ಸರಿಯೆಂದು ವಾದ ಹೂಡುತ್ತಾನೆ. ಆಗ ಶಾಸ್ತ್ರ—ಸಿದ್ಧಾಂತಗಳು ಸುಳ್ಳಿನ ಕಂತೆಗಳಾಗುತ್ತವೆ. ಪೂರ್ವಜರು, ಹಿರಿಯರು, ಗುರುಗಳು ನಡೆದು ಬಂದ ದಾರಿಯನ್ನು ಬಿಟ್ಟು ಪ್ರಗತಿಯ ಹೆಸರಿನಲ್ಲಿ ನವರಾಷ್ಟ್ರದ ನಿರ್ಮಾಣಕ್ಕೆ ಧುಮುಕುತ್ತಾನೆ. ಎಲ್ಲವೂ ತನ್ನ ಸ್ವಾರ್ಥ ಲೋಲುಪತೆಗಾಗಿ.

ದೈವಿಕ ಶ್ರದ್ಧೆ ಶಿಥಿಲವಾದಂತೆ, ಧಾರ್ಮಿಕ ಒಲವು ನಿಲುವುಗಳೂ ಶಿಥಿಲವಾಗುತ್ತವೆ. ದಿವ್ಯ ಭಾವನೆ ಮೂರಾಬಟ್ಟೆಯಾದಾಗ ಧಾರ್ಮಿಕ ಪ್ರಮೂಣಗಳು ಸತ್ಯ—ಸಿದ್ಧಾಂತಗಳು ಸಿಕ್ಕಾಪಟ್ಟೆಯಾಗುತ್ತವೆ. ದೇವರು ಮತ್ತು ಧರ್ಮಗಳ ಮೊಹರು ಅಳಿಸಿ ಹೋದಾಗ ನೈತಿಕ ಅಧಃಪತನಕ್ಕೆ ನಾಂದಿಯಾಗುತ್ತದೆ. ನೈತಿಕ ಅಧಃಪತನದೊಂದಿಗೆ ಸಾಮಾಜಿಕ ನಾಶಕ್ಕೆ ಪ್ರಾರಂಭವಾಗುತ್ತದೆ. ಸಾಮಾಜಿಕ ನಾಶವೆಂದರೆ ಸಮಾಜದಲ್ಲಿ ಸಾಂಪ್ರದಾಯಿಕವಾಗಿ ನಡೆದು ಬಂದ ನಿಯಮ, ಸಂಯಮ, ಸಚ್ಚರಿತೆ, ಧರ್ಮ ಕರ್ಮಗಳ ನಿಬಂಧನ ಇವೆಲ್ಲವುಗಳಿಗೆ ಮನ್ನಣೆ ಸಿಗುವುದಿಲ್ಲ. ಮನ್ನಣೆ ಸಿಗದಾಗ ಜೀವನ ಕಲುಷಿತವಾಗುತ್ತದೆ.

"ಯಥಾರಾಜಾ ತಥಾಪ್ರಜಾ" ಎನ್ನುವದು ಸಂಸ್ಕೃತದ ಭಾಷೆಯಲ್ಲಿನ ನಾಣ್ನುಡಿ. ನಮ್ಮನ್ನಿಗ ಮ್ಲೇಂಛರಾಗಲೀ, ಆಂಗ್ಲರಾಗಲೀ ವಿದೇಶೀಯರಾಗಲೀ ಆಳುತ್ತಿಲ್ಲ. ಗಣರಾಜ್ಯ, ಪ್ರಜಾರಾಜ್ಯ ಅಥವಾ ಸ್ವರಾಜ್ಯವೆಂದು ನಮ್ಮನ್ನು ಈಗ ನಾವೇ ಆಳುತ್ತೇವೆ. ಅಥವಾ ಆಳಿಸಿ ಕೊಳ್ಳುತ್ತೇನೆ. ಅಂದ ಮೇಲೆ "ಯಥಾಪ್ರಜಾ; ತಥಾರಾಜಾ" ಎಂದು ನಾಣ್ನುಡಿಯನ್ನು ತಿರುಗು ಮರುಗು ಮಾಡಿ ಓದಬಾರದು. ಜನತೆ ಬಯಸಿದ ಸರಕಾರ ಜನತೆಗೆ ದಕ್ಕುತ್ತದೆ. [The people get the government they deserve] ಅರ್ಥಾತ್ ನಮ್ಮ ಜನರ ನಡೆನುಡಿಗಳು, ಆಚಾರ ವಿಚಾರಗಳು, ಸದ್ಭಾವನೆ ಮತ್ತು ದುರ್ಭಾವನೆಗಳು ನಮ್ಮ ಸರಕಾರದಲ್ಲೂ ಪ್ರತಿಬಿಂಬಿಸುತ್ತವೆ. ಅಂದರೆ ಒಳ್ಳೆಯ ಸರಕಾರ ಬೇಕಾದರೆ ಜನರು ಒಳ್ಳೆಯವರಾಗ ಬೇಕು. ಸಜ್ಜನರಾಗ ಬೇಕು. ಸುಶೀಲರಾಗಬೇಕು. ನೀತಿ ರಕ್ಷಕರಾಗ ಬೇಕು. ಧರ್ಮ ಪರಾಯಣರಾಗ ಬೇಕು. ಎಲ್ಲಕ್ಕೂ ಮೇಲಾಗಿ ದೇವ ಭಕ್ತರಾಗ ಬೇಕು. ದೇವರ ಭಯವೇ ಜ್ಞಾನದ ಆರಂಭ ಎನ್ನುವುದು ಅದಕ್ಕಾಗಿಯೇ.

ಆದೀಗ ದೇಶದಾದ್ಯಂತ ಪದಚ್ಯುತ ರಾಜಕೀಯ ಧುರೀಣರು ಮತ್ತು ಪುಢಾರಿಗಳು ಅಲ್ಲಲ್ಲಲ್ಲದ ಅಪಪ್ರಚಾರಗಳಿಂದ ಗೊಂದಲವೆಬ್ಬಿಸುತ್ತಲಿದ್ದಾರೆ. "ಭಾರತವನ್ನು ರಕ್ಷಿಸಿರಿ. ಪ್ರಜಾಸತ್ತಾತ್ಮಕ ರಾಜ್ಯ

(ಇಪ್ಪತ್ತಮೂರನೇ ಪುಟ ನೋಡಿರಿ)

ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು !

ಶ್ರೀ ಕೃಷ್ಣ ಜ್ಯುವೆಲರಿ ಮಾರ್ಟ್
ತೆಂಕಪೇಟೆ, ಉಡುಪಿ. ಫೋನ್: 366

ಉತ್ತಮ 22ct ಶಾಸ್ತ್ರಿ ಚಿನ್ನದ ಆಭರಣಗಳನ್ನು ಮತ್ತು ಬೆಳ್ಳಿಯ ಯಾವತ್ತೂ ಒಡವೆಗಳನ್ನು ಶಾಸ್ತ್ರಿಯಾಗಿ ಮನಸ್ಸಿಗೆ ಒಪ್ಪುವಂತೆ ತಯಾರಿಸಿ ಕೊಡುತ್ತೇವೆ. ವಿವಿಧ ಮಾದರಿಯ ಪನಸು ಬಂಗಾರದ ನೆಕ್ಲೆಸ್, ಬಳೆ, ಉಂಗುರ, ಬೆಂಡೋಲೆ ಬೊಟ್ಟು, ಟಿಕ್ಕಿ, ಬೇಸಿರಿಗಳು, ಕರಿಮಣಿ, ಲಕ್ಷ್ಮೀತಾಳಿ, ತರುವಾರು ಪೆಂಡೆಂಟು.

● ಇಂದೇ ನಮ್ಮ ಕೋರೂನುನ್ನು ಸಂದರ್ಶಿಸಿರಿ ●

ಶ್ರೀ ಕೃಷ್ಣ ಪೆರ್ಫೆಟಿ ಸ್ಟೋರ್ಸ್
ತೆಂಕಪೇಟೆ, ಉಡುಪಿ. ಫೋನ್: 366

ರೇಡಿಯೋ ಮತ್ತು ಟ್ರಾನ್ಸಿಸ್ಟರುಗಳು, ಫ್ಯಾನುಗಳು, ಸ್ಟೀಲು ಕವಾಟು, ಸೂಪಾ ಕಂಬೆಡ್, ಹೊಲಿಗೆ ಯಂತ್ರಗಳು, ಗಡಿಯಾರಗಳು, ಎಲ್ಲಾ ತರದ ಸ್ಟೆಯಿನ್‌ಲೆಸ್ ಸ್ಟೀಲಿನ ಪಾತ್ರೆಗಳು, ಉಡುಗೊರೆಯ ಸಾಮಾನುಗಳು, ಟೇಪ್‌ರೆಕೋರ್ಡು ಇನ್ನೂ ಹಲವಾರು ತರದ ಸಾಮಾನುಗಳು ಇವುಗಳಿಗಾಗಿ

ಇಂದೇ ಸಂದರ್ಶಿಸಿರಿ !

ಶಾಶ್ವತ್ಯ ಸಲುವಾಗಿ ಸ್ಪೆಶಲ್ ರಿಯಾಯತಿ ದರದಲ್ಲಿ ಮಾರಾಟ ಮಾಡುತ್ತೇವೆ.

ಮ್ಯಾನೇಜರು : ಯು. ರಾಘವೇಂದ್ರಕೃಷ್ಣ ಭಟ್

With best compliments from

THE CANARA NURSERY
RESEARCH GARDENS

(Well known orchard in South Kanara)

POST : ULIARGOLI,
KAUP, S. Kanara.

(Mysore State)

Founder :
LATE KAUP MUDDANNA SHETTY

Varieties of grafted fruit and flower plants are available for sale.

Phone : 42 Kaup

Printed & Published by K. H. Shetty at the Navayuga Press, Udipi, S. India.

ಇನ್ನೊಮ್ಮೆ ನೀನುದಿಸಿ

ಇನ್ನೊಮ್ಮೆ ನೀನುದಿಸಿ ಬಾ ಪುಣ್ಯ ಪುರುಷ!
ಜಗಕೆಂದು ಬೇಕೆಹುದು ನಿನ್ನ ಸಂದೇಶ!
ನೀನಿರಲು ನಿನ್ನ ಬೆಲೆ ನಾವರಿತುದಿಲ್ಲ
ಇಂದೆಮಗೆ ಬೇಕಿರಲು ನೀನು ಮುಂದಿಲ್ಲ!
ಅಂದೊಮ್ಮೆ ಈ ನೆಲಕೆ ಕಾರಿರುಳು ಕವಿದಿತ್ತು
ದಾಸ್ಯ ದಾರಿದ್ರ್ಯಗಳ ಮಿಂಚು ಗುಡುಗಿತ್ತು
ಸೂರ್ಯ ಮುಳುಗದ ರಾಜ್ಯ ಹಿಡಿದ
ಶಕ್ತಿಮಮಂದು
ವಿಕಟಾಟ್ಟ ಹಾಸದಲಿ ಕೇಕೆ ಹಾಕಿತ್ತು
ದರ್ಪ ದಬ್ಬಾಳಿಕೆಯ, ದ್ರೋಹ ಧರ್ಮಾಂಧತೆಯ
ಸಿಡಿಗುಂಡು ಮದ್ದುಗಳ ಮಳೆಯು ಕರಿದಿತ್ತು!
ಧರ್ಮ ಭಯ, ವಿಶ್ವಾಸ ಸ್ನೇಹಗಳ ಕಂದಿದ್ದ
ನಿನ್ನ ಒಡಹುಟ್ಟುಗಳ ಮನವ ನಡೆದಿತ್ತು!
ಭಾರತವು ಪುಣ್ಯನೆಲ, ಅವತಾರ ಇದರ ಬಲ
ಧರ್ಮ ಚ್ಯುತಿಗೆಡೆಯಿಲ್ಲ; ಸತ್ಯಕ್ಕೆ ಭಯವಿಲ್ಲ!
ದೇವನಿತ್ತಭಯವಿದು ಸುಳ್ಳಾಗಬಹುದೇ?
ನಿನ್ನುದಯ ಅವತಾರ ಅಲ್ಲ ಎನಬಹುದೇ?
ನಿನ್ನೊಡನೆ ಹೊಸ ಸೃಷ್ಟಿ ಜೈತನ್ಯವುದಿಸಿದುವು
ಹೊಸ ಬೆಳಕು ಹೊಸ ದೃಷ್ಟಿಯಿತ್ತು ಎಚ್ಚರಿಸಿದುವು
ಶಾಂತಿ ಕಹಳೆಯನೂದಿ ನೀನು ರಣಕೆದ್ದಾಗ
ಕೋಟಿ ಜನಮನದಲ್ಲಿ ಆಕೆ ಕುಡಿ ಚಿಗುರಿದುವು!
ಆಫ್ರಿಕದ ದಿಗ್ವಿಜಯ ಹೊಸ ಬಂನ ನೀಡಿತ್ತು
ಅಧಿಕಾರ ಶಾಹಿಗಳ ಕಲ್ಲೆದೆಯ ಕದಡಿತ್ತು
ತ್ಯಾಗ ಸರಳತೆ ಸ್ವಾಭಿಮಾನಗಳ ಹೊಸಮಂತ್ರ
ಮನೆ ಮನೆಗೆ ಮನ ಮನಕೆ ಸಿದ್ಧಿಸಿತ್ತು!
ರಕ್ತ ದಾಹದ ಮುಂದೆ ಸತ್ಯಧಾರೆಯನೆರೆದೆ
ಮೃತ್ಯು ಭಯವನೆ ತೊಡೆದು, ಹೆಣಗಾಡಿದೆ

ಸ್ವಾತಂತ್ರ್ಯ ಶುಭದಿನ

೧

ಅಂದು ಉದಿಸಿದ ದಿನವು ಇಂದೀಗ ಬಂದಿಹುದು||
ಆಂದು—ಇಂದುಗಳ ಅಂತರವೇನೆನುವುದು?
ಗತಿಸಿದಾ ಗತಿಗಳನು ತಿಳಿನಿನಲಿ ತಂದಾಗ|
ಮತಿಗೆ ಶಾಂತತೆ ಬಹುದು ಅದನೆಣಿಸಿದಾಗ||

೨

ಬಾಪೂಜಿ-ಜವಹರ-ಪಟೇಲ ಪೂಜ್ಯರ ನೆನಪು|
ಆ ಪರಮ ತೇಜರಿಗೆ ಮಣಿವ ನವ ದಿನವು|
ರಾಷ್ಟ್ರದೇಳಿಗೆಗಾಗಿ ಅವಿರಾಮಹ ವೀರ
ರೆಲ್ಲರಿಗೆ ವಂದಿಸುವ ಪರ್ವ ಕಾಲವಿದು||

ಆರೆ ಹೊಟ್ಟೆ ಬರಿ ಮೈಯ ಕರಿಪಕೀರನು ಎಂಬ
ನಿಂದೆಗಳ ಬದಿಗೊತ್ತಿ ಹೋರಾಡಿದೆ!
ಉಪವಾಸದಗ್ನಿಯಲಿ ಬೆಂದು ಪುಳ್ಳಿಯಾದೆ
ಬ್ರಹ್ಮಚರ್ಯದ ತೇಜವೆತ್ತ ಮುತ್ತಾದೆ!
ಶಾಂತಿ ಸತ್ಯಾಗ್ರಹದ ಸೈನ್ಯಸಾಚಿಯೆ ನೀನು
ಪ್ರೇಮ ಸೌಮ್ಯೋಪನದಿ ಜಗವ ಗೆಲಿದೆ!
ದುಷ್ಟ ಶಕ್ತಿಯ ಶಿರವು ನಿನ್ನಡಿಗೆ ಬಾಗಿತ್ತು
ಸ್ವಾತಂತ್ರ್ಯಜಯ ಘೋಷವೆಲ್ಲೆಲ್ಲೂ ಮೊಳಗಿತ್ತು
ಮಾನವತೆಯಿಂದ ಆತಿ ಮಾನವತೆಗೇರಿರುವ
ಓ ಮಹಾತ್ಮನೆ! ನಿನ್ನ ಪೂಜೆ ನಡೆದಿತ್ತು!
ಬಿಡುಗಡೆಯ ಬೆಳಕಿಸಲಿ ತಾಯಂದು ಹಿಗ್ಗಿರಲು
ನಡುಹಗಲೆ ಕವಿದಿತ್ತು ಘೋರಾಂಧಕಾರ
ನಿನ್ನ ಕೊಂದಿಳಿಗೆಲ್ಲ ಶಾಂತಿ ಕಂಗೆಟ್ಟಿಹವು
ಮುನ್ನಡೆಸು ಬಾರಿಂದು ಮರಳಿ ಬಾಪೂ!

—ಭಾ. ಭೆ. ಮುಜಿಬೈಲು.

೩

ಗಣರಾಜ್ಯವೆನ್ಮುದಿದು| ಜಗದೊಳಿದು ಅತಿ ಹೆಮ್ಮೆ|
ಗುಣಗಳಿಗೆ ಅತಿ ಒಲಿದು | ಪೂಜ್ಯತ್ವವಿಹುದು||
ಘನ ಕೀರ್ತಿ ತಾಳಿಹುದು | ಜನದಿ ಮನ್ನಣೆಯಹುದು|
ಎಣಿಸಿ ಬಹುಕಾಲ ವಿವ | ನುಳಿಸಿ ಕೊಳ್ಳುವುದ:||

೪

ಹಿರಿದಾದ ಆಸೆಯೆವು| ಗಿರುವುದಘು ಮನಗಂಡು|
ಹಿರಿಯರನು ಪೂಜಿಸುತ | ನೀತಿಯುತರಾಗಿ||
ಕಿರಿಯರೆಲ್ಲರು ಒಂದುಗೂಡಿ ಭಾರತಧೈರ್ಯ|
ಮುಂದಿರವ ಭದ್ರಗೊಳಿಸಲು ಮುಂದೆ ಸಾಗಿ ||

೫

ಸುತ್ತಲೂ ಶತ್ರುಗಳು ನಮ್ಮ ಶಕ್ತಿಯಕಂಡು|
ಮುತ್ತುವರು ಮತ್ಸರದಿ ಕೆಣಕಿಕೆದಕುವರಿ||
ಹತ್ತಿರಕೆ ಬಂದಾಗ ಕೆಚ್ಚೆದೆಯ ಬಿಚ್ಚಿನಾಲ್|
ಮತ್ತತೆಯ ಮರ್ದಿಸಲು ಮುಂದಾಗ ಬೇಕು||

೬

ಜಾತಿಮತ ಭೇದಗಳ ಬದಿಗೊತ್ತಿ ಮೂತೆಯಳಿ|
ಪ್ರೀತಿಯೊಂದೇ ನೆನಪಿನಲ್ಲಿಟ್ಟು ದುಡಿದು||
ನೀತಿ ಧರ್ಮಗಳ ತಾಮ್ಮೂಡ ಘನ ಕೀರ್ತಿಯನು|
ಆತತಾಯಿಗಳಿಂಗೆ ಬೋಧಿಸಲು ಬೇಕು||

೭

ಅಂದು ಕೈಕೊಂಡಿರುವ ವ್ರತನಿಯಮಗಳನೆಲ್ಲ|
ಇಂದು ಸ್ಮೃತಿಯಲ್ಲಿ ತಂದು ಶಪಥಗೈದಂತೆ||
ಒಂದನೂ ಮರೆಪಡಿಸದಾಚರಣೆ ಗೈಯುತ್ತ|
ಮುಂದೆ ಸಾಗಲು ಬೇಕು ನೀತಿ ಪಥದಂತೆ||

೮

ಅಂಜಿಕೆಯ ಹಿಂದಿಕ್ಕಿ ಧೈರ್ಯದಲಿ ನಾವುಕ್ಕಿ|
ಭಂಜಿಸುತ ದುಷ್ಟ ಶಕ್ತಿಗಳನ್ನು ಬಡದೆ||
ರಂಜನೆಯ ವಿಶ್ವದಲಿ ಪರಡಿ ಭಾರತಿಯನ್ನು|
ಆಂಜಲಿಯನೊಡ್ಡಿ ವ್ಯಾರ್ಥಿಸ ಬೇಕು ದೃಢದೆ||

—ಯು. ವಿ. ನಾಯಕ್, ಕಡಿರುದ್ಯಾವರ.

ಒಂದು ಉತ್ತಮ ಬ್ಯಾಂಕಿನಿಂದ ನೀವೇನು ಬಯಸುವಿರಿ?

ಭದ್ರತೆ
ಆಕರ್ಷಕ ಬಡ್ಡಿ
ಆರ್ಥಿಕ ಸೌಲಭ್ಯ
ಉನ್ನತ ಮಟ್ಟದ ಸೇವೆ

ಇವೆಲ್ಲವನ್ನೂ ನೀವು ಕೆನರಾ ಬ್ಯಾಂಕಿಂಗ್ ಕೊಪ್ಪೊರೇಶನ್ನಿನಲ್ಲಿ ಪಡೆಯಬಲ್ಲಿರಿ. ಖಾಯಂ ಠೇವಣಿಗಳ ಮೇಲೆ ಸೇಕಡಾ 7¼ರ ವರೆಗೂ ಬಡ್ಡಿ ದೊರೆಯುವುದು. ಧಾರ್ಮಿಕ ಹಾಗೂ ಲೋಕೋಪಯೋಗಿ ಸಂಸ್ಥೆಗಳ ಠೇವಣಿಗಳ ಮೇಲೆ ಸೇಕಡಾ ½ ಬಡ್ಡಿ ಜಾಸ್ತಿ ದೊರೆಯುವುದು. ಸುವ್ಯವಸ್ಥಿತ ಬ್ಯಾಂಕಿಂಗ್ ಸೇವೆ ಮತ್ತು ಸವಲತ್ತುಗಳು ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿಯೂ ದೊರೆಯುತ್ತವೆ.

ಕೆನರಾ ಬ್ಯಾಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್

64 ವರ್ಷಗಳ ಪರಿಪೂರ್ಣ ಸೇವೆ

ರಿಜಿಸ್ಟರ್ಡ್ ಆಫೀಸ್: ಉಡುಪಿ —— ಆಡಳಿತ ಆಫೀಸ್: ಮಂಗಳೂರು

ಇಂದಿರಾ ಗಾಂಧಿ ಪ್ರಧಾನಿಯಾಗಿರುವದು ಮುನ್ನ ಕೆತ್ತಿಸಿದು ಕೆಲಸ ಠೇವುವನ್ನು ನಿಮ್ಮ ಮಂಡಿಗೆ—ಅವಕ್ಕೆನೇ ಅವರನ್ನು (ಮಾಹಿತಿ ಮತ್ತು ಪ್ರಸಾರ)

ಮಾನವ ಪ್ರಪಂಚದಲ್ಲಿ ವರದಕ್ಷಿಣೆ

ಸಮಾಜ ಭ್ರಷ್ಟಕವಾದ ವರದಕ್ಷಿಣೆಯನ್ನು ನಿರ್ಮೂಲನ ಶಾಸನವು ಆಗಬೇಕಾಗಿದೆ. ಇದರಿಂದ ಸೊಂಡ ಕನ್ಯೆಯರು, ಕನ್ಯಾಪಿತೃಗಳು ತೀವ್ರ ನಿರಾಶರಾಗಿದ್ದಾರೆ. ಕನ್ಯಾಮಣಿಗಳು 'ಬರಿಳುಪಾಂಪಿತ್ರ'ವನ್ನು ಕಟ್ಟಿಕೊಟ್ಟಾಗಿ ಬ್ರಹ್ಮಚಾರಿಣಿ, ಕನ್ಯಾಲಕ ವರದಕ್ಷಿಣೆಯನ್ನು ಬೇರು ಸಹಿತ ಕಿತ್ತುಹಾಕಿದ ಕ್ರಾಂತಿಕಾರಿ ಸಲಹೆ ನೀಡುವ ಮೂಲಕ ಸ್ತ್ರೀಸಮಾಜದ ದುಃಖವನ್ನಾನಗಳನ್ನು ಈ ಲೇಖನದಲ್ಲಿ ಲೇಖಕಿಯರು ಅಭಿವ್ಯಕ್ತಗೊಳಿಸಿದ್ದಾರೆ.

ಲೇಖಕಿಯರು:
ಶ್ರೀಮತಿ ಅರುಣಕುಮಾರಿ.

ಸ್ತ್ರೀ ಪುರುಷರೆಂಬರೆ ಜೀವನ ಸರೋವರದಲ್ಲಿ ವಿಹರಿಸುವ ಚಕ್ರವಾಕ ಮಿಥುನಗಳು; ಜೀವನ ರಥದ ಎರಡು ಚಕ್ರಗಳು; ಕಾಲಚಕ್ರದಲ್ಲಿ ಹಗಲು ರಾತ್ರಿಗಳು; ವಿಶ್ವವಲ್ಲಿ ಭೂಮ್ಯಾಕಾಶಗಳು. ಜೀವನದಲ್ಲಿ ಪುರುಷರಿಲ್ಲದ ಬಾಳ್ವೆಯಂತೆ ಸ್ತ್ರೀಯರಿಲ್ಲದ ಬದುಕು ನೀರಸವಾದುದು. ಇದು ಆಧ್ಯಾತ್ಮ ಮಾರ್ಗದಲ್ಲಿ ಸತ್ಯವಲ್ಲದಿರಬಹುದು; ಆದರೆ ಪ್ರಾಪಂಚಿಕರ ದೃಷ್ಟಿಯಿಂದ ಸತ್ಯ. ಜಗತ್ತಿನ ಜನಕನು ಸ್ತ್ರೀ ಪುರುಷರನ್ನು ನಿರ್ಮಾಣ ಮಾಡಿದ ಕಾಲದಲ್ಲಿ ಪುರುಷನೊಬ್ಬ ಜಗಜ್ಯೋತಿ; ಸ್ತ್ರೀಯೊಂದು ಕುರುಡು ಕವಡೆ ಎಂದು ನಿರ್ಧಾರ ಮಾಡಿಟ್ಟಂತೆ ನಾಗರಿಕ ಜನತೆಯ ಇತಿಹಾಸದಲ್ಲೆಲ್ಲೂ ಆಧಾರ ದೊರೆಯುವುದಿಲ್ಲ. ಬಲ್ಲವರು ಸ್ತ್ರೀ ಪುರುಷರೆನ್ನುತ್ತಾರೆ: ದೇವ ದೇವನನ್ನು ಲಕ್ಷ್ಮೀನಾರಾಯಣ, ಭವಾನಿಶಂಕರ, ಸೀತಾರಾಮ, ರಾಧಾಕೃಷ್ಣನೆಂದು ಕರೆಯುತ್ತಾರೆ. ಕಲಿಯುಗದಲ್ಲಿ ಶಕ್ತಿದೇವತೆಗೇ ಪ್ರಾಧಾನ್ಯ ಹೆಚ್ಚಂತೆ! ಹೀಗಿರುವಾಗ ಬಂಗಾರದ ಬದುಕನ್ನು ಸಾಗಿಸಬೇಕಾಗಿದ್ದ ಸ್ತ್ರೀಯರು ಕಣ್ಣೀರನ್ನವನ್ನು ಉಣ್ಣುವ ಪ್ರಸಂಗವು ಇಂದು ಸಂಭವಿಸಿದುದು ಹೇಗೆ? ಸ್ತ್ರೀಯರ ದೌರ್ಭಾಗ್ಯದ ಪರಿಣಾಮವೇ? ಅಥವಾ ಪುರುಷರ ಮನಃಶಕ್ತಿಯ ಎತ್ತುಗಡೆಯೇ?

ಸ್ತ್ರೀಯರ ಸ್ಥಾನ ಹಿರಿದು

ಪುರುಷರು ತಾರುಣ್ಯ ಯೌವನಗಳನ್ನು ಸ್ತ್ರೀಯರ ಅನುಗ್ರಹವಿಲ್ಲದಿದ್ದರೆ ಸುಖದಿಂದ ಕಳೆಯಲಾರರು–ಇದೊಂದು ಸಿದ್ಧಾಂತ. ಇದನ್ನೇ ಕಾಳಿದಾಸನು ಅನುಭವಿಯಂತೆ ತನ್ನ ಕಾವ್ಯಗಳಲ್ಲಿ ಮನೋಹರವಾಗಿ ವರ್ಣಿಸಿದ್ದಾನೆ. ತಾರುಣ್ಯ ಯೌವನದ ವಿಷಗಳಲ್ಲಿ ಸ್ತ್ರೀಯನ್ನು ಕಳೆದುಕೊಳ್ಳುವುದು ಮುತ್ತಾವಿನಂತೆ–ಶಾಪದಂತೆ! ಮೇಘದೂತದಲ್ಲಿನ ಯಕ್ಷನ ಪತ್ನಿ ವಿರಹದ ದಿನಗಳನ್ನು ಕಳೆದ ಯಾವ ಪುರುಷನು ಅತಿಶಯ ಮೋಸ ಕಾರುಣ್ಯಾನುಭವವನ್ನು ನೋಡಿಲ್ಲ! ಶಕುಂತಲೆಯ ದರ್ಶನದಿಂದ ತಂದೆಯಾದ ಆಜನುಬಾಹುವಾದ ಪತ್ನೀ ವಿಯೋಗ ದುಃಖಕ್ಕೆ ಕಲ್ಲೂ ಕರಗಿ ನೀರಾಗಬೇಕಲ್ಲವೆ? ಭವಭೂತಿ ಕವಿಯು ಉತ್ತರರಾಮಚರಿತೆಯೊಂದು ದುಃಖ ವೇದನೆಗಳ ಹೊನಲು! ಇಲ್ಲಿ ಸೀತೆಯನ್ನು ತ್ಯಜಿಸಿದ ಶ್ರೀರಾಮನ ಶೋಕ ಪ್ರವಾಹವು ಅನುಪಮವಾದುದು. ಪುರುಷನ ಆ ದಾರುಣ ದಿನಗಳನ್ನು ಕಾಳಿದಾಸನು ತನ್ನ ಕಾವ್ಯಗಳಲ್ಲಿ ಹೃದಯದ್ರಾವಕವಾಗುವಂತೆ ಚಿತ್ರಿಸಿದ್ದಾನೆ. ಸ್ತ್ರೀಯು ನಡೆದಾಡಿದ ಗೃಹ–ಸಂಚರಿಸಿದ ನಾಟಕರಂಗ–ನರ್ತಿಸಿದ ಜಲಚ್ಛಿತ್ರವು ಪ್ರೇಕ್ಷಣೀಯವಲ್ಲ. ಯಾವ ಮಹಾಕವಿಯೂ ಸ್ತ್ರೀಪಾತ್ರವನ್ನು ಬಿಟ್ಟು ತನ್ನ ಕಾವ್ಯವನ್ನು ಸಂಪೂರ್ಣಗೊಳಿಸಿ ಯಶಸ್ವಿಯಾಗಿಲ್ಲ. 'ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾ!' ಯಾವ ವಂಶದಲ್ಲಿ ಸ್ತ್ರೀಯರಿಗೆ ಮನ್ನಣೆಯಿದೆಯೋ ಅಲ್ಲಿ ದೇವತೆಗಳು ಪ್ರಸನ್ನರಾಗುತ್ತಾರೆ. ಎಲ್ಲಿ ಸ್ತ್ರೀಯರಿಗೆ ಮನ್ನಣೆಯಿಲ್ಲವೋ ಅಲ್ಲಿ ದೇವತೆಗಳ ಅನುಗ್ರಹವಿಲ್ಲದೆ ಸಮಸ್ತ ಶುಭಕರ್ಮಗಳೂ ನಿಷ್ಫಲವಾಗುತ್ತವೆ. ಇದು ಮನುವಿನ ಅಭಿಪ್ರಾಯ. ಒಂದು ಕಾಲದಲ್ಲಿ ಸ್ತ್ರೀಯರಿಗಿದ್ದ ಹಿರಿಯ ಸ್ಥಾನವು ಇಂದು ಕೆಳಗೆ ಜಾರಿದುದರ ಕಾರಣ ಪುರುಷರ ಸ್ವಾರ್ಥದ ಪ್ರಭಾವವಿರಬಹುದೇ?

ವರದಕ್ಷಿಣೆಯ ಸ್ಥಾನಮಾನ

ಸ್ತ್ರೀಯೊಂದು ಗೋಹಿರಣ್ಯಗಳಂತೆ ದಾನಮಾಡುವ ವಸ್ತುವೇ? ದಾನಗಳಲ್ಲಿ ಕನ್ಯಾದಾನವು ಬಹಳ ಶ್ರೇಷ್ಠವಂತೆ! ಹೇಗಿದೆ ಪುರುಷರ ಅಭಿಪ್ರಾಯದ ಪ್ರಭಾವ! ಗೃಹಸ್ಥನಿಗೆ ಮೊದಲು ಕನ್ಯೆಯೇ ಜನಿಸಬೇಕಂತೆ! ಏಕೆ? ಪುರುಷನಿಗೆ ದಾನಮಾಡುವುದಕ್ಕೆ ಚೀ ಹೀಗೂ ಉಂಟೆ? ಈ ದಾನಮಾಡುವ ಸ್ವಸಂಗ ಮನ್ವಾದಿಗಳಿಗೂ ಸಮ್ಮತವೇ. ಮನುವು ವಿವಾಹವಾದ ಲಕ್ಷಣವನ್ನು ಹೇಳುವಾಗ ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯವೇ ಮೊದಲಾದ ವಿವಾಹಗಳ ಕುರಿತು ಹೇಳಿ, ಕನ್ಯಾದಾನದ ವಿಚಾರವನ್ನು ಹೇಳಿದ್ದಾನೆ. ಆದರೆ ಆತನು ವಿವಾಹಗಳಲ್ಲಿ ಉತ್ತಮವಾದ ಬ್ರಾಹ್ಮ, ದೈವ ವಿವಾಹಗಳಲ್ಲಿ ಕನ್ಯೆಯನ್ನು ಅಲಂಕರಿಸಿ ಯೋಗ್ಯ ವರನಿಗೆ ಕೊಡಬೇಕೆಂದಿದ್ದಾನೆ. ಇಲ್ಲಿ ಪುರುಷನು ಸದ್ಗುಣಿಯೂಗಿರಬೇಕೆಂದು ಆತನು ಹೇಳಿದುದನ್ನು ಯಾರೂ ಮರೆಯಬಾರದು. ಆರ್ಷ ವಿವಾಹದಲ್ಲಿ ಪುರುಷನೇ ಸ್ತ್ರೀಗೆ ಒಂದು ಆಥವಾ ಎರಡು ಗೋಮಿಥುನವನ್ನು ಕೊಡಬೇಕೆಂದಿದೆ. ಆಧರ್ಮ ವಿವಾಹವೆನ್ನಿಸಿಕೊಂಡ ಆಸುರದಲ್ಲೂ ಸ್ತ್ರೀಗೆ ಆಥವಾ ಆಕೆಯ ತಂದೆತಾಯಿಗಳಿಗೆ ಸರಸು ಶಕ್ತ್ಯನುಸಾರ ಹಣಕೊಟ್ಟು ಮದುವೆ ಆಗಬೇಕೆಂದಿದೆ. ಪ್ರಾಜಾಪತ್ಯ–ಗಾಂಧರ್ವ ವಿವಾಹಗಳಲ್ಲಿ ಹಣದ ಪ್ರಸ್ತಾಪವೇ ಇಲ್ಲ. ಇನ್ನುಳಿದ ವಿವಾಹಗಳು ಮನುವಿಗೆ ಸಮ್ಮತವಿಲ್ಲ ಹಾಗಾದರೆ ಮನುವಿನ ಕಾಲದಲ್ಲಿದ್ದ ಕನ್ಯಾಶುಲ್ಕವು ವರದಕ್ಷಿಣೆಯಾಗಿ ಹೇಗೆ ರೂಪಾಂತರ ಹೊಂದಿತು? ಯಾವಕಾಲದಲ್ಲಿ ರೂಪಾಂತರ ಹೊಂದಿತು? ಸ್ತ್ರೀರತ್ನ ದೊಡನೆ ಧನವಾಹನೆಗಳನ್ನು ದಕ್ಷಿಣೆಯಾಗಿ ಕೊಡುವುದು ಪ್ರಕೃತಿಗೆ ವಿರುದ್ಧವಲ್ಲವೆ? ಕಾಮಿನಿಯನ್ನು ಮೆಚ್ಚಿಸಿ ವಿವಾಹವಾಗುವುದೂ, ಕಾಂಚನವನ್ನು ಉದ್ಯೋಗ ಪರಿಶ್ರಮಗಳಿಂದ ಸಂಪಾದಿಸುವುದೂ ಜೀವ. ಪುರುಷಸಿಂಹರೆಂದೂ ಇದರ ವಿರುದ್ಧ ಕ್ರಮದಿಂದ ಹೆಣ್ಣು ಹೊನ್ನುಗಳನ್ನು ಪಡೆಯಲು ಬಯಸರು. ಚಿಲುವಿನ ಬಾಳ್ವೆಯ ಸಹಚರಿಯನ್ನೂ, ಪ್ರಾಣೇಶ್ವರಿಯನ್ನೂ, ಅರ್ಧಾಂಗಿಯನ್ನೂ ಸ್ವಾಗತಿಸುವಾಗ ಸಿಂಪಸ್ಪಭಾವವೇ ಯೋಗ್ಯವಾದದ್ದು. ಆ ಕಾಲದಲ್ಲಿ ಕನ್ಯೆಯಲ್ಲೂ ಕನ್ಯಾಪಿತನಲ್ಲೂ ಶೋಕದ ಚಿಹ್ನೆಯೂ ಕಾಣಿಸಬಾರದು. ಸಂಚಿಯ ಹೊನ್ನಮ್ಮನು ತನ್ನ ಹದಿಬದೆಯ ಧರ್ಮವನ್ನು ಬರೆದು ಸ್ತ್ರೀಯರ ಸ್ಥಾನಮಾನಗಳನ್ನು ಏರಿಸಲು ವಿಶ್ವ ಪ್ರಯತ್ನ ಪಟ್ಟಳು. ಆದರೆ ಅವಳ ಸಾಹಸವು ಸಾರ್ಥಕವಾಗಲಿಲ್ಲ. ಪ್ರಾಚೀನ ಕಾಲದಲ್ಲಿ ಅನಸೂಯೆ, ಅಹಲ್ಯೆ, ಲೋಪಾಮುದ್ರೆ, ದ್ರೌಪದಿ, ಸೀತೆ, ಸಾವಿತ್ರಿ ಮೊದಲಾದವರ ವಿವಾಹದಲ್ಲಿ ಅವರ ಹಿರಿಯರು ವರನಿಗೆ ಎಷ್ಟೆಷ್ಟು ದಕ್ಷಿಣೆಗಳನ್ನು ಕೊಟ್ಟಿದ್ದರು? ಆ ಅಳಿಯಂದಿರು ಮಾನಸಿಂದ ಹಣ ಕೀಳುವ ಕ್ಷುದ್ರ ಮನಸ್ಸಿಗೆ ಎಡೆಕೊಡುತ್ತಿದ್ದುದಕ್ಕೆ ಆಧಾರವುಂಟೇ? ಹಾಗಾದರೆ ಪುರುಷ ಪ್ರಪಂಚವು ಹೃದಯದಲ್ಲಿ ಕ್ಷುದ್ರ ಭಾವಕ್ಕೆ ಎಂದಿನಿಂದ ಎಡೆಕೊಡತೊಡಗಿತು?

ಅಧಃಪತನದ ವಿಷಗಳಿಗೆ–ಚಿಕಿತ್ಸೆ

ಭಾರತದ ಸ್ತ್ರೀಯರ ಅಧಃಪತನವು ಮುಸ್ಲಿಮರ ಆಳಿಕೆಯಿಂದಲೇ ಮೊದಲಾಯಿತೆನ್ನಬೇಕು. ಸ್ತ್ರೀಯರೊಂದು ವಿಲಾಸದ ಸಾಮಗ್ರಿ. ಅಕ್ಬರನ ಮುಖ್ಯ ಸೇನಾಪತಿಯಾದ ಮಾನಸಿಂಹನಿಗೆ ಒಂದು ಸಾವಿರದ ಏಸೂರು ಪತ್ನಿಯರಿದ್ದರೆಂದ್ರೆ! ಬಾದಶಹನಿಗೆ ತಕ್ಕ ಸೇನಾಪತಿ! ಅಕ್ಬರನು ಮಾನಸಿಂಹನ ಪರಾಕ್ರಮಕ್ಕೆ ಮೆಚ್ಚಿ ಅನೇಕ ಸ್ತ್ರೀಯರನ್ನು ಆತನಿಗೆ ಉಡುಗೊರೆಯಾಗಿ ಕೊಟ್ಟಿದ್ದನಂತೆ. ಅಂದು ಮುಸ್ಲಿಮ್ ಅರಸರಲ್ಲಿ ಏಕ ಪತ್ನೀವ್ರತವನ್ನು ಪಾಲಿಸುವವರೇ ಇರಲಿಲ್ಲ. ಅಂದಿನ ಹಿಂದೂ

ಸ್ವಾತಂತ್ರ್ಯೋತ್ಸವದ ಶುಭಾಶಯಗಳು !

ರಾಷ್ಟ್ರಕ್ಕೆ ಅನ್ನದಾತನಾದ ರೈತನ ಭಾಗ್ಯನಿಧಿ

Kirloskar Pump Set

ಆಹಾರೋತ್ಪಾದನಾ ಕ್ಷೇತ್ರದಲ್ಲಿ ಯಶಸ್ವಿಯಾಗಬೇಕೆ?

ಹಾಗಿದ್ದರೆ

ಕಿರ್ಲೋಸ್ಕರ್
ಪಂಪ್ ಸೆಟ್‌ಗಳನ್ನು
ಉಪಯೋಗಿಸಿರಿ.

ಕಿರ್ಲೋಸ್ಕರ ಪಂಪ್ ಸೆಟ್‌ಗಳು ಶ್ರೇಷ್ಠತೆಯಲ್ಲಿ, ದೀರ್ಘ ಬಾಳಿಕೆಯಲ್ಲಿ, ನಿರ್ವಹಣೆಯಲ್ಲಿ ನಿತ್ಯತೃಪ್ತಿಯಲ್ಲಿ ದೇಶದಲ್ಲೆಲ್ಲಾ ಸುಪ್ರಸಿದ್ಧವಾಗಿವೆ.
ಸಣ್ಣ ಹಿಡುವಳಿದಾರರಿಗೆಂತೂ ಅತ್ಯನುಕೂಲವಾಗಿವೆ.

ವಿತರಣೆಗಾರರು

ಕರ್ಕೇರಾ ಸನ್ಸ್ & ಕೊ.

ಮೈದಾನ್ ನೆಸ್ಟ್ ರೋಡ್ಸ್, ಮಂಗಳೂರು–1
Phone : 3967

ಅರಸರನ್ನೂ ಈ ವಿಚಾರದಲ್ಲಿ ಹೊಗಳಲು ಸಾಧ್ಯವಿಲ್ಲ. ಸಾರಾಂಶ-ಆ ಕಾಲದ ಶ್ರೀ ಸ್ತ್ರೀಯರ ಗೌರವವನ್ನು ಪುರುಷರು ಸಂಪೂರ್ಣ ಮಣ್ಣುಪಾಲು ಮಾಡಿದರು. ಸ್ತ್ರೀಯರು ಮೇಲೆ ಭೋಗದ ಒಡನೆಗೆಂಬ ಬಲವಾದ ಮುದ್ರೆಯು ಬಿದ್ದುಹೋಯಿತು. ಅವರ ಕುಕಾರ್ಯ ಸ್ಮಾರಕವಾಗಿ "ದಿವಾನಿ ಖಾಸ" ಇನ್ನೂ ಜೀವಂತವಿದೆ.

ಸ್ತ್ರೀಯರಿಗೆ ಬೆಲೆವೆಣ್ಣುಗಳ ಗೌರವ ಬಂದಾಗ ಪೂತಾಪಿತರು ತಮ್ಮ ಕನ್ಯೆಯರಲ್ಲಿ ತಾರುಣ್ಯೋದಯವಾಗುವ ಮೊದಲೇ ಅವರನ್ನು ತರುಣನ್ನೊಬ್ಬನ ಕೈಮೇಲೆ ಹಾಕಿ ತಾವು ನಿಶ್ಚಿಂತರಾಗಲು ಹಾತೊರೆಯುತ್ತಿದ್ದರು. ಅಂದು ಮದುವೆಯೊಗದೆ ಋತುವಾದ ಸ್ತ್ರೀಯನ್ನು ಅರಣ್ಯದಲ್ಲಿ ಬಿಟ್ಟು ಬರುವ ಕ್ರಮವಿತ್ತಂತೆ! ಈ ಮಾತಿನಲ್ಲಿ ಅತಿಶಯೋಕ್ತಿ ಇದ್ದರೂ ಆ ಕಾಲದಲ್ಲಿ ಸ್ತ್ರೀಯರ ಜೀವನವು ಸರಳವಾಗಿರಲಿಲ್ಲವೆಂಬುದನ್ನು ಈ ಒಕ್ಕಣೆಯು ಸಮರ್ಥಿಸುತ್ತಿದೆ. ಅಂದಿನ ಭಾರತೀಯರು ನಿರುಪಾಯರಾಗಿ ಭಾರತೀಯ ಸಂಸ್ಕೃತಿಯ ರಕ್ಷಣೆಗಾಗಿ ಮಾಡಿದ ಒಂದು ಪ್ರಯತ್ನವೇ ಬಾಲ್ಯ ವಿವಾಹ! ಅಂದಿನವರೆಗೆ ಬಹಳ ಬೆಲೆಬಾಳುತ್ತಿದ್ದ ಸ್ತ್ರೀಯರು ಮುಸ್ಲಿಮರ ಒಡೆತನದ ದಿನಗಳಲ್ಲಿ ಪುಕ್ಕಟೆ ಮೂಲುಗಳಾದರು! "ಹೇಗಾದರೂ ಹುಡುಗಿಯನ್ನು ಕೊಂಡು ಹೋಗವ್ವಾ! ಹುಡುಗಿಗೆ ಸಕಲಾಭರಣಗಳನ್ನು ಹಾಕುತ್ತೇನೆ! ಮದುವೆಯ ವೆಚ್ಚವನ್ನು ಕೊಡುತ್ತೇನೆ; ವರದಕ್ಷಿಣೆಯನ್ನು ಕೊಡುತ್ತೇನೆ" ಎಂದು ಕನ್ಯಾಪಿತನು ಗೋಳಿಡುವಾಗ 'ನನ್ನ ಹುಡುಗನಿಗೆ ಇಷ್ಟುಬೇಗ ಮದುವೆ ಮಾಡುವ ಮನಸ್ಸಿಲ್ಲ. ನೀನು ಹೇಳಿದಂತೆ ವರದಕ್ಷಿಣೆ ಕೊಡುವುದಾದರೆ ನೋಡೋಣ" ಎಂದು ವರನ ತಂದೆಯು ಬೀಗುತ್ತಿದ್ದ ಕಾಲವದು. ಅಂದೇ ವರನ ಪಕ್ಷದವರು ಭೀಗರಾಗಲು ಆತಂಭವಾದ ಕಾಲ! ಅಂದೇ ಬಾಲ್ಯ ವಿವಾಹವು ಆವರ ಬೆಲೆಯನ್ನು ಇಳಿಸಿತು. ಆಗ ವರದಕ್ಷಿಣೆಯು ಈ ಕೊಳು ಕೊಡೆಯ ನಡುವೆ ನುಸುಳಿಕೊಂಡು ಕೆಸರ ಕಂಬವಾಗಿದ್ದು ಈಗ ಶಿಲಾಶಾಸನವಾಗಿದೆ. ಅಂದಿನಬಾಲ್ಯವಿವಾಹ ಪಲಾಯನಪಾಯಿತು; ವ್ಯಾಧಿವಿವಾಹ ಆಚರಣೆಗೆ ಬಂತು. ಆದರೂ ವರದಕ್ಷಿಣೆಯು ಕಾಲುಕೀಳುವ ಚಿಹ್ನೆತೋರುವುದಿಲ್ಲ. ಅದನ್ನು ಈಗ ಸಮಾಜದಿಂದ ಕುತ್ತಿಗೆಗೆ ಕೈಹಾಕಿ ದಬ್ಬುವ ಮರ್ಯಾದೆಯನ್ನು ಪುರುಷರೆಂದೂ ಮಾಡುವಂತಿಲ್ಲ. ಅವರು ಪುಕ್ಕಟೆಯೊಗಿ ಬಂದ ಸ್ತ್ರೀತ್ವವನ್ನು ಕಳೆದುಕೊಳ್ಳುವಷ್ಟು ಹೆಪರಾಗಿಲ್ಲ. ಅವರು ಮಸೂದೆಯ ನಾಟಕವನ್ನಾಡಿ ನೋಡುತ್ತಿದ್ದಾರೆ. ಆ ಕುರಿತು ಭೀಷಣ ಭಾಷಣ ಮಾಡುತ್ತಿದ್ದಾರೆ! ಮೂರು ದ್ದದ ಲೇಖನ ಬಿಗಿಯುತ್ತಿದ್ದಾರೆ. ಈ ಕುರಿತು ಶಾಸ್ತ್ರಜ್ಞಾನವನ್ನು ಸೂರೆಮಾಡಲು ಹಿಂದೆಮುಂದೆ ನೋಡುವುದಿಲ್ಲ. ಆದರೆ ಅವೆಲ್ಲಾ ಅಂತರ್‌ಪ್ರೇರಣೆಯ ಕಾರ್ಯಗಳಲ್ಲ. ಇದರಿಂದ ಅವೆಲ್ಲಾ ನಿಷ್ಫಲಗಳಾಗಿವೆ. "ಮೂರ್ಖಸ್ಯ ದೊಣ್ಣೌಷಧಂ" ಇದು ವರದಕ್ಷಿಣೆಗೆ ಹೊಂದಿಕೆಯೊದ ಮಾತು. ಇಂದು ವರದಕ್ಷಿಣೆಯನ್ನು ಸಮೂಧಿಮೂದಲು ಸ್ತ್ರೀಯರೇ ಸೊಂಟ ಕಟ್ಟಬೇಕು. ಆದಕ್ಕಾಗಿ ಆತ್ಮಾರ್ಪಣ ಮಾಡುವಷ್ಟು ತ್ಯಾಗಬುದ್ಧಿಯನ್ನು ಅವರೇ ಮೈಗೂಡಿಸಿ ಕೊಳ್ಳಬೇಕು. ಸ್ತ್ರೀ ಪ್ರಪಂಚದ ಉದ್ಧಾರಕ್ಕಾಗಿ-ಪುರುಷ ಸಮಾಜಕ್ಕೆ ಬುದ್ಧಿ ಕಲಿಸುವ ದಕ್ಕಾಗಿ-ಸ್ತ್ರೀಯರು ಅವಿವಾಹಿತ ಜೀವನವನ್ನು ಕೈಗೊಳ್ಳಬೇಕು. ಕನ್ಯೆಯರಲ್ಲಿ ಸಾವಿರಾರು ಮಂದಿ ಚಿರಕುಮಾರಿ ವ್ರತವನ್ನು ಹಿಡಿಯಬೇಕು. ಆ ಕಾಲದಲ್ಲಿ ಅವರು ಪುರುಷರ ರಂಗು ಮಾತಿಗೆ ಬಲಿಬೀಳದಂತೆ ಎಚ್ಚರ ವಹಿಸಬೇಕು. ಹೀಗೆ ಪತ್ತಿಪ್ಪತ್ತು ವರ್ಷಗಳವರೆಗೆ ಸ್ತ್ರೀಯರು ಛಲದಂಕ ಮಲ್ಲೆಯರಾದರೆ ಪುರುಷರು ಸ್ತ್ರೀಯರ ಪಾದಮೂಲದಲ್ಲಿ ಪ್ರೇಮಭಿಕ್ಷುಕರಾಗುವ ಚಂದವನ್ನು ಅವರೇ ನೋಡಬಹುದು.

ಪುರುಷರ ಕಲ್ಪನೆಗಳು—ಮುಸೂದೆ

ಸ್ತ್ರೀಯರು ಉಬಲೆಯರಂತೆ! ಕಾಮಿನಿಯರಂತೆ! ಕಯ್ಯೂ ಎಂಬ ಹೆಸರು ಆಕೆಗೆ ಸಲ್ಲುವುದಂತೆ! ಎಂತಹ ಬೀಭತ್ಸ ವಿಚಾರ! ಪುರುಷನಿಗಿಂತ ಸ್ತ್ರೀಯರಿಗೆ ಎಂಟು ಪಾಲು ಕಾಮ ಹೆಚ್ಚಂತೆ! ಇದನ್ನೆಲ್ಲಾ ತೀರ್ಮಾನ ಮಾಡಿದವರಾರು? ಪುರುಷರು. ಸ್ತ್ರೀಯರಲ್ಲಿ ಇದಕ್ಕೆ ಒಪ್ಪಿಕೊಂಡವರುಂಟೆ! ಪುರುಷರೇ, ನಿಮ್ಮ ಕಾರ್ಯಕ್ಕೆ ಶಾಸ್ತ್ರಕಾರರ ಸಮ್ಮತಿ ಉಂಟೇ? ಹಾಗಿದ್ದರೆ ಅದು ಶಾಸ್ತ್ರವಲ್ಲ; ಸ್ತ್ರೀಯರ ಕೊಲೆಯ ಶಸ್ತ್ರ!

ಭಾರತ ಸರಕಾರವು ಪ್ರಚಾರಕ್ಕೆ ತಂದ ವರದಕ್ಷಿಣೆ ಮಸೂದೆಯೊಂದು ವೃತ್ಯುಪತ್ರವೆನ್ನಿಸಿದೆ. ಈ ಕಾನೂನು ಜಾರಿಗೆ ಬಂದು ಒಂದು ವರ್ಷವಾದರೂ ವರದಕ್ಷಿಣೆ ಎಂಬ ಭೂತದ ಒಂದು ರೋಮವನ್ನೂ ಚಲಿಸಲು ಇದಕ್ಕೆ ಸಾಧ್ಯವಾಗಲಿಲ್ಲ. ವರದಕ್ಷಿಣೆ ತೆಗೆದುಕೊಂಡ ಒಬ್ಬ ಅಪರಾಧಿಯನ್ನೂ ಅಧಿಕಾರಗಳಿಂದ ಇನ್ನೂ ಹಿಡಿಯಲಾಗಲಿಲ್ಲ. ಮುದುವೆಗಳು ಪೂರ್ವದಂತೆ ಆಗುತ್ತಿವೆ! ವರದಕ್ಷಿಣೆಯನ್ನು ಪೂರ್ವಕ್ಕಿಂತ ಅತಿಶಯವಾಗಿ ವರನ ಕಡೆಯವರು ಕಿತ್ತುಕೊಳ್ಳುತ್ತಿದ್ದಾರೆ. ಇದರಿಂದ ವರದಕ್ಷಿಣೆಯೆಂಬ ನಾಗರ ಹಾವನ್ನು ಕೆಣಕಿ ಬಿಟ್ಟಂತಾಗಿದೆ. ಇದೀಗ ಸಮೂಜದಲ್ಲಿ ವರದಕ್ಷಿಣೆಯೆಂಬ ಹೆಸರನ್ನು ಕಳೆದುಕೊಂಡು ಬಹುಮೂಸವೆಂಬ ಹೆಸರನ್ನು ತಳೆದಿದೆ. ಬಹುಮೂನವನ್ನು ಕನ್ಯಾಪಿತನು ತನ್ನ ಜಾಮೂತಿಗೆ ಕೊಡುವುದನ್ನು ಅಲ್ಲಗಳೆಯುವವರಾರು? ಈ ಶಾಸನದಿಂದ ವರದಕ್ಷಿಣೆಯೆಂಬ ಪದ ಅಳಿದಂತಾಯಿತಲ್ಲದೆ, ಕನ್ಯಾಪಿತರ ಸಂಕಸ್ಟ ನುಗಿಯಲಿಲ್ಲ.

ಮೂರುಕಟ್ಟೆಯಲ್ಲಿ ತರುಣರ ಬೆಲೆ.

ಸಮಗ್ರ ಭಾರತದಲ್ಲಿ ಒಂದು ತಿಂಗಳಿಗೆ ಸುಮಾರು ಒಂದು ಲಕ್ಷ ವಿವಾಹವು ಜರಗುತ್ತದಂತೆ! ಇವುಗಳಲ್ಲಿ ಸೇಕಡಾ ಹೊಂಬತ್ತು ವಿವಾಹಗಳು ವರದಕ್ಷಿಣೆಯ ನಿಯಂತ್ರಣಕ್ಕೆ ಒಳಪಟ್ಟೇ ನಡೆಯುತ್ತದೆ. ಇದಕ್ಕಾಗಿ ಕನ್ಯಾಪಿತರು ತಮ್ಮ ಪ್ರತಿತಿಂಗಳ ಆದಾಯದ ಹದಿನೈದರಿಂದ ಮೂವತ್ತರಷ್ಟು ವೆಚ್ಚ ನೂಡಬೇಕಾಗಿದೆ. ಉದಾ:-ಬೆಹಲಿಯ ಸಾಹುಕಾರನೊಬ್ಬ ತನ್ನ ಮಗಳಿಗೆ ವರನನ್ನು ಶೋಧಿಸುವ ಕಾರ್ಯಕ್ಕೆ ಹದಿನೈದು ಸಾವಿರ ರೂಪಾಯಿ ಖರ್ಚುಮೂದಬೇಕಾಯಿತು. ಆ ಮೇಲೆ ವರನನ್ನು ಪುಡುಕಿಕೊಟ್ಟ ದಳ್ಳಾಳಿಗೆ ನಾಲ್ಕುನಾವಿರ ರೂಪಾಯಿ ಕಾಣಿಕೆ ಸಂದಿತು! ಇದಕ್ಕೆ ಉದಾಹರಣೆಗೆ ಡಿಲ್ಲಿಯವರೆಗೆ ಹೋಗಬೇಕಾಗಿಲ್ಲ. ನಮ್ಮ ಹಳ್ಳಿಯಲ್ಲೇ ಈ ಚಿತ್ರಗಳು ಕಾಣಿಸಿಗುತ್ತಿವೆ. ಎಷ್ಟೋ ಮಂದಿ ದಳ್ಳಾಳಿಗಳಾಗಿಯೇ ಜೀವನ ಸಾಗಿಸುತ್ತಿದ್ದಾರೆ. ಅವರಿಗೆ ಹೆಣ್ಣುಗಳ ಮೇಲೆ ಕರುಣೆಯಿಲ್ಲ; ವರನ ಶ್ರೇಯೋಕಾಂಕ್ಷೆ ಮೊದಲೇ ಇಲ್ಲ. ಇವರಿಗೆ ತಮ್ಮ ಕಿಸೆ ತುಂಬಬೇಕು. ಎಷ್ಟೋ ಸಂದರ್ಭದಲ್ಲಿ ಇವರು ಮನುಷ್ಯತ್ವವನ್ನು ಕಳೆದುಕೊಂಡು ವರ್ತಿಸುತ್ತಾರೆ!

ಈಗಿನ ಪದವೀಧರ ತರುಣರಿಗೆ ಮಾರುಕಟ್ಟೆಯಲ್ಲಿ ನಿಶ್ಚಯಿಸಿದ ದರ ಹೀಗಿದೆ-ಪದವೀಧರನಾದ ಉಪಾಧ್ಯಾಯನಿಗೆ ಐದು ಸಾವಿರದಿಂದ ಇಪ್ಪತ್ತೈದು ಸಾವಿರದ ವರೆಗೆ ದಕ್ಷಿಣ ಸಲ್ಲಿಸಬೇಕು. ಸುಮಾರು ೬೦೦ ರೂ. ಸಂಬಳ ಪಡೆಯುವ ಇಂಜಿನಿಯರಿಗೆ ವರದಕ್ಷಿಣೆ ೫೦ ೦೦೦ ರೂ. ಮತ್ತು ಒಂದು ಕಾರು, ಹದಿನೇಳು ಸೂಟುಗಳು ಜಾಕ್ಟರು ಮತ್ತು ಲಾಯರರಿಗೆ ವರದಕ್ಷಿಣೆಯೊಡನೆ ಕಾರು, ಸ್ಕೂಟರು, ರೆಫ್ರಿಜರೇಟರುಗಳನ್ನು ಕೊಡುವುದು ಸಾಮಾನ್ಯವಾಗಿದೆ. ಸಾಹುಕಾರ ವರನ ಬೆಲೆ ಅವನು ಸರಕಾರಕ್ಕೆ ಕೊಡುವ ಆದಾಯ ತೆರಿಗೆಯನ್ನು ಹೊಂದಿದೆ. ಕಣ್ಣು ಕೈಕಾಲು ಸಮನಾಗಿರುವ ತರುಣನಿಗೂ ಒಂದು ಸಾವಿರಕ್ಕೆ ಕಡಿಮೆ ಇಲ್ಲ. ಇಂದು ತರುಣನ ವಿದ್ಯಾಭ್ಯಾಸವನ್ನು ಹೊಂದಿ ವರದಕ್ಷಿಣೆಯ ತರತನು ಭಾವವಿದೆಯೆನ್ನ ಬಹುದೇ? ಆದರೆ ಶ್ರೀಯರ ವಿದ್ಯೆ ಮತ್ತು ಪದವಿಯನ್ನು ಹೊಂದಿ ಕನ್ಯಾರುಬ್ಧದ ಕ್ರಮರೂಪಿಗೆ ಬರಬಹುದೆ? ಕನ್ಯೆಯು ಸ್ತ್ರೀಯಾದ ತಪ್ಪಿಗೆ ವರದಕ್ಷಿಣೆಯನ್ನು ತೆರಲೇ ಬೇಕು. ಇದು ಇಂದಿನ ಸ್ತ್ರೀ ಸಮಾಜಕ್ಕೆ ಪುರುಷರು ಹೇರಿದ ತಲೆ ತೆರಿಗೆ! ಇಂದು ಎಷ್ಟೋ ಮುಗ್ಧೆಯರಾದ ಹರಿಣಾಕ್ಷಿಯರು ಈ ವರದಕ್ಷಿಣೆಯ ಕಾಟದಿಂದಲೇ ಮಂಗಮುಸುಡಿನ ತೊಳೆದಿಟ್ಟ ಯಜ್ಞೇಶ್ವರನ ವರ್ಣದ ಎಳೆಯ ಅಥವಾ ಹಳೆಯ ತರುಣರ ವರರಾಗಿ ಅಹರ್ನಿಶಿ ಕನ್ಯೇರು ಸುರಿಸುತ್ತಿರುನರು! ಎಷ್ಟೋ ಮಂದಿ ಪ್ರೇಮಮಯಿಗಳಾದ ಕೋಮಲಾಂತಃಕರಣದ ತರುಣಿಯರು ಕಲ್ಲಿನೆದೆಗೆ ದುರ್ವ್ಯಸನದ ಪಿಡಿಪಗಳಾದ ಭೋಗಿವ್ಯರ ಮಡಿಲಲ್ಲಿ ಕೊಳೆಯುತ್ತಿರುವರು! ಇವಕ್ಕೆಲ್ಲಾ ಹೊಣೆಯಾರು? ಕೇವಲ ವರದಕ್ಷಿಣೆ! ವರದಕ್ಷಿಣೆ!

ಗೌಣ ತೀರ್ಮಾನ.

ಸರಕಾರಿ ಅಧಿಕಾರಿಗಳು, ಉನ್ನತ ಪುದೆಯಲ್ಲಿರುವ ಇಂಜಿನಿಯರರು, ಸೈನ್ಯಾಧಿಕಾರಿಗಳು,—ಇವರನ್ನೇ ಕನ್ಯಾಪಿತರು ಆನ್ವೇಷಿಸುವುದರಿಂದ ವರಗಳ ಬೆಲೆಯು ಏರಿಕೆಯಲ್ಲಿನೆಯೆಂದು ಕೆಲವರು ಅನ್ನುವುದುಂಟು. ಇದು ಗೌಣ ತೀರ್ಮಾನ. ಬಾಕ್ಟರೇ ಆಗಲಿ, ಯಾವ ಉನ್ನತಾಧಿಕಾರಿಯಾಗಲಿ, ವರದಕ್ಷಿಣೆಗೆ ಬಾಯಿ ನೀರು ಕರೆಯುತ್ತಿರುವುದರಿಂದಲೇಅದು ಇನ್ನೂ ಬದುಕಿರುವುದಲ್ಲದೆ, ಇನ್ಯಾವ ಕಾರಣವೂ ಅದನ್ನು ಇನ್ನೂ ಪೋಷಿಸಿಲ್ಲ. ರಾಜ್ಯಪಾಲ ಅಥವಾ ಮಹಾರಾಜನೇ ಆಗಲಿ, ಸ್ತ್ರೀಯರಿಗೆ ಸಲ್ಲದ ಪ್ರಮದೆಯರೆಂಬ ಹೆಸರನ್ನು

ಇಷ್ಟಕ್ಕೊಂದು

ಸಣ ಉಳಿತಾಯದ ಮಹತ್ತರ ಯೋಜನೆ

ಜನಪ್ರಿಯ ಠೇವಣಿ

ಎಲ್ಲಾ ವರ್ಗದವರಿಗೂ ಅತಿ ಸುಲಭ ಹಾಗೂ ಅನುಕೂಲವಾದ ಯೋಜನೆ.

ಇಂದು ಉಳಿಸಿದ ರೂ 10
ಎರಡು ವರ್ಷಗಳಲ್ಲಿ
ರೂ. 11-20 ಆಗುವುದು.
ವರ್ಷಕ್ಕೆ ಶೇಕಡಾ 5½ ರಂತೆ
ಚಕ್ರಬಡ್ಡಿ ನೊರಕುವುದು.

ರೂ 10, ರೂ. 50, ರೂ. 100
ಈ ಮೂರು ಶ್ರೇಣಿಗಳಲ್ಲಿ ಉಳಿಸುವುದಕ್ಕಾಗಿ
ಅತಿ ಜನಪ್ರಿಯ ಠೇವಣಿಯನ್ನು
ಕೆನರಾ ಬ್ಯಾಂಕಿನ ಶಾಖೆಯಲ್ಲಿ
ಇಂದೇ ಕೊಳ್ಳಿರಿ.

ಕೆನರಾ ಬ್ಯಾಂಕ್

ಪ್ರಧಾನ ಕಛೇರಿ : ಬೆಂಗಳೂರು - 2.

ಭಾರತದಾದ್ಯಂತ 425ಕ್ಕೂ ಹೆಚ್ಚು ಶಾಖೆಗಳು

ಟ್ಟು ಅವರ ತೋಳತೆಕ್ಕೆಯ ಸುಖಕ್ಕಾಗಿ ಸಮಸ್ತ ಸಂಪತ್ತು ಸುಖಗಳನ್ನು ತ್ಯಜಿಸುವ ದುರ್ಬಲ ವ್ಯಕ್ತಿಗಳಿಗೆ, ತೋರಿಕೆಯ ಜಗತ್ತಿನಲ್ಲಿ ಸ್ತ್ರೀಯನ್ನು ಕಾಲುಕಸದಂತೆ ಕಂಡು ಗರ್ವದಿಂದ ಇಷ್ಟು ನೆಟೆದು ನಿಲ್ಲುವ ಶಕ್ತಿ ಬರಬೇಕೆ? ಇವನ್ನೆಲ್ಲಾ ಸ್ತ್ರೀ ಪ್ರಪಂಚವು ಎಂದಿನವರೆಗೆ ಸಹಿಸಿಕೊಂಡಿರಲು ಸಾಧ್ಯವೆಂಟು?

ಸ್ತ್ರೀಯರ ಪ್ರಭಾವ—ಚಿರಕುನೂರಿ ವ್ರತ

ಇಂದಿನ ಸ್ತ್ರೀಯರು ಮುಂದಿನ ನೂರಿ ನಿಯರ ಸುಖಕ್ಕಾಗಿ ದೀಕ್ಷಾಬದ್ಧರಾಗಲೇ ಬೇಕು. ತಾನು ದಕ್ಷಿಣೆಯೊಂದಿಗೆ ಅರ್ಪಿಸುವ ಜಂಗಮ ವಸ್ತುವಲ್ಲ! ಜಗತ್ತಿನ ಸೌಭಾಗ್ಯದ ಕೀಲಿಕೈ! ತೊಟ್ಟಿಲು ತೂಗುವ ಕೈ ಜಗನ್ನಿಯಾಮಕವೆಂಬ ಪ್ರತಿಷ್ಠೆಯನ್ನು ತನ್ನ ಚಿರ ತಾರುಣ್ಯದ ಸೌಂದರ್ಯ ಪ್ರವಾಹದಲ್ಲಿ ಪುರುಷನನ್ನೊಂಪು ಜೆಪ್ಪು ಕಡ್ಡಿ! ಯಾವ ಗವರ್ನರನೇ ಆಗಲಿ; ನಿವೃತ್ತ ಶಿರೋಮಣಿಯೇ ಆಗಲಿ, ಅತನು ತಾರುಣ್ಯವಲ್ಲಿ ಸ್ತ್ರೀಯು ಮುಗುಳು ನಗೆಯನ್ನೇ ಮಹಾ ಪ್ರಸಾದವೆಂದು ನಂಬಿ ಅವರ ಸಾಕ್ಷಾತ್ಕಾರಕ್ಕಾಗಿ ತಪಸ್ಸು ನೂಡುತ್ತಿರುವನು! ಸ್ತ್ರೀಯರ ತುರುಬಿನಿಂದಲೇ ನುಲ್ಲಿಗೆ, ಜಾಜಿಗಳಿಗೂ ಒಂದು ಸ್ಥಾನ ದೊರೆತಿದೆ! ಈಗ ಕಾಲದ ಕುಟಿಲವಾದ ಗತಿಯಿಂದ ಅನಾಲ್ಯವಾಗಿ ರತ್ನಗಳು ಕಲ್ಲು ಹರಳಿನಂತೆ ಬಳಕೆಯಾಗುತ್ತಿವೆ!

ಇಂದು ಸ್ತ್ರೀಯರು ವರದಕ್ಷಿಣೆಯೆಂಬ ಪಿಶಾಚಿಯನ್ನು ತಾವೇನೂತ್ರಿಕಶಕ್ತಿಯಿಂದ ಸಮೂಜದಿಂದ ದೂರಕ್ಕು ಓಗೆಯಬೇಕು ತಮ್ಮ ಅಲಿಗಳು ಬೆಕ್ಕಿಗೆ ಗಂಟೆಕಟ್ಟುವ ಈಸೋಪನ ಕಥೆಯೊಗಬಾರದು. ಸಮವಯಸ್ಸು, ಸಮರೂಪ, ಸಮಸಂಪತ್ತುಗಳಿಲ್ಲದ ವರನನ್ನು ಕವೆಗಣ್ಣಿನಿಂದಲೂ ನೋಡದೆ ಚಿರಕುಮಾರಿ ವ್ರತವನ್ನು ಕನ್ಯೆಯರು ಸಾಂಗವಾಗಿ ಪಾಲಿಸಿದರೆ ತಾರುಣ್ಯದ ಆಸ್ನಿಗ್ಧ ಗೊಂಬೆಗಳ ಹೊಂಬೆಳಕಿಗೆ ಪತಂಗಗಳಾದ ಪುರುಷರು ಮುಸುಕೆಯೇ ಮುಸುಕುವರು. ಸ್ನೇಹಮಯಿಯರ ಪ್ರೇಮ ಜ್ಯೋತ್ಸ್ನಿಗೆ ಅಗ್ನಿಯ ಸುಡುವ ನಿಷ್ಕರುಣವಿಲ್ಲ; ನುದ್ದಿಸುವ ಆನಂದದ ಚುಂಬಕದ ಆವರಣವಿದೆ! ಅದಕ್ಕಾಗಿ ನನ್ನ ಸೋದರಿಯರು ತಮ್ಮ ತಾರುಣ್ಯದ ಶಕ್ತಿಯನ್ನು ಜೋಪಾಸನವಾಗಿ ರಕ್ಷಿಸಬೇಕು. ಇಲ್ಲಿ ವಿವಂಚನೆ ಕೃತ್ರಿಮತೆ–ಡಂಭ ಕೂಡದು.

ಸ್ತ್ರೀಯರಿಗೆ ಅಸಾಧ್ಯವಾದುದೇನುಂಟು? ಒಲುಮೆಯಿಂದ ನಾರಿಯೂ ಮುನಿಸಿನಿಂದ ಮಾರಿಯೂ ಆಗ ಬಲ್ಲಳು. ಕಡೆಗಣ್ಣಿನ ನೋಟದಿಂದ ಪುರುಷ ಪ್ರಪಂಚವನ್ನೇ ಕುಣಿಸಿ ಮಣಿಸುವ ಸ್ತ್ರೀಯರು ಮನಸ್ಸು ಮಾಡಿದರೆ ವರದಕ್ಷಿಣೆಯನ್ನು ಕಿತ್ತೊಗೆಯುವುದಿರಲಿ, ಕಪ್ಪನಿಷ್ಕುರಗಳ ತವರು ಮನೆಯೂದ ಮರ್ತ್ಯಲೋಕಕ್ಕೆ ಸ್ವರ್ಗವನ್ನೇ ಇಳಿಸಬಲ್ಲರು. ಸೋದರಿಯರೇ, ಈಗ ನೀವು ಕುರಿಯ ಹಿಂಡಿನಲ್ಲಿದ್ದ ಸಿಂಹಿಣಿಯಂತಾಗಿದ್ದೀರಿ. ನಿಮ್ಮ ತಂದೆ ತಾಯಿಗಳು "ಉತ್ತಮವರ"ನೆಂಬ ಹೆಂಬಲಿಸಿ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗ ಬರಲಾರದು; ನೀವು ನಿಮ್ಮ ಮಾತಾ ಪಿತರಿಗೆ ಎಂದೂ ಹುಣ್ಣಾಗಲಾರಿರಿ; ಬೆಟಿ ಬಾಳುವ ಹೊನ್ನಾಗುವಿರಿ. ಪ್ರಕೃತಿಯೇ ಸ್ತ್ರೀಗೆ ಹೊನ್ನ ಬಾಳನ್ನು ಕೊಟ್ಟಿದೆ. ಅವಳು ಹೊನ್ನಿನ ಮೂಲಕವೇ ತನಗೆ ಬೆಲೆ ತಂದುಕೊಳ್ಳುವ ಅಗತ್ಯವಿಲ್ಲ.

• ಉಡುಪಿಯು ಭಾರತದಲ್ಲಿ 901 ವರ್ಷಗಳಿಂದ ಸುಪ್ರಸಿದ್ಧ ಕ್ಷೇತ್ರ!

• ಐರೋಡಿಯವರ ಪಾತ್ರೆ ಭಂಡಾರವು 91 ವರ್ಷಗಳಿಂದ ಉಡುಪಿಯಲ್ಲಿ ಪ್ರಸಿದ್ಧ !!

ಕಡಿಮೆ ಕ್ರಯದಲ್ಲಿ ಉತ್ತಮ ಸೌಂದರ್ಯದ
ಮನೆ, ಮಠ, ದೇವಾಲಯಗಳಿಗೆ ಬೇಕಾಗುವ
ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು, ಸ್ಟೀಲು,
ಎಲ್ಮುನಿನಿಯಮ್ ಪಾತ್ರೆಗಳು
ರಖಂ ಆಗಿಯೂ ಚಿಲ್ಲರೆಯಾಗಿಯೂ ಸಿಗುವ
ಒಂದೇ ಅಂಗಡಿ

ಮೆಸರ್ಸ್
ಐರೋಡಿ ರಾಧಾಕೃಷ್ಣ ಪೈ

ಪಾತ್ರೆ ವ್ಯಾಪಾರಿ,
ಅನಂತೇಶ್ವರ ಸನ್ನಿಧಿ,
ರಥಬೀದಿ, ಉಡುಪಿ, ದ. ಕನ್ನಡ.

ವಿಶೇಷ ಸೂಚನೆ.— ದೇವತಾರ್ಚನೆ ಪಾತ್ರೆಗಳ ಸಚಿತ್ರ ಕ್ಯಾಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸಲಾಗುವುದು.

ಸ್ವಾತಂತ್ರ್ಯ ದಿನೋತ್ಸವದ ಶುಭಾಶಯಗಳು!

ಅತ್ಯಾಧುನಿಕ ಸೌಕರ್ಯಗಳಿಂದೊಡಗೂಡಿ
ಜನಪ್ರಿಯವಾದ ಪ್ರಮುಖ ಹೊಟೆಲ್

ಮಧು ನಿವಾಸ

ಸಂದರ್ಶಿಸಲೇಬೇಕಾದ
ವಸತಿ, ಭೋಜನ ಹಾಗೂ ಉಪಾಹಾರ ಮಂದಿರ
ಗಾಂಧಿ ಚೌಕ - - - ಮೈಸೂರು

ಮ್ಯಾನೆಜರರು :
ಬಿ. ರಾಮಕಾಸ ಭಟ್ ಮತ್ತು ಸಹೋದರರು.

ONCE YOU PAY A VISIT
WILL REMEMBER THE CITY'S
POPULAR VEGETARIAN RESTAURANT

MADHU NIVAS

Boarding & Lodging
GANDHI SQUARE
MYSORE

for Quality Vegetarian Preperations and Comfortable Stay in our Double and Single Rooms.

Try for a while and be satisfied.

ವಿಶ್ವಾಸಾರ್ಹ ನೀರಾವರಿಯ ವ್ಯವಸ್ಥೆಗೆ

ಜಗದ್ವಿಖ್ಯಾತವಾದ

ಹಿಂದುಸ್ಥಾನ್
ಬ್ರೌನ್ ಬೊವೆರಿ

ಮೋಟಾರು ಸಂಪುಸೆಟ್ಟುಗಳು
ಮತ್ತು
ಕಟ್ಟಾರ್ ಹ್ಯಾಮರ್ ಸ್ಟಾರ್ಟರುಗಳನ್ನೇ
ಅಳವಡಿಸುತ್ತಾರೆ.

ನಿಮಗೆ ಬೇಕಾದ ಪಂಪುಸೆಟ್ಟುಗಳನ್ನು
ಕೆಳಗಿನವರಲ್ಲಿ ಸದಾ ದಾಸ್ತಾನಿನಿಂದ ಪಡೆಯಬಹುದು.

Sales & Service

VICTOR TRADING CORPORATION

FALNIR ROAD - - MANGALORE-1
Phone : 5737

GOPAL FARM ENGINEERS

FALNIR ROAD - - MANGALORE-1
Phone : 5737

Printed and Published by K. H. Shetty at the Navayuga Press, Udipi, S. India.

ಭಾರತೀಯ ಸಂಸ್ಕೃತಿಯ ಪುನರುತ್ಥಾನ

(ಸದಿನಂಬಮೇ ಪುಟದಿಂದ)

ಸಂಪ್ರದಾಯವನ್ನು ಉಳಿಸಿರಿ" ಎಂದು ರಂ ಪಾಟ ಮಾಡುತ್ತ ಕೇಕೆ ಹೊಡೆಯುತ್ತಾರೆ. "ಅಕ್ಕ ವಿಧವೆಯೊದರೂ ಚಿಂತಿಲ್ಲ; ಭಾವ ಉಳಿಯಬಾರದು" ಎಂಬ ದೈತ್ಯ ನೀತಿಯನ್ನು ಮುಂದಿಟ್ಟು ಪ್ರಧಾನ—ಪ್ರಧಾನಿಗಳನ್ನು ಉರುಳಿಸಲು ಪಣತೊಟ್ಟರುತ್ತಾರೆ.

ಪ್ರಧಾನಿಯ ನಡೆನುಡಿ, ಆಚಾರ ವಿಚಾರ, ಕಾರ್ಯಾಚರಣೆ ಮತ್ತು ಮನೋಧೋರಣೆಗಳು ಸರಿಯಲ್ಲವೆಂದು ಇಂದು ಬೊಬ್ಬಿಡುವ ಮೊದಲು ಇಪ್ಪತ್ತಮೂರು ವರ್ಷಗಳಿಂದ ರಾಜ್ಯ ಸೂತ್ರಧಾರಿಗಳಿದ್ದ ಇವರ ಚಾರಿತ್ರ್ಯ ಪವಿತ್ರವಾಗಿತ್ತೇ ಎಂದು ಯಾರೂ ಕೇಳುವದಿಲ್ಲವೆಂದು ಅವರು ಆ ದನ್ನು ಚಿಂತಿಸುತ್ತಿಲ್ಲ. ದೇವರ ದಯೆಯಿಲ್ಲದೆ ಇಂದಿರಾ ಗಾಂಧಿ ಪ್ರಧಾನಿಯೊಗಲು ಸಾಧ್ಯವಿಲ್ಲ. ಮತ್ತು ಆಗಿಲ್ಲ. ದೇವರ ಒಲವು ನಿಲವು ಮುಗಿದ ಮರುಗಳಿಗೆಯಲ್ಲಿ ಪ್ರಧಾನಿ ಶಾಶ್ವತವಾಗಿ ಉಳಿಯಲು ಸಾಧ್ಯವಿಲ್ಲ. ಅದುವರೆಗೆ ಈ ನೇಶಭಕ್ಷಕರು ಎಷ್ಟು ಬೊಬ್ಬೆ ಹೊಡೆದರೂ, ಲಾಗ ಹಾಕಿದರೂ ಅವರನ್ನು ಉರುಳಿಸಲು ಸಾಧ್ಯವಿಲ್ಲ. ಪ್ರಧಾನಿ ನಿರಂಕುಶ ನೀತಿಯಿಂದ ರಾಜ್ಯವಾಳುತ್ತಾರೆಂಬ ಅಪವಾದ, ನಿರಂಕುಶ ಪ್ರಭುತ್ವದಿಂದ ಸರಕಾರ ನಡೆಯುತಿದ್ದರೆ ಆ ನೀತಿಯನ್ನು ಅವಲಂಬಿಸಿದ್ದರೆ ಇವರೆಲ್ಲ ರನ್ನು ಈಗಾಗಲೇ ಗಲ್ಲಿಗೆ ಏರಿಸ ಬಹುದಾಗಿತ್ತು. ಬಾಯಿಗೆ ಬಂದಂತೆ ವಿಚಾರ ಶೂನ್ಯರಾಗಿ ಬಡಬಡಿಸಿದರೂ ಪ್ರಧಾನಿ ಮಾತ್ರ ಇಂದಿಗೂ ದಂಡ ನೀತಿಯನ್ನು ಉಪಯೋಗಿಸಿಲ್ಲ. ಈ ಮಾತು ಸತ್ಯತಾನೇ.

ಇದಕ್ಕೆಲ್ಲ ಮೂಲ ಕಾರಣ ಭಾರತೀಯ ಸಂಸ್ಕೃತಿಯ ಅಭಾವ. ಪ್ರಧಾನಿ ರಜ್ಯನ್ನರ ರಾಜಕೀಯ ಪ್ರಭಾವಕ್ಕೆ ಒಳಪಟ್ಟರುವರೆಂದು ವಿರೋಧ ಪಕ್ಷದವರ ದೊಂಬರಾಟ. ಹೀಗೆನ್ನುವವರು ತಮ್ಮ ತಲೆಯನ್ನ ಉಪಯೋಗಿಸಿ ಸ್ವಯಂ ಪ್ರೇರಣೆಯಿಂದ ಆ ಮಾತುಗಳನ್ನು ಆಡಿದರೆ ಅದಕ್ಕೊಂದು ಬೆಲೆ. ಆದಕ್ಕೆ ಅಮೆರಿಕೆಯ ವಕಾಲತ್ತು ಮತ್ತು ವ್ಯವಹರಣೆ ಏಕೆ? ನಮ್ಮ ದೇಶದ ಪೀಡೆಗಳಿಗೆ 'ದ್ವೈತ' ಸಿದ್ಧಾಂತವೇ ಮೂಲ ಕಾರಣ. ನಾವು ಪಾಶ್ಚಾತ್ಯ ಸಭ್ಯತೆ, ಆಚಾರ, ವಿಚಾರ ಮತ್ತು ನಡೆ ನುಡಿಗಳಿಗೆ ಶರಣು ಹೋಗುತ್ತೇವೆ ಆಥವಾ ಹೋಗಿದ್ದೇವೆ. ನಮ್ಮ ಸನಾತನ ಸಂಸ್ಕೃತಿಯನ್ನು ಬಿಟ್ಟುಕೊಟ್ಟರುತ್ತೇವೆ. ಆಂಗ್ಲ ವಿದ್ಯಾಭ್ಯಾಸದ ಜೊತೆಗೆ ಅವರ ನಡೆ-ನುಡಿ, ಉಡಿಗೆ-ತೊಡಿಗೆ, ತಿಂಡಿ-ತಿನಸು,ಆಚಾರ-ವಿಚಾರಗಳಿಗೆ ಮರುಳಾಗಿ ಪರದೇಶೀಯ ಜೀವನ ಕ್ರಮಗಳೇ ನಮಗೆ ಪ್ರಿಯವಾಗಿವೆ.

ಅಮೆರಿಕೆಯ ಚಂದ್ರಮಂಡಲದ ವಿಕ್ರಮ ಸಾಹಸದ ನಂತರ ನಮ್ಮ ಧರ್ಮ, ಪುರಾಣ, ಇತಿಹಾಸ-ಶಾಸ್ತ್ರ ಸಂಪ್ರದಾಯಗಳ ಮೇಲೆ ನಮಗೆ ವಿಶ್ವಾಸ ಇಲ್ಲವಾಗಿದೆ. ಸ್ವರ್ಗ-ನರಕಗಳೆಲ್ಲ ಕಾಲ್ಪನಿಕವೆಂಬ ಭಾವನೆ ಬೆಳೆದಿದೆ. ಚಂದ್ರನೇನು? ಚಂದ್ರನಿಗೂ ಶತಪಾಲು ದೊಡ್ಡದಾದ ಗ್ರಹಗಳಿವೆ. ಗ್ರಹ ಮಂಡಲವಿದೆ. ಗ್ರಹ ಮಂಡಲಕ್ಕಿಂತಲೂ ಮಿಗಿಲಾದ ಬಿಗಿಯೂದ ಸೂರ್ಯನಿದ್ದಾನೆ. ಸೂರ್ಯನಿಗಿಂತಲೂ ಸಾವಿರ ಪಾಲು ಗಾತ್ರದ ದೊಡ್ಡ ದೊಡ್ಡ ನಕ್ಷತ್ರಗಳಿವೆ. ಇವನ್ನೆಲ್ಲ ಕೂಡಿದ ಈ ವಿಶ್ವದ ವಿರಾಟ ಸ್ವರೂಪವನ್ನು ತಿಳಿಯ ಬೇಕಾದರೆ ಹುಲು ಮಾನವನಿಗೆ ಭಗವಂತನ ಕೃಪೆಯಿದ್ದರೆ ಮಾತ್ರ ಸಾಧ್ಯ.

ನಮ್ಮ ದೇಶ ಎಂದಿಗೂ ನರಿನಾಯಿಗಳ ಪಾಲಾಗುವದಿಲ್ಲ. ಈ ಮಾತನ್ನು ಒತ್ತಿ ಒತ್ತಿ ಹೇಳ ಬೇಕಾದ ಅವಶ್ಯಕತೆಯೇ ಇಲ್ಲ. ಯಾಕೆಂದರೆ ಭಾರತ ದೇವರ ನಾಡು, ಧರ್ಮದ ಬೀಡು. ಸಾಧು ಸಂತರ, ಋಷಿ ಪುಂಗವರ, ಯೋಗಿ ಸನ್ಯಾಸಿಗಳಿಂದ ಪವಿತ್ರವಾದ ಕ್ಷೇತ್ರವಿದು.

"ಸರ್ವೇ ಜನಾ ಸುಖಿನೋ ಭವಂತು" ಎಲ್ಲಾ ಜನರಿಗೂ ಸುಖವಾಗಲಿ ಎಂದು ಋಷಿಗಳು ಸಮಿಧೆಯನ್ನು ಉರಿಸಿ, ಮಂತ್ರ ಪಠಿಸಿ ಯಜ್ಞಮಾಡಿ ದೇವರನ್ನು ಒಲಿಸಿದ ದೇಶವಿದು. ಪವಿತ್ರ ಭೂಮಿಯಿದು.

ಕಾಲ ಕಾಲಕೆ ಮಳೆಯು ಸುರಿಯಲಿ.
ಕಣಜ ಕನಕಗಳಿಂದ ತುಂಬಲಿ.
ಭೀತಿ ತೊಲಗಲಿ. ಕ್ಷಾಮ ಕಳೆಯಲಿ.
ಶಾಂತಿ, ಸಮೃದ್ಧಿಗಳು ನೆಲೆಸಲಿ.

ಇಂತಹ ಸದ್ಭಾವನೆಗಳು ಭಾರತೀಯ ಸಂಸ್ಕೃತಿಯ ಪ್ರತೀಕಗಳು. ನಮ್ಮ ಋಷಿ ಮುನಿಗಳು ಪ್ರಧಾನಿಯನ್ನು ಪದಚ್ಯುತಗೊಳ್ಳಿಸಿ ನ್ಯಾಗಿ ಮೂಡುವ ಮಂತ್ರ ಪಠಿಸಿಲ್ಲ. ಆದ್ದರಿಂದ ರಾಜಕೀಯ ಚದುರಂಗದಾಟದಲ್ಲಿ ಖದೀಮರು ಲೋಕ ಕಲ್ಯಾಣದ ಕೆಲಸದಲ್ಲಿ ಪ್ರವೃತ್ತರಾದರೆ, ಆ ಪಥದಲ್ಲಿ ನಿಸ್ವಾರ್ಥದಿಂದ ದುಡಿದರೆ ಅವರನ್ನು ಅಂತಹರನ್ನು ಪ್ರಜೆಗಳು ಇನ್ನೊಮ್ಮೆ ಗದ್ದಿಗೆಯ ಮೇಲೆ ಏರಿಸಿಯೂರು. ಏರಲು ಅವಕಾಶ ಕಲ್ಪಿಸಿ ಕೊಟ್ಟಾರು. ದೇವರಿಗೂ ಅಂತಹ ಕೆಲಸ ಕಾರ್ಯಕ್ರಮ ಪ್ರಿಯವಾದೀತು. ಇಲ್ಲವೆ ದೊಂಬರಾಟ ಆವರನ್ನೇ ನುಂಗುವದರಲ್ಲಿ ಸಂಶಯವಿಲ್ಲ. ಬಡಜನತೆಯ ಅಂದರೆ ದೀನದಲಿತರ ಸುಖ ದುಃಖಗಳನ್ನು ಎಣಿಸದೆ ಗಣಿಸದೆ ಗಣರಾಜ್ಯದಲ್ಲಿ ಇನ್ನು ಮೇಲೆ ಗದ್ದುಗೆ ಏರಲು ಸುಲಭವಿಲ್ಲ. ಎಷ್ಟೇ ಬಲವಾದ ಪ್ರಚಾರ ಮತ್ತು ಪ್ರಸಾರಗಳಿಂದ ರಾತ್ರೆಯನ್ನು ಹಗಲು ಮಾಡಲು ಸಾಧ್ಯವಿಲ್ಲ. ಗಾಂಧೀ ವಾದವನ್ನು ಕೊಂದು ಜವಾಹರಲಾಲರ ನೆನಪಿಗೂ ಮರಳು ಜೆಲ್ಲಿ ದೇಶಭಕ್ಷಕರಾಗಲು ಹವಣಿಸಿದರೆ ಅಂತಹ ಕಾರ್ಯ ಸಫಲವಾಗಲಿಕ್ಕಿಲ್ಲ.

ಭಾರತೀಯ ಪ್ರಜೆಗಳು ದೇವ ಪ್ರಿಯರು ಧರ್ಮ ಪರಾಯಣರು..ಅಸುರೀ ಶಕ್ತಿಗಳ ಹಿಂಬಾಲಕರು. ಇಂದು ಸನಾತನ ಧರ್ಮವನ್ನೆ ಕೆಡಿಸಿ ಭಾರತೀಯ ಸಂಸ್ಕೃತಿಯ ಬುನಾದಿ ಕಲ್ಲನ್ನೇ ಉರುಳಿಸಿದ್ದಾರೆ. ಸನಾತನ ಧರ್ಮವೆಂದರೆ ಆದಿ ಅಂತ್ಯವಿಲ್ಲದ ಧರ್ಮ.ಅಮರ ಧರ್ಮ. ದೇವ ಧರ್ಮ. ಸತ್ಯ ಧರ್ಮ. ಲೋಕ ಕಲ್ಯಾಣ ಧರ್ಮ. ಜನರು ಮಾತ್ರವಲ್ಲ. ಎಲ್ಲಾ ಜೀವಿಗಳೂ

With best compliments from

HOTEL
SUDHA

BAGALKOT

Phone No. 287

Telegram : 'SAHAKARI' Phone : 4627

THE S. K. A. C. M. S. LTD.,
MANGALORE-1.

ದ. ಕ. ಕೃಷಿಕರ ಸಹಕಾರಿ
ಮಾರಾಟ ಸಂಘ ಲಿಮಿಟೆಡ್
ಸಹಕಾರಿ ಮಹಲ್,
ಮಂಗಳೂರು-1

ಅಡಿಕೆ, ಯಾಲಕ್ಕಿ, ಕಾಳುಮೆಣಸು, ಗೇರುಬೀಜ,
ತೆಂಗಿನ ಕಾಯಿ ಮಗ್ಗೆರೆ (ಅಕ್ಕಿ ಭತ್ತ ಹೊರತು)
ವ್ಯವಸಾಯದ ಎಲ್ಲಾ ಉತ್ಪತ್ತಿಗಳನ್ನು
ಕಮಿಶನ್ ವ್ಯಾಪಾರಕ್ಕೆ ಪಡಕೊಂಡು
ಯೋಗ್ಯ ಬೆಲೆಗೆ ವಿಕ್ರಯಿಸುವ

ಜಿಲ್ಲೆಯ ಪ್ರಾಮುಖ್ಯ ಸಹಕಾರಿ ಮಾರಾಟ ಸಂಘ

ಎಸ್. ನರಸಪ್ಪಯ್ಯ, B. A., B. L., ಉಪಾಧ್ಯಕ್ಷ
ಬಿ. ಪ್ರಭಾಕರ ರಾವ್, M. A., B. L., ಅಧ್ಯಕ್ಷ

ಸುಖ ಸಮೃದ್ಧಿಗಳಿಂದ, ಭಯ ಭೀತಿಗಳಿಲ್ಲದೆ ಬದುಕಿ ಬಾಳುವಂತಾಗ ಬೇಕೆನ್ನುವ ಮಹೋನ್ನತ ಧರ್ಮ. ಇಂತಹ ನುಡಿ ಮುತ್ತುಗಳು ಭಾರತೀಯ ಸಂಸ್ಕೃತಿಯ ಭಂಡಾರದಲ್ಲಿ ಮಾತ್ರ ದೊರಕುತ್ತವೆ.

ಭಾರತೀಯ ಸಂಸ್ಕೃತಿಯೆಂದರೆ ಒಬ್ಬನ ಕೊಡುಗೆಯಲ್ಲ. ಸಾವಿರಾರು ಋಷಿ ಮುನಿಗಳ ದೈವೀ ಪುರುಷರ ಪರಮಾತ್ಮ ದರ್ಶನದ ಸುಫಲವಾಗಿದೆ. ಈ ಸಂಸ್ಕೃತಿ ಎಲ್ಲಾ ನಿರಾಶ್ರಿತರಿಗೆ ಆಸರೆ ಕೊಟ್ಟರುತ್ತದೆ. ಎಲ್ಲ ಧರ್ಮ ಪಂಥೀಯರಿಗೆ ಮತೀಯರಿಗೆ ವಿದೇಶೀಯರಿಗೆ ಬೇಧ ಭಾವಗಳಿಲ್ಲದೆ ಸೇರಿಸಿಕೊಂಡಿದೆ. ನಮ್ಮ ಭಾರತೀಯ ಸಂವಿಧಾನ ಅಥವಾ ಘಟನೆ ರಚಿಸುವ ಸಾವಿರಾರು ವರ್ಷಗಳ ಮುನ್ನವೇ ಭಾರತೀಯ ಸಂಸ್ಕೃತಿ ಭಾರತದಲ್ಲಿ ನೆಲೆ ನಿಂತಿದೆ. ಸಮತೆ, ಸಾತಂತ್ರ್ಯ, ಸಹೋದರತೆ, ಸುನ್ಯಾಯ ಮುಂತಾದ ಶ್ರೇಷ್ಟ ಶಬ್ದ ಸಮುದಾಯಗಳು ನಮ್ಮ ಜೀವನದಲ್ಲೇ ಅಡಕವಾಗಿವೆ. ನೀರು ಬೇಕಿದವರಿಗೆ ಹಾಲು ಕೊಟ್ಟವರ ದೇಶವಿದು. ತಿಂಡಿ ಬೇಡಿದವರಿಗೆ ಮೃಷ್ಟಾನ್ನ ಉಣಿಸಿದವರ ದೇಶವಿದು. ಅನರ್ಥ ಕಾರಿಗಳಿಗೂ ಅಮೃತ ಕುಡಿಸಿದವರ ದೇಶವಿದು. ಅರ್ಥ ಅನರ್ಥಗಳನ್ನು ಗಮನಿಸದೆ, ಶರಣಾಗತರಾದ ಶತ್ರುಗಳಿಗೂ ಜೀವದಾನಮಾಡಿದವರ ದೇಶವಿದು. ಯಾಕೆಂದರೆ ಈ ಪವಿತ್ರ ಭೂಮಿಯಲ್ಲಿ ವಿಶ್ವಾತ್ಮ, ಪರಮಾತ್ಮಗಳ ಭಾವನೆ ಪ್ರಚಲಿತವಾಯಿತು. ನೂನವತೆಯಲ್ಲಿ ದೈವಿಕತೆಯನ್ನು ಭಾರತೀಯರು ಮಾತ್ರ ಕಾಣ ಬಲ್ಲರು. ಆತ್ಮ, ಪರಮಾತ್ಮ ಮತ್ತು ಅಧ್ಯಾತ್ಮಗಳ ಸರ್ವ ಸಿದ್ಧಿಯಲ್ಲಿ ಪರಿಣತಿ ಹೊಂದಿದವರು ಭಾರತೀಯರು. ಇದೆಲ್ಲಾ ಭಾರತೀಯ ಸಂಸ್ಕೃತಿಯ ಉಸ್ಥಿವಾರ.

ನಾವೆಲ್ಲ ಒಂದೇ. ನಮ್ಮ ಭಾವನೆಗಳು ಬರೀ ನಮ್ಮ ರಾಷ್ಟ್ರಕ್ಕೆ ಅಥವಾ ದೇಶಕ್ಕೆ ಸೀಮಿತವಾಗಿಲ್ಲ. ಇಡಿಯ ಜಗತ್ತೇ ನಮ್ಮದು. ಎಲ್ಲ ಜನರೂ ನಮ್ಮವರೇ. ದೇಶ, ಭಾಷೆ, ಮತ, ಧರ್ಮ ಮತ್ತು ಭೌಗೋಲಿಕ ವಿಭಿನ್ನತೆಗಳು ನಮ್ಮನ್ನು ಬೇರೆ ಬೇರೆ ಎಂದು ತೋರಿಸಿದರೂ ನಾವೆಲ್ಲರೂ ಒಂದೇ ಎಂದು ಪ್ರತಿಪಾದಿಸುವ ತತ್ವ ಭಂಡಾರ ಭಾರತೀಯ ಸಂಸ್ಕೃತಿಯ ವಿಶೇಷತೆ. ಮೂವತ್ತ ಕೋಟಿ ಮಾತ್ರವಲ್ಲ ಎಲ್ಲಾ ಜೀವಕೋಟಿಗಳೂ ನಮ್ಮ ಕುಟುಂಬಕ್ಕೆ ಸೇರಿವೆ.

ಈ ಸಾಂಸ್ಕೃತಿಕ ಪರಂಪರೆಯ ಪುನರುತ್ಥಾನವಾಗ ಬೇಕು. ಆಗುತ್ತಿದೆ. ಭಗವಂತನ ಇಚ್ಛೆಯಂತೆ ಎಲ್ಲವೂ ಸಾಗುತ್ತಿದೆ. ನಮ್ಮ ಜ್ಞಾನ, ಧರ್ಮ, ಸಾಹಿತ್ಯ ಮತ್ತು ಸಾಂಸ್ಕೃತಿಕ ಭಂಡಾರದಲ್ಲಿ ಅಪಾರ ರತ್ನಗಳ ಗಣಿಗಳಿವೆ. ಮಹಾಭಾರತದಲ್ಲಿನ ತತ್ವಜ್ಞಾನ ಕೋಟಿ ವರ್ಷಗಳು ಸಂದರೂ ಹೊಸ ಮಿಗಿಬುವಂತಹುಗಳಲ್ಲ.

ನಮ್ಮ ಮುಂದಿನ ಪೀಳಿಗೆಗೆ ಅಥವಾ ನುಕ್ಕಳಿಗೆ ಇಂದಿನಿಂದಲೇ ಶ್ರೀ ರಾಮಾಯಣ ಮತ್ತು ಮಹಾಭಾರತಗಳ ಪಠನ ಸಿಗುವಂತಾಗಬೇಕು. ವೇದೋಪನಿಷತ್ತುಗಳ ಪರಿಚಯ ಮಾಡಿಸಬೇಕು. ದಿವ್ಯ ಜೀವಿಯಾಗುವ ಶಿಕ್ಷಣ ಸಿಗಬೇಕು. ರಾಜಕೀಯ ಪಿಂಢಾರಿಗಳು ಇಂದು ಸರ್ವಜ್ಞನಂತೆ ಸರ್ವಾಧಿಕಾರದ ಹನ್ನೆಲೆಯಲ್ಲಿ ವರ್ತಿಸುತಿದ್ದಾರೆ. ಲೋಕ ಕಲ್ಯಾಣದ ನೆಪದಲ್ಲಿ, ಲೋಕಸೇವೆಯ ಸೋಗಿನಲ್ಲಿ ಗದ್ದುಗೆಗಾಗಿ ಜಗಳವಾಡಿ ಜನರನ್ನೂ ಎಂಚಿಸುತ್ತ ಹೋಗುತಿದ್ದಾರೆ. ಅಂತಹರಿಂದ ಜನಸಾಮಾನ್ಯರು ಜಾಗೃತರಾಗಬೇಕು. ರಾಜಕೀಯ ಮುಖವಾಡವನ್ನು ಇಟ್ಟುಕೊಂದು ಜನರನ್ನು ಮೋಸಗೊಳಿಸುವ ದೇಶ ಸೇವಕರಿಗೆ ಸನ್ಯಾಸ ದೀಕ್ಷೆಯನ್ನು ಕೊಡಿಸ ಬೇಕು. ಇಲ್ಲವೆ ವಾನಪ್ರಸ್ಥಿಗಳನ್ನಾಗಿ ಮೂರ ಅಟ್ಟಬೇಕು. ಇಲ್ಲವೆ ಅಂತಹವರೆಲ್ಲ ಭಾರತೀಯ ಸಂಸ್ಕೃತಿಯ ಪಾಠಗಳನ್ನು ಪಠಿಸಿ ಪರಿಪೂರ್ಣರಾದ ಮೇಲೆ ರಾಜಕೀಯದಲ್ಲಿ ಮರಳುವಂತಾಗಬೇಕು. ಐದು ವರ್ಷಕಾಲ ಅವರಿಗೆ ಕಡ್ಡಾಯವಾಗಿ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಕಲಿಸಿದ ಬಳಿಕವೇ ಸಾಮಾಜಿಕ ಕ್ಷೇತ್ರದಲ್ಲಿ ಕಾಲಿಡುವ ಅವಕಾಶವನ್ನು ಕಲ್ಪಿಸಿಕೊಡಬೇಕು.

ರಾಜಕೀಯ ಉಪನ್ಯಾಸಗಳಿಂದ ಅನ್ನ ಉದ್ಭವಿಸುವದಿಲ್ಲ. ಅನ್ನ ಸಿಗಬೇಕಾದರೆ ರೈತ ಬಿಸಿಲು ಮಳೆಯೆನ್ನದೆ ಶ್ರಮದಿಂದ ದುಡಿದು ಮೈ ಕೈ ಕೆಸರು ಮಾಡಬೇಕಾಗುತ್ತದೆ. ಬೇಸಾಯಗಾರನ ದುಡಿತದಿಂದ ಅನ್ನದ ಉತ್ಪಾದನೆಯೂಗುತ್ತದೆ. ರಾಜಕೀಯ ಚರ್ಚೆಯಿಂದ ವಸತಿ ನಿರ್ಮಾಣವಾಗುವದಿಲ್ಲ. ಕಾರ್ಮಿಕರು, ಶ್ರಮಿಕರು, ತಮ್ಮ ತಮ್ಮ ಕಾರ್ಯಕ್ಷೇತ್ರದಲ್ಲಿ ಮೈ ಮುರಿದು ಕೆಲಸ ಮಾಡಬೇಕು. ಜನರು ಶ್ರಮಿಕರಾಗಿ ಮಡಿಸರೆ ಮಾತ್ರ ಆರ್ಥಿಕ ಸಂಪತ್ತು ಬೆಳೆಯುತ್ತದೆ. ಗೃಹ ನಿರ್ಮಾಣ ಸಾಧ್ಯವಾಗುತ್ತದೆ. ರಾಜಕೀಯ ಪೀಠ

ಭಾರತದಲ್ಲಿ ನವತರಂಗಗಳು

(ಹಿದಿನೇಳನೇ ಪುಟದಿಂದ)

ಆದರೆ ಕ್ರಿಸ್ತ, ಸಾಕ್ರೆಟಿಸ ಮತ್ತು ಗಾಂಧಿಯಂತೆ ಜನರಾರೂ ಈ ಮಹಾ ಮಹಿಮರ ಗುಣಗಾನವನ್ನು ಈ ಸನಾತನ ಭಾರತದಲ್ಲಿ ಮಾಡದುದಕ್ಕಾಗಿ ನಾನು ಕೊರಗುತ್ತೇನೆ. ಬಾಯಿ ಬಲವಾಗಿದ್ದ ಪಾಂಡವ ಪಕ್ಷಪಾತಿಗಳ ಕಪಟ ಪ್ರಪಂಚವೇ ಜಗತ್ತಿನಲ್ಲಿ ನೆಲೆ ನಿಂತುದುದಕ್ಕಾಗಿ ನಾನು ಎಷ್ಟೋ ದಿನಗಳ ವರೆಗೆ ಹಲುಬಿದ್ದೇನೆ. ಆದರೆ ರನ್ನನೆಂಬ ಕವಿ ಮಾತ್ರ ದುರ್ಯೋಧನನ ಉತ್ತಮ ಗುಣಗಳನ್ನು ಕುರಿತು ಕಾವ್ಯ ಕಟ್ಟಿದ್ದಾನೆ. ನಾಡೋಜ ಪಂಪನೂ ಇವನ ಗುರು. ಅವರಿಬ್ಬರಿಗೆ ನನ್ನ ಹಾರ್ದಿಕ ಧನ್ಯವಾದಗಳು. ಇನ್ನು ಭವಿಷ್ಯ ಭಾರತದಲ್ಲಿ ದುಶ್ಶಾಸನನ ಹಿರಿಮೆಯನ್ನು ಕುರಿತು ಕವನ ರಚಿಸುವವರು ಜನ್ಮಿಸದಿರರು. ನಾನು ಆ ಸುದಿನವನ್ನು ಹಾರೈಸುತ್ತಿದ್ದೇನೆ.

ಬಲರಾಮನು ಕೈಸುಸ್ತ ಕವನ್ನು ತೆರಿಗಳ ಮೇಲೆ ಜಿಲ್ಲಿ ತಾನೂ ಆಲ್ಲೇ ಒರಗಿದನು. ಶಿವಪ್ಪನು ಇದಕ್ಕೆ ವ್ಯಸನವೇ ಕಾರಣವಿರ ಬಹುದೆಂದು ಅವನ ಮೊಗದ ಹತ್ತಿರ ಹೋದರೆ ಮದ್ಯದ ದುರ್ವಾಸನೆಯಿಂದ ಶಿವಪ್ಪನ ತಲೆ ತಿರುಗ ತೊಡಗಿತು. ಬಲರಾಮನು ತೆರವಲು ತಪ್ಪುವಷ್ಟು ಮದ್ಯಪಾನ ಮಾಡಿದ್ದನು. ಶಿವಪ್ಪನು ಆ ಭಾರತದ ಕೈಹಿಡಿಯನ್ನು ಎತ್ತಿಕೊಳ್ಳುನಾಗ ಕಾಳಿಯನ್ನು ತಂದಿಟ್ಟು, ಕೊಂಡ ತಾಯಿಯು ಮಗನನ್ನು ಎಬ್ಬಿಸುವ ಹವಣಿ ನಡೆಸಲು ಶಿವಪ್ಪನು ಎಚ್ಚೆತ್ತ. ಆಗ ಸೂರ್ಯ ಮೂಡಿದ್ದ. ಅವನು ಬೇಗ ಬೇಗ ಮುಖ ತೊಳೆದು ಕೊಂದು ಬಂದು ಕಾಫಿಕುಡಿದ. ಕೊನೆಗೆ ತನ್ನಷ್ಟಕ್ಕೇ ನಗುತ್ತಾ "ಈ ಭಾರತ ಕತೆಯನ್ನು ಪ್ರಚಾರ ಮಾಡಿದರೆ ಹೇಗೆ? ಆದರೆ ಮದ್ಯದ ಮತ್ತಿನಲ್ಲಿ ಬಲರಾಮನು ಹೇಳುವಾದರೆ?" ಶಿವಪ್ಪನು ಎಂದು ಕೊಂಡ.

ಈಗಲೂ ಶಿವಪ್ಪನಿಗೆ ಭಾರತವೆಂದೊಡನೆಯೇ ನಗುಬರುತ್ತದೆ.

ಪ್ರಾಪ್ತಿಗಿಂತ ಪ್ರಯತ್ನದ ಆನಂದಹೆಚ್ಚು

ಪರಮಾತ್ಮನು ಸಂಸಾರದಲ್ಲಿ ಸಿಗದಿದ್ದರೆ ಅವನು ಹೊರಗೆ ಸಿಗುವನೆಂಬ ಆಶೆ ವ್ಯರ್ಥನಾಗಿದೆ.

ನಿರರ್ಥಕ ಪರಿಶ್ರಮವು ನೈತಿಕ ಪತನವಾಗಲು ಕಾರಣವಾಗುತ್ತದೆ.

ಸಾಲವಾಗಿ ಕೊಟ್ಟ ಹಣವೇ ಅನರ್ಥಗಳ ತಳಹದಿ.

ಜಡತೆಯು ನಿರ್ದಯದ ತಾಯಿ. ತನ್ನನ್ನು ತಾನು ಜಯಿಸುವುದು ಎಲ್ಲ ಜಯಕ್ಕಿಂತ ಹೆಚ್ಚಿನ ಜಯ

ಉದ್ದೇಶವು ಶುಭವಾಗಿರದಿದ್ದರೆ ಜ್ಞಾನವು ವಾಪವಾಗುತ್ತದೆ. ವ್ಯರ್ಥ ಕೆಲಸಗಳಲ್ಲಿ ತಮ್ಮ ಆಯುಷ್ಯವನ್ನು ಕಳೆಯದಿದ್ದವರು ಬುದ್ಧಿವಂತರು.

ಅನ್ಯಾಯ ಸಹನ ಮಾಡುವವರಿಗಿಂತ ಅನ್ಯಾಯಮಾಡುವವರು ಹೆಚ್ಚು ದುರ್ದೆಶೆಯನ್ನು ಹೊಂದುತ್ತಾರೆ.

ಅಧಿಕಾರ ವಿನಾಶಕಾರೀ ಪ್ಲೇಗದ ಸಮಾನವಾಗಿದೆ.

ಅತಿಥಿ ಸತ್ಕಾರದಿಂದ ಮನುಷ್ಯನು ದೇವತ್ವವನ್ನು ಹೊಂದುತ್ತಾನೆ. ●

Estd: 1947

Tele: GOLDKING Phone: 3242 Res: 3272

— ಸಂದರ್ಶಿಸಿರಿ —

ಬ್ಲೂ ಜಾಗರಾ ವಜ್ರಗಳಿಗೆ, ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಸುವಿಖ್ಯಾತವಾದ

ಎಸ್. ಎಲ್. ಶೆಟ್ಟಿ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಉಡುಗೊರೆ ವಸ್ತುಗಳಿಗೂ ಪ್ರಸಿದ್ಧವಾದ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ ಜನಪ್ರಿಯವಾದ

ಐಡಿಯಲ್ ಫೊಟೋ ಹೌಸ್

Phone: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು

ಕೆ. ಎಸ್. ರಾವ್ ರೋಡ್,

ಹಂಪನಕಟ್ಟೆ, ಮಂಗಳೂರು - 1

ದಕ್ಷಿಣ ಕನ್ನಡದ ಶ್ರೀ ಮಹಿಷ-ಮಹಿಷಾಸುರಮರ್ದಿನಿ ವಿಗ್ರಹಗಳಲ್ಲಿ ವೈವಿಧ್ಯ

(ಹಿಂದಿನ ಸಂಚಿಕೆಯಿಂದ)

ಚತುರ್ಭುಜ ಮಹಿಷ ಮಹಿಷಾಸುರ ಮರ್ದಿನಿ ವಿಗ್ರಹಗಳು ಕಾಲ ಮಾನದಲ್ಲಿ ಸು. ಕ್ರಿ. ಶ. 8ನೇ ಶತಮಾನದಿಂದ ಕ್ರಿ. ಶ. 13ನೇ ಶತಮಾನದವರೆಗೆ ಕಂಡು ಬರುತ್ತವೆ. ಜಿಲ್ಲೆಯ ಆದ್ಯಂತ ಕಂಡು ಬರುವ ಈ ತೆರನಾದ ವಿಗ್ರಹಗಳ ಕಿರು ಪರಿಚಯ ಈ ಕೆಳಗಿನಂತಿದೆ.

1) ಉಡುಪಿಯ ಕಡಿಯೊಳಿ ಮಹಿಷ ಮರ್ದಿನಿ (ಬಾದಾಮಿ ಚಾಲುಕ್ಯರ ಕಾಲ-ಸು. 7-8ನೇ ಶತಮಾನ) 2¼ ಇಂಚು-ಚತುರ್ಭುಜ—ಪ್ರಯೋಗ ಚಕ್ರ, ಶಂಖ, ತ್ರಿಶೂಲ-ಪ್ರಭಾವಳಿ ವಿರಹಿತವಾದ ಪೂರ್ಣಬಿಂಬ. ಕರಿಶಿಲೆಯಿಂದ ಕೊರೆಯಲ್ಪಟ್ಟು ಗಂಭೀರ ಮುಖಮುದ್ರೆಯುಳ್ಳದ್ದಾಗಿದೆ. ಮಹಿಷನ ತಲೆ ನಿಜವಾದ ಕೋಣನ ಶಿರಸ್ಸನ್ನಂತಿದ್ದು ತ್ರಿಶೂಲದ ಅಂತ್ಯದಿಂದ ಇರಿಯಲ್ಪಟ್ಟಿದೆ.

2) ಕಾರ್ಕಳ ತಾಲೂಕು ಬೆಳ್ಮಣ್ಣು ಮಹಿಷ ಮರ್ದಿನಿ (ಬಾದಾಮಿ ಚಾಲುಕ್ಯರ ಕಾಲ—ಸು. ಕ್ರಿ. ಶ. 8ನೇ ಶತಮಾನ) 15 ಇಂಚು-ಚತುರ್ಭುಜ-ತ್ರಿಶೂಲ, ಖಡ್ಗ, ಘಂಟಾ- ಕೆಳಗಿನ ಎಡಕೈಯಿಂದ ಮಹಿಷನ ಮುಖವನ್ನು ಮೇಲಕ್ಕೆಳೆದು ಒತ್ತಿ ಹಿಡಿದಿದೆ.

3) ನುಂಗಳೂರು ತಾಲೂಕಿನ ಪೊಳಲಿಯ ಮಹಿಷಮರ್ದಿನಿ (ಸು. ಕ್ರಿ. ಶ. 8ನೇ ಶತಕ)15 ಇಂಚು—ಚತುರ್ಭುಜ-ಪ್ರಯೋಗ ಚಕ್ರ, ಶಂಖ, ತ್ರಿಶೂಲ-ಬಾದಾಮಿ ಚಾಲುಕ್ಯರ ಕಾಲದ ಸಾಲಂಕಾರ ಮೂರ್ತಿ.

4) ಉಡುಪಿ ತಾಲೂಕು ಕುಂಜೂರಿನ ಮಹಿಷ ಮರ್ದಿನಿ (ಸು. ಕ್ರಿ. ಶ. 8-9ನೇ ಶತಕ) 3 ಅಡಿ-ಚತುರ್ಭುಜ-ಪ್ರಯೋಗ ಚಕ್ರ. ಶಂಖ. ತ್ರಿಶೂಲ-ಛಿದ್ರಿಸಲ್ಪಟ್ಟ ಮಹಿಷನ ತಲೆಯ ಮೇಲೆ ಸ್ಥಂಭ ಭಂಗವಲ್ಲಿ ದೇವಿ ನಿಂತ ನಿರ್ದೇಶ ಎದ ಕೆಳ ಕೈ ನಿರಾಯುಧ.

5) ಉಡುಪಿ ತಾಲೂಕು ನಂದಿಕೂರಿನ ಮಹಿಷಾಸುರ ಮರ್ದಿನಿ (ಸು. ಕ್ರಿ. ಶ. -9ನೇ ಶತಕ) 3 ಅಡಿ-ಚತುರ್ಭುಜ-ಪ್ರಯೋಗ ಚಕ್ರ, ಶಂಖ, ತ್ರಿಶೂಲ-ತೆಳ್ಳಗಿನ ವಿಗ್ರಹ; ಮೇಲಿನ ಭುಜಗಳು ಭುಜದಿಂದಲೇ ಹೊರಟಿವೆ. ಸೂರ್ಯ ಪ್ರಭಾವಳಿ, ಅಸುರನ ಕುತ್ತಿಗೆಯನ್ನು ತಿರುಗಿಸಿ ಹಿಡಿದುಕೊಂಡ ನಿರ್ದೇಶ, ನಿಷ್ಕ್ರಿಯೆಯಲ್ಲಿ ವಾಹನ.

6) ಉಡುಪಿಯ ಸಮೀಪವಿರುವ ಉದ್ಯಾವರದ ಮಹಿಷ ಮರ್ದಿನಿ (ಸು. ಕ್ರಿ. ಶ. 9ನೇ ಶತಕ) ಇದು ಸಂಪೂರ್ಣ ಭಿನ್ನವಾಗಿದ್ದು ಈಗ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ಮ್ಯೂಜಿಯಂನಲ್ಲಿದೆ. 2¾ ಅಡಿ – ಚತುರ್ಭುಜ-ಆಯುಧಗಳ ವೈಶಿಷ್ಟ್ಯ ನಷ್ಟವಾಗಿ ಹೋಗಿದೆ.ಏರಿಬಂದ ಮಹಿಷಾಸುರನನ್ನು ಮೆಟ್ಟಿ, ತ್ರಿಶೂಲದಿಂದ ಇರಿದು ಅಸುರನ ಬಲಕೈಯನ್ನು ಹಿಡಿದ ನಿರ್ದೇಶ.

7) ಉಡುಪಿ ತಾಲೂಕು ಗುಂಡುಮಿಯ ಮಹಿಷ ಮರ್ದಿನಿ (ಸು. ಕ್ರಿ. ಶ. 9ನೇ ಶತಕ) 2¼ ಅಡಿ-ಚತುರ್ಭುಜ-ಪ್ರಯೋಗ ಚಕ್ರ, ಶಂಖ, ತ್ರಿಶೂಲ-ಸಪೂರ ಅರ್ಧವೃತ್ತಾಕಾರದ ಪ್ರಭಾವಳಿ, ಪ್ರಮಾಣ ಕಲ್ಪನೆ ಕಡಿಮೆ, ಮಹಿಷನನ್ನು ತುಳಿದು ತಿರುಗಿದ ಕುತ್ತಿಗೆಯನ್ನು ತ್ರಿಶೂಲದಿಂದ ಇರಿದುದು.

8) ಬಂಟವಾಳ ತಾಲೂಕು ಮಠದಬೆಟ್ಟಿನ ಮಹಿಷ ಮರ್ದಿನಿ (ಸು. ಕ್ರಿ. ಶ. 9-10ನೇ ಶತಕ) 2¼ ಅಡಿ- ಚತುರ್ಭುಜ-ಪ್ರಯೋಗ ಚಕ್ರ, ಶಂಖ, ತ್ರಿಶೂಲ-ಕಡಿಯೊಳಿ ಮಹಿಷ ಮರ್ದಿನಿಯನ್ನು ಹೋಲುತ್ತದೆ. ಕೆತ್ತಿದ ಶಿಲೆ ದೊರಗು ಭಿನ್ನವಾಗಿದೆ

9) ಉಡುಪಿ ತಾಲೂಕು ಕುಂಜಾರಿನ ಮಹಿಷಾಸುರ ಮರ್ದಿನಿ (ಸು. ಕ್ರಿ. ಶ. 10ನೇ ಶತಕ) 2¾ ಅಡಿ-ಚತುರ್ಭುಜ-ಶಂಖ, ಚಕ್ರ, ತ್ರಿಶೂಲ, ಖಾಷ-ತೆಳ್ಳಗಿನ ವಿಗ್ರಹ, ಮಹಿಷಾಸುರನನ್ನು ತಳಕ್ಕೆ ಸಂಪೂರ್ಣ ಅದ್ದಿ ಮೇಲಕ್ಕೆ ಅಸುರ ಬಾಗಿದ ನಿರ್ದೇಶ.

10)ಉಡುಪಿ ತಾಲೂಕು ಮುಂಡುಕೂರಿನ ಮಹಿಷ ಮರ್ದಿನಿ (ಸು. ಕ್ರಿ. ಶ. 10ನೇ ಶತಕ) 2¼ ಅಡಿ-ಚತುರ್ಭುಜ-ಪ್ರಯೋಗ ಚಕ್ರ, ಶಂಖ, ತ್ರಿಶೂಲ-ತೆಳ್ಳಗಿನ ವಿಗ್ರಹ, ಮಹಿಷನನ್ನು ನೇತಾಡುವಷ್ಟು ಹಿಡಿದಿಳೆದ ನಿರ್ದೇಶ.

11) ಉಡುಪಿ ತಾಲೂಕು ನೀಲಾವರದ ಮಹಿಷಾಸುರ ಮರ್ದಿನಿ (ಸು. ಕ್ರಿ. ಶ. 10ನೇ ಶತಕ) ದುರ್ಗಾಭಗವತಿ ಎಂಬುದಾಗಿ ಶಾಸನಗಳಲ್ಲಿ ಉಲ್ಲೇಖಗೊಂಡಿದೆ. 3 ಅಡಿ-ಚತುರ್ಭುಜ-ಪ್ರಯೋಗ ಚಕ್ರ, ಶಂಖ, ತ್ರಿಶೂಲ—ಮಹಿಷಾಸುರನು ಎರಡು ಕಾಲು ಎರಡು ಕೈಗಳಿಂದ ಪ್ರಾಣಿಯಂತೆ ನಿಂತು ಆತನ ಕೋಡನ್ನು ಹಿಡಿದೆಳೆದು ತ್ರಿಶೂಲದಿಂದ ಕುತ್ತಿಗೆಯನ್ನಿರಿದು ಕಾಲಿನಿಂದ ಬೆನ್ನನ್ನು ಮೆಟ್ಟಿದ ನಿರ್ದೇಶ.

12) ಕಾರ್ಕಳ ತಾಲೂಕು ಕುಕ್ಕುಂದೂರಿನ ಮಹಿಷ ಮರ್ದಿನಿ (ಸು. ಕ್ರಿ. ಶ. 10—11ನೇ ಶತಕ) 15 ಇಂಚು-ಚತುರ್ಭುಜ-ಪ್ರಯೋಗ ಚಕ್ರ, ಶಂಖ, ತ್ರಿಶೂಲ-ಮಹಿಷನ ಕುತ್ತಿಗೆಯನ್ನು ಎಡಕೈ ತಿರುಗಿಸಿ ಉದ್ದಕ್ಕೆಳೆದು ಹಿಡಿದ ನಿರ್ದೇಶ.

13) ಬೆಳ್ತಂಗಡಿ ತಾಲೂಕು ಮಡಂತ್ಯಾರಿನ ಸಮೀಪವಿರುವ ಪಾರೆಂಕಿಯ ಮಹಿಷ ಮರ್ದಿನಿ (ಸು. ಕ್ರಿ. ಶ. 10—11ನೇ ಶತಕ) 2¾ ಅಡಿ-ಚತುರ್ಭುಜ-ಶಂಖ, ಚಕ್ರ, ತ್ರಿಶೂಲ—ದಪ್ಪನಾದ, ಸಾಲಂಕಾರ ಮೂರ್ತಿ, ಮಹಿಷನ ಶಿರಸ್ಸನ್ನು ಪ್ರತಿಯೊಂದಿಗೆ ಮೆಟ್ಟಿ ಉಳಿದ ಭಾಗವನ್ನು ಮೇಲಕ್ಕೆತ್ತಿದೆ.

14) ಮೂಡಬಿದುರೆಯ ಗೌರೀ ದೇವಾಲಯದ ಮಹಿಷಮರ್ದಿನಿ (ಸು. ಕ್ರಿ.ಶ. 10-11ನೇ ಶತಕ) 3¼ ಅಡಿ-ಚತುರ್ಭುಜ-ಚಕ್ರ, ಶಂಖ, ತ್ರಿಶೂಲ-ಜಿಲ್ಲೆಯ ಮಹಿಷ ಮರ್ದಿನಿ ವಿಗ್ರಹಗಳಲ್ಲಿ ಅತ್ಯತ್ತರವಾದುದು. ಮಹಿಷನ ತಲೆಯನ್ನು ತ್ರಿಶೂಲದಿಂದಿರಿದ ನಿರ್ದೇಶ.

15) ಕಾಸರಗೋಡು ತಾಲೂಕು ತ

55 ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ

ದಿ ಸದ್ವೈದ್ಯಶಾಲಾ (ಪೈ) ಲಿಮಿಟೆಡ್

ನಂಜನಗೂಡು (ಮೈಸೂರು ಸ್ಟೇಟ್)

ಶಾಖೆಗಳು: ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಇಂದಿರಾ ಗಾಂಧಿ ಪ್ರಧಾನಿಯಾಗಿರುವದು ಮುನ್ನ ಬೆತ್ತಿಸಿದ ರೇಸು ರೇಖುವನ್ನು ನಿನ ಮಂಡಿಗೆ—ಅವಕ್ಕೆನೇ ಅವರನ್ನು (ಉಳಿದದ್ದು ಮುಂದಿನ ಸಂಚಿಕೆಯಲ್ಲಿ)

ಜ್ಞಾವರದ ಮಹಿಷಮರ್ದಿನಿ (ಸು. ಕ್ರಿ. ಶ. 10–11ನೇ ಶತಕ) 2½ ಅಡಿ-ಚತು ರ್ಭುಜ–ಚಕ್ರ, ಶಂಖ, ತ್ರಿಶೂಲ–ದಪ್ಪ ನಾದ ಸಾಲಂಕಾರ ಮೂರ್ತಿ.

16) ಉಡುಪಿತಾಲೂಕು ಬೈಲೂರಿನ ಮಹಿಷಾಸುರ ಮರ್ದಿನಿ (ಸು. ಕ್ರಿ. ಶ.12 ನೇ ಶತಕ) 2½ ಅಡಿ-ಚತುರ್ಭುಜ-ಚಕ್ರ, ಶಂಖ, ತ್ರಿಶೂಲ-ಮೂಸವ ಶರೀರವುಳ್ಳ ಅಸುರನ ಕಾಲನ್ನು ಹಿಡಿದೆಳೆದು ತಲೆಯನ್ನು ತ್ರಿಶೂಲದಿಂದ ಇರಿನ ನೀರ್ದೇಶ.

17) ಬಾರಕೂರಿನ ಸಿದ್ಧೇಶ್ವರ ದೇವಾಲಯದಲ್ಲಿರುವ ಜೀರ್ಣವಾವ ಮಹಿಷಾಸುರ ಮರ್ದಿನಿ (ಸು. ಕ್ರಿ. ಶ. 12ನೇ ಶತಮಾನ) 2 ಅಡಿ. ಚತುರ್ಭುಜ-ಶಂಖ, ಚಕ್ರ, ತ್ರಿಶೂಲ- ಸಂಪೂರ್ಣ ಜೀರ್ಣವಾಗಿದೆ.

18) ಉಡುಪಿ ತಾಲೂಕು ಬಾಲಕುದುರು ಮತದಲ್ಲಿರುವ ಪಂಚಲೋಹದ ಮಹಿಷಾಸುರ ಮರ್ದಿನಿ (ಸು. ಕ್ರಿ. ಶ. 13ನೇ ಶತಕ)

ಅಷ್ಟ ಭುಜದ ವಿಗ್ರಹಗಳಲ್ಲಿ ಮೂರು ತೋರಿ ಬರುತ್ತವೆ.

1) ಬೈಂದೂರಿನ ಸೇನೇಶ್ವರ ದೇವಾಲಯದ ನವರಂಗದಲ್ಲಿರುವ ಮಹಿಷಾಸುರ ಮರ್ದಿನಿ (ಸು. 11ನೇ ಶತಕ) 3ಅಡಿ-ಅಷ್ಟಭುಜ—ಶಂಖ, ಚಕ್ರ, ತ್ರಿಶೂಲ, ಘಂಟಾ, ಖಡ್ಗ, ಪಾಶ, ಡಮರು, ಜಾಪ, ಅತ್ಯಂತ ಸುನೋಹರವಾದ ಲಾವಣ್ಯದಿಂದ ಕೂಡಿದ, ಕರಿಶಿಲೆಯಲ್ಲಿ ಕೆತ್ತಲ್ಪಟ್ಟ, ಸರ್ವಾಂಗ ಸುಂದರವಾದ ಕಲ್ಯಾಣಿ ಚಾಲುಕ್ಯರ ಕಾಲದ ಸಂಪೂರ್ಣ ಮೂರ್ತಿ, ಸ್ವಲ್ಪ ಭಿನ್ನವಾಗಿದೆ.

2) ಬಸರೂರಿನ ನಿಯೋಶ್ವರ ದೇವಾಲಯದ ಉಪಸ್ಥಾನ ಮೂರ್ತಿಯೂದ ಮಹಿಷಾಸುರ ಮರ್ದಿನಿ (ಸು. ಕ್ರಿ. ಶ. 12ನೇ ಶತಕ) 12 ಇಂಚು—ಅಷ್ಟಭುಜ. ಶಂಖ, ಚಕ್ರ, ತ್ರಿಶೂಲ, ಘಂಟಾ, ಖಡ್ಗ, ಪಾಶ, ಡಮರು, ಜಾಪ -ಇದೊಂದು ವೆನೆಲ್, ಸ್ಥಳೀಯ ಕಲಾಕೃತಿಯನ್ನೊಳಗೊಂಡ ಶಿಲ್ಪ.

3) ಉಡುಪಿ ತಾಲೂಕು ಬಾಳಕುದುರು ಮತದಲ್ಲಿರುವ ಪಂಚಲೋಹದ ಮಹಿಷಾಸುರ ಮರ್ದಿನಿ ವಿಗ್ರಹ (ಸು. ಕ್ರಿ. ಶ. 13ನೇ ಶತಕ) 12 ಇಂಚು—ಅಷ್ಟಭುಜ—ಶಂಖ, ಚಕ್ರ, ತ್ರಿಶೂಲ, ಘಂಟಾ, ಜಾಪ, ಖಡ್ಗ, ಪಾಶ, ಡಮರು, ಮಹಿಷನ ಕುತ್ತಿಗೆಯಿಂದ ಹೊರಬಂದ ಅಸುರನನ್ನು ವಧಿಸುವ ಸುಮನೋಹರ ಬಿಂಬ. ಭಿನ್ನವಾಗಿದೆ.

ಮೇಲ್ಕಾಣಿಸಿದ ವಿಗ್ರಹಗಳ ಶೈಲಿಯನ್ನು ಕಾಲಕ್ಕನುಗುಣವಾಗಿ ವರ್ಗೀಕರಿಸಬಹುದಾದರೂ ಅವೆಲ್ಲಾ ವಿವರದಲ್ಲಿ ಒಂದನ್ನೊಂದು ವಿಭಿನ್ನವಾಗಿವೆ. ಯಾವ ಎರಡು ಬಿಂಬಗಳು ಒಂದೇರೀತಿಯಾಗಿಲ್ಲ.

ಹಿಂಸೆಯು ವಿರೋಧಿಯಲ್ಲಿ ಹೆದರಿಕೆ ಹಾಕಿ ಅವನನ್ನು ಗೆಲ್ಲಲು ಯತ್ನಿಸುತ್ತದೆ. ಅಹಿಂಸೆಯು ವಿರೋಧಿಗೆ ಅಭಯದಾನ ಕೊಟ್ಟು ಅವನನ್ನು ಜಯಿಸಲು ಹವಣಿಸುತ್ತದೆ.

o o o

ಚುಟುಕಗಳು

ಅಳಿಯ ಮತ್ತು ಮಗ

ಅಳಿಯ
ಅಂದರೆ ಅಳಿಯ.
ಮಗನನ್ನು ಹೋಲನು ಗೆಳೆಯ
ಕಳೆಯು
ಅಂದರೆ ಕಳೆಯು
ಹೋಲದು ಎಂದಿಗು ಬೆಳೆಯ!

ಅತ್ತೆ ಮತ್ತು ಕಾಯಿ

ಅತ್ತೆ
ಅಂದರೆ ಅತ್ತೆ
ಕಾಯಿಯು ಆಗಳು ಗೊತ್ತೆ ?
ಕತ್ತೆ
ಅಂದರೆ ಕತ್ತೆ
ಕುದುರೆಯು ಆಗದು ಮತ್ತೆ!

ಸಿಟ್ಟು – ಸಮಾಧಾನ

ಚನ್ನೆ
ನಿನ್ನೆಯ ಕೆನ್ನೆ
ಕೆಂಪಗೆ ಆಗುವ ಹಾಗೆ
ಹೊಡೆದೆ
ಕೋಪದಿ ನಡೆದೆ
ಸಂಕಟ ಪಡುತಿಹ ಈಗ್ಗೆ!

ಗ್ರಾಮ ಸೇವಕ

ಗ್ರಾಮ–
ಸೇವಕ ರಾಮ–
ಸೇವಕ ನಾದರೆ ಚನ್ನು
ರಾಮ–
ಸೇವಕ ನಾಮ
ಸೇವೆಗೆ ಬಿರುದೇ ಎನ್ನು!

ಒಂದು ಸಲಹೆ

ಲಂಚ
ತಿನ್ನೋ ಕೊಂಚ
ಮೇಲಿನ ಜನರಿಗೆ ಹಂಚಿ!
ನೀತಿ
ಅಂದರೆ ಸೋತಿ
ತುಳಿವರು ಅವರೇ ಹೊಂಚಿ!

‡ ‡ ‡

ಗುಟ್ಟನಲ್ಲಿ ಕೇಳಿದ್ದು

ಜಗದ್ಗುರು ಕೀರ್ತಿಕಥೆ ಕುದುರೆಯನು ಏರಿ
ಉದ್ದಂಡ ಹಾಕಿದನು ಅವರ ಬಳಿ ಸಾರಿ!
ಎರಡೆ ದಿನದಲಿ ಬಂದೆ ಅಲ್ಲಿಂದ ಓಡಿ
ಒಳಜಾತಿ ಚರಂಡಿಯ ದುರ್ಗಂಧ ನೋಡಿ!

ಒಂದು ಉಪದೇಶ

ದೇವರನು ಹೊತ್ತಿರುವ ಈ ಕತ್ತೆ ಇಂದು
ಒದ್ದರೂ ಸುಮ್ಮನೇ ಇರಬೇಕು ಬಂಧು;
ದೇವರನು ಇಳಿಸಿದೊಡೆ ಆಮೇಲೆ ನೀನು
ಥಳಿಸು ಕತ್ತೆಗೆ ಬುದ್ಧಿ ಬರದೆ ಇನ್ನೇನು?

—ಜಿ. ಎಸ್. ಅನ್ನದಾನಿ.

ಪರಮೇಶ್ವರನ ಮರ್ಜಿನಿಂದ ಜಡನಲ್ಲಿ ನಿಜ ಚೈತನ್ಯ ಬಂದು ಬಿಡುತ್ತದೆ. ಮತ್ತು ಮರ್ಜಿ ಕಳಕೊಂಡವರಲ್ಲಿ ಚೈತನ್ಯವಿದ್ದರೂ ಸಹಾ ಜಡತ್ವ ಬಂದುಬಿಡುತ್ತದೆ.

o o o

Vaidyaratnam P. S. Varier's

ARYA VAIDYA SALA

KOTTAKKAL (Kerala State).

Head Office Telephones — Kottakkal Exchange.

Office with Extension to Managing Trustee & Manager	....	....	Phone No. 31.
Nursing Home ...	....	....	Phone No. 44.
Chief Physician...	...	....	Phone No. 25.
Managing Trustee (Residence)	....	....	Phone No .27.
Manager (Residence)	....	....	Phone No. 26.

MADRAS BRANCH.

No. 1, Krishnamachari Road, NUNGUMBAKKAM — MADRAS-34.
(Phone No. 811275)

Other Branches

1. Kozhikode (Phone: 2155).
2. Palghat (Phone: 104).
3. — do — Sales Depot (Phone: 584).
4. Alwaye.
5. Erode (Phone: 172).
6. Tirur (Phone: 31).
7. Ernakulam (Phone: 33026).
8. Trivandrum (Phone: 3924).

and

over 100 Authorised Agencies and Depots.

Genuine Standard Ayurvedic Medicines and expert medical advice available at our Head Office at Kottakkal and all Branches. Medical advice through correspondence given by our Chief Physician at Kottakkal. Special Treatments like Pizhichil, Navarakkizhi, etc., are conducted under the supervision of our Chief Physician at our

COLDEN JUBILEE NURSING HOME, KOTTAKKAL.

MANAGING TRUSTEE.

Published & Printed by K. H. Shetty at the Navayuga Press, Udipi, S. India.

ಲೇಖಕರು :
'ನವಗಿರಿನಂದ'

ನೀರಿನ ಪಾಠ

ನಾಗರಿಕತೆಯು ಕೆಸರಲ್ಲಿ ಮೂಡಿದ ಪ್ರಕೃತಿಯಿಂದ ದೂರ ಸರಿಯುತ್ತ ಯಾಂತ್ರಿಕ ಜೀವನವನ್ನು ಹುಡಿಯುತ್ತ ಬರುವುದು ಸಹಜವಾಗಿ ಬರುತ್ತಿದೆ. ಪ್ರಕೃತಿದತ್ತವಾದ ಜೀವನಕ್ಕೆ ಒಳ್ಳಂತ ಅವಶ್ಯವಾದ ನಾಳಿಯು ಮೇಲೂ ಕಂಟ್ರೋಲ್ ಹೇರುವುದೂ ಅಸಂಭವನೀಯವೆನ್ನಲು ಬರುವುದಿಲ್ಲ. 'ನೀರಿನ ಪಾಠ'ದಲ್ಲಿ ಈ ಬಗೆಯ ಯಾಂತ್ರಿಕತೆಯ ಮೇಲೆ ಅಧಿನ್ಯಂಜಳ ದೃಷ್ಟಿ ಬೀಳಲಾಗಿದೆ.

(ಒಂದು ರೂಮಿನ ಹೊರಭಾಗದ ಜಗಲಿ. ರೂಮಿಗೆ ಬೀಗ ಹಾಕಿದೆ. ಬೆಳಗಿನ ಹೊತ್ತು.)

ರಂಗೋಲಿ ಮಾರುವವ— (ಬುಟ್ಟಿ ಹೊತ್ತುಕೊಂಡು ಪ್ರವೇಶಿಸಿ)

ಮುಂಜಾನೆ ರಂಗೋಲೀ ! ಬೆಳಗ್ಗಿನ ರಂಗೋಲೀ ! ಬೆಳ್ಳಗಿನ ರಂಗೋಲೀ !ಶುಭ ಶುಭ್ರ ರಂಗೋಲೀ (ಹೊರಟು ಹೋಗುವನು. ರಾಮನೂ ಗೋಪಾಲನೂ ಪ್ರವೇಶಿಸುವರು. ಗೋಪಾಲ ದೂರ ಪ್ರಯಾಣ ಮಾಡಿದವನಂತೆ ಕೈಯಲ್ಲಿ ಸೂಟುಕೇಸು. ಇಬ್ಬರೂ ಯುವಕರು.)

ರಾಮ - ಇದೇ ನನ್ನ ರೂಮು. (ಬೀಗ ತೆಗೆಯುವನು. ಇಬ್ಬರೂ ಒಳಗೆ ಹೋಗುವರು.)

ಗೋಪಾ—(ಶೂಟುಕೇಸಿನ ಬಾಯಿ ತೆರೆದು ಟವೆಲನ್ನೂ ಬಟ್ಟೆಯನ್ನೂ ತೆಗೆಯುತ್ತ) ರಾಮೂ, ಮೊದಲು ಬಾತ್ ರೂಂ ತೋರಿಸಿಬಿಡು. ಪ್ರೈತುಂಬಾ ರೈಲು ಪ್ರಯಾಣದ ಧೂಳು. ಸ್ನಾನಾ ಮಾಡಿಬಿಡ್ತೀನಿ.

ರಾಮು—ಸ್ನಾನಾ.....? (ಆಶ್ಚರ್ಯದಿಂದ ಗೋಪಾಲನನ್ನು ನೋಡುವನು.)

ಗೋಪಾ—(ಗಬಕ್ಕನೆದ್ದು ರಾಮನ ಮೋರೆ ನೋಡುತ್ತ) ಏಕೆ? ಏನಾಯ್ತು?

ರಾಮು—ಇಲ್ಲಿ ಈ ಊರಿನಲ್ಲಿ ಸ್ನಾನಾ ಅಂದ್ರೆ ಗಾಬ್ರೀನೇ !

ಗೋಪಾ—ಏಕೆ? ಏಕೆ?

ರಾಮು—ಸ್ನಾನಾ ಮಾಡಿದ ವಿಷಯ ಗೊತ್ತಾಗಿಬಿಟ್ರೆ ಫೈನ್ ಬೀಳುತ್ತೆ, ಫೈನ್!

ಗೋಪಾ—ಆರೆ! ಅದೇಕೆ? ಅದೇನು?

ರಾಮು—ಇದು ಕ್ವಾವು ಪ್ರದೇಶ. ನೀರಿಗೆ ಕಂಟ್ರೋಲ್. ತಿಳೀತಾ?

ಗೋಪಾ—ಹಾಗಾದರೆ ಇಲ್ಲಿ ಸ್ನಾನನೇ ಮಾಡಬಾರದೇನು?

ರಾಮು—ಮಾಡಲೇ ಬೇಕಾದರೆ ನಾಲ್ಕು ಮೈಲು ದೂರದಲ್ಲಿ ಸ್ನಾನದ ಟಾಂಕಿ ಇದೆ. ತಲಾ ಇಪ್ಪತ್ತು ಪೈಸೆ ಕೊಟ್ಟು ರಶೀದಿ ಪಡೆದು, ಕ್ಯೂನಲ್ಲಿ ನಿಂತು ಸ್ನಾನಾ ಮಾಡಬೇಕು. ಮಿನಿಮಂ ಮೂರು ಚೆಂಬು. ಅದಕ್ಕಿಂತ ಹೆಚ್ಚಿಗೆ ಬೇಕಾದರೆ ಚೆಂಬಿಗೆ ಐದು ಪೈಸೆ ಎಕ್ಸ್ಟ್ರಾ ಬೀಳುತ್ತೆ.

ಗೋಪಾ—ಓ! ಮೈ ಗಾಡ್! ಹೇಗಪ್ಪಾ ಈ ಊರಲ್ಲಿ ದಿವ್ಸಾ ಕಳೆಯೋದು?

ರಾಮು—ಅಭ್ಯಾಸವಾದರೆ ಎಲ್ಲಾ ಸರಿ ಹೋಗುತ್ತೆ.

ಗೋಪಾ—ಹೆಂಡತೀ ಮಕ್ಕಳೂ ಇದ್ದವರ ಗತಿ?

ರಾಮು—ಒದ್ದೆ ಬಟ್ಟೆಲಿ ಮೈ ಪೂರಾ ಎರಡು ಬಾರಿ ಉಜ್ಜಿಕೊಳ್ಳೋದು. ಅದಕ್ಕೆ ಬಾತ್‌ರೂನೇ ಆಗಬೇಕೂಂತ ಏನಿಲ್ಲ. ಅಕೋ, ಆ ಕೋಣೆಯಲ್ಲಿ ಒದ್ದೆ ಬಟ್ಟೆ ಇದೆ. ಮೈ ಕ್ಲೀನ್ ಮಾಡಿಕೊಂಡು ಬಾ.

ಗೋಪಾ—ಒಳ್ಳೇ ಊರಿಗೆ ಬಂದೆನಲ್ಲ! (ಹೋಗುವನು).

ನೀರಿನವ—(ದೂರದಿಂದ "ನೀರು! ನೀರು!"....ಎಂದು ಕೂಗುತ್ತಾ ಪ್ರವೇಶಿಸಿ) ತಕ್ಕೊಳ್ಳೀ ರಾಮಯ್ಯನವರೇ. ಬೇಗ ಸುರುಕೊಂಡು ಚೆಂಬು ಬಾಲೀ ಮಾಡಿಕೊಡಿ. ಸುಮಾರು ಮನೆಗೆ ಹೋಗಬೇಕು. ಕಾದುಕೊಂಡಿದ್ದಾರೆ ಎಲ್ಲಾರೂ....

ರಾಮು—(ಅವನು ಕೊಟ್ಟ ಚೆಂಬನ್ನು ತೆಗೆದುಕೊಂಡು) ಇನ್ನೊಂದು ಚೆಂಬು ನೀರು ಕೊಡಪ್ಪಾ ಊರಿಂದ ನನ್ನ ಸ್ನೇಹಿತಾ ಬಂದಿದ್ದಾನೆ.

ನೀರಿನವ—ದಿನಾ ಎರಡು ಚೆಂಬು ಬೇಕೆ?

ರಾಮು—ಇವನಿಗೆ ಬೇರೆ ಮನೆ ಸಿಗುವವರೆಗೆ ಇಲ್ಲೇ ಇರ್ತಾನೆ. ಆಫ್ಟರ್ ವರೆಗೂ ಬೇಕು. ಮೂರು ದಿನಗಳಿಗೊಂದು ಸಾರಿ ತಾನೇ ನೀನು ನೀರಿನ ಬಂಡಿ ತರೋದು?

ನೀರಿನವ ಸರಿಸರಿ. ದುಡ್ಡು ತಗೀರಿ. (ಒಡಿಹೋಗಿ ಇನ್ನೊಂದು ಚೆಂಬು ತಂದು ಕೊಟ್ಟು "ಇಪ್ಪತ್ತು ಪೈಸೆ" ಎಂದು ತೆಗೆದುಕೊಂಡು) ಬೆಳಗಾಗಿ ಅಷ್ಟುಹೊತ್ತಾಯ್ತು. ಇನ್ನು ಈ ಬೀದಿಗೆ ಕಾಫಿ ಟಿಫಿನ್ ತರಬೇಕು. ನೋಡಿ, ಆದಹಾಗೆ ನಿಮಗೆ ಕಾಫಿಯಾ ಟೀಯಾ?

ರಾಮು—ಗೋಪಾಲ್! ನಿನಗೆ ಕಾಫಿಯಾ ಟೀಯಾ?

ಗೋಪಾ—(ಒಳಗಿನಿಂದಲೇ) ಟೀ! ಟೀ! ಆಗಲೇ ರಡೀಯಾಗಿಬಿಟ್ಟೀನು? (ನೀರಿನವ ಖಾಲೀ ಚೆಂಬುಗಳನ್ನು ತೆಗೆದುಕೊಂಡು ಹೋಗುತ್ತಾನೆ) ಏನಪ್ಪಾ ರಾಮು, ಮೇಜಿಕ್ ಮಾಡ್ತಾ ಇದ್ದೀಯೇನು? ಆಗಲೇ ಟೀ ಕಾಫಿ ಟಿಫಿನ್ ಎಲ್ಲಾ ರೆಡಿಯಾಗಿಬಿಟ್ಟೀನು? ಬೆಳಗ್ಗೆ ಎದ್ದು ರೈಲ್ವೇ ಸ್ಟೇಶನ್ನಿಗೆ ಬರುವಾಗ್ಲೇ ಎಲ್ಲಾ ತಯಾರಿ ಬಿಟ್ಟೆಯಾ? (ಹೊರಗೆ ಬರುತ್ತಾನೆ.)

ರಾಮು— ನಾನೇನು ತಯಾರಿಸಿದ್ದು ನನ್ನ ತಲೆ!. (ಹೊರಗಿನಿಂದ, "ನೀರೂ-ಟೂತ್ ಪೇಸ್ಟ್! ನೀರೂ-ಟೂತ್‌ಪೇಸ್ಟ್!" ಎಂಬ ಶಬ್ದ ಸಮಿಸವಿಪವಾಗಿ ದೂರ ದೂರ ಹೋಗುವುದು.)

ಗೋಪಾ— ಅದೇನೋ ರಾಮೂ? ನೀರೂ ಟೂತ್‌ಪೇಸ್ಟೂ?

ರಾಮು— ಹೌದು. ನೀರು ಮತ್ತು ಟೂತ್‌ಪೇಸ್ಟು ಟೇಕಲ್ಲಾ ಬೆಳಗ್ಗಿನ ಹೊತ್ತಿನಲ್ಲಿ! ಹಲ್ಲುಜ್ಜ ಬೇಡವೆ?

ಗೋಪಾ— ಅದಕ್ಕೆ?

ರಾಮು— ಅದಕ್ಕೆ ಟೂತ್‌ಪೇಸ್ಟಾವರೆ ಟೂತ್‌ಪೇಸ್ಟು. ಹಲ್ಲೂ ಪುಡಿಯೂವರೆ ಅಪು. ಬಾಯಿ ಮುಕ್ಕಳಿಸೋಕೆ ನೀರು. ನಾವು ಬ್ರಷ್ ತೋರಿಸಿದರೆ ಸರಿ. ಪೇಸ್ಟ್ ಹಿಸಿಕಾಕ್ತಾನೆ. ಒಂದು ಲೋಟೆ ನೀರೂ ನಮ್ಮ ಲೋಟಿಗೆ ಸುರಿದು ಹೋಗ್ತಾನೆ. ಹತ್ತು ಪೈಸೆ ಜಾರ್ಜು.

ಗೋಪಾ— ಛೇಷ್! ಛೇಷ್! ಹಾಸಿಗೇಂದ ಎದ್ದು ಬೀದಿ ಬದೀಲಿ ನಿಂತರೆ ಬೇಕಾದ್ದೆಲ್ಲಾ ಬರುತ್ತೇ ಅನ್ನು.

ರಾಮು— ಕರೆಕ್ಟ್! ಸ್ನೋ, ಪೌಡರ್, ಕ್ರೀಮು ಮುಂತಾದ ಟ್ಯಾಲೆಟ್ ಸಾಧನಗಳೂ ಬರುತ್ತೆ. ಒಂದು ಮುಖಕ್ಕೆ ಎಷ್ಟು ಬೇಕೋ ಆಷ್ಟೇ. ಹಾಕಿಸಿಕೊಂಡು ಕಾಸು ಎಸೆದು ಬಿಟ್ರೆ ತೀರಿತು.

ಗೋಪಾ— ಬಹಾಳ ಪುಣ್ಯಾಮಾಡಿದ ಊರಪ್ಪಾ, ನಮ್ಮಂಥಾ ಸಿಂಗಲ್ ರೂಂ ಮೇಟುಗಳಿಗೆ ಭಲೇಸಲೀಸು.

ರಾಮು— ಟೀಸಿಗೆ ಮೂರು ನಾಲ್ಕು ತಿಂಗಳವರೆಗೂ ಹೀಗೇನೆ. ನಿರುದ್ಯೋಗಿಗಳಿಗೆಲ್ಲಾ ಇದೊಂದು ಉದ್ಯೋಗವೂ ಆಯ್ತು.

ಗೋಪಾ— ಒಳ್ಳೆ ಬುದ್ಧಿವಂತರಪ್ಪ ಈ ಊರಿನವರು.

ರಾಮು— ಲಾಭ ಇದೆ ಅಂತಾಗುವಾಗ ಬುದ್ಧಿಯೂ ಓಡುತ್ತೆ! ಅನಾನುಕೂಲತೆ ಪರಿಸ್ಥಿತಿಯನ್ನೇ ಸಾನುಕೂಲತೆ ಮಾಡಿಕೊಳ್ಳೋದು ಅಂದ್ರೆ ಹೀಗೇ ನೋಡು. ನಮ್ಮಂಥ ಸಿಂಗಲ್ ರೂಮಿಸ್ಟುಗಳು ಮಾತ್ರವಲ್ಲ, ಕ ಟುಂಬಸ್ಥರು ಕೂಡಾ ತಿಂಗಳ ಅಖೇರಿ ಆಗುವಾಗ ಬೀದಿ ಬದೀಲಿ ಬರುವ ಟೂತ್ ಪೇಸ್ಟಿಗೇ ಶರಣಾಗುತ್ತಾರೆ. ಅವನೂ ಒಂದೊಂದು ಟ್ಯೂಬಿನಲ್ಲಿ ಎಂಟಾಣೆ ಲಾಭ ಹೊಡೀತಾನೆ. ಆ ಮೇಲೆ ಒಂದು ಲೋಟೆ ನೀರಿಗೆ ಏನು ಪೈಸೇ. ಅದರಲ್ಲೂ ಲಾಭನೇ.

ಗೋಪಾ— ಪ್ರತಿ ವರ್ಷವೂ ಹೀಗೇ ಏನು?

ರಾಮು— ಇತ್ತೀಚೆಗೆ ಹೆಚ್ಚು ಕಡಮೆ ಹೀಗೆಯೇ. ಬರಗಾಲವೂ ಉದ್ದುದ್ದವಾಗುತ್ತಾ ಹೋಗುತ್ತದೆ.

ಗೋಪಾ— ಒಟ್ಟಿನ ಮೇಲೆ ಇಲ್ಲಿ ಯಾರಿಗೂ ಒಲೆ ಹಚ್ಚಬೇಕಾದ ಅಗತ್ಯವೇ ಇಲ್ಲಾನ್ನು.

ರಾಮು— ಕರೆಕ್ಟ್! ಈ ಊರಿನಲ್ಲಿ ಟೈಮಿಗೆ ಸರಿಯಾಗಿ ಬರುವಂಥಾದ್ದು ಬಸ್ಸೂ ರೈಲೂ ಆಲ್ಲಾ; ಬೀದೀ ಸಪ್ಲಾಯರ್ಸ್ ತರುವ ಕಾಫೀ ನೀರೂ ಇಶ್ಯಾದಿ. ದುಡ್ಡು ಬಿಸುಟು ತಿಂದು ಬಾಯಿ ಬರೆಸಿಕೊಡ್ರೆ ತೀರಿತು. ಏನು ಬೇಕಾದರೂ ಮನೆ ಬಾಗಿಲಲ್ಲಿ ಕಾಸುಗಳೊಂದಿಗೆ ಸಿದ್ಧವಾಗಿ ನಿಂತು ಬಿಟ್ಟರೆ ಆಯಿತು. (ಹೊರಗೆ "ಶೇವಿಂಗ್ಸ್! ಸೆಲ್ಫ್ ಶೇವಿಂಗ್ಸ್! ಸ್ಯಾಸ್ ಶೇವಿಂಗ್ಸ್!" ಎಂಬ ಶಬ್ದ ಸಮಿಸವಿಪಸುತ್ತಾ ಇರುವಾಗ)

ಗೋಪಾ— ಅಂದ ಹಾಗೆ ನಾನು ಶೇವಿಂಗ್ ಮಾಡಬೇಕಲ್ಲಾ! (ಮುಖ ತಡವಿಕೊಳ್ಳುವನು.)

ರಾಮು— ಅದೂ ಮಾಡಿಬಿಡ್ತಾನೆ. ಹದಿನೈದೇ ಪೈಸೆ. ನೀರೂ ಸೋಪೂ ಎಲ್ಲ ಅವನದೇ (ಶಬ್ದ ದೂರ ದೂರ ಹೋಗುತ್ತದೆ. ರಾಮ ಹೊರಗೆ ಹಣಿಕಿ) ಲೋ ಶೇವಿಂಗ್ಸ್! ಶೇವಿಂಗ್ಸ್ ವಾಲಾ! ಆರೆ! ಹೋಗೇ ಬಿಟ್ಟಲ್ಲಾ! (ಗೋಪಾಲನ ಮುಖ ನೋಡಿ) ಪರವಾಯಿಲ್ಲೋ, ನಾಳೇನೇ ಮಾಡಿಸಿಕೋ.

ಗೋಪಾ— ಅವನೇಕೆ? ನಾನೇ ಮಾಡಿಕೊಳ್ತೀನಿ.

ರಾಮು— ಮಾಡಿಕೊಳ್ತೀ. ಆದರೆ ನೀರು ನಷ್ಟ, ಅಷ್ಟೇ.

ಗೋಪಾ— ಯಾಕಪ್ಪಾ ನೀರಿಗೆ ಅಷ್ಟು ಭಣ ಭಣ? ಈ ಊರಿನ ನೆಲದಲ್ಲಿ ಬಾವೀನೇ ಇಲ್ಲವೇ?

ರಾಮು— ಬಾವೀ ಇದೆ. ನೀರು ಮಾತ್ರ ಉಪ್ಪಿನ ಕಸ. ತೊಳೀಲಿಕ್ಕೆ ಬಳೀಲಿಕ್ಕೆ ಆದೇ ಗತಿ ಅಂದುಕೋ. ಬಾಯಿಗೆ ಹಾಕಿದರೆ ವಾಂತಿ ಬಂದೀತು. ಆಪೂರ್ವವಾಗಿ ಎಲ್ಲೋ ಬಾವಿ ನೀರು ಇದೆ. ಅದೆಲ್ಲಾ ಕಂಟ್ರೋಲು ನೀರು.

ಗೋಪಾ— ಆಯ್ತಪ್ಪ. ನಾಳೆ ಇದೇ ಹೊತ್ತಿಗೆ ಆ ಶೇವಿಂಗ್ಸಿನವನನ್ನು ಹಿಡೀಬೇಕು. ಅದೇನೋ ಅವ ಸೆಲ್ಫ್ ಶೇವಿಂಗ್ಸೂ ಅಂತ ಕರಿಚಿದನಲ್ಲ? ಇಲ್ಲಿಗೆ ಬಂದು ಅವನಿಗೆ ಅವನೇ ಶೇವ್ ಮಾಡಿಕೊಳ್ತಾನೇನು?

ರಾಮು— ಹಾಗಲ್ಲಪ್ಪ ನಮಗೆ ನಾವೇ ಮಾಡಿಕೊಳ್ಳೋ ಹಾಗೆ ಮಾಡ್ತಾನೇ ಅಂತ ಅವನ ಭಾವಾರ್ಥ.

(ವೆಂಕಟಪ್ಪ ಕೈಯಲ್ಲಿರಡು ದೊಡ್ಡ ಬಾಟ್ಲಿಗಳೊಂದಿಗೆ ಪ್ರವೇಶಿಸುವನು.)

ವೆಂಕಟಪ್ಪ— ರಾಮಯ್ಯಾ, ರಾಮಯ್ಯಾ! ನಿಮ್ಮ ಬಾಟ್ಲೀ ಕೊಡ್ತೀರಾ?

ಇಪ್ಪತ್ತೇಳು

(ಗೋಪಾಲನನ್ನು ನೋಡಿ) ಯಾರೋ ನೆಂಟರು ಬಂದ ಹಾಗಿದೆ?

ರಾಮು– ನೆಂಟಗಿಂಟ ಅಲ್ಲ ನನ್ನ ಗೆಳಯ ಬಂಟನೇ ಈ ಊರಲ್ಲೇ ಕೆಲಸಾಯ್ತು ಸದ್ಯ ನನ್ನ ಜತೇಲೇ ಇರ್ತಾನೆ (ಒಳಗಿನಿಂದ ಎಡಬು ದೊಡ್ಡ ಬಾಟ್ಲಿಗಳನ್ನು ತಂದು) ಎರಡು ತರಲು ಸಾಧ್ಯನೇ ವೆಂಕಟ್ಸ್ವನವರೆ?

ವೆಂಕಟ– ಆಗಲಿ, ಕೊಡಿ, ಬಾಟ್ಲಿಗೊಂದು ತಲೆ ಇವ್ವರೆ ಅಯಿತು ನೆವೆನುನೆಯ ಸೀನಪ್ಪನನ್ನೂ ಕರಕೊಂಡು ಹೋಗುತ್ತೇನೆ ನಿಮ್ಮ ಗೆಳಯರು ತುಂಬಾ ದೂರಿರುವ ಪ್ರದೇಶದಿಂದ ಬಂದವರೋ?

ರಾಮು– ಅಹಾ! ಎದೇನ್ ಕೇಳ್ತೀರಿ? ಅವನ ಊರಿನ ನೀರಿನ ವೈಭವ!

ಗೋಪಾ– ಕೆರೆಗಳೇನು! ಬಾವಿಗಳೇನು! ಸಂಪುಗಳೇನು! ಹಳ್ಳಗಳೇನು!

ರಾಮು– ಕಾಲುವೆಗಳೇನು! ನದಿಗಳೇನು! ಎಲ್ಲಾ ಸೀ ನೀರುಮಯಾನ್ನಿ!

ಗೋಪಾ– ಹೌದು, ಹೌದು

ವೆಂಕಟ– ಆಹಾ! ಆಹಾ! ಎಂಥಲ್ಲಿಂದ ಕೆಲಸಕ್ಕಾಗಿ ಇಲ್ಲಿಗೆ ಬಂದರೋ? ನೀರಿಲ್ಲದ ಈ ಊರಿಗೆ? ಪಾಪ ಒಣಗಿ ಹೋಗಾರ ಕ್ಲಿ?

ರಾಮು– ನಾನೂ ಅಲ್ಲಿಂದಲೇ ಬಂದವ ಕಾನೆ ಏನಾಪ್ಪೆನೆ? ಈ ಮುನುಷ್ಯನ ದೌರ್ಜವನ್ನು ಹುಸರಕ್ಕೆ ಪೆಂಡಿಕಾಲುವ ವಾಗುಮ್ಮಿ ವೆವರು ಸೃಷ್ಟಿಸ್ವಾನ್ರೀ ವೆಂಕಟ್ಸ್ವನವರೆ

ಗೋಪಾ– ಕರೆಕ್ಟು! ಕರೆಕ್ಟು! ನೀನಿರುವಾಗ ನನಗೆ ಸಪ್ಲಾ ಭಯ?

ವೆಂಕಟ– ಎದು ಪೌರ್ತ್ರಿ ಭಯ ಯಾಕೆ ಸುಮ್ನೇ? ಒಕ್ಕೇನ ತಲ್ಲಿ ಹೋಗಕ್ಕೂ ನಿಷ್ಟಬೇಕಲ್ಲಾ? (ಬಾಟ್ಲಿಗಳನ್ನು ತೆಗೆದುಕೊಂಡು ಹೊಗುವನು)

ಗೋಪಾ– (ಆಶ್ಚರ್ಯದಿಂದ ನೋಡುತ್ತ) ಏನಪ್ಪಾ ಇದೆಲ್ಲಾ ಬಾಟ್ಲೀ ಬುಡ್ಡೀ ಆಂ? ಯೂರಿವನು ವೆಂಕಟಪ್ಪ? ನೀರಿಲ್ಲಂಬ ತೆ ಇಂಥದೆಲ್ಲಾ ಕುಡೀತೀರಿಯೇನು?

ರಾಮು– ಟೆಟೆ! ಹಾಗೆಲ್ಲಾ ಅಪರಿತಾಗಿ ಅಂದುಬಿಡಬೇಡವೋ! ವೆಂಕಟನ್ನ ಇಷ್ಟಿಗ ತೂರನೆ, ಮನೇಲಿ ಇದ್ದಾನೆ ಕ್ಲಾ ಬಕ್ಕಾಪಾಪ ಬಾಟ್ಲಿಗಳನ್ನು ತೆಗ ಸುತ್ತಾಡಿ ನೋಡಾಸ್ಟ್ರಿಕ್ಟಗ ಹೋಗಾನೆ ಎಲ್ಲಾ ಕಾಲುವೆ ವಾಟ್ರಾರು ಲೆ ನಿಂತ ಬಸವಣ್ಣಿಲ್ಲಾ ನೀರೇ ನೀರು ಸೂರು ಫ್ಲೂರಿಷಿಕೊಳ್ಳಿಕ್ಕೆ ನಾನ್ಯಾರೋ?

ಗೋಪಾ– ಎಕ್ಸ್ಟ್ರಾ ತಪ್ಪಿಲ್ಲಗ ಏನು ಸಂಬಂಧವೋ?

ರಾಮು– ಎನ್ನರ ಕೆಲಗಿಕ್ಕಾಲ್ಲಿನ ಕೊಕ್ಕರಾಶ್ಮ, ಗಾಸ್ಟ್ರಿ, ಜ್ವರಾ ಎಷ್ಟೇ ಕೊಟ್ಟಿಕೇವು ಎಂದು ಸ್ಟಾರರಿಗೆ ಹೇಳಿಕಾಗಿ ಡಾಕ್ಟರ್ ಪ್ರಿಸ್ಕ್ರಿಪ್ಷನ್ ಒರಿಜಿನಲ್ಲಾರ ಕಾಪಿ ಬಾಟ್ಲಿ ನೋಡಿ ಗಳಿಷ್ಟಲೇ ಕಂಪೌಂಡರೂ ತಪ್ಪಿ ಮಾಡಿಕಾಂಡು, ಹೆಸರಿಗೆ ಔಷಧ ಎಂಥ ಬಾಟ್ಲಿ ತುಂಬ ನೀರು ತುಂಬಿ ಕಾಡಾನೆ ಆಸ್ಪತ್ರೆಯು ಶಾತಾಳ ಬಾನಿಲಿ ನೀರೂ ಇದಸ್ಸು, ತುಂಬ ಬೇಸಿಗಲ್ಲಿ ಕುಡಿಯುವ ನೀರು ಸಿಗುತ್ತೇ ಅಲ್ಲಿ ಗೆಲ್ಲಾ ಹೋಗಿ ನಿಂತು ಕಾದು ಬಾಟ್ಲೀ ನೀರು ತರಲು ನಮ್ಮಿಂದಾದೀತೆ? ವೆಂಕಟಪ್ಪ ನನಗೂ ಒಂದು ಬಾಟ್ಲಿ ತಂದು ಕೊಡ್ತಾನೆ ಪಾಪ ಕುಡೀಲಿಕ್ಕೆ ತೆನ್ನಾಗಿಯೇ ಇರುತ್ತೆ ಹತ್ತು ಸೈಸೇ ಕೊಟ್ಟು ಬೆಳಿಗ್ಗೆ ಒಂದು ಚೊಂಬು, ಇದೊಂದು ಬಾಟ್ಲೆ ನೂರು ದಿನ ಕುಡೀಲಿಕ್ಕಾಯಿತು

ಗೋಪಾ– ಹು! ಔಷಧ ನೀರು! ಬಾ ಯಾರಿಕೆಗೆ ಕುಡಿಯೋನೆ?

ರಾಮು– ಯಾಕಾಗದು? ಸಾಧಾರಣವಾಗಿ ಕುಡಿಯುವ ನೀರಿಗೆಲ್ಲಾ ಏನೋ ಔಷಧ ಬೆರೆಸುತ್ತಾರೋ ಇಲ್ವೊ?

ಗೋಪಾ– ಹೌದು ಬೆರಿಸ್ತಾರೆ

ರಾಮು– ತಿಂಥಾನ್ನನ್ನು ಕುಡಿದು ಮೊದಲೇ ಎಬ್ಯಾನವಾಗಿರುವಾಗ ಇದು ಯಾಕಾಗದು?

ಗೋಪಾ– ಹಾಗೆ ಕೇಳ್ತೀಯಾ?

ರಾಮು– ಹೂಂ ದಾಹಕ್ಕೆ ಮಜ್ಜಿಗೆ ನೀರು ಕುಡಿಯೋದಿಲ್ವೇ? ಶರಬತ್ ಕುಡಿಯೋದಿಲ್ವೆ? ಅವಕ್ಕೆಲ್ಲಾ ಒಂದೊಂದು ವಾಸನೆ ಇಲ್ವೇ? ಹಾಗಿರುವಾಗ ಆಸ್ಪತ್ರೆ ನೀರಿಗೆ ಏನಪ್ಪಾ ಕೇಡು?

ಗೋಪಾ– ಇಲ್ಲಪ್ಪ, ನಿಜಾಪ್ಪ ಕೇಡಿಲ್ಲ

ರಾಮು– ಔಷಧ ನೀರು ಅತ್ಯುತ್ತಮ ಆರೋಗ್ಯಕ್ಕೆ ಅತೀ ಉತ್ತಮ!

ಗೋಪಾ– ನಿಜನಿಜ ಹೌದುಹೌದು ಇನ್ನು ಈ ಊರಿನಲ್ಲಿ ಹೊನಾ ಜೀವನ ಪಾರ ಕಲೀಬೇಕಾಯಿತು

ರಾಮು– ಕರೆಕ್ಟ್! ಜೀವನ ಎಂದರೆ ನೀರು ಎಂತಲೂ ಅರ್ಥ ಉಂಟು ಆದ್ದರಿಂದ ತನ್ನಂತೆ ಕಲೀತಿ ಬಿಡು ಇದೊಂದು ಮಿತವ್ಯಯದ ಪಾಠ

ಗೋಪಾ– ಅದು ಹೇಗೋ?

ರಾಮು– ಒಬ್ಬನು ಹೆಚ್ಚು ಖರ್ಚಾಕೋ ಕಡಿಮೆ ಖರ್ಚಾಕೋ ನೋಡಲಿಕ್ಕೆ ಒಂದು ತಂಬಿಗೆ ನೀರು ಕೊಟ್ಟು, ಕೈಕಾಲು ಮುಖ ಶುದ್ಧವಾಗಿ ತೊಳೆಯುತ್ತಾನೋ ಇನ್ನೂ ನೀರು ಬೇಕಂತ ಕೇಳುತ್ತಾನೋ ಪರೀಕ್ಷೆ ಮಾಡಬೇಕಂತೆ ದೊಡ್ಡವರು ಹೇಳ್ತಾರೆ ಇಲ್ಲಿ ಒಂದು ಚೆಂಬು ನೀರಿನಲ್ಲಿ ಸಂಪೂರ್ಣ ಸ್ನಾನಾನೂ ಮಾಡಿ, ಇನ್ನೂ ಉಳಸಬಲ್ಲಷ್ಟು ಕಲೀಬಹುದು

ಗೋಪಾ– ಮಿತವ್ಯಯ ಎಲ್ಲಿ ಬಂತು? ರೇಟಿಗೆ ಐದು ಪೈಸೇ ಎರಡು ಪೈಸೇ ಇದೆಯಲ್ಲಾ? ಗಿಜಿಗಿಜಿ ಚಿಲ್ಲರೆ ದುಡ್ಡು ತುಂಬಬೇಕು ಕೈಯಲ್ಲಿ?

ರಾಮು– ಹೌದಪ್ಪಾ ಅದೇನಪ್ಪಾ? ಒಂದೂ ಕಾಲಿ ಕಲೀಬೇಕಾದರೆ ದರ್ಮಕ್ಕೇ ಎಗುತ್ತೇನೆಸ್ಸಾ? ಕಾಸು ಕೊಟ್ಟೇ ಮಿತವ್ಯಯ ಕಲೀತೀ ಅಷ್ಟೇ ತಾನೇ?

ಗೋಪಾ– ಜೆನ್ನಾಗಿದೀಪ್ಪಾ ಆಗ್ಯೂ ಮೆಂಟು!

(ಪೆಂದಲು ಬೆಂಬು ನೀರು ತಂದವ ಕಾಫಿ ಚಾಕಟ್ಟಲುಗಳನ್ನೂ, ಉಪ್ಪಿಟ್ಟಿನ ಬೋಗುಣಿಯನ್ನು ತಂದು, 'ಹಿಡೀರಿ ಸಾರ್, ಕಾಫೀ, ಟೀ, ಬಿಸಿಬಿಸಿ ಉಪ್ಪಿಟ್ಟು! ಒಗಾಕಾಸು ತೆಗೀರಿ ಬೇರೆ ಕಡೆಗೆ ಹೋಗಬೇಕು" ಎನ್ನುತ್ತಾ ಪೊಟ್ಟಣಗಳನ್ನು ತೆಗಯುವನು)

ರಾಮು – ಆ! ಆ! ಮೊದಲು ಉದರ ಸೇವೆ ಮುಗಿಯಲಿ

ಗೋಪಾ– ಕರೆಕ್ಟ್! ಕರೆಕ್ಟ್! ನನಗೆ ಟೀ!

(ಪರದೆ)

ಸುಮಂಗಲೆಯರ ಸೌಭಾಗ್ಯ ಅರಸಿನ

(ಹದಿನಾಲ್ಕನೇ ಪುಟದಿಂದ)

ಮಾವಿನಕಾಯಿಯ ರುಚಿ ಮತ್ತು ವಾಸನೆಯುಳ್ಳದ್ದಾಗಿರುತ್ತವೆ ಆದರಿಂದ ಅವುಗಳಿಗೆ 'ಮಾವಿನ ಶುಂಠಿ' (Mango ginger) ಎಂದು ಕರೆಯುವುದುಂಟು ಉಳಿದ ಅರಿಸಿನ ಗಡ್ಡೆಗಳೆಲ್ಲ ದಪ್ಪಹಾಗೂ ಹಳದಿ ಬಣ್ಣಕ್ಕಿದ್ದರೆ ಇವು ಬಿಳಿಯ ಬಣ್ಣವಾಗಿದ್ದು ಸಾಕಷ್ಟು ತೆಳ್ಳಗಿರುತ್ತವೆ

ವ್ಯವಸಾಯ ವಧ್ಧತಿ

ಅರಿಸಿನವ ಗಡ್ಡೆಗಳನ್ನು ತುಂಡರಿಸಿ ಬೂಮಿಯಲ್ಲಿ ಊರಿ, ಸರ್ಟಿಂಗ ರೀತ್ಯಾ ವಂಶಾಭಿವೃದ್ಧಿಗೊಳಿಸುತ್ತಾರೆ ಗಡ್ಡೆಗಳಾದರೂ ಭೂಮಿಯೊಳಗಿರುವ ಉಬ್ಬಿದ ಗುಪ್ತಕಾಂಡಗಳೆನ್ನ ಬಹುದು. ಇದರ ಬೆಳೆಗೆ ಯೋಗ್ಯ ಹಾಗೂ ಹಚ್ಚು ಗೊಬ್ಬರ ಬೇಕು ಮೊದಲು ಭೂಮಿಯನ್ನು ಜೆನ್ನಾಗಿ ಹದಗೊಳಿಸಿ ಚಿಕ್ಕ ಮಡಿಗಳಾಗಿ ತಯಾರಿಸುತ್ತಾರೆ ಸಾಮಾನ್ಯವಾಗಿ ಎಪ್ರಿಲ್‌ನಿಂದ ಜುಲೈ ತಿಂಗಳವರೆಗೆ ಚಿಕ್ಕ ಚಿಕ್ಕ ಗಡ್ಡೆಗಳನ್ನು ಸಾಲಿನಲ್ಲಿ 6–8" ಗಳಷ್ಟು ದೂರದಲ್ಲಿಯೂ ಸಾಲಿನಿಂದ ಸಾಲಿಗೆ 18" ಅಂತರ ವಿರುವಂತೆಯೂ ಊರುತ್ತಾರೆ ನವೆಂಬರ್ ತಿಂಗಳ ಹೊತ್ತಿಗೆ ಅರಿಸಿನ ಗಿಡದ ಎಲೆಗಳೆಲ್ಲ ಮುಗಿದು ಬೂಮಿಯೊಳಗಿರುವ ಗುಪ್ತ ಕಾಂಡಗಳು ದಪ್ಪನಾಗುತ್ತ ಎಲ್ಲ ಒಂದೇ ಬಗೆಯ ಕಂದು ಬಣ್ಣವನ್ನು ಪಡೆಯುತ್ತ ಬರುತ್ತವೆ ಫೆಬ್ರವರಿ ತಿಂಗಳ ಹೊತ್ತಿಗೆ ಎಲೆಗಳೆಲ್ಲ ಹಳದಿ ಬಣ್ಣಕ್ಕೆ ತಿರುಗಿ ಒಣಗುತ್ತವೆ ಮುಂದೆ ಈ ಗಡ್ಡೆ (ಗುಪ್ತ ಕಾಂಡ) ಬೇರುಗಳನ್ನೂ ಮಾರ್ಚ್ ತಿಂಗಳಿನಿಂದ ಕಿತ್ತು ಕಲೆ ಹಾಕಲು ಪ್ರಾರಂಭಿಸಿ ಎಪ್ರಿಲ್ ತಿಂಗಳಲ್ಲಿ ರಾಶಿ ಒಟ್ಟುತ್ತಾರೆ ಗಡ್ಡೆ ಮತ್ತು ಅದರ ಸಂಬಂಧದ ಶಾಖೆ, ಬೇರು ಇವುಗಳನ್ನೆಲ್ಲ ಒಟ್ಟಿಗೆ ಯಾವ ಭಾಗವೂ ಹರಿ (ಮುರಿ)ಯದಂತೆ ಇಡೀ ಗೊಂಚಲಾಗಿಯೇ ಕೀಳುವ ಎಚ್ಚರಿಕೆ ವಹಿಸುತ್ತಾರೆ ಮುಂದೆ ಎಲೆ, ಬೇರು ಮುಂತಾದುವುಗಳನ್ನು ಕತ್ತರಿಸಿ ಹಾಕಿ, ಗಡ್ಡೆ ಮತ್ತು ಅದರ ಶಾಖೆಗಳನ್ನು ಬೇರ್ಪಡಿಸುತ್ತಾರೆ ಅನಂತರ ಗಡ್ಡೆಗಳನ್ನು ಒಣಗಿಸಿ, ಹದಗೊಳಿಸಿ ಅರಿಸಿನದ 'ಬೇರು ಅಥವಾ ಕೊಸ' ಎಂದು ಮಾರಾಟಕ್ಕೆ ಬಿಡುಗಡೆ ಮಾಡುತ್ತಾರೆ ಇದರಲ್ಲಿ ಕೆಲ ಪ್ರಮಾಣದ ಅಂದರೆ–ಎಕರೆಗೆ 750ರಿಂದ 1500 ಪೌಂಡುಗಳಷ್ಟು ಗಡ್ಡೆಯ ಚೂರುಗಳನ್ನು 'ಬೀಜ'ಕ್ಕಾಗಿ ಮತ್ತೊಮ್ಮೆ ನೆಲದಲ್ಲಿ ಊರಲು ಇಟ್ಟುಕೊಳ್ಳುವುದುಂಟು ಮುಂದೆ ಗಿಡಗಳು ದೊಡ್ಡವಾಗಿ, ಅವುಗಳಿಂದ ಒರುವ ಅರಿಸಿನದ ಗಡ್ಡೆಗಳು 'ಬೀಜ' ಕ್ಕೆಂದು ಊರಿದ ಗಡ್ಡೆಗಳ 8–10 ಪಟ್ಟನಷ್ಟಾಗುತ್ತವೆ

ಗಡ್ಡೆ ಬೇರುಗಳನ್ನು ಹದಗೊಳಿಸುವಿಕೆ

ಹಸಿರಾದ ಅರಿಸಿನ ಗಡ್ಡೆಯನ್ನು ಮಾರಾಟಕ್ಕೆ ತರುವ ಮುನ್ನ ಅದನ್ನು ಕೆಲವು ರೀತಿಯಲ್ಲಿ ಹದಗೊಳಿಸ ಬೇಕಾಗುತ್ತದೆ ಆದಕ್ಕಾಗಿ ಭೂಮಿಯಿಂದ ಕಿತ್ತ ಗಡ್ಡೆಗಳನ್ನು ನೀರಿನಲ್ಲಿ ಕುದಿಸಿ, ಒಣಗಿಸಿ, ಆಕರ್ಷಕವಾಗುವಂತೆ ಅದಕ್ಕೆ ಬಣ್ಣ ಕಟ್ಟುತ್ತಾರೆ ಕೆಲವುಕಡೆ ಹಸಿರುಗಡ್ಡೆಗಳನ್ನೆಲ್ಲ ಒಂದು ಕಡೆ ರಾಶಿ ಹಾಕಿ ಅದರ ಮೇಲೆ ಅರಿಸಿನದ ಎಲೆಗಳನ್ನು ಮುಚ್ಚಿ ಕೆಲಕಾಲ ಹಾಗೇ ಇಟ್ಟಿರುತ್ತಾರೆ ಕೆಲ ದಿನಗಳ ನಂತರ ಗಡ್ಡೆಗಳನ್ನೆಲ್ಲ ದೊಡ್ಡ ದೊಡ್ಡ ಗಡಿಗೆಗಳಲ್ಲಿಯೇ ಕಬ್ಬಿಣದ ಕಡಾಯಿಗಳಲ್ಲಿಯೇ ಹಾಕಿ ನೀರು ತುಂಬಿ ಆ ನೀರು ಗಡ್ಡೆಗಳ ಮೇಲೆ 2 3" ಎತ್ತರ ಇರುವಂತೆ ನೋಡಿಕೊಳ್ಳುತ್ತಾರೆ ನಂತರ ಒಣಗಿದ ಅರಿಸಿನದ ಎಲೆಗಳಿಂದ ಮುಚ್ಚಿ, ಕೆಳಗಿನಿಂದ ಉರಿಹಾಕಿ, ಗಡ್ಡೆಗಳನ್ನು ಸುಡುತ್ತಾರೆ ಗಡ್ಡೆಗಳೆಲ್ಲ ಸಾಕಷ್ಟು ಮಿದುವಾದ ಮೇಲೆ ಅವುಗಳನ್ನು ಕಡಾಯಿಗಳಿಂದ ಹೊರತೆಗೆದು ಬಿಸಿಲಿನಲ್ಲಿ ತೆಳ್ಳಗೆ ಹರವಿ ಒಣಹಾಕುತ್ತಾರೆ ಮುಂದೆ 6–8 ದಿನಗಳ ನಂತರ ಜೆನ್ನಾಗಿ ಒಣಗಿದ ಮೇಲೆ ಗಡ್ಡೆಗಳನ್ನು ಶೇಖರಿಸಿ ಸೇಲಿಗೆ ಕಳುಹಿಸುತ್ತಾರೆ ಹೀಗೆ ಜೆನ್ನಾಗಿ ಒಣಗಿದ ನಂತರ ಅದರ ಮೇಲಿದ್ದ ಬೇರು, ಗಂಟು ಇತ್ಯಾದಿಗಳನ್ನೆಲ್ಲ ಕೊರೆದು, ಕೈಯಿಂದ ತಿಕ್ಕಿ ಶುದ್ಧಗೊಳಿಸುತ್ತಾರೆ ನಂತರ ಅವುಗಳಿಗೆ ಬೇಕಾದ ಆಕರ್ಷಕ ಬಣ್ಣ ಕೊಟ್ಟು ಮೂಲಗಡ್ಡೆ ಬೆರಳಿನಂತಹ ಟಿಸಿಲೊಡೆದ ಶಾಖೆಗಳು, ಸಣ್ಣ ದೊಡ್ಡ ಚೂರುಗಳು ಇತ್ಯಾದಿಯೂಗಿ ಅವಶ್ಯಕತೆಗೆ ತಕ್ಕಂತೆ ವಿಂಗಡಿಸಿ ವರ್ಗೀಕರಿಸುತ್ತಾರೆ

ಈ ಅರಿಸಿನದ ಮಾರಾಟ ಮತ್ತು ರಫ್ತಿನಿಂದ ದೇಶದಲ್ಲಿ ಕೋಟ್ಯಂತರ ರೂಪಾಯಿಗಳ ವ್ಯವಹಾರ ನಡೆದು ಸರಕಾರದ ಬೊಕ್ಕಸಕ್ಕೂ ಸಾಕಷ್ಟು ಹಣ ಸಂದಾಯವಾಗುತ್ತಿದೆ

ನಾಮಾವಶೇಷವಾಗುತ್ತಿರುವ "ಆಳರ್"

(ಹದಿನೈದನೇ ಪುಟದಿಂದ)

ಲು ಕಟ್ಟುವ ಪರಿಷ್ಕೃತ ಪದ್ಧತಿಯನ್ನೂ ಇತ್ತೀಚೆಗೆ ಪ್ರಾರಂಭಿಸಲಾಗಿದೆ

ಶವ ಸಂಸ್ಕಾರ

ಐದು–ಆರಡಿ ಆಳದಲ್ಲಿ ಗುಳಿ ಮಾಡಿ ಶವ ಸಂಸ್ಕರಿಸುವ ಪದ್ಧತಿ ಕಾಡು ಪ್ರದೇಶವಾದುದರಿಂದಾಗಿ ಇತರ ಮೃಗಗಳು ಹೂತ ಶವವನ್ನು ಬಗಿದುತೆಗೆಯದಂತೆ ಈ ಬಾಗ್ರತೆಯಾಗಿರ ಬೇಕು ಸಂಸ್ಕರಿಸುವ ಮುನ್ನ ಶವವನ್ನು ಮಿಯಿಸುವುದಿಲ್ಲ ಬಟ್ಟೆ ಹೊದೆಯುವ ಬದಲಾಗಿ ಮರದ ಎಲೆಗಳನ್ನು ಹೊದಿಸಿದರಾಯ್ತು ಸಂಸ್ಕಾರಕ್ಕೆಂದು ನಿರ್ದಿಷ್ಟ ಸ್ಥಳಕ್ಕೆ ವಿಲಾಪಯಾತ್ರೆಯೊಂದಿಗೆ ಶವ ತಲಪಿದ ಬಳಿಕವೇ ಹೊಂಡ ತೆಗೆಯುವ ಕಾರ್ಯ ಪ್ರಾರಂಭ

ಸತ್ತವರಲ್ಲರಿಗೂ ಒಟ್ಟಾಗಿ ವರ್ಷಕ್ಕೊಮ್ಮೆ ಪೂಜಾ ವೇಳೆ ಔತಣ–'ಬಲಿ' ಈ ವಿಶಿಷ್ಟ ಪೂಜೆಯು ಅತಿ ಹಿರಿಯನಾಗಿರುವನ ನೇತೃತ್ವದಲ್ಲಿ ಪೂಜಾನಂತರ ಮರದ ತೊಗಟೆಗಳಿಂದಲೇ ತಯಾರಿಸಿದ ವಾದಕ ವ್ರವ್ಯ ಸೇವನೆ–ಹಾಡು–ನರ್ತನ ಕಾರ್ಯಕ್ರಮಗಳು ಇಡೀ ರಾತ್ರಿ!

(—ಸಂಗ್ರಹ)

ಯಾರ ಉನ್ನತಿಯನ್ನು ಸಾಧಿಸತಕ್ಕದ್ದಿದಯೋ ಅಂಥ ಜನರಿಗೇ ಪರಮಾತ್ಮನು ಸತ್ಕಾರ್ಯಮಾಡುವ ಪ್ರೇರಣೆಕೊಡುತ್ತಾನೆ

ಕಲಾಯೋಗಿ ಮುದ್ದಣ

ಕನ್ನಡದ ಕುಮಾರ ಪುಂಗವ ಮುದ್ದಣನು ಕಬ್ಬಿಗರ ಅಚ್ಚಹವೆಂದು ಲೋಕವೇ ಒಪ್ಪಿಕೊಂಡಿದೆ. ಕನ್ನ ಕೃತಿಗಳಲ್ಲಿ ಆತ ತೋರಿಸಿರುವ ಕಲಾಪಾಂಡಿತ್ಯವನ್ನೂ ತುಂಬಿದ್ದಾನೆ. ಆತನ ಕಲಾಭಿಜ್ಞತೆಯುಳ್ಳ ಕನ್ನಡಿಗರಿಗೆ ಲಕ್ಷ್ಯ ಹರಿಸುವ ಹೊಸ ಪ್ರಯತ್ನವೀ ಲೇಖನದಲ್ಲಿ ನಡೆದಿದೆ.

ಲೇಖಕರು :

ಶ್ರೀ ಎಚ್. ಎ. ಪದ್ಮನಾಭ ಭಟ್ಟ,

ಶಿರೋಹಣ, ಬಿಡ್ಜಿನ್, ರಕ್ಷ:

ಸಂಗೀತ ಮತ್ತು ಸಾಹಿತ್ಯಗಳು ಸರಸ್ವತೀ ದೇವಿಯ ಎರಡು ಅಂಗಗಳೆಂದು ಪ್ರಸಿದ್ಧವಾಗಿವೆ. ಮಾನವ ಜೀವನದ ವೈವಿಧ್ಯ ಪೂರ್ಣ ವಿಕಾಸಕ್ಕೆ ಪ್ರಯೋದಕಗಳಾದ ಆರವತ್ತನಾಲ್ಕು ಕಲೆಗಳಲ್ಲಿ ಸಂಗೀತ ಸಾಹಿತ್ಯಗಳೆರಡೂ ಪ್ರಮುಖಗಳಾಗಿರುವುದರಿಂದಲೇ 'ಸಾಹಿತ್ಯ ಸಂಗೀತ ಕಲಾವಿಹೀನನಾದ ಮಾನವನು ಪಶುಸಮಾನ'ನೆಂಬ ಅರ್ಥವಾದವು ಜನಸಾಮಾನ್ಯರಲ್ಲೂ 'ಹಾಸು ಹೊಕ್ಕು' ಆಗಿರುವ ಈ ಕಲೆಗಳು ಮನೋವಿಶ್ಲೇಷಣೆಗೆ ನಿದಾನವಾಗಿವೆ ಎಂಬರ್ಥವನ್ನು ದೃಢಪಡಿಸುವಂತಿದೆ. ಇಂತಹ ಈ ಸಾಹಿತ್ಯ ಸಂಗೀತಗಳೆರಡನ್ನೂ ಆಪಾಕ ಮಧುರವಾಗಿ ಮಾಡಿದ ಕವಿ ಮುದ್ದಣನ ಕಲಾಪ್ರೌಢಿಮೆಯನ್ನು ಮೆಚ್ಚದವರಾರು?

ಆದಿಕಾವ್ಯವಾದ ರಾಮಾಯಣದ ಕಥಾವಸ್ತುವನ್ನೇ ತನ್ನ 'ಕೃತಿರತ್ನತ್ರಯ'ಗಳಾದ ಅದ್ಭುತರಾಮಾಯಣ, ರಾಮಾಶ್ವಮೇಧ, ರಾಮಪಟ್ಟಾಭಿಷೇಕಗಳಲ್ಲಿ ಅರಿಸಿಕೊಂಡರೂ, ಅದ್ಭುತರಾಮಾಯಣದಲ್ಲಿರುವ ರಾಮಾಯಣದ ವೈಶಿಷ್ಟ್ಯವೂ ರಾಮಾಶ್ವಮೇಧದಲ್ಲಿರುವ ಕಥಾವಸ್ತುವೂ, ರಾಮಪಟ್ಟಾಭಿಷೇಕದಲ್ಲಿರುವ ವರ್ಣನಾ ಚಾತುರಿಯೂ ಆತನ ಪ್ರತಿಭಾ ಶಕ್ತಿಯ ಸ್ಫುರಣದ ಪ್ರತೀಕಗಳಾಗಿ ಕಂಗೊಳಿಸುವುವು.

ಕಲೆಗಳಲ್ಲಿ ಇದಂ ಪ್ರಥಮವಾದ ಸಂಗೀತವನ್ನು ಬಾಲ್ಯದಲ್ಲೇ ಅಭ್ಯಾಸ ಮಾಡಿದ್ದ ಮುದ್ದಣನು ತನ್ನ ಕೃತಿಗಳಲ್ಲಿ ಸ್ವರಸಸಿದ್ಧವಾದ ಗಾನಕಲಾ ಯೋಗವನ್ನು ವ್ಯಕ್ತಪಡಿಸಿರುವುದು ಸ್ವಾಭಾವಿಕವೇ ಆಗಿದೆ.

'ರಾಮ ಪಟ್ಟಾಭಿಷೇಕ'ದಲ್ಲಿ 'ನಾರದಂ ಪಾಡುತಿರೆ, ತುಂಬುರಂ ಕಲಮಂದ್ರತಾರ ವ್ಯವಸ್ಥೆಯಿಂ ವೀಣೆಯಂ ನುಡಿಸುತಿರೆ.... ಇತ್ಯಾದಿ (ಐದನೆಯ ಸಂಧಿಯಲ್ಲಿ) 'ಪಾಡಿದರ್ ಕಿನ್ನರರ್....ಕುಣಿಕುಣಿದುಮ, ದಣಿದಣಿದು,ಮಣಿಮಣಿದುತಣಿತಣಿದರ್....ಎಂದು ಓದುವಾಗ 'ತಕ್ಕ ಧಿಮಿ ಕಿಟ ತಕಿಟ, ತಕತಕಿಟ....ಎಂಬ ಅಬೋಧ ಪೂರ್ವಕ ಉದ್ಗಾರವು ಹೊರ ಹೊಮ್ಮುವಂತಿದೆ.

ರಾಮಾಶ್ವಮೇಧದಲ್ಲಿ ಕೊನೆಯ ಕುಶಲವರ ರಾಮಾಯಣದ ಸಂದರ್ಭದಲ್ಲಿ, 'ವಾಲ್ಮೀಕಿ ತಾನವಿತಾನವಿನಿದಂಕರೆಯೆ, ಕೊರಲುಂಬೆರಲು ಮೊಂದಾಗಿ ಬೆರೆಯೆ, ಲಯವನೆಡವದ ತಾಳದ ಮೇಳದಿಂ, ಪತ್ತುಂ ಬಗೆಯ ಗಮಕಂಗಳೋಜೆಯಿಂ ಶುದ್ಧಮಿಶ್ರಸಂಕೀರ್ಣಂಗಳೆಂಬ ಪಲವುಂ ಬಗೆಯ ರಾಗಂಗಳೊಳ್ ಬಾಜಿಪ ಬೀಣೆಯಿಂ ಚರಕೆ ನೆರವರ್ಪೊಂದೆ ಭಂಗಿಯಿಂ ಬಾಲಕರಿಂ ರಾಮಾಯಣಮನೊಪ್ಪಿಸಿದಂ' ಎಂಬುದಾಗಿ ಶ್ರುತಿ, ತಾಳ, ರಾಗಗಳ ಮಾಧುರ್ಯದಿಂದ ದೇವಗಾಯಕರನ್ನೂ ನಾಚಿಸಿದ ವರ್ಣನೆಯು; ಕುಶೀಲವರಾದ ಕುಶಲವರು ಶ್ರೀರಾಮನ ಮುಂದೆ ವಾಲ್ಮೀಕಿ ಮಹರ್ಷಿಗಳ ನೇತೃತ್ವದಲ್ಲಿ ಮಾಡಿದ ರಾಮಾಯಣದ ಗಾನವನ್ನು ಕೇಳಿದವರು ಅದೆಂತಹ ಧನ್ಯರು? ಎಂಬ ಭಾವನೆಯನ್ನು ಉದ್ದೀಪನಗೊಳಿಸುವಂತಿದೆ.

ಅದ್ಭುತ ರಾಮಾಯಣದಲ್ಲಿ ತೋರಿಸಿದ ಗಾನಕಲಾಕೌಶಲವಂತೂ ಅದ್ಭುತವಾಗಿಯೇ ಇದೆ. ತ್ರಿಲೋಕಿಯಲ್ಲಿ ಅಸಮಾನರೆಂದು ಪ್ರಖ್ಯಾತರಾದ ನಾರದರ ಗಾನ ವಿದ್ಯಾಭ್ಯಾಸದ ಮೂಲಕವಾಗಿ ಸಂಗೀತದ ತಿರುಳನ್ನೇ ಹೊರಪಡಿಸಿದಂತಿದೆ.

ಕಳಿಂಗ ದೇಶಾಧಿಪತಿಯು ತನ್ನನ್ನು ಹಾಡಿ ಹೊಗಳುವಂತೆ ಬಲಾತ್ಕರಿಸಿದಾಗ ಶಿಷ್ಯರೊಡಗೂಡಿ ತುದಿನಾಲಗೆಯನ್ನೇ ಕತ್ತರಿಸಿಕೊಂಡ ವಿಷ್ಣುಭಕ್ತನಾದ ಕೌಶಿಕನು ಸಾಯುಜ್ಯವನ್ನು ಪಡೆದ ಕಥೆಯು "ಸಂಗೀತ ಜ್ಞಾನಮು, ಭಕ್ತಿವಿನಾಸನ್ಮಾರ್ಗ ಮುಗಲದಾ' ಎಂಬಂತೆ ಭಕ್ತಿಯ ಪರಾಕಾಷ್ಠೆಯನ್ನು ಮುಟ್ಟಿದಂತಿದೆ. ವಿಷ್ಣು ಲೋಕದಲ್ಲಿ ಕೌಶಿಕನ ಹಾಡನ್ನು ಕೇಳಲು ಹೋದ ನಾರದರಿಗೆ ಪ್ರವೇಶ ದೊರೆಯದೆ ತುಂಬುರರಿಗೆ ದೊರೆತ ಸ್ವಾಗತವೂ, ಮುಂದುವರಿದು ಲಕ್ಷ್ಮಿಯ ದ್ವಾರಪಾಲಕಿಯರಿಂದ ಹೊರತಳ್ಳಲ್ಪಟ್ಟ ನಾರದರಿಗಾದ ಅವಮಾನವೂ, ಸಿಟ್ಟಿಗೆದ್ದು ಲಕ್ಷ್ಮಿಯು ರಕ್ಕಸನಲ್ಲಿ ಜನಿಸುವಂತೆಯೂ ಪೆತ್ತಬೆಯಿಂದ ಹೊರತಳ್ಳಲ್ಪಡುವಂತೆಯೂ ನಾರದರು ಶಾಪವಿತ್ತುದೂ, ಮತ್ತೆ ವಿಷ್ಣುವಿನ ಸಲಹೆಯಂತೆ ಮಾನಸೋತ್ತರದಲ್ಲಿರುವ ಉಲೂಕ ರಾಜನಲ್ಲಿಗೆ ಹೋದುದೂ ಇದರ ಹಿನ್ನೆಲೆಯಾಗಿದೆ.

ಸಂಗೀತ ಕಲಿಯಲು ಬಂದ ನಾರದರಿಗೆ ಉಲೂಕನು ತಾನು ಜನ್ಮಾಂತರದಲ್ಲಿ ಹರಿಮಿತ್ರನೆಂಬ ವಿಷ್ಣು ಭಕ್ತನನ್ನು ಹೊಡೆದೋಡಿಸಿದ ಫಲವಾಗಿ ಹೀಗಾಗಿರುವೆನೆಂದೂ, ಯಮಧರ್ಮನಿಂದ ಇದನ್ನರಿತು ಹರಿಮಿತ್ರನ ಅನುಗ್ರಹದಿಂದ ತಾನು ಗಾನಾಚಾರ್ಯನಾಗಿರುವೆನೆಂದೂ ತಿಳಿಸಿದ ಕರ್ಮವಿಪಾಕವು ನಾರದರನ್ನೇನು? ಮಾನವ ಮಾತ್ರವನ್ನೂ ಎಚ್ಚರಿಸುವಂತಿದೆ:—

ಸಂಗೀತಾಭ್ಯಾಸದ ಪೀಠಿಕೆಯೊಗಿಸಿ:— ಗಾನಕ್ಕೆ ನಾಚಿಕೆ ಸಲ್ಲದು, ಕುಂತಿತವಾಗಿ ಹಾಡುವುದು, ಕಿರುಪಾಯ್ ಜೋಲ್ನಾಲಗೆ ಕೋರುವುದು, ಕೈ ಮೇಲೆತ್ತುವುದು, ಬಿರುನೋಟ, ಆಕಾಶದೃಷ್ಟಿ, ನಗೆ, ಹಸಿವು, ಪೆರತೆಡಿಕೆ, ಕತ್ತಲೆಯಲ್ಲಿ ಹಾಡುವುದು ಇತ್ಯಾದಿ ದೋಷಗಳನ್ನು ನಿರ್ದೇಶಿಸಿದುದು ಸಾಮಾನ್ಯಗಾಯಕರೂ ಅರಿಯಬೇಕಾದ ವಿಚಾರಗಳಾಗಿವೆ.

(ಶಿಷ್ಯವೃತ್ತಿಯಲ್ಲಿನ್ನ ನಾರದರು 366600 ಸ್ವರ ಭೇದಗಳನ್ನರಿತ ವಿಚಾರವು ಕಿಂಚಿದ್ವಿಚಾರಾರ್ಹವಾಗಿದೆ. ಸಂಪೂರ್ಣ, ಷಾಡವ, ಔಡವ ಭೇದದಿಂದ 348 48 ರಾಗಗಳೂ, ಭಾಷಾಂಗ ಹಾಗೂ ವಕ್ರ ರಾಗಗಳು ಸೇರಿ ಅನಂತ ರಾಗಗಳೂ, ಸಂಗೀತ ಶಾಸ್ತ್ರದಲ್ಲಿ ಹೇಳಿರುವುದರಿಂದ ದೇವ ಗಾನವಾದ ಗಾಂಧಾರ ಪದ್ಧತಿಯನ್ನು ಹೊಂದಿಸಿಕೊಂಡಿರ ಬಹುದು.)

ಮುಂದೆ ಕಲ್ಪಾಂತದಲ್ಲಿ ಗರುಡನಾಗುವಂತೆ ಉಲೂಕನನ್ನು ಹೆರಸಿ ಬೀಳ್ಕೊಂಡು ಗಾನವಿದ್ಯಾ ವಾರಂಗತನೆಂಬ ಹೆಮ್ಮೆಯಿಂದ ಪೂರ್ವೋಕ್ತನಾದ ತುಂಬುರನಲ್ಲಿಗೆ ಬಂದಾಗ; ಪೆರಗಾಲ್, ಕುಡುಗೈ, ಗುಳಿಗಣ್, ಸೆಡೆಮೊಗು, ಬಿರಿಪಲೆ, ಸುರಿವಾಯ್, ಎರೆದೆ, ಪೇರೊಡಲ್ ಮುಂತಾದ ವಿಕೃತಾಂಗರಾದ ರಾಗ ರಾಗಿಣಿಗಳನ್ನು ಕಂಡು, ತನ್ನಿಂದಾಗಿ ಆವರಿಗಾದ ದುರವಸ್ಥೆಯನ್ನೂ, ತುಂಬುರನಿಂದಾಗ ಬೇಕಾದ ಪರಿಹಾರವನ್ನೂ ತಳಿದ ನಾರದರಿಗಾದ ತೀಜೋವಧೆಯು ಗಾಯಕರಿಗೆ ಮೇಲ್ಪಂಕ್ತಿಯಂತಿದೆ. ಗಾನಯೋಗದಲ್ಲಿ ಸ್ಥಿತಪ್ರಜ್ಞರಾದ ತುಂಬುರು ಮಹರ್ಷಿಗಳ ವಿದ್ಯೆಯ ಮಹತ್ವವು ಗಾನ ವಿದ್ಯೆಯ ದುರುಪಯೋಗವನ್ನು ಅವ್ಯಕ್ತವಾಗಿ ಸಾರುವಂತಿದೆ.

ಪುನಃ ವಿಷ್ಣುವನ್ನು ಮರೆಹೊಕ್ಕ ನಾರದರು ಹಲವರಲ್ಲಿ ಶಿಷ್ಯರಾಗಿ ಬ್ರಹ್ಮನಿಂದ ಋಣ ಹೊಗಳಲ್ಪಟ್ಟು ತುಂಬುರರಲ್ಲಿಗೆ ಹೋದರೂ ಮನ್ನಣೆ ದೊರೆಯದಿಲ್ಲವೆಂಬ ವಿಚಾರವಂತೂ, ಕಂಡು ಕೇಳಿದ ಹಾಡನ್ನು ಅನುಕರಿಸಿ, ಭಾವರಹಿತ ಗೀತೆಗಳನ್ನು ಹಾಡಿ 'ಅಲ್ಪವಿದ್ಯೋ ಮಹಾಗರ್ವಿ'ಎಂಬಂತೆ ತೋರುವ ಮಿನುಗು, ಗಾನಯೋಗಿಯ ಮುಂದೆ ವಜ್ರದ ಮುಂದೆ ಗಾಜಿನ ಮಣಿಯಂತೆ ಎಂಬಂತಿದೆ.

ಮತ್ತೆ ಅನನ್ಯ ಶರಣನಾಗಿ ಶ್ರೀ ಕೃಷ್ಣನನ್ನು ಮರೆ ಹೊಕ್ಕರೂ ನಾರದರಿಗಾದ ಕೀಳ್ಮೆಯೆಂದರೆ ಜಾಂಬವತಿ, ಸತ್ಯಭಾಮೆ, ರುಕ್ಮಿಣಿ ಇವರಲ್ಲಿಗೆ ಕಳುಹಿದುದು ಮತ್ತು ಅವರಿಂದ 'ಇವನಿಗಿನ್ನೂ ಸ್ವರಜ್ಞಾನವೇ ಹುಟ್ಟಲ್ಲ' ಎಂದೆನಿಸಿಕೊಂಡುದು. ಇವೆಲ್ಲ ಗಾನವಿದ್ಯಾಪಿಪಾಸುವಾದವನಿಗಿರುವ ಅಸಹಾಯ ಸ್ಥಿತಿಯನ್ನೂ ತನ್ಮೂಲಕವಾಗಿ ಗಾನ ವಿದ್ಯೆಗಿರುವ ಹಿರಿಮೆಯನ್ನೂ ವ್ಯಕ್ತಪಡಿಸುವಂತಿವೆ.

ಕೊನೆಗೆ ತುಂಬುರನನ್ನು ಗೆಲ್ಲುವ ವಿಚಾರದಲ್ಲಿ ನಿರಾಶೆ ತಾಳಿ ಹೆಮ್ಮೆ ಕಳೆದು ಭಕ್ತಿ ಭಾವವು ನೆಲಸಲು ಶ್ರೀ ಕೃಷ್ಣನು ಸಂಗೀತ ಸಾರವನ್ನು ಕರತಲಾಮಲಕವಂತೆ ವಿಶದ ಪಡಿಸಲು ಬ್ರಹ್ಮಾನಂದ ಸಡೆದು ನಾರದರು ಕುಣಿದರು. ಹೀಗೆ ಭಕ್ತಿಗನ್ಯವಾದ ಗಾನವಿದ್ಯೆಯು ತ್ರಿಲೋಕಮಹಿತರಾದ ನಾರದರಲ್ಲಿ ನೆಲೆಸಿದ ಹಿನ್ನೆಲೆಯು ಇಂಪಾದ ಗಾನಕ್ಕೆ ಮನಸೋತು ಅಂದಿಗೇ ಅದನ್ನು ಸಾಧಿಸ ಬಯಸುವ ಸಾಹಸವನ್ನು ಅಪಹಾಸ್ಯಾಸ್ಪದನೆಂದೂ ಸತ್ಯಾಭ್ಯವಹಾರವನ್ನು ವರ್ಜಿಸಿ ಆರೋಚಕಿಗಳಾದವರೇ ನಿಜವಾದ ಗಾನಯೋಗಿಗಳೆಂದೂ ವ್ಯಕ್ತಪಡಿಸಿದ ಮುದ್ದಣನು ಗಾನಯೋಗಿಯೇ ಸರಿ.ನಾದೋಪಾಸನೆಯೇ ದೇವೋಪಾಸನೆ! ನಾದ ಬ್ರಹ್ಮವೇ ಅದ್ವಿತೀಯೊನಂದ! ಇದನರಿತವನೇ ಗಾನಯೋಗಿ!

ಪ್ರಜಾಪ್ರಭುತ್ವ ಮತ್ತು ಸಾಮ್ಯವಾದ

(ಹಿನ್ನೆರಡನೇ ಪುಟದಿಂದ)

ಅನೇಕ ಬುದ್ಧಿವಂತರು ವಿಕಟಹಾಸ್ಯದ ಒಳಟೀಕೆಗಳಲ್ಲೇ ಕಾಲಕಳೆಯುವ ದುರಭ್ಯಾಸಕ್ಕೆ ವಶರಾಗಲು ಅವರ ಚಾರಿತ್ರ ಬಲದ ಅಲ್ಪತೆಯೇ ಕಾರಣ. ಅದು ಹೇಗೆ ಅಲ್ಪವಾಯ್ತು? ಅವರ ವಿದ್ಯಾಭ್ಯಾಸದ ಫಲವಾಗಿಯೇ. ಅಂಥ ವಿದ್ಯಾಭ್ಯಾಸಕ್ಕೆ ಅವರ ಗುರುಗಳನ್ನು ನಿಯಮಿಸಿದವರು ಕಾರಣರು. ನಿಯಾಮಕರು ಅನೇಕ ಕಡೆಗಳಲ್ಲಿ ಪ್ರತ್ಯಕ್ಷಪ್ರತ್ಯಕ್ಷವಾಗಿ ಚುನಾವಣಾಮತಗಳ ಗುತ್ತಿಗೆದಾರರು ಅಥವಾ ಅವರ ಚೇಲರು. ಆರ್ಥಿಕ ವಿಕ ಸ್ವಾಮ್ಯದಂತೆಯೇ ರಾಜಕೀಯ ವಿಕ ಸ್ವಾಮ್ಯವೂ ಮತ ಹಾಕಿಸುವ ವ್ಯವಹಾರದಲ್ಲಿ ಬೆಳೆದುಕೊಂಡು ಬಂದಿದೆ; ಇದನ್ನು ತಡೆಗಟ್ಟುವುದು ಎಷ್ಟು ಅಗತ್ಯವೋ ಇದನ್ನು ತಡೆಗಟ್ಟುವುದೂ ಅಷ್ಟೇ ಅಗತ್ಯ. ಮನಾಪೊಲಿ ಎಲ್ಲಿದ್ದರೂ ಮನಾಪೊಲಿಯೇ. ಗುತ್ತಿಗೆದಾರಿಕೆ ಅಭಾಸಿಕ ದಕ್ಷತೆಯನ್ನು ತೋರಿಸುತ್ತದೆ; ಕಾಲಾಂತರಬಲ್ಲಿ ಅದು ಜ್ಯಾಗಳ ಜಿಪುಣತನದ ಪರಾಕಾಷ್ಠೆಯಂತೆಯೇ ಸರ್ವನಾಶಕರ. ಪ್ರಜಾಪ್ರಭುತ್ವದ ನೆಲೆ ಇರುವುದು ಗುತ್ತಿಗೆದಾರಿಕೆಯಲ್ಲಲ್ಲ—ಪಾಲುಗಾರಿಕೆಯಲ್ಲಿ. ಇದೇ ಇಂದು ಬೇಕಾದ ಸಾಮಾಜಿಕ ವಾದ, ಸಾಮಾಜವಾದ. ಆದರಲ್ಲಿ ಹಕ್ಕಿನಷ್ಟೇ ಬಾಧ್ಯತೆ ಇರುವ ನಿಯಮ ಅನಿವಾರ್ಯ. ಸಾಮ್ಯ ತತ್ವದ ನ್ಯಾಯ ಇರುವುದಿಲ್ಲಿ. ಈ ನ್ಯಾಯ ಅಲಕ್ಷಿತವಾದಾಗ ದೇಶದ ಸ್ವಾತಂತ್ರ್ಯವು ದಿವಾಳಿಯಾಗುತ್ತದೆ. ಇದು ಸರ್ವವ್ಯಕ್ತಿ-ಸರ್ವ ಸಂಸ್ಥಾ ವ್ಯಾಪ್ತಿಯುಳ್ಳದ್ದು. ಹಕ್ಕುಳ್ಳವರ ಬಾಧ್ಯತೆಯನ್ನು ಸಮನಾಗಿ ಜಾರಿಮಾಡಿಸಲಾರದೆ ಸರಕಾರವು ದಿವಾಳಿ ಸರಕಾರೆ ಅಥವಾ ಬೊಂಬೆ ಮಂತ್ರಿಮಂಡಳ.

ಶಾಸ್ತ್ರಜ್ಞನಂತೆ ಪ್ರಯೋಗ ಮಾಡಿನೋಡುವ ಧೈರ್ಯವಿದ್ದರೆ ಎಲ್ಲಿ ಬೇಕಾದರೂ ಅಹಿಂಸೆಯ ಪ್ರಯೋಗವನ್ನು ಯಶಸ್ವಿಯಾಗಿ ಮಾಡಬಹುದು.

ಂ ಂ ಂ

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್, ಮದ್ರಾಸು-4

ಇಪ್ಪತ್ತೊಂಭತ್ತು

ಬರೆದವರು :
ಶ್ರೀ ದೇವಕಿನಂದನ್

ದುರ್ಭಿಕ್ಷದಲ್ಲಿ ಅಧಿಕಮಾಸ

ನಮಗಾಗಿ ನಾವೊಂದು ರಾಜ್ಯಾಂಗವನ್ನು ರೂಪಿಸಿಕೊಂಡೆವು. ಗಣತಂತ್ರದಲ್ಲಿ ಸಮಾಜವಾದೀ ತರಹೆಯ ಸಮಾಜವನ್ನು ಅಣಿಗೊಳಿಸಬೇಕೆಂಬ ನಿರ್ಧಾರಕ್ಕೆ ಬಂದೆವು ಅದನ್ನು ಸಾಧಿಸುವುದೇ ನಮ್ಮ ಗುರಿಯೆಂದು ನಂಬಿದೆವು. ಈ ಸಮಾಜ ಸ್ಥಾಪನೆಗೆ ಉದ್ಯಮಗಳ ರಾಷ್ಟ್ರೀಕರಣ ಬಹು ದೊಡ್ಡ ಸಾಧನವೆಂದು ನಮ್ಮ ನೇತಾರ ಅನೇಕ ರಾಜಕೀಯ ಪಕ್ಷಗಳು ತಿಳಿದಂತೆ ಕಾಣುತ್ತಿದೆ. ಅವರ ದೃಷ್ಟಿಯಿಂದ ಇದು ಅನಿವಾರ್ಯ.

ಅವರೆ ಈ ಪಕ್ಷಗಳ ಪ್ರಮುಖರು ತಮ್ಮ ಪುನ್ನಕದ ಓದುಗೇ ಅಂಟಿಕೊಂಡಿರುವಂತೆ ಕಾಣುತ್ತಿದೆ. ಅವರಿಗೆ ಸತ್ಯ ಸ್ಥಿತಿಯನ್ನು ಗುರುತಿಸುವ ತಾತ್ಕಾಲ್ಯ ವ್ಯವಧಾನಗಳಿಲ್ಲ ಒಳಿತು, ಕೆಡುಕನ್ನು ವಿವೇಚಿಸುವ ಸಮಸ್ಥಿತಿ ಇರುವಂತೆ ಕಾಣುವುದಿಲ್ಲ. ಎಲ್ಲ ಉದ್ಯಮಗಳೂ.—ಬಳಕೆಯ ಸಾಮಾಗ್ರಿಗಳನ್ನು ತಯಾರಿಸುವ ಉತ್ಪಾದನಾ ಕೇಂದ್ರಗಳೂ.—ಸರಕಾರವ ಹತೋಟಿಗೆ ಬರಬೇಕೆಂಬುದು ಅವರ ವಾದ. ಖಾಸಗಿ ಕ್ಷೇತ್ರದಿಂದ ಎಲ್ಲ ಉದ್ಯಮಗಳನ್ನು ಸಾರ್ವಜನಿಕ ಕ್ಷೇತ್ರಕ್ಕೆ ವರ್ಗಾಯಿಸಲು ಅವರು ಕರಗ ಹೊತ್ತಿರುವಂತೆ ಕಾಣುತ್ತಿದೆ. ಅವರ ದೃಷ್ಟಿಯಲ್ಲಿ ಇಷ್ಟಾದರೆ ಸಮಾಜವಾದ ಬಂದಂತೆ.

ಹೊಸ ಉದ್ಯಮದ ಸ್ಥಾಪನೆ ಸಾರ್ವಜನಿಕ ಕ್ಷೇತ್ರದಲ್ಲೇ ಆದರೆ ಅವರಿಗೆ ತುಂಬು ಆನಂದ. ಈ ದಿಶೆಯಲ್ಲಿ ಸರಕಾರದ ಪ್ರಯತ್ನ ಕಮ್ಯುನಿಸ್ಟ ರಾಷ್ಟ್ರವೊಂದರ ಸಹಕಾರದಿಂದ ತಲೆಯೆತ್ತುವಂತಿದ್ದರೆ ಅವರ ತೃಪ್ತಿಗೆ ಮೇರೆಯಿಲ್ಲ. ಈ ಪ್ರಯತ್ನ ಆರ್ಥಿಕ ಕ್ಷೇತ್ರದಲ್ಲಿ ಹೊಸ ಚೇತನವನ್ನು ಹೊಮ್ಮಿಸುತ್ತದೆ ಎಂಬುದು ಅವರ ನಂಬಿಕೆ. ಈ ಪ್ರಯತ್ನ ನಮ್ಮ ಪ್ರಗತಿಪರ ಶಿಲುಬೆಗೆ ನಾವ್ಸ

ಆದರೆ ನಿಜಸ್ಥಿತಿ

ಇದಕ್ಕೆ ತದ್ವಿರುದ್ಧ.

ರಶಿಯದ ಸಹಕಾರದಿಂದ ಸ್ಥಾಪಿತವಾದ ಹಾರು ಉದ್ಯಮಗಳು ಈ ದಿಸ್ಸೆಗೆ ಸಣ್ಣ ಒಜೆ ಮೊತ್ತ ಬೆಲಕು ಚೆಲ್ಲುತ್ತವೆ ಸೈಕಿಲ್, ಪೈಪಾಚಾಮು ಮತ್ತು ಮದರಾಸುಗಳಲ್ಲಿ ಸ್ಥಾಪಿತವಾದ ಔಷಧಿ ವಾಗೂ ಶಸ್ತ್ರಚಿಕಿತ್ಸೆಗೆ ಸಂಬಂಧಪಟ್ಟ ಉಪಕರಣಗಳ ತಯಾರಿಕೆಯ ಕಾರಖಾನೆಗಳು, ಇವು ಸ್ಥಾಪಿತವಾದಂದಿನಿಂದ ಸಶ್ರದ್ಧೆಯಿಂದ ಕೆಲಸ ನಡೆಯುತ್ತಿವೆ. ಈ ಮೂರರಿಂದ ಈ ವರೆಗೆ ಒಂದು ಒಟ್ಟು ನಷ್ಟ ಬರಿಯ ಜಿಡಿನೆಟ್ಟು ಕೋಟಿ. ಈ ನಷ್ಟಕ್ಕೆ ಯಾರು ಜೋಣೆ?

ಇದನ್ನು ಯಾರ ಬೊಕ್ಕಸ ಬರಿದು ಮಾಡಿ ಭರ್ತಿ ಮಾಡಬೇಕು?

ಈ ಔಷಧಿಗಳ ತಯಾರಿಸುವ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ, ಹೆಚ್ಚು-ಕಡಿಮೆ ಹತ್ತು ವರ್ಷಗಳ ಹಿಂದೆ, ಕೇಂದ್ರ ಸರಕಾರ ಒಂದು ತಜ್ಞರ ಅಧಿಕೃತ

ಸಮಾಜವಾದದ ಹೆಸರಿನಲ್ಲಿ ಭಾರತೀಯ ಜನತೆಯ ರಕ್ತ ಹೀರಿ ಹೋಗುತ್ತಿರುವ ಹಿನ್ನೆಲೆಗಳಲ್ಲಿ ಒಂದನ್ನು ಇತ್ತೀಚೆಗೆ ಸಚಿವರೊ ಒಪ್ಪಿ ಕೊಂಡರು. ದುರ್ಭಿಕ್ಷದಲ್ಲಿ ಅಧಿಕ ಮಾಸದಂತೆ ಸರಕಾರಿ ಉದ್ಯಮಗಳು ವರ್ಷವರ್ಷವೂ ಬರಿಯ ಹತ್ತಾರು ಕೋಟಿ ನಷ್ಟ ತೋರಿಸುತ್ತ ಬೆಳೆದು ಬಂದರೂ ಅವು ಜನರಿಗೆ ಚಿಗಳೆಯಷ್ಟಿಸಹತ್ತಿವೆ.

• • •

ನಿಯೋಗವನ್ನು ಸರರಾಷ್ಟ್ರಗಳಿಗೆ ಕಳಿಸಿತು. ತಜ್ಞರ ತಂಡ ವಿದೇಶಗಳಲ್ಲಿ ಸಂಚರಿಸಿ, ಆಗತ್ಯ ಬೀಳುವ ಮಾಹಿತಿ ಸಂಗ್ರಹಿಸಿ, ಸರಕಾರಕ್ಕೆ ಒಂದು ವರದಿ ಸಲ್ಲಿಸಿತು. ಈ ವರದಿಯಲ್ಲಿ ಪಶ್ಚಿಮ ಯುರೋಪಿಯನ್ ಹಾಗೂ ಅಮೆರಿಕಾ ರಾಷ್ಟ್ರಗಳು ಬಳಸುವ ತಾಂತ್ರಿಕತೆಯನ್ನು ಶ್ಲಾಘಿಸಿ, ಅವು ಅತ್ಯಂತ ಆಧುನಿಕವಿರುವುದರಿಂದ, ಉತ್ಪನ್ನದಲ್ಲಿಯ ಹೆಚ್ಚಳ ಕೊಡುವ ಭರವಸೆಯಿದೆ ಎಂದು ಉಲ್ಲೇಖಿಸಿತು. ಆದರೆ ಸರಕಾರ ಈ ವರದಿಯನ್ನು ಬದಿಗೊತ್ತಿ—ಯಾವ ಕಾರಣಕ್ಕೋ ತಿಳಿಯದು—ರಶಿಯದ ನೆರವಿನಿಂದ, ಔಷಧಿ ತಯಾರಿಸುವ ಕಾರಖಾನೆಗಳನ್ನು ಈ ಮೂರು ಕೇಂದ್ರಗಳಲ್ಲಿ ಸ್ಥಾಪಿಸಿತು.

ರಶಿಯ ಕೊಟ್ಟ ಭರವಸೆಯ ಮೇಲೆಯೇ—ಅವರ ಸತ್ಯಾ-ಸತ್ಯತೆಯನ್ನು ವಿಮರ್ಶಿಸದೆ—ಕಾರ್ಯೋನ್ಮುಖವಾಯಿತು.

ರಶಿಯದ ಆಶ್ವಾಸನೆ ಸುಳ್ಳೆಂಬುದು ಸರಕಾರಕ್ಕೆ ಹೊಳೆಯಲಿಲ್ಲ. ತಿಳಿದು ಕೊಳ್ಳುವ ತಾಳ್ಮೆ ಇದ್ದಿದ್ದರೆ ಆಗುವ ನಷ್ಟವನ್ನು ತಪ್ಪಿಸ ಬಹುದಿತ್ತು.

ಒಂದು ಕೆ. ಜಿ. ವಿಟೆಮಿನ್ ಬಿ¹² ರತಯಾರಿಕೆಗೆ ಒಂದು ನೂರು ರೂಪಾಯಿ ತಗಲ ಬಹುದು ಎಂದು ರಶಿಯನ್ ತಜ್ಞರು ತಿಳಿಸಿದರು. ನಮ್ಮವರು ಅದನ್ನು ಬರಿ ಪಚ್ಚುವ ಪ್ರಯತ್ನ ನಡೆಸಲೇ ಇಲ್ಲ. ಒಂದು ಕೆ. ಜಿ. ವಿಟೆಮಿನ್ ಬಿ¹² ರ ಉತ್ಪಾದನೆಗೆ ರಶಿಯದಲ್ಲಿ ತಗಲುವ ವೆಚ್ಚ 75'-00 ರೂಪಾಯಿಗಳು. ಹೀಗಿರುವಾಗ ಕಡಿಮೆ ವೆಚ್ಚದಲ್ಲಿ ಅದರ ತಯಾರಿಕೆ ಹೇಗೆ ಸಾಧ್ಯ ಎಂದು ಕೇಳಿದ್ದರೆ—?

ಕೇಳಿ ಆಗ ಬೇಕಾದ್ದು ಏನು? ಅಧಿಕಾರಿಗಳು, ರಾಜಕಾರಣಿಗಳು ಅವರ ಕೈಯಿಂದ ಕೊಡುತ್ತಾರೆಯೇ?

ರಕ್ತ ಬಸಿಯಲು ಭಾರತದ ಬಡ ಜನತೆ ಇಲ್ಲವೇನು?

ಈಗ ನಮಗೆ ಒಂದು ಕೆ. ಜಿ. ವಿಟೆಮಿನ್ ಬಿ¹² ರ ತಯಾರಿಕೆಗೆ ಆಗುವ ಖರ್ಚು ಬರೇ 1200-00 ರೂ.ಗಳು.

ತಯಾರಿಕೆಯ ವೆಚ್ಚ ಮುಗಿಲು ಮುಟ್ಟಿರುವಾಗ, ಬೆಲೆಯನ್ನಿಳಿಸುವುದಾದರೂ ಹೇಗೆ?

ರಶಿಯದ ತಜ್ಞರು, ಈ ಮೂರು ಉತ್ಪಾದನಾ ಕೇಂದ್ರಗಳ ಸಂಬಂಧದಲ್ಲಿ ಸಿದ್ಧಪಡಿಸಿದ ಅಂಥಾಜುಗಳೂ ತಾತ್ಪರ್ಯಿಕ. ಅನೇಕ ಮುಖ್ಯ ಅಂಶಗಳ ಉಲ್ಲೇಖ ಈ ಕರಡಿನಲ್ಲಿ ಇರಲೇ ಇಲ್ಲ. ಖರ್ಚು-ವೆಚ್ಚದ ಖಚಿತವಾದ ಅಂಥಾಜೇ ಇಲ್ಲದೆ ಈ ಯೋಜನೆಯನ್ನು ಆತುರದಿಂದ ಕಾರ್ಯಗತಗೊಳಿಸಲು ನಮ್ಮ ಅಧಿಕಾರಿಗಳು ಏಕೆ ಮುಂದಾದರು? ಆದೊಂದು ಯಕ್ಷ ಪ್ರಶ್ನೆ! ಈ ತಪ್ಪಿಗಾಗಿ ನಾವು ಬಹು ದೊಡ್ಡ ದಂಡ ತೆರಬೇಕಾಯಿತು.

ಅಂಥಾಜನ್ನು ಪಂತ, ಪಂತದಲ್ಲಿಯೂ ಬದಲಾಯಿಸಲಾಯಿತು. ನಿರೀಕ್ಷಿಸಿದ ಖರ್ಚಿಗಿಂತ ಶೇಕಡಾ 64ರಷ್ಟು ಹೆಚ್ಚಿಗೆ ವ್ಯಯಿಸ ಬೇಕಾಯಿತು. ಹೈದರಾಬಾದಿನ ಸಿಂಥೆಟಿಕ್ ಡ್ರಗ್ ಪ್ಲಾಂಟಿನ ಸ್ಥಾಪನೆಗೆ ನಾವು ಚೆಲ್ಲಿದ ಹಣ ಒಂದು ಕೋಟಿ. ಆಶ್ಚರ್ಯದ ವಿಷಯವೆಂದರೆ ಅದು ಸ್ಥಾಪಿತವಾದಂದಿನಿಂದ ಆಗಿರುವ ಒಟ್ಟು ಖರ್ಚು ಎಂಟುಕೋಟಿ ರೂಪಾಯಿಗಳು.

ಮದರಾಸಿನಲ್ಲಿ ಸ್ಥಾಪಿತವಾದ ಶಸ್ತ್ರ ಚಿಕಿತ್ಸೆಗೆ ಸಂಬಂಧಿಸಿದ ಉಪಕರಣಗಳ ತಯಾರಿಕೆಯ ಕೇಂದ್ರದ ಸ್ಥಿತಿಯೂ ಶೋಚನೀಯ. ಅಲ್ಲಿ ತಯಾರಾದ ಉಪಕರಣಗಳು ನಮ್ಮ ವೈದ್ಯರ ಉಪಯೋಗಕ್ಕೆ ಬರುವಂತಿಲ್ಲ. ಅದನ್ನು ಅವರು ಬಳಸುವಂತೆಯೂ ಇಲ್ಲ. ಸರಕಾರ ಈ ಉದ್ಯಮವನ್ನು ಪ್ರಾರಂಭಿಸುವ ಮೊದಲು ನಮ್ಮ ದೇಶದ ಶಸ್ತ್ರ ವೈದ್ಯರ ಅವಶ್ಯಕತೆಯನ್ನು ಗಮನಕ್ಕೆ ತಂದು ಕೊಳ್ಳಲಿಲ್ಲ. ಅವರ ಸಲಹೆಯನ್ನು ಬರಮಾಡಿ ಕೊಳ್ಳಲಿಲ್ಲ.

ನಮ್ಮೆರದು ರಾಷ್ಟ್ರಗಳು ಈ ಕ್ಷೇತ್ರದಲ್ಲಿ ಬಳಸುವ ಮೂದರಿಗಳು ಬೇರೆ-ಬೇರೆ. ಆದ್ದರಿಂದ ತಯಾರಾದ ಸರಕಿಗೆ ಗಿರಾಕಿಯಿಲ್ಲ. ಉತ್ಪನ್ನವಾದ ಮಾಲು ಗ್ರಾಹಕರಿಲ್ಲದೆ ಉಗ್ರಾಣದಲ್ಲಿ ಬಿದ್ದಿದೆ.

ಈ ತಪ್ಪುಗಳನ್ನು ಈಚಿನ ದಿನಗಳಲ್ಲಿ ಮಂತ್ರಿ ತ್ರಿಗುಣ ಸೇನರು ಲೋಕಸಭೆಯಲ್ಲಿ ಒಪ್ಪಿಕೊಳ್ಳ ಬೇಕಾಗಿ ಬಂತು. ನಂಬಿಕಟ್ಟಿವು ಎನ್ನುವ ಮಾತನ್ನು ಅವರ ಇಲಾಖೆಯ ಕಾರ್ಯದರ್ಶಿಗಳೂ ನುಡಿದರು-ಆದ್ದರಿಂದ ನಮಗಾದುದೇನು?

ವರ್ಷದಿಂದ ವರ್ಷಕ್ಕೆ ಲುಕ್ಸಾನು ಅಧಿಕವಾಗುತ್ತ ಹೋಗುತ್ತದೆ. ಅದನ್ನು ತುಂಬಿಸಲು ತೆರಿಗೆ ಏರುತ್ತಾ ಹೋಗುತ್ತದೆ. ಇದು ನಾವು ಸೃಷ್ಟಿ ಮಾಡುತ್ತಿರುವ 'ಸಮಾಜವಾದ'.

ಭಾರತ ಸ್ವಾತಂತ್ರ್ಯೋತ್ಸವದ ಶುಭಾಶಯಗಳು

ಹೊಟೇಲ್ ಶಿವಪ್ರಸಾದ

ಮೇಲ್ತರಗತಿಯ ಪ್ರಮುಖ ಬೋರ್ಡಿಂಗ್-ಲಾಡ್ಜಿಂಗ್

ಕುಂದಾಪುರ, ದ. ಕ.

ಟೂರಿಸ್ಟ್ ಪಾರ್ಟಿಗಳಿಗೆ ವಿಶೇಷ ವ್ಯವಸ್ಥೆ!

ದೊಡ್ಡ ದೊಡ್ಡ ನಗರಗಳಲ್ಲಿಯೂ ಅಪರೂಪವಾದ ವಿಶಾಲ ಸುಸಜ್ಜಿತ ಸಿಂಗಲ್ ಮತ್ತು ಡಬ್ಬಲ್ ರೂಮುಗಳು!

ಕಾರ್ ಪಾರ್ಕಿಂಗ್ ಸೌಕರ್ಯ!

With best compliments from :

HOTEL SHIVAPRASAD

High Class Boarding, Lodging & Restaurant

COONDAPUR, S. K.

Phone : 77

ಹೆಂಗಸರು ಮತ್ತು ವರ್ತಮಾನಪತ್ರ

(ಹನ್ನೊಂದನೇ ಪುಟದಿಂದ)

ಯೇ ಹೆಂಗಸರು ತಮ್ಮ ಮಾತು, ಅಭಿಪ್ರಾಯವೇ ಸರ್ವಗ್ರಾಹ್ಯವೆನ್ನುವ ರೀತಿಯಲ್ಲಿ ನಯವಾಗಿ, ಮೋಹಕವಾಗಿ ಗಂಡಸರನ್ನು ಕಮ್ಮ ವಿಚಾರದಳವಿಗೆಳೆಯುವದುಂಟು. ಬಾಯಲ್ಲಿ ಹಾಗೆ ಹೇಳದಿದ್ದರೂ ಸಹಿತ ತಮ್ಮ ಅಭಿಪ್ರಾಯವನ್ನು ಜನ ಮೆಚ್ಚಲೇ ಬೇಕೆಂಬ ಹಟ ಇವೆರಡಕ್ಕೂ ಇರುತ್ತದೆಂಬುದನ್ನು ಮರೆಯಬಾರದು.

ಸುದ್ದಿಗಳು ಪ್ರಸಾರವಾಗುವ ಬಗೆಯೂ ಅಷ್ಟೇ ವಿಚಿತ್ರವಾಗಿರುತ್ತದೆ. ಒರ್ವ ಸುದ್ದಿಗಾರ ಕಳುಹಿಸಿದ ವರದಿ ಸಂಪಾದಕರ ಕೈಸೇರಿ ಪತ್ರಿಕೆಯ ಸಹಸ್ರ ಸಹಸ್ರ ಸಂಚಿಕೆಗಳಲ್ಲಿ ಮುದ್ರಿತವಾಗಿ ಜನಗಳಲ್ಲಿ ಹಂಚಿ ಹೋಗುತ್ತದೆ. ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿಯನ್ನು ಜನ ಓದಿ ಆದರಲ್ಲಿದ್ದ ಹಾಗೆ ತಿಳಿದುಕೊಳ್ಳುತ್ತಾರೆ. ಇದು ಪತ್ರಿಕೆಯ ಕ್ರಮವಾದರೆ ಹೆಂಗಳೆಯರದು ಇನ್ನೊಂದು ಬಗೆ. ಒಬ್ಬಳು ತಾನು ಸುದ್ದಿಯನ್ನು ಸೃಷ್ಟಿಮಾಡಿ ಇನ್ನೊಬ್ಬಳ ಕಿವಿಗೆ ಗೌಪ್ಯವೆನ್ನುವ ರೀತಿಯಲ್ಲಿ ಹೇಳುತ್ತಾಳೆ. ಆ ಮೇಲೆ ಅವರಿಬ್ಬರೂ ಸುದ್ದಿಯ ಜತೆಯಲ್ಲಿ ತಮ್ಮ ತಮ್ಮ ಅಭಿಪ್ರಾಯವನ್ನೂ ಸೇರಿಸಿ ತಮ್ಮ ಜವಾಬುದಾರಿಯೆಂಬಂತೆ ತಮ್ಮ ಒರಗೆಯವರಿಗೆ ಹೇಳುತ್ತಾರೆ. ಎರಡು ನಾಲ್ಕಾಗಿ, ನಾಲ್ಕು ಹದಿನಾರಾಗಿ ಬಾಯಿಂದ ಬಾಯಿಗೆ, ಜನರಿಂದ ಜನರಿಗೆ ಸುದ್ದಿ ದಾಟುತ್ತದೆ. ಸುದ್ದಿ ಹೀಗೆ ದಾರಿ ನಡೆಯುವಾಗ ಮೂಲವಸ್ತು ಎಲ್ಲಿಯೋ ಕಳಚಿ ಬಿದ್ದುಕೊನೆ ತಲುಪುವಾಗ ಸುದ್ದಿ ಸಾಕಷ್ಟು ಮೈ ತುಂಬಿಕೊಂಡಿರುತ್ತದೆ. ಆಗ ಸುದ್ದಿಯೇ ಜನರನ್ನು ಸೃಷ್ಟಿ ಮಾಡ ತೊಡಗುತ್ತದೆ. ಹೀಗಿದೆ ಸುದ್ದಿಯ ವಿಶ್ವರೂಪ!

ಮಹಿಳೆಯರಿಗಾಗಿ ಪ್ರತ್ಯೇಕ ಶಾಲೆ, ಕಾಲೇಜು, ಪ್ರತ್ಯೇಕ ನೌಕರಿಯ ಅವಕಾಶಗಳು, ಪ್ರತ್ಯೇಕ ರೇಡಿಯೋ ಕಾರ್ಯಕ್ರಮಗಳು ಹೀಗೆ ಅವರಿಗಾಗಿ ಬೇರೆ ಬಿಡಾರ ಹೂಡುವ ಕ್ರಮಗಳನ್ನು ನಾನು ಒಪ್ಪುವದಿಲ್ಲ. ಮಹಿಳೆಯರಿಗಾಗಿ ಬೇರೆ ಪತ್ರಿಕೆಗಳೇ ಬೇಕು ಎನ್ನುವವರೂ ಇದ್ದಾರೆ. ಅವರೇ ಸ್ವತಃ ಸಾಲಂಕೃತ ಆತ್ಯಧಿಕ ಪ್ರಸಾರವುಳ್ಳ ಪತ್ರಿಕೆಗಳಾಗಿರುವಾಗ ಅವರಿಗಾಗಿ ಬೇರೆ ಪತ್ರಿಕೆ ಎನ್ನುವದು ಹಾಸ್ಯಾಸ್ಪದ ವಿಷಯ. ಪತ್ರಿಕೆಗಳು ಮಾಡುವ ಕೆಲಸಕ್ಕಿಂತಲೂ ಹೆಚ್ಚಾಗಿ ಹೊಣೆಗಾರಿಕೆಯಿಂದ ಅಚ್ಚುಕಟ್ಟಾಗಿ ತ್ವರಿತಗತಿಯಿಂದ ಕೆಲಸ ಮಾಡುವ ಹೆಂಗಳೆಯರಿಗೆ ಪತ್ರಿಕೆಗಳಿಗಿಂತಲೂ ಹೆಚ್ಚಿನ ಪ್ರಾಶಸ್ತ್ಯ ಸಿಗುವದು ಅತ್ಯಗತ್ಯ. ಬೇಕಾದರೆ ಅವರು ನ್ಯಾಯವಾಗಿ ತಮಗೆ ಸಿಗಬೇಕಾದ ಈ ಹಕ್ಕಿಗಾಗಿ ಚಳವಳಿ ಹೂಡಲಿ. ಆ ಮೇಲೆ ಅವರ ಬಗ್ಗೆ ಪತ್ರಿಕೆಗಳು ಅಗ್ರಲೇಖ ಬರೆಯಲಿ. ಸ್ತ್ರೀಯರಿಗೆ ಅವರಿಗೆ ಬೇಕಾದ ಗೌರವ ಸಿಕ್ಕೇ ಸಿಗುತ್ತದೆಂಬ ಬಗ್ಗೆ ನನಗಂತೂ ಅನುಮಾನವಿಲ್ಲ. ಆದರೆ ಆ ಗೌರವ ರಾಷ್ಟ್ರ ಪ್ರಶಸ್ತಿ ಸಿಕ್ಕ ಸುದ್ದಿ ಪತ್ರಿಕೆಗಳಲ್ಲಿಯೇ ಪ್ರಕಟವಾಗಬೇಕಷ್ಟೇ!

ಸ್ವಾತಂತ್ರ್ಯವಂಚಿತ ಹಸುಳೆಗಳು

(ಹತ್ತನೇ ಪುಟದಿಂದ)

ಸತ್ಯಾಗ್ರಹ ನಡೆದಿರುತ್ತವೆ. ಆದರೆ ಸ್ವಾತಂತ್ರ್ಯವನ್ನು ಪಡೆಯಲಿಕ್ಕಾಗಿ ಜಲ್ಲ. ಜೈಲಿ. ೧೯೪೭ರ ನಂತರ ಹುಟ್ಟಿದವರು (ಗೋವಾ–ಪಾಂಡುಚೇರಿ ಸತ್ಯಾಗ್ರಹದಲ್ಲಿ ಭಾಗವಹಿಸಿದವರನ್ನು ಬಿಟ್ಟು) ಸ್ವಾತಂತ್ರ್ಯದ ಫಲವನ್ನು ಅನುಭವಿಸಲು 'ಅಯೋಗ್ಯ'ರಿದ್ದಾರೆ! ಸ್ವಾತಂತ್ರ್ಯಕ್ಕಾಗಿ ಇವರೇನೂ ಕಷ್ಟಪಟ್ಟಿರುವದಿಲ್ಲ. ತಾವು ಕಷ್ಟ ಪಡದೆ, ಅನ್ಯರು ಬೆವರು ಸುರಿಸಿ ದುಡಿದುದರ ಫಲವನ್ನು ಅನುಭವಿಸುವವನು ಸಮೂಜದ ಶೋಷಕನಿದ್ದಾನೆ. ಹಿಂದಿನವರ ತ್ಯಾಗದ ಬಂಡವಾಳದಿಂದ ಬಂಬಡ ಬಾರಿಸುತ್ತಿರುವ ಬಂಡವಾಳಷಾಹಿ ಇದ್ದಾನೆ. ಇಂತಹವರು ಸ್ವಾತಂತ್ರ್ಯದೇವಿ ಇಂದಿರಾ ರಾಣಿಯವರ ಮುನಿಸಿಗೆ ಪಾತ್ರರಾದಲ್ಲಿ ಪ್ರಧಾನಿ ಗನ್ಮು ಗುಳಿದಾರೆ? ಗೃಹಮಂತ್ರಿಯೂಗಿದ್ದು ಪ್ರಯೋಜನವೇನು? ಆದರೆ ಈ ಪ್ರಮೇಯಕ್ಕೆ ಯಾರು ಹೊಣೆ? ೧೯೪೭ರ ಆಗೋಸ್ಟ್ ಹದಿನೈದರ ಅಮವಾಸ್ಯೆಯ ಆ ಕಾರಿರುಳಿನಲ್ಲಿ ಪಾಕಿಸ್ಥಾನಕ್ಕೆ ಹೋಗದೆ ಹಿಂದೂಸ್ಥಾನವೇ ಬೇಕೆಂದು ಹಿಂದುಳಿದ ವಸಿತೆಯರೆಲ್ಲರಿಗೂ ಅಂದು ಅಧಿಕಾರದ ಆಸನವನ್ನೇರಿದವರು ಲೂಪು ಹಾಕಲು ಏರ್ಪಾಡುಮಾಡಬೇಕಾಗಿತ್ತು. ಮುಂದಿನ ಪ್ರಧಾನಿಯಪರಿಗೆ ಮಕ್ಕಳು ಪಿಠಿಪಿಠಿಮಾಡುತ್ತವೆನ್ನುವದನ್ನು ವೈಭವದಲ್ಲಿ ಮೈಮರೆತವರು ಕಂಡುಕೊಳ್ಳಲಿಲ್ಲ. ಆವರಲ್ಲಿ ಆ ರೀತಿಯ ದೂರದೃಷ್ಟಿ ಇರಲಿಲ್ಲ. ಅದರ ಫಲವನ್ನು ಅಂದರೆ ಅಂದು ಜವಾಹರಲಾಲಜೀ ಮಾಡಿಕುವದನ್ನು ಇಂದು ಇಂದಿರಾಜೀ ಅನುಭವಿಸುತ್ತಿದ್ದಾರೆ. ಅವರಿಗೆ ಕೋಪ ಬರುತ್ತದೆ. ಅವರು 'ತುಂಟಹುಡುಗರ'ನ್ನು ಶಪಿಸುತ್ತಾರೆ. ಎಷ್ಟೊಂದು ಪುಟ್ಟ ದೋಷ ಇಂದು ವಿರಾಟ ರೂಪವನ್ನು ತಳೆದಿದೆ. ಭೋಗದ ಸಮಯದಲ್ಲಿ ಗೊತ್ತಾಗುವದಿಲ್ಲ; ನಂತರ ಅಯ್ಯೋ ಅನಿಸುತ್ತದೆ.

ಅಮವಾಸ್ಯೆಯ ಕಾರಿರುಳಿನಲ್ಲಿ ಹೆಂಗಸರಿಗೆ ಮಾತ್ರ ಲೂಪು ಹಾಕಲು ಏಕೆ ಏರ್ಪಾಡು ಮಾಡಬೇಕಾಗಿತ್ತೆಂದು ಸಮತಾವಾದಿ (ಸಮಾನವಾದಿ) ಗೃಹಿಣಿತೆ ಗುಡುಗದಿರುವದುಂಟೇ? ಲೂಪು ಇರುವದೇ ಮಹಿಳೆಯರಿಗಾಗಿ ಎಂದಲ್ಲಿ ಒಡನೆ ಮಹಿಳೆಯರಿರುವದೇ ಲೂಪಿಗಾಗೆಂದು ತಿದ್ದಲು ಮುಂದೆ ಬರುವವರಿಗೇನೂ ಬರಗಾಲವಿಲ್ಲ. ಏನೇ ಇರಲಿ. ಹೆಂಗಸರು ಮಾತ್ರ ಆದನ್ನು ಉಪಯೋಗಿಸಿ, ಅದಕ್ಕಿಂತಲೂ ಧರಿಸಿಕೊಳ್ಳಬಹುದು. ಗಂಡಸರಿಗೂ ಬೇರೆ ವಿಧಾನ ಇದೆಯಲ್ಲಾ? ಕೆಲ ಮತಸ್ಥರಲ್ಲಿ ಒಂದು ರೂಢಿ ಇದೆಯಂತೆ. ಹುಡುಗರು ಒಂದು ನಿರ್ದಿಷ್ಟ ಪ್ರಾಯಕ್ಕೆ ಬಂದೊಡನೆ ಗುಪ್ತಾಂಗದ ಭಾಗವನ್ನು ಕತ್ತರಿಸಿ ಬಿಡುತ್ತಾರಂತೆ ಹೊಟ್ಟೆಗೂ ಆಯಿತು, ಮದ್ದಿಗೂ ಆಯಿತೆಂಬಂತೆ; ತುಷ್ಟೀಕರಣಕ್ಕೂ ಆಯಿತು. ಸಮಸ್ಯೆಯ ಪರಿಹಾರಕ್ಕೂ ಆಯಿತೆಂಬಂತೆ ಅಂದೇ ಶಸ್ತ್ರಚಿಕಿತ್ಸೆಯ ಉಪಾಯವನ್ನೇ ಜವಾಹರಲಾಲಜೀ ಬಳಕೆಗೆ ತರಬಹುದಿತ್ತಲ್ಲವೇ? ಗೃಹಖಾತೆಯ ಗುಡುಗು ಅಲ್ಲಮ್ಮಣ್ಣೀ, ಅದು ಮಾತ್ರವಲ್ಲ ಪ್ರಶ್ನೆ. ನೋಡು ಇಲ್ಲಿ ಹಿಂದೂಗಳು ಬಹುಸಂಖ್ಯಾತರಿದ್ದಾರೆ. ಮುಸ್ಲಿಮರು, ಕ್ರೈಸ್ತಿಯನರು ಅಲ್ಪ ಸಂಖ್ಯಾತರು. ನಮ್ಮದು ಸಮೂಜವಾದಿ ರಾಷ್ಟ್ರ. ಎಲ್ಲರಿಗೂ ಸಮಾನ ಅವಕಾಶ ಇರಬೇಕು. ಬಹು ಸಂಖ್ಯಾತರೇ ಹೆಚ್ಚಿನ ಸ್ಥಾನಗಳನ್ನು ಪಡೆಯುತ್ತಾರಲ್ಲನೇ? ಅದನ್ನು ತಡೆಗಟ್ಟಲು ಇವೇ ಏಕಮೇವ ಉಪಾಯ. ಇಲ್ಲಿಯ ಯಾವ ಹೆಂಗಸೂ ಹೆರುವದಿಲ್ಲವೆಂದಾದಲ್ಲಿ ಅಲ್ಪ ಸಂಖ್ಯಾಕರನ್ನು ಬಹುಸಂಖ್ಯಾಕರನ್ನಾಗಿಸಲು ಹೊರದೇಶಗಳಿಂದ ಅಂಗನೆಯರನ್ನು ಆಮದುನೂಡಿಕೊಂಡರಾಯಿತು....ಹಿಂದೂಗಳು ಬಹುಸಂಖ್ಯಾತರೆಂಬ ಹೆಮ್ಮೆಯ ಹೆಮ್ಮರವನ್ನು ಆ ರೀತಿ ಬೇರುಸಹಿತ ಕಿತ್ತುಹಾಕ ಬಹುದಾಗಿತ್ತು.

ಇದು ಅಂದಿನ ಪ್ರಧಾನಿ ಹಾಗೂ ಗೃಹಮಂತ್ರಿಯವರ ತಪ್ಪೆಂಬುದನ್ನು ಇಂದಿನ ಪ್ರಧಾನಿ ಹಾಗೂ ಗೃಹಮಂತ್ರಿ ಒಪ್ಪಿಕೊಳ್ಳಲೇ ಬೇಕು. ಅಂದು ಪ್ರಧಾನಿ ಮತ್ತು ಗೃಹಮಂತ್ರಿ ಬೇರೆ ಬೇರೆಯೂಗಿದ್ದುದರಿಂದ ಅಂತಹ ಪ್ರಮಾದ ಘಟಿಸಿರಬೇಕು. ಆ ದನ್ನರಿತುಕೊಂಡ ಬಹುಜಾಣೆ ಇಂದಿರಾ ರಾಣಿಯವರು ತಾವೇ ಎರಡೂ ಆಗಿವ್ವಾರೆ. ಆದರೆ ಇದು ಬಹಳ ತಡವಲ್ಲವೇನು? ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸದವರ ಅರ್ಧಾತ್ ನಿರುದ್ಯೋಗಿಗಳ ಸಂಖ್ಯೆ ಇಂದು ಭೂತಾಕಾರವನ್ನು ತಳೆದಿದೆ. ಆ ಪ್ಪ ಮಾಡಿರುವ ತಪ್ಪಿನ ಫಲಕ್ಕೆ ಮಗಳು ದೂಷಿಸಿ ಏನು ಫಲ? ಅದನ್ನು ಸರಿಯುವ ಸೂಕ್ತ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕು. ತೊಟ್ಟಿಲು ತೂಗಿದ ಕೈ ರಾಜ್ಯವನ್ನೂ ಆಳೀತಂತೆ. ತೊಟ್ಟಿಲು ತೂಗಿದ ಉತ್ತಮ ಗೃಹಿಣಿ ಉತ್ತಮ ಗೃಹಮಂತ್ರಿಯೂಗಬಹುದು, ಉತ್ತಮ ಗೃಹಮಂತ್ರಿ ಉತ್ತಮ ಪ್ರಧಾನಿಯೂಗ ಬಹುದು. ಅದಕ್ಕೆ ಅವರವರು ಅನುಸರಿಸುವ ರೀತಿ—ಧೋರಣೆಯೇ ಕಾರಣವಿದೆ, ಇಲ್ಲದಿದ್ದಲ್ಲಿ ಅನರು ಉತ್ತಮ ಗೃಹಜಾರ ಮಂತ್ರಿಯೂಗುವದರಲ್ಲಿನಿತೂ ಸಂದೇಹವಿಲ್ಲ.

ಇಂದಿರಾದೇವಿಯವರ ಸ್ವಾತಂತ್ರ್ಯದಿಂದ ವಂಚಿತರಾದ ಹಸುಳೆಗಳು ಆಟಲ ಬಿಹಾರಿ ವಾಜಪೇಯಿಯವರ ಪದಿನೆಂಟರ ಹದವಾದ ನೆಂಟು. ಇಂದಿರಜ್ಜಿಯವರಿಗೆ ಬಿಡಿಸಲಾಗದ ಹೆಗ್ಗಂಟುಗಳಾಗಿನೆ. ಸಂವಿಧಾನ ಭಕ್ಷಕರು ಭೂತಲದಲ್ಲೇ ಹುದುಗಿರುವ ವರೆಗೆ, ಅಂದರೆ, ಸಂವಿಧಾನದ ಆಲ್ವಿಕೆ ನಡೆಯುವವರೆಗೆ, ಆದ್ಯಾರನ್ನೂ ಆದ್ಯಾರಿಂದಲೂ ಸ್ವಾತಂತ್ರ್ಯದಿಂದ ವಂಚಿತರನ್ನಾಗಿಸಲು ಸಾಧ್ಯವಿರುವದಿಲ್ಲ.

ಸ್ವಾತಂತ್ರ್ಯವನ್ನು ಕಾಯಲು, ದೇಶವನ್ನು ರಕ್ಷಿಸಲು ರಾಷ್ಟ್ರೀಯರೆಲ್ಲರೂ ಸ್ವಸಂತೋಷ, ಉತ್ಸಾಹ ಹಾಗೂ ಧೈರ್ಯದಿಂದ ಮುಂದಕ್ಕೆ ಬಂದು ರಕ್ಷಣೆಯನ್ನು ಒಬ್ಬರು ಇನ್ನೊಬ್ಬರಿಗೆ ಕಟ್ಟುತ್ತಿರುವ ದೃಶ್ಯವನ್ನೂ ಇದೇ ಸಮಯದಲ್ಲಿ ಕಾಣಬಹುದು.



ಮನೆಮನೆಯಲ್ಲೂ ಇರಲೇಬೇಕಾದ ಪವಿತ್ರ ಧಾರ್ಮಿಕ ಗ್ರಂಥ

ಪುಟ 450ಕ್ಕೂ ಮಿಕ್ಕಿ. ಬೆಲೆ ರೂ. 1-50

ಸಿಗುವ ಸ್ಥಳಗಳು: ನವಯುಗ ಪ್ರೆಸ್, ಉಡುಪಿ
ನವಭಾರತ ಪುಸ್ತಕ ಭಂಡಾರ, ಉಡುಪಿ
ಟಿ. ಎನ್. ಕೃಷ್ಣಯ್ಯ ಸೆಟ್ಟಿ ಅಂಡ್ ಸನ್ಸ್,
ಚಿಕ್ಕಪೇಟೆ, ಬೆಂಗಳೂರು–2

ಮೂನತ್ತೊಂದು

ಇಂದಿರಾ ಗಾಂಧಿ ಪ್ರಧಾನಿಯೂಗಿಯವದಿ ಯನ್ನು ಕೆತ್ತಿಸಿದು ಕೆಂಪು ಕೇಬುವನ್ನು ಸ್ಥಿನ ಮೆಂಡಿಗೆ—ಆದಕ್ಕೆನೇ ಅವರನ್ನು (ಎಂಬತನೇ ಪುಟ ನೋಡಿರಿ)

ನಿರುದ್ಯೋಗದ ನಮುಷ ಪ್ರಶ್ನೆ

(ಒಂಭತ್ತನೇ ಪುಟದಿಂದ)

ಗ್ ಕಾಲೇಜನಲ್ಲಿ ಪ್ರವೇಶಾರ್ಥಿಯಿಂದ ರೂ. ೪,೦೦೦ 'ತಲೆತೆರ' (Capitation fee) ವಸೂಲು ಮಾಡಲಾಗುತ್ತಿತ್ತು. ಆದರೆ ಕಳೆದ ವರ್ಷ ಈ ಕಾಲೇಜು ತನ್ನ ಪ್ರಥಮ ವರ್ಷದ ವರ್ಗವನ್ನೇ ಮುಚ್ಚಬೇಕಾಗಿಬಂತು. ಈ ವರ್ಷ ಅನೇಕ ವಿದ್ಯಾರ್ಥಿಗಳು ಸಿಸಿಕ್ಸ್, ಕೆಮಿಸ್ಟ್ರಿ, ಬಾಯೊಲೊಜಿ ತೆಗೆದುಕೊಂಡು ವೈದ್ಯಕೀಯ ಶಿಕ್ಷಣವ ತಯೂರಿ ಮಾಡಿಕೊಳ್ಳುತ್ತಿರುವರೆಂದು ನಮ್ಮರಾಜ್ಯದ ಶಿಕ್ಷಣ ಮಂತ್ರಿಗಳು ಹೇಳಿದ್ದಾರೆ.

ಇದೇ ಪ್ರವೃತ್ತಿ ತಮಿಳುನಾಡಿನಲ್ಲಿ. ಆ ಪ್ರದೇಶದಲ್ಲಿಯೂ ನೂರು ಸ್ಥಳಗಳಿಗೆ ಮೆಡಿಕಲ್ ಕಾಲೇಜುಗಳಿಗೆ ೬,೦೦೦ ಅರ್ಜಿಗಳು ಬಂದಿವೆ. ನುಡ್ಯಪ್ರದೇಶದಲ್ಲಿ ೬೦೦ ಸ್ಥಳಗಳಿಗೆ ೮,೦೦೦ ಅರ್ಜಿಗಳು. ಮೆಡಿಕಲ್ ಕಾಲೇಜು ಪ್ರವೇಶಕ್ಕಾಗಿ. ಮಹಾರಾಷ್ಟ್ರದಲ್ಲಿಯೂ ಈ ಕಾಲೇಜುಗಳಿಗೆ,ಪ್ರವೇಶ ಬಯಸುವವರ ಸಂಖ್ಯೆ ನೂರಕ್ಕೆ ೩೦ರಷ್ಟು ಹೆಚ್ಚಾಗಿದೆ. ಅದೇ ಎಂಜಿನಿಯರಿಂಗ್ ಕಾಲೇಜಿನತ್ತ ಪ್ರವೇಶಾರ್ಥಿಗಳ ಪ್ರವಾಹ ಕುಗ್ಗಿದೆ.

ಇಂದು ಕಾಮರ್ಸ್ ಕಾಲೇಜುಗಳತ್ತ ಈ ಪ್ರವಾಹ ತಿರುಗಿದೆ. ವ್ಯಾಪಾರ ವಾಣಿಜ್ಯ ವಿದ್ಯೆಗೆ ಹೆಚ್ಚಿನ ಬೇಡಿಕೆ ಎಂದು ವಿದ್ಯಾರ್ಥಿಗಳೂ ಪಾಲಕರೂ ಭಾವಿಸಿದಂತೆ ಇದೆ. ಎಂಜಿನಿಯರಿಂಗ್‌ನ ಆಕರ್ಷಣೆ ಕಡಿಮೆ ಆದ್ದರಿಂದ ಮಧ್ಯಪ್ರವೇಶನಲ್ಲಿ ಆಕುರಿತು ಉತ್ತೀರ್ಣರಾಗಲು ಗುಣಗಳ ಪ್ರಮಾಣ ಮಿತಿ ೭೦ರಿಂದ ೬೦ಕ್ಕೆ ಇಳಿಸಬೇಕಾಯಿತು! ಇದಕ್ಕೆ ಪ್ರತಿಯಾಗಿ ಗುಜರಾತನಲ್ಲಿಯ ೩ ಮೆಡಿಕಲ್ ಕಾಲೇಜು ತುಂಬಲಿಕ್ಕೆ ಸಾಕಷ್ಟು ವಿದ್ಯಾರ್ಥಿಗಳೇ ಸಿಗಲಿಲ್ಲ!

ಹಿಂದೊಮ್ಮೆ ಆರ್ಟ್ಸ್ ಅಭ್ಯಾಸ ಕ್ರಮದ ಆಕರ್ಷಣೆ ಹೆಚ್ಚಾಗಿತ್ತು. ಎಲ್ಲರೂ ಬಿ.ಎ. ಪಾಸಾಗುವವರೇ! ಬಿ.ಎ. ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಯಿತು. ಮುಂದೆ ವಿಜ್ಞಾನದ ಕೊಂಡಾಟ ಬೆಳೆಯಿತು. ಉಕ್ಕಿನ ಕಾರಖಾನೆ ಆಧುನಿಕ ದೇವಸ್ಥಾನವೆಂದರು ನೆಹರೂಜೀ. ಸಾಯನ್ಸ್ ಮತ್ತು ಟೆಕ್ನಾಲಜಿ ಆಧುನಿಕ ಅಭಿವೃದ್ಧಿಯ ಕೈಕಾಲುಗಳಾದವು. ಸರಿ. ಬಿಎಸ್‌ಸಿಯ ಬೆಲೆ ವಿಪರೀತ ಬೆಳೆಯಿತು. ವಿದ್ಯೆಯ ಪೇಟೆಯಲ್ಲಿ. ಆರ್ಟ್ಸ್ ವರ್ಗಗಳಿಗೆ ಹುಡುಗಿಯರೇ ಹೆಚ್ಚಾದರು! ಅನಂತರ ವಿಜ್ಞಾನದ ಸ್ಥಾನ ತಂತ್ರವಿದ್ಯೆ (ಟೆಕ್ನಾಲಜಿ) ಆಕ್ರಮಿಸಹತ್ತಿತು. ವಿದ್ಯಾರ್ಥಿವೃಂದ ಕಣ್ಣುಪಟ್ಟಿಯ ಕುದುರೆಗಳಂತೆ ಎಂಜಿನಿಯರಿಂಗ್ ಕಾಲೇಜುಗಳಿಗೆ ಓಡ ಹತ್ತಿತು. ಈಗ ಅಲ್ಲಿಯ ಸೆಳೆತ ಕಡಿಮೆ ಆಗಿ ವೈದ್ಯಕೀಯಕ್ಕೆ ಅಥವಾ ವಾಣಿಜ್ಯಪತ್ತ ಪ್ರವೇಶಾರ್ಥಿಗಳು ಧಾವಿಸತೊಡಗಿದ್ದಾರೆ. ಗುಜರಾತದಲ್ಲಿ ವಾಣಿಜ್ಯ ಪದವೀಧರನಿಗೆ ಕೆಲಸ ಸುಲಭ.

ಆದರೆ ಕೇರಳದಲ್ಲಿ ಅಂತೂ ಸುಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆ ವಿಪರೀತ ಬೆಳೆದಿದೆ. ಅಲ್ಲಿ ಎಂಜಿನಿಯರುಗಳಂತೆ ಡಾಕ್ಟರುಗಳೂ ಉದ್ಯೋಗವಿಲ್ಲದೆ ಅಲೆಯುತ್ತಾರೆ. ಒಂದಾನೊಂದು ಕಾಲದಲ್ಲಿ ಮ್ಯಾಟ್ರಿಕ್ ಪಾಸಾದರೆ ಸರಿ ಅವರ ಇದುರು ಒಳ್ಳೆಯ ಚಾಕರಿ ಕೈಕಟ್ಟಿಕೊಂಡು ಕಾಯುತ್ತ ನಿಲ್ಲುತ್ತಿತ್ತು.! ಇಂದು ಎಂಥ ಪದವೀಧರನಿಗೂ ನಿರುದ್ಯೋಗದ ಸಂಕಟ ತಪ್ಪಿದ್ದಲ್ಲ! ಈ ಲಕ್ಷಣ ಪ್ರಗತಿಯದೋ ಅವ್ಯವಸ್ಥೆಯದೋ?

ಈ ಬಗೆಯ ನಿರುದ್ಯೋಗದ ಹುಟ್ಟು ಹಾವಳಿಗೆ ಒಂದು ಕಾರಣ ನಮ್ಮಲ್ಲಿಯ "ಉದ್ಯೋಗ"ದ ವ್ಯಾಖ್ಯೆ ಅಥವಾ ಕಲ್ಪನೆ. ಸರಕಾರಿ ಅಥವಾ ಖಾಸಗಿ ಕಂಪನಿ ಕಚೇರಿಗಳಲ್ಲಿಯ ಚಾಕರಿ, ತಪ್ಪದೇ ಕೈಸೇರುವ ತಿಂಗಳ ಸಂಬಳದ ವಿಚಾರ—ಇದೊಂದೆ 'ಉದ್ಯೋಗ'ವೆಂದು ನಾವು ಬ್ರಿಟಿಷರ ಕಾಲದಿಂದಲೂ ಭಾವಿಸುತ್ತಾ ಅದಕ್ಕಾಗಿ ಧಾವಿಸುತ್ತಾ ಬಂದಿದ್ದೇವೆ. ಸ್ವತಂತ್ರನಾಗಿ ಸ್ವಾವಲಂಬನೆಯಿಂದ ಉದ್ಯೋಗ ಕಲ್ಪಿಸಿಕೊಳ್ಳುವ ವಿಚಾರ ನಮ್ಮ ವಿದ್ಯಾವಂತರಲ್ಲಿ ಸುಳಿಯುವದೇ ಇಲ್ಲ. ನಮ್ಮ ವಿದ್ಯೆ ಬಿಡುಗಡೆಗಾಗಿ ಅಲ್ಲ ಬಂಧನಕ್ಕಾಗಿ!

ಬಹಳ ಹಿಂದಿನ ಮಾತು. ಡಾ. ಶಿವರಾಮ ಕಾರಂತರು ಒಮ್ಮೆ ತಮ್ಮ "ಬಾಲವನ"ದಲ್ಲಿ ಕೋಳಿ ಸಾಕಿದರು. ಈ ವ್ಯವಸಾಯ ನೋಡಿಕೊಳ್ಳಲು ಒಬ್ಬ ತರುಣನನ್ನು ನೇಮಿಸಿದರು. ಆ ತರುಣ ಈ 'ಕೋಳಿ ಸಾಕಣೆ'ಯ ತರಬೇತಿ ವ್ಯವಸ್ಥಿತವಾಗಿ ಪಡೆದನು. ಅವನ ತರಬೇತಿಗಾಗಿ ಡಾ. ಕಾರಂತರು ಯೋಗ್ಯ ಏರ್ಪಾಡು ಮಾಡಿಸಿದ್ದರು. ಅವರೆ ತರಬೇತಿ ಪಡೆದು ಬಂದ ಮೇಲೆ ಆತ ಸ್ವಂತದ **Poultry Farm** ತೆರೆಯುವ ಇಚ್ಛೆ ಮಾಡಲೇ ಇಲ್ಲ! ಆತನಿಗೆ ಈ ವ್ಯವಸಾಯದ ಸರಕಾರಿ ಪ್ರಚಾರ ವಿಭಾಗದಲ್ಲಿ 'ಬಿಳಿ ಕಾಲರಿನ" ಚಾಕರಿ ಬೇಕಾಯಿತು! 'ಕೋಳಿಸಾಹೇಬ' ನಾಗಲು ಆತ ಹೊರಟುಹೋದನು! ೩-೪ ದಶಕಗಳಿಂದಲೂ ಈ ಪ್ರವೃತ್ತಿ—'ಬಿಳಿ ಕಾಲರಿ'ನ ಚಾಕರಿಯ ಚಟ ಇಂದಿಗೂ ನಮ್ಮ ಯುವಜನಕ್ಕೆ ಬಿಟ್ಟಿಲ್ಲ! ಇದಕ್ಕೆ ಯಾರೇನು ಮಾಡಬೇಕು?

ಬೆಂಕಿಯೊಂದಿಗೆ ಯಾರೂ ಆಡುವುದಿಲ್ಲ. ಕತ್ತಿಯೊಂದಿಗೆ ಯಾರೂ ಚಿನ್ನಾಟ ನಡಿಸುವುದಿಲ್ಲ. ಅದರಂತೆ ಸತ್‌ಯೋಜನೆಯಲ್ಲಿ ದುರುದ್ದೇಶವಿಟ್ಟು ಕೈ ಹಾಕಿದವರು ಕೈ ಸುಟ್ಟು ಕೊಳ್ಳುವುದು ತಪ್ಪುವುದಿಲ್ಲ.

ಂ ಂ ಂ

ಬನಿಯಾ (ವ್ಯಾಪಾರಿ) ಬುದ್ಧಿಯಿಂದ ರಾಷ್ಟ್ರ ನಿರ್ಮಾಣವಾಗುವುದಿಲ್ಲ.

ಂ ಂ ಂ

ಕತ್ತಲೆಯನ್ನು ಆಗಿದು ಆಗಿದು ತೆಗೆದೊಗೆಯಲು ಬರುವದಿಲ್ಲ. ಅದನ್ನು ತೆಗೆದೊಗೆಯಲು ಬೆಳಕೇ ಬೇಕು. ಬೆಳಕು ಒಂದು ತಂದಿಟ್ಟರೆ ಪರಿಶ್ರಮವನ್ನೂ ಮಾಡಬೇಕಾಗಿಲ್ಲ.

ಂ ಂ ಂ

"MYFINCORP" Phone : 71169

MYSORE STATE FINANCIAL CORPORATION

(Established under the State Financial Corporations Act, 1951)

SRI SAILAM, No. 7, First Main Road,

GANDHINAGAR, **BANGALORE-9.**

Offers Financial assistance for establishing new industries, modernisation, renovation & expansion of existing industries — including modern Hotels & Restaurants, Transport Vehicles, Industrial estates, Cold storage etc.

— TERM LOANS.
— DEFERRED PAYMENT GUARANTEES.
— UNDERWRITING OF CAPITAL ISSUE.
— ATTRACTIVE LIBERAL TERMS.

Also —

"THE TECHNICIANS SCHEME" of financial assistance to qualified technician entrepreneurs taking up Small Scale Industrial enterprise on very liberal terms.

For details contact —

SECRETARY.

ಸಮಾಜ ಪುಸ್ತಕದ ತೆರೆದ ಪುಟ

(ಎಂಟನೇ ಪುಟದಿಂದ)

ಪತ್ತನ್ನೇ ನಮ್ಮ ವ್ಯಾಪಾರ ನುಂಗಿದೆ. ಗೆದ್ದಲು ಕಟ್ಟಿದ ಹುತ್ತ ಹಾವಿಗೆ ಆರಮನೆಯಾಗಿದೆ. ನಮ್ಮ ನೆಲದಲ್ಲಿ "ಧರ್ಮ ನೀತಿ" ಯಾವುದೂ ವ್ಯವಹಾರದಲ್ಲಿ ಸಜೀವ ಶಕ್ತಿ ಪಡೆದವುಗಳಲ್ಲ. ಅವುಗಳಿಲ್ಲ ಗ್ರಂಥಸ್ಥ. ಹಣ ಆದರ ಗಳಿಕೆಯಲ್ಲಿ ಮಾನ ವೀಯತೆಯ ಇರವು ಸ್ಪುಟನಾಗುವುದಿಲ್ಲ. ಮಡಿಸಿದ್ಧಾಂತಗಳನ್ನೇ ಆದರ್ಶವಾಗಿಟ್ಟು ಕೊಂಡವನ ಪಾಡೇನು? ದಿನವಿಡೀ ದುಡಿದು ನಾಲ್ಕು ಕಾಸು ತಂದವನು–ಅಗ್ಗ ಸುಗ್ಗಿಯ ಹಣ ಸಂಪಾದಿಸಿದವರ ಮಧ್ಯೆ ಬಾಳಿಯಾನೆ? ನಗರಗಳ ಮಹಲುಗಳ ಹಿಂದೆ ಬದುಕುವ ಒಂದು ಬಹು ಸಂಖ್ಯಾಕ ತಂಡವನ್ನು ಕಂಡಾಗ ಜೀವನವು ಎಷ್ಟು ಧಾರುಣ, ಎಷ್ಟು ಕ್ರೂರ ಎನ್ನಿಸುತ್ತದೆ.

ಆಕ್ಷಮ್ಯವಾದ ಈ ಶೋಷಣಾ ನೀತಿಯು ದಾರಿದ್ರ್ಯರನ್ನು ಕೆರಳಿಸಿದೆ. ಆವೇಶ ಭರಿತರಾದ ಇವರಲ್ಲಿ ಅನೇಕರು ಹಣದ ಅಭಿಲಾಷೆಗೆ ಮೂರುಹೋಗಿ "ಕುಲ ಕೆಟ್ಟರೂ ಚಿಂತಿಲ್ಲ ಸುಖಪಡೆಯಬೇಕು" ಎಂಬ ಹಂಬಲಕ್ಕೆ ಬಲಿಯಾಗಿಬ್ಬಾರೆ. ಕಳ್ಳತನ, ಹಾದರ ಮುಂತಾದ ಕುಕರ್ಮಗಳು ಬೆಳೆಯುವುದಕ್ಕೆ ಒಂದು ವರ್ಗದ ಶೋಷಣೆಯೇ ಮೂಲಹೇತುವಾಗಿದೆ. ಒಬ್ಬ ಶೋಷಕನು ಒಂದು ದೇವಾಲಯ ಕಟ್ಟುವ ಹೊತ್ತಿಗೆ ಈಜಿಗೆ ನೂರು ಹಾದರಗಿತ್ತಿಯವರನ್ನೂ ಸಾವಿರ ಕಳ್ಳರನ್ನೂ ಸೃಷ್ಟಿಸುತ್ತಾನೆ. ಕುಕರ್ಮಿಗಳೂ ಹಣದ ಹೊಳೆ ಹರಿಸಿ ಭರತ ಭೂಮಿಯನ್ನು ಪಾವನಗೊಳಿಸಿದ್ದಾರೆ. ಇಂತಹರೂ ಇಂದು ಸಂಭಾವಿತರ ಸಾಲಿನಲ್ಲಿ ನಿಂತಿದ್ದಾರೆ. ಮರ್ಯಾದೆಗೆ ಒದ್ದಾಡುವ ವ್ಯಕ್ತಿಗಳನೇಕರು 'ಅಲ್ಪ, ಜಿಪುಣ' ಎಂಬ ಅಸ್ವರ್ಥನಾಮ ಪಡೆದಿದ್ದಾರೆ. ಸಮಾಜದ ಗತಿ ಜಲನೆ ಎಷ್ಟು ಸೋಜಿಗ? ಹಿಂದೊಂದು ಕಾಲದಲ್ಲಿ ಒಬ್ಬನ ಗಳಿಕೆಯ ಮಾರ್ಗದ ಪಾವಿತ್ರ್ಯದ ಪ್ರಶ್ನೆ ಇತ್ತು. ಆತ ಯಾವುದರಲ್ಲಿ ಸಂಪಾದಿಸಿದ? ಇಂದು ಆ ಪರಿ ಕಳಚಿ ಬಿದ್ದಿದೆ. ಹೇಗೆ ಸಂಪಾದಿಸಲಿ? ಏನಂತೆ? ಐಶ್ವರ್ಯ ಲಕ್ಷ್ಮಿ ಆಸನ ಕೈಹಿಡಿದಿದ್ದಾಳೆ. ಆವನಿಗೆ ಯೋಗವಿದೆ. ಇಲ್ಲಿಗೂ ನಮ್ಮ ವೇದಾಂತವಿದೆ. ಪಾಪ ಭೀತಿ ಎಂದೋ ನಮ್ಮಿಂದ ಜಾರಿದೆ. ಸಾನಾಜಿಕ ಮಾನ ಮರ್ಯಾದೆಗೆ ಮಾನದಂಡ ಯಾವುದು?

'ಹುತ್ತವನ್ನು ಬಡಿದರೆ ಹಾವು ಸಾಯದಯ್ಯಾ' ಶರಣರ ಒಂದು ಅನುಭವ. ಸರಕಾರದಿಂದ ಈ ಎಲ್ಲಾ ಕೋಟಲೆಯ ಸಾವಿಗೆ ಹುತ್ತವನ್ನು ಬಡಿಯುವ ಹವ್ಯಾಸ ನಡೆಯುತ್ತಿದೆ. ಸಮಾಜದ ವರಿಷ್ಠ ವರ್ಗವೆಲ್ಲ ಶೋಷಣೆ ತಪಸ್ಸೆಂದು ಆಚರಿಸುತ್ತಿರುವಾಗ, ಕನಿಷ್ಠ ವರ್ಗವೂ ಅವರನ್ನು ಹಿಂಬಾಲಿಸಿದೆ. ಮಹಾಜನರ ಪಥವನ್ನೇ ಇದು ಅನುಸರಿಸಿದೆ. ಬದುಕುವುದಕ್ಕೆ ಏನನ್ನೂ ಮಾಡಬಹುದೆಂದಾಗ ನಮ್ಮ ಸದಾಚಾರ ಸಂಹಿತೆಗಳೆಲ್ಲವೂ ಪುಸ್ತಕದ ಬದನೆಕಾಯಿಗಳು. ಇತ್ತೀಚೆಗೆ ನಾವು ಕೇಳುತ್ತಿರುವ 'ನಕ್ಸಲ್‌ಬಾಡಿ'ಗಳ ಸೃಷ್ಟಿ ಯಾರಿಂದ ಆಯಿತು? ಭಾರತೀಯ ಪ್ರಜೆಗಳಲ್ಲಿ ಅಂತಹದೊಂದು ಪಂಗಡ ತಲಾತಲಾಂತರದಿಂದ ಬೆಳೆದು ಬಂದಿದೆ. ಕಳ್ಳರು, ಪಿಂಜಾರಿಗಳು, ಚಂಬಲ್ ದರೋಡೆಗಾರರು ಮುಂತಾದ ವರ್ಗ. ಒಂದು ಕಡೆ ಹೇರಳ ಧನಸಂಚಯವಾದುದನ್ನು ಕಂಡು ಕರುಬಿನಿಂದ ಅಂತಹ ಒಂದು ಪಂಗಡ ಸೃಷ್ಟಿಯೂಗಿದೆ. ಆದರ ಕ್ರೂರತೆಗೆ ನಾವು ಬೆಂಬಲ ಕೊಡಬೇಕೆ? ಪರಿಸ್ಥಿತಿಯನ್ನು ನೀತಿಮಾರ್ಗದಿಂದ ಎದುರಿಸಲಾರದೆ ಸಹನೆಯನ್ನು ಕಳಕೊಂಡ ವರ್ಗವಿದು. ಶೋಷಣೆಯಿಂದ ದ್ರವ್ಯ ಸಂಚಯಮಾಡಿದವನೂ, ಅದನ್ನು ಪೋಷಿಸುವ ಸಂಕಲ್ಪವೂ ಇದವನೂ ಇಬ್ಬರೂ ತಾತ್ವಿಕವಾಗಿ ಅನೀತಿವಂತರು. ಇವರ ಕಾಳಗದಲ್ಲಿ ನೀತಿವಂತರಾದ ಮಧ್ಯಮ ವರ್ಗವು ಕಂಗಾಲು ಸ್ಥಿತಿಗೆ ಬರುತ್ತದೆ. ಆವೇಶ ಭರಿತವಾದ ಇಂತಹ ಪಂಗಡಗಳು ನಿರ್ದೋಷಿಗಳನ್ನು ಬಿಡುಗಡೆಗೊಳಿಸುವ ಸಾಹಸಕ್ಕೆ ಕೈಯಿಕ್ಕುತ್ತವೆ. ಪ್ರಾಣಿ ಜೀವನದ ವಿಕಾಸದ ಹಾದಿಯಲ್ಲಿ ಗುಂಪು ಜೀವನಗಳ ಸಭ್ಯತೆಯ ಹಾದಿಗಳಲ್ಲಿ "ಬಲವಿದ್ದುದು ಬದುಕೀತು" ಎಂಬ ಸಿದ್ಧಾಂತ ಸಾರ್ವನೆಯೊದಂತೆ ಇಂದೂ ಆಗುತ್ತಿದೆ. ನೀತಿಯು ಬಲವುಳ್ಳದ್ದು. ಅದು ಬಡವಾಗುತ್ತಿದೆ. ಶಾಸನಗಳ ಬಲಹೀನತೆ ಮತ್ತು ಅಸಮರ್ಪಕತೆ ಗಳಿಂದಾಗಿ ಅಲ್ಪ, ಸ್ವಲ್ಪ ಭೂಮಿ ಮನೆ ಇದ್ದವನಿಗೆ, ಇಲ್ಲದವನಿಗಿಂತ ನೂರು ಮಡಿ ಕಂಟಕಗಳು ಹೆಚ್ಚಿನವೆ. ಶ್ರಮದಿಂದ, ನಾಳಿನ ಜಾಗ್ರತೆಯಿಂದ ಒಬ್ಬಾತ ಗಳಿಸಿದರೆ– ಆವನ ಮೇಲೆ ನೂರು ಪೈಗಳ್ಳರ ದೃಷ್ಟಿ ಬೀಳುತ್ತದೆ. ಇಲ್ಲದವನು, ಇದ್ದವನ ಸಂಪತ್ತನ್ನು ಯಾವ ಸಾಮಾಜಿಕ ನೀತಿಯ ನೆಲೆ, ನಿಯಮವಿಲ್ಲದೇ ಆಪಹರಿಸಬಹುದು ಎಂಬಷ್ಟರ ಮಟ್ಟಿಗೆ ನಮ್ಮ ಸಂಘಜೀವನ ಬೆಳೆದಿದೆ. ಹಳ್ಳಿಹಳ್ಳಿಯ ಭೂಮಾಲಿಕರಲ್ಲಿ ಆವರು ದಿನ ತಳ್ಳುವ ಸಾಹಸವನ್ನು ಕೇಳಬೇಕು. ಪ್ರಾಣಿ ಜೀವನದಲ್ಲಾ ಹಸಿವೆಯನ್ನು ಹಿಂಗಿಸಿಕೊಳ್ಳುವುದೇ ಸಾಹಸವಾಗಿದೆ. ಮನುಷ್ಯನೂ ಒಂದು ಪ್ರಾಣಿ ವರ್ಗಕ್ಕೆ ಸೇರಿದ ಸಮುದಾಯವಷ್ಟೆ. ಆವರೆ ಈ ವರ್ಗಕ್ಕೆ ಉಳಿದೆಲ್ಲ ವುಗಳಿಗಿಂತ, ಬುದ್ಧಿ, ಭಾವನೆ, ಜ್ಞಾನ ಮಿಗಿಲೆಂದು ಬಲ್ಲವರು ಹೇಳುತ್ತಾರೆ. ಬುದ್ಧಿ ಭಾವಗಳಿಗೆ ಸಂಸ್ಕಾರ ಒದಗಬೇಕಷ್ಟೆ. ಸಂಸ್ಕೃತಿಯ ಗಡ್ಡೆ ಸಂಜೆಮಲ್ಲಿಗೆಯ ಗಡ್ಡೆಯಂತೆ ಕಣ್ಣಿಗೆ ಕಾಣುವುದಿಲ್ಲ. ನಿರಿನ ಸಸಿ ಸಿಕ್ಕಿದಾಗ ಚಿಗುರೊಡೆಯುತ್ತದೆ. ವರ್ಷಕಾಲ ಬಂದೀತು. ಸಂಜೆಮಲ್ಲಿಗೆ ಚಿಗುರೀತು. ತೆರೆದ ಪುಟ ಮುಚ್ಚಿ ಕಾಲ ನಿರೀಕ್ಷಣೆ ಮಾಡೋಣ.

ಜದ್ದಿನಲ್ಲಿದ್ದಾಗ ರೀರೀಕ್ಕೆ ಆಗುವ ಕಷ್ಟವೆಂತೂ ಆಗಿಯೇ ತೀರುತ್ತದೆ. ಆದರೆ ಚಿತ್ರವು ಪೂರ್ತ ಆತ್ಮ ಭಾವನೆಯನ್ನು ಗ್ರಹಿಸಲು ತಯಾರಿರುತ್ತದೆ. ಮತ್ತು ಯೋಗಿಗೆ ಸಾಧಿಸದ್ದು ಒಪ್ಪೊಮ್ಮೆ ರೋಗಿಗೆ ಸಾಧಿಸಿ ಹೋಗುತ್ತದೆ.

ಂ ಂ ಂ

ಕೊಡುವವನಿಗೆ ಹರುಷ
ಪಡೆವವನಿಗೆ ಹರುಷ
ಜನಪ್ರಿಯ "ಪ್ರಕಾಶ"

★ ★

ಮೂವತ್ತು ವರ್ಷಗಳಿಗೂ ಮಿಕ್ಕಿ
ದೇಶದ ವಿವಿಧ ರಾಜ್ಯಗಳಲ್ಲಿ
—ತಾರತಮ್ಯ ತಿಳಿವ ಜನರಿಂದ
ಆದರಿಸಲ್ಪಟ್ಟಿವೆ—

ಪ್ರಕಾಶ ಬೀಡಿಗಳು

PRAKASHBEEDIES

ಎಲ್ಲ ಕಾಲಗಳಲ್ಲಿ ಎಲ್ಲ ಜನರಿಗೆ ಸೇವನೆಯ ಆನಂದವೀಯುತ್ತಿವೆ !

ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳನ್ನು ಕೋರುವ—

ಕೆ. ಎಂ. ಆನಂದ ಪ್ರಭು ಎಂಡ್ ಸನ್ಸ್

ಬಂದರ, ಮಂಗಳೂರು-1
ಫೋನ್: 3718

ಫ್ಯಾಕ್ಟರಿ: ಕೊಡಿಯಾಲ್‌ಬೈಲ್ ಮಂಗಳೂರು-3
ಫೋನ್: 3532

ಇಂದಿರಾ ಗಾಂಧಿ ಪ್ರಧಾನಿಯಾಗಿರುವದಿ ಯನ್ನು ಬಿತ್ತಿಸೆಯು ರೆಂದು ಕೇಳುವವನ್ನು ನಿನ ಮುಂದಿಗೆ—ಆದಕ್ಕೇನೇ ಆವರನ್ನು (ಎಂಟನೇ ಪುಟ ನೋಡಿ)

ಸ್ವಾತಂತ್ರ್ಯದ ಬೆಲೆ

(ಎಳನೀ ಪುಟದಿಂದ)

ಶೈಕ್ಷಣಿಕ ಬಿಕ್ಕಟ್ಟುಗಳು ಹೆಚ್ಚಿದಂತೆ ನಾಡಿನ ಸಾಮಾಜಿಕ ಮೌಲ್ಯಗಳು ಅವೃಷ್ಟಪೂರ್ವ ಸ್ರಮಾಣದಲ್ಲಿ ಅವಗುಣ ಹೊಂದಲಾರಂಭಿಸಿವೆ. ನಮ್ಮ ಪೂರ್ವಜರ ಸಾಮಾಜಿಕ ಜೀವನವು ಇಂತಹ ಕೀಳು ಸ್ಥಿತಿಗೆ ಹಿಂದೆಂದೂ ಇಳಿದಿರಲಿಲ್ಲ. ಇಂದು ಅನ್ಯಾಯವೆಂದೆನಿಸುವ ಜಾತಿಪದ್ಧತಿಯು ಗತಕಾಲದಲ್ಲಿ ಅತ್ಯುಪಯುಕ್ತ ಸಾಮಾಜಿಕ ಮೌಲ್ಯಗಳಲ್ಲಿ ಒಂದಾಗಿತ್ತು. ಒಂದು ಸಿರಿನಿಂದ ಜಾತಿ ಪದ್ಧತಿಯು ಅವ ಹೇಳನ ಮಾಡುತ್ತಾ ಮತ್ತೊಂದು ಸಿರಿನಿಂದ ಜಾತಿಯ ಹೆಸರಿನಲ್ಲಿ ಪರಸ್ಪರ ಭೇದಭಾವಗಳನ್ನು ತೋರುತ್ತಿರುವ ನಾವು ಗತಕಾಲದಲ್ಲಿ ಕರ್ನಾಟಕದಲ್ಲಿ ಹತ್ತು ಹಲವು ಬ್ರಾಹ್ಮಣರು ಶ್ರೇಷ್ಠ ಯೋಧರಾಗಿ, ದಂಡನಾಯಕರುಗಳಾಗಿ ರಾಜಸೇವೆ ಸಲ್ಲಿಸುತ್ತಿದ್ದರೆಂಬುದನ್ನೂ ಬ್ರಾಹ್ಮಣೇತರರು ಅಸಂಖ್ಯಾತ ಧರ್ಮಕಾರ್ಯಗಳನ್ನು ಮಾಡಿದ್ದರೆಂಬುದನ್ನೂ ತಿಳಿದುಕೊಂಡರೆ ನಮಗದು ಶ್ರೇಯಸ್ಕರ. ಅಂದು ಜಾತಿ ಪದ್ಧತಿಯು ಸಮಾಜದ ಬೆಳವಣಿಗೆಗೆ ಸೂಕ್ತವಾಗಿತ್ತು. ಇಂದು ಅದೇ ಪದ್ಧತಿಯು ನಮ್ಮ ಮುನ್ನಡೆಗೆ ಅಡ್ಡ ಬಂದಿದೆ. ಆದ ಕಾರಣ ಇಂದು ನಾವು ಆ ಪದ್ಧತಿಯನ್ನು ಕೈಬಿಟ್ಟು ನಮ್ಮ ಪ್ರಗತಿಗೆ ಸೂಕ್ತವೆನಿಸುವ ಹೊಸತೊಂದು ಸಮಾಜವನ್ನು ರೂಪಿಸಬೇಕಾದುದು ಅಗತ್ಯ. ವೈದಿಕ ಧರ್ಮವು ಅತಿಸಂಖ್ಯಾಕರಿಗೆ ಅನ್ಯಾಯವೆಸಗುತ್ತಿದ್ದುದರಿಂದ ಬೌದ್ಧ, ಜೈನ ಧರ್ಮಗಳು ಅಸ್ತಿತ್ವಕ್ಕೆ ಬಂದವು. ಆ ಎರಡು ಧರ್ಮಗಳ ಒಳ್ಳೆಯ ಧ್ಯೇಯಗಳನ್ನೆಲ್ಲ ಅಂಗೀಕರಿಸಿದುದರ ಫಲವಾಗಿ ಹಿಂದೂ ಧರ್ಮವು ಪುನಶ್ಚೇತನಗೊಂಡಿತು. ಹೀಗೆ ಗತಕಾಲದ ನಮ್ಮ ಸಮಾಜದಲ್ಲಿ ಎಷ್ಟೋ ಬಾರಿ ಹಳೆಯ ಸಂಪ್ರದಾಯಗಳು ಬಳಕೆ ತಪ್ಪಿ ಹೊಸ ಸಾಮಾಜಿಕ ಮೌಲ್ಯಗಳು ಹುಟ್ಟಿಕೊಂಡಿವೆ. ಇಂದು ನಡೆಯಬೇಕಾದುದೂ ಅಂತಹುದೇ ಒಂದು ಸಾಮಾಜಿಕ ಪುನರುಜ್ಜೀವನ. ಈ ಪುನರುಜ್ಜೀವನದ ಮುಂದಿನ ಗುರಿ ಸಾಮಾಜಿಕ ಸ್ವಾತಂತ್ರ್ಯ. ಅಂದರೆ ಇಂದಿನ ನಮ್ಮ ಸಾಮಾಜಿಕ ಮೌಲ್ಯಗಳಲ್ಲಿ ಯಾವುದು ವ್ಯಕ್ತಿಯ ಪೂರ್ಣ ಬೆಳವಣಿಗೆಗೆ ಧಾರ್ಮಿಕ ನಂಬಿಕೆಗಳಿಗೆ ಅಡ್ಡ ನಿಂತಿವೆಯೋ ಅವುಗಳ ಹಿಡಿತದಿಂದ ನಮ್ಮ ಸಮಾಜಕ್ಕೆ ಸ್ವಾತಂತ್ರ್ಯವನ್ನು ಒದಗಿಸಿ ಕೊಡುವುದು. ನಮ್ಮಲ್ಲಿ ವ್ಯಕ್ತಿ ಮತ್ತು ಧಾರ್ಮಿಕ ಸ್ವಾತಂತ್ರ್ಯಗಳ ಕುರಿತು ನ್ಯಾಯವಾದ ಮನೋಭಾವ ಹುಟ್ಟಿ ಬಂದರೆ ಮಾತ್ರ ನಾವು ಈ ಮಹತ್ಕಾರ್ಯವನ್ನು ಸಾಧಿಸಬಲ್ಲೆವು.

ರಾಷ್ಟ್ರೀಯ ನೆಲೆಯಲ್ಲೂ ನಮ್ಮ ನಾಡು ರೋಗಪೀಡಿತವಾಗಿಯೇ ನರಳುತ್ತಿದೆ. ಪ್ರಜಾಪ್ರಭುತ್ವದ ಈ ಯುಗದಲ್ಲೂ ಭಾರತೀಯರು 'ರಾಜಾ ಪ್ರತ್ಯಕ್ಷ ದೇವತಾ' ಎಂದು ನಾಡನ್ನಾಳುವವರನ್ನು ತಮಗೆ ನಿಲುಕದ ಉನ್ನತ ಸೀಕದಲ್ಲಿರಿಸಿ 'ಯಥಾ ರಾಜಾ ತಥಾ ಪ್ರಜಾ' ಎಂದು ಅವರ ತಪ್ಪುಗಳನ್ನು ತಾವೂ ಅತ್ಯುತ್ಸಾಹದಿಂದ ಅನುಕರಿಸುತ್ತಿದ್ದಾರೆ. ಇದು ದೇಶಕ್ಕೆ ಹಿತಕರವಲ್ಲ; ನಮ್ಮ ಪರಂಪರೆಗೆ ಹೊರಗಾದುದು. 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಎಂಬ ನಮ್ಮ ಪೂರ್ವಜರ ಹೇಳಿಕೆಯು ಅವರಿಗೆ ತಾಯ್ನಾಡಿನ ಮೇಲೆ ಇದ್ದ ಅನುಪಮ ಪ್ರೇಮವನ್ನು ಸ್ಪಷ್ಟಪಡಿಸುತ್ತದೆ. ತಮ್ಮ ನಾಡಿಗಾಗಿ ಮಡಿದ ನೂರಾರು ಯೋಧರ ಧೈರ್ಯ–ಸಾಹಸಗಳನ್ನು ಸ್ಮರಿಸುವ ಅಸಂಖ್ಯಾತ ವೀರಗಲ್ಲುಗಳು ದೇಶದ ಮೂಲೆಮೂಲೆಗಳಲ್ಲೂ ಕಾಣಸಿಗುತ್ತವೆ. ಆದರೆ ನಮಗಿಂದು ದೇಶಕ್ಕಾಗಿ ಮಡಿಯುವ ತ್ಯಾಗವನುನೋ ಭಾವಕ್ಕಿಂತಲೂ ದೇಶಕ್ಕೆ ದ್ರೋಹವೆಸಗದಿರುವಂತಹ ಸ್ಥಿರಪ್ರಜ್ಞೆಯ ಆವಶ್ಯಕತೆಯೇ ಹೆಚ್ಚಾಗಿದೆ. ವೈಯಕ್ತಿಕ, ಧಾರ್ಮಿಕ, ಸಾಮಾಜಿಕ ಸ್ವಾತಂತ್ರ್ಯಗಳೆಲ್ಲಕ್ಕಿಂತಲೂ ರಾಷ್ಟ್ರದ ಸ್ವಾತಂತ್ರ್ಯವು ಅತ್ಯುತ್ಕೃಷ್ಟವಾದುದೆಂಬುದನ್ನು ಎಲ್ಲರೂ ಒಪ್ಪಲೇಬೇಕು.

ಮೇಲೆ ಚರ್ಚಿಸಿರುವ (ವೈಯಕ್ತಿಕ, ಧಾರ್ಮಿಕ, ಸಾಮಾಜಿಕ, ರಾಷ್ಟ್ರೀಯ ಎಂಬೀ) ನಾಲ್ಕು ನೆಲೆಯ ಸ್ವಾತಂತ್ರ್ಯ ಮೌಲ್ಯಗಳನ್ನೂ ಉಪಯುಕ್ತ ಪರಿಮಾಣದಲ್ಲಿ ಅಳವಡಿಸಿಕೊಳ್ಳುವ ಮೊತ್ತವಾಗ ಶ್ಲೋಕ ರೂಪದ ಸಂಸ್ಕೃತ ಹಿತೋಕ್ತಿಯೊಂದು ನೆನಪಿಗೆ ಬರುತ್ತದೆ.—

"ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಂ ಜನಪದಸ್ಯಾರ್ಥೇ ಸ್ವಾತ್ಮಾರ್ಥೇ ಪೃಥಿವೀಂ ತ್ಯಜೇತ್॥" ಸ್ವತಂತ್ರ ವ್ಯಕ್ತಿಯೇ ಸ್ವತಂತ್ರ ರಾಷ್ಟ್ರದ ಆಧಾರ ಸ್ತಂಭ. ಆದರೆ ಒಬ್ಬ ವ್ಯಕ್ತಿಯ ಸ್ವಾತಂತ್ರ್ಯಕ್ಕಿಂತಲೂ ಅವನ ಕುಲದ ಸ್ವಾತಂತ್ರ್ಯವು ಹೆಚ್ಚು ಅಮೂಲ್ಯವಾದುದು. ಕುಲಸ್ವಾತಂತ್ರ್ಯ ಸಲುವಾಗಿ ವ್ಯಕ್ತಿಯು ತನ್ನ ಸ್ವಾತಂತ್ರ್ಯದ ಯಾವುದೇ ಮೌಲ್ಯವನ್ನು ಕೆಲವೊಮ್ಮೆ ಬಿಟ್ಟು ಕೊಡಬೇಕಾಗುವುದು. ಅದೇ ರೀತಿ ಒಂದು ಕುಲದ ಸ್ವಾತಂತ್ರ್ಯಕ್ಕಿಂತ ಗ್ರಾಮದ ಸ್ವಾತಂತ್ರ್ಯ ಮತ್ತು ಗ್ರಾಮದ ಸ್ವಾತಂತ್ರ್ಯಕ್ಕಿಂತ ಸಮಗ್ರ ರಾಷ್ಟ್ರದ ಸ್ವಾತಂತ್ರ್ಯ ಹೆಚ್ಚು ಅಮೂಲ್ಯವಾದುದು. ರಾಷ್ಟ್ರದ ಸಲುವಾಗಿ ಗ್ರಾಮದವರೂ ಗ್ರಾಮದ ಸಲುವಾಗಿ ಕುಲದವರೂ ಆಯಾ ನೆಲೆಯ ಸ್ವಾತಂತ್ರ್ಯದ ಯಾವುದೇ ಮೌಲ್ಯವನ್ನು ಆಗತ್ಯ ಬಿದ್ದಾಗ ಬಿಟ್ಟುಕೊಡುವುದೇ ನ್ಯಾಯ. ಇದು ಮೇಲೆ ಉದ್ಧರಿಸಿರುವ ಶ್ಲೋಕದ ಮೊದಲ ಮೂರು ಪಾದಗಳ ತಿರುಳು.

"ಸ್ವಾತ್ಮಾರ್ಥೇ ಪೃಥಿವೀಂ ತ್ಯಜೇತ್" ಎಂಬ ನಾಲ್ಕನೆಯ ಪಾದ ಪ್ರಸಕ್ತ ಲೇಖನಕ್ಕೆ ಅಸಂಗತ. ಆತ್ಮವು ಪರಮಾತ್ಮನೊಂದಿಗೆ ಐಕ್ಯಗೊಂಡು ಪುನರ್ಜನ್ಮಗಳ ಕಾಟದಿಂದ ವಿಮುಕ್ತನಾಗುವ ಸಂದರ್ಭ ಬಂದೊದಗಿದಾಗ ವ್ಯಕ್ತಿಯು ಈ ಲೋಕವನ್ನೇ ತ್ಯಜಿಸಲು ಸಿದ್ಧನಿರಬೇಕೆನ್ನುತ್ತದೆ ಈ ಪಾದ. ನಮ್ಮದು ವೈಜ್ಞಾನಿಕ ಯುಗ. ವಿಜ್ಞಾನ ಮತ್ತು ವಿಜ್ಞಾನಿಗಳ ಪರಂಪರ್ಯ ಮದಿಂದಾಗಿ ಪರಮಾತ್ಮನ, ಪರಲೋಕದ ಅಸ್ತಿತ್ವಕ್ಕೇ ಗಂಡಾಂತರ ಬಂದಂತಾಗಿದೆ! ಪರಮಾತ್ಮನು ಇರುವನೋ ಇಲ್ಲವೋ ಆ ಪರಮಾತ್ಮನಿಗೇ ಗೊತ್ತು! ಅಂದಮೇಲೆ ಪ್ರಸ್ತುತ ಲೇಖನದ ವಿಷಯಕ್ಕನುಗುಣವಾಗಿ ಆ ಪಾದವನ್ನು 'ರಾಷ್ಟ್ರ ಸ್ಯಾರ್ಥೇ ಮತಂ ತ್ಯಜೇತ್' ಎಂದು ತಿದ್ದಿಕೊಳ್ಳುತ್ತೇನೆ. ರಾಷ್ಟ್ರದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಸಲುವಾಗಿ ಆಗತ್ಯ ಬಿದ್ದಾಗ ನಾಡಿನ ಎಲ್ಲ ಧರ್ಮಗಳೂ ಯಾವುದೇ ಧಾರ್ಮಿಕ ಮೌಲ್ಯವನ್ನು ಬಿಟ್ಟುಕೊಡಲು ಸಿದ್ಧವಿರಬೇಕು.

ಇಂತಹ ತ್ಯಾಗ ಮನೋಭಾವವು ನಮ್ಮಲ್ಲಿ ಮೂಡಿಬಂದರೆ ನಾವೆಲ್ಲರೂ ಶ್ರೇಷ್ಠ ದೇಶಪ್ರೇಮಿಗಳಾಗುವೆವು ಎಂಬುದರಲ್ಲಿ ಸಂಶಯವಿಲ್ಲ. ಭಾರತವು ಪ್ರಗತಿಶೀಲ ರಾಷ್ಟ್ರವಾಗಿ ಮುನ್ನಡೆಯುವುದು ಎಂಬುದರಲ್ಲೂ ಸಂಶಯವಿಲ್ಲ.

HOTEL SATKAR

Boarding, Lodging & Restaurant

Behind Corporation Office,

9 MISSION ROAD

BANGALORE-27

Phone No.—
1 28337
2 29887

Grams:
HOST SATKAR

Vegetarian Cuisine

Attached Bath Rooms & Phones

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden
Quiet, Calm Atmosphere
Personalised Service.

ಅಹೋಲೋ ೧೦

ಮಾನವನು ಮಾಡಲು ಚಂದ್ರನೆಡೆ ದಾಳಿ
"ಶಶಿಧರನು" ಕಣ್ತೆರೆದ "ಹೂಂಕರಿಸಿ
ಗೂಳ!
ಮದನಜನಕನು ಬಂದು ಪೇಳಿದನುಗುಟ್ಟು
ಕಲಿಮಾನವನೇ ಶ್ರೇಷ್ಠ ಕಾಲವೇ ಕೆಟ್ಟು!

ತುಂಟತನ

ಮಾನವನ ಸಾಹಸಕೆ ಗಡಿಯುಂಟೆ ಮಗನೆ
ದೇವಲೋಕಕೂ ಭೀತಿ ನಿಜಕೂ ನಿನ್ನಾಣೆ!
ತಾರಾಂಗಣವ ಸೇರಿ ತುಂಟತನ ಪಾಪ!
ನೋಡಿದನು 'ಮಧು ಚಂದಿರನ ನಗ್ನ
ರೂಪ'!

ಪತಿ–ಪತಿಯರ ಜಗಳ

ಮಾತಿಗದು "ಹೂಂ"ಕಾರ ಗಂಭೀರ ನಡತೆ
ಪತಿಯ ಕೋಪಕೆ ಮದ್ದನರಿದಳಾ ವನಿತೆ!
ಮುಂದಹಾಸದ ಚಂದ್ರ ಮೂಡೆ
ತಂಪಾಯ್ತು
ಹೃದಯಗಳು ಒಂದಾಗಿ "ಇಳೆ ಸ್ವರ್ಗ
ವಾಯ್ತು"

—"ದೇವಚೇತನಂದನ", ಬಿಜಾಪುರ.

ನಮಗೆ ಒಳಗಿಂದ ಭಕ್ತಿಯ ನೀರು, ಹೊರಗಿಂದ ಪರಿಶ್ರಮದ ಬಿಸಿಲು ಸಿಕ್ಕರೆ ನಾವು ಸಹ ಗಿಡಮರಗಳಂತೆ ಪ್ರಫುಲ್ಲಿತರಾಗುವೆವು. ನಾವು ಪರಿಶ್ರಮವ ಕಡೆಗೆ ಜ್ಞಾನದ ದೃಷ್ಟಿಯಿಂದ ನೋಡುವದೇ ಇಲ್ಲ. ಆದ್ದರಿಂದ ಅದರಲ್ಲಿ ಬೇಸರವೆನಿಸುತ್ತದೆ. ಇಂಥವರಿಗೆ ಆರೋಗ್ಯ ಜ್ಞಾನಗಳೆರಡೂ ಸಿಗಬಾರದೆಂದು ದೇವರದೇ ಶಾಪವಿದೆ.

ಂ ಂ ಂ

ಸ್ವೇಚ್ಛೆ ಇಲ್ಲದೇ ಮಾಡುವವರಿಗೆ ತಾಪವಾಗುತ್ತದೆ. ಸ್ವೇಚ್ಛೆಯಿಂದ ಮಾಡುವವರಿಗೆ ಅದೇ ತಪವಾಗುತ್ತದೆ.

ಂ ಂ ಂ

ಜೀವನದಲ್ಲಿ ಭಾವನೆ ಇಲ್ಲದಿದ್ದರೆ ಅದು ಜೀವನವೇ ಅಲ್ಲ.

ಂ ಂ ಂ

ಲಕ್ಷ್ಮಿಯು ಎಲ್ಲಿರುತ್ತಾಳೆ? ವಿಷ್ಣುವಿನ ಹತ್ತಿರ. ಆದರೆ ನಾವು ಮಾತ್ರ ವಿಷ್ಣುವನ್ನು ಬದಿಗೆ ಸರಿಸಿ ಲಕ್ಷ್ಮಿಯೊಬ್ಬಳನ್ನೇ ಎಳೆಕೊಳ್ಳಲೆತ್ನಿಸುತ್ತೇನೆ.

ಂ ಂ ಂ

ಇಂದಿನ ಯುವಕರೇಕೆ ಹದಗೆಡುತ್ತಿದ್ದಾರೆ!

(ಆರನೇ ಪುಟದಿಂದ)

ತಲೆದೋರಿ, ಹದಗೆಟ್ಟು ಏನೇನೋ ಮಾಡಹೋಗುವುದು ಸ್ವಾಭಾವಿಕ. ಅಮೆರಿಕಾದ ಶಿಕ್ಷಣ ತಜ್ಞರೊಬ್ಬರು ಇಲ್ಲಿ ಬಂದಾಗ 'Though your living standard is lower than ours, the standard of happiness is higher here'–ಎಂದಿದ್ದಾರೆ. ಹಣದಲ್ಲಿ ನಾವು ಹಿಂದುಳಿದಿದ್ದರೂ ಸುಖದಲ್ಲಿ ಹಿಂದೆ ಬಿದ್ದಿಲ್ಲ–ಎಂದು ತಜ್ಞರೇ ಹೇಳುತ್ತಿದ್ದರೂ ನಮಗೆ ನಂಬಿಗೆ ಇಲ್ಲ. ಹೆಜ್ಜೆ ಹೆಜ್ಜೆಗೂ ಪರರನ್ನು ಅನುಸರಿಸಿ ಸುಖದ ಮೂಲಕ್ಕೇ ಕೊಡಲಿ ಇಡುತ್ತಿದ್ದೇವೆ. ಇದನ್ನು ಬಿಟ್ಟು ನೀತಿ, ಧರ್ಮ, ತ್ಯಾಗ–ಮುಂತಾದುವುಗಳಿಗೂ ಶಿಕ್ಷಣದಲ್ಲಿ ಅವಕಾಶವಿರುವಂತೆ ಮಾಡಬೇಕಾಗಿದೆ.

ಶಿಷ್ಯರ ಸಂಖ್ಯೆ :

ಡಾ। ಗಾರ್ಡನರ್ ಎಂಬೊಬ್ಬ ವಿಖ್ಯಾತ ಶಿಕ್ಷಣ ತಜ್ಞರು Higher Education for all means, higher education for none –(ಎಲ್ಲರಿಗೂ ಉಚ್ಚ ಶಿಕ್ಷಣವಾಗಬೇಕೆಂದು ಹೋದರೆ ಯಾರಿಗೂ ಉಚ್ಚ ಶಿಕ್ಷಣವೇ ಇಲ್ಲವೆಂದಾಗಬಹುದು)– ಎಂದು ಸ್ಪಷ್ಟವಾಗಿ ನುಡಿದಿದ್ದಾರೆ. ಪ್ರಜಾಪ್ರಭುತ್ವದ ಉದಾತ್ತ ತತ್ವದಂತೆ ಎಲ್ಲರಿಗೂ ಶಿಕ್ಷಣಾವಕಾಶ ಇರಬೇಕೆಂಬುದನ್ನು ಒಪ್ಪಲೇಬೇಕು. ಆದರೆ ಆ ಅವಕಾಶಕ್ಕೂ ಮಿತಿ ಇರಬೇಕು. ಹೈಸ್ಕೂಲು ಮಟ್ಟದ ವಿದ್ಯಾಭ್ಯಾಸ, ಯೋಗ್ಯತೆಗನುಗುಣವಾದ ಶಿಕ್ಷಣ– ಇವೆಲ್ಲ ಎಲ್ಲರಿಗೂ ಎಟಕುವಂತಿರಬೇಕು. ಆದರೆ ಉಚ್ಚ ಶಿಕ್ಷಣ, ತಾಂತ್ರಿಕ ಶಿಕ್ಷಣ, ವಿಶೇಷ ಶಿಕ್ಷಣ– ಇತ್ಯಾದಿಗಳೆಲ್ಲ ವಿದ್ಯಾರ್ಥಿಯ ಯೋಗ್ಯತೆ, ಆಭಿರುಚಿ, ಮೇಧಾಶಕ್ತಿ–ಇವನ್ನೆಲ್ಲ ಹೊಂದಿರಬೇಕು. ಪ್ರಾಯಕ್ಕೆ ತಕ್ಕ ದೇಹದ ತೂಕ, ಎತ್ತರ, ದಪ್ಪ, ಶಕ್ತಿ ಇಲ್ಲದಾತನನ್ನು ಕುಸ್ತಿಯ (Restling) ಉಚ್ಚ ಶಿಕ್ಷಣಕ್ಕೆ ಕಳಿಸುವುದು ಮೂರ್ಖತನವಾಗಬಹುದು. ಅದೇ ತರಸಾಕಷ್ಟುಮೇಧಾಶಕ್ತಿ ಇಲ್ಲದಾತನನ್ನು ಉಚ್ಚ ವಿದ್ಯಾಲಯ ಶಿಕ್ಷಣಕ್ಕೆ ಕಳಿಸುವುದೆಂದರೆ ದುಂಡು ತೂತುವಿನ ಮೂಲಕ ಚೌಕದತುಂಡುಗಳನ್ನು ತುರುಕಿಸಲುಹೊರಟಂತಾಗಬಹುದು. ಸಮತಾವಾದದ ತವರ್ಮನೆಯೂದ ರಶ್ಯಾ ದೇಶದಲ್ಲೂ ಉಚ್ಚ ಶಿಕ್ಷಣವನ್ನೆಲ್ಲರಿಗೂ ಕೊಡುತ್ತಿಲ್ಲ. ಮೇಲ್ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳ ನಂತರವೇ ಉಚ್ಚ ಶಿಕ್ಷಣಕ್ಕೆ ಶಿಷ್ಯರನ್ನರಲ್ಲಿ ಆರಿಸಲಾಗುತ್ತದೆ.

ಈ ವಿಚಾರದಲ್ಲಿ, ಜನಸಾಮಾನ್ಯರ ಯೋಗ್ಯತೆಯನ್ನಳೆಯುವ ಮನೋಭಾವನೆಯಲ್ಲೂ (Sence of values) ಬದಲಾವಣೆಯೊಗಬೇಕು. ಕಾಲೇಜಿಗೆ ಹೋಗದಾತ ಯೋಗ್ಯನಲ್ಲ; ಕೆಳದರ್ಜೆಯ ಆಟೆಂಡರ್ ಕೆಲಸಕ್ಕೂ ಪದವೀಧರ ಬಂದರೆ ಉತ್ತಮ; ಈ ತರದ ಮನೋಭಾವ ಬದಲಾಗಬೇಕು. ವ್ಯಕ್ತಿಯ ಕಾರ್ಯನಿರ್ವಹಣಾ ಶಕ್ತಿ, ಪ್ರಾಮಾಣಿಕತೆಗಳನ್ನು ನೋಡಿ, ಯೋಗ್ಯತೆಯನ್ನು ನಿರ್ಧರಿಸದೇಕಲ್ಲದೆ ಆತನ ಹೆಸರ ಮುಂದಿನ ಪದವೀಸೂಚಕ B. A., M. A., ಮುಂತಾದ ಅಕ್ಷರಗಳನ್ನಲ್ಲ. ಹೀಗಾದಾಗ, ಉಚ್ಚಶಿಕ್ಷಣಕ್ಕೆ ಅನರ್ಹನಾದವ ವಿಶ್ವವಿದ್ಯಾಲಯದಿಂದ ತಾನಾಗಿ ಹೊರಗುಳಿಯಬಹುದು. ಅಥವಾ ಹೊರಗುಳಿಸಲೂಬಹುದು. ಹೀಗೆ ವಿದ್ಯಾರ್ಥಿಗಳ ಸಂಖ್ಯೆ ಮಿತಿಯಲ್ಲುಳಿದಾಗ ಅಧ್ಯಾಪಕರಿಗಾಗಲಿ, ಆಡಳಿತ ಮಂಡಳಿಗಳಿಗಾಗಲಿ, ಪರಿಸ್ಥಿತಿಯನ್ನು ಹೆತ್ತೋಟಯಲ್ಲಿಟ್ಟುಕೊಳ್ಳಲು ಸಾಧ್ಯವಾಗಬಹುದು.

ಅನರ್ಹರಾದ ವಿದ್ಯಾರ್ಥಿಗಳಿಗೂ ಅಯೋಗ್ಯರಾದ ಉಪಾಧ್ಯಾಯರಿಗೂ ಪವಿತ್ರ ವಿದ್ಯಾಮಂದಿರಗಳಲ್ಲಿ ಒತ್ತಾಯದಿಂದ ಪ್ರವೇಶವನ್ನು ಮಾಡಿಕೊಡುತ್ತಿರುವ ಕಾರಣವೇ ಈಗಿನ ಹೆಚ್ಚಿನ ತಲೆನೋವುಗಳು ಮೂಡಿಬಂದಿವೆ. ಅಸಮರ್ಥ ಅಧ್ಯಾಪಕನು ಪಾಠ ಕಲಿಸುವ ಒಂದು ಕೆಲಸ ಬಿಟ್ಟು ಜಾತೀಯ ರಾಜಕೀಯ ಸಂಗಡಗಳನ್ನು ವಿದ್ಯಾರ್ಥಿಗಳಲ್ಲೂ ಹಿರಿಯರಲ್ಲೂ ನೂಡಿಸಿ, ಆತನೇ ದೊಡ್ಡ ದೊಡ್ಡ ಮುಷ್ಕರಗಳ ಸೂತ್ರಧಾರನಾಗುವುದೂ ಇವೆ ವಿದ್ಯಾರ್ಥಿ ಕಾನೂನುಭಂಗಗೊಳಿಸಿ; ಹಿಂಸಾಕೃತ್ಯ ನಡೆಸಿ, ಪೋಲಿಸರಿಂದ ದಸ್ತಗಿರಿ ಮಾಡಲ್ಪಟ್ಟರೂ ಕೆಲವೇಳೆ ಮೇಲಿನ ಸೂಚನೆಯಂತೆ ಕೋರ್ಟು ಕೇಸ್ ಹಿಂದೆಗೆಯಲ್ಪಡುವುದೂ ಇದೆ. ಹಾಗಾದಾಗ ಪ್ರತ್ಯಕ್ಷನಾಗಿಯೂ ಪರೋಕ್ಷನಾಗಿಯೂ ಶಿಸ್ತು ಕಾಯದೆ ಭಂಗಕ್ಕೆ ಪ್ರೋತ್ಸಾಹ ಕೊಟ್ಟಂತಾಗುವುದಿಲ್ಲವೇ? ಇದಲಾಗಿ, ಕಾನೂನಿನ ಮುಂದೆ ವಿದ್ಯಾರ್ಥಿಯೂಗಲಿ, ಶಿಕ್ಷಕನೇ ಆಗಲಿ, ಸಮಾನನಿರಬೇಕು. ಆಗ ಮಾತ್ರ ಯುವಕರು ಸರಿದಾರಿಗೆ ಬರುವ ಸಂಭವವಿದೆ.

ನಿರುದ್ಯೋಗ ಸಮಸ್ಯೆ :

ಯುವಕರು ಗೊತ್ತುಗುರಿಯಿಲ್ಲದೆ ತಲೆಗೆಡಿಸಿಕೊಳ್ಳುವುದಕ್ಕೆ ಇನ್ನೊಂದು ಪ್ರಧಾನ ಕಾರಣ ನಿರುದ್ಯೋಗ. ಹಿಂದುಳಿದ ದೇಶವಾದ ಭಾರತದಲ್ಲಿ ಮೂಡಬೇಕಾದ ಕೆಲಸ, ಸಾಧಿಸಬೇಕಾದ ಸುಧಾರಣೆ, ಆರ್ಥಿಕ ಪ್ರಗತಿ– ಇನ್ನೆಲ್ಲ ಧಾರಾಳ ಇದ್ದರೂ ಕೂಡ ವಿದ್ಯಾವಂತ ನಿರುದ್ಯೋಗಿಗಳಿರುವುದು– ನಮ್ಮ ಆಡಳಿತ ಸರಿದಾರಿಯಲ್ಲಿ ನಡೆಯುತ್ತಿಲ್ಲವೆಂಬುದಕ್ಕೆ ಪ್ರಧಾನಸೂಚಕ. ವಿದೇಶಗಳಿಂದ ಸಾಲ ತಂದ ಭಂಡವಾಳವೆಲ್ಲ ಲಾಭಗಳಿಸದ ಕೆಲವೆಲ್ಲ ಬೃಹತ್ಕೈಗಾರಿಕೆಗಳಲ್ಲಿ ಮುಳುಗಿಹೋಗಿವೆ. ಖಾಸಗೀ ಕೈಗಾರಿಕಾ ಕ್ಷೇತ್ರವನ್ನು ದಿನದಿನ ಕುಗ್ಗಿಸುತ್ತ ಬಂದುದರಿಂದ ಆ ಪ್ರಗತಿ ತನ್ನಷ್ಟಕ್ಕೇ ಕುಸಿದು ಬೀಳುತ್ತಿದೆ. ಕೋಟ್ಯಾವಧಿ ಭಂಡವಾಳ ಹಾಕಿದ ಕೆಲವು ಬೃಹತ್ಕೈಗಾರಿಕೆಗಳಲ್ಲಿ ಉತ್ಪಾದನೆ ಆರಂಭವಾಗುವ ಮೊದಲೇ ಕಾರ್ಮಿಕರ ಸಂಘ ಮೂಡಿಬಂದಿದೆ. ಆದರಿಂದಾಗಿ ಹಾಕಿದ ಭಂಡವಾಳ ಬೆಳೆದು ಹೊಸ ಹೊಸ ಕೈಗಾರಿಕೆಗಳು ಹರಡಿ ದೇಶದಲ್ಲಿ ಉದ್ಯೋಗಾವಕಾಶ ಹೆಚ್ಚಲು ಸಾಧ್ಯವಿಲ್ಲವೆಂದಾಗಿದೆ. ಹೆಜ್ಜೆ ಹೆಜ್ಜೆಗೆ ಹೊಗಳೆ ಹಾಡುತ್ತಿರುವ ಸಮತಾವಾದೀ ರಾಷ್ಟ್ರಗಳು, ಕೈಗಾರಿಕಾ ರಂಗದಲ್ಲಿ ಸಂಪು, ಸತ್ಯಾಗ್ರಹಗಳ ಮಾತೇ ಇಲ್ಲ; ಮಾತೆತ್ತಿದರೆ ಆತ ನಿರ್ನಾಮಗೊಳ್ಳುತ್ತಾನೆ ಎಂಬುದನ್ನು ಕಾರ್ಮಿಕರಾಗಲಿ, ಅವರ ಮುಖಂಡರಾಗಲಿ ಹೇಳುವುದನ್ನು ಯಾರೂ ಕೇಳಿಲ್ಲ. ಹಾಗಿಂದು ಅಲ್ಲಿ ಕೆಳಮಟ್ಟದ ಕಾರ್ಮಿಕನಿಗೂ ತುತ್ತತುದಿಯ ಸಂಸ್ಥೆಯ ಅಧಿಕಾರಿಗೂ ಒಂದಕ್ಕೆ ಇಪ್ಪತ್ತರ ವೇತನ ವ್ಯತ್ಯಾಸ ಇದೆ ಎಂಬುದನ್ನು ಮರೆಯಬಾರದು. ಮುಖ್ಯವಾಗಿ ನಮ್ಮ ದೇಶದ ಕಾರ್ಮಿಕರಿಗೂ ಅವರ ಮುಂದಾಳುಗಳಿಗೂ ದೇಶಪ್ರೇಮಕ್ಕಿಂತಲೂ ಹೆಚ್ಚಿನ ವಿದೇಶೀ ದೇಸರ ಮೇಲಿನ ಭಕ್ತಿ ಇರುವುದರಿಂದಲೇ ನಮ್ಮ ನಿರುದ್ಯೋಗ ಸಮಸ್ಯೆ ಇನ್ನಷ್ಟು ಗಂಭೀರವಾಗಲು ಕಾರಣವಾಗಿದೆ. ಇದಕ್ಕೆ ಮುಖ್ಯವಾಗಿ ಬಂಗಾಲದ ಇತ್ತೀಚಿನ ಜಗುಹೋಗುಗಳೇ ಉತ್ತಮ ನಿದರ್ಶನವಾಗಿದೆ. ಅಧಿಕಾರಾರೂಢರೂ, ಸಮಾಜ ಧುರೀಣರೂ ಈ ಅನರ್ಥವನ್ನು ದೂರಮಾಡಲು ಸರ್ವ ಪ್ರಯತ್ನ ಶೀಘ್ರ ಕೈಕೊಳ್ಳಬೇಕಾಗಿದೆ.

ದೇಶದ ಯುವ ಜನರ ನಿರುದ್ಯೋಗಕ್ಕೆ ಇನ್ನೊಂದು ಮುಖ್ಯ ಕಾರಣ ಈಗಿನ ನಮ್ಮ ವಿದ್ಯೆಯ ಪದ್ಧತಿಯಲ್ಲಿರುವ ಮೂಲ ದೋಷ. ಗಾಂಧೀಜಿಯವರು ಹೇಳುತ್ತಿದ್ದ ಮೂಲ ಶಿಕ್ಷಣ ಪದ್ಧತಿಗೆ ತಿಲಾಂಜಲಿಯಿತ್ತು ಹಳ್ಳಿಯವರನ್ನೆಲ್ಲ ಡೆಲ್ಲಿಯತ್ತ ಸಾಗಿಸಲು ನಾವು ಶಿಕ್ಷಣ ಕೊಡುತ್ತಿದ್ದೇವೆ. ಈಗಿನ ಶಿಕ್ಷಣ ಕ್ರಮದಿಂದ ಕುರ್ಚಿ ಮೇಜುಗಳ ಮೇಲೆ ಕೂತೇ ಕೆಲಸಮಾಡಿಸಬಲ್ಲ [White color jobs] ಪದವೀಧರರ ಸೃಷ್ಟಿಯೊಗುತ್ತಿದೆ. ಹಾಗಾಗಿ ವಿಶೇಷ ಶಿಕ್ಷಣ ಪಡೆದ ವೈದ್ಯಕೀಯ ತಾಂತ್ರಿಕ ವಿಜ್ಞಾನಗಳ ಪ್ರಯೋಜನ ಹಳ್ಳಿಗರಿಗೆ ಒದಗುತ್ತಿಲ್ಲ. ಕೃಷಿ ಪದವೀಧರರು ಸಹ ಹಳ್ಳಿಯಲ್ಲಿರಲೊಪ್ಪದೆ ಮಾಸಿಕ ವೇತನದ ಕೆಲಸಕ್ಕೇ ಶರಣುಹೋಗಬಯಸುತ್ತಾರೆ. ಹಾಗಾಗಿ ಹಳ್ಳಿಗಳಲ್ಲಿ ಕೆಲಸಕ್ಕೆ ಜನವಿಲ್ಲ. ನಗರದ ಜನಗಳಿಗೆ ಕೆಲಸವಿಲ್ಲ ಎಂದಾಗಿದೆ. ಇದೀಗ ತಿರುಗಿ ಬೀಳಬೇಕು ಹಳ್ಳಿಗಳ ಪರಿಸ್ಥಿತಿ ಉತ್ತಮಗೊಂಡು ನಗರದವರನ್ನು ಆಕರ್ಷಿಸುವಂತಿರಬೇಕು. ಸ್ವಯಂ ಉದ್ಯೋಗಕ್ಕೆ ಅವಕಾಶ ಮೂಡಿಕೊಡುವ ಶಿಕ್ಷಣ ಯುವಕರಿಗೆ ದೊರಕಬೇಕು. ಪಳ್ಳಿಯ ಹಳೆಯ ಉದ್ಯೋಗಗಳು ಹೊಸ ವಿಜ್ಞಾನದ, ತಾಂತ್ರಿಕ ಜ್ಞಾನದ ಬೆಳಕಿನಲ್ಲಿ ಮುಂದು ಬರುವಂತಾಗಬೇಕು. ಹಳ್ಳಿಯ ಕಮ್ಮಾರ, ಕುಂಬಾರ, ಅಗಸ ಮುಂತಾದವರು ಹೊಸ ತಾಂತ್ರಿಕ ಜ್ಞಾನವನ್ನು ಬಳಸಿಕೊಂಡು ಸುಧಾರಿತ ಕೆಲಸಗಾರರಾಗಿ ಹೆಚ್ಚಿನ ಲಾಭಗಳಿಸುವಂತಾಗಬೇಕು. ಹಾಗಾದಾಗ ಸೂತ್ರ ಈ ನಿರುದ್ಯೋಗ ಸಮಸ್ಯೆ ಕೆಲಮಟ್ಟಿಗಾದರೂ ನಿವಾರಣೆಯೊಗಬಹುದು.

ಈ ತರದಲ್ಲಿ ಹಲವು ಕಡೆಗಳಿಂದ ಸಮಸ್ಯೆಯ ವಿವಿಧ ಮುಖಗಳನ್ನು ನಾವು ಸರಿಪಡಿಸಿ ಹೊರಟಾಗ ತಾನಾಗಿಯೇ ಯುವಕರೂ ಸರಿದಾರಿಗೆ ಬರಬಹುದು. ಇಂದಿನ ಅಶಿಸ್ತು, ಕ್ರೂರ ಪ್ರವೃತ್ತಿಗಳು ಕಡಿಮೆಯೊಗಬಹುದು. ದೇಶದ ಪ್ರಗತಿ ಇಂದಿನ ಯುವಕರ ಕೈಯಲ್ಲಿ, ನಾಳೆ ಉತ್ತಮ ಮಟ್ಟದಲ್ಲಿ ಸಾಗುವಂತಾಗಬಹುದು.

ಮುಂದುವರಿದು

With best compliments from

M/s. DURGA TEA & GENERAL STORES

&

M/s. DURGA BHAVAN

BAGALKOT

Phone No. 187

ತರದಿಂದ ಗಾಂಧಿ ಪ್ರಧಾನವಾಗಿರುವದು ಯನ್ನು ಶೆತ್ತಿಸಿದು ಕೊಂಡು ಕೇತುವನ್ನು ನಿನ ಮುಂದಿಗೆ–ಅವಕ್ಕೆನೇ ಆವರನ್ನು (ಎಂಟನೇ ಪುಟ ನೋಡಿ)

ನಲ್ವತ್ತೇಳನೇ ಇಸವಿಯನ್ನು ನಾವಿಂದು ನೆನಸಿದಾಗ

(ಐದನೇ ಪುಟದಿಂದ)

ಡುತ್ತಾರೆ. ಅವಿಭಜಿತ ಭಾರತವು ಅನ್ಯವಸೆ ಆನಾಹುತ ಹಾಗೂ ಅಂತಃಕಲಹಕ್ಕೆ ಆಹ್ವಾನವೀಯುತಿತ್ತು. ಕ್ಯಾಬಿನೆಟ್ ನಿಶಿನ ಯೋಜನೆಯೂ ಹೆತ್ತುವರ್ಷಗಳ ಬಳಿಕ ಸಂಯುಕ್ತ ಸರಕಾರ ಪದ್ಧತಿಯನ್ನು ಕುದಿಯುವ ಕುಲುಮೆಗೆ ಭಾರತವನ್ನು ಎಸೆದು ಬಿಡುತ್ತಿತ್ತು. ಇಂದಿನ ಪರಿಸ್ಥಿತಿಯನ್ನು ನೋಡುವಾಗ, 1937—39ರ ಅವಧಿಯಲ್ಲಿ ಪ್ರಾಂತೀಯ ಸ್ವಾಯತ್ತತೆಯಿಂದಾಗಿ ಮುಸ್ಲಿಮರಲ್ಲುಂಟಾದ ಮನೋಭಾವ ನೆನೆಸಿದಾಗ, ಸ್ವತಂತ್ರ ಭಾರತದಲ್ಲಿ ಪ್ರಾದೇಶಿಕ ಅಭಿಮಾನ ಹಾಗೂ ಭಾಷಾಭಿಮಾನವ ನಾನಾ ಹೋರಾಟಗಳನ್ನು ನೆನೆಸಿದಾಗ, ಅವಿಭಜಿತ ಭಾರತ ಸರಕಾರವು ಬಹಳ ಕಾಲ ಉಳಿಯುವುದು ಸಂಶಯಾಸ್ಪದನಾದ ವಿಷಯವೆಂದು ಹೆಡ್ಸನ್ ಹೇಳಿರುವರು. 1935 ಮತ್ತು 1946ರ ಅವಧಿಯಲ್ಲಿ ಹಾಗೂ 1942 ಮತ್ತು 1946ರ ಅಂತರ್ ಅವಧಿಯಲ್ಲಿ ನಡೆದು ಹೋದ ಅನೇಕ ಘಟನೆಗಳು ಭಾರತೀಯ ಜನಪಂಗಡಗಳನ್ನು ಒಂದೇ ಸರಕಾರದಡಿಯಲ್ಲಿ ಒಟ್ಟುಗೂಡಿಸುವ ಕಾರ್ಯವನ್ನು ತೀರಾ ಕಷ್ಟಗೊಳಿಸಿದ್ದುವು. ಕಾಂಗ್ರೆಸ್ ಪಕ್ಷವು ತನ್ನ ಮತಗಳ ಸಂಖ್ಯಾಬಲವನ್ನು ಸ್ವಂತ ಸಾಧನೆಗಾಗಿ ಉಪಯೋಗಿಸಿದುದು ಮೊದಲ ಆಘಾತವಾಗಿತ್ತು. ಕಾಂಗ್ರೆಸ್ ಪಕ್ಷವು 1939ರಲ್ಲಿ ರಾಜೀನಾಮೆ ಕೊಟ್ಟದ್ದು, ಕ್ರಿಪ್ಸ್ ಕೊಡುಗೆಯನ್ನು ನಿರಾಕರಿಸಿದ್ದು, "ಕ್ವಿಟ್ ಇಂಡಿಯಾ" ಚಳುವಳಿಯನ್ನು ಪ್ರಾರಂಭಿಸಿದ್ದು ಇದರ ಚಳುವಳಿಯನ್ನು ಅನೇಕ ವರ್ಷಗಳಿಗೆ ಹಿಂದೊಯ್ದಿತು. ಇದರ ವೈರಿಗಳ ಬೆಳವಣಿಗೆಗೆ ಸಹಾಯ ನೀಡಿತು. ಗಾಂಧೀಯರ ನೇತೃತ್ವವು ಹಿಂದೆಂದೂ ಆಗದಷ್ಟು ಅಸಂಗತವಾಯಿತು " ಎಂದು ಹೊಡ್ಸನ್ ಬರೆಯುವರು.

ಭಾರತೀಯ ಮುಂದಾಳುಗಳು ಬ್ರಿಟಿಷ್ ಮುತ್ಸದ್ದಿತನಕ್ಕೆ ಸಮನಾದ ಮುಂದಾಳುಗಳಾಗಿದ್ದಿಲ್ಲ. ಭಾರತೀಯ ಮುಂದಾಳುಗಳು ರಾಜಕೀಯ ಚದುರಂಗದ ತೀಕ್ಷ್ಣವಾದ ಜಟಿಲತೆಯಲ್ಲಿ ಚತುರ ಆಟಗಾರರಾಗಿದ್ದಿಲ್ಲ. ಮುಖ್ಯವಾಗಿ ಕಾಂಗ್ರೆಸಿನ ಮುಂದಾಳುಗಳು ದೂರದೃಷ್ಟಿಯುಳ್ಳವರಾಗಿದ್ದಿಲ್ಲ. ಮುಸ್ಲಿಂಲೀಗ್ ಹಾಗೂ ಇದರ ಮುಂದಾಳುಗಳಾದ ಜಿನ್ನಾರವರು ಯಾವಾಗಲು ಕಾಂಗ್ರೆಸ್ಸಿನ ಪ್ರತಿಕ್ರಿಯೆಯನ್ನು ಮುಂದಿನ ಹೆಜ್ಜೆಯಿಡುತ್ತಿದ್ದರು. ಮೂವತ್ತು ವರ್ಷಕಾಲ ಕಾಂಗ್ರೆಸ್ ಪಕ್ಷದ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ರೂಪಾಗಿ ಏಕಮೇವ ಮುಂದಾಳುಗಳಾದ ಮಹಾತ್ಮಾ ಗಾಂಧಿಯವರೂ ಸಂದರ್ಭೋಚಿತವಾದ ಮುಂದಾಳುತನ ನೀಡಿಲ್ಲ, ಸಮರ್ಥ ಮುಂದಾಳಾಗಿ ವರ್ತಿಸಿಲ್ಲವೆಂಬುದು ಹೆಡ್ಸನ್‌ರವರ ವಾದವಾಗಿದೆ.

1947ರಲ್ಲಿ ಅನೇಕ ಮಂದಿ ಬ್ರಿಟಿಷ್ ಜನರಿಗೂ ಹಾಗೂ ಭಾರತೀಯರಿಗೂ ಭಾರತ ಉಪಖಂಡದ ವಿಭಜನೆಯು ದುರದೃಷ್ಟಕರವೆಂದು ತೋರಿತೇನೋ ನಿಜ. ಹಿಂದಾವ ಭಾರತೀಯ ಚಕ್ರವರ್ತಿ ಮೂಡಿರದ ಐಕ್ಯಮತವನ್ನು ಬ್ರಿಟಿಷರು ಉಂಟು ಮಾಡಿದ್ದರು. ಅದು ಬ್ರಿಟಿಷರ ಹೆಮ್ಮೆಯ ಮೂರ್ತಾಗಿತ್ತು ಒಂದು ಬಲಿಷ್ಠವಾದ ಕೇಂದ್ರ ಸರಕಾರಕ್ಕೊಳಪಟ್ಟ ಆಡಳಿತೆಯನ್ನೂ ಒಂದೇ ತೆರನಾದ ನ್ಯಾಯ ಪದ್ಧತಿಯನ್ನೂ ಬ್ರಿಟಿಷ್ ಆಡಳಿತೆಯುಳುಂಟುಮಾಡಿತ್ತು. ವಿಶಾಲವಾದ ದೇಶದಲ್ಲಿ ಏಕಪ್ರಕಾರವಾದ ಸಾರಿಗೆ ಸಂಪರ್ಕವನ್ನೂ ಆರ್ಥಿಕ ವ್ಯವಹಾರಗಳನ್ನೂ ಬ್ರಿಟಿಷ್ ಆಳ್ವಿಕೆಯು ಸ್ಥಾಪನೆ ಮಾಡಿತ್ತು. ಆದರೆ ಕೊನೆಯ ಗಳಿಗೆಯಲ್ಲಿ ಯಾವ ಸಂಘಟಣೆಯನ್ನು ಮಾಡಿತ್ತೋ ಯಾವ ಒಕ್ಕಟ್ಟನ್ನು ಸ್ಥಾಪಿಸಿದ್ದಿತೋ, ಅದರಲ್ಲಿಯೇ ಬ್ರಿಟಿಷ್ ಸರಕಾರ ಬಿರುಕುಗಳನ್ನು ಮಾಡಿತ್ತು. ಲೋರ್ಡ್ ಲಿನ್‌ಲಿತ್‌ಗೋ ಹಾಗೂ ಲೋರ್ಡ್ ವೇವಲ್ಲರು ದೇಶ ವಿಭಜನೆ ಮಾಡುವ ಯೋಜನೆಗೆ ವಿರುದ್ಧವಾಗಿದ್ದರು. ಕೊನೆಯ ಬ್ರಿಟಿಷ್ ವೈಸರಾಯ್ ಲೋರ್ಡ್ ಮೌಂಟ್ ಬೇಟನ್‌ರೂ ಅವರ ಅಂತಿಮ ನಿರ್ಣಯದ ಕೆಲವು ವಾರಗಳ ಹಿಂದೆ ತಮ್ಮ ವರದಿಯಲ್ಲಿ ಬ್ರಿಟಿಷ್ ಸರಕಾರಕ್ಕೆ "ಹುಚ್ಚು ಪಾಕಿಸ್ಥಾನ"ದ ಬಗ್ಗೆ ಬರೆದಿದ್ದರು. ಇಂದು ಭಾರತ-ಪಾಕಿಸ್ಥಾನ ಸರಕಾರಗಳು ಬಹಳ ಹಣವನ್ನು ಜನಹಿತ ಕಾರ್ಯಗಳಿಗಾಗಿ ಖರ್ಚುಮಾಡುವ ಬದಲು ರಕ್ಷಣೆಗಾಗಿ ವೆಚ್ಚಮಾಡುತ್ತಿರುವುದನ್ನು ನೋಡುವಾಗ ದೇಶವನ್ನು ವಿಭಜಿಸಿದುದು ಬ್ರಿಟಿಷರ ಕಾರ್ಯವು ದುರಾಲೋಚನೆ ಹಾಗೂ ಅಪಾಯಕಾರಿಯಾದ ಕಾರ್ಯವೆಂದು ಕಾಣುವುದು. ಹಾಗಾದರೆ

ಒಂದು ಜಾನಪದ ಕತೆ

ಲೇಖಕರು: ಶ್ರೀ ಶಿವಮುಂಜೆಸರಾರಿ.

ನಿಲೂರ ದಾರಿಯಿಂದ ತುಂಬು ಪ್ರಾಯದ ಯುವತಿಯೊಬ್ಬಳು ಬಂದಳು. ಹೊನ್ನೂರ ದಾರಿಯಿಂದ ಒಬ್ಬ ಯುವಕನು ಆಗಮಿಸಿದನು. ಎರಡು ದಾರಿಗಳು ಕೂಡಿದ್ದ ಜೌಕದಲ್ಲಿ ಅವರಿಬ್ಬರೂ ಒಟ್ಟಾದರು. ಮುಂದಿನ ಹೆದ್ದಾರಿಯಲ್ಲಿ ಒಂದಾಗಿ ಸಾಗಿದರು. ಯುವಕನ ಹೆಗಲ ಮೇಲೆ ಒಂದು ಬರಿದಾದ ಮಣ್ಣಿನ ಮಡಕೆಯಿತ್ತು. ಇನ್ನೊಂದು ಬಗಲಲ್ಲಿ ಹುಂಜವಿತ್ತು. ಒಂದು ಕೈಯಲ್ಲಿ ಊರುಗೋಲು—ಮತ್ತೊಂದು ಕೈಯಲ್ಲಿ ಆಡಿನ ಕುತ್ತಿಗೆಗೆ ಹಾಕಿದ್ದ ಹಗ್ಗದ ಕೊನೆಯಿತ್ತು. ಆವನು ಆಡಿನ ಮರಿಯನ್ನು ಎಳೆಯುತ್ತಾ ಸಾಗಿದ್ದನು.

ಅಂತಹ ಹಾಳು ಕಾರ್ಯವನ್ನು ಸರಿಯಾಗಿ ಹಾಗು ಸಮರ್ಥವಾಗಿ ತಪ್ಪಿಸಲು ಸಾಧ್ಯವಾಗುತ್ತಿತ್ತೇ? ಈ ಪ್ರಶ್ನೆಯು "ಆದರೆ .....ಹೋದರೆ"ಗಳ ಹಾದಿಯಲ್ಲಿಯೇ ಹಾದುಹೋಗುತ್ತಿದೆ. ಬ್ರಿಟಿಷ್ ಪರಿಹಾರವು ಬಹಳ, ಬಹಳ ತಡವಾಗಿ ಬಂದಿತು. ಬ್ರಿಟಿಷರು ಭಾರತೀಯರಿಗೆ ಅಧಿಕಾರವನ್ನು ಕೆಲವು ವರ್ಷಗಳ ಹಿಂದೆಯೇ ವರ್ಗಾಯಿಸುತ್ತಿದ್ದರೆ ಈ ದುರಂತದ ದಾರಿಯನ್ನು ತಪ್ಪಿಸ ಬಹುದಿತ್ತೆಂದು ಹೊಡ್ಸನ್ ಬರೆಯುವರು.

ಒಂದೇ ದಾರಿಯಿಂದ ನಡೆಯುತ್ತಿದ್ದ ಅವರಿಬ್ಬರಿಗೂ ಮುಂದಿದ್ದ ದಟ್ಟವಾದ ಕಾಡನ್ನು ಹಾದು ಹೋಗಬೇಕಿತ್ತು. ಕಾಡಿನ ಅಂಚನ್ನು ಮುಟ್ಟಿದ ತಕ್ಷಣ ಆ ಯುವತಿ ಬೆಚ್ಚಿ ಬಿದ್ದವಳಂತೆ ನಿಂತು ಬಿಟ್ಟಳು.

"ಬಾರಲ್ಲ, ಯಾಕೆ ನಿಂತು ಬಿಟ್ಟೆ?" ಎಂದ ಯುವಕ.

"ನನಗೆ ಭಯವಾಗುತ್ತಪ್ಪ."

"ಭಯ ಯಾಕೆ?"

"ಈ ನಿಬಿಢ ಕಾಡಿನೊಳಗಿಂದ ಹಾದು ಹೋಗುವಾಗ ನೀನೆಲ್ಲಾದರೂ ನನ್ನನ್ನು ಹಿಡಿದು ಮನ ಬಂದಂತೆ ವರ್ತಿಸಿದರೆ...ಆಗ, ನಾನೇನು ಮಾಡುವಂತಿದೆ?"

"ಎಂತಹ ವಿಚಿತ್ರ ಹುಡುಗಿ ನೀನು! ನನ್ನ ಹೆಗಲ ಮೇಲೊಂದು ಮಡಕೆ, ಬಗಲಲ್ಲೊಂದು ಹುಂಜ, ಕೈಯಲ್ಲೊಂದು ಕೋಲು, ಮತ್ತೊಂದರಲ್ಲಿ ಆಡಿನಮರಿ—ಇಷ್ಟಿಲ್ಲವನ್ನೂ ಹೊತ್ತು ನಡೆಯುತ್ತಿರುವ ನಾನು ನಿನಗೇನು ಮಾಡುವಂತಿದೆ? ಹೆದರಬೇಡ, ಬಾ ನನ್ನಜ್ಜಿ."

"ಇಲ್ಲ. ನನಗೆ ನೀಬಿಕೆಯೊಗುವುದಿಲ್ಲಪ್ಪ, ಒಂದು ಕೆಲಸ ನೀನು ದೊಣ್ಣೆಯನ್ನು ನೆಲದಲ್ಲಿ ಊರಿಟ್ಟು, ಆಡಿನ ಮರಿಯನ್ನು ಅದಕ್ಕೆ ಕಟ್ಟಿಹಾಕಿ, ಹುಂಜವನ್ನು ನೆಲದ ಮೇಲಿರಿಸಿ, ಮಡಕೆಯನ್ನು ಅವರ ಮೇಲೆ ಕವಚಿ ಇಟ್ಟು ಬಿಟ್ಟರೆ, ಆನಂತರ ನೀನು ಮನ ಬಂದಂತೆ ವರ್ತಿಸಲೂ ಬಹುದು." ಎಂದು ನಾಚುತ್ತಾ ನುಡಿದಳಾಕೆ.

ಹೊನ್ನೂರ ಯುವಕನಿಗೆ ಈಗ ಮಾತ್ರ ಮಾತು ಅರ್ಥವಾಯಿತು, 'ಅಯ್ಯೋ, ಇದು ನನ್ನ ಪೆದ್ದು ತಲೆಗೆ ಹೊಳೆಯಲೇ ಇಲ್ಲವಲ್ಲಾ' ಎಂದವನು ಮನಸ್ಸಿನಲ್ಲೇ ಅಂದುಕೊಂಡನು.

ನಿಬಿಢ ಅರಣ್ಯವನ್ನು ಪ್ರವೇತಿಸಿದ ನಂತರ, ಅವನು ದೊಣ್ಣೆಯನ್ನು ನೆಲದ ಮೇಲೆ ಊರಿಟ್ಟು, ಆಡಿನ ಮರಿಯನ್ನು ಅದಕ್ಕೆ ಕಟ್ಟಿ ಹಾಕಿದನು. ಹುಂಜವನ್ನು ನೆಲದ ಮೇಲಿರಿಸಿ, ಮಡಕೆಯನ್ನು ಆದರ ಮೇಲೆ ಡಬ್ಬು ಹಾಕಿದನು. ಆ ಬಳಿಕ ಯುವತಿ ಹೆದರಿದ್ದನ್ನೇ ಅವನು ಹೂಡಿ ಮುಗಿಸಿದನು.

ತುಸು ಹೊತ್ತಿನ ಬಳಿಕ ಅವರಿಬ್ಬರೂ ನಿಧಾನವಾಗಿ ಕಾಡಿನಿಂದ ಹೊರಬಿದ್ದು ತಮ್ಮ ತಮ್ಮ ದಾರಿ ಹಿಡಿದು ಮುಂದೆ ಸಾಗಿದರು.

THE BHARATH MOTOR SERVICE

Maidan III Cross Road

MANGALORE-1

(Phone : 3446)

We provide special buses at moderate charges for the conveyance of marriage, excursion and tourist parties.

P. S: **Special concession allowed for students' educational tours.**

With best compliments from

U. SADIYA

LICENSED ELECTRICAL CONTRACTORS

UDIPI

S. Kanera

++++

POWER LIGHT & I. P. SETS INSTALLATION.

Published by K. H. Shetty at the Navayuga Press, Udipi, S. India.

ಬಂದು ಬಹಳ ದಿವಸವಾಯ್ತು!

ಬಂದು ಬಹಳ ದಿವಸವಾಯ್ತು
ಮರಳಬೇಕು ಮನೆಗೆ—
ತಂದೆ ತಾಯಿ ಕಾಯುತ್ತಿದ್ದರು,
ನಡೆವೆ ಬೀಳ್ಕೊಡೆನಗೆ!

ದಾರಿ ಬಹಳ ದೂರವಿಹುದು,
ಕಟ್ಟಕೊಂಡೆ ಬುತ್ತಿ,
ಕತ್ತಲಾದರಿದೋ ಕೈಯ–
ಲಿಹುದು ಬೆಳಕ ಬತ್ತಿ!

ಂ ಂ ಂ

ಗುಡಿಸಿದಷ್ಟು ಕಸವು ಹೆಚ್ಚು,
ಗುಡಿಸುವಂಥ ಹುಚ್ಚು–
ನಿದ್ದೆಯಲ್ಲಿ ನೋದುತಿದ್ದ
ಕನಸಿದೆಷ್ಟ ಮೆಚ್ಚು!

ಎಚ್ಚೆರಾಗಿ ಸುತ್ತು ಮುತ್ತು
ನೋಡಿ ಸಂಜೆ ಹೊತ್ತು!
ದಾರಿ ನಡೆಯಲಿಹುದು ಇನ್ನೂ,
ಸೇರೆ ಮನೆಯ ಗುತ್ತು!

ಬಂದು ಬಹಳ ದಿವಸವಾಯ್ತು,
ಮರಳಬೇಕು ಮನೆಗೆ,
ತಂದೆ ತಾಯಿ ಕಾಯುತ್ತಿದ್ದರು
ಮುದ್ದನೀಯಲೆನಗೆ!

—ಜಿ. ಆರ್. ಪಾಂಡೇಶ್ವರ್

ಜಾನಪದ ಕತೆ

ಇಬ್ಬರು ದಡ್ಡರು ಕತ್ತಲೆ ಕೋಣೆಯೊಂದರಲ್ಲಿ ಕುಳಿತು ಶರಾಬು ಕುಡಿಯುತ್ತಿದ್ದರು. ಆವರಲ್ಲಿ ಒಬ್ಬನು ಇನ್ನೊಬ್ಬನೊಡನೆ—"ಗೆಳೆಯಾ, ನೀನು ಯಾಕೆ ಇಷ್ಟು ಮೌನವಾಗಿದ್ದಿ?" ಎಂದು ವಿಚಾರಿಸಿದನು.

"ಅಲ್ಲಾ, ನಾನು...., ಒಂದು ವೇಳೆ ನಾನು ಸತ್ತು ಹೋದರೆ ಅನಂತರ ಏನಾಗ ಬಹುದು ಎಂದು ಯೋಚಿಸುತ್ತಿದ್ದೇನೆ."

"ಆಗುವುದೇನು? ಸ್ಮಶಾನದಲ್ಲಿ ಹೊಂಡ ತೋಡಿ ನಿನ್ನನ್ನು ಅದರಲ್ಲಿರಿಸುತ್ತಾರೆ."

"ಆದು ನನಗೂ ಗೊತ್ತು. ಅನಂತರ ಏನಾಗುವುದು?"

"ಅನಂತರ? ಆನಂತರ ಮಣ್ಣು ತುಂಬಿ ಹೊಂಡವನ್ನು ಮುಚ್ಚಿ ಬಿಡುತ್ತಾರೆ."

"ಅದು ನನಗೂ ಗೊತ್ತು. ಆ ಬಳಿಕ ಏನಾಗುತ್ತದೆ?"

"ಆ ಬಳಿಕ?" ಅವನು ತುಸು ಯೋಚಿಸಿದ ನಂತರ 'ಹಾಂ, ಆ ಬಳಿಕ ನಿನ್ನ ಗೋರಿಯ ಮೇಲೆ ಹುಲುಸಾದ ಹುಲ್ಲು ಬೆಳೆಯುವುದು. ನೆರೆ ಹೊರೆಯವರ ದನಕರುಗಳು ಬಂದು ಅವನ್ನು ಮೇಯುವವು.'

"ಏನಂದೆ?" ಅವನ ಮುಖ ಕಪ್ಪೇರಿತು. "ನೆರೆಮನೆಯವನ ದನಕರು? ತಡೆ, ನಾನೀಗಲೇ ಹೋಗಿ ಅವನ್ನು ಸರಿ ಮಾಡುತ್ತೇನೆ. ಅಷ್ಟು ಧೈರ್ಯವೇ ಅವನಿಗೆ"

ಮುಂದೆ ಏನಾದರೂ ಹೇಳುವುದಕ್ಕೆ ಮುಂಚೆಯೇ ಅವನು ಸಿಟ್ಟಿನಿಂದ ಸಿಡಿಯುತ್ತಾ, ಮೂಲೆಯಲ್ಲಿದ್ದ ದೊಣ್ಣೆಯನ್ನೆತ್ತಿಕೊಂಡು ನೆರೆಮನೆಯ ಕಡೆ ಧಾವಿಸಿದನು.

[ಶ್ರೀ ಶರದ ಜೋಶಿ ಮತ್ತು ರಾಣಾ ಪ್ರತಾಪ ಸಿಂಹ ಅವರ ಸಂಗ್ರಹದಿಂದ]

—ಶಿಮುಂಜೆ ಪರಾರಿ

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

Ex. C. 7/1970. O.S. 133/1965.

ಶಂಕರ ರಾವ್ —ಅಜಿದಾರ

ಸೋಮಪ್ಪ ಗೌಡ ಕೂಡಾ—ಎದ್ರಿರು

1ನೇ ಎದ್ರಿ— ಸೋಮಪ್ಪ ಗೌಡ, ಅಪ್ಪಣ್ಣ ಯಾನೆ ಕಾಂತು ಗೌಡರ ಮಗ, ಬೆಳ್ತಂಗಡಿ ತಾಲ್ಲೂ ಒಡಿಲ್ನಾಳ ಗ್ರಾಮದ ವಳಿಕ್ಕೋಡಿ.

ಇವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದ್ರೆ—

ಮೇಲ್ಕಂಡ ಅಮ್ಲಜ್ಞಾರಿಯಲ್ಲಿ ಅಜಿದಾರರು ದಾಕ್ಲು ಮಾಡಿದ ಯೇಲಂ ಯಿಸ್ತಿಹಾರಿನ ಶರತ್ತುಗಳನ್ನು ತಿರ್ಮಾನಿಸುವರೆ ಮೇಲ್ಕಂಡ ಅಮ್ಲಜ್ಞಾರಿಯು ತಾರೀಕು 27.8.1970ಕ್ಕೆ ಯಿಟ್ಟಿರುವುದರಿಂದ ಆದ್ದ ಆಕ್ಷೇಪಣೆಗಳಿದ್ದಲ್ಲಿ ಸದ್ರಿ ದಿನ್ನ ಮೇಲ್ಕಂಡ ಕೋರ್ಟು ಮುಂದೆ ಬೆಳಿಗ್ಗೆ 11 ಗಂಟೆಗೆ ಬಂದು ಹಾಜರಾಗಿ ಉದಪಾಸಿಕೊಳ್ಳತಕ್ಕದ್ದು. ತಪ್ಪಿದ್ರೆ ಏಕಪಕ್ಷವಾಗಿ ತೀರ್ಮಾನಿಸಲಾದೀತುಯೆಂಕ ಈ ನೂಟಿಲಿಕ ತಿಳಿಸೋನಾಗಿಯದೆ.

(Sd.) B. ISHWARA BHAT
Advocate for Petitioner.

ಪುತ್ತೂರು, ತಾ.7-8-70.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. No. 53/70

ನಲಿಕಿಂಜ ಕಾನಾರ್ —ವಾದಿ

ಮತ್ತು

ನಾರಾಯಣ ಭಂಡಾರಿ ಕೂಡಾ—ಪ್ರತಿವಾದಿರು

1. ನಾರಾಯಣ ಭಂಡಾರಿ, ತಿಪ ಭಂಡಾರಿ ಅಲಿಯ, ಕೊಡವೂರು ಗ್ರಾಮದ ಮಲ್ಪೆ.

ವಾದಿಯು ಪ್ಲೆಂಟ್ A ಕಿಡ್ಯೂಲು ಕ ಟ್ಟಿಗ್ಗಣ ಸ್ವಾಧೀನ ಕೇಳಿಯೂ ಬಾಡಿಗೆ ಬಾಕಿ ಹಣ್ಣಿಗಳ್ಳಿ ವಸ್ಸೂರೆ ಕೇಳಿಯೂ ದಾಖಲು ಮಾಡಿದ ಮೇಲಿನ ದಾವೆಯು 1ನೇ ಪ್ರತಿವಾದಿಯು ನೋಟೀಸಿನ ಬಗ್ಗೆ 26.8.70ಕ್ಕೆ ಇಟ್ಟಿದೆ. ಸದ್ರಿ ಪ್ರತಿವಾದಿಯು ಸದ್ರಿ ದಾವೆಯಲ್ಲಿ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಫಾಟೆ 11ಕ್ಕೆ ಹಾಜರಾಗುವರೆ ತಪ್ಪಿದ್ದಲ್ಲಿ ಆತನ ಸ್ಥೈರು ಹಾಜ್ರಿಯಿಂದ ಸದ್ರಿ ದಾವೆಯು ತೀರ್ಮಾನಿಸಲ್ಪಡುವದು.

By Court Order

(Sd.) GRATIAN C. REGO
Pleader for Plaintiff

ಉಡುಪಿ, ತಾ. 6.8.70.

ಂ ಂ ಂ

ದುರ್ಜನತೆಯೆಲ್ಲವು ದುರ್ಬಲತೆಯೊಗದೆ.

ಂ ಂ ಂ

ಒಳ್ಳೆಯ ಪುಸ್ತಕವು ಒಂದು ಮಹಾನ್ ಆತ್ಮದ ಅಮೂಲ್ಯ ಜೀವನ ರತ್ನ.

ಂ ಂ ಂ

ಕಷ್ಟವು ಹೃದಯವ ಪರೀಕ್ಷೆಯೊಗಿದೆ.

ಂ ಂ ಂ

ಸುಧಾರಣೆಯು ದಾನಶೀಲತೆಯಂತೆ ಮನೆಯಿಂದಲೇ ಸುರು ಆಗಬೇಕು.

ಂ ಂ ಂ

ಮದುವೆ ಹಾಗೂ ವಿಶೇಷ ಸಮಾರಂಭಗಳ,
ವೈವಿಧ್ಯಪೂರ್ಣ ಬಟ್ಟೆಬರೆಗಳಿಗಾಗಿ

ಗಜಾನನ ಕ್ಲಾತ್ ಸ್ಟೋರ್ಸ್

ತೆಂಕಪೇಟೆ, ಉಡುಪಿ ದ. ಕ.

ಸಂದರ್ಶಿಸಲೇ ಬೇಕಾದ ಅಚ್ಚುಮೆಚ್ಚಿನ ಜವುಳಿ ಅಂಗಡಿ

ಫೋನ್:
ಚಿಲ್ಲರೆ ಮಾರಾಟದ ಅಂಗಡಿ– 431
ರವುಂ ಮಾರಾಟದ ಅಂಗಡಿ– 481

ಸ್ವಾತಂತ್ರ್ಯ ದಿನೋತ್ಸವದ
ಹಾರ್ದಿಕ ಶುಭಾಶಯಗಳು!

ಉಡುಪಿಗೆ ಬಂದಾಗ
ಮನರಂಜನೆಯ ಸಮಸ್ಯೆ ನಿಮಗಿಲ್ಲ!

ಅತ್ಯುತ್ತಮ ಜಲಚಿತ್ರಗಳನ್ನು ಪ್ರದರ್ಶಿಸುವ
ಎರಡು ಶ್ರೇಷ್ಠ ದರ್ಜೆಯ ಚಿತ್ರಮಂದಿರಗಳು
ನಿಮ್ಮ ಚೇಸರವನ್ನು ನೀಗಿಸಲು ಇಲ್ಲಿವೆ.

ಅಲಂಕಾರ್ (ಫೋನ್: 327) ಆಸ್ಪತ್ರೆ ರಸ್ತೆ

ಕಲ್ಪನಾ (ಫೋನ್: 437) ಉಪೇಂದ್ರಬಾಗ್

ಕುಂದಾಪುರದ ನವೀಕೃತ ಭವ್ಯ ಚಿತ್ರಮಂದಿರ—

ಗೀತಾಂಜಲಿ

ಮ್ಯಾನೆಜರು:
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಎಸ್. ಆರ್. ಬಿಲ್ಡಿಂಗ್ಸ್, ಉಡುಪಿ (ದ. ಕ.)

ಸ್ವಾತಂತ್ರ್ಯ ದಿನೋತ್ಸವದ ಶುಭಾಶಯಗಳು!

ಹೋಟೆಲ್ ಪ್ರಶಾಂತ್

ಮೂರುತಿ ವೀಥಿಕಾ, ಉಡುಪಿ, ದ. ಕ.

ಚಾ ಕಾಫಿ ಹೋಟೆಲ್

ರುಚಿ ರುಚಿಯಾದ ತಿಂಡಿ ತಿನಸುಗಳಿಗೆ
ಒಮ್ಮೆ ಸಂದರ್ಶಿಸಿ ಅನುಭವ ಪಡೆಯಿರಿ.

ಪ್ರೊಪ್ರೈಟರ್: ಕೆ. ವಿ. ಕಾಮತ್.

ಮೊನ್ನೆಲ್ಲೇಳು

ಇಂದಿರಾ ಗಾಂಧಿ ಪ್ರಧಾನಿಯಾಗಿರುವದು ಯಾಸ್ಸು ಕಿತ್ತಿಸೆದು ಕೆಲಸು ಕೇಳುವಷ್ಟು ಸ್ನೇಹ ಮಂಡಿಗೆ—ಅವಕ್ಕೆನೇ ಅವರನ್ನು (ಎಂಜಿನಿಯರ್ ಅಳಿಯ ಜಾಹೀರಾತು)

ಸಮೃದ್ಧಿ ಸಾಧನೆಗೆ
"ಆಧುನಿಕ ದೇಗುಲಗಳ ನಿರ್ಮಾಣ"

ಲೇಖಕರು: ಡಾ। ಕೆ. ಎಲ್. ರಾವ್,
ಕೇಂದ್ರ ವಿದ್ಯುತ್–ನೀರಾವರಿ ಶಾಖೆ ಸಚಿವರು.

ನೀರಾವರಿ ಮತ್ತು ವಿದ್ಯುತ್ ಅಭಿವೃದ್ಧಿಗೆ ಭಾರತದ ಸ್ವಾತಂತ್ರ್ಯ ಅನುಪಮ ಕಾಣಿಕೆ ಸಲ್ಲಿಸಿರುವುದು ಮಹತ್ತರ ವಿಷಯವಾಗಿದೆ. ಸ್ವಾತಂತ್ರ್ಯ ಪೂರ್ವದ 50ವರ್ಷಗಳಲ್ಲಿದ್ದ ನೀರಾವರಿ ಅಭಿವೃದ್ಧಿಯು ಸ್ವಾತಂತ್ರ್ಯಾನಂತರ ಕಾಲುಶತಮಾನದಲ್ಲಿ ಎರಡುಪಟ್ಟು ಹೆಚ್ಚಾಗಿದೆ. ಸ್ವಾತಂತ್ರ್ಯಪೂರ್ವದ 50ವರ್ಷಗಳ ಅವಧಿಯಲ್ಲಿ 2ಕೋಟಿ ಎಕರೆ ಭೂಮಿ ನೀರಾವರಿ ಸೌಲಭ್ಯ ಪಡೆದಿದ್ದರೆ ಸ್ವಾತಂತ್ರ್ಯಾನಂತರ 4 ಕೋಟಿ ಎಕರೆ ಪ್ರದೇಶಕ್ಕೆ ನಿಸ್ತರಿಸಿದೆ.

ವಿದ್ಯುತ್ ಉತ್ಪಾದನೆಯದೂ ಇದೇ ಕತೆ. ಸ್ವಾತಂತ್ರ್ಯಪೂರ್ವದ ಅರ್ಧಶತಮಾನದಲ್ಲಿ ಕೇವಲ 20ಲಕ್ಷ ಕಿಲೋವಾಟ್ ವಿದ್ಯುತ್ ಉತ್ಪಾದನೆಮಾಡಲಾಗುತ್ತಿತ್ತು. ಈಗ ಇದಕ್ಕೆ ಏಳುಪಟ್ಟು ವಿದ್ಯುತ್ತನ್ನು ಉತ್ಪಾದಿಸಲಾಗುತ್ತಿದೆ. ಇವರಿಂದ ನಮ್ಮ ಆರ್ಥವ್ಯವಸ್ಥೆಯ ಮೇಲೆ ತೀವ್ರ ಪ್ರಭಾವ ಬೀರಿದೆ.

ಮಿಕ್ಕೆಲ್ಲ ಕ್ಷೇತ್ರಗಳಿಗಿಂತಲೂ ವಿದ್ಯುತ್—ನೀರಾವರಿ ಕ್ಷೇತ್ರ ಜನಸಂಖ್ಯಾ ಏರಿಕೆಯಿಂದ ಪ್ರಭಾವಿತವಾಗುತ್ತದೆ. ಹಿಂದಿನ 25ವರ್ಷಗಳ ಅವಧಿಯಲ್ಲಿ 10ಕೋಟಿ ಜನಸಂಖ್ಯಾ ಏರಿಕೆಯಾಯಿತು. ಆದರೆ ಕಳೆದ 25ವರ್ಷಗಳಲ್ಲಿ 20ಕೋಟಿಯಷ್ಟು ಜನಸಂಖ್ಯೆ ಹೆಚ್ಚಿದೆ. ಮುಂದಿನ 25ವರ್ಷಗಳಲ್ಲಿ 35 ಕೋಟಿಯಷ್ಟು ಜನಸಂಖ್ಯೆ ಹೆಚ್ಚಾಗುವ ಸಂಭವವಿದೆ. ಎಂದರೆ 21ನೇ ಶತಮಾನದ ಆರಂಭವಲ್ಲಿ ಭಾರತದ ಜನಸಂಖ್ಯೆ ಈ ಶತಮಾನದ ಆರಂಭವಲ್ಲಿದ್ದ ಜನಸಂಖ್ಯೆಯ ನಾಲ್ಕು ಪಟ್ಟಾಗುತ್ತದೆ.

ಇಂದು ನಾವು 10ಕೋಟಿ ಟನ್ ಆಹಾರಧಾನ್ಯಗಳನ್ನು ಬೆಳೆಯುತ್ತಿದ್ದೇವೆ. ಈ ಶತಮಾನದ ಅಂತ್ಯದಲ್ಲಿ 20ಕೋಟಿ ಟನ್ ಆಹಾರ ಉತ್ಪಾದಿಸಬೇಕಾಗುತ್ತದೆ. ಇವನ್ನು ಸಾಧಿಸಲು ಭಾರತದ ನೀರಾವರಿ ಸೌಲಭ್ಯ ದ್ವಿಗುಣವಾಗಬೇಕಾಗುತ್ತದೆ. ಎಂದರೆ ಮುಂದಿನ 25ವರ್ಷಗಳಲ್ಲಿ ಪ್ರಸಕ್ತ ನೀರಾವರಿಗೊಳಗಾಗಿರುವ 4.04 ಕೋಟಿ ಹೆಕ್ಟೇರ್ ಪ್ರದೇಶವು 8.09 ಕೋಟಿ ಹೆಕ್ಟೇರ್ ಪ್ರದೇಶಕ್ಕೆ ವಿಸ್ತರಿಸುವಂತೆ ಮಾಡಬೇಕಾಗುತ್ತದೆ.

ವಿದ್ಯುತ್ ಸರಬರಾಜು ಹೆಚ್ಚಿಸುವ ಅಗತ್ಯ ತೀವ್ರವಾಗಿದೆ. ನೀರಾವರಿಗಿಂತಲೂ ತ್ವರಿತವಾಗಿ ವಿದ್ಯುತ್ ಸರಬರಾಜನ್ನು ವಿಸ್ತರಿಸಬೇಕಾಗಿದೆ. ಈಗ ದೇಶದಲ್ಲಿ 1.5 ಕೋಟಿ ಕಿಲೋವಾಟ್ ವಿದ್ಯುತ್ ಸರಬರಾಜಿದೆ. ವಿದ್ಯುತ್ತಿನ ಸರಾಸರಿ ಬಳಕೆಯು ಮುಕ್ತಜೀವನ ಮಟ್ಟದ ಕನಿಷ್ಠ ಮಿತಿಗಿಂತಲೂ ಕಡಿಮೆಯಿದೆ.

21ನೇ ಶತಮಾನದ ಆರಂಭಕಾಲದಲ್ಲಿ ಭಾರತದ ಜನಸಂಖ್ಯೆಗೆ ಬೇಕಾಗುವ ಕನಿಷ್ಠ ಮಟ್ಟದ ವಿದ್ಯುತ್ ಸರಬರಾಜು 24 ಕೋಟಿ ಕಿಲೋವಾಟ್! ದೇಶ ಎದುರಿಸುತ್ತಿರುವ ದೊಡ್ಡ ಹಾಗೂ ಇತರ ಮಿತಿಗಳಿಂದಾಗಿ ಭಾರತವು ಈಗಿನ ವಿದ್ಯುತ್ ಉತ್ಪಾದನೆಯು ಹತ್ತು ಪಟ್ಟಾಗುವಂತೆ ಎಂದರೆ 15ಕೋಟಿ ಕಿಲೋವಾಟ್ ಗುರಿ ಸಾಧಿಸುವಂತೆ ನೋಡಿಕೊಳ್ಳಬೇಕು.

ಅರ್ಧಭಾಗದಷ್ಟು ಜಲ ಸಂಪನ್ಮೂಲವು ಭೂಮಿಯಲ್ಲಿ ಅಂತರ್ಗತವಾಗಿದೆ. ಈ ಜಲಸಂಪತ್ತನ್ನು ಭೂಮಿಯ ಮೇಲೆ ತಂದು ಬಳಸಲು ಮಿತವ್ಯಯಕಾರಿಯೂ ಮಾರ್ಗ ವೆಂದರೆ ವಿದ್ಯುತ್‌ಬಳಕೆ.

ಇಂದು ಗ್ರಾಮ ವಿದ್ಯುದೀಕರಣ ಕಾರ್ಯಕ್ರಮವು ಸುಮಾರು ಒಂದು ಲಕ್ಷ ಗ್ರಾಮಗಳಿಗೆ ವಿಸ್ತರಿಸುವ ಹಂತಕ್ಕೆ ಬಂದಿದೆ. ಇನ್ನೂ 4.7ಲಕ್ಷ ಗ್ರಾಮಗಳಿಗೆ ವಿದ್ಯುತ್ತನ್ನು ವಿಸ್ತರಿಸಬೇಕಾಗುತ್ತದೆ. ಈ ಕಾರ್ಯವನ್ನು ಈ ಶತಮಾನದೊಳಗೆ ಸಾಧಿಸಲು ಶ್ರಮಿಸಬೇಕಾಗಿದೆ. ಈ ಕಾರ್ಯ ಸಾಧನೆಗೆ ಸುವ್ಯವಸ್ಥಿತವಾದ ದಕ್ಷ ವಿನ್ಯಾಸ ಸಂಸ್ಥೆ ಆತ್ಯಗತ್ಯ. ಇದರಿಂದ ಕೇಂದ್ರ ಜಲ–ವಿದ್ಯುತ್ ಆಯೋಗದ ಪ್ರಾಮುಖ್ಯತೆ ಗೋಚರವಾಗುತ್ತದೆ.

ಕಳೆದ 25ವರ್ಷದಲ್ಲಿ ವಿದ್ಯುತ್ ನೀರಾವರಿ ಅಭಿವೃದ್ಧಿಗೆ 7500 ಕೋಟಿ ರೂಪಾಯಿ ವೆಚ್ಚಮಾಡಲಾಗಿದೆ; ಎಂದರೆ ವರ್ಷಕ್ಕೆ 300 ಕೋಟಿ ರೂಪಾಯಿ ಖರ್ಚಾಗಿದೆ. ಈಗ ಈ ನೆಚ್ಚವನ್ನು ವರ್ಷಕ್ಕೆ 550ಕೋಟಿ ರೂಪಾಯಿಗೆ ಏರಿಸಲಾಗಿದೆ. ಭಾರತದಲ್ಲಿರುವ ವಿನ್ಯಾಸ ಸಂಸ್ಥೆಗಳಿಗೆ ಪ್ರಸಕ್ತದಲ್ಲಿ 2ಕೋಟಿ ರೂಪಾಯಿ ನೆಚ್ಚ ಮಾಡಲಾಗುತ್ತಿದೆ. ಇದು ಶೇಕಡ ಒಂದಕ್ಕಿಂತಲೂ ಕಡಿಮೆಯಿದೆ. ಸಾಮಾನ್ಯವಾಗಿ ಶೇಕಡ 4–5ರಷ್ಟು ಬಂಡವಾಳ ಸಾಮಾನ್ಯ ಆಗತ್ಯ ಪೂರೈಸುತ್ತದೆ.

ವಿನ್ಯಾಸ ಸಂಸ್ಥೆಗಳ ವೆಚ್ಚವನ್ನು ಮಿತವ್ಯಯಗೊಳಿಸುವುದು ಒಳ್ಳೆಯ ನೀತಿಯಾಗಲಾರದು. ಈ ಸಂಸ್ಥೆಗಳ ದಕ್ಷತೆಯಿಂದ ಅಧಿಕ ಮಿತವ್ಯಯ ಸಾಧಿಸಬಹುದು. ಕಾಗದದ ಮೇಲೆ ಅಣುವಾಗಿ ತೋರುವ ವಿನ್ಯಾಸ ಅಲ್ಪ ಬದಲಾವಣೆಯನ್ನು ಪ್ರತ್ಯಕ್ಷವಾಗಿ ಕಾರ್ಯಗತ ಮಾಡಿದಾಗ ಯೋಜನೆಯ ವೆಚ್ಚದಲ್ಲಿ 50ಕೋಟಿ ರೂಪಾಯಿಯಷ್ಟು ವೆಚ್ಚ ಕಡಿಮೆಯಾಗಬಹುದು.

ಆದ್ದರಿಂದ ಭವಿಷ್ಯತ್ತಿನ ಬೇಡಿಕೆಗಳನ್ನು ಹೊರೈಸಲು ಕೇಂದ್ರ ಜಲ–ವಿದ್ಯುತ್ ಆಯೋಗವನ್ನು ವಿಸ್ತರಿಸಬೇಕಾಗುತ್ತದೆ. ಈ ಆಯೋಗವು ವಿಶೇಷ ವಿಭಾಗಗಳನ್ನು (ಪ್ರಶ್ನೆಕ ಧರ್ಮಲ್ ಕೇಂದ್ರಗಳ ವಿಭಾಗ, ಜಲ ಕೇಂದ್ರಗಳ ವಿಭಾಗ, ಜಲಮೂಲ ವಿಭಾಗ ಇತ್ಯಾದಿಗಳನ್ನು) ಹೊಂದಿರುವ ಅಗ್ರಗಾಮಿ ಸಂಸ್ಥೆಯಾಗಿ ಅಭಿವೃದ್ಧಿಯಾಗುವುದೆಂಬ ದೃಢ ನಂಬಿಕೆ ನನಗಿದೆ.

ನೈಸರ್ಗಿಕ ಸಂಪನ್ಮೂಲಗಳಲ್ಲಿ ಭಾರತ ಸಮೃದ್ಧವಾಗಿದೆ. ಮುಂಬರುವ ದಶಕಗಳಲ್ಲಿಹೊಸ ವಿದ್ಯುತ್–ನೀರಾವರಿ ಯೋಜನೆಗಳನ್ನು ಕೈಗೊಂಡು ಜನತೆಗೆ ಸೌಲಭ್ಯ ಪೂರೈಸುವುದರತ್ತ ನಮ್ಮ ಶಕ್ತಿಯನ್ನು ಕೇಂದ್ರೀಕರಿಸಬೇಕಾಗಿದೆ. ಆಧುನಿಕ ತಂತ್ರಜ್ಞಾನದ ಯುಕ್ತಬಳಕೆಯಿಂದ ಈ ಯೋಜನೆಗಳನ್ನು ಕಾರ್ಯಗತ ಮಾಡಬೇಕಾಗಿದೆ. ಇದೊಂದು ಗುರುತರ ಹೊಣೆಯಾಗಿದೆ. "ಆಧುನಿಕ ಭಾರತದ ದೇಗುಲಗಳನ್ನು" ಶೀಘ್ರವಾಗಿ ಹಾಗೂ ಮಿತವ್ಯಯಕಾರಿಯಾಗಿ ರಚಿಸಲು, ಆ ಮೂಲಕ ಸಮೃದ್ಧಿ ಸಾಧಿಸಲು ಶ್ರಮಿಸಬೇಕಾಗಿದೆ.


NIRODH
ಬರೇ 5 ಪೈಸೆಯಲ್ಲಿ ನಿಮಗೆ ಸಂತಾನ ನಿರೋಧ ಶಕ್ತಿ
ನಿರೋಧ್
ಉಪಯೋಗಿಸಿ
ಕುಟುಂಬ ಯೋಜನೆಗೆ ಅತ್ಯುತ್ತಮ ರಬ್ಬರ್ ಸಾಧನ
15 ಪೈಸೆಗೆ 3
ಸರ್ಕಾರದ ಸಹಾಯಧನದಿಂದಾಗಿ ಕಡಿಮೆ ಬೆಲೆ
ಬಯಸಿದಾಗ ದೊರೆಯುವ ಮಕ್ಕಳು
ನಿರೋಧ್ ಉಪಯೋಗಿಸುವುದರಿಂದ ನಿಮಗೆ ಇಷ್ಟವಿರುವಾಗ ಸಂತಾನವನ್ನು ಪಡೆಯಬಹುದು. ಅಂದರೆ, ಬೇಕಾದಾಗ ಮಾತ್ರ ಮಕ್ಕಳನ್ನು ಪಡೆಯುವ ಸೌಭಾಗ್ಯ.
ತಾಯಿ ಮತ್ತು ಮಗುವಿನ ಆರೋಗ್ಯ
ಪ್ರತಿ ಮಗುವಿಗೆ ಮೊದಲಿನ ಮೂರು ನಾಲ್ಕು ವರ್ಷ ವಿಶೇಷ ಆರೈಕೆಯ ಅಗತ್ಯವಿದೆ ಎಂದು ಡಾಕ್ಟರುಗಳು ಹೇಳುತ್ತಾರೆ. ಹೆರಿಗೆಯಾದ ಮೇಲೆ ಸ್ವಲ್ಪ ಸಮಯ ತಾಯಿಗೂ ವಿಶ್ರಾಂತಿ ಬೇಕು. ಅದಕ್ಕಾಗಿ ಎರಡು ಮಕ್ಕಳ ಜನನದ ನಡುವೆ ಸಾಕಷ್ಟು ಅಂತರವಿರುವಂತೆ ಮಾಡಬೇಕು.
ನಿರೋಧ್—ಗಂಡಸರು ಉಪಯೋಗಿಸುವ ಅತ್ಯುತ್ಕೃಷ್ಟ ಗುಣಮಟ್ಟದ ಗರ್ಭನಿರೋಧಕ ರಬ್ಬರು ಚೀಲ. ಇದನ್ನು ಪ್ರಪಂಚದಾದ್ಯಂತ ಉಪಯೋಗಿಸುತ್ತಿದ್ದಾರೆ. ಸರಳ, ಸುಲಭ ಹಾಗೂ ಸುರಕ್ಷಿತ ಸಾಧನವಿದು. ನಿರೋಧ್ ಉಪಯೋಗಿಸುವುದರಿಂದ ಪತಿ ಪತ್ನಿಯರ ಆರೋಗ್ಯಕ್ಕೆ ಏನೂ ಹಾನಿಯಾಗುವುದಿಲ್ಲ.
ನಿರೋಧ್ ದಿನಬಳಕೆ ವಸ್ತುಗಳನ್ನು ಮಾರುವ ಅಂಗಡಿಗಳಲ್ಲಿ, ಔಷಧಿ ವ್ಯಾಪಾರಿಗಳಲ್ಲಿ, ಪೀಡಾ ಅಂಗಡಿಗಳಲ್ಲಿ ಮತ್ತು ಇತರ ಸಾಮಾನುಗಳ ಮಾರಾಟಗಾರರಲ್ಲಿ ಮಾರಾಟಕ್ಕಿವೆ.

ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಮೀನು ಮಾರಾಟ ಫೆಡರೇಶನ್

ಲಿಮಿಟೆಡ್ ಮಂಗಳೂರು

ಸ್ಥಾಪನೆ: 1954

•

ಸಹಕಾರಿ ರಂಗದಲ್ಲಿ ಮೀನುಗಾರಿಕೆಯ ಮೇಲುಗೈಯನ್ನು ತೋರಿಸುವ 9·45 ಲಕ್ಷಕ್ಕೂ ಮಿಕ್ಕಿ ಸಾಲು ಬಂಡವಾಳ ಹೊಂದಿರುವ 2,000ಕ್ಕೂ ಹೆಚ್ಚು ಸದಸ್ಯರುಗಳಿರುವ ಮೈಸೂರು ರಾಜ್ಯದಲ್ಲಿ ಏಕಮಾತ್ರ ಮೀನುಗಾರರ 34 ಪ್ರಾಥಮಿಕ ಸಹಕಾರಿ ಸಂಘಗಳ ಒಕ್ಕೂಟ.

ವಾರ್ಷಿಕ ಸರಾಸರಿ ಅತ್ಯುತ್ತಮ 100 ಯಾಂತ್ರೀಕೃತ ದೋಣಿಗಳನ್ನು ಉತ್ಪಾದಿಸಿ ಮಾಲೆ ಸ್ಥಾಪಿಸುವ ಯಾಂತ್ರೀಕ ದೋಣಿ ನಿರ್ಮಾಣ ಕೇಂದ್ರ, ಎಲ್ಲಾ ಮೀನುಗಾರಿಕಾ ಯಂತ್ರಗಳ ಬಿಡಿಭಾಗಗಳು ಮತ್ತು ಮೀನುಗಾರಿಕಾ ಸಲಕರಣೆಗಳನ್ನು ಹೊಂದಿರುವ ಶೇಖರಣಾಗೃಹ, ಕ್ರಮಬದ್ಧವಾಗಿ ಹಸಿ ಮೀನು ಮಾರಾಟ ಮಾಡುವ ಸುವ್ಯವಸ್ಥಿತ ಕೇಂದ್ರಗಳು, 12 ಲಕ್ಷ ರೂಪಾಯಿ ವೆಚ್ಚದಿಂದ ನಿರ್ಮಾಣಗೊಂಡ ಮಂಜುಗಡ್ಡೆ ಸ್ಥಾವರ ಫ್ರಿಝಿಂಗ್ ಮತ್ತು ಶೀತಲೀಕರಣ ಕಾರ್ಖಾನೆ. 125 ಕೋಟಿ ಮೊತ್ತದ ಎ. ಆರ್. ಸಿ. ಯೋಜನೆಯ ಮುಕ್ತಾಯದ ಹಂತದಲ್ಲಿ 60 ಲಕ್ಷ ಮೊತ್ತದ ಸ್ವೀಟ್ ಬ್ಯಾಂಕ್ ಆಫ್ ಮೈಸೂರು ಯೋಜನೆಯ ಯಶಸ್ವೀ ಪ್ರಯೋಗ.

ರೂ. 2,00,000/-ಕ್ಕೂ ಮಿಕ್ಕಿದ ಸಿಗದಿ ಮೀನಿನ ವಿದೇಶಿ ರಫ್ತಿನೊಂದಿಗೆ ಪ್ರಾರಂಭಿಸಿ, ವಿದೇಶಿ ವಿನಿಮಯವನ್ನು ಗಳಿಸುವ ಹಾಗೂ ಜನರಿಗೆ ಸಸಾರಜನಕ ಆಹಾರವನ್ನು ಒದಗಿಸುವ ಈ ಸಂಸ್ಥೆ ಜಿಲ್ಲೆಯ ಸಹಕಾರಿ ಮೀನುಗಾರರ ಸಹಭಾಗಿತ್ವದ ಸಂಕೇತ.

ಎಸ್. ಕೆ. ಅಮೀನ್, M. L A.,
ಅಧ್ಯಕ್ಷ.

ಬಿ. ಮಾಧವರಾವ್, B. A.,
ಜನರಲ್ ಮೆನೇಜರ್.

ಬಿ. ಕರುಣಾಕರ್, B A.,
ಕಾರ್ಯದರ್ಶಿ.

With best compliments

from

BALLAL
MOTOR SERVICE

MOODABIDRI — — MANGALORE

ಇಂದಿನ ನಾಂದಿ ಪದಾವಿಜೂಗಿರುವದಿ ಯನ್ನು ಶಿತ್ರಿಸಲು ಕೆಂಪು ಕೇಳುವನ್ನು ನಿನ್ನ ಮಂಡಿಗೆ—ಅದರೆನ್ನ ಅಪರಿನ್ನು

LICENCE No 33
Licensed to Post without Prepayment

ವಿಜಯಾ ಬ್ಯಾಂಕಿನ

ದ್ವಿವಿಧ ಸೌಲಭ್ಯ ಯೋಜನೆ



ಪ್ರತಿಫಲವನ್ನೂ ಪಡೆಯಿರಿ
ಅಸಲನ್ನು ಉಳಿಸಿರಿ.!

"ಪ್ರತಿಫಲ ಪಡೆಯಿರಿ, ಅಸಲನ್ನೂ ಉಳಿಸಿರಿ"
ಹೌದು, ನಮ್ಮ ಈ ಮಾತು ಯಥಾರ್ಥ

ನಮ್ಮ "ದ್ವಿವಿಧ ಸೌಲಭ್ಯ ಯೋಜನೆ'ಯಲ್ಲಿ ನಿಮ್ಮ ಠೇವಣಿ ಹಣ ಭದ್ರವಾಗಿರುತ್ತದಾದರೂ ನಿಮ್ಮ ಆಪ್ತೇಷ್ಟರು ಪ್ರತಿತಿಂಗಳೂ ತಪ್ಪದೆ ಪರಮಾನ ಪಡೆಯುವರು.

ಈ ಯೋಜನೆಯ ಸ್ವರೂಪ ಹೀಗಿದೆ

8276/ ರೂ ಗಳು ಠೇವಣಿ ಇಟ್ಟರಿ ನೀವು ನಾಮನಿರ್ದೇಶನ ಮಾಡುವ ವ್ಯಕ್ತಿಯು 84 ತಿಂಗಳ ಕಾಲ ಪ್ರತಿತಿಂಗಳೂ 50/ ರೂ ಗಳಂತೆ ನಿರ್ದಿಷ್ಟ ಪರಮಾನೆ ಪಡೆಯುವರು

81 ತಿಂಗಳ ಕೊನೆಯಲ್ಲಿ ನಿಮ್ಮ ಠೇವಣಿ ಹಣ 8276/- ರೂ ಗಳನ್ನು ಪೂರ್ತಿಯಾಗಿ ನೀವು ವಾಪಸು ಪಡೆಯ ಬಹುದು ಇದು ಕೇವಲ ಒಂದು ಉದಾಹರಣೆ ಎಲ್ಲರಿಗೂ ಆರ್ಥಿಕ ಮಟ್ಟಕ್ಕನುಗುಣವಾದ ಠೇವಣಿಗಳುಹಾಗೂ ಪರಮಾನಗಳಿವೆ

ಖಂಡಿತವಾಗಿಯೂ ನೀವು ಉಳಿಸಬೇಕು! ನಿಮ್ಮ ಆಪ್ತೇಷ್ಟರಿಗಾಗಿ ನೀವು ಉಳಿಸುವುದು ನಮ್ಮ ನೈತಿಕ ಹೊಣೆ. ಇದನ್ನು ಈಡೇರಿಸಲು ನಾವು ವಿಜಯಾ ಬ್ಯಾಂಕಿನಲ್ಲಿ ನೆರವಾಗುವೆವು

ಏವರಿಗಳಿಗೆ ದಯೆಯಿಟ್ಟು ಸಮೀಪದ ನಮ್ಮ ಶಾಖೆಯಲ್ಲಿ ವಿಚಾರಿಸಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಛೇರಿ ಮಂಗಳೂರು-3. ಆಡಳಿತ ಕಛೇರಿ. ಬೆಂಗಳೂರು-1.

ವಿ. ಸುಂದರರಾಮು ಶೆಟ್ಟಿ,
ಚೇರ್ಮನ್.

C ADVT-VB 2399 KA

ನಮ್ಮ ಒಟ್ಟು ಶಾಖೆಗಳು— 115

ಮೈಸೂರು	79	ಮಹಾರಾಷ್ಟ್ರ	3
ಕೇರಳ	26	ಆಂಧ್ರ ಪ್ರದೇಶ	1
ತಮಿಳುನಾಡು	5	ಡೆಲ್ಲಿ	1

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಮ್ಮ ಒಟ್ಟು ಶಾಖೆಗಳು 31

ಸದ್ಯದಲ್ಲೇ ಇನ್ನೂ ಒಂಭತ್ತು ಶಾಖೆಗಳನ್ನು ತೆರೆಯಲಾಗುವುದು

Edited, Printed & Published by K. H. Shetty at the Navayuga Press, Udipi, S India

ನವಯುಗ

NAVAYUGA 20—8—1970 ಸಂಪುಟ 49 ಸಂಚಿಕೆ 49

ಸ್ವಾತಂತ್ರ್ಯದ ಸಂರಕ್ಷಣೆಗಾಗಿ...

ದಕ್ಷಿಣ ವಿಯಟ್ನಾಮಿನ ಸೈಗಾನಿನಲ್ಲಿ ಹುಟ್ಟಿ (ಶಿವಗಾಂವ್) ನಮ್ಮ ರಾಯಭಾರಿ ಕಛೇರಿಯು ಮೇಲಿದ್ದ ಸರ್ಕಾರಿ ಧ್ವಜವನ್ನು ಕೆತ್ತಿತೆಗೆದು ಅಲ್ಲಿಯ ವಿದ್ಯಾರ್ಥಿಗಳು ಜುಲ್ಮಾ ಇಪ್ಪತ್ತೇಳರಂದು ಸುಟ್ಟುಹಾಕಿದರು. ಈ ತರುಣ ವಿಯಟ್ನಾಮಿಗಳು ಎಲ್ಲೆಲ್ಲೂ ಕೆಲವು ಭಿತ್ತಿಪತ್ರಗಳನ್ನು ಹಂಚಿದ್ದು, ಅದರಲ್ಲಿ, ಅಲ್ಲಿರುವ ಭಾರತೀಯಚಲನ್ನು ಅಲ್ಲಿಂದ ಹೊರಗಟ್ಟಬೇಕೆಂದೂ ಅವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಬೇಕೆಂದೂ ತಿಳಿಸಿದೆ. ಅದರಿಂದ ಗೊಂದಲಕ್ಕೊಳಗಾದ ಭಾರತೀಯ ಸಂಜಾತರು ಆಂಗಡಿ, ಕಾರ್ಖಾನೆಗಳ ಬಾಗಿಲುಗಳನ್ನು ಮುಚ್ಚಿದರು. ಅವರ ವ್ಯಾಪಾರ ಕ್ಕೆ ಅಪಾಯ ಬಂದೊದಗಿರುತ್ತದೆ. ಆದೇಕೆ 'ತರುಣ ವಿಯೆಟ್ನಾಮಿ'ಗಳು ಆ ರೀತಿ ವರ್ತಿಸಿತ್ತಿದ್ದಾರೆಂದು ಅವರ ಬಳಿ ವಿಚಾರಿಸಿದಾಗ, ಅದೇ ರೀತಿ, ಅಲ್ಲಿಯ ಸರಕಾರದ ಬಳಿ ದೂರಿತ್ತಾಗ ಅವರು ಕೊಟ್ಟ ಉತ್ತರ ಒಂದೇ—ನೀವು ಹೋಗಿ ವಿಯ.ಟ್ ಕಾಂಗಿನವರ ಬಳಿ ದೂರುಕೊಡಿ.

ಸೈಗಾನಿನಲ್ಲಿ ಹಿಂದೂ ಕಲಾಚಾರ—ಸಂಸ್ಕೃತಿ ಸಾಧಾರಣ ವಿಷಯವಿದೆ. ಶಿವ—ಪಾರ್ವತಿಯರ ದೇವಸ್ಥಾನಗಳಿಗೆ ಅಲ್ಲಿಯವರೆಲ್ಲರೂ ಬರುತ್ತಾರೆ. ಸೈಗಾನ್ ಫಿಜವಾಗಿ ಶಿವಗಾಂವ್ ಅಥವಾ ಶೈವಗಣ ಆಗಿದ್ದಿರಬೇಕು. ಹಾಗಿದ್ದೂ ಇವೀಗ ಏಕೀ ರೀತಿ?

ಈ ಘರ್ಷಣೆ ನಡೆಯುವ ಕೆಲ ದಿನಗಳ ಹಿಂದೆ ಅಲ್ಲಿಯ ಸರಕಾರವು ನಮ್ಮ ಸರಕಾರಕ್ಕೊಂದು ವಿನಂತಿಯನ್ನು ಕಳುಹಿಸಿ, ಅಲ್ಲಿಯ 'ತಾತ್ಕಾಲಿಕ ಕ್ರಾಂತಿಕಾರಿ ಸರಕಾರ'ದ ಪರರಾಷ್ಟ್ರ ಮಂತ್ರಿ ಶ್ರೀಮತಿ ಬಿನ್‌ಗೆ ಇಲ್ಲಿ ಸ್ವಾಗತ ಏರ್ಪಡಿಸಬೇಡೆಂದು ತಿಳಿಸಿತ್ತು. ಹಿಂದೆ ಶ್ರೀ ದಿನೇಶ ಸಿಂಘರು ವಿದೇಶಾಂಗ ಮಂತ್ರಿಯಾಗಿದ್ದು ಸೈಗಾನಿಗೆ ಹೋಗಿದ್ದಾಗ ಶ್ರೀಮತಿ ಬಿನ್‌ಳನ್ನು ದಿಲ್ಲಿಗೆ ಬರಲು ಆಮಂತ್ರಿಸಿದ್ದರು. ಪ್ರಣಾಳಿಂಗರು ಈಗ ಆಕೆಯನ್ನು ಬರಮಾಡಿಸಿಕೊಳ್ಳಬೇಕಾಯಿತು. ಇದಕ್ಕೆ ಕಾರಣ ಶ್ರೀಮತಿ ಇಂದಿರಾ ಗಾಂಧಿ ಪ್ರಧಾನಿಯಾಗಿರುವದಿದೆ.ಅಲ್ಲಿಯ ಸರಕಾರಕ್ಕೂ ನಮ್ಮ ಸರಕಾರಕ್ಕೂ ರಾಯಭಾರ ಸಂಪರ್ಕವಿದೆಯಾದರೂ ಕಮ್ಯುನಿಸ್ಟ್ ವ್ಯಾಪ್ತಿಯೋಕಂದಾಗಿ ಶ್ರೀ ದಿನೇಶ ಸಿಂಘರು ಶ್ರೀಮತಿ ಇಂದಿರಾಜಿಯವರ ಇಚ್ಛೆಗನುಸಾರವಾಗಿ ಆ ಕೆಲಸ ಆಮಂತ್ರಣವನ್ನು ಕೊಡಬೇಕಾಗಿ ಬಂದಿತ್ತು. ಅದನ್ನು ಉಪಯೋಗಿಸಿಕೊಂಡು ಆಕೆ ಇಲ್ಲಿಗೆ ಬಂದಳು. ಆದರ ಪರಿಣಾಮವಾಗಿ ಸೈಗಾನಿನ ರಾಯಭಾರಿ ಕಛೇರಿಯಲ್ಲಿದ್ದ ಹಿಮ್ಮ ಸರಕಾರೀ ಧ್ವಜವನ್ನು ಸುಟ್ಟ ಭಸ್ಮಗೊಳಿಸಲಾಯಿತು. ಇದು ಭಾರತೀಯರೆಲ್ಲರಿಗೂ ಅಪಮಾನವೇ ಸರಿ. ಆದರ ಹಿನ್ನೆಲೆ ಹಾಗೂ ಮುಖ್ಯಾಂಶಗಳನ್ನು ಅರಿತುಕೊಂಡು ನಾವು ಮುಂಜಾಗರೂಕತೆಯಿಂದಿರಬೇಕು.

ಶ್ರೀಮತಿ ಬಿನ್‌ಳು ವಿಯಟ್‌ಕಾಂಗಿಗೆ ಸೇರಿದಾಕೆ. ಅಂದರೆ ಕಮ್ಯುನಿಸ್ಟಳು. ಅಲ್ಲಿಯ ಸರಕಾರವನ್ನೆದುರಿಸಿ ಪ್ರತಿಸರಕಾರವನ್ನು ಸ್ಥಾಪಿಸುವಾಕೆ—ಅಂತಹವಳನ್ನು ಅಲ್ಲಿಯ ಜನರು ವಿರೋಧಿಸುವದು ನೈಸರ್ಗಿಕವೇ ಇದೆ. ಅವಳನ್ನು ಆಮಂತ್ರಿಸಿಕೊಂಡಷ್ಟಕ್ಕೆ, ಅದೂ ವಿನಂತಿಸಿಕೊಂಡ ಮೇಲೂ, ಅಲ್ಲಿಯ ಜನರು ಸುಮ್ಮಗಿರಲಾರರು. ಅದುದರಿಂದಲೇ ಕೋಸೋದ್ರಿಕ್ತರಾದ ಅವರು ದೂರಿತ್ತವರನ್ನು ವಿಯಟ್‌ಕಾಂಗಿಗೆ ಹೋಗಲು ಹೇಳಿರಬಹುದು. ಬಿನ್‌ಳನ್ನು ಬರಮಾಡಿಸಿಕೊಂಡುದರಿಂದ ಹಾದಿಹುಟ್ಟಿ ಹೋಗುತ್ತಿದ್ದ ಹಾವನ್ನು ಹೊಟ್ಟೆಯ ಮೇಲೆ ಹಾಕಿಕೊಂಡಂತೆ ಆಯಿತು ನಮ್ಮ ಪರಿಸ್ಥಿತಿ. ಇಷ್ಟಿಯ ಕಮ್ಯುನಿಸ್ಟರನ್ನು ತೃಪ್ತಿಪಡಿಸಲಿಕ್ಕಾಗಿ ಶ್ರೀಮತಿ ಇಂದಿರಾ ಗಾಂಧಿ ಪರರಾಷ್ಟ್ರಗಳಲ್ಲಿರುವ ಭಾರತೀಯರನ್ನು ಹಿಂಸೆಗೊಳಪಡಿಸಿದರು.

ಶ್ರೀಮತಿ ಬಿನ್ ಇಲ್ಲಿಗೆ ಬಂದ ಉದ್ದೇಶವೇನು? ಆಕೆ ಅಲ್ಲಿ ವ್ಯವಸರಕಾರದ ಸಚಿವೆ. ಇಲ್ಲಿ ಫಲ್ಸ್‌ಲ್‌ವಾದಿಗಳು ತಮ್ಮ ಅಧ್ಯಕ್ಷ ಮೊಘೋನೆಂದು ಹೇಳುತ್ತ, ಇಲ್ಲಿಯ ಮಹಾಪುರುಷರ ಪ್ರತಿಮೆಗಳನ್ನು ಒಡೆದು ಹಾಕಿ, ಕಾರ್ಯಾಲಯ—ವಿದ್ಯಾಲಯಗಳನ್ನು ಧ್ವಂಸಗೊಳಿಸುತ್ತ, ಶ್ರೀರಂಗಿಯನ್ನು ಚಿತ್ತೈಸಲು ಕೊಂಪು ಕೇತು ಕಾದು ಕುಳಿತಿದ್ದಾಗ ಅವರನ್ನು ಸೆರೆಹಿಡಿದರೂ ಆಶ್ಚರ್ಯವಿಲ್ಲ.... ಇನ್ನೂ ಯಾರಾದರೂ ಎದುರಿಸಿದಲ್ಲಿ ಗಡಿ ಪ್ರದೇಶದಲ್ಲಿ ಕಮ್ಯುನಿಸ್ಟ್ ಜೈನಿ ಸೇನೆ ಸಿದ್ಧವಾಗಿದೆ. ಇಲ್ಲಿಂದ ಸನ್ನೆಯಾದರೆ ಸರಿ.... ಇದುನೇ ಅವರು ಕಳುಹುತ್ತಿರುವ ಗನ ವನ ಗೊಪುರ, ಮೆಲ್ಲುತ್ತಿರುವ ಮನಸ್ಸಿನ ಮಂಡಿಗೆ—ಅವಕ್ಕೆನೇ ಅವರನ್ನು ಹಾರಿಸುವದು ಬಂಗಾಳದಿಂದ ಕೇರಳದ ವರೆಗೂ ಸರಾಗವಾಗಿ ಸಾಗುತ್ತಿದೆ. ಆ ಯಾಯಾ ರಾಜ್ಯಸರಕಾರಗಳು ಕೆಲವರನ್ನು ಬೈದು ಮಾಡಿದರೂ ಕಮ್ಯುನಿಸ್ಟರಿದೆ ಶ್ರೀಮತಿ ಇಂದಿರಜ್ಜಿಯವರ ಸರಕಾರ ಸಹಕಾರವಿದ್ದು, ನಕ್ಸಲ್‌ವಾದಿಗಳು ಮೂಡುತ್ತಿರುವದು ಅಂದರೆ ಅವರ ಹುರಿ ಸರಿಯೆಂದು ಹೊಗಳಿ ಕೇಂದ್ರ ಸರಕಾರ ಪುಸ್ತಕಗಳನ್ನು ಪ್ರಕಟಿಸುತ್ತಿದೆ. ಚಲಚಿತ್ರಗಳನ್ನು ಪ್ರದರ್ಶಿಸುತ್ತಿದೆ.

ಇದೇ ಸನುಹುದಲ್ಲಿ ಪ್ರಧಾನಿ ಇಂದಿರಾ ಗಾಂಧಿಯವರು ತಾನೇ ಗೃಹಮಂತ್ರಿಯೂ ಆಗಿ ಹಲವಾರು ಮುಖ್ಯ ಖಾತೆಗಳನ್ನು ತಮ್ಮ ಬತ್ತಳಿಕೆಗೆ ಸೇರಿಸಿಕೊಂಡು ತಮ್ಮ ಸರ್ವಾಧಿಕಾರವ ಇಚ್ಛೆಗೆ ಅಡ್ಡ ಬರುವವರನ್ನು ಹತ್ತಿಕ್ಕಲು ಕಾಪೂನು ಸಿದ್ಧವಾಗುವದರಲ್ಲಿ ಮಗ್ನರಾಗಿದ್ದಾರೆ. ಆಗ ಕಮ್ಯುನಿಸ್ಟರನ್ನು 'ದೇಶದ್ರೋಹಿಗಳು' 'ಬಡ ಜನತೆಯನ್ನು ಮೋಸಗೊಳಿಸುವವರೆಂದು ಬೆಟ್ಟುಮಾಡಿ ತೋರಿಸಿದಲ್ಲಿ ಬಂದಿಖಾನೆಗೆ ಹೋಗಬೇಕಾಗುತ್ತದೆ. ಅಧಿಕಾರದ ಆಸನದಲ್ಲಿ ಭದ್ರವಾಗಿರಬೇಕೆಂಬ ಮಹತ್ವಾಕಾಂಕ್ಷೆಯಿಂದ ಶ್ರೀಮತಿ ಇಂದಿರಾ ಗಾಂಧಿ ಯಾವ ವೇಷ ಹಾಕಲೂ ಸಿದ್ಧವಾಗಿ ನಿಂತಿದ್ದಾರೆ.

ಅದಕ್ಕೆ ಸರಿಯಾಗಿ ಶ್ರೀಮತಿ ಬಿನ್ ಇಲ್ಲಿಗೆ ಬಂದಿರುವದು. ಬಂಗಾಲವನ್ನು ಭಯಭೀತಗೊಳಿಸಿ ಅಲ್ಲಿ ಅವರು 'ತಾತ್ಕಾಲಿಕ ಕ್ರಾಂತಿಕಾರಿ ಸರಕಾರ'ವನ್ನು ಹೇಗೆ ಸ್ಥಾಪಿಸಿರುವುದೆಂಬ ದರ ಕಾರಿತು ಸ್ಪಷ್ಟ ಸೂಚನೆಗಳನ್ನು ಶ್ರೀಮತಿ ಬಿನ್ ಇಲ್ಲಿಯ ಕಮ್ಯುನಿಸ್ಟರಿಗೆ ಕೊಟ್ಟಿರುವಳು. ಅವರ ಈ ದಾನವಕೃತ್ಯಕ್ಕೆ ಎದುರು ಬರುವವರನ್ನು ಗೃಹಮಂತ್ರಿಯಾದರು ಸೆರೆಮನೆಗೆ ಕಳುಹಿಸಲು ಪರ್ಯಾಯ ಸೇನಾಧಿಕಾರಿಗಳಲ್ಲಿ ಕೆಲವರನ್ನು ಸೆರೆಹಿಡಿದರೂ ಆಶ್ಚರ್ಯವಿಲ್ಲ.... ಇನ್ನೂ ಯಾರಾದರೂ ಎದುರಿಸಿದಲ್ಲಿ ಗಡಿ ಪ್ರದೇಶದಲ್ಲಿ ಕಮ್ಯುನಿಸ್ಟ್ ಜೈನಿ ಸೇನೆ ಸಿದ್ಧವಾಗಿದೆ. ಇಲ್ಲಿಂದ ಸನ್ನೆಯಾದರೆ ಸರಿ.... ಇದುನೇ ಅವರು ಕಳುಹುತ್ತಿರುವ ಗನ ವನ ಗೊಪುರ, ಮೆಲ್ಲುತ್ತಿರುವ ಮನಸ್ಸಿನ ಮಂಡಿಗೆ—ಅವಕ್ಕೆನೇ ಅವರನ್ನು ಹಾರಿಸುವದು "ಅಕ್ಟೋಬರ ಕ್ರಾಂತಿ."

ಈ ಕ್ರಾಂತಿಗೆ ಜಯಸಿಗದಿದ್ದರೂ ಇಂದಿನ ಶಾಂತಿಗೂ ಭಂಗ ಬರುವದರಲ್ಲಿ ಭಾರೀ ಫಸ್ಟ್, ಪ್ರಾಣಹಾನಿ.... ನಡೆಯುವದರಲ್ಲಿ ಸಂದೇಹವಿಲ್ಲ, ಆದಕ್ಕೇನು ಕಾರಣ? ತಮಗಿಷ್ಟ ಬಂದಂತೆ ಕಾನೂನುಗಳನ್ನು ರಚಿಸಿಕೊಂಡು ಶ್ರೀಮತಿ ಇಂದಿರಾ ಗಾಂಧಿ ಜಾತ್ಯತೀಸುವೆಂದು ಹೇಳಿ ಕೆಲವು ಸಂಘಟನೆಗಳನ್ನು ಸೆರೆಮನೆಗೆ ಕಳುಹಿಸಿದ ಬ್ಯಾರು ನಡೆಯುವಾಗ ಅಕ್ಟೋಬರ್ ಬರುವದು. ಅವರು ಹೋದರೆ ಇತರರಿಲ್ಲವೇ? ಇಂದಿರಾಜಿಯವರ ಇಚ್ಛೆಗೆ ವಿರುದ್ಧವಾಗಿ ವರ್ತಿಸಲಿಕ್ಕೆ ಬರುವವರು ಅದ್ಯಾರಿದ್ದಾರೆ? ಹಿಂದಿನ ಘಟನೆ ನಮಗೆ ಏನು ಹೇಳುತ್ತದೆ?

ಪಾಕಿಸ್ಥಾನದಲ್ಲಿ ಹಿಂದೆ ಭಾರತದ ರಾಯಭಾರಿಯಾಗಿದ್ದ, ವಿದ್ಯಾಸಿಪತ್ನಿ ರಾಜಪಾಲರಾಗಿದ್ದ ಶ್ರೀ ಶ್ರೀ ಪ್ರಕಾಶ ಪಿತಾಜಿಯವರು ೧೯೪೭ಕ್ಕೆ ಸಂಬಂಧಪಟ್ಟ ಒಂದು ಪುಸ್ತಕ ಬರೆದಿರುವರು. ಅದರಲ್ಲಿರುವ ಕೆಲವು ವಾಕ್ಯಗಳು ಈ ರೀತಿ ಇವೆ.

"೧೯೪೭ರ ಸೆಪ್ಟೆಂಬರ್ ದ್ವಿತೀಯಾರ್ಧ ಹೆತ್ತರಂದು ಮುಸ್ಲಿಂಲೀಗಿನವರು ನಮ್ಮ ಎಲ್ಲಾ ವಿಂತ್ರಿಗಳನ್ನು, ಸೈನಿಕ ಅಧಿಕಾರಿಗಳನ್ನೂ ಹಾಗೂ ಇತರ ಪ್ರಮುಖರನ್ನು ಕೊಲೆಮಾಡಿ ದಿಲ್ಲಿಯ ಕೆಂಪುಕೋಟೆಯ ಮೇಲೆ ಪಾಕಿಸ್ಥಾನದ ಧ್ವಜವನ್ನು ಹಾರಿಸುವ ಸಂಚು ನಡೆಸಿದ್ದರು. ಆ ವಿಷಯವನ್ನು ಸಮಯಕ್ಕೆ ಸರಿಯಾಗಿ ಸರ್ದಾರ ಪಟೇಲರಿಗೆ ಹಾಗೂ ಜವಾಹರಲಾಲ ನೆಹ್ರೂರವರಿಗೆ (R. S. S.) ಸಂಘದ ಸ್ವಯಂಸೇವಕರು ತಿಳಿಸಿದರು.

"...ಸಂಘದ ತೇಜಸ್ವಿ ಹಾಗೂ ನಿಸ್ವಾರ್ಥಿಸ್ವಯಂಸೇವಕರು ಸರಕಾಲದಲ್ಲಿ ಸದ್ವಿಯನ್ನು ತಿಳಿಸದೆ ಇರುತ್ತಿದ್ದಲ್ಲಿ ಇಂದು ಭಾರತ ಸರಕಾರ ಅನ್ನುವಂತಹದ್ದೊಂದು ಇರುತ್ತಿರಲಿಲ್ಲ. ಇಡೀ ದೇಶದ ಹೆಸರು ಪಾಕಿಸ್ಥಾನ ಆಗುತ್ತಿತ್ತು...."

ಇದು ಅಂದು, ಇಂದು ಪಬ್ಲಿಕ್ ಸಭೆಯಲ್ಲ, ಕೊಂಪು ಕೇತು ಕಾದು ಕುಳಿತಿನೆವ್ಯಾ ಸ್ವಾತಂತ್ರ್ಯವನ್ನು ಹತ್ತಿಕ್ಕಲು. ಅವುಗಳೊಳಗೆ ಅದೊಂದು ರೀತಿಯ ಒಪ್ಪಂದವೂ ನಡೆದಿರುತ್ತದೆ. ಕಾಶ್ಮೀರ ಮತ್ತು ಅಸ್ಸಾಮಿನಂತಹ ಪ್ರದೇಶಗಳನ್ನು ಪಾಕಿಸ್ಥಾನಕ್ಕೆ ಬಿಟ್ಟುಕೊಡಬೇಕು. ಉಳಿದದ್ದು ಚೈನಾಕ್ಕೆ. ಉಗ ಎಲ್ಲಾ ರೀತಿ

(ಎಂಟನೇ ಪುಟಿ ನೋಡಿರಿ)

ಆಹಾರ ಸ್ವಯಂಪೂರ್ಣತೆ: ನಾಲ್ಕನೇ ಯೋಜನೆಯ ತಂತ್ರ

ನಿಯೋಜಿತ ಆರ್ಥಿಕಾಭಿವೃದ್ಧಿಯಲ್ಲಿ ಬೇಸಾಯದ ಪುನರ್ವ್ಯವಸ್ಥೆ ಮತ್ತು ಸುಧಾರಣೆಗೆ ಅತ್ಯಂತ ಪ್ರಮುಖ ಸ್ಥಾನವಿದೆ. ಏಕೆಂದರೆ ಭಾರತದ ವೈಶಾಲ್ಯಕ ಸಂಪನ್ಮೂಲ ವ್ಯಾಪಕ ಭೂಪ್ರದೇಶದಲ್ಲಿ ಅಡಗಿದೆ. ಬಹುತೇಕ ಭಾರತೀಯರು ವ್ಯವಸಾಯ ಕಾರ್ಯದಲ್ಲಿ ನಿರತರಾಗಿದ್ದಾರೆ.

ಭಾರತಕ್ಕೆ ಸ್ವಾತಂತ್ರ್ಯ ಬಂದ ಕಾಲದಲ್ಲಿ ಬೇಸಾಯ ದುಸ್ಥಿತಿಯಲ್ಲಿತ್ತು. ಆದ್ದರಿಂದ ಅಧಿಕ ಪ್ರಮಾಣದಲ್ಲಿ ಆಹಾರಧಾನ್ಯಗಳನ್ನು ಆಮದು ಮಾಡಿಕೊಳ್ಳಬೇಕಾಯಿತು. ಅಧಿಕ ಪ್ರಮಾಣದಲ್ಲಿ ಬೆಳೆಯುತ್ತಿದ್ದ ಜನಕೋಟಿಗೆ ಆಹಾರ ನೀಡಲೆಂದು 1948ರಲ್ಲಿ 29ಲಕ್ಷ ಟನ್, 1949ರಲ್ಲಿ 38ಲಕ್ಷ ಟನ್, 1950ರಲ್ಲಿ 21ಲಕ್ಷ ಟನ್ ಹಾಗು 1951ರಲ್ಲಿ 48 ಲಕ್ಷ ಟನ್ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಬೇಕಾಯಿತು.

1951ರಲ್ಲಿ ಪ್ರಥಮ ಪಂಚವಾರ್ಷಿಕ ಯೋಜನೆ ಜಾರಿಗೆಬಿದ ಕಾಲದಲ್ಲಿ ದೇಶದಲ್ಲಿ 32.7 ಕೋಟಿ ಹೆಕ್ಟೇರ್ ಭೂಪ್ರದೇಶದಲ್ಲಿ 13 2 ಕೋಟಿ ಹೆಕ್ಟೇರ್ ಪ್ರದೇಶ ಬೇಸಾಯಕ್ಕೆ ವಿನಿಯೋಗವಾಗಿತ್ತು. 10.1ಕೋಟಿ ಹೆಕ್ಟೇರ್ ಪ್ರದೇಶದಲ್ಲಿ ಆಹಾರಧಾನ್ಯಗಳನ್ನು 2.1ಕೋಟಿ ಹೆಕ್ಟೇರ್ ಪ್ರದೇಶದಲ್ಲಿ ವಾಣಿಜ್ಯ ಬೆಳೆಯನ್ನೂ ಬೆಳೆಯಲಾಗ ತ್ತಿತ್ತು. 1950ರಲ್ಲಿ ದೇಶದ ಅಂದಾಜು ಜನಸಂಖ್ಯೆ 35.3ಕೋಟಿ; ಆಹಾರಧಾನ್ಯಗಳ ಉತ್ಪಾದನೆ 5.49 ಕೋಟಿ ಟನ್.

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಜಾರಿಗೆಬಂದ ಅಭಿವೃದ್ಧಿ ಕಾರ್ಯಕ್ರಮದಿಂದ ಕೃಷಿ ಉತ್ಪಾದನೆಯಲ್ಲಿ ಏರಿಕೆಯಾಗಿದೆ. 1950—51ರಲ್ಲಿದ್ದ 5.49ಕೋಟಿ ಟನ್ ಆಹಾರಧಾನ್ಯ ಉತ್ಪಾದನೆ 1965—66ನೇ ಸಾಲಿನಲ್ಲಿ 9.4ಕೋಟಿ ಟನ್‌ಗೆ ಏರಿತು. ಹಿಂದಿನ ಆಹಾರ ಉತ್ಪಾದನೆಯಲ್ಲಿ ಶೇಕಡ 71ರಷ್ಟು ಏರಿಕೆಯಾಯಿತು. ಇದೇ ಅವಧಿಯಲ್ಲಿ ಕಬ್ಬಿನಬೆಳೆ 69ಲಕ್ಷ ಟನ್‌ಗಳಿಂದ 1 2ಕೋಟಿ ಟನ್‌ಗೆ ಹೆಚ್ಚಿತು. ಎಣ್ಣೆಬೀಜಗಳ ಬೆಳೆ 51 ಲಕ್ಷ ಟನ್‌ಗಳಿಂದ 86ಲಕ್ಷ ಟನ್‌ಗಳಿಗೇರಿತು. ಹತ್ತಿಉತ್ಪಾದನೆ 29ಲಕ್ಷ ಬೇಲ್‌ಗಳಿಂದ 57ಲಕ್ಷ ಬೇಲ್‌ಗಳಿಗೇರಿತು; ಸೆಣಬಿನ ಉತ್ಪಾದನೆ 35ಲಕ್ಷ ಬೇಲ್‌ಗಳಿಂದ 60ಲಕ್ಷ ಬೇಲ್‌ಗಳಿಗೆ ಹೆಚ್ಚಿತು. ಈ ರೀತಿ ಬೇಸಾಯದ ಸರಾಸರಿ ವಾರ್ಷಿಕ ಬೆಳವಣಿಗೆ ಶೇಕಡ 3.85ರಷ್ಟಿದ್ದಿತು.

ರಾಷ್ಟ್ರೀಯ ಆದ್ಯತೆ

ಕೃಷಿ ಆರ್ಥವ್ಯವಸ್ಥೆಯನ್ನು ಸುಧಾರಿಸುವ ಮುಖ್ಯೋದ್ದೇಶದಿಂದ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಹೂಡಿದ 2356ಕೋಟಿ ರೂ. ಬಂಡವಾಳದಲ್ಲಿ 357 ಕೋಟಿ ರೂಪಾಯಿಯನ್ನು ಬೇಸಾಯ ಮತ್ತು ಸಾಮೂಹಿಕಾಭಿವೃದ್ಧಿ ಕಾರ್ಯಕ್ಕೆ ಯೋಜನಾತಜ್ಞರು ನಿಗದಿ ಮಾಡಿದರು. ಜನಕೋಟಿಯು ಜೀವನಮಟ್ಟ ಸುಧಾರಿಸುವ ಆದರಲ್ಲೂ ಗ್ರಾಮೀಣ ಜನತೆಯ ಜೀವನಮಟ್ಟ ಹೆಚ್ಚಿಸುವ ಯೋಜನಾ ಕಾರ್ಯದಲ್ಲಿ ಬೇಸಾಯಕ್ಕೆ ರಾಷ್ಟ್ರೀಯ ಮಟ್ಟದ ಆದ್ಯತೆ ನೀಡಲಾಯಿತು.

ಪ್ರಥಮ ಯೋಜನೆಯಲ್ಲಿ ಕೃಷಿ ಉತ್ಪಾದನೆ ಹೆಚ್ಚಿದುದಂತೆ ಆರ್ಥವ್ಯವಸ್ಥೆ ದೃಢಗೊಂಡು ಎರಡನೇ ಯೋಜನೆಯ ಅವಧಿಯಲ್ಲಿ ಹೆಚ್ಚಿನ ಅಭಿವೃದ್ಧಿಗೆ ಮೂರ್ತ ರೂಪಿಸಿತು. ಪ್ರಥಮಯೋಜನೆ ಅವಧಿಯಲ್ಲಿ ರಾಷ್ಟ್ರೀಯ ಉತ್ಪನ್ನ ಮತ್ತು ಕೃಷಿವಲಯದ ವರಮಾನ ಶೇಕಡ 18ರಷ್ಟು ಹೆಚ್ಚಿತು. ಕೃಷಿ ಉತ್ಪಾದನೆಯ ಏರಿಕೆ ಆರ್ಥವ್ಯವಸ್ಥೆಯ ಇತರ ಕ್ಷೇತ್ರಗಳ ಬೆಳವಣಿಗೆಗೆ ಸ್ಫೂರ್ತಿದಾಯಿಯಾಯಿತು.

ಎರಡನೇ ಯೋಜನೆಯಲ್ಲಿ ಬೇಸಾಯ ಕಾರ್ಯಕ್ರಮವನ್ನು ಹೆಚ್ಚಾತ್ತಿರುವ ಜನಸಂಖ್ಯೆಗೆ ಸಾಕಷ್ಟು ಆಹಾರ ನೀಡಿ, ವಿಶಾಖಪಟ್ಟಣಕ್ಕೆ ಒಳ್ಳುತ್ತಿದ್ದ ವೈಗಾರಿಕಾ ಆರ್ಥವ್ಯವಸ್ಥೆಗೆ ಅಗತ್ಯವಾದ ಕಚ್ಚಾವಸ್ತುಗಳ ಸರಬರಾಜು ಸಾಧ್ಯವಾಗುವಂತೆ ರೂಪಿಸಲಾಯಿತು. ಬೇಸಾಯ ಹಾಗೂ ವೈಗಾರಿಕೆಗೆ ಅಧಿಕ ಉತ್ಪನ್ನಗಳನ್ನು ರಫ್ತು ಮಾಡಲು ಸಾಧ್ಯವಾಗುವಂತೆ ಕಾರ್ಯಕ್ರಮ ರೂಪಿಸಲಾಯಿತು. ಎರಡನೇ ಯೋಜನೆಯಲ್ಲಿ ಬೇಸಾಯ ಮತ್ತು ಸಾಮೂಹಿಕಾಭಿವೃದ್ಧಿಗೆ 568ಕೋಟಿ ರೂಪಾಯಿ ಬಂಡವಾಳ ಹೂಡಲಾಯಿತು. ಎರಡನೇ ಯೋಜನೆ ಅಂತ್ಯದಲ್ಲಿ ಕೃಷಿ ಉತ್ಪಾದನೆಯು ಸೂಚ್ಯಂಕವು 142ಕ್ಕೂ ಆಹಾರ ಧಾನ್ಯಗಳ ಸೂಚ್ಯಂಕವು 137ಕ್ಕೂ ಇತರ ಬೆಳೆಗಳ ಸೂಚ್ಯಂಕವು 153ಕ್ಕೂ ಏರಿತು.

ಎರಡನೇ ಯೋಜನೆಯಲ್ಲಿ ಎರಡು ವರ್ಷ ಬೇಸಾಯ ಪರಿಸ್ಥಿತಿ ಅನನುಕೂಲಕಾರಿಯಾಗಿದ್ದರೂ ಕೃಷಿ ಉತ್ಪಾದನೆ ಶೇಕಡ 21ರಷ್ಟು ಹೆಚ್ಚಿತು. ನೀರಾವರಿ ವಿಸ್ತರಣೆ ಮತ್ತು ಬೀಜ ಉತ್ಪಾದನೆ ಕಾರ್ಯಕ್ರಮದ ಸಾಲಿಭ್ಯವನ್ನು ಬಳಸಿಕೊಂಡಿದ್ದರೆ ಹೆಚ್ಚಿನ ಪ್ರಗತಿ ಸಾಧ್ಯವಾಗುತ್ತಿತ್ತು. ಎರಡನೇ ಯೋಜನೆಯ ಮೊದಲಿನ ಎರಡು ವರ್ಷ ಗೊಬ್ಬರದ ಬಳಕೆ ಪ್ರಮಾಣ ಅಲ್ಪಮಟ್ಟದಲ್ಲಿತ್ತು.

ಎರಡನೇ ಯೋಜನೆಯಲ್ಲಿ 8.2ಕೋಟಿ ಟನ್ ಆಹಾರ ಧಾನ್ಯಗಳನ್ನು 1.12 ಕೋಟಿ ಟನ್ ಕಬ್ಬನ್ನೂ 7ಲಕ್ಷ ಟನ್ ಎಣ್ಣೆಬೀಜಗಳನ್ನೂ, 53ಲಕ್ಷ ಬೇಲ್ ಹತ್ತಿಯನ್ನೂ, 41ಲಕ್ಷ ಬೇಲ್ ಸೆಣಬನ್ನು ಬೆಳೆಯಲಾಯಿತು.

ಅಡಚಣೆ ನಿವಾರಣೆ

ಮೂರನೇ ಯೋಜನೆಯು ಕೃಷಿ ಕಾರ್ಯಕ್ರಮವು ರೂಪಿಸುವಾಗ ಪ್ರಗತಿಗೆ ಧಕ್ಕೆಯಾಗುವ ಆರ್ಥಿಕ ಹಾಗೂ ಸರಕುಗಳ ಅಡಚಣೆ ತೆರೆಯುವುದೇ ಮುಖ್ಯೋದ್ದೇಶವಾಗಿತ್ತು. ಮೂರನೇ ಯೋಜನೆಗೆ ಹೂಡಿದ 10,400ಕೋಟಿ ರೂಪಾಯಿ ಬಂಡವಾಳದಲ್ಲಿ 1460ಕೋಟಿ ರೂಪಾಯಿಯನ್ನು ಬೇಸಾಯ, ಸಣ್ಣ ನೀರಾವರಿ, ಭೂಸಾರ ಸಂರಕ್ಷಣೆ ಮತ್ತು ಸಹಕಾರ ಕ್ಷೇತ್ರಕ್ಕೆ ವಿನಿಯೋಗಿಸಲಾಯಿತು.

ಮೂರನೇ ಯೋಜನೆಯ ಮೊದಲ ಮೂರುವರ್ಷ ಕೃಷಿ ಕ್ಷೇತ್ರದ ಸಾಧನೆ ತೃಪ್ತಿದಾಯಕವಾಗಿರಲಿಲ್ಲ. ಮಂದಗತಿಯ ಬೆಳೆ ಹಾಗೂ ಆರ್ಥವ್ಯವಸ್ಥೆಯಿಂದ ಆಹಾರಧಾನ್ಯ ಮತ್ತಿತರ ಕೃಷಿ ಉತ್ಪನ್ನಗಳ ಆಮದನ್ನು ಅಧಿಕ ಪ್ರಮಾಣದಲ್ಲಿ ಅವಲಂಬಿಸಬೇಕಾಯಿತು. ಮೂರನೇ ಯೋಜನೆಯ ಅವಧಿಯಲ್ಲಿ 2.5ಕೋಟಿ ಟನ್ ಆಹಾರಧಾನ್ಯವನ್ನೂ, 39ಲಕ್ಷ ಬೇಲ್ ಹತ್ತಿಯನ್ನೂ, 15ಲಕ್ಷ ಬೇಲ್ ಸೆಣಬನ್ನೂ ಆಮದು ಮಾಡಿಕೊಳ್ಳಬೇಕಾಯಿತು.

1964—65ರಲ್ಲಿ ಆಹಾರ ಉತ್ಪಾದನೆಯಲ್ಲಿ ಸುಧಾರಣೆಯಾಗಿ 1967—68ರಲ್ಲಿ ಅದ್ಭುತ ಸಾಧನೆ ಮಾಡಲಾಯಿತು. ಆ ವರ್ಷ 9 51ಕೋಟಿ ಟನ್ ಆಹಾರಧಾನ್ಯ ಉತ್ಪಾದನೆ ಮಾಡಿ ಅತಿಹೆಚ್ಚು ಉತ್ಪಾದನೆಯ ಹೊಸ ದಾಖಲೆ ನಿರ್ಮಿಸಲಾಯಿತು.

ಅಧಿಕ ಇಳುವರಿ ಬೀಜಗಳ ಬಿತ್ತನೆಯಿಂದ ಇದು ಸಾಧ್ಯವಾಯಿತು. ಸುಧಾರಿತ ಬೀಜಗಳ ಬಳಕೆ ವ್ಯಾಪಕವಾಯಿತು. 1966ನೇ ಇಸವಿಯು ಖಾರಿಫ್ ಬೆಳೆಯು ಕಾಲದಿಂದ ಸಕಾಲವಾಗಿ ಮೂರು ವಾರ್ಷಿಕ ಯೋಜನೆಗಳಲ್ಲಿ ಅಧಿಕ ಇಳುವರಿ ಬೀಜಗಳನ್ನು ವ್ಯಾಪಕವಾಗಿ ಬಳಸಲಾಯಿತು.

ಹಸಿರು ಕ್ರಾಂತಿಯ ಉಗಮನ

1969ರಲ್ಲಿ ನಾಲ್ಕನೇ ಯೋಜನೆಯ ಆರಂಭಕಾಲದಲ್ಲಿ 92ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಧಿಕ ಇಳುವರಿ ಬೀಜ ಬಿತ್ತನೆಯಾಗಿತ್ತೆಂದು ಅಂದಾಜು ಮಾಡಲಾಯಿತು. ಈ ಸ್ವತಃ ಬೇಸಾಯವೇ ನಾಲ್ಕನೇ ಯೋಜನೆಯ (1969—74) ಕೃಷಿ ಉತ್ಪಾದನೆಯ ತಂತ್ರವಾಗಿದೆ. ಮುಂದಿನ ದಶಕದಲ್ಲಿ ವರ್ಷಂಪ್ರತಿ ಕೃಷಿ ಉತ್ಪಾದನೆಯಲ್ಲಿ ಶೇಕಡ 5ರಷ್ಟು ಏರಿಕೆ ಸಾಧಿಸಲೆಂದು ನಾಲ್ಕನೇ ಯೋಜನೆಯಲ್ಲಿ ಕೃಷಿ ವಲಯಕ್ಕೆ 2728 2ಕೋಟಿ ರೂಪಾಯಿ ಬಂಡವಾಳ ಹೂಡಲಾಗಿದೆ.

ಸಂಕೋಚಣಾ ಕಾರ್ಯಸನ್ನಿವೇಶ, ನೀರಾವರಿ ವಿಸ್ತರಣೆ, ನೀರಾವರಿ ವಿಧಾನದಲ್ಲಿ ಬದಲಾವಣೆ ಹಾಗೂ ಗೊಬ್ಬರ ಬಳಕೆಯಲ್ಲಿ ಏರಿಕೆ—ಇವು ನಾಲ್ಕನೇ ಯೋಜನೆಯ ಗುರಿ. ಪ್ರಮುಖ ವಾಣಿಜ್ಯ ಬೆಳೆಗಳ ಉತ್ಪಾದನಾ ಮಟ್ಟವನ್ನು ಆಯ್ಕೆ ಮಾಡಿದ ಪ್ರದೇಶಗಳಲ್ಲಿ ತೀವ್ರತಮ ಪ್ರಯತ್ನದಿಂದ ಹೆಚ್ಚಿಸಲು ಅಧಿಕ ಬೆಳೆತೆಗೆಯಲು ಹಾಗೂ ಕೃಷಿ ವೂರುಕಟ್ಟಿ ವ್ಯವಸ್ಥೆ ಸಧಾರಿಸಲು ನಾಲ್ಕನೇ ಯೋಜನೆಯಲ್ಲಿ ಏರ್ಪಾಡಿಸಲಾಗಿದೆ.

ಅಭಿವೃದ್ಧಿತ ಆಹಾರಧಾನ್ಯ ಆಮದು, ಕೃಷಿ ಉತ್ಪಾದನೆಗೆ ಏರಿಕೆ, ಆಹಾರ ಸರಬರಾಜಿನಲ್ಲಿ ಸಮತೋಲನ ಹಾಗೂ ಬೆಲೆಗಳ ಮಟ್ಟದಲ್ಲಿ ಸ್ಥಿರತೆ ರೂಪಿಸಲು ನಾಲ್ಕನೇ ಯೋಜನೆಯ ಕಾಲದಲ್ಲಿ ಕಾರ್ಯ ದಾಸ್ತಾನು ಮಾಡಲಾಗುತ್ತದೆ.

ಪ್ರಚಲಿತ ಯೋಜನೆಗೆ ಯೋಜನಾ ತಜ್ಞರು ಶಿಫಾರಸು ಮಾಡಿರುವ ಕಂತ್ರದಿಂದ 12.9ಕೋಟಿ ಟನ್ ಆಹಾರಧಾನ್ಯ, 1.5ಕೋಟಿ ಟನ್ ಕಬ್ಬು, 1.05 ಕೋಟಿ ಟನ್ ಎಣ್ಣೆಬೀಜಗಳು ಮತ್ತು 80ಲಕ್ಷ ಬೇಲ್ ಹತ್ತಿ ಉತ್ಪಾದನೆ ಮಾಡುವ ಪ್ರಿಂಟ್ಸ್‌ಯಿವೆ. ಇದೇ ಸಮಯದಲ್ಲಿ ಸಮರ್ಥನೀಯವಾದ ಕೃಷಿ ಆರ್ಥವ್ಯವಸ್ಥೆ ಸೃಷ್ಟಿಸಲು ಹಾಗೂ ಆಹಾರ ಕ್ಷೇತ್ರದಲ್ಲಿ ಸ್ವಯಂಪೂರ್ಣತೆ ಸಾಧಿಸಲು ಶ್ರಮಿಸಬೇಕಾಗುತ್ತದೆ.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಫೋನ್ : 526

ಸ್ಥಾಪನೆ: 1921

ಸಂಪುಟ ೪೯
ಸಂಚಿಕೆ ೪೯
VOL. 49
No. 49

ನವಯುಗ

ಸ್ಥಾಪಕರು:
ದಿ ಎ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ ರೂ. 10/-

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೨೦—೮—೧೯೭೦

Advt. Rate Rs. 3/- per colm. cm.

ಕುರಿ ಸವಾರಿ ಏಕೆ?

ದೇಶದ ಮೂಲೆ ಮೂಲೆಗಳಿಂದ ಕೇಂದ್ರೀಯ ಶಾಲೆಗಳಿಗೆ ಬೇಡಿಕೆ ಬರುತ್ತಿದೆ; ಅವನ್ನು ಪೂರಯಿಸುವುದು ಸರಕಾರಕ್ಕೆ ಅಸಾಧ್ಯವಾಗಿದೆ-ಇದು ಕೇಂದ್ರ ಶಿಕ್ಷಣ ಸಚಿವ ಡಾ। ವಿ. ಕೆ. ಆರ್. ವಿ. ರಾವ್ ಅವರ ಕಳವಳ. ಮಂಗಳೂರು ಬಂದರ ಯೋಜನೆಯ ಪಣಂಬೂರಿನಲ್ಲಿ ಕೇಂದ್ರೀಯ ಶಾಲೆಯ ಶಿಬ್ಬಡದ ಅಡಿಗಲ್ಲು ಇಡುವ ವೇಳೆ ಹೊರಟ ಉದ್ಗಾರವಿದು. ಜನತೆ ತಮಗೆ ಕೇಂದ್ರೀಯ ಶಾಲೆಗಳು ಬೇಕೆಬೇಕೆನ್ನುತ್ತಿದೆ; ಆದರೆ, ಕೇಂದ್ರ ಸರಕಾರವು ಅವಶ್ಯವಿದ್ದಷ್ಟು ಶಾಲಾಕಾಣಿಕೆ ಮಾಡುವುದಿಲ್ಲ ಎಂಬ ಕಟು ಸತ್ಯ ಇದರಿಂದ ಬಹಿರಂಗವಾಗುತ್ತದೆ.

ಪಣಂಬೂರು ಬಂದರ ಪ್ರದೇಶ. ಅಲ್ಲಿ ಹಲವು ಭಾಷಾಧಾರಿಗಳು ದುಡಿಯುತ್ತಿರುತ್ತಾರೆ. ಅವರ ಮಕ್ಕಳಿಗೆಂದು ಹಿಂದಿ ಮಧ್ಯಮದ ಶಾಲೆಯೊಂದನ್ನು ತೆರೆಯಲಾಯಿತು. ಹಿಂದೀ ವಿರೋಧಿ ನೀತಿಗೆ ಬೆಲೆ ಬಂದಾಗ, ಇಂಗ್ಲಿಷ್ ಭಾಷೆಗೂ ಅಲ್ಲಿ ಸ್ಥಾನ ದೊರಕಿತ್ತು. ಕೇಂದ್ರೀಯ ಶಾಲೆಗಳು ಹಿಂದೀ ಮಧ್ಯಮದವೇ ಆಗಿರಬೇಕೆಂದು ವಾದಿಸುವವರೂ ಇದ್ದಾರೆ. ಆದು ಇಂಗ್ಲಿಷ್ ಮಧ್ಯಮದ್ದಾಗಿರಬೇಕೆನ್ನುವವರು ಇದ್ದಾರೆ. ಆಂದರೆ, ಕನ್ನಡ ರಾಜ್ಯದ ಒಂದು ಊರಿನ ಶಾಲೆಯಲ್ಲಿ ಕನ್ನಡಕ್ಕೆ ಸ್ಥಾನ—ಮೂರನೇ ಆದ್ಯತೆಯದನ್ನು ಎಲ್ಲರೂ ವಿರೋಧಿಸುತ್ತಾರೆ. ಇಂಗ್ಲಿಷ್ ಶಾಲೆಗಳಲ್ಲಿ ಕಲಿತವರು ತಮ್ಮನ್ನು ಸೇರಿಸಿಕೊಳ್ಳುವುದಿಲ್ಲವೆಂದು ತಿಳಿದು ಕನ್ನಡ ಶಾಲೆಗಳಲ್ಲಿ ಕಲಿತವರನ್ನು ಕೇಳಿಕಾಣುವಿದ್ದ ಕಾಲವೊಂದಿತ್ತು. ಈ ಭಾವನೆ ಇಂದಿಗೂ ದೂರವಾಗಿಲ್ಲ. ಆಡಳಿತ ಭಾಷೆಯ ಸ್ಥಾನಕ್ಕೆ ಕನ್ನಡವನ್ನೇರಿಸಲು ಕೆಲವು ಅಧಿಕಾರಿಗಳು ಅಡೆತಡೆಯೊಡ್ಡುತ್ತಿದ್ದಾರೆಂದು ಉನ್ನತ ಸ್ಥಾನಾಪನ್ನರೇ ದೂರುತ್ತಿದ್ದಾರೆ ಕನ್ನಡ ಇತ್ಯಾದಿ ಭಾರತೀಯ ಭಾಷೆಗಳನ್ನು ಬೇರಧಿಸುವ 'ಪಂಡಿತ ವರ್ಗ'ದ ತಲೆ ಮೆಟ್ಟುವುದರಲ್ಲಿ ಈ "ಬಿಳಿ ಆನೆ"ಗಳು ಹಿಂದಿನಂದಲೂ ಪ್ರಯತ್ನ ಪಡಿಸಿ; ತುಕೋಳ ಆಯೋಜಿತ ವರದಿಯನ್ನು ಅನುಷ್ಠಾನಕ್ಕೆ ತರುವಾಗ ಪಂಡಿತ ಬಲಿಯನ್ನು ಈ ಆಂಗ್ಲವಾಮನರು ಪಟ್ಟಿಯೇ ಬಿಟ್ಟಿರು. ಇನ್ನೀಗ ಪಂಡಿತರು ತಲೆಯೆತ್ತಬೇಕಾದರೆ, ಸತ್ಯಾಗ್ರಹಾದಿಯಲ್ಲಿ ಸಾಗಿ ಸಾಯಬೇಕಾಗಲೂ ಬಹುದು. ಮಗು ಬೊಬ್ಬೆ ಹಾಕಿ ಕೂಗದೆ ಇದ್ದರೆ, ತಾಯೂಡುವ ಬುದ್ಧಿ ಸರಕಾರಗಳಿಗಿಲ್ಲ. ಆಂದರೆ, ಬ್ರಿಟಿಷರ ಒಡೆದು ಆಳುವ ನೀತಿಯನ್ನು ನಾವಿನ್ನೂ ಬಿಟ್ಟುಕೊಟ್ಟಿಲ್ಲ. ಹಿಂದೀ ಮಧ್ಯಮದ ವಿಶ್ವವಿದ್ಯಾಲಯ ಬೇಕು; ಕಾಲೇಜುಗಳು ಬೇಕು ಎಂದು ಮುಂತಾದ ಬೇಡಿಕೆಗಳನ್ನು ಕನ್ನಡಿಗರು ಮುಂದಿಡುತ್ತಾರೆ. ವಿಶ್ವವಿದ್ಯಾಲಯಗಳಲ್ಲಿ ಕನ್ನಡವೇ ಮಧ್ಯಮವಾಗಬೇಕೆಂಬುದನ್ನು ಇಂಥವರೇ ವಿರೋಧಿಸುತ್ತಾರೆ. ಈ ಬಗೆಯ ಗೋಮುಖ ವ್ಯಾಘ್ರಗಳೇ ಉನ್ನತ ಸ್ಥಾನದಲ್ಲೂ ರಾಜ್ಯಕೀಯ ಪೀಠಗಳಲ್ಲೂ ವಿರಾಜಿಸುತ್ತಿರುವುದರಿಂದ ನಾವು ಎಲ್ಲವನ್ನೂ ಮಾಡಹೋಗಿ ಏನನ್ನೂ ಮಾಡುತ್ತಿಲ್ಲ.

ಕೇಂದ್ರೀಯ ಶಾಲೆಗಳ ಆಗತ್ಯವೇನು? ರಾಷ್ಟ್ರೀಯ ಐಕ್ಯವನ್ನು ಮೂಡಿಸುವುದಕ್ಕಾಗಿ ಇವು ಶಕ್ತಿಗತವಾಗಿವೆಯೆಂಬುದು ಸತ್ಯಕ್ಕೆ ದೂರ. ಹಿಂದೆ ಬಿಳೀ ಕುರಿಗಳು ತಮ್ಮನ್ನು ಮೇಲ್ಮಟ್ಟದವರೆಂದು ತಿಳಿದುಕೊಂಡು ಇತರರಿಂದ ಸೆಟೆದು ನಿಂತು ಬೆಳೆದಂತೆಯೇ ಇಂದು ಈ ಹಿಂದೀ ಕುರಿಗಳು ಕನ್ನಡ ಕುರಿಗಳ ಮೇಲೆ ಸವಾರಿ ಮಾಡುವ ಲವಲವಿಕೆ ಕೋರಿಸ ತ್ತಾರೆಯೆ.? ಕೇಂದ್ರೀಯ ಶಾಲೆಗಳು ಮಾತ್ರ ಏಕರಾಷ್ಟ್ರ ವಾದವನ್ನು ಕಾರ್ಯರೂಪಕ್ಕೆ ತರುತ್ತಿವೆಯೆನ್ನುವುದಾದರೆ ಅದು ಸತ್ಯಕ್ಕೆ ಬಹಳ ದೂರ. ರಾಷ್ಟ್ರೀಯ ಐಕ್ಯಭಾವ ಆಡಳಿತ ಹೂರ ಕೈಯಲ್ಲಿದೆಯೆಂಬುದರಿಂದ ಬರುವುದಿಲ್ಲ. ಅಲ್ಲಿ ಕಲಿಸುವ ಪಾಠ ಪಟ್ಟಿ, ಬೋಧಿಸುವ ಗುರುಗಳು—ಅಲ್ಲಿನ ವಾತಾವರಣಗಳಿಂದ ಮೂಸ್ರ ಬರುತ್ತದೆ. ದೇಶದ ಬೇರೆ ಬೇರೆ ರಾಜ್ಯಗಳಲ್ಲಿನ ಪಾಠ ಪಟ್ಟಿಯು ಬೇರೆ ಬೇರೆಯೂಗಿದ್ದು, ಬೇರೆ ಬೇರೆ ರಾಜ್ಯಗಳ ಶಿಕ್ಷಣ ವ್ಯವಸ್ಥೆಯು ಬೇರೆ ಬೇರೆಯೂಗಿರುವಾಗ, ಬೇರೆ ಭಿನ್ನಿಕೆಯ ಕೇಂದ್ರೀಯ ಶಾಲೆಗಳಿಂದ ಏಕೃಭಾವನೆ ಮೂಡುವುದೆಂದು ತಿಳಿಯಲು ಅದು ಅಲ್ಲಾನುದ್ದೀನನ ದೀಪವಲ್ಲ. ನಿಜವಾಗಿ ಏಕರಾಷ್ಟ್ರವೆಂಬ ಭಾವನೆ ತಮ್ಮ ಹುಡುಗ್ಲಲ್ಲಿ ಮೂಡಬೇಕಾದರೆ, ಸಮಲ ಭಾರತಕ್ಕೆ ಒಂದು ಸಾಮಾನ್ಯ ಶಿಕ್ಷಣ ಪ್ರಣಾಳಿಯಿರಬೇಕು; ಎಲ್ಲಪ್ರಾಂತ್ಯ ಭಾಷಾಮಧ್ಯಮದ ಕೇಂದ್ರೀಯ ಶಾಲೆಗಳಿಂದ ಬೇಕು. ಪ್ರಭಾವಶಾಲಿ ಔಷಧಿಯನ್ನು ಹೇಗೆ ಸೇವಿಸಿದರೂ ಅದು ಪರಿಣಾಮಕಾರಿಯಾಗುತ್ತದೆ. ಏಕ್ಯ ಸಾಧಕ ಪಾಠ ಪ್ರಣಾಳಿಯವ ಮಧ್ಯಮದಲ್ಲಿ ವ್ಯವಹರಿಸಿದರೂ ಅದು ಯಶಗಳಿಸುತ್ತದೆ. ಶಿಕ್ಷಣಾಂಗವನ್ನು ಪ್ರಯೋಗಶಾಲೆಯಾಗಿಸುವ ನೈಜ್ಞಾನಿಕರ ಸಂಖ್ಯೆ ಕಡಿಮೆಯಾಗುತ್ತದೆ. ಶ್ರೀ ಭಪಲಾ ಅವರು ಕೇಂದ್ರೀಯ ಶಿಕ್ಷಣ ಸಚಿವರಾಗಿದ್ದಾಗ ಇಂಕಡದೊಂದು ಪ್ರಯತ್ನ ನಡೆಯಿತು. ಶಿಕ್ಷಣ ಶಾಖೆಯನ್ನು ಸಂಪೂರ್ಣವಾಗಿ ಕೇಂದ್ರ ಸರಕಾರಕ್ಕೆ ಒಪ್ಪಿಸಿ ಕೊಡಲು ಹಲವು ರಾಜ್ಯ ಸರಕಾರಗಳು ಫಿರಾಕರಿಸಿದುವು. ಡಾ। ವಿ. ಕೆ. ಆರ್. ವಿ. ರಾವ್ ಅವರು ಇದಲಾದ ರಾಜ್ಯಕೀಯ ಪರಿಸ್ಥಿತಿಯಲ್ಲಿಯೂ ಈ ಸಾಧನೆಯನ್ನೆಳೆ ಮಾಡಿದರೆಂದರೆ, ಅವರು ದೇಶನನ್ನು ಉಳಿಸಿದಂತೆ. ಇಲ್ಲವಾದಲೆ, ಅವರು ಅವರವರಿಗೆ ಬೇಕಾದಂತೆ ಶಿಕ್ಷಣವನ್ನು ರೂಪಿಸಿ, ತಮತಮಗೆ ಬೇಕಾದಂತೆ ದೇಶವನ್ನು ತುಂಡು ತುಂಡಾಗಿ ಎಳೆಯು ತೊಡಗುತ್ತಾರೆ ಏಕರಾಷ್ಟ್ರವಾದ ಬರಿಯ ಪುಸ್ತಕದ ಬದನೇಕಾಯೂಗುತ್ತದೆ.

ದಿ। ಹುರುಳಿ

ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ವಾಙ್ಮಯ ತಪಸ್ವಿ ಶ್ರೀ ಹುರುಳಿ ಭೀಮರಾಯರು ಅಳವ ವಸಂತಗಳನ್ನು ಇಲ್ಲಿ ಕಳೆದು ತಮ್ಮ ಕೊನೆಯುಸಿರೆಳೆದರು. ಕನ್ನಡದಲ್ಲಿ ಹೊಸತನವು ಕಾಲಿರಿಸಿದಾಗ ಶ್ರೀ ಹುರುಳಿಯವರು ಕನ್ನಡದ ದೋಧಕರಾಗಿ, ಪರಿಹಾರರಾಗಿ, ಪತ್ರಿಕಾ ವ್ಯವಸಾಯಿಗಳಾಗಿ ಕನ್ನಡಾಂದೆಯ ಸೇವೆಯಲ್ಲಿ ತಮ್ಮಲ್ಲಿಯುಷ್ಯವನ್ನು ಕೇಯವನ ಕಾರ್ಯದಲ್ಲಿ ವಿನಿಯೋಗಿಸಿದ್ದರು. ಈಗತಾನೇ ಶತಮಾನೋತ್ಸವನ್ನು ಆಚರಿಸಿದ ಕವಿವರ ಮುದ್ದಣ ಮತ್ತು ಕಪ್ಪ ಡದಲ್ಲಿ ಹೊಸತನ ತುಂಬುವಲ್ಲಿ ಸಮನಾಶಿಗಳಾಗಿ ದುಡಿದಿದ್ದ ಶ್ರೀ ಪಂಜೆ ಮಂಗೇಶರಾಯರ ಒಡಹುಟಿದವಳಾಗಿದ್ದ ಶ್ರೀ ಹುರುಳಿಯವರು ಮುದ್ದಣನ ಬಗ್ಗೆ ಅಧಿಕೃತವಾಗಿ ವಿಷಯವಾಡಬಲ್ಲ ಏಕೈಕ ವ್ಯಕ್ತಿಯೂಗಿದ್ದರು. ಶ್ರೀ ಹುರುಳಿಯವರು "ಕಂಠೀರವ" ವೆಂಬ ವಾರ ಪತ್ರಿಕೆಯನ್ನು ೧೯೧೯ರಿಂದ ೧೯೩೬ರವರೆಗೂ ಸಂಪಾದಿಸಿ ಕೊಂಡು ಬಂದಿದ್ದು ಮುಂದೆ ಕನ್ನಡ ಧರ್ಮಾಧ್ಯಕ್ಷ ಕಾರಣದಿಂದ ಆ ಕಾರ್ಯವನ್ನು ನಿಲ್ಲಿಸಿದರು. ಪಾಸನಟೋಪಿ, ಮುಗುಳು ದುಂಬಳು ಮೊದಲಾದ ಗ್ರಂಥಗಳು ಅವರ ಅನ ಪಮ ಕೃತಿಗಳು. ಸದಾ ಸ್ನೇಹ ಶೀಲರಾದ ಶ್ರೀಯುತರು ಕನ್ನಡ ಸಾಹಿತ್ಯಕ್ಕೆ ಬಹ ಮಬೀ ಸೇವೆ ಸಲ್ಲಿಸಿದ ಧೀಮಂತ ವ್ಯಕ್ತಿ. ಶ್ರೀ ಹುರುಳಿ ಭೀಮರಾಯರ ನಿಧನದಿಂದ, ೧೯-೩೦ನೇ ಶತಮಾನದ ಸೇತುವೆಯೊಂದು ನಿಂತ ಮಾತ್ರಕ್ಕೆ ಸಪಟ್ಟಿಯೊಬ್ಬ ಇಲ್ಲಿಲ್ಲವಾದಂತಾಯಿತು. ದಿವಂಗತ ರಾಯರು ಜೆಂಡೆ, ಇಬ್ಬರು ಗಂಡು ಮಕ್ಕಳು, ಮೂವರು ಹೆಮ್ಮಕ್ಕಳು ಹಾಗೂ ಅಪಾರ ಆಪ್ತೇಷ್ಟರ ದುಃಖದಲ್ಲಿ "ನವಯುಗ"ವೂ ಪಾಲುಗೊಳ್ಳುತ್ತದೆ.

ವನಮಹೋತ್ಸವ

ಕಡಿಯೂಳಿ ವ್ಯಾಧ್ಯ ಪ್ರಾಥಮಿಕ ಶಾಲೆಯಲ್ಲಿ ವನಮಹೋತ್ಸವವು ಜುಲ್ಯಾ ೫ರಂಗಳ ಕೊನೆಯ ವಾರದಲ್ಲಿ ಯು. ಕಮಲಾ ಬೈ ಪೈಸ್ಕೂಲಿನ ಸಹಾಯಕ ಅಧ್ಯಾಪಕ ಪಿ. ರಾಮಚಂದ್ರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರು ಸ್ವಾಗತಿಸಿದ ಬಳಿಕ ವಿದ್ಯಾರ್ಥಿಗಳು ಗೀತೆಯನ್ನು ಹಾಡಿದರು. ವಿಶ್ವೇಶ್ವರ, ರಾಘವೇಂದ್ರ, ಜಗದೀಶ ಪೈ ಕುತ್ತು ಹಯಗವನ ಉಪಾಧ್ಯಕ್ಷ ಇವರು ವನಮಹೋತ್ಸವದ ಕುರಿತಾಗಿ ಭಾಷಣಮಾಡಿದರು. ಅಧ್ಯಕ್ಷರು ವನಮಹೋತ್ಸವದ ಆಗತ್ಯದ ಬಗ್ಗೆ ಒತ್ತಿ ಹೇಳಿ ಪ್ರತಿ ವಿದ್ಯಾರ್ಥಿಗಳೂ ಮನೆಯಲ್ಲಿ ಹಸಿರು ತ್ರಾಣತಿಯನ್ನು ನಡಿಸಿ ಪ್ರಯತ್ನಿಸಬೇಕೆಂದು ಹೇಳಿದರು. ಅಂತ್ಯದಲ್ಲಿ ಕು. ಶ್ಯಾಮಲಾಳು ಕವಿತಾವಾಚನವನ್ನು ನಡಿಸಿದಳು. ಮುಖ್ಯೋಪಾಧ್ಯಾಯರು ಧನ್ಯವಾದವಿತ್ತರು.

ಜಿಲ್ಲಾ ವಯಸ್ಕರ ವಿದ್ಯಾಭ್ಯಾಸ ಸಮಿತಿಗೆ ಆಯ್ಕೆ

ದ.ಕ.ಜಿಲ್ಲಾ ವಯಸ್ಕರ ವಿದ್ಯಾಭ್ಯಾಸ ಸಮಿತಿಗೆ ಉಡುಪಿ ತಾಲೂಕು ಬೋರ್ಡಿನ ಪ್ರತಿನಿಧಿಯನ್ನಾಗಿ ತಾಲೂಕು ಬೋರ್ಡು ಸದಸ್ಯರೂ ಕರುಣ ನಕೇತನದ ಶ್ರೀ ಶಿಕಾರಿ ವಿಠಲಯಂ ಪಿಂಟೋರವರನ್ನು ಸರ್ವಾನುಮತದಿಂದ ಆರಿಸಲಾಗಿದೆ.

ಕಲ್ಕಂಜೆ ಶ್ರೀನಿವಾಸಾಚಾರ್ಯರಿಗೆ ನಿಧನ

ಆಲೆಮೂರು ಗ್ರಾಮದ ಅಭ್ಯುದ್ಧಿಗಾಗಿ ದುಡಿದವರೂ ಧಾರ್ಮಿಕ ಸ್ಥಕ್ತಿಗಳೂ ಪರೋಪಕಾರಿಗಳೂ ಆದ ಶ್ರೀ ಕಲ್ಕಂಜೆ ಶ್ರೀನಿವಾಸಾಚಾರ್ಯರು ತಾ. 10ರಂದು ತಮ್ಮ 83ನೇ ವಯಸ್ಸಿನಲ್ಲಿ ನಿಧನರಾದರು. ದಿವಂಗತರು ಉದಾರಶೀಲರಾಗಿ ಜನಾನುರಾಗಗಳಿಸಿದ್ದರು.

ಉಡ್ತಿ ಮುನ್ಸಿಫ್ ಕೋರ್ಟಿನಲ್ಲಿ

S. C. No. 65/1970

ಸಂಕಮ್ಮ ಸೆಟ್ಟಿ —ವಾದಿಯು
ಮತ್ತು
ಸುಬ್ಬ ಮರಕಾಲ —ಪ್ರತಿವಾದಿ

ಪ್ರತಿವಾದಿ—ಸುಬ್ಬ ಮರಕಾಲ, ತೀರ್ಥ ಮರಕಾಲ್ತಿ ಮಗ, ವೀರಾವರ ಗ್ರಾಮದ ಎಳ್ಳಂಕಳ್ಳಿಯವನು.

ಇವರಿಗೆ ಈ ನೂಲಕ ತಿಳಿಯಪಡಿಸುವುದೇನೆಂದರೆ—

ವಾದಿಗೆ ಪ್ರತಿವಾದಿಯು ತಾ. 2.10.61 ರಲ್ಲಿ ಬರಕೊಟ್ಟ ದಿನಾಂಕ ನೋಟಿನ ಮೇರೆಗೆ ಬಹಾ ಅಸಲು ಬಡ್ಡಿ ಬಾಕಿ ವಜೀರು ತೀರಿವಾದಿಯು ಪ್ರತಿವಾದಿಯು ಮೇಲೆ ಮೂಡಿದ ಮೇಲಿನ ದಾವೆಯು ಮೇಲ್ಕಂಡ ಕೋರ್ಟಿನಲ್ಲಿ ಪ್ರತಿವಾದಿಯ ಅಪೈರು ನೋಟಿನ ಬಗ್ಗೆ ತಾರೀಕು 14.9.70ಕ್ಕೆ ಇಪ್ಪತ್ತೆರುತ್ತದೆ ಎಂಬ ಸಾಗ್ತಿ ಈ ಮೂಲಕ ಪ್ರತಿವಾದಿಗೆ ತಿಳಿಸೋ ಪಾಗುತ್ತದೆ.

B. Ananda Shetty
Advocate for plaintiff

ಉಡುಪಿ, ತಾ. 19.8.70.

ವೈದ್ಯಕೀಯ ಶಿಕ್ಷಣದಲ್ಲಿ ಹೊಸ ದೃಷ್ಟಿ

ಲೇ: ಕೆ. ಕೆ. ಷಾ
(ಕೇಂದ್ರ ಸರ್ಕಾರದ ಆರೋಗ್ಯ, ಕುಟುಂಬಯೋಜನೆ, ವಸತಿ, ಪುನರಾಭಿವೃದ್ಧಿಯ ಶಾಖೆಯ ಮಂತ್ರಿಗಳು)

ವೈದ್ಯಕೀಯ ಶಿಕ್ಷಣ ಮತ್ತು ಶ್ವೇತಕೋಶೋಗ್ಯ ವಿಷಯ ಹಳ್ಳಿ ಇತ್ತೀಚೆಗೆ ದೇಶದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದೆ. ಆದರೂ ಸಾಮಾನ್ಯ ಪ್ರಜೆಗೆ ಈ ಅಭಿವೃದ್ಧಿಯ ಪೂರ್ಣ ಸೌಲಭ್ಯಗಳು ದೊರೆಯುತ್ತಿಲ್ಲ. 1947ರಲ್ಲಿ ದೇಶದಲ್ಲಿ 25 ವೈದ್ಯಕೀಯ ಕಾಲೇಜುಗಳು ಮಾತ್ರ ಇದ್ದವು. ಇವುಗಳ ಸಂಖ್ಯೆ ಈಗ 95ಕ್ಕೆ ಏರಿದೆ. ವಿದ್ಯಾರ್ಥಿಗಳ ಸಂಖ್ಯೆಯೂ ವರ್ಷಕ್ಕೆ 2,000ದಿಂದ 12 000 ವರೆಗೆ ಏರಿಸೆ. ಆದರೆ 5,100ರಷ್ಟು ಜನಸಂಖ್ಯೆಗೆ ಸದ್ಯದಲ್ಲಿ ಒಬ್ಬ ವೈದ್ಯರಿದ್ದಾರೆ. ಈ ವೈದ್ಯರ ಮತ್ತು ಜನಸಂಖ್ಯೆ ಪ್ರಮಾಣ 1:3,500 ರಷ್ಟಿರಬೇಕು ಎಂಬುದಾಗಿ ಈ ಹಿಂದೆ ತಜ್ಞರ ಸಮಿತಿ ಶಿಫಾರಸು ಮಾಡಿದೆ. 1974ರ ವೇಳೆಗೆ ಕಾಲೇಜುಗಳಲ್ಲಿ ವಾರ್ಷಿಕ ಪ್ರವೇಶ ಸಂಖ್ಯೆ 13,000ಕ್ಕಷ್ಟಾದರೆ ಈ ಪ್ರಮಾಣ 1: 4,300ದಷ್ಟಕ್ಕೆ ಇಳಿಯಲಿದೆ ನಿರೀಕ್ಷೆ ಇದೆ. ದೇಶದಲ್ಲಿ ವೈದ್ಯರ ಸಂಖ್ಯೆ ಕಡಿಮೆ ಇರುವುದೊಂದೆ ಸಮಸ್ಯೆಯಲ್ಲ ಅವರ ಸೇವೆ ದೇಶದ ಎಲ್ಲ ಜನತೆಗೆ ಸಮನಾಗಿ ದೊರೆಯುತ್ತಿಲ್ಲದಿರುವುದು ಇನ್ನೊಂದು ಸಮಸ್ಯೆಯಾಗಿದೆ. ಭಾರತ ಹಳ್ಳಿಗಳ ದೇಶ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 80 ಮಂದಿ ಗ್ರಾಮೀಣರಾಗಿದ್ದಾರೆ. ಅವರಿಗೆ ಈ ವೈದ್ಯಕೀಯ ಸೌಲಭ್ಯ ನಗರ ಪ್ರದೇಶಗಳ ಜನರಿಗೆ ದೊರೆಯುತ್ತಿರುವಷ್ಟೇ ದೊರೆಯುತ್ತಿಲ್ಲ. ಇದೇ ಆ ಇನ್ನೊಂದು ಸಮಸ್ಯೆ. ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರ ಬಹುಸಂಖ್ಯೆಯಲ್ಲಿ ಶೇಕಡಾ 20ಕ್ಕಿಂತ ಕಡಿಮೆ ವೈದ್ಯರು ಸೇವೆ ಸಲ್ಲಿಸುತ್ತಿದ್ದಾರೆ. ಇದಕ್ಕೆ ಕೆಲವು ಕಾರಣಗಳಿವೆ. ಕಿಚ್ಚು ನೀರಿನ ಸೌಲಭ್ಯ, ಮಕ್ಕಳ ವಿದ್ಯಾಭ್ಯಾಸ ಸೌಲಭ್ಯಗಳು ವಿದ್ಯುಚ್ಛಕ್ತಿ ಮನರಂಜನೆಯ ಸೌಲಭ್ಯಗಳು ಇವುಗಳ ಕೊರತೆ ಇವೆಲ್ಲವೂ ಹಳ್ಳಿಗಳಲ್ಲಿ ನೆಲೆಸಲು ಅಡ್ಡಿಯಾಗಿವೆ. ಇವುಗಳ ಜೊತೆಗೆ ಮತ್ತು ವೃತ್ತಿ ಸಂಬಂಧವಾದ ತೊಂದರೆಗಳು ಕಾರಣವಾಗಿವೆ. ಇವುಗಳ ಮತ್ತು ವೃತ್ತಿ ಸಂಬಂಧವಾದ ತೊಂದರೆಗಳನ್ನು ಪರಿಶೀಲಿಸಲು 1960ರಲ್ಲಿ ಕೇಂದ್ರ ಆರೋಗ್ಯ ಮಂತ್ರಿಗಳು ಒಂದು ಸಮಿತಿಯನ್ನು ನೇಮಿಸಿದ್ದರು. ಈ ಸಮಿತಿಯು ಶಿಫಾರಸುಗಳ ಮೇಲೆ ರಾಷ್ಟ್ರೀಯ ವೈದ್ಯಕೀಯ ಆಗತ್ಯಗಳು ಮತ್ತು ಲಭ್ಯವಿರುವ ಸಂಪನ್ಮೂಲಗಳ ಹಿನ್ನೆಲೆಯಲ್ಲಿ ವೈದ್ಯಕೀಯ ಶಿಕ್ಷಣದ ಬೇರೆ ಬೇರೆ ಅಂಶಗಳನ್ನು ಪರಿಶೀಲಿಸಲು ವಿಶೇಷ ಸಮಿತಿಯನ್ನು ರಚಿಸಲಾಯಿತು. ಆ ಸಮಿತಿ ಮಾಡಿದ ಉಪಯುಕ್ತ ಶಿಫಾರಸುಗಳನ್ನು ಇತ್ತೀಚೆಗೆ ನಡೆದ ರಾಜ್ಯಗಳ ಆರೋಗ್ಯ ಮಂತ್ರಿಗಳು, ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳು, ವೈದ್ಯಕೀಯ ಕಾಲೇಜುಗಳ ಪ್ರಿನ್ಸಿಪಾಲರುಗಳು, ಹಾಲಿವೆಂಟರಿ ಸದಸ್ಯರು, ಡೀನ್‌ಗಳು, ಶಿಕ್ಷಣ ತಜ್ಞರ ಪರಿಶೀಲನೆಗೆ ಒಪ್ಪಿಸಿದೆ. ವೈದ್ಯಕೀಯ ಶಿಕ್ಷಣದಲ್ಲಿ ಕೆಲವು ಸುಧಾರಣೆಗಳನ್ನು ತರಲು ಸಮಿತಿ ಮಾಡಿದ್ದ ಶಿಫಾರಸಿಗೆ ಅಭೂತಪೂರ್ವ ಪ್ರತಿಕ್ರಿಯೆ ದೊರೆತಿದೆ. ಕೇಂದ್ರ ಆರೋಗ್ಯ ಮಂಡಳಿಯ ವತಿಯಿಂದಲೂ ಈ ಬಗ್ಗೆ ಸವಿವರವಾದ ಚರ್ಚೆ ನಡೆದಿದೆ.

ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ದಿನನಿತ್ಯದ ವೈದ್ಯಕೀಯ ಅವಶ್ಯಕತೆಗಳನ್ನು ಅರಿತು ಅವುಗಳಿಗೆ ಪರಿಹಾರ ನೀಡಬಲ್ಲ ವೈದ್ಯರ ಸಂಖ್ಯೆ ಹೆಚ್ಚಬೇಕು. ಸಾಮಾನ್ಯವಾಗಿ ಎಲ್ಲ ಕಾಯಿಲೆಗಳಿಗೆ ಪರಿಹಾರ ನೀಡಬಲ್ಲ ಮತ್ತು ಹೆಚ್ಚು ಶ್ರಮವಹಿಸಬಲ್ಲ ವೈದ್ಯರ ಅಗತ್ಯ ಹೆಚ್ಚುತ್ತಿದೆ. ವೈದ್ಯಕೀಯ ವಿಷಯಗಳಲ್ಲಿ ಕೆಲವೊಂದು ವಿಷಯಗಳಲ್ಲಿ ಮಾತ್ರ ಪರಿಣತಿ ಹೊಂದಿದ ಅಂದರೆ ಕೆಲವು ವಿಷಯಗಳಲ್ಲಿ ಮಾತ್ರ ವಿಶೇಷ ಆಸಕ್ತಿ ಪಡೆದ ವೈದ್ಯರು ಹೆಚ್ಚಿನ ಸಂಖ್ಯೆಯಲ್ಲಿ ಬೇಕಿಲ್ಲ. ವೈದ್ಯಕೀಯ ಶಿಕ್ಷಣವನ್ನು ಪೂರ್ಣಗೊಳಿಸುವ ಶೇಕಡಾ 50 ವಿದ್ಯಾರ್ಥಿಗಳು ವಿಶೇಷ ಆಸಕ್ತಿಯನ್ನು ಪಡೆಯಲು ಸ್ನಾತಕೋತ್ತರ ಶಿಕ್ಷಣಕ್ಕೆ ತಮ್ಮ ಗಮನವನ್ನು ಹರಿಸುತ್ತಿರುವುದು ಇಂದಿನ ವಿದ್ಯಾರ್ಥಿಗಳ ಹೊಸ ಪ್ರವೃತ್ತಿಯಾಗಿದೆ. ಇದು ಪ್ರಗತಿಪರ ಸೂಚನೆಯಲ್ಲ. ವೈದ್ಯಕೀಯ ಶಿಕ್ಷಣದ ಕೆಲವು ವಿಷಯಗಳಲ್ಲಿ ವಿಶೇಷ ಆಸಕ್ತಿಯನ್ನು ಪಡೆದುಕೊಳ್ಳುವುದರ ಬಗ್ಗೆ ಆದ್ಯತೆಯನ್ನು ಕಡಿಮೆ ಮಾಡಬೇಕು ಹಾಗೂ ಸಾಮಾನ್ಯವಾಗಿ ದಿನನಿತ್ಯದ ಎಲ್ಲ ಕಾಯಿಲೆಗಳ ಬಗ್ಗೆ ಉನ್ನತ ತರಬೇತಿ ನೀಡುವುದು— ಇದು ಸಮಿತಿ ಮಾಡಿರುವ ಮತ್ತೊಂದು ಶಿಫಾರಸು. ಪ್ರಾದೇಶಿಕ ಮತ್ತು ರಾಷ್ಟ್ರೀಯ ಆರೋಗ್ಯ ಅವಶ್ಯಕತೆಗಳನ್ನು ಕುರಿತ ವೈದ್ಯಕೀಯ ಶಿಕ್ಷಣ ನೀಡಬೇಕು. ದೇಶದ ಕೆಲವು ಕಡೆಗಳಲ್ಲಿ ನಿರೀಕ್ಷವಾಗಿ ಕಂಡುಬರುವ ಕಾಯಿಲೆಗಳನ್ನು ಕುರಿತ ಶಿಕ್ಷಣವನ್ನು ಆಯಾ ಪ್ರದೇಶಗಳಲ್ಲಿರುವ ವೈದ್ಯಕೀಯ ಕಾಲೇಜುಗಳಲ್ಲಿ ನೀಡುವುದು ಈ ಹೊಸ ಯೋಜನೆಗಳ ಗುರಿ. ಕಾರಣ ಕಾಯಿಲೆ ಕಸಬನ್ನು ಗುರುತಿಸಿ ಅವುಗಳನ್ನು ಗುಣಪಡಿಸುವುದಷ್ಟೇ ವೈದ್ಯರ ಕೆಲಸವಲ್ಲ. ಅವುಗಳನ್ನು ತಮ್ಮ ಸುತ್ತಮುತ್ತಲ ಪ್ರದೇಶಗಳಲ್ಲಿ ನಿರ್ಮೂಲಪಡಿಸುವುದು ವೈದ್ಯರು ನಿರ್ವಹಿಸಬೇಕಾದ ಕಾರ್ಯಗಳಲ್ಲಿ ಒಂದು.

ಕಾಲೇಜುಗಳ ಹೊರಗಡೆಯ ಮುಖ್ಯವಾಗಿ ಗ್ರಾಮೀಣ ಪ್ರದೇಶಗಳ ಪರಿಚಯವೂ ವೈದ್ಯಕೀಯ ವಿದ್ಯಾರ್ಥಿಗಳಿಗೆ ಬೇಕು. ಇದು ನಗರ ಪ್ರದೇಶಗಳಲ್ಲಿನ ಕಾಲೇಜು ವಿದ್ಯಾರ್ಥಿಗಳಿಗೆ ಬೇಕಷ್ಟು ಪ್ರಮಾಣದಲ್ಲಿ ದೊರೆಯುತ್ತಿಲ್ಲ. ವಿದ್ಯಾಭ್ಯಾಸ ಪೂರ್ಣವಾಗುವ ಮುಂಚೆಯೇ ಗ್ರಾಮೀಣ ಜನಜೀವನದ ಪರಿಚಯ ಆಕಸ್ಮಿಕವಾಗಬೇಕು. ಈ ಕಾರಣಕ್ಕಾಗಿ ಕೆಲವು ಕಾಲೇಜುಗಳ ಆಡಳಿತಕ್ಕೆ ಸಂಬಂಧಿಸಿದಂತೆ ಸಂಚಾರಿ ಆಸ್ಪತ್ರೆಗಳನ್ನು ಪ್ರಾರಂಭಿಸಲಾಗಿದೆ. ಈ ಹೊಸ ಯೋಜನೆಯಲ್ಲಿ ವೈದ್ಯಕೀಯ ಶಿಕ್ಷಣದ ಅಂತಿಮವರ್ಷದ ವಿದ್ಯಾರ್ಥಿಗಳಿಗೆ ಗ್ರಾಮಾಂತರ ಜನತೆಗೆ ವೈದ್ಯಕೀಯ ಸೇವೆ ನೀಡುವರು. ಈ ಸಂಬಂಧಪಟ್ಟ ಕಾಲೇಜುಗಳ ಶಿಕ್ಷಕರು ವಿದ್ಯಾರ್ಥಿಗಳ ಮೇಲಿನ ಜವಾಬ್ದಾರಿಯನ್ನು ನೋಡಿಕೊಳ್ಳುವರು. ಪದವಿ ಪರೀಕ್ಷೆ ವರೆಗೆ ವೈದ್ಯಕೀಯ ಶಿಕ್ಷಣ ರಾಜ್ಯ ಸರ್ಕಾರಗಳಿಗೆ ಸೇರಿದೆಯೊದರಿಂದ ಈಗಾಗಲೇ ಕೆಲವು ರಾಜ್ಯಗಳು ಶಿಕ್ಷಣ ಸುಧಾರಣೆಯ ಮಾರ್ಗದಲ್ಲಿ ಕ್ರಮಗಳನ್ನು ಕೈಗೊಂಡಿವೆ. ವಿಶ್ವವಿದ್ಯಾಲಯಗಳು ಈ ಬಗ್ಗೆ ಶ್ರಮವಹಿಸಬೇಕಿದೆ. ಶ್ರೀ ನಾಮಾನ್ಯ ನಿಗೆ ಪೂರ್ಣ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ಕಾರ್ಯದಲ್ಲಿ ವಿಶ್ವವಿದ್ಯಾನಿಲಯಗಳಿಗೆ ಇದೊಂದು ಅಪೂರ್ವ ಅವಕಾಶ. ಇಂದಿನ ವೈದ್ಯಕೀಯ ಶಿಕ್ಷಣ ಪ್ರಥಾನವಾಗಿ ನಗರ ಪ್ರದೇಶಗಳಿಗೆ ಅನುಗುಣವಾಗಿದ್ದು, ಅದು ಗ್ರಾಮಾನಿವಾಸಿಗಳಿಗೂ ಹೊಂದಿಕೊಳ್ಳುವ ಬಗ್ಗೆಯೂ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಹಳ್ಳಿಗರಲ್ಲಿ ಸೇವೆ ಸಲ್ಲಿಸುವ ಮನೋಭಾವ ವೈದ್ಯರಲ್ಲಿ ಬೆಳೆಯುವಂತಾಗಲು ಕೇಂದ್ರ ಸರ್ಕಾರದವರು ಗಮನ ಕೊಡಿದ್ದಾರೆ. ಹಳ್ಳಿಗಳಲ್ಲಿ ನೆಲಸಿ ಅಲ್ಲಿನ ಜನತೆಯ ಆರೋಗ್ಯ ಅಭಿವೃದ್ಧಿಗಾಗಿ ದುಡಿಯುವ ವಿದ್ಯಾರ್ಥಿಗಳಿಗೆ ಕಾಲೇಜುಗಳ ಒಟ್ಟು ಪ್ರವೇಶಗಳಲ್ಲಿ ಶೇಕಡಾ 5ರಷ್ಟನ್ನು ಮೀಸಲಾಗಿಡಲು ವಿಶ್ವವಿದ್ಯಾನಿಲಯಗಳಿಗೆ ಕೇಂದ್ರ ಸರ್ಕಾರ ತಿಳಿಸಿದೆ. ವೈದ್ಯಕೀಯ ಶಿಕ್ಷಣ ಸುಧಾರಣೆಗಾಗಿ ಮಾಡಿರುವ ಸಲಹೆಗಳು ಬೇಗನೆ ಕಾರ್ಯರೂಪಕ್ಕೆ ಬಂದು ದೇಶದ ಜನತೆಯ ಆರೋಗ್ಯ ಭಾಗ್ಯ ಹೆಚ್ಚಲಿ ಅಭಿವೃದ್ಧಿ ಹೊಂದುವುದು ಹಾಗೂ ಶ್ರೀ ಸಾಮಾನ್ಯನಿಗೆ ವೈದ್ಯಕೀಯ ಸೌಲಭ್ಯಗಳು ಪೂರ್ಣ ದೊರೆಯುವುದೆಂಬುದರಲ್ಲಿ ನನಗೆ ವಿಶ್ವಾಸವಿದೆ.

ರಾಷ್ಟ್ರೀಕೃತ ಬ್ಯಾಂಕ್‌ಗಳು ಮತ್ತು ಬ್ಯಾಂಕಿಂಗ್

ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ಅರ್ಥ ಶಾಸ್ತ್ರ ವಿಭಾಗದ ವತಿಯಿಂದ ಏರ್ಪಡಿಸಲಾದ ಕೂಟವೊಂದರಲ್ಲಿ ಎಂ.ಜಿ. ಎಂ. ಕಾಲೇಜಿನ ಪ್ರಿನ್ಸಿಪಾಲ್ ಕು.ಶಿ. ಹರಿದಾಸ ಭಟ್ಟರು ರಾಷ್ಟ್ರೀಕೃತ ಬ್ಯಾಂಕುಗಳ ಸಾಧನೆಯ ಬಗ್ಗೆ ಒಂದು ಪತ್ರಿಕೆಯ ಆಯ್ಕೆಯ ಕಾರ್ಯವನ್ನು ಪರ್ಯಾಲೋಚಿಸಿದರು. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಕಾರ್ಯ ನಿರ್ವಾಹಕರಿಗೆ ಅಳವಡಿಸಿರುವ ವಿಧೇಯಂದು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು ಇತರ ಸರಕಾರಿ ಸಂಸ್ಥೆಗಳಂತಾಗಿವೆ ಎಂದರು. ರಾಷ್ಟ್ರೀಕೃತ ಸಂಸ್ಥೆಗಳ ಕಾರ್ಯಕರ್ತರಲ್ಲಿ "ಸಮಾಜಕ್ಕೆ ಸೇವೆ" ಎಂಬ ಆಭಾವನೆಯನ್ನು ಬೆಳೆಸಿಕೊಂಡಲ್ಲಿ ಆ ಬಾಧೆ ನಮ್ಮನ್ನು ವಿದ್ಯಾರ್ಥಿಗಳಿಗೆ ತಟ್ಟದಿರಲೆಂದು ಹಾರೈಸಿದರು.

ಆರಂಭದಲ್ಲಿ ವಿದ್ಯಾರ್ಥಿ ವಿಲ್ಸನ್ ಆರ್. ಲುಯಿಸರು ಅತಿಥಿಗಳನ್ನು ಸ್ವಾಗತಿಸಿದರು. ಪ್ರಿನ್ಸಿಪಾಲ್ ಡಾ॥ ಗುರುರಾಜ ಭಟ್ಟರು ಮತ್ತು ಮಿಲಾಗ್ರಿಸ್ ಕಾಲೇಜಿಗೆ ಶ್ರೀ ಕು. ಶಿ. ಹರಿದಾಸ ಭಟ್ಟರಿಂದ ಆದ ಸಹಾಯವನ್ನು ನೆನಪಿಸಿಕೊಂಡರು. ವಿದ್ಯಾರ್ಥಿ ಶ್ರೀ ಶಿವರಾಮ ನಾಯಕರು ಧನ್ಯವಾದಗಳನ್ನರ್ಪಿಸಿದರು.

ಎಂ. ಜಿ. ಎಂ. ಕಾಲೇಜಿನ ವಿದ್ಯಾರ್ಥಿ ಸಂಘದ ಉದ್ಘಾಟನೆ

ಉಡುಪಿಯ ಎಂ. ಜಿ. ಎಂ. ಕಾಲೇಜಿನ ಈ ವರುಷದ ವಿದ್ಯಾರ್ಥಿ ಸಂಘದ ಉದ್ಘಾಟನೆ ತಾ. 18ರಂದು ಜರಗಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಿಂಡಿಕೇಟ್ ಬ್ಯಾಂಕಿನ ಜ್ಯಾಯಿಂಟ್ ಚೀಫ್ ಎಕೌಂಟೆಂಟ್ ಶ್ರೀ ಕೆ. ಆರ್. ಪ್ರಸಾದ್ ಅವರು ಉಪಸ್ಥಿತರಿದ್ದ ಸಭಿಕರೊಂದಿಗೆ ಕಾಲೇಜಿನ ರವೀಂದ್ರ ಮಂಟಪದಲ್ಲಿ ಜರಗಿದ್ದ ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರಿನ್ಸಿಪಾಲ್ ಕು.ಶಿ. ಹರಿದಾಸ ಭಟ್ಟರು ವಿದ್ಯಾರ್ಥಿಸಂಘಗಳಿಗೆ ಶುಭಕೋರಿ ಈ ಮೂಲಕ ವಿದ್ಯಾರ್ಥಿಗಳ ಜೀವನದಲ್ಲಿ ಉತ್ಸಾಹ ಚಿಗುರಲಿ ಎಂದು ಹರಸಿದರು.

ಮುಖ್ಯ ಅತಿಥಿ ಶ್ರೀ ಕೆ. ಆರ್. ಪ್ರಸಾದ್ ಮಾತನಾಡಿದ ಮೇಲೆ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಶ್ರೀ ರಮೇಶ ಶೆಟ್ಟಿರು ವಿದ್ಯಾರ್ಥಿ ಸಂಘಗಳ ಮಹತ್ತರ ಉದ್ದೇಶಗಳನ್ನು ವಿವರಿಸಿ ಅದರ ಕಾರ್ಯೋತ್ಸಾಹದ ಬಗೆಗೆ ಭರವಸೆ ವ್ಯಕ್ತಪಡಿಸಿದರು. ಕೊನೆಯಲ್ಲಿ ಕಾರ್ಯದರ್ಶಿ ಪೀಟರ್ ಫ್ರಾನ್ಸಿಸ್ ಧನ್ಯವಾದವನ್ನರ್ಪಿಸಿದರು. ಪೂಜಾರಂಭದಿಂದ ಪರವಾಗಿ ನಾಟಕ ಸಂಘದವರು ಹಲವು ಮನೋರಂಜನಾ ಕಾರ್ಯಗಳನ್ನೂ ನಿರ್ವಹಿಸಿದರು.

ಉಡುಪಿಗೆ ಬಂದಾಗ
ಮನರಂಜನೆಯ ಸಮಸ್ಯೆ ನಿಮಗಿಲ್ಲ!
ಅತ್ಯುತ್ತಮ ಚಲಚ್ಚಿತ್ರಗಳನ್ನು ಪ್ರದರ್ಶಿಸುವ
ಎರಡು ಶ್ರೇಷ್ಠ ದರ್ಜೆಯ ಚಿತ್ರಮಂದಿರಗಳು
ನಿಮ್ಮ ಬೇಸರವನ್ನು ನೀಗಿಸಲು ಇಲ್ಲಿವೆ.
ಅಲಂಕಾರ್ (ಫೋನ್: 327) ಆಸ್ಪತ್ರೆ ರಸ್ತೆ
&
ಕಲ್ಪನಾ (ಫೋನ್: 437) ಉಪೇಂದ್ರಬಾಗ್
ಕುಂದಾಪುರದ ನವೀಕೃತ ಭವ್ಯ ಚಿತ್ರಮಂದಿರ—
ಗೀತಾಂಜಲಿ
ಮ್ಹಾಲಕರು:
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಎಸ್. ಆರ್. ಬಿಲ್ಡಿಂಗ್ಸ್, ಉಡುಪಿ (ದ. ಕ.)

READ & ADVERTISE IN
NAVAYUGA WEEKLY

ಬ್ಯಾಂಕಿಂಗ್ ಉದ್ಯಮದ ಹೊಸ ರೂಪುರೇಷೆ:

ಆಡಳಿತ ವ್ಯವಸ್ಥೆಗೆ ನವಚೇತನ

(ರಾಷ್ಟ್ರೀಯ ಬ್ಯಾಂಕಿಂಗ್ ಆಡಳಿತ ಸಂಸ್ಥೆಯ ಲೇಖನ)

ಭಾರತದ ಬ್ಯಾಂಕಿಂಗ್ ಉದ್ಯಮದ ನೀತಿಯಲ್ಲಿ ಇತ್ತೀಚೆಗೆ ಆದ ಪರಿವರ್ತನೆ ರಾಷ್ಟ್ರೀಯ ಆರ್ಥಿಕರಂಗದಲ್ಲಿ ಒಂದು ಮಹತ್ವಪೂರ್ಣವಾದ ಬದಲಾವಣೆಯನ್ನು ಉಂಟು ಮಾಡಿದೆ. ಈ ಪರಿವರ್ತನೆಯಲ್ಲಿ ಮೂರು ಅಂಶಗಳು ಪ್ರಧಾನವಾಗಿ ನಿರ್ಣಾಯಕ ಪಾತ್ರವನ್ನು ನಿರ್ವಹಿಸುತ್ತವೆ. ಒಂದು:— ಇದುವರೆಗೆ ಬ್ಯಾಂಕಿಂಗ್ ಕಾರ್ಯನೀತಿಯು ದೇಶದ ಅಭಿವೃದ್ಧಿ ಕಾರ್ಯದಲ್ಲಿ ಜೊಂಬಲ ನೀಡುವ ರೀತಿ ಇರಲಿಲ್ಲ; ಹೊಸನೀತಿಯಲ್ಲಿ ಅದು ಅಭಿವೃದ್ಧಿಯ ವೇಗವನ್ನು ವರ್ಧಿಸುವ ಪಾತ್ರವನ್ನು ನಿರ್ವಹಿಸಲಿರುವುದು. ಬ್ಯಾಂಕಿಂಗ್ ವ್ಯವಸ್ಥೆ ಇಡೀ ಜನವರ್ಗಕ್ಕೆ ಅನ್ವಯವಾಗುವಂತೆ ಕಾರ್ಯನೀತಿಯನ್ನು ಪರಿಷ್ಕರಿಸಲಾಗಿದೆ. ಎರಡು:— ಬ್ಯಾಂಕಿಂಗ್ ಉದ್ಯಮದ ಪ್ರಾಯೋಕತ್ವವನ್ನು ನಿರ್ವಹಿಸಲು ನಿಯಂತ್ರಕರನ್ನು ಅನುಸರಿಸುತ್ತಿದ್ದ ವಿಧಾನವನ್ನು ಬಿಟ್ಟು ಹೊಸ ವಿಧಾನಗಳನ್ನು ಅನುಸರಿಸುವ ಈ ಕಾರ್ಯನೀತಿ ಉತ್ಪೇಜನದಾಯಕವಾಗಿದೆ. ಹೊಸ ಹೊಸ ವಿಕ್ಯಗಳಲ್ಲಿ ಬ್ಯಾಂಕಿಂಗ್ ಉದ್ಯಮವು ಪ್ರವೇಶ ಪಡೆದು ಕಾರ್ಯ ನಿರ್ವಹಿಸುವುದಕ್ಕೆ ಹೊಸ ಧೀತಿಯು ಹುಟವೀಯುತ್ತದೆ.

ಮೂರು:— ಭಾರತೀಯ ಬ್ಯಾಂಕಿಂಗ್ ಉದ್ಯಮಿಗೆ ತನ್ನ ಕಾರ್ಯದಕ್ಷತೆಯಲ್ಲಿರುವ ಆತ್ಮವಿಶ್ವಾಸವನ್ನು ದೃಢಪಡಿಸಿ ಆತನು ಬ್ಯಾಂಕಿಂಗ್ ಹೊಸ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸುವುದಕ್ಕೆ ಬೆಂಬಲ ಕೊಡುತ್ತಿದೆ. ಇಂದು ಬ್ಯಾಂಕಿಂಗ್ ಉದ್ಯಮ ಕೇವಲ ಹೊಸ ದೃಷ್ಟಿಯನ್ನು ತಳೆದಿಲ್ಲ. ಈ ಉದ್ಯಮದ ಲಿಖಿತ ವಾಣಿಜ್ಯ ಪ್ರಗತಿಫಲಗಳನ್ನು ಯೂರೀತಿಯಿಂದಲೂ ಕಳೆದುಕೊಳ್ಳದೆ, ಹೊಸ ವ್ಯಕ್ತಿತ್ವವನ್ನು ಈ ಉದ್ಯಮಕ್ಕೆ ತಂದ ಕೊಡುವುದೇ ಈ ಧೀತಿಯ ಉದ್ದೇಶವಾಗಿದೆ.

ಉದ್ದೇಶಗಳು : ಗುರಿಗಳು

ಬ್ಯಾಂಕಿಂಗ್ ಉದ್ಯಮದ ಹೊಸನೀತಿಯಮ್ನು ಈ ರೀತಿ ಕ್ರೋಢೀಕರಿಸಬಹುದು. ದೇಶದ ಕೃಷಿ, ರಫ್ತು ವ್ಯವಹಾರ, ಸಾರಿಗೆ ಮತ್ತು ಸಣ್ಣಪ್ರಮಾಣದ ಕೈಗಾರಿಕೆಗಳು ಇಂತಹ ಮೂಲಭೂತ ಆರ್ಥಿಕ ರಂಗಗಳನ್ನು ಅಭಿವೃದ್ಧಿಪಡಿಸಲು ಬ್ಯಾಂಕಿಂಗ್ ವ್ಯವಸ್ಥೆ ಒಂದು ಪರಿಣಾಮಕಾರಿಯಾದ ಸಾಧನ. ಇದು ಆರ್ಥಿಕ ವ್ಯವಸ್ಥೆಯು ವಿವಿಧ ಕಾರ್ಯರಂಗಗಳ ನಡುವೆ ಹಿತವಿವೇಚನೆಯಿಂದ ಸಂಪರ್ಕವನ್ನು ಸಾಧಿಸಲು ಪಂತಹ ಸಾಧನವೂ ಹೌದು.

ಭಾರತದ ಇನತೆಯು ವಿವಿಧ ವರ್ಗಗಳ ನಡುವೆ, ವಿವಿಧ ಪ್ರದೇಶಗಳ ನಡುವೆ ಇರುವ ಆರ್ಥಿಕ ತಾರತಮ್ಯಗಳನ್ನು ಕಡಿಮೆ ಮಾಡುವುದರಲ್ಲಿಯೂ ಬ್ಯಾಂಕಿಂಗ್ ವ್ಯವಸ್ಥೆ ಸಹಾಯ ಧೀಡಬಲ್ಲುದು.

ಆರ್ಥಿಕ ವ್ಯವಸ್ಥೆ ಹಣವನ್ನು ಒದಗಿಸಲು, ಜನರು ಉಳಿಸಬಹುದಾದ ಹಣವನ್ನೂ ಸಂಗ್ರಹಿಸುವ ಪ್ರಮುಖ ಸಾರ್ವಜನಿಕ ಸಂಸ್ಥೆಯಾಗಿ ಬ್ಯಾಂಕಿಂಗ್ ಸಹಾ ಒಂದು ಆಗಬಲ್ಲುದು.

ಭಾರತೀಯ ಬ್ಯಾಂಕಿಂಗ್ ಕಾರ್ಯನೀತಿ ಇಂದು ಬ್ಯಾಂಕಿಂಗ್ ವಹಿವಾಟಿನ ವ್ಯಾಪ್ತಿಯನ್ನು ವಿಸ್ತರಿಸಿದೆ. ಗ್ರಾಮೀಣ ಪ್ರದೇಶಗಳಿಗೂ ಬ್ಯಾಂಕಿಂಗ್ ವ್ಯವಸ್ಥೆ ವ್ಯಾಪಿಸಿದೆ. ಉಳಿತಾಯವನ್ನು ಸಂಗ್ರಹಿಸುವುದರಿಂದ ಹಿಡಿದು ಹೊಸ ಹೊಸ ಸೇವಾ ಸೌಲಭ್ಯಗಳನ್ನು ಒದಗಿಸುವ ವರೆಗೂ ಬ್ಯಾಂಕಿಂಗ್ ವ್ಯವಸ್ಥೆ ಇಂದು ಕಾರ್ಯೋನ್ಮುಖವಾಗಿ ಬೆಳೆದಿದೆ.

ಬ್ಯಾಂಕಿಂಗ್‌ನ ಈ ಹೊಸ ಕಾರ್ಯನೀತಿಗೆ ಅನುಗುಣವಾಗಿ ಆದರ ಆಡಳಿತ ವ್ಯವಸ್ಥೆಯನ್ನು ಪುನಾರಚಿಸುವುದು ಅಭಿವಾರ್ಯವಾಗುತ್ತದೆ. ಬ್ಯಾಂಕುಗಳು ಈ ಹಿಂದಿನ ರೀತಿಯಲ್ಲಿಯೇ ಇಂದೂ ಆಡಳಿತವನ್ನು ನಡೆಸಿದರೆ ಅವು ಹೊಸ ಆರ್ಥಿಕ ಉದ್ದೇಶಗಳನ್ನು ಸಾಧಿಸಲಾರವು. ಸಾರ್ವಜನಿಕ ಗುರಿಗಳನ್ನು ಮುಟ್ಟಲಾರವು. ಹೊಸ ಕಾರ್ಯಧೀತಿಯು ಕಲ್ಪನೆಗೆ ಹಾಗಿಯನ್ನು ಉಂಟುಮಾಡುವಂತಹ ಸಂದರ್ಭ ಏರ್ಪಡಬಹುದು.

ಬ್ಯಾಂಕಿಂಗ್ ಕಾರ್ಯವಿಧಾನ

ಈ ಅವಾಯವನ್ನು ಅರಿಯಬೇಕಾದರೆ ಸಾಮಾನ್ಯ ಬ್ಯಾಂಕಿಂಗ್ ಕಾರ್ಯವಿಧಾನದ ಕಡೆಗೆ ಲಕ್ಷ್ಯಹರಿಸಬೇಕು. ಇತರ ಉದ್ಯಮಗಳಂತಲ್ಲದೆ ಬ್ಯಾಂಕಿಂಗ್ ಉದ್ಯಮ ಅತ್ಯಂತ ಸೂಕ್ಷ್ಮ ವೇದಿಯಾದ ಸೇವಾ ವ್ಯವಸ್ಥೆ. ತನ್ನ ಗಿರಾಕಿಗಳ ಅಗತ್ಯವನ್ನು ಸೂಕ್ಷ್ಮಸಮಯದಲ್ಲಿ ಮಪಗಾಡು ಆದನ್ನು ಪೂರೈಕೆಮಾಡಬೇಕು. ಈ ಕೆಲಸವಲ್ಲಿ ವಿಫಲವಾದಲ್ಲಿ ಬ್ಯಾಂಕಿಂಗ್ ಉದ್ಯಮ ರಾಷ್ಟ್ರೀಯ ಉತ್ಪನ್ನದ ಇಡೀ ಸರಪಣಿಗೆ ಧಾಕ್ಕೆಯನ್ನು ಉಂಟು ಮಾಡಬಹುದು. ಆದ್ದರಿಂದ ಬ್ಯಾಂಕಿಂಗ್ ಉದ್ಯಮದ ಮುಖ್ಯ ಬಂಡವಾಳ, ಅದು ತಳೆದ ಗಿರಾಕಿಗಳ ಅಗತ್ಯವನ್ನು ಧೀರೀಕ್ಷಿಸಿ ಸೂಕ್ತ ಸಮಯದಲ್ಲಿ ಅದನ್ನು ಪೂರೈಸಲು ತೆಗೆದು ಕೊಳ್ಳುವ ಕ್ಷಿಪ್ರ ತೀರ್ಮಾನ. ಹೊಸ ಬ್ಯಾಂಕಿಂಗ್ ಕಾರ್ಯನೀತಿಯು ಯಶಸ್ವಿಯಾಗಿ ಒಂದು ಬ್ಯಾಂಕ್ ನಡೆಸಲು ವ್ಯವಹಾರದ ಮೊತ್ತ ವರ್ಷಪ್ರತಿ ಅವಲಂಬಿಸಿಲ್ಲ. ಗಿರಾಕಿಗಳ ಅಗತ್ಯವನ್ನು ಪೂರೈಸುವುದರಲ್ಲಿ ತೋರಿಸುವ ಕಾರ್ಯದಕ್ಷತೆಯನ್ನು ಅವಲಂಬಿಸುತ್ತದೆ.

ಬ್ಯಾಂಕಿಂಗ್ ವ್ಯವಸ್ಥೆಯು ಇಂದು ಕ್ರಿಯಾ ಪ್ರಾಧಾನ್ಯವಾಗಿ ವಿಸ್ತಾರಗೊಂಡು ಇಡೀ ಜನಸಾಮಾನ್ಯವರ್ಗವನ್ನು ವ್ಯಾಪಿಸಿಕೊಂಡಿರುವುದರಿಂದ, ಅದು ಇದುವರೆಗೆ ಅನುಸರಿಸುತ್ತಾ ಬಂದಿರುವ ನಿರ್ಣಾಯಕ ಕೈಗೆಳ್ಳುವ ವಿಧಾನವನ್ನು ನಿಷ್ಪ್ರಯೋಜಕವೆಂದು ಕೈಬಿಡಬೇಕು.

ಹೊಸ ವಿಧಾನದಲ್ಲಿ ಆಡಳಿತ

ಹೊಸ ಬ್ಯಾಂಕ್ ರೀತಿಯಲ್ಲಿ ಬ್ಯಾಂಕಿಂಗ್‌ನ ಆಡಳಿತಯಂತ್ರದಲ್ಲಿ ಪ್ರತಿಯೊಂದು ಮಟ್ಟದಲ್ಲಿಯೂ ಆಯಾ ವಿಷಯದ ಜಲಾಬಲದ ವೇಲೆ ಧರ್ಮಯ ತೆಗೆದ ಕೊಳ್ಳುವಂತಹ ಸ್ವಾತಂತ್ರ್ಯ ವಿರಬೇಕಾಗುತ್ತದೆ. ಅಧಿಕಾರ ಮತ್ತು ಹೊಣೆಗಾರಿಕೆಯ ವಿಕೇಂದ್ರೀಕರಣ ಮುಖ್ಯವಾಗಿ ಸಾಲ-ಹೂಡಿಕೆಗಳನ್ನು ಒದಗಿಸುವ ವಿಷಯಗಳನ್ನು ನಿರ್ಣಯಿಸುವ ಸಂದರ್ಭಗಳಲ್ಲಿ ಪ್ರಾಮುಖ್ಯ ಪಡೆಯುತ್ತದೆ.

ಪ್ರತಿಯೊಂದು ಬ್ಯಾಂಕಿನಲ್ಲಿಯೂ ಸಿಬ್ಬಂದಿಯ ಯೋಜನೆ ಮತ್ತು ಕಾರ್ಯನಿರ್ವಹಣೆಯ ಅಭಿವೃದ್ಧಿಗಾಗಿ ಅಗ್ರಪ್ರಾಧಾನ್ಯ ದೊರೆಯಬೇಕು. ಆಡಳಿತ ಸಂಸ್ಥೆಯು ಸಿಬ್ಬಂದಿಯ ನೇಮಕ ಅಥವಾ ಸಿಬ್ಬಂದಿಗೆ ಸೂಕ್ತರೀತಿಯ ತರಬೇತಿ ಕೊಡುವುದು ಮೊಕ್ಕ ಜೈಗೊಂತರೆ ಸಾಲದು. ಸಿಬ್ಬಂದಿಯು ಸಾಕ್ಷ್ಯ ಸಂಬಂಧದಲ್ಲಿ ಸ್ವಾಯತ್ತ ಫಿರ್ಣಯವನ್ನು ಕೈಗೆಳ್ಳುವಂತಹ ವಿವೇಚನಾ ಶಕ್ತಿಯನ್ನು ಬಳಸುವಂತಹ ಮನೋವೃತ್ತಿಯನ್ನು ಸಂವರ್ಧಿಸಬೇಕು. ಅದೇ ಸಮಯದಲ್ಲಿ ಇಡೀ ಬ್ಯಾಂಕಿಂಗ್ ಸಂಸ್ಥೆಯು ರಚನೆ ಮತ್ತು ಕಾರ್ಯವಿಧಾನವನ್ನು ಸುಗಮಗೊಳಿಸಬೇಕು.

ವಿಕೇಂದ್ರೀಕರಣವು ಬ್ಯಾಂಕಿಂಗ್ ವಾಪಿಗಳ ಮಟ್ಟದಲ್ಲಿ ನಡೆದರೆ, ಸಾಲದು. ಆಡಳಿತ ಸರಕಾರೀ ಮಟ್ಟದಿಂದ ಆರಂಭವಾಗಿ ತೀರ ಕೆಳಮಟ್ಟದ ವಿಭಾಗದವರೆಗೂ ಒಂದು ಸರಳವಾದ ಸಮರ್ಪಕವಾದ ಕಾರ್ಯವಿಧಾನ ಇರುವಂತೆ ವಿಕೇಂದ್ರೀಕರಣ ನಡೆಯಬೇಕು. ಹೊಸ ಬಗೆಯ ಆಡಳಿತ ವಿಧಾನ ರೂಪುಗೊಂಡರೂ ಅದರ ಜೊತೆಯಲ್ಲಿಯೇ ಆ ವಿಧಾನಗಳನ್ನು ಪ್ರಯೋಜನಕಾರಿಯಾಗಿ ಕಾರ್ಯರೂಪಕ್ಕೆ ತರುವಂತಹ ಸಿಬ್ಬಂದಿಯನ್ನು ಸಂವರ್ಧಿಸದಿದ್ದರೆ, ನಿಷ್ಪ್ರಯೋಜಕವಾಗುತ್ತದೆ. ಆ ದೃಷ್ಟಿಯಿಂದ ಸಿಬ್ಬಂದಿಗೆ ತರಬೇತಿ ದೊರೆಯಬೇಕು.

ತರಬೇತಿ ಕಾರ್ಯಕ್ರಮ

ರಾಷ್ಟ್ರೀಯ ಬ್ಯಾಂಕಿಂಗ್ ಆಡಳಿತ ಸಂಸ್ಥೆಯು ಹೊಸ ಕಾರ್ಯಧೀತಿಗೆ ಇಂಬು ಕೊಡುವಂತಹ ವ್ಯಾಪಕ ತರಬೇತಿ ಕಾರ್ಯಕ್ರಮವನ್ನು ಈಗ ಪರ್ಯಾಲೋಚಿಸುತ್ತಿದೆ. ಬ್ಯಾಂಕಿಂಗ್‌ನ ಸಾರ್ವಜನಿಕ ಉಪಯೋಗಿ ಕಾರ್ಯಕ್ರಮಗಳ ಯಶಸ್ವಿ ಆಚರಣೆಗೆ ನೆರವಾಗಬಲ್ಲ ಕಾರ್ಯಕ್ರಮಗಳನ್ನು ತರಬೇತಿಯಲ್ಲಿ ಸೇರಿಸಲಾಗುತ್ತಿದೆ. ಅವುಗಳಲ್ಲಿ ಮುಖ್ಯವಾದವು:—

1) ಈಗಿರುವ ಹಾಗೂ ಹೊಸದಾಗಿ ನೇಮಕಗೊಂಡ ಕಾರಕೂನ ಸಿಬ್ಬಂದಿಗೆ ತರಬೇತಿ ಧೀಡಲು ಸ್ಥಾನೀಯ ಕೇಂದ್ರಗಳ ಸ್ಥಾಪನೆ.

2) ಬ್ಯಾಂಕ್ ಶಾಖೆಗಳ ಮಟ್ಟದಲ್ಲಿ ಅಧಿಕಾರಿಗಳಿಗೆ ತರಬೇತಿಕೊಡುವಂತಹ ಪ್ರತ್ಯೇಕ ಸಿಬ್ಬಂದಿ ತರಬೇತಿ ಕಾಲೇಜುಗಳ ಸ್ಥಾಪನೆ.

3) ಬ್ಯಾಂಕ್‌ಗಳ ಉನ್ನತಾಧಿಕಾರಿಗಳಿಗೆ ಆಡಳಿತ ಕುಶಲತೆಯಲ್ಲಿ ತರಬೇತಿ ಧೀಡುವುದರ ಜೊತೆಗೆ ಕೃಷಿ ಸಂಸ್ಥಾಪ್ರವೃಣಾದಕ್ಕೆಗಾರಿಕೆಗಳು ಇವೇ ಮೊದಲಾದ ಕ್ರಿಯಾ ಪ್ರಾಧಾನ್ಯವಾದ ಕಾರ್ಯಕ್ರಮಗಳಿಗೆ ಹಣವನ್ನು ಒದಗಿಸುವುದು, ಅವುಗಳ ಪ್ರಗತಿಯನ್ನು ನೋಡಿಕೊಳ್ಳುವುದು. ಈ ವಿಷಯದಲ್ಲಿ ರಾಷ್ಟ್ರೀಯ ಬ್ಯಾಂಕ್ ಆಡಳಿತ ಸಂಸ್ಥೆಯು ತರಬೇತಿ ಧೀಡುತ್ತದೆ. ಸಂಶೋಧನೆ ಮತ್ತು ಸಮಾಲೋಚನೆಗಳಿಗೂ ಈ ತರಬೇತಿಯಲ್ಲಿ ಅವಕಾಶವುಂಟು.

ಬ್ಯಾಂಕ್ ವ್ಯವಹಾರ ವರ್ಷ ಸಿಬ್ಬಂದಿಯ ತರಬೇತಿ ಕಾರ್ಯಕ್ರಮಗಳಿಗಾಗಿ ಪ್ರತಿಯೊಂದು ಬ್ಯಾಂಕ್ ಒಂದು ಅಭಿವೃದ್ಧಿಯ ವಿಭಾಗವನ್ನು ಹೊಂದಿರುವುದು.ಅದು ಎಲ್ಲಾ ಆಡಳಿತ ಕಾರ್ಯವಿಧಾನಗಳನ್ನು ಸಮನ್ವಯಗೊಳಿಸುವುದು. ಬ್ಯಾಂಕ್ ಫಿರ್ಣಯಿಸಲ್ಪಡುವ ವ್ಯವಹಾರ

(ತದನಂತರ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

115 ರಾಪೆರೆಗಳಿಂದ ಪೆಚ್ಚಿರುವ "ವಿಜಯಾ ಬ್ಯಾಂಕ್"ನ್ನು

ಸಂಪರ್ಕ ಬೆಳೆಸಿರಿ.

ಶೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ವೈಫಿಕ ಉಳಿತಾಯ ಯೋಜನೆ

"ಜೀವನ-ನಿಧಿ"ಯಲ್ಲಿ

ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ಸ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:— ವೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3.

ಆಡಳಿತ ಕಛೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,

ರೇಸ್ ಕೋರ್ಸ್ ರೋಡ್, ಬೆಂಗಳೂರು—1

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು-4

ಸೌಂದರ್ಯಮಯಿ ಮೃತ್ಯು

ಇಂದು ಜಗತ್ತಿನಲ್ಲಿರುವ ಪ್ರಾಣಿಗಳು ಹುಟ್ಟುವುದನ್ನೂ ನಾವು ಪ್ರತಿನಿತ್ಯ ನೋಡುತ್ತೇವೆ. ನಾವು ಕಾಣುತ್ತಿರುವ ಪ್ರಾಣಿಗಳು ಅಗೋಚರವಾಗುವುದನ್ನು ಅಂದರೆ ಸತ್ತುಹೋಗುವುದನ್ನೂ ಕಾಣುತ್ತೇವೆ. ಕೆಲವರು ಲೋಕಕ್ಕೆ ಬರುತ್ತಾರೆ; ಮತ್ತು ಕೆಲವರು ಲೋಕವನ್ನು ತ್ಯಜಿಸುತ್ತಾರೆ. ಗದ್ದೆಯಲ್ಲಿ ಬಿತ್ತಿದ ಬೀಜವೊಂದು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ; ಅನೇಕ ಹೊಚ್ಚ ಹೊಸ ಬೀಜಗಳಿಗೆ ಜನ್ಮ ಕೊಡುತ್ತದೆ.

ಮೃತ್ಯುವಿನ ಅಧಿದೇವತೆಯು ಯಮ ರಾಜನೊಡನೆ ಹೇಳುತ್ತದೆ—ಸ್ವಮಿನ ನ್ಮೈ ವಜ್ಞಕೋ ವಸ್ಮಿನ ಜಾಯತೇ ಸನಃ॥ (ಕತೋಪನಿಷತ್ತು ೧-೧-೬)

ಜನನ—ಮರಣದಲ್ಲಿ ಸಂಬಂಧದಲ್ಲಿ ನ್ಮೃತ್ಯುವಿನಲ್ಲಿ ಆಸ್ಥೆಹೊಂದಿಲ್ಲವಾದರೆ, ಸೃಷ್ಟಿಸು ಎಂಬೋ ನಿರ್ಣಾಮವಾಗಿ ಬೊಡುತಿತ್ತು. ನೋಡುವವರು—ಆಡುವವರು ಯಾರೂ ಇರುತ್ತಿರಲಿಲ್ಲ. ನಾವೂ ಉಳಿಯುತ್ತಿರಲಿಲ್ಲ. ಈ ವಿಶಾಲ ಜಗತ್ತಿನಲ್ಲಿ ಇವುವರೆಗೆ ನಡೆದು ಬಂದ ಕ್ರಮವನ್ನು ಕಾವು ಗಮನಿಸಿದಾಗ, ಒಂದು ಸಂಗತಿ ನಮಗೆ ದೃಢವಾಗುತ್ತದೆ—ಇಂದಿಗೆ ನೊದಲಿಗೂ ನಾವು ಜೀವನಧಾರಣೆ ಮಾಡಿ ಈ ಲೋಕದಲ್ಲಿ ಬದುಕಿದ್ದೇವೆ. ಮುಂದೆಯೂ ಈ ಜಗತ್ತಿನಲ್ಲಿ ಜೀವನ ಲೀಲೆಯನ್ನು ಮುಂದುವರಿಸುತ್ತೇವೆ. ಇದು ಒಂದು ಊಹೆ ಅಥವಾ ಕಲ್ಪನೆಯಲ್ಲ; ಜಗತ್ತಿನಲ್ಲಿ ನಡೆದುಕೊಂಡು ಬರುತ್ತಿರುವ ಸರಂಪರೆ ನಮಗೆ ವಿಶ್ವಾಸ ನೀಡುತ್ತದೆ.

ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳಿದ್ದಾನೆ—ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯಚ॥ (೨-೨೭) ಹುಟ್ಟಿದವನಿಗೆ ಸಾವು ನಿಶ್ಚಿತವು; ಸತ್ತವನಿಗೆ ಹುಟ್ಟು ಕಂಡಿತ ಇವರಲ್ಲಿ ಕವಲು ಆಲೋಚನೆಗೆ ಅವಕಾಶವೇ ಇಲ್ಲ. ಬರುವ ದಮ್ಮು ಹೋಗುತ್ತಾನೆ; ಹೋಗದವನು ಬರುತ್ತಾನೆ. ಇದು ಸೃಷ್ಟಿ ನಿಯಮ. ಈ ನಿಯಮ ಸೃಷ್ಟಿಯಲ್ಲಿದಾದರೆ, ಈ ಸೃಷ್ಟಿ ಪ್ರಕ್ರಿಯೆಗಳಿಗೆ ಅರ್ಥವಾಗುತ್ತಿತ್ತು. ಮೃತ್ಯುವಿನೊಡನೆ ಬಹುದೂರ ಬಹುದಾದರೂ ಅದನ್ನು ಗೆಲ್ಲುವುದು ಸಾಧ್ಯವಿಲ್ಲ; ಒಂದು ವೇಳೆ ಮೃತ್ಯುವನ್ನೂ ಮೀರಿದ ಗೆದ್ದು ಬಿಟ್ಟರೆ, ಸೃಷ್ಟಿಯೂ ಇಲ್ಲವಾಗುವುದು. ಫಲವೂರ್ಣ ಮತ್ತು ನಾಶಗಳು, ಅಸ್ತಿತ್ವ ಮತ್ತು ಅಸ್ತಿತ್ವಗಳು ಒಂದು ಇನ್ನೊಂದಕ್ಕೆ ಪೂರಕವಾಗಿವೆ. ಇವು ಪರಸ್ಪರ ಕೂಡಿಯೇ ಫಲಿಸುತ್ತಿರುತ್ತವೆ.

ಪ್ರಾಚೀನರೊಂದು ಸೂಕ್ತಿ ಹೇಳಿದ್ದಾರೆ.ಅತ್ಯಾ ವೈ ಜಾಯತೇ ಪುತ್ರಃ॥ ಕಾಳಿದಾಸನ ಶಕುಂತಲ ನಾಟಕದಲ್ಲೂ "ತಂದೆಯು ಮಗನಾಗಿ ಹುಟ್ಟುತ್ತಾನೆ" ಎಂಬ ಅಂಶ ಅಭಿವ್ಯಕ್ತವಾಗಿದೆ.

ಜೀವನ ಧರಿಸಿದ ಮೇಲೆ ಮೃತ್ಯುವನ್ನು ನಿವಾರಿಸುವುದು ಅಸಾಧ್ಯ. ಪಂಚಭೂತಗಳಿಂದ ನಿರ್ಮಿತವಾದ ಈ ಶರೀರವು ಸಂಚಿತಕರ್ಮಗಳಲ್ಲಿ ವಿಲೀನವಾಗಿ ಮತ್ತೆ ಸ್ಥೂಲ ಜೀವನ ಧರಿಸುವುದೂ ಅನಿವಾರ್ಯ. ಮೃತ್ಯುವು ಅಭಿನವ ಜೀವನದ ಒಂದು ಅಧ್ಯಾಯ, ಮುಂದಾಗಿ ಮತ್ತು ಪರಮ ಸುಂದರ ಪ್ರಯೋಜನದ್ವಾರ ಮೃತ್ಯುವಿನ ಬಗ್ಗೆ ಪರಮ ವೈಜ್ಞಾನಿಕ ಕಲ್ಪನೆಯಿಲ್ಲದೆ ಜೀವನದಲ್ಲಿ ಸೌಂದರ್ಯ ಅಥವಾ ನಾನೀನ್ಯಗಳು ಮೂಡಲಾರವು. ಇದೇ ರೀತಿಯಲ್ಲಿ ಜೀವಕಣವನ್ನು ಗ್ಲಾನಿಗೊಳಿಸುವ ಮತ್ತು ಶರೀರವನ್ನು ಜೀರ್ಣಗೊಳಿಸುವ ಪ್ರಕ್ರಿಯೆಗಳಿಲ್ಲದೆ ಕಲಾತ್ಮಕ ಮೃತ್ಯುವಿನ ಅವಶ್ಯಕತೆಯೂ ಅನುಭವಕ್ಕೆ ಬರುವುದಿಲ್ಲ.

ಮೃತ್ಯು ವಿಜ್ಞಾನ ಬಹಳ ದೊಡ್ಡದು. ಆದರೆ, ಇದಿನ್ನೂ ಊಹನೆಗೂ ನಿಲುಕಿಲ್ಲ; ಇದು ಅತ್ಯಂತ ಕಠಿನ ಕ್ರೂರ ಮತ್ತು ಪರುಷ. ಆದರೂ, ಇದರ ಉಪಯೋಗ ಕಡಿಮೆಯಲ್ಲ; ಇದರ ಸೌಂದರ್ಯವೂ ಅಲ್ಪವಾದುದಲ್ಲ. ಇದನ್ನು ಅರಿಯಲು ಮನೋಯೋಗ ಬೇಕಾಗುತ್ತದೆ. ಜೀವನ ರೂಪಿಯೂದ ಫಲಿಕೇತನು ಸಾಕ್ಷಾತ್ ಮೃತ್ಯು ದೇವತೆಯಾದ ಯಮರಾಜನೊಡನೆ ಮೃತ್ಯು ವಿಜ್ಞಾನವನ್ನು ತಿಳಿಸಿ ಹೇಳಲು ಅನೇಕ ವಿಧವಾಗಿ ಪ್ರಾರ್ಥಿಸಿದನು. ಇದಕ್ಕಾಗಿ ಅವನು ಕಠಿನಾತಿಕಠಿನ ತಪಸ್ಸನ್ನಾಚರಿಸಿದನು. ಆದರೆ, ಮೃತ್ಯು ವಿಜ್ಞಾನವನ್ನು ಸರಳ ರೀತಿಯಲ್ಲಿ ತಿಳಿಸಲು ಯಮರಾಜನು ಮುಂದೆ ಬರಲಿಲ್ಲ. ಈ ವಿಜ್ಞಾನವನ್ನು ಅಗೋಚರವಾಗಿಸಲು ಅವನು ನಚಿಕೇತನಿಗೆ ಫಲವು ಬರೆಯುಪ್ರಲೋಭನಗಳನ್ನು ನೀಡಿದನು; ಇತರ ವರಗಳನ್ನು ಬೇಡಿಕೊಳ್ಳೆಂದು ಅವನನ್ನು ವತ್ತಾಯಿಸಿಕೊಡಗದನು. ನಚಿಕೇತನು ಒಪ್ಪಲಿಲ್ಲ, ಏಕೆಂದರೆ, ಅವನು ಪರಮ ಜಿಜ್ಞಾಸುವಾಗಿದ್ದನು. ಅವನಲ್ಲಿ ಮೃತ್ಯು ವಿಜ್ಞಾನ ತಿಳಿಯುವ ಬಗ್ಗೆ ಅವಿಚಲ ಆಸ್ಥೆಯಿತ್ತು. ಆದುದರಿಂದ ಯಮರಾಜನು ಬಹಳ ಕಷ್ಟದಿಂದ ಮೃತ್ಯು ವಿಜ್ಞಾನದ ರಹಸ್ಯಗಳನ್ನು ಪ್ರಕಟಗೊಳಿಸಿದನು. 'ಜೀವನ ಮೃತ್ಯು'ಗಳಲ್ಲಿ ಒಂದೇ ತತ್ವ ಅಡಗಿದೆ. ಒಂದೇ ತತ್ವದ ಮೂಧ್ನಮೆದಲ್ಲಿ ಎರಡೂ ಅವಸ್ಥೆಗಳು ಒದಗುತ್ತವೆ. ಈ ಒಂದೇ ತತ್ವದ ಪ್ರತಿಕ್ರಿಯೆಯಿಂದ ಕಾಲಾಂತರದಲ್ಲಿ ಪರಿಸ್ಥಿತಿಗಳು ಸಾರವಾಗಿ ಜೀವನ ಮತ್ತು ಮೃತ್ಯು ಎರಡೂ ಪರಿಣಾಮಗಳು ದೃಷ್ಟಿಗೋಚರವಾಗುತ್ತವೆ.

ಯದೇವೇಹ ತದಮುತ್ರ
ಯದಮುತ್ರ ತದನ್ವಿಹ
ಮೃತ್ಯೋಃ ಸ ಮೃತ್ಯುಮಾಪ್ನೋತಿ
ಯ ಇಹ ನಾನೇವ ಪಶ್ಯತಿ॥

ಮೃತ್ಯುವಿನಿಂದ ಭಯಭೀತನಾಗುವ, ಆತಂಕಗೊಳ್ಳುವ, ವಿಚ್ಛಿಲನಾಗುವ ಅಗತ್ಯವಿಲ್ಲ. ಅದು ಅನಾದಿ—ಅನಂತ. ಅದು ಪರಿಂದಲೇ ಅದು ಸರ್ವಶ್ರೇಷ್ಠ. ಅದು ಶರೀರೋತ್ಥಾನದ ಪ್ರಥಮ, ಜೀವನದ ಜರಮ ಹಾಗೂ ಪರಮ ಸತ್ಯ. ಅದು ಅತ್ಯವಶ್ಯ, ಆದುದರಿಂದ ಅದು ನಿತ್ಯ ಸ್ವಾಗತಾರ್ಹ.

ಜೀವನದ ಇನ್ನೊಂದು ಮುಖವೇ ಮೃತ್ಯು ಜೀವನದಲ್ಲಿ ಅನೇಕಾನೇಕ ಸುಂದರತೆಗಳಿರುವುದು ಅನುಭವ ವೇದ್ಯ. ಜೀವನದ ಒಂದು ಮುಖದಲ್ಲಿ ಸೌಂದರ್ಯವಿದ್ದು ಇನ್ನೊಂದರಲ್ಲಿ ಅದಿಲ್ಲದಿರುವುದು ಸಾಧ್ಯವಿಲ್ಲ. ಹುಟ್ಟು ಮತ್ತು ಸಾವುಗಳು ಸನಾತನ ಸೌಂದರ್ಯಗಳು; ಶಾಶ್ವತ ಶಿವಗಳು ಅವುಗಳಲ್ಲಿ ಒಂದು ಜೀವನದ ಆರಂಭ ಸತ್ಯ, ಇನ್ನೊಂದು ಅಂತಿಮ ಸತ್ಯ ಅದುದರಿಂದ ಜೀವನ ಮತ್ತು ಮೃತ್ಯು 'ಸತ್ಯಂ ಶಿವಂ ಸುಂದರಂ' ಎಂಬುದರ ಅನಾದಿ-ಅನಂತ ಪ್ರತೀಕ.

ಸೌಂದರ್ಯವಿರುವ ತತ್ವಗಳಲ್ಲಿ ಕಲೆಯೂ ಇದ್ದೇ ತೀರಬೇಕು. ಏಕೆಂದರೆ, ಕಲೆ ಮತ್ತು ಸೌಂದರ್ಯಗಳು ಅನ್ಯೋನ್ಯಾಶ್ರಿತ ಸಂಬಂಧಿಗಳು. ಕಲೆಯಿಲ್ಲದೆ ಪೂರ್ಣವುದಕ್ಕೂ ಸೌಂದರ್ಯ ದೊರೆಯದು; ಸೌಂದರ್ಯವಿಲ್ಲದೆ ಕಲೆಗೆಜೆಲೆಯಿರದು. ಆದುದರಿಂದ ಜೀವನ ಮತ್ತು ಮೃತ್ಯುಗಳೆರಡೂ ಕಲೆಯಿಂದ ತುಂಬಿವೆ. ಕಲಾಹೀನ ಜೀವನ ಪಶು ಸಮಾನ. ಮನುಷ್ಯ ಜೀವಕಣವು ಕಲೆಯಿಂದಾಗಿಯೇ ಸುಂದರ ಸಂಪೂರ್ಣ ಮತ್ತು ಸಫಲವಾಗುತ್ತದೆ.

ಜೀವನ ಲೀಲೆಯನ್ನು ಸೌಂದರ್ಯದಿಂದ ಕೂಡಿರುವಂತೆ ಮಾಡಲು ಕಲೆಯು ಮೇಲೆ ಮೃತ್ಯುವೂ ಅಧಿಕಾರ ಚಲಾಯಿಸಬೇಕು. ಸೌಂದರ್ಯದೊಂದಿಗೆ ಕಲಾಪೂರ್ಣ ಮೃತ್ಯುವನ್ನು ಹೊಂದಲಾರದವನ ಜೀವನವು ಸಂದರವಾಗಿರಲಾರದು. ಮೃತ್ಯುಕಲೆಯ ಸಂಪೂರ್ಣ ಜ್ಞಾನವಿದ್ದವನು ಮೃತ್ಯು ಬದುಕುತ್ತಾನೆ. ಒಳ್ಳೆಯ ರೀತಿಯಿಂದ ನಾಯುವವನು ಮೃತ್ಯುವೇ ಒಳ್ಳೆಯ ರೀತಿಯಿಂದ ತನ್ನ ಜೀವಕಳೆ ಹೊತ್ತಿ ಮಾಡಬಲ್ಲನು. ಜೀವಕಳೆಯನ್ನು ಶುಭಪ್ರದವಾಗಿ ದಾಟಲಾರದವನು ಉತ್ತಮವಾಗಿ ನಾಯಲಾರನು. ಸಂಪೂರ್ಣ ಜೀವನದ ಕಲೆಯಿದು.

ನಾವು ಮಾನವ ಜೀವಕಳೆದ ಬೇರೆ ಬೇರೆ ಅಂಗಾಂಗಗಳ ಬಗ್ಗೆ ವಿಚಾರ ಮಾಡುತ್ತೇವೆ; ತಲೆ ಕೆಡಿಸಿಕೊಳ್ಳುತ್ತೇವೆ. ಆದರೆ, ಜೀವನದ ಅಂತಿಮ ಸತ್ಯದ ಬಗ್ಗೆ ಯೋಚನೆ ಹೆಂಪೊಡನೇ ಕಂಗಾಲಾಗುತ್ತೇವೆ; ಹೆದರುತ್ತೇವೆ. ಜೀವನದ ಸಂಪೂರ್ಣ ಸಾಫಲ್ಯಕ್ಕೆ ಈ ಸ್ಥಿತಿ ಮೂರಕ. ಜೀವಕಳೆದ ಬಗ್ಗೆ ಮೋಹ ಮತ್ತು ಮೃತ್ಯುವಿನ ಬಗ್ಗೆ ವ್ಯರ್ಥ ಭಯ—ಇವೆರಡೂ ಸಂಪೂರ್ಣ ಜೀವಕಳೆಗೆ ಪೋಷಕವಲ್ಲ. ಮರಣವು ಜೀವನ ಪಥಕ್ಕೆ ಭಾದೆಯಾಗದು. ಈ ಭಯವು ಮನುಷ್ಯನ ಮನಸ್ಸಿನಿಂದ ಎಷ್ಟು ಬೇಗ ದೂರವಾಗುತ್ತದೋ ಅಷ್ಟು ಬೇಗ ಅತನಿಗೆ ಶುಭವಾಗುತ್ತದೆ.

ಸುಖೀ ಜೀವನದ ಬಳಿಕ ದುಃಖೀ ಮೃತ್ಯುವೆಂಬ ಭ್ರಮೆ ನಮ್ಮ ಮನಸ್ಸಿನಲ್ಲಿ ತುಂಬಿದೆ. ಆದುದರಿಂದಲೇ ಅಗಾಧ ನವ ಗೆ ಜೀವನವೂ ಡುಃಖಮಯವೆಂಬಂತೆ ತೋರುತ್ತದೆ. ಜೀವನಾನಂತರ ಪರಮ ಸೌಂದರ್ಯಮಯಿ ಮೃತ್ಯುವೆಂಬ ಅಚಲ ವಿಶ್ವಾಸ ನಮ್ಮ ಮನಸ್ಸಿನಲ್ಲಿ ಮೂಡಿದರೆ "ಸತ್ಯಂ ಶಿವಂ ಸುಂದರಮ್" ಅದಾಗುತ್ತದೆ.

'ಸತ್ಯಂ ಶಿವಂ ಸುಂದರಮ್'ನಲ್ಲಿ ಸ್ಥಿರ ತನಾಗಿ ಮೃತ್ಯು ಮುಖನಾದವನ ಬಗ್ಗೆ ಭಗವಂತನು ಹೇಳಿದ್ದಾನೆ-

ಅಂತಕಾಲೇ ಚ ಮಾಮೇವ
ಸ್ಮರನ್ ಮುಕ್ತ್ವಾ ಕಲೇವರಂ
ಯಃ ಪ್ರಯಾತಿ ಸ ಮದ್ಭಾವಂ
ಯಾತಿ ನಾಸ್ತ್ಯತ್ರ ಸಂಶಯಃ॥

ಭಗವದ್ಗೀತೆಯು ೮-ನೆಯ ಶ್ಲೋಕವಿದು. "ಅಂತ್ಯಕಾಲದಲ್ಲಿ ದೇವರನ್ನು ಸ್ಮರಿಸಿ ಶರೀರತ್ಯಾಗ ಮಾಡಿದವನು ಪರಮಾತ್ಮನನ್ನೇ ಹೊಂದುತ್ತಾನೆ; ಇದಕ್ಕೆ ಸಂಶಯವಿಲ್ಲ." ಇದೇ ಸುಖೀ ಮೃತ್ಯು.

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No— 1 28337 2 29887 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ತಾಟಕ ವೃಷಂಡ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಪಂಚ ಸುಮನ	1—20
ಹೆಂಗುಸರ ಕತೆಗಳು	2—00
ಪುಡಿಮುತ್ತುಗಳು	1—50
ಪಂಚಗಜ್ಜಾಯ	2—00
ಮುತ್ತಿನ ಮಾಲೆ	1—80

ನವಭಾರತ ಪುಸ್ತಕ ಭಂಡಾರ್, ಉಡುಪಿ.

ಬಸ್ಮಾಸುರನ ಪುನರವತಾರ

ಭೂ ಆಕ್ರಮಣ ಚಳುವಳಿ

ಸಂಯುಕ್ತ ಸಂಸ್ಥಾಜನತಾದಿ, ಪ್ರಜಾ ಸಂಸ್ಥಾಜವಾದಿ ಮತ್ತು ಕಮ್ಯುನಿಸ್ಟ್ ಪಕ್ಷಗಳು ಹೊಸತೊಂದು ಚಳುವಳಿಯನ್ನು ಆರಂಭಿಸಿವೆ. ಭೂ-ಆಕ್ರಮಣ ಚಳುವಳಿಯೆಂದು ಕರೆಸಿಕೊಳ್ಳುವ ಈ ಚಳುವಳಿಯು ಇದ್ದವರಿಂದ ಕಿತ್ತು ಇಲ್ಲದವರಿಗೆ ಹಂಚುವ ಉದ್ದೇಶವಿಟ್ಟುಕೊಂಡಿದೆ. ಕಾನೂನಿನ ದೃಷ್ಟಿಯಲ್ಲಿ ಇದು ನ್ಯಾಯ ಸಮ್ಮತವಾಗಿದೆ ಹೋಗಲಿ "ಕರ ನಿರಾಕರಣ ಚಳುವಳಿ' 'ಉಪ್ಪಿನ ಸತ್ಯಾಗ್ರಹ'ಗಳಂತೆಯೇ ಇದೂ ಒಂದು ಹೊಸ ಬಗೆಯ ಚಳುವಳಿಯೆನ್ನ ಬಹುದು. ಅವು ವಿದೇಶೀಯರ ವಿರುದ್ಧ ಇದು ಭೂ ಸುಧಾರಣೆಯನ್ನು ಜಾರಿಗೆ ತಂದು ಭೂವಿಕರಣಿಯಲ್ಲಿದ್ದ ಅಸಮಾನತೆಯನ್ನು ಹೋಗಲಾಡಿಸುವ ಆಡಳಿತ ನಾಯಕರ ಗುರಿ ಇನ್ನೂ ಈಡೇರಲಿಲ್ಲ. ಭೂದಾನ ಚಳುವಳಿಯೂ ಯಶಗಳಿಸಲಿಲ್ಲ. ಕಾನೂನಿನ ದವಡೆಯಿಂದ ಬದುಕುವ ತಂತ್ರದಕ್ಕೆಯೇ ಉಳ್ಳವರ ಮನ ಹರಿದಿದೆ. ಆದುದರಿಂದ ನೊಂದ ಭೂಹೀನರನ್ನು ಸಂತೈಸಿ, ಅವರ ಒಲವೆಯನ್ನು ಗಳಿಸುವ ಉದ್ದೇಶದಿಂದಲೇ ಈ ಹೊಸ ಚಳುವಳಿ ಆರಂಭವಾಗಿದೆ. ಎಲ್ಲವೂ ಮುಂದಿನ ಸಾರ್ವತ್ರಿಕ ಚುನಾವಣೆಗಳ ಹಿನ್ನೆಲೆಯ ನಾಟಕ.

ಇದುವರೆಗೆ ಪಕ್ಷಗಳೇಯರು ಸಮಿತಿನಿಷ್ಠರು ಮಾತ್ರ ಇಂತಹ ಆಕ್ರಮಣಗಳಲ್ಲಿ ತೊಡಗಿದ್ದರು. ಈಗ ಅದು ಸುವಿಸ್ತೃತಗೊಂಡ ದೆಂಬ, ಅದನ್ನು ಅಣಕಿಸುವುದು ಕಷ್ಟಸಾಧ್ಯವಾಗತ್ತದೆ. ಇಂಡಿಕೇಟ್ ಕಾಂಗ್ರೆಸ್‌ನ ಹಲವು ಚಿಕ್ಕ ಪೋರರೂ ಈ ಚಳವಳಿಯನ್ನು ಸಮರ್ಥಿಸಿ ಹೊರಟಿದ್ದಾರೆ. ಭೂ ಆಕ್ರಮಣವು ಆಕ್ರಮಣವೆಂದಾದರೆ, ಅದರ ಹೊಣೆಯನ್ನು ಭೂ ಮೂಲಿಕರ ತಲೆಯು ಮೇಲೆಯೇ ಅವರು ಹೋಸಿಸಿದ್ದಾರೆ, ಅವರೆನ್ನುವಂತೆ ಭೂ ಆಕ್ರಮಣ ಹಿಂದಿನಕಾಲದಿಂದಲೂ ನಡೆಯುತ್ತಲೇ ಬಂದಿದೆ; ಅದನ್ನು ಆಗ ಯಾರೂ ತಡೆಯುತ್ತಿರಲಿಲ್ಲ. ದೊಡ್ಡ ದೊಡ್ಡ ಜಮೀನುದಾರರು ಚಿಕ್ಕ ಹಿಡುವಳಿದಾರರ ಭೂಮಿಯನ್ನು ವಂಚನೆಯಿಂದಲೋ ಬಲಾತ್ಕಾರ, ದಬ್ಬಾಳಿಕೆಯಿಂದಲೋ ವಶಪಡಿಸಿಕೊಳ್ಳುತ್ತಿದ್ದರು. ಈಗ ಅದು ತಿರುವು ಮುರುವಾಗಿದೆಯೆಂದು ಮುಂತಾಗಿ ಇವರ ವಾದ.

ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ, ಇಂಡಿಕೇಟಿನ ಅಧ್ಯಕ್ಷ ಶ್ರೀ ಜಗಜ್ಜೀವನ ರಾಮ್ ಮೊದಲಾದವರೂ ಪರಮಾವಧಿ ಹಿಡುವಳಿಗೆ ಮಿಗಿದ ಭೂಮಿ ಹೊಂದಿದ್ದಾರೆಂದುಅವರ ಭೂಮಿಯ ಮೇಲೂ ಆಕ್ರಮಣ ನಡೆದಿದೆ. ತಾವು ದೇಶದ ಸಂರಕ್ಷಣೆಯ ಭಾರವನ್ನು ಹೊತ್ತಿರುವಾಗ, ತನ್ನ ಭೂಮಿಗೆ ಶ್ರೀರಾಮ ರಕ್ಷೆಯಿಲ್ಲವಾದಾಗ ಶ್ರೀ ಜಗಜ್ಜೀವನ ರಾಮರ ಸ್ಥಿತಿಯೇನಾಗಬೇಡ? ತವಗೆ ಹೆಚ್ಚಿನ ಭೂಮಿಯಿಲ್ಲವೆಂದು ಹೇಳಿಕೆ ನೀಡಿದರು. ಇರಬಹುದು; ಆಕ್ರಮಣ ಭೀತಿಯಿಂದ ಏನಾದರೂ ಒಳಕಾಸ್ತ್ರ ನಡೆಸಿರ ಬಹುದು. ಆದರೆ, ಪ್ರಧಾನಿಯವರು ಏನೂ ಹೇಳದಂತೆ ವರದಿಯಾಗಲಿಲ್ಲ.

ಈಗ ಪ್ರಧಾನಿಗೆ ಬಿಸಿತುಪ್ಪ ಬಾಯಿಗೆ ಸಿಕ್ಕಿಬಿದ್ದಂತಾಗಿದೆ. ತನ್ನ ಪಕ್ಷೀಯರಲ್ಲಿ ಹಲವರು ಭೂ ಆಕ್ರಮಣ ಚಳುವಳಿಯನ್ನು ಬೆಂಬಲಿಸ ಹೋಟ್ಟಾರೆ. ಸರಕಾರದ ಸೂತ್ರಧಾರಿಣಿ ಈಗ ಏನು ಮಾಡಬೇಕು? ಮಂತ್ರಿತನ ಫೀಡ ವುದರಲ್ಲಿ, ಮಂತ್ರಿಗಳಿಗೆ ಶಾಖೆ ನೀಡುವುದರಲ್ಲಿ ಆಕೆ ಸರ್ವಾಧಿಕಾರಿಯಂತೆ ವರ್ತಿಸ ಬಹುದು. ಆದರೆ, ಅತ್ಯಸಾಕ್ಷಿಯ ಪೆಸರಲ್ಲಿ ಅತ್ಯಸಾಕ್ಷಿಯಂತೆ ಭೂ ಆಕ್ರಮಣಕಾರರಿಗೆ ಬೆಂಬಲ ಫೀಡುವ ಪ್ರಶ್ನೆಯೇಯರನ್ನು ಆಕೆ ಹೇಗೆ ನಡಿಸಬೇಕು?

ಶ್ರೀಮತಿ ಗಾಂಧಿಯವರು ಖುದ್ದಾವಂತೆ, ಭೂ ಆಕ್ರಮಣ ಚಳುವಳಿಯ ಬಗ್ಗೆ ಆಕೆಯನ್ನೂ ತಪ್ಪ ಅಭಿಪ್ರಾಯವನ್ನು ವ್ಯಕ್ತಪಡಿಸಿಲಿಲ್ಲ. ಫಕ್ಷೀಯರ ಚಟುವಟಿಕೆಗಳನ್ನು ನಿರ್ಬಂಧಿಸಲು ಪಂಥಾಗದ ಪ್ರಧಾನಿಗೆ ಇದು ಸಹಜವೇ. ಇದ್ದವರಿಂದ ಕಿತ್ತುಕೊಳ್ಳುವುದಕ್ಕೆ ಇಲ್ಲದವರ ದೆಂಬಲ ಅಪೇಕ್ಷ ಇದ್ದೇ ಇದೆ. ನಮ್ಮ ದೇಶದಲ್ಲಿ ಇಲ್ಲದವರೇ ಹೆಚ್ಚು ಜನ, ಇವರ ಇಲ್ಲದಿರುವಿಕೆಗೆ ಏನೇ ಕಾರಣವಿರಲಿ, ಅವರು ಇಲ್ಲದವರು ಎಂಬುದಂತೂ ನಿಜ. ತಪ್ಪ ಪಕ್ಷದಲ್ಲಿನ ಬಲವ ಜಾತಂಗವೂ ಈ ಚಳುವಳಿಗೆ ಬೆಂಬಲ ನೀಡಹೊರಟಿರೆ ಆಕೆಯೂ ಬಾಯಿವಚ್ಚಿಕೊಳ್ಳುವುದೇ ಕಾದುತ್ತದೆ. 'ಮಾಡಿದ್ದೆಲ್ಲವೂ ಪ್ರಗತಿ' ಎಂಬ ತಪ್ಪ ರಾಜ್ಯಕೀಯ ಫೀತಿಸುಳ್ಳಿ ಭೂ ಆಕ್ರಮಣವೂ ಪ್ರಗತಿಯ ಮತ್ತೊಂದು ಮೈಲುಗಲ್ಲು ಆದೀತು. ಉಳಿಯ ಕೊಡಗಿದ ಬೆಂಕಿಯಲ್ಲಿ ತಮ್ಮ ರೊಟ್ಟಿ ಸುಡುವ ಕಲೆ ಶ್ರೀಮತಿ ಗಾಂಧಿರೆ ಕರಕಲಾಮಲಕ.

ಸಿಂಡಿಕೇಟಿನ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಭೂ ಆಕ್ರಮಣವನ್ನು ಅನಾಗರಿಕ ಎಂದು ಖಂಡಿಸಿದ್ದಾರೆ. ಇದರಿಂದ ಅವರು ಏನೂ ಸಾಧಿಸಲಿಲ್ಲ. ಸಿಂಡಿಕೇಟು ಭೂ ಆಕ್ರಮಣಕ್ಕೆ ವಿರೋಧಿಯೆಂದು ಮೂತ್ರ ಜಗಜ್ಜಾಹೀರಾಯಿತು. ಇದರ ಸದುಪಯೋಗವನ್ನು ಶ್ರೀಮತಿ ಗಾಂಧಿ ಪೂಡಿಕೊಳ್ಳದಿರುತ್ತಾರೆಯೇ? ಇದ್ದಿಯೂ ರಾಜ್ಯಕೀಯ ತಲೆ ಹಾಳುತ್ತದೆ. ಸಿಂಡಿಕೇಟ್ ಪ್ರತಿಗಾಮಿತಳ ಕೂಟವೆಂಬುದನ್ನು ಸತ ಥಿಸಲು ಅವರಿಗಿನ್ನೊಂದು ಅಸ್ತ್ರ ದೊರೆಯಿತು. ಪ್ರಜಾಪ್ರಭುತ್ವವಾದಿ ಪಕ್ಷಗಳಿಗೆ ಒಂದಾಡಲು ನೀಡಿದ ಕರೆಯ ಫಲ 'ಪ್ರಗತಿಗಾಮಿಗಳ ವಿರುದ್ಧ ಪ್ರತಿಗಾಮಿಗಳ ಫಿಕಾರಿ'ಯೆಂದು ವರ್ಣಿಸಿ, ಆಕಾಶ-ಪಾತಾಳಗಳನ್ನು ಒಂದು ಮಾಡಿದ ಅವರು ಭೂ ಆಕ್ರಮಣ ವಿರೋಧವನ್ನೂ ಹಠಿಯಿಂದ ವರ್ಣಿಸುವುದು ಸಹಜವೇ.

ಶ್ರೀಮತಿ ಗಾಂಧಿ ಬಹಳ ಚತುರೆ. ತೀವ್ರವಾಗಿ ಆಕೆ ಯಾವುದರ ಬಗ್ಗೆಯೂ ಬಾಯಿ ಬಿಡುವುದಿಲ್ಲ. ತಾನು ಆಡಲೇ ಬೇಕಾಗಿ ಬಂದಾಗಷ್ಟೇ ಆಕೆ ಆಡುತ್ತಾರೆ. ನಾಯಿಯನ್ನು ಮೊದಲು ಛೂ ಬಿಡುತ್ತಾರೆ ಆದೇವಾಗುತ್ತದೆಯೆ ಎಂದು ಕಣ್ಣಿನಲ್ಲಿ ಜೀವ ತಂಬಿ ನೋಡತ್ತಾರೆ. ಗೆದ್ದವರೆ ಪಕ್ಷ ಹಿಡಿಯುತ್ತಾರೆ ಇದು ಇಂದಿರಾ ರಾಜ್ಯಕೀಯ—ಅಧಿಕಾರವಳಸುವ ಆಕೆಯ ಮೂಲವ ಂತ್ರ ಆದುದಾಂದಲೇ ಆಕೆಯು ನ್ನೂ ಅಧಿಕಾರದಲ್ಲಿ ಉಳಿದಿದ್ದಾರೆ; ಸಂಪೆ ಕೆಲಕಾಲವಾದರೂ ಉಳಿಯುತ್ತಾರೆ.

ಭೂ ಆಕ್ರಮಣ ಚಳುವಳಿಯು ಇನ್ನೂ ಹಲವು ರೀತಿಯ ಚಳುವಳಿಗಳಿಗೆ ಕಾರಣವಾಗಬಹುದು. ದೇಶದಲ್ಲಿನ ಕಾನೂನು ಪುಸ್ತಕದ ಬದನೆಕಾಯಿಯಾಗಿ ಉಳಿಯಬಾರದೆಂಬ ಇವು ಮೂಡಿಯವು. ಸಂವಿಧಾನವು ನೀಡಿದ 'ಒಡೆತನ'ದ ಸ್ವಾತಂತ್ರ್ಯಕ್ಕೆ ಇವು ಧಕ್ಕೆ ತಂದಾವು. ವಿಶ್ವ ಜೀವಿತಗಳಿಗೆ ಅಭದ್ರ ಪರಿಸ್ಥಿತಿಯನ್ನು ತಂದು ನೀಡಿಯಾವು. ಹಾಗಾಗಿ ಅರಾಜಕತೆ ದೇಶದಲ್ಲಿ ತಾಂಡವವಾಡ ಹೊರಟೀತು. ಅತ್ಯಪ್ಪ ಹಾಗೂ ಕೋಪಿಷ್ಠ ವರ್ಗದವರ ಉದ್ವೇಗವನ್ನು ಅರಿತು ಕೊಂಡು, ಅವರ ಅತೃಪ್ತಿಯನ್ನೂ ಕೋಪಣೆಯನ್ನೂ ದೂರಮಾಡುವತ್ತ, ಎಲ್ಲರಿಗೂ ನ್ಯಾಯ ದೊರೆಯುವಂತಹ ಸಮಜವಾದಿ ಕ್ರಮವೆತ್ತ ಮುಂದಡಿಯಿಡುವುದು ಅತ್ಯಗತ್ಯ. ಇಲ್ಲವಾದರೆ ದೇಶದ ಪರಿಸ್ಥಿತಿ ಬಿಗ್ಬಾಣಗೊಂಡೀತು; ರಾಜ್ಯಕೀಯ ಹೋರಾಟ ಮಿತಮೀರಿ ದೇಶ ಸರ್ವನಾಶವಾದೀತು.

Gram: VISHWA Tel: 29111

When at Bangalore

Stay at

HOTEL NATARAJA

Restaurant, Boarding & Lodging,

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಬಂಟರ ಯಾನೆ ನಾಡವರ ಸಂಘ ಮುಂಬಯಿ

ಈ ಸಂಘದ ೫೩ನೇ ವಾರ್ಷಿಕ ಮಹಾಸಭೆ ೩೩ನೇ ಸ್ಥಳಕ ಕೂಟ ಸಮಾರಂಭವೆಡೂಡಿಡೆನೆ ಜಾ. 19.7.70ರಂದು ಶಿವಾಜಿ ಪಾರ್ಕಿನ ಸ್ಯಾಟ್ ಯಂಡ್ ಗೈಡ್ಸ್ ಪೆವೇಲಿನಲ್ಲಿ ಡಾ। ಪಡುಬಿದ್ರಿ ಜಗನ್ನಾಥ ಶೆಟ್ಟಿ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು.

ಹೊಸ ವರ್ಷದ ಆಡಳಿತ ಮಂಡಳಿಗೆ, ಡಾ। ಯಜ್, ಬಾಳೆಕ್ಕಿಲ್ಲ ಶೆಟ್ಟಿ—ಅಧ್ಯಕ್ಷೆ, ಸರ್ವಶ್ರೀಗಳಾದ ವೈ. ರಘು ಶೆಟ್ಟಿ—ಉಪಾಧ್ಯಕ್ಷೆ, ಮುಲ್ಕಿ ಗಂಗಯ್ಯ ಶೆಟ್ಟಿ—ಗೌ। ಕಾರ್ಯದರ್ಶಿ, ಕೆ. ನಿತ್ಯಾನಂದ ಶೆಟ್ಟಿ—ಗೌ। ಉಪ ಕಾರ್ಯದರ್ಶಿ, ಗೋಪಾಲ ಬಿ. ಶೆಟ್ಟಿ—ಗೌ। ಕೋಶಾಧಿಕಾರಿ; ಸುಂದರ ಆಳ್ವ. ಶೆಟ್ಟಿ—ಗೌ। ಉಪ ಕೋಶಾಧಿಕಾರಿ. ಇದರುಗಳನ್ನು ಮತ್ತು 29 ಮಂದಿ ಮಂಬರರನ್ನೂ, ಜಾಲಾ ಕಮಿಟಿಗೆ ಪರ್ವಶ್ರೀಯನ್ನ, ಗೋಪಾಲ ಶೆಟ್ಟಿ—ಟೆಯರ್‌ಮೆನ್, ಯಜ್, ಭುರ, ಶೆಟ್ಟಿ—ಜಾಲಾ ಕಾರ್ಯದರ್ಶಿ, ಕೆ. ರಾಘವ ಶೆಟ್ಟಿ—ಜಾಲಾ ಕೋಶಾಧಿಕಾರಿ ಮತ್ತು ಇತರ 10 ಮಂದಿ ಮಂಬರರನ್ನು ನಿರ್ವಾಚಕಾಧಿಕಾರಿಯಿಂದ ಘೋಷಿಸಲಾಯಿತು.

ಶ್ರೀ ಕಳವಾರು ರಾಮಶೆಟ್ಟಿ ಸ್ವಾಗತಿಸಿದ ಕೆ ಛಾಪಡ ಮಾಡಿದರು ಅಧ್ಯಕ್ಷರ ಭಾಷಣವಾಗಲು ಗೌ। ಕಾರ್ಯದರ್ಶಿಯವರು ಧನ್ಯವಾದಾರ್ಪಣೆಯಲ್ಲು ಆನಂತರ ಮನೋರಂಜನೆಯ ಕಾರ್ಯಕ್ರಮಗಳಿಂದಿಗೆ ಆಂದಿನ ಸಭೆಯು ಮುಕ್ತಾಯಗೊಂಡಿತು.

"ವಿದ್ಯಾರ್ಥಿ ವೇತನ"

ಕರ್ನಾಟಕ ಫ್ರೀ ಸೈಟ್ ಪ್ರೈವೇಟ್ ಲಿಮಿಟೆಡ್ ಕಂಪೆನಿಯ ಸಂಚಾಲಕರಾದ ಮುಂಬೈಯ ಬಂಟರ ಯಾನೆ ನಾಡವರ ಸಂಸ್ಥೆಯವರು ಇಲ್ಲಿಯ ವಿದ್ಯಾರ್ಥಿಲಯದಲ್ಲಿ ಕಲಿಯುವ ಕಲಿಯುತಿರುವ ಬಡ ವಿದ್ಯಾರ್ಥಿಗಳಿಗೆ ಎಂದಿನಂತೆ ವಿದ್ಯಾರ್ಥಿವೇತನ ರೂಪದಿಂದ ಸಾಲಕೊಡುವುದರಿಂದ ಧನಸಹಾಯ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳು ಆಗಸ್ಟ್ ತಿಂಗಳ 31ನೇ ತಾರೀಕಿನೊಳಗೆ ವೇಲಿನ ವಿಳಾಸಕ್ಕೆ ಅರ್ಜಿ ಪೂಡಬೇಕಾಗಿ ಅವಶ್ಯಿಸಲಾಗಿದೆ.

ಯಕ್ಷಗಾನ ಕಾಲಜ್ಞೇಪ

ಉಡುಪಿಯ ಬನ್ನಂಜೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಅಷ್ಟಾಧ್ಯಾಯಿಯ ಕರ್ತೃವಿನ ಅವತಾರಸ್ಥ ಪರ್ವದಿನದ ಪಲುವಾಗಿ ಬನ್ನಂಜೆ ಶ್ರೀ ಮಂಜಾಲಿಂಗೇಶ್ವರ ಯಕ್ಷಗಾನ ಮಂಡಳಿಯ ಮಿತ್ರರ ಕೂಡುಬಡಿಯಿಂದ, ಸದ್ರಿ ಮಂಡಳಿಯ ಉಪಾಧ್ಯಕ್ಷರಾದ ನಾಗೇಶ ಪೈಗಳ ಹಿರಿತನದಲ್ಲಿ "ತೆರೆಸೇ ಕುಬಂಧನ" ಎನ್ನುವ ಕಥಾಭಾಗದಲ್ಲಿ ಯಕ್ಷಗಾನ ಕೂಟ ಜರಗಿತು. ಮಂಡಳಿಯ ಕಾರ್ಯದರ್ಶಿ ಶ್ರೀ ನಾರಾಯಣ ಸೇರಿಗಾರರು ಸ್ವಾಗತ ಭಾಷಣ ಮಾಡಿದ ಬಳಿಕ, ಅಧ್ಯಕ್ಷರು ಜ್ಯೋತಿಷ್ಯಾಧಾರಿ ಶ್ರೀ ಕಾರಸದ್ರಿ ದಿನದ ಮಹತ್ವವನ್ನು ವಿವರಿಸಿದರು.

ಕಲಾಕಾರ್ಯಕ್ರಮದಲ್ಲಿ ಶ್ರೀ ಮಾಧವ ಕಿಣ್ಣಿ ಮತ್ತು ಶ್ರೀ ದೇವುರವರು ಪಾಡುಗಾರಿಕೆಯನ್ನಿತ್ತರು; ಶ್ರೀಗಳಾದ ಕರಿಯಣ್ಣಾಣಿ, ಗೋಪಾಲಾಚಾರ್, ರಂಗ ಪೆಬ್ಬಗಾರ, ಶ್ರೀನಿವಾಸ ಶೆಟ್ಟಿಗಾರರು ಮೃದಂಗವಾದನದಲ್ಲಿಯೂ, ಶ್ರೀ ವಿಠಲ ಸೆಟ್ಟಿಯು ಚಂಡೆವಾದನದಲ್ಲಿಯೂ ಸಹಕರಿಸಿ ಪ್ರೇಕ್ಷಕರ ಮೆಚ್ಚುಗೆ ಪೊಂದಿದರು.

ಶ್ರೀಗಳಾದ ಗೋಪಾಲ ಸೆಟ್ಟಿ, ಹನುಮಂತ ಸೆಟ್ಟಿಗಾರ್, ರಾಮಚಂದ್ರ ಭೆಟ್ಟಿ, ರಾಮದಾಸ ರಾವ್, ಸಿ. ಯಲ್. ಪ್ರಭು, ಕುಮಾರಿ ಬಾಲಕೃಷ್ಣಿ ಮೊದಲಾದ ಅಧ್ಯಸ್ಥಾನಗಳ ಉತ್ತಮ ಗಾಯಕಿಗಳು ಸಭಿಕರ ಆಸಕ್ತಿಯನ್ನು ಅಕರ್ಷಿಸುವಂತಿತ್ತು. ಈ ಕಲಾ ಪ್ರದರ್ಶನದ ಮಧ್ಯೆ ವಿದೇಶಕರಾದ ಶ್ರೀ ಪಾಲನಾ ಉಚಾಧ್ಯಯರು ಧನ್ಯವಾದಾರ್ಪಣ ಮಾಡಿದ ಬಳಿಕ ದೇವಸ್ಥಾನದ ಪ್ರಧಾನ ಅರ್ಚಕ ಮತ್ತು ಆಡಳಿತಾಧಿಕಾರಿಯವರಾದ ವಕೀಲ ಶ್ರೀರಾಮಚಂದ್ರ ಭಟ್ಟರವರು ಪ್ರಸಾದ ವಿತರಣೆ ಮಾಡಿ ಕಾರ್ಯಕ್ರಮವು ಮುಕ್ತಾಯಗೊಳಿಸಿದರು.

ಪ್ರಯತ್ನ ಫಲಿಸಿತು

"ಹಳ್ಳಿಯ ಮಹಿಳೆಯರಿಗೆ ನನಗೆ ತಿಳಿದ ವಿಷಯುಗಳನ್ನು ಹೇಳಿಕೊಡುವುದೆಂದರೆ ತುಂಬ ಇಷ್ಟ, ಲಿಂಬೆ, ದ್ರಾಕ್ಷೆ, ಕಿತ್ತಳೆ ಹಣ್ಣುಗಳ ರಸವತ್ತು ತಯಾರಿಸಿ ಕೆಲವು ಕಾಲ ಬಾಳುವಂತೆ ಸೀಸೆಗಳಲ್ಲಿ ತುಂಬಿಡುವ ಕ್ರಮ ನನಗೆ ಚೆನ್ನಾಗಿ ಗೊತ್ತು. ಬಿಡುವಿದ್ದಾಗಲೆಲ್ಲಾ ನಮ್ಮ ನೆರೆಹೊರೆಯ ಗೆಳತಿಯರಿಗೆ ಇವನ್ನು ಹೇಳಿಕೊಡುತ್ತಿದ್ದೇನೆ" ಎಂದವರು ಶ್ರೀಮತಿ ಮುನಸ್ವಾಮಿ ಶೆರೀಫ್.

ಬೆಂಗಳೂರಿನ ನಂದಿದುರ್ಗ ರಸ್ತೆಯಲ್ಲಿ ದೊಡ್ಡ ಮನೆ. ಮನೆಯಲ್ಲಿ ಪ್ರತಿಯೊಂದೂ ಅಚ್ಚುಕಟ್ಟು. ಮನೆಗೆ ಬಂದವರಿಗೆ ಮುಗುಳ್ನಗೆಯ ಸ್ವಾಗತ, ಅತಿಥಿ ಸತ್ಕಾರ, ಮನೆಯ ಮುಂದೆ ಚಿಕ್ಕ ಹೂದೋಟ. ಕುಳಿತುಕೊಳ್ಳುವ ಕೊಠಡಿ ತುಂಬಾ ನಾಜೂಕು. ಗೋಡೆಯಲ್ಲಿ ತೂಗು ಹಾಕಿದ ಚಿತ್ರಕಲೆಯ ಸುಂದರ ಚಿತ್ರಗಳು.

'ನಾನು ಸೈಸೂರಿನಲ್ಲಿದ್ದಾಗ ಕೊಳಚೆ ಪ್ರದೇಶಗಳಲ್ಲಿ ವಾಸಿಸುವವರಿಗೆ ನೈರ್ಮಲ್ಯ, ಶುಚಿತ್ವ, ಸಹಕಾರ ಇತ್ಯಾದಿಗಳನ್ನು ತಿಳಿಸಿ ಅವರನ್ನು ಸಂಘಟಿಸಬೇಕೆಂದು ಮೂರು ಮೂರು ವರ್ಷ ಪ್ರಯತ್ನಿಸಿದ್ದೆ. ಕೊಳಚೆ ಪ್ರದೇಶಗಳಲ್ಲಿರುವವರ ಆರ್ಥಿಕ ಪರಿಸ್ಥಿತಿ ತುಂಬಾ ಶೋಚನೀಯ. ಆದರಲ್ಲೂ ಇವರ ಮನೆಗಳಲ್ಲಿ ನಾಲ್ಕು, ಐದು, ಆರು ಮಕ್ಕಳು. ಅವುಗಳ ಲಾಲನೆಪಾಲನೆ ಹಾಗೂ ತನ್ನ ಹೊಟ್ಟೆ ಬಟ್ಟೆಯ ಯಾವ ದಕ್ಕೂ ಸಾಕಾಗದು ಇವರ ಆದಾಯ. ಇವರ ಆರ್ಥಿಕ ಪರಿಸ್ಥಿತಿ ತುಂಬಿದ ಸಂಸಾರವನ್ನು ಪೋಷಿಸುವಷ್ಟು ಅನುಕೂಲವಾಗಿರುವುದಿಲ್ಲ. ಮಕ್ಕಳು ತಾವಾಗಿಯೇ ಬೆಳೆಯುತ್ತಿರುತ್ತಾರೆ. ಇವರ ನಡೆನುಡಿಗಳ ಬಗ್ಗೆ ಗಮನಕೊಡಲು ಇವರಿಗೆ ಸಮಯವಿಲ್ಲ; ಅನುಕೂಲವಿಲ್ಲ. ಇದರಿಂದ ಇಂತಹ ಮಕ್ಕಳಲ್ಲಿ ಅಪರಾಧ ವೃತ್ತಿಯ ಪ್ರವೃತ್ತಿ ಹೆಚ್ಚುತ್ತದೆ. ಆದಕಾರಣ ಅಹರ್ನಿಶಿ ದಂಪತಿಗಳು ಕುಟುಂಬ ಯೋಜನೆ ಮಾಡಿಸಿಕೊಳ್ಳುವುದು ಅಗತ್ಯವೆಂದು ನನಗೆ ಖಚಿತವಾಗಿತ್ತು. ಈ ವಿಚಾರ ಹೇಳಹೋದಾಗ ಇವರೆಲ್ಲ ಪ್ರತಿಭಟಿಸುತ್ತಿದ್ದರು. ಹೆಚ್ಚೇಕೆ ನನ್ನ ಮನೆ ಮುಂದೆ ನಿಂತು ಗಲಾಟೆ ಮಾಡುತ್ತಿದ್ದರು. ಆದರೂ ನಾನು ನನ್ನ 'ಪ್ರಯತ್ನ' ಬಿಟ್ಟಿದ್ದಿಲ್ಲ. ಬರಬರುತ್ತಾ ಇವರಲ್ಲಿ ಅನೇಕರು ಕುಟುಂಬ ಯೋಜನೆ ಮಾಡಿಸಿಕೊಂಡರು'-ಅನ್ನುತ್ತಾರೆ ಶ್ರೀಮತಿ ಶೆರೀಫ್.

ಶ್ರೀಮತಿ ಶೆರೀಫ್ ಬೆಂಗಳೂರಿನ ಸೆಂಟ್ರಲ್ ಕಾಮರ್ಸ್ ಕಾಲೇಜಿನಲ್ಲಿ ಓದಿದ ಪದವೀಧರೆ. ಕನ್ನಡ, ತಮಿಳು, ಹಿಂದಿ ಇವರಿಗೆ ಚೆನ್ನಾಗಿ ಬರುತ್ತವೆ. ಉರ್ದು ಇವರ ತಾಯ್ನುಡಿ. ಉರ್ದುವಿನಲ್ಲಿ ಅನೇಕ ಸಣ್ಣ ಕತೆಗಳನ್ನು ಬರೆದಿದ್ದಾರೆ. ದೆಹಲಿ, ಲಕ್ನೋಗಳ ಕೆಲವು ಉರ್ದು ಪತ್ರಿಕೆಗಳ ಇವರ ಲೇಖನಗಳನ್ನು ಆಗಾಗ ಪ್ರಕಟಿಸುತ್ತವೆ. ಉರ್ದು ಕಾದಂಬರಿಗಳಿಂದರೆ ಇವರಿಗೆ ಸಂಚಪ್ರಾಣ.

ಶ್ರೀಮತಿ ಶೆರೀಫ್ ಅವರಿಗೆ ಸಮಾಜ ಸೇವೆಯಲ್ಲಿ ತುಂಬಾ ಶ್ರದ್ಧೆ. ಆಸಕ್ತಿ. ಸಾಜನ್ಯ, ವಿನಯುಗಳ ತವರುಮನೆಯಂತಿರುವ ಶ್ರೀಮತಿಯವರು ನಂದಿದುರ್ಗ ರಸ್ತೆಯಲ್ಲಿರುವ ಮಹಿಳಾಮಂಡಲಿಯ ಅಧ್ಯಕ್ಷೆ. ಸಮೂರು ಇಪ್ಪತ್ತೂರು ಸದಸ್ಯೆಯರುಳ್ಳ ಈ ಮಂಡಲಿ ಮಹಿಳೆಯರ ಸಮಸ್ಯೆಗಳನ್ನ ಪರಿಹರಿಸುವುದರಲ್ಲಿ ಒಳ್ಳೆಯ ಕೆಲಸ ಮಾಡುತ್ತಿದೆ. ಮಹಿಳೆಯರಿಗೆ ಬಿಡುವಿದ್ದಾಗ ಕಸೂತಿ, ಹೊಲಿಗೆ ಇತ್ಯಾದಿಗಳನ್ನು ಕಲಿಸಿಕೊಳ್ಳಲು ಇಲ್ಲಿ ಅವಕಾಶವಿರುವುದಲ್ಲದೆ ಅವರ ಕುಟುಂಬದ ಅನೇಕ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಶ್ರೀಮತಿ ಶೆರೀಫ್ ಆಸ್ಥೆವಹಿಸಿದ್ದಾರೆ.

ಶ್ರೀಮತಿ ಶೆರೀಫ್ ಅವರ ಚಟುವಟಿಕೆ ಈ ಮಹಿಳಾಮಂಡಲಿಯ ಕಾರ್ಯಕ್ಷೇತ್ರದಲ್ಲಿ ಮಾತ್ರ ಸೀಮಿತವಾಗಿಲ್ಲ. ಸಹಾಯ ಸಹಕಾರಕ್ಕಾಗಿ ಬರುವ ಯಾವ ಮಹಿಳೆಯಾದರೂ ಶ್ರೀಮತಿಯವರಲ್ಲಿ ಸ್ವಾಗತವಿದೆ. ತಮ್ಮ ಗೆಳತಿಯರಲ್ಲಿ ಸಹಕರಿಸಿದರೆ ಮಹಿಳೆಯರಿಗಾಗಿ ಒಂದು ಸಂಘವನ್ನು ಸ್ಥಾಪಿಸಿ ಶರಬತ್ತು, ಉಪ್ಪಿನಕಾಯಿ ಇತ್ಯಾದಿಗಳನ್ನು ತಯಾರಿಸುವ ವಿಧಾನ ಮಾಡಬೇಕೆಂದು ಆಲೋಚಿಸಿದ್ದಾರೆ.

ಮೈಸೂರು ರಾಜ್ಯದಲ್ಲಿ ಸಾಮಾನ್ಯ ಎಲ್ಲಾ ಕಡೆಗಳನ್ನೂ ಶ್ರೀಮತಿ ಶೆರೀಫ್ ನೋಡಿದ್ದಾರೆ. ಇಷ್ಟೆ ಅಲ್ಲ, ಇವರು ಬಾಂಬೆ, ಲಂಡನ್ ಇತ್ಯಾದಿ ನಗರಗಳನ್ನು ಸಂದರ್ಶಿಸಿದ್ದಾರಲ್ಲದೆ, ದಕ್ಷಿಣ ಅಮೇರಿಕೆಯಲ್ಲಿ ಕೆಲವು ಕಾಲ ಪ್ರವಾಸ ಮಾಡಿದ್ದಾರೆ. ಚಿಕಾಗೋದಲ್ಲಿ ಆರು ತಿಂಗಳ ಕಾಲ ವಾಸವಾಗಿದ್ದರು. ವಿದೇಶ ಪ್ರವಾಸ ಶ್ರೀಮತಿಯವರಲ್ಲಿ ವಿಶಾಲಮನೋಭಾವವನ್ನು ಮೂಡಿಸಿದೆಯಲ್ಲದೆ ನಮ್ಮ ದೇಶದ ಮಹಿಳೆಯರ ಏಳಿಗೆಗಾಗಿ ದುಡಿಯುವುದರಲ್ಲಿ ಹೆಚ್ಚಿನ ಆಸಕ್ತಿ ಹುಟ್ಟಿಸಿದೆಯೆಂಬುದರಲ್ಲಿ ಸಂದೇಹವಿಲ್ಲ.

ಅಡಳಿತ ವ್ಯವಸ್ಥೆಗೆ ನವಚೇತನ

(೨ನೇ ಪುಟದಿಂದ)

ಅವಶ್ಯಕ ಆಗಬೇಕಾದ ಆಡಳಿತ ಮತ್ತು ಸಿಬ್ಬಂದಿಯ ಮಾರ್ಪಾಡುಗಳನ್ನ ಈ ವಿಭಾಗ ನಿರಂತರವಾಗಿ ಪರಿಶೀಲಿಸುತ್ತಿರುವುದು.

ಬ್ಯಾಂಕಿಂಗ್ ಉದ್ಯಮವು ದೇಶದಲ್ಲಿ ಇಂದು ಸಂಭವಿಸಿರುವ ನೂತನ ಪರಿಸರಕ್ಕೆ ಹೊಸ ಜೀವನವನ್ನು ತಂದಿದೆ. ಪ್ರತಿಕ್ರಿಯೆ, ಹೊಸ ಧ್ಯೇಯ-ಧೋರಣೆಗಳ ಸಮತೋಲನಗಳಿಗೆ ಬ್ಯಾಂಕ್ ಹೊಂದಾಣಿಕೆ ಮಾಡಿಕೊಂಡು ತನ್ನ ಕಾರ್ಯವನ್ನು ನಿರ್ವಹಿಸಬೇಕಾಗಿದೆ. ಸಾರ್ವಜನಿಕ ಉಪಯೋಗ ಸಂಸ್ಥೆಯಾಗಿ ಬ್ಯಾಂಕ್ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಕೆಲವು ಮಾರ್ಪಾಡುಗಳು ಅವಶ್ಯಕವಾಗಿವೆ. ತನ್ನ ಸೂಕ್ಷ್ಮ ವಿಚಾರಣಾ ಶಕ್ತಿ ಮತ್ತು ವ್ಯವಸ್ಥಾ ಕೌಶಲ್ಯಗಳಿಂದ ಕೆಳಗಿನ ಹಂತದಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡಿ, ಅಧಿಕಾರ ಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರ ಕೊಟ್ಟು ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸಿ, ಇಂದಿನ ಅಗತ್ಯಗಳನ್ನು ಹೊಸ್ತಿಸಿ ದೇಶದ ಕಾರ್ಯಾಭಿವೃದ್ಧಿಯಲ್ಲಿ ಅದರ ಪಾತ್ರವನ್ನು ಸಾಮರ್ಥ್ಯಗೊಳಿಸಿಕೊಂಡು, ಭವಿಷ್ಯದಲ್ಲಿ ರಾಷ್ಟ್ರದ ಸಾಮಾಜಿಕ, ಆರ್ಥಿಕ ಅಗತ್ಯಗಳನ್ನು ಬ್ಯಾಂಕ್‌ಗಳು ಮಾಡಲು ಕಾರ್ಯ ಪ್ರವರ್ತವಾಗಬೇಕು. ಕಾರ್ಯನೀತಿಯ ಸಂಶೋಧನೆಯು ಮೂಲಕ ಹೊಸ ಹೊಸ ಸವಾಲುಗಳಿಗೆ ಹೊಸ ಹೊಸ ದೂರದೃಷ್ಟಿಗಳನ್ನು ಅದು ಕಂಡುಕೊಳ್ಳುತ್ತಾ ಹೋಗಬೇಕು. ಈ ಮೂಲಕ ರಾಷ್ಟ್ರದ ಸಾಮಾಜಿಕ ಪಾತ್ರು ಆರ್ಥಿಕ ರಂಗಗಳಲ್ಲಿ ಪ್ರಗತಿವರ್ಧಕ ಪಾತ್ರವನ್ನು ಬ್ಯಾಂಕುಗಳು ನಿರ್ವಹಿಸಬೇಕು. ಇದೇ ಬ್ಯಾಂಕಿಂಗ್ ಉದ್ಯಮದ ಹೊಸ ಕಾರ್ಯನೀತಿಯ ಉದ್ದೇಶ, ಗುರಿ.

ಸ್ವಾತಂತ್ರ್ಯದ ಸಂರಕ್ಷಣೆಗಾಗಿ

(ಒಂದನೇ ಪುಟದಿಂದ)

ಯ ಕಮ್ಯೂನಿಸ್ಟರೂ ಒಂದಾಗುತ್ತಾರೆ. ಅವರ ಅಂದಾಜಿನಲ್ಲಿ ಅದ ಅವರನ್ನು ಎದುರಿಸಲು ರಾಷ್ಟ್ರಭಕ್ತರಾರೂ ಇರುವದಿಲ್ಲ—ರಾಷ್ಟ್ರೀಯ ಸ್ವಯಂಸೇವಕ ಸಂಘ ಮಾತ್ರವಲ್ಲದೆ ಸೇವಾದಳದಲ್ಲಿರುತ್ತಾರೆ ಮತ್ತು ಅವರ ಬೆಂಬಲಿಗರು ಹೆಚ್ಚಾರಿ ಮುಂದೆ ಬರುವದಿಲ್ಲ! ಇದು ರಷ್ಯಾ ನಿರ್ಮಿತ ಹಂಚಿಕೆ. ಇದನ್ನೇ ಶ್ರೀಮತಿ ಬಿನ್ ತಿಳಿಸಿರುವದು.

ಅಂದು ಪಾಕಿಸ್ತಾನದ ಫಿತೂರಿಯನ್ನು ಹೆಡೆಮುರಿ ಕಟ್ಟಿದ ಸಂಘದ ಸ್ವಯಂಸೇವಕರು ಕಾರಣರಾಗಿದ್ದಕ್ಕೇ ಈ ಸಲ ಅವರನ್ನು ಅಡಗಿಸಿ ಬಿಡಲು ಕಮ್ಯೂನಿಸ್ಟರು ಹೆಂಚಿಕೆ ಹೂಡುತ್ತಿದ್ದಾರೆ. ಅವರ ಕೈ ಮೇಲಾಗಿ, ಇಂದಿರಾಜೀ ಅವರ ಒತ್ತಡಕ್ಕೆ ಬಲಿಯೂಗಿ ಸಂಘವನ್ನು ನಿರ್ಬಂಧಿಸಿ ಸ್ವಯಂಸೇವಕರನ್ನ ಹಿಂಸಿಸಿ ಸೆರೆಮನೆಯೊಳಗೆ ತಳ್ಳಿಸಲ್ಲಿ, ಕಮ್ಯೂನಿಸ್ಟರ ಫಿತೂರಿಯನ್ನೆಸಗಲು ವಾತಾವರಣವನ್ನುಂಟು ಮಾಡಿದ ದೇಶ ಪ್ರೇಮಿ ಜನರ ಚಿಂತೆ. ಸ್ವಾತಂತ್ರ್ಯ ಸಂರಕ್ಷಣೆಗಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಇದ್ದೇ ಇರಬೇಕು. ಅದನ್ನು ಅರಿತುಕೊಂಡಿದ್ದ ಪಂಡಿತ ಜವಾಹರಲಾಲ ನೆಹರ್ರಜೀಯವರು ಗಣರಾಜ್ಯದಿನೋತ್ಸವದಂದು ಸಂಘದ ಸ್ವಯಂಸೇವಕರನ್ನೂ ಸಂಚಲನಕ್ಕೆ ಸ್ವಾಗತಿಸಿದ್ದರು. ಅದೇ ರೀತಿ ಲಾಲಬಹದ್ದೂರ ಶಾಸ್ತ್ರಿಯವರೂ ಆ ಕ್ಷಣದ ಸಮಯ ಸ್ವಯಂಸೇವಕರಿಗೆ ನೇ ಜವಾಬ್ದಾರಿಯನ್ನು ಒಪ್ಪಿಸಿದರೆ. ಆದರ ಪ್ರಾಮುಖ್ಯವನ್ನರಿತು ಧೈರ್ಯದಿಂದ ಹೇಳುತ್ತಿದ್ದಾರೆ ಶ್ರೀಮಾನ್ ಕರಿಯಪ್ಪನವರು. ಹೀಗಿರುವಾಗ ಕಮ್ಯೂನಿಸ್ಟರ ಒತ್ತಡಕ್ಕೊಳಗಾಗಿ ಶ್ರೀಮತಿ ಇಂದಿರಾಗಾಂಧಿ ದೇಶ ಘಾತುಕರಾಗಲಾರರು.

ಬಿನ್ನಹವನ್ನು ಬರಮಾಡಿಸಿಕೊಂಡದ್ದರಿಂದ ಸೈಗಾನಿನಲ್ಲಿದ್ದ ನಮ್ಮ ಸರ್ಕಾರಿ ಧ್ವಜ ಸಡಲ್ಪಟ್ಟಿತು. ಇಷ್ಟು ಬಿನ್ನಹಕ್ಕೆ ಹಂಚಿಕೆ ಕೈಗೂಡಿಸಿತೆಂದರೆ ಕೆಂಪುಕೋಟೆಯು ಮೇಲೆ ಕೆಂಪುಕೇಸು ಹಾರಾಡೀತು. ರಷ್ಯಾರುಮೇನಿಯಾ, ಹಂಗೇರಿ, ಪೋಲೇಂಡ್, ಜೆಕೊಸ್ಲಾವಾಕಿಯಾಗಳಲ್ಲಿ ರಕ್ತದ ಹೊಳೆ ಪ್ರವಹಿಸಿದಂತೆ ಇಲ್ಲೂ ದೇಶಭಕ್ತರ ನೆತ್ತರಿನ ಹೊಳೆ ಹರಿದೀತು. ಜನತೆ ಇದನ್ನು ಬರಮಾಡಿಕೊಳ್ಳಲಾಪಿಸುತ್ತದೆಯೆ? ಭಾರತೀಯರಿದಕ್ಕೆ ಎಂದೆಂದಿಗೂ ಒಪ್ಪಲಾರರು.

—ಶಿವಶಂಕರ



ಹೈಸ್ಕೂಲುಗಳಿಗೆ
ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65—66ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ

ಮ್ಯಾನೇಜರ್, ನವಯುಗ, ಉಡುಪಿ

ನಾಗರಿಕತೆಯ ಹೆಸರಲ್ಲಿ

ಬಡ ತೆರಿಗೆದಾರರ ಶೋಷಣೆಯೆ!

ಉಡುಪಿ ನಗರ ಸಭೆಯು ವಿತರಿಯೊಳಗೆ ತೆರಿಗೆ ಪುನರ್ವಿಮರ್ಶನಾ ಅಧಿಕಾರಿಗಳು ತಮ್ಮ ವಿಮರ್ಶೆಯನ್ನು ಮುಗಿಸಿ ಮನೆಯೊಡೆಯರಿಗೆ ವಿಮರ್ಶನಾ ನೋಟೀಸು ಜ್ಯಾರಿ ಮಾಡಿದ್ದಾರೆ. ಈ ನೋಟೀಸು ನಂತೆ ಎಲ್ಲರಿಗೂ ತೆರಿಗೆ ಜಾಸ್ತಿಯೂರಿರುವುದು ವೇದ್ಯವಾಗಿದ್ದು ತೆರಿಗೆದಾರರಲ್ಲಿ ತೀವ್ರ ಚಟುವಟಿಕೆಯನ್ನೂ ಆಸಕ್ತಿಯನ್ನೂ ನಿರ್ಮಾಣಮಾಡಿದೆ.

ಮನೆಗಳನ್ನು ಸಾಮಾನ್ಯವಾಗಿ ಸ್ವಂತ ವಾಸ್ತವ್ಯದವು ಮತ್ತು ಬಾಡಿಗೆಗೆ ನೀಡಿದುವೆಂದು ವಿಂಗಡಿಸ ಬಹುದು. ಈ ಬಾರಿ ಇಂತಹ ರೀತಿಯಲ್ಲಿ ಸುಸ್ಪಷ್ಟವಿಮರ್ಶೆ ನಡೆದಿಲ್ಲವೆಂದು ಕೇಳುತ್ತೇನೆ. ಎರಡನ್ನೂ ಏಕಸೂತ್ರವಾಗಿ ಪರಿಗಣಿಸಲಾಗಿದೆಯೆಂದು ವದಂತಿ. ಒಬ್ಬನು ಮನೆಕಟ್ಟುವುದಕ್ಕೆ ರಕ್ತ—ಬೆವರು ಸುರಿದುಮಾಡಿ ಗಳಿಸಿ ವೆಚ್ಚಮಾಡಿದ್ದಾನೆ; ಹಕ್ಕಿಗೂ ಗೂಡೆಂಬುದೊಂದಿದೆ; ತನಗೂ ಮನೆಯೆಂಬುದೊಂದಿರಬೇಕೆಂದು ಕಟ್ಟಿದ್ದಾನೆ. ಅದನ್ನೂ ಬಾಡಿಗೆಯ ಮನೆಯಂತೆ ಪರಿಗಣಿಸಿದರೆ ಅದೆಂತಹ ನ್ಯಾಯ? ಆದಕ್ಕೆ ಬಾಡಿಗೆ ಕೊಡುವವರು ಬೇರೆ?

ಹಿಂದಿನ ಪುನರ್ವಿಮರ್ಶೆಗಳ ವೇಳೆ ಮನೆ ಮೂಲೀಕರಾಗಿದ್ದವರೇ ಇಂದೂ ಅಮಲೆಯಲ್ಲಿ ವಾಸ್ತವ್ಯ ವಿರುವುದಾದರೆ; ಅವರ ಮನೆಯ ಮೌಲ್ಯ ಏರುವುದು ಹೇಗೆ? ಬಾಡಿಗೆದಾರನಿಗಿರುವ ಬಾಡಿಗೆ ನಿಯಂತ್ರಣ ಶಾಸನ ಮೂಲೀಕನಾಗಿದ್ದೂ ಬಾಡಿಗೆದಾರನಂತಾದವನಿಗೆ ಅಶ್ವಯಿಸುವುದು ಬೇಡವೆ? ಮನೆಯು ವರ್ಷವರ್ಷ ಜೀರ್ಣವಾಗುತ್ತ ಇರುವಾಗ, ಅದನ್ನು ರಿಪೇರಿ ಮಾಡಬು, ವೈಟ್‌ವಾಶ್, ಸಿಮೆಂಟಿಂಗ್ ಇತ್ಯಾದಿಗಳಿಗೆಂದು ವೆಚ್ಚಮಾಡುವುದು ಅನಿವಾರ್ಯವಾಗುತ್ತದೆ. ಇದಕ್ಕಾಗಿ ಎಷ್ಟಂದ ಹಣ ಬರುತ್ತದೆ? ತೆರಿಗೆ ಮಾತ್ರ ತೆತ್ತು ಮನೆ ಮೂಲೀಕರು ಮರದ ನೆರಳನ್ನು ಆಶ್ರಯಿಸಬೇಕೆ?

ಬಾಡಿಗೆ ಮನೆಗಳ ಕಥೆ ಮತ್ತೊಂದು ವಿಚಿತ್ರ. ಬಾಡಿಗೆ ರಶೀದಿಯನ್ನು ತಂಬಿಲ್ಲ; 'ಹೆಚ್ಚು ಕೊಡುತ್ತೀರಿ; ಕಡಮೆಗೆ ರಶೀದಿ ಪಡೆಯುತ್ತೀರಿ' ಎಂದು ಬಾಡಿಗೆದಾರರ ಹೆಂಗಸರನ್ನೇ ದಬಾಯಿಸಿದ ಉದಾಹರಣೆಗಳುಂಟು. ಮನೆಯಲ್ಲಿ ಗಂಡಸರು ಇಲ್ಲದ ವೇಳೆ ಭೆಟ್ಟಿ ನೀಡಿದ ಈ ಅಧಿಕಾರಿಗಳು ಹೆಂಗಸರು ಹೇಳಿದ ಮಾತುಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಹಿಂದಕ್ಕೆ ನಾಲ್ಕಡಿಸಿದ್ದು—ಹತ್ತರಷ್ಟು ತೆರಿಗೆ ವಿಧಿಸಿದ ಉದಾಹರಣೆಗಳೂ ಹಲವು. ವ್ಯವಹಾರಗಳ ಬಗ್ಗೆ ಜ್ಞಾನವಿರಲಿ, ಮನೆ ಬಾಡಿಗೆ, ಮನೆ ಖರ್ಚು ಇತ್ಯಾದಿಗಳ ಬಗ್ಗೆ ತಿಳುವಳಿಕೆಯಿರದ ಹೆಂಗಸರು ಉಡಾಸಿಯಲ್ಲಿ ಎಸ್ಟು ಜನ ರಿದ್ದಾರೆ? ಗಂಡಸರು ಹಗಲಿರುಳು ದುಡಿಯುತ್ತಾರೆ. ಹೆಂಗಸರು ಬೇಯಿಸಿ ಹಾಕುತ್ತಾರೆ. ಮನೆಯೊಳಗಣ ವ್ಯವಹಾರ ಪೂರ್ತ ಹೆಂಗಸರಿಗೆ. ಹಾಗಿರುವಾಗ ವಿಮರ್ಶನೆಯಲ್ಲಿ ನ್ಯಾಯ ಯಾರಿಗೂ ಅಗಿಲ್ಲವೆಂದು ಧಾರಾಳ ಹೇಳ ಬಹುದು. ಬಾಡಿಗೆ ದರವನ್ನು ಏಳು ವರ್ಷಗಳಿಗೊಮ್ಮೆ ಪುನರ್ವಿಮರ್ಶಿಸುವಾಗ, ಬಾಡಿಗೆದಾರನಿಂದಲೂ ಹೆಚ್ಚು ಬಾಡಿಗೆ ಕೇಳುವ ಅಧಿಕಾರ ಮೂಲೀಕನಿಗೆ ಇದೆಯೆಂಬುದನ್ನು ಒಪ್ಪಿಕೊಂಡಂತಾಗಲಿಲ್ಲವೆ? ತನ್ನ ಗಳಿಕೆಯನ್ನು ಬಾಡಿಗೆ—ತೆರಿಗೆಯೆಂದು 'ತೆತ್ತು ತಾತ್ಕಾಲಿಕ ಭೋಜವಶಾಲೆಗೆ ಹೋಗಬೇಕೆ?

ನಗರಸಭೆಗೆ ಹಣಬೇಕು; ಅದಕ್ಕಾಗಿ ತೆರಿಗೆ ಹೆಚ್ಚಿಸಬೇಕು; ಮನೆ ಮೂಲೀಕರು ಸಭೆಯು ಬಾಡಿಗೆ ಲೆಕ್ಕ ತೋರಿಸಿ ನಗರಸಭೆಯನ್ನು ವಂಚಿಸುವವರು; ಬಾಡಿಗೆದಾರರು ಸುಳ್ಳು ಬಾಡಿಗೆ ಹೇಳಿ ಮೋಸ ಮಾಡಲು ಸಹಾಯಕರಾಗುವವರು. ಇದು ಇಂದಿನ ನೀತಿಯೆಂದು ಧಾಸವಾಗುತ್ತದೆ. ಈಗ ಆಡಳಿತ ಪಕ್ಷ ಜನಸಂಘವು ತೋರಿಕೆಗೆ ಕರಪತ್ರಗಳನ್ನು ಹೊರಡಿಸುವುದು, ಸಹಿ ಸಂಗ್ರಹಿಸುವುದು—ಮೊದಲಾಗಿ ಕೊಡಗಿದರೂ ಫಗಕ್ಕೆ ಸಭೆಯು ಆದಾಯ ಹೆಚ್ಚಿಸಬೇಕೆಂಬ ಹೆಬ್ಬಯಕೆ ಅದಕ್ಕಿದೆ. ನಗರಸಭೆಗೆ ಸಾಲವಿದೆ; ಆದರ ಬಡ್ಡಿಯ ಭಾರವಿದೆ. ಆದನ್ನು ತೀರಿಸಬೇಕು; ಅಭಿವೃದ್ಧಿಯೋಜನೆಗಳನ್ನು ಕೈಕೊಳ್ಳಬೇಕು ಹಣವಿಲ್ಲ. ನಿಜ.

ಆದರೆ, ಇದಕ್ಕಾಗಿ ಏನುಮಾಡಬೇಕು? ಮನೆ ಮೂಲೀಕರ ಬಾಡಿಗೆದಾರರ ಶೋಷಣೆ ಮಾಡುವುದೆ? ತನ್ನ ಮತದ ಶಿಕ್ಷಣ ಸಂಸ್ಥೆಗಳನ್ನು ಪಡೆಸಲು ಮತದ ಉತ್ಪತ್ತಿಯನ್ನು ಹೆಚ್ಚಿಸಲು ಸಿನೆಮಾ ಧಿಯೇಟರು ತೆರೆಯಲು ಮುಂದೆ ಬಂದ ಸ್ವಾವಿಜಯವರ ಕ್ರೀತಿ ನಗರ ಸಭೆಯು ಮುಂದಿಲ್ಲವೆ? ಅವರೂ ಹೊಸ ಹೊಸ ಆದಾಯ ಮೂಲಗಳನ್ನೇ ಹುಡುಕುವ ಯೋಜನೆಗಳಲ್ಲಿ ಏಕೆ ತಲೆಹಾಕಿ ಬಾರದು? ಸೈಕಲ್ ತೆರಿಗೆಯನ್ನು ರದ್ದು ಮಾಡುತ್ತೇವೆಯೆಂದವರು ಅದು ಬಡವರ ವಾಹನವೆಂದು ಕನಿಕರಪಟ್ಟವರು ವಸತಿ ಸ್ಥಾನಗಳನ್ನು ವ್ಯಾಪಾರದ ಕೇಂದ್ರದಂತೆ ಪರಿಗಣಿಸುವುದು ನ್ಯಾಯವಲ್ಲ.

ಕುಂದಾಪುರದ ಅಸಿಸ್ಟಂಟ್ ಕಮಿಶನರಿಗೆ ಅಪೀಲು ಮಾಡಿಯೆಂದು ಅವರು ತಿಳಿಸಿಕೊಡಬೇಕಿಲ್ಲ. ರಿವಿಜನ್ ನೋಟೀಸುಕೊಟ್ಟವರೇ ತೆರಿಗೆ ವಿಪರೀತವೆಂದೂ ವಿಷಯವನ್ನೆಲ್ಲ ದಯವಿಟ್ಟು ತಿಳಿಸಿದ್ದಾರೆ. ನಗರ ಸಭೆಯವರು ಒಳಗೆ ನಿಂತು ಏನು ಮಾಡಿದ್ದಾರೆ ಎಂಬುದು ಮುಖ್ಯ ಪ್ರಶ್ನೆ.

ಜನಸಂಘದ ಬಗ್ಗೆ ಹೊಸ ಆಭಿಪ್ರಾಯವಿದ್ದರೂ ಇತರ ರಾಜ್ಯಕೀಯ ಪಕ್ಷಗಳ ವೈರಾಗ್ಯ ಮನೋಭಾವನೆಯಿಂದ ಅವರು ಜನಾವಣೆಗಳಲ್ಲಿ ಗೆದ್ದು ಬಂದರೆಂಬುದನ್ನು ಉಡುಪಿಯ ಪ್ರಾಮಾಣಿಕರು ಅರಿತಿದ್ದಾರೆ. ತರುಣ ಕಾರ್ಯಕರ್ತರು ಜನಹಿತವನ್ನು ಸಾಧಿಸುತ್ತಾರೆಂಬ ಆಶಯವನ್ನು ಅವರು ಇಟ್ಟುಕೊಂಡಿದ್ದರು. ಆದರೆ, ಹಸಿದವಳು ಏನನ್ನೂ ತಿಂದಾನು ಎಂಬುದನ್ನು ಮಾತ್ರ ಅವರೀಗ ತೋರಿಸಿಕೊಟ್ಟಿದ್ದಾರೆ. ಉಡುಪಿಯು ಕೈಗಾರಿಕಾ ನೈಪುಣ್ಯವಾಗಲು; ಮಲ್ಪೆಯಿಂದೂ ಪ್ರಯೋಜನ ಬಂದರವಾಗಲು; ಆಗುವುದೂ ಇಲ್ಲ. ಉಡುಪಿಯಲ್ಲಿರುವುದು ಹತ್ತಾರು ಶಿಕ್ಷಣ ಸಂಸ್ಥೆಗಳು ಮಠಗಳು ಮಾತ್ರ—ಎಂಬ ಕಠೋರ ಸತ್ಯವನ್ನು ಪುನರ್ವಿಮರ್ಶನಾ ಅಧಿಕಾರಿಗೆ ಮೊದಲಲೇ ತಿಳಿಹೇಳಬೇಕಿತ್ತು. ಹಾಗೆ ಮಾಡುತಿದ್ದರೆ, ವಿಮರ್ಶನಾ ಅಧಿಕಾರಿಯು ಈಗಿನಷ್ಟು ಪ್ರಸನ್ನಚಿಂದವಾಗಿ ವರ್ತಿಸ ತ್ತಿರಲಿಲ್ಲವೆನಿಸುತ್ತದೆ. ಹಾಗಾಗಿಕರು ಈಗ ಆಡಳಿತ ಪಕ್ಷದ ಬಗ್ಗೆ ಕರ್ತವ್ಯಚ್ಯುತಿಯ ಆರೋಪ ಹೇರಿದರೂ ತಪ್ಪಲ್ಲ.

ನಗರ ಸಭಾ ಸದಸ್ಯರು ಹೊರಗಿನಿಂದ ಸಹಾನುಭೂತಿ ತೋರಿಸುವುದನ್ನು ಬಿಟ್ಟು ಒಳಗೆ ನಿಂತುಕೊಂಡು ಏನು ಮಾಡಬಹುದೆಂಬುದನ್ನು ಚಿಂತಿಸಬೇಕು. ಇದಕ್ಕೆಂದು ಸ್ಯಾಯೋಚಿತ ಪರಿಹಾರ ಅವರು ಹುಡುಕಿದರೆ, ತಮ್ಮ ಕಾಲುಗಳ ಮೇಲೆ ತಾವೇ ಕೊಡಲಿ ಹೊಡೆಕೊಳ್ಳುತ್ತಾರೆ.

ಹಣಬೇಕೆಂದು ಬಡ ತೆರಿಗೆದಾರರಪ್ಪ ಶೋಷಣೆ ಮಾಡುವ ಈ ವಿಚಿತ್ರ ನೀತಿಯನ್ನು ಜನತೆ ಪ್ರತಿಭಟಿಸಬೇಕು. ಎ. ಸಿ. ಯವರ ವಿಚಾರಣೆಯ ವೇಳೆ ಸಮರ್ಪಕವಾದ ರೀತಿಯಲ್ಲಿ ಸತ್ಯವನ್ನು ಮಂಡಿಸಬೇಕು. ವಸ್ತುಸ್ಥಿತಿಯನ್ನು ಎ. ಸಿ. ಯವರೂ ಅರಿತುಕೊಳ್ಳುವಂತಾದ ಬೇಕು.

ಪುತ್ತೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 210/70

ವಿರೂಪಾಕ್ಷ ಭಟ್ಟ —ವಾದಿ

1ನೇ ಪ್ರತಿವಾದಿ:- ರಾಮಕೃಷ್ಣ ರಾವ್, ಪದ್ಮನಾಭ ಬೊಕ್ಕರರ ಮಗ, ಮುಂಡಕೂಟ್ಟಿ ಬಡಗನ್ನೂರು ಗ್ರಾಮ

ಸದ್ರಿ 1ನೇ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತೀರ್ಪು ಪಡಿಸುವುದೇನೆಂದರೆ—

ಬೇಪು ಮತ್ತು ಕೇಶವ ಶರ್ಮ ಕೂಡಾ ವಾದಿಗೆ ರೂ. 7000/-ಕ್ಕೆ ಬರೆಕೊಟ್ಟ ದಿ. ಪ್ರೋ. ನೋಟಿನ ವಸೂಲಾತಿಗೆ ಮಾಡಿದ ಈ ದಾವೆಯನ್ನು ತಾ. 27-8-70ಕ್ಕೆ ನೋಟಿಸಿಗೆ ಇಟ್ಟುಕೊಳ್ಳತಕ್ಕದ್ದೆಂದು ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಾಹರಿಸಿ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಕಿವಾಜ್ಞಾ ಮಾಡಿ ಯುಕ್ತ ಕಂಠಂತೆ ತೀರ್ಮಾನಿಸಲಾಗುವುದು.

(Sd)- M. RAMMOHAN RAO
Advocate for plaintiff

Puttur, 10-8-70

ನವಯುಗದ ಹೊಸ ವರ್ಷ

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 49ನೆಯ ವರ್ಷ ಮುಗಿದು, ಸಪ್ಟಂಬರ ತಿಂಗಳಿಂದ 50ನೆಯ ಹೊಸ ವರ್ಷಾರಂಭವಾಗುತ್ತದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ಶೀಘ್ರವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಚಂದಾಹಣವನ್ನು ವಸೂಲಿಮಾಡುವರು ಮೂಲಕ, ಯೂನಿಯನ್ ಪೋಸ್ಟಲ್ ಆರ್ಡರು ಮೂಲಕ ಕಳಿಸಬಹುದು, ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಜಮಾವಿ ಮಾಡಬಹುದು. ಹಾಗೆ ಜಮಾವಿ ಮಾಡುವಾಗ ತಮ್ಮ ಚಂದಾನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇನೆ.

ಮೆನೇಜರ್.

ಕನ್ನಡ ಪುಸ್ತಕಗಳು

ಹೈಸ್ಕೂಲ್, ಹಯರ್ ಸೆಕೆಂಡರಿ ಸ್ಕೂಲ್, ಕಾಲೇಜು ಮೊದಲಾದುವುಗಳ ಯಾವತ್ತೂ ಪಾಠಕ್ಕೆ ಧಂಡಾರಗಳಿಗೆ ಉಪಯುಕ್ತವಾದ ಕರ್ನಾಟಕದ ವಿವಿಧ ಲೇಖಕರ ಹಾಗೂ ಪ್ರಕಾಶಕರ ಕತೆ, ಕಾದಂಬರಿ, ಕವನ, ವಿಮರ್ಶೆ ಇತ್ಯಾದಿ

ಕನ್ನಡ ಪುಸ್ತಕಗಳು

ನಮ್ಮಲ್ಲಿ ದೊರೆಯುತ್ತವೆ.

ವಿವರವಾದ ಕೆಟಲಾಗಿಗೂ ವಿಶೇಷ ಸವಲತ್ತುಗಳಿಗೂ ಬರೆಯಿರಿ:

ನವಭಾರತ ಪುಸ್ತಕ ಭಂಡಾರ
ರಿಜಿಸ್ಟರ್ಡ್ ಪಬ್ಲಿಷರ್ಸ್,
ಪಾಲುಕೋಟಿ, ಉಡುಪಿ, ದ. ಕ.

ಯಕ್ಷಗಾನ "ಕಂಚಾಕ್ಷಿ ಕಲ್ಯಾಣ"

ದೆಲಂಪಾಡಿ ಬಸಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ಶ್ರೀ ಕೀರಿಕ್ಕಾಡು ವಿಷ್ಣು ಭಟ್ ವಿರಚಿತ "ಕಂಚಾಕ್ಷಿ ಕಲ್ಯಾಣ" ಎಂಬ ಕಥಾಭಾಗದ ಯಕ್ಷಗಾನ ಕೊಟವು ಬಸಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ದಿನಾಂಕ 1ರಂದು ನಡೆಸಲ್ಪಟ್ಟಿತು.

ಹಿರಿಯರಲ್ಲಿ ಶ್ರೀಗಳಾದ ಕೀ. ವ. ಕೇಶವ, ಮಹಿಂಬಾಡಿ ಸುಬ್ಬಣ್ಣ ಭಟ್ಟ, ಡಾ| ವಿಶ್ವನಿರೋದ ಬಸಾರಿ, ಡಿ. ಗೋಪಾಲಕೃಷ್ಣ ಭಟ್ಟ, ಅಣ್ಣಯ್ಯ ನಾಡಿಗ—ಅರ್ಥವಿವರಣೆಯಲ್ಲಿ ಸರ್ವಶ್ರೀ ವೇಷಧಾರಿ ಮುದಿಯಾರು ನಾರಾಯಣ ಶೆಟ್ಟಿ, ಬಾರಾಯಣ ಸಾಮುಗ ಪಾಸ್ತ್ರಿ, ಬಂಗೈಕಟ್ಟೆ ಅಣ್ಣಯ್ಯ ಗೌಡ, ಕಲ್ಲಪ ಅಪ್ಪು ಬಾಟಿಕೈ ಎಂ. ಕೀನಪ್ಪ ಗೌಡ, ಸಾಂತಪ್ಪೆ ಶೆಟ್ಟಿ, ಕೆ.ಎ. ಕೆಂಚಾರ್, ರಾಧಾಕೃಷ್ಣ ಶೆಟ್ಟಿಗಳೂ ಪಾಲ್ಗೊಂಡರು.

ಜನಮತ

ಉಡುಪಿಗರಿಗೆ ವಿಚಿತ್ರ ಸಮಾಜವಾದ

ಉಡುಪಿ ಪುರಸಭೆಯ ಪ್ರದೇಶದೊಳಗಿನ ಕಟ್ಟಡಗಳ ಮೇಲಿನ ತೆರಿಗೆಯನ್ನು ಪುನರ್ವಿಮರ್ಶಿಸುವ ಅಧಿಕಾರಿಗಳು ತಮ್ಮ ಕೆಲಸವನ್ನು ಮುಗಿಸಿ ಕಟ್ಟಡಗಳ ಮಾಲಿಕರಿಗೆ ನೋಟೀಸು ಕೊಡುತ್ತಿದ್ದಾರೆ. ಸರ್ವೇಸಾಮಾನ್ಯವಾಗಿ ತೆರಿಗೆಯನ್ನು ಏರಿಸುವುದೂ ಇಂದಿನ ಬಾಡಿಗೆ ದರಪಟ್ಟಿಯ (Present Sitting-value) ಕಾರಣ ಏರಿಸುವುದೂ ನೋಟೀಸಿನಿಂದ ತಿಳಿಯುತ್ತದೆ.

ಪುರಸಭಾ ಪ್ರದೇಶದಲ್ಲಿನ ಕಟ್ಟಡಗಳಲ್ಲಿ ಬಾಡಿಗೆಯ ಮೌಲ್ಯವನ್ನು ಗೊತ್ತು ಮಾಡುವ ಅಧಿಕಾರ ಈ ವಿಮರ್ಶಾಧಿಕಾರಿಗಿದೆಯೆಂದು ಇದರಿಂದ ಗೊತ್ತಾಗುವುದು. ಆದರೆ, ಬಾಡಿಗೆದಾರರಿಗೆ ಕೊಡುವ ಕಟ್ಟಡದ ಮೇಲೆ ನಿಶ್ಚಯವಾಗಿ ಬಾಡಿಗೆ ಎಷ್ಟು ಬರುತ್ತದೆ, ಎಂಬುದನ್ನು ಅವರು ಗಣಿಸಿದಂತೆ ತೋರುವುದಿಲ್ಲ. ಉದಾಹರಣೆಗೆ ಆರು ವರ್ಷಗಳಿಗೆ ಮೊದಲು ಒಬ್ಬನಿಗೆ ರೂ. 15 ಮಾಸಿಕ ಬಾಡಿಗೆಯ ಮೇಲೆ ಕೊಟ್ಟ ಕಟ್ಟಡದಲ್ಲಿ ಈಗಲೂ ಅದೇ ಬಾಡಿಗೆದಾರನು ಅದೇ ಬಾಡಿಗೆಯ ಮೇಲಿದ್ದಾನೆ ಆದರೂ ಪುನರ್ವಿಮರ್ಶನಾಧಿಕಾರಿಗಳು ಈಗಿನ ಬಾಡಿಗೆಯ ದರವನ್ನು ಗೊತ್ತುಮಾಡಿ ಅದರ ಮೇಲೆ ತೆರಿಗೆ ಹೊರಿಸಿದ್ದಾರೆ. ಬಾಡಿಗೆದಾರನಿಗೆ ಬಾಡಿಗೆ ನಿಯಂತ್ರಣ ಶಾಸನದ ರಕ್ಷಣೆಯಿರುವಾಗ, ಬಾಡಿಗೆ ಹೆಚ್ಚುಮಾಡುವುದು ಸಾಧ್ಯವಿಲ್ಲವೆಂಬುದು ಕಾನೂನಿನಿಂದ ಅರಿತವರಿಗೂ ಗೊತ್ತು. ಹಾಗಿರುವಾಗ, ಬಾಡಿಗೆ ಕಟ್ಟಡಗಳ ಮೇಲೆ ಬರುತ್ತಿರುವ ಬಾಡಿಗೆಯು ಮೇಲೆಯೇ ತೆರಿಗೆ ಹೊರಿಸುವುದು ನ್ಯಾಯೋಚಿತವಾದುದು.

ಒಂದುವೇಳೆ ಹೀಗಾಗದೆ ಹೋದಲ್ಲಿ ಬಾಡಿಗೆದಾರನೇ ಎಜ್ಜಮಾನನಾಗುತ್ತಾರೆ. ಉದಾಹರಣೆಗೆ ಮೇಲಿನ ರೂ. 15 ಮಾಸಿಕ ಬಾಡಿಗೆ ಕೊಡುವವನನ್ನು ತೆಗೆದು ಕೊಳ್ಳೋಣ. ಪುನರ್ವಿಮರ್ಶನಾಧಿಕಾರಿಗಳು ಈಗಿನ ಬಾಡಿಗೆ ದರ ರೂ. 30 ಎಂದು ಗೊತ್ತು ಮಾಡಿದರೆಂದು, ಮೂಲಿಕನು ಬಾಡಿಗೆದಾರನಿಗೆ ನೋಟೀಸು ಕೊಡಿ ರೂ. 30 ಬಾಡಿಗೆ ತೆರಬೇಕೆಂದು ವಿಧಿಸುವುದು ಕಾನೂನಿಗೆ ಸಮ್ಮತವಾಗುವುದೆ? ಇಂತಹ ಸೌರ್ಯವು ದಿನೇ ದಿನೇ ಸಮಸ್ಯೆಯೊಡ್ಡುತ್ತಿರುವ ಉಡುಪಿಯಲ್ಲಿ ಇದರಿಂದ ಊರಿ ಉದ್ಧಾರ ಮಾಡಿದಂತಾಗುತ್ತದೆ? ಸೇ 22 ಪೆಟ್ಟಿಗರ ವೇತಲೆ ಹಲವು ವಿಧದ ಸೆಸ್‌ಗಳು ಸೇರಿ ಪ್ರತಿ ದಲ್ಲಿ ಸಹರು ಮೂರು ತಿಂಗಳ ಬಾಡಿಗೆ ಪುರಸಭೆಗೆ ಸೇರುವಾಗ, ಕಟ್ಟಡದ ಇಟ್ಟುಕೊಳ್ಳೋಣದ ಪೆಟ್ಟಿ ತೆಗೆದು ಮಾಲಿಕನಿಗೆ ಸಿಗುವುದು ಸೇ. 1 ರೂ 2ರ ದೆರದ ಖಡ್ಡಿ ಮಾತ್ರ. ಸೈಟ್ ವ್ಯಾಲ್ಯೂ ಮಾಡುಶಟ್ಟಿಯಲ್ಲಿ ವಿಧಿಸಿ ಹೋದರೂ ಕಳ್ಳು ಹಣ ಹೊರಡಿ ಯಾಕುವವರು ಮಾತ್ರ ಕಟ್ಟಡ ತೆಗೆದುಹೊಳ್ಳುವುದೂ ಕಟ್ಟಿಸುವುದೂ ಕಾಣಿಸುತ್ತದೆ. ನ್ಯಾಯವಾದ ರೀತಿಯ ಗಳಿಕೆದಾರ ಬಾಡಿಗೆ ಮನೆಯೇ ವಾಸಿ ಎನ್ನುವ ಸ್ಥಿತಿಗೆ ಬಂದಿದ್ದಾರೆ.

ಸ್ವಂತ ವಾಸ್ತವ್ಯದ ಮನೆಯಲ್ಲೂ ಬಾಡಿಗೆ ಮನೆಯಂತೆಯೇ ಪರಿಗಣಿಸಲಾಗುವುದಂತೆ. ಸ್ವಂತ ವಾಸ್ತವ್ಯ ಮಾಡುವವನೂ ಬಾಡಿಗೆದಾರನೆಂದಾಯ್ತು. ಅವನಿಗೂ ಬಾಡಿಗೆ ನಿಯಂತ್ರಣ ಶಾಸನದ ರಕ್ಷಣೆ ಬೇಡವೆ?

ನೋಟೀಸಿನ ಮೇಲೆ ಅಸಮಾಧಾನವನ್ನು ಕುಂದಾಪುರದ ಎ. ಸಿ.ಯವರಿಗೆ ಕರೆದು ತಿಳಿಸಬೇಕಾಗಿದೆ. ಎ.ಸಿ.ಯವರು ಸಮಸ್ಯೆಯನ್ನು ಅರ್ಥಮಾಡಿಕೊಂಡು ಕಟ್ಟಡಗಳ ಒಡೆಯರಿಗೆ ನ್ಯಾಯ ದೊರಕಿಸಿಕೊಡುವರೆಂದು ಹಾರೈಸೋಣ. ಹಾಗಾಗದಿದ್ದಲ್ಲಿ ಕರ ನಿರಾಕರಣದಂತಹ ಚಳುವಳಿ ಏಳದೆರೂ ಆಶ್ಚರ್ಯವಿಲ್ಲ. ಸ್ವಂತ ಮನೆಯವಕಾಶವನ್ನೂ ಬಾಡಿಗೆದಾರನೆಂತೆ ಪರಿಗಣಿಸುವುದು ಹೊಸ ರೀತಿಯ ಸಮಾಜವಾದ. ಆತನಿಗೆ ತನ್ನ ಮನೆಗೆ ಯಾರೂ ಬಾಡಿಗೆ ಕೊಡುವುದಿಲ್ಲವೆಂಬುದನ್ನು ನೆನಪಿಡಬೇಕು. ಅಥವಾ ತಮ್ಮ ಮನೆಯನ್ನು ಬಾಡಿಗೆ ಕೊಟ್ಟು ತಾವು ಬಾಡಿಗೆ ಮನೆಯಲ್ಲಿ ಉಳಿದುಕೊಳ್ಳಬೇಕೆಂದು ಇದರ ಅರ್ಥವೆ?

ಕೆಲವು ಮನೆಗಳು ವಿಶಾಲವಾಗಿವೆ. ಇವುಗಳನ್ನು ಉರುಳಿಸಿ ವಿಶಬೇಕಾದ ಪ್ರದೇಶವೂ ಬರುಬಹುದು; ಇಡಿಯ ಮನೆಗೆ ತೆರಿಗೆ ತೆರಲು ಒಡೆಯನ ಗಳಿಕೆಯೂ ಸಾಧ್ಯವಾಗದ ಪ್ರದೇಶ ಕೆಲವಾಗಿರೂ ಇವೆ.

ಪುರಸಭೆಯು ವರಮೂಲ ಹೆಚ್ಚಿಸಬೇಕಾದರೆ ತೆರಿಗೆ ಹೆಚ್ಚು ಮಾಡುವುದು ಸರಿಯೂದ ವಿಧಾನವಲ್ಲ. ತೆರಿಗೆಯನ್ನು ಕಡಿಮೆ ಮಾಡಬೇಕು; ಕಟ್ಟಡ ಕಟ್ಟುತ್ತೇನೆಯೆನ್ನುವವರಿಗೆ ಉತ್ತೇಜನ ಕೊಡಬಿದ್ದರೂ ಉಚಿತವಾದ ಸ್ಥಳದಾರದು, ನಗರಸಭೆಯು ಈಗಿನ ಕಾರ್ಯವಿಧಾನದಲ್ಲಿ ಹೊಸ ಕಟ್ಟಡ ಕಟ್ಟುವವನಿಗೆ ತುಂಬ ಕಿರುಕುಳ ವಿದೆ. ಈ ದಿಸೆಯಲ್ಲಿ ಇದು ಮುಂದುವರಿದರೆ, ನಗರ ಬೆಳೆಯುವುದಾದರೂ ಹೇಗೆ?

—ಸದಾನಂದ

ಇದು ಏನಂತೆ?

ಉಡುಪಿ ನಗರಸಭೆಯೊಳಗೆ ತೆರಿಗೆ ಪುನರ್ವಿಮರ್ಶನಾ ನೋಟೀಸು ಜ್ಯಾರಿಯಾದದ್ದು ನಿಜವಷ್ಟೇ! ಜನತೆಯು ಕಳವಳವನ್ನು ಅರಿಕುಕೊಂಡು ನಗರಸಭಾಧ್ಯಕ್ಷರಾದಿಗಳು ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿ ಕರಪತ್ರ ಹಂಚಿ ಅದರಲ್ಲಿ ಎ. ಸಿ. ಗೆ ಅಪೀಲು ಮಾಡುವಂತೆ ತಿಳಿಸಿದ್ದು ಸತ್ಯವಷ್ಟೆ?

ಆದರೆ ಒಂದು ವಿಚಿತ್ರ ಕರಪತ್ರದಲ್ಲಿ ಅಪೀಲುಪತ್ರಕ್ಕೆ ಒಂದು ರೂಪಾಯಿ ಕೋರ್ಟು ಫೀ ಸ್ಟ್ಯಾಂಪು ಅಂಟಿಸಬೇಕೆಂದು ಸೂಚನೆಯಿದೆ. ಆದರೆ, ಮನೆಗೆ ಆ ಕರಪತ್ರ ತಂದವರೊಬ್ಬರು ಒಂದು ರೂಪಾಯಿದ್ದು ಹಚ್ಚುವುದು ಬೇಡ ಎಂದು ಹೇಳಿದ್ದರು. ಎ. ಸಿ. ಗೆ ಅಪೀಲು ಮಾಡುವಾಗ ರೂ. ೧೫ ದಂಡ ತೆರುವುದು ಅಗತ್ಯವೆಂದು ನಗರಸಭೆಯಲ್ಲಿ ವಿಚಾರಿಸಿದಾಗ ತಿಳಿಯಿತು. ಇದಿಲ್ಲವಾದರೆ ಅಪೀಲುಗಳನ್ನು ಗಣನೆಗೇ ತೆಗೆದುಕೊಳ್ಳುತ್ತದಿಲ್ಲವಂತೆ. ಹಾಗಾದರೆ, ಇದೆಂತದು? ತಾವೂ ತಮಗೆ ಬೇಕಾದವರೂ ಸ್ಟ್ಯಾಂಪು ಅಂಟಿಸಿ ಅಪೀಲು ಮಾಡಿ ತೆರಿಗೆ ಕಡಿಮೆ ಮಾಡಿಕೊಳ್ಳುತ್ತೇನೆ; ಉಳಿದವರು ಹೊಂಡಕ್ಕೆ ಬೀಳಲಿ ಎಂಬಭೀತಿ? ಕರಪತ್ರ ಹೊರಡಿಸಿದವರು ಈ ಸಂಬಂಧದಲ್ಲಿ ಸ್ಪಷ್ಟೀಕರಣ ನೀಡಿ ಜನತೆ ವಂಚಿತವಾಗದಂತೆ ನೋಡಿಕೊಳ್ಳಬೇಕೆಂದು ಕಳಕಳಿಯ ಪ್ರಾರ್ಥನೆ.

—ಪಿ. ಜೋಹನ್.

ವಿಚಾರಕ್ಕಿಂತ ಹೆಚ್ಚಿನ ವಸ್ತು ಪ್ರಪಂಚದಲ್ಲಿ ಬೇರೆ ಇಲ್ಲ.

ಜಗತ್ತಿನ ಇತಿಹಾಸದಲ್ಲಿ ಪ್ರತಿಯೊಂದು ಮಹಾನ್ ಮತ್ತು ವೈಶಿಷ್ಟಪೂರ್ಣ ಆಂಗೋಲನಗಳು ಉತ್ಸಾಹದ ಮುಖಾಂತರವಾಗಿಯೇ ಯಶಸ್ವಿಯಾಗಿದೆ.

ಯಥಾರ್ಥತೆ ಮತ್ತು ನಂಬಿಗೆ ಈ ಎರಡೂ ಅಕ್ಕ ತಂಗಿಯರಿದ್ದಂತೆ?

ನಿನಗೆ ದೊರೆಯುವುದು ಗೊತ್ತಿದೆಯೇ ಅದನ್ನೇ ಹೊಡಿರಿ ವಿಚಾರವೇ ಚರಿತ್ರೆಯಲ್ಲಿ ಪರಿಣತವಾಗುತ್ತದೆ.

ಅಭಿರುಚಿ ಸತ್ಕಾರದಲ್ಲಿ ವಂಚನೆ ಮಾಡುವದು ಎಲ್ಲಕ್ಕಿಂತ ಹೆಚ್ಚಿನ ದರಿದ್ರತನವು

ಬೀಳ್ಕೊಡುವ ಸಮಾರಂಭ

ಶಿವಮೊಗ್ಗ ಹಾಗೂ ಎಲಿಮೆಂಟರಿ ಶಾಲೆಯಲ್ಲಿ ಹಲವು ವರ್ಷಗಳಿಂದ ಅಧ್ಯಾಪಕರಾಗಿ ದೀರ್ಘ ಸೇವೆ ಸಲ್ಲಿಸಿ ಸರ್ಕಾರದಿಂದ ರಾವ ಶ್ರೀ ಜಿ. ಅಣ್ಣಯ್ಯ ಶೆಟ್ಟರು ನಿವೃತ್ತಿ ಹೊಂದಿದ ಕಾರಣದಲ್ಲಿ ಅವರನ್ನು ಬೀಳ್ಕೊಡುವ ಸಮಾರಂಭವು ಇತ್ತೀಚೆಗೆ ಶ್ರೀ ಪಿ. ನಿವಾಜಿ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಅಣ್ಣಯ್ಯ ಶೆಟ್ಟರ ಶಿಕ್ಷಣಕ್ಕೆ ಸೇವೆಯ ಬಹುಮಾನ ಪ್ರಶಂಸೆಯನ್ನು ಶ್ರೀ ಮದ್ಧಾಸಪನ ಶೆಟ್ಟಿ, ಶ್ರೀ ಜಯರಾಮ ಶೆಟ್ಟಿ ಮೊದಲಾದವರು ನೀಡಿದರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಶ್ರೀ ಅಣ್ಣಯ್ಯ ಶೆಟ್ಟರು ತನ್ನ ಅಧ್ಯಾಪಕ ವೃತ್ತಿಯನ್ನು ಸೇವಾ ಮನೋಭಾವದಿಂದ ನಿರ್ವಹಿಸಿದ್ದರಿಂದ ಅವರಿಗೆ ನಿವೃತ್ತ ಅಧ್ಯಾಪಕರಿಗೆ ಉಡುಗೊರೆಯನ್ನು ಅರ್ಪಿಸಿದ ಬಳಿಕ ಕೊರಗ ಶೆಟ್ಟರು ಧನ್ಯವಾದ ಸಮರ್ಪಿಸಿದರು.

ಆರೋಪದಿಂದ ಮುಕ್ತ

ಉಡುಪಿ ಕಸಬಿಯ ಕಾಡಬೆಟ್ಟುನಲ್ಲಿರುವ ವ್ಯಾಪಾರಿ ಅಬ್ದುಲ್ ಕಾದರವರ ಪತ್ನಿ ಆಯಿಷಾಬಿಯವರಿಗೆ ಕತ್ತಿ ಮತ್ತು ಸೊಂಟಿಯಿಂದ ಬೊಡೆದ ಆರೋಪನೆಯನ್ನು ಉಡುಪಿಯ ಸೆಜಿಸ್ಟ್ರೇಟರವರು ತೆಸ್ಮಿ ಮಾಡಿ ಅಪಾದಿತರಾದ ಜಾರಂಬಿ ಕೊರಗ ಶೆಟ್ಟಿ ಮತ್ತು ಬಾಲಕೃಷ್ಣ ಶೆಟ್ಟಿಯೆಂಬವರನ್ನು ಕಸ್ಟಡಿತ್ಯಲ್ಲಿನೆಂಕ ಪ್ರಸಕ್ಕೊಷನ ಪರವಾಗಿ ಹಲವಾರು ಸಾಕ್ಷಿಯವರನ್ನು ವಿಚಾರಣೆ ಮಾಡಿ ಮೇಲ್ಕಾಣಿಸಿದ ಮೂರು ಆರೋಪಿಯವರು ಖರ್ಚರಾಹಿತರೆಂದೂ ಉಡುಪಿಯು ಮೆಜಿಸ್ಟ್ರೇಟರವರು ತೀರ್ಪನ್ನಿತ್ತಿದ್ದಾರೆ. ಪ್ರಸಕ್ಕೊಷನ ಪರವಾಗಿ ಶ್ರೀ ವಿಶ್ವನಾಥ ರೈಯವರು ಬಿಡುಗಡೆ ಹೊಂದಿದ ಆರೋಪಿಗಳಿಂದ ಪರವಾಗಿ ಉಡುಪಿಯ ಎಡ್ವೊಕೇಟ್ ಪೆರೋಡಿ ವಿಠಲ ಶೆಟ್ಟರೂ ಮೇಲ್ಕಂಡ ಇಬ್ಬರಿಗೆ ಎಡ್ವೊಕೇಟ್ ಗೋಪಾಲ ಕೃಷ್ಣರಾಯರೂ ವಾದಿಸಿದ್ದರು.



ಮನೆಮನೆಯಲ್ಲೂ ಇರಲೇಬೇಕಾದ ಪವಿತ್ರ ಧಾರ್ಮಿಕ ಗ್ರಂಥ

ಪುಟ 450ಕ್ಕೂ ಮಿಕ್ಕಿ. ಬೆಲೆ ರೂ. 1-50

ಸಿಗುವ ಸ್ಥಳಗಳು: ನವಯುಗ ಪ್ರೆಸ್, ಉಡುಪಿ
ನವಭಾರತ ಪುಸ್ತಕ ಭಂಡಾರ, ಉಡುಪಿ
ಟಿ. ಎನ್. ಕೃಷ್ಣಯ್ಯ ಸೆಟ್ಟಿ ಅಂಡ್ ಸನ್ಸ್,
ಚಿಕ್ಕಪೇಟೆ, ಬೆಂಗಳೂರು-2

ದಸರಾ ಕವಿಸಮ್ಮೇಳನ

ಸನ್ 1969ರ ಮೈಸೂರು ದಸರಾ ಕವಿ ಸಮ್ಮೇಳನದಲ್ಲಿ ನಮ್ಮ ಜಿಲ್ಲೆಯಿಂದ ಆಸಲ್ಪಟ್ಟು ಭಾಗವಹಿಸಿದ್ದ ಈ ಲೇಖಕರು, ಸಂಮ್ಮೇಳನದ ಕುರಿತಾದ ತಮ್ಮ ಅನಿಸಿಕೆಯನ್ನು ಈ ಮೂಲಕ ಇಲ್ಲಿ ಕೊಟ್ಟಿದ್ದಾರೆ.

ಲೇಖಕರು:— ಶ್ರೀ ಕೆ.ಎನ್.ಭಟ್, ಶಿರಾಡಿಪಾಲ್.

ಮೈಸೂರು ದಸರಾ, ಅದು ಜಗತ್ಪ್ರಸಿದ್ಧವೆಂದರೆ ಅತಿಶಯೋಕ್ತಿಯಲ್ಲ. ದಶರಾಕ್ಕೆ ಅಲ್ಲಿ ಸೇರುವ ಜನಕಲ್ಪನಾತೀತವಾದುದು. ಅಪಾರ; ವಿದೇಶೀಯರೂ ಕೂಡ ದಸರಾ ವೈಭವ ಮತ್ತು ಮಹಾರಾಜರ ಜಂಬೂ ಸವಾರಿಯನ್ನು ನೋಡಲು ಸಾವಿರಾರು ಮಂದಿ ಬಂದು ನೆರೆಯುತ್ತಾರೆ. ಆದರೆ ಮಧ್ಯವರ್ಗದವರು ಕಡಿಮೆ! ಖರ್ಚಿನಲ್ಲಿ ಹೋಗಿ ಎರಡು ದಿನ ಇದ್ದು 'ದಸರಾ' ಪೂರೈಸಿ ಬರಬೇಕೆಂದರೆ ಅದು ಬಹಳ ಕಷ್ಟ. ದಸರಾ ಸಮಯದಲ್ಲಿ ಅಲ್ಲಿ ಎಲ್ಲವೂ ದುಬಾರಿ. ಸರಕಾರದ ಅತಿಥಿಗೂಡಿ ನಾನು ಹೋಗಿದ್ದುದರಿಂದ ನನಗೆ ಆ ಕಷ್ಟ ಸ್ವಾನುಭವಕ್ಕೆ ಬರಲಿಲ್ಲ.

ಕಳೆದ ವರ್ಷ 1969, ಅಕ್ಟೋಬರ್ ದಿನಾಂಕ 19ರಂದು ಜರುಗಿದ 'ದಸರಾ ಕವಿ ಸಮ್ಮೇಳನ'ದಲ್ಲಿ ನಮ್ಮ ಜಿಲ್ಲೆಯು ಪ್ರತಿನಿಧಿಸುವಿಕೆಯ ಭಾಗವಹಿಸುವ ಸಂದರ್ಭ ನನಗೆ ಸಿಕ್ಕಿತ್ತು. ನಮ್ಮೂರಿನಿಂದ ಹೊರಟು ನಾಪತ್ತೆ ಹಾಸನಕ್ಕೆ ತಲುಪಿದೆವು. ನನ್ನ ಜೊತೆಗೆ ನನ್ನ ಒಬ್ಬ ಕಲಾವಿದ ಮಿತ್ರರ ಫೋಟೊ ಕರೆದು ಕೊಂಡಿದ್ದೆ. ಹಾಸನದಲ್ಲಿ ಯೇ ನಮಗೆ ದಸರಾದ ಬಿಸಿ ತಗುಲಿತ್ತು. ಅರ್ಧ ಗಂಟೆಗೊಂದರಂತೆ ಬಸ್ಸುಗಳಿದ್ದರೂ ಸಾಟಿಲ್ಲ. ನಮ್ಮ ಜಿಲ್ಲೆಯಲ್ಲಾದರೆ ಪ್ರಯಾಣಿಕರ ಅನುಕೂಲಕ್ಕೆ ತಕ್ಕಂತೆ ಬೇಕಾಷ್ಟು ಬಸ್ಸುಗಳು ಎಲ್ಲೆಂದರಲ್ಲಿ ಸಿಕ್ಕುತ್ತವೆ. ಆದರೆ ಅಲ್ಲಿ ಆ ಸೌಲಭ್ಯವಿಲ್ಲ. ಯೋಜ್ ಒಬ್ಬ ಕಾರಿನವನು ಅಪರೂಪವೆಂಬಂತೆ ನಮ್ಮನ್ನು ಕರೆದ, ಅದರೆ ಆತನ ಚಾರ್ಜು, ಬಸ್ಸಿನ ನಾಲ್ಕು ಪಟ್ಟಿಗಿಂತ ಹೆಚ್ಚಾಗಿತ್ತು. ಈ ಕಾರಣ ನಾವು ಬಸ್ಸನ್ನೇ ಆಶ್ರಯಿಸ ಬೇಕಾಯಿತು. ಅಂದು ಒಂದು ಬಸ್ಸಿನಲ್ಲಿ ಸೀಟು ಸಿಕ್ಕಿತು. ಆದರೆ ಆ ಬಸ್ಸು ನಡು ದಾರಿಯಲ್ಲಿ ಸ್ವಲ್ಪ ಕೋಪಗೊಂಡು ಕೈ ಕೊಟ್ಟಿತು. ಕೊನೆಗೆ ಆ ಬಸ್ ಚಾಲಕನ ಚಾತುರ್ಯದಿಂದಾಗಿ ಹೇಗೋ ಪಧ್ಯರಾತ್ರಿಯ ಸಮಯಕ್ಕೆ ಅಮರಾವತಿಯಂತೆ ರಂಜಿಸುತ್ತಿದ್ದ ಮೈಸೂರಿಗೆ ಹೋಗಿ ತಲುಪಿದೆವು.

ಕತ್ತಲಾಗುವ ಹೊತ್ತಿಗೆ ಮೈಸೂರಿಗೆ ತಲುಪಬೇಕಾಗಿದ್ದ ನಮಗೆ ಆ ಹೊತ್ತಿನಲ್ಲಿ ಎಲ್ಲಿ ತಂಗುವುದೆಂದೇ ತೋಚದಾಯಿತು. ಆ ವೇಳೆಯಲ್ಲಿ ಕವಿ ಸಮ್ಮೇಳನದ ಆಫೀಸಿಗೆ ಹೋಗಿಯೂ ಪ್ರಯೋಜನವಿರಲಿಲ್ಲ. ಜಟ್ಕಾ ಗಾಡಿಯ ವನನ್ನು ಒಬ್ಬನನ್ನು ಕರೆದಾಗ 10 ಮಂದಿ ನಾನು ಕಾನೆಂದು ಜನುಯಿ ಸಿ ಅವರೊಳಗೇ ಜಗಳಾಡತೊಡಗಿದರು. ಕೊನೆಗೆ ಅವರ ಗೊಡವೆಯೇ ಬೇಡವೆಂದು ನಾವು ಒಂದು ರಿಕ್ಷಾ ಹಿಡಿದು ಹೊರಟೆವು. ಎಲ್ಲಿಗೆ ಹೋದರೂ ರೂಂ ಇಲ್ಲ. ಕೆಲವು ಸ್ಪೆಷಲ್ ವಸತಿಗೃಹಗಳಲ್ಲಿ ಆ ಒಂದು ಅರ್ಧ ರಾತ್ರಿಗೇ 25 ರೂ. ಬಾಡಿಗೆ ಕೊಡಬೇಕು! ರಿಕ್ಷಾವನಿಗೆ ಅವನು ಕೇಳಿದಷ್ಟು ಕೊಡಲೇಬೇಕು. ಈ ಪರಿಸ್ಥಿತಿಯನ್ನು ನೋಡಿ ನಮಗೆ ಆಶ್ಚರ್ಯವಾಗಿತ್ತು. ಕೊನೆಗೆ ಈ ಸಮ್ಮೇಳನದ ಅತಿಥಿಗೃಹವಾದ ಸಂಸ್ಕೃತ ಕಾಲೇಜಿಗೇ ಬಂದೆವು. ಆಷ್ಟರಲ್ಲಿ ಅದೃಷ್ಟವಶಾತ್—ಕಛೇರಿ ಬಾಡಿಗೆ ಹೋಗಿ ಮರಳುತ್ತಿದ್ದ ಓರ್ವ ಮಹಿಳೆ ತನ್ನ ಪರಿವಾರದೊಡನೆ ಬರುತ್ತಿದ್ದವರು ನಮಗೆ ಎದುರಿಗೇ ಸಿಕ್ಕಿದರು. ಅವರನ್ನು ಮಾತನಾಡಿಸಿದಾಗ ಅವರೇ ಕವಿ ಸಮ್ಮೇಳನದ ವ್ಯವಸ್ಥಾಪಕರಾಗಿದ್ದ ಪ್ರೊ. ದಾಸ್ ಎಂಬ ವಿಷಯ ತಿಳಿದುಬಂದು ನನಗೆ ತುಂಬ ಸಂತೋಷವನ್ನುಂಟುಮಾಡಿತು. ನನ್ನ ಪರಿಚಯ ಹೇಳದ ಕೂಡಲೇ ಅವರು ನಮಗಾಗಿಯೇ ಕಾದಿರಿಸಿದ್ದ ವಸತಿಗೃಹವನ್ನು ಕಾರಕೂನರನ್ನು ಎಬ್ಬಿಸಿ ಅನುಕೂಲವಡಿಸಿಕೊಟ್ಟರು. ಅಲ್ಲಿ ಬೆಡ್, ಲೈಟು ನೀರು ಎಲ್ಲವೂ ಸರಿಯಾಗಿತ್ತು. ವ್ಯವಸ್ಥಾಪಕರಿಗೆ ಧನ್ಯವಾದಗಳನ್ನು ಯತೇಚ್ಛವಾಗಿ ಅರ್ಪಿಸಿ ಬಳಿಕ ವಿಶ್ರಾಂತಿ ಪಡೆದೆವು.

ಮರುದಿನ ಸುಮಾರು 5 ಗಂಟೆಗೆ, ಮಾನ್ಯ ವಿ.ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಕ್ರಾಫರ್ಡ್ ಹಾಲ್‌ನಲ್ಲಿ ಕವಿ ಸಮ್ಮೇಳನ! ಕನ್ನಡ ಸಂಸ್ಕೃತ ಮಂತ್ರಿ ತೆಲುಗು, ಉರ್ದು ಮೊದಲಾದ ಹತ್ತು ಭಾಷೆಗಳಲ್ಲಿ ಕವಿತಾ ವಾಚನ, ಗಾಯನ, ವಿದ್ವಾಂಸರಾಗಿದ್ದ ಪ್ರಭಾವಂತ ಕವಿಗಳೆಲ್ಲರೂ ಸೇರಿದ್ದರೆ. ಮಹಿಳೆಯರು ಕವಿಯಿತ್ರಿಯರು ಇಲ್ಲ ನೆನ್ನಲಾಗದಂತೆ ಒಬ್ಬ ಮಹಿಳೆ ಮಾತ್ರ ಭಾಗವಹಿಸಿದ್ದರು. ಸಂಮ್ಮೇಳನಕ್ಕೆ ಮೊದಲು ಒಂದು ಕವಿ ಸಮಾಜ ಗೋಷ್ಠಿ ನಡೆಯಿತು. ಈ ಗೋಷ್ಠಿಯಲ್ಲಿ ತಂತಮ್ಮ ಪರಿಚಯ ಮಾಡಿಕೊಡುವುದು ಅವರವರ ಕರ್ತವ್ಯವಾಗಿತ್ತು. ಅಧ್ಯಕ್ಷರಾದ ವಿ. ಸೀ.ಯವರು ಎಲ್ಲರ ಪರಿಚಯ ಮಾಡಿಕೊಂಡರು. ಕವಿ ನಾಟಕಕಾರ ವಿ. ಸೀ.ಯವರ ರಸಿಕತೆ ಹಾಗೂ ಸರಳತೆಗೆ ನಾವು ತುಂಬ ಸಂತೋಷಪಟ್ಟೆವು ಈ ಗೋಷ್ಠಿಯಲ್ಲಿ ನೊಟ್ಟಮೊದಲು ಕವಿಸಂಮ್ಮೇಳನದಲ್ಲಿ ಯಾರಿಗೆ ಯಾವ ಭಾಷೆಗೆ ಅವಕಾಶ ಕೊಡಬೇಕು ಎಂಬ ಪ್ರಶ್ನೆ ಎದ್ದಿತ್. ಒಬ್ಬೊಬ್ಬರು ಒಂದೊಂದು ರೀತಿಯ ಅಭಿಪ್ರಾಯ ಕೊಟ್ಟರು— ಸಂಸ್ಕೃತ ಕವಿಗಳಿಗೇ ಮೊದಲ ಪ್ರಾಶಸ್ತ್ಯವೆಂದು ತೀರ್ಪಾಗುವುದರೊಳಗಾಗಿಯೇ ವಿ. ಸೀ.ಯವರು ಕನ್ನಡಕ್ಕೇ ಅದರಲ್ಲೂ ದಕ್ಷಿಣ ಕನ್ನಡಕ್ಕೇ ಮೊದಲ ಅವಕಾಶ! ಎಂದು ತಮ್ಮ ಅಭಿಪ್ರಾಯವನ್ನು ಹೇಳಬಿಟ್ಟರು. ದಕ್ಷಿಣ ಕನ್ನಡಕ್ಕೆ ಮೊದಲು ಅವಕಾಶ! ಎಂದಾಗ, ಅದು ನನ್ನ ಪಾಲಿಗೇ ಬಂದಿತ್ತು. ಆಗ ನಾನು— ಮೊಳ್ಳೆ ಛಛ್ಕಕ್ಕೇ ಮೊದಲು ಅರಂಭಿಸಲಿ ಆಗ ಚರ್ಚೆಗೆ ಅವಕಾಶವಿಲ್ಲ' ಎಂದು ಹೇಳಿದೆ. ಆದರೆ, ವಿ. ಸೀ.ಯವರು ಅದನ್ನು ಒಪ್ಪದೆ 'ದಕ್ಷಿಣ ಕನ್ನಡ ಜಿಲ್ಲೆಯಿಂದೆ ಬಂದಿರುವ ಕವಿಗಳಿಂದಲೇ ಸಂಮ್ಮೇಳನ ಆರಂಭವಾಗಲಿ' ಎಂದು ನಿರ್ಧಾರವಾಗಿ ಹೇಳಿಬಿಟ್ಟರು.

ಕ್ರಾಫರ್ಡ್ ಹಾಲ್‌ನಲ್ಲಿ ಕವಿಗಂಮೇಳನ ಆರಂಭವಾಯಿತು. ಆಲ್ ಇಂಡಿಯಾ ರೇಡಿಯೋ ಬೆಂಗಳೂರಿನವರು ಕಾರ್ಯಕ್ರಮವೆಲ್ಲವನ್ನೂ ರೆಕಾರ್ಡ್ ಮಾಡಿಕೊಂಡು— ಮರುದಿನ ರಾ. 20-10-69ರಂದು ಹಗಲು 9 ಗಂಟೆಗೆ ಅದರ ಪ್ರಸಾರವನ್ನು ಮಾಡಿದ್ದರು. ಕವಿಸಂಮ್ಮೇಳನದ ಒಂದು ದೊಡ್ಡ ಕೊರತೆಯೆಂದರೆ ಕ್ರೀಡಾಕೂಟಗಳ ಸಂಜೆ ಬಹಳ ಕಡಿಮೆಯಾಗಿದ್ದುದು. ಇನ್ನೊಂದು ಕೊರತೆಯೆಂದರೆ, ಮೂರು ನಾಲ್ಕು ವಂದಿಯು ಹೊರತಾಗಿ ಮಿಕ್ಕ ಎಲ್ಲರ ಕವಿತೆಗಳೂ ನವ್ಯ ಕವಿತೆಗಳೇ. ನಾಲ್ಕು ಮಂದಿ ರಾಗಬದ್ಧವಾಗಿ ಭಾವಪೂರ್ಣವಾಗಿ ಕವಿತೆಗಳನ್ನು ಹಾಡಿದ್ದರು. ಮಿಕ್ಕವರೆಲ್ಲರೂ ಕವಿತಾವಾಚನವನ್ನೇ ಮಾಡಿದ್ದರು. ನವ್ಯ ಕವಿತೆಗಳು ವಾಚನಕ್ಕೆ ಒಗ್ಗುವುದಿಲ್ಲ. ಶ್ರೋತೃವರ್ಗದಲ್ಲಿ ಕುಳಿತಿದ್ದ ನನ್ನ ಮಿತ್ರ ಕಲಾವಿದ ಭಡ್ಡೆಯವರು, ಮತ್ತಿನ್ನಿತರರೂ ಸಹ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅಂತು, ಕವಿ ಸಂಮ್ಮೇಳನ ಮಾನ್ಯ ವಿ. ಸೀ.ಯವರ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಯಿತು. ಕವಿಗಳಿಗೆ ಮೈಸೂರಿಗೆ ಬರುವ ಹೋಗುವ ಖರ್ಚಿ, ಮತ್ತು ಯೋಗ್ಯವಾದ ಕವಿ ಸಂಭಾವನೆ ಎಲ್ಲವೂ ಶಕ್ಯವಿಟ್ಟಿಗೆ ವ್ಯವಸ್ಥಿತವಾಗಿ ಯೋಗ್ಯರಾಗಿಯೇ ಇದ್ದ ವ್ಯವಸ್ಥಾಪಕರ ದೃಷ್ಟಿಯಿತ್ತು— ಇದೆ ತೇಜಸ್ವಿತ್ವವಿತ್ತು.

ಇಂತಹ ಕವಿ ಸಂಮ್ಮೇಳನಗಳಲ್ಲಿ ಒಳ್ಳೆಯದು, ಅದರಲ್ಲೂ ವಿಶೇಷವಾಗಿ ನೈಪುಣ್ಯಕಾರ್ಯಕ್ರಮವನ್ನೂ ಜೊತೆಗೂಡಿಸಿದರೆ ಈ ಸಂಮ್ಮೇಳನಕ್ಕೆ ಜನ ಬಣ್ಣ ಕೊಡುವುದೆ! ಜನ ಸೇರುತ್ತಾರೆ! ಎಂದ ನಾನು ವಿ. ಸೀ. ಯವರೊಡನೆ ಹೇಳಿದಾಗ ಅವರಿಗೆ ಹಾಗೆನಿಸಲಿಲ್ಲ. ತುಂಬ ರಸಿಕರೂ ಮಾನವಾರರೂ ಆಗಿರುವ ವಯೋವೃದ್ಧ ವಿ. ಸೀ.ಯವರು ದಕ್ಷಿಣ ಕನ್ನಡ ಜಿಲ್ಲೆಯಿಂದ ಇಲ್ಲಿಯ ಜನರನ್ನೂ ತುಂಬ ಹೆಚ್ಚಾತ್ತಾರೆ ಇಲ್ಲಿಗು ಬಮ್ಮ 'ಕೆಸರಿನಲ್ಲಿ ಪತ್ಯೋಡೆ' ಮತ್ತು 'ಮಜ್ಜಿಗೆ ಹುಳಿ' ಆಟಗಳಿಗೆ ಆಕಾರ ಪದಾರ್ಥಗಳೆಲ್ಲಿ ತುಂಬ ಪ್ರೇಕ್ಷಾವಾದುದಾಗುತ್ತದೆಂದು ಅವರು ನಗುತ್ತ ಹೇಳಿದರು. ಮೈಸೂರಿನಿಂದ ವಿ. ಸೀ.ಯವರೂ ನಾವೂ ಜೊತೆಜೊತೆಯಾಗಿ ಮಾತನಾಡುತ್ತಲೇ ಬೆಂಗಳೂರಿಗೆ ಬಂದೆವು. ಬೆಂಗಳೂರಲ್ಲಿ ಮಾನ್ಯ ವಿ. ಸೀಯವರು ಅದು ಆಯಿತೆಂದು ಬೀಳ್ಕೊಡಲು ನನಗೆ ಭರ್ಜರಿ ಎರಡು ಟೇಪ್‌ಗಳನ್ನು ಕೊಟ್ಟ ಫಲ್ಯವನ್ನು ಬೀಳ್ಕೊಟ್ಟರು. 'ಏ ದ್ಯಾನಾ ವಿವೇಚಿಸ್ತಿರಾ ? ಪರಾಮರ್ಶೆಗಳಂ ಸಾಧಿಸಿರಿ' ಎಂಬ ಪದ್ಯಾಂತಿದ್ದ ವಿ. ಸೀ.ಯವರ ಸ್ವಹಸ್ತಾಕ್ಷರವನ್ನು ಸ್ಮರಿಸುತ್ತ ನಾವುಗಳು ನವ ಪ್ರೀತಿಗೆ ಬಂದು ಸೇರಿದೆವು.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿಪಸು
ಪಾತ್ರೀಯಿಗಳಿಗೆ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 72

HOTEL SHIVAPRASAD

High Class Boarding, Lodging & Restaurant

COONDAPUR, S. K.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ
RRC 210/70

ಬಿ. ಕೆ. ಲಕ್ಷ್ಮಿನಾರಾಯಣ ರಾವ್
—ಅರ್ಜದಾರ

ಪೊಡಿಯಮ್ಮ ಬ್ಯಾರ್ತಿ ಮತ್ತು ಇತರರು
—ಎದ್ರಿರು.

ಮೇಲಿನ ಅರ್ಜಿಯು ಇನೇ ಎದ್ರಿ ಬೆಳ್ತಂಗಡಿ ತಾಲೂಕು ವಿಶ್ವಜಾಗಿಲು ಗ್ರಾಮದ ಪಾಲಿ ಬನ ಎಂಬಲ್ಲಿರುವ ದಿವಂಗತ ಮಮ್ಮದಿ ಬ್ಯಾರಿಯವರ ಪತ್ನಿ ಅಜ್ಜಮ್ಮ ಬ್ಯಾರ್ತಿಯವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ:—

ಗೌಣ ಪಾರ್ಟಿ ಬಗ್ಗೆ ಅರ್ಜದಾರರು ನಿಮ್ಮ ಹಾಗೂ ನಿಮ್ಮ ವೈನರ್‌ಮಕ್ಕಳ ಮಾರಿಯಮ್ಮ ಮತ್ತು ಬಿ ಪಾತುಮ್ಮ ಎಂಬವರ ಮೇಲೂ ದಾಖಲಿಸಿ ಮೊದಿರುವ ಅರ್ಜಿ ನಿಮ್ಮ ಹಾಜರಾತಿ ಬಗ್ಗೆ ತಾ. 22-8-70ಕ್ಕೆ ಇಟ್ಟಿರುತ್ತದೆ. ನಿಮಗೇನಾದರೂ ಆಕ್ಷೇಪಣೆಗಳಿದ್ದಲ್ಲಿ ಆ ದಿನ ವ್ಯಾಪ್ತಿ ದಿನ ಬೆಳಿಗ್ಗೆ ಗಂಟೆ 11ಕ್ಕೆ ಕೋರ್ಟಿಗೆ ಮುಂಚಿತವಾಗಿ ಸ್ವತಃ ಯಾ ವಕೀಲರ ದ್ವಾರಾ ಹಾಜರಾಗಿಸಿದಲ್ಲಿ ಸರಿ. ತಪ್ಪಿದ್ದಲ್ಲಿ ನಿಮ್ಮನ್ನು ಶಿಸ್ತು ಮಾಡಿ, ನಿಮ್ಮ ಮಕ್ಕಳಿಗೆ ಕೋರ್ಟು ಗಾರ್ಡಿಯನರನ್ನು ನೇಮಿಸಿ, ಅರ್ಜಿಯನ್ನು ಮುಂದುವರಿಸಲಾಗುವುದು ತಿಳಿದಿರಲಿ.

ಬಿ. ಕೆ. ಸೂರ್ಯನಾರಾಯಣ ರಾವ್
ಅರ್ಜದಾರ ಪರ ವಕೀಲ.

ಬೆಳ್ತಂಗಡಿ, 27.7.70

NAVAYUGA 20—8—1970
Registered with the Registrar of News Papers for India under No. R. N. 3540/'57

REGD. No: B. G. 176
LICENCE No. 33
Licensed to Post without Prepayment

ಸಮಾಜವಾದಿ ಲಡ್ಡುಗಳು

ರಾಜ್ಯಕೀಯಕ್ಕೆ ದರೇನು? ಇದರ ಮರ್ಮ ಯಾವುದು ಎಂಬುದು ಯಾವ ಕಾಲಕ್ಕೂ ಅಸ್ಪಷ್ಟ. ಒಂದೊಂದು ಕಗ್ಗಂಟು ಎಂದು ಹೂತ್ತ ದೊತ್ತು, ಇದನ್ನು ಬಿಡಿಸಲು ಹಲವಾರು ಪ್ರಯತ್ನ ನಡೆಸಿದ್ದರು. ಅವರು ಕೊಡಿದ ಸರಿ ಭಾಷೆ ಬರಿಯ ಇಲೆಸ್ಟಿಕ್. ಬೇಕುಬೇಕಾದವರು ತಮತಮಗೆ ಅನುಕೂಲವಾಗುವಂತೆ ಅದಕ್ಕೆ ಭಾಷ್ಯ ಬರೆಯಬಲ್ಲರು. ಶ್ರೀವ ದ್ ಭಗವದ್ಗೀತೆಯೊಂದಕ್ಕೇ ಅದೆಷ್ಟು ವ್ಯಾಖ್ಯಾನಗಳು ಮೂಡಿಬಂದಿಲ್ಲ? ಎಲ್ಲ ಸಂಪ್ರದಾಯಿ ಗಳೂ ತಂತಮ್ಮ ಸಂಪ್ರದಾಯವೇ ಗೀತೆಯ ಗುಟ್ಟು ಎಂದು ಹೇಳುತ್ತ ಬಂದಿದ್ದಾರೆ. ಎಲ್ಲರೂ ಅದರ ಆಧ್ಯಾತ್ಮಿಕ ನೂಲಿನ ಒಂದೆಳೆ ಹಿಡಿದಿದ್ದಾರೆ; ಗಂಟು ಬಿಡಿಸಿದ್ದೇವೆಂದೂ ಹೇಳುತ್ತಾರೆ, ಭಾರತದ ಇಂದಿನ ರಾಜ್ಯಕೀಯ ಪರಿಸ್ಥಿತಿಯೂ ಇದೇ ರೀತಿ ಗಂಟಿನಲ್ಲಿ ಸಿಕ್ಕಿ ಹಾಕಿಕೊಂಡ ಹಗ್ಗದ ಒಂದೊಂದು ಹುರಿ ಒಬ್ಬೊಬ್ಬರಲ್ಲಿದೆ. ಅದುದರಿಂದ ಎಲ್ಲರ ಸಹಕಾರವಿಲ್ಲದೆ ಈ ಗಂಟು ಬಿಚ್ಚುವುದು ಅಸಾಧ್ಯ ಅದಕ್ಕೆಂದೇ ಧಾರಾ ಯ-೪೪ನ್ನೆ ಡೆದಿದೆಯೆ? ಎಷ್ಟೆ?

ಅತ್ಯಂತ ಪ್ರತಿಗಾಮಿ ಎಂಬ ಟೀಕೆಗೆ ಕಾರಣವಾದ ಸ್ವತಂತ್ರ ಪಕ್ಷದಿಂದ ತೊಡಗಿ ಅತ್ಯಂತ ಪ್ರಗತಿಗಾಮಿಗಳೆನ್ನುವ ಕಮ್ಯೂನಿಷ್ಟರವರೆಗೂ ಎಲ್ಲ ರಾಜ್ಯಕೀಯ ಪಕ್ಷ-ಸಂಘಟನೆಗಳ ತುದಿಬಾಲಗಳೆ ಸಮಾಜವಾದದ ಅಮರ ಶಕ್ತಿ ಜಪಿಸಹತ್ತಿದೆ. ಹಲವಾರು ಸಮುದಾಯದ ಕೈಗೆ ಸಿಲ ಕೆದ್ದ ಈ ಸಮಾಜವಾದ ಕಮ್ಮ ನೀಚವಾದ ರೂಪವನ್ನು ಕಳೆದುಕೊಂಡಿದೆ. ಜಾಗತಿಕ ಸಮಾಜವಾದಕ್ಕೆ ವ್ಯತಿರಿಕ್ತವಾದ ಸಮಾಜವಾದವೊಂದು ಭಾರತದಲ್ಲಿ ಮೂಡಿದೆ. ಈ ಸಮಾಜವಾದಕ್ಕಾದರೂ ನಿರ್ದಿಷ್ಟ ಇಂಡಿಕೇಟಿನ ಸಮಾಜವಾದದ ತಿರುಳು ಒಂದಾದರೆ, ಸಿಂಡಿಕೇಟ್‌ದನಿನ್ನೊಂದು. ಸ್ವತಂತ್ರ, ಜಪಕರಪ ಎಸ್ಸೆಸ್ಸು, ಪಿಡುಸ್ಸು, ಎಡ—ಬಲ—ಕಮ್ಯೂನಿಸ್ಟ್ ಇತ್ಯಾದಿ ಇತ್ಯಾದಿಗಳ ಸಮಾಜವಾದಕ್ಕೂ ಅವುಗಳದ್ದೇ ಆದ ಪರಿಧಾನೆಯಿದೆ. ಈ ವಿಭಿನ್ನ ಪರಿಧಾನೆಗಳ ಫಡನೆ ಸಮಾಜವಾದದ ತತ್ವಭಾರತದಲ್ಲಿ ಸಮಾಧಿಗೊಂಡಿದೆ.

ಆದರೆ ಒಂದರಲ್ಲಿ ಮಾತ್ರ ಸಮಾಜವಾದವಿದೆ. ಅದೇನು? ಶಾಪೊಟ್ಟದ ಸರಕಾರ ಕೇಂದ್ರದಲ್ಲಿರಲಿ, ರಾಜ್ಯದಲ್ಲಿರಲಿ, ಅದನ್ನು ಉರುಳಿಸುವಲ್ಲಿ ಎಲ್ಲರೂ ಒಂದಾಗಿದ್ದಾರೆ. ಇದರ ಹಿಂದೆ ಅಡಗಿರುವ ಫೆಸೋದ್ದೇಶ-ಸಮಾಧಿಯಲ್ಲಿ ಹೂಡುಗಿರುವ ಸಮಾಜವಾದದ ಶವವನ್ನು ಮೇಲೆತ್ತುವುದು. ಅದಕ್ಕೆ ಮತ್ತೆ ತಮ್ಮ ರಾಜ್ಯಕೀಯ ಇಂಜೆಕ್ಷನ್ನನ್ನು ಚುಚ್ಚಿ ಅದರಲ್ಲಿ ನವಪ್ರಾಣ ಪ್ರತಿಷ್ಠೆ ನೂಡುವುದು. ಶ್ರೀಮತಿ ಇಂದಿರಾ ಗಾಂಧಿಯವರ ನಾಯಕತ್ವ ಮತ್ತು ಮಾರ್ಗದರ್ಶನದಲ್ಲಿ ಹಲವಾರು 'ತಮ್ಮ ದೇ ಕಾಂಗ್ರೆಸ್' ಕಾರ್ಯಕಾರಿಣಿ ಕೆಡೆಸಿದ್ದು, ಶ್ರೀ ಎಸ್ಸೆನ್ನರ ಕಾಂಗ್ರೆಸ್ಸನ್ನು ಬಹಿಷ್ಕರಿಸಿದ್ದು—ಮುಂದಿನ ಹಲವು ಬಗೆಯ ರಾಜ್ಯಕೀಯ ಬೆಳವಣಿಗೆಗಳು ಇದೇ ಘೋಷ್ಯೋದ್ದೇಶದಿಂದ ನಡೆದುವು. ಶ್ರೀ ಎಸ್ಸೆನ್ನರ ನಾಯಕತ್ವದಲ್ಲಿ ಸಮಾಜವಾದವು ಖಾತರಿಗಿಳಿಯಲಿತೆಂದು ಶ್ರೀಮತಿ ಗಾಂಧಿ ಹೇಳಿ ಈ ಕಲ್ಪವೃಷ್ಟವನ್ನೆಕ್ಕಲು ಕಾಂಗ್ರೆಸ್ ಸಮುದ್ರ ಕಡೆಯಲು ಬದ್ಧ ಕಂಕಣರಾದರು. ಇದೀಗ ಮೋಹಿನಿಯೊಗಿ ಸಮಾಜವಾದವನ್ನು ಹಂಚಲು ಸಿದ್ಧರಾಗಿದ್ದಾರೆ. ಪುರಾಣದ ಮೋಹಿನಿ ಮಾಡಿದ್ದೂ ಆದೇ ದೇವತೆಗಳಿಗೆ ಅಮೃತ. ದಾನವರಿಗೆ ಬರಿ ಪಾತ್ರ. ಶ್ರೀಮತಿ ಗಾಂಧಿಯವರೂ ತಮ್ಮ ಬೆಂಬಲಿಗರಿಗೆ ಸಮಾಜವಾದದ ಹೆಸರಲ್ಲಿ ಬೇಕಷ್ಟು ಕೊಟ್ಟಿದ್ದಾರೆ. ಉಳಿದವರು ಗಂಟೆಕೋಲು ಹಿಡಿಯಬೇಕಾಗುತ್ತದೆ.

ರಾಜ್ಯಕೀಯ ಪಕ್ಷಗಳು ವಿಭಿನ್ನ ದಿಕ್ಕಿಗೆ ಸಮಾಜವಾದವನ್ನು ಎಳೆದು ತಾನೇ ಸರಿ ಎಂದು ಹಾರಾಡಿ ಬೊಬ್ಬಿಡುವಾಗ, ಶ್ರೀ ನಾವೂಸ್ಕೆ ಕಂಗಾಲಾಗಿದ್ದಾನೆ. ಯಾರ ಹಿಂದೆ ಹೋದರೆ, ನಿಜವಾದ ಸಮಾಜವಾದದ ದರ್ಶನವಾದೀತು?-ಇದು ಅತನಿಗೂ ಗೊತ್ತಿಲ್ಲ. ಪರ್ಯಾಯವೂನಪರಿಸ್ಥಿತಿಯಲ್ಲಿ ಸಂಪೂರ್ಣ ನಿರಾಶೆಗೊಂಡ ಅತನಿಗೆ ಭವಿಷ್ಯದ ಬಗ್ಗೆ ಯಾವ ನಂಬಿಕೆಯೂ ಉಳಿದಿಲ್ಲ. ಇಂದು ವಿಧಾನಗುತ್ತಿದೆಯೆಂಬುದರ ಬಗ್ಗೆಯೇ ಕಲ್ಪನೆಯಿಲ್ಲದಿರುವಾಗ ನಾಳೆಯ ಚಿಂತೆ ಮಾಡುತ್ತ ಅತ ಕಲೆಕೆಡಿಸಿಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಹಾಗಾಗಿ ಈ ಅನಿಶ್ಚಿತ "ರಾಜ್ಯಕೀಯ ಸಮಾಜವಾದ"ದಿಂದ ಕೆಲವು ಅಸಕ್ತ ಪ್ರಭಾವಶಾಲಿ ವ್ಯಕ್ತಿಗಳು ಮಾತ್ರವೇ ಸ್ವಲ್ಪ ಮಾಡಿಕೊಳ್ಳತೊಡಗಿದ್ದಾರೆ. ಶ್ರೀಮತಿ ಗಾಂಧಿಯವರಿಗೆ ಬೆಂಬಲ ನೀಡಿದ್ದರಿಂದ ಶ್ರೀ ಕೆಂಗಲ್ ಹನುಮಂತಯ್ಯನವರು ಕೇಂದ್ರದಲ್ಲಿ ಮಂತ್ರಿ ಪದವಿದರು; ಶ್ರೀ ದೇವರಾಜ ಅರಸು ಕೇಂದ್ರ ರೇಕ್ಷೆ ಮಂಡಲಿಯ ಅಧ್ಯಕ್ಷರಾದರು. ಇಲ್ಲವಾದರೆ, ಅವರನ್ನು ಯಾರು ಕೇಳುತಿದ್ದರು? ಶ್ರೀ ಎಂ; ವಿ. ಕೃಷ್ಣಪ್ಪನವರು ಏನೂ ಆಗಿಲ್ಲವೆಂದು ಹೂರಾದರೂ ಹೇಳಬಹುದು. ಪ್ರಧಾನಿಯ ಪ್ರಧಾನ ಸಮರ್ಥಕರಲ್ಲಿ ಒಬ್ಬರಾದ, ಕೇಂದ್ರ—ರಾಜ್ಯಗಳಲ್ಲಿ ಮಂತ್ರಿಯೊಗಿದ್ದು ಕೊಂಡು ತಂಬ ಅನುಭವವಿರುವ ಇವರನ್ನು ಪ್ರಧಾನಿಯೂ ಎತ್ತಿದರೆಬೇಕಾದರೆ, ಅವರದ್ದು ಬೇರೆಯೇ ಒಂದು ಸಮಾಜವಾದವಿದ್ದರೂ ಇರಬಹುದೆಂದು ದೃಢಪಡುತ್ತದೆ.

'ಸಮಾಜವಾದ'ದಕ್ಕೆ ಭಾರತವು ಮೂಲಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಆದರೆ, ಸಮಾಜವಾದಕ್ಕೆ ಬೇರೆ ಬೇರೆ ರಾಜ್ಯಕೀಯ ಪಕ್ಷಗಳು ನೀಡಿದ ತಂತಮ್ಮ ಬಣ್ಣಗಳಲ್ಲಿ ಯಾವ ಬಣ್ಣದ ಸಮಾಜವಾದ ತಮಗೆ ಬೇಕೆಂಬುದನ್ನು ಜನತೆ ನಿರ್ಧರಿಸಬೇಕು. ಚುನಾವಣೆಗಳಲ್ಲಿ ಗೆಲ್ಲುವುದು, ಅಧಿಕಾರದಲ್ಲಿ ಉಳಿದುಕೊಳ್ಳುವುದು, ಪರರನ್ನು ನಿಂದಿಸುವುದು—ಎಂದಿಗೂ ಸಮಾಜವಾದ ಪಂಥವಾಗದು. ನಮ್ಮ ಜನತೆ ಜಾಗ್ರತವಾಗಬೇಕು. ಸಮಾಜವಾದದ ಯಥಾರ್ಥತೆಯನ್ನು ಅರಿತುಕೊಳ್ಳಬೇಕು; ವಿಶ್ವತರೂಪದಲ್ಲಿ ಸಿಲುಕಿಕೊಂಡ ಸಮಾಜವಾದವನ್ನು ಸುರೂಪಕ್ಕೆ ತರಬೇಕು.

ಕೇರಳದಲ್ಲಿ ಮಧ್ಯಂತರ ಚುನಾವಣೆ ನಡೆಯಲಿದೆ. ಆದಾದ ಮೇಲೆ ಪಶ್ಚಿಮ ಬಂಗಾಳದಲ್ಲೂ ಅದು ನಡೆಯಬಹುದು. ಹೇರೂ ಈಯೆರಡೂ ರಾಜ್ಯಗಳಲ್ಲಿ ಪ್ರಧಾನಿ ಪಕ್ಷವು ಬಹುಮತ ಪಡೆಯುವ ಆಕಾಂಕ್ಷೆಯನ್ನಿಟ್ಟುಕೊಂಡಿಲ್ಲ. ಅಷ್ಟರಲ್ಲಿ ಐದನೆಯ ಸಾರ್ವತ್ರಿಕ ಚುನಾವಣೆಗಳು ಬರಲಿವೆ. ಈ ಮೇಳೆವಿ ಜನಜನವೂ ಎಚ್ಚರವಾಗಿರಬೇಕಾಗಿದೆ. 'ಸಮಾಜವಾದ'ದ ಕ್ಲೋರೋಫಾರ್ಮನ್ನು ಮೂಸಿಸುವ ಕಲೆಯೊಗ ಎಲ್ಲ ರಾಜ್ಯಕೀಯ ಪಕ್ಷಗಳಿಗೂ ಕರಗತವಾಗಿದೆ. ತನಗೆ ಬೇಕಾದ ಬಗೆಯ ಸಮಾಜವಾದವನ್ನು ಅರಿತುಕೊಳ್ಳುವ ವಿವೇಕ ಜನತೆಯಲ್ಲಿರಬೇಕಾಗಿದೆ. ಬೇರೆ ಬೇರೆ ವಾದಗಳು ಹುಟ್ಟಿದಿರುವಾಗ ಒಂದನ್ನು ಆರಿಸುವುದು ಸುಲಭ. ಆದರೆ, ಒಂದೇ ವಾದದಲ್ಲಿ ಇಂತಹ ಆಯ್ಕೆ ಮಾಡುವುದು ಕಠಿಣ. ಲಡ್ಡುಗಳ ಡಬ್ಬಿಯಿಂದ ಬೇಕಾದ ಒಂದನ್ನು ತೆಗೆಯುವುದಕ್ಕಿಂತ ಬೇರೆಯಲ್ಲ.

ನಮ್ಮ ದೇಶದ ರಾಜ್ಯಕೀಯ ಎಂದು ಸಮಾಜವಾದೀ ಲಡ್ಡುಗಳ ಡಬ್ಬಿ ಇದರಿಂದ ನಾವು ಯಾವ ಲಡ್ಡು ಆರಿಸುತ್ತೇವೆ? ತೀವ್ರ ಹಾಗೂ ಸೂಕ್ಷ್ಮ ವಿವೇಚನೆ ಇದಕ್ಕಾಗಿ ಎಂದಿಗಿಂತ ಇಂದು ಅಗತ್ಯ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಅಂಗ್ಲಸ್ವಯಂಬೋಧಿನಿ
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ವಿನೂತನ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಪೊಳಲಿ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ.
450 ಪುಟಗಳ ಸುಂದರ ಕೈಪಿಡಿ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ। ವಿ. ಆರ್. ಕೊರಪ್ಪಳ್ಳರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಪೈಹೆವೈದ್ಯ. ಇವರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ರೋಗಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ವಿಧಾನಗಳಿವೆ. ಹಂಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಪಿಡಿ
ಬೆಲೆ ೦-75 ಪೈಸೆ ಮಾತ್ರ.
ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ.
ಫಾಲುಕೋಟೆ, ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 27—8—1970 ಸಂಪುಟ 49 ಸಂಚಿಕೆ 50

ವಯಸ್ಕರ ಶಿಕ್ಷಣದ ವ್ಯಾಪಕ ಯೋಜನೆ

ಲೇಖಕರು: ಶ್ರೀ ವಿ. ಕೆ. ಆರ್. ವಿ. ರಾವ್.

ಈ ಶತಮಾನದ 69 ವರ್ಷಗಳ ಅವ ಯಲ್ಲಿ ಭಾರತದ ಸಾಕ್ಷರತೆಯ ವ ಟ್ಟ ಶೇಕಡ 6.2ರಿಂದ 33ಕ್ಕೆ ಏರಿದೆ. ಆ ರೆ 1969ನ್ನಲ್ಲಿ ದೇಶದಲ್ಲಿ 34.9 ಕೋ ಅನಕ್ಷರಸ್ಥರಿದ್ದರು. ರಾಷ್ಟ್ರೀಯ ಸಾಕ್ಷರತೆಯು ಶೇಕಡ 33 ಇದ್ದಿತು. ಮ ಳೆಯರ ಸಾಕ್ಷರತೆ ಶೇಕಡ 13 ಇದ್ದಿ ು. ಗ್ರಾಮೋದ್ಯರ ಪ್ರದೇಶದ ಸಾಕ್ಷರತಾ ಯಟ್ಟ ಶೇಕಡಾ 19 ಇದ್ದಿತು.

1961ರಲ್ಲಿ 10.6 ಕೋಟಿ ಸಾಕ್ಷರ ದ್ದರು ಇವರಲ್ಲಿ ಶೇಕಡ 7.8ರಷ್ಟು ುಂದಿ ವ್ಯಾಧಶಾಲೆ, ಇಂಟರ್ ಮತ್ತು ದವಿ ಪರೀಕ್ಷೆಯ ಮಟ್ಟದ ವರೆಗೆ ಓದಿ ವರಿದ್ದರು. ಶೇಕಡ 92.2ರಷ್ಟು ಮಂ ಮಧ್ಯಮಿಕ ಶಿಕ್ಷಣ ಪಡೆದವರಿದ್ದರು. 961ನೇ ಇಸವಿಯಲ್ಲಿ 15-30 ವ ೋಮಿತಿಯ 11 ಕೋಟಿ ಯುವಕ ದ್ದರು. ಇವರಲ್ಲಿ ಕೇವಲ 3.7 ಕೋಟಿ ನರು ಸಾಕ್ಷರರಿದ್ದರು.

ಜನಸಂಖ್ಯೆಯ ಪ್ರಭಾವ

ದೇಶದ ಜೀವನಾಯ ಹಾಗೂ ಕೈಗಾರಿ ಾ ಉತ್ಪಾದನೆಯಲ್ಲಿ ನಿರತರಾಗಿರುವವ ಲ್ಲಿ ಸಾಕ್ಷರತೆ ಕಡಿಮೆಯಾಗಿದೆ. ಜನ ಸಂಖ್ಯಾ ಸ್ಫೋಟ ಶಿಕ್ಷಣದ ಮೇಲೆ ಪ್ರ ಭಾವ ಬೀರಿದೆ. ಅಭಿವೃದ್ಧಿಯ ಪ್ರಮಾಣ ಕ್ಕೂ ಜನಸಂಖ್ಯಾ ಏರಿಕೆಗೂ ನೇರ ಸಂ ಬಂಧವಿದೆ. ಸಂತಾಪ ಕರ, ಹೊಂದಿರುವ ಬಹುತೇಕ ಪುರುಷ-ಮಹಿಳೆಯರಿಗೆ ಸಾ ರ್ತ ಶಿಕ್ಷಣ ಕೊಡುವ ತ್ವರಿತ ಅಗತ್ಯವಿದೆ. ಏಕೆಂದರೆ ಬಹುತೇಕ ಮಂದಿ ಅನಕ್ಷರ ರಾಗಿದ್ದಾರೆ.

1961ನೇ ಇಸವಿಯ ಜನಗಣತಿ ಪ್ರ ಕಾರ ಮಹತ್ವದ ಹಳ್ಳಿ ಹೊಂದಿರುವ ವರೆ ಸಂಖ್ಯೆ 22.3 ಕೋಟಿ ಇವ ರಲ್ಲಿ 5.8 ಕೋಟಿ ಜನ ಮಾತ್ರ ಅಕ್ಷರಸ್ಥರು. ಆದ್ದರಿಂದ ದೇಶದಲ್ಲಿ ೈಜ ಸಂಸದೀಯ ಪ್ರಜಾಸತ್ತೆಯ ಉಳಿ ವಿಗೆ ಸಾಮೂಹಿಕ ಸಾಕ್ಷರತಾ ಚಳುವ ಳಿ ಹಾಗೂ ವಯಸ್ಕರ ಶಿಕ್ಷಣ ಅಂದೋ ಳನ ವಿಸ್ತರಣೆ ಅತ್ಯಗತ್ಯವಾಗಿದೆ. ಪ್ರಕಟ ಜನಸಂಖ್ಯಾ ಏರಿಕೆಯ ಪ್ರಮಾಣದಲ್ಲಿ ವಿ ಕ್ಷಣಾಭಿವೃದ್ಧಿಯ ಪ್ರಭಾವ ತೀವ್ರವಾಗಿ ರುವುದಿಲ್ಲ. 1981ರಲ್ಲಿ ಅಕ್ಷರಸ್ಥರ ಪ್ರಮಾ ಣ ಶೇಕಡ 50ರಷ್ಟು ಇರಬೇಕೆಂದು ಅನಕ್ಷ ರಸ್ಥರ ಸಂಖ್ಯೆ 35.8 ಕೋಟಿಯಿರಬೇಕಾಗುತ್ತದೆ.

ಹೊರೊಬ್ಬ ಭಾರತೀಯನೂ ಈ ಸ್ಥಿ ತಿಯಿಂದ ತೃಪ್ತಿಪಡುವಂತಿಲ್ಲ. ಪ್ರಗತಿ ಮತ್ತು ಅನಕ್ಷರತೆ ಸಂಗಾತಿಗಳಾಗಿರಲಾ ರವು. ಆರ್ಥಿಕ—ಸಾಮಾಜಿಕ ಪ್ರಗತಿಗೆ, ಸಮೂಹದ ವಿಕಾಸಕ್ಕೆ ವಯಸ್ಕರ ಶಿಕ್ಷಣ ಅತ್ಯವಶ್ಯ. ಏಕೆಂದರೆ ಸಾಕ್ಷರತೆ ನೆಂಬ ರ್ದ ಪ್ರಮುಖ ಮಾಧ್ಯಮವಾಗಿದೆ.

ರಾಷ್ಟ್ರೀಯ ಸಂಘಟನೆ, ಸಾಮೂಹಿ ಕ ಸಾಹಾರ್ದತೆ; ಸಾಂಸ್ಕೃತಿಕ ಪ್ರಗತಿ ಮತ್ತು ಪ್ರಜಾಸತ್ತೆಯ ಉಳಿವಿಗೆ ದೇಶ ದೆಲ್ಲೆಡೆಯಲ್ಲೂ ಸಂಪೂರ್ಣ ಸಾಕ್ಷರತೆ ಸಾಧಿಸಲು ಪ್ರಯತ್ನಿಸಬೇಕಾಗಿದೆ. ನಮ್ಮ ಪ್ರಜಾಕೋಟಿಯಲ್ಲಿ 15—44 ವಯೋ ಮಿತಿಯಲ್ಲಿ 15 ಕೋಟಿ ಅನಕ್ಷರಸ್ಥರಿ ದ್ದಾರೆ. ಇವರಿಗೆ ಶಿಕ್ಷಣ ನೀಡಲು 450 ಕೋಟಿ ರೂಪಾಯಿ ಬೇಕಾಗಬಹುದೆಂದು ಅಂದಾಜಿಸಲಾಗಿದೆ. ಈ ಸಂಖ್ಯೆಯನ್ನು ಇಂದಾಗಲಿ, ಮುಂದಾಗಲಿ ಕಡಿಮೆ ಮಾಡುವುದು ಅಸಾಧ್ಯ; ಹಾಗಾದರೆ ಪರಿಹಾರ ಮಾರ್ಗವೇನು? ಇದಕ್ಕಾಗಿ ಕೇಂದ್ರ ಶಿಕ್ಷಣ ಖಾತೆ ಕಳೆದ ಒಂದೂವರೆ ವರ್ಷಗಳಿಂದ ಕೆಲವು ಕಾರ್ಯಕ್ರಮಗಳನ್ನು ಕೈಗೊಂಡಿದೆ.

ರಾಷ್ಟ್ರೀಯ ಮಂಡಳಿ ರಚನೆ

ಭಾರತದಲ್ಲಿ ವಯಸ್ಕರ ಶಿಕ್ಷಣ ಮತ್ತು ಸಾಕ್ಷರತಾ ಕಾರ್ಯಕ್ರಮಗಳ್ಕೆ ನಾ ಯಕತ್ವವಿಲ್ಲದೆ, ಅನಕ್ಷ—ಜನಪ್ರಿಯತೆ ಯಿಲ್ಲದೆ, ಸಾರ್ವಜನಿಕ ಬೆಂಬಲವಿಲ್ಲದೆ ದೊರಕಿದೆ. ಈ ಬೃಹತ್ ಸಮಸ್ಯೆಯನ್ನು ರಾಜಕೀಯ ಮಟ್ಟದಲ್ಲಿ, ಜನಪ್ರಿಯ ನಾ ಯಕತ್ವದ ಮಟ್ಟದಲ್ಲಿ ಪರಿಶೀಲಿಸಿ ಪರಿ ಹಾರ ಹುಡುಕಬೇಕಾಗಿದೆ. ಇದ ಕ್ಕಾಗಿ ರಾಷ್ಟ್ರೀಯ ವಯಸ್ಕರ ಶಿಕ್ಷಣ ಮಂಡಳಿ ರಚಿಸಲು ಬೇಡಿಕೆ ಬಂದಿತು. ಕಳೆದ ವರ್ಷ ಡಿಸೆಂಬ ್ 5ರಂದು ಸೂಕ್ತ ವ್ಯಾಪ್ತಿಧ್ಯೇಯದ ರಾ ಷ್ಟ್ರೀಯ ಮಂಡಳಿಯನ್ನು ವಯಸ್ಕರ ಶಿಕ್ಷ ಣಕ್ಕೆ ಹೊಸ ಮಾರ್ಗ ನಿರ್ದೇಶಿಸಲಾಗಿದೆ.

ಈ ಮಂಡಳಿ ಪ್ರಕಟಣೆಯಲ್ಲಿ ಕೇಂದ್ರ ಶಿ ಕ್ಷಣ ಶಾಖೆಯು ವಯಸ್ಕರ ಶಿಕ್ಷಣ ಕಾರ್ಯಕ್ರಮದ ತಾಂತ್ರಿಕ ವಿಭಾಗವಾಗಿ ಕಾರ್ಯನಿರ್ವಹಿಸುತ್ತದೆ. ಪ್ರತಿ ರಾಜ್ಯದಲ್ಲೂ ವಯಸ್ಕರ ಶಿಕ್ಷಣ ಮಂಡಳಿ ರಚಿಸಿದರೆ ಕಾರ್ಯಕ್ರಮಕ್ಕೆ ಸೂಕ್ತ ಚಾಲನೆ ಬರುತ್ತದೆ. ರಾಷ್ಟ್ರೀಯ ಮಂಡಳಿ ಮೇ ಪಸಂ ದ ಸಲಹೆಯಲ್ಲಿ ಈ ಸಂಸ್ಥೆಯನ್ನು ಅನು ಮೋದಿಸಿದೆ.

ಈ ಚಳುವಳಿಗೆ ಸಾಕ್ಷ್ಯ ಸಂಪನ್ಮೂಲ ದ ಅಭಾವವಿರುವುದರಿಂದ ಸಂಪ್ರದಾ ಯಿಕ ಮಾರ್ಗಗಳನ್ನು ಹುಡುಕಬೇಕಾಗಿ ದೆ. ದೇಶದಲ್ಲಿರುವ ಎಲ್ಲಾ ಶಿಕ್ಷಿತ ಸ್ತ್ರೀ—ಪುರುಷರನ್ನೂ ಸಮರ್ಪಕ ಸಾಮೂಹಿಕ ಚ ಳುವಳಿಗೆ ಸಜ್ಜುಗೊಳಿಸಬೇಕಾಗಿದೆ. ಇಂ ತಹ ಪ್ರಯತ್ನ ರಷ್ಯಾ, ಇಂಡೋನೇಷ್ಯಾ ಮತ್ತು ಕ್ಯೂಬಾದಲ್ಲಿ ಯಶಸ್ವಿಗಳಿಸಿದೆ. ಈ ದಿಸೆಯಲ್ಲಿ ಮಹಾರಾಷ್ಟ್ರದಲ್ಲಿ ಸಣ್ಣ ಪ್ರಯೋಗ ಆರಂಭಿಸಲಾಗಿದೆ. ಈ ಯೋ ಜನೆಗೆ ಬೆಚ್ಚ ಅಲ್ಪವಿದ್ದ ಸಾಕ್ಷ ರತೆಯ ಲಾಭ ಲಗಡಿತವಾಗುವಂ ತಿದೆ. ಈ ಕಾರ್ಯಕ್ರಮಕ್ಕೆ ವಾಚನ ಸಾಮಗ್ರಿ ಹಾಗೂ ಸುಜ್ಞಾನಿ ಪುಸ್ತಕ ಭಂಡಾರ ಸ್ಥಾಪನೆ ಒದಗಿಸಬೇಕಾಗು ತ್ತದೆ.

ಸಾಮೂಹಿಕ ಸಾಕ್ಷರತಾ ಯೋಜನೆ ಯಷ್ಟು ಕೇಂದ್ರ ಶಿಕ್ಷಣ ಶಾಖೆಯು ದೇ ಶದ ವಿವಿಧ ಗ್ರಾಮೋದ್ಯರ ಹಾಗೂ ನಗ ರ ಪ್ರದೇಶಗಳಲ್ಲಿ ಪ್ರಾಯೋಗಿಕವಾಗಿ ಆ ರಂಭಿಸಿತ್ತದೆ. ಈ ಯೋಜನೆಯಿಂದ ಸಾ ಕ್ಷರತೆ ತರಬೇತಿಗೆ ಒಗ್ಗೂಡುವವರ ವ ಯೋವಿ ಸ, ಮನವೊಲಿಕೆಗೆ ಕಾರಣಗಳು, ಸಾಹಿತ್ಯದ ಮೂದರಿ, ವಯಸ್ಕರ ಅಭಿವೃ ದ್ಧಿಗೆ ಬೇಕಾಗುವ ಶಿಕ್ಷಣ ವಿಧಾನ ಮುಂತಾದುವನ್ನು ಪತ್ತೆ ಮಾಡಲು ಸಾ ಧ್ಯವಾಗುತ್ತದೆ. ಈ ಪ್ರಾಯೋಗಿಕ ಯೋ ಜನೆಗಳಿಂದ ಹಳಿಸಿದ ಅನುಭವದಿಂದ ವ ಯಸ್ಕರ ಶಿಕ್ಷಣ ಪ್ರಸಾರಕ್ಕೆ ಬೃಹತ್ ರಾಷ್ಟ್ರೀಯ ಕಾರ್ಯಕ್ರಮ ರೂಪಿಸಲು ಬಹುದು. ಈ ದಿಸೆಯಲ್ಲಿ ಕೇಂದ್ರ ಸರ್ಕಾ ರ ರಾಜ್ಯ ಸರ್ಕಾರಗಳಿಗೆ ವಿ.ಶ್ವ ಸ್ವ ಯಂ ಸೇವಾ ಸಂಸ್ಥೆಗಳಿಗೆ ಸಹಾಯ ಮಾಡುತ್ತದೆ.

ಸಾಕ್ಷರತೆ ಮತ್ತು ರಾಷ್ಟ್ರೀಯ ಸೇವೆ

ವಯಸ್ಕರ ಶಿಕ್ಷಣ ಪ್ರಸಾರಕ್ಕಾಗಿ ವಿ ಶ್ವವಿದ್ಯಾಲಯ ಮತ್ತು ಕಾಲೇಜು ವಿ ದ್ಯಾರ್ಥಿಗಳನ್ನು ರಾಷ್ಟ್ರೀಯ ಸೇವಾ ಕಾ ರ್ಯಕ್ರಮದ ಅಶ್ರಯದಲ್ಲಿ ಬಳಸಿಕೊಳ್ಳ ಲು ಯೋಚಿಸಲಾಗುತ್ತದೆ. ಇದರಿಂದ ವಿ ದ್ಯಾರ್ಥಿ—ವಿದ್ಯಾರ್ಥಿನಿ ಸಮುದಾಯವನ್ನು ರಾಷ್ಟ್ರ ಸೇವೆಯಲ್ಲಿ ತೊಡಗಿಸಿದಂತಾಗುತ್ತದೆ.

ಈ ರಾಷ್ಟ್ರೀಯ ಪ್ರಯತ್ನದಲ್ಲಿ ನ ಮೂರು 23ಲಕ್ಷ ಶಿಲೆ ರಾತ್ರೀಜುಗಳ ಶಿಕ್ಷಣಾ ಸ್ವಯಂ ಸೇವಕರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಇವರು ಸಾಕ್ಷರತಾ ಚಳುವಳಿಯಲ್ಲಿ ತೊಡಗಿರುವ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಮಾರ್ಗದರ್ಶನ ನೀಡಬೇಕಾಗುತ್ತದೆ. ಈ ರೀತಿ ಶಿಕ್ಷಕರು ಬೃಹತ್ ಯೋಜನೆಯು ಪ್ರವರ್ತಕರಾಗುತ್ತಾರೆ. ನಾನು ಭಾರತೀಯ ವಿಶ್ವವಿದ್ಯಾ ಲಯಗಳ ಉಪಕುಲಪತಿಗಳಿಗೆ ಮನವಿ ಮಾಡಿಕೊಂಡಿದ್ದೇನೆ. ಈ ಕಾರ್ಯಕ್ರಮ ಪ್ರಗತಿಗೆ ವಿಶ್ವವಿದ್ಯಾಲಯ ಧನಸಹಾಯ ಆಯೋಗ ಸಹಾಯ ಮೊಗ ಪುದೆಂಬ ನಂ ಬಿಕೆ ನನಗಿದೆ.

ಸ್ವಯಂ ಸೇವಾ ಸಂಸ್ಥೆಗಳ ಪಾತ್ರ

ದೇಶಕ್ಕಿರುವ ವಿಶ್ವಯಂ ಸೇವಾ ಸಂಸ್ಥೆ ಗಳು ವಿವಿಧ ಕಾರ್ಯಕ್ರಮವನ್ನು ಆಸ ಕ್ತಿಯಿಂದ ಕೈಗೆತ್ತಿಕೊಳ್ಳಲು ಸಿದ್ಧವಾಗಿವೆ. ವಯಸ್ಕರ ಶಿಕ್ಷಣ ಕಾರ್ಯ ಕ್ರಮವನ್ನು ಒಂದು ಸರ್ಕಾರಿ ಯೋಜನೆ ಯನ್ನಾಗಿ ಮಾಡಿಕೊಳ್ಳಕೂಡದು. ವಯಸ್ಕರ ಶಿಕ್ಷಣ ಜನತಾ ಕಾರ್ಯಕ್ರಮ. ಶಿಕ್ಷಣ, ಸ ಮಾಜ ಕಲ್ಯಾಣ, ಮಹಿಳಾ ಕಲ್ಯಾಣ ಮುಂತಾದ ಕಾರ್ಯದಲ್ಲಿ ನಿರತವಾ ಗಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಉದಾರ ಸಹಾ ಯವೆನಿಸಿಗಬೇಕಾಗಿದೆ.

ಕೇಂದ್ರ ಶಿಕ್ಷಣ ಖಾತೆ ವಯಸ್ಕರ ಶಿ ಕ್ಷಣ ಕಾರ್ಯದಲ್ಲಿ ನಿರತವಾಗಿರುವ ಸ್ವ ಯಂಸೇವಾ ಸಂಸ್ಥೆಗಳಿಗೆ ಉದಾರ ಸಹಾ ಯವೆನಿಸಿಗಲು ಹೊಸ ಯೋಜನೆ ರೂಪಿಸಿ ದೆ. ಚತುರ್ಥ ಯೋಜನೆಯಲ್ಲಿ ಈ ಕಾರ್ಯ ಕ್ರಮಕ್ಕೆ ಆದ್ಯತೆ ನೀಡಲಾಗಿದೆ. ಈ ಮಾದರಿಯಲ್ಲಿ ರಾಜ್ಯ ಸರ್ಕಾರಗಳು ಕಾರ್ಯಕ್ರಮ ರೂಪಿಸಬೇಕಾಗಿದೆ. ಸಾ

(ಉತ್ತರದನೇ ಪುಟ ನೋಡಿರಿ)

ಸುಖ ಸಂಪನ್ನರು!

ಲೇಖಕಿ: ಶ್ರೀಮತಿ ಯಶೋದಾ ಎನ್. ಜೆನ್ನಿ.

ಸರಸುವಿನ ಸಂಸಾರ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿರುವ ಗುಡಿಸಲಿಗೆ ಬಂದು ಆರೇಳು ತಿಂಗಳುಗಳಾಗಿರಬಹುದು. ಸರಸು ಅವಳ ಗಂಡ ಮಕ್ಕಳು ಲಕ್ಷ್ಮಿಯಲ್ಲಿ ಅಭಿಮಾನ ಹುಟ್ಟಿ ಮೂರಾರೇ ಇರುವ ಅವರ ಸುಟ್ಟ ಸಂಸಾರ ನೆಮ್ಮದಿಯಿಂದಲೇ ಇತ್ತೆನ್ನಬಹುದು. ಸರಸ ನಮ್ಮ ಮನೆಯಲ್ಲಿ ಕೆಲಸಗಳೇನಾದರೂ ಇದ್ದಾಗ ಸಂತೋಷದಿಂದ ಸಹಾಯ ಕಲ್ಪಿಸಿ ಪ್ರತಿಫಲವನ್ನು ಪಡೆದ. ಹೋಗುತ್ತಿನ್ನೆ ಳು. ಲಕ್ಷ್ಮಿಗೆ ಮದುವೆಯಾಗಿ ಮೂರು ವರ್ಷಗಳಾಗಿತ್ತಂತೆ. ಈಗ ಲಕ್ಷ್ಮಿಗೆ ಸಾಧಾರಣ ಇಪ್ಪತ್ತು ವರ್ಷಗಳಾಗಬಹುದು.

ಅಂದು ನಧ್ಯಾಹ್ನ ಅಕಸ್ಮಾತ್ ಅವರ ಮನೆಯಲ್ಲಿ ಅಳು, ಬೊಬ್ಬೆ ಕೇಳಿಸಿದಾಗ ನಾನು ಗಾಬರಿಯಿಂದ ಎದ್ದು ಅತ್ತ ಕೋಣೆ, ಆಗ ಅಲ್ಲಿ ಕಾಲ್ಕಾರು ಮಂದಿ ಹೆಂಡತರು, ಹೆಂಗಸರು ಸೇರಿ ಗಟ್ಟಿದಾಗಿ ಮೂಕರೋದನ ಮಾಡಿಕೊಳ್ಳುತ್ತಿದ್ದರು. ಸರಸು ಮತ್ತೆ ಲಕ್ಷ್ಮಿ ಗೋಳೋ ಎಂದು ರೋದಿಸುತ್ತಿದ್ದಳು. ಲಕ್ಷ್ಮಿಯಂತೂ ಗೋಡೆಗೆ ಕಪಾಲ ಬಡಿದುಕೊಳ್ಳುತ್ತಾ ಬೊಬ್ಬೆ ದುಃಖಿಸ್ತಿದ್ದಳು. ಮತ್ತೊಬ್ಬರು ಹೆಂಗಸು ಅವಳನ್ನು ಹಿಡಿದುಕೊಂಡು ಸಮಾಧಾನ ಪಡಿಸುತ್ತಿದ್ದಳು. ಈ ವಿಚಿತ್ರ ಪ್ರಸಂಗದಲ್ಲಿ ನಾನೇನು ಮಾಡಬೇಕೆಂಬುದೇ ತೋಚದೆ ಕಂಗಾಲಾಗಿ ಮೂಕ ಪ್ರೇಕ್ಷಕಳಾಗಿ ನಿಂತಿದ್ದೆ. ಅವರೆಲ್ಲರ ಗಲಿಬಿಲಿಯ ಮಾತುಕತೆ ಧಡುವೆ ಮುಖ್ಯ ವಿಷಯ ತಿಳಿಯಲು ಸುಮಾರು ಅರ್ಧ ಗಂಟೆಯೇ ಬೇಕಾಯಿತು.

ಲಕ್ಷ್ಮಿಯ ಗಂಡ ಕಿಟ್ಟು ಏಳೆಂಟು ದಿನಗಳಿಂದ ಮನೆಗೆ ಬಂದಿಲ್ಲವಂತೆ. ಅತ ಒಮ್ಮೆಯೂ ಹೀಗೆ ಮನೆಯಲ್ಲಿ ಹೇಳದೆ ಎಲ್ಲಿಗೂ ಹೋದ ದಿಲ್ಲವಂತೆ. ಆದರೂ ಬಂದಾನು ಎಂಬ ಕಿರೀತ್ಯೆಯಿಂದಲೇ ಇಷ್ಟು ದಿನಗಳನ್ನೂ ಕಳೆದಿದ್ದರು. ಆದರೆ ಇಂದು ಆತ ಎಲ್ಲಿಗ್ಕೇ ಕೊಲೆಯಾಗಿದ್ನೆ ಎಂದು ಆವನ ಗಾಡಿದಾರರೋ ದೂಪೀತನೆದೋ ಹೇಳಿದರಂತೆ. ಆದರೆ ಎಷ್ಟು, ದೂರಾಗು, ಹೇಗೆ ಎಂಬ ವಿಷಯ ಮಾತ್ರ ತಿಳಿಯುದು. ಒಬ್ಬೊಬ್ಬರು ಒಂದೊಂದು ನಿಶ್ಚಯವಾಗಿ ಕಲ್ಪನೆಯ ಕುದುರೆಯನ್ನೋಡಿಸಿ ತಮಗೆ ತಿಳಿದಂತೆ ಅಣ್ಣಿಸಿ ಸ್ತಿದ್ದರೆ.

ಎಂಟು ದಿನಗಳ ಹಿಂದೆ ಕಾರ್ಖಾನೆಯ ಕೆಲಸದಿಂದ ರಾತ್ರಿ ಹಿಂತಿರುಗಿ ಬರುತ್ತಿದ್ದಾಗ ಜತೆಯಲ್ಲಿದ್ದ ನಾಲ್ವರೊಂದಿಗೆ ಕುಡಿದು ಜಗಳವಾಡಿಕೊಂಡುದನ್ನೂ ಆ ಮೇಲೆ ಅವನನ್ನು ಉಳಿದ ನಾಲ್ವು ಮಂದಿಯೂ ಹೊಡೆದು ಓಡಿಸಿಕೊಂಡು ಹೋದುದನ್ನೂ ನೋಡಿದವರಿದ್ದಾರಂತೆ. ಆ ಮೇಲೆ ಅವರು ದಟ್ಟವಾದ ಅರಣ್ಯದಲ್ಲಿ ಕಣ್ಮರೆಯಾದರೆಂದೂ ಅಂದಿನಿಂದ ಕಿಟ್ಟನ ಪತ್ತೆಯೇ ಇಲ್ಲವೆಂದು ತಿಳಿಯಿತು. ಆದಕ್ಕಾಗಿಯೇ ಇವರೆಲ್ಲರೂ ಒಟ್ಟಾಗಿ ಗದ್ದಲ ಎಬ್ಬಿಸಿದ್ದರೆ.

ಮರುದಿನ ಸರಸು ಕಣ್ಣೀರಿಗರೆಯುತ್ತಾ ತನ್ನ ಮಗಳ ದೌರ್ಭಾಗ್ಯಕ್ಕಾಗಿ ಸಂಕಟ ಪಡುತ್ತಾ ಅಳಿಯನ ಗುಣಗಾನ ಮಾಡುತ್ತಾ ನಮ್ಮ ಮನೆಯಲ್ಲಿ ಕುಳಿತಾಗ ನಾನು ಹೇಳಿದೆ.

"ಅಲ್ಲ ಕರಸೂ, ಅಷ್ಟಕ್ಕೂ ಈಗ ಆತ ಕೊಲೆಯಾಗಿದ್ದನ್ನು ಕಣ್ಣಾರೆ ನೋಡಿದವರು ಯಾರಿದ್ದಾರೆ? ಏನಾದರೂ ಬೇಸರದಿಂದ ಹೋಗಿರಬಹುದು. ಇನ್ನೊಂದೆರಡು ದಿನಗಳಲ್ಲಿ ಹಿಂದಿರುಗಿ ಬರಬಹುದು"

"ಇಲ್ಲವಮ್ಮ ಅವಷ್ಟು ಹಾಗೆಲ್ಲ ಹೋಗುವನಲ್ಲ. ಹೇಳದೆ ಎಲ್ಲಿಗೂ ಹೋದವನಲ್ಲ. ಮಾಮ್ಮಿ ನನ್ನ ಹೆಣೆಬರಹ. ಅಯ್ಯೋ.. ಆ ನಮಗು ನಿನ್ನೆಯಿಂದಲೂ ಅನ್ನ ನೀರು ಮುಟ್ಟದೆ ಕುಳಿತಿದೆ. ಅವಳ ದುಃಖ ನೋಡಲು ಕಣ್ಣಿಂದಾಗುವುದಿಲ್ಲ" ಎನ್ನುತ್ತಾ ಸರಸು ಕಣ್ಣೀರೊರೆಸಿಕೊಂಡಳು. ಹೌದು, ಪತಿಯ ಆಕಾಲ ಅಕಸ್ಮಿಕ ಮರಣದಿಂದ ಶೋಕಿಸುತ್ತಿರುವ ಪತ್ನಿಯನ್ನು ಸಾಂತ್ವನಗೊಳಿಸುವ ಕಾರ್ಯ ಯಾರಿಂದಾದೀತು? ಅದೂ ಆ ಮರಣವಾದರೂ ಎಂತಹುದು? ಎಲ್ಲಿಯೋ ಪಂಡರ ಕೈಯಲ್ಲಿ ಸಿಕ್ಕಿ ಶವವೂ ಪತ್ತೆಯಾಗದೆ ಉಂಟಾದ ದುರ್ಮರಣ? ಎಂತಹ ಕಲ್ಲೆದೆಯನ್ನೂ ನಡಗಿಸುವಂತಹ ಘಟನೆ ಎಂದ ಮೇಲೆ ತಾರುಣ್ಯದ ಲಕ್ಷ್ಮಿ ತನ್ನಿನಿಯನ ಅಗಲಿಕೆಯನ್ನು ಹೇಗೆ ಸಹಿಸಿಕೊಂಡಾಳು?

ಅನೇಲೆ ಅವ'ಲ್ಲ ಸೇರಿ ದೂರದ ಪೋಲೀಸ್ ಠಾಣೆಗೆ ದೂರಿತ್ತರು. ಹುಡುಕುವಲ್ಲೆಲ್ಲ ಹುಡುಕಿಸಿದರು. ಕೊನೆಗೂ ಕಿಟ್ಟನ ಪತ್ತೆಯೂ ಹೊರಗಿಲ್ಲ. ಲಕ್ಷ್ಮಿಯ ಆಳವಿನ ಮೂಲ ಅಂತ್ಯವಿರಲಿಲ್ಲ. ಆಕೆ ಕೋಣೆಯೊಳಗಿಂದ ಹೊರಗೆಯೇ ಬರುತ್ತಿರಲಿಲ್ಲ. ನಾನು ಒಂದೆರಡು ಸಲ ಅವಳನ್ನು ಸಮಾಧಾನ ಪಡಿಸ ಬೇಕೆಂದು ಅವಳ ಮನೆಯ ಹತ್ತಿರ ಹೋದೆ. ಆದರೆ ಕಲ್ಲಾಗರಗುವಂತೆ ಹೃದಯ ಬಿರಿಯುವಂತೆ ಗೋಳಾಡುತ್ತ ಅವಳನ್ನು ಸಮಾಧಾನಗೊಳಿಸುವ ಪರಿಯನ್ನರಿಯದೆ ಮನೆ ಸೇರಿದೆ.

ಮೊದಲು ಯಾವಾಗಲೂ ಕಸನ್ಮಖಿಯೊಗಿರುತ್ತಿದ್ದ ಕಪ ವಿಷ ಮೊಗವೀಗ ದುಃಖದಿಂದ ಬಾಡಿಕೊಂಡಿರುತ್ತಿತ್ತು. ಲಕ್ಷ್ಮಿಯಂತೂ ಮನೆಯಿಂದ ಹೊರಗೇ ಬರುತ್ತಿರಲಿಲ್ಲ. ರಾತ್ರಿಯೂಟ ಅವಳು ಬೇಕೇನಾದರೂ ಮಾಡಿ ಕೊಂಡಾಳೆಂಬ ಭೀತಿಯಿಂದ ತಾಯಿ ಸರಸು ತನ್ನ ಮಗಳಿಗೆ ಕಾವಲಾಗಿರುತ್ತಿದ್ದಳು. ನನಗೆ ಲಕ್ಷ್ಮಿಯ ಮೇಲೆ ಅಪಾರ ಮರುಕ, ಈ ವಯಸ್ಸಿನಲ್ಲಿ ಅವಳಿಗೊದಗಿದ ಅನಿರೀಕ್ಷಿತ ಆಪತ್ತಿಗಾಗಿ ನೃಥೆ, ಅದರಿಂದಿಗೇ ಮುಗ್ಧ ಹುಡುಗಿ ಲಕ್ಷ್ಮಿ ಪತಿಯನ್ನು ಅಪರಿಮಿತವಾಗಿ ಪ್ರೀತಿಸುತ್ತಿದ್ದಳೆಂದನ್ನು ನೋಡಿ ಆಶ್ಚರ್ಯವೂ ಉಂಟಾಗುತಿತ್ತು. ಏಕೆಂದರೆ ಅವಳಿಲ್ಲ ಏನೇ ಅಂದರೂ ಕಿಟ್ಟನ ಸ್ವಭಾವ ಒಳ್ಳೆಯದಿರಲಿಲ್ಲವೆಂಬುದು ಎಲ್ಲರಿಗೂ ಗೊತ್ತಿತ್ತು. ದುಡಿದ ದನ್ನೆಲ್ಲ ಕುಡಿತಕ್ಕೇ ಸುರಿದು ಆ ಅವ ಲಿನಲ್ಲಿ ಮನೆ ಸೇರುವ ಆತನಿಂದ ಲಕ್ಷ್ಮಿಗೆ ಸಿಗುತ್ತಿದ್ದುದು ಬೈಗಳು ಪತ್ತ ಹೊಡೆತದ ಉಡುಗೊರೆಗಳೇ ಆದರೆ ಅವರೆಲ್ಲಗೆ ದೃಷ್ಟಿಗುಲ್ಲಿ ಆದಕ್ಕೇನೂ ಮಹತ್ವವಿರಲಿಲ್ಲ ಎನ್ನಿ. ಆದರೂ ಲಕ್ಷ್ಮಿ ಅಂತಹ ಪತಿಯನ್ನು ಇಷ್ಟೊಂದು ಅಂತಃಕರಣ ಪೂರ್ವಕವಾಗಿ ಪ್ರೀತಿಸುತ್ತಿದ್ದಾಳೆ ಎಂಬುದರಿಂದ ಕನಗೆ ಆಶ್ಚರ್ಯವೆನಿಸತೊಡಗಿತ್ತು. ಆಕೆಯ ಪತಿವ್ರತಾ ಧರ್ಮ, ತ್ಯಾಗ, ನಿಷ್ಠೆಗಳನ್ನು ನೋಡಿ ಆಭಿಮಾನ ಉಂಟಾಗುತ್ತಿತ್ತು. ಹೀಗೆ ದಿನಕ್ಕೊಮ್ಮೆಯಾದರೂ ನಾನು ಲಕ್ಷ್ಮಿಯ ಸಂಸಾರದ ಬಗ್ಗೆ ಯೋಚಿಸಿ ತಲೆ ಕೆಡಿಸಿಕೊಂಡು ಚಿಂತಿಸುತ್ತಿದ್ದೆ.

ದಿನಗಳುರುಳಿದವು. ಮೂರು ತಿಂಗಳ ಮೇಲೆ ಸರಸು ನಮ್ಮ ಮನೆಗೆ ಬಂದಾಗ ಲಕ್ಷ್ಮಿಯೂ ಜತೆಯಲ್ಲಿದ್ದುದನ್ನು ನೋಡಿ ನಾನು ವಿಸ್ಮಯಗೊಂಡೆ. ಏಕೆಂದರೆ ಅವಳ ಅಪಾರ ಶೋಕದಲ್ಲಿ ಅವಳನ್ನು ಮೂಕನಾಡಿಸುವ ಸುಯೋಗವೇ ಫಲಗೊಡಗರಲಿಲ್ಲ. ಹೊರಗಿನ ಜಗಲಿಯಲ್ಲಿ ತಾಯಿಯೊಂದಿಗೇ ಕುಳಿತ ಮಬಳನ್ನು ನಾನು ಹೇಗೆ ಮಾತನಾಡಿಸಲಿ ಎಂದು ಯೋಚಿಸುತ್ತಲ್ಲೇ ಸರಸು ವಾತನಾಡಿದಳು.

"ಇನ್ನೊಂದು ತಿಂಗಳು ನೋಡ್ರೇವಮ್ಮ. ಅವಷೊಂದು ಖಂಡಿತ ಕೋದೆ ಎನ್ನುವ ಸಂಯೊದ ವರ್ತಮಾನವಾದರೂ ಸಿಗುತ್ತಿದ್ದರೆ ನಕ್ಷಗೆ ಯೋಚನೆಯಿತ ಲಿಲ್ಲಾ."

"ಅಂದರೆ....?"

"ಲಕ್ಷ್ಮಿಗೆ ಇನ್ನೊಂದು ವದುವೆ ನಿಶ್ಚಯ ಮಾಡ್ದೀನೆ." ಯಾವ ವಿಶೇಷವೂ ಇಲ್ಲದ ಧ್ವನಿದಲ್ಲಿ ಸರಸು ಘೋಷಿಸಿದಾಗ ನಾನು ವಿಸ್ಮಯದಿಂದ ಮೂಕಳಾದೆ ಅವರಜಾತಿಯಲ್ಲಿ ಪುನರ್ವಿವಾಹವಾಗುವುದು ರೂಢಿಯಲ್ಲಿದ್ದರೂ ಇಷ್ಟು ಬೇಗನೇ ಈಕೆ ನಿರ್ಧಾರಕ್ಕೆ ಬಂದುದನ್ನು ನನ್ನಿಂದ ನಂಬಲಿಕ್ಕಾಗಲಿಲ್ಲ.

"ನನಗೀಗ ಒಂದೇ ದುಃಖ ಅಮ್ಮ"

ನಾನು ಮಾನವಾಗಿ ಅಲಿಸಿ ತ್ತಿದ್ದೆ.

"ಅವಷ್ಟು ಖಂಡಿತ ಸತ್ತ ಅಂತ ನಿಶ್ಚಯವಾಗಿದ್ದರೆ ರಗಳೆಯಿರಲಿಲ್ಲ."

ಓ... ಲಕ್ಷ್ಮಿಯ ಗಂಡ ಸತ್ತನೆಂಬ ನಿಶ್ಚಯ ವಾತ್ರೆಗಾಗಿಯೇ ಇವರು ಕಾಯುತ್ತಿದ್ದಾರೆಯೇ?

ಕಾತರತೆಯಿಂದ ಪತಿಗಾಗಿ ಹಂಬಲಿಸುತ್ತಾ ಕಾದಿರುವ ಶೋಕಾತ ವರ್ತಿ ಲಕ್ಷ್ಮಿ ಇನಕೈಪ್ಟಿಸ್ಟೂಳೆ? ನಾನು ಕುತೂಹಲದಿಂದ ಲಕ್ಷ್ಮಿಯ ಮೊಗ ದಿಟ್ಟಿಸಿದೆ. ಇಂದು ಅವಳ ಮೊಗ ಬಾಡಿ ಕಂದಿರಲಿಲ್ಲ. ಪ್ರಸನ್ನತೆಯಿಂದ ಅರಳಿತ್ತು. ಆಕೆ ನೋಡಲವಾದುವಷ್ಟಿತ್ತು ಲಜ್ಜೆ ಯಿಂದನಸುಬಾಗಿ ನಖಾಗ್ರತನ್ನು ಕೆಂದಾವರೆಯಸ್ಸಾಗಿಸಿಡಿಕೊಂಡು ಭವಿಷ್ಯದ ಸುಂದರ ಕನಸನ್ನು ಕಾಣುವವಳಂತೆ ಕಂಡು ಬಂದಳು.

ಕೇವಲ ಮೂರು ತಿಂಗಳ ಹಿಂದೆ ಅವರ ವನೆಬುಲ್ಲುಂಟಾದ ಗಡ್ಡಲ, ಗೋಳು ಇನ್ನೂ ನನ್ನ ಕಿವಿಯಲ್ಲಿ ಪ್ರತಿಧ್ವನಿಸ ವಂತಿತ್ತು. ಆದರೆ ಇನ್ನೊಂದು ತಿಂಗಳೊಳಗೆ ಕೇಳಲಿರುವ ಮಂಗಳವಾದ್ಯ ಆ ಕಹಿ ನೆನಪನ್ನು ಸಲಭವಾಗಿ ಮರೆಸಿ ಬಿಡಲಾರದೇನೋ! ಇದು ಸಂಭವವೇ?

ಅದೃಷ್ಟ ಇವರ ಪಾಲಿಗೆ ಎಷ್ಟೊಂದು ಸರಳ ಸುಂದರ ಎಂದು ಯೋಚಿಸಿದಾಗ ಇದೆಂತಹ ಜೀವನ? ಎಂಬ ಪ್ರಶ್ನೆಯೊಂದು ಮಿದುಳನ್ನು ಕೊರೆಯುತ್ತಿತ್ತು.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಕಾರಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಫೋನ್ : 526

ಸ್ಥಾಪನೆ: 1921

ಸಂಪುಟ ೪೯
ಸಂಚಿಕೆ ೫೦
VOL. 49
No. 50

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೨೭—೮—೧೯೭೦

ಸ್ಥಾಪಕರು:
ದಿ| ಎ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ ರೂ. 10/-

Advt. Rate Rs. 3/- per colm. cm.

ಆಸ್ಪತ್ರೆಗಳಲ್ಲಿ ಅವ್ಯವಸ್ಥೆ

ಮೂಢವೀಡುತೆಯೂ ಕ್ಷಣ ಕ್ಷಣಕ್ಕೆ ಮಿಡಿದುಬಿಡುತ್ತಿರುವ ಪಡಾ ದೇಹುಲಗಳಾಗಿರ ಬೇಕಾದ ನಮ್ಮ ಆಸ್ಪತ್ರೆಗಳು ಪರಕ ಸಮೃಶ ಯೂಪನೆಯ ಫಿಲಯಗಳಾಗಿವೆ ಎಂಬ ದೂರು ಬಹಳ ದಿನಪಕಂದ ಕೇಳಿ ಬರುತ್ತಿದೆ. ಮಂತ್ರಿಗಳ ವಸಿತೆ ಪೊರುಡ ಳು ಹೋಗುತ್ತಿವೆ-ಆದರೆ ಪರಿಸ್ಥಿತಿಯಲ್ಲಿ ಸ ಧಾರಣೆಗಳು ಕಂಡುಬರುತ್ತಿಲ್ಲ. ರೋಗಿಗಳನ್ನು ಅನುಕಂಪದಿಂದ, ಅಂತಃಕರಣ ಪೂರ್ವಕವಾಗಿ ನಡೆಸಿಕೊಳ್ಳುವ ಪ್ರವೃತ್ತಿಗಳು ಆಸ್ಪತ್ರೆಗಳ ಸಿಬ್ಬಂದಿ ವರ್ಗದಲ್ಲಿ ಭರದಿಂದ ನೂಜುವಾಗುತ್ತಿರುವುದು ಎಲ್ಲರ ಅಭುಭವಕ್ಕೆ ಬಂದ ಪೂತ. ನಮ್ಮ-ವಿ ನಯ, ಸಹಾನುಭೂತಿಗಳ ಆಕರವಾಗಿರ ಬೇಕಾದ ಶಸ್ತ್ರಾಷಾ ವರ್ಗದವರು ಸಿಡು ಕು, ಪೊಂಡುತನ, ಔದಾಸೀನ್ಯ ಮತ್ತು ತಿರಸ್ಕಾರದ ಸಾಕಾರಮೂರ್ತಿಗಳಾಗಿರು ವುದೇ ಹೆಚ್ಚು ಜಪಕ್ಕೆ ವೇದ್ಯ. ಈ ವೇದ ನೆಳು ನಿವಾರಣೆ ಮಾಡುವುದು ತೀರ ಅ ಸಾಧ್ಯವೆನಿಸ ವಸ್ತು ಪುಟ್ಟಿಗೆ ಆಸ್ಪತ್ರೆ ಯಲ್ಲಿ ಕೆಲಸ ಮಾಡುವವರ ಮನೋಧರ್ಮ ಈಗಿನ ದಿನಗಳಲ್ಲಿ ಪಾವರ್ತನೆಗೊಂ ಡಿದೆ. ರೋಗಿಗಳಿಗೆ ಉತ್ತಮ ಆಹಾರದ ಪೂರೈಕೆಯೂಗುತ್ತಿಲ್ಲವೆಂಬ ದೂರನ್ನು ಬ ಹಳ ದಿನಪಕಂದ ಕೇಳುತ್ತಿದ್ದೇನೆ. ಇದರ ಪರಿವೂರ್ಜನೆಗೆ ಮಾಡಿದ ಪ್ರಯತ್ನವೂ ಫಲಪ್ರದವೆನಿಸಿಲ್ಲ. ರೋಗಿಗಳ ಅರೈಕೆಯ ಲ್ಲಿ ಅಳಡ್ಡಿ ಮತ್ತು ಉಪೇಕ್ಷೆಗಳು ಸಲ್ಲವು ಎಂಬ ಸತ್ಯವನ್ನು ಒಪ್ಪದಿರುವವರು ಅಧಿ ಕಾರಸ್ಥಾನದಲ್ಲಿಲ್ಲ—ಆದರೆ ಕಾರ್ಯಾಚರ ಣೆಯಲ್ಲಿ ಮಾತ್ರ ಈ ಸತ್ಯ ಪ್ರತಿಫಲಿಸುತ್ತಿ ಲ್ಲ. ಈಚೆಗೆ ಕೋಲಾರ, ಧಾರವಾಡ ಮುಂತಾದೆಡೆ ಆಕಸ್ಮಿಕ್ಷೆವಾಗಿ ನಡೆಸಿದ ತಪಿಪೆಯ ಪರಿಣಾಮವಾಗಿ ಉಪಯೋಗಿ ಸಲು ಅನರ್ಹವೆನಿಸಿದ ಔಷಧಗಳ ಮತ್ತು ಇಂಜಕ್ಷನುಗಳ ಬಳಕೆ ಆಸ್ಪತ್ರೆಗಳಲ್ಲಿ ಆ ಪೂಜಾನವಾಗಿ ನಡೆಯುತ್ತಿರುವ ವಿಷ ಯವು ಬೆಳಕಿಗೆ ಬಂದಿದೆ. ಜನಸಾಮಾನ್ಯ ರು ಬಹಳ ವಿಶ್ವಗಳಿಂದ ಕೀಡುತ್ತಾ ಬಂದಿ ರುವ ದೂರು ಸತ್ಯವೆಂಬ ವಿಜಾರದಿಂದ ಇ ಲಾಖೆಯು ಮೇಲಧಿಕಾರಿಗಳು ದಿಗ್ಭ್ರಮೆ ಬೊಂಡಿರುವುದು ಸಹಜ. ಇದು ಒಂದೆರ ಡು ಆಸ್ಪತ್ರೆಗಳಿಗೆ ಮಾತ್ರ ಸೀಮಿತವಾದ ಜಾಡ್ಯವಲ್ಲ ಎಂದು ಈ ಸಂದರ್ಭದಲ್ಲಿ ಹೇ ಳಬೇಕಾಗುತ್ತದೆ. ಜನತೆಯು ಆರೋಗ್ಯಕ್ಕೆ ಮೂಲಕವಾದ ಔಷಧಿಗಳ ಉಪಯೋಗವು ಆರೋಗ್ಯ ರಕ್ಷಣೆಗಾಗಿ ಜನರು ಆಶಯಿ ಸುವ ಆಸ್ಪತ್ರೆಗಳಲ್ಲಿ ಅಗತ್ಯವಿರುವುದು ತೀ ರ ಕೋಡಿನೀಯ. ಈ ವಿಷಯದಲ್ಲಿ ಇ ಲಾಖೆಯ ಕಟ್ಟುನಿಟ್ಟಿನ ತಪಿಪೆ ಕಂಡಿಕೆ, ಇಂತಹ ದುರ್ವ್ಯವಹಾರಕ್ಕೆ ಕಡಿವಾಣವನ್ನು ತಕ್ಷಣ ಹಾಕಬೇಕಾದುದು ನೂತ್ಯ. ಮೂ ಢವಲ್ಲದೆ, ಆಸ್ಪತ್ರೆಗಳಲ್ಲಿ ರೋಗಿಗಳನ್ನು ನಡೆಸಿಕೊಳ್ಳುವ ರೀತಿಯಲ್ಲಿ ಸುಧಾರಣೆ ಯನ್ನು ತರಲು ತಕ್ಕ ಕ್ರಮಗಳತ್ತು ಕೈ ಕೊಳ್ಳ ಬೇಕಾದುದೂ ಆಗತ್ಯ. ಕೇಲ್ಲನಿ ಪೆ ನಡೆಸುವ ಅಧಿಕಾರಿಗಳು ಸವಿಪದಲ್ಲಿ ಲ್ಲದಾಗ ಸಹ ಮಾನವೀಯ ಅನುಕಂಪ ದಿಂದ ರೋಗಿಕಳೊಡನೆ ಪಡೆದುಕೊಳ್ಳುವ ಮಧೋಭಾವವನ್ನು ಆಸ್ಪತ್ರೆಯ ಸಿಬಂದಿ ವರ್ಗ ಬೆಳಿಸಿಕೊಳ್ಳದೆ ಹೋದರೆ ಹೆಚ್ಚಿನ ಆಸ್ಪತ್ರೆಗಳು ನರಕ ಸದೃಶವಾಗಿವೆ ಎಂಬ ಇಂದಿನ ದೂರು ನಿಲ್ಲಲಾರದು. ಈ ವಿಷ ಯದಲ್ಲಿ ಮಂತ್ರಿಗಳಿಗಿಂತ ಹೆಚ್ಚಾಗಿ ಇ ಲಾಖೆಯ ಮತ್ತು ಆಸ್ಪತ್ರೆಯ ಮುಖ್ಯಾ ಧಿಕಾರಿಗಳು ನಿರ್ವಹಿಸಬೇಕಾದ ಜವಾಬ್ದಾ ಹೆಚ್ಚಿನದು. ದೈನಂದಿನ ಆಡಳಿತದಲ್ಲಿ ವಿ ಶೇಷ ದಕ್ಷತೆಯು ಮೂಡಿದಲ್ಲದೆ, ಪು ಸ್ಥಿತಿಯಲ್ಲಿ ಸುಧಾರಣೆಯೂಗುವುದು ದು ಸ್ತರ ಸತ್ಕೊಲೆಗಳನ್ನು ಕಳುಹಿಸಿದ ಮಾತ್ರಕ್ಕೆ ಎಲ್ಲವೂ ಸಸೂತ್ರವಾಗಿ ನಡೆ ಯುವುದೆಂಬ ಭ್ರಮೆಯನ್ನು ಯೂರೆಯಿಟ್ಟು ರೂ ಇಟ್ಟುಕೊಳ್ಳಲಾಗದು. ಸುತ್ತೋಲೆ ಗಳು ಕಸದ ಬುಟ್ಟಿಗೆ ಸೇರುವ ಇತರ ಕಾ ಗದ ಪತ್ರಗಳಿಗಿಂತ ಉತ್ಕೃವ ವಾದ ಪರಿ ಣಾಮವನ್ನು ಬೀರಲಾರವು. ಆದಕ್ಕಾಕೆ ಯು ಆಡಳಿತ ಯಂತ್ರದಲ್ಲಿ ತಾಂಡವವಾ ಡುವ ಇಂದಿನ ಪಾತಾವರಣ ದೂರವಾಗ ಬೇಕು. ತಪ್ಪಿಸ್ಥರಿಗೆ ರಕ್ಷಣೆ ಸಿಗುವ ಅವಕಾಶಗಳು ಇಲ್ಲದೆ ಹೋಗಬೇಕು. ಮೇಲಧಿಕಾರಿಗಳು ಕಣ್ಣಿದ್ದ ಕುರುಡರಂ ತೆ ಸಿಬಂದಿ ವರ್ಗದ ತಪ್ಪುಗಳನ್ನು ಕಣ್ಣು ಚ್ಚಿ ನೋಡುತ್ತ, ಕೊಡಿರ ಬೇಕಾದ ಪ್ರ ಮೇಯವೂ ತಪ್ಪಬೇಕು. ಜನಸೇವೆಯು ಪರಾಕಾಷ್ಠೆಯನ್ನು ಇಣಬೇಕಾದ ಪಾಣ ಗಳಿ ಆಸ್ಪತ್ರೆಗಳ ವಾತಾವರಣ ನಿರ್ಮ ಲವಾಗಬೇಕು. ಇದನ್ನು ಸಾಮಾನ್ಯ ಪ್ರಜೆ ಯು ಹಾರ್ದಿಕ ಆಪೇಕ್ಷೆ ಎಂಬುದಾಗಿ ಭಾ ವಿಸಬಹುದು. ಈ ಆಪೇಕ್ಷೆಯು ಇತರ ನೂರಾರು ಆಸೆಗಳಂತೆ ಹೆ.ಸಿ ಹೋದರೆ ಆಸ್ಪತ್ರೆಗಳು ಇದ್ದೂ ನಿಷ್ಪ್ರಯೋಜಕ ಮೂ ತ್ರವಲ್ಲು, ಅವುಗಳಿಂದ ಹಾಫಿಯೂಗುವ ಆ ಪಾಯವೂ ಉಂಟು. ವಿದೇಶೀಯರು ಮಿಶ ನರಿಗಳು ಜನರ ಒಲವನ್ನು ಸಂಪಾದಿಸಿದ ಮುಖ್ಯ ಮೂಗ್ರಗಳಲ್ಲಿ ರೋಗಿಗಳ ಶು ಶ್ರೂಷೆಯು ಫಿಲಿಸುಗಳಾದ ಆಸ್ಪತ್ರೆಗಳ ಸ್ಥಾಪನೆ ಅತಿ ವಶ್ಯಕ್ಕ. ಜನ ನಿರೀಕ್ಷಿಸಿ ದ ಮಟ್ಟದ ಔನ್ನತ್ಯವನ್ನು ಆಸ್ಪತ್ರೆಗಳು ಮುಟ್ಟಲು ಎಷ್ಟು ಕಾಲಬೇಕೋ ತಿಳಿಯ ದು—ಆಗಲಿ, ಆಸ್ಪತ್ರೆಗಳು ತಮ್ಮ ಮುಂ ದಿನ ಉದ್ದೇಶಗಳನ್ನೇ ಮರೆತು ನಿದ್ರಿಸು ವುದಕ್ಕೆ ಈ ಪ್ರಜಾತಂತ್ರದಲ್ಲಿ ಅವಕಾಶ ವಿರಬಾರದು. ಆಸ್ಪತ್ರೆಗಳ ಉಸ್ತುವಾರಿಯಲ್ಲಿ ತೊಡಗಿರುವ ಜಡತೆಯು ಜಾಡ್ಯ ದೂರ ವಾದರೆ, ಮತ್ತು ಸಿಬಂದಿಯು ಮಾನವೀ ಯ ನಡವಳಿಕೆಯನ್ನು ರೂಢಿಸಿಕೊಂಡರೆ ಅದನ್ನೇ ಶವ್ಯ ಭಾಗ್ಯವೆಂದು ಜನರು ಆತು ಕೊಳ್ಳುವಂತಾಗಿದೆ. ಈ ಅಲ್ಪ ಕೃಪ್ತಿಯು ದಿನಗಳಕ್ಕಾದರೂ ಶಾಶ್ವತ ಎಂದಿಗೆ ನೀರಿಕ್ಷೆ ಸೋಣ?

ಹೃದ್ಧಕೆ

ಈ ಸಂಚಿಕೆಯೊಡನೆ "ನವಯುಗ"ವು ತನ್ನ ೪೯ ವರ್ಷಗಳ ಜೀವಿತ ಕಾಲವನ್ನೆ ವ ಗಿಸಿ, ಮುಂದಿನ ಸಂಚಿಕೆಯಿಂದ ೫೦ ನೇ ವರ್ಷದ ಹೊಸ್ತಿಲಿನಲ್ಲಿ ಕಾಲಿಡಿಸು ತ್ತದೆ. ಒಂದು ಪತ್ರಿಕೆಯು ಸುವರ್ಣ ಮ ಹೋತ್ಸವವನ್ನು ಆಚರಿಸುವ ದಿಕ್ಕ ಬರು ವುದು ಪತ್ರಿಕಾ ಪ್ರಪಂಚದಲ್ಲಿ ಸಾಮಾನ್ಯ ಘಟನೆಯಲ್ಲ. ಪತ್ರಿಕೆಗಳ ಹುಟ್ಟು ಸಾವು ಆಕಸ್ಮಿಕ್ಕತೆಯಿಂದ ಈ ಉದ್ದೇಶದಲ್ಲಿ "ನವಯುಗ"ವು ತಾನು ದೀರ್ಘಕಾಲ ತ ನ್ನ ಉಪಯುಕ್ತ ಅಸ್ತಿತ್ವವನ್ನು ಕಾಯ್ದು ಕೊಂಡು ಬಂದಿರುವುದಕ್ಕೆ ಚುರಾದಾರರ ಬೆಂಬಲ, ಜಾಹೀರಾತುದಾರರ ಸಹಕಾರ ಮತ್ತು ಹಿತೈಷಿಗಳ ಪ್ರೋತ್ಸಾಹನೆ ಕಾ ರಣವೆಂಬುದನ್ನು ಈ ಸಂದರ್ಭದಲ್ಲಿ ನಾ ವೆ ಕೃತಜ್ಞತೆಯಿಂದ ಸ್ಮರಿಸಬೇಕಾದುದು ಧರ್ಮ. ಪ್ರಜಾಸಮಸ್ಯೆಗಳನ್ನು ರಾಷ್ಟ್ರೀ ಯ ದೃಷ್ಟಿಕೋಣದಿಂದ ವಿಮರ್ಶಿಸುವ, ರಾಷ್ಟ್ರೀಯ ವಿಕಾಸ ಕಾರ್ಯಕ್ರಮಗಳತ್ತ ಬೆಳಕು ಚೆಲ್ಲುವ ಮತ್ತು ಜನರಲ್ಲಿ ಉತ್ತ ಮ ಅಭಿರುಚಿಯನ್ನು ಬೆಳಸುವ ತನ್ನ ಕಾ ರ್ಯದಲ್ಲಿ "ನವಯುಗ"ವು ಇನ್ನು ಮುಂ ದೆ ಸಹ ಶ್ರದ್ಧಾವಂತ ಪ್ರಯತ್ನಗಳನ್ನು ಮುಂದುವರಿಸಲು ಕಂಕಣ ಬದ್ಧವಾಗಿದೆ ಎಂದು ನಾವು ಈ ಮೂಲಕ ಆಶ್ವಾಸನೆ ಯನ್ನು ನೀಡುತ್ತಾರೆರೊಡನೆ ಎಂದಿನಂತೆ ಮಿಗಿಲಾದ ಪ್ರೋತ್ಸಾಹ — ಸಹಕಾರವ ನ್ನು ಕೋರ ತ್ತೇವೆ.

ತಾಲೂಕು ಬೋರ್ಡು ಕಟ್ಟಿಡದ ಉದ್ಘಾಟನೆ

ಉಡುಪಿ ತಾಲೂಕು ಆಫೀಸ್ ಕಂಪಾಂಡಿ ನಲ್ಲಿ ಸುಸಜ್ಜಿತ ೩೨,೦೦೦ ರೂ. ವೆಚ್ಚದಲ್ಲಿ ರ ಚಿಸಲಾದ ಉಡುಪಿ ತಾಲೂಕು ಆಫೀಸ್ ಮಂಡಳಿಯ ನೂತನ ಕಟ್ಟಡವನ್ನು ಶಾ. ೬ ರಂದು ಮೈಸೂರು ರಾಜ್ಯದ ಲೋಕೋಪ ಯೋಗಿ ಇಲಾಖೆಯ ಸಚಿವ ಶ್ರೀ ಕೆ. ಲಕ್ಕಪ್ಪನವರು ಶ್ರೀ ಎಂ. ಮಧ್ವರಾಯರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು.

ಉಪಾಧ್ಯಕ್ಷರಾದ ಶ್ರೀ ಬಿ. ಸುಬ್ಬಣ್ಣ ಪೈ ಗೈಯವರು ಸ್ವಾಗತಿಸಿದರು. ಡಾ| ಯು. ಕೆ. ಆ ಚಾರ್ಯರು ಸಂಸ್ಥೆಗೆ ಸಚಿವರಿಗೆ ಮಾನಪತ್ರ ಸಲ್ಲಿ ಸಿದ ತಾಲೂಕು ಬೋರ್ಡು ಅಧಿಕ್ಕಾರಿ ಕಾ ರ್ಯಗಳಿಗೆ ಸರಕಾರದ ನೆರವು ಕೋರಿದರು. ಚೀ ಫ್ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಬಿ. ಕೇ ಶವ ಶೆಟ್ಟರು ಸಮಾರಂಭಕ್ಕೆ ಶುಭಕೋರಿ ಬಂದ ಸಂದೇಶಗಳನ್ನೋದಿದರು.

ಮೂಸ್ಯ ಸಚಿವರು ತಮ್ಮ ಉದ್ಘಾಟನಾ ಭಾ ಷಣದಲ್ಲಿ ಅಭಿವೃದ್ಧಿ ಮಂಡಳಿ ಮತ್ತು ಪಂ ಚಾಯತುಗಳ ಮೂಲಕ ಅಧಿಕಾರದ ವಿಕೇಂ ದ್ರೀಕರಣವಾಗಬೇಕೆಂದು ಸರಕಾರ ಬಯಸುತ್ತಿ ರುವ ಸಂದರ್ಭದಲ್ಲಿ ತಾಲೂಕು ಮಟ್ಟದ ಅಭಿವೃದ್ಧಿ ಕಾರ್ಯಗಳು ಅ ಭಿವೃದ್ಧಿ ಮಂಡಲಿ ಮತ್ತು ಪಂಚಾಯತುಗಳ ಮೂಲಕ ಆಗಬೇಕೆನ್ನುವ ದೃಷ್ಟಿಯಿಂದ ಕಂ ದಾಯದ ಪಡವನ್ನು ಈ ಸಾಲಿನಿಂದ ಸರಕಾರ ಕೈಗೊಂಡಿ ದೆ ಎಂದು ಹೇಳಿದರು. ಕೃಷಿ, ವಿದ್ಯೆ, ಹಾಗೂ ಇತ್ತೀಚೆಗೆ ಸ್ಥಳೀಯ ಅವಶ್ಯಕತೆಗಳನ್ನು ಪೂ ರೈಸುವಲ್ಲಿ ಅಧ್ಯಕ್ಷರೂ ಸಚಿವರೂ ಅಧಿಕಾ ರಿಗಳೂ ಹೆಚ್ಚುಕಾಲ ಕಳಪೆ ಪಡಬೇಕಾದ ಅಗತ್ಯವನ್ನು ತಿಳಿಸಿದರು. ಕೊನೆಯದಾಗಿ ಆದರು ವಿದ್ಯೆ, ವೈದ್ಯ ಮತ್ತು ಕೃಷಿ ಸಾರಿಗೆ ಸೌಕರ್ಯ ವಿಸ್ತರಣೆಯಲ್ಲಿ ಉಡುಪಿ ಅಭಿವೃದ್ಧಿ ಮಂಡಲಿಯು ಮೂರೋದ್ದೇಶವನ್ನು ಸಾಧಿಸಿ ಕೃತಾರ್ಥವೆನಿಸಿದೆಯೆಂದರು.

ಆಸ್ಪತ್ರೆಯ ಶ್ರೀ ಎಂ ಪದ್ಮರಾಜರು ಉಡುಪಿ ತಾಲೂಕಿನ ಅಭಿವೃದ್ಧಿ ಮಂಡಲಿಯು ಸರ್ವತೋ ಮುಖ ಅಭಿವೃದ್ಧಿ ಸಾಧಿಸಿದ್ದಕ್ಕಾಗಿಯೂ ವಿಶೇಷ ಇಂ ಧನ ಯೋಜನೆಗಳಿಂದ ಸಾಕಷ್ಟು ಲಾಭ ಪಡೆದಿರುವುದಕ್ಕಾಗಿಯೂ ಅಭಿನಂದಿಸಿದರು. ಆ ದು ಲೋಕಲ್ ಬೋರ್ಡಿನಲ್ಲಿ ೧೯೫೬ ರಲ್ಲಿ ಉಳಿದ ರೂ. ಹೆಚ್ಚಿನ ಮೊತ್ತವನ್ನು ಈ ಸಂಸ್ಥೆಗೆ ಸಂದಾಯ ಮಾಡಿದ್ದರು. ಆ ಮೊತ್ತವನ್ನು ಸಾಲಿಗ್ರಾಮದ ಶ್ರೀ ವಿಶ್ವೇಶ ತೀರ್ಥರು ಮತ್ತು ಪೇಜಾವರ ಶ್ರೀಗಳವರು ಸಂಸ್ಥೆಗೆ ಕೊಟ್ಟ ೭೫೦ ವರ್ಷಗಳಲ್ಲಿ ಕೃಷಿ ಉತ್ಪಾದಕ ಚಟು ವಟಿಕೆಗಳಿಗೆ ಧನ್ಯವಾದ ಸಮರ್ಪಿಸಿದರು.

ಬಿ. ಶಂಕರನಾರಾಯಣ ರಾಯರ ನಿಧನ

ಕಲಾವಿದರೂ ಕನ್ನಡ ಪಂಡಿತರೂ ವೀಣಾ ಪತ್ರಿಕೆಯ ಸಂಪಾದಕರೂ ವೀಣಾ ಮುದ್ರಣಾ ಲಯದ ಸ್ಥಾಪಕರೂ ಆಗಿದ್ದ ಬಿ.ಎಸ್.ನಾಡು ಶಂಕ ರನಾರಾಯಣ ರಾಯರು ಕೆಲವೇ ದಿನಗಳ ಅ ಸ್ವಸ್ಥತೆಯಿಂದಾಗಿ ತಾ. ೩೦-೭-೧೯೭೦ರಂದು ತಮ್ಮ ೮೧ನೇ ವಸಂದಲ್ಲಿ ನಿಧನರಾದರು. ದಿವಂಗತರು ನಾಟಕ ಕಲಾಭಿಮಾನಿಗಳಾಗಿದ್ದು ಸ್ವತ್ವ ಶಾಲಿ ನಾಟಕ ಕಂಪೆನಿಯೊಂದಿಗೆ ಮಡಿದಿದ್ದರಲ್ಲದೆ ಅ ನಂತರ ಮಾಲ್ಕಿ ಕಾರ್ಕಳಗಳಲ್ಲಿ ಸಂಗೀತ ಕ ಲಾ ಶಾಲೆಗಳನ್ನು ಕೆರೆದು ಹಾರ್ಮೋನಿಯಂ, ತಬಲಾವನ್ನು ಶಾಸ್ತ್ರೀಯವಾಗಿ ಕಲಿಸುತ್ತಿದ್ದರು. ಜನಂಕರ ಕನ್ನಡ ವಿದ್ವಾನ್ ಪರೀಕ್ಷೆ ಯಲ್ಲಿ ತೇಗಡೆ ಪೊಂದಿ ಶಿರ್ವ ಹಿರಿಯೂ ಶೈ ಸ್ಕೂಲಿನಲ್ಲಿ ಪ್ರಥಮ, ಕನ್ನಡ ಪಂಡಿತರಾದ ರು. ದ್ಯೋಹಿ, ಹರಿಜನೋದ್ಧಾರ, 'ಸಂತಸ ಪು, ಸ್ವರ್ಗಲಾ ಮೂಸ್ಯ ರ್ಯ, ಗುಂಡಿಪಡ್ಕಿಯ ಮೊ ದಲಾದ ನಾಟಕಗಳನ್ನು ಬರೆದು ಪ್ರಿಂಟಿಂಗ್ ಕಂ ದಲ್ಲಿ ಯಶಸ್ವಿಯಾಗಿ ಆಡಿಸಿ ಜನಪ್ರಿಯತೆಗ ಳಿಸಿದ್ದರು.

ಈ ಮಧ್ಯೆ ವೀಣಾ ಮುದ್ರಣಾಲಯವನ್ನು ಸ್ಥಾಪಿಸಿ ವೀಣಾ ಪತ್ರಿಕೆಯ ಸಂಪಾದಕತ್ವ ವಹಿಸಿ ಕೊಂಡರು. ಕೆಲ ವರ್ಷಗಳಲ್ಲಿ ಪತ್ರಿ ಕೆಯನ್ನು ನಿಲ್ಲಿಸಿ ಮುದ್ರಣಾಲಯವನ್ನು ಸಿ ರ್ವದಿಂದ ಬೆಳ್ತಂಗಡಿಗೆ ಬದಲಾಯಿಸಿದರೂ, ಆದರೂ ಶಿರ್ವದಲ್ಲಿ ನಡೆಯುತ್ತಿದ್ದ ನಡೆಯ ಬ್ಬದ ನಾಟಕಗಳಲ್ಲಿ ಸ್ವತಃ ಪಾತ್ರಧಾರಿಯಾಗಿ ಸುತ್ತಿದ್ದರು. ಶ್ರೀಯುತರ ಮರಣಕ್ಕೆ ಸಂಪಾದಕರ ಸಹಸ್ಪಂದನೆ.

ನಮ್ಮ ಸ್ವಾತಂತ್ರ್ಯ ಅಹಿಂಸಾತ್ಮಕ ಸಂಪಾದನೆಯೇ?

ಲೇಖಕರು : ಶ್ರೀ ಶಿ. ತಾ. ಶರ್ಮ.

ಈ ಪ್ರಶ್ನೆಗೆ ಉತ್ತರವನ್ನು ಜನರು ಕೊಡಬೇಕು! ಮತ್ತೆ ಜನರಿಂದಲೂ ಉತ್ತರವನ್ನು ಅಪೇಕ್ಷಿಸಬೇಕಾಗಿಲ್ಲ. "ಅಹಿಂಸಾ ಮಾರ್ಗ ಹಿಡಿದು ಸತ್ಯವನ್ನೆ ನಂಬಿ, ಹೋಡೆದಾಡಿ, ಸ್ವಾತಂತ್ರ್ಯವನ್ನು ಪಡೆದೆವು" ಎಂಬುದಾಗಿ ಜೆನ್ನು ಚಪ್ಪರಿಸಿ ಕೊಳ್ಳುವ, "ಸತ್ಯಸಂಧ"ರಾದ ನಾನೇ ಕೊಡುವ ಧೈರ್ಯವೂ ಪೂರ್ತಿಬೇಕು. ಪ್ರತಿಯೊಬ್ಬರೂ ತಮಗೆ ತಾನೇ ಉತ್ತರವನ್ನು ಕೊಟ್ಟುಕೊಂಡು ಆತ್ಮ ಶೋಧನೆ ಮಾಡಿಕೊಳ್ಳುವ ಸಮಯ ಇದು.

"ಮಾಡು ಅಥವಾ ಮಡಿ"—
ಗಾಂಧೀಜಿ

ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಸಭೆಸೇರಿ "ಭಾರತಬಿಟ್ಟು ಹೊರಡಿ" ನಿರ್ಣಯವಾಯಿತೆ ಮುಂಬಯಿಯಲ್ಲಿ ಆಗ ಗಾಂಧೀಜಿಯವರು ಮಾಡಿದ ಭಾಷಣದ ಸಾರವೆಲ್ಲ ನಿರ್ದೇಶಕ ಭಾಗದ ವಾಕ್ಯ -ಸಂಚ್ಯಾಕ್ಷರಗಳನ್ನು ಗಮನಿಸಬೇಕು.

ಈ ಕ್ಷಣದಿಂದ ಪ್ರತಿಯೊಬ್ಬ-ಗಂಡಸರಾಗಲೀ ಹೆಂಗಸರಾಗಲೀ-ಸ್ವತಂತ್ರರೆಂದು ಭಾವಿಸಬೇಕು. ನಾವು ಹೂರೂ ಈ ಸಾಮ್ರಾಜ್ಯಶಾಹಿಯ ಅಡಿಯಾಳುಗಳಲ್ಲ" ಎಂದು ತಿಳಿಯಬೇಕು. ನಾನು ಹೇಳುವ ಈ ಮಾತಿನ ಪ್ರಾಮುಖ್ಯವನ್ನು ಗಮನಿಸಿ. ಮಂತ್ರಿಪದಕ್ಕಾಗಲೀ, ಅಂತಹ ಇತರ ಪ್ರಯೋಜನ ಸಾಧಿಸಿಗಾಗಲಿ ನಾನು ವೈಸರಾಯರೊಂದಿಗೆ ಕೊನರಾಡುವುದಕ್ಕೆ ಹೋಗುವುದಿಲ್ಲ. ಪೂರ್ಣ ಸ್ವಾತಂತ್ರ್ಯಕ್ಕೆ ಎಳ್ಳಷ್ಟು ಕಡಿಮೆ ಹೂದರೂ ನಾನೆದರಿಂದ ತೃಪ್ತನಾಗುವವನಲ್ಲ....

ಮಾಡುವ ಇಲ್ಲವೆ ಮಡಿಯುವ

ಭಾರತವನ್ನು ಬಂಧನ ವಿಮುಕ್ತಗೊಳಿಸುವ ಇಲ್ಲವೆ ಈ ಪ್ರಯತ್ನದಲ್ಲಿ ಪ್ರಾಣಾರ್ಪಣ ಮಾಡುವ.

ಬಹಿರಂಗ ದಂಗೆಯ ಘೋಷಣೆ

1942ರ ಜುಲೈ 14ರಂದು ವರ್ಧಾದಲ್ಲಿ 'ಕಾರ್ಯಕಾರಿಣೀ ಸಮಿತಿ'ಯು ಅಧಿಕೃತಕ್ಕಾಗಿ ಪತ್ರಿಕಾ ಪ್ರತಿನಿಧಿಗಳಿಂದಿಗೆ ಮಾತನಾಡುವಾಗ ಗಾಂಧೀಜಿ, "ಮುಂಬರುವ ಸಂಘರ್ಷಣೆಯಲ್ಲಿ ಇಟ್ಟ ಹೆಜ್ಜೆ ಹಿಂದಿಡುವ ಮಾತೂ ಇಲ್ಲ, ಸಂಧಾನದ ಪ್ರಶ್ನೆಯೂ ಇಲ್ಲ ಇನ್ನೊಂದು ಅವಕಾಶ ಕೊಡೋಣವೆಂಬುದಿಲ್ಲವೇ ಇಲ್ಲ. ಪಕ್ಷೇಟ್ಟು, ಇದು ಬಹಿರಂಗ ದಂಗೆ" ಎಂಬುದಾಗಿ ಹೇಳಿದರು. ಇನ್ನೆರಡು ಉದ್ಗಾರಗಳಿಂದ ಸ್ಪಷ್ಟವಾಗಿದ್ದ ಅಂಶವೆಂದರೆ, ಕಾಂಗ್ರೆಸ್ಸು ಭಾರತದ ಬಿಡುಗಡೆಗಾಗಿ ಇನ್ನು ಹೆಜ್ಜೆಗಾಲ ಕಾದುವುದಿಲ್ಲ. ಸಾಮಪ್ರಯತ್ನ ಕರಕಾರಂದಿಗೆ ಕೊನರಾಟ ಮಾಡುವುದಿಲ್ಲ; ರಾಯಭಾರಗಳನ್ನು ಕಳಿಸುವುದಿಲ್ಲ. ಆದರೆ ಸಾಮ್ರಾಜ್ಯಶಾಹಿಯನ್ನೆದುರಿಸಿ, ಭಾರತದ ಬಂಧ ವಿಮೋಚನೆ ಮಾಡುತ್ತದೆ. ಇದು ಆಡಿಯ ನಿರ್ಣಯ. ಇದು ಬಹಿರಂಗದಂಗೆ. ಇದರಲ್ಲಿ ನಾವು ಜಯಶಾಲಿಗಳಾದೆವೋ ಭಾರತ ಮೂತಿಯು ಬಂಧವಿಮೋಚಿತವಾದೀತು. ಸತ್ತೆವೋ, ಸ್ವರ್ಗಪ್ರಾಪ್ತಿಯಾಗುತ್ತದೆ.

"ಜಿತೇವ ಲಭ್ಯತೇ ಲಕ್ಷ್ಮೀ ಹತೇ ನಾ ಸಿ ಸುರಾಂಗನಾ ಕ್ಷಣ ವಿಧ್ವಂಸಿನೀ ಕಾನೇ ರಾಜಿಂತಾ ಮರಣೇರಜೇ" ಎಂಬ ಪರಂಪರಾಗತ ಪಲ್ಲವಿಯೇ ಕಾಂಗ್ರೆಸಿನ ಪಲ್ಲವಿಯೂಯಿತು.

ಸರ್ವರೀತಿಯ ಸರ್ವಪ್ರಯತ್ನಕ್ಕಾಗಿ ನಾಯಕರ ಆಹ್ವಾನ

ಗಾಂಧೀಜಿಯವರು ಈ "ಬಹಿರಂಗ ದಂಗೆ" ಯಾವ ಯಾವ ರೂಪ ತಾಳಬಹುದೆಂಬುದನ್ನು ಸೂಚಿಸಲು ಹಿಂದೆಗೆಯಲಿಲ್ಲ. ಮುಷ್ಕರ ಹೂಡುವುದೆ; ಓಡುವ ರೈಲುಗಳನ್ನು ನಿಲ್ಲಿಸ ಪ್ರದೆ; ಬ್ರಿಟಿಷ್ ಸೈನಿಕರ ಓಡಾಟಕ್ಕೆ ಅಡ್ಡಿ ತಂದೊಡ್ಡುವುದೆ; ಬ್ರಿಟಿಷರನ್ನೋಡಿಸಲು ಸಾಮೂಹಿಕವಾಗಿ ಜನರೇನೇನು ಮಾಡಬಹುದೋ ಅದನ್ನೆಲ್ಲ ಮಾಡಬಹುದು. ಹಾಗೆ ಮಾಡಲು ಪ್ರತಿಯೊಬ್ಬ ಗಂಡಸಿಗೂ, ಹೆಂಗಸಿಗೂ ಪೂರ್ಣಸ್ವಾತಂತ್ರ್ಯ ಉಂಟು. ಈ ಅಂಶವನ್ನು ಗಾಂಧೀಜಿಯವರೊಬ್ಬರೇ ಅಲ್ಲ; ಜವಹರಲಾಲ್ ನೆಹರು, ಅಬ್ದುಲ್ ಕಲಾಂ ಆಜಾದ್, ರಾಜೇಂದ್ರ ಪ್ರಸಾದ್, ಸರದಾರ್ ಪಟೇಲ್, ಶಂಕರರಾವ್ ದೇವ್—ಪ್ರತಿಯೊಬ್ಬರೂ ಪ್ರಾಂತ ಪ್ರಾಂತಗಳಲ್ಲೂ ಸಂಚಾರ ಮಾಡುತ್ತಾ ಜನರನ್ನು ಸಂಬೋಧಿಸಿ "ಬಹಿರಂಗ ದಂಗೆ" ಕುರಿತು ಭಾಷಣಮಾಡಿದರು. ಅಲಹಾಬಾದಿನಲ್ಲಿ ನೈಸರನ್ನುದ್ದೇಶಿಸಿ ಜವಹರಲಾಲರು:

"ಕೆಲವೇ ದಿನಗಳಲ್ಲಿ ದಂಗೆಯಾರಂಭವಾಗುತ್ತದೆ. ಕೃಷಿಪಲ್ಲಿ ಈ ದಂಗೆಯನ್ನು ಸರಿಯಾಗಿ ಅರ್ಥಮಾಡಿಕೊಂಡು, ಭಾಗವಹಿಸಬೇಕು. ಈ ಪ್ರಯತ್ನದಲ್ಲಿ ಕಾಂಗ್ರೆಸ್ ಬೆಂದು ಭಸ್ಮವಾಗಬಹುದು. ಆದರೆ ಆ ಬೂದಿಯಲ್ಲಿ ಸ್ವತಂತ್ರ ಭಾರತ ದಳವತಾರವಾಗುತ್ತದೆ"

ಎಂಬುದಾಗಿ ಹೇಳಿದರೆ ರಾಜೇಂದ್ರ ಪ್ರಸಾದರು (ಸಾಟ್ಲ) —

"ಗಾಂಧೀಜಿಯವರ ಅಭಿಪ್ರಾಯದಲ್ಲಿ ನಾವಿಂದು ದೇಶದಲ್ಲಿ ಹಚ್ಚತ್ತಿರುವ ಕಿಚ್ಚು— ದಾವಾನಲ— ನೇತಕ್ಕೆ ಸ್ವಾತಂತ್ರ್ಯವನ್ನು ಕೊಡಬೇಕು. ಇಲ್ಲವೆ ಕಾಂಗ್ರೆಸ್ ಸಂಸ್ಥೆಯನ್ನು ಧ್ವಂಸ ಮಾಡಿ ಬಿಡಬೇಕು' ಅಂದರು.

ಸರದಾರ್ ಪಟೇಲರಾಷಣೀ ವಿದ್ಯಾರ್ಥಿಗಳನ್ನು ಸಂಬೋಧಿಸಿ ಮಾತನಾಡುತ್ತಾ, ಎಲ್ಲೆಲ್ಲೂ;

"ಪ್ರತಿಯೊಬ್ಬ ಬ್ರಿಟಿಷರವನಿಗೂ 'ಕ್ಷಣ ಕಟ್ಟು ನಿನ್ನ ಗಂಟುಮೂಟೆ' ಎಂದ ಹೇಳಿ. ನೀವು ಇದನ್ನು ಮಾಡಬೇಕು. ಹೀಗೆ ಮಾಡಬೇಕು, ಎಂದು ಕಾಂಗ್ರೆಸ್ಸು ಸೂಚಿಸುವುದಿಲ್ಲ. ಏನುಮಾಡಬೇಕೆಂಬುದನ್ನು ನೀವೆ ನೀವೇ ನಿಶ್ಚಯಮಾಡಿಕೊಳ್ಳಬೇಕು. ನೀವು ಸ್ವತಂತ್ರರು. ಸರಕಾರದ ಎಲ್ಲ ಆಜ್ಞೆಗಳನ್ನೂ ಉಲ್ಲಂಘಿಸಿ; ಈ ಸಂದೇಶವನ್ನು ಮನೆಮನೆಗೂ ಒಯ್ಯಿರಿ. ಏಕೆಂದರೆ ಸರಕಾರದವರು ಪತ್ರಿಕೆಗಳನ್ನು ನಿಲ್ಲಿಸಿಬಿಡುತ್ತಾರೆ. ನೀವೆಲ್ಲ ಜೀವಂತ, ಜಲಿಸುವ, ವ್ಯಕ್ತ ಪತ್ರಿಕೆಗಳಾಗಬೇಕು. ನೀವೀಗ ನಿನ್ನ ಕರ್ತವ್ಯ ನೆರವೇರಿಸಿದೆ ಇಷ್ಟರೆ ಭ್ರಷ್ಟರೆನಿಸುವಿರಿ."

ಮುಂತಾಗಿ ಹೇಳಿದರು. ಶಂಕರರಾವ್ ದೇವರಾದರೋ "ವಿದ್ಯಾರ್ಥಿಗಳೇ! ಎಲ್ಲಿ ಕಾಲದಲ್ಲೂ, ಎಲ್ಲ ದೇಶಗಳಲ್ಲೂ, ವಿದ್ಯಾರ್ಥಿಗಳೇ ಕ್ರಾಂತಿಯ ಆರಂಭಗಾರರು. ಇದೇ ನಿಮ್ಮ ಅವಕಾಶ. ಕ್ರಾಂತಿಯ ಅಲೆಗೆ ಕೆದ್ದು ಹಾರಿದುವರೆಯಲಿ!" ಅಂದರು. ನಾಯಕರೊಬ್ಬೊಬ್ಬರೂ ಹೀಗೆ ಸಾಮೂಹಿಕ ಜನರನ್ನು ಹೂಡಿದೆಬ್ಬಿಸುತ್ತ ಬಂದರು. '1857 ಲ್ಲಾದಂತಹ ವಿಪ್ಲವವೇ ಇದ; ಆದರೆ ಇದು ಅಹಿಂಸೆಯುನ್ನಾಧಾರವೂಡಿಕೊಂಡಿದೆ" ಅಂದರು ನಾಯಕರೊಬ್ಬರು. ಹೀಗೆ ಹೋದ ವಿದ್ಯಮಾನಗಳಿಂದ 1942—43ರ "ಅಹಿಂಸಾತ್ಮಕ" ವಾಗಿತ್ತೆ—ಎಂಬ ಪ್ರಶ್ನೆಯನ್ನು ಪ್ರಾಮಾಣಿಕತೆಯಿಂದ ಪರೀಕ್ಷಿಸಬೇಕಾಗಿದೆ.

'ದಂಗೆ'ಯ ಆರಂಭ, ವಿಕಾಸ

1942ನೇ ಆಗಸ್ಟ್ 9ರಂದು ಗಾಂಧೀಜಿಯವರು ಬಂಧನವಾಯಿತು. ಅನಂತರ ಎಲ್ಲ ಕಾಂಗ್ರೆಸ್ ಪ್ರಾಮುಖರ ಬಂಧನಗಳೂ ಆದುವು. ರಾಷ್ಟ್ರವ್ಯಾಪ್ತ 'ದಂಗೆ' ಆರಂಭವಾಯಿತು. ಪ್ರಭುತ್ವದವರು ದಂಗೆಯನ್ನಡಗಿಸಲು ಏನೇನು ಕಾರ್ಯಕ್ರಮಗಳನ್ನು ಕೆಗೆಳುಕೊಳ್ಳಬೇಕೋ ಅದನ್ನೆಲ್ಲ ಕೊಂಡರು. ಮುಂಬಯಿ, ಅಹಮದಾಬಾದ್, ಪಟ್ಟಣಗಳಲ್ಲಿ ಗಲಾಟೆಗಳಿಗಂದ (9-8-42) ಮೊದಲಾಯಿತು. ದೇಶದ್ಯಂತ ಪ್ರತಿಭಟನೆಗಳು, ಹರತಾಳಗಳು, ಮುಷ್ಕರಗಳು, ಮೆರವಣಿಗೆಗಳು, ಶಾಸನೋಲ್ಲಂಘನೆಗಳು ಸಾಮಾನ್ಯವಾಗಿ ಹೋಯಿತು. 'ದಂಗೆ'ಯು ದಾವಾನಲದಂತೆ ಕಬ್ಬಿತು. ನಾಯಕರಿಲ್ಲ, ಅವರ ಪಾಲಿಗೆಷಟವೇ ನಾಯಕರು! 'ಹಗೆ'ಯಿಂದ ನೇಲೆ ಆದರಲ್ಲಿ ಭಾಗವಹಿಸಲು ಎಲ್ಲರಿಗೂ ಹಕ್ಕುಂಟು. ಇದು ಕಾಂಗ್ರೆಸ್ಸಿನೇ ಗುತ್ತಿಗೆಯಾದುದಲ್ಲ. ಆದರೆ ಅಹಿಂಸೆ, ಸತ್ಯಾಗ್ರಹ, ಕಾಂಗ್ರೆಸ್ಸು, ಇವುಗಳ ಗಂಧವೇ ಇಲ್ಲದ ಗೂಂಡಾಗಳಿಗೂ ಪೂರ್ಣ ಅವಕಾಶ ಸಿಕ್ಕಿತು. ಅಗಬಾರದ್ದೆಲ್ಲ ಆಯಿತು. ವಸ್ತುನಾಶವಾಯಿತು; ಪ್ರಾಣನಾಶವಾಯಿತು; ರಾಷ್ಟ್ರೀಯ ಜೀವನದ ವ್ಯವಸ್ಥೆಯೇ ಅಸ್ತವ್ಯಸ್ತವಾಯಿತು.

ಪ್ರಭುತ್ವ ನಿರಂಕುಶವಾಗಿ ವರ್ತಿಸಿ ಬ್ರಿಟಿಷರ ಸ್ವಾರಂಭಿಸಿದ ವೇಳೆ ಜನರ ಕ್ರೌರ್ಯಕರ್ಮ ನಿರತರಾದರೆ; ಇಲ್ಲ, ಜನರು ಶಾಸನಬಾಹಿರವಾಗಿ, ಹಿಂಸಾತ್ಮಕ ವರ್ತನೆಗಳನ್ನಾರಂಭಿಸಿದ ಮೇಲೆ ಪ್ರಭುತ್ವದವರು ಶಸ್ತ್ರಾಸ್ತ್ರ ಪ್ರಯೋಗನಗಳನ್ನುಪಯೋಗಿಸಿದರೆ; ಈ ಪ್ರಶ್ನೆಯನ್ನೀಗ ಎತ್ತಬೇಕಾದ ಕಾರಣವಿಲ್ಲ. ಜನರನ್ನು ವಿಂದಾಗಿರಲಿ ಯಾವುದು ಹಿಂಬಾಗಿಲಿ, ಅಹಿಂಸಾತ್ಮಕ ವಲ್ಲದ ಎಷ್ಟೋ ಕೃತ್ಯಗಳು ನಡೆದು ಹೋಯಿತು. ಇದನ್ನು ಎಲ್ಲರೂ ಪ್ರಜ್ಞೆಯೇ ಬೇಕು. ಇದಕ್ಕೆ ಕಾಂಗ್ರೆಸ್ಸಿನವರು ಜವಾಬ್ದಾರರಲ್ಲವೆಂದು ವಾದಿಸುವುದು ತಪ್ಪು. ಗಾಂಧೀಜಿಯವರ ನಾಯಕತ್ವದಲ್ಲಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ಭಾರತೀಯರೆಲ್ಲರಿಗೂ "ಸ್ವಾತಂತ್ರ್ಯ ಸಾಧನೆಯ ಕಡೆ ಸಂಗ್ರಾಮ. ಇದರಲ್ಲಿ ಭಾಗವಹಿಸಿ ಸ್ವಾತಂತ್ರ್ಯ ಸಾಧಿಸಿರಿ, ಇಲ್ಲವೆ ಸಾಯಿರಿ" ಸಾರ್ವಕ್ರ ರೂಪದ ಫಿರೂಪ ಹೊರಬಿದ್ದಿತು. ಇನ್ನ ಈ ನಿರೂಪಕ್ಕೆ ಮಣಿದವರೇ ದಂಗೆಯೆದ್ದರು. ಆದರೆ ಅಹಿಂಸೆಯು ಮಾರ್ಗವನ್ನವರು ಹಿಡಿದು ಹೋಗಲಿಲ್ಲ.

1) ರೈಲ್ವೆದಾರಿಗಳು, ಟೆಲಿಫೋನ್ ವಾಹಕರೇ ಮೊದಲಾದ ಅವಶ್ಯಕ ಸ್ವತ್ತುಗಳ ಧ್ವಂಸವಾದುವು.

2) ಅನೇಕ ಕಡೆ ನಾನಾ ಆಡಳಿತ ಕೇಂದ್ರಗಳು ಭಸ್ಮವಾಗಿ ಹೋದುವು.

3) ಬೆಂಕಿ ಇಟ್ಟರೆಂದು ಬಂದೂಕಿನಿಂದ ಹಾರಿಸಿದರು, ಬಂದೂಕು ಹಾರಿಸಿದರು ಬಂದೂಕು ಹಾರಿಸಿದರೆಂದು ಬೆಂಕಿ ಇಟ್ಟರು.

4) ನಾಡು ಬಾಂಬುಗಳಿಂದ ಎಸೆಯಲಾಯಿತು.

ಈ ಹಟ್ಟಿಯನ್ನು ಬೆಳೆಸಬೇಕಾಗಿಲ್ಲ 12—8—1942ನೆಯ ದಿನ ಕೇರಳ ಪ್ರಾಂತ ಕಾಂಗ್ರೆಸ್ ಸಮಿತಿ ಕಾರ್ಯಕರ್ತರಿಗೆ ಮುಂಬಯಿಯಿಂದ ರಹಸ್ಯವಾಗಿ ಸೂಚನೆಗಳು ಬಂದವು. ಆ ಸೂಚನಾವಾಕ್ಯದಲ್ಲಿಷ ಈ ಭಾಗವನ್ನು ನೋಡಿ—

"ಮುಖ್ಯ ಮುಖ್ಯವಾದ ಕಚೇರಿಗಳನ್ನೆಲ್ಲ ಸುಡಿ, ಕಟ್ಟಡಗಳು, ಆಂಚೆ ಕಚೇರಿಗಳು, ಎಲ್ಲಕ್ಕೂ ಬೆಂಕಿಹಚ್ಚಿ. ರೈಲ್ವೆ
(ಬಳಿಕ್ಕನೇ ಪುಟ ನೋಡಿರಿ)

Gram: VISHWA Tel: 20111
When at Bangalore
Stay at
HOTEL NATARAJA
Restaurant, Boarding & Lodging.
107 Police Road, City Market,
BANGALORE-2
Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಭಾರತವನ್ನು ಬೆಳಗುತ್ತಿರುವ ಪುಣ್ಯನದಿ:—

ಗಂಗಾ

ಲೇ: ಶ್ರೀ ಸಿದ್ಧೇಶ್ವರ ಪ್ರಸಾದ್,
ಕೇಂದ್ರ ಫೀರಾವರಿ ಹಾಗೂ ವಿದ್ಯುತ್ ಶಾಖೆಯ ಉಪಮಂತ್ರಿಗಳು.

ಭಾರತೀಯರಿಗೆ ಗಂಗಾ ಒಂದು ನದಿ ಮಾತ್ರವಲ್ಲ; "ಹರನ ಜಡೆಯಿಂದ ಹರಿಯ ಅಡಿಯಿಂದ ಋಷಿಯ ತೊಡೆಯಿಂದ" ಭೂಮಿಗಿಳಿದು ಬಂದ ಸ್ವರ್ಗದ ಪುಣ್ಯಪೀಯೂಷ ಪ್ರವಾಹವೇ ಆಗಿದೆ. "ಭಾರತ ಸಂಶೋಧನೆ" ಪುಸ್ತಕದಲ್ಲಿ ಗಂಗೆ ಹುಟ್ಟಿನ ಕತ್ತಿದಿವಂಗತ ಜವಾಹರಲಾಲ್ ನೆಹರೂ ಅವರು ಹೀಗೆ ಬರೆದಿದ್ದಾರೆ—"ಉಳಿದೆಲ್ಲ ನದಿಗಳಿಗಿಂತ ಗಂಗಾ ಭಾರತೀಯರ ಮನಸ್ಸಿಗಳನ್ನು ಸೆರೆಹಿಡಿದ್ದಾಳೆ ಇತಿಹಾಸ ಕಾಲದಿಂದಲೂ ಕೋಟ್ಯಂತರ ಭಾರತೀಯರು ಗಂಗೆಯ ದಡ ಮುಟ್ಟಿ, ನಮಿಸಿ, ಅವಳ ಪುಣ್ಯಜಲದಲ್ಲಿ ಮಿಂದಿದ್ದಾರೆ. ಗಂಗಾನದಿಯ ಕಥೆ ಭಾರತದ ನಾಗರಿಕತೆಯ, ಆದರ ಸಂಕ್ಷೇತಯ ಕಥೆಯೇ ಆಗಿದೆ. ಅವಳ ತಟದಲ್ಲಿ ಸಾಮ್ರಾಜ್ಯಗಳು ಎದ್ದಿವೆ, ಬಿದ್ದಿವೆ; ಮಹಾನ್ ನಗರಗಳು ಹುಟ್ಟಿವೆ, ಅಳಿದಿವೆ. ಮಹಾನ್ ಪುರುಷರು, ಮಹಿಳೆಗಳು, ದಾರ್ಶನಿಕರು ಗಂಗೆಯ ದಡದಲ್ಲಿ ಬಂದು, ಮಿಂದು, ನಿಂತು ಚಿಂತಿಸಿದ್ದಾರೆ; ತಂಬು ಬದುಕನ್ನು ಅವಳಲ್ಲಿ ಬೆಳಗಿದ್ದಾರೆ; ಜನನ ಮರಣಗಳ, ಬದುಕಿನ "ಏಳುಬೀಳುಗಳ ಬಗೆಗೆ ನಿಶಾಂತವನಾಗಿ ಪರ್ಯಾಲೋಚಿಸಿದ್ದಾರೆ..." ಗಂಗೆಯ ಬಗ್ಗೆ ಜವಾಹರಲಾಲರ ಧಾರ್ಮಿಕಶ್ರದ್ಧೆಯು ಏನೇ ಇರಲಿ; ತಮ್ಮ ಚಿಕಾಕರ್ಷಣೆಯ ಗಂಗೆಯ ಸಲಿಲದ ಮೇಲೆ ತೇಲ ಬೇಕೆಂಬ ಅಭಿಲಾಷೆಯನ್ನು ತಮ್ಮ ಮೃತ್ಯುಪತ್ರದಲ್ಲಿ ಅವರು ಕಾಣಿಸಿದ್ದಾರೆ.

ಗಂಗೆ ಭಾರತೀಯರೆಲ್ಲರಿಗೆ ಅತ್ಯಂತ ಪ್ರಿಯವಾದ ನದಿ. ಭಾರತೀಯರ ಅಶೆ ಫೀರಾಕೆಗಳ, ಜಯಾಪಜಯಗಳ ನೆನಪುಗಳ ಮೂಲೆ ಈ ನದಿಯ ಬುದ್ಧಕ್ಕೂ ಹಬ್ಬಿದೆ. ಗಂಗೆಯ ದಂಡೆಯ ಮೇಲೆ ಪವಿತ್ರ ಪೂರ್ವಿಕರು ಪುಣ್ಯಾದ ಯಜ್ಞಾಸ್ಥಳಗಳನ್ನು, ಪಾವಿತ್ರ ತೀರ್ಥಗಳನ್ನು ಕಲ್ಪಿಸಿದ್ದು ಸಹಜ. ಹಿಮಾಲಯ ಅಡಿಯಲ್ಲಿನ ಹರಿದ್ವಾರದಲ್ಲಿ ಗಂಗೆ ಬೈಲು ಪ್ರದೇಶಕ್ಕೆ ಧುಮುಕಿ ಪ್ರಯಾಗದಲ್ಲಿ ಯಮುನೆಯೊಂದಿಗೆ ಕೂಡುತ್ತಾಳೆ.

ಹಿಮಗಿರಿಯಿಂದ

ಹಿಮಾಚ್ಛಾದಿತ ಹಿಮಾಲಯದಲ್ಲಿ ಹುಟ್ಟಿ ಹರಿದು ಬಂದ ಎರಡು ದೊಡ್ಡ ಪ್ರವಾಹಗಳು, ಅಲಕನಂದಾ ಹಾಗು ಭಾಗೀರಥಿ—ಸುಂದರ ಕೂಡಿ ಗಂಗೆ ಎಂಬ ಅಭಿಧಾನದಲ್ಲಿ ಹರಿದಿವೆ. ಗಾರವಾಲ್—ಟಿಬೇಟ್ ಗಡಿಯಲ್ಲಿನ 7801 ಮೀಟರ್ ಎತ್ತರದ ನಂದಾದೇವಿ ಶಿಖರದ ಎತ್ತರ ಭಾಗದಲ್ಲಿ ಅಲಕನಂದಾ ಉಗ್ಮವಿಸಿದ್ದಾಳೆ. ಉತ್ತರಪ್ರದೇಶ ರಾಜ್ಯದ ಗಾರವಾಲ್—ತೆಹರಿ ಜಿಲ್ಲೆಯಲ್ಲಿ 6620 ಮೀಟರ್ ಎತ್ತರಕ್ಕೆ ಹಿಮಾಲಯದಲ್ಲಿರುವ ಗಂಗೋತ್ರಿ ಫೀರ್ಗಲ್ಲು ರಾಶಿಯಿಂದ ಭಾಗೀರಥಿ ಉದ್ಭವಿಸುತ್ತಾಳೆ. ಈ ವರೆಗೂ ಪ್ರವಾಹಗಳು ದಕ್ಷಿಣಕ್ಕೆ ಹರಿದು ದೇವಪ್ರಯಾಗದಲ್ಲಿ ಕೂಡಿನಿಂತು ಅಲ್ಲಿಂದ ಗಂಗಾನದಿ ಎಂದೆನಿಸಿ ಹರಿದಿದೆ.

ದೇವಪ್ರಯಾಗದಿಂದ ಗಂಗೆ ಪಶ್ಚಿಮ-ನೈಋತ್ಯ ದಿಕ್ಕಿಗೆ ಹೊರ್ಗಡವಾಗಿ ಹಿಮಾಲಯದಲ್ಲಿ ಹರಿದು ಹರಿದ್ವಾರ ತಲಪುತ್ತಾಳೆ. ಆ ಮೇಲೆ ದಕ್ಷಿಣ-ಪೂರ್ವೇಯ ದಿಟ್ಟನಲ್ಲಿ ಭಾರತದ ಬೈಲುಪ್ರದೇಶವನ್ನು ಪ್ರವೇಶಿಸುತ್ತಾಳೆ. ಬೈಲುಪ್ರದೇಶಕ್ಕೆ ಬಂದ ಮೇಲೆ, ರಾಮಗಂಗಾ, ಗೋಮತಿ, ಗರ್ಘ, ಗಂಡಕಿ, ವಾಗ್ಮತಿ ಕೋಸಿ ಹಾಗೂ ಮಹಾನಂದ ಎಂಬ ಉಪನದಿಗಳು ಗಂಗೆಗೆ ಎಡಬಲದಿಯಲ್ಲಿ ಬಂದು ಸೇರುತ್ತವೆ. ಗಂಗೆಯು ಎಲ್ಲಕ್ಕೂ ದೊಡ್ಡ ಉಪನದಿಯಾದ ಯಮುನೆ ಅಲ್ಲಾಬಾದಿನಲ್ಲಿ ಬಲ ಭಾಗದಿಂದ ಬಂದು ಕೂಡುತ್ತಾಳೆ. ಇಪ್ಪೊಂದು ಮಹತ್ವದ ಉಪನದಿ ಸೋಣಭದ್ರ ಪಾಟ್ನಾದ ಬಳಿ ಗಂಗೆಗೆ ಸೇರುತ್ತದೆ.

ಫರಕ್ಕಾದಿಂದ ಗಂಗೆಯ ಡೆಲ್ಟಾಪ್ರದೇಶ ಪ್ರಾರಂಭವಾಗುತ್ತದೆ. ಇಲ್ಲಿಂದ ಗಂಗೆ ಸಮುದ್ರ ಸೇರುವ ಮೋಹನಾ ಅಳಿವೆಯ ನಡುವಿನ ಪ್ರವಾಹಗಳಬಂಗಾಲಖಾತವನ್ನು ಸೇರುತ್ತವೆ. ಗಂಗೆ ಒಟ್ಟು 2474 ಕಿಲೋ ಮೀಟರ್ ಉದ್ದ ಪ್ರವಹಿಸಿ ಸಾಗರ ಸೇರುತ್ತಾಳೆ. ಗಂಗೆಯ ಜಲಾನಯನ ಪ್ರದೇಶವು 9.67 ಲಕ್ಷ ಚದರು ಕಿಲೋ ಮೀಟರಷ್ಟಿದೆ.

ಬ್ರಹ್ಮಪುತ್ರ ನದಿಯು ದೊಡ್ಡದಾಗಿದ್ದರೂ ಆದರ ಅರ್ಧದಷ್ಟು ಜಲಾನಯನ ಪ್ರದೇಶವು ಟಿಬೇಟಿನಲ್ಲಿದೆ. ಹೀಗಾಗಿ ಭಾರತದ ದೃಷ್ಟಿಯಿಂದ ಗಂಗಾನದಿಯು ಮಹತ್ವ ಪೂರ್ಣವಾಗಿದೆ. ಗಂಗೆ, ಆದರ ಪ್ರಮುಖ ಉಪನದಿಗಳು, ಈ ಉಪನದಿಗಳಿಗೆ ಬಂದು ಕೂಡುವ ಸಣ್ಣಪುಟ್ಟ ತೊರೆಗಳು—ಇವೆಲ್ಲವುಗಳು ಕೂಡಿ ಭಾರತದ ಸಾಮಾರು ಒಂದು-ಮೂರನೆಂಶ ಭೂಮಿಯನ್ನು ಪಸರಿಸಿವೆ. ಗಂಗೆಯು ಹಬ್ಬಿದ ಬಳ್ಳಿ ಹರಿಸಿದ ಫೀರೂ, ಈ ನೀರಿನೊಡನೆ ಬರುವ ಸಮೃದ್ಧ ಸುಫೀಕ ಒಂಡೂ ಸೇರಿ ಗಂಗಾ ಬೈಲುಪ್ರದೇಶವನ್ನು ಅತ್ಯಂತ ಫಲಪ್ರದ ಭೂಮಿಯನ್ನಾಗಿ ಪಾವರ್ತಿಸಿವೆ, ರಾಷ್ಟ್ರದ ಶ್ರೇಷ್ಠ ಸಂಪತ್ತಾಧಾರಿತ ಪ್ರದೇಶವನ್ನಾಗಿ ಮಾರ್ಪಡಿಸಿವೆ.

ನೀರಾವರಿ ಯೋಜನೆಗಳು

ಗಂಗೆಯು ಪಾತಪಕ್ಷ ಸಲಿಲವನ್ನು ನೆರೆಯ ಭೂಮಿಗೆ ಉಡಿಸಲು ಎಂದಿನಿಂದಲೂ ಪ್ರಯತ್ನಗಳು ನಡೆದಿವೆ. ಇಂದಿನ 'ಪಶ್ಚಿಮ ಯಮುನಾ ಕಾಲುವೆ'ಯನ್ನು ಮೂಲದಲ್ಲಿ ಫಿರೋಜ್ ಶಹಾ ತಘಲಕನು 14ನೇ ಶತಮಾನದಲ್ಲಿ ಕಟ್ಟಿದನು. ಮುಂದೆ ಇದನ್ನೇ ಅಕಬರ ಬಾದಶಹ ಪುನರುಜ್ಜೀವನಗೊಳಿಸಿದನು.

ಬ್ರಿಟಿಷರು ನಮ್ಮ ದೇಶದಲ್ಲಿ ಆಧಿಪತ್ಯ ಸ್ಥಾಪಿಸಿದ ಮೇಲೆ ಗಂಗಾನದಿಯು ಬಗ್ಗೆ ಆಸ್ಥೆ ವಹಿಸಿದರು. ಸರ್ ಪ್ರೋಟ್ ಕಾಟೆಲೇ ನಿರ್ಮಿಸಿದ ಗಂಗಾ ಮೇಲ್ದಂಡೆ ಕಾಲುವೆ ಪ್ರಸಿದ್ಧವಿದೆ. ಈ ಕಾಲುವೆಯನ್ನು 1842ರಲ್ಲಿ ಪ್ರಾರಂಭಿಸಿ 1854ರಲ್ಲಿ ಪೂರ್ತಿಗೊಳಿಸಲಾಯಿತು. ಈ ಕಾಲುವೆ ಹರದ್ವಾರದಿಂದ ಪ್ರಾರಂಭವಾಗುತ್ತದೆ. ಕಾಟಲೇಟ್ರ ಸಾಹಸ ಅಪ್ರತಿಮವೆಂದೇ ಹೇಳಬೇಕು. ಏಕಂದರೆ ಕಾಟಲೇ ಈ ಕಾಲುವೆ ರಚನೆ ಬೇಕೆಂದಾಗ ಇಂತಹ ಕಾಲುವೆಯನ್ನು ಪ್ರಪಂಚದ ಇತರ ಭಾಗದಲ್ಲಿ ಕಟ್ಟಿದ ಉದಾಹರಣೆ ಇರಲಿಲ್ಲ. ಆಂದಿನೀಜಿಗೆ ಈ ಕಾಲುವೆ ಭಾರತದ ಇತರ ದೊಡ್ಡ ಕಾಲುವೆಯೋಜನೆಗಳಿಗೆ ಸ್ಫೂರ್ತಿ ಫೀಡಿದೆ. ಗಂಗಾ ಕಾಲುವೆ ಸುಮಾರು ಏಳುಲಕ್ಷ ಹೆಕ್ಟೇರ್ ಭೂಮಿಗೆ ನೀರುಣಿಸುತ್ತದೆ. ಈ ಕಾಲುವೆ ಯೋಜನೆಗೆ ಒಟ್ಟು 6.4 ಕೋಟಿ ರೂಪಾಯಿ ವೆಚ್ಚ ತಗುಲಿದೆ. ಈ ಕಾಲುವೆ ಒದಗಿಸಿದ ರೆವಿನ್ಯೂ ಹಣವು ಕಾಲುವೆಗೆಂದು ಖರ್ಚು ಮಾಡಿದ ಹಣಕ್ಕಿಂತ ಎಷ್ಟೋ ಪಟ್ಟು ಹೆಚ್ಚಾಗಿದೆ. ಸಧ್ಯಕ್ಕೆ ಈ ಕಾಲುವೆಯಿಂದ ಬರುವ ರೆವಿನ್ಯೂ ಹಣವು ಆದರ ಬಂಡವಾಳದ ಶೇಕಡ 25ರಷ್ಟು ಇದೆ. ಬಹುಶಃ ಯಾವ ಔದ್ಯಮಿಕ ಸಂಸ್ಥೆಯೂ ಇಷ್ಟು ಲಾಭವನ್ನು ಪಡೆಯುತ್ತಿರಲಿಕ್ಕಿಲ್ಲ. 1875—79ರಲ್ಲಿ ತಾಜೇವಾಲಾ ಆಣೆಕಟ್ಟನ್ನು ನಿರ್ಮಿಸಲಾಯಿತು. ಇದರಿಂದಾಗಿ ಯಮುನಾ ಕಾಲುವೆಗಳನ್ನು ಸಮರ್ಪಕವಾಗಿ ಮೂಪರಿಸಲು ಸಾಧ್ಯವಾಗಿದೆ. ಈ ಕಾಲುವೆಗಳು 7.4 ಲಕ್ಷ ಹೆಕ್ಟೇರ್ ಭೂಮಿಗೆ ನೀರನ್ನು ಫೀಡಿಸಿವೆ. ಹತ್ತೊಂಭತ್ತನೇ ಶತಮಾನದಲ್ಲಿ ಪೂರ್ತಿಗೊಂಡ ಇತರ ಪ್ರಮುಖ ಕಾಲುವೆಗಳು ಇವು:-

1879ರಲ್ಲಿ ಪೂರ್ತಿಗೊಂಡ ಸೋನ್ ಕಾಲುವೆ; 1873ರಲ್ಲಿ ಪೂರ್ತಿಗೊಂಡ ಆಗ್ರಾ ಕಾಲುವೆ, 1878ರಲ್ಲಿ ಮುಗಿದ ಗಂಗಾ ಕೆಳಕಾಲುವೆ, 1886ರಲ್ಲಿ ಪೂರ್ತಿಗೊಂಡ ಬೇಟ್ವಾ ಕಾಲುವೆ. ಬೇಟ್ವಾ ನದಿಮುಖಜಂಡೆಯ ಮೇಲೆ ಕಟ್ಟಲಾದ ಹರಿಜಾ ಆಣೆಕಟ್ಟು ಗಂಗಾಕೊಳ್ಳದ ಅತ್ಯಂತ ಭವ್ಯ ಹಾಗೂ ಜಲಾಶಯವಾಗಿದೆ.

ಈ ಶತಮಾನದ ಪ್ರಾರಂಭದಲ್ಲಿಂದೂ ಗಂಗಾ ಉಪಪ್ರದೇಶಗಳ ಜಳಕೆಗೆ ಹೆಚ್ಚಿನ ಪ್ರಯತ್ನಗಳು ಫಲಿಸುತ್ತುಂಟು. 1914ರಲ್ಲಿ ಬಿಹಾರಿನಲ್ಲಿ ಗಂಡಕಿ ನದಿಯ ಪೂರ್ವೇಜ ಕಾಲುವೆ ಪೂರ್ತಿಗೊಂಡಿತು; 1915ರಲ್ಲಿ ಉತ್ತರಪ್ರದೇಶದಲ್ಲಿ ಶಾರ್ದಾ ಕಾಲುವೆಯೂ. 1926ರಲ್ಲಿ ಶಾರ್ದಾ ಕಾಲುವೆಯೂ, 1935ರಲ್ಲಿ ಹಸ್ತಿನ ಬಂಗಾಲದಲ್ಲಿ ದಾಮೋದರ ಕಾಲುವೆಯೂ ಪೂರ್ತಿಗೊಂಡವು. ಇದರಲ್ಲಿ ಶಾರ್ದಾ ಕಾಲುವೆ ವ್ಯವಸ್ಥೆಯೇ ಅತಿಕಾಯವಾದದ್ದಿದ್ದು, ಅದು 6 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಫೀಡಿಸುತ್ತದೆ.

ನೆರೆಹಾವಳಿ ನಿಯಂತ್ರಣ

ಗಂಗಾನದಿಯು ನೀರಿನ ಪೂರ್ಣ ಪ್ರಯೋಜನ ಪಡೆಯುವ ಪ್ರಯತ್ನಕ್ಕೆ ಸ್ವತಂತ್ರ್ಯಾನಂತರದಿಂದೀಚೆಗೆ ಫಲಕಾರಿಯಾಗುತ್ತಿದೆ. ದಾಮೋದರ ಕೊಳ್ಳ ಕಾರ್ಪೊರೇಷನ್ ಒಂದು ಅತಿ ದೊಡ್ಡ ಯೋಜನೆಯಾಗಿದ್ದು, ರಾಜ್ಯ-ರಾಜ್ಯಗಳ ನಡುವಿನ ಸಹಕಾರಕ್ಕೆ ಸಾಕ್ಷಿಯಾಗಿ ಫೆರಿಯಾವಳಿ ನಿಯಂತ್ರಣಕ್ಕೆ ಸಬಲ ಪರಿಹಾರದ ಸೂತ್ರವಾಗಿ "ದಾಮೋದರ ಕೊಳ್ಳ ಕಾರ್ಪೊರೇಷನ್" ಪೂರ್ಣಗೊಂಡಿದೆ. ಈ ಯೋಜನೆ ಪಶ್ಚಿಮ ಬಂಗಾಲದ 4 ಲಕ್ಷ ಹೆಕ್ಟೇರ್ ಭೂಮಿಗೆ ನೀರನ್ನು ಫೀಡಿಸಿದೆ. ಬಿಡಾರಿನ ಕೋಸಿ ನದಿ ಯೋಜನೆ ಪೆರಿಹಾವಳಿ ನಿಯಂತ್ರಣ ಮಾಡಿ 10.3 ಲಕ್ಷ ಹೆಕ್ಟೇರ್ ಭೂಮಿಗೆ ನೀರನ್ನು ಒದಗಿಸಿದೆ. ಕಂಡಕ ನದಿ ಯೋಜನೆ ಉತ್ತರ ಪ್ರದೇಶದ ಸುಮಾರು 15 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿಯ ನೀರಿನ್ನು ಫೀಡಿದೆ. ಉತ್ತರ ಪ್ರದೇಶದಲ್ಲಿನ ರಾಮಗಂಗಾ ಯೋಜನೆಯಿಂದ ಸುಮಾರು 7 ಲಕ್ಷ ಹೆಕ್ಟೇರು ಭೂಮಿ ನೀರಾವರಿಗೆ. ಇವೆಲ್ಲ ಗಂಗಾ ನದಿಯ ಉಪನದಿಗಳ ಯೋಜನೆಗಳಾಗಿವೆ.

ಫರಕ್ಕಾ ಆಣೆಕಟ್ಟು

ಫರಕ್ಕಾಯೋಜನೆ ಈಗ ಮುಕ್ತಾಯವಾದ ಘಟ್ಟದಲ್ಲಿದೆ. ಇದರಿಂದ ಕಲ್ಕತ್ತ ಬಂದರಿನ ಸುಧಾರಣೆ ಆಗಬಹುದು. ಫರಕ್ಕಾ ಯೋಜನೆ ಇಡೀ ದೇಶದ ಅತಿಕ್ಲಿಷ್ಟ ದಾ

(ಎಂಟನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

115 ವರ್ಷಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನ್ನು

ಸಂಪರ್ಕ ಬೆಳೆಸಿರಿ.

ಶೇಮಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ವೈಶಿಷ್ಟ್ಯಪೂರ್ಣ ಯೋಜನೆ

"ಜೀವನ-ನಿಧಿ"ಯನ್ನು

ಪ್ರಸ್ತುತ ಉಳಿತಾಯವನ್ನು ವಿಶಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,

ರೇಸ್ ಕೋರ್ಸ್ ರೋಡ್, ಬೆಂಗಳೂರು—1

ದಕ್ಷಿಣ ಕನ್ನಡದಲ್ಲಿ ಶ್ರೀಕೃಷ್ಣಾರಾಧನೆ

(ಒಂದು ಸಂಶೋಧನಾತ್ಮಕ ಐತಿಹಾಸಿಕ ಲೇಖನ)

ಲೇಖಕರು :— ಪ್ರಿನ್ಸಿಪಾಲ್ ಡಾ ಪಿ. ಗುರುರಾಜ ಭಟ್

ಶ್ರೀ ಕೃಷ್ಣನ ಆರಾಧನೆಯು ವೈಷ್ಣವ ಪಂಥದ ಒಂದು ಅಂಗವಾಗಿದೆ. ಭಾರತದಲ್ಲಿ ಶ್ರೀ ಕೃಷ್ಣನ ಆರ್ಚನೆಯು ಕ್ರಿಸ್ತ ಶಕ ಪೂ. 6ನೇ ಶತಕದಷ್ಟಾದರೂ ಪ್ರಾಚೀನವಾಗಿದೆ. ವಾಸುದೇವನ ಆರಾಧನೆಯು ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಸಹಿತ ವ್ಯೂಹತ್ರಯರಾಗಿ ಕ್ರಿ.ಪೂರ್ವದಿಂದಲೇ ಬಂದ ಸಂಪ್ರದಾಯವಾಗಿದೆ. ಉತ್ತರ ಭಾರತದಲ್ಲಿ ಶ್ರೀ ಕೃಷ್ಣ ಬಿಂಬಗಳನ್ನು ಮೊದಲು ಆರ್ಚಿಸುವ ಪದ್ಧತಿಯು ಕ್ರಿ. ಶ. 504ನೇ ಶತಕಗಳ ಸುಮಾರಿಗೆ ಹೋಗುತ್ತದೆ. ಮಥುರಾ ಶಿಲ್ಪವು ಕೃಷ್ಣನ ಲೀಲೆಯನ್ನು ಹೆಚ್ಚಾಗಿ ಪ್ರತಿಬಿಂಬಿಸುತ್ತದೆ. ವ್ಯೂಹ ತ್ರಿಕರಾದ ದೇವಾಲಯಗಳು ಬಹಳ ಸಾಮ್ಯವನ್ನು ಉತ್ತರ ಭಾರತದಲ್ಲಿರುವುದು ವಾಸುದೇವನ ಸಾರ್ವಭೌಮತ್ವಕ್ಕೆ ಸಾಕ್ಷಿಗಳಾಗಿವೆ. ದಕ್ಷಿಣ ಭಾರತದಲ್ಲಿ ವ್ಯೂಹ ತ್ರಿಕರಿಗಿಂತ ದೇವ ಮಂದಿರಗಳೇ ಅತೀ ವಿರಳ. ಪ್ರಾಯಃ ಇಷ್ಟೊರತನಕನನ್ನು ಗೋವಿಂದನಿಂದಲೇ ಅಂತಹ ದೇವಾಲಯವಿರುವುದಾಗಿದೆ. ಅದು ನಮ್ಮ ಜಿಲ್ಲೆಯ ಕಾರ್ಕಳದ ಅನಂತ ಶಯನದ ಅನಂತ ಪದ್ಮನಾಭ ದೇವಸ್ಥಾನ. ಅಪೂರ್ವವಾದ ಪದ್ಮನಾಭ ಶಿಲಾ ಮೂರ್ತಿಯು ಕೇಂದ್ರ ಪರ್ಯಗೃಹದಲ್ಲಿ ಮೂರು ವಿಶ್ಯಗಳಲ್ಲಿ ಸುತ್ತಲೂ ಸಂಕರ್ಷಣ, ಪ್ರದ್ಯುಮ್ನ; ಅನಿರುದ್ಧ ಮೂರ್ತಿಗಳು ಉಪಸ್ಥಾನ ಮೂರ್ತಿಗಳಾಗಿಯೂ ಸ್ಥಾಪಿಸಲ್ಪಟ್ಟಿವೆ. ಇದರ ಕಾಲ ಹೊಯ್ಸಳರ ಆಳ್ವಿಕೆಯ ಕಾಲ (ಎಂದರೆ ಸು. 12ನೇ ಶತಕ). ಇಲ್ಲಿಯೂ ಪದ್ಮನಾಭನನ್ನು ವಾಸುದೇವನೆಂಬುದಾಗಿ ಸಂಕಲ್ಪಿಸಿ ಆರ್ಚಿಸಬೇಕು.

ದಕ್ಷಿಣ ಭಾರತದಲ್ಲಿ ಶ್ರೀಕೃಷ್ಣ ಬಿಂಬಗಳು ಬಹಳ ಹಳಗಾಲದ್ದೆನ್ನುವಂತಿಲ್ಲ. ಬಹುಪಾಲು ಕ್ರಿ. ಶ. 8ನೇ ಶತಕಕ್ಕಿಂತ ಪ್ರಾಚೀನವಾದ ಶ್ರೀ ಕೃಷ್ಣ ಶಿಲಾ ವಿಗ್ರಹಗಳೇ ಇಲ್ಲವೆನ್ನ ಬಹುದು. ಪ್ರಾಯಃ ಶ್ರೀ ಕೃಷ್ಣನ ಉಪಾಸನೆಯೇ ಬಹಳ ಪ್ರಾಚೀನವೆನ್ನುವಂತಿಲ್ಲ. ಇದಕ್ಕೆ ಸ್ಪಷ್ಟ ಕಾರಣಗಳನ್ನು ಹೇಳುವುದು ಕಷ್ಟ. ಶೈವಧರ್ಮವೇ ಪ್ರಬಲವಾಗಿದ್ದುದು ಒಂದು ಕಾರಣವಾಗ ಬಹುದು.

ರಜತಪೀಠಪುರವೆಂದು ಹೆಸರಾಂತ ಪದ್ಮ ಉಡುಪಿಯು ಐತಿಹಾಸಿಕ ದೃಷ್ಟಿಯಲ್ಲಿ ಶ್ರೀಕೃಷ್ಣ ಉಪಾಸನೆಗೆ ಮೊತ್ತಮೊದಲನೆಯದೆನ್ನ ಬಹುದಾಗಿದೆ. ಶ್ರೀ ಶಂಕರಾಚಾರ್ಯರ ಶಿಷ್ಯರಾದ ಶ್ರೀ ಹಸ್ತಾಮಲಕ ಆಚಾರ್ಯರು ತನ್ನ ಗುರುಗಳಾದ ಶ್ರೀ ವಜ್ರನಾರಾಯಣನ ಸರ್ವಜ್ಞತ್ವವನ್ನು ಪ್ರತಿಪಾದಿಸಿ ಗುರುಗಳ ಆದೇಶದಂತೆ ಪಶ್ಚಿಮ ಕರಾವಳಿಗೆ ಬಂದು ರಜತಪೀಠಪುರದಲ್ಲಿ ಶ್ರೀಕೃಷ್ಣ ಪ್ರತಿಮೆಯನ್ನು ಸ್ಥಾಪಿಸಿದರೆಂದು ಶ್ರೀ ಶಂಕರ ವಿಜಯವೆಂಬ ಗ್ರಂಥದಿಂದ ವೇದ್ಯವಾಗಿದೆ. (ಈ ಗ್ರಂಥವು ಕ್ರಿ. ಶ. 9-10ನೇ ಶತಕದ ಗ್ರಂಥವಾಗಿದೆ) ಈ ವಿಷಯವನ್ನು ನಾನು ಇನ್ನು ಹಲವು ಲೇಖನಗಳಲ್ಲಿ ತಿಳಿಸ ಪಡಿಸಿದ್ದೇನೆ. ಶ್ರೀ ಹಸ್ತಾಮಲಕರು ಶುದ್ಧ ಶಿವಸ್ಥಾನವಾದ ಮಹಾದೇವನ ಸೀಗಲದ (ಈಗ ಅನಂತೇಶ್ವರವೆಂದು ಕರೆಯಲ್ಪಡುವ ಶಿವಾಲಯವು) ಉಪಸ್ಥಾನ ಮೂರ್ತಿಯಾಗಿ ಶ್ರೀ ಕೃಷ್ಣ ವಿಗ್ರಹವನ್ನು ಸ್ಥಾಪಿಸಿದ್ದಿರಬೇಕು. ಉಡುಪಿಯಲ್ಲಿ ವೈಷ್ಣವ ಧರ್ಮದ ಉಗಮವು ಇದರಿಂದಾಯಿತೆನ್ನ ಬಹುದು. ಪ್ರಾಯಃ ನಮ್ಮ ಜಿಲ್ಲೆಯ ಎಲ್ಲಾ ವೈಷ್ಣವ ದೇವಮಂದಿರಗಳು ಈ ಶ್ರೀಕೃಷ್ಣ ವಿಗ್ರಹದ ಪ್ರತಿಷ್ಠಾವನೆಯ ಅನಂತರದ್ದಿರಬೇಕು. (ಹಸ್ತಾಮಲಕರಿಂದ ಪ್ರತಿಷ್ಠಿತವಾದ ಶ್ರೀಕೃಷ್ಣ ವಿಗ್ರಹವು ಪೈಲಶ್ರೀಕೃಷ್ಣನೆಂಬ ಅಭಿಧಾನದಿಂದ ಶ್ರೀಕೃಷ್ಣ ಮಠದೊಳಗಿದೆ ಎಂಬುದೂ ಹಲವರಿಗೆ ತಿಳಿದುದಾಗಿದೆ) ಈ ಪ್ರತಿಮೆಯು ಬಹು ಮುದ್ದಾಗಿ ಕೊರೆಯಲ್ಪಟ್ಟ ಮೂರ್ತಿಯಾಗಿದ್ದು ದಕ್ಷಿಣ ಭಾರತದ ಶ್ರೀಕೃಷ್ಣ ಬಿಂಬಗಳಲ್ಲಿ ಅತೀ ಪ್ರಾಚೀನವೆನ್ನಬಹುದು.

ಕಾಲವಶವದಲ್ಲಿ ಇಷ್ಟರ ತನಕ ತಾನು ಮಾಡಿದ ಅನ್ವೇಷಣೆಯನ್ನನುಸರಿಸಿ ಹೇಳುವುದಾದರೆ ಕಾರ್ಕಳದ ಸಮೀಪವಿರುವ ಜೋಳುಪಾಡಿ ಎಂಬ ಊರಿನಲ್ಲಿರುವ ಶ್ರೀ ವೇಣುಗೋಪಾಲ ಮೂರ್ತಿಯು ಸು. ಕ್ರಿ. ಶ. 11ನೇ ಶತಕಕ್ಕೆ ಅನ್ವಯಿಸುವಂತಹುದಾಗಿದೆ. ಸುಮಾರು ಎರಡೂವರೆ ಅಡಿ ಎತ್ತರವಿದ್ದು ಕರಿಶಿಲೆಯಿಂದ ಕೆತ್ತಲ್ಪಟ್ಟ ಯೋಗ್ಯ ಪ್ರಮಾಣ ಮತ್ತು ಆಲಂಕಾರಗಳಿಂದ ಕೂಡಿದ ಶಿರಸ್ಸಿನ ಮೇಲೆ ಏಳು ನಾಗಫಣಿಹೆಡೆಗಳನ್ನು ನಿರ್ದೇಶಿಸಿದ ವಿಗ್ರಹ ವಿದಾಗಿದೆ. ಇದು ಖಂಡಿತವಾಗಿಯೂ ಹೊಯ್ಸಳರ ಪೂರ್ವಕಾಲದ್ದೆನ್ನಬಹುದು.

ವಂಗಳೂರಿನ ಅತ್ತಾವರವೆಂಬಲ್ಲಿರುವ ಚಕ್ರವಾಣಿ ದೇವಾಲಯದ ಶ್ರೀಚಕ್ರವಾಣಿ ವಿಗ್ರಹವು [ಶ್ರೀಕೃಷ್ಣ ಮೂರ್ತಿ] ಹೊಯ್ಸಳರ ಕಾಲದ ಪ್ರಥಮ ಪಾದಕ್ಕೆ ಸೇರುವಂತಹುದಾಗಿದೆ. ಈ ದೇವಾಲಯವು ಈಗ ಜೀರ್ಣೋದ್ಧಾರವಾದ ಪರಿಸ್ಥಿತಿಯನ್ನು ತೋರಿಸುವುದಾದರೂ ಮೂಲಸ್ಥಾನ ವಿಗ್ರಹವು ಹಳಗಾಲದ್ದೇ ಆಗಿದ್ದು ಅತ್ಯಂತ ಮನೋಹರವಾಗಿದೆ. ಎತ್ತರದಲ್ಲಿ ಎರಡು ಅಡಿಯೂಗಿ ಪಾದ ಪೀಠದಲ್ಲಿ ದನಗಳ ನಿರ್ದೇಶವನ್ನು ಒಳಗೊಂಡಿದೆ. ಕ್ರಿ. ಶ. 12ನೇ ಶತಕದ ಕಲ್ಬರಹಗಳಲ್ಲಿ ಈ ದೇವಾಲಯವು ವಿರವ ಪ್ರದೇಶವು ಅರ್ಥಪುರವೆಂಬುದಾಗಿ ಉಲ್ಲೇಖಿಸಿ ಇದೆ. ಅರ್ಥಪುರವೆಂದರೆ ವಿಷ್ಣುಪುರವೆಂದಾಗುತ್ತದೆ. ಕಾಲಾನುಗುಣತೆಯಿಂದ ಭಾಷಾ ಪರಿವರ್ತನೆಯಿಂದ ಈ ಅರ್ಥಪುರವು ಅತ್ತಾವರವಾಯಿತು.

ಕಾಸರಗೋಡು ತಾಲೂಕಿನ ಕುಂಬಳೆಯಲ್ಲಿರುವ ಶ್ರೀಕೃಷ್ಣ ದೇವಾಲಯವು ಸುಮಾರು ಇದೇ ಕಾಲದ್ದೆನ್ನಬಹುದು. ಸಂಪ್ರದಾಯಶಿಷ್ಟಿಕ್ರಕಾರ ಈ ದೇವಾಲಯವು ವಿರವ ಪ್ರದೇಶವು ಕಣ್ವಪುರವೆಂಬುದಾಗಿ ಕರೆಯಲ್ಪಟ್ಟಿದೆ! ಇಲ್ಲಿಯ ಮೂಲ ಸ್ಥಾಪಿತ ಶ್ರೀ ಗೋಪಾಲಕೃಷ್ಣ ವಿಗ್ರಹವು ದ್ವಿಬಾಹುವಾಗಿದ್ದು ಸ್ವಲ್ಪ ಖಗ್ನ ಸಿಂಹ ಭಂಗಿಯಲ್ಲಿದ್ದು ಎರಡೂ ಕೈಗಳಲ್ಲಿ ಬಾಳೇ ಹಣ್ಣಿನಂತಹ ಫಲವನ್ನು ಧರಿಸಿದ ವಿರ್ದೇಶವನ್ನೊಳಗೊಂಡಿದೆ. ಈ ವಿಗ್ರಹವು ಶಿಲ್ಪಶಾಸ್ತ್ರದ ದೃಷ್ಟಿಯಲ್ಲಿ ನಿಜವಾಗಿಯೂ ವೈಶಿಷ್ಟ್ಯವುಳ್ಳದ್ದಾಗಿದೆ. ಕುಂಟಿಕಾನ ಸಮೀಪವಿರುವ ಅನಂತಕುದ್ರುವೆಂಬಲ್ಲಿ ಪಾಳು ಬಿದ್ದಿರುವ ಕೆರೆಯ ಮಧ್ಯದಲ್ಲಿ ನಿರ್ಮಿತವಾದ ಪರಪಾಸುದೇವತಾ ದೇಗುಲದ ನೈಋತ್ಯ ದಿಶೆಯಲ್ಲಿ ಉಪಸ್ಥಾನ ಮೂರ್ತಿಯಾಗಿ ನಿಂತಿರುವ ಶ್ರೀ ಕೃಷ್ಣ ಬಿಂಬವು ಬಹು ಅಪರೂಪವಾಗಿದೆ. ಇದರ ಕಾಲವು ಸು. 10-11ನೇ ಶತಕದೆನ್ನಬಹುದು. ಎಡ ಕೈಯಲ್ಲಿ ಶಂಖ ಮತ್ತು ಬಲಕೈಯಲ್ಲಿ ವಿಶ್ವಿಯನ್ನು ಧರಿಸಿರುವ ಈ ಮೂರ್ತಿಯು ಎತ್ತರದಲ್ಲಿ ಎರಡೂವರೆ ಅಡಿ ಉಳ್ಳದಾಗಿದೆ. ಭಾರತ ಸಂಪ್ರದಾಯಕ್ಕೆ ಸೇರಿದ ಎಡಸೀರು ಮಠದ ಆರಾಧ್ಯ ದೇವತೆಯೂ ಶ್ರೀ ಗೋಪಾಲಕೃಷ್ಣನೇ. ಇಲ್ಲಿ ಬಿಂಬವು ಪಂಚಲೋಹದ್ದಾಗಿದೆ. ಈ ಮಠದ ಸ್ಥಾಪನೆಯನ್ನು ಸು. 10-11ನೇ ಶತಕಕ್ಕೆ ಒಯ್ಯಬಹುದು.

ಕಾರ್ಕಳದಲ್ಲಿ ಗೌತಸಾರಸ್ವತ ವನಭೋಜನದ ಒಂದು ಚಿಕ್ಕ ದೇಗುಲದಲ್ಲಿರುವ ಶ್ರೀಕೃಷ್ಣ ಶಿಲಾ ಮೂರ್ತಿಯು ಕ್ರಿ. ಶ. 12ನೇ ಶತಮಾನದ ಹೊಯ್ಸಳರ ಕಾಲದ ಶಿಲ್ಪವನ್ನು ಚೆನ್ನಾಗಿ ಪ್ರತಿಬಿಂಬಿಸುತ್ತದೆ. ಇದು ಸಹ ದ್ವಿಬಾಹುವಾಗಿದ್ದು ಕೊಳಲನ್ನು ಧರಿಸಿ ಶಿರಸ್ಸಿನ ಇಕ್ಕೆಡೆಗಳಲ್ಲಿ ಚಕ್ರ ಮತ್ತು ಶಂಖಗಳ ನಿರ್ದೇಶವನ್ನೊಳಗೊಂಡು ಸರ್ವಾಕಾರದ ಶೋಭಣವುಳ್ಳ ಪ್ರಭಾವಳಿಯನ್ನು ಹೊಂದಿದ ಸು 2½ ಅಡಿ ಎತ್ತರದ ವಿಗ್ರಹ ಇದಾಗಿದೆ. ಈ ಮೂರ್ತಿಯು ಪ್ರತ್ಯೇಕವಾದ ದೇಗುಲವೊಂದರಲ್ಲಿ ಇತ್ತೀಚೆಗೂ ದೇಗುಲವು ಪಾಳು ಬಿದ್ದನಂತರ ಈ ಮೂರ್ತಿಯನ್ನು ಇಲ್ಲಿಗೆತಂದಿರಿಸಿದರೆಂದು ತಿಳಿದು ಬರುತ್ತದೆ.

ಶ್ರೀ ಮಧ್ವಾಚಾರ್ಯರು ವೈಷ್ಣವ ಧರ್ಮದ ಪ್ರತಿಷ್ಠಾಪನೆಯನ್ನು ಮಾಡಿದ ವಿಚಾರ ಎಲ್ಲರಿಗೂ ತಿಳಿದ ಸಂಗತಿ. ಆಚಾರ್ಯರು ಎಂದು ಶ್ರೀಕೃಷ್ಣ ಪ್ರತಿಮೆಯು

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ.

O. S. No 153/1970

ದೆಂಕಪ್ಪ ಮಣಿಯ್ಯ ಮತ್ತು ಇನ್ನೊಬ್ಬರು —ವಾದಿರು

Vs.

ಜೋನ್ ಲಾಯಿಡ್ ಮತ್ತು ಇತರರು—ಪ್ರತಿವಾದಿರು.

ನೋಟೀಸು.

ಸುಳ್ಯ ತಾಲೂಕಿನ ಸುಳ್ಯ ಕಸಬಾ ಗ್ರಾಮದ ಪಡುಮಲೈಲು ಎಂಬಲ್ಲಿ ಮೀಸವಾಗಿರುವ ಧರಂಗ ಲೊಡಿ ಸರ್ವೆ ಮಗ ಜೋನ್ ಲಾಯಿಡು ಸರ್ಕಾರಿಗೆ—

ಆರ್ಜಿದಾರರು ನಿಮ್ಮ ಮೇರೆ ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ O. S. ನಂಬ್ರ 153/1970 ಎಂಬ ದಾವೆಯನ್ನು ದಾಖಲಿಸಿ ಮೂಲರುತ್ತಾರೆ. ಸದ್ರಿ ವ್ಯಾಜ್ಯದರಜೆಯು ತಾ. 7-9-1970ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇದೆ. ನೀವು ಆ ದಿನ ಸದ್ರಿ ಮುನ್ಸಿಫ್ ಕೋರ್ಟಿನಲ್ಲಿ ಹಾಜರಾಗಿ ಜವಾಬುದಾರಿ ಇಲ್ಲದೇ ಇದ್ದರೆ ದಾವಿಲು ಮೂಡಿ ತೀರ್ಪಿಗೆ ಕಯಾರಾಗ ಬೇಕೆಂದು ಈ ಮೂಲಕ ನಿಮಗೆ ತಿಳಿಸಲಾಗಿದೆ.

ತಾ. 7-9-1970ರಂದು ಬೆಳಿಗೆ 11ಗಂಟೆಗೆ ನೀವು ಸದ್ರಿ ಮುನ್ಸಿಫ್ ಕೋರ್ಟಿನಲ್ಲಿ ಹಾಜರಾಗ ದೇ ಇದ್ದಾದಲ್ಲಿ ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ಈ ವ್ಯಾಜ್ಯದರಜೆಯು ಮುಂದೆ ಪರಿಯುತ್ತದೆ, ತಿಳಿದಿರಲಿ.

ಎ. ಪಿ. ಗೌರೀಶಂಕರ್,
ಆರ್ಜಿದಾರರ ಎಡ್ವೋಕೇಟ್.
(ಕೋರ್ಟಿನ ಹುಳಾಂ ಪ್ರಕಾರ)

ಪುತ್ತೂರು ದ.ಕ., ತಾ. 19-8-1970.

ಉಡುಪಿಗೆ ಬಂದಾಗ

ಮನರಂಜನೆಯ ಸಮಸ್ಯೆ ನಿಮಗಿಲ್ಲ!

ಅತ್ಯುತ್ತಮ ಚಲಚ್ಚಿತ್ರಗಳನ್ನು ಪ್ರದರ್ಶಿಸುವ

ಎರಡು ಶ್ರೇಷ್ಠ ದರ್ಜೆಯ ಚಿತ್ರಮಂದಿರಗಳು

ನಿಮ್ಮ ಬೇಸರವನ್ನು ನೀಗಿಸಲು ಇಲ್ಲಿವೆ.

ಅಲಂಕಾರ್ & ಕಲ್ಪನಾ

(ಫೋನ್: 327) ಅಸ್ಪತ್ರೆ ರಸ್ತೆ

(ಫೋನ್: 437) ಉಪೇಂದ್ರಬಾಗ್

ಕುಂದಾಪುರದ ನವೀಕೃತ ಭವ್ಯ ಚಿತ್ರಮಂದಿರ—

ಗೀತಾಂಜಲಿ

ವ್ಯವಸ್ಥಾಪಕರು:

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಎಸ್. ಆರ್. ಬಿಲ್ಡಿಂಗ್ಸ್, ಉಡುಪಿ (ದ. ಕ.)

ಪ್ಪು ಉಡುಪಿಯಲ್ಲಿ ಸ್ಥಾಪಿಸಿದರೆಂಬುದಕ್ಕೆ ಸರಿಯೂದ ದಾಖಲೆಗಳಿಲ್ಲವಾದರೂ ಕ್ರಿ. ಶ. 13ನೇ ಶತಕದ ಅಂತ್ಯ ಪಾದದಲ್ಲಿ ಈ ಕಾರ್ಯವಾಯಿತೆನ್ನಬಹುದು. ಇವರು ಸ್ಥಾಪಿಸಿದ ಶ್ರೀ ಕೃಷ್ಣ ವಿಗ್ರಹವು ಹಡಗಿನಲ್ಲಿ ದ್ವಾರಕೆಯಿಂದ ಬಂದುದೆಂದೂ ಅದನ್ನು ಶ್ರೀಮಧ್ವಾಚಾರ್ಯರು ಚಮತ್ಕಾರದಿಂದ ಪಡೆದು ರಜತಪೀಠಕರುದಲ್ಲಿ ಪ್ರತಿಷ್ಠಾಪಿಸಿದರೆಂದೂ ಜನ ತಿಳಿದ ಸಂಗತಿಯಾಗಿದೆ. ಇದನ್ನು ಪುಷ್ಟೀಕರಿಸಲು ಸಾಧಾರಗಳು ಸಾಕಷ್ಟಿಲ್ಲವಾದರೂ ಆವರು ಸ್ಥಾಪನೆ ಮಾಡಿದ ಶ್ರೀ ಕೃಷ್ಣ ಬಿಂಬವು ವಿಶೇಷರದ್ದಾಗಿದ್ದು ಔತ್ಸರೇಷು ಶಿಲ್ಪ ಕೃತಿಗಳಿಗಿಂತಾ ಕೆತ್ತಲ್ಪಟ್ಟ ಮೂರ್ತಿ ಯಾಗಿದೆ ಎನ್ನಲಡ್ಡಿಯಿಲ್ಲ. ದಾಕ್ಷಿಣಾತ್ಯ ಯಾವ ಶ್ರೀ ಕೃಷ್ಣ ಬಿಂಬವೂ ಈ ಮೂರ್ತಿಯ ಶೈಲಿಯನ್ನು ಹೋಲುವುದಿಲ್ಲ ಜಲಕೈಯಲ್ಲಿ ಕ್ರೀಡಾಯಷ್ಟಿ ಮತ್ತು ಎಡಕೈಯಲ್ಲಿ ಹಿಂಸ್ಯಾಕೂತ್ಯವನ್ನೊಳಗೊಂಡು ಭಾರತದಲ್ಲಿಯೇ ಪ್ರಸಿದ್ಧಿಯನ್ನು ಹೊಂದಿದ ಈ ಬಿಂಬವು ಶಿಲ್ಪಕೃಷ್ಣಗುಣವಾಗಿ ಎಷ್ಟೆಂದರೂ ಕ್ರಿ. ಶ. 7-8ನೇ ಶತಮಾನದ್ದಿರ ಬಹುದೆನ್ನ ಬಹುದು. ಈ ಬಿಂಬವನ್ನೇ ಹೋಲುವ ಇನ್ನೊಂದು ಮೂರ್ತಿಯು ಮಂಗಳೂರಿನಲ್ಲಿದೆ. ಅದು ಸುಮಾರು 16ನೇ ಶತಕದ ಬಿಂಬವಾಗಿದೆ. ಶ್ರೀ ಆಧಿಪುರು ಮಠದ ಮತ್ತು ಶ್ರೀಕೃಷ್ಣಾಪುರಂ ಮಠದ ಪಂಚಲೋಹದ ಕೃಷ್ಣ ಪ್ರತಿಮೆಗಳು ಮಧ್ಯಕಾಲೀನ ವಿಗ್ರಹಗಳಾಗಿದ್ದು ಕಲಾದೃಷ್ಟಿಯಿಂದ ಉಹು ಶ್ರೇಷ್ಠ ವರ್ಗದವುಗಳೆನ್ನಲಡ್ಡಿಯಿಲ್ಲ.

ಉಡುಪಿ ತಾಲೂಕಿನ ಬ್ರಹ್ಮಾವರದ ಸಮೀಪವಿರುವ ಹೆಂದಾಡಿ ಎಂಬಲ್ಲಿಯೂ ಒಂದು ಶ್ರೀವೇಣುಗೋಪಾಲಕೃಷ್ಣ ದೇಗುಲವಿದೆ. ಇದು 3 ಅಡಿ ಎತ್ತರವಾಗಿದ್ದು ಸುಮಾರು ಕ್ರಿ. ಶ. 13ನೇ ಶತಕದ ಶ್ರೀ ಗೋಪೀನಾಥನೆಂದು ಕಲ್ಪಿಸಬಹುದಲ್ಲಿ ಉಲ್ಲೇಖಿಸಿರುವ ವಿಗ್ರಹ. ನಮ್ಮ ಜಿಲ್ಲೆಯ ಶ್ರೀಕೃಷ್ಣ ವಿಗ್ರಹಗಳಲ್ಲಿ ಇವೆರ ತಪ್ಪ ಕೆ ದೊರಕಿದ ದಾಖಲೆಗಳಲ್ಲಿ ಅತಿ ಪ್ರಾಚೀನ ದಾಖಲೆಯು ಎಂದರೆ ಕ್ರಿ. ಶ. 1296 ಶ್ರೀ ಗೋಪೀನಾಥನಿಗೆ ಅನ್ವಯಿಸುತ್ತದೆ.

ಪ್ರಸಿದ್ಧ ಚಾರಿತ್ರಿಕ ಸ್ಥಳವಾದ ಬಾರಕೂರಿನಲ್ಲಿ ವಿಜಯನಗರ ಕಾಲದ ಅತ್ಯಂತ ಮನೋಹರವಾದ ಎರಡು ಶ್ರೀಕೃಷ್ಣ ಮೂರ್ತಿಗಳಿವೆ. ಒಂದು ಮೂಡುಕೇರಿಯಲ್ಲಿಯೂ ಇನ್ನೊಂದು ಕೋಟೆಕೇರಿಯಲ್ಲಿರೂ ಇದೆ. ಮೂಡುಕೇರಿ ಶ್ರೀ ಗೋಪಾಲಕೃಷ್ಣ ವಿಗ್ರಹವು ನಮ್ಮ ಜಿಲ್ಲೆಯ ಶ್ರೇಷ್ಠ ವಿಗ್ರಹಗಳಲ್ಲೊಂದಾಗಿದೆ. ಕೋಟೆಕೇರಿ ಶ್ರೀಕೃಷ್ಣ ವಿಗ್ರಹವು ಸುಮಾರು 3 ಅಡಿ ಎತ್ತರವಾಗಿದ್ದು ಪ್ರಭಾವಳಿಯಲ್ಲಿ ದಶಾವತಾರದ ಉಬ್ಬು ಶಿಲ್ಪವನ್ನು ಬಹಳ ಕೋಮಲವಾಗಿ ಕೆತ್ತಲ್ಪಟ್ಟ ಪ್ರಭೇದಶಿಲ್ಪವನ್ನೊಳಗೊಂಡಿದೆ. ಇದೇ ತೆರನಾದ 3 ಅಡಿ ಎತ್ತರದ ಶ್ರೀಕೃಷ್ಣ ಪ್ರತಿಮೆಯು ಕೋಟೇಶ್ವರ ದೇವಾಲಯದ ಹೊರಾಂಗಣದಲ್ಲಿ ಉಸ್ಥಾನೆಮೂರ್ತಿಯಾಗಿ ಕಂಡುಬರುತ್ತದೆ. ಇದರ ಶಿಲ್ಪವೂ ಹೆಚ್ಚೆಯನ್ನು ಪಡೆಯುವ ರೀತಿಯ ದ್ದಾಗಿದೆ.

ತುಳುನಾಡಿನ ಸಪ್ತಕ್ಷೇತ್ರಗಳಲ್ಲಿ ಒಂದಾದ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯದ ಆಗ್ನೇಯ ದಿಕ್ಕಿನಲ್ಲಿ ಎರಡೂಕಾಲು ಅಡಿ ಎತ್ತರದ ಒಂದು ಶ್ರೀ ಕೃಷ್ಣ ಬಿಂಬವು ಪ್ರತಿಷ್ಠಾಪಿಸಲಾಗಿದೆ ಎಂದು ನಃಷ್ಟ ಹೊರಿಂದ ಸ್ಥಾಪಿಸಲ್ಪಟ್ಟ ವಿಗ್ರಹವಿದೆಂದು ತಿಳಿದಿಲ್ಲವಾದರೂ ಇದರ ಶೈಲಿಯನ್ನಾಧರಿಸಿ ಸುಮಾರು ಕ್ರಿ. ಶ. 13ನೇ ಶತಮಾನಕ್ಕೆ ಕೊಂಡೊಯ್ಯಬಹುದೋ ಏನೋ? ಇದರ ಪ್ರಭಾವಳಿಯಲ್ಲಿ ತೋರಣದ ನಕಾಶೆ ಕಂಡುಬರುವುದಿಲ್ಲ. ಸುಮಾರು 14—15ನೇ ಶತಕಕ್ಕೆ ಸೇರಿದ ಚಿಕ್ಕದಾದ ಶ್ರೀಕೃಷ್ಣ ಶಿಲಾ ವಿಗ್ರಹವು ಉಡುಪಿ ತಾಲೂಕಿನ ಬಾಳಕಾಡುರು ಮನೆಯಲ್ಲಿ ಕಂಡುಬರುತ್ತದೆ, ಕುಂದಾಪುರ ತಾಲೂಕಿನ ಹಟ್ಟಿಯಂಗಡಿ ಎಂಬಲ್ಲಿ ಒಂದು ಚಿಕ್ಕದಾದ ಗುಡಿಯಲ್ಲಿ ಭವ್ಯವಾದ 3 ಅಡಿ ಎತ್ತರದ ಶ್ರೀಕೃಷ್ಣ ವಿಗ್ರಹವಿದೆ. ಇದನ್ನು ವಿಜಯನಗರ ಕಾಲಕ್ಕೇನೇ ಸೇರಿಸಬಹುದು. ಮಂಗಳೂರಿನ ಹೊರವಿನ ಮೂಕೇಂಬಿನ ಸವಿಾಪವಿರುವ ಬ್ರಾಹ್ಮಣ ಕೇರಿಯಲ್ಲಿ ಒಂದು ನಾಂದರ್ಯಪೂರ್ಣ ಶ್ರೀಕೃಷ್ಣ ಮೂರ್ತಿ ಕಂಡುಬರುತ್ತದೆ. ಇದು ಸಹಾ ಸುಮಾರು ೫೦೦ ವರ್ಷಗಳ ಪ್ಪು ಪ್ರಾಚೀನವೆನ್ನಬಹುದು.

ಉಡುಪಿ ತಾಲೂಕಿನ ಭದ್ರಗಿರಿ ಎಂಬ ಳ್ಳಿ ಶ್ರೀ ವಿಠಲನಂಬ ಹೆಸರಿನಮೂರ್ತಿಯು ಒಂದು ದೇಗುಲವಿದೆ. ವಿಗ್ರಹವು ಕರಿ ಶಿಲೆಯಿಂದ ಕೊರೆಯಲ್ಪಟ್ಟ ೨೬ಇಂಚು ಎತ್ತರವಾಗಿದ್ದು ಎಡಕೈಯಲ್ಲಿ ಶಂಖವೂ ಬಲಕೈಯಲ್ಲಿ ಚಕ್ರದ ಪ್ರತೀಕವನ್ನು ಹೊಂದಿ ವರದವಾಗಿಯು ಳ್ಳ ನಮಭಂಗಿಯಲಿರುವ ಮೂರ್ತಿಯಾಗಿದೆ. ಕಾಲವಮನದಲ್ಲಿ ಸುಮಾರು 16ನೇ ಶತಕಕ್ಕೆ ಅನ್ವಯವಾಗಬಹುದು. ವಿಠಲಮೂರ್ತಿಯೆಂಬ ದಾಗಿ ಆರಾಧಿಸಲ್ಪಡುವುದಾದರೂ ಈ ವಿಗ್ರಹವು ಶ್ರೀ ಕೃಷ್ಣ ವಿಗ್ರಹವೇಯಿರಬೇಕು.

ಕಲ್ಯಾಣಪುರದ ಶ್ರೀ ವೆಂಕಟರಮಣ ದೇವಾಲಯದಲ್ಲಿ ಪಂಚಲೋಹದ ಒಂದು ಲಲಿತವಾದ ಶೃಕೃಷ್ಣಗಿಯಲ್ಲಿ ಇರುವಸು. 8 ಇಂಚು ಎತ್ತರವುಳ್ಳ ಶ್ರೀಕೃಷ್ಣ ಬಿಂಬವಿದೆ. ಐತಿಹ್ಯದ ಪ್ರಕಾರ ಇದು ಕೊಳಲಗಿರಿ ಸವಿಾಪದ ಫದಿಯಲ್ಲಿ ದೊರೆತಿದ್ದೆಂದು ತಿಳಿದು ಬರುತ್ತದೆ. ಇದು ಸಹ್ಯವಿರಲೂ ಬಹುದು. ಕಾರಣ ಕೊಳಲಗಿರಿ ಎಂದರೆ ಶ್ರೀ ಕೃಷ್ಣಗಿರಿ ಎಷ್ಟನವರ್ಥವಷ್ಟೇ ಯಾಗುತ್ತದೆ. ಕ್ರಿ. ಶ. 9ನೇ ಶತಕದ ಕಲ್ಬರ ಹಪ್ಪೊಂದು ಕೊಳಲ ನಕರಕ್ಕೆ ಉಲ್ಲೇಖವ ನ್ನೀಯುತ್ತದೆ. ಈ ಕೊಳಲ ನಕರ ಈಗಿನ ಕೊಳಲಗಿರಿ ಇರಬಹುದು ಇಲ್ಲಿ ಒಂದು ಶ್ರೀ ಕೃಷ್ಣ ದೇವಾಲಯವಿತ್ತೆಂದೂ ಅದು ಸಂಪೂರ್ಣ ಪಾಲುಬಿನ್ದು ಅದರ ಆಡಿಭಾಗದಲ್ಲಿ ಈಗ ಹ್ಯಾಯರ್ ಎಲಿಮೆಂಟರಿ ಶಾಲೆಯದೆ ಎಂದೂ ಐತಿಹ್ಯ ಪ್ರಕಾರ ತಿಳಿದು ಬರುತ್ತದೆ. ಕಲ್ಯಾಣಪುರದಲ್ಲಿರುವ ಶ್ರೀ ಕೃಷ್ಣ ಬಿಂಬದ ಪ್ರಾಚೀನತೆಯನ್ನು ಸ್ಪಿರವಾಸವುದು ಕಷ್ಟ.

ಹೀಗೆ ಶ್ರೀ ಕೃಷ್ಣನ ಉಪಾಸನೆಯು ನಮ್ಮ ಜಿಲ್ಲೆಯಲ್ಲಿ ಸುಮಾರು 8ನೇ ಶತಕದಿಂದಾರಂಭವಾಗಿ ಕ್ರಿ ಶ 16ನೇ ಶತಮಾನದವರೆಗೆ ವಿಶೇಷ ಮಹತ್ವವನ್ನು ಪಡೆದಿತೆನ್ನ ಬಹುದು.

ನಮ್ಮ ಜಿಲ್ಲೆಯು ಹೊರ್ಸ್ಸರ ಆಳ್ವಿಕೆಯೊಳಗೆ ಸೇರಿದಾಗ ಶ್ರೀಕೃಷ್ಣಾರ್ಚನೆಯು ದೇವಪಂದಿರಗಳಲ್ಲಿ ವೈದ್ಧಿಯೊದಂ ತೆ ತಿಳಿದುಕೊಳ್ಳಬಹುದು. ಶ್ರೀ ಮಧ್ವಾಚಾರ್ಯರ ಕಾಲಾನಂತರದಿಂದ ಶ್ರೀ ವೈಷ್ಣವ ಪಂಥವು ನಮ್ಮ ಜಿಲ್ಲೆಯ ವಷ್ಟಗೆ ಕ್ರಾಪ್ತವಾಯಿತು. ಅದರೆ ಈ ಉಪ ಸನೆಯು ನಜವಾಪೀಠದಲ್ಲಿ ಕೇಂದ್ರೀಕೃತವಾಯಿತು.

ಶ್ರೀಕೃಷ್ಣನು ವಿಷ್ಣುವಿನ ದಶಾವತಾರಗಳಲ್ಲಿ ಒಬ್ಬನು ಎಂಬುದಾಗಿ ಸುರಾಣಗಳು ಹೇಳುತ್ತವೆ. ಅವತಾರಗಳು ಪರಮಾತ್ಮನ ಸ್ವರೂಪವೋ ಅಲ್ಲವೋ ಎಂಬುದರ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಈ ಅಭಿಪ್ರಾಯಗಳೇನೇ ಇರಲಿ ಶ್ರೀಮದ್ಭಗವದ್ಗೀತೆಯು ಮಹಾಭಾರತದ ಒಂದು ಭಾಗವಾದುದರಿಂದ ಮಹಾಭಾರತಕ್ಕೆ ಒಂದು ಐತಿಹಾಸಿಕ ಗ್ರಂಥವಾದುದರಿಂದ ಭಾರತ ಸಂಸ್ಕೃತಿಯ ನಿರಂತರ ಬುಗ್ಗೆಯೊದುದರಿಂದ ಹಾಗೂ ಗೀತೆಯಲ್ಲಿ ಸರ್ವ ಮಾನವನಿಗೂ ಆದರ್ಶಪ್ರಾಯವಾಗ ವಿಷಯಗಳ ನೆಲೆಯಿರುವುದರಿಂದ ಅದರ ಅಧ್ಯಾಸ, ಪ್ರಚಾರ ಮತ್ತು ಆನುಕರಣ, ಆಚಾರಗಳು ಸಮ್ಮ ಶ್ರೇಯಸ್ಸಿಗೆ ಶ್ರೇಷ್ಠವಾಗಿದೆ.

ಈ ಭಗವದ್ಗೀತೆಯಲ್ಲಿ ಮನಶ್ಶಾಸ್ತ್ರದ ಮೂಲವಿದೆ. ಎರಡನೇ ಅಧ್ಯಾಯದಲ್ಲಿ ಆಡಕವಾಗಿರುವ ಈ ಶ್ಲೋಕವು ಅತ್ಯಂತ ಮಹತ್ವಪೂರ್ಣವಾದುದು.

"ಕ್ರೋಧಾದ್ಭವತಿ ಸಂಮೋಹಃ ಸಂ ಮೋಹಾತ್ಸ್ಮೃತಿವಿಭ್ರಮಃ | ಸ್ಮೃತಿಭ್ರಂ ಶಾದ್ಬುದ್ಧಿನಾಶೋ ಬುದ್ಧಿನಾಶಾತ್ಪ್ರಣಶ್ಯತಿ" ಕ್ರೋಧದಿಂದ ಸಂಮೋಹ ಉಂಟಾಗುತ್ತದೆ, ಸಂಮೋಹದಿಂದ ಸ್ಮೃತಿಯು ದೋಷಗಳು ಕಾಣಿಸಿಕೊಳ್ಳುವುವು. ಸ್ಮೃತಿಯ ಭ್ರಂಶದಿಂದ ಎಂದರೆ ಸ್ಮೃತಿಯು ಕ್ಷೀಣವಾಗುವುದರಿಂದ ಬುದ್ಧಿನಾಶ ಹೊಂದುವುದು. ಬುದ್ಧಿನಾಶದಿಂದ ಮಾನವ ಜನು ಭ್ರಷ್ಟನಾಗುತ್ತಾನೆ. ಮಾನವಜೀವಲದ ಕೇಂದ್ರವೇ ಬುದ್ಧಿಯಲ್ಲವೆಂಬುದನ್ನು ತಿಳಿಯುವುದವಶ್ಯ. ಕ್ರೋಧ ಬಂದಿತೆಂದರೆ ವಿವೇಕವು ಹೊರಟು ಹೋಗುತ್ತದೆ. ಯಂತ್ರಕ್ಕೆ ಆಧಾರ ಪ್ರಾಯವಾದ ಸವ ತೋಲ ಚಕ್ರವು ಹಾಳಾದರೆ ಯಂತ್ರವು ಹೇಗೆ ನಿಷ್ಪ್ರಯೋಜಕವೋ ಅಂತೆಯೇ ವಿವೇಕವಿಲ್ಲದ ಮಾನವ ನಿಷ್ಪ್ರಯೋಜನ ಮತ್ತು ಅಪಕಾರಿ ಮಾನವನು ಅಂತಾಗಬಾರದೆಂಬುದೆಂದೇ ಗೀತೆಯು ಸಾರವಾಗಿದೆ. ಮನಸ್ಸಿನ ಬಾಳ್ವೆಯೇ ಸಂಘಜೀವನದಲ್ಲಿ ಸಾಂಘಿಕ ಜೀವನಕ್ಕೆ ಮೂಲಾಧಾರವೇ ಸ್ವಾರ್ಥದ ಪೇರೆಪನ್ನ ವಿಕಾರಿ ಸಾರ್ಥದ ವೃತ್ತವನ್ನು ಸೇರುವುದು. ಆದಕ್ಕೆ ವ್ಯಕ್ತರ ಪ್ರಯತ್ನ ಮೂಡುವುದಕ್ಕೆ ಈ ಪ್ರಜ್ಞಾಸ್ಪದ ಸಾಫಲ್ಯವನ್ನು ಹೊಂದಬೇಕಾದರೆ ಕೆಲ್ಪೀಧ, ವೇಕ್ಷ, ವದ, ಲೇಖ, ಮೂರ್ಯ ಮತ್ತು ಕಾಮಗಳೆಂಬ ಆರು ವೈರಿಗಳನ್ನು ಗೆದ್ದ ಸಾರ್ವತ್ರಿಕ ಸ್ವೀಕೃತವಾದ ಸಂಸ್ಕೃತಿಯನ್ನುಂಟು ಮಾಡಬೇಕು. ಇದೇ ಶ್ರೀ ಕೃಷ್ಣನ ಸಂದೇಶ, ಗೀತಾಸಾರ ಹಾಗೂ ಸಂಸ್ಕೃತಿಯ ನಿಜಶ್ವರೂಪ.

ಸಂಗ್ರಾಹ್ಯ ಸಂಕಲವಗಳು

ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ವಿಜಯ ಪ್ರಬಂಧಗಳು	1—00
ಭಾವಿಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಕುಂಚ ಸುಮನ	1—20
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—50
ಸಂಜೆಗದ್ಯಾಯ	2—00
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ವಿಕಾಂಕ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮದಾ ಜೀವಿಗಳು	1—80
ಸರಸ್ವತಿ	1—50
ಖಚಿತ್ರಕಳ್ಳಬೇಟೆ	1—50
ಮಧುವನ	3—00

ನವಭಾರತ ಪುಸ್ತಕ ಭಂಡಾರ, ಉಡುಪಿ.



ತಪ್ಪು ಹೆಜ್ಜೆ

ಬರೆದವರು : "ನೇಪಕನಂದನ", ಭವ್ಯಾವತಿ.

ನಮ್ಮ ದೇಶದ ವಿದೇಶಾಂಗ ನೀತಿ ಯೆಂದೆಗೆ ಒಳಗಾಗಿದೆ. ತನ್ನ ಅಲಿಪ್ತ ನೀತಿಯನ್ನು ಕಾರ್ಯರೂಪಗೊಳಿಸ ಹೊರಟ ಇಪ್ಪತ್ತೆರಡು ದಿನಗಳಲ್ಲಿ ವಿಫಲವಾಗಿದೆ. ತಾಷ್ಕೆಂಟು ನಿರೂಪಿಸಿದ ನೀತಿಗೂ, ಕೈಗೊಳ್ಳುವ ನಿರ್ಧಾರಕ್ಕೆ ಪರಸ್ಪರ ಹೊಂದಾಣಿಕೆ ಕಂಡು ಬರುತ್ತಿಲ್ಲ.

ನಮ್ಮ ದೇಶದ ವಿದೇಶಾಂಗ ನೀತಿಯನ್ನು ಕಂಡು ಇಂದು ಅನೇಕ ನ್ಯೂನತೆಗಳನ್ನು ದರ್ಶಿಸಿ ವಿಯೆಟ್‌ನಾಂಗೆ ಸಂಬಂಧಿಸಿದ್ದು ಅಷ್ಟೆ ಗಟ್ಟಿಧ್ವನಿಯಾದ್ದು. ನಾವು ಆ ದೇಶ ಮೊತ್ತದೆ ರಾಜ ತಾಂತ್ರಿಕ ಸಂಬಂಧ ಇಟ್ಟು ಕೊಂಡಿದ್ದೇವೆ. ದಕ್ಷಿಣ ವಿಯೆತ್‌ನಾಂ ರಾಜಧಾನಿ ಸೈಗಾನಿನಲ್ಲಿ ನಮ್ಮ ದೇಶದ ರಾಜ್ಯವಾದ ಕಾನ್ಸುಲೇಟ್ ಕಛೇರಿಯಿದೆ. ಇವೆಲ್ಲಕಿಂತಲ್ಲಿ ವಿಯೆತ್‌ನಾಂ ಸರಕಾರ ಇನ್ನೂ ಪ್ರತಿನಿಧಿಗಳು ರಾನ್ಸುಲೇಟ್ ಜನರಲ್ಲಾದ್ದಾರೆ.

ಹೀಗಿರುವ ಸನ್ನಿವೇಶದ ಉತ್ತರ—ದಕ್ಷಿಣ ವಿಯೆತ್‌ನಾಂ ಸರಕಾರಗಳು ಕತ್ತಿ ಕಾಳಗ ಪ್ರಾರಂಭಿಸಿವೆ. ದಿನೇ ದಿನೇ ಮೂರ್ತಿಯನ್ನು, ಅಂತರಿಕವಾಗಿಯೂ ಈ ವಿಷಯ ಪ್ರಪಂಚಕ್ಕೆ ಜಾಹೀರಾತಿಯೂ ಈ ವಿಷಯ ಪ್ರಪಂಚದ ಕಂಠದ ಇದೆ. ಒಂದು ವಿಕಸನ ತೈಗೆ ಅಂಟಿ ಕೊಂಡಿದೆ. ಇನ್ನೊಂದು ಲೋಕ ಸಭೆಯಲ್ಲಿ ನಿಷ್ಠೆ ಇಟ್ಟು ಕೊಂಡಿದೆ. ಆದ್ದರಿಂದ ಒಂದಕ್ಕೆ ಇನ್ನೊಂದನ್ನು ಸೋಲಿಸುವ ಹೆಬ್ಬಯಕೆ. ಆ ಕಾರಿತ. ಉಭಯ ರಾಷ್ಟ್ರಗಳೂ ಅಯೋಧ—ಪ್ರಶಾಸ್ತ್ರೋಕ್ತಗಳನ್ನು ಪಡಿಸುತ್ತಲೇ ಇವೆ. ರಷಿಯಾ—ಚೈನಗಳ ಬೆಂಬಲದಿಂದ ಉತ್ತರ ವಿಯೆಟ್‌ನಾಂ ದಕ್ಷಿಣದ ಮೇಲೆ ಧಾಳಿ ನಡೆಸುತ್ತಿದೆ. ಅದ್ದರಿಂದ ಅದರ ಪ್ರತಿಭಟನೆಗೆಂದು ದಕ್ಷಿಣ ವಿಯೆಟ್‌ನಾಂ ಸೈಗಾನ್ ಸರಕಾರವನ್ನು ಕೆಡವಿ ಹಾಕುತ್ತಿದೆ—ಇದು ದಕ್ಷಿಣ ವಿಯೆಟ್‌ನಾಂ ಸರಕಾರದ ಮಾತು. ಸ್ಥಳೀಯ ಪ್ರಾಬಲ್ಯವನ್ನು ಹೆಚ್ಚಿಸಲು ಕೆಲವು ಸೈಗಾನ್ ಸರಕಾರದ ವಿರುದ್ಧ ದಂಗೆ ಎದ್ದಿರುತ್ತಾರೆ. ಇವರನ್ನು ಕತ್ತಿಲಲು ಸೈಗಾನ್ ಸರಕಾರ ಅನೇಕಸಲ ಬಾಂಬ್ ದಾಳಿಗಳನ್ನು ಜರಗಿಸಿದೆ—ಇದು ಉತ್ತರದ ಪ್ರತ್ಯಾರೋಪ.

ದಕ್ಷಿಣ ವಿಯೆಟ್‌ನಾಂನ ದಂಗೆಕಾರರು ಕಮ್ಯೂನೀ ಆದ ಒಂದು ಸಂಘಟನೆ ರಚನೆ ಮಾಡಿಕೊಂಡಿದ್ದಾರೆ. ಈ ಸಂಘಟನೆಯನ್ನು ಅವರು "ರಾಷ್ಟ್ರೀಯ ವಿಮೋಚನಾ ಪಕ್ಷ" ಎಂದು ಕರೆದುಕೊಳ್ಳುತ್ತಾರೆ. ಈ ವಿಮೋಚನಾ ಪಡೆಯು ನೆರೆಯವರ್ಲ್ಲಿ ಅಲ್ಲೊಂದು ಗೆರಿಲ್ಲಾ ಪಡೆ ರಚಿಸಿಕೊಂಡಿರುವುದು ಉತ್ತರ ವಿಯೆಟ್‌ನಾಂ ಸರಕಾರ ಮಾಡಿದೆ. ಆದು ಸೈಗಾನ್ ಸರಕಾರದ ವಿರುದ್ಧ ಯುದ್ಧ ಸಾರುತ್ತಿದೆ. ಯುದ್ಧದಲ್ಲಿ ಜಯ ತನ್ನ ಕಾಲಿಗೆ ಎಂಬ ಭರವಸೆಯಿಂದ—ಇತ್ತೀಚೆಗೆ ದಕ್ಷಿಣದಲ್ಲಿ ಸರಕಾರ ತನ್ನ ಕೈಗತವಾಗಿದೆಯೆಂಬ ನಂಬಿಕೆಯಿಂದ—1969 ಜೂನ್ ಸುಮಾರಿನಲ್ಲಿ ಈ ವಿ ನೋಚನಾ ಸಂಘ ಒಂದು ತಾತ್ಕಾಲಿಕ ಸರಕಾರವನ್ನು ರಚಿಸಿತು. ಈ ದಂಗೆಕಾರ ಸರಕಾರದ ಚಟುವಟಿಕೆಗಳ ನಿರ್ದೇಶನ ಉತ್ತರ ವಿಯೆತ್‌ನಾಂ ಸರಕಾರ, ಹಾಗೂ ಆಲ್ಲಿಯ ಕಮ್ಯೂನಿಸ್ಟ್ ಪಾರ್ಟಿಯಿಂದ ನಡೆಸಲ್ಪಡುತ್ತಿದೆ. ಇದು ಎಲ್ಲರಿಗೂ ತಿಳಿದ ವಿಚಾರ.

ಆಶ್ಚರ್ಯದ ಸಂಗತಿ ಎಂದರೆ ಈ ತಾತ್ಕಾಲಿಕ ಸರಕಾರದ, ರಾಷ್ಟ್ರೀಯ ವಿಮೋಚನಾ ಪಡೆಯ ಮುಖ್ಯ ಕಛೇರಿಗಳಿರುವುದು ಉತ್ತರ ವಿಯೆಟ್‌ನಾಂನ ರಾಜಧಾನಿ ಹನಾಯಿಯಲ್ಲಿ.

ಪೇಡಂ ನ್ಯಾಜಿನ್ ಥೀ ಬಿನ್ ಈ ತಾತ್ಕಾಲಿಕ ಸರಕಾರದ ವಿದೇಶಾಂಗ ಮಂತ್ರಿ. ಆಕೆಯನ್ನು ಭಾರತ ಸರಕಾರ ಇಲ್ಲಿಗೆ ಬರಲು ಆಮಂತ್ರಿಸಿತು. ನಮ್ಮ ಸರಕಾರದ ಗೌರವಾನ್ವಿತ ಅತಿಥಿಯಾಗಿ ಪೇಡಂ ಬಿನ್ ಇತ್ತೀಚೆಗೆ ನಮ್ಮ ದೇಶಕ್ಕೆ ಬಂದರು, ಇಲ್ಲಿ ಪ್ರವಾಸ ಕೈಗೊಂಡರು. ಸರಕಾರ ತನ್ನ ಈ ಘೋಷಣೆಯಿಂದ ಅನುವ ಪರಿಣಾಮದ ಕಡೆಗೆ ಎಳ್ಳಷ್ಟೂ ಆಲೋಚಿಸಿದಂತೆ ಭಾಸವಾಗುವುದಿಲ್ಲ. ಇದು ಬರಿಯ ತಪ್ಪು ಹೆಜ್ಜೆಯಲ್ಲ; ಅಪಾಯದ ಹೆಜ್ಜೆಯೆಂದು ಜೋಳದೆ ವಿಧಿಯಿಲ್ಲ.

ಒಂದು ನಿದರ್ಶನದ ಮೂಲಕ ಈ ಅಪಾಯದ ಅರಿವನ್ನು ಮೂಡಿಸಿಕೊಡಬಹುದು.

ಕಾಶ್ಮೀರ—ವಿಯೆಟ್‌ನಾಂ ಸಮಸ್ಯೆಗಳಲ್ಲಿ ಸಾಮ್ಯವುಂಟು.

ಕಾಶ್ಮೀರ— ಭಾರತ - ಪಾಕಿಸ್ತಾನದ ಮಧ್ಯೆ ಇವೆ. ಕಾಶ್ಮೀರ ಭಾರತದೊಡನೆ ವಿಲೀನವಾದ ದಿನದಿಂದಲೂ ಇದರ ಸ್ವಾಮ್ಯ ನಮ್ಮ ಸರಕಾರದ ತಲೆ ತಿನ್ನುತ್ತಿದೆ. ಕಾಶ್ಮೀರವನ್ನು ಳಿಸಿಕೊಳ್ಳಲು ನಾವು ಎರಡು ಯುದ್ಧಗಳನ್ನು ನಡೆಸಿದೆವು. ಇನ್ನೂ ಕಾಲ್ಕೃತಿ ಹಿನಕ್ಕೆ ಬಾದಿಲ್ಲ. ಅಲ್ಲಿರುವ ಸಮಸ್ಯೆ ಒಂದಲ್ಲ ಒಂದು ರೀತಿಯಲ್ಲಿ ಆಗಾಗ ಕೆಡೆಯುತ್ತಿ ನತೀಸ ತ್ತಿದೆ. ವಿಯೆಟ್‌ನಾಂನಲ್ಲಿ ಕಾಣ ಬರುವ ಸಿಡಿಮದ್ದಿನ ಸ್ಫೋಟ ಅಷ್ಟಿಲ್ಲವಾದರೂ, ಅಲ್ಲಿ ಯುದ್ಧದ ಬೇಗೆ ಜಾಗೃತವಾಗಿದೆ. ವಿಯೆಟ್‌ನಾಂನಲ್ಲಿ ವಿದೆದ ಪ್ರಮಾಣದ ನರಮೇಧ ಕಾಶ್ಮೀರದಲ್ಲಿ ಆಗಲಿಲ್ಲವಾದರೂ ಆಗಿರುವ ನಾವು—ನೋವು ಕಡಿಮೆಯೇನಲ್ಲ.

ಕಾಶ್ಮೀರದ ಒಂದು ಸಣ್ಣ ಭಾಗ—ಆಜಾದ್ ಕಾಶ್ಮೀರ—ಈಗ ಶತ್ರುಗಳ ಅಧೀನದಲ್ಲಿದೆ. ಈ ಭಾಗದಲ್ಲಿ ಈದ ಹಿಂದು ಮುಸ್ಲಿಂ ಸಂಘಟನೆ ಇದೆ. ಈ ಸಂಘಟನೆಗೆ ಪಾಕಿಸ್ತಾನದ ಪ್ರೋತ್ಸಾಹ ದೊರಕುತ್ತಿ ಬಂದಿದೆ. ವಿಯೆಟ್‌ನಾಂನಲ್ಲಿರುವಂತೆ, ಆಜಾದ್ ಕಾಶ್ಮೀರದ ಭೂಮಿಯೂ ಒಂದು ಗೆರಿಲ್ಲಾ ಪಡೆಯ ಪೆ. ಈ ಗೆರಿಲ್ಲಾ ಪಡೆಗೆ ಶಸ್ತ್ರಗಳನ್ನು ಪಾಕಿಸ್ತಾನ ಒದಗಿಸುತ್ತಿದೆ. ಆಜಾದ್ ಕಾಶ್ಮೀರದ ಗೆರಿಲ್ಲಾ ಪಡೆ, ವಿಯೆಟ್‌ನಾಂಗಿನ ತೆರನಾಂತೆ, ಕಾಶ್ಮೀರದೊಳಕ್ಕೆ ಪ್ರವೇಶಿಸಿ, ಅಲ್ಲಿಯ ಸರಕಾರವನ್ನು ಬುಡ ಮೇಲು ಮಾಡಲು ಸಮಯ ಸಾಧಿಸುತ್ತಿದೆ. ವಿಯೆಟ್‌ನಾಂನಲ್ಲಿರುವಂತೆ ಇಲ್ಲಿಯೂ ಒಂದು ತಾತ್ಕಾಲಿಕ ಸರಕಾರವಿದೆ. ಇವುಗಳ—ಕಾಶ್ಮೀರಗಳನ್ನು ಇಲ ಪ್ರಯೋಗದ ಮೂಲಕ ತನ್ನ ಅಂಕೆಯೊಳಗೆ ತರುವುದೇ ಅದರ ಉದ್ದೇಶ.

ನಮ್ಮ ದೇಶದೊಡನೆ ರಾಜ ತಾಂತ್ರಿಕ ಸಂಬಂಧ ಇಟ್ಟು ಕೊಂಡ, ಅಮೆರಿಕ, ಇಂಗ್ಲೆಂಡು, ಅಥವಾ ಅರಬ್ ರಿಪಬ್ಲಿಕ್, ಕಾಶ್ಮೀರದ ಈ ತಾತ್ಕಾಲಿಕ ಸರಕಾರದ ಮಂತ್ರಿಯೊಬ್ಬರನ್ನು ತಮ್ಮ ದೇಶಕ್ಕೆ ಗೌರವಾನ್ವಿತ ಅತಿಥಿಯಾಗಿ ಆಹ್ವಾನಿಸಿದರೆ ನಾವು ಏನು ಮಾಡಿಯೇವು? ನಮ್ಮ ಪ್ರತಿಕ್ರಿಯೆ ಆಗ ಕೇಗರ ಬಸದು? ನಾವು ಒಟ್ಟಾಗಿ ನಿಂತು ಅಹ್ವಾನಿಸಿದ ರಾಷ್ಟ್ರವನ್ನು ನಿಂದಿಸಿ ಇರಲಾರೆವು. ಆ ರಾಷ್ಟ್ರ ದೊಡನಿರುವ ರಾಜತಾಂತ್ರಿಕ ಸಂಬಂಧವನ್ನು ಕಡಿದುಕೊಳ್ಳಲು ಹಿಂದು ಮುಂದು ನೋಡಲಾರೆವು.

ಹೀಗಿರುವಲ್ಲಿ ಪೇಡಂ ಬಿನ್ ಅವರನ್ನು ಹೂವ ಆಧಾರದ ಮೇಲೆ ನಮ್ಮ ಸರಕಾರ ಆಮಂತ್ರಿಸಿತು. ಸೈಗಾನ್ ಸರಕಾರದ ತಾಳ್ಮೆಗೆ ಹಾವು ತಲೆದೂಗಿ ಬಲ್ಲೆವಾದರೂ ನಮ್ಮದು ತಪ್ಪು ಹೆಜ್ಜೆ ಎಮ್ಮುವ ದರಲ್ಲಿ ಎರಡಭಿಪ್ರಾಯ ಇರಲಾರದು.

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore — 27.**

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಭಾರತವನ್ನು ಬೆಳಗುತ್ತಿರುವ ಪುಣ್ಯನದಿ:— ಗಂಗಾ

(ಐದನೇ ಪುಟದಿಂದ)

ಗೂ ದೊಡ್ಡ ಯೋಜನೆಗಳಲ್ಲಿ ಒಂದೆನಿಸಿದೆ.

ಗಂಗಾಕಣಿವೆಯಲ್ಲಿ ವಿದ್ಯುತ್ ಉತ್ಪಾದನೆ ಯೋಜನೆಗಳೂ ರೂಪಗೊಂಡಿವೆ. ಹಾಸೋದರಕೊಳ್ಳದ ಮೈಥಾನ್ ಹಾಗು ಪಾನಕೇಟ್ ಪ್ರದೇಶಗಳಲ್ಲಿ ಜಲ ವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಚಂಬಳಾ ಜಲಾಶಯ ಹಾಗು ರಿಹಾಂಡ್ ಜಲ ಶಯಗಳು ಕೂಡಿ 875000 ಕಿ. ವ್ಯಾ. ವಿದ್ಯುಚ್ಛಕ್ತಿಯನ್ನು ಉತ್ಪಾದಿಸುತ್ತಿವೆ. ನಾಗಾರ್ಜುನ ಸಾಗರವನ್ನ ಬಟ್ಟರೆ ರಿಹಾಂಡ್ ಜಲಾಶಯವೇ ಭಾರತದಲ್ಲಿ ಅತಿದೊಡ್ಡ ಮಾನವನಿರ್ಮಿತ ಜಲಾಶಯವಾಗಿದೆ.

ರೈಲ್ವೆಗಳು ಬರುವ ಮುಂಚೆ ಗಂಗೆ ಜಲಮಾರ್ಗ ಅತ್ಯಂತ ಲೋಕಪ್ರಿಯವಾಗಿತ್ತು. ನೀರಾವರಿಗೆಂದು ಹೆಚ್ಚಿನ ನೀರಿನ ಬಳಕೆ ಪ್ರಾರಂಭವಾದ ಮೇಲೆ, ಸ್ವಾತಂತ್ರ್ಯಾನಂತರ ಗಂಗಾಕಣಿವೆಯಲ್ಲಿ ಹೆಚ್ಚಾಗಿ ನೀರು ದೊರೆಯದೆ ಹೋಗಿದೆ. ಗಂಗಾನಿಮ್ನ ನೀರಿನ ಪರ್ಣ ಬಳಕೆಗೆ ಬೇಕಾಗಿರುವ ಜಲಾಶಯದ ಸ್ಥಳಗಳು ಸಾಕಷ್ಟು ಲಭ್ಯವಿಲ್ಲ ಹಿನ್ನೆಲೆಯುದಲ್ಲಿ ಇಂತಹ ಕೆಲಸಕ್ಕಳಗಳಿದ್ದರೂ ಅತಿ ಎತ್ತರದ ಆಣೆಕಟ್ಟುಗಳನ್ನು ಕಟ್ಟುವ ಬೇಕಾಗುವದು. ಆದರೆ ಇವು ವಿಸ್ತೃತವಾದ ಯೋಜನೆಗಳು ಆಗಲಾರವು. ಈ ಕೊಂದರೆಯನ್ನು ಎದುರಿಸಲು ಇತ್ತೀಚಿನ ವರ್ಷಗಳಲ್ಲಿ ಪಂಪ್‌ಸೆಟ್ಟುಗಳ ಸಮೂಹ ಯೋಜನೆಗಳನ್ನು ಕಡೆಯಲು ದೋಹಿ ಫಾಟ್ ಪಂಪ್ಸ್ ಕಾಲುವೆ ಹಾಗೂ ಕಂಡಾ ಪಂಪ್ಡ್ ಕಾಲುವೆಗಳು ಹೂರ್ಣಗೊಳಿಸಲಾಗಿದ್ದು ಇವು 0.8 ಲಕ್ಷ ಹೆಕ್ಟೇರ ಭೂಮಿಗೆ ನೀರನ್ನು ನೀಡುವವು. ದೊರಿಗಂಗೆಯನ್ನು ದಕ್ಷಿಣದ ಕಾವೇರಿಗೆ ಕೂಡಿಸಬೇಕೆಂಬ ಕನಸು ನನಸಾದಾಗ ಗಂಗಾಜಲವು ಭಾರತದ ದಕ್ಷಿಣದ ತುದಿಯವರೆಗೂ ಲಭ್ಯವಾಗುವದು. ಭಾರತೀಯನ ಜನ್ಮ ಧನ್ಯವೆನಿಸದು.

ಉಡ್ಪಿ ಮುನ್ಸೀಫ್ ಕೋರ್ಟಿನಲ್ಲಿ

O. S. 171/66

ಶ್ರೀ ಸೋದೆ ವಾದಿರಾಜ ಮಠ —ವಾದಿರು ಮತ್ತು

ಸೋಪನ ಬ್ಯೂ (ಪಾತಿ) ಅಲೇಕ್ಸ್ ಮೋತಿ ಕೊಡಾ —ಪ್ರತಿವಾದಿರು ಯವರೊಳಗೆ

ನೆಟ್ಟಿ ಮೆಂಟು ಪ್ರತಿವಾದಿರು—

೫ನೇ ವೆ.ಸಿನ ಮಥಾಯಸ್ ಬ್ಯೂ
೬ನೇ ಕ್ರಿಸ್ತೋದರ್ ಮಥಾಯಸ್
೭ನೇ ಥೋಮಸ್ ಮಥಾಯಸ್

—ಸೆರಿಪಿನ ಬ್ಯೂ ಮುಕ್ಕಳು. ಉಡ್ಪಿ ತಾಲೂಕು ಶಿವಳ್ಳಿ ಗ್ರಾಮದವರಿರುವ ವಂದು—

ವಾದಿರು ಗೆಣಿ ಬಾಕಿ ಇಗ್ಗೆ ದಾವ್ಲು ಮಾಡಿದ ಮೇಲ್ಕಂಡ ದಾವೆಯು ತಾ. 7.9.1970 ಕ್ಕೆ ಇಟ್ಟಿದ್ದೆ. ಆ ದಿವ್ಸ ಬೆಳಿಗ್ಗೆ 10 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಉದಾಸೀನದ ಪರಿ ಕಪ್ಪಡ್ಡಲ್ಲಿ ನಿಂದು ಗೈರ್ ಹಾಜರಿಯಲ್ಲಿ ಸದ್ರಿ ದಾವೆ ತೀರ್ಪಾಗಿಸಲಾಗುವುದು.

(By order of Court)

Sd/- V.G.KEDLAYA, M.A.,LL.B.
Advocate, Udipi

ಉಡ್ಪಿ, ತಾ. 18—8—70.

ನಮ್ಮ ಸ್ವಾತಂತ್ರ್ಯ ಅಹಿಂಸಾತ್ಮಕ ಸಂಪಾದನೆಯೇ?

(ಸ್ವಾಮಿನೇ ಪುಟದಿಂದ)

ಕಂಬಿಗಳನ್ನು ಕಿತ್ತೊಗೆಯಿರಿ; ದಾರಿದೀಪ ಕಳಸವನ್ನೂ, ದೀಪಗಳನ್ನೂ ಧ್ವಂಸಮಾಡಿ; ರೈಲು ಕಂಬಿಗಳ ಮೇಲೆ ಕಲ್ಲುಗಳನ್ನೂ, ಕೇರಿ ರೈಲುಗಳನ್ನು ತುಳಿಸಿ ಬಿಡಿ; ಅಂಗಡಿಗಳು, ಕಚೇರಿಗಳನ್ನು ಮುಚ್ಚಿಬಿಡಿ; ಎಲ್ಲ ಸಂಚಾರ ಸಾಧನಗಳನ್ನೂ ಕೊನೆಗಾಣಿಸಿ ಬಿಡಿ!"

"ಇನ್ನು ನಾನು ತಾಯಲಾರೆ"—ಗಾಂಧೀಜಿ

ಇವೆಲ್ಲ ಅಹಿಂಸಾತ್ಮಕ ಕಾರ್ಯಗಳೆಂದು ಹೊರು ತಾನೆ ಹೇಳಿಬಿಟ್ಟರೂ ಗಾಂಧೀಜಿಯವರೇ ನಾಯಕತ್ವ ವಹಿಸಿ ಪಡೆಸಿದ ಸಾಮೂಹಿಕ ಸತ್ಯಾಗ್ರಹಗಳು ಹಿಂಸೆಯು ಳ್ಳಿ ಮುಕ್ತಾಯವಾದುವು. ಈ ಅನುಭವ ಗಾಂಧೀಜಿಯವರಿಗೆ ಒಂದೆರಡು ಸಲವೇ ಆಗಿದೆ. ಆದರೂ ಗಾಂಧೀ ಜಿಯವರು ದಾಕ್ಷಿಣ್ಯವನ್ನೆಲ್ಲ, ಸಾಮಾನ್ಯ ಜ್ಞಾನ ಹಿಂದು ಸಂಸ್ಕೃತಿಗಳಾರತಕ್ಷವನ್ನೂ, ಸಹಿಸಿ, ಸಹಿಸಿ, ಸಾಕಾಗಿ ಹೀಗೆ ಹೇಳಿದರು:

"ವಿದೇಶೀ ನೊಗದಿಂದ ಮುಕ್ತವಾಗಲು ಭಾರತವು ಸಾಕಷ್ಟು ಅಹಿಂಸಾತ್ಮಕ ಬಲ ಸಂಗ್ರಹ ಮಾಡುವುದೇನೋ ಎಂದು ನಾನು ಕಾದೆ, ಬಹಳ ಕಾದೆ. ಆದರೆ ಫಲ್ಗು ಮನೋಧರ್ಮದಲ್ಲಿಗ ಬಹಳಾವಣೆಯಾಗಿದೆ. ಇನ್ನು ನಾನು ತಾಳುಲಾರೆನೆನ್ನಿಸುತ್ತಿದೆ. ಇನ್ನಲ್ಲಿ ಫಲ್ಗು ಅಹಿಂಸೆ ಇಲ್ಲದೆ ಇರಬಹುದು. ಆದರೆ ಫಲ್ಗು ಅಹಿಂಸೆ ಅವರಿಗೆ ಸಹಾಯಕವಾಗಬಹುದು. ಈಗ ವ್ಯವಸ್ಥಿತ ಅರಾಜಕತೆಯು ನಮ್ಮ ಸತ್ಯಕ್ಕು ತ್ತ ಅವಮಾನದೆಯೆಂದು ನನ್ನ ನಂಬಿಕೆ. ಬ್ರಿಟಿಷರು ಭಾರತ ಬಿಟ್ಟು ಹೋಗುವುದಕಂ ತ ಅರಾಜಕತೆ ತಲೆದೋಕಬಹುದು. ಆಗ ನನ್ನನ್ನು ಮೊತ ಕೇಳದೆ, ನನ್ನ ಶಿಷ್ಯ ಯಕ್ಕೆ ಬೆಲೆಕೊಡದೆ ಹೋದರೆ, ನಾವು ಅವರ ಸ್ವಭಾವಶಕ್ತಿಯನ್ನು ಮೆಚ್ಚಿನಿಲ್ಲಬೇಕು. ಆಗ ಅರಾಜಕತೆ ಅಂಟಾಗಲೇ ಬೇಕು. ಆದರೆ ಆ ಅರಾಜಕತೆ ಈಗಿನ ಅರಾಜಕತೆಗಿಂತ ಬೇಳಾಗಿರಲಾರದು. ಇಷ್ಟೂ ಹೇಳಿದ ಮೇಲೆ ಒಂದು ಮಾತು; ಕ್ಷತ್ರಿಯರಾದವರು ಭಯಂಕರ ಹಿಂಸಾ ಕೃತ್ಯಗಳನ್ನು ಹೂಡಲಾರರು; ಅರಾಜಕತೆಯನ್ನುಂಟುಮಾಡಲಾರರು. ಈ ಅನಾಯಕತ್ವ ಗರ್ಭದಿಂದಲೇ ಶುದ್ಧ ಅಹಿಂಸೆಯ ಅವತಾರವಾಗಬಹುದೆಂಬುದು ನನ್ನ ನಂಬಿಕೆ."

1942—43ರಲ್ಲಿ ನಡೆಸಿ 'ಕ್ವಿಟ್ ಇಂಡಿಯಾ' ಆಂದೋಲನ "ದೇಹಿಯಿರಿ ಇಲ್ಲವೆ ಮಡಿಯಿರಿ ಚಳವಳಿಯು" "ಅಹಿಂಸಾ

ಅಮೃತಾಂಜನ

● ತಲೆ ನಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಬೆಳಗಾಂವಿ ಗಡಿತಂಟೆ

ಮಹಾಪ್ಪದ ಪಟ್ಟು

ಗಡಿತಂಟೆಯು ಇತ್ಯರ್ಥ ತಾನು ಬಯಸಿದ ರೀತಿಯಲ್ಲಿಯೇ ಆಗಬೇಕೆಂದು ಮಹಾರಾಷ್ಟ್ರ ಪಟ್ಟು ಹಿಡಿದಿರುವುದು ತೀರ ಸ್ಪಷ್ಟ. ಇದಕ್ಕೆ ಕೇಂದ್ರ ನಾಯಕರು ಸೈಗುಟ್ಟುತ್ತಿರುವುದು ಪರಮಾಶ್ಚರ್ಯ. ಮಹಾಜನ ಆಯೋಗವು ವರದಿಯನ್ನು ಒಪ್ಪಿಸಿದಾಗ ಮಹಾರಾಷ್ಟ್ರದ ಶ್ರೀ ಚವಾಣರು ಕೇಂದ್ರದ ಗೃಹ ಮಂತ್ರಿಗಳಾಗಿದ್ದರು ವರದಿಯನ್ನೋದಿದ ಅವರಿಗೆ ತೀರ ನಿರಾಶೆಯಾಗಿರಬೇಕು. ಪತ್ರಿಕೆಗಳಿಗೆ ಅವರು ಹೇಳಿಕೆ ಕೊಟ್ಟಿದ್ದರು. ಆದರೆ ಅವರು ಮಹಾಜನ ವರದಿಯನ್ನು ಮೂಲೆಗುಂಪು ಮಾಡಿ ಬಿಡಬಹುದೆಂಬ ಸಂಶಯ ಆಗಲೇ ಕರ್ನಾಟಕದವರ ಮನದಲ್ಲಿ ಮೂಡಿದ್ದಿತು. ಈಗ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡಿದರೆ, ಕೇಂದ್ರವು ಕ್ಷಾಯ ಪಕ್ಷಪಾತಿಯಾಗಿರದೆ, ಮಹಾರಾಷ್ಟ್ರೀಯರ ಕೈಗೊಂಬೆಯಾಗಿರುವಂತೆ ಭಾಸವಾಗುತ್ತದೆ.

ಕೇಂದ್ರದ ನಿಲುವು

ನೊದಲಿನಿಂದಲೂ ಕೇಂದ್ರವು ಮಹಾರಾಷ್ಟ್ರ ಸರಕಾರಕ್ಕೆ ಅಂಜಿ ನಡೆಯುತ್ತಿತ್ತು. ಮೈಸೂರಿನ ಬಗ್ಗೆ ತಾತ್ಸಾರವಿತ್ತು. ಕನ್ನಡಿಗರು ಸೈಲಾದವರೆಂದೇ ಅವರ ಭಾವನೆ ಎನಿಸುವಷ್ಟು ಮಟ್ಟಿಗೆ ಕೇಂದ್ರ ಮಹಾರಾಷ್ಟ್ರದ ಕಡೆಗೆ ಗಡಿ ತಂಟೆಯ ವಿಷಯದಲ್ಲಿಂತೂ ಒಲಿದಿತ್ತು. ಈ ಲಾದರೂ ಮಹಾರಾಷ್ಟ್ರೀಯರ ಮನಸ್ಸಿಗೆ ಸನೂಧಾನಕರವಾದ ರೀತಿಯಲ್ಲಿ ಗಡಿ ತಂಟೆಯನ್ನು ಪರಿಹರಿಸಬೇಕೆಂದೇ ಆದು ಉತ್ಸುಕವಾಗಿತ್ತೆ. ಆದುದರಿಂದಲೇ ಮಹಾಜನ ಆಯೋಗದ ತೀರ್ಪು ಸರಕಾರಕ್ಕೆ ಬಂಧನಕಾರಿ ಎಂದು ಅದು ಒಪ್ಪಿಸಿಲ್ಲ. ಆಯೋಗವು ಮಹಾರಾಷ್ಟ್ರದ ಪರವಾಗಿ ತೀರ್ಪು ಕೊಡಿದ್ದರೆ, ಪ್ರಾಯಶಃ ಉಭಯರಾಷ್ಟ್ರಗಳು ಈ ತೀರ್ಪಿಗೆ ಬದ್ಧರಾಗಿರಬೇಕೆಂದು ತಾನು ಉಪದೇಶಿಸಿದ್ದನ್ನು ಕಾರಣ ಮಾಡಿಕೊಂಡು ತೀರ್ಪನ್ನು ಕಟ್ಟು ನಿಟ್ಟಾಗಿ ಜಾರಿಗೆ ತರಲು ಆದು ಹಿಂದಿರಿಯಬಹುದಿತ್ತಲಿಲ್ಲ. ಈಗ ಮಹಾರಾಷ್ಟ್ರದ ಪರವಾಗಿ ವಿವಾದ ಬಗೆಹರಿಸಲು ಹೊಸ ಹೊಸ ಉಪಾಯದಳನ್ನು ಆದು ಹುಡುಕಲೋಚಿಸುತ್ತಿದೆ. ಒಂದರ ಹಿಂದೊಂದರಂತೆ ಆಯೋಗಗಳನ್ನು ಅಥವಾ ಪಂಚಾಯತಿ ಸಮಿತಿಗಳನ್ನು ಅಥವಾ ಜನಮತ ಗಣನೆಯಂತಹ ನಾಟಕಗಳನ್ನೂ ಸೃಷ್ಟಿಸಿದರೆ ಮಹಾರಾಷ್ಟ್ರದ ಪರವಾಗಿ ತೀರ್ಪನೀಡುವ ಸಂಯೋಗ ಎಂದಾದರೊಂದು ದಿನ ಬಂದೀತು ಎಂದರೆ ಫಲಿಮತಿಯೊಗಿರುವಂತೆ ತೋರುತ್ತದೆ. ಹಠಗ್ರಸ್ತೆಯಲ್ಲಿ ಒಮ್ಮೆ ಅಭಿಪ್ರೀತಿಗಾಗಿ ವಿದ್ಯಾರ್ಥಿಯು ಯಾವುದಾದರೊಬ್ಬ ಪರೀಕ್ಷಕನ ಕೈಯಲ್ಲಿ ಇಂತಹ ಪ್ಪ ಅಂಕಗಳಿಸಿಯೇನೆಂಬ ಶಪಥಕೆಯಂದ ಪುನಃ ಪುನಃ ಪರೀಕ್ಷೆಗೆ ಕಟ್ಟುವಂತೆ, ಕೇಂದ್ರ ಸರಕಾರವು ಹೊಸ ಹೊಸ ಸಂದರ್ಭಗಳನ್ನು ಸೃಷ್ಟಿಸಿ, ತನ್ಮೂಲಕ ಮಹಾಜನ ವರದಿಯನ್ನು ಕಿತ್ತೊಗೆಯುವ ಪ್ರಯತ್ನದಲ್ಲಿರುವಂತೆ ತೋರುತ್ತದೆ.

ಹೊಸ ಭಜನೆ

ಕೇಂದ್ರವು ತಾನಾಗಿ ದಾನಮಾಡುವ ಹಪ್ಪ ಬಿದಾರ್ಯವನ್ನು ತೋರಿಸಲು ಈಗ ಸಿದ್ಧವಿಲ್ಲ. ಯಾರಾದರೊಬ್ಬರ ಸಿಫಾರಸು ಆದಕ್ಕೆ ಬೇಕು. ಮಹಾಜನ ಆಯೋಗದ ಸಿಫಾರಸು ಮಹಾರಾಷ್ಟ್ರಕ್ಕೆ ಅಮೃತಾಲ ಕರವಾಗಿಲ್ಲ. ಆದುದರಿಂದ ಅಮೃತಾಲ ಕರವಾದ ಸಿಫಾರಸು ಬೇರೆಡೆಯಿಂದ ಬರ ಬೇಕು. ಆದ ಕೇಂದ್ರದೇ ಕೈ ಎತ್ತಿ ಕನ್ನಡದ ನೆಲವನ್ನು ಮಹಾರಾಷ್ಟ್ರಕ್ಕೆ ಕೊಟ್ಟಿಕೆಂಬ ಅಪವಾದದಿಂದ ಕಪ್ಪಕೆಂಡ ಳಿಬಹುದು.

ತಂತ್ರಕ್ಕೆ ಮೈಸೂರು ಸರಕಾರದ ಕಡು ವಿರೋಧ ಇತ್ತಾಗಲಿ, ಇಲ್ಲದೆ ಇರಲಿ, ಮೊನ್ನೆ ವಿರೋಧವೂ ಇದೆ ಎಂದು ದ್ರಕ್ಕೆ ಗೊತ್ತು. ಆದಕ್ಕಾಗಿ ಆದು ಪ್ರತಿನಿಧಿಗಳ ಮೂಲಕ ಹೋರಾಟ ಕ್ಕೆ ಪ್ರಾರಂಭಿಸಿದೆ. ಹೊಸತಾಗಿ ಕೇಂ ದ್ರಾನಂತ್ರಿಯಾಗಿ ಸೇರಿರುವ ಶ್ರೀ ಹನುಮಂತಯ್ಯನವರು, ಮಾತಾಡಲು ಅವಕಾಶ ಸಿಗುವಂತೆ ಮಾಡಿಸಲು ಮುಖ್ಯಮಂತ್ರಿ ಶ್ರೀ ಆರ್. ಎಂ. ವಾಟೇಲರು ಇತ್ಯಾದಿ ಇಂದಿರಾ ಕಾಂಗ್ರೆಸ್ಸಿನ ಭಕ್ತರು ಈಗ ಹೊಸ ಭಜನೆಯಲ್ಲಿ ತೊಡಗಿದ್ದಾರೆ. ಇಂದಿರಮ್ಮನ ಕೈಯಲ್ಲಿ ಮೈಸೂರಿಗೆ ಅನ್ಯಾಯವಾಗದು ಎಂದು ಅಭಯ ಹಸ್ತ ನೀಡುತ್ತಿದ್ದಾರೆ. ಇವರದೇ ಪಕ್ಷದ ಇಗ್ಗೆ ಮೊನ್ನಾಡಿದೆ ಹೈಗಿರುವುದೇ ಈಗ ಪ್ರಶ್ನೆ ಎನ್ನಿಸುತ್ತಿದೆ. ಹೊಸ ಸತ್ಯಾಗ್ರಹಗಳನ್ನು ಒಕ್ಕುಟ್ಟದು ಹಿತಕರ ಎಂದು ಬೋಧಿಸುತ್ತಾರೆ.

ಸ್ಪಷ್ಟ ದುರುದ್ದೇಶ

ಇವೆಲ್ಲವರ ಹಿಂದೆ ದುರುದ್ದೇಶವು ದುರು ದ್ದೇಶವೆಯುವುದು ಸ್ಪಷ್ಟ. ಕಾಂಗ್ರೆಸ್ಸಿನಿಂದ ಇಂದಿರಾಜಿ ಸಿಡಿದು ಹೊರಬಂದು ಹೊಸ ಪಕ್ಷವೊಂದನ್ನು ಕಟ್ಟಿದಾಗ, ಬೆಂಗಳೂರು ಕಾಂಗ್ರೆಸ್ಸಿನ ಸಂಘಟನೆಯ ಟ್ಟಾಗಿ ನಿಂತಿತು; ಇಂದಿರಮ್ಮನನ್ನು ಸೋಲಿಸಿಗೊಳಿಸಿದರೆ ಬೆಳಗಾಂವಿಯ ಸಮಸ್ಯೆ ತಾವು ಳಿಸಿಕೊಂಡು ಬಿಡಬಹುದೆಂದು ಭಾವಿಸಿದರೆಂಬಂತೆ, ಮಹಾರಾಷ್ಟ್ರದ ಮುಖ್ಯಮಂತ್ರಿ ಶ್ರೀ ಶ್ರೀ ಕಾಯಕರು ಅರಿಕ್ಷಣದಲ್ಲಿ ಅವರ ಶಿಷ್ಯತ್ವವನ್ನೆ ಪರಿತ್ಯಜಿಸಿದರು. ಮಹಾರಾಷ್ಟ್ರದ ಸರಕಾರ ಇಂದಿರೆಗೆ ಬಣ್ಣ ತಳೆಯಿತು. ಇಂದಿರಾಜಿಗೆ ಈ ಸಹಕಾರದ ಬಗ್ಗೆ ಪ್ರೀತಿ ಇರುವುದು ಸಹಜ. ಮಹತ್ವಾಕಾಂಕ್ಷೆಯೂದ ಆಕೆ ಮೈಸೂರಿನಲ್ಲಿ ಸಹ "ಇಂಡಿಕೇಟ್" ಧ್ವಜ ಏರಿಸಲು ಆತುರದಿಂದಿದ್ದಾರೆ. ಮೈಸೂರಿನ ಮನಗೆಲಿಸಿಕೊಳ್ಳಲೆಂಬಂತೆ ಹೀಸವೇಟಿಗೆ ಶುಕ್ಲಿನ ಕಾರ್ಖಾನೆ ಕೊಟ್ಟಿತು. ಶ್ರೀ ಹನುಮಂತಯ್ಯನವರಿಗೆ ಬಾಂತ್ರಿ ಪ

ಹಿಂಭಕ್ಕು

ತ್ಮಕವಾಗಿರಲಿಲ್ಲ" ಎಂಬುದನ್ನು ಗಾಂಧೀಜಿಯವರ ಪಶ್ಚಾತ್ತಾಪದ ಸ್ಥಾಪಿಸಿತ್ತಿದೆಯಲ್ಲವೇ? 'ತಾನು ತಾಳುಲಾರೆ ತಾಯಲಾರೆ'ನೆಂದು ಬಾಪೂಜಿ ಹೇಳಿದುದರ ಅರ್ಥವೇನು?

'ನೇರನಾದ ಕಾರ್ಯಕ್ರಮದ ಫಲವಾಗಿ ದೊಂಬಿಯೂಗ ಬೇಕೆಂದು ನಾನು ಬಯಸುವುದಿಲ್ಲ. ಎಲ್ಲವೆಚ್ಚುರಿಕೆಗಳನ್ನು ತೆಗೆದುಕೊಂಡ ನೇಲೂ ದೊಂಬಿ ನಡೆದರೆ ಅದು ಅನಿವಾರ್ಯ' ಎಂಬ ಗಾಂಧೀಜಿಯವರ ಪಶ್ಚಾತ್ತಾಪದ ವಾಕ್ಯ—ಸೂಚ್ಯಾರ್ಥಗಳನ್ನು ಗಮನಿಸಬೇಕು.

'ನಾವು ಸ್ವಾತಂತ್ರ್ಯವನ್ನು ಅಹಿಂಸಾ ಮಾರ್ಗದಿಂದಲೇ ಪಡೆದೆವೆನೆ?' ಎಂಬ ಪ್ರಶ್ನೆಗೆ ಉತ್ತರವಾಗಿ 'ಹಾಂ' ಅಂದರೂ ತಪ್ಪಾಪೀತು, 'ಅಲ್ಲ' ಅಂದರೂ ತಪ್ಪಾಪೀತು.

(ಕೇಶಾ)

ಉಡುಪಿ ನಾಗರಿಕರ ಪ್ರಚಂಡ ಪ್ರತಿಭಟನಾ ಸಭೆ

ಮಿತಿಮೀರಿದ ಸೊತ್ತು ತೆರಿಗೆ ಏರಿಕೆಯ ವಿರುದ್ಧ

ಉಡುಪಿ ನಗರ ಸಭಾ ಪ್ರದೇಶದಲ್ಲಿ ಇತ್ತೀಚೆಗೆ ನಡೆದ ಸೊತ್ತು ತೆರಿಗಾ ಪುನರ್ ವಿಮರ್ಶೆಯಲ್ಲಿ ಶಾಲ್ಮಲ ಹತ್ತು ಪಾಲು ತೆರಿಗೆ ಏರಿಸಿ ಬಹಳ ಅನ್ಯಾಯವಾಗಿದ್ದ ತೆರಿಗೆದಾರರಲ್ಲಿ ವಿಶೇಷ ಕ್ಷೋಭೆ ಉಂಟಾಗಿರುವದರಿಂದ ವಿವಿಧ ಪಕ್ಷಗಳ ಹಾಗೂ ಸ್ಥಳೀಯ ಪ್ರಮುಖರನ್ನೊಳಗೊಂಡ ಕ್ರಿಯಾಸಮಿತಿಯು ಕರೆದ ತೆರಿಗೆದಾರರ ಸಭೆಯು ಡೋನ್ ಬೋಸ್ಕೋ ಹಾಲ್‌ನಲ್ಲಿ ಮಾಜೀ ಕೌನ್ಸಿಲರ್ ಡಾ| ಪಿ. ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಶಾಂತಿಯುತ 23-8-70ರಂದು ಯಶಸ್ವಿಯಾಗಿ ಜರಗಿತು. ಕ್ರಿಯಾಸಮಿತಿಯ ಸದಸ್ಯರಲ್ಲಿ ಒಬ್ಬರಾದ ತಾಲೂಕು ಬೋರ್ಡು ಮೆಂಬರ್ ಎಡ್ವೋಕೇಟ್ ಶೇಷಗಿರಿ ವಿಠಲರಾಯ ಪಿಂಟೋರವರು ಸ್ವಾಗತ ಭಾಷಣಗೈದು ಸಭೆ ಕರೆದ ಉದ್ದೇಶವನ್ನು ವಿವರಿಸಿದರು. ಎಡ್ವೋಕೇಟ್ ವೈಲೂರು ವಾಸುದೇವ ರಾಯರು ತೆರಿಗೆ ಪುನರ್ವಿಮರ್ಶೆಯಲ್ಲಿ ಧಾರಾ ಅನ್ಯಾಯವಾಗಿರುವದನ್ನು ವಿವರಿಸಲಿಕ್ಕೆ ಪರಿಹಾರ ಮಾರ್ಗವನ್ನು ಹುಡುಕಬೇಕಾಗಿರುವದೆಂದೂ ಈ ಬಗ್ಗೆ ತಜ್ಞರಿಂದ ಅಭಿಪ್ರಾಯ ಪಡೆಯಬೇಕಾದ ಕಾರ್ಯವಿಧಾನಗಳನ್ನು ತಿಳಿಸಿದರು. ಮಾಜಿ ಕೌನ್ಸಿಲರ್ ಶ್ರೀ ನಾರಾಯಣ ಸೇರಿಗಾರರು ಇಂತಹ ಅನ್ಯಾಯವನ್ನು ಸಹಿಸಿ ಸುಮ್ಮನಿರುವದಕ್ಕಿಂತ ರಾಜೀನಾಮೆ ಕೊಡಬಹುದೆಂದೂ, ಅಧಿಕಾರಕ್ಕಾಗಿ ಹೊತ್ತ ನಾವಿರುವದಲ್ಲವೆಂಬುದನ್ನು ಜನರಿಗೆ ತೋರಿಸಿಕೊಡಬೇಕೆಂದೂ ಹೇಳಿದರು. ಶ್ರೀ ಎ. ಜೆ. ಅಲ್ಬೆಯವರು ಮೂತನಾಡುತ್ತಾ ಪುರಸಭೆಯ ಆದಾಯಕ್ಕೆ ತೆರಿಗೆ ಬೇಕೆಂಬುದು ನಿಜ. ಆದರೆ ಅದು ನ್ಯಾಯವಾದ ರೀತಿಯಲ್ಲಿ ಇರಬೇಕಾ ಅನ್ಯಾಯವಾದಾಗ ಪಕ್ಷ ಪ್ರತಿನಿಧಿಗಳು ಪ್ರತಿಭಟಿಸಬೇಕು. ನಮಗೆ ಅಧಿಕಾರವಿಲ್ಲ ಯೋಗ್ಯತೆಯಿಲ್ಲ ಎಂದು ಕೈಕಟ್ಟಿ ಕುಳಿತಿರುವದಲ್ಲ. ಏನೂ ಮಾಡಲಿಕ್ಕಾಗದಿದ್ದರೆ ರಾಜೀನಾಮೆ ಕೊಡುವುದು ಯೋಗ್ಯವೆಂದರು. ಅಲ್ಲದೆ ಭವಗಾರಿಗಾದರೂ ಕೌನ್ಸಿಲಿಗೆ ಹೋಗಬೇಕೆಂಬ ಆಸೆಯಿಂದ ಈ ಹೊತನ್ನು ಹೇಳುತ್ತಿಲ್ಲ. ಈ ಬಗ್ಗೆ ಧೂರೂ ಆಶಾರ್ಥ ಮಾಡ ಬಾರದೆಂದರಲ್ಲದೆ ಕೌನ್ಸಿಲಿಗೆ ಸಹಕಾರದ ಭರವಸೆ ಇತ್ತರು.

ಅಧ್ಯಕ್ಷ ಡಾ| ಪಿ. ಜಿ. ಆಚಾರ್ಯರು ಮಾತನಾಡುತ್ತಾ, ಅಪ್ಪಮಿಳಾದರೂ ತಮಗಾಗುತ್ತಿರುವ ಅನ್ಯಾಯದಿಂದ ಅಸಮಾಧಾನಗೊಂಡಿರುವ ತೆರಿಗೆದಾರರು ವಿಶೇಷವಾಗಿ ಬೆಂಬಲಿಸಿದ್ದಕ್ಕಾಗಿ ಸಂತೋಷ ವ್ಯಕ್ತಪಡಿಸಿ ಮುಂದಕ್ಕೆ ಎಲ್ಲರೂ ಸಂಘಟಿಸಿಕೊಳ್ಳಬೇಕೆಂದರು. ಕೊನೆಯಲ್ಲಿ ಶ್ರೀನರಸಿಂಹ ಪಾಂಗಣ್ಣಾಯರು ವಂದನಾರ್ಪಣೆಗೈದರು.

ಕನ್ನಡದಲ್ಲಿ ಅಸದೃಶವಾದ
ಹೊಸ್ತಕ

ಸ್ವಪ್ನ ಲೋಕ

ಮನೋವಿಶ್ಲೇಷಣದ ಬೆಳಕಿನಲ್ಲಿ ಕನಸುಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ವಿವರಗಳನ್ನೊಳಗೊಂಡ 'ಕಾರ್ತಿಕೇಯ'

ವಿರಚಿತ ಕೆರುಹೊತ್ತಗೆ

ಬೆಲೆ ರೂ. 0—50

ವಿದ್ವಾನ್ ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ ಪ್ರಸೆಂಗೆ
ಪುಸ್ತಕಗಳು

ನಾಹಸ ಭೀಮ ವಿಜಯ (ಗದಾಯುದ್ಧ) 0-50
ವಾಲಿ ಸುಗ್ರೀವ (ದುರಂತ ಯಕ್ಷಗಾನ ನಾಟಕ) 0-50
ಲತ್ತ ಪಗಡೆ 0-40
ಧಾರತಡ ಗುಡುಕುಲ 0-40
ಭರತೇಶ ದಿಗ್ವಿಜಯ 0-50

ಪ್ರತಿ ಪುಸ್ತಕಕ್ಕೂ ಬುಕ್ ಪೋಸ್ಟಿನಿಂದ ಕಳಿಸಲು 0-30 ಪೈಸೆ ಅಂಚೆ ಹೆಚ್ಚಿ

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ. ಕ.

ದವಿ ನೀಡಿದರು. ಬರುವ ಚುನಾವಣೆಯಲ್ಲಿ ಇಂದಿರಾಕಾಂಗ್ರೆಸ್ಸಿಗೆ ಜನಮತ ಒಲಿದು ಬರಬೇಕೆಂದು ಅವರಿಚ್ಛಿಸಿದರು. ಅದುರಿಂದ ವೈಸೂರಿನ ಬಹುಜನರ ಪ್ರತಿಭಟನೆಯನ್ನು ಲೆಕ್ಕಿಸದೆ ಮಹಾರಾಷ್ಟ್ರಕ್ಕೆ ಉದಾರದಾನ ನೀಡಲು ಅವರು ತುಸ ಹಿಂಜರಿಯುತ್ತಿದ್ದಾರೆ. ಮಹಾರಾಷ್ಟ್ರೀಯರಷ್ಟು ತೀವ್ರ ಹೆಜ್ಜಾಶಗೊಳಿಸಲಿಕ್ಕೆ ಸಶಾಆಕೆ ಸಿದ್ಧರಿಲ್ಲ. ಹಾಗೇನಾದರೂ ಮಾಡಿದರೆ ಶ್ರೀ ನಾಯಕರು ದಶ್ವರ್ಯಗೊಂಡಾರೆಂಬ ಭೀತಿ ಒಳಗೊಳಗೆ ಇರಬಹುದು. ಮೈಸೂರಿನಲ್ಲಿ ತಮ್ಮ ಧ್ವಜ ಊರುವವರೆಗೆ ವಿವಾದದ ಪರಿಹಾರವನ್ನು ಮುಂದೂಡುವುದೇ ಅವರ ಹಂಚಿಕೆಯಾಗಿರುವಂತೆ ತೋರುತ್ತದೆ. ಹೀಗಾಗಿ ಮಹಾರಾಷ್ಟ್ರಕ್ಕೆ ಕತ್ಯಾಲಕ್ಕೆ ಸಮಾಧಾನ ತಂದು ಕೊಡಬಹುದಾದ—ಅಂದರೆ ಶ್ರೀ ನಾಯಕರು ಮುಖಭಂಗಪಡಿಸಿಕೊಳ್ಳಬಹುದಾದ—ನಿರ್ಣಾಯಕ ಭರವಸೆ ಹುಟ್ಟಬಹುದು. ಈ ಕಾರ್ಯವಿಧಾನಕ್ಕೆ ಅಗ್ನಿ ಕ್ರಿಯಾ ಸಮಿತಿಯು ಸರ್ವ ಸಹಕಾರ ಕೊಡುವದಾಗಿ ನಾರಿದರು. ಇನ್ನೋರ್ವ ಮಾಜಿ ಕೌನ್ಸಿಲರ್ ಶ್ರೀ ದಾಸ ಸೇರಿಗಾರರು ತಮ್ಮ ಭಾಷಣದಲ್ಲಿ ಈ ಅನ್ಯಾಯದ ನಿವಾರಣೆಗೆ ಕೌನ್ಸಿಲ್ ಪ್ರಯತ್ನಿಸಿದಷ್ಟು ತೆರಿಗೆ ಕಡಿಮೆಯಾಗುವುದಿಲ್ಲ. ಕಂತ್ರಾಟಿಕೆ ನಡೆಯಬೇಕೆಂದರೆ ಅದು ಪಕ್ಷಪಾತ ರಹಿತ ರೀತಿಯಲ್ಲಿ ವರ್ತಿಸಲ್ಪಡದೆ ಎಂದು ಸಾದೋಹರಣವಾಗಿ ಹೇಳಿದರು. ಪುರಸಭೆಯು ಸದಸ್ಯೆ ಶ್ರೀಮತಿ ಪ್ರಭಾವತಿ ಭಟ್ಟರು ಅನ್ಯಾಯ ತಿಳಿಹೊಡನೆ ಅಧ್ಯಕ್ಷರ ಸಂಬಂಧಪಟ್ಟವರ ಗಮನಕ್ಕೆ ಈ ವಿಚಾರ ತಂದರೂ ಅವರು ತಾಟಸ್ಥ್ಯ ಧೋರಣೆ ವಹಿಸಿಸುವರೆಂದರು. ಅಲ್ಲದೆ ತಮ್ಮ ಕರೂರ್ ಬೆಂಬಲವನ್ನು ಸವಿತಿನೆ ಕೊಡುವ ಭರವಸೆಯೆತ್ತರು. ಪುರಸಭಾ ಸದಸ್ಯ ಶ್ರೀ ಬಾವಾ ಜಾನ್ ಸಾಹೇಬರು ತಾವು ಸಕಾಲದಲ್ಲಿ ಹೊಸ ತೆರಿಗೆ ಕುರಿತು ತಮ್ಮ ವಿರೋಧವನ್ನು ಕೇಳಿಕೊಳ್ಳುವ ಸತ್ಯ ಆ ಕಾರ್ಯಕ್ಕೆ ಪುರಸಭೆಯು ಅಧಿಕಾರಿಯೊಬ್ಬರನ್ನೇ ಪೋಸುವಂತೆ ವಿನಂತಿಸುವ ತಮ್ಮ ಎರಡು ಪೂರ್ಣಾಯುಷ್ಯವನ್ನು ಪುರಸಭೆಯು ವಿಟುಂಗಿನಲ್ಲಿ ಮುಂದಿಸಲು ಅಧ್ಯಕ್ಷರಿಗೆ ಕಳುಹಿಸಿದ್ದರೂ ಅದನ್ನು ಸಭೆಯಲ್ಲಿ ಮಂಡಿಸುವ ಅವಕಾಶವೇ ತನಗೆ ದೊರೆಯಲಿಲ್ಲವೆಂದರಲ್ಲದೆ ತಾನು ಅಧ್ಯಕ್ಷರಿಗೆ ಕಳುಹಿಸಿದ ನಿರ್ಣಾಯಗಳಿಗೆ ಮುಖ್ಯಾಧಿಕಾರಿಯವರಿಂದ ಫಿರಾಕರಣೆಯು ಉತ್ತರ ಬಂತೆಂದು ವಿಷಾದಪೂರ್ವಕ ತಿಳಿಸಿದರು. ಇನ್ನೋರ್ವ ಕೌನ್ಸಿಲರ್ ಶ್ರೀ ನಾರಾಯಣ ಸೇರಿಗಾರರು ಇಂತಹ ಅನ್ಯಾಯವನ್ನು ಸಹಿಸಿ ಸುಮ್ಮನಿರುವದಕ್ಕಿಂತ ರಾಜೀನಾಮೆ ಕೊಡಬಹುದೆಂದೂ, ಅಧಿಕಾರಕ್ಕಾಗಿ ಹೊತ್ತ ನಾವಿರುವದಲ್ಲವೆಂಬುದನ್ನು ಜನರಿಗೆ ತೋರಿಸಿಕೊಡಬೇಕೆಂದೂ ಹೇಳಿದರು. ಶ್ರೀ ಎ. ಜೆ. ಅಲ್ಬೆಯವರು ಮಾತನಾಡುತ್ತಾ ಪುರಸಭೆಯ ಆದಾಯಕ್ಕೆ ತೆರಿಗೆ ಬೇಕೆಂಬುದು ನಿಜ. ಆದರೆ ಅದು ನ್ಯಾಯವಾದ ರೀತಿಯಲ್ಲಿ ಇರಬೇಕಾ ಅನ್ಯಾಯವಾದಾಗ ಪಕ್ಷ ಪ್ರತಿನಿಧಿಗಳು ಪ್ರತಿಭಟಿಸಬೇಕು. ನಮಗೆ ಅಧಿಕಾರವಿಲ್ಲ ಯೋಗ್ಯತೆಯಿಲ್ಲ ಎಂದು ಕೈಕಟ್ಟಿ ಕುಳಿತಿರುವದಲ್ಲ. ಏನೂ ಮಾಡಲಿಕ್ಕಾಗದಿದ್ದರೆ ರಾಜೀನಾಮೆ ಕೊಡುವುದು ಯೋಗ್ಯವೆಂದರು. ಅಲ್ಲದೆ ಭವಗಾರಿಗಾದರೂ ಕೌನ್ಸಿಲಿಗೆ ಹೋಗಬೇಕೆಂಬ ಆಸೆಯಿಂದ ಈ ಹೊತನ್ನು ಹೇಳುತ್ತಿಲ್ಲ. ಈ ಬಗ್ಗೆ ಧೂರೂ ಆಶಾರ್ಥ ಮಾಡ ಬಾರದೆಂದರಲ್ಲದೆ ಕೌನ್ಸಿಲಿಗೆ ಸಹಕಾರದ ಭರವಸೆ ಇತ್ತರು.

ಅಧ್ಯಕ್ಷ ಡಾ| ಪಿ. ಜಿ. ಆಚಾರ್ಯರು ಮಾತನಾಡುತ್ತಾ, ಅಪ್ಪಮಿಳಾದರೂ ತಮಗಾಗುತ್ತಿರುವ ಅನ್ಯಾಯದಿಂದ ಅಸಮಾಧಾನಗೊಂಡಿರುವ ತೆರಿಗೆದಾರರು ವಿಶೇಷವಾಗಿ ಬೆಂಬಲಿಸಿದ್ದಕ್ಕಾಗಿ ಸಂತೋಷ ವ್ಯಕ್ತಪಡಿಸಿ ಮುಂದಕ್ಕೆ ಎಲ್ಲರೂ ಸಂಘಟಿಸಿಕೊಳ್ಳಬೇಕೆಂದರು. ಕೊನೆಯಲ್ಲಿ ಶ್ರೀನರಸಿಂಹ ಪಾಂಗಣ್ಣಾಯರು ವಂದನಾರ್ಪಣೆಗೈದರು.

ಲೆನಿನ್ವರ ನಿಯಮಪಾಲನೆ

ನಾನೊಮ್ಮೆ ಮೊಸ್ಕೋಪಟ್ಟಣದ ಕೈಪುಲಿನ ದಲ್ಲಿ ಕ್ಷೌರ ಮಾಡಿಸಿಕೊಳ್ಳಲಿಕ್ಕೆ ಹೋಗಿದ್ದೆ. ಅಕಸ್ಮಾತ್ತಾಗಿ ಲೆನಿನ್ವರೂ ಅದೇ ಸಲೂನಿಗೆ ಬಂದು ಬಿಟ್ಟರು. ಅವರನ್ನು ಸ್ವಾಗತಿಸಲಿಕ್ಕೆ ನಾವೆಲ್ಲರೂ ಎದ್ದುನಿಂತೆವು. ಅವರು ಎಲ್ಲರ ಕ್ಷೇಮವನ್ನು ವಿಚಾರಿಸಿ ಕೇಳಿ ತಿಳಿದುಕೊಂಡರು. ಮತ್ತೆ ತಮ್ಮ ಸರತಿ ಬರುವವರೆಗೆ ವೃತ್ತಪತ್ರ ಓದುತ್ತ ಕುಳಿತುಕೊಂಡರು.

ಒಂದು ಕುರ್ಚಿ ಖಾಲಿಯಾದೊಡನೆ ಕ್ಷೌರ ಮಾಡಿಕೊಳ್ಳಲು ಕೂತ್ರಿರೆಂದು ನಾವು ಅವರಿಗೆ ವಿನಂತಿಸಿದೆವು. ಆದರೆ ಅವರು "ನಾವು ಭಿಡೆಮುಲಾಜೆಯೇ ನಡೆಯಬೇಕು, ನಿಯಮವೇ ಪ್ರಧಾನವೇ ಏಳಬೇಕು, ಇವರು ಮಾಡಿರುವ ನಿಯಮಗಳನ್ನು ನಾವೂ ಪಾಲಿಸಬೇಕು, ನಿಮ್ಮ ಸೌಜನ್ಯಕ್ಕೆ ಧನ್ಯವಾದ" ಎಂದು ಉತ್ತರ ಕೊಟ್ಟು ಇದ್ದಬಿಟ್ಟರು.

"ನಿಮಗೆ ಶುಂಬಾ ಕೆಲಸ ಇರುತ್ತವೆ. ನಿಮ ಗೆ ಸ್ವಲ್ಪ ಪಡವಾದರೂ ಪರಾವಿಲ್ಲ" ಎಂದು ನಾವೆಲ್ಲರೂ ಆಗ್ರಹಪೂರ್ವಕ ಅವರಿಗೆ ಹೇಳಿದೆವು. ಆದರೂ ಅವರು ಏಳಲೇ ಇಲ್ಲ. ನಾವೂ ಅರು ಇನರಿದ್ದೆವು. ನಾವೂ ಏಳದೆ ಕುಳಿತೇಬಿಟ್ಟೆವು.

ಕೊನೆಗೆ ನಮ್ಮ ಧಾವನೆಯನ್ನು ನೋಯಿಸಬಾರದೆಂದು ಲೆನಿನ್ವರು ಆ ಕುರ್ಚಿಯ ಮೇಲೆ ಕುಳಿತು ಕ್ಷೌರ ಮಾಡಿಸಿಕೊಂಡರು. ಮತ್ತು ನಮಗೆಲ್ಲ ಧನ್ಯವಾದ ಅರ್ಪಿಸಿ ಹೊರಟುಹೋದರು.

(ಮೋಸ್ಕೋದಲ್ಲಯ ಒಬ್ಬ ಬಡಿಗ)

ಸ್ವಾತಂತ್ರ್ಯ ದಿನಾಚರಣೆ

ಉಡುಪಿ ನಗರ ಸಭೆಯು ಆಡಳಿತದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಪ್ರಸ್ತಿವಾರ್ ಕೃಷ್ಣ ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು. ಬೆಳಿಗ್ಗೆ ಅಜ್ಜರಕಾಡಿನಲ್ಲಿ ಮೆರವಣಿಗೆಯಿಂದ ಬಂದ ವಿದ್ಯಾರ್ಥಿಗಳ ಸಮ್ಮುಖದಲ್ಲಿ ನಗರ ಸಭಾಪತಿ ಡಾ| ವಿ. ಎಸ್. ಆಚಾರ್ಯರು ಧ್ವಜಾರೋಹಣಗೈದರು. ಶ್ರೀ ರಾಜೀವರು ಮಹಾಧಿಕಾರಿ ಪದವಿಯಿಂದ ನಿವೃತ್ತಿಯಿಂದ ಬಿಡುತ್ತಿರುವ ಪ್ರಯುಕ್ತ ಅವರಿಗೆ ಸಭೆಯ ವತಿಯಿಂದ ಮಾನಪತ್ರ ಕಾಣಿಕೆ ಸಮರ್ಪಿಸಿದರು.

ಕಳೆದ ಸಂಚಿಕೆಯ 10ನೇ ಪುಟದಲ್ಲಿ ಪ್ರಕಟವಾದ ಜನರುತದ ಪ್ರಕಟನ ಕಲಂನ ಮೊದಲ ಪಾರಾದಲ್ಲಿ Present letting value ಎಂಬುದು Present sitting value ಅಂತ ತಪ್ಪಾಗಿ ಮುದ್ರಿತವಾದುದಕ್ಕಾಗಿ ವಿಷಾದಿಸುತ್ತೇವೆ.

ಉಡುಪಿ ಮುನ್ಸಿಫ್ ಕೋರ್ಟ್‌ನಲ್ಲಿ

O. S. No. 169/1970

S. ಗೋಪಾಲ ಭಟ್ಟ ಪ್ರಾಪ್ತ —ವಾದಿ

ಕೇಕ್ ಉಕ್ಕಾನ ಸಾಬೇಬ-ಕುಕ್ಕಟ್ಟೆ ಶೇಖಕೇರ ಸಾಹೇಬರ ಮಗ-ಉಡುಪಿ ಕ್ಷಬಾಶಿವಳ್ಳಿ ಗ್ರಾಮದ ಅಂಬಿಬೆಟ್ಟು —ಪ್ರತಿವಾದಿ

ಇವರಿಬ್ಬರಿಗೆ

ಪ್ರತಿವಾದಿಗೆ ಈ ಮೂಲ ಕತಿಯುರಪಿಸು ಸುವುದೇನಂದ್ರೆ—ವಾದಿಗೆ ಪ್ರತಿವಾದಿಯು ಸಾ. 10-5-1966ರಲ್ಲಿ ರೂ. 1000ಕ್ಕೆ ಬರೆ ಕೊಟ್ಟ ರಿಜಿಸ್ಟ್ರಿ ಖತಿ ಈಡು ದಸ್ತಾವೇಜು ಪ್ರಕಾರ ವಾದಿಗೆ ಬರಬೇಕ್ಕ ಅಸ್ಸು, ಬಡ್ಡಿ ವಗೈರೆಗೆ ವಾದಿಯು ಪ್ರತಿವಾದಿ ಮೇಲೆ ಮೇಲ್ಕಂಡ ನ್ಯಾಜ್ಯ ದಾಕಲು ಮಾಡಿದ್ದು ಆ ಖತಿ ಪ್ರತಿವಾದಿಗೆನಾದರೂ ಆಕ್ಷೇಪಣೆಯಿರುವ ಸಂಗ್ತಿಯಲ್ಲಿ ಅದನ್ನು ತಾರೀಖು 22—9—1970ರಲ್ಲು ಬೆಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜ್ಞಾಪಿಸಿರು ಮಾಡಿಕೊಳ್ಳಲಿಕ್ಕೆ ತಪ್ಪಿದರೆ ನಿಮ್ಮ ಮಾತೆಯು ವಿಲಕ್ಷಣವಾಗಿ ಕಾರ್ಯಾಸಾಸ ಲ್ಪಡುವುದು.

K. Varadaraya Pai
Advocate for plaintiff,
ಉಡುಪಿ, 23—8—1970

ಗಾಂಧಿಜಿಯವರ ಕಾಲೋಪಾಸನೆ

ಲೇ. : ಮಿ. ಥಾದರ್ ವಾಲೇಸ್

ವೇಳೆಯು ಬೆಲೆ, ನಿಮಿಷಗಳ ಮಹತ್ವ, ಸಮಯದ ಪವಿತ್ರತೆ, ಒಮ್ಮೆ ನಿಶ್ಚಯಿಸಿದ ವೇಳೆಯನ್ನು ಎಂದೂ ತಪ್ಪದಿರುವದು, ಗಡಿಯಾರದಂತೆ ಕೆಲಸ ಆರಂಭಿಸಿ ಪೂರ್ತಿಯಾಗಿ ಮುಗಿಸುವದು. ಒಂದು ಕ್ಷಣವನ್ನೂ ವ್ಯರ್ಥ ಕಳೆಯಲಾಗದು, ವೇಳೆಗೆ ಸರಿಯಾಗಿ ಮುಟ್ಟಿಸಬೇಕು, ವೇಳೆಗೆ ಸರಿಯಾಗಿ ಕೆಲಸ ಆರಂಭಿಸಬೇಕು. ವೇಳೆಗೆ ಸರಿಯಾಗಿ ಮುಗಿಸಬೇಕು! ಇವೆಲ್ಲ ಗಾಂಧಿಯವರಿಗೆ ವೈಯಕ್ತಿಕವಾಗಿ ಹೋಗಿತ್ತು.

ಇದರ ಜತೆಯಲ್ಲಿ ಜನರಲ್ಲಿಯೂ ಕೆಟ್ಟು ಪದ್ಧತಿಯನ್ನು ಬಿಡಿಸಬೇಕೆಂಬ ಪವಿತ್ರ ಭಾವನೆಯೂ ಇತ್ತು! ವೇಳೆ ಮೀರಿದರೆ ಸಮಯ ಹಾಳಾಗುತ್ತದೆ. ಜನರಲ್ಲಿ ಶಿಥಿಲತೆ ಬರುತ್ತದೆ. ಕೆಲಸ ಕೆಡುತ್ತದೆ! ಆದ್ದರಿಂದ ಈ ವಿಷಯದಲ್ಲಿ ಗಾಂಧಿಯವರು ತುಂಬಾ ದಕ್ಷತೆ ಪಡಿಸುತ್ತಿದ್ದರು. ಯಾರಿಗೂ ದಯೆ ತೋರಿಸುತ್ತಿರಲಿಲ್ಲ. ಭೇಟಿಗೆ ಬರುವವರು ೫ ನಿಮಿಷ ತಡ ಮಾಡಿದರೆ ಭೇಟಿಯನ್ನೇ ಕೊಡುತ್ತಿರಲಿಲ್ಲ. ಕಾರಿದ ಕೊಂಡು ಹೋಗಲು ಬರುವವರು ವೇಳೆಗೆ ಸರಿಯಾಗಿ ಹಾಜರಿದ್ದರೆ ಒಬ್ಬರೇ ಹೊರಟು ಬಿಡುತ್ತಿದ್ದರು.

೧೯೧೪ರಲ್ಲಿ ಗೋಧ್ರಾದಲ್ಲಿ ಗುಜರಾತ ರಾಜಕೀಯ ಪರಿಷತ್ತು ಸೇರಿತ್ತು. ಪರಿಷತ್ತಿಗೆ ಬರಲು ಲೋಕಮಾನ್ಯ ತಿಳಕರಿಗೆ ಸ್ವಲ್ಪ ತಡವಾಯಿತು! ಗಾಂಧಿಯವರೇನೋ ಅವರಿಗೆ ಅದರಪೂರ್ವಕ ಸ್ವಾಗತ ನೂಡಿದರು. ಆದರೆ ಜತೆಯಲ್ಲಿಯೇ 'ಲೋಕಮಾನ್ಯರು ಅರ್ಧ ಗಂಟೆ ತಡವಾಗಿ ಬಂದಿದ್ದಾರೆ. ಸ್ವರಾಜ್ಯ ಸಿಗಲಿಕ್ಕೆ ಅರ್ಧ ಗಂಟೆ ತಡವಾದರೆ ಅದಕ್ಕೆ ಲೋಕಮಾನ್ಯರೇ ಜವಾಬ್ದಾರರು" ಎಂಬುದಾಗಿ ಅದರಪೂರ್ವಕ, ಪ್ರೇವದಿಂದ, ವಿಶೇಷವಾಗಿ ಹೇಳಿಯೇ ಬಿಟ್ಟರು.

ಒಮ್ಮೆ ಗಾಂಧಿಯವರು ಕಾಕಾ ಕಾಲೇಲಕರಿಗೆ ಒಂದು ಊರಲ್ಲಿ ನಡೆಯುವ ಸಭೆಗೆ ಹೋಗಲು ಹೇಳಿದ್ದರು. ಅವರನ್ನು ಕರೆದೊಯ್ಯಲಿಕ್ಕೆ ಕೆಲ ಜನರು ಬರಲಿದ್ದರು. ಒಂದುಗಂಟೆ ಕಳೆದರೂ ಯಾರೂ ಬರಲೇ ಇಲ್ಲ! ಇದನ್ನು ಕಂಡು "ಇನ್ನೂ ಏಕೆ ಹೋಗಿಲ್ಲ?" ಎಂದು ಗಾಂಧಿಯವರು ಕೇಳಿದರು? 'ನಾನು ತಯಾರಾಗಿ ಕುಳಿತಿದ್ದೇನೆ. ನನ್ನನ್ನು ಕರೆದೊಯ್ಯಲಿಕ್ಕೆ ಯಾರೂ ಬಂದೇ ಇಲ್ಲ' ಎಂದರು ಕಾಲೇಲಕರರು.

ಇದನ್ನು ಕೇಳಿ ನಿಟ್ಟುಸಿರಿಟ್ಟು ಗಾಂಧಿಯವರು ಹೇಳಿದರು "ಹೀಗೆ ಆಗಕೂಡದು. ವೇಳೆಗೆ ಸರಿಯಾಗಿ ಕಾರು ಹೊರಡಲೇ ಬೇಕಿತ್ತು! ಮೋಟರು ಬರಲಿಲ್ಲವೆಂದರೂ ಚಿಂತೆ ಇದ್ದಿಲ್ಲ! ಕಾಲ್ನಡಿಗೆಯಿಂದ ಮುಟ್ಟಲಿಕ್ಕೆ ಎರಡು ದಿನ ಹತ್ತಿದರೂ ಅಡ್ಡಿ ಇರಲಿಲ್ಲ. ವೇಳೆಗೆ ಸರಿಯಾಗಿ ಮುಟ್ಟುವೆನೋ ಇಲ್ಲ ಎಂಬುದರ ಬಗ್ಗೆಯೂ ಚಿಂತೆಮಾಡದೆ ವೇಳೆಗೆ ಸರಿಯಾಗಿ ಹೊರಡುವದೂ ನಮ್ಮ ಕರ್ತವ್ಯ" ಎಂದು. ಈ ಉತ್ತರ ಕೇಳಿ ಕಾಕಾಕಕಪಟ್ಟು ಕಾಲೇಲಕರರು ಪಡೆಯುತ್ತಲೇ ಹೊರಟರು.!

ಒಮ್ಮೆ ಗಾಂಧಿಯವರಿಗೆ ಮುಂಬಯಿಯಿಂದ ದಿಲ್ಲಿಗೆ ಹೊರಡುವದಿತ್ತು! ಸರಿಯಾಗಿ ೪ ಗಂಟೆಗೆ ಅವರನ್ನು ಸ್ಟೇಶನ್ನಿಗೆ ಕರೆದೊಯ್ಯಲು ತನ್ನ ಮೋಟರು ಕಳಸುವೆನೆಂದು ಒಬ್ಬ ವ್ಯಾಪಾರಿ ಹೇಳಿದ್ದ. ಆದರೆ ೪ ಗಂಟೆಗೆ ಮೋಟರು ಬರಲೇ ಇಲ್ಲ. ೪ ಗಂಟೆ ಬಡೆಯುತ್ತಲೇ "ನಾನು ಮೋಟಾರಿನ ದಾರಿ ಕಾಯಲಾರೆ" ಎನ್ನುತ್ತ ಗಾಂಧಿಯವರು ಹೊರಟೇ ಬಿಟ್ಟರು! ಬೇರೊಂದು ಮೋಟರು ತರಿಸಿ ಸ್ಟೇಶನ್ನಿಗೆ ಎಂದು ಮನೆಯ ಯಜಮಾನ ಹೇಳಿದರೂ ಫಲಿಸಲಿಲ್ಲ. ಸ್ವಲ್ಪ ಮುಂದೆ ಹೋಗುತ್ತಲೇ ಮುಂದುಗಡೆಯಿಂದ ಆ ವ್ಯಾಪಾರಿಯ ಮೋಟರು ಬಂದೇ ಬಿಟ್ಟಿತು. ತನ್ನ ತಪ್ಪನ್ನಿಂಡಾಗಿ ಮಹಾತ್ಮಾ ಗಾಂಧಿಯವರು ಪಡೆಯು ಹತ್ತಿರುವದು ಕಂಡು ಡ್ರೈವರನಿಗೆ ತುಂಬಾ ದುಃಖವಾಯಿತು. ಮತ್ತು 'ಈಗ ಮೋಟರಿನಲ್ಲಿ ಕುಳಿತುಕೊಳ್ಳಿರಿ' ಎಂದು ಗಾಂಧಿಯವರಿಗೆ ವಿನಂತಿಸಿಕೊಂಡ.

"ಇಲ್ಲ ಇಲ್ಲ, ನಾನು ಪಡೆದೇ ಸ್ಟೇಶನಿಗೆ ಮುಟ್ಟುವೆ, ನಿನ್ನ ಪಾಪಕ್ಕೆ ನಾನು ಬೆಲೆ ತೆರಲೇಬೇಕು! ಈಗ ನಾನು ನಿನ್ನ ಮೋಟಾರಿನಲ್ಲಿ ಕುಳಿತರೆ ನೀನೆಂದೂ ಪ್ರಾಮಾಣಿಕತೆಯ ಪಾಠ ಕಲಿಯಲಾರೆ. ಇಂದಿನ ಪ್ರಸಂಗದಿಂದಲಾದರೂ ನೀನು ನಿಯಮಿತತನ ಕಲಿತುಕೋ" ಅಕ್ಕುತ್ತ ನಡೆದೇ ಗಾಂಧಿಯವರು ವೇಳೆಗೆ ಸರಿಯಾಗಿ ಸ್ಟೇಶನ್ನಿಗೆ ಮುಟ್ಟಿದರು.

ಸ್ಟೇಶನದಲ್ಲಿಯ ಜನರೆಲ್ಲ ಗಾಂಧಿಯವರು ಪಡೆದು ಬಂದದ್ದನ್ನು ಕಂಡು ಚಕಿತರಾದರು. ಅವರಿಗೆ ಗಾಂಧಿಯವರು ಎಲ್ಲ ಹಕೀಕತ್ತು ಹೇಳಿದರು ಮತ್ತು 'ಈ ಸಂಗತಿ ಕೇಳಿ ಆ ವ್ಯಾಪಾರಿಯು ಡ್ರೈವರನಿಗೆ ದಂಡಿಸಬಹುದು. ಇಲ್ಲವೆ ಪೊಲೀಸಿಯಿಂದಲೂ ತೆಗೆದು ಹಾಕಿಬಹುದು. ಆ ಡ್ರೈವರನಿಗೆ ಈಗಾಗಲೇ ಸಾಕಷ್ಟು ಶಿಕ್ಷೆ ಆಗಿದೆ. ಅತಿಥಿಗೆ ಇನ್ನೇನೂ ಶಿಕ್ಷೆ ಮಾಡಬೇಡಿರಿ. ಎಂದು ಆ ವ್ಯಾಪಾರಿಗೆ ನನ್ನ ವತಿಯಿಂದ ತಿಳಿಸಿ ಹೇಳಿರಿ" ಎಂದೂ ಹೇಳಿದರು.

ಒಬ್ಬಗೆ ತಾವು ಗಾಡಿಗೆ ಮುಟ್ಟುವದಕ್ಕಿಂತ ನಿಯಮಿತತನ ಅರಿಯದ ಡ್ರೈವರನಿಗೆ ನಿಯಮಿತತನ ಕಲಿಸುವದೇ ಗಾಂಧಿಯವರಿಗೆ ಹೆಚ್ಚು ಮಹತ್ವದ್ದೆನಿಸುತ್ತಿತ್ತು! ಆ ಡ್ರೈವರನಿಗೂ, ಅವನ ಮೂಲೀಕನಿಗೂ, ಈ ಘಟನೆಯನ್ನು ಕೇಳಿದ ಇಡೀ ದೇಶಕ್ಕೂ ನಿಯಮಿತತನದ ಪಾಠವು ಮನದಟ್ಟಾಗುವಂತೆ ಮಾಡಬೇಕೆಂದು ಗಾಂಧಿಯವರು ಬಯಸುತ್ತಿದ್ದರು.

ಗಾಂಧಿಯವರ ಈ ತೆರನಿದ ಆಗ್ರಹದಿಂದ ಒಳ್ಳೇ ಪರಿಣಾಮವೂ ಆಗುತ್ತಿತ್ತು! ಶ್ರೀ ರಾಮನಂತೇಶ ತ್ರಿಪಾಠಿ ಇವರ ಹೇಳಿಕೆಯನ್ನೇ ಕೇಳಿರಿ—

"೧೯೧೯ರಲ್ಲಿ ಮುಂಬಯಿಯಲ್ಲಿ ಹಿಂದೀ ಸಾಹಿತ್ಯ ಸಮ್ಮೇಲನದ ಅಧಿವೇಶನ ನಡೆಯಿತ್ತು. ಗಾಂಧಿಯವರು ಅಧ್ಯಕ್ಷರಿದ್ದರು. ಭಾಷಣಕಾರರ ಹೊಡಿಯಲು ಗಾಂಧಿಯವರೆ ಮುಂದಿದ್ದು. ನನ್ನ ಹೆಸರು ಬರುತ್ತಲೇ "ನಿನಗೆ ಎಷ್ಟು ವೇಳೆ ಬೇಕು?" ಎಂದು ಕೇಳಿದರು! ೧೫ ನಿಮಿಷ ಎಂದು ಉತ್ತರ ಕೊಟ್ಟೆ, "ಇಲ್ಲ! ೪೫ ನಿಮಿಷ ಕೊಡುತ್ತೇನೆ! ಇದು ನಿಮ್ಮ ಪರೀಕ್ಷೆ" ಎಂದರು ಗಾಂಧೀಜಿ.

ಕೈಗಡಿಯಾರ ನೋಡಿನೋಡುತ್ತಲೇ ನನ್ನ ಭಾಷಣವನ್ನು ಸಾಧ್ಯಿರ್ತ ಪಡಿಸಿ ಮುಗಿಸಿದೆ. ಮತ್ತು "ಗಾಂಧಿಯವರು ನನಗೆ ೪೫ ನಿಮಿಷ ಕೊಟ್ಟಿದ್ದರು! ಆದರೆ ನಾನು ೩೩ ಮಿನಿಟಲ್ಲೇ ಮುಗಿಸಿದ್ದೇನೆ! ಮತ್ತು ಉಳಿದ ೧೨ ನಿಮಿಷ ಗಾಂಧಿಯವರಿಗೆ ದಾನ ಕೊಡುತ್ತಿದ್ದೇನೆ" ಎಂದು ಹೇಳಿ ಕುಳಿತುಕೊಂಡೆ.

ನಿಮಿಷಗಳ ದಾನ ಎಂಬ ಶಬ್ದ ಕೇಳುತ್ತಲೇ ಇಡೀ ಸಭೆಯು ಕಿಲಕಿಲ ನಗತೊಡಗಿತ್ತು. ಇದರಿಂದ ಗಾಂಧಿಯವರಿಗೆ ಹಿಡಿಸಲಾರದಷ್ಟು ಆನಂದವಾಯಿತು. ಅವರು ಎದ್ದೂನಿಂತು ಹೇಳಿಯು ಬಿಟ್ಟರು. "ಭಾರತದಲ್ಲಿ ಯಾರೂ ಈವರೆಗೆ ನನಗೆ ನಿಮಿಷಗಳ ದಾನ ಕೊಟ್ಟಿದ್ದೇ ಇಲ್ಲ. ನಾನು ಗಂಟೆ ಬಾರಿಸಿದರೂ ಭಾಷಣಕಾರರು ಗವ್ಯಸಿಸುತ್ತಿರುವದಿಲ್ಲ. ನಿಮ್ಮ ಹತ್ತೆಂಟು ನಿಮಿಷ ತೆಗೆದುಕೊಂಡೇ ಬಿಡುತ್ತಾರೆ. ಆದ್ದರಿಂದ ಇಂದು ನನಗೆ ಸಿಕ್ಕ ನಿಮಿಷದಾವೆಯ ಲಕ್ಷಾಂತರ ರೂಪಾಯಿ ಬಳಿಗಿಂತ ಹೆಚ್ಚಿನದೆಂದು ತಿಳಿಯುತ್ತೇನೆ" ಎಂದು.

ವೇಳೆಯೂ ದೇಶವೆಂದು, ಧನವೇ ಆದರಲ್ಲೂ ಮಿತವ್ಯಯ ಮಾಡಬೇಕಾದ್ದು ಅವಶ್ಯ. ಅದರದೂ ಲೆಕ್ಕ ಇರಬೇಕು! ಅದರದೂ ಸದ ಉಪಯೋಗ ಮಾಡಬೇಕು. ಸಮಯ ಪಾಲನೆಯು ದೇಶಭಕ್ತಿಯ ಲಕ್ಷಣವೇ ಆಗಿದೆ.

('ಮಿಲಾಪ'ದಿಂದ)

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ — **English Made Easy**

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಯಸುವಾದ ಅಂಗ್ಲಸ್ವಯಂಬೋಧಿನಿ
ಬೆಲೆ : ರೂ. 2—00

Letter Writing Made Easy — **ಸುಲಭದಲ್ಲಿ ಪತ್ರಲೇಖನ**

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ವಿವಿಧವಿಷಯ ಪತ್ರ ಸಂಕಲನ. ಬೆಲೆ : ರೂ. 1—50

ಗೀತೆಯ ಕೈಗನ್ನಡಿ — ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಬಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅಕ್ಷರಾನುವಾದ.
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ : ರೂ. 1—50

ಮನೆ-ಮದ್ದು — **Home Remedies**

ಡಾ॥ ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಪೈಹೆವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ರೋಗಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ವಿಧಾನಗಳಿವೆ. ಔಷಧಿ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ : ರೂ. 2—00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65—66ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ
ಮ್ಯಾನೇಜರ್, ನವಯುಗ, ಉಡುಪಿ.

READ & ADVERTISE IN
NAVAYUGA WEEKLY

Tourism
'Balla Brooie', High
P. B. No, 327, Bangalore

NAVAYUGA 27—8—1970
Registered with the Registrar of News Papers for India under No. R. N. 3546/'57

REGD: No: B. G/ 176
LICENCE No: 33;
Licensed to Post without Prepayment

ನಮ್ಮ ಸ್ವಾತಂತ್ರ್ಯ ರಕ್ಷಕರು

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ಸಮಯದಲ್ಲಿ, ಅಂದರೆ 23 ವರ್ಷಗಳ ಹಿಂದೆ, ಭಾರತೀಯ ಸೈನ್ಯವನ್ನು ಭಾರತ—ಪಾಕಿಸ್ತಾನಗಳಿಗೆಂದು ವಿಭಜಿಸಲಾಯಿತು. ಆಗ ಭಾರತಕ್ಕೆ 2,60,000 ಸೈನ್ಯ ಪಡೆ ಲಭಿಸಿತು. ಅನೇಕಾನೇಕ ತರಬೇತಿ ಕೇಂದ್ರಗಳು ಪಾಕಿಸ್ತಾನದಲ್ಲಿ ಉಳಿದವು. ಬಹುತೇಕ ಎಲ್ಲ ಹಿರಿಯ ಬ್ರಿಟಿಶ್ ಸೈನ್ಯಾಧಿಕಾರಿಗಳು ಸೈನ್ಯವನ್ನು—ಭಾರತವನ್ನು—ಬಿಟ್ಟು ಸ್ವದೇಶಕ್ಕೆ ತೆರಳಿದರು. ಕಾರಣ ಭಾರತೀಯ ಸೈನ್ಯದ ಪುನರ್ಘಟನೆಯನ್ನು ಕೂಡಲೆ ಕೈಕೊಳ್ಳಬೇಕಾಯಿತು. ಆನಂತರ್ಯವಾಗಿ ಹುಟಕ ಭಾರತೀಯ ಸೈನ್ಯಾಧಿಕಾರಿಗಳು ಗುರುತರ ಹೊಣೆ ಹೊರಬೇಕಾಯಿತು.

ಸ್ವದೇಶಕ್ಕೆ ಸ್ವಾತಂತ್ರ್ಯಬಂದು ಕೇವಲ ಎರಡು ತಿಂಗಳುಗಳು ಕಳೆದಿರಲಿಲ್ಲ. ಸ್ವಾತಂತ್ರ್ಯವುದ್ಧಕ್ಕೆ ಸನ್ನದ್ಧರಾಗ ಬೇಕಾಯಿತು. 1947 ಅಕ್ಟೋಬರ್ 27ರಂದು ಭಾರತೀಯ ಸೈನ್ಯವು ಕಾಶ್ಮೀರದಲ್ಲಿ ಕಾಲಿಟ್ಟಿತು. ಇದು ಇತಿಹಾಸದ ಮೊತ್ತಾಗಿದೆ. ಅಂದಿನಿಂದೀಚೆಗೆ ಭಾರತೀಯ ಸೈನ್ಯವು ಸಜ್ಜುಕವಾಗುತ್ತ ನಡೆದಿದ್ದು ಈಚೆ ಎಂಥದೇ ಗಂಡಾಂತರವನ್ನು ಎದುರಿಸಲು ಸಿದ್ಧವಾಗಿದೆ. 1962ರಿಂದ ಪರಿಸ್ಥಿತಿ ಹೆಚ್ಚು ಕಠಿಣವಾಗಿದೆ. ಚೀನೀಯರು ದುರಾಕ್ರಮಣದ ಯತ್ನದ ದೆಸೆಯಿಂದಾಗಿ ಭಾರತೀಯ ರಕ್ಷಣಾ ವ್ಯವಸ್ಥೆಯಲ್ಲಿ ತುರ್ತು ಬದಲಾವಣೆ ಆವಶ್ಯಕವೆನಿಸಿತ್ತು. ಸಮಸ್ತ ಹಿಮಾಲಯ ಗಡಿಯೇ ಎಚ್ಚೆತ್ತಿತು. ಆಗ ನಮ್ಮ ಸೈನಿಕರಲ್ಲಿ ಆತ್ಯಾಧುನಿಕ ಶಸ್ತ್ರಾಸ್ತ್ರಗಳ ಉಪಕರಣಗಳ ಅಭಾವವಿತ್ತು. ಹೀಗಾಗಿ ನಮ್ಮ ಸೈನಿಕರು ದುರ್ಗಮ ಪ್ರದೇಶಗಳಲ್ಲಿ ಸಂಗಕ್ಕೆ ಈಡಾದರು. ಕೂಡಲೇ ತೀವ್ರ ಪರಿಣಾಮಕಾರಿ ಕ್ರಮಗಳನ್ನು ಕೈಕೊಂಡು ನಮ್ಮ ಸೈನ್ಯವನ್ನು ಬಲಪಡಿಸಲೇಬೇಕಾಯಿತು.

ನಮ್ಮ ಸೈನ್ಯವು ಸೀಮಿತ ಸಂಪನ್ಮೂಲಗಳ ಚೌಕಟ್ಟಿನಲ್ಲಿ ಪ್ರಭಾವಶಾಲಿಯಾಗಿ ಬೆಳೆಯಲು ಸೆಸಬೇಕಾಯಿತು. ಈಗ 8.28 ಲಕ್ಷ ಯೋಧರು ಸನ್ನದ್ಧರಾಗಿದ್ದಾರೆ. ಅರ್ಧದಷ್ಟು ಸೈನ್ಯವು ಪರ್ವತ ವಿಭಾಗಗಳಿಂದ ಕೂಡಿದೆ. ಪರ್ವತ ಮೂಲೆಯಲ್ಲಿ ಅವರು ಹೋರಾಡಲು ತಕ್ಕ ತರಬೇತಿ ಪಡೆದಿದ್ದಾರೆ. 5000ದಿಂದ 15000 ಅಡಿ ಎತ್ತರದಲ್ಲಿ ಶತ್ರು ದೇಶದ ಗಡಿಗಳನ್ನು ರಕ್ಷಿಸುವಲ್ಲಿ ಅವರು ಶೂರರಾಗಿದ್ದಾರೆ.

ನಮ್ಮ ಸೈನ್ಯವಷ್ಟು ಆಧುನೀಕರಿಸುವ ಕ್ರಮ ಶ್ರಮದಾಯಕವಾಗಿದೆ. ಕಳೆದ ದಶಕದಲ್ಲಿ ಈ ಘಟ್ಟನತ್ಯ ಕೈಕೊಂಡ ಕ್ರಮಗಳು ಈಗ ಫಲವನ್ನು ನೀಡುತ್ತಿವೆ. ಹಳೆಯ 303 ರೈಫಲ್‌ಗಳನ್ನು ಬಿಟ್ಟು 7.62 ಇಸಾಪುರ್ 3 ರೈಫಲ್‌ಗಳನ್ನು ನಮ್ಮ ಜವಾನರು ಇಂದು ಬಳಸುತ್ತಿದ್ದಾರೆ. ನಮ್ಮ ಸೈನ್ಯಕ್ಕೆ ಇಂದು ಉತ್ತಮ ಲೈಟ್ ಮೆಶೀನ್ ಗನ್‌ಗಳು, ಸಿಡಿಮದ್ದನ್ನು ಹಾರಿಸುವ ಉಪಕರಣಗಳು ದೊರತಿವೆ. ಹವಾಮಾನಕ್ಕೆ ಅನುಗುಣವಾದ ಬಟ್ಟೆಬರೆಗಳನ್ನು ಒದಗಿಸಲಾಗಿದೆ. ಫಿರಂಗಿ ದಳಕ್ಕೆ ಪರ್ವತ ಫಿರಂಗಿಗಳನ್ನು ನೀಡಲಾಗಿದೆ. ನಮ್ಮ ದೂರಗಾಮಿ ಗನ್‌ಗಳು ವಿಮಾನ ವಿರೋಧ ಕಾರ್ಯಕ್ರಮದಲ್ಲಿ ಹೆಚ್ಚು ಪ್ರಭಾವ ಶಾಲಿಯಾಗಿವೆ. ಶಮರ್ಾ ಟ್ಯಾಂಕುಗಳನ್ನು ಬಿಟ್ಟು ಆತ್ಯಾಧುನಿಕ ವೈಜಯಂತ್ ಟ್ಯಾಂಕ್‌ಗಳನ್ನು ನಮ್ಮ ಸೈನಿಕರು ಇಂದು ಉಪಯೋಗಿಸಲಿದ್ದಾರೆ. ಚೀನೀ ಟೆಕ್ಕ ಗಾತ್ರದ ನಿಸ್ತಂತು ಸೆಟ್‌ಗಳು, ಹೆಚ್ಚು ಅವರ್ತನ ಶಕ್ತಿಯ ಟ್ರಾನ್ಸ್‌ರಿಸೀವರ್‌ಗಳು ನಮ್ಮ ಸೈನಿಕರಿಗೆ ದೊರೆತು ಅವರು ತಮ್ಮ ಸಂಚಾರ ಕಾಲದಲ್ಲಿ ಯೂ ಹೆಚ್ಚು ಪಂಬಿಗೆಯಿಂದ ಸಂಪರ್ಕವನ್ನು ಸಾಧಿಸಲು ಶಕ್ತರಾಗಿದ್ದಾರೆ.

ಸಾಧಿಸಿದ ಸಾಹಸ

ನಮ್ಮ ಸೈನ್ಯವು ಅನೇಕ ಸಾಹಸಗಳನ್ನು ಮಾಡಿ ತೋರಿಸಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಸೈನಿಕರಿಗೂ ಜನತೆಗೂ ಹೇಳಿ ಕೊಳ್ಳುವ ಯಾವ ಸಂಬಂಧವೂ ಇರಲಿಲ್ಲ. ಇಂದು ನಮ್ಮ ಸೈನ್ಯವು ಭಾರತದ ಶ್ರೀಸಾಮಾನ್ಯರೊಂದಿಗೆ ಸಾಮರಸ್ಯವನ್ನು ಹೊಂದಿದೆ. ಜನತೆಯಿಂದ ಅಪೂರ್ವ ಸ್ಫೂರ್ತಿಯನ್ನು ಪಡೆಯುತ್ತಿದೆ. ಪ್ರತಿಯಾಗಿ ದೇಶ ಸಂರಕ್ಷಣೆಯ ಭಾರವನ್ನು ಜನತೆಗೆ ಕೀಳಾಗಿಸಿದೆ.

ತಮ್ಮ ಪ್ರಿಯ ಕುಟುಂಬದ ಜನರಿಂದ ದೂರದಲ್ಲಿ ಇದ್ದುಕೊಂಡು ವಿಪರೀತ ಹವಾಮಾನಗಳನ್ನು ಎದುರಿಸಿ, ಅನಾದರದ ಭೂಪ್ರದೇಶಗಳಲ್ಲಿ ಸಂಚರಿಸಿ, ಯುದ್ಧದ ಬೇಡಿಯಲ್ಲಿ ನಡೆದು, ನಮ್ಮ ಸೈನ್ಯದ ಅಧಿಕಾರಿಗಳು ತಾವು ಪಾಗು ಜವಾಳರು ದೇಶದ ಗಡಿ ರಕ್ಷಣೆಯಲ್ಲಿ ಹುಟಂದುತರಿದಿದ್ದಾರೆ. ತಮ್ಮ ದೇಶದ ಸಲುವಾಗಿ ತ್ಯಾಗಮಯವಾಗುವ ಕಲ್ಪನೆ ಅವರಿಗಿದೆ. ನಮ್ಮ ದೇಶದ ಪಡಿಯನ್ನು ರಕ್ಷಿಸುವ ಕೆಲಸವನ್ನೇ ಅಲ್ಲ ಆವರದ; ರಾಷ್ಟ್ರಜ ಸೀಮೆಯ ಏಕತೆಯನ್ನು ಸಂರಕ್ಷಿಸಿ ಪ್ರಜಾತಾತ್ಕ ಬದುಕನ್ನು ರಕ್ಷಿಸುವ ಗುರುತರ ಹೊಣೆಯೂ ಅವರದಾಗಿದೆ!

ವಯಸ್ಕರ ಶಿಕ್ಷಣದ ವ್ಯಾಪಕ ಯೋಜನೆ

(ಒಂದನೇ ಪುಟದಿಂದ)

ಕ್ಷರತಾ ಕಾರ್ಯಕ್ರಮದಲ್ಲಿ ಪುಸ್ತಕಾವರ್ತಕ ಪ್ರಯತ್ನ ನಿಷ್ಪಲವಿದ್ದಿದ್ದರೆ ಎಲ್ಲವೂ ಅರ್ಥಹೀನವಾಗುತ್ತದೆ.

ಪುಸ್ತಕಗಳ ಮುದ್ರಣ, ವಿತರಣೆ ಹಂತಗಳಲ್ಲಿ ಪುಸ್ತಕ ಭಂಡಾರ ನಿರ್ವಾಣ ಸಾಕ್ಷರತಾ ಕಾರ್ಯಕರ್ತರ ತರಬೇತಿ, ರಾತ್ರಿ ಶಾಲೆಗಳು, ವಿಸ್ತರಣಾ ಕಾರ್ಯಕ್ರಮ, ಶಿಕ್ಷಣ ಮುಂದುವರಿಕೆ—ಇವೇ ಪುನರಾವರ್ತಿತ ಕಾರ್ಯಕ್ರಮಗಳು. ಇವುಗಳಿಗೆ ತರಬೇತಾದ ವ್ಯಕ್ತಿಗಳು, ಪರಿಕರಗಳು ಹಾಗೂ ಹಣ ಅತ್ಯಗತ್ಯ. ಇದನ್ನು ಸ್ವಯಂ ಸೇವೆಯಿಂದ ಸಾಧಿಸಲಾಗುವುದಿಲ್ಲ. ಹೊಸ ಅಕ್ಷರಸ್ಥರಿಗೆ ಬೇಕಾದ ಓದುಪ ಸಾಹಿತ್ಯ, ಸಂಚಾರಿ ಹಾಗೂ ವಿವಿಧ ಪ್ರದೇಶಗಳಲ್ಲಿ ಪುಸ್ತಕ ಭಂಡಾರ ನಿರ್ವಾಣ, ಪತ್ರಿಕೆಯ ಮುದ್ರಣ, ಕಾರ್ಯಕರ್ತರು ಮತ್ತು ಲೇಖಕರಿಗೆ ತರಬೇತಿ—ಈ ಕಾರ್ಯಕ್ಕೆ ಹಣ ಅಗತ್ಯ. ಆದರೆ ಚತುರ್ಥ ಯೋಜನೆಯಲ್ಲಿ ಹಣ ಫಿಗದಿ ಮಾಡಿಲ್ಲ. ಹೊಸ ಅಕ್ಷರಸ್ಥರಿಗೆ ಸಾಹಿತ್ಯ ಒದಗಿಸಲು ಕೇಂದ್ರ ಶಿಕ್ಷಣ ಶಾಖೆ ಕಾರ್ಯಕ್ರಮ ರೂಪಿಸಿದೆ. ಇದರ ಪ್ರಕಾರ ಕೇಂದ್ರ ಫಲಿಕ ರೀಸ ಡ ಯೋಜನೆಯಿದೆ.

ಲೇಖಕರಿಗೆ ತರಬೇತಿ ಕಾರ್ಯಾಗಾರ ನಡೆಸುವುದೇ ಈ ಘಟಕದ ಮುಖ್ಯ ಕಾರ್ಯವಾಗುತ್ತದೆ. ರಾಜ್ಯ ಸರ್ಕಾರಗಳಿಗೆ ಆಗತ್ಯವಿದ್ದಾಗ ತಾಂತ್ರಿಕ ಮಾರ್ಗದರ್ಶನ ಫೀಡಲಾಗುತ್ತದೆ.

ಸಹಯೋಗದ ಯೋಜನೆ

ಕೇಂದ್ರ ವಯಸ್ಕರ ಶಿಕ್ಷಣ ಸಂಸ್ಥೆಯಿಂದ ಮುಖ್ಯ ಕಾರ್ಯಕರ್ತರಿಗೆ ಪುನರ್ಮರ್ಶನ ತರಬೇತಿನೀಡುವಯೋಜನೆಯಿದೆ. ರಾಜ್ಯ ಸರ್ಕಾರಗಳ ಜಿಲ್ಲಾಮಟ್ಟದಲ್ಲಿ ತರಬೇತಿ ಫೀಡುವಂತೆ ತಿಳಿಸಲಾಗುತ್ತದೆ.

ಕೇಂದ್ರ ಶಿಕ್ಷಣ ಶಾಖೆಯು ಕೇಂದ್ರ ಆಹಾರ ಶಾಖೆ ಮತ್ತು ವಾರ್ತಾ—ಪ್ರಸಾರ ಶಾಖೆಯು ಸಹಯೋಗದಿಂದ ಪ್ರಾಯೋಗಿಕವಾಗಿ ವಯಸ್ಕರ ಶಿಕ್ಷಣ ಯೋಜನೆ ಕೈಗೊಂಡಿದೆ. ಈ ಕಾರ್ಯಕ್ಕೆ ಚತುರ್ಥ ಯೋಜನೆಯಲ್ಲಿ ಕೇಂದ್ರ ವಲಯದಲ್ಲಿ 2 ಕೋಟಿ ರೂಪಾಯಿ ವೀಣಲಾಗಿದೆ. ಯೋಜನೆಯ ಅವಧಿಯಲ್ಲಿ ನೂರು ಜಿಲ್ಲೆಗಳಲ್ಲಿ ಕಾರ್ಯಕ್ರಮ ರೂಪಿಸಲಾಗುತ್ತದೆ.

ಈ ಕಾರ್ಯಕ್ರಮವನ್ನು 1967-68ನೇ ಸಾಲಿನಲ್ಲಿ 3 ಜಿಲ್ಲೆಗಳಲ್ಲಿ ಆರಂಭಿಸಿ 1968-69ರಲ್ಲಿ 7 ಜಿಲ್ಲೆಗಳಿಗೂ, 1969—70ರಲ್ಲಿ 15 ಜಿಲ್ಲೆಗಳಿಗೂ ವಿಸ್ತರಿಸಲಾಯಿತು. 1970-71ರಲ್ಲಿ 35 ಜಿಲ್ಲೆಗಳಿಗೆ ವಿಸ್ತರಿಸಲಾಗುತ್ತದೆ. 1970—71ನೇ ಸಾಲಿನ ಅಂತ್ಯದಲ್ಲಿ 60 ಜಿಲ್ಲೆಗಳಿಗೆ ಕಾರ್ಯಕ್ರಮ ವ್ಯಾಪಿಸಿರುತ್ತದೆ.

ಈ ಕಾರ್ಯಕ್ರಮಕ್ಕೆ ಫಲಭೋಕ್ತರ ನೀಡಲು ನಾಲ್ಕು ಪ್ರಾದೇಶಿಕ ಕಾರ್ಯಾಗಾರಗಳನ್ನು ವ್ಯವಸ್ಥೆಗೊಳಿಸಲಾಗುತ್ತದೆ. ಬೃಹತ್ ತರಬೇತಿ ಕಾರ್ಯವನ್ನು ಕೈಗೊಳ್ಳಲಾಗುತ್ತದೆ. ಓದುವ ಸಾಹಿತ್ಯ ಸಾಮಗ್ರಿಯುಲ್ಲಿ ಪುನರ್ವ್ಯವಸ್ಥೆ ಮಾಡಲಾಗುತ್ತದೆ. ಈ ಯೋಜನೆಯ ಮೌಲ್ಯಮಾಪನ ಮಾಡಲು ಯೋಚಿಸಲಾಗುತ್ತಿದೆ. ಯುನೆಸ್ಕೋ ಆಹಾರ — ಕೃಷಿ ಸಂಸ್ಥೆಯಂತಹ ಜಾಗತಿಕ ಸಂಸ್ಥೆಗಳು ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ತೀವ್ರಾಸಕ್ತಿ ಹೊಂದಿವೆ. ನಮ್ಮ ದೇಶದ ಆಗತ್ಯ ಸಂಪನ್ಮೂಲಗಳಿಗೆ ಅನುಗುಣವಾಗಿ ಕಾರ್ಯಕ್ರಮಕ್ಕೆ ಹೊಸ ರೂಪುಕೊಡುತ್ತಿರುವುದನ್ನು ಜಾಗತಿಕ ಸಂಸ್ಥೆಗಳು ಮೆಚ್ಚುಕೊಂಡಿವೆ.

ಅನಕ್ಷರತೆಯ ನಿರ್ಮೂಲನ ಭಾರತಕ್ಕೆ ಆತ್ಯಗತ್ಯ. ಈಗಾಗಲೇ ಮೊದಲ ಹೆಜ್ಜೆಯಿಟ್ಟಾಗಿದೆ. ಕೆಲವು ಧೈರ್ಯಶಾಲಿಯಾದ ಪ್ರಯೋಗಗಳನ್ನು ಮಾಡಬೇಕಾಗಿದೆ. ಈಗ ಯೋಚಿಸಿರುವ ವಿವಿಧ ಕಾರ್ಯಕ್ರಮಗಳ ಬೀಜಪಕ್ವತೆಯನ್ನು ವಿಶ್ವಾಸದಿಂದ ಹೊಸ ಅಕ್ಷರಸ್ಥರ ಜೀವನಶೈಲಿಯು ಫಲ ಅಂಕುರಿಸುತ್ತದೆ. ಹಿಗ್ಗಿ ಬೃಹತ್ ಸಾಧನೆ ಮಾಡಿ, ಪವಿತ್ರ ಆಸೆ—ಆಕಾಂಕ್ಷೆಗಳ ನೈಜ ಸ್ವಾತಂತ್ರ್ಯವನ್ನು ಅನುಭವಿಸಬಹುದು.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾತ್ರೆಯಕರ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit

ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

Edited, Printed & Published by K. H. Shetty at the Navayuga Press, Udipi, S. India.